ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ-21

ಕರ್ಣಪರ್ವ

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೨೧

ಕರ್ಣಪರ್ವ

(ಸಂಪುಟ ೨)

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್ ಕೆ.ಹಯವದನ ಪುರಾಣಿಕ

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಕರ್ಣಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಮಹಾಭಾರತ ಭಾಗ –

ಕರ್ಣಪರ್ವ - ಸಂಪುಟ ೨

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-81-939819-9-3

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	*XII+ 615= 625*
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	**ವಿದ್ವಾನ್ ಕೆ.ಹಯವದನ ಪುರಾಣಿಕ**
ಪ್ರಕಾಶಕರು	-	ತತ್ತ್ವಸಂಶೋಧನಸಂಸತ್, (ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ) ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಆರ್.ಎಸ್.ಪ್ರೇಮಕುಮಾರ್ ಬೆಂಗಳೂರು, 9964334285
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ಮುದ್ರಣ : **ಪವನ್ ಪ್ರಿಂಟರ್ಸ್**, ಬೆಂಗಳೂರು

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ನುಮಃ

ವಿಷಯಾನುಕ್ರಮಣಿಕೆ

(ಕರ್ಣಪರ್ವ-ಸಂಪುಟ ೨)

ನಲವತ್ತೆಂಟನೆಯ ಅಧ್ಯಾಯ..... 1

ಭೀಮನಿಂದ ಧೃತರಾಷ್ಟ್ರನ ಆರು ಮಕ್ಕಳ ಸಂಹಾರ. ಕರ್ಣ ಭೀಮನ ರಥವನ್ನು ಮುರಿದ. ಭೀಮ ಗದೆಎತ್ತಿಕೊಂಡು ಕರ್ಣಶಲ್ಯರಿಬ್ಬರನ್ನೂ ರಥದಲ್ಲಿ ಬೀಳಿಸಿ, ಕುರುಸೈನ್ಯ ಧ್ವಂಸಮಾಡಿದ. ಬೇರೆ ರಥವೇರಿದ. ಯುಧಿಷ್ಠಿರನನ್ನು ಬೆನ್ನಟ್ಟುತ್ತಿದ್ದ ಕರ್ಣನನ್ನು ತಡೆದ.

ನಲವತ್ತೊಂಬತ್ತನೆಯ ಅಧ್ಯಾಯ 16

ಘೋರವಾದ ಯುದ್ಧದಲ್ಲಿ ಕೌರವ ಸೈನ್ಯವು ಸಾಗರದಲ್ಲಿ ಒಡೆದ ನೌಕೆಯಂತಾಯಿತು.

ಐವತ್ತನೆಯ ಅಧ್ಯಾಯ 24

ಹತ್ತುಸಾವಿರ ಸಂಶಪ್ತಕ ಯೋಧರನ್ನು ಅರ್ಜುನ ಸಂಹರಿಸುತ್ತಾನೆ.

ಐವತ್ತೊಂದನೆಯ ಅಧ್ಯಾಯ..... 33

ಕೃಪನಿಂದ ಶಿಖಂಡಿಯ ಪರಾಭವ, ಸುಕೇತುವಿನ ವಧ. ಧೃಷ್ಟದ್ಯುಮ್ನನಿಂದ ಕೃತವರ್ಮನ ಪರಾಭವ.

ಐವತ್ತೆರಡನೆಯ ಅಧ್ಯಾಯ 42

ಅಶ್ವತ್ಥಾಮನಿಂದ ಯುಧಿಷ್ಠಿರನ ಪರಾಭವ, ಯುದ್ಧ ಬ್ರಾಹ್ಮಣನಿಗೆ ವಿಹಿತವಲ್ಲವೆನ್ನುತ್ತ ಯುಧಿಷ್ಠಿರ ದೂರ ಸರಿಯುತ್ತಾನೆ. ಅಶ್ವತ್ಥಾಮನು ಹೊರಟು ಹೋಗುತ್ತಾನೆ.

ಐವತ್ತಮೂರನೆಯ ಅಧ್ಯಾಯ 53

ಧೃಷ್ಟದ್ಯುಮ್ನನಿಂದ ದುರ್ಯೋಧನನ ಪರಾಭವ. ಅರ್ಜುನನಿಂದ ಅಶ್ವತ್ಥಾಮನ ಪರಾಭವ.

ಐವತ್ತನಾಲ್ಕನೆಯ ಅಧ್ಯಾಯ..... 81

ದುರ್ಯೋಧನ ಅಶ್ವತ್ಥಾಮರು ಕುರುಸೈನ್ಯವನ್ನು ಹುರಿದುಂಬಿಸುತ್ತಾರೆ.

ಐವತ್ತೈದನೆಯ ಅಧ್ಯಾಯ..... 85

ಭೀಮಸೇನನಿಂದ ಕೌರವ ಸೈನ್ಯ ನಾಶ.

ಐವತ್ತಾರನೆಯ ಅಧ್ಯಾಯ 90

ಕರ್ಣ–ಧೃಷ್ಟದ್ಯುಮ್ನ ಯುದ್ಧ. ಕರ್ಣ–ಸಾತ್ಯಕಿ ಯುದ್ಧ. ಅಶ್ವತ್ಥಾಮ ಧೃಷ್ಟದ್ಯುಮ್ನನ ವಧೆಗೆ ಯತ್ನಿಸಿದಾಗ ಅರ್ಜುನನಿಂದ ಅವನಿಗೆ ರಕ್ಷಣೆ.

ಐವತ್ತೇಳನೆಯ ಅಧ್ಯಾಯ 103

ಯುಧಿಷ್ಠಿರನನ್ನು ಸೆರೆಹಿಡಿಯುವ ಯತ್ನ. ಅದು ಭೀಮನಿಂದ ವಿಫಲವಾಗುತ್ತದೆ.

ಐವತ್ತೆಂಟನೆಯ ಅಧ್ಯಾಯ..... 121

ಕರ್ಣ–ಶಿಖಂಡಿ, ದುಃಶಾಸನ–ಧೃಷ್ಟದ್ಯುಮ್ನ, ನಕುಲ–ವೃಷಸೇನ, ಸಹದೇವ–ಉಲೂಕ, ಶಕುನಿ–ಸಾತ್ಯಕಿ, ಭೀಮ–ದುರ್ಯೋಧನ, ಕೃತವರ್ಮ–ಉತ್ತಮೌಜರ ಯುದ್ಧಗಳು. ಭೀಮನಿಂದ ಗಜಸೈನ್ಯ ವಿನಾಶ.

ಐವತ್ತೊಂಬತ್ತನೆಯ ಅಧ್ಯಾಯ..... 134

ಸಹದೇವ ದುರ್ಯೋಧನರ ಯುದ್ಧ. ಪುನಃ ಯುಧಿಷ್ಠಿರನನ್ನು ಸೆರೆಹಿಡಿವ ಯತ್ನ ವಿಫಲವಾಯಿತು

ಅರವತ್ತನೆಯ ಅಧ್ಯಾಯ 142

ಶಿಬಿರಕ್ಕೆ ಹೊರಟಿದ್ದ ಯುಧಿಷ್ಠಿರನನ್ನು ಕರ್ಣ ಪೀಡಿಸಿದ. ಅದಕ್ಕೆ ಭೀಮ ದುರ್ಯೋಧನನನ್ನು ಪೀಡಿಸಿದ್ದರಿಂದ ಕರ್ಣ ಯುಧಿಷ್ಠಿರನನ್ನು ಬಿಟ್ಟ. ಯುಧಿಷ್ಠಿರ ಶಿಬಿರಕ್ಕೆ ಹೋಗಿ ಮಲಗಿದ.

ಅರವತ್ತೊಂದನೆಯ ಅಧ್ಯಾಯ..... 154

ಅರ್ಜುನ ಅಶ್ವತ್ಥಾಮನನ್ನು ಓಡಿಸಿದ. ಆದರೆ, ಕರ್ಣ ಭಾರ್ಗವಾಸ್ತ್ರವನ್ನು ಪ್ರಯೋಗಿಸಿದ್ದರಿಂದ, ಅವನ ಬಳಿಗೆ ಹೋಗಲಿಲ್ಲ.

ಅರವತ್ತೆರಡನೆಯ ಅಧ್ಯಾಯ 167

ಯುಧಿಷ್ಠಿರ ಶಿಬಿರಕ್ಕೆ ಹೋಗಿರುವುದನ್ನು ಅರ್ಜುನ ಭೀಮನಿಂದ ತಿಳಿದು ಅವನನ್ನು ಕಾಣಲು ಶಿಬಿರಕ್ಕೆ ಹೋಗುತ್ತಾನೆ.

ಅರವತ್ತಮೂರನೆಯ ಅಧ್ಯಾಯ 173

ಅರ್ಜುನ ಕರ್ಣವಧ ಮಾಡಿಯೇ ಬಂದಿರುವನೆಂದು ಬಗೆದು ಯುಧಿಷ್ಠಿರ ಅಭಿನಂದಿಸುತ್ತಾನೆ.

ಅರವತ್ತನಾಲ್ಕನೆಯ ಅಧ್ಯಾಯ 187

'ಕರ್ಣವಧವನ್ನು ಇನ್ನು ಮಾಡಬೇಕಷ್ಟೆ' ಎಂದು ಅರ್ಜುನ ಹೇಳುತ್ತಾನೆ. 'ಅನುಜ್ಞೆ ಕೊಡು' ಎನ್ನುತ್ತಾನೆ.

ಅರವತ್ತೈದನೆಯ ಅಧ್ಯಾಯ 195

'ನಿನಗೆ ಕರ್ಣನೆಂದರೆ ಭಯ! ನಿನಗೇಕೆ ಗಾಂಡೀವ?' ಎನ್ನುತ್ತಾನೆ ಯುಧಿಷ್ಠಿರ.

ಅರವತ್ತಾರನೆಯ ಅಧ್ಯಾಯ 204

ಯುಧಿಷ್ಠಿರನ ವಧೆಗೆ ಕತ್ತಿ ಹಿರಿಯುತ್ತಾನೆ ಅರ್ಜುನ. ಹಿರಿಯರನ್ನು ಕೊಲ್ಲಬೇಕೆಂದರೆ ಅದು ಕತ್ತಿಯಿಂದಲ್ಲ, ಮಾತಿನಿಂದ ಎನ್ನುತ್ತಾ ಶ್ರೀಕೃಷ್ಣ ಸತ್ಯ ಸುಳ್ಳುಗಳ ವಿವೇಚನೆಯನ್ನು ಉಪದೇಶಿಸುತ್ತಾನೆ.

ಅರವತ್ತೇಳನೆಯ ಅಧ್ಯಾಯ 228

ಯುಧಿಷ್ಠಿರನನ್ನು ಮಾತಿನಿಂದ ಕೊಲ್ಲುತ್ತಾನೆ, ಅರ್ಜುನ. ಅದಕ್ಕೆ ಪ್ರಾಯಶ್ಚಿತ್ತವಾಗಿ ಆತ್ಮಶ್ಲಾಘನೆಯಿಂದ ತನ್ನನ್ನು ಕೊಂದುಕೊಳ್ಳುತ್ತಾನೆ. ಬೇಸತ್ತ ಯುಧಿಷ್ಠಿರನಲ್ಲಿ ಎಲ್ಲಕ್ಕೂ ಕ್ಷಮೆ ಬೇಡುತ್ತಾನೆ.

ಅರವತ್ತೆಂಟನೆಯ ಅಧ್ಯಾಯ 247

ಯುಧಿಷ್ಠಿರ ಕ್ಷಮಿಸಿ ಕರ್ಣವಧೆಗೆ ಅನುಜ್ಞೆಯನ್ನು ಜಯಾಶೀರ್ವಾದಗಳನ್ನು ಅರ್ಜುನನಿಗೆ ನೀಡುತ್ತಾನೆ.

ಅರವತ್ತೊಂಬತ್ತನೆಯ ಅಧ್ಯಾಯ 256

'ಕರ್ಣವಧೆ ಸಾಧ್ಯವೆ?' ಎಂದು ಚಿಂತೆಯಿಂದ ಮೈಬೆವರಿದ ಅರ್ಜುನನಿಗೆ ಶ್ರೀಕೃಷ್ಣ ಹುರಿದುಂಬಿಸುತ್ತಾನೆ.

ಎಪ್ಪತ್ತನೆಯ ಅಧ್ಯಾಯ 264

ದುರ್ಯೋಧನನ ಎಲ್ಲ ಅಕೃತ್ಯಗಳಿಗೂ ಪ್ರೇರಣೆ ನೀಡಿದವನೇ ಕರ್ಣ. ಅವನ ವಧೆ ಅತ್ಯಂತ ಆವಶ್ಯಕ ಎಂದು ಶ್ರೀಕೃಷ್ಣನ ಉಪದೇಶ.

ಎಪ್ಪತ್ತೊಂದನೆಯ ಅಧ್ಯಾಯ..... 286

ಅರ್ಜುನನು ಮಾಡುವ ಕರ್ಣವಧೆಯ ವೀರಸಂಕಲ್ಪ.

ಎಪ್ಪತ್ತೆರಡನೆಯ ಅಧ್ಯಾಯ 295

ಭೀಮನಿಂದ ಕರ್ಣಪುತ್ರ ಸುಷೇಣನ ವಧ. ಉತ್ತಮೌಜ ಕೃಪನನ್ನು ವಿರಥನನ್ನಾಗಿ ಮಾಡಿದ. ಅಶ್ವತ್ಥಾಮ ಕೃಪನನ್ನು ಕಾಪಾಡಿದ.

ಎಪ್ಪತ್ತಮೂರನೆಯ ಅಧ್ಯಾಯ 301

ಸಾರಥಿ ವಿಶೋಕನೊಡನೆ ವಿನೋದದ ಮಾತುಗಳನ್ನಾಡುತ್ತ ಭೀಮನು ಶತ್ರುಸೈನ್ಯವನ್ನು ಓಡಿಸುತ್ತಾನೆ.

ಎಪ್ಪತ್ತನಾಲ್ಕನೆಯ ಅಧ್ಯಾಯ..... 316

ಭೀಮ ಶಕುನಿಯನ್ನು ಮೂರ್ಛೆಗೊಳಿಸಿ, ಅವನ ವಧೆಯನ್ನು ಸಹದೇವನ ಪಾಲಿಗೆ ಬಿಟ್ಟ. ದುರ್ಯೋಧನ ಶಕುನಿಯನ್ನು ದೂರಕ್ಕೆ ಒಯ್ದ.

ಎಪ್ಪತ್ತೈದನೆಯ ಅಧ್ಯಾಯ..... 332

ಕರ್ಣನ ಪ್ರತಾಪ, ಪಾಂಡವಸೈನ್ಯಕ್ಕೆ ಪರಾಜಯ

ಎಪ್ಪತ್ತಾರನೆಯ ಅಧ್ಯಾಯ 343

ತೇಜೋವಧೆ ಮಾಡುತ್ತಿದ್ದ ಶಲ್ಯ ಕರ್ಣನನ್ನು ಈಗ ಹುರಿದುಂಬಿಸುತ್ತಾನೆ.

ಎಪ್ಪತ್ತೇಳನೆಯ ಅಧ್ಯಾಯ 365

ಅರ್ಜುನನಿಂದ ಕುರುಸೈನ್ಯ ವಿನಾಶ.

ಎಪ್ಪತ್ತೆಂಟನೆಯ ಅಧ್ಯಾಯ..... 371

ಭೀಮಾರ್ಜುನರಿಂದ ಕುರುಸೈನ್ಯ ನಾಶ.

ಎಪ್ಪತ್ತೊಂಬತ್ತನೆಯ ಅಧ್ಯಾಯ..... 382

ಸಾತ್ಯಕಿಯಿಂದ ಕರ್ಣಪುತ್ರ ಪ್ರಸೇನನ ವಧ. ಕರ್ಣನಿಂದ ಐದು ಮಂದಿ ದ್ರುಪದ ಪುತ್ರರ ಪರಾಭವ. ಭೀಮ ದುಃಶಾಸನರ ಯುದ್ಧ.

ಎಂಬತ್ತನೆಯ ಅಧ್ಯಾಯ 397

ದುಃಶಾಸನ ರಕ್ತಪಾನ. ಯುಧಾಮನ್ಯು ಚಿತ್ರಸೇನನನ್ನು ವಧಿಸಿದ.

ಎಂಬತ್ತೊಂದನೆಯ ಅಧ್ಯಾಯ 418

ಒಂಬತ್ತು ಧೃತರಾಷ್ಟ್ರ ಪುತ್ರರ ವಧ. ಅರ್ಜುನನಿಂದ ಕರ್ಣಪುತ್ರ ವೃಷಸೇನನ ವಧ.

ಎಂಬತ್ತೆರಡನೆಯ ಅಧ್ಯಾಯ..... 439

ಅರ್ಜುನರಥ ಕರ್ಣರಥದ ಮುಂದೆ ಬಂದು ನಿಂತಿತು.

ಎಂಬತ್ತಮೂರನೆಯ ಅಧ್ಯಾಯ..... 446

ಕರ್ಣಾರ್ಜುನರ ಜಯಾಪಜಯ ವಿಷಯದಲ್ಲಿ ಅಂತರಿಕ್ಷದಲ್ಲಿ ವಾದವಿವಾದಗಳು. ದೇವತೆಗಳು ಅರ್ಜುನ ಪಕ್ಷವನ್ನೂ ಅಸುರರು ಕರ್ಣಪಕ್ಷವನ್ನೂ ವಹಿಸಿದರು. ಅರ್ಜುನನಿಗೇ ಜಯವೆಂದು ಬ್ರಹ್ಮರುದ್ರರ ಘೋಷಣೆ.

ಎಂಬತ್ತನಾಲ್ಕನೆಯ ಅಧ್ಯಾಯ 469

ಅರ್ಜುನ ಅದ್ಭುತ ಪರಾಕ್ರಮ ತೋರುತ್ತಾನೆ. ಅಶ್ವತ್ಥಾಮ ದುರ್ಯೋಧನನಿಗೆ ಸಂಧಾನದ ಸಲಹೆ ನೀಡುತ್ತಾನೆ. ದುರ್ಯೋಧನ ನಿರಾಕರಿಸುತ್ತಾನೆ.

ಎಂಬತ್ತೈದನೆಯ ಅಧ್ಯಾಯ 480

ಕರ್ಣಾರ್ಜುನರ ಅಸ್ತ್ರಯುದ್ಧ. ಅರ್ಜುನನ ಅಸ್ತ್ರ ಕರ್ಣನಿಂದ ವಿಫಲವಾಗುತ್ತಿರುವುದನ್ನು ಕಂಡು ಭೀಮನಿಗೂ ಶ್ರೀಕೃಷ್ಣನಿಗೂ ಅಸಮಾಧಾನ.

ಎಂಬತ್ತಾರನೆಯ ಅಧ್ಯಾಯಃ 502

ಪ್ರೇಕ್ಷಕನಾಗಿ ರಣರಂಗಕ್ಕೆ ಯುಧಿಷ್ಠಿರನ ಆಗಮನ. ಅರ್ಜುನ ಕುರುಸೈನ್ಯವನ್ನು ಹೊಡೆದೋಡಿಸುತ್ತಾನೆ.

ಎಂಬತ್ತೇಳನೆಯ ಅಧ್ಯಾಯ 511

ಶ್ರೀಕೃಷ್ಣ ರಥವನ್ನು ಒತ್ತಿ ತಗ್ಗಿಸಿದಾಗ, ಸರ್ಪಾಸ್ತ್ರ ಗುರಿತಪ್ಪಿ ಅರ್ಜುನನ ಕಿರೀಟವನ್ನು ಮಾತ್ರ ಹೊಡೆದು ಪುಡಿಮಾಡಿತು. ಆ ಅಶ್ವಸೇನಸರ್ಪನನ್ನು ಅರ್ಜುನ ಸಂಹರಿಸಿದ. (ಈ ವಿಷಯದಲ್ಲಿ ಒಂದು ಕೂಟ ಶ್ಲೋಕವಿದೆ.) ಬಳಿಕ ಕರ್ಣನ ರಥಚಕ್ರವನ್ನು ಭೂಮಿ ನುಂಗಿತು.

ಎಂಬತ್ತೆಂಟನೆಯ ಅಧ್ಯಾಯಃ 548

ರಥಚಕ್ರವನ್ನೆತ್ತಲು ಮುಹೂರ್ತವ್ಯವಧಾನವನ್ನು ಕರ್ಣಕೇಳಿಕೊಂಡರೆ ಅದನ್ನು ಶ್ರೀಕೃಷ್ಣ ನಿರಾಕರಿಸಿದ. ಅಂಜಲಿಕಾಸ್ತ್ರದಿಂದ ಅರ್ಜುನ ಕರ್ಣನ ಶಿರವನ್ನು ತರಿದ

ಎಂಬತ್ತೊಂಬತ್ತನೆಯ ಅಧ್ಯಾಯ 561

ಕುರುಸೈನ್ಯದ ಪಲಾಯನ. ದುರ್ಯೋಧನನಿಗೆ ಶಲ್ಯನ ಸಾಂತ್ವನ.

ತೊಂಬತ್ತನೆಯ ಅಧ್ಯಾಯ 567

ಇಪ್ಪತ್ತೈದುಸಾವಿರ ಯೋಧರನ್ನು ಭೀಮಸೇನ ಮತ್ತು ಧೃಷ್ಟದ್ಯುಮ್ನರು ನಾಶಮಾಡಿದರು.

ತೊಂಬತ್ತೊಂದನೆಯ ಅಧ್ಯಾಯ 579

ಶಲ್ಯನ ಸಲಹೆಯಂತೆ ದುರ್ಯೋಧನ ತನ್ನ ಸೈನ್ಯವನ್ನು ಶಿಬಿರಕ್ಕೆ ಹಿಂತಿರುಗಿಸಿದ.

ತೊಂಬತ್ತಎರಡನೆಯ ಅಧ್ಯಾಯ 600

ಕುರುಸೈನ್ಯದ ಶಿಬಿರ ಪ್ರವೇಶ.

ತೊಂಬತ್ತಮೂರನೆಯ ಅಧ್ಯಾಯ 604

ರಣರಂಗದಲ್ಲಿ ಒರಗಿದ ಕರ್ಣನನ್ನು ಕಂಡು ಯುಧಿಷ್ಠಿರ ಕೃಷ್ಣಾರ್ಜುನರನ್ನು ಅಭಿನಂದಿಸಿದನು.

ಜಿತ್ವಾ ಸೂರ್ಯಸುತಂ ಭೀಮಃ ಕೌರವಾಣಾಮನೀಕಿನೀಮ್ ।
ಸರ್ವಾಂ ವಿದ್ರಾವಯಾಮಾಸ ದ್ರೌಣಿದುರ್ಯೋಧನಾವೃತಾಮ್ ॥೪೪॥
ಅಕ್ಷೌಹಿಣೀತ್ರಯಂ ತೇನ ತದಾ ವಿಲುಲಿತಂ ಕ್ಷಣಾತ್ ।

ಭೀಮನು ಹೀಗೆ ಕರ್ಣನನ್ನು ಗೆದ್ದು ಅಶ್ವತ್ಥಾಮ–ದುರ್ಯೋಧನರಿಂದ ಯುಕ್ತವಾದ ಕೌರವರ ಮೂರು ಅಕ್ಷೌಹಿಣಿ ಸೈನ್ಯವೆಲ್ಲವನ್ನೂ ಓಡಿಸಿದನು.

❖❖❖

ನಲವತ್ತೆಂಟನೆಯ ಅಧ್ಯಾಯ

ಭೀಮನಿಂದ ಧೃತರಾಷ್ಟ್ರನ ಆರು ಮಕ್ಕಳ ಸಂಹಾರ. ಕರ್ಣ ಭೀಮನ ರಥವನ್ನು ಮುರಿದ. ಭೀಮ ಗದೆ ಎತ್ತಿಕೊಂಡು ಕರ್ಣ–ಶಲ್ಯರಿಬ್ಬರನ್ನೂ ರಥದಲ್ಲಿ ಬೀಳಿಸಿ, ಕುರುಸೈನ್ಯ ಧ್ವಂಸಮಾಡಿದ. ಬೇರೆ ರಥವೇರಿದ ಯುಧಿಷ್ಠಿರನನ್ನು ಬೆನ್ನಟ್ಟುತ್ತಿದ್ದ ಕರ್ಣನನ್ನು ತಡೆದ.

ಧೃತರಾಷ್ಟ್ರಃ

ಸುದುಷ್ಕರಮಿದಂ ಕರ್ಮ ಕೃತಂ ಭೀಮೇನ ಸಂಜಯ ।
ಯೇನ ಕರ್ಣೋ ಮಹಾಬಾಹೂ ರಥೋಪಸ್ಥೇ ನಿಪಾತಿತಃ ॥೧॥

ಧೃತರಾಷ್ಟ್ರ ನುಡಿದ— ಸಂಜಯ, ಭೀಮನು ಬಲು ಕಷ್ಟಸಾಧ್ಯವಾದ ಕಾರ್ಯವನ್ನು ಮಾಡಿಬಿಟ್ಟ. ಮಹಾಬಾಹುವಾದ ಕರ್ಣನನ್ನು ರಥದ ಹಿಂಭಾಗದಲ್ಲಿ ಬೀಳಿಸಿದ.

ಕರ್ಣೋ ಹ್ಯೇಕೋ ರಣೇ ಹಂತಾ ಸೃಂಜಯಾನ್ ಪಾಂಡವೈಃ ಸಹ ।
ಇತಿ ದುರ್ಯೋಧನಃ ಸೂತ ಪ್ರಾಬ್ರವೀನ್ಮಾಂ ಮುಹುರ್ಮುಹುಃ ॥೨॥

ಸಂಜಯ, 'ಕರ್ಣನೊಬ್ಬನೇ ರಣದಲ್ಲಿ ಪಾಂಡವರೊಂದಿಗೆ ಸೃಂಜಯರನ್ನು ಕೊಲ್ಲುತ್ತಾನೆ' ಎಂದು ದುರ್ಯೋಧನನು ನನ್ನ ಮುಂದೆ ಪುನಃಪುನಃ ಹೇಳುತ್ತಿದ್ದ.

ಪರಾಜಿತಂ ತು ರಾಧೇಯಂ ದೃಷ್ಟ್ವಾ ಭೀಮೇನ ಸಂಯುಗೇ ।
ತತಃ ಪರಂ ಕಿಮಕರೋತ್ಪುತ್ರೋ ದುರ್ಯೋಧನೋ ಮಮ ॥೩॥

ರಣದಲ್ಲಿ ಕರ್ಣನು ಭೀಮನಿಂದ ಪರಾಜಿತನಾದುದನ್ನು ಕಂಡು ನನ್ನ ಪುತ್ರ ದುರ್ಯೋಧನನೇನು ಮಾಡಿದ?

ಸಂಜಯಃ

ವಿಮುಖಂ ಪ್ರೇಕ್ಷ್ಯ ರಾಧೇಯಂ ಸೂತಪುತ್ರಂ ಮಹಾಹವೇ ।
ಪುತ್ರಸ್ತವ ಮಹಾರಾಜ ಸೋದರ್ಯಾನ್ ಸಮಭಾಷತ ॥೪॥

ಸಂಜಯ ನುಡಿದ— ಮಹಾರಾಜ, ಮಹಾಯುದ್ಧದಲ್ಲಿ ಕರ್ಣನು ಸೋತು ಪಲಾಯನ ಮಾಡಿದ್ದನ್ನು ಕಂಡು ನಿನ್ನ ಪುತ್ರನು ಸೋದರರಿಗೆ ಹೇಳಿದ.

ಶೀಘ್ರಂ ಗಚ್ಛತ ಭದ್ರಂ ವೋ ರಾಧೇಯಂ ಪರಿರಕ್ಷತ ।
ಭೀಮಸೇನಭಯಾಗಾಧೇ ಮಜ್ಜಂತಂ ವ್ಯಸನಾರ್ಣವೇ ॥೫॥

'ಬೇಗನೆ ನಡೆಯಿರಿ. ನಿಮಗೆ ಶುಭವಾಗಲಿ, ಕರ್ಣನನ್ನು ರಕ್ಷಿಸಿರಿ. ಅವನು ಈಗ ಭೀಮಸೇನನ ಭಯವೆಂಬ ಅಗಾಧವಾದ ವ್ಯಸನಸಮುದ್ರದಲ್ಲಿ ಮುಳುಗುತ್ತಿದ್ದಾನೆ' ಎಂದು.

ತೇ ತು ರಾಜ್ಞಾ ಸಮಾದಿಷ್ಟಾ ಭೀಮಸೇನಜಿಘಾಂಸವಃ ।
ಅಭ್ಯವರ್ತಂತ ಸಂಕ್ರುದ್ಧಾಃ ಪತಂಗಾ ಇವ ಪಾವಕಮ್ ॥೬॥

ಅವರು ರಾಜಾ ದುರ್ಯೋಧನನಿಂದ ಆಜ್ಞಪ್ತರಾಗಿ ಕೋಪಗೊಂಡು ಭೀಮಸೇನನನ್ನು ಕೊಲ್ಲಲು ಬಯಸಿ ದೀಪದ ಹುಳುಗಳು ಬೆಂಕಿಗೆ ಬೀಳುವಂತೆ ಭೀಮನೆದುರಿಗೆ ನುಗ್ಗಿದರು.

ಶ್ರುತಾಯುರ್ದುರ್ಧರಃ ಕ್ರಾಥೋ ವಿವಿತ್ಸುರ್ವಿಕಟಃ ಸಮಃ ।
ನಿಷಂಗೀ ಕವಚೀ ಪಾಶೀ ತಥಾ ನಂದೋಪನಂದಕೌ ॥೭॥

ದುಷ್ಪ್ರಧರ್ಷಃ ಸುಬಾಹುಶ್ಚ ವಾತವೇಗಸುವರ್ಚಸೌ ।
ಧನುರ್ಗ್ರಾಹೋ ದುರ್ದಮಶ್ಚ ತಥಾ ಸತ್ತ್ವಸಮಃ ಸಹಃ ॥೮॥

ಏತೇ ರಥೈಃ ಪರಿವೃತಾ ವೀರ್ಯವಂತೋ ಮಹಾಬಲಾಃ ।
ಭೀಮಸೇನಂ ಸಮಾಸಾದ್ಯ ಸಮಂತಾತ್ಪರ್ಯವಾರಯನ್ ॥೯॥

ಶ್ರುತಾಯು ದುರ್ಧರ ಕ್ರಾಥ ವಿವಿತ್ಸು ವಿಕಟ ಸಮ ನಿಷಂಗಿ ಕವಚಿ ಪಾಶಿ ನಂದ ಉಪನಂದ ದುಷ್ಪ್ರಧರ್ಷ ಸುಬಾಹು ವಾತವೇಗ ಸುವರ್ಚಸ ಧನುರ್ಗ್ರಾಹ ದುರ್ದಮ ಸತ್ವಸಮ ಮತ್ತು ಸಹ ಎಂಬ ವೀರ್ಯಶಾಲಿ ಮಹಾಬಲಿಗಳಾದ ಇವರು ರಥಿಕರಿಂದ ಪರಿವೃತರಾಗಿ ಭೀಮಸೇನನನ್ನು ಇದಿರಿಸಿ ಸುತ್ತಲೂ ಮುತ್ತಿದರು.

ತೇ ವ್ಯಮುಂಚನ್ ಶರವ್ರಾತಾನ್ ನಾನಾಲಿಂಗಾನ್ ಸಮಂತತಃ ॥೧೦

ಸ ತೈರಭ್ಯರ್ದ್ಯಮಾನಸ್ತು ಭೀಮಸೇನೋ ಮಹಾಬಲಃ ।
ತೇಷಾಮಾಪತತಾಂ ಕ್ಷಿಪ್ರಂ ಸುತಾನಾಂ ತೇ ನರಾಧಿಪ ॥೧೧॥

ರಥೈಃ ಪಂಚಾಶತಾ ಸಾರ್ಧಂ ಪಂಚಾಶನ್ನ್ಯಹನದ್ ರಥಾನ್ ।
ವಿವಿತ್ಸೋಸ್ತು ತತಃ ಕ್ರುದ್ಧೋ ಭಲ್ಲೇನಾಪಾಹರಚ್ಛಿರಃ ॥೧೨॥

ಅವರು ಭೀಮನ ಮೇಲೆ ನಾನಾ ಬಗೆಯ ಬಾಣಸಮೂಹಗಳನ್ನು ಎಲ್ಲಕಡೆಗಳಿಂದ ಎಸೆದರು. ಅವುಗಳಿಂದ ಮಹಾಬಲಶಾಲಿ ಭೀಮಸೇನ ಪೀಡಿತನಾಗುವಾಗ, ಅವನು ತನ್ನ ಮೇಲೇರಿ ಬರುತ್ತಿದ್ದ ನಿನ್ನ ಮಕ್ಕಳ ಕಡೆಯ ಐವತ್ತು ರಥಿಕರನ್ನು ಐವತ್ತು ರಥಗಳ ಸಮೇತವಾಗಿ ಪುಡಿಗೈದ. ವಿವಿತ್ಸುವಿನ ಶಿರಸ್ಸನ್ನು ಕೋಪದಿಂದ ಭಲ್ಲೆಯಿಂದ ತರಿದ.

ಭೀಮೇನ ಚ ಮಹಾರಾಜ ಸ ಪಪಾತ ಹತೋ ಭುವಿ ॥೧೩॥
ಸಕುಂಡಲಶಿರಸ್ತ್ರಾಣಂ ಪೂರ್ಣಚಂದ್ರೋಪಮಂ ತದಾ ॥೧೪॥

ಮಹಾರಾಜ, ಪೂರ್ಣಚಂದ್ರ ಸದೃಶವಾದ ಆ ಶಿರಸ್ಸನ್ನು ಕುಂಡಲ ಶಿರಸ್ತ್ರಾಣ ಸಹಿತವಾಗಿಯೇ ಭೀಮ ಕತ್ತರಿಸಿದ. ಹೀಗೆ ವಿವಿತ್ಸು ಭೀಮನಿಂದ ಹತನಾಗಿ ನೆಲದ ಮೇಲೊರಗಿದ.

ತಂ ದೃಷ್ಟ್ವಾ ನಿಹತಂ ಶೂರಂ ಭ್ರಾತರಃ ಸರ್ವತಃ ಪ್ರಭೋ ।
ಅಭ್ಯದ್ರವಂತ ಸಮರೇ ಭೀಮಂ ಭೀಮಪರಾಕ್ರಮಮ್ ॥೧೫॥

ಶೂರನಾದ ವಿವಿತ್ಸು ಹತನಾದುದನ್ನು ಕಂಡು ಸೋದರರೆಲ್ಲರೂ ಭಯಂಕರ ಪರಾಕ್ರಮಿಯಾದ ಭೀಮನನ್ನು ಸಮರದಲ್ಲಿ ಆಕ್ರಮಿಸಿದರು.

ತತೋಽಪರಾಭ್ಯಾಂ ಭಲ್ಲಾಭ್ಯಾಂ ಪುತ್ರಯೋಸ್ತೇ ಮಹಾಹವೇ ।
ಜಹಾರ ಸಮರೇ ಪ್ರಾಣಾನ್ ಭೀಮೋ ಭೀಮಪರಾಕ್ರಮಃ ॥೧೬॥

ಆಗ ಮಹಾರಣದಲ್ಲಿ ಭಯಂಕರ ಪರಾಕ್ರಮಿ ಭೀಮನು ಇನ್ನೆರಡು ಭಲ್ಲೆಗಳಿಂದ ನಿನ್ನ ಇನ್ನಿಬ್ಬರು ಪುತ್ರರ ಪ್ರಾಣಗಳನ್ನು ಅಪಹರಿಸಿದ.

ತೌ ಧರಾಮನ್ವಪದ್ಯೇತಾಂ ವಾತರುಗ್ಣಾವಿವ ದ್ರುಮೌ ।
ವಿಕಟಶ್ಚ ಸಮಶ್ಚೋಭೌ ದೇವಗರ್ಭಸಮೌ ನೃಪ ॥೧೭॥

ರಾಜನೆ, ದೇವಪುತ್ರರಂತಿದ್ದ ವಿಕಟ ಮತ್ತು ಸಮ ಎಂಬ ಇನ್ನಿಬ್ಬರು ನಿನ್ನ ಪುತ್ರರೂ ಕೂಡ ಹತರಾಗಿ ಬಿರುಗಾಳಿಗೆ ಮುರಿದ ಎರಡು ಮರಗಳಂತೆ ನೆಲದಲ್ಲಿ ಒರಗಿದರು.

ತತಸ್ತು ತ್ವರಿತೋ ಭೀಮಃ ಕ್ರಾಥಂ ನಿನ್ಯೇ ಯಮಕ್ಷಯಮ್ ।
ನಾರಾಚೇನ ಸುತೀಕ್ಷ್ಣೇನ ಸ ಹತೋ ನ್ಯಪತದ್ ಭುವಿ ॥೧೮॥

ಬಳಿಕ ಭೀಮನು ಬೇಗನೆ ಬಲು ತೀಕ್ಷ್ಣವಾದ ಬಾಣದಿಂದ ಕ್ರಾಥನೆಂಬ ನಿನ್ನ ಪುತ್ರನನ್ನು ಕೂಡ ಯಮಲೋಕಕ್ಕೆ ಕಳಿಸಿದ

ಹಾಹಾಕಾರಸ್ತತಸ್ತೀವ್ರಃ ಸಂಬಭೂವ ಜನೇಶ್ವರ ।
ವಧ್ಯಮಾನೇಷು ತೇ ರಾಜಂಸ್ತದಾ ಪುತ್ರೇಷು ಧನ್ವಿಷು ॥೧೯॥

ರಾಜನೆ, ಬಿಲ್ಲಾಳುಗಳಾದ ನಿನ್ನ ಪುತ್ರರು ಹೀಗೆ ಹತರಾಗುವಾಗ ತೀವ್ರವಾದ ಹಾಹಾಕಾರ ಉಂಟಾಯಿತು.

ತೇಷಾಂ ಸಂಲುಲಿತೇ ಸೈನ್ಯೇ ಭೀಮಸೇನೋ ಮಹಾಬಲಃ ।
ನಂದೋಪನಂದೌ ಸಮರೇ ಪ್ರಾಪಯದ್ ಯಮಸಾದನಮ್ ॥೨೦॥

ನಿನ್ನ ಪುತ್ರರ ಸೈನ್ಯವು ಕ್ಷೋಭೆಗೊಳಗಾದಾಗ ಮಹಾಬಲಿ ಭೀಮಸೇನನು ರಣದಲ್ಲಿ ನಿನ್ನ ಪುತ್ರರಾದ ನಂದ–ಉಪನಂದರನ್ನೂ ಕೂಡ ಯಮಪಟ್ಟಣಕ್ಕೆ ಕಳಿಸಿದ.

ತತಸ್ತೇ ಪ್ರಾದ್ರವನ್ ಭೀತಾಃ ಪುತ್ರಾಸ್ತೇ ವಿಹ್ವಲೀಕೃತಾಃ ।
ಭೀಮಸೇನಂ ರಣೇ ದೃಷ್ಟ್ವಾ ಕಾಲಾಂತಕಯಮೋಪಮಮ್ ॥೨೧॥

ಆಗ ನಿನ್ನ ಪುತ್ರರು ರಣದಲ್ಲಿ ಕಾಲಾಂತಕ ಯಮನಂತಿದ್ದ ಭೀಮನನ್ನು ಕಂಡು ಭಯವಿಹ್ವಲತೆಯಿಂದ ಪಲಾಯನ ಮಾಡಿದರು.

ಪುತ್ರಾಂಸ್ತೇ ನಿಹತಾನ್ ದೃಷ್ಟ್ವಾ ಸೂತಪುತ್ರೋ ಸುದುರ್ಮನಾಃ ।
ಹಂಸವರ್ಣಾನ್ ಹಯಾನ್ ಭೂಯಃ ಪ್ರಾಹಿಣೋದ್
ಯತ್ರ ಪಾಂಡವಃ ॥೨೨॥

ನಿನ್ನ ಪುತ್ರರು ಹತರಾದುದನ್ನು ಕಂಡು ಕರ್ಣನು ದುಃಖಿತನಾಗಿ ಹಂಸವರ್ಣದ ತನ್ನ ಕುದುರೆಗಳನ್ನು ಪುನಃ ಭೀಮನಿದ್ದಲ್ಲಿಗೆ ನಡೆಸಿದನು.

ತೇ ಪ್ರೇಷಿತಾ ಮಹಾರಾಜ ಮದ್ರರಾಜೇನ ವಾಜಿನಃ ।
ಭೀಮಸೇನರಥಂ ಪ್ರಾಪ್ಯ ಸಮಸಜ್ಜಂತ ವೇಗಿತಾಃ ॥೨೩॥

ಮಹಾರಾಜ, ಶಲ್ಯನು ನಡೆಸಿದ ಆ ಕುದುರೆಗಳು ವೇಗದಿಂದ ಭೀಮಸೇನನ ರಥ ಸಮೀಪಕ್ಕೆ ಹೋಗಿ ಇದಿರಿಸಿ ನಿಂತುವು.

ಸ ಸನ್ನಿಪಾತಸ್ತುಮುಲೋ ಘೋರರೂಪೋ ವಿಶಾಂಪತೇ ।
ಆಸೀದ್ ರೌದ್ರೋ ಮಹಾರಾಜ ಕರ್ಣಪಾಂಡವಯೋರ್ಮೃಧೇ ॥೨೪॥

ಕರ್ಣನಿಗೂ ಭೀಮನಿಗೂ ನಡೆದ ತುಮುಲ ಯುದ್ಧವು ಘೋರಸ್ವರೂಪ ಹೊಂದಿ ಭೀಕರವಾಗಿತ್ತು.

ದೃಷ್ಟ್ವಾ ಮಮ ಮಹಾರಾಜ ತೌ ಸಮೇತೌ ಮಹಾರಥೌ ।
ಆಸೀದ್ ಬುದ್ಧಿಃ ಕಥಂ ನೂನಮೇತದದ್ಯ ಭವಿಷ್ಯತಿ ॥೨೫॥

ಮಹಾರಾಜ, ಅವರಿಬ್ಬರು ಮಹಾರಥರು ಹೋರಾಡುವುದನ್ನು ಕಂಡು ನನಗೆ ಇದರ ಪರ್ಯವಸಾನ ಹೇಗಾದೀತೆಂದು ಚಿಂತೆ ಉಂಟಾಯಿತು

ತತೋ ಭೀಮೋ ರಣಶ್ಲಾಘೀ ಛಾದಯಾಮಾಸ ಪತ್ರಿಭಿಃ ।
ಕರ್ಣಂ ರಣೇ ಮಹಾರಾಜ ಪುತ್ರಾಣಾಂ ತವ ಪಶ್ಯತಾಮ್ ॥೨೬॥

ಆಗ ರಣವನ್ನು ಶ್ಲಾಘಿಸುವ ಭೀಮನು ನಿನ್ನ ಪುತ್ರರು ನೋಡುತ್ತಿದ್ದಂತೆಯೇ ಕರ್ಣನನ್ನು ಬಾಣಗಳಿಂದ ಮುಚ್ಚಿಬಿಟ್ಟ.

ತತಃ ಕರ್ಣೋ ಭೃಶಂ ಕ್ರುದ್ಧೋ ಭೀಮಂ ನವಭಿರಾಯಸೈಃ ।
ವಿವ್ಯಾಧ ಪರಮಾಸ್ತ್ರಜ್ಞೋ ಭಲ್ಲೈಃ ಸನ್ನತಪರ್ವಭಿಃ ॥೨೭॥

ಮಹಾಪ್ರಾಜ್ಞನಾದ ಕರ್ಣನು ಆಗ ಬಲು ಕುಪಿತನಾಗಿ ಭೀಮನನ್ನು ಡೊಂಕುಗಿಣ್ಣಿನ ಒಂಬತ್ತು ಉಕ್ಕಿನ ಭಲ್ಲೆಗಳಿಂದ ಹೊಡೆದ.

ಆಹತಃ ಸ ಮಹಾಬಾಹುರ್ಭೀಮೋ ಭೀಮಪರಾಕ್ರಮಃ ।
ಆಕರ್ಣಪೂರ್ಣೈರ್ವಿಶಿಖೈಃ ಕರ್ಣಂ ವಿವ್ಯಾಧ ಸಪ್ತಭಿಃ ॥೨೮॥

ಹೊಡೆಸಿಕೊಂಡ ಮಹಾಬಾಹು ಭಯಂಕರ ಪರಾಕ್ರಮಿಯಾದ ಭೀಮನು ಕಿವಿಯವರೆಗೆ ಸೆಳೆದು ಏಳು ಬಾಣಗಳಿಂದ ಕರ್ಣನನ್ನು ಪ್ರಹರಿಸಿದ.

ತತಃ ಕರ್ಣೋ ಮಹಾರಾಜ ಆಶೀವಿಷ ಇವ ಶ್ವಸನ್ ।
ಶರವರ್ಷೇಣ ಮಹತಾ ಛಾದಯಾಮಾಸ ಪಾಂಡವಮ್ ॥೨೯॥

ಆಗ ಮಹಾರಾಜ, ಕರ್ಣನು ವಿಷಸರ್ಪದಂತೆ ಭುಸುಗುಟ್ಟುತ್ತ ದೊಡ್ಡ ಬಾಣಗಳ ಮಳೆಯಿಂದ ಭೀಮನನ್ನು ಮುಚ್ಚಿದ.

ಭೀಮೋಽಪಿ ತಂ ಶರವ್ರಾತೈಶ್ಛಾದಯಿತ್ವಾ ಮಹಾರಥಮ್ ।
ಪಶ್ಯತಾಂ ಕೌರವೇಯಾಣಾಂ ವಿನನರ್ದ ಮಹಾಬಲಃ ॥೩೦॥

ಭೀಮನೂ ಕೂಡ ಮಹಾರಥನಾದ ಕರ್ಣನನ್ನು ಬಾಣಸಮೂಹಗಳಿಂದ ಮುಚ್ಚಿ ಕೌರವಯೋಧರು ನೋಡುತ್ತಿದ್ದಂತೆಯೇ ಗರ್ಜನೆ ಮಾಡಿದ.

ತತಃ ಕರ್ಣೋ ಭೃಶಂ ಕ್ರುದ್ಧೋ ದೃಢಮಾದಾಯ ಕಾರ್ಮುಕಮ್ ।
ಭೀಮಂ ವಿವ್ಯಾಧ ದಶಭಿಃ ಕಂಕಪತ್ರೈಃ ಶಿಲಾಶಿತೈಃ ॥೩೧॥

ಆಗ ಕರ್ಣನು ಬಹಳ ಕ್ರುದ್ಧನಾಗಿ ದೃಢವಾದ ಧನುಸ್ಸನ್ನು ಹಿಡಿದು ಸಾಣೆಗಲ್ಲಿನಿಂದ ಹರಿತಮಾಡಿರುವ ಹತ್ತು ಬಾಣಗಳಿಂದ ಭೀಮನನ್ನು ಹೊಡೆದ.

ಕಾರ್ಮುಕಂ ಚಾಸ್ಯ ಚಿಚ್ಛೇದ ಭಲ್ಲೇನ ನಿಶಿತೇನ ಚ ।
ತತೋ ಭೀಮೋ ಮಹಾಬಾಹುರ್ಹೇಮಪಟ್ಟವಿಭೂಷಿತಮ್ ॥೩೨॥

ಪರಿಘಂ ಘೋರಮಾದಾಯ ಮೃತ್ಯುದಂಡಮಿವಾಪರಮ್ ।
ಕರ್ಣಸ್ಯ ನಿಧನಾಕಾಂಕ್ಷೀ ಚಿಕ್ಷೇಪಾತಿಬಲೋ ನದನ್ ॥೩೩॥

ಮತ್ತು ಭೀಮನ ಬಿಲ್ಲನ್ನೂ ತೀಕ್ಷ್ಣವಾದ ಭಲ್ಲೆಯಿಂದ ಕಡಿದ. ಆಗ ಮಹಾಬಾಹುವಾದ ಭೀಮನು ಬಂಗಾರದ ಪಟ್ಟಿಯಿಂದ ಅಲಂಕೃತವಾದ ಇನ್ನೊಂದು ಯಮದಂಡದಂತಿರುವ ಘೋರವಾದ ಪರಿಘಾಯುಧವನ್ನು ಕರ್ಣನ ನಿಧನಾಕಾಂಕ್ಷಿಯಾಗಿ ಅತಿಬಲವಾಗಿ ಗರ್ಜಿಸುತ್ತ ಎಸೆದ.

ತಮಾಪತಂತಂ ಪರಿಘಂ ವಜ್ರಾಶನಿಸಮಸ್ವನಮ್ ।
ಚಿಚ್ಛೇದ ಬಹುಧಾ ಕರ್ಣಃ ಶರೈರಾಶೀವಿಷೋಪಮೈಃ ॥೩೪॥

ವಜ್ರಾಯುಧದಂತೆ ಧ್ವನಿ ಮಾಡುತ್ತ ತನ್ನ ಮೇಲೆ ಬೀಳುತ್ತಿದ್ದ ಆ ಪರಿಘವನ್ನು ಕರ್ಣನು ಹಾವಿನಂಥ ಬಾಣಗಳಿಂದ ಬಹುವಾಗಿ ಕತ್ತರಿಸಿದ.

ತತಃ ಕಾರ್ಮುಕಮಾದಾಯ ಭೀಮೋ ದೃಢತರಂ ತದಾ ।
ಘಾದಯಾಮಾಸ ವಿಶಿಖೈಃ ಕರ್ಣಂ ಪರಬಲಾರ್ದನಮ್ ॥೩೫॥
ಚುಕ್ರೋಧ ಪರಮಾಯಸ್ತೋ ದಂಡಾಹತ ಇವೋರಗಃ ॥೩೬॥

ಬಳಿಕ ಭೀಮನು ಹೆಚ್ಚು ದೃಢವಾದ ಬಿಲ್ಲನ್ನೆತ್ತಿಕೊಂಡು ಶತ್ರುಸೈನ್ಯ ನಾಶಕನಾದ ಕರ್ಣನನ್ನು ಬಾಣಗಳಿಂದ ಮುಚ್ಚಿದ. ಕೋಲಿನಿಂದ ಹೊಡೆಸಿಕೊಂಡು ಬಹಳ ಆಯಾಸಗೊಂಡ ಹಾವಿನಂತೆ ಕೋಪಗೊಂಡ.

ತತೋ ಯುದ್ಧಮಭೂದ್ ಘೋರಂ ಕರ್ಣಪಾಂಡವಯೋರ್ಮೃಧೇ ।
ಹರೀಂದ್ರಯೋರಿವ ಮುಹುಃ ಪರಸ್ಪರವಧೈಷಿಣೋಃ ॥೩೭॥

ಆಗ ಕರ್ಣ–ಭೀಮಸೇನರಿಗೆ, ಪರಸ್ಪರ ವಧವನ್ನು ಬಯಸಿದ ಎರಡು ಸಿಂಹಗಳಂತೆ, ಘೋರವಾದ ಯುದ್ಧ ನಡೆಯಿತು.

ತತಃ ಕರ್ಣೋ ಮಹಾರಾಜ ಭೀಮಸೇನಂ ತ್ರಿಭಿಃ ಶರೈಃ ।
ಆಕರ್ಣಮೂಲಂ ವಿವ್ಯಾಧ ದೃಢಮಾಯಮ್ಯ ಕಾರ್ಮುಕಮ್ ॥೩೮॥

ಮಹಾರಾಜ, ಕರ್ಣನು ಬಿಲ್ಲನ್ನು ದೃಢವಾಗಿ ಕಿವಿಯ ಬುಡದವರೆಗೆ ಸೆಳೆದು ಮೂರು ಬಾಣಗಳಿಂದ ಭೀಮಸೇನನನ್ನು ಹೊಡೆದ.

ಸೋಽತಿವಿದ್ಧೋ ಮಹೇಷ್ವಾಸಃ ಕರ್ಣೇನ ಬಲಿನಾಂ ವರಃ ।
ಘೋರಮಾದತ್ತ ವಿಶಿಖಂ ಕರ್ಣಕಾಯಾವದಾರಣಮ್ ॥೩೯॥

ಮಹಾಬಿಲ್ಲಾರನಾದ ಬಲಿಷ್ಠರಲ್ಲಿ ಶ್ರೇಷ್ಠನಾದ ಭೀಮಸೇನನು ಕರ್ಣನಿಂದ ಬಹಳ ಹೊಡೆಸಿಕೊಂಡು ಕರ್ಣನ ಶರೀರವನ್ನು ಸೀಳಬಲ್ಲ ಘೋರವಾದ ಬಾಣವನ್ನು ಎತ್ತಿಕೊಂಡ.

ತಸ್ಯ ಭಿತ್ತ್ವಾ ತನುತ್ರಾಣಂ ಭಿತ್ತ್ವಾ ಕಾಯಂ ಚ ಸಾಯಕಃ ।
ಪ್ರಾವಿಶದ್ ಧರಣೀಂ ರಾಜನ್ ವಲ್ಮೀಕಮಿವ ಪನ್ನಗಃ ॥೪೦॥

ಆ ಬಾಣವು ಕರ್ಣನ ಕವಚವನ್ನೂ ಶರೀರವನ್ನೂ ಭೇದಿಸಿ ಹಾವು ಹುತ್ತವನ್ನು ಪ್ರವೇಶಿಸುವಂತೆ ನೆಲವನ್ನು ಪ್ರವೇಶಿಸಿತು.

ಸ ತೇನಾತಿಪ್ರಹಾರೇಣ ವ್ಯಥಿತೋ ವಿಹ್ವಲನ್ನಿವ ।
ಸಂಚಚಾಲ ರಥೇ ಕರ್ಣಃ ಕ್ಷಿತಿಕಂಪೇ ಯಥಾಚಲಃ ॥೪೧॥

ಆ ಬಾಣದಿಂದ ಅತಿ ಪ್ರಹಾರದಿಂದ ವ್ಯಥಿತನಾಗಿ ವಿಹ್ವಲಗೊಂಡು ಭೂಮಿ ಕಂಪಿಸುವಾಗ ಬೆಟ್ಟ ಅದುರುವಂತೆ ರಥದಲ್ಲಿ ಕರ್ಣ ನಡುಗಿದ.

ತತಃ ಕರ್ಣೋ ಮಹಾರಾಜ ರೋಷಾಮರ್ಷಸಮನ್ವಿತಃ ।
ಪಾಂಡವಂ ಪಂಚವಿಂಶತ್ಯಾ ನಾರಾಚಾನಾಂ ಸಮಾರ್ಪಯತ್ ॥೪೨॥

ಬಳಿಕ, ಮಹಾರಾಜ! ಕರ್ಣನು ರೋಷ, ಅಸಹನೆಗಳಿಂದ ಯುಕ್ತನಾಗಿ ಭೀಮನನ್ನು ಇಪ್ಪತ್ತೈದು ಬಾಣಗಳಿಂದ ಪ್ರಹರಿಸಿದ.

ತತೋ ಮುಹೂರ್ತಾದ್ ರಾಜೇಂದ್ರ ನಾತಿಕೃಚ್ಛ್ರಾದ್ಧಸನ್ನಿವ ।
ವಿರಥಂ ಭೀಮಕರ್ಮಾಣಂ ಭೀಮಂ ಕರ್ಣಶ್ಚಕಾರ ಹ ॥೪೩॥

ಮಹಾರಾಜ, ಮುಹೂರ್ತಕಾಲದ ಅನಂತರ ಕರ್ಣನು ನಗುತ್ತ ಅನಾಯಾಸವಾಗಿ ಭೀಕರಕಾರ್ಯಕಾರಿಯಾದ ಭೀಮನನ್ನು ವಿರಥನನ್ನಾಗಿ ಮಾಡಿದ.

ವಿರಥೋ ಭರತಶ್ರೇಷ್ಠಃ ಪ್ರಹಸನ್ನಿವೋಪಮಃ ।
ಗದಾಹಸ್ತೋ ಮಹಾಬಾಹುರಪತತ್ಸ್ಯಂದನೋತ್ತಮಾತ್ ॥೪೪॥

ವಿರಥನಾದ ಮಹಾಬಾಹು ಭೀಮನು ನಗುತ್ತ ಗದೆಯನ್ನು ಹಿಡಿದು ಉತ್ತಮವಾದ ರಥದಿಂದ ಗಾಳಿಯಂತೆ ಕೆಳಗೆ ಧುಮುಕಿದ.

ಕರ್ಣಂ ಶಲ್ಯಂ ಚ ಯುಗಪದ್ ಗದಯಾ ಪ್ರಹಸನ್ನಿವ ।
ಅಪಾತಯದ್ ರಥೋಪಸ್ಥೇ ನಿಹತ್ಯ ವಿನನಾದ ಹ ॥೪೫॥

ನಗುತ್ತ ಭೀಮಸೇನನು ಕರ್ಣ–ಶಲ್ಯರಿಬ್ಬರನ್ನೂ ಜೊತೆಯಾಗಿ ಗದೆಯಿಂದ ಹೊಡೆದು ರಥದ ಹಿಂಭಾಗದಲ್ಲಿ ಬೀಳಿಸಿ ಗರ್ಜಿಸಿದ.

ಗದಯಾ ಚ ಮಹಾರಾಜ ಕರ್ಣಸ್ಯ ರಥಕೂಬರಮ್ ।
ಪೋಥಯಾಮಾಸ ಸಂಕ್ರುದ್ಧಃ ಸಮರೇ ಶತ್ರುತಾಪನಃ ॥೪೬॥

ಗದೆಯಿಂದ ಕರ್ಣನ ರಥದ ಕೂಬರವನ್ನು ಶತ್ರುತಾಪಕನಾದ ಭೀಮ ರಣದಲ್ಲಿ ಕೋಪದಿಂದ ಪುಡಿಮಾಡಿದ.

ನಾಗಾನ್ ಸಪ್ತಶತಾನ್ ರಾಜನ್ನೀಷಾದಂತಾನ್ ಪ್ರಹಾರಿಣಃ ।
ವ್ಯಧಮತ್ ಸಹಸಾ ಭೀಮಃ ಕ್ರುದ್ಧರೂಪಃ ಪರಂತಪಃ ॥೪೭॥

ರಾಜನೆ, ಶತ್ರುತಾಪಕನಾದ ಭೀಮ ಕ್ರುದ್ಧನಾಗಿ ಪ್ರಹಾರ ಸಮರ್ಥವಾದ ಈಷಾ ದಂಡದಂಥ ದಾಡೆಗಳುಳ್ಳ ಏಳುನೂರು ಆನೆಗಳನ್ನು ವೇಗದಿಂದ ಸಂಹರಿಸಿದ.

ದಂತವೇಷ್ಟೇಷು ನೇತ್ರೇಷು ಕುಂಭೇಷು ಸ ಕಟೇಷು ಚ ।
ಮರ್ಮಸ್ವಪಿ ಚ ಮರ್ಮಜ್ಞೋ ತಾನ್ನಾಗಾನವಧೀದ್ ಬಲೀ ॥೪೮॥

ಆನೆಗಳ ತುಟಿ ಕಣ್ಣು ಕುಂಭಸ್ಥಳ ಕಪೋಲಗಳಲ್ಲಿಯೂ ಮರ್ಮಸ್ಥಳ ಗಳಲ್ಲಿಯೂ ಬಲಿಷ್ಠನಾದ ಮರ್ಮಜ್ಞನಾದ ಭೀಮನು ಹೊಡೆದು ಸಂಹರಿಸಲು ತೊಡಗಿದ.

ತತಸ್ತೇ ಪ್ರಾದ್ರವನ್ ಭೀತಾಃ ಪ್ರತೀಪಂ ಪ್ರಹಿತಾಃ ಪುನಃ ।
ಮಹಾಮಾತ್ರೈಸ್ತಮಾವವ್ರುರ್ಮೇಘಾ ಇವ ದಿವಾಕರಮ್ ॥೪೯॥

ಆನೆಗಳು ಭಯದಿಂದ ಓಡಿದುವು. ಆದರೆ ಮಾವಟಿಗರು ಪುನಃ ಅವುಗಳನ್ನು ಹಿಂತಿರುಗಿಸಿದಾಗ ಮೋಡಗಳು ಸೂರ್ಯನನ್ನು ಆವರಿಸುವಂತೆ ಅವು ಭೀಮನನ್ನು ಸುತ್ತಲೂ ಆವರಿಸಿದುವು.

ತಾನ್ ಸ ಸಪ್ತಶತಾನ್ ನಾಗಾನ್ ಸಾರೋಹಾಯುಧಕೇತನಾನ್ ।
ಭೂಮಿಷ್ಠೋ ಗದಯಾ ಜಘ್ನೇ ಶರನ್ಮೇಘಾನಿವಾನಿಲಃ ॥೫೦॥

ಆ ಏಳುನೂರು ಆನೆಗಳನ್ನು ಗಜಾರೋಹಿಗಳ ಆಯುಧಗಳ ಧ್ವಜಗಳ ಸಮೇತವಾಗಿ ಭೀಮನು ನೆಲದಲ್ಲಿದ್ದೇ ಗದೆಯಿಂದ ಹೊಡೆದು ಶರತ್ಕಾಲದ ಮೋಡಗಳನ್ನು ಗಾಳಿ ನಾಶಮಾಡುವಂತೆ ಸಂಹರಿಸಿದ.

ತತಃ ಸುಬಲಪುತ್ರಸ್ಯ ನಾಗಾನತಿಬಲಾನ್ ಪುನಃ ।
ಪೋಥಯಾಮಾಸ ಕೌಂತೇಯೋ ದ್ವಿಪಂಚಾಶದರಿಂದಮಃ ॥೫೧॥

ಶತ್ರುನಾಶಕನಾದ ಭೀಮನು ಪುನಃ ಅತಿ ಬಲಿಷ್ಠವಾದ ಶಕುನಿಯ ಐವತ್ತೆರಡು ಆನೆಗಳನ್ನೂ ಸಂಹರಿಸಿದ.

ತಥಾ ರಥಶತಂ ಸಾಗ್ರಂ ಪತ್ತೀಂಶ್ಚ ಶತಶೋಽಪರಾನ್ ।
ನ್ಯಹನತ್ ಪಾಂಡವೋ ಯುದ್ಧೇ ತಾಪಯಂಸ್ತವ ವಾಹಿನೀಮ್ ॥೫೨॥

ಹಾಗೆ ನೂರಕ್ಕಿಂತಲೂ ಹೆಚ್ಚು ರಥಗಳನ್ನೂ ನೂರಾರು ಬೇರೆ ಪದಾತಿಗಳನ್ನೂ ಭೀಮ ಯುದ್ಧದಲ್ಲಿ ನಾಶಪಡಿಸಿದ, ನಿನ್ನ ಸೈನ್ಯಕ್ಕೆ ಸಂತಾಪ ಉಂಟುಮಾಡಿದ.

ಪ್ರತಾಪ್ಯಮಾನಂ ಸೂರ್ಯೇಣ ಭೀಮೇನ ಚ ಮಹಾತ್ಮನಾ ।
ತವ ಸೈನ್ಯಂ ಸಂಚುಕೋಚ ಚರ್ಮಾಗ್ನಾವಾಹಿತಂ ಯಥಾ ॥೫೩॥

ಸೂರ್ಯನಿಂದಲೂ ಮಹಾತ್ಮನಾದ ಭೀಮನಿಂದಲೂ ಸಂತಾಪಗೊಳಿಸಲ್ಪಟ್ಟ ನಿನ್ನ ಸೈನ್ಯ ಬೆಂಕಿಯಲ್ಲಿ ಹಾಕಿದ ಚರ್ಮದಂತೆ ಮುದುಡಿತು.

ತೇ ಭೀಮಭಯಸನ್ತ್ರಸ್ತಾಸ್ತಾವಕಾ ಭರತರ್ಷಭ ।
ವಿಹಾಯ ಸಮರೇ ಕರ್ಣಂ ದುದ್ರುವುರ್ವೈ ದಿಶೋ ದಶ ॥೫೪॥

ರಾಜನೆ, ಭೀಮನ ಭಯದಿಂದ ವಿಹ್ವಲರಾದ ನಿನ್ನ ಸೈನಿಕರು ರಣದಲ್ಲಿ ಕರ್ಣನನ್ನು ಬಿಟ್ಟು ಹತ್ತು ದಿಕ್ಕುಗಳಿಗೆ ಓಡಿದರು.

ರಥಾಃ ಪಂಚಶತಾಶ್ಚಾನ್ಯೇ ಹ್ಯಾದಿನಶ್ಚರ್ಮವರ್ಮಿಣಃ ।
ಭೀಮಮಭ್ಯದ್ರವಂಸ್ತೂರ್ಣಂ ಶರಪೂಗೈಃ ಸಮಂತತಃ ॥೫೫॥

ಐದುನೂರು ರಥಿಕರು ಚರ್ಮದ ಆವರಣಯುಕ್ತವಾದ ಗಂಭೀರ ಶಬ್ದ ಮಾಡುವ ರಥಗಳನ್ನೇರಿ ಎಲ್ಲೆಡೆಗಳಿಂದ ಭೀಮನನ್ನು ಬಾಣಸಮೂಹಗಳಿಂದ ಆಕ್ರಮಿಸಿದರು.

ತಾನ್ ಸಸೂತರಥಾನ್ ಸರ್ವಾನ್ ಸಪತಾಕಾಧ್ವಜಾಯುಧಾನ್ ।
ಪೋಥಯಾಮಾಸ ಗದಯಾ ಭೀಮೋ ವಿಷ್ಣುರಿವಾಸುರಾನ್ ॥೫೬॥

ಅವರನ್ನು ಎಲ್ಲರನ್ನೂ ಸಾರಥಿ ರಥ ಧ್ವಜ ಪತಾಕೆ ಆಯುಧಗಳೊಂದಿಗೇ ಭೀಮನು ಗದೆಯಿಂದ ವಿಷ್ಣು ಅಸುರರನ್ನು ಹೇಗೋ ಹಾಗೆ ನಾಶಪಡಿಸಿದ.

ತತಃ ಶಕುನಿನಿರ್ದಿಷ್ಟಾಃ ಸಾದಿನಃ ಶೂರಸಮ್ಮತಾಃ ।
ತ್ರಿಸಾಹಸ್ರಾ ಯಯುರ್ಭೀಮಂ ಶಕ್ತ್ಯೃಷ್ಟಿಪ್ರಾಸಪಾಣಯಃ ॥೫೭॥

ಬಳಿಕ ಶಕುನಿಯ ನಿರ್ದೇಶನದಲ್ಲಿ ಶೂರರೆಂದು ಪ್ರಸಿದ್ಧರಾದ ಮೂರುಸಾವಿರ ಅಶ್ವಾರೋಹಿಗಳು ಶಕ್ತಿ ಋಷ್ಟಿ ಪ್ರಾಸಗಳನ್ನು ಹಿಡಿದು ಭೀಮನನ್ನು ಆಕ್ರಮಿಸಿದರು.

ತಾನ್ ಪ್ರತ್ಯುದ್ಗಮ್ಯ ಯವನಾನಶ್ವಾರೋಹಾನ್ ವರಾರಿಹಾ ।
ವಿಚರನ್ ವಿವಿಧಾನ್ ಮಾರ್ಗಾನ್ ಘಾತಯಾಮಾಸ
ಯೋಧಯನ್ ॥೫೮॥

ಶತ್ರುನಾಶಕನಾದ ಭೀಮನು ಆ ಅಶ್ವಾರೋಹಿ ಯವನರನ್ನು ನಾನಾ ಬಗೆಯ ಮಾರ್ಗಗಳಲ್ಲಿ ಸಂಚರಿಸುತ್ತ ಗದೆಯಿಂದ ಹೊಡೆದು ಸಂಹರಿಸಿದ.

ತೇಷಾಮಾಸೀನ್ಮಹಾನ್ ಶಬ್ದಸ್ತಾಡಿತಾನಾಂ ಚ ಸರ್ವಶಃ ।
ಅಶ್ಮಭಿಶ್ಚಿದ್ಯಮಾನಾನಾಂ ತಾಲಾನಾಮಿವ ಭಾರತ ॥೫೯॥

ಭೀಮನು ಅವರನ್ನು ಹೊಡೆಯುವಾಗ ತಾಲವೃಕ್ಷಗಳಿಗೆ ಸಿಡಿಲು ಬಡಿವಂಥ ಮಹಾಶಬ್ದಗಳೇ ಎಲ್ಲೆಡೆ ಕೇಳಿಬರುತ್ತಿತ್ತು.

ಏವಂ ಸುಬಲಪುತ್ರಸ್ಯ ತ್ರಿಸಾಹಸ್ರಾನ್ ಹಯೋತ್ತಮಾನ್ ।
ಹತ್ವಾನ್ಯಂ ರಥಮಾಸ್ಥಾಯ ಕ್ರುದ್ಧೋ ರಾಧೇಯಮಭ್ಯಯಾತ್ ॥೬೦॥

ಹೀಗೆ ಶಕುನಿಯ ಮೂರುಸಾವಿರ ಅಶ್ವಸೈನ್ಯಗಳನ್ನು ಕೊಂದು ಇನ್ನೊಂದು ರಥವನ್ನೇರಿ ಕ್ರುದ್ಧನಾಗಿ ಕರ್ಣನ ಕಡೆಗೇ ಧಾವಿಸಿದ ಭೀಮಸೇನ.

ಕರ್ಣೋಽಪಿ ಸಮರೇ ರಾಜನ್ ಧರ್ಮಪುತ್ರಮರಿಂದಮಮ್ ।
ಶರೈಃ ಪ್ರಚ್ಛಾದಯಾಮಾಸ ಸಾರಥಿಂ ಚಾಪ್ಯಪಾತಯತ್ ॥೬೧॥

ಭೀಮನು ಕರ್ಣನ ಕಡೆಗೆ ಏಕೆ ಧಾವಿಸಿದನೆಂದರೆ ಕರ್ಣನು ಆಗ ರಣದಲ್ಲಿ ಶತ್ರುನಾಶಕನಾದ ಯುಧಿಷ್ಠಿರನನ್ನು ಬಾಣಗಳಿಂದ ಆಚ್ಛಾದಿಸುತ್ತಿದ್ದ ಅವನ ಸಾರಥಿಯನ್ನೂ ಸಂಹರಿಸುತ್ತಿದ್ದ.

ತತಃ ಸಂಪ್ರದ್ರುತಂ ಸಂಖೇ ರಥಂ ದೃಷ್ಟ್ವಾ ಮಹಾರಥಃ ।
ಅನ್ವಧಾವತ್ ಕಿರನ್ ಬಾಣೈಃ ಕಂಕಪತ್ರೈರಜಿಹ್ಮಗೈಃ ॥೬೨॥

ಮತ್ತು ಮಹಾರಥನಾದ ಕರ್ಣನು ರಣದಲ್ಲಿ ಪಲಾಯನ ಮಾಡುತ್ತಿದ್ದ ಯುಧಿಷ್ಠಿರನ ರಥವನ್ನು ಬೆನ್ನಟ್ಟುತ್ತಿದ್ದ. ಅಜಿಹ್ಮಗ ಎಂಬ ಬಾಣಗಳಿಂದ ಆವರಿಸುತ್ತಿದ್ದ.

ರಾಜಾನಮಭಿಧಾವಂತಂ ಶರೈರಾವೃತ್ಯ ರೋದಸೀ ।
ಕ್ರುದ್ಧಃ ಪ್ರಚ್ಛಾದಯಾಮಾಸ ಶರಜಾಲೇನ ಮಾರುತಿಃ ॥೬೩॥

ಅದಕ್ಕೆ ಯುಧಿಷ್ಠಿರನನ್ನು ಬೆನ್ನಟ್ಟಿ ಹೋಗುತ್ತಿದ್ದ ಕರ್ಣನನ್ನು ಭೀಮನು ಬಾಣಗಳಿಂದ ತಡೆದು ಭೂಮ್ಯಂತರಿಕ್ಷಗಳನ್ನು ಬಾಣಸಮೂಹದಿಂದ ಆಚ್ಛಾದಿಸಿದ.

ಸನ್ನಿವೃತ್ತಸ್ತತಸ್ತೂರ್ಣಂ ರಾಧೇಯಃ ಶತ್ರುಕರ್ಶನಃ ।
ಭೀಮಂ ಪ್ರಚ್ಛಾದಯಾಮಾಸ ಸಮಂತಾತ್ ನಿಶಿತೈಃ ಶರೈಃ ॥೬೪॥

ಶತ್ರುನಾಶಕನಾದ ಕರ್ಣನು ಬೇಗನೆ ಹಿಂತಿರುಗಿ ಭೀಮನನ್ನು ಎಲ್ಲೆಡೆ ತೀಕ್ಷ್ಣವಾದ ಬಾಣಗಳಿಂದ ಆಚ್ಛಾದಿಸಿದ.

ಭೀಮಸೇನರಥವ್ಯಗ್ರಂ ಕರ್ಣಂ ಭಾರತ ಸಾತ್ಯಕಿಃ ।
ಅಭ್ಯರ್ದಯದಮೇಯಾತ್ಮಾ ಪಾರ್ಷ್ಣಿಗ್ರಹಣಕಾರಣಾತ್ ॥೬೫॥

ಕರ್ಣನು ಭೀಮಸೇನನ ರಥನಾಶಕ್ಕೇ ಹೆಚ್ಚು ಯತ್ನಿಸುವುದನ್ನು ಕಂಡು ಸಾತ್ಯಕಿ ಅವನನ್ನು ಆಕ್ರಮಿಸಲು ತೊಡಗಿದ. ಏಕೆಂದರೆ ಭೀಮರಥದ ಹಿಂಭಾಗದ ರಕ್ಷಕನು ಸಾತ್ಯಕಿಯಾಗಿದ್ದ.

ಅಭ್ಯವರ್ತತ ಕರ್ಣಸ್ತಮರ್ದಿತೋಽಪಿ ಶರೈರ್ಭೃಶಮ್ ॥೬೬॥

ಸಾತ್ಯಕಿಯಿಂದ ಕರ್ಣನು ಬಹಳ ಪೀಡಿತನಾದರೂ ಕರ್ಣನು ಅವನನ್ನು ಕೂಡ ಆಕ್ರಮಿಸಿದ.

ತಾವನ್ಯೋನ್ಯಂ ಸಮಾಸಾದ್ಯ ವೃಷಭೌ ಸರ್ವಧನ್ವಿನಾಮ್ ।
ವಿಸೃಜಂತೌ ಶರಾಂಶ್ಚಿತ್ರಾನ್ ವಿಭ್ರಾಜೇತಾಂ ಮನಸ್ವಿನೌ ॥೬೭॥

ಎಲ್ಲ ಬಿಲ್ಲಾಳುಗಳಲ್ಲಿ ಶ್ರೇಷ್ಠರಾದ ಆ ಸಾತ್ಯಕಿ, ಕರ್ಣರು ಪರಸ್ಪರ ಆಕ್ರಮಣ ಮಾಡಿ ಬಾಣಪ್ರಯೋಗದಲ್ಲಿ ಕುಶಲರಾದ ಅವರು ನಾನಾಬಗೆಯ ಬಾಣಗಳನ್ನು ಪ್ರಯೋಗಿಸುತ್ತ ಶೋಭಿಸಿದರು.

ತಾಭ್ಯಾಂ ವಿಯತಿ ರಾಜೇಂದ್ರ ವಿತತಂ ಭೀಮದರ್ಶನಮ್ ।
ಕ್ರೌಂಚಪೃಷ್ಠಾರುಣಂ ರೌದ್ರಂ ಬಾಣಜಾಲಂ ವ್ಯದೃಶ್ಯತ ॥೬೮॥

ಕ್ರೌಂಚದ ಪೃಷ್ಠದಂತೆ ಕೆಂಪಾದ ಭಯಂಕರ ಬಾಣಸಮೂಹವನ್ನು ಅವರಿಬ್ಬರು ಆಕಾಶದಲ್ಲಿ ಹರಡಿದಾಗ ನೋಡಲು ಭೀಕರವಾಗಿ ಕಂಡುಬಂದಿತು.

ನೈವ ಸೂರ್ಯಪ್ರಭಾಂ ಖಂ ವಾ ನ ದಿಶಃ ಪ್ರದಿಶಃ ಕುತಃ ।
ಪ್ರಾಜ್ಞಾಸಿಷ್ಮ ವಯಂ ತಾಭ್ಯಾಂ ಶರೈರ್ಮುಕ್ತೈಃ ಸಹಸ್ರಶಃ ॥೬೯॥

ಸಾವಿರಾರು ಬಾಣಗಳನ್ನು ಅವರು ಇಬ್ಬರೂ ಎಸೆದುದರಿಂದ ನಾವು ಸೂರ್ಯಪ್ರಭೆಯನ್ನಾಗಲಿ ಆಕಾಶವನ್ನಾಗಲಿ ಕಾಣಲಿಲ್ಲ. ಇನ್ನು ದಿಕ್ಕು ವಿದಿಕ್ಕುಗಳನ್ನು ಕಾಣುವುದೆಂತು?

ಮಧ್ಯಾಹ್ನೇ ತಪತೋ ರಾಜನ್ ಭಾಸ್ಕರಸ್ಯ ಮಹಾಪ್ರಭಾಃ ।
ಹತಾಃ ಸರ್ವಾಃ ಶರೌಘೈಸ್ತೈಃ ಕರ್ಣಮಾಧವಯೋಸ್ತದಾ ॥೭೦॥

ರಾಜನೆ, ಸಾತ್ಯಕಿ ಮತ್ತು ಕರ್ಣರ ಬಾಣಪ್ರವಾಹಗಳಿಂದ ಮಧ್ಯಾಹ್ನದಲ್ಲಿ ಉರಿಯುವ ಸೂರ್ಯನ ಪ್ರಭೆಯೆಲ್ಲವೂ ಮಂಕಾಗಿ ಹೋಯಿತು.

ಏವಂ ಸುಬಲಪುತ್ರಸ್ಯ ತ್ರಿಸಾಹಸ್ರಾನ್ ಹಯೋತ್ತಮಾನ್ ।
ಹತ್ವಾನ್ಯಂ ರಥಮಾಸ್ಥಾಯ ಕ್ರುದ್ಧೋ ರಾಧೇಯಮಭ್ಯಯಾತ್ ॥೬೦॥

ಹೀಗೆ ಶಕುನಿಯ ಮೂರುಸಾವಿರ ಅಶ್ವಸೈನ್ಯಗಳನ್ನು ಕೊಂದು ಇನ್ನೊಂದು ರಥವನ್ನೇರಿ ಕ್ರುದ್ಧನಾಗಿ ಕರ್ಣನ ಕಡೆಗೇ ಧಾವಿಸಿದ ಭೀಮಸೇನ.

ಕರ್ಣೋಽಪಿ ಸಮರೇ ರಾಜನ್ ಧರ್ಮಪುತ್ರಮರಿಂದಮಮ್ ।
ಶರೈಃ ಪ್ರಚ್ಛಾದಯಾಮಾಸ ಸಾರಥಿಂ ಚಾಪ್ಯಪಾತಯತ್ ॥೬೧॥

ಭೀಮನು ಕರ್ಣನ ಕಡೆಗೆ ಏಕೆ ಧಾವಿಸಿದನೆಂದರೆ ಕರ್ಣನು ಆಗ ರಣದಲ್ಲಿ ಶತ್ರುನಾಶಕನಾದ ಯುಧಿಷ್ಠಿರನನ್ನು ಬಾಣಗಳಿಂದ ಆಚ್ಛಾದಿಸುತ್ತಿದ್ದ ಅವನ ಸಾರಥಿಯನ್ನೂ ಸಂಹರಿಸುತ್ತಿದ್ದ.

ತತಃ ಸಂಪ್ರದ್ರುತಂ ಸಂಖೇ ರಥಂ ದೃಷ್ಟ್ವಾ ಮಹಾರಥಃ ।
ಅನ್ವಧಾವತ್ ಕಿರನ್ ಬಾಣೈಃ ಕಂಕಪತ್ರೈರಜಿಹ್ಮಗೈಃ ॥೬೨॥

ಮತ್ತು ಮಹಾರಥನಾದ ಕರ್ಣನು ರಣದಲ್ಲಿ ಪಲಾಯನ ಮಾಡುತ್ತಿದ್ದ ಯುಧಿಷ್ಠಿರನ ರಥವನ್ನು ಬೆನ್ನಟ್ಟುತ್ತಿದ್ದ. ಅಜಿಹ್ಮಗ ಎಂಬ ಬಾಣಗಳಿಂದ ಆವರಿಸುತ್ತಿದ್ದ.

ರಾಜಾನಮಭಿಧಾವಂತಂ ಶರೈರಾವೃತ್ಯ ರೋದಸೀ ।
ಕ್ರುದ್ಧಃ ಪ್ರಚ್ಛಾದಯಾಮಾಸ ಶರಜಾಲೇನ ಮಾರುತಿಃ ॥೬೩॥

ಅದಕ್ಕೆ ಯುಧಿಷ್ಠಿರನನ್ನು ಬೆನ್ನಟ್ಟಿ ಹೋಗುತ್ತಿದ್ದ ಕರ್ಣನನ್ನು ಭೀಮನು ಬಾಣಗಳಿಂದ ತಡೆದು ಭೂಮ್ಯಂತರಿಕ್ಷಗಳನ್ನು ಬಾಣಸಮೂಹದಿಂದ ಆಚ್ಛಾದಿಸಿದ.

ಸನ್ನಿವೃತ್ತಸ್ತತಸ್ತೂರ್ಣಂ ರಾಧೇಯಃ ಶತ್ರುಕರ್ಶನಃ ।
ಭೀಮಂ ಪ್ರಚ್ಛಾದಯಾಮಾಸ ಸಮಂತಾತ್ ನಿಶಿತೈಃ ಶರೈಃ ॥೬೪॥

ಶತ್ರುನಾಶಕನಾದ ಕರ್ಣನು ಬೇಗನೆ ಹಿಂತಿರುಗಿ ಭೀಮನನ್ನು ಎಲ್ಲೆಡೆ ತೀಕ್ಷ್ಣವಾದ ಬಾಣಗಳಿಂದ ಆಚ್ಛಾದಿಸಿದ.

ಭೀಮಸೇನರಥವ್ಯಗ್ರಂ ಕರ್ಣಂ ಭಾರತ ಸಾತ್ಯಕಿಃ ।
ಅಭ್ಯರ್ದಯದಮೇಯಾತ್ಮಾ ಪಾರ್ಷ್ಣಿಗ್ರಹಣಕಾರಣಾತ್ ॥೬೫॥

ಕರ್ಣನು ಭೀಮಸೇನನ ರಥನಾಶಕ್ಕೇ ಹೆಚ್ಚು ಯತ್ನಿಸುವುದನ್ನು ಕಂಡು ಸಾತ್ಯಕಿ ಅವನನ್ನು ಆಕ್ರಮಿಸಲು ತೊಡಗಿದ. ಏಕೆಂದರೆ ಭೀಮರಥದ ಹಿಂಭಾಗದ ರಕ್ಷಕನು ಸಾತ್ಯಕಿಯಾಗಿದ್ದ.

ಅಭ್ಯವರ್ತತ ಕರ್ಣಸ್ತಮರ್ದಿತೋಽಪಿ ಶರೈರ್ಭೃಶಮ್ ॥೬೬॥

ಸಾತ್ಯಕಿಯಿಂದ ಕರ್ಣನು ಬಹಳ ಪೀಡಿತನಾದರೂ ಕರ್ಣನು ಅವನನ್ನು ಕೂಡ ಆಕ್ರಮಿಸಿದ.

ತಾವನ್ಯೋನ್ಯಂ ಸಮಾಸಾದ್ಯ ವೃಷಭೌ ಸರ್ವಧನ್ವಿನಾಮ್ ।
ವಿಸೃಜಂತೌ ಶರಾಂಶ್ಚಿತ್ರಾನ್ ವಿಭ್ರಾಜೇತಾಂ ಮನಸ್ವಿನೌ ॥೬೭॥

ಎಲ್ಲ ಬಿಲ್ಲಾಳುಗಳಲ್ಲಿ ಶ್ರೇಷ್ಠರಾದ ಆ ಸಾತ್ಯಕಿ, ಕರ್ಣರು ಪರಸ್ಪರ ಆಕ್ರಮಣ ಮಾಡಿ ಬಾಣಪ್ರಯೋಗದಲ್ಲಿ ಕುಶಲರಾದ ಅವರು ನಾನಾಬಗೆಯ ಬಾಣಗಳನ್ನು ಪ್ರಯೋಗಿಸುತ್ತ ಶೋಭಿಸಿದರು.

ತಾಭ್ಯಾಂ ವಿಯತಿ ರಾಜೇಂದ್ರ ವಿತತಂ ಭೀಮದರ್ಶನಮ್ ।
ಕ್ರೌಂಚಪೃಷ್ಠಾರುಣಂ ರೌದ್ರಂ ಬಾಣಜಾಲಂ ವ್ಯದೃಶ್ಯತ ॥೬೮॥

ಕ್ರೌಂಚದ ಪೃಷ್ಠದಂತೆ ಕೆಂಪಾದ ಭಯಂಕರ ಬಾಣಸಮೂಹವನ್ನು ಅವರಿಬ್ಬರು ಆಕಾಶದಲ್ಲಿ ಹರಡಿದಾಗ ನೋಡಲು ಭೀಕರವಾಗಿ ಕಂಡುಬಂದಿತು.

ನೈವ ಸೂರ್ಯಪ್ರಭಾಂ ಖಂ ವಾ ನ ದಿಶಃ ಪ್ರದಿಶಃ ಕುತಃ ।
ಪ್ರಾಜ್ಞಾಸಿಷ್ಮ ವಯಂ ತಾಭ್ಯಾಂ ಶರೈರ್ಮುಕ್ತೈಃ ಸಹಸ್ರಶಃ ॥೬೯॥

ಸಾವಿರಾರು ಬಾಣಗಳನ್ನು ಅವರು ಇಬ್ಬರೂ ಎಸೆದುದರಿಂದ ನಾವು ಸೂರ್ಯಪ್ರಭೆಯನ್ನಾಗಲಿ ಆಕಾಶವನ್ನಾಗಲಿ ಕಾಣಲಿಲ್ಲ. ಇನ್ನು ದಿಕ್ಕು ವಿದಿಕ್ಕುಗಳನ್ನು ಕಾಣುವುದೆಂತು?

ಮಧ್ಯಾಹ್ನೇ ತಪತೋ ರಾಜನ್ ಭಾಸ್ಕರಸ್ಯ ಮಹಾಪ್ರಭಾಃ ।
ಹತಾಃ ಸರ್ವಾಃ ಶರೌಘೈಸ್ತೈಃ ಕರ್ಣಮಾಧವಯೋಸ್ತದಾ ॥೭೦॥

ರಾಜನೆ, ಸಾತ್ಯಕಿ ಮತ್ತು ಕರ್ಣರ ಬಾಣಪ್ರವಾಹಗಳಿಂದ ಮಧ್ಯಾಹ್ನದಲ್ಲಿ ಉರಿಯುವ ಸೂರ್ಯನ ಪ್ರಭೆಯೆಲ್ಲವೂ ಮಂಕಾಗಿ ಹೋಯಿತು.

ಸೌಬಲಂ ಕೃತವರ್ಮಾಣಂ ದ್ರೌಣಿಮಾಧಿರಥಿಂ ಕೃಪಮ್ ।
ಸಂಸಕ್ತಾನ್ ಪಾಂಡವೈರ್ದೃಷ್ಟ್ವಾ ನಿವೃತ್ತಾಃ ಕುರವಃ ಪುನಃ ॥೭೧॥

ಶಕುನಿ ಕೃತವರ್ಮ ಅಶ್ವತ್ಥಾಮ ಕರ್ಣ ಮತ್ತು ಕೃಪರೂ ಪಾಂಡವರೊಡನೆ ಯುದ್ಧಕ್ಕೆ ತೊಡಗಿದ್ದನ್ನು ಕಂಡು ಕುರುಸೈನಿಕರು ಓಡಿ ಹೋಗಿದ್ದವರು ಹಿಂತಿರುಗಿದರು.

ತೇಷಾಮಾಪತತಾಂ ಶಬ್ದಸ್ತೀವ್ರ ಆಸೀದ್ ವಿಶಾಂಪತೇ ।
ಉದ್ಧೂತಾನಾಂ ಯಥಾ ವೃಷ್ಟ್ಯಾ ಸಾಗರಾಣಾಂ ಭಯಾವಹಃ ॥೭೨॥

ರಾಜನೆ, ಮಳೆಯಿಂದ ಉಕ್ಕಿದ ಸಾಗರಗಳ ಶಬ್ದದಂತೆ ಕುರುಸೈನಿಕರ ಆಗಮನದಿಂದ ತೀವ್ರವಾದ ಶಬ್ದ ಉಂಟಾಯಿತು.

ತೇ ಸೇನೇ ಭೃಶಸಂವಿಗ್ನೇ ದೃಷ್ಟ್ವಾನ್ಯೋನ್ಯಂ ಮಹಾರಣೇ ।
ಹರ್ಷೇಣ ಮಹತಾ ಯುಕ್ತೇ ಪರಿಗೃಹ್ಯ ಪರಸ್ಪರಮ್ ॥೭೩॥

ಕೌರವ–ಪಾಂಡವರ ಸೈನ್ಯಗಳು ಮಹಾರಣದಲ್ಲಿ ಪರಸ್ಪರ ನೋಡಿ ಮಹಾ ಹರ್ಷಯುಕ್ತವಾಗಿ ಪರಸ್ಪರ ಆಕ್ರಮಣ ಮಾಡುತ್ತ ಬಹಳ ಉದ್ವೇಗಗೊಂಡುವು.

ತತಃ ಪ್ರವವೃತೇ ಯುದ್ಧಂ ಮಧ್ಯಂ ಪ್ರಾಪ್ತೇ ದಿವಾಕರೇ ।
ಯಾದೃಶಂ ನ ಕದಾಚಿದ್ಧಿ ದೃಷ್ಟಪೂರ್ವಂ ನ ಚ ಶ್ರುತಮ್ ॥೭೪॥

ಸೂರ್ಯನು ಆಕಾಶದಲ್ಲಿ ಮಧ್ಯಕ್ಕೆ ಬಂದಾಗ, ಹಿಂದೆ ಎಂದೂ ಕಂಡರಿಯದಿದ್ದ ಕೇಳರಿಯದಿದ್ದ ಯುದ್ಧ ನಡೆಯಿತು.

ಬಲೌಘಸ್ತು ಸಮಾಸಾದ್ಯ ಬಲೌಘಂ ಸಹಸಾ ರಣೇ ।
ಉಪಾಸರ್ಪತ ವೇಗೇನ ಜಲೌಘ ಇವ ಸಾಗರಮ್ ॥೭೫॥

ನೀರಿನ ಪ್ರವಾಹ ವೇಗದಿಂದ ಸಾಗರವನ್ನು ಸೇರುವಂತೆ ರಣದಲ್ಲಿ ಸೇನಾಪ್ರವಾಹವು ಸೇನಾಪ್ರವಾಹವನ್ನು ಆಕ್ರಮಿಸಿ ವೇಗದಿಂದ ಘಟ್ಟಿಸಿತು.

ಆಸೀನ್ನಿನಾದಃ ಸುಮಹಾನ್ ಬಲೌಘಾನಾಂ ಪರಸ್ಪರಮ್ ।
ಗರ್ಜತಾಂ ಸಾಗರೌಘಾಣಾಂ ಯಥಾ ಸ್ಯಾನ್ನಿಸ್ವನೋ ಮಹಾನ್ ॥೭೬॥

ಸೇನಾಪ್ರವಾಹಗಳು ಪರಸ್ಪರ ಗರ್ಜಿಸಿದ್ದರಿಂದ, ಸಾಗರಪ್ರವಾಹಗಳು ಪರಸ್ಪರ ಸೇರಿದಾಗ ಮಹಾಶಬ್ದ ಉಂಟಾಗುವಂತೆ, ಬಲುದೊಡ್ಡ ಶಬ್ದವೇ ಉಂಟಾಯಿತು.

ತೇ ತು ಸೇನೇ ಸಮಾಸಾದ್ಯ ವೇಗವತ್ಯೌ ಪರಸ್ಪರಮ್ ।
ಏಕಭಾವಮನುಪ್ರಾಪ್ತೇ ನದ್ಯಾವಿವ ಸಮಾಗಮೇ ॥೭೭॥

ವೇಗವುಳ್ಳ ಎರಡು ನದಿಗಳು ಸೇರಿದಾಗ ಅವು ಒಂದಾಗುವಂತೆ ವೇಗವುಳ್ಳ ಆ ಎರಡು ಸೇನೆಗಳು ಪರಸ್ಪರ ಸೇರಿದಾಗ ಅವು ಒಂದಾದುವು.

ತತಃ ಪ್ರವವೃತೇ ಯುದ್ಧಂ ಘೋರರೂಪಂ ವಿಶಾಂಪತೇ ।
ಕುರೂಣಾಂ ಪಾಂಡವಾನಾಂ ಚ ಲಿಪ್ಸತಾಂ ಸುಮಹದ್ಯಶಃ ॥೭೮॥

ರಾಜನೆ, ಆಗ ಬಲುದೊಡ್ಡ ಯಶಸ್ಸನ್ನು ಪಡೆಯುವಾಸೆ ಮಾಡಿದ ಕುರು ಪಾಂಡವ ಸೇನೆಗಳಿಗೆ ಪರಸ್ಪರ ಭೀಕರ ಸ್ವರೂಪದ ಯುದ್ಧ ನಡೆಯಿತು.

ಶೂರಾಣಾಂ ಗರ್ಜತಾಂ ತತ್ರ ಸಾಧಿಕ್ಷೇಪಕೃತಾ ಗಿರಃ ।
ಶ್ರೂಯಂತೇ ವಿವಿಧಾ ರಾಜನ್ನಾಮಾನ್ಯುದ್ದಿಶ್ಯ ಸರ್ವತಃ ॥೭೯॥

ರಾಜನೆ, ಶೂರರು ಒಬ್ಬರು ಇನ್ನೊಬ್ಬರ ಹೆಸರುಹೇಳಿ ಗರ್ಜಿಸುತ್ತ ಆಕ್ಷೇಪ ಯುಕ್ತವಾದ ನಾನಾ ಬಗೆಯ ಮಾತುಗಳನ್ನಾಡುವುದು ಎಲ್ಲೆಡೆ ಕೇಳಿಬಂದಿತು.

ಯಸ್ಯ ಯದ್ಧಿ ರಣೇ ವ್ಯಂಗಂ ಪಿತೃತೋ ಮಾತೃತೋಽಪಿ ವಾ ।
ಕರ್ಮತಃ ಶೀಲತೋ ವಾಪಿ ಸ ತಚ್ಛ್ರಾವಯತೇ ಯುಧಿ ॥೮೦॥

ರಣದಲ್ಲಿ ಒಬ್ಬನು ಇನ್ನೊಬ್ಬನಲ್ಲಿ ತಂದೆ–ತಾಯಿಗಳ ಅಥವಾ ಕರ್ಮಶೀಲಗಳ ಸಂಬಂಧದಿಂದ ಯಾವುದು ಕುಂದು ಇರುವುದೋ ಅದನ್ನೆತ್ತಿ ಹೇಳಿದ.

ತಾನ್ ದೃಷ್ಟ್ವಾ ಸಮರೇ ಶೂರಾಂಸ್ತರ್ಜಯಾನಾನ್ ಪರಸ್ಪರಮ್ ।
ಅಭವನ್ಮೇ ಮತೀ ರಾಜನ್ನೈಷಾಮಸ್ತೀತಿ ಜೀವಿತಮ್ ॥೮೧॥

ಸಮರದಲ್ಲಿ ಶೂರರು ಪರಸ್ಪರ ನಿಂದಿಸುವುದನ್ನು ಕಂಡಾಗ ಇವರಿಗೆ ಇನ್ನು ಉಳಿಗಾಲವಿಲ್ಲವೆಂದೇ ನನಗೆ ಅನ್ನಿಸಿತು.

ತೇಷಾಂ ದೃಷ್ಟ್ವಾ ತು ಕ್ರುದ್ಧಾನಾಂ ವಪೂಂಷ್ಯಮಿತತೇಜಸಾಮ್ ।
ಅಭವನ್ಮೇ ಭಯಂ ತೀವ್ರಂ ಕಥಮೇತದ್ ಭವಿಷ್ಯತಿ ॥೮೨॥

ಮಹಾ ಅಮಿತ ಪರಾಕ್ರಮಿಗಳಾದ ಕ್ರುದ್ಧರಾದ ಆ ಶೂರರ ಶರೀರಗಳನ್ನು ನೋಡಿ ನನಗೆ ತೀವ್ರ ಭಯವುಂಟಾಯಿತು. ಇನ್ನು ಮುಂದೆ ಇದು ಹೇಗಾದೀತೆಂದು.

ತತಸ್ತೇ ಪಾಂಡವಾ ರಾಜನ್ ಕೌರವಾಶ್ಚ ಮಹಾರಥಾಃ ।
ತತಕ್ಷುಃ ಸಾಯಕೈಸ್ತೀಕ್ಷ್ಣೈರ್ನಿಘ್ನಂತೋ ಹಿ ಪರಸ್ಪರಮ್ ॥೮೩॥

ಆಗ ರಾಜನೆ, ಮಹಾರಥರಾದ ಪಾಂಡವರೂ ಕೌರವರೂ ತೀಕ್ಷ್ಣವಾದ ಬಾಣಗಳಿಂದ ಪರಸ್ಪರ ಹೊಡೆದು ಕತ್ತರಿಸಿದರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಅಷ್ಟಚತ್ವಾರಿಂಶೋऽಧ್ಯಾಯಃ ॥೪೮॥

❖

ನಲವತ್ತೊಂಬತ್ತನೆಯ ಅಧ್ಯಾಯ

ಘೋರವಾದ ಯುದ್ಧದಲ್ಲಿ ಕೌರವಸೈನ್ಯವು ಸಾಗರದಲ್ಲಿ ಒಡೆದ ನೌಕೆಯಂತಾಯಿತು.

ಸಂಜಯಃ

ಕ್ಷತ್ರಿಯಾಸ್ತೇ ಮಹಾರಾಜ ಪರಸ್ಪರವಧೈಷಿಣಃ ।
ಅನ್ಯೋನ್ಯಂ ಸಮರೇ ಜಘ್ನುಃ ಕೃತವೈರಾಃ ಪರಸ್ಪರಮ್ ॥೧॥

ಸಂಜಯ ನುಡಿದ— ಮಹಾರಾಜ, ಪರಸ್ಪರ ವೈರಮಾಡಿದ್ದರಿಂದ ಪರಸ್ಪರ ವಧೇಚ್ಛುಗಳಾಗಿ ಆ ಕ್ಷತ್ರಿಯರು ರಣದಲ್ಲಿ ಪರಸ್ಪರ ಹೊಡೆದುಕೊಂಡರು.

ರಥೌಘಾಶ್ಚ ಹಯೌಘಾಶ್ಚ ನರೌಘಾಶ್ಚ ಸಮಂತತಃ ।
ಗಜೌಘಾಶ್ಚ ಮಹಾರಾಜ ಸಂಸಕ್ತಾಃ ಸ್ಮ ಪರಸ್ಪರಮ್ ॥೨॥

ಮಹಾರಾಜ, ರಥಸಮೂಹ, ಅಶ್ವಸಮೂಹ, ಪದಾತಿಸಮೂಹ, ಗಜಸಮೂಹಗಳು ಎಲ್ಲ ಕಡೆ ಪರಸ್ಪರವಾಗಿ ಇದಿರಿಸಿದುವು.

ಗದಾನಾಂ ಪರಿಘಾಣಾಂ ಚ ಕಣಪಾನಾಂ ಚ ಸರ್ಪತಾಮ್ ।
ಪ್ರಾಸಾನಾಂ ಭಿಂಡಿಪಾಲಾನಾಂ ಮುಸಲಾನಾಂ ಚ ಸರ್ವಶಃ ॥೩॥

ಸಂಪಾತಂ ಚಾನ್ವಪಶ್ಯಾಮ ಸಂಗ್ರಾಮೇ ಭೃಶದಾರುಣೇ ।
ಶಲಭಾ ಇವ ಸಂಪೇತುಃ ಸಮಂತಾತ್ ಶರವೃಷ್ಟಯಃ ॥೪॥

ಗದೆ, ಪರಿಘ, ಕಣಪ, ಪ್ರಾಸ, ಭಿಂಡಿಪಾಲ, ಮುಸಲಗಳು ಅತ್ಯಂತ ದಾರುಣವಾದ ಸಂಗ್ರಾಮದಲ್ಲಿ ಸರ್ವತ್ರ ಮೈಮೇಲೆ ಹಾರಿ ಬೀಳುವುದನ್ನು ನಾವು ಕಂಡೆವು. ಬಾಣಗಳ ಮಳೆಗಳು ಎಲ್ಲೆಡೆ ಮಿಡತೆಗಳಂತೆ ಹಾರಿಬಿದ್ದವು.

ನಾಗಾ ನಾಗಾನ್ ಸಮಾಸಾದ್ಯ ವ್ಯಧಮಂತ ಪರಸ್ಪರಮ್ ।
ಹಯಾ ಹಯಾಂಶ್ಚ ಸಮರೇ ರಥಿನೋ ರಥಿನಸ್ತಥಾ ॥೫॥
ಪತ್ತಯಃ ಪತ್ತಿಸಂಘೈಶ್ಚ ಸಮಾಸಾದ್ಯ ಪರಸ್ಪರಮ್ ॥೬॥

ಸಮರದಲ್ಲಿ ಗಜಗಳು ಗಜಗಳನ್ನು, ಅಶ್ವಗಳು ಅಶ್ವಗಳನ್ನು, ರಥಿಕರು ರಥಿಕರನ್ನು, ಪದಾತಿಗಳು ಪದಾತಿಗಳನ್ನು ಪರಸ್ಪರ ಆಕ್ರಮಿಸಿ ಸಂಹರಿಸಿದರು.

ಪತ್ತಯೋ ರಥಮಾತಂಗಾನ್ ರಥಾ ಹಸ್ತ್ಯಶ್ವಮೇವ ಚ ।
ನಾಗಾಶ್ಚ ಸಮರೇ ತ್ರ್ಯಂಗಂ ಮಮೃದುಃ ಶೀಘ್ರಗಾ ನೃಪ ॥೭॥

ಶೀಘ್ರಗಾಮಿಗಳಾದ ಪದಾತಿಗಳು ರಥ–ಗಜಗಳನ್ನು, ರಥಗಳು ಗಜ–ಅಶ್ವಗಳನ್ನು, ಗಜಗಳು ಅಶ್ವ–ರಥ–ಪದಾತಿಗಳೆಂಬ ಮೂರು ಸೇನಾಂಗಗಳನ್ನು ಮರ್ದನ ಮಾಡಿದುವು.

ವಧ್ಯತಾಂ ತತ್ರ ಶೂರಾಣಾಂ ಕ್ರೋಶತಾಂ ಚ ಪರಸ್ಪರಮ್ ।
ಘೋರಮಾಯೋಧನಂ ಜಜ್ಞೇ ಪಶೂನಾಂ ವೈಶಸಂ ಯಥಾ ॥೮॥

ಶೂರರು ಪರಸ್ಪರ ಹತರಾಗಿ ಕೂಗಿಕೊಳ್ಳುವ ಆ ಘೋರವಾದ ರಣರಂಗವು ಪಶುಗಳ ವಧೆ ಮಾಡುವ ಕಸಾಯಿಖಾನೆಯಂತಾಯಿತು.

ರುಧಿರೇಣ ಸಮಾಸ್ತೀರ್ಣಾ ಭಾತಿ ಭಾರತ ಮೇದಿನೀ ।
ಶಕ್ರಗೋಪಗಣಾಕೀರ್ಣಾ ಪ್ರಾವೃಷೀವ ಯಥಾ ಧರಾ ॥೯॥

ರಾಜನೆ, ನೆತ್ತರಿಂದ ಒದ್ದೆಯಾದ ಆ ರಣಭೂಮಿ ಮಳೆಗಾಲದಲ್ಲಿ ಶಕ್ರಗೋಪ (ಒನಕೆ ಬಂಡೆಹುಳು)ಗಳಿಂದ ವ್ಯಾಪ್ತವಾದ ನೆಲದಂತೇ ಕಂಡಿತು.

ಯಥಾ ವಾ ವಾಸಸೀ ಶುಕ್ಲೇ ಮಹಾರಜನರಂಜಿತೇ ।
ಬಿಭೃಯಾದ್ ಯುವತಿಃ ಶ್ಯಾಮಾ ತದ್ವದಾಸೀದ್ ವಸುಂಧರಾ ॥೧೦॥
ಮಾಂಸಶೋಣಿತಚಿತ್ರೇವ ಶಾತಕೌಂಭಮಯೀವ ಚ ॥೧೧॥

ಕುಸುಬೆ ಹೂವಿನ ರಂಗು ಹಾಕಿದ ಬಿಳಿ ಬಟ್ಟೆಗಳನ್ನುಟ್ಟ ಶ್ಯಾಮಲವರ್ಣದ ಯುವತಿಯಂತೆ, ಮಾಂಸ–ರಕ್ತಗಳಿಂದ ಚಿತ್ರ ಬರೆದಂತೆ ಸುವರ್ಣಮಯವಾದಂತೆ ರಣಭೂಮಿ ಕಂಡುಬಂದಿತು.

ಛಿನ್ನಾನಾಂ ಚೋತ್ತಮಾಂಗಾನಾಂ ಬಾಹೂನಾಂ ಚೋರುಭಿಃ ಸಹ ।
ಕುಂಡಲಾನಾಂ ಪ್ರವಿದ್ಧಾನಾಂ ಭೂಷಣಾನಾಂ ಚ ಭಾರತ ॥೧೨॥

ನಿಷ್ಕಾಣಾಮಧಿಸೂತ್ರಾಣಾಂ ಶರೀರಾಣಾಂ ಚ ಧನ್ವಿನಾಮ್ ।
ವರ್ಮಣಾಂ ಸಪತಾಕಾನಾಂ ಸಂಘಾಸ್ತತ್ರಾಪತನ್ ಭುವಿ ॥೧೩॥

ಬಿಲ್ಲಾಳುಗಳ ಕಡಿದ ತಲೆ ತೋಳು ತೊಡೆಗಳು ಕುಂಡಲ ಭೂಷಣ ಹಾರಗಳು, ಶರೀರಗಳು ಕವಚಗಳು ಪತಾಕೆಗಳು ಇವು ರಾಶಿರಾಶಿಯಾಗಿ ಆ ರಣಭೂಮಿಯಲ್ಲಿ ಬಿದ್ದುವು.

ಗಜಾನ್ ಗಜಾಃ ಸಮಾಸಾದ್ಯ ವಿಷಾಣಾಗ್ರೈರದಾರಯನ್ ।
ವಿಷಾಣಾಭಿಹತಾಸ್ತೇ ಚ ಭ್ರಾಜಂತೇ ದ್ವಿರದಾ ಯಥಾ ॥೧೪॥

ರುಧಿರೇಣಾವಸಿಕ್ತಾಂಗಾ ಗೈರಿಕಪ್ರಭವಾ ಇವ ।
ಯಥಾ ಭ್ರಾಜಂತಿ ಸ್ಯಂದಂತಃ ಪರ್ವತಾ ಧಾತುಮಂಡಿತಾಃ ॥೧೫॥

ಗಜಗಳು ಗಜಗಳನ್ನು ಇದಿರಿಸಿ ದಾಡೆಗಳ ತುದಿಗಳಿಂದ ಸೀಳಿದುವು. ದಾಡೆಗಳ ಇರಿತದಿಂದ ಮೈಯೆಲ್ಲ ರಕ್ತದಿಂದ ತೊಯ್ದು ಗೈರಿಕಗಳ ಉತ್ಪತ್ತಿಸ್ಥಾನವಾಗಿದ್ದು ಗೈರಿಕಧಾತುಗಳಿಂದ ಅಲಂಕೃತವಾದ ಬೆಟ್ಟಗಳು ಗೈರಿಕಪ್ರವಾಹವನ್ನು ಹರಿಸುತ್ತ ಹೇಗೆ ಕಾಣುವುವೋ ಹಾಗೇ ಈ ಗಜಗಳೂ ಕಂಗೊಳಿಸಿದುವು.

ತೋಮರಾನ್ ಗಜಭಿರ್ಮುಕ್ತಾನ್ ಪ್ರತೀಪಾನಾಸ್ಥಿತಾನ್ ಬಹೂನ್ ।
ಹಸ್ತೈರ್ವಿಚಿಕ್ಷಿಪುರ್ನಾಗಾ ಬಭಂಜುಶ್ಚಾಪರೇ ತಥಾ ॥೧೬॥

ಗಜಾರೋಹಿಗಳು ಎಸೆದ ಬಹಳ ತೋಮರಗಳನ್ನು ಗಜಗಳು ಎದುರಿಗೇ ಹಿಡಿದು ಕೆಲವು ಸೊಂಡಿಲಿನಿಂದ ತಿರುಗಿ ಅವರಿಗೇ ಎಸೆದುವು, ಬೇರೆ ಕೆಲವು ಮುರಿದುವು.

ನಾರಾಚೈಶ್ಛಿನ್ನವರ್ಮಾಣೋ ಭ್ರಾಜಂತೇ ಸ್ಮ ಗಜೋತ್ತಮಾಃ ।
ಹಿಮಾಗಮೇ ಮಹಾರಾಜ ವ್ಯಭ್ರಾ ಇವ ಮಹೀಧರಾಃ ॥೧೭॥

ಮಹಾರಾಜನೆ, ಬಾಣಗಳಿಂದ ಕವಚಗಳನ್ನು ಕಳೆದುಕೊಂಡ ಮಹಾಗಜಗಳು ಹೇಮಂತದಲ್ಲಿ ಮೋಡಗಳನ್ನು ಕಳೆದುಕೊಂಡ ಬೆಟ್ಟಗಳಂತೆ ಕಂಗೊಳಿಸಿದುವು.

ಶರೈಃ ಕನಕಪುಂಖೈಸ್ತು ಚಿತಾ ರೇಜುರ್ಗಜೋತ್ತಮಾಃ ।
ಉಲ್ಕಾಭಿಃ ಸಂಪ್ರದೀಪ್ತಾಗ್ರಾಃ ಪರ್ವತಾ ಇವ ಮಾರಿಷ ॥೧೮॥

ರಾಜನೆ, ಬಂಗಾರದ ಪುಕ್ಕವುಳ್ಳ ಬಾಣಗಳಿಂದ ಆವೃತವಾದ ಗಜಗಳು ಉಲ್ಕೆಗಳಿಂದ ಅಗ್ರಭಾಗದಲ್ಲಿ ಬೆಳಗುವ ಬೆಟ್ಟಗಳಂತೆ ಶೋಭಿಸಿದುವು.

ಕೇಚಿದಭ್ಯಾಹತಾ ನಾಗಾ ನಾಗೈರ್ನಗನಿಭಾ ಭುವಿ ।
ನಿಪೇತುಃ ಸಮರೇ ತಸ್ಮಿನ್ ಛಿನ್ನಪಕ್ಷಾ ಇವಾದ್ರಯಃ ॥೧೯॥

ಬೆಟ್ಟದಂಥ ಗಜಗಳು ಕೆಲವು ಗಜಗಳಿಂದ ಹೊಡೆಯಲ್ಪಟ್ಟು ರೆಕ್ಕೆ ಕಡಿದುಕೊಂಡ ಬೆಟ್ಟಗಳಂತೆ, ಆ ಯುದ್ಧದಲ್ಲಿ ನೆಲದಲ್ಲಿ ಒರಗಿದುವು.

ಅಪರೇ ಪ್ರಾದ್ರವನ್ನಾಗಾಃ ಶಲ್ಯಾರ್ತಾ ವ್ರಣಪೀಡಿತಾಃ ।
ಪ್ರತಿಮಾನೈಶ್ಚ ಕುಂಭೈಶ್ಚ ಪೇತುರುರ್ವ್ಯಾಂ ಮಹಾಹವೇ ॥೨೦॥

ಬೇರೆ ಗಜಗಳು ಓಡಿಹೋದುವು. ಬಾಣಗಳ ಇರಿತದಿಂದ ಸಂಕಟಪಡುತ್ತ ಗಾಯಗಳಿಂದ ನರಳುತ್ತ ಕುಂಭಸ್ಥಳಗಳನ್ನು ಮತ್ತು ಅವುಗಳ ಕೆಳಭಾಗಗಳನ್ನು ಆಧರಿಸಿ ನೆಲದಲ್ಲಿ ಒರಗಿದುವು.

ವಿನೇದುಃ ಸಂಹತಾಶ್ಚಾನ್ಯೇ ನದಂತೋ ಭೈರವಾನ್ ರವಾನ್ ।
ಬಭ್ರಮುರ್ಬಹವೋ ರಾಜಂಶ್ಚುಕ್ರುಶುಶ್ಚ ತಥಾಪರೇ ॥೨೧॥

ಕೆಲವು ಗಜಗಳು ಚೆನ್ನಾಗಿ ಹೊಡೆಯಲ್ಪಟ್ಟು ಭೀಕರ ಶಬ್ದವಾಗುವಂತೆ ಘೀಳಿಟ್ಟವು. ಬಹಳ ಆನೆಗಳು ಸುತ್ತು ಸುತ್ತಿದುವು. ಕೆಲವು ನೋವಿನಿಂದ ಕೂಗಿದವು.

ಹಯಾಶ್ಚ ನಿಹತಾ ಬಾಣೈಃ ಸ್ವರ್ಣಭಾಂಡಪರಿಚ್ಛದಾಃ ।
ವಿನೇದುಶ್ಚೈವ ಪೇತುಶ್ಚ ಬಭ್ರಮುಶ್ಚ ದಿಶೋ ದಶ ॥೨೨॥

ಕುದುರೆಗಳೂ ಬಾಣಗಳಿಂದ ಬಹಳ ಹೊಡೆಯಲ್ಪಟ್ಟು ಬಂಗಾರದ ಆಭರಣ ಸಲಕರಣೆಗಳುಳ್ಳವು ಕೆಲವು ಜೋರಾಗಿ ಕೆನೆದುವು, ಬಿದ್ದುವು. ಕೆಲವು ಹತ್ತು ದಿಕ್ಕುಗಳಲ್ಲಿ ಸುತ್ತಿದುವು.

ಅಪರೇ ಕ್ಲಿಶ್ಯಮಾನಾಶ್ಚ ವಿವೇಷ್ಟಂತೋ ಮಹೀತಳೇ ।
ಭಾವಾನ್ ಬಹುವಿಧಾಂಶ್ಚಕ್ರುಸ್ತಾಡಿತಾಃ ಶರತೋಮರೈಃ ॥೨೩॥

ಕೆಲವು ಅಶ್ವಗಳು ವೇದನೆಪಡುತ್ತ ನೆಲದಲ್ಲಿ ಹೊರಳಿದುವು. ಶರ ತೋಮರ ಗಳಿಂದ ಹೊಡೆಯಲ್ಪಟ್ಟು ಬಹುವಿಧವಾದ ಭಾವಗಳನ್ನು ವ್ಯಕ್ತಪಡಿಸಿದುವು.

ನರಾಸ್ತು ನಿಹತಾ ಭೂಮೌ ಕೂಜಂತಸ್ತತ್ರ ಮಾರಿಷ ।
ದೃಷ್ಟ್ವಾ ಚ ಬಾಂಧವಾನನ್ಯೇ ಪಿತೄನನ್ಯೇ ಪಿತಾಮಹಾನ್ ॥೨೪॥

ಕಾಲಾಳುಗಳು ಚೆನ್ನಾಗಿ ಹೊಡೆಯಲ್ಪಟ್ಟು ನೆಲದಲ್ಲಿ ಕೆಲವರು ಬಾಂಧವರನ್ನು ಕೆಲವರು ಪಿತೃಗಳನ್ನು ಕೆಲವರು ಪಿತಾಮಹರನ್ನು ಕಂಡು ಕೂಗಿದರು.

ಧಾವಮಾನಾನ್ ಪರಾಂಶ್ಚೈವ ದೃಷ್ಟ್ವಾನ್ಯೇ ತತ್ರ ಭಾರತ ।
ಗೋತ್ರನಾಮಾನಿ ಖ್ಯಾತಾನಿ ಶಶಂಸುರಿತರೇತರಮ್ ॥೨೫॥

ಕಾಲಾಳುಗಳು ಕೆಲವರು ತಾವು ಹತರಾದರೂ, ಶತ್ರುಗಳೂ ಕೂಡ ಪಲಾಯನ ಮಾಡುತ್ತಿರುವುದನ್ನು ಕಂಡು ಹೆಮ್ಮೆಯಿಂದ ತಮಗೆ ತಾವೇ ಪರಸ್ಪರವಾಗಿ ತಮ್ಮ ಪ್ರಸಿದ್ಧ ನಾಮ–ಗೋತ್ರಗಳನ್ನು ಹೇಳಿಕೊಳ್ಳುತ್ತಿದ್ದರು.

ತೇಷಾಂ ಛಿನ್ನಾ ಮಹಾರಾಜ ಭುಜಾಃ ಕನಕಭೂಷಣಾಃ ।
ಉದ್ವೇಷ್ಟಂತೇ ವಿವೇಷ್ಟಂತೇ ಪತಂತೇ ಚೋತ್ಪತಂತಿ ಚ ॥೨೬॥

ನಿಪತಂತಿ ತಥಾ ಭೂಮೌ ಸ್ಫುರಂತಿ ಚ ಸಹಸ್ರಶಃ ।
ವೇಗಾಂಶ್ಚಾನ್ಯೇ ರಣೇ ಚಕ್ರುಃ ಸ್ಫುರಂತ ಇವ ಪನ್ನಗಾಃ ॥೨೭॥

ಅವರ ಚಿನ್ನಾಭರಣ ಭೂಷಿತವಾದ ಬಾಹುಗಳು ಕಡಿದುಬಿದ್ದು ಸುತ್ತುತ್ತವೆ, ಹೊರಳುತ್ತವೆ, ಬೀಳುತ್ತವೆ, ಏಳುತ್ತವೆ, ಪುನಃ ನೆಲದಲ್ಲಿ ಬೀಳುತ್ತವೆ, ನಡುಗುತ್ತವೆ, ಹಾಗೇ ಸಾವಿರಾರು ಬಾಹುಗಳು ನಡುಗುತ್ತಲೇ, ನಡುಗುವ ಹಾವುಗಳಂತೆ, ರಣದಲ್ಲಿ ವೇಗವನ್ನು ತೋರಿದುವು.

ತೇ ಭುಜಾ ಭೋಗಿಭೋಗಾಭಾಶ್ಚಂದನಾಕ್ತಾ ವಿಶಾಂಪತೇ ।
ಲೋಹಿತಾದ್ರ್ಯಾ ಭೃಶಂ ರೇಜುಸ್ತಪನೀಯಧ್ವಜಾ ಇವ ॥೨೮॥

ರಾಜನೆ, ಆ ಬಾಹುಗಳು ಹಾವಿನ ಶರೀರದಂತೆ ನೀಳವಾಗಿದ್ದು ಚಂದನ ಲಿಪ್ತವಾಗಿದ್ದು ಈಗ ನೆತ್ತರಿಂದ ತೊಯ್ದು ಬಂಗಾರದ ಧ್ವಜಸ್ತಂಭಗಳಂತೆ ಬಹಳ ಶೋಭಿಸಿದುವು.

ವರ್ತಮಾನೇ ತಥಾ ಘೋರೇ ಸಂಕುಲೇ ಸರ್ವತೋದಿಶಮ್ ।
ಅವಿಜ್ಞಾತಾಃ ಸ್ಮ ಯುಧ್ಯಂತೇ ವಿನಿಘ್ನಂತಃ ಪರಸ್ಪರಮ್ ॥೨೯॥

ಎಲ್ಲ ದಿಕ್ಕುಗಳಲ್ಲಿ ಹೀಗೆ ಭಯಂಕರ ಯುದ್ಧ ನಡೆಯುತ್ತಿದ್ದಾಗ ಯೋಧರು ತಮ್ಮವರನ್ನೂ ಶತ್ರುಗಳನ್ನೂ ಗುರುತು ಹಿಡಿಯಲಾರದೆ ಹೊಡೆಯುತ್ತ ಕಾದಿದರು.

ಭೌಮೇನ ರಜಸಾ ಕೀರ್ಣೇ ಶಸ್ತ್ರಸಂಪಾತಸಂಕುಲೇ ।
ನೈವ ಸ್ವೇ ನ ಪರೇ ರಾಜನ್ ವ್ಯಜ್ಞಾಯಂತ ತಮೋವೃತೇ ॥೩೦॥

ಘೋರವಾದ ಶಸ್ತ್ರಪ್ರಹಾರಯುದ್ಧದಲ್ಲಿ ನೆಲದ ಧೂಳು ಎಲ್ಲೆಡೆ ತುಂಬಿದ್ದರಿಂದ, ರಾಜನೆ, ಕತ್ತಲು ತುಂಬಿದ ರಣಾಂಗಣದಲ್ಲಿ ತಮ್ಮವರೂ ಕಾಣಲಿಲ್ಲ ಪರರೂ ಕಾಣಲಿಲ್ಲ.

ತಥಾ ತದಭವದ್ಯುದ್ಧಂ ಘೋರರೂಪಂ ಭಯಾನಕಮ್ ।
ಶೋಣಿತೋದಾ ಮಹಾನದ್ಯಃ ಪ್ರಸಸ್ರುಸ್ತತ್ರ ಚಾಸಕೃತ್ ॥೩೧॥

ಹಾಗೆ ಘೋರಸ್ವರೂಪದ ಭಯಾನಕವಾದ ಯುದ್ಧ ಅದಾಗಿತ್ತು. ರಕ್ತಜಲದ ಮಹಾನದಿಗಳು ಮತ್ತೆ ಮತ್ತೆ ಅಲ್ಲಿ ಹರಿದುವು.

ಶೀರ್ಷಪಾಷಾಣಸಂಘನ್ನಾಃ ಕೇಶಶೈವಲಶಾದ್ವಲಾಃ ।
ಅಸ್ಥಿಮೀನಸಮಾಕೀರ್ಣಾ ಧನುಶ್ಶರಗದೋಡುಪಾಃ ॥೩೨॥

ಆ ರಕ್ತನದಿಗಳಲ್ಲಿ ಯೋಧರ ತಲೆಗಳೇ ಬಂಡೆಕಲ್ಲುಗಳು. ತಲೆಕೂದಲುಗಳೇ ಪಾಚಿ ಹಸಿರು ಹುಲ್ಲುಗಳು. ಎಲುಬುಗಳೇ ಮೀನುಗಳು. ಧನುರ್ಬಾಣಗದೆಗಳೇ ದಾಟಿಸುವ ದೋಣಿಗಳು.

ಮಾಂಸಶೋಣಿತಪಂಕಸ್ಯೋ ಶೋಣಿತೌಘಾಃ ಸುದಾರುಣಾಃ ।
ನದೀಃ ಪ್ರವರ್ತಯಾಮಾಸುರ್ಯಮರಾಷ್ಟ್ರವಿವರ್ಧನೀಃ ॥೩೩॥
ಭೀರುವಿತ್ರಾಸಕಾರಿಣ್ಯಃ ಶೂರಾಣಾಂ ಹರ್ಷವರ್ಧನಾಃ ॥೩೪॥

ಮಾಂಸ–ರಕ್ತಮಯವಾದ ಕೆಸರು ನೆತ್ತರಿನ ಪ್ರವಾಹಗಳುಳ್ಳ ಬಲುದಾರುಣವಾದ ಯಮರಾಜ್ಯದ ವೃದ್ಧಿಗೆ ಕಾರಣವಾದ ನದಿಗಳನ್ನು ಯೋಧರು ಉಂಟುಮಾಡಿದರು. ಅವು ಹೇಡಿಗಳಿಗೆ ಭಯ ಹುಟ್ಟಿಸಿದರೂ ಶೂರರಿಗೆ ಉತ್ಸಾಹವನ್ನೇ ಹೆಚ್ಚಿಸುತ್ತಿದ್ದುವು

ತಾ ನದ್ಯೋ ಘೋರರೂಪಾಶ್ಚ ನಯಂತ್ಯೋ ಯಮಸಾದನಮ್ ।
ಅವಗಾಢಾ ಮಜ್ಜಯಂತ್ಯಃ ಕ್ಷತ್ರಸ್ಯಾಜನಯನ್ ಭಯಮ್ ॥೩೫॥

ಆ ನದಿಗಳು ಘೋರ ಸ್ವರೂಪದವುಗಳು, ಯಮಲೋಕಕ್ಕೆ ದಾರಿಯಾದುವು. ಅಲ್ಲಿ ಮುಳುಗು ಹಾಕುವವರನ್ನು ಅವು ಮುಳುಗಿಸಿಯೇ ಬಿಟ್ಟುವು. ಕ್ಷತ್ರಿಯ ಜಾತಿಗೇ ಭಯ ಉಂಟುಮಾಡಿದುವು.

ಕ್ರವ್ಯಾದಾನಾಂ ನರವ್ಯಾಘ್ರ ನರ್ದತಾಂ ತತ್ರ ತತ್ರ ಹ ।
ಘೋರಮಾಯೋಧನಂ ಜಜ್ಞೇ ಪ್ರೇತರಾಜಪುರೋಪಮಮ್ ॥೩೬॥

ರಾಜನೆ, ಮಾಂಸಾಹಾರಿಪ್ರಾಣಿಗಳು ಅಲ್ಲಲ್ಲಿ ಕೂಗುತ್ತಿದ್ದುದರಿಂದ ಘೋರವಾದ ಆ ರಣಭೂಮಿ ಸ್ಮಶಾನದಂತಾಯಿತು.

ಉತ್ತಿಷ್ಠಾನ್ಯಗಣೇಯಾನಿ ಕಬಂಧಾನಿ ಸಮಂತತಃ ।
ನೃತ್ಯಂತಿ ವೈ ಭೂತಗಣಾಃ ಸಂತೃಪ್ತಾ ಮಾಂಸಶೋಣಿತೈಃ ॥೩೭॥

ಎಲ್ಲೆಡೆ ಲೆಕ್ಕವಿಲ್ಲದಷ್ಟು ಮುಂಡಗಳು ಎದ್ದುನಿಂತವು. ಭೂತಗಣಗಳು ಮಾಂಸ-ರಕ್ತಗಳಿಂದ ಸಂತೃಪ್ತವಾಗಿ ಕುಣಿದವು.

ಪೀತ್ವಾ ಚ ಶೋಣಿತಂ ತತ್ರ ವಸಾಂ ಪೀತ್ವಾ ಚ ಭಾರತ ।
ಮೇದೋಮಜ್ಜಾವಸಾತೃಪ್ತಾಸ್ತೃಪ್ತಾ ಮಾಂಸಸ್ಯ ಚೈವ ಹಿ ॥೩೮॥
ಧಾವಮಾನಾಶ್ಚ ದೃಶ್ಯಂತೇ ಕಾಕಗೃಧ್ರಬಕಾಸ್ತಥಾ ॥೩೯॥

ರಕ್ತವನ್ನು ಕುಡಿದು, ಕೊಬ್ಬನ್ನೂ ಉಂಡು, ಮೇದ ಮಜ್ಜೆ ವಸಾ ಮಾಂಸಗಳಿಂದ ತೃಪ್ತವಾದ ಕಾಗೆ ಹದ್ದು ಬಕಗಳು ಅಲ್ಲಿ ಹಾರಾಡುವುದು ಕಂಡು ಬಂದಿತು.

ಶೂರಾಸ್ತು ಸಮರೇ ರಾಜನ್ ಭಯಂ ತ್ಯಕ್ತ್ವಾ ಸುದುಸ್ತ್ಯಜಮ್ ।
ಯೋಧವ್ರತಂ ಸಮಾಸ್ಥಾಯ ಚಕ್ರುಃ ಕರ್ಮಾಣ್ಯಭೀತವತ್ ॥೪೦॥

ಆದರೂ, ರಾಜನೆ, ಶೂರರು ರಣದಲ್ಲಿ ಬಿಡಲಾಗದ ಭಯವನ್ನೂ ಬಿಟ್ಟು ಯೋಧರ ವ್ರತವನ್ನು ಕೈಗೊಂಡು ನಿರ್ಭಯರಾಗಿ ಯುದ್ಧಕರ್ಮಗಳನ್ನು ನಡೆಸಿದರು.

ಶರಶಕ್ತಿಸಮಾಕೀರ್ಣೇ ಕ್ರವ್ಯಾದಗಣಸಂಕುಲೇ ।
ವ್ಯಚರಂತ ರಣೇ ಶೂರಾಃ ಖ್ಯಾಪಯಂತಃ ಸ್ವಪೌರುಷಮ್ ॥೪೧॥

ಶರ ಶಕ್ತಿಗಳಿಂದ ತುಂಬಿದ, ಮಾಂಸಾಶಿ ಪ್ರಾಣಿ ಸಮೂಹಗಳಿಂದಲೂ ತುಂಬಿದ ರಣಭೂಮಿಯಲ್ಲಿ ಶೂರರು ತಮ್ಮ ಪೌರುಷವನ್ನು ಪ್ರದರ್ಶಿಸುತ್ತ ಸಂಚರಿಸಿದರು.

ಅನ್ಯೋನ್ಯಂ ಶ್ರಾವಯಂತಿ ಸ್ಮ ನಾಮಗೋತ್ರಾಣಿ ಭಾರತ ।
ಪಿತೃನಾಮಾನಿ ಚ ರಣೇ ಗೋತ್ರನಾಮಾನಿ ಚಾಭಿತಃ ॥೪೨॥

ಶ್ರಾವಯಂತೋ ಹಿ ಬಹವಸ್ತತ್ರ ಯೋಧಾ ವಿಶಾಂಪತೇ ।
ಅನ್ಯೋನ್ಯಂ ಸಮರೇ ಘ್ನಂತಿ ಶಕ್ತಿತೋಮರಪಟ್ಟಿಶೈಃ ॥೪೩॥

ಶೂರರು ರಣಭೂಮಿಯಲ್ಲಿ ಪರಸ್ಪರ ನಾಮ, ಗೋತ್ರಗಳನ್ನು ಹೇಳಿಕೊಳ್ಳು

ತ್ತಾರೆ, ಪಿತೃನಾಮಗಳನ್ನೂ ಗೋತ್ರ ನಾಮಗಳನ್ನೂ ಎಲ್ಲರಿಗೂ ಕೇಳಿಸುವಂತೆ ಹೇಳುತ್ತ ರಾಜನೆ, ಸಮರಾಂಗಣದಲ್ಲಿ ಬಹಳ ಯೋಧರು ಶಕ್ತಿ ತೋಮರ ಪಟ್ಟಿಶಗಳಿಂದ ಪರಸ್ಪರ ವಧಿಸುತ್ತಾರೆ.

ವರ್ತಮಾನೇ ತದಾ ಯುದ್ಧೇ ಘೋರರೂಪೇ ಸುದಾರುಣೇ ।
ವ್ಯಷೀದತ್ ಕೌರವೀ ಸೇನಾ ಭಿನ್ನಾ ನೌರಿವ ಸಾಗರೇ ॥೪೪॥

ಹೀಗೆ ಘೋರ ಸ್ವರೂಪದ ಅತಿದಾರುಣವಾದ ಯುದ್ಧ ನಡೆಯುತ್ತಿದ್ದಾಗ, ಕೌರವಸೇನೆಯು ಸಾಗರದಲ್ಲಿ ಮುರಿದ ನೌಕೆಯಂತೆ ವ್ಯಾಕುಲಗೊಂಡಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಸಂಕುಲಯುದ್ಧೇ ಏಕೋನಪಂಚಾಶೋऽಧ್ಯಾಯಃ ॥೪೯॥

❖

ಐವತ್ತನೆಯ ಅಧ್ಯಾಯ

ಹತ್ತುಸಾವಿರ ಸಂಶಪ್ತಕ ಯೋಧರನ್ನು ಅರ್ಜುನ ಸಂಹರಿಸುತ್ತಾನೆ.

ಸಂಜಯಃ

ವರ್ತಮಾನೇ ತದಾ ಯುದ್ಧೇ ಕ್ಷತ್ರಿಯಾಣಾಂ ನಿಮಜ್ಜನೇ ।
ಗಾಂಡೀವಸ್ಯ ಮಹಾನ್ ಘೋಷಃ ಶುಶ್ರುವೇ ಯುಧಿ ಮಾರಿಷ ॥೧॥

ಸಂಜಯ ನುಡಿದ— ರಾಜನೆ, ಕ್ಷತ್ರಿಯರೆಲ್ಲರನ್ನೂ ತನ್ನಲ್ಲಿ ಮುಳುಗಿಸಿ ಬಿಡುವಂಥ ಯುದ್ಧ ನಡೆಯುತ್ತಿದ್ದಾಗ ರಣದಲ್ಲಿ ಗಾಂಡೀವದ ಮಹಾಘೋಷ ಕೇಳಿಸಿತು.

ಸಂಶಪ್ತಕಾನಾಂ ಕದನಮಕರೋದ್ ಯತ್ರ ಪಾಂಡವಃ ।
ಕೋಸಲಾನಾಂ ತಥಾ ರಾಜನ್ ನಾರಾಯಣಬಲಸ್ಯ ಚ ॥೨॥

ರಾಜನೇ! ಆ ಯುದ್ಧದಲ್ಲಿ ಅರ್ಜುನನು ಸಂಶಪ್ತಕರ ಕೋಸಲರ ಮತ್ತು ನಾರಾಯಣ ಸೈನ್ಯದ ಸಂಹಾರ ಮಾಡುತ್ತಿದ್ದ.

ಸಂಶಪ್ತಕಾಸ್ತು ಸಮರೇ ಶರವೃಷ್ಟಿಂ ಸಮಂತತಃ ।
ಅಪಾತಯನ್ ಪಾರ್ಥಮೂರ್ಧ್ನಿ ಜಯಗೃದ್ಧಾಃ ಪ್ರಮನ್ಯವಃ ॥೩॥

ಸಂಶಪ್ತಕರು ರಣದಲ್ಲಿ ಪಾರ್ಥನ ತಲೆಯ ಮೇಲೆ ಎಲ್ಲ ಕಡೆಗಳಿಂದ ಬಾಣಗಳ ಮಳೆಯನ್ನು ಬೀಳಿಸಿದರು. ಅವರು ಜಯಾಕಾಂಕ್ಷಿಗಳು ಬಹಳ ಕೋಪಿಗಳು.

ತಾಂ ವೃಷ್ಟಿಂ ಸಹಸಾ ರಾಜನ್ ತರಸಾ ಧಾರಯನ್ ಪ್ರಭುಃ ।
ವ್ಯಗಾಹತ ರಣೇ ಪಾರ್ಥೋ ವಿನಿಘ್ನನ್ ರಥಿನಾಂ ವರಃ ॥೪॥

ರಾಜನೆ, ರಥಿಕರಲ್ಲಿ ಶ್ರೇಷ್ಠನಾದ ಸಮರ್ಥನಾದ ಅರ್ಜುನನು ಒಡನೆ ಆ ಬಾಣಗಳ ಮಳೆಯನ್ನು ಸಹನಶಕ್ತಿಯಿಂದ ಧಾರಣ ಮಾಡುತ್ತ ವೇಗದಿಂದ ನಾಶಮಾಡುತ್ತ ರಣದಲ್ಲಿ ಮುಳುಗುಹಾಕಿದ.

ನಿಗೃಹ್ಯ ತು ರಥಾನೀಕಂ ಕಂಕಪತ್ರೈಃ ಶಿಲಾಶಿತೈಃ ।
ಆಸಸಾದ ರಣೇ ಪಾರ್ಥಃ ಸುಶರ್ಮಾಣಂ ಮಹಾರಥಮ್ ॥೫॥

ಸಾಣೆ ಹಿಡಿದು ತೀಕ್ಷ್ಣವಾಗಿರುವ ಬಾಣಗಳಿಂದ ರಥಸೈನ್ಯವನ್ನು ನಿಗ್ರಹಿಸಿ ಅರ್ಜುನನು ಮಹಾರಥನಾದ ಸುಶರ್ಮನನ್ನು ರಣದಲ್ಲಿ ಆಕ್ರಮಿಸಿದ.

ಸ ತಸ್ಯ ಶರವರ್ಷಾಣಿ ವವರ್ಷ ರಥಿನಾಂ ವರಃ ।
ತಥಾ ಸಂಶಪ್ತಕಾಶ್ಚೈವ ಪಾರ್ಥಂ ಬಾಣೈ ಸಮಾರ್ದಯನ್ ॥೬॥

ರಥಿಕರಲ್ಲಿ ಶ್ರೇಷ್ಠನಾದ ಅರ್ಜುನನು ಸುಶರ್ಮನ ಮೇಲೆ ಬಾಣಗಳ ಮಳೆಗಳನ್ನು ಸುರಿಸಿದ. ಹಾಗೇ ಸಂಶಪ್ತಕರೂ ಬಾಣಗಳಿಂದ ಅರ್ಜುನನನ್ನು ಇದಿರಿಸಿ ನಿಂತರು.

ಸುಶರ್ಮಾ ತು ತತಃ ಪಾರ್ಥಂ ವಿದ್ಧ್ವಾ ನವಭಿರಾಶುಗೈಃ ।
ಜನಾರ್ದನಂ ತ್ರಿಭಿರ್ಬಾಣೈರಭ್ಯಹನ್ ದಕ್ಷಿಣೇ ಭುಜೇ ॥೭॥

ಸುಶರ್ಮನು ಅರ್ಜುನನನ್ನು ಒಂಬತ್ತು ಬಾಣಗಳಿಂದ ಹೊಡೆದು ಕೃಷ್ಣನನ್ನೂ ಬಲಭುಜದಲ್ಲಿ ಬಾಣಗಳಿಂದ ಹೊಡೆದ.

ತತೋऽಪರೇಣ ಭಲ್ಲೇನ ಕೇತುಂ ವಿವ್ಯಾಧ ಮಾರಿಷ ॥೮॥

ಸ ವಾನರವರೋ ರಾಜನ್ ವಿಶ್ವಕರ್ಮಕೃತೋ ಮಹಾನ್ ।
ನನಾದ ಸುಮಹನ್ನಾದಂ ಭೀಷಯನ್ ವೈ ನನರ್ತ ಚ ॥೯॥

ಸುಶರ್ಮನು ಅರ್ಜುನನ ಧ್ವಜವನ್ನು ಇನ್ನೊಂದು ಭಲ್ಲೆಯಿಂದ ಹೊಡೆದ. ರಾಜನೆ, ವಿಶ್ವಕರ್ಮಕೃತವಾದ ಧ್ವಜದಲ್ಲಿ ಸನ್ನಿಹಿತನಾದ ಮಹಾ ವಾನರೋತ್ತಮನು ಎಲ್ಲರನ್ನೂ ಅತಿಯಾಗಿ ಭಯಪಡಿಸುತ್ತಾ ದೊಡ್ಡ ಗರ್ಜನೆ ಮಾಡಿ ಕುಣಿದ.

ಕಪೇಸ್ತು ನಿನದಂ ಶ್ರುತ್ವಾ ಸಂತ್ರಸ್ತಾ ತವ ವಾಹಿನೀ ।
ಭಯಂ ವಿಪುಲಮಾದಾಯ ನಿಶ್ಚೇಷ್ಟಾ ಸಮಪದ್ಯತ ॥೧೦॥

ಕಪಿಯ ಗರ್ಜನೆಯನ್ನು ಕೇಳಿ ನಿನ್ನ ಸೈನ್ಯ ನಡುಗಿತು. ಅತ್ಯಂತ ಭಯಾವಿಷ್ಟವಾಗಿ ನಿಶ್ಚೇಷ್ಟವಾಯಿತು.

ತತಃ ಸಾ ಶುಶುಭೇ ಸೇನಾ ನಿಶ್ಚೇಷ್ಟಾವಸ್ಥಿತಾ ನೃಪ ।
ನಾನಾಪುಷ್ಪಸಮಾಕೀರ್ಣಂ ಯಥಾ ಚೈತ್ರರಥಂ ವನಮ್ ॥೧೧॥

ರಾಜನೆ, ನಿಶ್ಚೇಷ್ಟವಾಗಿ ನಿಂತ ಸೈನ್ಯ ನಾನಾ ಪುಷ್ಪಗಳಿಂದ ತುಂಬಿದ ಚೈತ್ರರಥವೆಂಬ ವನದಂತೆ ಶೋಭಿಸಿತು.

ಪ್ರತಿಲಭ್ಯ ತತಃ ಸಂಜ್ಞಾಂ ಯೋಧಾಸ್ತೇ ಕುರುಸತ್ತಮ ।
ಅರ್ಜುನಂ ಸಿಷಿಚುರ್ಬಾಣೈಃ ಪರ್ವತಂ ಜಲದಾ ಇವ ॥೧೨॥

ಬಳಿಕ, ರಾಜನೆ, ಎಚ್ಚರಗೊಂಡ ಯೋಧರು, ಪರ್ವತದ ಮೇಲೆ ಮೋಡಗಳು ಮಳೆಗರೆಯುವಂತೆ ಅರ್ಜುನನ ಮೇಲೆ ಬಾಣಗಳ ಮಳೆಗಳನ್ನು ಸಿಂಪಡಿಸಿದರು.

ಪರಿವವ್ರುಸ್ತದಾ ಸರ್ವೇ ಪಾಂಡವಸ್ಯ ಮಹಾರಥಮ್ ॥೧೩॥

ತೇ ಹಯಾನ್ ರಥಚಕ್ರೇ ಚ ರಥೇಷಾಶ್ಚಾಪಿ ಭಾರತ ।
ನಿಗೃಹ್ಯ ಬಲವತ್ತೂರ್ಣಂ ಸಿಂಹನಾದಮಥಾನದನ್ ॥೧೪॥

ಸಂಶಪ್ತಕ ಯೋಧರೆಲ್ಲರೂ ಅರ್ಜುನನ ಮಹಾರಥವನ್ನು ಸುತ್ತುವರಿದರು. ಅವರು ಕೆಲವರು ಕುದುರೆಗಳನ್ನೂ ರಥಚಕ್ರಗಳನ್ನೂ ರಥದ ಈಷಾದಂಡಗಳನ್ನೂ ಬಲವಂತವಾಗಿ ತಡೆಹಿಡಿದು ಬೇಗನೆ ಸಿಂಹಗರ್ಜನೆ ಮಾಡಿದರು.

ಅಪರೇ ಜಗೃಹುಶ್ಚೈವ ಕೇಶವಸ್ಯ ಮಹಾಭುಜೌ ।
ಪಾರ್ಥಮನ್ಯೇ ಮಹಾರಾಜ ರಥಸ್ಥಂ ಜಗೃಹುರ್ಮುದಾ ॥೧೫॥

ಇನ್ನು ಕೆಲವರು ಕೃಷ್ಣನ ಎರಡೂ ಮಹಾಬಾಹುಗಳನ್ನು ಹಿಡಿದುಕೊಂಡರು. ಇನ್ನು ಕೆಲವರು, ಮಹಾರಾಜ, ರಥದಲ್ಲಿದ್ದ ಅರ್ಜುನನು ಸಿಕ್ಕಿದನೆಂದು ಸಂತೋಷದಿಂದ ಹಿಡಿದುಕೊಂಡರು.

ಕೇಶವಸ್ತು ತದಾ ಬಾಹೂ ವಿಧುನ್ವನ್ ರಣಮೂರ್ಧನಿ ।
ಪಾತಯಾಮಾಸ ತಾನ್ ಸರ್ವಾನ್ ದುಷ್ಟಹಸ್ತೀವ ಹಸ್ತಿಪಾನ್ ॥೧೬॥

ಶ್ರೀಕೃಷ್ಣ ಆಗ ರಣರಂಗದ ಮುಂಭಾಗದಲ್ಲಿ ದುಷ್ಟಗಜವು ಮಾವುತರನ್ನು ಕೆಡೆಯುವಂತೆ, ಅವರೆಲ್ಲರನ್ನೂ ಕೂಡ ತೋಳುಗಳನ್ನು ಕೊಡಹುವುದರ ಮೂಲಕ ಕೆಳಗೆ ಉದುರಿಸಿದ.

ತತಃ ಕ್ರುದ್ಧೋ ರಣೇ ಪಾರ್ಥಃ ಸಂವೃತಸ್ತೈರ್ಮಹಾರಥೈಃ ।
ನಿಗೃಹೀತಂ ರಥಂ ದೃಷ್ಟ್ವಾ ಕೇಶವಂ ಚಾಪ್ಯಭಿದ್ರುತಮ್ ॥೧೭॥
ರಥಾರೂಢಾಂಶ್ಚ ಸುಬಹೂನ್ ಪದಾತೀಂಶ್ಚಾಪ್ಯಪಾತಯತ್ ॥೧೮॥

ಅರ್ಜುನ ಆ ಮಹಾರಥರಿಂದ ಆವೃತನಾಗಿ, ಅವರು ತನ್ನ ರಥವನ್ನು ತಡೆಹಿಡಿದಿದ್ದು ಮಾತ್ರವಲ್ಲದೆ ಕೃಷ್ಣನನ್ನೂ ಆಕ್ರಮಿಸಿರುವುದನ್ನು ಕಂಡು ಕ್ರುದ್ಧನಾಗಿ, ತನ್ನ ರಥದ ಮೇಲೆ ಹತ್ತಿದ್ದ ಬಹುಮಂದಿ ಶತ್ರುಗಳನ್ನು ಎತ್ತಿ ದೂರಕ್ಕೆ ಎಸೆದ.

ಆಸನ್ನಾಂಶ್ಚ ತತೋ ಯೋಧಾನ್ ಶರೈರಾಸನ್ನಯೋಧಿಭಿಃ ।
ದ್ರಾವಯಾಮಾಸ ಸಮರೇ ಕೇಶವಂ ಚೇದಮಬ್ರವೀತ್ ॥೧೯॥

ಹತ್ತಿರದಿಂದಲೆ ಪ್ರಹರಿಸಬಹುದಾದ ಬಾಣಗಳಿಂದ ಅರ್ಜುನನು ರಣದಲ್ಲಿ ಹತ್ತಿರವಿದ್ದ ಯೋಧರನ್ನು ಓಡಿಸಿದ. ಕೃಷ್ಣನಿಗೆ ಹೇಳಿದ.

ಪಶ್ಯ ಕೃಷ್ಣ ಮಹಾಬಾಹೋ ಸಂಶಪ್ತಕಗಣಾನ್ ಬಹೂನ್ ।
ಕುರ್ವಾಣಾನ್ ದಾರುಣಂ ಕರ್ಮ ವಧ್ಯಮಾನಾನ್ ಸಹಸ್ರಶಃ ॥೨೦॥

ದಾರುಣವಾದ ಕೃತ್ಯವೆಸಗುತ್ತಿರುವ ಸಾವಿರಾರು ಸಂಶಪ್ತಕಗಣಗಳನ್ನು ನಾನು ಈಗ ವಧಿಸುತ್ತೇನೆ. ಮಹಾಬಾಹು ಕೃಷ್ಣ ನೋಡು.

ರಥಬಂಧಮಿಮಂ ಘೋರಂ ಪೃಥಿವ್ಯಾಂ ನಾಸ್ತಿ ಕಶ್ಚನ ।
ಯಃ ಸಹೇತ ಪುಮಾನ್ ಲೋಕೇ ಮದನ್ಯೋ ಯದುಪುಂಗವ ॥೨೧॥

ಯದುಶ್ರೇಷ್ಠನೆ, ಸಂಶಪಕ್ತರು ಮಾಡಿದ ಈ ಘೋರವಾದ ರಥಬಂಧಕೃತ್ಯವನ್ನು ನಾನಲ್ಲದೆ ಇನ್ನೊಬ್ಬನು ಸಹಿಸಬಲ್ಲವನು ಪೃಥಿವಿಯಲ್ಲಿ ಯಾವನೂ ಇಲ್ಲ.

ಇತ್ಯೇವಮುಕ್ತ್ವಾ ಬೀಭತ್ಸುರ್ದೇವದತ್ತಮಥಾಧಮತ್ ।
ಪಾಂಚಜನ್ಯಂ ಚ ಕೃಷ್ಣೋಽಪಿ ಪೂರಯನ್ನಿವ ರೋದಸೀ ॥೨೨॥

ಹೀಗೆ ಹೇಳಿ ಅರ್ಜುನನು ದೇವದತ್ತಶಂಖವನ್ನೂ ಕೃಷ್ಣನು ಪಾಂಚಜನ್ಯ ಶಂಖವನ್ನೂ ಶಬ್ದದಿಂದ ಭೂಮಿ–ಅಂತರಿಕ್ಷಗಳು ತುಂಬುವಂತೆ ಊದಿದರು.

ತಂ ತು ಶಂಖಿಸ್ವನಂ ಶ್ರುತ್ವಾ ಸಂಶಪ್ತಕವರೂಥಿನೀ ।
ಸಂಚಚಾಲ ಮಹಾರಾಜ ವಿತ್ರಸ್ತಾ ಚಾಭವದ್ ಭೃಶಮ್ ॥೨೩॥

ಮಹಾರಾಜ, ಆ ಶಂಖಧ್ವನಿಯನ್ನು ಕೇಳಿ ಸಂಶಪ್ತಕ ಸೈನ್ಯ ವಿಚಲಿತವಾಯಿತು. ಬಹಳವಾಗಿ ನಡುಗಿತು.

ಪಾದಬಂಧಂ ತತಶ್ಚಕ್ರೇ ಪಾಂಡವಃ ಪರವೀರಹಾ ।
ನಾಗಮಸ್ತ್ರಂ ಮಹಾರಾಜ ಸಂಪ್ರೋದೀರ್ಯ ಮುಹುರ್ಮುಹುಃ ॥೨೪॥

ಶತ್ರುವೀರರನ್ನು ನಾಶಪಡಿಸುವ ಅರ್ಜುನನು ಮತ್ತೆಮತ್ತೆ ನಾಗಾಸ್ತ್ರಮಂತ್ರವನ್ನು ಉಚ್ಚರಿಸಿ ಶತ್ರುಯೋಧರ ಪಾದಗಳನ್ನು ಹಾವುಗಳಿಂದ ಬಂಧಿಸಿದ.

ಯಾನುದ್ದಿಶ್ಯ ರಣೇ ಪಾರ್ಥಃ ಪಾದಬಂಧಂ ಚಕಾರ ಹ ।
ತೇ ಬದ್ಧಾಃ ಪಾದಬಂಧೇನ ಪಾಂಡವೇನ ಮಹಾತ್ಮನಾ ॥೨೫॥
ನಿಶ್ಚೇಷ್ಟಾ ಅಭವನ್ ರಾಜನ್ ಅಶ್ಮಸಾರಮಯಾ ಇವ ॥೨೬॥

ರಣದಲ್ಲಿ ಯಾರನ್ನು ಉದ್ದೇಶಿಸಿ ಅಸ್ತ್ರದಿಂದ ಪಾದಬಂಧ ಉಂಟು

ಮಾಡಿದನೋ ಅವರು ಪಾದಬಂಧದಿಂದ ಬದ್ಧರಾದರು. ರಾಜನೆ, ಅವರು ನಿಶ್ಚೇಷ್ಟರಾಗಿ ಲೋಹಮೂರ್ತಿಗಳಂತಾದರು.

ನಿಶ್ಚೇಷ್ಟಾಂಸ್ತು ತತೋ ಯೋಧಾನವಧೀತ್ ಪಾಂಡುನಂದನಃ ।
ಯಥೇಂದ್ರಃ ಸಮರೇ ದೈತ್ಯಾಂಸ್ತಾರಕಸ್ಯ ವಧೇ ಪುರಾ ॥೨೭॥

ನಿಶ್ಚೇಷ್ಟರಾದ ಅವರು ರಥಕ್ಕೆ ಮುತ್ತಿಗೆ ಹಾಕದಿದ್ದುದರಿಂದ ಸುಲಭವಾಗಿ ಅವರನ್ನು ಅರ್ಜುನನು ಸಂಹರಿಸಿದ. ತಾರಕಾಸುರವಧದಲ್ಲಿ ಹಿಂದೆ ರಣದಲ್ಲಿ ಇಂದ್ರನು ದೈತ್ಯರನ್ನು ಹೀಗೇ ಸಂಹರಿಸಿದ್ದ.

ತೇ ವಧ್ಯಮಾನಾಃ ಸಮರೇ ಮುಮುಚುಸ್ತಂ ರಥೋತ್ತಮಮ್ ।
ಆಯುಧಾನಿ ಚ ಸರ್ವಾಣಿ ವಿಸ್ರಷ್ಟುಮುಪಚಕ್ರಮುಃ ॥೨೮॥

ಅವರು ರಣದಲ್ಲಿ ಹೀಗೆ ಸಂಹೃತರಾಗಲು ತೊಡಗಿದಾಗ ಅರ್ಜುನನ ಉತ್ತಮವಾದ ರಥಕ್ಕೆ ಮುತ್ತಿಗೆ ಹಾಕುವುದನ್ನು ಬಿಟ್ಟರು. ಎಲ್ಲ ಆಯುಧಗಳನ್ನು ಸುರಿಯಲು ತೊಡಗಿದರು.

ತತಃ ಸುಶರ್ಮಾ ರಾಜೇಂದ್ರ ಗೃಹೀತಾಂ ವೀಕ್ಷ್ಯ ವಾಹಿನೀಮ್ ।
ಸೌಪರ್ಣಮಸ್ತ್ರಂ ತ್ವರಿತಃ ಪ್ರಾದುಶ್ಚಕ್ರೇ ಮಹಾರಥಃ ॥೨೯॥

ರಾಜನೆ, ತನ್ನ ಸೈನ್ಯವನ್ನು ಅರ್ಜುನನು ಆಕ್ರಮಿಸಿದ್ದನ್ನು ನೋಡಿ ಮಹಾರಥನಾದ ಸುಶರ್ಮನು ಗರುಡಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದ.

ತತಃ ಸುಪರ್ಣಾಃ ಸಂಪೇತುರ್ಭಕ್ಷಯಂತೋ ಭುಜಂಗಮಾನ್ ।
ತೇ ವೈ ವಿದುದ್ರುವುರ್ನಾಗಾ ದೃಷ್ಟ್ವಾ ತಾನ್ ಖಚರಾನ್ ನೃಪ ॥೩೦॥

ಆಗ ಗರುಡಪಕ್ಷಿಗಳು ಹಾವುಗಳನ್ನು ತಿನ್ನಲು ಕೆಳಗೆ ಇಳಿದುವು. ರಾಜನೆ, ಆ ಹಕ್ಕಿಗಳನ್ನು ನೋಡಿ ಯೋಧರ ಕಾಲು ಕಟ್ಟಿದ ಹಾವುಗಳು ಪಲಾಯನ ಮಾಡಿದುವು.

ಬಭೌ ಬಲಂ ತದ್ವಿಮುಕ್ತಂ ಪಾದಬಂಧಾದ್ ವಿಶಾಂಪತೇ ।
ಮೇಘವೃಂದಾದ್ ಯಥಾ ಮುಕ್ತೋ ಭಾಸ್ಕರಸ್ತಾಪಯನ್
ಪ್ರಜಾಃ ॥೩೧॥

ರಾಜನೆ, ಪ್ರಾಣಿಗಳಿಗೆ ತಾಪ ಉಂಟುಮಾಡುವ ಸೂರ್ಯನು ಮೋಡ ಸಮೂಹಗಳಿಂದ ಮುಕ್ತನಾಗಿ ಹೊಳೆಯುವಂತೆ ಪಾದಬಂಧಗಳಿಂದ ಮುಕ್ತವಾದ ಆ ಸಂಶಪ್ತಕ ಸೈನ್ಯವು ಶೋಭಿಸಿತು.

ವಿಪ್ರಮುಕ್ತಾಸ್ತು ತೇ ಯೋಧಾಃ ಫಲ್ಗುನಸ್ಯ ರಥಂ ಪ್ರತಿ ।
ಸಸೃಜುರ್ಬಾಣಸಂಘಾಂಶ್ಚ ಶಸ್ತ್ರಸಂಘಾಂಶ್ಚ ಮಾರಿಷ ॥೩೨॥

ರಾಜನೆ, ಪಾದಬಂಧದಿಂದ ಮುಕ್ತರಾದ ಯೋಧರು ಅರ್ಜುನನ ರಥದ ಮೇಲೆ ಬಾಣಸಮೂಹಗಳನ್ನೂ ಆಯುಧಸಮೂಹಗಳನ್ನೂ ಎಸೆದರು.

ತಾಂ ಮಹಾಸ್ತ್ರಮಯೀಂ ವೃಷ್ಟಿಂ ಸಂಛಾದ್ಯ ಶರವೃಷ್ಟಿಭಿಃ ।
ನ್ಯವಧೀಚ್ಚ ತತೋ ಯೋಧಾನ್ ವಾಸವಿಃ ಪರವೀರಹಾ ॥೩೩॥

ಶತ್ರುವೀರನಾಶಕನಾದ ಅರ್ಜುನನು ಆ ಮಹಾ ಅಸ್ತ್ರಮಯ ಮಳೆಯನ್ನು ಬಾಣಗಳ ಮಳೆಯಿಂದ ಕತ್ತರಿಸಿ ಯೋಧರನ್ನು ಸಂಹರಿಸಿದ.

ಸುಶರ್ಮಾ ತು ತತೋ ರಾಜನ್ ಬಾಣೇನಾನತಪರ್ವಣಾ ।
ಅರ್ಜುನಂ ಹೃದಯೇ ವಿದ್ಧ್ವಾ ವಿವ್ಯಾಧಾನ್ಯೈಸ್ತ್ರಿಭಿಃ ಶರೈಃ ॥೩೪॥

ರಾಜನೆ, ಸುಶರ್ಮನು ಡೊಂಕುಗಿಣ್ಣಿನ ಒಂದು ಬಾಣದಿಂದ ಅರ್ಜುನನ ಎದೆಯ ಮೇಲೆ ಹೊಡೆದು ಬೇರೆ ಮೂರು ಬಾಣಗಳಿಂದಲೂ ಹೊಡೆದ.

ಸ ಗಾಢವಿದ್ಧೋ ವ್ಯಥಿತೋ ರಥೋಪಸ್ಥ ಉಪಾವಿಶತ್ ॥೩೫॥

ಪ್ರತಿಲಭ್ಯ ತತಃ ಸಂಜ್ಞಾಂ ಶ್ವೇತಾಶ್ವಃ ಕೃಷ್ಣಸಾರಥಿಃ ।
ಐಂದ್ರಮಸ್ತ್ರಮಮೇಯಾತ್ಮಾ ಪ್ರಾದುಶ್ಚಕ್ರೇ ತ್ವರಾನ್ವಿತಃ ॥೩೬॥

ಅರ್ಜುನನು ಗಾಢವಾಗಿ ತಾಡಿತನಾಗಿ ನೋವಿನಿಂದ ರಥದ ಹಿಂಭಾಗದಲ್ಲಿ ಕುಳಿತ. ಬಿಳಿ ಕುದುರೆಗಳುಳ್ಳ ಅಮೇಯಾತ್ಮನಾದ ಅರ್ಜುನನು ಎಚ್ಚೆತ್ತುಕೊಂಡು ತ್ವರೆಗೊಂಡು ಕೃಷ್ಣನ ಸಾರಥ್ಯದಲ್ಲಿ ಇಂದ್ರಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದ.

ತತೋ ಬಾಣಸಹಸ್ರಾಣಿ ಸಮುತ್ಪತ್ಯಾನಿ ಮಾರಿಷ ॥೩೭॥

ಸರ್ವದಿಕ್ಷು ವ್ಯದೃಶ್ಯಂತ ಸೂದಯಂತೋ ನೃಪ ದ್ವಿಪಾನ್ ।
ಹಯಾನ್ ರಥಾಂಶ್ಚ ಸಮರೇ ಶಸ್ತ್ರೈಃ ಶತಸಹಸ್ರಶಃ ॥೩೮॥

ರಾಜನೆ, ಒಡನೆ ಎಲ್ಲ ದಿಕ್ಕುಗಳಲ್ಲಿ ಸಾವಿರಾರು ಬಾಣಗಳು ಪ್ರಾದುರ್ಭವಿಸಿ, ಆನೆ ಕುದುರೆ ರಥ ಸೈನ್ಯಗಳನ್ನು ನೂರಾರು ಸಾವಿರಾರು ಸಂಖ್ಯೆಯಲ್ಲಿ ಶಸ್ತ್ರಗಳಿಂದ ರಣದಲ್ಲಿ ಸಂಹರಿಸುವುದು ಕಂಡುಬಂದಿತು.

ವಧ್ಯಮಾನೇ ತತಃ ಸೈನ್ಯೇ ವಿಪುಲಾ ಭೀಃ ಸಮಾವಿಶತ್ ।
ಸಂಶಪ್ತಕಗಣಾನಾಂ ಚ ಗೋಪಾಲಾನಾಂ ಚ ಭಾರತ ॥೩೯॥

ಸೈನ್ಯ ಹೀಗೆ ಹತವಾಗುವಾಗ ಸಂಶಪ್ತಕ ಗಣಗಳಿಗೂ ನಾರಾಯಣಸೈನ್ಯಗಳಿಗೂ ಬಹಳ ಭೀತಿ ಉಂಟಾಯಿತು.

ನ ಹಿ ಕಶ್ಚಿತ್ತುಮಾಂಸ್ತತ್ರ ಯೋಽರ್ಜುನಂ ಪ್ರತ್ಯಯುಧ್ಯತ ॥೪೦॥

ಪಶ್ಯತಾಂ ತತ್ರ ವೀರಾಣಾಮಹನ್ಯತ ಮಹದ್‌ಬಲಮ್ ।
ಹನ್ಯಮಾನಮಪಶ್ಯಂಶ್ಚ ನಿಶ್ಚೇಷ್ಟಾಃ ಸ್ಮ ಪರಾಕ್ರಮೇ ॥೪೧॥

ಅರ್ಜುನನಿಗೆ ಎದುರಾಗಿ ಯುದ್ಧಮಾಡುವವನು ಯಾವ ಒಬ್ಬ ಪುರುಷನು ಅಲ್ಲಿರಲಿಲ್ಲ. ಅಲ್ಲಿ ವೀರರು ನೋಡುತ್ತಿದ್ದಂತೆಯೇ ದೊಡ್ಡ ಸೈನ್ಯ ಹತವಾಯಿತು. ಪರಾಕ್ರಮ ತೋರುವಲ್ಲಿ ಏನೂ ಸಾಮರ್ಥ್ಯವಿಲ್ಲದೆ ಅವರು ಕೇವಲ ಸೈನ್ಯ ನಾಶವಾಗುತ್ತಿದ್ದುದನ್ನು ನೋಡಿದರು.

ಅಯುತಂ ತತ್ರ ಯೋಧಾನಾಂ ಹತ್ವಾ ಪಾಂಡುಸುತೋ ರಣೇ ।
ವ್ಯಭ್ರಾಜತ ರಣೇ ರಾಜನ್ ವಿಧೂಮೋಽಗ್ನಿರಿವ ಜ್ವಲನ್ ॥೪೨॥

ರಾಜನೆ, ರಣದಲ್ಲಿ ಆಗ ಅರ್ಜುನನು ಹತ್ತು ಸಾವಿರ ಯೋಧರನ್ನು ಕೊಂದು ಹೊಗೆ ಇಲ್ಲದ ಬೆಂಕಿಯಂತೆ ಜ್ವಲಿಸುತ್ತ ಬೆಳಗಿದ.

ಚತುರ್ದಶ ಸಹಸ್ರಾಣಿ ಯಾನಿ ಶಿಷ್ಟಾನಿ ಭಾರತ ।
ರಥಾನಾಮಯುತಂ ಚೈವ ತ್ರಿಸಾಹಸ್ರಾಶ್ಚ ದಂತಿನಃ ॥೪೩॥

ರಾಜನೆ, ಹದಿನಾಲ್ಕು ಸಾವಿರ ಪದಾತಿಗಳೂ ಹತ್ತು ಸಾವಿರ ರಥಗಳು ಮತ್ತು ಮೂರು ಸಾವಿರ ಗಜಸೈನ್ಯಗಳು ಉಳಿದುವು.

ತತಃ ಸಂಶಪ್ತಕಾ ಭೂಯಃ ಪರಿವವ್ರುರ್ಧನಂಜಯಮ್ ।
ಮರ್ತವ್ಯಮಿತಿ ನಿಶ್ಚಿತ್ಯ ಜಯಂ ವಾಪ್ಯನಿವರ್ತನಮ್ ॥೪೪॥

ಆಗ ಸಂಶಪ್ತಕರು 'ಸಾಯಬೇಕು ಇಲ್ಲವೆ ಗೆಲ್ಲಬೇಕು, ಹೊರತು ಹಿಂದಿರುಗ ಬಾರದು' ಎಂದು ನಿರ್ಧರಿಸಿ ಪುನಃ ಅರ್ಜುನನನ್ನು ಸುತ್ತುವರಿದರು.

ಆಸೀತ್ ತತ್ರ ಮಹದ್ ಯುದ್ಧಂ ತಾವಕಾನಾಂ ವಿಶಾಂಪತೇ ।
ಶೂರೇಣ ಬಲಿನಾ ಸಾರ್ಧಂ ಪಾಂಡವೇನ ಕಿರೀಟಿನಾ ॥೪೫॥

ಆಗ ರಾಜನೆ, ಶೂರನಾದ ಬಲಿಷ್ಠನಾದ ಅರ್ಜುನನೊಂದಿಗೆ ನಿನ್ನವರಿಗೆ ದೊಡ್ಡ ಯುದ್ಧವಾಯಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಸಂಕುಲಯುದ್ಧೇ ಪಂಚಾಶೋಧ್ಯಾಯಃ ॥೫೦॥

❖

ಮಹಾಭಾರತತಾತ್ಪರ್ಯನಿರ್ಣಯ

ಸ ತಾಭ್ಯಾಂ ವಜ್ರಸದೃಶೈಃ ಶರೈರಭಿಹತೋ ಭೃಶಮ್ ।
ವಿಸೃಜ್ಯ ಪಾರ್ಷತಂ ಸ್ವೀಯಮಾರುರೋಹ ರಥಂ ಪುನಃ ॥ ೭೩ ॥

ಜಗಾಮ ಚ ತತೋನ್ಯತ್ರ ಪಾಂಚಾಲ್ಯೋಪಿ ರಥಂ ಪುನಃ ।
ಆರುಹ್ಯಾನ್ಯಂ ಸಾತ್ವತಧನ್ವಾ ಕೃತವರ್ಮಾಣಮಭ್ಯಯಾತ್ ॥ ೭೪ ॥

ಭೀಮಾರ್ಜುನರಿಂದ ವಜ್ರಸದೃಶವಾದ ಬಾಣಗಳಿಂದ ಚೆನ್ನಾಗಿ ಹೊಡೆಸಿ ಕೊಂಡ ಅಶ್ವತ್ಥಾಮ ಧೃಷ್ಟದ್ಯುಮ್ನನನ್ನು ಬಿಟ್ಟು ಪುನಃ ತನ್ನ ರಥವನ್ನೇರಿದ. ಮತ್ತು ಅಲ್ಲಿಂದ ಬೇರೆ ಕಡೆಗೆ ಹೊರಟುಹೋದ. ಧೃಷ್ಟದ್ಯುಮ್ನನೂ ಪುನಃ ಬೇರೆ ರಥವನ್ನೇರಿ ಬಿಲ್ಲನ್ನೆತ್ತಿಕೊಂಡು ಕೃತವರ್ಮನನ್ನು ಇದಿರಿಸಿದ.

ತಯೋರಾಸೀತ್ ಸುತುಮುಲಂ ಯುದ್ಧಮದ್ಭುತದರ್ಶನಮ್ ।
ತತ್ರ ನಾತಿಪ್ರಯತ್ನೇನ ಪಾಂಚಾಲ್ಯೋ ವಿರಥಾಯುಧಮ್ ॥ ೭೫ ॥

ಚಕಾರ ಕೃತವರ್ಮಾಣಂ ತಮಪೋವಾಹ ಗೌತಮಃ ।
ಅಥ ದುರ್ಯೋಧನೋ ರಾಜಾ ಮಾದ್ರೇಯಾವಭ್ಯಯಾದ್ ರಣೇ ॥

ಧೃಷ್ಟದ್ಯುಮ್ನ ಕೃತವರ್ಮರಿಗೆ ಅತಿ ತೀಕ್ಷ್ಣವಾದ, ನೋಡಲು ಆಶ್ಚರ್ಯಕರವಾದ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಧೃಷ್ಟದ್ಯುಮ್ನ ಹೆಚ್ಚಿನ ಪ್ರಯತ್ನವಿಲ್ಲದೆಯೆ ಕೃತವರ್ಮನನ್ನು ವಿರಥನನ್ನಾಗಿಯೂ ಆಯುಧರಹಿತನನ್ನಾಗಿಯೂ ಮಾಡಿದ. ಆಗ ಕೃಪ ಅವನನ್ನು ಬೇರೆ ಕಡೆಗೆ ಒಯ್ದ. ಅತ್ತ ರಾಜಾ ದುರ್ಯೋಧನನು ನಕುಲ ಸಹದೇವರನ್ನು ಯುದ್ಧದಲ್ಲಿ ಇದಿರಿಸಿದ.

❖

ಐವತ್ತೊಂದನೆಯ ಅಧ್ಯಾಯ

ಕೃಪನಿಂದ ಶಿಖಂಡಿಯ ಪರಾಭವ, ಸುಕೇತುವಿನ ವಧ.
ಧೃಷ್ಟದ್ಯುಮ್ನನಿಂದ ಕೃತವರ್ಮನ ಪರಾಭವ.

ಸಂಜಯಃ

ಕೃತವರ್ಮಾ ಕೃಪೋ ದ್ರೌಣಿಃ ಸೂತಪುತ್ರಶ್ಚ ಮಾರಿಷ ।
ಉಲೂಕಃ ಸೌಬಲಶ್ಚೈವ ರಾಜಾ ಚ ಸಹ ಸೋದರೈಃ ॥೧॥

ಸೀದಮಾನಾಂ ಚಮೂಂ ದೃಷ್ಟ್ವಾ ಪಾಂಡುಪುತ್ರಭಯಾರ್ದಿತಾಮ್ ।
ಅಭಿಸಸ್ರುಃ ಸ್ಮ ವೇಗೇನ ಭಿನ್ನಾಂ ನಾವಮಿವಾರ್ಣವೇ ॥೨॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ರಾಜನೆ, ಕೃತವರ್ಮ ಕೃಪ ಅಶ್ವತ್ಥಾಮ ಕರ್ಣ ಉಲೂಕ ಶಕುನಿ ದುರ್ಯೋಧನ ಮತ್ತು ಸೋದರರು, ಸಮುದ್ರದಲ್ಲಿ ಒಡೆದ ನೌಕೆಯಂತೆ ಕೌರವಸೇನೆ ಅರ್ಜುನನ ಭಯದಿಂದ ವಿಹ್ವಲಗೊಂಡು ನಾಶಹೊಂದುತ್ತಿರುವುದನ್ನು ಕಂಡು ಬೇಗನೆ ಇದಿರಿಗೆ ಧಾವಿಸಿ ಬಂದರು.

ತತೋ ಯುದ್ಧಮತೀವಾಸೀನ್ಮುಹೂರ್ತಮಿವ ಭಾರತ ।
ಭೀರೂಣಾಂ ತ್ರಾಸಜನನಂ ಶೂರಾಣಾಂ ಹರ್ಷವರ್ಧನಮ್ ॥೩॥

ರಾಜನೆ, ಮುಹೂರ್ತಕಾಲ ಹೇಡಿಗಳಿಗೆ ಮೈನಡುಕ ಹುಟ್ಟಿಸುವ, ವೀರರಿಗೆ ಉತ್ಸಾಹ ತರುವ ಯುದ್ಧ ಅತಿಯಾಗಿ ಸಂಭವಿಸಿತು.

ಕೃಪೇಣ ಶರವರ್ಷಾಣಿ ವಿಪ್ರಮುಕ್ತಾನಿ ಸಂಯುಗೇ ।
ಸೃಂಜಯಾಂಶ್ಚಾದಯಾಮಾಸುಃ ಶಲಭಾನಾಂ ವ್ರಜಾ ಇವ ॥೪॥

ಕೃಪಾಚಾರ್ಯರು ರಣದಲ್ಲಿ ಎಸೆದ ಬಾಣಗಳ ಮಳೆಗಳು ಮಿಡತೆಗಳ ಸಮೂಹಗಳಂತೆ ಪಾಂಡವಸೈನಿಕರನ್ನು ಆವರಿಸಿದುವು.

ಶಿಖಂಡೀ ತು ತತಃ ಕ್ರುದ್ಧೋ ಗೌತಮಂ ತ್ವರಿತೋ ಯಯೌ ।
ವವರ್ಷ ಶರವರ್ಷಾಣಿ ಸಮಂತಾದೇವ ಬ್ರಾಹ್ಮಣೇ ॥೫॥

ಶಿಖಂಡಿ ಆಗ ಕ್ರುದ್ಧನಾಗಿ ಕೃಪನನ್ನು ವೇಗದಿಂದ ಇದಿರಿಸಿದ. ಕೃಪನ ಮೇಲೆ ಎಲ್ಲೆಡೆ ಬಾಣಗಳ ಮಳೆ ಸುರಿದ.

ಕೃಪಸ್ತು ಶರವರ್ಷಂ ತದ್ ವಿನಿಹತ್ಯ ಮಹಾಸ್ತ್ರವಿತ್ ।
ಶಿಖಂಡಿನಂ ರಣೇ ಕ್ರುದ್ಧೋ ವಿವ್ಯಾಧ ದಶಭಿಃ ಶರೈಃ ॥೬॥

ಮಹಾ ಅಸ್ತ್ರಜ್ಞನಾದ ಕೃಪನು ಆ ಬಾಣಗಳ ಮಳೆಯನ್ನು ನಾಶಮಾಡಿ ಕೋಪದಿಂದ ರಣದಲ್ಲಿ ಶಿಖಂಡಿಯನ್ನು ಹತ್ತು ಬಾಣಗಳಿಂದ ಹೊಡೆದ.

ತತಃ ಶಿಖಂಡೀ ಕುಪಿತಃ ಶರೈಃ ಸಪ್ತಭಿರಾಹವೇ ।
ಕೃಪಂ ವಿವ್ಯಾಧ ಸುಭೃಶಂ ಕಂಕಪತ್ರೈರಜಿಹ್ಮಗೈಃ ॥೭॥

ಆಗ ಶಿಖಂಡಿ ಕುಪಿತನಾಗಿ ರಣದಲ್ಲಿ ಅಜಿಹ್ಮಗ ಕಂಕಪತ್ರಯುತವಾದ ಏಳು ಬಾಣಗಳಿಂದ ಕೃಪನನ್ನು ಹೊಡೆದ.

ತತಃ ಕೃಪಃ ಶರೈಸ್ತೀಕ್ಷ್ಣೈಃ ಸೋಽತಿವಿದ್ಧೋ ಮಹಾರಥಃ ।
ವ್ಯಶ್ವಸೂತರಥಂ ಚಕ್ರೇ ಶಿಖಂಡಿನಮಥೋ ದ್ವಿಜಃ ॥೮॥

ಮಹಾರಥನಾದ ಕೃಪನು ತೀಕ್ಷ್ಣವಾದ ಬಾಣಗಳಿಂದ ಅತಿಯಾಗಿ ಹೊಡೆಸಿಕೊಂಡು ಶಿಖಂಡಿಯನ್ನು ಅಶ್ವ–ಸಾರಥಿ–ರಥರಹಿತನನ್ನಾಗಿ ಮಾಡಿದ.

ಹತಾಶ್ವಾತ್ತು ತತೋ ಯಾನಾದವಪ್ಲುತ್ಯ ಮಹಾರಥಃ ।
ಖಡ್ಗಂ ಚರ್ಮ ತಥಾ ಗೃಹ್ಯ ಸತ್ವರಂ ಬ್ರಾಹ್ಮಣಂ ಯಯೌ ॥೯॥

ಕುದುರೆಗಳು ಹತವಾದಾಗ ರಥದಿಂದ ಮಹಾರಥನಾದ ಶಿಖಂಡಿ ಕೆಳಗೆ ಹಾರಿ ಕತ್ತಿ ಗುರಾಣಿಗಳನ್ನು ಹಿಡಿದು ವೇಗದಿಂದ ಕೃಪನಿದಿರಿಗೆ ಬಂದ.

ತಮಾಪತಂತಂ ಸಹಸಾ ಶರೈಃ ಸನ್ನತಪರ್ವಭಿಃ ।
ಛಾದಯಾಮಾಸ ಸಮರೇ ತದದ್ಭುತಮಿವಾಭವತ್ ॥೧೦॥

ಶಿಖಂಡಿ ಸಮೀಪ ಬರುತ್ತಿದ್ದಂತೆ ಕೃಪನು ಡೊಂಕುಗಿಣ್ಣಿನ ಬಾಣಗಳಿಂದ ರಣದಲ್ಲಿ ಅವನನ್ನು ಮುಚ್ಚಿದ. ಅದು ಅದ್ಭುತವಾಗಿತ್ತು.

ತತ್ರಾದ್ಭುತಮಪಶ್ಯಾಮ ಶಿಲಾನಾಂ ಪ್ಲವನಂ ಯಥಾ ।
ನಿಶ್ಚೇಷ್ಟೋ ಯದ್ ರಣೇ ರಾಜನ್ ಶಿಖಂಡೀ ಸಮತಿಷ್ಠತ ॥೧೧॥

ಕಲ್ಲುಗಳು ನೀರಿನಲ್ಲಿ ತೇಲುವಂಥ ಅದ್ಭುತವನ್ನು ನಾವು ಆಗ ಕಂಡೆವು. ಏಕೆಂದರೆ ರಾಜನೆ, ಶಿಖಂಡಿಯು ರಣರಂಗದಲ್ಲಿ ನಿಶ್ಚೇಷ್ಟನಾಗಿ ನಿಂತುಬಿಟ್ಟ!

ಕೃಪೇಣ ಛಾದಿತಂ ದೃಷ್ಟ್ವಾ ನೃಪೋತ್ತಮ ಶಿಖಂಡಿನಮ್ ।
ಪ್ರತ್ಯುದ್ಯಯೌ ಕೃಪಂ ತೂರ್ಣಂ ಧೃಷ್ಟದ್ಯುಮ್ನೋ ಮಹಾರಥಃ ॥೧೨॥

ರಾಜನೆ, ಶಿಖಂಡಿಯನ್ನು ಕೃಪನು ಆಚ್ಛಾದಿಸಿದ್ದನ್ನು ಕಂಡು ಮಹಾರಥನಾದ ಧೃಷ್ಟದ್ಯುಮ್ನನು ಬೇಗನೆ ಕೃಪನನ್ನು ಇದಿರಿಸಿದ.

ಧೃಷ್ಟದ್ಯುಮ್ನಂ ತತೋ ಯಾಂತಂ ಶಾರದ್ವತರಥಂ ಪ್ರತಿ ।
ಪ್ರತಿಜಗ್ರಾಹ ವೇಗೇನ ಕೃತವರ್ಮಾ ಮಹಾರಥಃ ॥೧೩॥

ಧೃಷ್ಟದ್ಯುಮ್ನನು ಕೃಪರ ರಥದ ಕಡೆಗೆ ಹೋಗುವುದನ್ನು ಕಂಡು ಮಹಾರಥನಾದ ಕೃತವರ್ಮ ವೇಗದಿಂದ ಅವನನ್ನು ಇದಿರಿಸಿದ.

ಯುಧಿಷ್ಠಿರಮಥಾಯಾಂತಂ ಶಾರದ್ವತರಥಂ ಪ್ರತಿ ।
ಸಪುತ್ರಂ ಸಹಸೇನಂ ಚ ದ್ರೋಣಪುತ್ರೋ ನ್ಯವಾರಯತ್ ॥೧೪॥

ಕೃಪರ ರಥದ ಕಡೆಗೆ ಯುಧಿಷ್ಠರನು ಪುತ್ರರೊಂದಿಗೆ ಸೈನ್ಯಗಳೊಂದಿಗೆ ಬರುವಾಗ ಅಶ್ವತ್ಥಾಮನು ಅವನನ್ನು ತಡೆದ.

ನಕುಲಂ ಸಹದೇವಂ ಚ ತ್ವರಮಾಣೌ ಮಹಾರಥೌ ।
ಪ್ರತಿಜಗ್ರಾಹ ತೇ ಪುತ್ರಃ ಶರವರ್ಷೇಣ ವಾರಯನ್ ॥೧೫॥

ಮಹಾರಥರಾದ ನಕುಲ–ಸಹದೇವರೂ ವೇಗದಿಂದ ಬರುವಾಗ ನಿನ್ನ ಮಗ ದುರ್ಯೋಧನನು ಅವರನ್ನು ತಡೆದು ಇದಿರಿಸಿದ.

ಭೀಮಸೇನಂ ಕರೂಷಾಂಶ್ಚ ಕೇಕಯಾನ್ ಸಹಸೃಂಜಯಾನ್ ।
ಕರ್ಣೋ ವೈಕರ್ತನೋ ಯುದ್ಧೇ ವಾರಯಾಮಾಸ ಭಾರತ ॥೧೬॥

ರಾಜನೆ, ಭೀಮಸೇನನನ್ನೂ ಕರೂಷ ಕೇಕಯ ಸೃಂಜಯರನ್ನೂ ಕರ್ಣನು ರಣದಲ್ಲಿ ತಡೆದ.

ಶಿಖಂಡಿನೇ ತತೋ ಬಾಣಾನ್ ಕೃಪಃ ಶಾರದ್ವತೋ ಯುಧಿ ।
ಪ್ರಾಹಿಣೋತ್ ತ್ವರಯಾ ಯುಕ್ತೋ ದಿಧಕ್ಷುರಿವ ಮಾರಿಷ ॥೧೭॥

ರಾಜನೆ, ದಹಿಸುವಂತೆ ಕಾಣುತ್ತಿದ್ದ ಕೃಪರು ವೇಗದಿಂದ ರಣದಲ್ಲಿ ಶಿಖಂಡಿಯ ಮೇಲೆ ಬಾಣಗಳನ್ನೆಸೆದರು.

ತಾನ್ ಶರಾನ್ ಪ್ರೇಷಿತಾಂಸ್ತೇನ ಸಮಂತಾದ್ ಸ್ವರ್ಣಭೂಷಿತಾನ್ ।
ಚಿಚ್ಛೇದ ಖಡ್ಗಮಾವಿಧ್ಯ ಭ್ರಾಮಯಂಶ್ಚ ಪುನಃ ಪುನಃ ॥೧೮॥

ಕೃಪರು ಎಲ್ಲೆಡೆ ಎಸೆದ ಸ್ವರ್ಣಾಲಂಕೃತವಾದ ಆ ಬಾಣಗಳನ್ನು ಶಿಖಂಡಿಯು ಖಡ್ಗವನ್ನು ಪುನಃ ಪುನಃ ತಿರುಗಿಸುತ್ತ ಹೊಡೆದು ಕತ್ತರಿಸಿದ.

ಶತಚಂದ್ರಂ ತತಶ್ಚರ್ಮ ಗೌತಮಃ ಪಾರ್ಷತಸ್ಯ ಹ ।
ವ್ಯಧಮತ್ ಸಾಯಕೈಸ್ತೂರ್ಣಂ ತತ ಉಚ್ಚುಕ್ರುಶುರ್ಜನಾಃ ॥೧೯॥

ನೂರು ಚಂದ್ರಚಿಹ್ನಯುಕ್ತವಾದ ಶಿಖಂಡಿಯ ಗುರಾಣಿಯನ್ನು ಕೃಪರು ಬಾಣ ಗಳಿಂದ ಬೇಗನೆ ನಾಶಮಾಡಿದರು. ಆಗ ಜನರು ಗಟ್ಟಿಯಾಗಿ ಕೂಗಿಕೊಂಡರು.

ಸ ವಿಚರ್ಮಾ ಮಹಾರಾಜ ಖಡ್ಗಪಾಣಿರುಪಾದ್ರವತ್ ।
ಕೃಪಸ್ಯ ವಶಮಾಪನ್ನೋ ಮೃತ್ಯೋರಾಸ್ಯಮಿವಾತುರಃ ॥೨೦॥

ಮಹಾರಾಜ, ರೋಗಿಯು ಮೃತ್ಯುವಿನ ಬಾಯಿಗೆ ಬೀಳುವಂತೆ, ಗುರಾಣಿ ಇಲ್ಲದೆ ಕೃಪರ ವಶಕ್ಕೆ ಬಂದಿದ್ದ ಶಿಖಂಡಿ ಅವರ ಕಡೆಗೆ ಕೇವಲ ಖಡ್ಗಹಿಡಿದೇ ಧಾವಿಸಿದ.

ಶಾರದ್ವತಶರೈರ್ಗ್ರಸ್ತಂ ಕ್ಲಿಶ್ಯಮಾನಂ ಮಹಾಬಲಮ್ ।
ಚಿತ್ರಕೇತುಸುತೋ ದೃಷ್ಟ್ವಾ ಸುಕೇತುಸ್ತ್ವರಿತೋ ಯಯೌ ॥೨೧॥

ವಿಕಿರನ್ ಬ್ರಾಹ್ಮಣಂ ಯುದ್ಧೇ ಬಹುಭಿರ್ನಿಶಿತೈಃ ಶರೈಃ ।
ಅಭ್ಯಾಪತದಮೇಯಾತ್ಮಾ ಗೌತಮಸ್ಯ ರಥಂ ಪ್ರತಿ ॥೨೨॥

ರಾಜನೆ, ಕೃಪರ ಬಾಣಗಳಿಗೀಡಾಗಿ ಕ್ಲೇಶಪಡುತ್ತಿದ್ದ ಮಹಾಬಲಿಷ್ಠನಾದ ಶಿಖಂಡಿಯನ್ನು ಕಂಡು ಚಿತ್ರಕೇತುವಿನ ಸುತನಾದ ಅಮೇಯಾತ್ಮನಾದ ಸುಕೇತುವು ಬೇಗನೆ ಕೃಪರನ್ನು ರಣದಲ್ಲಿ ತೀಕ್ಷ್ಣವಾದ ಬಹುಬಾಣಗಳಿಂದ ಮುಚ್ಚುತ್ತ ಕೃಪರ ರಥದ ಕಡೆಗೆ ಇದಿರಾಗಿ ಧಾವಿಸಿ ಬಂದ.

ದೃಷ್ಟ್ವಾऽವಿಷಹ್ಯಂ ತಂ ಯುದ್ಧೇ ಬ್ರಾಹ್ಮಣಂ ಚರಿತವ್ರತಮ್ ।
ಅಪಯಾತಸ್ತತಸ್ತೂರ್ಣಂ ಶಿಖಂಡೀ ರಾಜಸತ್ತಮ ॥೨೩॥

ರಾಜನೆ, ವ್ರತಾನುಷ್ಠಾನಪರರಾದ ಕೃಪರು ಯುದ್ಧದಲ್ಲಿ ಇದಿರಿಸಲಾಗದವರಾಗಿದ್ದುದನ್ನು ಕಂಡು ಶಿಖಂಡಿ ಅಲ್ಲಿಂದ ಬೇಗನೆ ಹೊರಟುಹೋದ.

ಸುಕೇತುಸ್ತು ತತೋ ರಾಜನ್ ಗೌತಮಂ ನವಭಿಃ ಶರೈಃ ।
ವಿದ್ಧ್ವಾ ವಿವ್ಯಾಧ ಸಪ್ತತ್ಯಾ ಪುನಶ್ಚೈನಂ ತ್ರಿಭಿಃ ಶರೈಃ ॥೨೪॥

ರಾಜನೆ, ಸುಕೇತುವು ಕೃಪರನ್ನು ಒಂಬತ್ತು ಬಾಣಗಳಿಂದ ಹೊಡೆದು ಪುನಃ ಎಪ್ಪತ್ತಮೂರು ಬಾಣಗಳಿಂದಲೂ ಹೊಡೆದ.

ಅಥಾಸ್ಯ ಸಶರಂ ಚಾಪಂ ಪುನಶ್ಚಿಚ್ಛೇದ ಮಾರಿಷ ।
ಸಾರಥಿಂ ಚ ಶರೇಣಾಸ್ಯ ಭೃಶಂ ಮರ್ಮಣ್ಯತಾಡಯತ್ ॥೨೫॥

ರಾಜನೆ, ಸುಕೇತುವು ಪುನಃ ಕೃಪರ ಧನುರ್ಬಾಣಗಳೆರಡನ್ನೂ ಕತ್ತರಿಸಿದ, ಅವರ ಸಾರಥಿಯನ್ನೂ ಬಾಣದಿಂದ ಮರ್ಮಸ್ಥಳದಲ್ಲಿ ಚೆನ್ನಾಗಿ ಹೊಡೆದ.

ಗೌತಮಸ್ತು ತತಃ ಕ್ರುದ್ಧೋ ಧನುರ್ಗೃಹ್ಯ ನವಂ ದೃಢಮ್ ।
ಸುಕೇತುಂ ತ್ರಿಂಶತಾ ಬಾಣೈಃ ಸರ್ವಮರ್ಮಸ್ವತಾಡಯತ್ ॥೨೬॥

ಕೃಪರು ಆಗ ಕುಪಿತರಾಗಿ ದೃಢವಾದ ಹೊಸ ಧನುಸ್ಸನ್ನು ಎತ್ತಿಕೊಂಡು ಸುಕೇತುವನ್ನು ಮೂವತ್ತು ಬಾಣಗಳಿಂದ ಎಲ್ಲ ಮರ್ಮಸ್ಥಳಗಳಲ್ಲಿ ಹೊಡೆದರು.

ಸ ವಿಹ್ವಲಿತಸರ್ವಾಂಗಃ ಪ್ರಚಚಾಲ ರಥೋತ್ತಮೇ ।
ಭೂಮಿಚಾಲೇ ಯಥಾ ವೃಕ್ಷಃ ಕಂಪತೇ ವೈ ಸಮಂತತಃ ॥೨೭॥

ಸುಕೇತು ಸರ್ವಾಂಗಗಳಲ್ಲಿ ವಿಹ್ವಲಗೊಂಡು ಭೂಕಂಪವಾದಾಗ ಎಲ್ಲೆಡೆ ಮರಗಳು ಕಂಪಿಸುವಂತೆ ಮಹಾರಥದಲ್ಲಿದ್ದೇ ಬಹಳವಾಗಿ ನಡುಗಿದ.

ಚಲತಸ್ತಸ್ಯ ಕಾಯಾತ್ತು ಶಿರೋ ಜ್ವಲಿತಕುಂಡಲಮ್ ।
ಸೋಷ್ಣೀಷಂ ಸಶಿರಸ್ತ್ರಾಣಂ ಕ್ಷುರಪ್ರೇಣಾನ್ವಪಾತಯತ್ ॥೨೮॥

ನಡುಗುತ್ತಿದ್ದ ಸುಕೇತುವಿನ ಶರೀರದಿಂದ, ಹೊಳೆಯುವ ಕುಂಡಲ ಕಿರೀಟ ಶಿರಸ್ತ್ರಾಣಗಳಿಂದ ಯುಕ್ತವಾದ ಅವನ ಶಿರವನ್ನು ಕೃಪರು ಬಾಣದಿಂದ ಕೆಡಹಿದರು.

ತಚ್ಛಿರಃ ಪ್ರಾಪತದ್ ಭೂಮೌ ಶ್ಯೇನಾಹೃತಮಿವಾಮಿಷಮ್ ।
ತತೋಽಸ್ಯ ಕಾಯೋ ವಸುಧಾಂ ಪಶ್ಚಾತ್ ಪ್ರಾಪ ತದಾ ಚ್ಯುತಃ ॥೨೯॥

ಗಿಡುಗಪಕ್ಷಿ ತರುವ ಮಾಂಸದ ತುಂಡಿನಂತೆ ಸುಕೇತುವಿನ ಶಿರಸ್ಸು ನೆಲದಲ್ಲಿ ಬಿದ್ದಿತು. ಬಳಿಕ ಅವನ ಶರೀರವೂ ಆಯತಪ್ಪಿ ನೆಲಕ್ಕೆ ಬಿದ್ದಿತು.

ತಸ್ಮಿನ್ ಹತೇ ಮಹಾರಾಜ ತ್ರಸ್ತಾಸ್ತಸ್ಯ ಪದಾನುಗಾಃ ।
ಗೌತಮಂ ಸಮರೇ ತ್ಯಕ್ತ್ವಾ ದುದ್ರುವುಸ್ತೇ ದಿಶೋ ದಶ ॥೩೦॥

ಮಹಾರಾಜ, ಸುಕೇತು ಹೀಗೆ ಹತನಾದಾಗ ಅವನ ಕಡೆಯ ಸೈನಿಕರು ಭಯಗೊಂಡು ರಣದಲ್ಲಿ ಕೃಪರನ್ನು ಬಿಟ್ಟು ಹತ್ತು ದಿಕ್ಕುಗಳಿಗೆ ಓಡಿಹೋದರು.

ಧೃಷ್ಟದ್ಯುಮ್ನಂ ತು ಸಮರೇ ಸನ್ನಿವಾರ್ಯ ಮಹಾಬಲಃ ।
ಕೃತವರ್ಮಾಬ್ರವೀದ್ಧೃಷ್ಟಿಷ್ಠ ತಿಷ್ಠೇತಿ ಪಾರ್ಷತಮ್ ॥೩೧॥

ಧೃಷ್ಟದ್ಯುಮ್ನನನ್ನು ರಣದಲ್ಲಿ ಮಹಾಬಲನಾದ ಕೃತವರ್ಮನು ತಡೆದು ಉತ್ಸಾಹದಿಂದ 'ನಿಲ್ಲು ನಿಲ್ಲು' ಎಂದ

ತದಭೂತ್ ತುಮುಲಂ ಯುದ್ಧಂ ವೃಷ್ಣಿಪಾರ್ಷತಯೋ ರಣೇ ।
ಆಮಿಷಾರ್ಥೇ ಯಥಾ ಯುದ್ಧಂ ಕ್ರುದ್ಧಯೋರ್ಗೃಧ್ರಯೋರ್ಯಥಾ
॥೩೨॥

ಮಾಂಸದಾಸೆಯಿಂದ ಎರಡು ಗಿಡುಗಗಳು ಹೋರಾಡುವಂತೆ ಕೃತವರ್ಮ–ಧೃಷ್ಟದ್ಯುಮ್ನರೊಳಗೆ ರಣರಂಗದಲ್ಲಿ ತುಮುಲ ಯುದ್ಧವಾಯಿತು.

ಧೃಷ್ಟದ್ಯುಮ್ನಸ್ತು ಸಮರೇ ಹಾರ್ದಿಕ್ಯಂ ನವಭಿಃ ಶರೈಃ ।
ಆಜಘಾನೋರಸಿ ಕ್ರುದ್ಧಃ ಪೀಡಯನ್ ಹೃದಿಕಾತ್ಮಜಮ್ ॥೩೩॥

ಕ್ರುದ್ಧನಾದ ಧೃಷ್ಟದ್ಯುಮ್ನನು ಕೃತವರ್ಮನನ್ನು ಒಂಬತ್ತು ಬಾಣಗಳಿಂದ ಎದೆಯಲ್ಲಿ ಹೊಡೆದು ಅವನನ್ನು ಬಹುವಾಗಿ ಪೀಡಿಸಿದ.

ಕೃತವರ್ಮಾ ತು ಸಮರೇ ಪಾರ್ಷತೇನ ದೃಢಾಹತಃ ।
ಪಾರ್ಷತಂ ಸರಥಂ ಸಾಶ್ವಂ ಛಾದಯಾಮಾಸ ಸಾಯಕೈಃ ॥೩೪॥

ಕೃತವರ್ಮನು ರಣದಲ್ಲಿ ಧೃಷ್ಟದ್ಯುಮ್ನನಿಂದ ದೃಢವಾಗಿ ಹೊಡೆಯಲ್ಪಟ್ಟು ಧೃಷ್ಟದ್ಯುಮ್ನನನ್ನು ರಥ ಅಶ್ವಗಳೊಂದಿಗೇ ಬಾಣಗಳಿಂದ ಮುಚ್ಚಿದ.

ಸರಥಶ್ಚಾದಿತೋ ರಾಜನ್ ಧೃಷ್ಟದ್ಯುಮ್ನೋ ನ ದೃಶ್ಯತೇ ।
ಮೇಘೈರಿವ ಪರಿಚ್ಛನ್ನೋ ಭಾಸ್ಕರೋ ಜಲಧಾರಿಭಿಃ ॥೩೫॥

ರಾಜನೆ, ಧೃಷ್ಟದ್ಯುಮ್ನನು ರಥದೊಂದಿಗೇ ಬಾಣಗಳಿಂದ ಮುಚ್ಚಿಹೋದಾಗ ಜಲಧಾರೆ ಸುರಿಸುವ ಮೋಡಗಳಿಂದ ಮುಚ್ಚಿಹೋಗುವ ಸೂರ್ಯನಂತೆ ಕಾಣದಾದ.

ವಿಧೂಯ ತಂ ಬಾಣಗಣಂ ಶರೈಃ ಕನಕಭೂಷಣೈಃ ।
ವ್ಯರೋಚತ ರಣೇ ರಾಜನ್ ಧೃಷ್ಟದ್ಯುಮ್ನಃ ಕೃತವ್ರಣಃ ॥೩೬॥

ರಾಜನೆ, ಧೃಷ್ಟದ್ಯುಮ್ನನು ಮೈಗಾಯ ಹೊಂದಿದರೂ ಕೃತವರ್ಮನ ಬಾಣಸಮೂಹಗಳನ್ನು ರಣದಲ್ಲಿ ಬಂಗಾರದಿಂದ ಅಲಂಕೃತವಾದ ಬಾಣಗಳಿಂದ ದೂರಮಾಡಿ ಶೋಭಿಸಿದ.

ತತಸ್ತು ಪಾರ್ಷತಃ ಕ್ರುದ್ಧಃ ಶಸ್ತ್ರವೃಷ್ಟಿಂ ಸುದಾರುಣಾಮ್ ।
ಕೃತವರ್ಮಾಣಮಾಸಾದ್ಯ ವ್ಯಸೃಜತ್ ಪೃತನಾಪತಿಃ ॥೩೭॥

ಬಳಿಕ ಸೇನಾಧಿಪತಿ ಧೃಷ್ಟದ್ಯುಮ್ನನು ಕ್ರುದ್ಧನಾಗಿ ಕೃತವರ್ಮನನ್ನು ಆಕ್ರಮಿಸಿ ಬಲುದಾರುಣವಾದ ಶಸ್ತ್ರಗಳ ಮಳೆಯನ್ನು ಅವನ ಮೇಲೆ ಸುರಿಸಿದ.

ತಾಮಾಪತಂತಿಂ ಸಹಸಾ ಶಸ್ತ್ರವೃಷ್ಟಿಂ ಸುದಾರುಣಾಮ್ ।
ಶರೈರನೇಕಸಾಹಸ್ರೈರ್ಹಾರ್ದಿಕ್ಯೋ ವ್ಯಧಮದ್ ಯುಧಿ ॥೩೮॥

ಬಲುದಾರುಣವಾಗಿ ಬರುತ್ತಿದ್ದ ಆಯುಧಗಳ ಆ ಮಳೆಯನ್ನು ಒಡನೆ ಅನೇಕ ಸಾವಿರ ಬಾಣಗಳಿಂದ ರಣದಲ್ಲಿ ಕೃತವರ್ಮ ನಾಶಗೊಳಿಸಿದ.

ದೃಷ್ಟ್ವಾ ತು ದಾರಿತಾಂ ಯುದ್ಧೇ ಶರವೃಷ್ಟಿಂ ಸುದಾರುಣಾಮ್ ।
ಕೃತವರ್ಮಾಣಮಭ್ಯೇತ್ಯ ವಾರಯಾಮಾಸ ಪಾರ್ಷತಃ ॥೩೯॥

ಬಲುದಾರುಣವಾದ ಬಾಣಗಳ ಮಳೆಯನ್ನು ಕೃತವರ್ಮ ತಡೆದುದನ್ನು ಕಂಡು ಧೃಷ್ಟದ್ಯುಮ್ನ ಅವನನ್ನು ಆಕ್ರಮಿಸಿ ಇದಿರಿಸಿದ.

ಸಾರಥಿಂ ಚಾಸ್ಯ ತರಸಾ ಪ್ರಾಹಿಣೋದ್ ಯಮಸಾದನಮ್ ।
ಭಲ್ಲೇನ ಶಿತಧಾರೇಣ ಸ ಹತಃ ಪ್ರಾಪತದ್ ರಥಾತ್ ॥೪೦॥

ಕೃತವರ್ಮನ ಸಾರಥಿಯನ್ನು ಧೃಷ್ಟದ್ಯುಮ್ನ ತೀಕ್ಷ್ಣ ಅಲುಗಿನ ಭಲ್ಲೆಯಿಂದ ಬೇಗನೆ ಯಮಸದನಕ್ಕೆ ಅಟ್ಟಿದ. ಅವನು ಹತನಾಗಿ ರಥದಿಂದ ಕೆಳಗೆ ಉರುಳಿದ.

ಗದಾಂ ಗೃಹ್ಯ ಪುನರ್ವೇಗಾತ್ ಕೃತವರ್ಮಾಣಮಾಹನತ್ ।
ಸೋऽತಿವಿದ್ಧೋ ಬಲವತಾ ನ್ಯಪತನ್ಮೂರ್ಛಯಾ ಹತಃ ॥೪೧॥

ಧೃಷ್ಟದ್ಯುಮ್ನ ಪುನಃ ಗದೆ ಎತ್ತಿಕೊಂಡು ವೇಗದಿಂದ ಕೃತವರ್ಮನನ್ನು ಹೊಡೆದ. ಕೃತವರ್ಮನು ಅತಿಯಾಗಿ ಹೊಡೆಸಿಕೊಂಡು ಮೂರ್ಛಿತನಾಗಿ ಬಿದ್ದ.

ತತೋ ರಾಜನ್ ಮಹೇಷ್ವಾಸಂ ಕೃತವರ್ಮಾಣಮಾಶು ವೈ ।
ಸುಪರ್ವಾ ರಥಮಾರೋಪ್ಯ ಅಪೋವಾಹ ರಣಾಜಿರಾತ್ ॥೪೨॥

ರಾಜನೆ, ಆಮೇಲೆ ಸುಪರ್ವನು ಕೃತವರ್ಮನನ್ನು ರಥದಲ್ಲಿ ಏರಿಸಿಕೊಂಡು ದೂರಕ್ಕೆ ಒಯ್ದ.

ಧೃಷ್ಟದ್ಯುಮ್ನಸ್ತು ಬಲವಾನ್ ಜಿತ್ವಾ ಶತ್ರುಂ ಮಹಾರಥಮ್ ।
ಕೌರವಾನ್ ಸಮರೇ ತೂರ್ಣಂ ವಾರಯಾಮಾಸ ಪತ್ರಿಭಿಃ ॥೪೩॥

ಬಲಿಷ್ಠನಾದ ಧೃಷ್ಟದ್ಯುಮ್ನನು ಹೀಗೆ ಶತ್ರುವಾದ ಮಹಾರಥನಾದ ಕೃತವರ್ಮನನ್ನೂ ರಣದಲ್ಲಿ ಕೌರವರನ್ನೂ ಬಾಣಗಳಿಂದ ಬೇಗನೆ ತಡೆದ.

ತತಸ್ತೇ ತಾವಕಾ ಯೋಧಾ ಧೃಷ್ಟದ್ಯುಮ್ನಮುಪಾದ್ರವನ್ ।
ಸಿಂಹನಾದರವಂ ಕೃತ್ವಾ ತತೋ ಯುದ್ಧಮವರ್ತತ ॥೪೪॥

ಬಳಿಕ ನಿನ್ನ ಕಡೆಯ ಯೋಧರು ಸಿಂಹನಾದದಂತೆ ಧ್ವನಿಯನ್ನು ಮಾಡಿ ಧೃಷ್ಟದ್ಯುಮ್ನನನ್ನು ಇದಿರಿಸಿದರು. ಆಗ ಯುದ್ಧ ನಡೆಯಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕೃತವರ್ಮಪರಾಜಯೋ ನಾಮ ಏಕಪಂಚಾಶೋऽಧ್ಯಾಯಃ ॥೫೧॥

❖

ಮಹಾಭಾರತತಾತ್ಪರ್ಯನಿರ್ಣಯ

ತದೈವ ಗುರುಪುತ್ರೋऽಯಾತ್ ಪಾಂಡವಾನಾಮನೀಕಿನೀಮ್ ।
ವಿಮೃದ್ಯ ಸಕಲಾಂ ಸೇನಾಂ ಕೃತ್ವಾ ಚ ವಿರಥಂ ನೃಪಮ್ ॥ ೪೫ ॥

ಧೃಷ್ಟದ್ಯುಮ್ನಂ ಯಮೌ ಚೈವ ಸಾತ್ಯಕಿಂ ದ್ರೌಪದೀಸುತಾನ್ ।
ಕ್ಷಣೇನ ವಿರಥೀಕೃತ್ಯ ಸರ್ವಾಂಶ್ಚಕ್ರೇ ನಿರಾಯುಧಾನ್ ॥ ೪೬ ॥

ಅಶ್ವತ್ಥಾಮ ಎಲ್ಲ ಸೈನ್ಯವನ್ನೂ ಮರ್ದಿಸಿ ಯುಧಿಷ್ಠಿರನನ್ನು ವಿರಥನನ್ನಾಗಿ ಮಾಡಿ ಧೃಷ್ಟದ್ಯುಮ್ನ ನಕುಲ-ಸಹದೇವ ಸಾತ್ಯಕಿ ದ್ರೌಪದೀಪುತ್ರರೆಲ್ಲರನ್ನೂ ಕ್ಷಣದಲ್ಲಿ ವಿರಥರನ್ನಾಗಿ ಮಾಡಿ ನಿರಾಯುಧರನ್ನಾಗಿಯೂ ಮಾಡಿದ.

ತಾನ್ ಭಗ್ನದರ್ಪಾನ್ ರಣತೋಪಯಾತಾ-
ನನ್ವೇವ ಬಾಣಾವೃತಮಂತರಿಕ್ಷಮ್ ।
ಕುರ್ವನ್ ಯಯೌ ಧರ್ಮರಾಜಸ್ತಮಾಹ
ಕಿಂ ನಃ ಸ್ವಧರ್ಮೇ ನಿರತಾನ್ ವಿಹಂಸಿ ॥ ೪೭ ॥

ದರ್ಪವನ್ನು ಕಳೆದುಕೊಂಡು ಪಲಾಯನ ಮಾಡುತ್ತಿದ್ದ ಧೃಷ್ಟದ್ಯುಮ್ನಾದಿಗಳನ್ನು ಅಶ್ವತ್ಥಾಮ ಬೆನ್ನಟ್ಟಿ ಅಂತರಿಕ್ಷವನ್ನು ಬಾಣಗಳಿಂದ ಮುಚ್ಚುತ್ತ ನಡೆದ. ಆಗ ಧರ್ಮರಾಜ ಅವನಿಗೆ ಹೇಳಿದ. 'ಸ್ವಧರ್ಮನಿರತರಾದ ನಮ್ಮನ್ನು ಏಕೆ ಹಿಂಸಿಸುವಿ?'

ಕ್ಷತ್ರಿಯಾನ್ ಪರಧರ್ಮಸ್ಥೋ ಮಾ ಹಿಂಸೀರಿತಿ ಚೋದಿತಃ ।
ಪ್ರಹಸ್ಯ ತಾನ್ ವಿಹಾಯೈವ ಯಯೌ ಯತ್ರಾಚ್ಯುತಾರ್ಜುನೌ ॥೪೮॥

'ಪರಧರ್ಮದಲ್ಲಿದ್ದು ಕ್ಷತ್ರಿಯರನ್ನು ಹಿಂಸಿಸಬೇಡ' ಎಂದು ಧರ್ಮರಾಜ ಹೇಳಿದಾಗ ಅಶ್ವತ್ಥಾಮ ನಕ್ಕು ಅವರನ್ನು ಬಿಟ್ಟು ಕೃಷ್ಣಾರ್ಜುನರಿದ್ದಲ್ಲಿಗೆ ನಡೆದ.

❖

ಐವತ್ತೆರಡನೆಯ ಅಧ್ಯಾಯ

ಅಶ್ವತ್ಥಾಮನಿಂದ ಯುಧಿಷ್ಠಿರನ ಪರಾಭವ, ಯುದ್ಧ ಬ್ರಾಹ್ಮಣನಿಗೆ
ವಿಹಿತವಲ್ಲವೆನ್ನುತ್ತ ಯುಧಿಷ್ಠಿರ ದೂರ ಸರಿಯುತ್ತಾನೆ.
ಅಶ್ವತ್ಥಾಮನು ಹೊರಟು ಹೋಗುತ್ತಾನೆ.

ಸಂಜಯಃ

ದ್ರೌಣಿರ್ಯುಧಿಷ್ಠಿರಂ ದೃಷ್ಟ್ವಾ ಶೈನೇಯೇನಾಭಿರಕ್ಷಿತಮ್ ।
ದ್ರೌಪದೇಯೈಸ್ತಥಾ ಶೂರೈರಭ್ಯವರ್ತತ ಹೃಷ್ಟವತ್ ॥೧॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ಅಶ್ವತ್ಥಾಮನು ಯುಧಿಷ್ಠಿರನನ್ನು ಸಾತ್ಯಕಿಯ ಮತ್ತು ಶೂರರಾದ ದ್ರೌಪದೀಪುತ್ರರ ರಕ್ಷಣೆಯಲ್ಲಿರುವುದನ್ನು ಕಂಡು ಉತ್ಸಾಹದಿಂದ ಅವನ ಕಡೆಗೆ ಬಂದ.

ಕಿರನ್ನಿಷುಗಣಾನ್ ಘೋರಾನ್ ಸ್ವರ್ಣಪುಂಖಾನ್ ಶಿಲಾಶಿತಾನ್ ।
ದರ್ಶಯನ್ ವಿವಿಧಾನ್ ಮಾರ್ಗಾನ್ ಶಿಕ್ಷಾಶ್ಚ ಲಘುಹಸ್ತವತ್ ॥೨॥

ಬಂಗಾರದ ಪುಕ್ಕಉಳ್ಳ ಸಾಣೆ ಹಿಡಿದು ತೀಕ್ಷ್ಣಗೊಳಿಸಿದ ಘೋರವಾದ ಬಾಣ ಸಮೂಹಗಳನ್ನು ಎಸೆಯುತ್ತ ಕೈಚಳಕದಿಂದ ಶಸ್ತ್ರಪಾಂಡಿತ್ಯವನ್ನೂ ನಾನಾ ಬಗೆಯ ವರಸೆಗಳನ್ನೂ ಪ್ರದರ್ಶನ ಮಾಡುತ್ತ ಅಶ್ವತ್ಥಾಮ ಬಂದ.

ತತಃ ಖಂ ಪೂರಯಾಮಾಸ ಶರೈರ್ದಿವ್ಯಾಸ್ತ್ರಮಂತ್ರಿತೈಃ ।
ಯುಧಿಷ್ಠಿರಂ ಚ ಸಮರೇ ಪರ್ಯವಾರಯದಸ್ತ್ರವಿತ್ ॥೩॥

ಅಸ್ತ್ರಜ್ಞನಾದ ಅಶ್ವತ್ಥಾಮ ದಿವ್ಯಾಸ್ತ್ರಮಂತ್ರಪೂರ್ವಕವಾಗಿ ಬಾಣಗಳಿಂದ ಆಕಾಶವನ್ನು ತುಂಬಿಸಿದ ಮತ್ತು ರಣದಲ್ಲಿ ಯುಧಿಷ್ಠಿರನನ್ನು ತಡೆದ.

ದ್ರೌಣಾಯನಿಶರಚ್ಛನ್ನಂ ನ ಪ್ರಾಜ್ಞಾಯತ ಕಿಂಚನ ।
ಬಾಣಭೂತಮಭೂತ್ಸರ್ವಮಾಯೋಧನಶಿರೋ ಮಹತ್ ॥೪॥

ಅಶ್ವತ್ಥಾಮನ ಬಾಣಗಳಿಂದ ಆಚ್ಛಾದಿತವಾಗಿ ಏನೂ ಕಾಣದಂತಾಯಿತು. ಮಹತ್ತಾದ ರಣರಂಗದ ಮುಂಭಾಗವೆಲ್ಲವೂ ಬಾಣಮಯವಾಯಿತು.

ತದ್ಬಾಣಜಾಲಂ ವಿವಿಧಂ ಸ್ವರ್ಣಜಾಲವಿಭೂಷಿತಮ್ ।
ಶುಶುಭೇ ಭರತಶ್ರೇಷ್ಠ ವಿತಾನಮಿವ ವಿಷ್ಠಿತಮ್ ॥೫॥

ರಾಜನೆ, ಬಂಗಾರದ ಆಲಂಕಾರದಿಂದ ಭೂಷಿತವಾದ ನಾನಾ ಬಗೆಯ ಆ ಬಾಣಸಮೂಹವು ಮೇಲ್ಕಟ್ಟಿನಂತೆ ವ್ಯಾಪಿಸಿ ಶೋಭಿಸಿತು.

ತೇನ ಚ್ಛನ್ನೇ ರಣೇ ರಾಜನ್ ಬಾಣಜಾಲೇನ ಭಾಸ್ವತಾ ।
ಅಭ್ರಚ್ಛಾಯೇವ ಸಂಜಜ್ಞೇ ಬಾಣರುದ್ಧೇ ನಭಸ್ತಲೇ ॥೬॥

ರಾಜನೆ, ಹೊಳೆಯುವ ಆ ಬಾಣಸಮೂಹದಿಂದ ರಣರಂಗ ಆಚ್ಛಾದಿತವಾದಾಗ ಅಲ್ಲಿ ಆಕಾಶಪ್ರದೇಶವು ಬಾಣದಿಂದ ತಡೆಯಲ್ಪಟ್ಟಿದ್ದರಿಂದ ಮೋಡ ಕವಿದಂತಾಯಿತು.

ತತ್ರಾಶ್ಚರ್ಯಮಪಶ್ಯಾಮ ಬಾಣಭೂತೇ ತಥಾವಿಧೇ ।
ನ ಸ್ಮ ಸಂಪತತೇ ಭೂತಂ ಕಿಂಚಿದೇವಾಂತರಿಕ್ಷಗಮ್ ॥೭॥

ಬಾಣಸಮೂಹದಿಂದ ಆಕಾಶ ಆಚ್ಛಾದಿತವಾದಾಗ ಒಂದು ಆಶ್ಚರ್ಯವನ್ನು ಕಂಡೆವು. ಆ ಪ್ರದೇಶದಲ್ಲಿ ಅಂತರಿಕ್ಷಚಾರಿ ಪಕ್ಷಿಗಳು ಯಾವುವೂ ಕೆಳಗೆ ಬಾರದಂತಾಯಿತು.

ಸಾತ್ಯಕಿರ್ಯತಮಾನಸ್ತು ಧರ್ಮರಾಜಶ್ಚ ಪಾಂಡವಃ ।
ತಥೇತರಾಣಿ ಸೈನ್ಯಾನಿ ನ ಸ್ಮ ಚಕ್ರುಃ ಪರಾಕ್ರಮಮ್ ॥೮॥

ಪ್ರಯತ್ನಪಡುತ್ತಿದ್ದ ಸಾತ್ಯಕಿಗಾಗಲಿ, ಯುಧಿಷ್ಠಿರನಿಗಾಗಲಿ, ಬೇರೆ ಸೈನ್ಯಗಳಿಗಾಗಲಿ ಏನೂ ಪರಾಕ್ರಮವನ್ನು ತೋರಿಸಲಾಗದಂತಾಯಿತು.

ಲಾಘವಂ ದ್ರೋಣಪುತ್ರಸ್ಯ ದೃಷ್ಟ್ವಾ ತತ್ರ ಮಹಾರಥಾಃ ।
ವ್ಯಸ್ಮಯಂತ ಮಹಾರಾಜ ನ ಚೈನಂ ಪ್ರತಿವೀಕ್ಷಿತುಮ್ ॥೯॥

ಶೇಕುಸ್ತೇ ಸರ್ವರಾಜಾನಸ್ತಪಂತಮಿವ ಭಾಸ್ಕರಮ್ ॥೧೦॥

ಅಶ್ವತ್ಥಾಮನ ಕೈಚಳಕವನ್ನು ಕಂಡು ಮಹಾರಥರು ಆಶ್ಚರ್ಯಪಟ್ಟರು. ಮಹಾರಾಜ, ಉರಿವ ಸೂರ್ಯನಂತಿದ್ದ ಆ ಅಶ್ವತ್ಥಾಮನನ್ನು ದಿಟ್ಟಿಸಿ ನೋಡಲು ಕೂಡ ಯಾವ ರಾಜರೂ ಶಕ್ತರಾಗಲಿಲ್ಲ.

ವಧ್ಯಮಾನೇ ತತಃ ಸೈನ್ಯೇ ದ್ರೌಪದೇಯಾ ಮಹಾರಥಾಃ ।
ಸಾತ್ಯಕಿರ್ಧರ್ಮರಾಜಶ್ಚ ಪಾಂಚಾಲಾಶ್ಚಾಪಿ ಸಂಗತಾಃ ॥೧೧॥
ತ್ಯಕ್ತ್ವಾ ಮೃತ್ಯುಭಯಂ ಘೋರಂ ದ್ರೌಣಾಯನಿಮುಪಾದ್ರವನ್ ॥೧೨॥

ಅಶ್ವತ್ಥಾಮನಿಂದ ಪಾಂಡವಸೈನ್ಯ ಹೊಡೆಸಿಕೊಳ್ಳುವಾಗ ಮಹಾರಥರಾದ ದ್ರೌಪದೀಪುತ್ರರೂ ಸಾತ್ಯಕಿಯೂ ಧರ್ಮರಾಜನೂ ಪಾಂಚಾಲರೂ ಮೃತ್ಯುಭಯವನ್ನು ತೊರೆದು ಎಲ್ಲರೂ ಒಂದಾಗಿ ಸೇರಿ ಘೋರಸ್ವರೂಪನಾದ ಅಶ್ವತ್ಥಾಮನನ್ನು ಇದಿರಿಸಿದರು.

ಸಾತ್ಯಕಿಃ ಪಂಚವಿಂಶತ್ಯಾ ದ್ರೌಣಿಂ ವಿದ್ಧ್ವಾ ಶಿಲೀಮುಖೈಃ ।
ಪುನರ್ವಿವ್ಯಾಧ ನಾರಾಚೈಃ ಸಪ್ತಭಿಃ ಸ್ವರ್ಣಭೂಷಿತೈಃ ॥೧೩॥

ಸಾತ್ಯಕಿಯು ಇಪ್ಪತ್ತೈದು ಬಾಣಗಳಿಂದ ಅಶ್ವತ್ಥಾಮನನ್ನು ಹೊಡೆದು ಪುನಃ ಬಂಗಾರದಿಂದ ಅಲಂಕೃತವಾದ ಏಳು ಬಾಣಗಳಿಂದ ಹೊಡೆದ.

ಯುಧಿಷ್ಠಿರಸ್ತ್ರಿಸಪ್ತತ್ಯಾ ಪ್ರತಿವಿಂಧ್ಯಶ್ಚ ಸಪ್ತಭಿಃ ।
ಶ್ರುತಕರ್ಮಾ ತ್ರಿಭಿರ್ಬಾಣೈಃ ಶ್ರುತಕೀರ್ತಿಸ್ತು ಸಪ್ತಭಿಃ ॥೧೪॥

ಸುತಸೋಮಶ್ಚ ನವಭಿಃ ಶತಾನೀಕಶ್ಚ ಸಪ್ತಭಿಃ ।
ಅನ್ಯೇ ಚ ಬಹವಃ ಶೂರಾ ವಿವ್ಯಧುಸ್ತಂ ಸಮಂತತಃ ॥೧೫॥

ಯುಧಿಷ್ಠಿರನು ಎಪ್ಪತ್ತಮೂರು ಬಾಣಗಳಿಂದ, ಪ್ರತಿವಿಂಧ್ಯನು ಏಳು ಬಾಣಗಳಿಂದ, ಶ್ರುತಕರ್ಮನು ಮೂರು ಬಾಣಗಳಿಂದ, ಶ್ರುತಕೀರ್ತಿ ಏಳು ಬಾಣಗಳಿಂದ, ಸುತಸೋಮನು ಒಂಬತ್ತು ಬಾಣಗಳಿಂದ, ಶತಾನೀಕನು ಏಳು ಬಾಣಗಳಿಂದ ಅಶ್ವತ್ಥಾಮನನ್ನು ಹೊಡೆದರು. ಬೇರೆ ಬಹುಶೂರರೂ ಎಲ್ಲ ಕಡೆಗಳಿಂದ ಅವನನ್ನು ಹೊಡೆದರು.

ಸ ತು ಕ್ರುದ್ಧಸ್ತತೋ ರಾಜನ್ನಾಶೀವಿಷ ಇವ ಶ್ವಸನ್ ।
ಸಾತ್ಯಕಿಂ ಪಂಚವಿಂಶತ್ಯಾ ಪ್ರಾವಿಧ್ಯತ ಶಿಲಾಶಿತೈಃ ॥೧೬॥

ಶ್ರುತಕೀರ್ತಿಂ ಚ ನವಭಿಃ ಸುತಸೋಮಂ ಚ ಪಂಚಭಿಃ ।
ಸಪ್ತಭಿಃ ಶ್ರುತಕರ್ಮಾಣಂ ಪ್ರತಿವಿಂಧ್ಯಂ ತ್ರಿಭಿಃ ಶರೈಃ ॥೧೭॥
ಶತಾನೀಕಂ ಚ ನವಭಿರ್ಧರ್ಮಪುತ್ರಂ ಚ ಸಪ್ತಭಿಃ ॥೧೮॥

ಆಗ, ರಾಜನೆ, ಕ್ರುದ್ಧನಾದ ಅಶ್ವತ್ಥಾಮನು ಸರ್ಪದಂತೆ ಭುಸುಗುಟ್ಟುತ್ತ ಸಾತ್ಯಕಿಯನ್ನು ಸಾಣೆಹಿಡಿದ ಇಪ್ಪತ್ತೈದು ಬಾಣಗಳಿಂದ, ಶ್ರುತಕೀರ್ತಿಯನ್ನು ಒಂಬತ್ತು ಬಾಣಗಳಿಂದ, ಸುತಸೋಮನನ್ನು ಐದು ಬಾಣಗಳಿಂದ, ಶ್ರುತಕರ್ಮನನ್ನು ಏಳು ಬಾಣಗಳಿಂದ, ಪ್ರತಿವಿಂಧ್ಯನನ್ನು ಮೂರು ಬಾಣಗಳಿಂದ, ಶತಾನೀಕನನ್ನು ಒಂಬತ್ತು ಬಾಣಗಳಿಂದ, ಯುಧಿಷ್ಠಿರನನ್ನು ಐದು ಬಾಣಗಳಿಂದ ಹೊಡೆದ.

ಅಥೇತರಾಂಸ್ತತಃ ಶೂರಾನ್ ದ್ವಾಭ್ಯಾಂ ದ್ವಾಭ್ಯಾಮತಾಡಯತ್ ।
ಶ್ರುತಕೀರ್ತೇಸ್ತಥಾ ಚಾಪಂ ಚಿಚ್ಛೇದ ನಿಶಿತೈಃ ಶರೈಃ ॥೧೯॥

ಬೇರೆ ಶೂರರನ್ನು ಅಶ್ವತ್ಥಾಮನು ಎರಡೆರಡು ಬಾಣಗಳಿಂದ ಹೊಡೆದ. ಶ್ರುತಕೀರ್ತಿಯ ಬಿಲ್ಲನ್ನೂ ಹರಿತವಾದ ಬಾಣಗಳಿಂದ ಕತ್ತರಿಸಿದ.

ಅಥಾನ್ಯದ್ಧನುರಾದಾಯ ಶ್ರುತಕೀರ್ತಿರ್ಮಹಾರಥಃ ।
ದ್ರೌಣಾಯನಿಂ ತ್ರಿಭಿರ್ವಿದ್ಧ್ವಾ ವಿವ್ಯಾಧಾನ್ಯೈಃ ಶಿತೈಃ ಶರೈಃ ॥೨೦॥

ಮಹಾರಥನಾದ ಶ್ರುತಕೀರ್ತಿ, ಇನ್ನೊಂದು ಬಿಲ್ಲನ್ನೆತ್ತಿಕೊಂಡು ಮೂರು ಹರಿತವಾದ ಬಾಣಗಳಿಂದ ಅಶ್ವತ್ಥಾಮನನ್ನು ಹೊಡೆದು, ಬೇರೆ ಬಾಣಗಳಿಂದಲೂ ಹೊಡೆದ.

ತತೋ ದ್ರೌಣಿರ್ಮಹಾರಾಜ ಶರವರ್ಷೇಣ ಮಾರಿಷ ।
ಛಾದಯಾಮಾಸ ತತ್ ಸೈನ್ಯಂ ಸಮಂತಾತ್ ಭರತರ್ಷಭ ॥೨೧॥

ರಾಜನೆ, ಆಗ ಅಶ್ವತ್ಥಾಮನು ಆ ಪಾಂಡವಸೈನ್ಯವನ್ನು ಬಾಣಗಳ ಸುರಿಮಳೆಯಿಂದ ಎಲ್ಲಕಡೆ ಆಚ್ಛಾದಿಸಿದ.

ತತಃ ಪುನರಮೇಯಾತ್ಮಾ ಧರ್ಮರಾಜಸ್ಯ ಕಾರ್ಮುಕಮ್ ।
ದ್ರೌಣಿಶ್ಚಿಚ್ಛೇದ ವಿಹಸನ್ ವಿವ್ಯಾಧ ಚ ಶರೈಸ್ತ್ರಿಭಿಃ ॥೨೨॥

ಪುನಃ ಅಮೇಯಾತ್ಮನಾದ ಅಶ್ವತ್ಥಾಮನು ಯುಧಿಷ್ಠಿರನ ಬಿಲ್ಲನ್ನು ಕಡಿದ. ನಗುತ್ತ ಮೂರು ಬಾಣಗಳಿಂದ ಹೊಡೆದ.

ತತೋ ಧರ್ಮಸುತೋ ರಾಜನ್ ಪ್ರಗೃಹ್ಯಾನ್ಯನ್ಮಹದ್‌ಧನುಃ ।
ದ್ರೌಣಿಂ ವಿವ್ಯಾಧ ಸಪ್ತತ್ಯಾ ಬಾಹ್ವೋರುರಸಿ ಚಾರ್ದಯತ್ ॥೨೩॥

ರಾಜನೆ, ಯುಧಿಷ್ಠಿರನು ಇನ್ನೊಂದು ದೊಡ್ಡ ಧನುಸ್ಸನ್ನೆತ್ತಿಕೊಂಡು ಅಶ್ವತ್ಥಾಮನನ್ನು ಎಪ್ಪತ್ತು ಬಾಣಗಳಿಂದ ಹೊಡೆದ. ಎರಡು ತೋಳುಗಳಲ್ಲಿಯೂ ಎದೆಯಲ್ಲಿಯೂ ಪೀಡಿಸಿದ.

ಸಾತ್ಯಕಿಸ್ತು ತತಃ ಕ್ರುದ್ಧೋ ದ್ರೌಣೇಃ ಪ್ರಹರತೋ ರಣೇ ।
ಅರ್ಧಚಂದ್ರೇಣ ತೀಕ್ಷ್ಣೇನ ಧನುಶ್ಚಿತ್ತ್ವಾ ನನದ್ ಭೃಶಮ್ ॥೨೪॥

ಸಾತ್ಯಕಿಯು ಕ್ರುದ್ಧನಾಗಿ, ರಣದಲ್ಲಿ ಅಶ್ವತ್ಥಾಮನು ಹೊಡೆಯುವಾಗ, ತೀಕ್ಷ್ಣವಾದ ಅರ್ಧಚಂದ್ರ ಬಾಣದಿಂದ ಅವನ ಬಿಲ್ಲನ್ನು ಕಡಿದು ಚೆನ್ನಾಗಿ ಗರ್ಜಿಸಿದ.

ಛಿನ್ನಧನ್ವಾ ತತೋ ದ್ರೌಣಿಃ ಶಕ್ತ್ಯಾ ಶಕ್ತಿಮತಾಂ ವರಃ ।
ಸಾರಥಿಂ ಪಾತಯಾಮಾಸ ಶೈನೇಯಸ್ಯ ರಥಾದ್ ದ್ರುತಮ್ ॥೨೫॥

ಬಿಲ್ಲು ಕಡಿದುಕೊಂಡಾಗ ಶಕ್ತಿವಂತರಲ್ಲಿ ಶ್ರೇಷ್ಠನಾದ ಅಶ್ವತ್ಥಾಮನು ಶಕ್ತ್ಯಾಯುಧದಿಂದ ಸಾತ್ಯಕಿಯ ಸಾರಥಿಯನ್ನು ಬೇಗನೆ ರಥದಿಂದ ಕೆಡವಿದ.

ಅಥಾನ್ಯದ್ಧನುರಾದಾಯ ದ್ರೋಣಪುತ್ರಃ ಪ್ರತಾಪವಾನ್ ।
ಶೈನೇಯಂ ಶರವರ್ಷೇಣ ಛಾದಯಾಮಾಸ ಭಾರತ ॥೨೬॥

ಪ್ರತಾಪಶಾಲಿ ಅಶ್ವತ್ಥಾಮನು ಇನ್ನೊಂದು ಬಿಲ್ಲನ್ನೆತ್ತಿಕೊಂಡು ಸಾತ್ಯಕಿಯನ್ನು ಬಾಣಗಳ ಮಳೆಯಿಂದ ಆಚ್ಛಾದಿಸಿದ.

ತಸ್ಯಾಶ್ವಾಃ ಪ್ರದ್ರುತಾಃ ಸಂಖೇ ಪತಿತೇ ರಥಸಾರಥೌ ।
ತತ್ರ ತತ್ರೈವ ಧಾವಂತಃ ಸಮದೃಶ್ಯಂತ ಭಾರತ ॥೨೭॥

ರಾಜನೆ, ಸಾತ್ಯಕಿಯ ಕುದುರೆಗಳು, ರಥಸಾರಥಿ ಹತನಾದಾಗ, ಓಡಿಹೋಗಿ ಅಲ್ಲಲ್ಲಿ ವೇಗವಾಗಿ ಓಡುತ್ತಿರುವುದು ಕಂಡುಬಂದಿತು.

ಯುಧಿಷ್ಠಿರಪುರೋಗಾಸ್ತೇ ದ್ರೌಣಿಂ ಶಸ್ತ್ರಭೃತಾಂ ವರಮ್ ।
ಅಭ್ಯವರ್ಷಂತ ವೇಗೇನ ವಿಸೃಜಂತಃ ಶಿತಾನ್ ಶರಾನ್ ॥೨೮॥

ಯುಧಿಷ್ಠಿರ ಮುಂತಾದವರು ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಅಶ್ವತ್ಥಾಮನ ಮೇಲೆ ವೇಗದಿಂದ ಹರಿತವಾದ ಬಾಣಗಳನ್ನೆಸೆಯುತ್ತ ಬಾಣಗಳ ಮಳೆಗರೆದರು.

ಆಗಚ್ಛಮಾನಾಂಸ್ತಾನ್ ದೃಷ್ಟ್ವಾ ಕ್ರುದ್ಧರೂಪಾನ್ ಪರಂತಪಃ ।
ಪ್ರಹಸನ್ ಪ್ರತಿಜಗ್ರಾಹ ದ್ರೋಣಪುತ್ರೋ ಮಹಾರಣೇ ॥೨೯॥

ಶತ್ರುನಾಶಕನಾದ ಅಶ್ವತ್ಥಾಮನು ಮಹಾರಣದಲ್ಲಿ ತನ್ನ ಕಡೆಗೆ ಕ್ರುದ್ಧರಾಗಿ ಬರುತ್ತಿದ್ದ ಯುಧಿಷ್ಠಿರ ಮುಂತಾದವರನ್ನು ಕಂಡು ನಗುತ್ತ ಇದಿರಿಸಿದ.

ತತಃ ಶರಶತಜ್ವಾಲಃ ಸೇನಾಕಕ್ಷಂ ಮಹಾರಥಃ ।
ದ್ರೌಣಿರ್ದದಾಹ ಸಮರೇ ಕಕ್ಷಮಗ್ನಿರ್ಯಥಾ ವನೇ ॥೩೦॥

ಆಗ ಕಾಡಿನಲ್ಲಿ ಕಾಳ್ಗಿಚ್ಚು ಕಾಡನ್ನು ಸುಡುವಂತೆ, ನೂರಾರು ಬಾಣ ಜ್ವಾಲೆಗಳಿಂದ ಯುಕ್ತನಾದ ಮಹಾರಥ ಅಶ್ವತ್ಥಾಮನು ಸೇನೆ ಎಂಬ ಕಾಡನ್ನು ರಣದಲ್ಲಿ ಸುಟ್ಟುಬಿಟ್ಟ.

ತದ್ಬಲಂ ಪಾಂಡುಪುತ್ರಸ್ಯ ದ್ರೋಣಪುತ್ರಪ್ರತಾಪಿತಮ್ ।
ಚುಕ್ಷುಭೇ ಭರತಶ್ರೇಷ್ಠ ತಿಮಿನೇವ ನದೀಮುಖಮ್ ॥೩೧॥

ರಾಜನೆ, ಅಶ್ವತ್ಥಾಮನಿಂದ ಸಂತಾಪಕ್ಕೊಳಗಾದ ಆ ಪಾಂಡವಸೈನ್ಯವು ತಿಮಿಂಗಿಲಗಳಿಂದ ಕ್ಷೋಭೆಗೊಳ್ಳುವ ನದೀ ಸಾಗರಸಂಗಮ ಪ್ರದೇಶದಂತೆ ಕ್ಷೋಭೆಗೊಂಡಿತು.

ದೃಷ್ಟ್ವಾ ತೇ ಚ ಮಹಾರಾಜ ದ್ರೋಣಪುತ್ರಪರಾಕ್ರಮಮ್ ।
ನಿಹತಾನ್ ಮೇನಿರೇ ಸರ್ವಾನ್ ಪಾಂಡೂನ್ ದ್ರೋಣಸುತೇನ
ವೈ ॥೩೨॥

ಮಹಾರಾಜ, ಅಶ್ವತ್ಥಾಮನ ಪರಾಕ್ರಮವನ್ನು ಕಂಡು ಪಾಂಡವಯೋಧರು ಅಶ್ವತ್ಥಾಮನಿಂದ ಪಾಂಡವರೆಲ್ಲರೂ ಹತರಾದರೆಂದೇ ತಿಳಿದರು.

ಯುಧಿಷ್ಠಿರಸ್ತು ತ್ವರಿತೋ ದ್ರೋಣಶಿಷ್ಯೋ ಮಹಾರಥಃ ।
ಅಬ್ರವೀದ್ ದ್ರೋಣಪುತ್ರಂ ತು ರೋಷಾಮರ್ಷಸಮನ್ವಿತಃ ॥೩೩॥

ದ್ರೋಣಶಿಷ್ಯ ಮಹಾರಥನಾದ ಯುಧಿಷ್ಠಿರನು ರೋಷ, ಅಸಹನೆಗಳಿಂದ ಯುಕ್ತನಾಗಿ ಬೇಗನೆ ಅಶ್ವತ್ಥಾಮನಿಗೆ ನುಡಿದ.

ನೈವ ನಾಮ ತವ ಪ್ರೀತಿರ್ನೈವ ನಾಮ ಕೃತಜ್ಞತಾ ।
ಯತಸ್ತ್ವಂ ಪುರುಷವ್ಯಾಘ್ರ ಮಾಮೇವಾದ್ಯ ಜಿಘಾಂಸಸಿ ॥೩೪॥

ನಿನಗೆ ನಮ್ಮಲ್ಲಿ ಪ್ರೀತಿ ಇಲ್ಲ ಕೃತಜ್ಞತಾ ಭಾವವಿಲ್ಲ. ಏಕೆಂದರೆ, ಪುರುಷ ಶ್ರೇಷ್ಠನೇ! ನೀನು ನನ್ನನ್ನೇ ಕೊಲ್ಲಲು ಬಯಸುವೆ.

ಬ್ರಾಹ್ಮಣೇನ ತಪಃ ಕಾರ್ಯಂ ದಾನಮಧ್ಯಯನಂ ತಥಾ ।
ಕ್ಷತ್ರಿಯೇಣ ಧನುರ್ನಾಮ್ಯಂ ಸ ಭವಾನ್ ಬ್ರಾಹ್ಮಣಬ್ರುವಃ ॥೩೫॥

ಬ್ರಾಹ್ಮಣನು ತಪಸ್ಸು ದಾನ ಅಧ್ಯಯನಗಳನ್ನು ನಡೆಸಬೇಕು. ಕ್ಷತ್ರಿಯನು ಬಿಲ್ಲನ್ನು ಬಗ್ಗಿಸಬೇಕು. ಬ್ರಾಹ್ಮಣಕರ್ಮವನ್ನು ಬಿಟ್ಟು ಕ್ಷತ್ರಿಯಕರ್ಮವನ್ನು ಮಾಡುವುದರಿಂದ ನೀನು ಹೆಸರಿಗೆ ಮಾತ್ರ ಬ್ರಾಹ್ಮಣ.

ಮಿಷತಸ್ತೇ ಮಹಾಬಾಹೋ ಜೇಷ್ಯಾಮಿ ಯುಧಿ ಕೌರವಾನ್ ।
ಕುರುಷ್ವ ಸಮರೇ ಕರ್ಮ ಬ್ರಹ್ಮಬಂಧುರಸಿ ಧ್ರುವಮ್ ॥೩೬॥

ಮಹಾಬಾಹುವೆ, ನೀನು ನೋಡುತ್ತಿರುವಂತೆಯೆ ನಾನು ರಣದಲ್ಲಿ ಕೌರವರನ್ನು ಗೆಲ್ಲುತ್ತೇನೆ. ರಣದಲ್ಲಿ ನೀನು ಕ್ಷಾತ್ರಕರ್ಮವನ್ನು ಮಾಡುತ್ತಿರು. ನಿಶ್ಚಯವಾಗಿ ನೀನು ಹೆಸರಿಗೆ ಮಾತ್ರ ಬ್ರಾಹ್ಮಣ.

ಏವಮುಕ್ತೋ ಮಹಾರಾಜ ದ್ರೋಣಪುತ್ರಃ ಸ್ಮಯನ್ನಿವ ।
ಯುಕ್ತತ್ವಂ ತಚ್ಚ ಸಂಚಿಂತ್ಯ ನೋತ್ತರಂ ಕಿಂಚಿದಬ್ರವೀತ್ ॥೩೭॥

ಮಹಾರಾಜ, ಯುಧಿಷ್ಠಿರ ಹೀಗೆ ಹೇಳಿದಾಗ ಅಶ್ವತ್ಥಾಮ ನಸುನಕ್ಕು, ಯುಧಿಷ್ಠಿರ ಹೇಳಿದ್ದು ಯುಕ್ತವೇ ಎಂದು ಆಲೋಚಿಸಿ ಏನೂ ಉತ್ತರ ನೀಡಲಿಲ್ಲ.

ಅನುಕ್ತಾ ಚ ತತಃ ಕಿಂಚಿಚ್ಛರವರ್ಷೇಣ ಪಾಂಡವಾನ್ ।
ಛಾದಯಾಮಾಸ ಸಮರೇ ಕ್ರುದ್ಧೋಽಂತಕ ಇವ ಪ್ರಜಾಃ ॥೩೮॥

ಏನೂ ಉತ್ತರಿಸದೆ ಬಾಣಗಳ ಮಳೆಯಿಂದ ಪಾಂಡವರನ್ನು ರಣದಲ್ಲಿ ಆಚ್ಛಾದಿಸಿದ, ಕ್ರುದ್ಧನಾದ ಯಮನು ಪ್ರಾಣಿಗಳನ್ನು ಕೊಲ್ಲುವಂತೆ.

ಸಂಛಾದ್ಯಮಾನಸ್ತು ತದಾ ದ್ರೋಣಪುತ್ರೇಣ ಮಾರಿಷ ।
ಪಾಥೋ೯ಽಪಯಾತಃ ಶೀಘ್ರಂ ವೈ ವಿಹಾಯ ಮಹತೀಂ
ಚಮೂಮ್ ॥೩೯॥

ಅಶ್ವತ್ಥಾಮನು ತನ್ನನ್ನು ಬಾಣಗಳಿಂದ ಆಚ್ಛಾದಿಸಿದಾಗ ಯುಧಿಷ್ಠಿರನು ಬೇಗನೆ ಮಹಾಸೈನ್ಯವನ್ನು ಬಿಟ್ಟು ದೂರ ನಡೆದ.

ಅಪಯಾತೇ ತತಸ್ತಸ್ಮಿನ್ ಧರ್ಮಪುತ್ರೇ ಯುಧಿಷ್ಠಿರೇ ।
ದ್ರೋಣಪುತ್ರಸ್ತತೋ ರಾಜನ್ ಪ್ರತ್ಯಾಗಾತ್ ಸ ಮಹಾಮನಾಃ ॥೪೦॥

ಯುಧಿಷ್ಠಿರ ಹೊರಟುಹೋದಾಗ, ರಾಜನೇ! ಮಹಾಬುದ್ಧಿಶಾಲಿ ಅಶ್ವತ್ಥಾಮನೂ ಕೂಡ ಹೊರಟುಹೋದ.

ತತೋ ಯುಧಿಷ್ಠಿರೋ ರಾಜಾ ತ್ಯಕ್ತ್ವಾ ದ್ರೌಣಿಂ ಮಹಾಹವೇ ।
ಪ್ರಯಯೌ ತಾವಕಂ ಸೈನ್ಯಂ ಯುಕ್ತಃ ಕ್ರೂರಾಯ ಕರ್ಮಣೇ ॥೪೧॥

ಬಳಿಕ ರಾಜಾ ಯುಧಿಷ್ಠಿರನು ಮಹಾರಣದಲ್ಲಿ ಅಶ್ವತ್ಥಾಮನನ್ನು ಬಿಟ್ಟು ನಿನ್ನ ಸೈನ್ಯದ ಕಡೆಗೆ ಕ್ರೂರಸಂಹಾರ ಕರ್ಮಾಸಕ್ತನಾಗಿ ನಡೆದ.

ಸಾಮಾನ್ಯವಾಗಿ ನೋಡಿದರೆ ಧರ್ಮಶಾಸ್ತ್ರ ಹೇಳುವಂತೆ ಅಶ್ವತ್ಥಾಮನು ಬ್ರಾಹ್ಮಣ. ಧರ್ಮಭ್ರಷ್ಟನಾದ ಬ್ರಾಹ್ಮಣ ಎನ್ನುವುದು ಅಯುಕ್ತವಲ್ಲ, ಯುಕ್ತವೆ. ಆದರೆ ವಿಶೇಷಸಂದರ್ಭದಲ್ಲಿ ಬ್ರಾಹ್ಮಣನು ಮಾತ್ರವಲ್ಲದೆ ಎಲ್ಲ ವರ್ಣದವರೂ ಕ್ಷಾತ್ರಧರ್ಮವನ್ನು ಅನುಷ್ಠಾನ ಮಾಡುವುದು ತಪ್ಪಾಗುವುದಿಲ್ಲ. ಸಾತ್ವಿಕರಾದ

ಪಾಂಡವರ ಮೇಲೆ ಕೈಮಾಡುವುದು ಮಾತ್ರ ತಪ್ಪೇ. ಅದರಿಂದ, ಅಶ್ವತ್ಥಾಮ ನಸುನಕ್ಕು ಸುಮ್ಮನಾದ, ಉತ್ತರ ಕೊಡಲಿಲ್ಲ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ದ್ವಿಪಂಚಾಶೋऽಧ್ಯಾಯಃ ॥೫೨॥

❖

ಮಹಾಭಾರತತಾತ್ಪರ್ಯನಿರ್ಣಯ

ಸಂಶಪ್ತಕೈಸ್ತತ್ರ ಸಂಯುದ್ಧ್ಯಮಾನಂ
ಸಮಾಹ್ವಯಾಮಾಸ ಸುರೇಶಸೂನುಮ್ ।
ಸ ಬಾಣಯುಕ್ತಂ ಭುಜಗೇಂದ್ರಕಲ್ಪ
ಮುನ್ನಮ್ಯ ಬಾಹುಂ ಯುಧಯೇ ಸುಶೂರಮ್ ॥೪೯॥

ಬಾಣಯುಕ್ತವಾದ, ದೊಡ್ಡ ಹಾವಿನಂಥ ತೋಳನ್ನೆತ್ತಿಕೊಂಡು ಅಶ್ವತ್ಥಾಮ ಸಂಶಪ್ತಕರೊಡನೆ ಯುದ್ಧ ಮಾಡುತ್ತಿದ್ದ ಮಹಾಶೂರ ಅರ್ಜುನನನ್ನು ಯುದ್ಧಕ್ಕೆ ಕರೆದ.

ಪಾರ್ಥಃ ಸಂಶಪ್ತಕಗಣೈಃ ಸಂಸೃಷ್ಟಃ ಸಮರಾರ್ಥಿಭಿಃ ।
ಆಹೂತೋ ದ್ರೌಣಿನಾ ಚೈವ ಕಾರ್ಯಂ ಕೃಷ್ಣಮಪೃಚ್ಛತ ।
ಚೋದಯಾಮಾಸ ಚ ಹಯಾನ್ ಕೃಷ್ಣೋ ದ್ರೌಣಿರಥಂ ಪ್ರತಿ ॥೫೦॥

ಯುದ್ಧಾರ್ಥಿಗಳಾದ ಸಂಶಪ್ತಕರೊಡನೆ ಅರ್ಜುನ ಯುದ್ಧ ನಿರತನಾಗಿದ್ದ ಅಶ್ವತ್ಥಾಮನಿಂದಲೂ ಕರೆಬಂದಾಗ ಕೃಷ್ಣನನ್ನು ಕೇಳಿದ: 'ಈಗ ನಾನೇನು ಮಾಡಲಿ?' ಎಂದು. ಶ್ರೀಕೃಷ್ಣ ಅಶ್ವತ್ಥಾಮನ ರಥದ ಕಡೆಗೆ ರಥವನ್ನು ನಡೆಸಿದ.

ಉಭೌ ಚ ತಾವಸ್ತ್ರವಿದಾಂ ಪ್ರಧಾನೌ
ಮಹಾಬಲೌ ಸಂಯತಿ ಜಾತದರ್ಪೌ ।
ಶರೈಃ ಸಮಸ್ತಾಃ ಪ್ರದಿಶೋ ದಿಶಶ್ಚ
ದ್ರೌಣೀಂದ್ರಸೂನೂ ತಿಮಿರಾಃ ಪ್ರಚಕ್ರತುಃ ॥೫೧॥

ಅಶ್ವತ್ಥಾಮ ಅರ್ಜುನರು ಇಬ್ಬರೂ ಅಸ್ತ್ರವೇತ್ತರಲ್ಲಿ ಅಗ್ರಗಣ್ಯರು. ಮಹಾಬಲಿಷ್ಠರು. ಯುದ್ಧದಲ್ಲಿ ದರ್ಪಹೊಂದಿದವರು. ಬಾಣಗಳಿಂದ ಎಲ್ಲ ದಿಕ್ಕು ವಿದಿಕ್ಕುಗಳನ್ನೂ ಕತ್ತಲು ಕವಿಸಿದರು.

ದ್ರೌಣಿಸ್ತದಾ ಸ್ಯಂದನವಾಜಿರೋಮ
ಸ್ವರೋಮಕೂಪಧ್ವಜಕಾರ್ಮುಕೇಭ್ಯಃ ।
ಶರಾನಮೋಘಾನ್ ಸತತಂ ಸೃಜಾನೋ
ಬಬಂಧ ಪಾರ್ಥಂ ಶರಪಂಜರೇಣ ॥೫೨॥

ಅಶ್ವತ್ಥಾಮ ತನ್ನ ರಥ, ಕುದುರೆಗಳ ರೋಮಕೂಪ ತನ್ನ ರೋಮಕೂಪ ಧ್ವಜ ಬಿಲ್ಲು ಈ ಎಲ್ಲೆಡೆಗಳಿಂದಲೂ ಅಮೋಘವಾದ ಬಾಣಗಳನ್ನು ಸತತವಾಗಿ ಪ್ರಯೋಗಿಸುತ್ತ ಅರ್ಜುನನನ್ನು ಬಾಣಗಳ ಪಂಜರದಲ್ಲಿ ಬಂಧಿಸಿದ.

ತಸ್ಮಿನ್ ನಿಬದ್ಧೇ ಹರಿರಪ್ರಮೇಯೋ
ವಿಬೋಧಯಾಮಾಸ ಸುರೇಂದ್ರಸೂನುಮ್ ।
ಆಲಿಂಗನೇನಾಸ್ಯ ದದೌ ಬಲಂ ಚ
ಸ ಉತ್ಥಿತೋಸ್ತ್ರಾಣ್ಯಮುಚನ್ಮಹಾಂತಿ ॥೫೩॥

ಅರ್ಜುನ ಹೀಗೆ ಬಾಣಗಳ ಪಂಜರದಲ್ಲಿ ಬದ್ಧನಾದಾಗ ಅಪ್ರಮೇಯನಾದ ಶ್ರೀಕೃಷ್ಣ ಅವನನ್ನು ಎಚ್ಚರಿಸಿದ. ಆಲಿಂಗನದಿಂದ ಅವನಿಗೆ ಬಲವನ್ನಿತ್ತ. ಅವನು ಎದ್ದು ಮಹಾ ಅಸ್ತ್ರಗಳನ್ನು ಪ್ರಯೋಗಿಸಿದ.

ನಿವಾರ್ಯ ತಾನ್ಯಸ್ತ್ರವರೈರ್ಗುರೋಃ ಸುತ-
ಶ್ಚಿಚ್ಛೇದ ಚ ಜ್ಯಾಂ ಯುಧಿ ಗಾಂಡಿವಸ್ಯ ।
ವವರ್ಷ ಪಾರ್ಥಂ ಚ ಶರೈರಥಾನ್ಯಾ
ಜ್ಯಾSSಸೀತ್ ತಯಾ ಗಾಂಡಿವಂ ಸೋಪ್ಯಯುಂಕ್ತ ॥೫೪॥

ಅಶ್ವತ್ಥಾಮ ಆ ಅಸ್ತ್ರಗಳನ್ನು ಉತ್ತಮ ಅಸ್ತ್ರಗಳಿಂದ ತಡೆದು ಗಾಂಡೀವದ ಹೆದೆಯನ್ನು ಕತ್ತರಿಸಿದ ಮತ್ತು ಅರ್ಜುನನ ಮೇಲೆ ಬಾಣಗಳ ಮಳೆಯನ್ನೂ ಸುರಿಸಿದ. ಆಗ ಕಡಿದ ಹೆದೆ ಮೊದಲಿನಂತೆಯೇ ಆಯಿತು. ಅರ್ಜುನ ಹೆದೆಯನ್ನು ತಿರುಗಿ ಗಾಂಡೀವಕ್ಕೆ ಏರಿಸಿದ.

ತತಃ ಶರೇಣ ಕುಪಿತಃ ಶಿತೇನ ದ್ರೌಣಿಸಾರಥೇಃ ।
ಶಿರೋ ಜಹಾರ ಕೌಂತೇಯಃ ಸಾರಥ್ಯಂ ಸೋಽಕರೋತ್ ಸ್ವಯಮ್॥೫೫

ಬಳಿಕ ಕುಪಿತನಾದ ಅರ್ಜುನ ಹರಿತವಾದ ಬಾಣದಿಂದ ಅಶ್ವತ್ಥಾಮನ ಸಾರಥಿಯ ತಲೆಯನ್ನು ಕತ್ತರಿಸಿದ. ಅಶ್ವತ್ಥಾಮ ತಾನೇ ಸಾರಥ್ಯವನ್ನೂ ಮಾಡ ತೊಡಗಿದ.

ಶರಾನ್ ವಿಸೃಜತಾ ತೇನ ಸಾರಥ್ಯಮಪಿ ಕುರ್ವತಾ ।
ಶರಕೂಟೇನ ಪಾರ್ಥಃ ಸ ಪುನರ್ಬದ್ಧೋ ದ್ವಿಜನ್ಮನಾ ॥೫೬॥

ಅಶ್ವತ್ಥಾಮನು ಬಾಣಪ್ರಯೋಗವನ್ನೂ ಮಾಡುತ್ತ ತಾನೇ ಸಾರಥ್ಯವನ್ನೂ ಮಾಡುತ್ತ ಬಾಣಸಮೂಹದಿಂದ ಅರ್ಜುನನನ್ನು ಇನ್ನೊಮ್ಮೆ ಬಂಧಿಸಿದನು.

ಪುನರಾಲಿಂಗ್ಯ ಕೃಷ್ಣಸ್ತಮಧಾಚ್ಛತ್ರುವಿಘಾತಕಮ್ ।
ಬಲಮಸ್ಮಿಂಸ್ತತಃ ಪಾರ್ಥ ಉತ್ತಸ್ಥೌ ಶರಚಾಪಭೃತ್ ॥೫೭॥

ವವರ್ಷ ಚ ಶರಾನ್ ಭೂಯೋ ದ್ರೌಣಿಪುತ್ರೇಽರಿಮರ್ದನಃ ।
ಪುನಸ್ತಸ್ಯ ನುನೋದ ಜ್ಯಾಂ ದ್ರೌಣಿಃ ಸಂಧಾಯ ತಾಂ ಪುನಃ ॥೫೮॥

ಪಾರ್ಥೋ ದ್ರೌಣಿಸುತಸ್ಯಾಶ್ವರಶ್ಮೀಂಶ್ಚಿಚ್ಛೇದ ಸಾಯಕೈಃ ।
ವಿರಶ್ಮಯೋ ಹಯಾ ದ್ರೌಣೇಃ ಪುನಃ ಪಾರ್ಥಶರಾಹತಾಃ ॥೫೯॥

ಅಪೋಹುರ್ದೂರಮೇತಸ್ಮಾತ್ ಸೋಪಿ ಸಂಸ್ಥಾಪ್ಯ ತಾನ್ ಪುನಃ ।
ಚಿಂತಯಾಮಾಸ ನೈತಸ್ಮಾದಧಿಕಂ ಶಕ್ಯತೇಽರ್ಜುನೇ ॥೬೦॥

ಸಾರಥಿತ್ವಾತ್ ಕೇಶವಸ್ಯ ಧ್ವಜಸ್ಥತ್ವಾದ್ಧನೂಮತಃ ।
ಗಾಂಡಿವತ್ವಾತ್ ಕಾರ್ಮುಕಸ್ಯ ಚೇಷುಧ್ರೋರಕ್ಷಯತ್ವತಃ ॥೬೧॥

ಅವಧ್ಯತ್ವಾತ್ ತಥಾಶ್ವಾನಾಮಭೇದ್ಯತ್ವಾದ್ ರಥಸ್ಯ ಚ ।
ಅತೋ ಯೋದ್ಧುಂ ಸಮರ್ಥೋಽಪಿ ನಾದ್ಯ ಯಾಮಿ
ಧನಂಜಯಮ್॥೬೨॥

ಶ್ರೀಕೃಷ್ಣ ಪುನಃ ಅರ್ಜುನನನ್ನು ಆಲಿಂಗಿಸಿ ಅವನಲ್ಲಿ ಶತ್ರುಘಾತಕವಾದ ಬಲವನ್ನು ತುಂಬಿಸಿದ. ಆಗ ಶತ್ರುಮರ್ದನನಾದ ಅರ್ಜುನ ಎದ್ದು ಬಾಣ–ಬಿಲ್ಲುಗಳನ್ನು ಧರಿಸಿ ಪುನಃ ಅಶ್ವತ್ಥಾಮನ ಮೇಲೆ ಬಾಣಗಳ ಮಳೆಗರೆದ. ಅಶ್ವತ್ಥಾಮ ಪುನಃ ಗಾಂಡೀವದ ಹೆದೆಯನ್ನು ಕತ್ತರಿಸಿದ. ಅದು ಮತ್ತೆ ಬೆಳೆಯಿತು. ಅರ್ಜುನ ಪುನಃ ಅದನ್ನು ಕಟ್ಟಿ ಅಶ್ವತ್ಥಾಮನ ಕುದುರೆಗಳ ಹಗ್ಗಗಳನ್ನು ಬಾಣಗಳಿಂದ ಕತ್ತರಿಸಿದ. ಹಗ್ಗವಿಲ್ಲದ ಆ ಕುದುರೆಗಳನ್ನು ಬಾಣಗಳಿಂದ ಹೊಡೆದ. ಅವುಗಳು ಅರ್ಜುನನ ಇದಿರಿನಿಂದ ದೂರಕ್ಕೆ ಓಡಿದವು. ಅವುಗಳನ್ನು ಅಶ್ವತ್ಥಾಮ ಹಿಡಿದು ತಂದು ತಿರುಗಿ ರಥಕ್ಕೆ ಹೂಡಿ ಆಲೋಚಿಸಿದ. ಅರ್ಜುನನಿಗೆ ಶ್ರೀಕೃಷ್ಣ ಸಾರಥಿಯಾದ್ದರಿಂದ, ಧ್ವಜದಲ್ಲಿ ಹನುಮಂತನಿರುವುದರಿಂದ, ಬಿಲ್ಲು ಗಾಂಡೀವವಾದ್ದರಿಂದ, ಬತ್ತಳಿಕೆಗಳು ಅಕ್ಷಯವಾದ್ದರಿಂದ, ಕುದುರೆಗಳು ಅವಧ್ಯವಾದ್ದರಿಂದ, ರಥವೂ ಅಭೇದ್ಯವಾದ್ದರಿಂದ, ನಾನು ಅವನಿಗೆ ಹೆಚ್ಚಿಗೆ ಇನ್ನೇನೂ ಮಾಡಲಾರೆ, ಅದರಿಂದ ಅವನೊಡನೆ ಯುದ್ಧಮಾಡಲು ನಾನು ಸಮರ್ಥನಾದರೂ ಈಗ ಅವನನ್ನು ಇದಿರಿಸುವುದಿಲ್ಲ ಎಂದು.

❖

ಐವತ್ತಮೂರನೆಯ ಅಧ್ಯಾಯ

ಧೃಷ್ಟದ್ಯುಮ್ನನಿಂದ ದುರ್ಯೋಧನನ ಪರಾಭವ.
ಅರ್ಜುನನಿಂದ ಅಶ್ವತ್ಥಾಮನ ಪರಾಭವ.

ಸಂಜಯಃ

ಭೀಮಸೇನಂ ಸಪಾಂಚಾಲ್ಯಂ ಚೇದಿಕೇಕಯಸಂವೃತಮ್ ।
ವೈಕರ್ತನಃ ಸ್ವಯಂ ರುದ್ಧ್ವಾ ವಾರಯಾಮಾಸ ಸಾಯಕೈಃ ॥೧॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ಧೃಷ್ಟದ್ಯುಮ್ನ–ಚೇದಿ–ಕೇಕಯ–ಯೋಧರಿಂದ ಯುಕ್ತನಾದ ಭೀಮಸೇನನನ್ನು ಕರ್ಣನು ತಾನೇ ಬಾಣಗಳಿಂದ ವಿರೋಧಿಸಿ ತಡೆದ.

ತತಸ್ತು ಚೇದಿಕಾರೂಷಾನ್ ಸೃಂಜಯಾಂಶ್ಚ ಮಹಾರಥಾನ್ ।
ಕರ್ಣೋ ಜಘಾನ ಸಂಕ್ರುದ್ಧೋ ಭೀಮಸೇನಸ್ಯ ಪಶ್ಯತಃ ॥೨॥

ಭೀಮಸೇನನು ನೋಡುತ್ತಿದ್ದಂತೆಯೇ ಕ್ರುದ್ಧನಾದ ಕರ್ಣನು ಮಹಾರಥರಾದ ಚೇದಿ ಕಾರೂಷ ಸೃಂಜಯರನ್ನು ಸಂಹರಿಸಲು ತೊಡಗಿದ.

ಭೀಮಸೇನಸ್ತತಃ ಕರ್ಣಂ ವಿಹಾಯ ರಥಸತ್ತಮಮ್ ।
ಪ್ರಯಯೌ ಕೌರವಂ ಸೈನ್ಯಂ ಕಕ್ಷಮಗ್ನಿರಿವ ಜ್ವಲನ್ ॥೩॥

ಅದಕ್ಕೆ ಪ್ರತಿಯಾಗಿ ಭೀಮಸೇನ ಕರ್ಣನನ್ನು ಬಿಟ್ಟು ಜ್ವಲಿಸುವ ಕಾಳ್ಗಿಚ್ಚು ಹುಲ್ಲಿನ ಮೆದೆಯನ್ನು ಪ್ರವೇಶಿಸುವಂತೆ, ಕೌರವರ ಸೈನ್ಯವನ್ನು ಪ್ರವೇಶಿಸಿದ.

ಸೂತಪುತ್ರೋಽಪಿ ಸಮರೇ ಪಾಂಚಾಲಾನ್ ಕೇಕಯಾಂಸ್ತಥಾ ।
ಸೃಂಜಯಾಂಶ್ಚ ಮಹೇಷ್ವಾಸಾನ್ ನಿಜಘಾನ ಸಹಸ್ರಶಃ ॥೪॥

ಕರ್ಣನು ರಣದಲ್ಲಿ ಪಾಂಚಾಲ ಕೇಕಯ ಸೃಂಜಯ ಬಿಲ್ಲಾರರನ್ನು ಸಾವಿರಾರು ಸಂಖ್ಯೆಯಲ್ಲಿ ಸಂಹರಿಸಿದ.

ಸಂಶಪ್ತಕೇಷು ಪಾರ್ಥಶ್ಚ ಕೌರವೇಷು ವೃಕೋದರಃ ।
ಪಾಂಚಾಲೇಷು ತಥಾ ಕರ್ಣಃ ಕ್ಷಯಂ ಚಕ್ರುರ್ಮಹಾರಥಾಃ ॥೫॥

ಸಂಶಪ್ತಕರಲ್ಲಿ ಅರ್ಜುನ, ಕೌರವರಲ್ಲಿ ಭೀಮಸೇನ, ಪಾಂಚಾಲರಲ್ಲಿ ಕರ್ಣ ಹೀಗೆ ಮಹಾರಥರು ಸಂಹಾರಕಾರ್ಯವನ್ನು ನಡೆಸಿದರು.

ತೇ ಕ್ಷತ್ರಿಯಾ ದಹ್ಯಮಾನಾಸ್ತ್ರಿಭಿಸ್ತೈಃ ಪಾವಕೋಪಮೈಃ ।
ಜಗ್ಮುರ್ವಿನಾಶಂ ಸಮರೇ ರಾಜನ್ ದುರ್ಮಂತ್ರಿತೇ ತವ ॥೬॥

ರಾಜನೆ, ನಿನ್ನ ದುಷ್ಟ ಆಲೋಚನೆಯ ಪರಿಣಾಮವಾಗಿ ಮೂರು ಯಾಗಾಗ್ನಿಗಳಂಥ ಆ ಅರ್ಜುನ ಭೀಮ ಕರ್ಣರಿಂದ ರಣದಲ್ಲಿ ಕ್ಷತ್ರಿಯರು ದಹಿಸಲ್ಪಟ್ಟು ವಿನಾಶ ಹೊಂದಿದರು.

ತತೋ ದುರ್ಯೋಧನಃ ಕ್ರುದ್ಧೋ ನಕುಲಂ ನವಭಿಃ ಶರೈಃ ।
ವಿವ್ಯಾಧ ಭರತಶ್ರೇಷ್ಠ ಚತುರಶ್ಚಾಸ್ಯ ವಾಜಿನಃ ॥೭॥

ರಾಜನೆ, ದುರ್ಯೋಧನನು ಕುಪಿತನಾಗಿ ಒಂಬತ್ತು ಬಾಣಗಳಿಂದ ನಕುಲನನ್ನೂ ಅವನ ನಾಲ್ಕು ಕುದುರೆಗಳನ್ನೂ ಹೊಡೆದ.

ತತಃ ಪುನರಮೇಯಾತ್ಮಾ ತವ ಪುತ್ರೋ ಜನಾಧಿಪಃ ।
ಕ್ಷುರೇಣ ಸಹದೇವಸ್ಯ ಧ್ವಜಂ ಚಿಚ್ಛೇದ ಕಾಂಚನಮ್ ॥೮॥

ಪುನಃ ಅಮೇಯಾತ್ಮನಾದ ನಿನ್ನ ಮಗ ರಾಜಾ ಸುಯೋಧನನು ಬಾಣದಿಂದ ಸಹದೇವನ ಬಂಗಾರದ ಧ್ವಜವನ್ನು ಕತ್ತರಿಸಿದ.

ನಕುಲಸ್ತು ತತಃ ಕ್ರುದ್ಧಸ್ತವ ಪುತ್ರಂ ತ್ರಿಸಪ್ತಭಿಃ ।
ಜಘಾನ ಸಮರೇ ರಾಜನ್ ಸಹದೇವಶ್ಚ ಪಂಚಭಿಃ ॥೯॥

ರಾಜನೆ, ನಕುಲನು ಕ್ರುದ್ಧನಾಗಿ ರಣದಲ್ಲಿ ನಿನ್ನ ಮಗನನ್ನು ಇಪ್ಪತ್ತೊಂದು ಬಾಣಗಳಿಂದ ಹೊಡೆದ. ಸಹದೇವನು ಐದು ಬಾಣಗಳಿಂದ ಹೊಡೆದ.

ತಾವುಭೌ ಭರತಶ್ರೇಷ್ಠಃ ಶ್ರೇಷ್ಠೌ ಸರ್ವಧನುಷ್ಮತಾಮ್ ।
ವಿವ್ಯಾಧೋರಸಿ ಸಂಕ್ರುದ್ಧಃ ಪಂಚಭಿಃ ಪಂಚಭಿಃ ಶರೈಃ ॥೧೦॥

ಎಲ್ಲ ಬಿಲ್ಗಾರರಲ್ಲಿ ಶ್ರೇಷ್ಠರಾದ ನಕುಲ-ಸಹದೇವರನ್ನು ಕ್ರುದ್ಧನಾದ ದುರ್ಯೋಧನ ಐದೈದು ಬಾಣಗಳಿಂದ ಎದೆಯಲ್ಲಿ ಹೊಡೆದ.

ತತೋಽಪರಾಭ್ಯಾಂ ಭಲ್ಲಾಭ್ಯಾಂ ಧನುಷೀ ಸಮಕೃಂತತ ।
ಯಮಯೋಃ ಪ್ರಹಸನ್ ರಾಜನ್ ವಿವ್ಯಾಧೈವ ತ್ರಿಭಿಸ್ತ್ರಿಭಿಃ ॥೧೧॥

ರಾಜನೆ, ಬಳಿಕ ದುರ್ಯೋಧನ ನಗುತ್ತ ಬೇರೆ ಎರಡು ಭಲ್ಲೆಗಳಿಂದ ಯಮಳರ ಬಿಲ್ಲುಗಳನ್ನು ಕತ್ತರಿಸಿದ. ಮೂರು ಮೂರು ಬಾಣಗಳಿಂದ ಇಬ್ಬರನ್ನೂ ಹೊಡೆದ.

ತಾವನ್ಯೇ ಧನುಷೀ ಶ್ರೇಷ್ಠೇ ಶಕ್ರಚಾಪನಿಭೇ ಶುಭೇ ।
ಪ್ರಗೃಹ್ಯ ರೇಜತುಃ ಶೂರೌ ದೇವಪುತ್ರಸಮೌ ಯುಧಿ ॥೧೨॥

ಶೂರರಾದ ಅವರು ಬೇರೆ ಶ್ರೇಷ್ಠವಾದ ಮಳೆಬಿಲ್ಲಿನಂತೆ ಸುಂದರವಾದ ಬಿಲ್ಲುಗಳನ್ನು ಎತ್ತಿಕೊಂಡು ರಣದಲ್ಲಿ ದೇವಪುತ್ರಸಮಾನರಾಗಿ ಬೆಳಗಿದರು.

ತತಸ್ತೌ ರಭಸೌ ಯುದ್ಧೇ ಭ್ರಾತರೌ ಭ್ರಾತರಂ ನೃಪ ।
ಶರೈರ್ವವರ್ಷತುಘೋರೈರ್ಮಹಾಮೇಘೌ ಯಥಾಚಲಮ್ ॥೧೩॥

ರಾಜನೆ, ರಣದಲ್ಲಿ ವೇಗವುಳ್ಳ ಆ ಇಬ್ಬರು ಸೋದರರು ಅಣ್ಣ ದುರ್ಯೋಧನನಿಗೆ, ಬೆಟ್ಟಕ್ಕೆ ಎರಡು ಮಹಾಮೇಘಗಳಂತೆ, ಘೋರವಾದ ಬಾಣಗಳ ಮಳೆಗರೆದರು.

ತತಃ ಕ್ರುದ್ಧೋ ಮಹಾರಾಜ ತವ ಪುತ್ರೋ ಮಹಾರಥಃ ।
ಪಾಂಡುಪುತ್ರೌ ಮಹೇಷ್ವಾಸೌ ವಾರಯಾಮಾಸ ಪತ್ರಿಭಿಃ ॥೧೪॥

ಮಹಾರಾಜ, ಮಹಾರಥನಾದ ನಿನ್ನ ಪುತ್ರನು ಕುಪಿತನಾಗಿ ಮಹಾಬಿಲ್ಲಾರರಾದ ನಕುಲ–ಸಹದೇವರನ್ನು ಬಾಣಗಳಿಂದ ತಡೆದ.

ಧನುರ್ಮಂಡಲಮೇವಾಸ್ಯ ದೃಶ್ಯತೇ ಯುಧಿ ಭಾರತ ।
ಸಾಯಕಾಶ್ಚೈವ ದೃಶ್ಯಂತೇ ನಿಶ್ಚರಂತಃ ಸಮಂತತಃ ॥೧೫॥

ರಾಜನೆ, ರಣದಲ್ಲಿ ದುರ್ಯೋಧನನ ಬಾಗಿದ ಬಿಲ್ಲೇ ಕಾಣಿಸಿತು. ಮತ್ತು ಅದರಿಂದ ಎಲ್ಲೆಡೆಗೆ ಹಾರುವ ಬಾಣಗಳು ಮಾತ್ರವೇ ಕಂಡುಬಂದುವು.

ತಸ್ಯ ಸಾಯಕಸಂಛನ್ನೌ ಚಕಾಶೇತಾಂ ಚ ಪಾಂಡವೌ ।
ಮೇಘಚ್ಛನ್ನೌ ಯಥಾ ವ್ಯೋಮ್ನಿ ಚಂದ್ರಸೂರ್ಯೌ ಹತಪ್ರಭೌ ॥೧೬॥

ಆಕಾಶದಲ್ಲಿ ಮೋಡಗಳಿಂದ ಮರೆಯಾಗಿ ಕಾಂತಿಗುಂದಿದ ಚಂದ್ರ–ಸೂರ್ಯರಂತೆ, ದುರ್ಯೋಧನನ ಬಾಣಗಳಿಂದ ಮರೆಯಾಗಿ ನಕುಲ–ಸಹದೇವರು ಕಂಡುಬಂದರು.

ತೇ ತು ಬಾಣಾ ಮಹಾರಾಜ ಹೇಮಪುಂಖಾಃ ಶಿಲಾಶಿತಾಃ ।
ಆಚ್ಛಾದಯನ್ ದಿಶಃ ಸರ್ವಾಃ ಸೂರ್ಯಸ್ಯೇವಾಂಶವಸ್ತದಾ ॥೧೭॥

ಮಹಾರಾಜ, ಬಂಗಾರದ ಪುಕ್ಕ ಉಳ್ಳ ಸಾಣೆಹಿಡಿದ ಆ ಬಾಣಗಳು ಸೂರ್ಯನ ಕಿರಣಗಳಂತೆ ಎಲ್ಲ ದಿಕ್ಕುಗಳನ್ನು ಆಚ್ಛಾದಿಸಿದುವು.

ಬಾಣಭೂತೇ ತತಸ್ತಸ್ಮಿನ್ ಸಂಛನ್ನೇ ಚ ನಭಸ್ತಲೇ ।
ಯಮಾಭ್ಯಾಂ ದದೃಶೇ ರೂಪಂ ಕಾಲಾಂತಕಯಮೋಪಮಮ್ ॥೧೮॥

ಆ ಆಕಾಶಪ್ರದೇಶವು ಬಾಣಗಳಿಂದ ತುಂಬಿ ಮುಚ್ಚಿಹೋದಾಗ ನಕುಲ

ಸಹದೇವರಿಗೆ ದುರ್ಯೋಧನನ ರೂಪವು ಕಾಲಾಂತಕಯಮನಿಗೆ ಸದೃಶವಾಗಿ ಕಂಡುಬಂದಿತು.

ಪರಾಕ್ರಮಂ ತು ತಂ ದೃಷ್ಟ್ವಾ ತವ ಸೂನೋರ್ಮಹಾರಥಾಃ ।
ಮೃತ್ಯೋರಿವಾಂತಿಕಂ ಪ್ರಾಪ್ತೌ ಮಾದ್ರೀಪುತ್ರೌ ಸ್ಮ ಮೇನಿರೇ ॥೧೯॥

ನಿನ್ನ ಪುತ್ರನ ಆ ಪರಾಕ್ರಮವನ್ನು ಕಂಡು, ಮಹಾರಥರು, ಮೃತ್ಯುವಿನ ಸಮೀಪಕ್ಕೇ ನಕುಲ-ಸಹದೇವರು ಹೋಗಿದ್ದಾರೆ ಎಂದು ಭಾವಿಸಿದರು.

ತತಃ ಸೇನಾಪತೀ ರಾಜನ್ ಪಾಂಡವಸ್ಯ ಮಹಾತ್ಮನಃ ।
ಪಾರ್ಷತಃ ಪ್ರಯಯೌ ತತ್ರ ಯತ್ರ ರಾಜಾ ಸುಯೋಧನಃ ॥೨೦॥

ರಾಜನೆ, ಆಗ ಮಹಾತ್ಮಾ ಯುಧಿಷ್ಠಿರನ ಸೇನಾಪತಿಯಾದ ಧೃಷ್ಟದ್ಯುಮ್ನನು ರಾಜಾ ಸುಯೋಧನನಿದ್ದಲ್ಲಿಗೆ ಧಾವಿಸಿದ.

ಮಾದ್ರೀಪುತ್ರೌ ತತಃ ಶೂರೌ ವ್ಯತಿಕ್ರಮ್ಯ ಮಹಾರಥೌ ।
ಧೃಷ್ಟದ್ಯುಮ್ನಸ್ತವ ಸುತಂ ತಾಡಯಾಮಾಸ ಸಾಯಕೈಃ ॥೨೧॥

ಧೃಷ್ಟದ್ಯುಮ್ನನು ಶೂರ ಮಹಾರಥರಾದ ನಕುಲ-ಸಹದೇವರನ್ನು ದಾಟಿ ಮುಂದೆ ಹೋಗಿ ನಿನ್ನ ಮಗನನ್ನು ಬಾಣಗಳಿಂದ ಹೊಡೆದ.

ತಮವಿಧ್ಯದಮೇಯಾತ್ಮಾ ತವ ಪುತ್ರೋಽತ್ಯಮರ್ಷಣಃ ।
ಪಾಂಚಾಲ್ಯಂ ಪಂಚವಿಂಶತ್ಯಾ ಪ್ರಹಸ್ಯ ಪುರುಷರ್ಷಭ ॥೨೨॥

ರಾಜನೆ, ಅತಿ ಅಸಹನೆಯವನಾದ ಅಮೇಯಾತ್ಮನಾದ ನಿನ್ನ ಪುತ್ರನು ನಕ್ಕು ಧೃಷ್ಟದ್ಯುಮ್ನನನ್ನು ಇಪ್ಪತ್ತೈದು ಬಾಣಗಳಿಂದ ಹೊಡೆದ.

ತತಃ ಪುನರಮೇಯಾತ್ಮಾ ತವ ಪುತ್ರೋ ಹ್ಯಮರ್ಷಣಃ ।
ವಿದ್ಧ್ವಾ ನನಾದ ಪಾಂಚಾಲ್ಯಂ ಷಷ್ಟ್ಯಾ ಪಂಚಭಿರೇವ ಚ ॥೨೩॥

ಆಗ ಪುನಃ ಅಮೇಯಾತ್ಮನಾದ ಅಸಹನೆಯವನಾದ ನಿನ್ನ ಪುತ್ರನು ಧೃಷ್ಟದ್ಯುಮ್ನನನ್ನು ಅರವತ್ತೈದು ಬಾಣಗಳಿಂದ ಹೊಡೆದು ಗರ್ಜನೆ ಮಾಡಿದ.

ಅಥಾಸ್ಯ ಸಶರಂ ಚಾಪಂ ಹಸ್ತಾವಾಪಂ ಚ ಮಾರಿಷ ।
ಕ್ಷುರಪ್ರೇಣ ಸುತೀಕ್ಷ್ಣೇನ ರಾಜಾ ಚಿಚ್ಛೇದ ಸಂಯುಗೇ ॥೨೪॥

ರಾಜನೆ, ಬಳಿಕ ಧೃಷ್ಟದ್ಯುಮ್ನನ ಧನುರ್ಬಾಣಗಳನ್ನೂ ಕೈಚೀಲವನ್ನೂ ರಾಜಾ ದುರ್ಯೋಧನನು ರಣದಲ್ಲಿ ಬಲುತೀಕ್ಷ್ಣವಾದ ಬಾಣದಿಂದ ಕತ್ತರಿಸಿದ.

ತದಪಾಸ್ಯ ಧನುಶ್ಛಿನ್ನಂ ಪಾಂಚಾಲ್ಯಃ ಶತ್ರುಕರ್ಶನಃ ।
ಅನ್ಯದಾದತ್ತ ವೇಗೇನ ಧನುರ್ಭಾರಸಹಂ ನವಮ್ ॥೨೫॥

ಶತ್ರುನಾಶಕನಾದ ಧೃಷ್ಟದ್ಯುಮ್ನನು ಕಡಿದುಹೋದ ಬಿಲ್ಲನ್ನು ದೂರ ಎಸೆದು ಇನ್ನೊಂದು ಹೊಸದಾದ ಶಕ್ತಿಶಾಲಿಯಾದ ಧನುಸ್ಸನ್ನು ಬೇಗನೆ ಎತ್ತಿಕೊಂಡ.

ಪ್ರಜ್ವಲನ್ನಿವ ವೇಗೇನ ಸಂರಂಭಾದ್ರುಧಿರೇಕ್ಷಣಃ ।
ಅಶೋಭತ ಮಹೇಷ್ವಾಸೋ ಧೃಷ್ಟದ್ಯುಮ್ನಃ ಕೃತವ್ರಣಃ ॥೨೬॥

ಮಹಾಬಿಲ್ಲಾರ ಧೃಷ್ಟದ್ಯುಮ್ನನು ಗಾಯಗೊಂಡು ಕೋಪದಿಂದ ಕೆಂಪುಕಣ್ಣು ಮಾಡಿಕೊಂಡು ವೇಗದಿಂದ ಜ್ವಲಿಸುತ್ತಿರುವಂತೆ ಶೋಭಿಸಿದ.

ಸ ಪಂಚದಶ ನಾರಾಚಾನ್ ಶ್ವಸತಃ ಪನ್ನಗಾನಿವ ।
ಜಿಘಾಂಸುರ್ಭರತಶ್ರೇಷ್ಠಂ ಧೃಷ್ಟದ್ಯುಮ್ನೋ ವ್ಯವಾಸೃಜತ್ ॥೨೭॥

ಧೃಷ್ಟದ್ಯುಮ್ನನು ಭುಸುಗುಟ್ಟುವ ಹಾವುಗಳಂಥ ಹದಿನೈದು ಬಾಣಗಳನ್ನು ದುರ್ಯೋಧನನನ್ನು ಕೊಲ್ಲಲೆಂದು ಪ್ರಯೋಗಿಸಿದ.

ತೇ ವರ್ಮ ಹೇಮವಿಕೃತಂ ಭಿತ್ತ್ವಾ ರಾಜ್ಞಃ ಶಿಲಾಶಿತಾಃ ।
ವಿವಿಶುರ್ವಸುಧಾಂ ವೇಗಾತ್ ಕಂಕಬರ್ಹಿಣವಾಸಸಃ ॥೨೮॥

ಸಾಣೆಹಿಡಿದ ಹದ್ದಿನ ರೆಕ್ಕೆಗಳನ್ನುಟ್ಟ ಆ ಬಾಣಗಳು ದುರ್ಯೋಧನನ ಬಂಗಾರದ ಕವಚವನ್ನು ಭೇದಿಸಿ ವೇಗದಿಂದ ನೆಲದೊಳಗೆ ಹೊಕ್ಕವು.

ಸೋಽತಿವಿದ್ಧೋ ಮಹಾರಾಜ ಪುತ್ರಸ್ತೇಽತಿವ್ಯರಾಜತ ।
ವಸನ್ತೇ ಪುಷ್ಪಬಹುಲಃ ಪ್ರಫುಲ್ಲ ಇವ ಕಿಂಶುಕಃ ॥೨೯॥

ಮಹಾರಾಜ, ನಿನ್ನ ಪುತ್ರನು ಅತಿಯಾಗಿ ಹೊಡೆಸಿಕೊಂಡು ವಸಂತದಲ್ಲಿ ಅರಳಿದ ಬಹುಪುಷ್ಪಯುಕ್ತವಾದ ಮುತ್ತುಗದ ಗಿಡದಂತೆ ಅತಿಯಾಗಿ ಶೋಭಿಸಿದ.

ಸ ಛಿನ್ನವರ್ಮಾ ನಾರಾಚಪ್ರಹಾರೈಃ ಜರ್ಜರೀಕೃತಃ ।
ಧೃಷ್ಟದ್ಯುಮ್ನಸ್ಯ ಭಲ್ಲೇನ ಕ್ರುದ್ಧಶ್ಚಿಚ್ಛೇದ ಕಾರ್ಮುಕಮ್ ॥೩೦॥

ಕವಚ ಒಡೆದಾಗ ಬಾಣಪ್ರಹಾರಗಳಿಂದ ಜರ್ಝರಿತನಾದ ದುರ್ಯೋಧನನು ಕ್ರುದ್ಧನಾಗಿ ಧೃಷ್ಟದ್ಯುಮ್ನನ ಬಿಲ್ಲನ್ನು ಭಲ್ಲೆಯಿಂದ ಕತ್ತರಿಸಿದ.

ಅಥೈನಂ ಛಿನ್ನಧನ್ವಾನಂ ತ್ವರಮಾಣೋ ಮಹೀಪತಿಃ ।
ಸಾಯಕೈರ್ದಶಭೀ ರಾಜನ್ ಭ್ರುವೋರ್ಮಧ್ಯೇ ಸಮಾರ್ದಯತ್ ॥೩೧॥

ರಾಜನೆ, ಬಿಲ್ಲು ಕಡಿದುಕೊಂಡ ಧೃಷ್ಟದ್ಯುಮ್ನನನ್ನು ದುರ್ಯೋಧನನು ಬೇಗನೆ ಹತ್ತುಬಾಣಗಳಿಂದ ಹುಬ್ಬುಗಳ ನಡುವೆ ಹೊಡೆದ.

ತಸ್ಯ ತೇऽಶೋಭಯನ್ ವಕ್ತ್ರಂ ಕರ್ಮಾರಪರಿಮಾರ್ಜಿತಾಃ ।
ಪ್ರಫುಲ್ಲಂ ಚಂಪಕಂ ಯದ್ವದ್ ಭ್ರಮರಾ ಮಧುಲಿಪ್ಸವಃ ॥೩೨॥

ಕರ್ಮಾರನಿಂದ ಹದಗೊಂಡ ಆ ಬಾಣಗಳು ಧೃಷ್ಟದ್ಯುಮ್ನನ ಮುಖವನ್ನು ಅರಳಿದ ಸಂಪಿಗೆಯನ್ನು ಹೂವಿನ ರಸ ಬಯಸುವ ದುಂಬಿಗಳಂತೆ, ಅಂದ ಗೊಳಿಸಿದುವು.

ತದಪಾಸ್ಯ ಧನುಶ್ಛಿನ್ನಂ ಧೃಷ್ಟದ್ಯುಮ್ನೋ ಮಹಾಮನಾಃ ।
ಅನ್ಯದಾದತ್ತ ವೇಗೇನ ಧನುರ್ಭಲ್ಲಾಂಶ್ಚ ಷೋಡಶ ॥೩೩॥

ಕಡಿದ ಆ ಬಿಲ್ಲನ್ನು ದೂರಕ್ಕೆಸೆದು ಮಹಾ ಬುದ್ಧಿಶಾಲಿ ಧೃಷ್ಟದ್ಯುಮ್ನನು ಬೇಗನೆ ಇನ್ನೊಂದು ಬಿಲ್ಲನ್ನೂ ಹದಿನಾರು ಭಲ್ಲೆಗಳನ್ನೂ ಎತ್ತಿಕೊಂಡ.

ತತೋ ದುರ್ಯೋಧನಸ್ಯಾಶ್ವಾನ್ ಹತ್ವಾ ಸೂತಂ ಚ ಪಂಚಭಿಃ ।
ಧನುಶ್ಚಿಚ್ಛೇದ ಭಲ್ಲೇನ ಜಾತರೂಪಪರಿಷ್ಕೃತಮ್ ॥೩೪॥

ಐದು ಭಲ್ಲೆಗಳಿಂದ ಧೃಷ್ಟದ್ಯುಮ್ನನು ದುರ್ಯೋಧನನ ಅಶ್ವಗಳನ್ನೂ ಸಾರಥಿಯನ್ನೂ ಕೊಂದು ಒಂದು ಭಲ್ಲೆಯಿಂದ ಬಂಗಾರದಿಂದ ಅಲಂಕೃತವಾದ ಬಿಲ್ಲನ್ನೂ ಕಡಿದ.

ರಥಂ ಸೋಪಸ್ಕರಂ ಛತ್ರಂ ಶಕ್ತಿಂ ಖಡ್ಗಂ ಗದಾಂ ಧ್ವಜಮ್ ।
ಭಲ್ಲೈಶ್ಚಿಚ್ಛೇದ ದಶಭಿಃ ಪುತ್ರಸ್ಯ ತವ ಪಾರ್ಷತಃ ॥೩೫॥

ಉಳಿದ ಹತ್ತು ಭಲ್ಲೆಗಳಿಂದ ಅವನ ಸಜ್ಜಾದ ರಥವನ್ನೂ ಛತ್ರ ಶಕ್ತಿ ಖಡ್ಗ ಗದೆ ಧ್ವಜಗಳನ್ನೂ ಕತ್ತರಿಸಿದ.

ತಪನೀಯಾಂಗದಂ ಚಿತ್ರಂ ನಾಗಂ ಮಣಿಮಯಂ ಭುವಮ್ ।
ಧ್ವಜಂ ಕುರುಪತೇಶ್ಛಿನ್ನಂ ದದೃಶುಃ ಸರ್ವಪಾರ್ಥಿವಾಃ ॥೩೬॥

ಬಂಗಾರದ ಅಂಗದದಂಥ ಸುಂದರವಾದ ನಾಗ ಮತ್ತು ಮಣಿಮಯವಾದ ಭೂಮಿ ಇವುಗಳಾಕಾರದ ಕುರುಪತಿಯ ಧ್ವಜವು ಕಡಿದು ಬಿದ್ದುದನ್ನು ಎಲ್ಲ ಕ್ಷತ್ರಿಯರೂ ಕಂಡರು.

ದುರ್ಯೋಧನಂ ತು ವಿರಥಂ ಛಿನ್ನಸರ್ವಾಯುಧಂ ರಣೇ ।
ಭ್ರಾತರಂ ಪರ್ಯರಕ್ಷಂತ ಸೋದರಾ ಭರತರ್ಷಭ ॥೩೭॥

ರಾಜನೆ, ರಣದಲ್ಲಿ ದುರ್ಯೋಧನನು ಹೀಗೆ ರಥವನ್ನೂ ಎಲ್ಲ ಆಯುಧ ಗಳನ್ನು ಕಳೆದುಕೊಂಡಾಗ ಅಣ್ಣನಾದ ಆತನನ್ನು ತಮ್ಮಂದಿರು ರಕ್ಷಣೆ ಮಾಡಿದರು.

ತಮಾರೋಪ್ಯ ರಥೇ ರಾಜನ್ ದಂಡಧಾರೋ ಜನಾಧಿಪಮ್ ।
ಅಪೋವಾಹ ಚ ಸಂಭ್ರಾಂತೋ ಧೃಷ್ಟದ್ಯುಮ್ನಸ್ಯ ಪಶ್ಯತಃ ॥೩೮॥

ರಾಜನೆ, ಧೃಷ್ಟದ್ಯುಮ್ನನು ನೋಡುತ್ತಿದ್ದಂತೇ ಗಾಬರಿಗೊಂಡ ದಂಡಧಾರನು ದುರ್ಯೋಧನನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ದೂರಕ್ಕೆ ಒಯ್ದ.

ಕರ್ಣಸ್ತು ಸಾತ್ಯಕಿಂ ಜಿತ್ವಾ ರಾಜಗೃದ್ಧೀ ಮಹಾಬಲಃ ।
ದ್ರೋಣಹಂತಾರಮುಗ್ರೇಷುಂ ಸಸಾರಾಭಿಮುಖೇ ರಣೇ ॥೩೯॥

ರಾಜನ ಜಯಾಕಾಂಕ್ಷಿ ಮಹಾಬಲಿಯಾದ ಕರ್ಣನು ಸಾತ್ಯಕಿಯನ್ನು ಗೆದ್ದು ಉಗ್ರ ಬಾಣವುಳ್ಳ ಧೃಷ್ಟದ್ಯುಮ್ನನನ್ನು ರಣದಲ್ಲಿ ಇದಿರಿಸಿದ.

ತಂ ಪೃಷ್ಠತೋಭ್ಯಯಾತ್ ತೂರ್ಣಂ ಶೈನೇಯೋ ವಿತುದನ್ ಶರೈಃ ।
ವಾರಣಂ ಜಘನೋಪಾಂತೇ ವಿಷಾಣಾಭ್ಯಾಮಿವ ದ್ವಿಪಃ ॥೪೦॥

ಸಾತ್ಯಕಿ ಬೇಗನೆ ಹಿಂದಿನಿಂದ ಕರ್ಣನನ್ನು ಬಾಣಗಳಿಂದ ಪೀಡಿಸುತ್ತ ಬಂದ, ಒಂದು ಆನೆ ಇನ್ನೊಂದು ಆನೆಯನ್ನು ಹಿಂಬದಿಯಲ್ಲಿ ದಂತಗಳಿಂದ ತಿವಿಯುತ್ತ ಬರುವಂತೆ!

ಸ ಭಾರತ ಮಹಾನಾಸೀದ್ ಯೋಧಾನಾಂ ಸುಮಹಾತ್ಮನಾಮ್ ।
ಕರ್ಣಪಾರ್ಷತಯೋರ್ಯುದ್ಧೇ ಸಂಕ್ರುದ್ಧಾನಾಂ ಮಹಾರಣಃ ॥೪೧॥

ರಾಜನೆ, ಕರ್ಣ ಮತ್ತು ಧೃಷ್ಟದ್ಯುಮ್ನರ ಯುದ್ಧದಲ್ಲಿ ಮಹಾತ್ಮರಾದ ಕ್ರುದ್ಧರಾದ ಯೋಧರಿಗೆ ಬಲು ದೊಡ್ಡ ಹೋರಾಟ ನಡೆಯಿತು.

ನ ಪಾಂಡವಾನಾಂ ನಾಸ್ಮಾಕಂ ಯೋಧಃ ಕಶ್ಚಿತ್ ಪರಾಙ್ಮುಖಃ ।
ಪ್ರತ್ಯದೃಶ್ಯತ ಯತ್ಕರ್ಣಃ ಪಾಂಚಾಲಾಂಸ್ತ್ವರಿತೋ ಯಯೌ ॥೪೨॥

ಕರ್ಣನು ಪಾಂಚಾಲರನ್ನು ವೇಗದಿಂದ ಆಕ್ರಮಿಸಿದಾಗ, ಪಾಂಡವರಲ್ಲಿಯೂ ಯಾವ ಯೋಧನೂ ಹಿಮ್ಮೆಟ್ಟಲಿಲ್ಲ. ನಮ್ಮವರಲ್ಲಿಯೂ ಯಾವ ಯೋಧನೂ ಹಿಮ್ಮೆಟ್ಟಲಿಲ್ಲ.

ತಸ್ಮಿನ್ ರಣೇ ನರಶ್ರೇಷ್ಠ ಗಜವಾಜಿನರಕ್ಷಯಃ ।
ಪ್ರಾದುರಾಸೀದುಭಯತೋ ರಾಜನ್ ಮಧ್ಯಂಗತೇಽಹನಿ ॥೪೩॥

ರಾಜನೆ, ಮಧ್ಯಾಹ್ನದ ಕಾಲದಲ್ಲಿ ಆ ರಣದಲ್ಲಿ ಎರಡೂ ಕಡೆ ಗಜ ಅಶ್ವ ಪದಾತಿಗಳ ನಾಶ ಉಂಟಾಯಿತು.

ಪಾಂಚಾಲಾಸ್ತು ಮಹಾರಾಜ ತ್ವರಿತಾ ವಿಜಿಗೀಷವಃ ।
ಸರ್ವತೋಽಭ್ಯದ್ರವನ್ ಕರ್ಣಂ ಪತತ್ರಿಣ ಇವ ದ್ರುಮಮ್ ॥೪೪॥

ಮಹಾರಾಜ, ಪಾಂಚಾಲರು ವೇಗದಿಂದ ಜಯಾಕಾಂಕ್ಷಿಗಳಾಗಿ, ಹಕ್ಕಿಗಳು ವೃಕ್ಷಕ್ಕೆ ಹಾರಿ ಬರುವಂತೆ, ಎಲ್ಲ ಕಡೆಯಿಂದ ಕರ್ಣನ ಕಡೆಗೇ ಧಾವಿಸಿದರು.

ತಾಂಸ್ತಥಾಧಿರಥಿಃ ಕ್ರುದ್ಧೋ ಯತಮಾನಾನ್ ಮನಸ್ವಿನಃ ।
ವಿಚಿನ್ವನ್ನಿವ ಬಾಣಾಗ್ರೈಃ ಸಮಾಸಾದಯದಗ್ರತಃ ॥೪೫॥

ಬೆರಳ ತುದಿಯಿಂದ ಹೂಗಳನ್ನು ಆಯ್ದುಕೊಳ್ಳುವಂತೆ, ಕ್ರುದ್ಧನಾದ ಕರ್ಣನು

ಜಯಕ್ಕೆ ಯತ್ನಿಸುವ ಜಾಣರಾದ ಪಾಂಡವಯೋಧರನ್ನು ಬಾಣದ ತುದಿಗಳಿಂದ ಆಯ್ದು ತೆಗೆದುಕೊಂಡ.

ವ್ಯಾಘ್ರಕೇತುಂ ಸುಶರ್ಮಾಣಂ ಶಂಕುಂ ಚೋಗ್ರಾಯುಧಂ ಜಯಮ್ ।
ಶುಕ್ಲಂ ಚ ರೋಚಮಾನಂ ಚ ಸಿಂಹಸೇನಂ ಚ ದುರ್ಜಯಮ್ ॥೪೬॥

ವ್ಯಾಘ್ರಕೇತು, ಸುಶರ್ಮ, ಶಂಕು, ಉಗ್ರಾಯುಧ, ಜಯ, ಶುಕ್ಲ ರೋಚಮಾನ, ದುರ್ಜಯನಾದ ಸಿಂಹಸೇನರನ್ನು ಕರ್ಣನು ಪಾಂಡವಸೈನ್ಯದಲ್ಲಿ ಯುದ್ಧಕ್ಕೆ ಆರಿಸಿಕೊಂಡ.

ತೇ ವೀರಾ ರಥಮಾರ್ಗೇಣ ಪರಿವವ್ರುರ್ನರೋತ್ತಮಮ್ ।
ಸೃಜಂತಂ ಸಾಯಕಾನ್ ಕ್ರುದ್ಧಂ ಕರ್ಣಮಾಹವಶೋಭಿನಮ್ ॥೪೭॥

ಆ ವೀರರು, ಯುದ್ಧದಲ್ಲಿ ಶೋಭಿಸುತ್ತ ಕ್ರುದ್ಧನಾಗಿ ಬಾಣಗಳನ್ನು ಎಸೆಯುತ್ತಿದ್ದ ನರೋತ್ತಮ ಕರ್ಣನನ್ನು ರಥಮಾರ್ಗದಿಂದ ಬಂದು ಸುತ್ತುವರಿದರು.

ಯುಧ್ಯಮಾನಾಂಸ್ತು ತಾನ್ ಶೂರಾನ್ ಮನುಜೇಂದ್ರ ಪ್ರತಾಪವಾನ್ ।
ಅಷ್ಟಾಭಿರಷ್ಟೌ ರಾಧೇಯೋ ನ್ಯಹನನ್ನಿಶಿತೈಃ ಶರೈಃ ॥೪೮॥

ರಾಜನೆ, ಯುದ್ಧಮಾಡುತ್ತಿದ್ದ ಆ ಎಂಟುಮಂದಿ ಶೂರರನ್ನು ಪ್ರತಾಪಶಾಲಿಯಾದ ಕರ್ಣನು ತೀಕ್ಷ್ಣವಾದ ಎಂಟು ಬಾಣಗಳಿಂದ ಸಂಹರಿಸಿದ.

ಅಥಾಪರಾನ್ ಮಹಾರಾಜ ಸೂತಪುತ್ರಃ ಪ್ರತಾಪವಾನ್ ।
ಜಘಾನ ಬಹುಸಾಹಸ್ರಾನ್ ಯೋಧಾನ್ ಯುದ್ಧವಿಶಾರದಃ ॥೪೯॥

ಮಹಾರಾಜ! ಪ್ರತಾಪಶಾಲಿಯಾದ ಯುದ್ಧವಿಶಾರದನಾದ ಕರ್ಣನು ಅನೇಕ ಸಾವಿರ ಸಂಖ್ಯೆಯ ಬೇರೆ ಯೋಧರನ್ನೂ ಕೂಡ ಸಂಹರಿಸಿದ.

ವಿಷ್ಣುಂ ಚ ವಿಷ್ಣುಕರ್ಮಾಣಂ ದೇವಾಪಿಂ ಭದ್ರಮೇವ ಚ ।
ದಂಡಂ ಚ ಸಮರೇ ರಾಜಂಶ್ಚಿತ್ರಂ ಚಿತ್ರಾಯುಧಂ ಹರಿಮ್ ॥೫೦॥

ಸಿಂಹಕೇತುಂ ರೋಚಮಾನಂ ಶಲಭಂ ಚ ಮಹಾರಥಮ್ ।
ನಿಜಘಾನ ಸುಸಂಕ್ರುದ್ಧಶ್ಚೇದೀನಾಂ ಚ ಮಹಾರಥಾನ್ ॥೫೧॥

ರಾಜನೆ, ವಿಷ್ಣು ವಿಷ್ಣುಕರ್ಮ ದೇವಾಪಿ ಭದ್ರ ದಂಡ ಚಿತ್ರ ಚಿತ್ರಾಯುಧ ಹರಿ ಸಿಂಹಕೇತು ರೋಚಮಾನ ಮಹಾರಥನಾದ ಶಲಭ ಇವರನ್ನೂ ಚೇದಿಗಳ ಮಹಾರಥರನ್ನೂ ಕರ್ಣನು ರಣದಲ್ಲಿ ಸಂಹರಿಸಿದ.

ತೇಷಾಮಾದದತಃ ಪ್ರಾಣಾನಾಸೀದಾಧಿರಥೇರ್ವಪುಃ ।
ಶೋಣಿತಾಭ್ಯುಕ್ಷಿತಾಂಗಸ್ಯ ರುದ್ರಸ್ಯೇವೋರ್ಜಿತಂ ಮಹತ್ ॥೫೨॥

ಅವರ ಪ್ರಾಣಗಳನ್ನು ತೆಗೆಯುವಾಗ ನೆತ್ತರಿಂದ ಮೈತೊಯ್ಸಿಕೊಂಡ ಕರ್ಣನ ಬಲಿಷ್ಠವಾದ ಆ ಮಹಾ ಶರೀರವು ರುದ್ರನ ಶರೀರದಂತಿತ್ತು.

ತತ್ರ ಭಾರತ ಕರ್ಣೇನ ಮಾತಂಗಾಸ್ತಾಡಿತಾಃ ಶರೈಃ ।
ಸರ್ವತೋಽಭ್ಯದ್ರವನ್ ಭೀತಾಃ ಕುರ್ವಂತೋ
ಮಹದಾಕುಲಮ್ ॥೫೩॥

ರಾಜನೆ, ಕರ್ಣನು ಬಾಣಗಳಿಂದ ಹೊಡೆದ ಆನೆಗಳು ಭಯಗೊಂಡು ದೊಡ್ಡ ಗೊಂದಲ ಉಂಟುಮಾಡುತ್ತ ಎಲ್ಲ ಕಡೆ ಓಡಿದುವು.

ನಿಪೇತುರುರ್ವ್ಯಾಂ ಸಮರೇ ಕರ್ಣಸಾಯಕಪೀಡಿತಾಃ ।
ಕುರ್ವಂತೋ ವಿವಿಧಾನ್ನಾದಾನ್ ವಜ್ರನುನ್ನಾ ಇವಾಚಲಾಃ ॥೫೪॥

ರಣದಲ್ಲಿ ಕರ್ಣನ ಬಾಣಗಳಿಂದ ಪೀಡಿತವಾದ ಆನೆಗಳು ನಾನಾವಿಧ ಧ್ವನಿಗಳನ್ನು ಉಂಟುಮಾಡುತ್ತ ವಜ್ರದಿಂದ ಹೊಡೆಸಿಕೊಂಡ ಬೆಟ್ಟಗಳಂತೆ ನೆಲದಲ್ಲಿ ಉರುಳಿದುವು.

ಗಜವಾಜಿಮನುಷ್ಯೈಶ್ಚ ನಿಪತದ್ಭಿಃ ಸಮಂತತಃ ।
ರಥೈಶ್ಚಾಧಿರಥೇರ್ಮಾರ್ಗೇ ಸಮಾಸ್ತೀರ್ಯತ ಮೇದಿನೀ ॥೫೫॥

ಗಜ ಅಶ್ವ ಪದಾತಿ ರಥಗಳು ಎಲ್ಲೆಡೆ ಬೀಳುತ್ತಿದ್ದುದರಿಂದ ಕರ್ಣನ ಮಾರ್ಗದಲ್ಲಿ ರಣಭೂಮಿ ಅವುಗಳಿಂದ ಆಚ್ಛಾದಿತವಾಯಿತು.

ನೈವ ಭೀಷ್ಮೋ ನ ಚ ದ್ರೋಣೋ ನಾಪ್ಯನ್ಯೇ ಯುಧಿ ತಾವಕಾಃ ।
ಚಕ್ರುಃ ಸ್ಮ ತಾದೃಶಂ ಕರ್ಮ ಯಾದೃಶಂ ವೈ ಕೃತಂ ರಣೇ ॥೫೬॥

ಕರ್ಣನು ರಣದಲ್ಲಿ ಎಂಥ ಕಾರ್ಯವನ್ನು ಮಾಡಿದನೋ ಅಂಥ ಕಾರ್ಯವನ್ನು ಭೀಷ್ಮ ಮಾಡಲಿಲ್ಲ, ದ್ರೋಣ ಮಾಡಲಿಲ್ಲ, ಬೇರೆ ನಿನ್ನವರೂ ಮಾಡಲಿಲ್ಲ.

ಸೂತಪುತ್ರೇಣ ನಾಗೇಷು ರಥೇಷು ಚ ಹಯೇಷು ಚ ।
ನರೇಷು ಚ ನರವ್ಯಾಘ್ರ ಕೃತಂ ಸ್ಮ ಕದನಂ ಮಹತ್ ॥೫೭॥

ರಾಜನೆ, ಕರ್ಣನು ಗಜ ರಥ ಅಶ್ವ ಪದಾತಿ ಸೈನ್ಯಗಳಲ್ಲಿ ದೊಡ್ಡ ಕಾಳಗವನ್ನೇ ಮಾಡಿದ.

ಮೃಗಮಧ್ಯೇ ಯಥಾ ಸಿಂಹೋ ದೃಶ್ಯತೇ ನಿರ್ಭಯಶ್ಚರನ್ ।
ಪಾಂಚಾಲಾನಾಂ ತಥಾ ಮಧ್ಯೇ ಕರ್ಣೋ೭ಚರದಭೀತವತ್ ॥೫೮॥

ಮೃಗಗಳ ನಡುವೆ ಸಿಂಹ ಹೇಗೆ ನಿರ್ಭಯವಾಗಿ ಸಂಚರಿಸುವುದೋ ಹಾಗೆಯೇ ಪಾಂಚಾಲರ ನಡುವೆ ಕರ್ಣನು ನಿರ್ಭಯವಾಗಿ ಸಂಚರಿಸಿದ.

ಯಥಾ ಮೃಗಗಣಾಂಸ್ತ್ರಸ್ತಾನ್ ಸಿಂಹೋ ದ್ರಾವಯತೇ ದಿಶಃ ।
ಪಾಂಚಾಲಾನಾಂ ರಥವ್ರಾತಾನ್ ಕರ್ಣೋ ದ್ರಾವಯತೇ ತಥಾ ॥೫೯॥

ಸಿಂಹವು ಹೇಗೆ ಮೃಗಸಮೂಹಗಳನ್ನು ದಿಕ್ಕುಗಳಿಗೆ ಓಡಿಸುವುದೋ ಹಾಗೇ ಕರ್ಣನು ಪಾಂಚಾಲರ ರಥಸಮೂಹಗಳನ್ನು ದಿಕ್ಕುಗಳಿಗೆ ಓಡಿಸಿದ.

ಸಿಂಹಾಸ್ಯಂ ಚ ಯಥಾ ಪ್ರಾಪ್ಯ ನ ಜೀವಂತಿ ಮೃಗಾಃ ಕ್ವಚಿತ್ ।
ತಥಾ ಕರ್ಣಮನುಪ್ರಾಪ್ಯ ನ ಜೀವಂತಿ ಮಹಾರಥಾಃ ॥೬೦॥

ಸಿಂಹದ ಬಾಯಿಗೆ ಬಿದ್ದ ಬಳಿಕ ಮೃಗಗಳು ಎಂದೂ ಬದುಕಿ ಉಳಿಯುವುದಿಲ್ಲ, ಹೇಗೋ ಹಾಗೆ ಕರ್ಣನ ದೃಷ್ಟಿಗೆ ಬಿದ್ದ ಮಹಾರಥರು ಬದುಕಿ ಉಳಿಯಲಿಲ್ಲ.

ವೈಶ್ವಾನರಂ ಯಥಾ ದೀಪ್ತಂ ದಹ್ಯಂತೇ ಪ್ರಾಪ್ಯ ವೈ ಜನಾಃ ।
ಕರ್ಣಾಗ್ನಿನಾ ರಣೇ ತದ್ವದ್ದಗ್ಧಾ ಭಾರತ ಸೃಂಜಯಾಃ ॥೬೧॥

ರಾಜನೆ, ಉರಿಯುವ ಬೆಂಕಿಯಲ್ಲಿ ಸಿಕ್ಕಿಕೊಂಡ ಜನರು ಹೇಗೆ ಸುಟ್ಟು ಹೋಗುವರೋ ಹಾಗೇ ಕರ್ಣನೆಂಬ ಬೆಂಕಿಯಿಂದ ರಣದಲ್ಲಿ ಸೃಂಜಯರು ಸುಟ್ಟು ಹೋದರು.

ಕರ್ಣೇನ ಚೇದಿಷ್ವೇಕೇನ ಪಾಂಚಾಲೇಷು ಚ ಭಾರತ ।
ವಿಶ್ರಾವ್ಯ ನಾಮ ನಿಹತಾ ಬಹವಃ ಶೂರಸಮ್ಮತಾಃ ॥೬೨॥

ರಾಜನೆ, ಕರ್ಣನೊಬ್ಬನೇ ತನ್ನ ಹೆಸರನ್ನು ಘೋಷಿಸಿ ಚೇದಿಗಳಲ್ಲಿ ಪಾಂಚಾಲರಲ್ಲಿ ಶೂರರೆಂದು ಪ್ರಸಿದ್ಧರಾದ ಬಹುಮಂದಿ ಯೋಧರನ್ನು ಕೊಂದ.

ಮಮ ಚಾಸೀನ್ ಮನುಷ್ಯೇಂದ್ರ ದೃಷ್ಟ್ವಾ ಕರ್ಣಸ್ಯ ವಿಕ್ರಮಮ್ ।
ನೈಕೋಽಪ್ಯಧಿರಥೇರ್ಜೀವನ್ ಪಾಂಚಾಲ್ಯೋ ಮೋಕ್ಷ್ಯತೇ
ಯುಧಿ ॥೬೩॥

ಪಾಂಚಾಲಾನಥ ನಿಘ್ನಂತಂ ಕರ್ಣಂ ದೃಷ್ಟ್ವಾ ಮಹಾರಣೇ ॥೬೪॥

ಪಾಂಚಾಲರನ್ನು ಮಹಾರಣದಲ್ಲಿ ಸಂಹರಿಸುತ್ತಿದ್ದ ಕರ್ಣನನ್ನು ನೋಡಿದಾಗ ಕರ್ಣನ ಪರಾಕ್ರಮವನ್ನು ಕಂಡು, ಕರ್ಣನಿಂದ ಒಬ್ಬನು ಪಾಂಚಾಲನೂ ಕೂಡ ರಣದಲ್ಲಿ ಜೀವಂತವಾಗಿ ಉಳಿಯುವುದಿಲ್ಲವೆಂದು ನನಗೆ ಅನ್ನಿಸಿತು.

ಪಾಂಚಾಲಾನ್ ವಿಧಮನ್ ಸಂಖ್ಯೇ ಸೂತಪುತ್ರಃ ಪ್ರತಾಪವಾನ್ ।
ಅಭ್ಯಧಾವತ ಸಂಕ್ರುದ್ಧೋ ಧರ್ಮಪುತ್ರಂ ಯುಧಿಷ್ಠಿರಮ್ ॥೬೫॥

ಪಾಂಚಾಲರನ್ನು ಸಂಹರಿಸುತ್ತ ಪ್ರತಾಪಶಾಲಿಯಾದ ಕರ್ಣನು ರಣದಲ್ಲಿ ಕ್ರುದ್ಧನಾಗಿ ಧರ್ಮಪುತ್ರ ಯುಧಿಷ್ಠಿರನನ್ನೂ ಆಕ್ರಮಿಸಿದ.

ಧೃಷ್ಟದ್ಯುಮ್ನಶ್ಚ ರಾಧೇಯಂ ದ್ರೌಪದೇಯಾಶ್ಚ ಮಾರಿಷ ।
ಪರಿವವ್ರುರಮಿತ್ರಘ್ನಂ ಶತಶಶ್ಚಾಪರೇ ಜನಾಃ ॥೬೬॥

ರಾಜನೆ, ಆಗ ಶತ್ರುನಾಶಕನಾದ ಕರ್ಣನನ್ನು ಧೃಷ್ಟದ್ಯುಮ್ನನೂ ದ್ರೌಪದೀ ಪುತ್ರರೂ ನೂರಾರು ಬೇರೆ ಯೋಧರೂ ಸುತ್ತುವರಿದರು.

ಶಿಖಂಡೀ ಸಹದೇವಶ್ಚ ನಕುಲೋ ನಾಕುಲಿಸ್ತಥಾ ।
ಜನಮೇಜಯಃ ಶಿನೇರ್ನಪ್ತಾ ಬಹವಶ್ಚ ಪ್ರಭದ್ರಕಾಃ ॥೬೭॥

ಏತೇ ಪುರೋಗಮಾ ಭೂತ್ವಾ ಧೃಷ್ಟದ್ಯುಮ್ನಶ್ಚ ಸಂಯುಗೇ ।
ಕರ್ಣಮಸ್ಯಂತಮಿಷ್ವಸ್ತ್ರೈರ್ವಿಚೇರುರಮಿತೌಜಸಃ ॥೬೮॥

ಅಮಿತ ಪರಾಕ್ರಮಿಗಳಾದ ಶಿಖಂಡಿ, ಸಹದೇವ, ನಕುಲ, ಶತಾನೀಕ, ಜನಮೇಜಯ, ಸಾತ್ಯಕಿ ಅನೇಕ ಪ್ರಭದ್ರಕ ಯೋಧರು ಮತ್ತು ಧೃಷ್ಟದ್ಯುಮ್ನ ಇವರು ಮುಂದೆ ಹೋಗಿ, ಅವ್ಯಾಹತವಾಗಿ ಬಾಣಗಳನ್ನೆಸೆಯುತ್ತಿದ್ದ ಕರ್ಣನನ್ನು ರಣದಲ್ಲಿ ಆಕ್ರಮಿಸಿದರು.

ತಾಂಸ್ತತ್ರಾಧಿರಥಿಃ ಸಂಖೇ ಚೇದಿಪಾಂಚಾಲಪಾಂಡವಾನ್ ।
ಏಕೋ ಬಹೂನಭ್ಯಪತದ್ ಗರುತ್ಮಾನ್ ಪನ್ನಗಾನಿವ ॥೬೯॥

ಅಲ್ಲಿ ಒಬ್ಬನೇ ಕರ್ಣ ಬಹುಮಂದಿ ಚೇದಿ ಪಾಂಚಾಲ ಪಾಂಡವರನ್ನು ರಣದಲ್ಲಿ ಒಬ್ಬನೇ ಗರುಡ ಬಹು ಸರ್ಪಗಳನ್ನು ಇದಿರಿಸುವಂತೆ ಇದಿರಿಸಿದ.

ತೈಃ ಕರ್ಣಸ್ಯಾಭವದ್ ಯುದ್ಧಂ ಘೋರರೂಪಂ ವಿಶಾಂಪತೇ ।
ತಾದೃಗ್ಯಾದೃಕ್ಪುರಾ ವೃತ್ತಂ ದೇವಾನಾಂ ದಾನವೈಃ ಸಹ ॥೭೦॥

ರಾಜನೆ, ಹಿಂದೆ ದೇವತೆಗಳಿಗೆ ದಾನವರೊಂದಿಗೆ ಯಾವ ರೀತಿಯ ಯುದ್ಧ ನಡೆಯಿತೋ ಅದೇ ರೀತಿಯ ಘೋರವಾದ ಯುದ್ಧ ಕರ್ಣನಿಗೆ ಅವರೊಂದಿಗೆ ನಡೆಯಿತು.

ತಾನ್ ಸಮೇತಾನ್ ಮಹೇಷ್ವಾಸಾನ್ ಶರವರ್ಷೈಘವರ್ಷಿಣಃ ।
ಏಕೋಽಭ್ಯಭವದವ್ಯಗ್ರಸ್ತಮಾಂಸೀವ ದಿವಾಕರಃ ॥೭೧॥

ಎಲ್ಲರೂ ಸೇರಿ ಬಾಣಗಳ ಮಳೆಧಾರೆಗಳನ್ನು ಸುರಿಸುವ ಆ ಎಲ್ಲ ಮಹಾ ಬಿಲ್ಗಾರರನ್ನೂ ಎಲ್ಲ ಕತ್ತಲೆಗಳನ್ನೂ ಒಬ್ಬನೇ ಸೂರ್ಯನಂತೆ, ಒಬ್ಬನೇ ಕರ್ಣ ಆಕ್ರಮಿಸಿದ.

ಭೀಮಸೇನಸ್ತು ಸಂಕ್ರುದ್ಧೋ ರಾಧೇಯಂ ಪಾಂಡವೈಃ ಸಹ ॥೭೨॥
ಕುರೂಶಾಂಶ್ಚಾಭ್ಯಹನತ್ ಕ್ರುದ್ಧಾನ್ ಯಮದಂಡನಿಭೈಃ ಶರೈಃ ।

ಭೀಮಸೇನನು ಪಾಂಡವಯೋಧರೊಂದಿಗೆ ಸೇರಿ ಕರ್ಣನನ್ನೂ ಕ್ರುದ್ಧರಾದ ಕುರುಯೋಧರನ್ನೂ ಯಮದಂಡದಂಥ ಬಾಣಗಳಿಂದ ಹೊಡೆದ.

ಬಾಹ್ಲೀಕಾನ್ ಕೇಕಯಾನ್ ಮತ್ಸ್ಯಾನ್ ವಾಸಾತ್ಯಾನ್
ಮದ್ರಸೈಂಧವಾನ್ ॥೭೩॥

ಏಕಃ ಸಂಖೇ ಮಹೇಷ್ವಾಸಾನ್ ಯೋಧಯನ್ ಬಹ್ವಶೋಭತ ॥೭೪॥

ಬಾಹ್ಲೀಕ-ಕೇಕಯ-ಮತ್ಸ್ಯ-ವಸಾತಿ-ಮದ್ರ-ಸೈಂಧವ ಮುಂತಾದ ಮಹಾ ಬಿಲ್ಲಾರರನ್ನೂ ಭೀಮ ಏಕಾಕಿಯಾಗಿ ರಣದಲ್ಲಿ ಹೊಡೆಯುತ್ತ ಬಹಳ ಶೋಭಿಸಿದ.

ತತ್ರ ಮರ್ಮಸು ಭೀಮೇನ ನಾರಾಚೈಸ್ತಾಡಿತಾ ಗಜಾಃ ।
ಪ್ರಪತಂತೋ ಹತಾರೋಹಾಃ ಕಂಪಯಂತಿ ಸ್ಮ ಮೇದಿನೀಮ್ ॥೭೫॥

ಭೀಮನಿಂದ ಮರ್ಮಸ್ಥಳಗಳಲ್ಲಿ ಬಾಣಗಳಿಂದ ತಾಡಿತವಾದ ಗಜಗಳು ಮತ್ತು ಹತರಾದ ಆರೋಹಿಗಳು ಬೀಳುವಾಗ ನೆಲವನ್ನು ಅದಿರುವಂತೆ ಮಾಡಿದರು.

ವಾಜಿನಶ್ಚ ಹತಾರೋಹಾಃ ಪತ್ತಯಶ್ಚ ಗತಾಸವಃ ।
ಅಶೇರತ ಮಹಾರಾಜ ವಮಂತೋ ರುಧಿರಂ ಬಹು ॥೭೬॥

ಮಹಾರಾಜ, ಹತರಾದ ಆರೋಹಿಗಳೊಂದಿಗೆ ಅಶ್ವಗಳೂ, ಅಸುತೊರೆದ ಪದಾತಿಗಳೂ ಬಹು ನೆತ್ತರನ್ನು ವಮನ ಮಾಡುತ್ತ ನೆಲದಲ್ಲಿ ಒರಗಿದರು.

ಸಹಸ್ರಶಶ್ಚ ರಥಿನಃ ಪತಿತಾಃ ಪತಿತಾಯುಧಾಃ ।
ಅಕ್ಷತಾಃ ಸಮದೃಶ್ಯಂತ ಭೀಮಾದ್ ಭೀತಾ ಗತಾಸವಃ ॥೭೭॥

ಸಾವಿರಗಟ್ಟಲೆ ರಥಿಕರು ಬಿದ್ದರು, ಅವರ ಆಯುಧಗಳು ಬಿದ್ದುವು, ಕೆಲವರು ಏನೂ ಗಾಯ ಹೊಂದದೆ, ಭೀಮನಿಗೆ ಭಯಪಟ್ಟೇ ಅಸು ನೀಗಿದುದು ಕಂಡುಬಂದಿತು.

ರಥಿಭಿರ್ವಾಜಿಭಿಃ ಸೂತೈಃ ಪತ್ತಿಭಿಶ್ಚ ತಥಾ ಗಜೈಃ ।
ಭೀಮಸೇನಶರಚ್ಛಿನ್ನೈರಾಸ್ತೀರ್ಣಾ ವಸುಧಾऽಭವತ್ ॥೭೮॥

ರಥಿಕರು ಅಶ್ವಗಳು ಸಾರಥಿಗಳು ಪದಾತಿಗಳು ಗಜಗಳು ಭೀಮಸೇನನ ಬಾಣಗಳಿಂದ ಕತ್ತರಿಸಲ್ಪಟ್ಟು ನೆಲದಲ್ಲಿ ಒರಗಿ ರಣಭೂಮಿಯನ್ನು ಪೂರ್ತಿ ಆವರಿಸಿದರು.

ತತ್‌ಸ್ತಂಭಿತಮಿವಾತಿಷ್ಠದ್ ಭೀಮಸೇನಬಲಾರ್ದಿತಮ್ ।
ದುರ್ಯೋಧನಬಲಂ ರಾಜನ್ನಿರುತ್ಸಾಹಂ ಕೃತವ್ರಣಮ್ ॥೭೯॥

ರಾಜನೆ, ಭೀಮಸೇನನ ಬಲದಿಂದ ಪೀಡಿತವಾದ ದುರ್ಯೋಧನನ ಸೈನ್ಯವು ಗಾಯ ಹೊಂದಿ ನಿರುತ್ಸಾಹಗೊಂಡಿತು. ನಿಶ್ಚೇಷ್ಟವಾದಂತೆ ತೋರಿತು.

ನಿಶ್ಚೇಷ್ಟಂ ತುಮುಲೇ ದೀನಂ ಬಭೌ ತಸ್ಮಿನ್ ಮಹಾರಣೇ ।
ಪ್ರಸನ್ನಸಲಿಲಃ ಕಾಲೇ ಯಥಾ ಸ್ಯಾತ್ ಸಾಗರೋ ನೃಪ ॥೮೦॥
ತದ್ವತ್ತವ ಬಲಂ ತದ್ವೈ ನಿಶ್ಚಲಂ ಸಮವಸ್ಥಿತಮ್ ॥೮೧॥

ಕ್ಷೋಭೆಗೊಂಡ ಮಹಾರಣದಲ್ಲಿ ದುರ್ಯೋಧನನ ಸೈನ್ಯವು ನಿಶ್ಚೇಷ್ಟವಾಗಿ ದೀನವಾಗಿ ಕಂಡಿತು. ಏರಿಳಿತವಿಲ್ಲದ ಕಾಲದಲ್ಲಿ ಸಮುದ್ರ ಶಾಂತವಾಗಿರುವಂತೆ ನಿನ್ನ ಸೈನ್ಯವು ಸ್ತಬ್ಧವಾಯಿತು.

ಮನ್ಯುವೀರ್ಯಬಲೋಪೇತಂ ದರ್ಪಾತ್ ಪ್ರತ್ಯವರೋಪಿತಮ್ ।
ಅಭವತ್ ತವ ಪುತ್ರಸ್ಯ ತತ್ಸೈನ್ಯಂ ನಿಷ್ಪ್ರಭಂ ತದಾ ॥೮೨॥
ರುಧಿರೌಘಪರಿಕ್ಲಿನ್ನಂ ರುಧಿರಾರ್ದ್ರಂ ಬಭೂವ ಹ ॥೮೩॥

ಕೋಪ ಪರಾಕ್ರಮ ಬಲಗಳಿಂದ ಕೂಡಿದ್ದ ನಿನ್ನ ಮಗನ ಸೈನ್ಯವು ದರ್ಪವನ್ನು ಪೂರ್ತಿ ಕಳೆದುಕೊಂಡಿತು. ಕಳೆಗುಂದಿತು. ರಕ್ತಪ್ರವಾಹದಿಂದ ತೊಯ್ದು ಒದ್ದೆಯಾಯಿತು.

ಸೂತಪುತ್ರೋ ರಣೇ ಕ್ರುದ್ಧಃ ಪಾಂಡವಾನಾಮನೀಕಿನೀಮ್ ।
ಭೀಮಸೇನಃ ಕುರೂಂಶ್ಚಾಪಿ ದ್ರಾವಯಂತೌ ವಿರೇಜತುಃ ॥೮೪॥

ಕರ್ಣನು ಕ್ರುದ್ಧನಾಗಿ ಪಾಂಡವರ ಸೈನ್ಯವನ್ನು ಭೀಮಸೇನನು ಕ್ರುದ್ಧನಾಗಿ ಕೌರವರ ಸೈನ್ಯವನ್ನು ಹೊಡೆದೋಡಿಸುತ್ತ ಇಬ್ಬರೂ ವಿರಾಜಮಾನರಾದರು.

ವರ್ತಮಾನೇ ತಥಾ ರೌದ್ರೇ ಸಂಗ್ರಾಮೇಽದ್ಭುತದರ್ಶನೇ ।
ನಿಹತ್ಯ ಪೃತನಾಮಧ್ಯೇ ಸಂಶಪ್ತಕಗಣಾನ್ ಬಹೂನ್ ॥೮೫॥

ಅರ್ಜುನೋ ಜಯತಾಂ ಶ್ರೇಷ್ಠೋ ವಾಸುದೇವಮಥಾಬ್ರವೀತ್ ।
ಪ್ರಭಗ್ನಂ ಬಲಮೇತದ್ಧಿ ಯೋತ್ಸ್ಯಮಾನಂ ಜನಾರ್ದನ ॥೮೬॥

ಅದ್ಭುತವಾಗಿ ಕಾಣುವ ಭೀಕರವಾದ ಯುದ್ಧ ನಡೆಯುವಾಗ, ಸೈನ್ಯಮಧ್ಯದಲ್ಲಿ

ಬಹು ಸಂಶಪ್ತಕಗಣಗಳನ್ನು ಸಂಹರಿಸಿ, ಜಯ ಗಳಿಸುವವರಲ್ಲಿ ಶ್ರೇಷ್ಠನಾದ ಅರ್ಜುನನು ಶ್ರೀಕೃಷ್ಣನಿಗೆ ನುಡಿದ, 'ಕೃಷ್ಣ ಹೋರಾಡಬೇಕಿದ್ದ ಈ ಸಂಶಪ್ತಕ ಸೈನ್ಯವೀಗ ಭಗ್ನವಾಗಿದೆ.

ಏತೇ ಧಾವಂತಿ ಸಗಣಾಃ ಸಂಶಪ್ತಕಮಹಾರಥಾಃ ।
ಅಪಾರಯಂತೋ ಮದ್‌ಬಾಣಾನ್ ಸಿಂಹಶಬ್ದಾನ್ ಮೃಗಾ ಇವ ॥೮೭॥

'ಸಿಂಹಗರ್ಜನೆಯನ್ನು ಮೃಗಗಳಂತೆ, ನನ್ನ ಬಾಣಗಳನ್ನು ಈ ಸಂಶಪ್ತಕ ಮಹಾರಥರು ಮತ್ತು ಅವರ ಗಣಗಳು ಇದಿರಿಸಲಾಗದೆ ಓಡಿ ಹೋಗುತ್ತಿದ್ದಾರೆ.

ದೀರ್ಯತೇ ಚ ಮಹತ್ಸೈನ್ಯಂ ಸೃಂಜಯಾನಾಂ ಮಹಾರಣೇ ।
ಹಸ್ತಿಕಕ್ಷ್ಯೋ ಹ್ಯಸೌ ಕೃಷ್ಣ ಕೇತುಃ ಕರ್ಣಸ್ಯ ಧೀಮತಃ ॥೮೮॥
ದೃಶ್ಯತೇ ಗಜಸೈನ್ಯಸ್ಯ ಮಧ್ಯೇ ವಿಚರತೋ ಮುಹುಃ ॥೮೯॥

'ಆದರೆ ಸೃಂಜಯರ ಮಹಾಸೈನ್ಯವು ಮಹಾರಣದಲ್ಲಿ ಭಗ್ನವಾಗುತ್ತಿದೆ. ಕೃಷ್ಣ ಗಜಸೈನ್ಯದ ನಡುವೆ ಸಂಚರಿಸುತ್ತಿರುವ ಧೀಮಂತನಾದ ಕರ್ಣನ ಹಸ್ತಿಕಕ್ಷ್ಯಧ್ವಜವೇ ಮತ್ತೆ ಮತ್ತೆ ದೃಷ್ಟಿಗೋಚರವಾಗುತ್ತಿದೆ.

ನ ಚ ಕರ್ಣಂ ರಣೇ ಶಕ್ತಾ ಜೇತುಮನ್ಯೇ ಮಹಾರಥಾಃ ।
ಜಾನೀತೇ ಹಿ ಭವಾನ್ ಕರ್ಣಂ ವೀರ್ಯವಂತಂ ಪರಾಕ್ರಮೇ ॥೯೦॥
ತತ್ರ ಯಾಹಿ ಯತಃ ಕರ್ಣೋ ದ್ರಾವಯತ್ಯೇಷ ನೋ ಬಲಮ್ ॥೯೧॥

'ಕರ್ಣನನ್ನು ರಣದಲ್ಲಿ ಗೆಲ್ಲಲು ಬೇರೆ ಮಹಾರಥರು ಯಾರೂ ಶಕ್ತರಲ್ಲ. ಪರಾಕ್ರಮದಲ್ಲಿ ಮಹಾಬಲ ಉಳ್ಳವನು ಕರ್ಣನೆಂದು ನಿನಗೇ ಗೊತ್ತು. ಎಲ್ಲಿ ಕರ್ಣನು ನಮ್ಮ ಸೈನ್ಯವನ್ನು ಹೊಡೆದೋಡಿಸುತ್ತಿರುವನೋ ಅಲ್ಲಿಗೆ ನಡೆ.

ತ್ವರಯನ್ ವೈ ರಣೇ ಯಾಹಿ ಸೂತಪುತ್ರಂ ಮಹಾರಥಮ್ ।
ಏವಂ ಮೇ ರೋಚತೇ ಕೃಷ್ಣ ಯಥಾ ವಾ ತವ ರೋಚತೇ ॥೯೨॥

'ಮಹಾರಾಥನಾದ ಕರ್ಣನಿರುವಲ್ಲಿಗೇ ಬೇಗನೆ ಹೋಗು. ಹೀಗೆ ಮಾಡುವುದೇ ನನಗೆ ಸರಿಕಾಣುತ್ತದೆ. ನಿನಗೆ, ಹೇಗೆ ಮಾಡಿದರೆ ಸರಿ ಎನಿಸುತ್ತದೆ?'

ರಾಜನೆ, ಭೀಮಸೇನನ ಬಲದಿಂದ ಪೀಡಿತವಾದ ದುರ್ಯೋಧನನ ಸೈನ್ಯವು ಗಾಯ ಹೊಂದಿ ನಿರುತ್ಸಾಹಗೊಂಡಿತು. ನಿಶ್ಚೇಷ್ಟವಾದಂತೆ ತೋರಿತು.

ನಿಶ್ಚೇಷ್ಟಂ ತುಮುಲೇ ದೀನಂ ಬಭೌ ತಸ್ಮಿನ್ ಮಹಾರಣೇ ।
ಪ್ರಸನ್ನಸಲಿಲಃ ಕಾಲೇ ಯಥಾ ಸ್ಯಾತ್ ಸಾಗರೋ ನೃಪ ॥೮೦॥
ತದ್ವತ್ತವ ಬಲಂ ತದ್ವೈ ನಿಶ್ಚಲಂ ಸಮವಸ್ಥಿತಮ್ ॥೮೧॥

ಕ್ಷೋಭೆಗೊಂಡ ಮಹಾರಣದಲ್ಲಿ ದುರ್ಯೋಧನನ ಸೈನ್ಯವು ನಿಶ್ಚೇಷ್ಟವಾಗಿ ದೀನವಾಗಿ ಕಂಡಿತು. ಏರಿಳಿತವಿಲ್ಲದ ಕಾಲದಲ್ಲಿ ಸಮುದ್ರ ಶಾಂತವಾಗಿರುವಂತೆ ನಿನ್ನ ಸೈನ್ಯವು ಸ್ತಬ್ಧವಾಯಿತು.

ಮನ್ಯುವೀರ್ಯಬಲೋಪೇತಂ ದರ್ಪಾತ್ ಪ್ರತ್ಯವರೋಪಿತಮ್ ।
ಅಭವತ್ ತವ ಪುತ್ರಸ್ಯ ತತ್ಸೈನ್ಯಂ ನಿಷ್ಪ್ರಭಂ ತದಾ ॥೮೨॥
ರುಧಿರೌಘಪರಿಕ್ಲಿನ್ನಂ ರುಧಿರಾರ್ದ್ರಂ ಬಭೂವ ಹ ॥೮೩॥

ಕೋಪ ಪರಾಕ್ರಮ ಬಲಗಳಿಂದ ಕೂಡಿದ್ದ ನಿನ್ನ ಮಗನ ಸೈನ್ಯವು ದರ್ಪವನ್ನು ಪೂರ್ತಿ ಕಳೆದುಕೊಂಡಿತು. ಕಳೆಗುಂದಿತು. ರಕ್ತಪ್ರವಾಹದಿಂದ ತೊಯ್ದು ಒದ್ದೆಯಾಯಿತು.

ಸೂತಪುತ್ರೋ ರಣೇ ಕ್ರುದ್ಧಃ ಪಾಂಡವಾನಾಮನೀಕಿನೀಮ್ ।
ಭೀಮಸೇನಃ ಕುರೂಂಶ್ಚಾಪಿ ದ್ರಾವಯಂತೌ ವಿರೇಜತುಃ ॥೮೪॥

ಕರ್ಣನು ಕ್ರುದ್ಧನಾಗಿ ಪಾಂಡವರ ಸೈನ್ಯವನ್ನು ಭೀಮಸೇನನು ಕ್ರುದ್ಧನಾಗಿ ಕೌರವರ ಸೈನ್ಯವನ್ನು ಹೊಡೆದೋಡಿಸುತ್ತ ಇಬ್ಬರೂ ವಿರಾಜಮಾನರಾದರು.

ವರ್ತಮಾನೇ ತಥಾ ರೌದ್ರೇ ಸಂಗ್ರಾಮೇऽದ್ಭುತದರ್ಶನೇ ।
ನಿಹತ್ಯ ಪೃತನಾಮಧ್ಯೇ ಸಂಶಪ್ತಕಗಣಾನ್ ಬಹೂನ್ ॥೮೫॥

ಅರ್ಜುನೋ ಜಯತಾಂ ಶ್ರೇಷ್ಠೋ ವಾಸುದೇವಮಥಾಬ್ರವೀತ್ ।
ಪ್ರಭಗ್ನಂ ಬಲಮೇತದ್ಧಿ ಯೋತ್ಸ್ಯಮಾನಂ ಜನಾರ್ದನ ॥೮೬॥

ಅದ್ಭುತವಾಗಿ ಕಾಣುವ ಭೀಕರವಾದ ಯುದ್ಧ ನಡೆಯುವಾಗ, ಸೈನ್ಯಮಧ್ಯದಲ್ಲಿ

ಬಹು ಸಂಶಪ್ತಕಗಣಗಳನ್ನು ಸಂಹರಿಸಿ, ಜಯ ಗಳಿಸುವವರಲ್ಲಿ ಶ್ರೇಷ್ಠನಾದ ಅರ್ಜುನನು ಶ್ರೀಕೃಷ್ಣನಿಗೆ ನುಡಿದ, 'ಕೃಷ್ಣ ಹೋರಾಡಬೇಕಿದ್ದ ಈ ಸಂಶಪ್ತಕ ಸೈನ್ಯವೀಗ ಭಗ್ನವಾಗಿದೆ.

ಏತೇ ಧಾವಂತಿ ಸಗಣಾಃ ಸಂಶಪ್ತಕಮಹಾರಥಾಃ ।
ಅಪಾರಯಂತೋ ಮದ್‌ಬಾಣಾನ್ ಸಿಂಹಶಬ್ದಾನ್ ಮೃಗಾ ಇವ ॥೮೭॥

'ಸಿಂಹಗರ್ಜನೆಯನ್ನು ಮೃಗಗಳಂತೆ, ನನ್ನ ಬಾಣಗಳನ್ನು ಈ ಸಂಶಪ್ತಕ ಮಹಾರಥರು ಮತ್ತು ಅವರ ಗಣಗಳು ಇದಿರಿಸಲಾಗದೆ ಓಡಿ ಹೋಗುತ್ತಿದ್ದಾರೆ.

ದೀರ್ಯತೇ ಚ ಮಹತ್ಸೈನ್ಯಂ ಸೃಂಜಯಾನಾಂ ಮಹಾರಣೇ ।
ಹಸ್ತಿಕಕ್ಷ್ಯೋ ಹ್ಯಸೌ ಕೃಷ್ಣ ಕೇತುಃ ಕರ್ಣಸ್ಯ ಧೀಮತಃ ॥೮೮॥
ದೃಶ್ಯತೇ ಗಜಸೈನ್ಯಸ್ಯ ಮಧ್ಯೇ ವಿಚರತೋ ಮುಹುಃ ॥೮೯॥

'ಆದರೆ ಸೃಂಜಯರ ಮಹಾಸೈನ್ಯವು ಮಹಾರಣದಲ್ಲಿ ಭಗ್ನವಾಗುತ್ತಿದೆ. ಕೃಷ್ಣ ಗಜಸೈನ್ಯದ ನಡುವೆ ಸಂಚರಿಸುತ್ತಿರುವ ಧೀಮಂತನಾದ ಕರ್ಣನ ಹಸ್ತಿಕಕ್ಷ್ಯಧ್ವಜವೇ ಮತ್ತೆ ಮತ್ತೆ ದೃಷ್ಟಿಗೋಚರವಾಗುತ್ತಿದೆ.

ನ ಚ ಕರ್ಣಂ ರಣೇ ಶಕ್ತಾ ಜೇತುಮನ್ಯೇ ಮಹಾರಥಾಃ ।
ಜಾನೀತೇ ಹಿ ಭವಾನ್ ಕರ್ಣಂ ವೀರ್ಯವಂತಂ ಪರಾಕ್ರಮೇ ॥೯೦॥
ತತ್ರ ಯಾಹಿ ಯತಃ ಕರ್ಣೋ ದ್ರಾವಯತ್ಯೇಷ ನೋ ಬಲಮ್ ॥೯೧॥

'ಕರ್ಣನನ್ನು ರಣದಲ್ಲಿ ಗೆಲ್ಲಲು ಬೇರೆ ಮಹಾರಥರು ಯಾರೂ ಶಕ್ತರಲ್ಲ. ಪರಾಕ್ರಮದಲ್ಲಿ ಮಹಾಬಲ ಉಳ್ಳವನು ಕರ್ಣನೆಂದು ನಿನಗೇ ಗೊತ್ತು. ಎಲ್ಲಿ ಕರ್ಣನು ನಮ್ಮ ಸೈನ್ಯವನ್ನು ಹೊಡೆದೋಡಿಸುತ್ತಿರುವನೋ ಅಲ್ಲಿಗೆ ನಡೆ.

ತ್ವರಯನ್ ವೈ ರಣೇ ಯಾಹಿ ಸೂತಪುತ್ರಂ ಮಹಾರಥಮ್ ।
ಏವಂ ಮೇ ರೋಚತೇ ಕೃಷ್ಣ ಯಥಾ ವಾ ತವ ರೋಚತೇ ॥೯೨॥

'ಮಹಾರಾಥನಾದ ಕರ್ಣನಿರುವಲ್ಲಿಗೇ ಬೇಗನೆ ಹೋಗು. ಹೀಗೆ ಮಾಡುವುದೇ ನನಗೆ ಸರಿಕಾಣುತ್ತದೆ. ನಿನಗೆ, ಹೇಗೆ ಮಾಡಿದರೆ ಸರಿ ಎನಿಸುತ್ತದೆ?'

ಏತಚ್ಛ್ರುತ್ವಾ ಮಹಾರಾಜ ಗೋವಿಂದಃ ಪ್ರಹಸನ್ನಿವ ।
ಅಬ್ರವೀದರ್ಜುನಂ ತೂರ್ಣಂ ಕೌರವಾನ್ ಜಹಿ ಪಾಂಡವ ॥೯೩॥

ಮಹಾರಾಜ, ಶ್ರೀಕೃಷ್ಣ ಇದನ್ನು ಕೇಳಿ ನಕ್ಕು ಅರ್ಜುನನಿಗೆ, 'ಅರ್ಜುನ, ಬೇಗನೆ ಕೌರವರನ್ನು ಗೆಲ್ಲು' ಎಂದ.

ತತಸ್ತವ ಮಹತ್‌ಸೈನ್ಯಂ ಗೋವಿಂದಪ್ರೇರಿತಾ ಹಯಾಃ ।
ಹಂಸವರ್ಣಾಃ ಪ್ರವಿವಿಶುರ್ವಹಂತಃ ಕೃಷ್ಣಪಾಂಡವೌ ॥೯೪॥

ಶ್ರೀಕೃಷ್ಣನು ನಡೆಸುವ ಹಂಸವರ್ಣದ ಅಶ್ವಗಳು ಕೃಷ್ಣ-ಅರ್ಜುನರನ್ನು ಹೊತ್ತು ನಿನ್ನ ಮಹಾಸೈನ್ಯವನ್ನು ಪ್ರವೇಶಿಸಿದುವು.

ಕೇಶವಪ್ರಹಿತೈರಶ್ವೈಃ ಶ್ವೇತೈಃ ಕಾಂಚನಭೂಷಣೈಃ ।
ಪ್ರವಿಶದ್ಭಿಸ್ತವ ಬಲಂ ಚತುರ್ದಿಶಮಭಿದ್ಯತ ॥೯೫॥

ಕೃಷ್ಣನು ನಡೆಸಿದ ಬಂಗಾರದಿಂದ ಅಲಂಕೃತವಾದ ಶ್ವೇತವರ್ಣದ ಅಶ್ವಗಳು ಪ್ರವೇಶಿಸಿದೊಡನೆ ನಿನ್ನ ಸೈನ್ಯವು ಭಯದಿಂದ ನಾಲ್ಕು ದಿಕ್ಕುಗಳಿಗೆ ಚದುರಿತು.

ಮೇಘಸ್ತನಿತನಿರ್ಹ್ರಾದಃ ಸ ರಥೋ ವಾನರಧ್ವಜಃ ।
ಚಲತ್ಪತಾಕಸ್ತಾಂ ಸೇನಾಂ ವಿಮಾನಂ ದ್ಯಾಮಿವಾವಿಶತ್ ॥೯೬॥

ಸಿಡಿಲುಮೊಳಗುವಂಥ ಧ್ವನಿಯುಳ್ಳ, ವಾನರಧ್ವಜಯುಕ್ತವಾದ, ಹಾರಾಡುವ ಪತಾಕೆಗಳುಳ್ಳ ಆ ರಥವು, ಆ ನಿನ್ನ ಸೈನ್ಯವನ್ನು ಅಂತರಿಕ್ಷವನ್ನು ವಿಮಾನವು ಪ್ರವೇಶಿಸುವಂತೆ ಪ್ರವೇಶಿಸಿತು.

ತೌ ವಿದಾರ್ಯ ಮಹಾಸೇನಾಂ ಪ್ರವಿಷ್ಟೌ ಕೇಶವಾರ್ಜುನೌ ।
ಕ್ರುದ್ಧೌ ಸಂರಂಭರಕ್ತಾಕ್ಷೌ ವ್ಯಭ್ರಾಜೇತಾಂ ಮಹಾದ್ಯುತೀ ॥೯೭॥

ಮಹಾಸೈನ್ಯವನ್ನು ಭೇದಿಸಿ ಪ್ರವೇಶಿಸಿದ ಆ ಕೃಷ್ಣಾರ್ಜುನರು ಕ್ರುದ್ಧರಾಗಿ ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿ ಮಹಾತೇಜೋಯುಕ್ತರಾಗಿ ಬೆಳಗಿದರು.

ಯುದ್ಧಶೌಂಡೌ ಸಮಾಹೂತಾವರಿಭಿಸ್ತೌ ರಣಾಧ್ವರಮ್ ।
ಯಜ್ವಭಿರ್ವಿಧಿನಾಹೂತೌ ಮಖೇ ದೇವಾವಿವಾಶ್ವಿನೌ ॥೯೮॥

ಯಜ್ಞದಲ್ಲಿ ಋತ್ವಿಜರು ವಿಧ್ಯುಕ್ತವಾಗಿ ಆಹ್ವಾನಿಸಿದಾಗ ಬರುವ ಇಬ್ಬರು ಅಶ್ವಿನೀದೇವತೆಗಳಂತೆ, ಶತ್ರುಗಳು ರಣಯಜ್ಞದಲ್ಲಿ ಆಹ್ವಾನಿಸಿದ, ಯುದ್ಧದಲ್ಲಿ ನಿಪುಣರಾದ, ಆ ಇಬ್ಬರು ಕೃಷ್ಣ-ಅರ್ಜುನರು ಬಂದರು.

ಕ್ರುದ್ಧೌ ತೌ ತು ನರವ್ಯಾಘ್ರೌ ವೇಗವಂತೌ ಬಭೂವತುಃ ।
ತಲಶಬ್ದೇನ ರುಷಿತೌ ಯಥಾ ನಾಗೌ ಮಹಾಹವೇ ॥೯೯॥

ಆನೆಗಳು ಚಪ್ಪಾಳೆಯ ಶಬ್ದ ಕೇಳಿ ಕೋಪಗೊಳ್ಳುವಂತೆ ಮಹಾರಣದಲ್ಲಿ ವೇಗಶಾಲಿಗಳಾದ ಆ ಪುರುಷಶ್ರೇಷ್ಠರು ಕ್ರುದ್ಧರಾದರು.

ವಿಗಾಹನ್ ಸ ರಥಾನೀಕಮಶ್ವಸಂಘಾಂಶ್ಚ ಫಲ್ಗುನಃ ।
ವ್ಯಚರತ್ ಪೃತನಾಮಧ್ಯೇ ಪಾಶಹಸ್ತ ಇವಾಂತಕಃ ॥೧೦೦॥

ಅರ್ಜುನನು ಸೈನ್ಯದ ನಡುವೆ ರಥಸಮೂಹಗಳನ್ನೂ ಅಶ್ವಸಮೂಹಗಳನ್ನೂ ಪ್ರವೇಶಿಸಿ ಪಾಶವನ್ನು ಹಿಡಿದ ಯಮನಂತೆ ಸಂಚರಿಸಿದ.

ತಂ ದೃಷ್ಟ್ವಾ ಯುಧಿ ವಿಕ್ರಾಂತಂ ಸೇನಾಯಾಂ ತವ ಭಾರತ ।
ಸಂಶಪ್ತಕಗಣಾನ್ ಭೂಯಃ ಪುತ್ರಸ್ತೇ ಸಮಚೋದಯತ್ ॥೧೦೧॥

ರಾಜನೆ, ಅರ್ಜುನನು ನಿನ್ನ ಸೈನ್ಯದಲ್ಲಿ ಪ್ರವೇಶಿಸಿ ರಣದಲ್ಲಿ ಪರಾಕ್ರಮ ತೋರಲು ತೊಡಗಿದ್ದನ್ನು ಕಂಡು ನಿನ್ನ ಮಗನು ಪುನಃ ಸಂಶಪ್ತಕಗಣಗಳನ್ನು ಪ್ರಚೋದಿಸಿದ.

ತತೋ ರಥಸಹಸ್ರೇಣ ದ್ವಿರದಾನಾಂ ತ್ರಿಭಿಃ ಶತೈಃ ।
ಚತುರ್ದಶಸಹಸ್ರೈಶ್ಚ ತುರಗಾಣಾಂ ಮಹಾಹವೇ ॥೧೦೨॥

ದ್ವಾಭ್ಯಾಂ ಶತಸಹಸ್ರಾಭ್ಯಾಂ ಪದಾತೀನಾಂ ಚ ಧನ್ವಿನಾಮ್ ।
ಶೂರಾಣಾಂ ಲಬ್ಧಲಕ್ಷ್ಯಾಣಾಂ ವಿದಿತಾನಾಂ ಸಮಂತತಃ ॥೧೦೩॥

ಅಭ್ಯವರ್ತಂತ ತೌ ವೀರೌ ಘಾದಯಂತೋ ಮಹಾರಥಾಃ ।
ಶರವರ್ಷೈರ್ಮಹಾರಾಜ ಸರ್ವತಃ ಪಾಂಡುನಂದನಮ್ ॥೧೦೪॥

ಏತಚ್ಛ್ರುತ್ವಾ ಮಹಾರಾಜ ಗೋವಿಂದಃ ಪ್ರಹಸನ್ನಿವ ।
ಅಬ್ರವೀದರ್ಜುನಂ ತೂರ್ಣಂ ಕೌರವಾನ್ ಜಹಿ ಪಾಂಡವ ॥೯೩॥

ಮಹಾರಾಜ, ಶ್ರೀಕೃಷ್ಣ ಇದನ್ನು ಕೇಳಿ ನಕ್ಕು ಅರ್ಜುನನಿಗೆ, 'ಅರ್ಜುನ, ಬೇಗನೆ ಕೌರವರನ್ನು ಗೆಲ್ಲು' ಎಂದ.

ತತಸ್ತವ ಮಹತ್‌ಸೈನ್ಯಂ ಗೋವಿಂದಪ್ರೇರಿತಾ ಹಯಾಃ ।
ಹಂಸವರ್ಣಾಃ ಪ್ರವಿವಿಶುರ್ವಹಂತಃ ಕೃಷ್ಣಪಾಂಡವೌ ॥೯೪॥

ಶ್ರೀಕೃಷ್ಣನು ನಡೆಸುವ ಹಂಸವರ್ಣದ ಅಶ್ವಗಳು ಕೃಷ್ಣ-ಅರ್ಜುನರನ್ನು ಹೊತ್ತು ನಿನ್ನ ಮಹಾಸೈನ್ಯವನ್ನು ಪ್ರವೇಶಿಸಿದುವು.

ಕೇಶವಪ್ರಹಿತೈರಶ್ವೈಃ ಶ್ವೇತೈಃ ಕಾಂಚನಭೂಷಣೈಃ ।
ಪ್ರವಿಶದ್ಭಿಸ್ತವ ಬಲಂ ಚತುರ್ದಿಶಮಭಿದ್ಯತ ॥೯೫॥

ಕೃಷ್ಣನು ನಡೆಸಿದ ಬಂಗಾರದಿಂದ ಅಲಂಕೃತವಾದ ಶ್ವೇತವರ್ಣದ ಅಶ್ವಗಳು ಪ್ರವೇಶಿಸಿದೊಡನೆ ನಿನ್ನ ಸೈನ್ಯವು ಭಯದಿಂದ ನಾಲ್ಕು ದಿಕ್ಕುಗಳಿಗೆ ಚದುರಿತು.

ಮೇಘಸ್ತನಿತನಿರ್ಹ್ರಾದಃ ಸ ರಥೋ ವಾನರಧ್ವಜಃ ।
ಚಲತ್ಪತಾಕಸ್ತಾಂ ಸೇನಾಂ ವಿಮಾನಂ ದ್ಯಾಮಿವಾವಿಶತ್ ॥೯೬॥

ಸಿಡಿಲುಮೊಳಗುವಂಥ ಧ್ವನಿಯುಳ್ಳ, ವಾನರಧ್ವಜಯುಕ್ತವಾದ, ಹಾರಾಡುವ ಪತಾಕೆಗಳುಳ್ಳ ಆ ರಥವು, ಆ ನಿನ್ನ ಸೈನ್ಯವನ್ನು ಅಂತರಿಕ್ಷವನ್ನು ವಿಮಾನವು ಪ್ರವೇಶಿಸುವಂತೆ ಪ್ರವೇಶಿಸಿತು.

ತೌ ವಿದಾರ್ಯ ಮಹಾಸೇನಾಂ ಪ್ರವಿಷ್ಟೌ ಕೇಶವಾರ್ಜುನೌ ।
ಕ್ರುದ್ಧೌ ಸಂರಂಭರಕ್ತಾಕ್ಷೌ ವ್ಯಭ್ರಾಜೇತಾಂ ಮಹಾದ್ಯುತೀ ॥೯೭॥

ಮಹಾಸೈನ್ಯವನ್ನು ಭೇದಿಸಿ ಪ್ರವೇಶಿಸಿದ ಆ ಕೃಷ್ಣಾರ್ಜುನರು ಕ್ರುದ್ಧರಾಗಿ ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿ ಮಹಾತೇಜೋಯುಕ್ತರಾಗಿ ಬೆಳಗಿದರು.

ಯುದ್ಧಶೌಂಡೌ ಸಮಾಹೂತಾವರಿಭಿಸ್ತೌ ರಣಾಧ್ವರಮ್ ।
ಯಜ್ವಭಿರ್ವಿಧಿನಾಹೂತೌ ಮಖೇ ದೇವಾವಿವಾಶ್ವಿನೌ ॥೯೮॥

ಯಜ್ಞದಲ್ಲಿ ಋತ್ವಿಜರು ವಿಧ್ಯುಕ್ತವಾಗಿ ಆಹ್ವಾನಿಸಿದಾಗ ಬರುವ ಇಬ್ಬರು ಅಶ್ವಿನೀದೇವತೆಗಳಂತೆ, ಶತ್ರುಗಳು ರಣಯಜ್ಞದಲ್ಲಿ ಆಹ್ವಾನಿಸಿದ, ಯುದ್ಧದಲ್ಲಿ ನಿಪುಣರಾದ, ಆ ಇಬ್ಬರು ಕೃಷ್ಣ-ಅರ್ಜುನರು ಬಂದರು.

ಕ್ರುದ್ಧೌ ತೌ ತು ನರವ್ಯಾಘ್ರೌ ವೇಗವಂತೌ ಬಭೂವತುಃ ।
ತಲಶಬ್ದೇನ ರುಷಿತೌ ಯಥಾ ನಾಗೌ ಮಹಾಹವೇ ॥೯೯॥

ಆನೆಗಳು ಚಪ್ಪಾಳೆಯ ಶಬ್ದ ಕೇಳಿ ಕೋಪಗೊಳ್ಳುವಂತೆ ಮಹಾರಣದಲ್ಲಿ ವೇಗಶಾಲಿಗಳಾದ ಆ ಪುರುಷಶ್ರೇಷ್ಠರು ಕ್ರುದ್ಧರಾದರು.

ವಿಗಾಹನ್ ಸ ರಥಾನೀಕಮಶ್ವಸಂಘಾಂಶ್ಚ ಫಲ್ಗುನಃ ।
ವ್ಯಚರತ್ ಪೃತನಾಮಧ್ಯೇ ಪಾಶಹಸ್ತ ಇವಾಂತಕಃ ॥೧೦೦॥

ಅರ್ಜುನನು ಸೈನ್ಯದ ನಡುವೆ ರಥಸಮೂಹಗಳನ್ನೂ ಅಶ್ವಸಮೂಹಗಳನ್ನೂ ಪ್ರವೇಶಿಸಿ ಪಾಶವನ್ನು ಹಿಡಿದ ಯಮನಂತೆ ಸಂಚರಿಸಿದ.

ತಂ ದೃಷ್ಟ್ವಾ ಯುಧಿ ವಿಕ್ರಾಂತಂ ಸೇನಾಯಾಂ ತವ ಭಾರತ ।
ಸಂಶಪ್ತಕಗಣಾನ್ ಭೂಯಃ ಪುತ್ರಸ್ತೇ ಸಮಚೋದಯತ್ ॥೧೦೧॥

ರಾಜನೆ, ಅರ್ಜುನನು ನಿನ್ನ ಸೈನ್ಯದಲ್ಲಿ ಪ್ರವೇಶಿಸಿ ರಣದಲ್ಲಿ ಪರಾಕ್ರಮ ತೋರಲು ತೊಡಗಿದ್ದನ್ನು ಕಂಡು ನಿನ್ನ ಮಗನು ಪುನಃ ಸಂಶಪ್ತಕಗಣಗಳನ್ನು ಪ್ರಚೋದಿಸಿದ.

ತತೋ ರಥಸಹಸ್ರೇಣ ದ್ವಿರದಾನಾಂ ತ್ರಿಭಿಃ ಶತೈಃ ।
ಚತುರ್ದಶಸಹಸ್ರೈಶ್ಚ ತುರಗಾಣಾಂ ಮಹಾಹವೇ ॥೧೦೨॥

ದ್ವಾಭ್ಯಾಂ ಶತಸಹಸ್ರಾಭ್ಯಾಂ ಪದಾತೀನಾಂ ಚ ಧನ್ವಿನಾಮ್ ।
ಶೂರಾಣಾಂ ಲಬ್ಧಲಕ್ಷ್ಯಾಣಾಂ ವಿದಿತಾನಾಂ ಸಮಂತತಃ ॥೧೦೩॥

ಅಭ್ಯವರ್ತಂತ ತೌ ವೀರೌ ಘಾದಯಂತೋ ಮಹಾರಥಾಃ ।
ಶರವರ್ಷೈರ್ಮಹಾರಾಜ ಸರ್ವತಃ ಪಾಂಡುನಂದನಮ್ ॥೧೦೪॥

ಸಂಶಪ್ತಕ ಮಹಾರಥರು ಒಂದು ಸಾವಿರ ರಥಗಳು, ಮೂರು ನೂರು ಆನೆಗಳು, ಹದಿನಾಲ್ಕು ಸಾವಿರ ಕುದುರೆಗಳು ಮತ್ತು ಲಕ್ಷ್ಯಭೇದದಲ್ಲಿ ನಿಪುಣರಾದ ಸುಪ್ರಸಿದ್ಧ ಮಹಾಶೂರ ಬಿಲ್ಲಾಳುಗಳಾದ ಎರಡುಲಕ್ಷ ಪದಾತಿಗಳೊಂದಿಗೆ ಯುಕ್ತರಾಗಿ ಮಹಾರಣದಲ್ಲಿ ಕೃಷ್ಣಾರ್ಜುನರನ್ನು ಬಾಣಗಳ ಮಳೆಗಳಿಂದ ಆಚ್ಛಾದಿಸುತ್ತ ಅರ್ಜುನನನ್ನು ಎಲ್ಲ ಕಡೆಗಳಿಂದ ಆಕ್ರಮಿಸಿದರು.

ಸ ಚ್ಛಾದ್ಯಮಾನಃ ಸಮರೇ ಶರೈಃ ಪರಬಲಾರ್ದನಃ ।
ದರ್ಶಯನ್ ರೌದ್ರಮಾತ್ಮಾನಂ ಪಾಶಹಸ್ತ ಇವಾಂತಕಃ ॥೧೦೫॥
ನಿಘ್ನನ್ ಸಂಶಪ್ತಕಾನ್ ಪಾರ್ಥಃ ಪ್ರೇಕ್ಷಣೀಯತರೋಽಭವತ್ ॥೧೦೬॥

ಪರಸೇನಾನಾಶಕನಾದ ಅರ್ಜುನನು, ಬಾಣಗಳಿಂದ ಆಚ್ಛಾದಿತನಾಗುವಾಗ ಪಾಶವನ್ನು ಹಿಡಿದ ಯಮನಂತೆ ತನ್ನ ಭೀಕರ ಸ್ವರೂಪವನ್ನು ತೋರುತ್ತ ಸಂಶಪ್ತಕರನ್ನು ಸಂಹರಿಸುತ್ತ ಅತ್ಯಂತ ಪ್ರೇಕ್ಷಣೀಯನಾದ.

ತತೋ ವಿದ್ಯುತ್ಪ್ರಭೈರ್ಬಾಣೈಃ ಕಾರ್ತಸ್ವರವಿಭೂಷಿತೈಃ ।
ನಿರಂತರಮಿವಾಕಾಶಮಾಸೀನ್ನಿಶ್ಚಿತೈಃ ಕಿರೀಟಿನಾ ॥೧೦೭॥

ಬಂಗಾರದಿಂದ ಅಲಂಕೃತವಾದ, ಮಿಂಚಿನಂತೆ ಹೊಳೆವ ಬಾಣಗಳನ್ನು ಎಸೆದು ಆಗಸವನ್ನು ನಡುವೆ ಒಂದಿಷ್ಟು ಎಡೆ ಇಲ್ಲದಂತೆ ಮಾಡಿದ, ಅರ್ಜುನ.

ಕಿರೀಟಿಭುಜನಿರ್ಮುಕ್ತೈಃ ಸಂಪತದ್ಭಿರ್ಮಹಾಶರೈಃ ।
ಸಮಾಚ್ಛನ್ನಂ ಬಭೌ ಸರ್ವಂ ಕಾದ್ರವೇಯೈರಿವ ಪ್ರಭೋ ॥೧೦೮॥

ಅರ್ಜುನನ ಭುಜಗಳಿಂದ ಹೊರಟು ಬೀಳುವ ಮಹಾಬಾಣಗಳಿಂದ ಎಲ್ಲ ಪ್ರದೇಶವು ಹಾವುಗಳಿಂದ ಆಚ್ಛಾದಿತವಾದಂತೆ ಕಂಡುಬಂದಿತು.

ರುಗ್ಮಪುಂಖಾನ್ ಪ್ರಸನ್ನಾಗ್ರಾನ್ ಶರಾನ್ ಸನ್ನತಪರ್ವಣಃ ।
ಅವಾಸೃಜದಮೇಯಾತ್ಮಾ ದಿಕ್ಷು ಸರ್ವಾಸು ಪಾಂಡವಃ ॥೧೦೯॥

ಅಮೇಯಾತ್ಮನಾದ ಅರ್ಜುನನು ಬಂಗಾರದ ಪುಕ್ಕ, ನಿರ್ಮಲವಾದ ತುದಿ, ಡೊಂಕು ಗಿಣ್ಣುಗಳಿಂದ ಯುಕ್ತವಾದ ಬಾಣಗಳನ್ನು ಎಲ್ಲ ದಿಕ್ಕುಗಳಲ್ಲಿ ಎಸೆದ.

ಮಹೀ ವಿಯದ್ದಿಶಃ ಸರ್ವಾಃ ಸಮುದ್ರಾ ಗಿರಯೋಽಪಿ ವಾ ।
ಸ್ಫುಟಂತೀತಿ ಜನಾ ಜಜ್ಞುಃ ಪಾರ್ಥಸ್ಯ ತಳನಿಸ್ವನಾತ್ ॥೧೧೦॥

ಅರ್ಜುನನ ಅಂಗೈಶಬ್ದದಿಂದ ಭೂಮಿ ಅಂತರಿಕ್ಷ ಎಲ್ಲದಿಕ್ಕುಗಳು ಸಮುದ್ರಗಳು ಹಾಗೂ ಪರ್ವತಗಳು ಸೀಳಿ ಹೋಗಬಹುದೆಂದು ಜನರು ಭಾವಿಸಿದರು.

ಹತ್ವಾ ದಶ ಸಹಸ್ರಾಣಿ ಪಾರ್ಥಿವಾನಾಂ ಮಹಾರಥಃ ।
ಸಂಶಪ್ತಕಾನಾಂ ಕೌಂತೇಯಃ ಪ್ರಪಕ್ಷಂ ತ್ವರಿತೋಽಭ್ಯಯಾತ್ ॥೧೧೧॥

ಮಹಾರಥನಾದ ಅರ್ಜುನನು ಸಂಶಪ್ತಕರ ಹತ್ತು ಸಾವಿರ ಕ್ಷತ್ರಿಯರನ್ನು ಕೊಂದು ಬೇಗನೆ ಆ ಸೈನ್ಯದ ಅಂತಿಮಭಾಗವನ್ನು ಆಕ್ರಮಿಸಿದ.

ಪ್ರಪಕ್ಷಂ ಸ ಸಮಾಸಾದ್ಯ ಪಾರ್ಥಃ ಕಾಂಬೋಜರಕ್ಷಿತಮ್ ।
ಪ್ರಮಮಾಥ ಬಲಾದ್ ಬಾಣೈರ್ದಾನವಾನಿವ ವಾಸವಃ ॥೧೧೨॥

ಕಾಂಬೋಜಯೋಧರಿಂದ ರಕ್ಷಿತವಾಗಿದ್ದ ಆ ಅಂತಿಮಭಾಗವನ್ನು ಆಕ್ರಮಿಸಿ ಅರ್ಜುನನು ಇಂದ್ರನು ದಾನವರನ್ನು ಸಂಹರಿಸುವಂತೆ ಬಾಣಗಳಿಂದ ಬಲವಾಗಿ ಧ್ವಂಸಗೈದ.

ಪ್ರಚಿಚ್ಛೇದಾಶು ಭಲ್ಲೈಶ್ಚ ದ್ವಿಷತಾಮಾತತಾಯಿನಾಮ್ ।
ಶಸ್ತ್ರಪಾಣೀಂಸ್ತಥಾ ಬಾಹೂಂಸ್ತಥಾಪಿ ಚ ಶಿರಾಂಸ್ಯುತ ॥೧೧೩॥

ಅರ್ಜನನು ಆಯುಧಧಾರಿಗಳಾಗಿ ತನ್ನನ್ನು ಕೊಲ್ಲಲು ಬಂದಿದ್ದ ಶತ್ರುಗಳ ಶಸ್ತ್ರಯುಕ್ತವಾದ ಕೈ, ತೋಳುಗಳನ್ನೂ ಶಿರಸ್ಸುಗಳನ್ನೂ ಭಲ್ಲೆಗಳಿಂದ ಕತ್ತರಿಸಿದ.

ಅಂಗಾಂಗಾವಯವೈಶ್ಛಿನ್ನೈರ್ವ್ಯಾಯುಧಾಸ್ತೇಽಪತನ್ ಕ್ಷಿತೌ ।
ವಿಷ್ವಗ್ವಾತಾಭಿಸಂಭಗ್ನಾ ಬಹುಶಾಖಾ ಇವ ದ್ರುಮಾಃ ॥೧೧೪॥

ಬಹುಶಾಖೋಪಶಾಖೆಗಳಿಂದ ಕೂಡಿದ ಮರಗಳು ಎಲ್ಲೆಡೆ ಬಿರುಗಾಳಿಯ ಆಘಾತಗಳಿಂದ ಮುರಿದು ಬೀಳುವಂತೆ ಆ ಕಾಂಬೋಜರು ನಿರಾಯುಧರಾಗಿ ಅಂಗೋಪಾಂಗಗಳನ್ನೆಲ್ಲ ಕಡಿದುಕೊಂಡು ನೆಲದಲ್ಲಿ ಒರಗಿದರು.

ಹಸ್ತ್ಯಶ್ವರಥಪತ್ತೀನಾಂ ವ್ರಾತಾನ್ ನಿಘ್ನಂತಮರ್ಜುನಮ್ ।
ಸುದಕ್ಷಿಣಾದವರಜಃ ಶರವೃಷ್ಟ್ಯಾಭ್ಯವೀವೃಷತ್ ॥೧೧೫॥

ಗಜ ಅಶ್ವ ರಥ ಪದಾತಿಗಳ ಸಮೂಹಗಳನ್ನು ಸಂಹರಿಸುತ್ತಿದ್ದ ಅರ್ಜುನನ ಮೇಲೆ ಸುದಕ್ಷಿಣನ ತಮ್ಮನು ಬಾಣಗಳ ಮಳೆಗರೆದ.

ಕಾಂಬೋಜರಾಜನಾದ ಸುದಕ್ಷಿಣನನ್ನು ಹಿಂದೆ (ದ್ರೋಣ. 92.71) ಅರ್ಜುನನೇ ಸಂಹರಿಸಿದ್ದ. ಇದೀಗ ಅವನ ತಮ್ಮನು ಅರ್ಜುನನ ಬಾಣಗಳಿಗೆ ಆಹುತಿಯಾಗುತ್ತಿದ್ದಾನೆ.

ಅಸ್ಯಾಸ್ಯತೋಽರ್ಧಚಂದ್ರಾಭ್ಯಾಂ ಸ ಬಾಹೂ ಪರಿಘೋಪಮೌ ।
ಪೂರ್ಣಚಂದ್ರಾಭವಕ್ತ್ರಂ ಚ ಕ್ಷುರೇಣಾಭ್ಯಹನಚ್ಛಿರಃ ॥೧೧೬॥

ಅವನು ಬಾಣಗಳನ್ನೆಸೆಯುತ್ತಿದ್ದಂತೆಯೆ, ಅರ್ಜುನನು ಎರಡು ಅರ್ಧಚಂದ್ರ ಬಾಣಗಳಿಂದ ಅವನ ಪರಿಘದಂಥ ಎರಡು ಬಾಹುಗಳನ್ನೂ ಕ್ಷುರವೆಂಬ ಬಾಣದಿಂದ ಪೂರ್ಣಚಂದ್ರನಂಥ ಮುಖದಿಂದ ಕೂಡಿದ ಅವನ ಶಿರಸ್ಸನ್ನೂ ತರಿದ.

ಸ ಪಪಾತ ತತೋ ವಾಹಾತ್ ಸ್ರವಲೋಹಿತಪರಿಸ್ರವಃ ।
ಮನಃಶಿಲಾಗಿರೇಃ ಶೃಙ್ಗಂ ವಜ್ರೇಣೇವಾವದಾರಿತಮ್ ॥೧೧೭॥

ಮನಃಶಿಲೆ ಎಂಬ ಕೆಂಪುಧಾತುಗಳ ಬೆಟ್ಟದ ಶಿಖರವು ವಜ್ರದಿಂದ ಕಡಿದು ಬಿದ್ದಂತೆ, ಸುದಕ್ಷಿಣನ ತಮ್ಮನು ರಕ್ತಸ್ರಾವಗೊಂಡು ವಾಹನದಿಂದ ಕೆಳಗೆ ಉರುಳಿದ.

ಸುದಕ್ಷಿಣಾದವರಜಂ ಕಾಂಬೋಜಂ ದದೃಶುರ್ಹತಮ್ ।
ಪ್ರಾಂಶುಂ ಕಮಲಪತ್ರಾಕ್ಷಮತ್ಯರ್ಥಂ ಪ್ರಿಯದರ್ಶನಮ್ ॥೧೧೮॥
ಕಾಂಚನಸ್ತಂಭಸಂಕಾಶಂ ಭಿನ್ನಂ ಹೇಮಗಿರಿಂ ಯಥಾ ॥೧೧೯॥

ಕಾಂಬೋಜ ದೇಶಾಧಿಪತಿಯಾದ ಸುದಕ್ಷಿಣನ ತಮ್ಮನು, ಈತನು ಉನ್ನತ ಶರೀರದವನು, ತಾವರೆ ಎಸಳಿನಂಥ ಕಣ್ಣುಳ್ಳವನಾಗಿ ನೋಡಲು ಪ್ರಿಯನಾಗಿದ್ದ, ಬಂಗಾರದ ಕಂಬದಂತಿದ್ದ ಈತ ಹತನಾಗಿ ಕಡಿದು ಬಿದ್ದುದನ್ನು ಜನರು ಕಂಡರು.

ತತೋಽಭವತ್ ಪುನರ್ಯುದ್ಧಂ ಘೋರಮದ್ಭುತದರ್ಶನಮ್ ।
ನಾನಾವಸ್ಥಾಶ್ಚ ಯೋಧಾನಾಂ ಬಭೂವುಸ್ತತ್ರ ಯುಧ್ಯತಾಮ್ ॥೧೨೦॥

ಬಳಿಕ ಪುನಃ ನೋಡಲು ಅದ್ಭುತವಾದ ಘೋರವಾದ ಯುದ್ಧ ನಡೆಯಿತು. ಆಗ ಅದರಲ್ಲಿ ಹೋರಾಡಿದ ಯೋಧರ ಅವಸ್ಥೆಗಳು ನಾನಾ ಬಗೆಯವು ಆಗಿದ್ದುವು.

ಏತೇಷ್ವಾವರ್ಜಿತೈರಶ್ವೈಃ ಕಾಂಬೋಜೈರ್ಯವನೈಃ ಶಕೈಃ ।
ಶೋಣಿತಾಕ್ತೈಸ್ತದಾ ರಕ್ತಂ ಸರ್ವಮಾಸೀದ್ ವಿಶಾಂಪತೇ ॥೧೨೧॥

ಕಾಂಬೋಜ ಯವನ ಶಕ ಮುಂತಾದ ಅಶ್ವಸೈನ್ಯಗಳು ನೆತ್ತರಿನಿಂದ ತೊಯ್ದು ಕಡಿದು ಬಿದ್ದಾಗ, ರಾಜನೆ, ಇಡಿ ರಣರಂಗ ಕೆಂಪಾಗಿ ಕಂಡುಬಂದಿತು.

ನರೈರ್ಹತಾಶ್ವಸೂತೈಶ್ಚ ಹತಾರೋಹೈಶ್ಚ ವಾಜಿಭಿಃ ।
ದ್ವಿರದೈಶ್ಚ ಹತಾರೋಹೈರ್ಮಹಾಮಾತ್ರೈರ್ಹತದ್ವಿಪೈಃ ॥೧೨೨॥

ಅನ್ಯೋನ್ಯೇನ ಮಹಾರಾಜ ಕೃತೋ ಘೋರೋ ಜನಕ್ಷಯಃ ॥೧೨೩॥

ಪದಾತಿಗಳು ಅಶ್ವ ಮತ್ತು ಸಾರಥಿಗಳನ್ನೂ ಅಶ್ವಾರೋಹಿಗಳು ಅಶ್ವಾರೋಹಿಗಳನ್ನು ಗಜಾರೋಹಿಗಳು ಗಜಾರೋಹಿಗಳನ್ನು ಮಾವಟಿಗರು ಆನೆಗಳನ್ನು— ಹೀಗೆ ಪರಸ್ಪರವಾಗಿ ಸಂಹರಿಸಿದ್ದರಿಂದ ಘೋರವಾದ ಜನಕ್ಷಯ ಉಂಟಾಯಿತು.

ತಸ್ಮಿನ್ ಪ್ರಪಕ್ಷೇ ಪಕ್ಷೇ ಚ ನಿಹತೇ ಸವ್ಯಸಾಚಿನಾ
ಅರ್ಜುನಂ ಜಯತಾಂ ಶ್ರೇಷ್ಠಂ ತ್ವರಿತೋ ದ್ರೌಣಿರಾಯಯೌ ॥೧೨೪॥

ಎಡ ಬಲಗಳಲ್ಲಿ ಎಲ್ಲ ಸೈನ್ಯಗಳನ್ನು ಅರ್ಜುನನು ಕೊಲ್ಲುತ್ತಿದ್ದಾಗ ಜಯಶಾಲಿಗಳಲ್ಲಿ ಶ್ರೇಷ್ಠನಾದ ಆತನನ್ನು ವೇಗದಿಂದ ಅಶ್ವತ್ಥಾಮನು ಇದಿರಿಸಿದ.

ವಿಧುನ್ವಾನೋ ಮಹಚ್ಚಾಪಂ ಕಾರ್ತಸ್ವರವಿಭೂಷಿತಮ್ ।
ಆದದಾನಃ ಶರಾನ್ ಘೋರಾನ್ ಸ್ವರಶ್ಮೀನಿವ ಭಾಸ್ಕರಃ ॥೧೨೫॥

ಕ್ರೋಧಾಮರ್ಷವಿವೃತ್ತಾಕ್ಷೋ ಲೋಹಿತಾಕ್ಷೋ ಬಭೌ ಬಲೀ ।
ಅಂತಕಾಲೇ ಯಥಾ ಕ್ರುದ್ಧೋ ಮೃತ್ಯುಃ ಕಿಂಕರದಂಡಭೃತ್ ॥೧೨೬॥

ಬಂಗಾರದಿಂದ ಅಲಂಕೃತವಾದ ದೊಡ್ಡ ಕೋದಂಡವನ್ನು ಓಲಾಡಿಸುತ್ತ ಸೂರ್ಯನು ತನ್ನ ಕಿರಣಗಳನ್ನು ಎತ್ತಿಕೊಳ್ಳುವಂತೆ, ಘೋರವಾದ ಬಾಣಗಳನ್ನು ಕೈಗೆತ್ತಿಕೊಳ್ಳುತ್ತ ಕೋಪ ಅಸಹನೆಗಳಿಂದ ಅಗಲವಾಗಿ ಕಣ್ಣು ತೆರೆದು, ಪ್ರಳಯಕಾಲದಲ್ಲಿ ಕಿಂಕರ ಎಂಬ ದಂಡವನ್ನು ಹಿಡಿಯುವ ಮೃತ್ಯುವಿನಂತೆ ಕ್ರುದ್ಧನಾಗಿ ಬಲಿಷ್ಠನಾದ ಅಶ್ವತ್ಥಾಮ ಬೆಳಗಿದ.

ತತಃ ಪ್ರಾಸೃಜದುಗ್ರಾಣಿ ಶರವರ್ಷಾಣಿ ಸರ್ವಶಃ ।
ತೈರ್ವಿಸೃಷ್ಟೈರ್ಮಹಾರಾಜ ವ್ಯದ್ರವತ್ ಪಾಂಡವೀ ಚಮೂಃ ॥೧೨೭॥

ಅಶ್ವತ್ಥಾಮನು ಉಗ್ರವಾದ ಬಾಣಗಳ ಮಳೆಗಳನ್ನು ಎಲ್ಲೆಡೆ ಸುರಿಸಿದ. ಮಹಾರಾಜ, ಬಾಣಗಳ ಆ ಮಳೆಯಿಂದ ಪಾಂಡವಸೈನ್ಯ ಪಲಾಯನ ಮಾಡಲು ತೊಡಗಿತು.

ಸ ದೃಷ್ಟ್ವೈವ ತು ದಾಶಾರ್ಹಂ ಸ್ಯಂದನಸ್ಥಂ ವಿಶಾಂಪತೇ ।
ಪುನಃ ಪ್ರಾಸೃಜದುಗ್ರಾಣಿ ಶರವರ್ಷಾಣಿ ಮಾರಿಷ ॥೧೨೮॥

ರಾಜನೆ, ರಥದಲ್ಲಿ ಕುಳಿತಿದ್ದ ಕೃಷ್ಣನನ್ನು ಕಂಡು ಅಶ್ವತ್ಥಾಮನು ಪುನಃ ಉಗ್ರವಾದ ಬಾಣಗಳ ಮಳೆಗಳನ್ನು ಸುರಿಸಿದ.

ತೈಃ ಪತದ್ಭಿರ್ಮಹಾರಾಜ ದ್ರೌಣಿಮುಕ್ತೈಃ ಸಮಂತತಃ ।
ಸಂಛಾದಿತೌ ರಥಸ್ಥೌ ತಾವುಭೌ ಕೃಷ್ಣಧನಂಜಯೌ ॥೧೨೯॥

ಮಹಾರಾಜ, ಅಶ್ವತ್ಥಾಮನು ಎಲ್ಲೆಡೆ ಸುರಿಸಿದ ಬಾಣಗಳ ಮಳೆ ಬಿದ್ದಾಗ ಅದರಿಂದ ರಥದಲ್ಲಿ ಕುಳಿತಿದ್ದ ಕೃಷ್ಣಾರ್ಜುನರಿಬ್ಬರೂ ಆಚ್ಛಾದಿತರಾದರು.

ತತಃ ಶರಶತೈಸ್ತೀಕ್ಷ್ಣೈರ್ಭಾರದ್ವಾಜಾತ್ಮಜಾತ್ಮಜಃ ।
ನಿಶ್ಚೇಷ್ಟೌ ತಾವುಭೌ ಚಕ್ರೇ ಯುದ್ಧೇ ಮಾಧವಪಾಂಡವೌ ॥೧೩೦॥

ತೀಕ್ಷ್ಣವಾದ ನೂರಾರು ಬಾಣಗಳಿಂದ ಅಶ್ವತ್ಥಾಮನು ಕೃಷ್ಣಾರ್ಜುನರಿಬ್ಬರನ್ನೂ ರಣದಲ್ಲಿ ನಿಶ್ಚೇಷ್ಟರನ್ನಾಗಿ ಮಾಡಿದ.

ಹಾಹಾಕೃತಮಭೂತ್ ಸರ್ವಂ ಜಂಗಮಂ ಸ್ಥಾವರಂ ತಥಾ ।
ಚರಾಚರಸ್ಯ ಗೋಪ್ತಾರೌ ದೃಷ್ಟ್ವಾ ಸಂಛಾದಿತೌ ಶರೈಃ ॥೧೩೧॥

ಚರಾಚರ ಪ್ರಪಂಚದ ರಕ್ಷಕರಾದ ಕೃಷ್ಣಾರ್ಜುನರು ಹೀಗೆ ಬಾಣಗಳಿಂದ ಮುಚ್ಚಿಹೋದಾಗ ಚರಾಚರವೆಲ್ಲವೂ ಹಾಹಾಕಾರ ಮಾಡಿತು.

ಸಿದ್ಧಚಾರಣಸಂಘಾಶ್ಚ ಸಂಪೇತುರ್ವೈ ಸಮಂತತಃ ।
ಅಪಿ ಸ್ವಸ್ತಿ ಭವೇದದ್ಯ ಲೋಕಾನಾಮಿತಿ ಚಾಬ್ರುವನ್ ॥೧೩೨॥

ಸಿದ್ಧ-ಚಾರಣಸಮೂಹಗಳು ಎಲ್ಲೆಡೆ ಇಳಿದು ಬಂದವು. 'ಲೋಕಗಳಿಗೆ ಈಗ ಕ್ಷೇಮ ಉಂಟಾಗುವುದೆ?' ಎಂದರು.

ನ ಮಯಾ ತಾದೃಶೋ ರಾಜನ್ ದೃಷ್ಟಪೂರ್ವಃ ಪರಾಕ್ರಮಃ ।
ಸಂಜಜ್ಞೇ ಯಾದೃಶೋ ದ್ರೌಣೇಃ ಕೃಷ್ಣೌ ಸಂಘಾದಯಿಷ್ಯತಃ ॥೧೩೩॥

ರಾಜನೆ, ಕೃಷ್ಣಾರ್ಜುನರನ್ನು ಕೂಡ ಬಾಣಗಳಿಂದ ಮುಚ್ಚುವಾಗ ಅಶ್ವತ್ಥಾಮನಲ್ಲಿ ಕಂಡು ಬಂದ ಪರಾಕ್ರಮ ಅದ್ಭುತವಾಗಿತ್ತು. ಅಂಥ ಪರಾಕ್ರಮವನ್ನು ನಾನು ಹಿಂದೆ ನೋಡೇ ಇರಲಿಲ್ಲ.

ದ್ರೌಣೇಸ್ತು ಧನುಷಃ ಶಬ್ದಮಹಿತತ್ರಾಸನಂ ರಣೇ ।
ಅಶ್ರೌಷಂ ಬಹುಶೋ ರಾಜನ್ ಸಿಂಹಸ್ಯ ನದತೋ ಯಥಾ ॥೧೩೪॥

ಅಶ್ವತ್ಥಾಮನ ಧನುಸ್ಸಿನಿಂದ ಹೊರಟ, ಶತ್ರುಗಳನ್ನು ರಣದಲ್ಲಿ ನಡುಗಿಸು ವಂಥ ಶಬ್ದ ಸಿಂಹಗರ್ಜನೆಯಂತಿತ್ತು. ಬಹುಬಾರಿ ನಾನು ಅದನ್ನು ಕೇಳಿದೆ.

ಜ್ಯಾ ಚಾಸ್ಯ ಚರತೋ ಯುದ್ಧೇ ಸವ್ಯದಕ್ಷಿಣಮಸ್ಯತಃ ।
ವಿದ್ಯುದಂಬುದಮಧ್ಯಸ್ಥಾ ಭ್ರಾಜಮಾನೇವ ಸಾऽಭವತ್ ॥೧೩೫॥

ಯುದ್ಧದಲ್ಲಿ ಸಂಚರಿಸುತ್ತ ಎಡಕ್ಕೂ ಬಲಕ್ಕೂ ಬಾಣಗಳನ್ನೆಸೆಯುವಾಗ ಅವನ ಬಿಲ್ಲಿನ ಹೆದೆ ಮೋಡಗಳ ನಡುವೆ ಹೊಳೆಯುವ ಮಿಂಚಿನಂತೆ ಕಾಣುತ್ತಿತ್ತು.

ಸ ತಥಾ ಕ್ಷಿಪ್ರಕಾರೀ ಚ ದೃಢಹಸ್ತಶ್ಚ ಪಾಂಡವಃ ।
ಸಮ್ಮೋಹಂ ಪರಮಂ ಗತ್ವಾ ಪ್ರೈಕ್ಷತ ದ್ರೋಣಜಂ ತತಃ ॥೧೩೬॥

ಅರ್ಜುನನೂ ಹಾಗೇ ದೃಢಹಸ್ತನಾಗಿದ್ದು ವೇಗವಾಗಿ ಬಾಣಪ್ರಯೋಗ

ಮಾಡುವವನೆ. ಆದರೂ ಅವನು ಬಹಳ ಮೈಮರೆತು ಅಶ್ವತ್ಥಾಮನನ್ನು ನೋಡುತ್ತಿದ್ದ.

ಸ ವಿಕ್ರಮಂ ಹೃತಂ ಮೇನೇ ಆತ್ಮನಃ ಸುಮಹಾತ್ಮನಾ ।
ತಥಾಸ್ಯ ಸಮರೇ ರಾಜನ್ ವಪುರಾಸೀತ್ ಸುದುರ್ದೃಶಮ್ ॥೧೩೭॥

ರಾಜನೆ, ಅಶ್ವತ್ಥಾಮನ ಶರೀರ ರಣದಲ್ಲಿ ನೋಡಲು ಎಷ್ಟು ಅಸಾಧ್ಯವಾಗಿತ್ತೆಂದರೆ, ಮಹಾತ್ಮ ಅಶ್ವತ್ಥಾಮನು ತನ್ನ ಪರಾಕ್ರಮವನ್ನು ಅಪಹರಿಸಿದನೆಂದೇ ಅರ್ಜುನ ಭಾವಿಸಿದ.

ದ್ರೌಣಿಪಾಂಡವಯೋರೇವಂ ವರ್ತಮಾನೇ ಮಹಾರಣೇ ।
ವರ್ಧಮಾನೇ ಚ ರಾಜೇಂದ್ರ ದ್ರೋಣಪುತ್ರೇ ಮಹಾಬಲೇ
ಹೀಯಮಾನೇ ಚ ಕೌಂತೇಯೇ ಕೃಷ್ಣಂ ರೋಷಃ ಸಮಾವಿಶತ್ ॥೧೩೮॥

ಅಶ್ವತ್ಥಾಮ ಅರ್ಜುನರ ಮಹಾಯುದ್ಧ ಹೀಗೆ ನಡೆಯುತ್ತಿದ್ದಾಗ, ಮಹಾಬಲಿಯಾದ ಅಶ್ವತ್ಥಾಮನು ಪರಾಕ್ರಮದಲ್ಲಿ ಹೆಚ್ಚಾದಾಗ, ಅರ್ಜುನ ಕಡಿಮೆಯಾದಾಗ, ಕೃಷ್ಣನಲ್ಲಿ ಕೋಪಾವೇಶ ಉಂಟಾಯಿತು.

ಸ ರೋಷಾನ್ನಿಃಶ್ವಸನ್ ರಾಜನ್ ನಿರ್ದಹನ್ನಿವ ಚಕ್ಷುಷಾ ।
ದ್ರೌಣಿಂ ಹ್ಯಪಶ್ಯತ್ ಸಂಗ್ರಾಮೇ ಫಲ್ಗುನಂ ಚ
ಮುಹುರ್ಮುಹುಃ ॥೧೩೯॥

ರಾಜನೆ, ಕೃಷ್ಣನು ರಣದಲ್ಲಿ ಕೋಪದಿಂದ ಭುಸುಗುಟ್ಟುತ್ತ ಕಣ್ಣಿನಿಂದ ಸುಡುವಂತೆ ಅಶ್ವತ್ಥಾಮನನ್ನೂ ಅರ್ಜುನನನ್ನೂ ಪುನಃ ಪುನಃ ದಿಟ್ಟಿಸಿದ.

ತತಃ ಕ್ರುದ್ಧೋಽಬ್ರವೀತ್ ಕೃಷ್ಣಃ ಪಾರ್ಥಂ ಸಪ್ರಣಯಂ ತದಾ ।
ಅತ್ಯದ್ಭುತಮಿದಂ ಪಾರ್ಥ ತವ ಪಶ್ಯಾಮಿ ಸಂಯುಗೇ ॥೧೪೦॥

ಅತಿಶೇತೇ ಹಿ ಯತ್ರ ತ್ವಾ ದ್ರೋಣಪುತ್ರೋಽದ್ಯ ಭಾರತ ॥೧೪೧॥

ಬಳಿಕ ಕ್ರುದ್ಧನಾದ ಕೃಷ್ಣ ಅರ್ಜುನನನ್ನು ಕುರಿತು ಪ್ರೀತಿಯಿಂದ ನುಡಿದ— ರಣದಲ್ಲಿ ಅತ್ಯದ್ಭುತವಾದ ನಿನ್ನ ಈ ವರ್ತನೆಯನ್ನು ನಾನು ನೋಡುತ್ತಿದ್ದೇನೆ. ಏಕೆಂದರೆ, ಅರ್ಜುನ, ಅಶ್ವತ್ಥಾಮನು ಈಗ ರಣದಲ್ಲಿ ನಿನ್ನನ್ನು ಮೀರಿಸುತ್ತಿದ್ದಾನೆ!

ಕಚ್ಚಿದ್ವೀರ್ಯಂ ಯಥಾಪೂರ್ವಂ ಭುಜಯೋರ್ವಾ ಬಲಂ ತವ ।
ಕಚ್ಚಿತ್ತೇ ಗಾಂಡಿವಂ ಹಸ್ತೇ ರಥೇ ತಿಷ್ಠಸಿ ಚಾರ್ಜುನ ।
ಕಚ್ಚಿತ್ ಕುಶಲಿನೌ ಬಾಹೂ ಮುಷ್ಟಿರ್ವಾ ನ ವಿಶೀರ್ಯತೇ ॥೧೪೨॥

ನಿನ್ನ ಬಾಹುಗಳಲ್ಲಿ ಬಲ–ವೀರ್ಯಗಳು ಹಿಂದಿನಂತೇ ಇವೆ ತಾನೆ? ನಿನ್ನ ಕೈಯಲ್ಲಿ ಗಾಂಡಿವವಿದೆ ತಾನೆ? ನೀನೂ ರಥದಲ್ಲಿ ನಿಂತಿರುವೆ ತಾನೆ? ನಿನ್ನ ಬಾಹುಗಳು ಕ್ಷೇಮವಾಗಿವೆ ತಾನೆ? ಮುಷ್ಟಿ ಶಿಥಿಲವಾಗಿಲ್ಲ ತಾನೆ?

ಉದೀರ್ಯಮಾಣಂ ಹಿ ರಣೇ ಪಶ್ಯಾಮಿ ದ್ರೌಣಿಮಾಹವೇ ।
ಗುರುಪುತ್ರ ಇತಿ ಹ್ಯೇನಂ ಮಾನಯನ್ ಭರತರ್ಷಭ ॥೧೪೩॥

ಉಪೇಕ್ಷಾಂ ಕುರು ಮಾ ಪಾರ್ಥ ನಾಯಂ ಕಾಲ
ಉಪೇಕ್ಷಿತುಮ್ ॥೧೪೪॥

ರಣರಂಗದಲ್ಲಿ ಯುದ್ಧದಲ್ಲಿ ಅಶ್ವತ್ಥಾಮ ನಿನ್ನನ್ನು ಮೀರಿಸುತ್ತಿದ್ದಾನೆ! ಅರ್ಜುನ, ಗುರುಪುತ್ರನೆಂದು ಈತನನ್ನು ಗೌರವಿಸಿ ಉಪೇಕ್ಷೆ ಮಾಡಬೇಡ. ಉಪೇಕ್ಷಿಸಲು ಇದು ಕಾಲವಲ್ಲ.

ಏವಮುಕ್ತಸ್ತು ಕೃಷ್ಣೇನ ಗೃಹ್ಯ ಭಲ್ಲಾಂಶ್ಚತುರ್ದಶ ।
ತ್ವರಮಾಣಸ್ತ್ವರಾಕಾಲೇ ದ್ರೌಣೇರ್ಧನುರಥಾಚ್ಛಿನತ್ ॥೧೪೫॥
ಧ್ವಜಂ ಛತ್ರಂ ಪತಾಕಾಂ ಚ ಖಡ್ಗಂ ಶಕ್ತಿಂ ಗದಾಂ ತಥಾ ॥೧೪೬॥

ಹೀಗೆ ಕೃಷ್ಣನು ನುಡಿದಾಗ ಅರ್ಜುನನು ಹದಿನಾಲ್ಕು ಭಲ್ಲೆಗಳನ್ನು ಎತ್ತಿಕೊಂಡು ತ್ವರೆಯ ಕಾಲದಲ್ಲಿ ತ್ವರೆಮಾಡಿ, ಅಶ್ವತ್ಥಾಮನ ಧನುಸ್ಸನ್ನು ಕಡಿದ, ಅವನ ಧ್ವಜ, ಛತ್ರ ಪತಾಕೆ ಖಡ್ಗ ಶಕ್ತಿ ಗದೆಗಳನ್ನೂ ಕತ್ತರಿಸಿದ.

ಜತ್ರುದೇಶೇ ಚ ಸುಭೃಶಂ ವತ್ಸದಂತೈರತಾಡಯತ್ ।
ಸ ಮೂರ್ಚ್ಛಾಂ ಪರಮಾಂ ಗತ್ವಾ ಧ್ವಜಯಷ್ಟಿಂ ಸಮಾಶ್ರಿತಃ ॥೧೪೭॥

ಅಶ್ವತ್ಥಾಮನ ಕೊರಳಿನ ಎಲುಬಿಗೆ ವತ್ಸದಂತಬಾಣಗಳಿಂದ ಬಲವಾಗಿ ಹೊಡೆದ. ಅಶ್ವತ್ಥಾಮ ಬಹಳ ಮೈಮರೆತು ಧ್ವಜದ ದಂಡವನ್ನು ಹಿಡಿದುಕೊಂಡ.

ತಂ ವಿಸಂಜ್ಞಂ ಮಹಾರಾಜ ಪಾರ್ಥೇನ ಭೃಶತಾಡಿತಮ್ ।
ಅಪೋವಾಹ ರಣಾತ್ ಸೂತೋ ರಕ್ಷಮಾಣೋ
ಧನಂಜಯಾತ್ ॥೧೪೮॥

ಮಹಾರಾಜ, ಅರ್ಜುನನಿಂದ ಬಹಳ ಹೊಡೆಸಿಕೊಂಡು ಮೈಮರೆತಿದ್ದ ಅಶ್ವತ್ಥಾಮನನ್ನು ಅರ್ಜುನನಿಂದ ರಕ್ಷಿಸಿಕೊಳ್ಳಲು ಸಾರಥಿಯು ರಣರಂಗದಿಂದ ದೂರಕ್ಕೆ ಒಯ್ದ.

ಏತಸ್ಮಿನ್ನೇವ ಕಾಲೇ ತು ವಿಜಯಃ ಶತ್ರುತಾಪನಃ ।
ನ್ಯವಧೀತ್ ತಾವಕಂ ಸೈನ್ಯಂ ಶತಶೋಽಥ ಸಹಸ್ರಶಃ ॥೧೪೯॥
ಪಶ್ಯತಸ್ತವ ಪುತ್ರಸ್ಯ ತಸ್ಯ ವೀರಸ್ಯ ಭಾರತ ॥೧೫೦॥

ಇದೇ ಸಮಯದಲ್ಲಿ ಶತ್ರುತಾಪಕನಾದ ಅರ್ಜುನನು ವೀರನಾದ ನಿನ್ನ ಪುತ್ರನು ನೋಡುತ್ತಿದ್ದಂತೆಯೇ ನಿನ್ನ ಸೈನ್ಯವನ್ನು ನೂರಾರು ಸಾವಿರಾರು ಸಂಖ್ಯೆಯಲ್ಲಿ ನಾಶಗೈದ.

ಏವಮೇಷ ಕ್ಷಯೋ ವೃತ್ತಸ್ತಾವಕಾನಾಂ ಪರೈಃ ಸಹ ।
ಕ್ರೂರೋ ವಿಶಸನೋ ಘೋರೋ ರಾಜನ್ ದುರ್ಮಂತ್ರಿತೇ ತವ ॥೧೫೧

ರಾಜನೆ, ಹೀಗೇ ಶತ್ರುಗಳೊಂದಿಗೆ ನಿನ್ನವರಿಗೆ ಕ್ರೂರವಾದ ವಿನಾಶಕಾರಿಯಾದ ಯುದ್ಧ ನಡೆಯಿತು. ನಿನ್ನವರ ವಿನಾಶವಾಯಿತು. ಇದು ನಿನ್ನ ದುಷ್ಟವಾದ ಆಲೋಚನೆಯ ಫಲ.

ಸಂಶಪ್ತಕಾಂಶ್ಚ ಕೌಂತೇಯಃ ಕುರೂಂಶ್ಚಾಪಿ ವೃಕೋದರಃ ।
ವಸುಷೇಣಶ್ಚ ಪಾಂಚಾಲಾನ್ ಕ್ಷಣೇನ ವ್ಯಧಮದ್ ರಣೇ ॥೧೫೨॥

ರಣದಲ್ಲಿ ಸಂಶಪ್ತಕರನ್ನು ಅರ್ಜುನ, ಕೌರವರನ್ನು ಭೀಮ, ಪಾಂಚಾಲರನ್ನು ಕರ್ಣ, ಕ್ಷಣದಲ್ಲಿ ನಾಶಗೈದರು.

ವರ್ತಮಾನೇ ತಥಾ ರೌದ್ರೇ ರಾಜನ್ ವೀರವರಕ್ಷಯೇ ।
ಉತ್ಥಿತಾನ್ಯಗಣೇಯಾನಿ ಕಬಂಧಾನಿ ಸಮಂತತಃ ॥೧೫೩॥

ರಾಜನೆ, ಶ್ರೇಷ್ಠವೀರರ ವಿನಾಶ ನಡೆಯುವಾಗ ಎಲ್ಲ ಕಡೆ ಲೆಕ್ಕವಿಲ್ಲದಷ್ಟು ಮುಂಡಗಳು ಎದ್ದುವು.

ಯುಧಿಷ್ಠಿರೋಪಿ ಸಂಗ್ರಾಮೇ ಪ್ರಹಾರೈರ್ಗಾಢವೇದನಃ ।
ಕ್ರೋಶಮಾತ್ರಮಪಕ್ರಮ್ಯ ತಸ್ಥೌ ಭರತಸತ್ತಮ ॥೧೫೪॥

ಯುಧಿಷ್ಠಿರನೂ ರಣದಲ್ಲಿ ಪ್ರಹಾರಗಳಿಂದ ಬಲುವೇದನೆ ಪಟ್ಟು ಕ್ರೋಶದಷ್ಟು ಮಾತ್ರ ದೂರಕ್ಕೆ ಹೋಗಿ ನಿಂತನು.

ಯುಧಿಷ್ಠಿರನು ಕ್ರೋಶದಷ್ಟು ದೂರಕ್ಕೆ ಹೋಗಿ ನಿಲ್ಲಲು ಕಾರಣ ಮುಂದೆ 'ಉಪವಾಸಕೃಶೋ ರಾಜಾ'(57.17) ಇತ್ಯಾದಿ ಶ್ರೀಕೃಷ್ಣನ ಮಾತಿನಿಂದ ಸ್ಪಷ್ಟವಾಗುತ್ತದೆ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ತ್ರಿಪಂಚಾಶೋಽಧ್ಯಾಯಃ ॥೫೩॥

❖

ಐವತ್ತನಾಲ್ಕನೆಯ ಅಧ್ಯಾಯ

ದುರ್ಯೋಧನ–ಅಶ್ವತ್ಥಾಮರು ಕುರುಸೈನ್ಯವನ್ನು ಹುರಿದುಂಬಿಸುತ್ತಾರೆ.

ಸಂಜಯಃ

ದುರ್ಯೋಧನಸ್ತತಃ ಕರ್ಣಮುಪೇತ್ಯ ಭರತರ್ಷಭ ।
ಅಬ್ರವೀದ್ ಮದ್ರರಾಜಂ ಚ ತಥೈವಾನ್ಯಾನ್ ಮಹಾರಥಾನ್ । ೧॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ರಾಜನೆ, ದುರ್ಯೋಧನನು ಕರ್ಣನ ಬಳಿಗೆ ಹೋಗಿ ಅವನಿಗೂ ಶಲ್ಯನಿಗೂ ಹಾಗೇ ಬೇರೆ ಮಹಾರಥರಿಗೂ ನುಡಿದ

ಯದೃಚ್ಛಯೋಪಸಂಪ್ರಾಪ್ತಂ ಸ್ವರ್ಗದ್ವಾರಮಪಾವೃತಮ್ ।
ಸುಖಿನಃ ಕ್ಷತ್ರಿಯಾಃ ಕರ್ಣ ಲಭಂತೇ ಯುದ್ಧಮೀದೃಶಮ್ ॥೨॥

ಕರ್ಣ, ಈ ಯುದ್ಧ ಯದೃಚ್ಛೆಯಿಂದ ಬಂದೊದಗಿದೆ. ಸ್ವರ್ಗಕ್ಕೆ ತೆರೆದಿಟ್ಟ ಬಾಗಿಲಿನಂತಿದೆ. ಇಂಥ ಯುದ್ಧವನ್ನು ಪುಣ್ಯವಂತರಾದ ಕ್ಷತ್ರಿಯರೇ ಪಡೆಯಬಲ್ಲರು. ಅವರೇ ಸುಖಿಗಳು.

ಸದೃಶೈಃ ಕ್ಷತ್ರಿಯೈಃ ಶೂರೈಃ ಶೂರಾಣಾಂ ಯುಧ್ಯತಾಂ ಯುಧಿ ।
ಇಷ್ಟಂ ಭವತಿ ರಾಧೇಯ ತದಿದಂ ಸಮುಪಸ್ಥಿತಮ್ ॥೩॥

ಸದೃಶರಾದ ಶೂರ ಕ್ಷತ್ರಿಯರೊಂದಿಗೆ ರಣದಲ್ಲಿ ಹೋರಾಡುವ ಶೂರರಿಗೆ ಅದೊಂದು ಯಜ್ಞವಾಗುತ್ತದೆ. ಅಂಥ ಯುದ್ಧವು ಇದೀಗ ಬಂದೊದಗಿದೆ.

ಹತ್ವಾ ವಾ ಪಾಂಡವಾನ್ ಯುದ್ಧೇ ಶ್ಲಿತಾಮುರ್ವೀಮವಾಪ್ಸ್ಯಥ ।
ನಿಹತಾ ವಾ ಪರೈರ್ಯುದ್ಧೇ ವೀರಲೋಕಮವಾಪ್ಸ್ಯಥ ॥೪॥

ಪಾಂಡವರನ್ನು ಯುದ್ಧದಲ್ಲಿ ಕೊಂದರೆ ಸಮೃದ್ಧವಾದ ರಾಜ್ಯವನ್ನು ಹೊಂದುವಿರಿ ಅಥವಾ ಶತ್ರುಗಳಿಂದ ಯುದ್ಧದಲ್ಲಿ ಹತರಾದರೂ ವೀರಸ್ವರ್ಗವನ್ನು ಪಡೆಯುವಿರಿ.

ದುರ್ಯೋಧನಸ್ಯ ತಚ್ಛ್ರುತ್ವಾ ವಚನಂ ಕ್ಷತ್ರಿಯರ್ಷಭಾಃ ।
ಹೃಷ್ಟಾ ನಾದಾನುದಕ್ರೋಶನ್ ವಾದಿತ್ರಾಣಿ ಚ ಜಘ್ನಿರೇ ॥೫॥

ದುರ್ಯೋಧನನ ಈ ಮಾತನ್ನು ಕೇಳಿ ಕ್ಷತ್ರಿಯಶ್ರೇಷ್ಠರು ಹೃಷ್ಟರಾಗಿ ಸಿಂಹನಾದ ಮಾಡಿದರು. ವಾದ್ಯಗಳನ್ನು ಮೊಳಗಿಸಿದರು.

ತತಃ ಪ್ರಮುದಿತೇ ತಸ್ಮಿನ್ ದುರ್ಯೋಧನಬಲೇ ತದಾ ।
ಹರ್ಷಯಂಸ್ತಾವಕಾನ್ ಯೋಧಾನ್ ದ್ರೌಣಿರ್ವಚನಮಬ್ರವೀತ್ ॥೬॥

ದುರ್ಯೋಧನನ ಸೈನ್ಯ ಹೀಗೆ ಹರ್ಷಗೊಂಡಾಗ ನಿನ್ನ ಕಡೆಯ ಯೋಧರನ್ನು ಹುರಿದುಂಬಿಸುತ್ತ ಅಶ್ವತ್ಥಾಮನು ಹೀಗೆ ನುಡಿದ.

ಪ್ರತ್ಯಕ್ಷಂ ಸರ್ವಸೈನ್ಯಾನಾಂ ಭವತಾಂ ಚಾಪಿ ಪಶ್ಯತಾಮ್ ।
ನ್ಯಸ್ತಶಸ್ತ್ರೋ ಮಮ ಪಿತಾ ಧೃಷ್ಟದ್ಯುಮ್ನೇನ ಪಾತಿತಃ ॥೭॥

ಎಲ್ಲ ಸೈನ್ಯಗಳ ಕಣ್ಣೆದುರಿಗೇ, ನೀವೂ ನೋಡುತ್ತಿದ್ದಂತೆಯೇ ಶಸ್ತ್ರಸನ್ಯಾಸ ಮಾಡಿದ್ದ ನನ್ನ ತಂದೆ ಧೃಷ್ಟದ್ಯುಮ್ನನಿಂದ ಹತನಾಗಿದ್ದಾನೆ.

ಸ ತೇನಾಹಮಮರ್ಷೇಣ ಮಿತ್ರಾರ್ಥೇ ಚಾಪಿ ಪಾರ್ಥಿವಾಃ ।
ಸತ್ಯಂ ವಃ ಪ್ರತಿಜಾನಾಮಿ ತದಾಕ್ಯಂ ಮೇ ನಿಬೋಧತ ॥೮॥

ಈ ಅಸಹನೆಯಿಂದ ಮಾತ್ರವಲ್ಲದೆ ಮಿತ್ರನಾದ ದುರ್ಯೋಧನನಿಗಾಗಿಯೂ, ಕ್ಷತ್ರಿಯರೆ, ಸತ್ಯವಾಗಿ ನಿಮಗೆ ಪ್ರತಿಜ್ಞೆ ಮಾಡಿ ಹೇಳುತ್ತೇನೆ. ಅದನ್ನು ಕೇಳಿರಿ.

ಧೃಷ್ಟದ್ಯುಮ್ನಮಹತ್ವಾಹಂ ನ ವಿಮೋಕ್ಷ್ಯಾಮಿ ದಂಶನಮ್ ।
ಅನೃತಾಯಾಂ ಪ್ರತಿಜ್ಞಾಯಾಂ ನಾಹಂ ಸ್ವರ್ಗಮವಾಪ್ನುಯಾಮ್ ॥೯॥

ಧೃಷ್ಟದ್ಯುಮ್ನನನ್ನು ಕೊಲ್ಲದೆ ನಾನು ಕವಚವನ್ನು ಬಿಚ್ಚುವುದಿಲ್ಲ. ನನ್ನ ಈ ಪ್ರತಿಜ್ಞೆ ಸುಳ್ಳಾದರೆ ನಾನು ಸ್ವರ್ಗ ಪಡೆಯಲಾರೆ.

ಅರ್ಜುನೋ ಭೀಮಸೇನಶ್ಚ ಯಶ್ಚ ಮಾಂ ಪ್ರತ್ಯುದೇಷ್ಯತಿ ।
ಸರ್ವಾನ್ ತಾನ್ ಪ್ರಮಥಿಷ್ಯೇಽಹಮಿತಿ ಮೇ ನಿಶ್ಚಿತಾ ಮತಿಃ ॥೧೦॥

'ಅರ್ಜುನನಾಗಲಿ ಭೀಮಸೇನನಾಗಲಿ ಯಾರೇ ನನ್ನನ್ನು ತಡೆದರೂ ಅವರೆಲ್ಲರನ್ನೂ ನಾನು ವಧಿಸುತ್ತೇನೆ. ಇದು ನನ್ನ ದೃಢವಾದ ನಿರ್ಧಾರ.'

ಏವಮುಕ್ತೇ ತತಃ ಸರ್ವಾ ಸಹಿತಾ ಭಾರತೀ ಚಮೂಃ ।
ಅಭ್ಯದ್ರವತ ಕೌಂತೇಯಾಂಸ್ತಥಾ ತೇ ಚಾಪಿ ಪಾಂಡವಾಃ ॥೧೧॥

ಅಶ್ವತ್ಥಾಮನು ಹೀಗೆ ಹೇಳಿದಾಗ ಎಲ್ಲ ಕೌರವಸೈನ್ಯವೂ ಒಂದಾಗಿ ಪಾಂಡವರನ್ನೂ ಪಾಂಡವರೆಲ್ಲ ಒಂದಾಗಿ ಕೌರವರನ್ನೂ ಆಕ್ರಮಿಸಿದರು.

ಸ ಸನ್ನಿಪಾತೋ ರಥಯೂಥಪಾನಾಂ
ಮಹಾನಭೂತ್ ಭಾರತ ಮೋಹರೂಪಃ ।
ಜನಕ್ಷಯಃ ಕಾಲಯುಗಾಂತಕಲ್ಪಃ
ಪ್ರಾವರ್ತತಾಗ್ರೇ ಕುರುಸೃಂಜಯಾನಾಮ್ ॥೧೨॥

ರಾಜನೆ, ಕೌರವ–ಪಾಂಡವರ ರಥ ಗಜ ಸೈನ್ಯಗಳಿಗೆ ಮೈಮರೆಸುವಂಥ ಮಹಾಯುದ್ಧ ನಡೆಯಿತು. ಅದು ಯುಗಾಂತಕಾಲದ ಪ್ರಳಯದಂತಿದ್ದು ಜನಕ್ಷಯಕ್ಕೆ ಕಾರಣವಾಯಿತು.

ತತಃ ಪ್ರವೃತ್ತೇ ಯುಧಿ ಸಂಪ್ರಹಾರೇ
ಭೂತಾನಿ ಸರ್ವಾಣಿ ಸದೈವತಾನಿ ।

ಆಸನ್ ಸಮೇತಾನಿ ಸಹಾಪ್ಸರೋಭಿ-
ರ್ದಿದೃಕ್ಷಮಾಣಾನಿ ನರಪ್ರವೀರಾನ್ ॥೧೩॥

ರಣದಲ್ಲಿ ಹೋರಾಟ ನಡೆದಾಗ ಶ್ರೇಷ್ಠ ಯೋಧರನ್ನು ನೋಡಲು ಎಲ್ಲ ಜನರೂ ದೇವತೆಗಳೂ ಅಪ್ಸರೆಯರೊಂದಿಗೆ ಬಂದು ಸೇರಿದರು.

ದಿವ್ಯೈಶ್ಚ ಮಾಲ್ಯೈರ್ವಿವಿಧೈಶ್ಚ ಗಂಧೈ-
ರ್ದಿವ್ಯೈಶ್ಚ ರತ್ನೈರ್ವಿವಿಧೈರ್ನರಾಗ್ರ್ಯಾನ್ ।
ರಣೇ ಸ್ವಕರ್ಮೋದ್ಯತಃ ಪ್ರವೀರಾನ್
ಅವಾಕಿರನ್ನಪ್ಸರಸಃ ಪ್ರಹೃಷ್ಟಾಃ ॥೧೪॥

ನಾನಾ ಬಗೆಯ ದಿವ್ಯಮಾಲೆ ದಿವ್ಯಗಂಧ ದಿವ್ಯರತ್ನಗಳನ್ನು ಸ್ವಕರ್ಮ ನಿರತರಾದ ವೀರರಾದ ಶ್ರೇಷ್ಠ ಯೋಧರ ಮೇಲೆ ಪ್ರಹೃಷ್ಟರಾದ ಅಪ್ಸರೆಯರು ಸುರಿದರು.

ಸಮೀರಣಸ್ತಾಂಶ್ಚ ನಿಷೇವ್ಯ ಗಂಧಾನ್
ಸಿಷೇವ ಸರ್ವಾನಪಿ ಯೋಧಮುಖ್ಯಾನ್ ।
ನಿಷೇವ್ಯಮಾಣಾಸ್ತ್ವನಿಲೇನ ಯೋಧಾಃ
ಪರಸ್ಪರಘ್ನಾ ಧರಣೀಂ ನಿಪೇತುಃ ॥೧೫॥

ಗಾಳಿಯು ಗಂಧ–ಮಾಲ್ಯಾದಿಗಳ ಸುವಾಸನೆಯನ್ನು ಹೊತ್ತು ಎಲ್ಲ ಯೋಧ ಶ್ರೇಷ್ಠರನ್ನು ಉಪಚರಿಸಿತು. ಅವರು ಗಾಳಿಯಿಂದ ಉಪಚಾರವನ್ನು ಕೈಗೊಳ್ಳುತ್ತಾ ಪರಸ್ಪರ ವಧೆಮಾಡಿ ನೆಲದಲ್ಲಿ ಬಿದ್ದರು.

ಸಾ ದಿವ್ಯಪುಷ್ಪೈರವಕೀರ್ಯಮಾಣಾ
ಸುವರ್ಣಪುಂಖೈಶ್ಚ ಶರೈರ್ವಿಚಿತ್ರೈಃ ।
ನಕ್ಷತ್ರಸಂಘೈರಿವ ಚಿತ್ರಿತಾ ದ್ಯೌಃ
ಕ್ಷಿತಿರ್ಬಭೌ ಯೋಧವರೈರ್ವಿಚಿತ್ರಾ ॥೧೬॥

ಆ ರಣಭೂಮಿಯು ದಿವ್ಯಪುಷ್ಪಗಳಿಂದಲೂ ಬಂಗಾರದ ಪುಕ್ಕವುಳ್ಳ ನಾನಾ

ಬಗೆಯ ಬಾಣಗಳಿಂದಲೂ ಯೋಧಶ್ರೇಷ್ಠರಿಂದಲೂ ತುಂಬಿ, ನಕ್ಷತ್ರ ಸಮೂಹಗಳಿಂದ ಚಿತ್ರಿತವಾದ ಅಂತರಿಕ್ಷದಂತೆ ಕಂಡುಬಂದಿತು.

ತತೋಽಂತರಿಕ್ಷಾದಪಿ ಸಾಧುವಾದೈ-
ರ್ವಾದಿತ್ರಘೋಷೈಃ ಸಮುದೀರ್ಯಮಾಣಃ।
ಜ್ಯಾಘೋಷನೇಮಿಸ್ವನನಾದಚಿತ್ರಃ
ಸಮಾಕುಲೋಽಶೋಭತ ಸಂಪ್ರಹಾರಃ ॥೧೭॥

ಅಂತರಿಕ್ಷದಿಂದಲೂ 'ಭೇಷ್ ಭೇಷ್' ಎನ್ನುವ ಮಾತುಗಳೊಂದಿಗೆ ವಾದ್ಯಘೋಷ ಕೇಳಿ ಬಂದಿತು. ರಣಭೂಮಿಯಲ್ಲಿಯೂ ಧನುಷ್ಟಂಕಾರ ರಥ ಚಕ್ರಧ್ವನಿಗಳಿಂದ ಕೂಡಿ ಗದ್ದಲದ ಆ ಯುದ್ಧವು ಬಹಳ ಶೋಭಿಸಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಚತುಃಪಂಚಾಶೋಽಧ್ಯಾಯಃ ॥೫೪॥

❖

ಐವತ್ತೈದನೆಯ ಅಧ್ಯಾಯ

ಭೀಮಸೇನನಿಂದ ಕೌರವಸೈನ್ಯ ನಾಶ.

ಸಂಜಯಃ

ಏವಮೇಷ ಮಹಾನಾಸೀತ್ ಸಂಗ್ರಾಮಃ ಪೃಥಿವೀಕ್ಷಿತಾಮ್।
ಕ್ರುದ್ಧೇಽರ್ಜುನೇ ತಥಾ ಕರ್ಣೇ ಭೀಮಸೇನೇ ಚ ಪಾಂಡವೇ ॥೧॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ಹೀಗೇ ಅರ್ಜುನನೂ ಭೀಮನೂ ಕರ್ಣನೂ ಕ್ರುದ್ಧರಾದಾಗ ರಾಜರಲ್ಲಿ ಮಹಾಸಂಗ್ರಾಮ ನಡೆಯಿತು.

ದ್ರೋಣಪುತ್ರಂ ಪರಾಜಿತ್ಯ ಜಿತ್ವಾ ಚಾನ್ಯಾನ್ ಮಹಾರಥಾನ್।
ಅಬ್ರವೀದರ್ಜುನೋ ರಾಜನ್ ವಾಸುದೇವಮಿದಂ ವಚಃ ॥೨॥

ರಾಜನೆ, ಅರ್ಜುನನು ಅಶ್ವತ್ಥಾಮನನ್ನು ಪರಾಭವಗೊಳಿಸಿ ಬೇರೆ ಮಹಾ ರಥರನ್ನೂ ಗೆದ್ದು ಕೃಷ್ಣನಿಗೆ ಈ ಮಾತನ್ನು ನುಡಿದ.

ಪಶ್ಯ ಕೃಷ್ಣ ಮಹಾಬಾಹೋ ದ್ರವಂತೀಂ ಪಾಂಡವೀಂ ಚಮೂಮ್ ।
ಕರ್ಣಂ ಪಶ್ಯ ಚ ಸಂಗ್ರಾಮೇ ಕಾಲಯಂತಂ ಮಹಾರಥಾನ್ ॥೩॥

ನೋಡು, ಮಹಾಬಾಹುವಾದ ಕೃಷ್ಣನೆ, ಪಾಂಡವಸೇನೆ ಪಲಾಯನ ಮಾಡುತ್ತಿರುವುದನ್ನು, ಸಂಗ್ರಾಮದಲ್ಲಿ ಮಹಾರಥರನ್ನು ನಾಶಪಡಿಸುತ್ತಿರುವ ಕರ್ಣನನ್ನು ನೋಡು.

ನ ಚ ಪಶ್ಯಾಮಿ ದಾಶಾರ್ಹ ಧರ್ಮರಾಜಂ ಯುಧಿಷ್ಠಿರಮ್ ।
ನಾಪಿ ಕೇತುರ್ಯುಧಾಂಶ್ರೇಷ್ಠ ಧರ್ಮರಾಜಸ್ಯ ದೃಶ್ಯತೇ ॥೪॥

ಯೋಧರಲ್ಲಿ ಶ್ರೇಷ್ಠನಾದ ಕೃಷ್ಣನೆ, ನಾನು ಧರ್ಮರಾಜ ಯುಧಿಷ್ಠಿರನನ್ನು ನೋಡುತ್ತಿಲ್ಲ. ಧರ್ಮರಾಜನ ಧ್ವಜವೂ ನನಗೆ ಗೋಚರಿಸುತ್ತಿಲ್ಲ.

ತ್ರಿಭಾಗಶ್ಚಾವಶಿಷ್ಟೋऽಯಂ ದಿವಸಸ್ಯ ಜನಾರ್ದನ ।
ನ ಚ ಮಾಂ ಧಾರ್ತರಾಷ್ಟ್ರೇಷು ಕಶ್ಚಿದ್ ಯುಧ್ಯತಿ ಸಂಯುಗೇ ॥೫॥

ಜನಾರ್ದನ, ಹಗಲಿನ ಮೂರನೆ ಒಂದು ಭಾಗದಷ್ಟು ಮಾತ್ರ ಉಳಿದಿದೆ. ದುರ್ಯೋಧನನ ಸೈನ್ಯದಲ್ಲಿ ಯಾರೂ ನನ್ನೊಡನೆ ರಣದಲ್ಲಿ ಯುದ್ಧ ಮಾಡುತ್ತಿಲ್ಲ.

ತಸ್ಮಾತ್ ತ್ವಂ ಮತ್ಪ್ರಿಯಂ ಕುರ್ವನ್ ಯಾಹಿ ಯತ್ರ ಯುಧಿಷ್ಠಿರಃ ।
ದೃಷ್ಟ್ವಾ ಕುಶಲಿನಂ ಯುದ್ಧೇ ಧರ್ಮಪುತ್ರಂ ಸಹಾನುಜಮ್ ॥೬॥
ಪುನರ್ಯೋದ್ಧಾಸ್ಮಿ ವಾರ್ಷ್ಣೇಯ ಶತ್ರುಭಿಃ ಸಹ ಸಂಯುಗೇ ॥೭॥

ಅದರಿಂದ, ನನಗೆ ಪ್ರಿಯ ಉಂಟುಮಾಡಲು ಯುಧಿಷ್ಠಿರನಿರುವಲ್ಲಿಗೆ ಹೋಗು. ಯುಧಿಷ್ಠಿರನು ತಮ್ಮಂದಿರೊಂದಿಗೆ ರಣದಲ್ಲಿ ಕ್ಷೇಮವಾಗಿರುವುದನ್ನು ಕಂಡು ಬಳಿಕ ಶತ್ರುಗಳೊಂದಿಗೆ ರಣದಲ್ಲಿ ಪುನಃ ಯುದ್ಧ ಮಾಡುವೆನು.

ತತಃ ಪ್ರಾಯಾದ್ ರಥೇನಾಶು ಬೀಭತ್ಸೋರ್ವಚನಾದ್ಧರಿಃ ।
ಯತೋ ಯುಧಿಷ್ಠಿರೋ ರಾಜಾ ಸೃಂಜಯಾಶ್ಚ ಮಹಾರಥಾಃ ।
ಅಯುಧ್ಯಂಸ್ತಾವಕೈಃ ಸಾರ್ಧಂ ಮೃತ್ಯುಂ ಕೃತ್ವಾ ನಿವರ್ತನಮ್ ॥೮॥

ಅರ್ಜುನ ಹೇಳಿದಂತೆ ಕೃಷ್ಣನು, ರಾಜಾಯುಧಿಷ್ಠಿರನೂ ಸೃಂಜಯ

ಮಹಾರಥರೂ ಮರಣದಿಂದಲೇ ಯುದ್ಧದಿಂದ ನಿವೃತ್ತಿ ಎಂದು ನಿಶ್ಚಯ ಮಾಡಿಕೊಂಡು ನಿನ್ನ ಕಡೆಯವರೊಡನೆ ಎಲ್ಲಿ ಯುದ್ಧಮಾಡುತ್ತಿದ್ದರೋ ಅಲ್ಲಿಗೇ ರಥದಿಂದ ವೇಗವಾಗಿ ಹೊರಟ.

ತ್ವರಮಾಣಃ ಪುನಃ ಕೃಷ್ಣಃ ಪಾರ್ಥಮಾಹ ಶನೈರಿದಮ್ ।
ಪಶ್ಯ ಕೌರವ್ಯ ರಾಜಾನಮುಪಾಯಾತಾಂಶ್ಚ ಪಾರ್ಥಿವಾನ್ ॥೯॥

ವೇಗವಾಗಿ ಹೋಗುತ್ತಲೇ ಕೃಷ್ಣನು ಅರ್ಜುನನಿಗೆ ನಿಧಾನವಾಗಿ ಹೀಗೆ ನುಡಿದ— ಅರ್ಜುನ ನೋಡು, ರಾಜಾ ಯುಧಿಷ್ಠಿರನನ್ನು ನೋಡು. ಅವನ ಬಳಿಗೆ ಬಂದ ರಾಜರನ್ನೂ ನೋಡು.

ಕರ್ಣಂ ಪಶ್ಯ ಮಹಾರಂಗೇ ಜ್ವಲಂತಮಿವ ಪಾವಕಮ್ ।
ಅಸೌ ಭೀಮೋ ಮಹೇಷ್ವಾಸಃ ಸನ್ನಿವೃತ್ತೋ ರಣಂ ಪ್ರತಿ ॥೧೦॥

ಮಹಾರಣರಂಗದಲ್ಲಿ ಜ್ವಲಿಸುವ ಬೆಂಕಿಯಂತಿರುವ ಕರ್ಣನನ್ನು ನೋಡು. ಈತ ಮಹಾಬಿಲ್ಲಾರ ಭೀಮನು ರಣಕ್ಕೆ ಹಿಂತಿರುಗಿ ಬಂದಿದ್ದಾನೆ.

ತಮೇತೇऽನು ನಿವರ್ತಂತೇ ಧೃಷ್ಟದ್ಯುಮ್ನಪುರೋಗಮಾಃ ।
ಪಾಂಚಾಲಾನಾಂ ಸೃಂಜಯಾನಾಂ ಪಾಂಡವಾನಾಂ ಚ
ಯನ್ಮುಖಮ್ ॥೧೧॥

ಭೀಮನನ್ನು ಹಿಂಬಾಲಿಸಿ ಧೃಷ್ಟದ್ಯುಮ್ನ ಮುಂತಾದವರೂ ಬರುತ್ತಿದ್ದಾರೆ. ಪಾಂಚಾಲರಿಗೂ ಸೃಂಜಯರಿಗೂ ಪಾಂಡವರಿಗೂ ಧೃಷ್ಟದ್ಯುಮ್ನ ನಾಯಕನು ಆಗಿದ್ದಾನೆ.

ನಿವೃತ್ತೈಶ್ಚ ತಥಾ ಪಾರ್ಥೈರ್ಭಗ್ನಂ ಶತ್ರುಬಲಂ ಮಹತ್ ॥೧೨॥

ಹೀಗೆ ಹಿಂತಿರುಗಿ ಬಂದ ಪಾಂಡವರಿಂದ ಮಹತ್ತಾದ ಶತ್ರುಸೈನ್ಯವು ಭಗ್ನವಾಗಿದೆ.

ಕೌರವಾನ್ ದ್ರವತೋ ಹ್ಯೇಷ ಕರ್ಣೋ ಧಾರಯತೇऽರ್ಜುನ ।
ಅಂತಕಪ್ರತಿಮೋ ವೇಗೇ ಶಕ್ರತುಲ್ಯಪರಾಕ್ರಮಃ ॥೧೩॥

ಕೌರವರು ಪಲಾಯನ ಮಾಡುವಾಗ ಕರ್ಣ ಅವರನ್ನು ತಡೆದು ನಿಲ್ಲಿಸುತ್ತಾನೆ. ವೇಗದಲ್ಲಿ ಯಮನಿಗೆ ಸಮಾನ. ಇಂದ್ರಸದೃಶ ಪರಾಕ್ರಮಿಯಾಗಿದ್ದಾನೆ.

ಅಸೌ ಗಚ್ಛತಿ ಕೌರವ್ಯ ದ್ರೌಣಿರಸ್ತ್ರಭೃತಾಂ ವರಃ ।
ತಮೇಷ ಪ್ರದ್ರುತಃ ಸಂಖೇ ಧೃಷ್ಟದ್ಯುಮ್ನೋ ಮಹಾರಥಃ ॥೧೪॥
ಅನುಪ್ರಯಾತಾನ್ ಸಂಗ್ರಾಮೇ ಹತಾನ್ ಪಶ್ಯ ಚ
ಸೃಂಜಯಾನ್ ॥೧೫॥॥

ಅರ್ಜುನ, ಇವನು ಅಶ್ವತ್ಥಾಮ, ಅಸ್ತ್ರಧಾರಿಗಳಲ್ಲಿ ಶ್ರೇಷ್ಠ ಅವನನ್ನು ಬೆನ್ನಟ್ಟಿ ರಣದಲ್ಲಿ ಮಹಾರಥನಾದ ಧೃಷ್ಟದ್ಯುಮ್ನ ಧಾವಿಸುತ್ತಿದ್ದಾನೆ. ಹಿಂಬಾಲಿಸಿ ಹೋದ ಸೃಂಜಯರು ರಣದಲ್ಲಿ ಹತರಾದುದನ್ನು ನೋಡು.

ಸರ್ವಂ ವ್ಯಾಚಷ್ಟ ದುರ್ಧರ್ಷೋ ವಾಸುದೇವಃ ಕಿರೀಟಿನೇ ।
ತತೋ ರಾಜನ್ ಪ್ರಾದುರಾಸೀನ್ಮಹಾಘೋರೋ ಮಹಾರಣಃ ॥೧೬॥

ಹೀಗೆ ಯಾರಿಗೂ ಎದುರಿಸಲಾಗದ ಕೃಷ್ಣನು ಅರ್ಜುನನಿಗೆ ಎಲ್ಲವನ್ನೂ ಹೇಳಿದ. ಬಳಿಕ ರಾಜನೆ, ಮಹಾಘೋರವಾದ ಮಹಾರಣವು ಉಂಟಾಯಿತು.

ಸಿಂಹನಾದರವಾಶ್ಚಾತ್ರ ಪ್ರಾದುರಾಸನ್ ಸಮಾಗಮೇ ।
ಉಭಯೋಃ ಸೇನಯೋ ರಾಜನ್ ಮೃತ್ಯುಂ ಕೃತ್ವಾ ನಿವರ್ತನಮ್ ॥೧೭॥

ರಾಜನೆ, ಎರಡು ಸೈನ್ಯಗಳು ಮುಖಾಮುಖಿಯಾದಾಗ 'ಮರಣದಿಂದಲೆ ಯುದ್ಧದಿಂದ ನಿವೃತ್ತಿ' ಎಂದು ನಿರ್ಧಾರ ಮಾಡಿ ಸಿಂಹನಾದ ಗೈದುವು. ಹೀಗೆ ಸಿಂಹನಾದ ಧ್ವನಿ ಪ್ರಾದುರ್ಭವಿಸಿತು.

ಏವಮೇಷ ಕ್ಷಯೋ ವೃತ್ತಃ ಪೃಥಿವ್ಯಾಂ ಪೃಥಿವೀಪತೇ ।
ತಾವಕಾನಾಂ ಪರೇಷಾಂ ಚ ರಾಜನ್ ದುರ್ಮಂತ್ರಿತೇ ತವ ॥೧೮॥

ರಾಜನೆ, ಹೀಗೆ ಪೃಥಿವಿಯಲ್ಲಿ ನಿನ್ನವರ ಮತ್ತು ಪಾಂಡವರ ವಿನಾಶವು ನಿನ್ನ ದುಷ್ಟ ಆಲೋಚನೆಯ ಫಲವಾಗಿ ನಡೆದುಹೋಯಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಪಂಚಪಂಚಾಶೋऽಧ್ಯಾಯಃ ॥೫೫॥

ಮಹಾಭಾರತತಾತ್ಪರ್ಯನಿರ್ಣಯ

ವಿದ್ರಾವ್ಯಮಾಣಾಂ ಪೃತನಾಂ ನಿರೀಕ್ಷ್ಯ
ಗುರೋಃ ಸುತೇನಾಭ್ಯಗಮತ್ ತ್ವರಾವಾನ್ ।
ಧೃಷ್ಟದ್ಯುಮ್ನಸ್ತಂ ಸ ಊಚೇ ಸುಪಾಪಂ
ಹನಿಷ್ಯೇ ತ್ವಾಮದ್ಯ ಯುದ್ಧೇ ಗುರುಘ್ನಮ್ ॥೬೭॥

ಧೃಷ್ಟದ್ಯುಮ್ನ ತನ್ನ ಸೇನೆಯನ್ನು ಅಶ್ವತ್ಥಾಮ ಓಡಿಸುತ್ತಿರುವುದನ್ನು ಕಂಡು ತ್ವರೆಯಿಂದ ಅವನೆದುರಿಗೆ ಬಂದ. 'ಗುರುವನ್ನು ಕೊಂದ ಮಹಾಪಾಪಿಯಾದ ನಿನ್ನನ್ನು ಯುದ್ಧದಲ್ಲಿ ಈಗಲೆ ಸಂಹರಿಸುವೆನು' ಎಂದ, ಅಶ್ವತ್ಥಾಮ.

ಇತ್ಯುಕ್ತೋ ದರ್ಶಯಾಮಾಸ ಪಾರ್ಷತಃ ಖಡ್ಗಮುತ್ತಮಮ್ ।
ಅಯಂ ತವ ಪಿತುರ್ಹಂತಾ ವದಿಷ್ಯತಿ ತವೋತ್ತರಮ್ ॥೬೮॥

ಅಶ್ವತ್ಥಾಮ ಹೀಗೆ ಹೇಳಿದಾಗ ಧೃಷ್ಟದ್ಯುಮ್ನ ತನ್ನ ಉತ್ತಮವಾದ ಖಡ್ಗವನ್ನು ಎತ್ತಿತೋರಿದ: 'ಇದು ನಿನ್ನ ತಂದೆಯನ್ನು ಕೊಂದ ಖಡ್ಗ. ಇದೇ ನಿನಗೆ ಉತ್ತರ ಹೇಳುವುದು' ಎಂದ.

ಇತ್ಯುಕ್ತ್ವಾ ಧನುರಾದಾಯ ವವರ್ಷ ಚ ಶರಾನ್ ಬಹೂನ್ ।
ತಯೋಃ ಸಮಭವದ್ ಯುದ್ಧಂ ತುಮುಲಂ ರೋಮಹರ್ಷಣಮ್
॥೬೯॥

ಧೃಷ್ಟದ್ಯುಮ್ನ ಹೀಗೆ ಹೇಳಿ ಬಿಲ್ಲನ್ನೆತ್ತಿಕೊಂಡು ಬಹಳ ಬಾಣಗಳ ಮಳೆಗರೆದ. ಅವರಿಬ್ಬರೊಳಗೆ ರೋಮಾಂಚಕರವಾದ ತುಮುಲ ಯುದ್ಧ ನಡೆಯಿತು.

ತತ್ರ ತಂ ಪಾರ್ಷತಂ ದ್ರೌಣಿಃ ಕ್ಷಣೇನ ವಿರಥಾಯುಧಮ್ ।
ಕೃತ್ವಾಽಂತಾಯ ಶರಾಂಸ್ತೀಕ್ಷ್ಣಾನ್ ಮುಮೋಚ ನ ಚ ತಸ್ಯ ತೇ ॥೭೦॥

ತ್ವಚಂ ಚ ಚಿಚ್ಛಿದುರ್ದ್ರೌಣಿಃ ಖಡ್ಗಹಸ್ತೋಽಭಿಜಗ್ಮಿವಾನ್ ।
ಖಡ್ಗೇನ ಸಾಸ್ತ್ರೈಃ ಶಸ್ತ್ರೈರಪ್ಯನಿರ್ಭಿಣ್ಣತ್ವಚಂ ತದಾ ॥೭೧॥

ಮೌರ್ವ್ಯಾ ಮಮಂಥ ಧನುಷಃ ಪಾತಯಿತ್ವಾ ಧರಾತಲೇ ।
ಆಕೃಷ್ಯಮಾಣಂ ಪಾರ್ಷತಂ ದೃಷ್ಟ್ವಾ ಕೃಷ್ಣಪ್ರಚೋದಿತಃ ।
ಪಾರ್ಥೋ ಭೀಮಶ್ಚೋಭಯತಃ ಶರೈರಭಿನಿಜಘ್ನತುಃ ॥೭೨॥

ಆ ಯುದ್ಧದಲ್ಲಿ ಅಶ್ವತ್ಥಾಮ ಧೃಷ್ಟದ್ಯುಮ್ನನನ್ನು ಕ್ಷಣದಲ್ಲಿ ವಿರಥನನ್ನಾಗಿಯೂ ನಿರಾಯುಧನನ್ನಾಗಿಯೂ ಮಾಡಿ ಅವನ ನಾಶಕ್ಕಾಗಿ ತೀಕ್ಷ್ಣವಾದ ಬಾಣಗಳನ್ನೆಸೆದ. ಆದರೆ ಅವು ಅವನ ಚರ್ಮವನ್ನೂ ಗಾಯಗೊಳಿಸಲಿಲ್ಲ. ಬಳಿಕ ಅಶ್ವತ್ಥಾಮ ಖಡ್ಗ ಹಿರಿದು ಅವನ ಮೇಲೇರಿ ಹೋದ. ಆದರೆ ಖಡ್ಗದಿಂದಾಗಲಿ ಅಸ್ತ್ರ-ಶಸ್ತ್ರ ಗಳಿಂದಾಗಲಿ ಅವನ ಚರ್ಮದಲ್ಲಿಯೂ ಒಂದಿಷ್ಟೂ ಗಾಯವಾಗದಿದ್ದಾಗ ಬಿಲ್ಲಿನ ಹೆದೆಯಿಂದ ಸೆಳೆದು ನೆಲದಲ್ಲಿ ಕೆಡವಿ ಹಿಂಸಿಸಿದ. ಧೃಷ್ಟದ್ಯುಮ್ನನನ್ನು ಅಶ್ವತ್ಥಾಮ ಸೆಳೆಯುತ್ತಿದ್ದುದನ್ನು ನೋಡಿ ಭೀಮಾರ್ಜುನರು ಕೃಷ್ಣನಿಂದ ಪ್ರೇರಿತರಾಗಿ ಅಶ್ವತ್ಥಾಮನನ್ನು ಎರಡೂ ಪಾರ್ಶ್ವಗಳಲ್ಲಿ ಬಾಣಗಳಿಂದ ಹೊಡೆದರು.

ಸ ತಾಭ್ಯಾಂ ವಜ್ರಸದೃಶೈಃ ಶರೈರಭಿಹತೋ ಭೃಶಮ್ ।
ವಿಸೃಜ್ಯ ಪಾರ್ಷತಂ ಸ್ವೀಯಮಾರುರೋಹ ರಥಂ ಪುನಃ ॥೭೩॥

ಭೀಮಾರ್ಜುನರಿಂದ ವಜ್ರಸದೃಶವಾದ ಬಾಣಗಳಿಂದ ಚೆನ್ನಾಗಿ ಹೊಡೆಸಿ ಕೊಂಡ ಅಶ್ವತ್ಥಾಮ ಧೃಷ್ಟದ್ಯುಮ್ನನನ್ನು ಬಿಟ್ಟು ಪುನಃ ತನ್ನ ರಥವನ್ನೇರಿದ.

❖

ಐವತ್ತಾರನೆಯ ಅಧ್ಯಾಯ

ಕರ್ಣ-ಧೃಷ್ಟದ್ಯುಮ್ನರ ಯುದ್ಧ. ಕರ್ಣ-ಸಾತ್ಯಕಿ ಯುದ್ಧ. ಅಶ್ವತ್ಥಾಮ ಧೃಷ್ಟದ್ಯುಮ್ನನ ವಧೆಗೆ ಯತ್ನಿಸಿದಾಗ ಅರ್ಜುನನಿಂದ ಅವನಿಗೆ ರಕ್ಷಣೆ.

ಸಂಜಯಃ

ತತಃ ಪುನಃ ಸಮಾಜಗ್ಮುರಭೀತಾಃ ಕುರುಸೃಂಜಯಾಃ ।
ಧೃಷ್ಟದ್ಯುಮ್ನಮುಖಾಃ ಪಾರ್ಥಾ ವೈಕರ್ತನಮುಖಾ ವಯಮ್ ॥೧॥

ಸಂಜಯನು ಧೃತರಾಷ್ಟ್ರನಿಗೆ ನುಡಿದ—ಬಳಿಕ ಪುನಃ ಕೌರವರು, ಪಾಂಡವರು

ಮರಣ ಭೀತಿ ಇಲ್ಲದೆ ಪರಸ್ಪರ ಯುದ್ಧಕ್ಕೆ ಸೇರಿದರು, ಪಾಂಡವರು ಧೃಷ್ಟದ್ಯುಮ್ನನ ನಾಯಕತ್ವದಲ್ಲಿ ಮತ್ತು ನಾವು ಕರ್ಣನ ನಾಯಕತ್ವದಲ್ಲಿ.

ತತಃ ಪ್ರವವೃತೇ ಭೀಮಃ ಸಂಗ್ರಾಮೋ ಲೋಮಹರ್ಷಣಃ ।
ಕರ್ಣಸ್ಯ ಪಾಂಡವಾನಾಂ ಚ ಯಮರಾಷ್ಟ್ರವಿವರ್ಧನಃ ॥೨॥

ಆಗ ಕರ್ಣನಿಗೂ ಪಾಂಡವರಿಗೂ ಯಮರಾಜ್ಯದಲ್ಲಿ ಸಮೃದ್ಧಿ ಉಂಟು ಮಾಡುವಂಥ ಭೀಕರವಾದ ಸಂಗ್ರಾಮ ನಡೆಯಿತು.

ತಸ್ಮಿನ್ ಪ್ರವೃತ್ತೇ ಸಂಗ್ರಾಮೇ ತುಮುಲೇ ಶೋಣಿತೋದಕೇ ।
ಸಂಶಪ್ತಕೇಷು ಶೂರೇಷು ಕಿಂಚಿಚ್ಛಿಷ್ಟೇಷು ಭಾರತ ॥೩॥

ಧೃಷ್ಟದ್ಯುಮ್ನೋ ಮಹಾರಾಜ ಸಹಿತಃ ಸರ್ವರಾಜಭಿಃ ।
ಕರ್ಣಮೇವಾಭಿದುದ್ರಾವ ಪಾಂಡವಾಶ್ಚ ಮಹಾರಥಾಃ ॥೪॥

ನೀರಿನಂತೆ ನೆತ್ತರು ಹರಿಸುವಂಥ ತುಮುಲಯುದ್ಧ ನಡೆದಾಗ, ಉಳಿದುಳಿದ ಸ್ವಲ್ಪ ಸಂಶಪ್ತಕ ವೀರರು ಇನ್ನೂ ಇರುವಾಗ, ಮಹಾರಾಜ, ಧೃಷ್ಟದ್ಯುಮ್ನನು ಎಲ್ಲ ರಾಜರೊಂದಿಗೆ ಕೂಡಿಕೊಂಡು ಕರ್ಣನನ್ನು ಇದಿರಿಸಿದ. ಮಹಾರಥರಾದ ಪಾಂಡವರೂ ಅವನನ್ನು ಇದಿರಿಸಿದರು.

ಆಗಚ್ಛಮಾನಾಂಸ್ತಾನ್ ಸಂಖ್ಯೇ ಪ್ರಹೃಷ್ಟಾನ್ ವಿಜಯೈಷಿಣಃ ।
ದಧಾರೈಕೋ ರಣೇ ಕ್ರುದ್ಧೋ ಜಲೌಘಾನಿವ ಪರ್ವತಃ ॥೫॥

ರಣದಲ್ಲಿ ಜಯಾಕಾಂಕ್ಷಿಗಳಾಗಿ ಉತ್ಸಾಹದಿಂದ ಬರುತ್ತಿದ್ದ ಅವರೆಲ್ಲರನ್ನೂ ಕ್ರುದ್ಧನಾದ ಕರ್ಣನೊಬ್ಬನೆ ಜಲಧಾರೆಗಳನ್ನು ಪರ್ವತದಂತೆ ಇದಿರಿಸಿದ.

ತಮಾಸಾದ್ಯ ತು ತೇ ಕರ್ಣಂ ವ್ಯಶೀರ್ಯಂತ ಮಹಾರಥಾಃ ।
ಯಥಾಚಲಂ ಸಮಾಸಾದ್ಯ ಜಲೌಘಾಃ ಸರ್ವತೋದಿಶಮ್ ॥೬॥

ತಯೋರಾಸೀನ್ಮಹಾರಾಜ ಸಂಗ್ರಾಮೋ ಲೋಮಹರ್ಷಣಃ ॥೭॥

ಆ ಮಹಾರಥರು ಎಲ್ಲ ದಿಕ್ಕುಗಳಲ್ಲಿ ಕರ್ಣನನ್ನು ಇದಿರಿಸಿ, ಪರ್ವತವನ್ನು ತೋಯಿಸಿ ಜಲಧಾರೆಗಳು ತಾವೇ ಕ್ಷೀಣವಾಗುವಂತೆ, ತಾವೇ ಕ್ಷಯಿಸಿದರು. ಅವರಿಗೆ ಕರ್ಣನೊಡನೆ ರೋಮಾಂಚಕರವಾದ ಯುದ್ಧ ನಡೆಯಿತು.

ಧೃಷ್ಟದ್ಯುಮ್ನಸ್ತು ರಾಧೇಯಂ ಶರೇಣ ನತಪರ್ವಣಾ ।
ತಾಡಯಾಮಾಸ ಸಂಕ್ರುದ್ಧಸ್ತಿಷ್ಠ ತಿಷ್ಠೇತಿ ಚಾಬ್ರವೀತ್ ॥೮॥

ಧೃಷ್ಟದ್ಯುಮ್ನನು ಬಲುಕ್ರುದ್ಧನಾಗಿ ಡೊಂಕುಗಿಣ್ಣಿನ ಬಾಣದಿಂದ ಕರ್ಣನನ್ನು ಹೊಡೆದ ಮತ್ತು ''ನಿಲ್ಲು ನಿಲ್ಲು' ಎಂದ.

ವಿಜಯಂ ತು ಧನುಃಶ್ರೇಷ್ಠಂ ವಿಧುನ್ವಾನೋ ಮಹಾರಥಃ ।
ಪಾರ್ಷತಸ್ಯ ಧನುಶ್ಚಿತ್ತ್ವಾ ಶರಾನಾಶೀವಿಷೋಪಮಾನ್ ॥೯॥
ತಾಡಯಾಮಾಸ ಸಂಕ್ರುದ್ಧಃ ಪಾರ್ಷತಂ ನವಭಿಃ ಶರೈಃ ॥೧೦॥

ಮಹಾರಥನಾದ ಕರ್ಣನು ವಿಜಯ ಎಂಬ ಶ್ರೇಷ್ಠವಾದ ಧನುಸ್ಸನ್ನು ಓಲಾಡಿಸುತ್ತ ಒಂಬತ್ತು ಬಾಣಗಳಿಂದ ಧೃಷ್ಟದ್ಯುಮ್ನನ ಧನುಸ್ಸನ್ನೂ ಅವನ ಹಾವಿನಂಥ ಬಾಣಗಳನ್ನೂ ಕಡಿದು, ಅವನನ್ನೂ ಹೊಡೆದ.

ತೇ ವರ್ಮ ಹೇಮವಿಕೃತಂ ಭಿತ್ತ್ವಾ ತಸ್ಯ ಮಹಾತ್ಮನಃ ।
ಶೋಣಿತಾಕ್ತಾ ವ್ಯರಾಜನ್ತ ಶಕ್ರಗೋಪಾ ಇವಾನಘ ॥೧೧॥

ರಾಜನೆ, ಆ ಬಾಣಗಳು ಧೃಷ್ಟದ್ಯುಮ್ನನ ಬಂಗಾರದ ಕವಚವನ್ನು ಸೀಳಿ ನೆತ್ತರಿನಿಂದ ತೊಯ್ದು ಇಂದ್ರಗೋಪ ಹುಳುಗಳಂತೆ ಶೋಭಿಸಿದುವು.

ತದಪಾಸ್ಯ ಧನುಶ್ಚಿನ್ನಂ ಧೃಷ್ಟದ್ಯುಮ್ನೋ ಮಹಾರಥಃ ।
ಅನ್ಯದ್ಧನುರುಪಾದಾಯ ಶರಾಂಶ್ಚಾಶೀವಿಷೋಪಮಾನ್ ॥೧೨॥
ಕರ್ಣಂ ವಿವ್ಯಾಧ ಸಪ್ತತ್ಯಾ ಶರೈಃ ಸನ್ನತಪರ್ವಭಿಃ ॥೧೩॥

ಮಹಾರಥನಾದ ಧೃಷ್ಟದ್ಯುಮ್ನನು ಕಡಿದುಹೋದ ಬಿಲ್ಲನ್ನೆಸೆದು ಇನ್ನೊಂದು ಬಿಲ್ಲನ್ನೂ ಹಾವಿನಂಥ ಬಾಣಗಳನ್ನೂ ಎತ್ತಿಕೊಂಡು ಡೊಂಕುಗಿಣ್ಣಿನ ಎಪ್ಪತ್ತು ಬಾಣಗಳಿಂದ ಕರ್ಣನನ್ನು ಹೊಡೆದ.

ತಥೈವ ರಾಜನ್ ಕರ್ಣೋಽಪಿ ಪಾರ್ಷತಂ ಶತ್ರುತಾಪನಮ್ ।
ಛಾದಯಾಮಾಸ ಸಮರೇ ಶರೈರಾಶೀವಿಷೋಪಮೈಃ ।
ದ್ರೋಣಶತ್ರುಂ ಮಹೇಷ್ವಾಸೋ ವಿವ್ಯಾಧ ನವಭಿಃ ಶರೈಃ ॥೧೪

ರಾಜನೆ, ಹಾಗೇ ಮಹಾಬಿಲ್ಲಾರನಾದ ಕರ್ಣನೂ ಕೂಡ ದ್ರೋಣ ಹಂತಕನಾದ ಶತ್ರುನಾಶಕನಾದ ಧೃಷ್ಟದ್ಯುಮ್ನನನ್ನು ರಣದಲ್ಲಿ ತೀಕ್ಷ್ಣವಾದ ಒಂಬತ್ತು ಹಾವುಗಳಂಥ ಬಾಣಗಳಿಂದ ಹೊಡೆದ ಮತ್ತು ಬಾಣಗಳಿಂದ ಅವನನ್ನು ಆಚ್ಛಾದಿಸಿದ.

ತಸ್ಯ ಕರ್ಣೋ ಮಹಾರಾಜ ಶರಂ ಕನಕಭೂಷಣಮ್ ।
ಪ್ರೇಷಯಾಮಾಸ ಸಂಕ್ರುದ್ಧೋ ಮೃತ್ಯುದಂಡಮಿವಾಪರಮ್ ॥೧೫॥

ಮಹಾರಾಜ, ಕರ್ಣನು ಕ್ರುದ್ಧನಾಗಿ ಧೃಷ್ಟದ್ಯುಮ್ನನ ಮೇಲೆ ಬಂಗಾರದಿಂದ ಅಲಂಕೃತವಾದ ಇನ್ನೊಂದು ಮೃತ್ಯುದಂಡದಂತೇ ಕಾಣುವ ಬಾಣವನ್ನೂ ಎಸೆದ.

ತಮಾಪತಂತಂ ಸಹಸಾ ಘೋರರೂಪಂ ವಿಶಾಂಪತೇ ।
ಚಿಚ್ಛೇದ ಸಪ್ತಧಾ ರಾಜನ್ ಶೈನೇಯಃ ಕೃತಹಸ್ತವತ್ ॥೧೬॥

ರಾಜನೆ, ಘೋರಸ್ವರೂಪದ ಆ ಬಾಣವು ವೇಗವಾಗಿ ಧೃಷ್ಟದ್ಯುಮ್ನನ ಕಡೆಗೆ ಬರುತ್ತಿದ್ದಂತೆ ಸಾತ್ಯಕಿಯು ನೋಡಿ ಕೈಚಳಕದಿಂದ ಅದನ್ನು ಏಳು ಭಾಗವಾಗಿ ಕತ್ತರಿಸಿದ.

ದೃಷ್ಟ್ವಾ ವಿನಿಹತಂ ಬಾಣಂ ಶರೈಃ ಕರ್ಣೋ ವಿಶಾಂಪತೇ ।
ಸಾತ್ಯಕಿಂ ಶರವರ್ಷೇಣ ಸಮಂತಾತ್ ಪರ್ಯವಾರಯತ್ ॥೧೭॥

ರಾಜನೆ, ತನ್ನ ಬಾಣವು ಸಾತ್ಯಕಿಯ ಬಾಣಗಳಿಂದ ಕಡಿದು ಬಿದ್ದುದನ್ನು ಕಂಡ ಕರ್ಣನು ಅವನನ್ನು ಬಾಣಗಳ ಮಳೆಯಿಂದ ಎಲ್ಲಕಡೆ ಮುಚ್ಚಿದ.

ವಿವ್ಯಾಧ ಚೈನಂ ಸಮರೇ ನಾರಾಚೈಸ್ತತ್ರ ಸಪ್ತಭಿಃ ।
ತಂ ಪ್ರತ್ಯವಿಧ್ಯಚ್ಛೈನೇಯಃ ಶರೈರ್ಹೇಮವಿಭೂಷಿತೈಃ ॥೧೮॥

ಏಳುಬಾಣಗಳಿಂದ ರಣದಲ್ಲಿ ಸಾತ್ಯಕಿಯನ್ನು ಕರ್ಣನು ಹೊಡೆದ. ಸಾತ್ಯಕಿಯೂ ಕರ್ಣನನ್ನು ಬಂಗಾರದಿಂದ ಅಲಂಕೃತವಾದ ಬಾಣಗಳಿಂದ ಹೊಡೆದ.

ತತೋ ಯುದ್ಧಮತೀವಾಸೀಚ್ಚಕ್ಷುಃಶ್ರೋತ್ರಭಯಾವಹಮ್ ।
ಆಸೀದ್ ಘೋರಂ ಚ ಚಿತ್ರಂ ಚ ಪ್ರೇಕ್ಷಣೀಯಂ ಸಮಂತತಃ ॥೧೯॥

ಆಗ ಆ ಯುದ್ಧವು ಕಣ್ಣು ಕಿವಿಗಳಿಗೆ ಬಹಳ ಭಯ ಉಂಟು ಮಾಡುತ್ತ ಘೋರವೂ ಸುಂದರವೂ ಆಗಿದ್ದು ಎಲ್ಲೆಡೆ ಪ್ರೇಕ್ಷಣೀಯವೂ ಆಗಿತ್ತು.

ಸರ್ವೇಷಾಂ ತತ್ರ ಭೂತಾನಾಂ ಲೋಮಹರ್ಷೋ ವ್ಯಜಾಯತ ।
ತದ್ ದೃಷ್ಟ್ವಾ ಸಮರೇ ಕರ್ಮ ಕರ್ಣಶೈನೇಯಯೋರ್ನೃಪ ॥೨೦॥

ರಾಜನೆ, ಕರ್ಣ, ಸಾತ್ಯಕಿಯರು ರಣದಲ್ಲಿ ಮಾಡಿದ ಆ ಸಾಹಸಕೃತ್ಯವನ್ನು ಕಂಡು ಎಲ್ಲ ಜನರಿಗೂ ಆಗ ರೋಮಾಂಚ ಉಂಟಾಯಿತು.

ಏತಸ್ಮಿನ್ನಂತರೇ ದ್ರೌಣಿರಭ್ಯಯಾತ್ ಸುಮಹಾಬಲಮ್ ।
ಪಾರ್ಷತಂ ಶತ್ರುದಮನಂ ಶತ್ರುವೀರ್ಯಾಸುನಾಶನಮ್ ॥೨೧॥

ಈ ಸಮಯದಲ್ಲಿ ಮಹಾಬಲಿಯಾದ ಶತ್ರುನಾಶಕನಾದ ಶತ್ರುಗಳ ಶಕ್ತಿ ಪ್ರಾಣಗಳನ್ನು ಹೀರುವ ಧೃಷ್ಟದ್ಯುಮ್ನನನ್ನು ಅಶ್ವತ್ಥಾಮನು ಇದಿಸಿರಿದ.

ಅಭ್ಯಭಾಷತ ಸಂಕ್ರುದ್ಧೋ ದ್ರೌಣಿಃ ಪರಪುರಂಜಯಃ ।
ತಿಷ್ಠ ತಿಷ್ಠಾದ್ಯ ಬ್ರಹ್ಮಘ್ನ ನ ಮೇ ಜೀವನ್ ವಿಮೋಕ್ಷ್ಯಸೇ ॥೨೨॥

ಶತ್ರುಪಟ್ಟಣಗಳನ್ನು ಗೆಲ್ಲುವ ಅಶ್ವತ್ಥಾಮನು ಕ್ರುದ್ಧನಾಗಿ ನುಡಿದ, ''ನಿಲ್ಲು ನಿಲ್ಲು ಬ್ರಹ್ಮಹತ್ಯೆ ಮಾಡುವವನೆ, ಜೀವಂತನಾಗಿ ನೀನು ನನ್ನಿಂದ ಮುಕ್ತನಾಗಲಾರೆ'.

ಇತ್ಯುಕ್ತ್ವಾ ಸುಭೃಶಂ ವೀರಃ ಶೀಘ್ರಕೃನ್ನಿಶಿತೈಃ ಶರೈಃ ।
ಪಾರ್ಷತಂ ಛಾದಯಾಮಾಸ ಘೋರರೂಪೈಃ ಸುತೇಜನೈಃ ॥೨೩॥
ಯತಮಾನಂ ಪರಂ ಶಕ್ತ್ಯಾ ಯತಮಾನೋ ಮಹಾರಥಃ ॥೨೪॥

ಶೀಘ್ರಕಾರಿಯಾದ ಯತ್ನಶೀಲನಾದ ಮಹಾರಥನಾದ ವೀರ ಅಶ್ವತ್ಥಾಮನು ಹೀಗೆ ಹೇಳಿ ಬಹಳ ಶಕ್ತಿಯಿಂದ ಯತ್ನಶೀಲನಾದ ಧೃಷ್ಟದ್ಯುಮ್ನನನ್ನು ಘೋರಸ್ವರೂಪದ ಬಲು ತೀಕ್ಷ್ಣವಾದ ಹರಿತವಾದ ಬಾಣಗಳಿಂದ ಆಚ್ಛಾದಿಸಿದ.

ಯಥಾ ಹಿ ಸಮರೇ ದ್ರೌಣಿಃ ಪಾರ್ಷತಂ ವೀಕ್ಷ್ಯ ಮಾರಿಷ ।
ತಥಾ ದ್ರೌಣಿಂ ರಣೇ ದೃಷ್ಟ್ವಾ ಪಾರ್ಷತಃ ಪರವೀರಹಾ ॥೨೫॥
ನಾತಿಹೃಷ್ಟಮನಾ ಭೂತ್ವಾ ಮನ್ಯತೇ ಮೃತ್ಯುಮಾತ್ಮನಃ ॥೨೬॥

ರಾಜನೆ, ರಣದಲ್ಲಿ ಧೃಷ್ಟದ್ಯುಮ್ನನನ್ನು ನೋಡಿದರೆ ಅಶ್ವತ್ಥಾಮನು ಮನಸಿನಲ್ಲಿ ಕುಗ್ಗಿಹೋಗಿ ಅವನನ್ನು ತನಗೆ ಮೃತ್ಯುವೆಂದು ಭಾವಿಸುತ್ತಾನೆ. ಹಾಗೇ ರಣದಲ್ಲಿ ಅಶ್ವತ್ಥಾಮನನ್ನು ನೋಡಿದರೂ ಮನದಲ್ಲಿ ಕುಗ್ಗಿ ಧೃಷ್ಟದ್ಯುಮ್ನ ಅವನನ್ನು ತನಗೆ ಮೃತ್ಯುವಾಗಲಿದ್ದಾನೆ ಎಂದುಕೊಳ್ಳುತ್ತಾನೆ.

ಸ ಜ್ಞಾತ್ವಾ ಸಮರೇऽऽತ್ಮಾನಂ ಶಸ್ತ್ರೇಣಾವಧ್ಯಮೇವ ತು ।
ಜವೇನಾಭಿಯಯೌ ದ್ರೌಣಿಂ ಕಾಲಃ ಕಾಲಮಿವ ಕ್ಷಯೇ ॥೨೭॥

ರಣದಲ್ಲಿ ತಾನು ಶಸ್ತ್ರದಿಂದ ಅವಧ್ಯನೆಂದು ತಿಳಿದು ಧೃಷ್ಟದ್ಯುಮ್ನನು, ಲಯಕಾಲದಲ್ಲಿ ಅಂತಕನನ್ನು ಅಂತಕನು ಆಕ್ರಮಿಸುವಂತೆ, ಅಶ್ವತ್ಥಾಮನನ್ನು ವೇಗದಿಂದ ಆಕ್ರಮಿಸಿದ.

ದ್ರೌಣಿಸ್ತು ದೃಷ್ಟ್ವಾ ರಾಜೇಂದ್ರ ಧೃಷ್ಟದ್ಯುಮ್ನಂ ರಥೇ ಸ್ಥಿತಮ್ ।
ಕ್ರೋಧೇನ ನಿಃಶ್ವಸನ್ ವೀರಃ ಪಾರ್ಷತಂ ಸಮುಪಾದ್ರವತ್ ॥೨೮॥
ತಾವನ್ಯೋನ್ಯಂ ತು ದೃಷ್ಟ್ವೈವ ಸಂರಂಭಂ ಜಗ್ಮತುಃ ಪರಮ್ ॥೨೯॥

ರಾಜನೆ, ವೀರನಾದ ಅಶ್ವತ್ಥಾಮನು ರಥದಲ್ಲಿ ಧೃಷ್ಟದ್ಯುಮ್ನನನ್ನು ಕಂಡು ಕ್ರೋಧದಿಂದ ಭುಸುಗುಟ್ಟುತ್ತ ಅವನ ಕಡೆಗೆ ನುಗ್ಗಿದ. ಅವರಿಬ್ಬರೂ ಪರಸ್ಪರ ನೋಡಿದ ಮಾತ್ರಕ್ಕೆ ಮಹಾಕೋಪ ಪರವಶರಾದರು.

ಅಥಾಬ್ರವೀನ್ಮಹಾರಾಜ ದ್ರೌಣಿಪುತ್ರಃ ಪ್ರತಾಪವಾನ್ ।
ಧೃಷ್ಟದ್ಯುಮ್ನಂ ಸಮೀಪಸ್ಥಂ ತ್ವರಮಾಣೋ ವಿಶಾಂಪತೇ ॥೩೦॥
ಪಾಂಚಾಲಾಪಸದಾದ್ಯ ತ್ವಾಂ ಪ್ರೇಷಯಿಷ್ಯಾಮಿ ಮೃತ್ಯವೇ ॥೩೧॥

ಮಹಾರಾಜ, ವೇಗದಿಂದ ನುಗ್ಗುವ ಪ್ರತಾಪಶಾಲಿಯಾದ ಅಶ್ವತ್ಥಾಮನು ಸಮೀಪಕ್ಕೆ ಬಂದಿದ್ದ ಧೃಷ್ಟದ್ಯುಮ್ನನನ್ನು ಕುರಿತು ನುಡಿದ, 'ದುಷ್ಟಪಾಂಚಾಲನೆ, ಈಗ ನಾನು ನಿನ್ನನ್ನು ಮೃತ್ಯುವಿನ ಬಳಿಗೆ ಕಳಿಸುವೆನು' ಎಂದು.

ಪಾಪಂ ಹಿ ಯತ್ತ್ವಯಾ ಕರ್ಮ ಘ್ನತಾ ದ್ರೌಣಿಂ ಪುರಾ ಕೃತಮ್ ।
ಅದ್ಯ ತ್ವಾ ಪತ್ಸ್ಯತೇ ತದ್ವೈ ಯಥಾ ಹ್ಯಕುಶಲಂ ತಥಾ ॥೩೨॥

'ಹಿಂದೆ ದ್ರೋಣನನ್ನು ಕೊಂದು ನೀನು ಪಾಪಕರ್ಮ ಮಾಡಿರುವೆ. ಅದರಿಂದ

ಇಂದು ಅದು ಅಜ್ಜನ ಪಾಪಕರ್ಮ ತನ್ನನ್ನೆ ತಾಪಗೊಳಿಸುವಂತೆ ನಿನ್ನನ್ನು ತಾಪಗೊಳಿಸುತ್ತದೆ.

ಅರಕ್ಷ್ಯಮಾಣಃ ಪಾರ್ಥೇನ ಯದಿ ತಿಷ್ಠಸಿ ಸಂಯುಗೇ ।
ನಾಪಕ್ರಾಮಸಿ ವಾ ಮೂಢ ಸತ್ಯಮೇತದ್ ಬ್ರವೀಮಿ ತೇ ॥೩೩॥

ಪಾರ್ಥನ ರಕ್ಷಣೆ ಇಲ್ಲದೆ ಯುದ್ಧದಲ್ಲಿ ನೀನು ನಿಂತರೆ ಅಥವಾ ಯುದ್ಧದಿಂದ ನೀನು ಪಲಾಯನ ಮಾಡದಿದ್ದರೆ ಇದು ಸತ್ಯವಾಗುವುದೆಂದು ನಿನಗೆ ನಾನು ಹೇಳುತ್ತಿದ್ದೇನೆ.'

ಏವಮುಕ್ತಃ ಪ್ರತ್ಯುವಾಚ ಧೃಷ್ಟದ್ಯುಮ್ನಃ ಪ್ರತಾಪವಾನ್ ॥೩೪॥

ಅಶ್ವತ್ಥಾಮನು ಹೀಗೆ ನುಡಿದಾಗ ಪ್ರತಿಯಾಗಿ ಧೃಷ್ಟದ್ಯುಮ್ನ ನುಡಿದ.

ಧೃಷ್ಟದ್ಯುಮ್ನಃ

ಪ್ರತಿವಾಕ್ಯಂ ಸ ಏವಾಸಿರ್ಮಾಮಕೋ ದಾಸ್ಯತೇ ತವ ।
ಯೇನೈವ ತೇ ಪಿತುರ್ದತ್ತಂ ಯತಮಾನಸ್ಯ ಸಂಯುಗೇ ॥೩೫॥

ರಣದಲ್ಲಿ ಯತ್ನಶೀಲನಾದ ನಿನ್ನ ತಂದೆಗೆ ಉತ್ತರ ಕೊಟ್ಟಿರುವ ನನ್ನ ಈ ಖಡ್ಗವೇ ನಿನ್ನ ಮಾತಿಗೂ ಉತ್ತರ ನೀಡುತ್ತದೆ.

ಯದಿ ತಾವನ್ಮಯಾ ದ್ರೋಣೋ ನಿಹತೋ ಬ್ರಾಹ್ಮಣಬ್ರುವಃ ।
ತ್ವಾಮಿದಾನೀಂ ಕಥಂ ಯುದ್ಧೇ ನ ಹನಿಷ್ಯಾಮಿ ವಿಕ್ರಮಾತ್ ॥೩೬॥

ಹೆಸರಿಗೆ ಮಾತ್ರ ಬ್ರಾಹ್ಮಣನಾಗಿದ್ದ ದ್ರೋಣನನ್ನು ನಾನು ಕೊಂದಿದ್ದೇನೆ ಎಂದಮೇಲೆ ಈಗ ಪರಾಕ್ರಮದಿಂದ ನಾನು ನಿನ್ನನ್ನು ಹೇಗೆ ಕೊಲ್ಲದಿರುವೆ?

ಏವಮುಕ್ತ್ವಾ ಮಹಾರಾಜ ಸೇನಾಪತಿರಮರ್ಷಣಃ ।
ನಿಶಿತೇನಾಥ ಬಾಣೇನ ದ್ರೌಣಿಂ ವಿವ್ಯಾಧ ಪಾರ್ಷತಃ ॥೩೭॥

ಮಹಾರಾಜ, ಸೇನಾಪತಿ ಧೃಷ್ಟದ್ಯುಮ್ನನು ಹೀಗೆ ಹೇಳಿ ತೀಕ್ಷ್ಣವಾದ ಬಾಣದಿಂದ ಅಶ್ವತ್ಥಾಮನನ್ನು ಹೊಡೆದ.

ತತೋ ದ್ರೌಣಿಃ ಸುಸಂಕ್ರುದ್ಧಃ ಶರೈಃ ಸನ್ನತಪರ್ವಭಿಃ ।
ಪ್ರಾಚ್ಛಾದಯದ್ ದಿಶೋ ರಾಜನ್ ಧೃಷ್ಟದ್ಯುಮ್ನಸ್ಯ ಸಂಯುಗೇ ॥೩೮॥

ಆಗ ರಾಜನೆ, ಅಶ್ವತ್ಥಾಮನು ಕುಪಿತನಾಗಿ ಡೊಂಕುಗಿಣ್ಣಿನ ಬಾಣಗಳಿಂದ ರಣದಲ್ಲಿ ಧೃಷ್ಟದ್ಯುಮ್ನನ ಎಲ್ಲ ದಿಕ್ಕುಗಳನ್ನೂ ಆಚ್ಛಾದಿಸಿದ.

ನೈವಾಂತರಿಕ್ಷಂ ನ ದಿಶೋ ನೈವ ಯೋಧಾಃ ಸಮಂತತಃ ।
ದೃಶ್ಯಂತೇ ವೈ ಮಹಾರಾಜ ಶರೈಶ್ಛನ್ನಾಃ ಸಹಸ್ರಶಃ ॥೩೯॥

ಮಹಾರಾಜ, ಬಾಣಗಳಿಂದ ಎಲ್ಲೆಡೆ ಮುಚ್ಚಿ ಹೋದುದರಿಂದ ಅಂತರಿಕ್ಷ ಕಾಣಲಿಲ್ಲ. ದಿಕ್ಕುಗಳು ಕಾಣಲಿಲ್ಲ. ಸಾವಿರಾರು ಯೋಧರೂ ಬಾಣಗಳಿಂದ ಮುಚ್ಚಿ ಹೋದುದರಿಂದ ಕಾಣಲಿಲ್ಲ.

ತಥೈವ ಪಾರ್ಷತೋ ರಾಜನ್ ದ್ರೌಣಿಮಾಹವಶೋಭಿನಮ್ ।
ಶರೈಃ ಸಂಛಾದಯಮಾಸ ಸೂತಪುತ್ರಸ್ಯ ಪಶ್ಯತಃ ॥೪೦॥

ರಾಜನೆ, ಧೃಷ್ಟದ್ಯುಮ್ನನೂ ಹಾಗೇ, ಕರ್ಣನು ನೋಡುತ್ತಿದ್ದಂತೆಯೇ ಯುದ್ಧದಲ್ಲಿ ಶೋಭಿಸುವ ಅಶ್ವತ್ಥಾಮನನ್ನು ಬಾಣಗಳಿಂದ ಮುಚ್ಚಿದ.

ರಾಧೇಯೋಽಪಿ ಮಹಾರಾಜ ಪಾಂಚಾಲಾನ್ ಸಹ ಪಾಂಡವೈಃ ।
ದ್ರೌಪದೇಯಾನ್ ಯುಧಾಮನ್ಯುಂ ಸಾತ್ಯಕಿಂ ಚ
ಮಹಾರಥಮ್ ॥೪೧॥
ಏಕಃ ಸ ವಾರಯಾಮಾಸ ಪ್ರೇಕ್ಷಣೀಯಃ ಸಮಂತತಃ ॥೪೨॥

ಮಹಾರಾಜ, ಕರ್ಣನೂ ಕೂಡ ಏಕಾಕಿಯಾಗಿ, ಪಾಂಚಾಲರನ್ನು ಪಾಂಡವರನ್ನು ದ್ರೌಪದೀಪುತ್ರರನ್ನು ಯುಧಾಮನ್ಯುವನ್ನು ಮತ್ತು ಮಹಾರಥನಾದ ಸಾತ್ಯಕಿಯನ್ನು ಇದಿರಿಸಿದ. ಎಲ್ಲ ಕಡೆಗಳಿಂದಲೂ ಪ್ರೇಕ್ಷಣೀಯನಾದ.

ದೃಷ್ಟದ್ಯುಮ್ನೋಽಪಿ ಸಮರೇ ದ್ರೌಣೇಶ್ಚಿಚ್ಛೇದ ಕಾರ್ಮುಕಮ್ ।
ತದಪಾಸ್ಯ ಧನುರ್ದ್ರೌಣಿರನ್ಯದಾದತ್ತ ಕಾರ್ಮುಕಮ್ ॥೪೩॥
ವೇಗವತ್ ಸಮರೇ ಘೋರಂ ಶರಾಂಶ್ಚಾಶೀವಿಷೋಪಮಾನ್ ॥೪೪॥

ಧೃಷ್ಟದ್ಯುಮ್ನನು ರಣದಲ್ಲಿ ಅಶ್ವತ್ಥಾಮನ ಬಿಲ್ಲನ್ನು ಕಡಿದ. ಆ ಬಿಲ್ಲನ್ನೆಸೆದು ಅಶ್ವತ್ಥಾಮನು ರಣದಲ್ಲಿ ವೇಗವುಳ್ಳ ಘೋರವಾದ ಇನ್ನೊಂದು ಬಿಲ್ಲನ್ನೂ ಹಾವಿನಂತಿರುವ ಬಾಣಗಳನ್ನೂ ಎತ್ತಿಕೊಂಡ.

ಸ ಪಾರ್ಷತಸ್ಯ ರಾಜೇಂದ್ರ ಧನುಃ ಶಕ್ತಿಂ ಗದಾಂ ಧ್ವಜಮ್ ।
ಹಯಾನ್ ಸೂತಂ ರಥಂ ಚೈವ ನಿಮೇಷಾದ್ ವ್ಯಧಮಚ್ಛರೈಃ ॥೪೫॥

ಮಹಾರಾಜ, ಅಶ್ವತ್ಥಾಮನು ಧೃಷ್ಟದ್ಯುಮ್ನನ ಧನು ಶಕ್ತಿ ಗದೆ ಧ್ವಜ ಕುದುರೆಗಳು ಸಾರಥಿ ರಥವೆಲ್ಲವನ್ನೂ ನಿಮಿಷದಲ್ಲಿ ಬಾಣಗಳಿಂದ ನಾಶಪಡಿಸಿದ.

ಸ ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಖಡ್ಗಮಾದತ್ತ ವಿಪುಲಂ ಶತಚಂದ್ರಂ ಚ ಭಾನುಮತ್ ॥೪೬॥

ಧೃಷ್ಟದ್ಯುಮ್ನನ ಧನುಸ್ಸು ಕಡಿದಿದೆ. ರಥ ಮುರಿದಿದೆ. ಕುದುರೆಗಳು ಸತ್ತಿವೆ. ಸಾರಥಿ ಮಡಿದಿದ್ದಾನೆ. ಹೀಗಾಗಿ ಅವನು ಹೊಳೆವ ಖಡ್ಗವನ್ನೆತ್ತಿಕೊಂಡ, ದೊಡ್ಡ ಶತಚಂದ್ರ ಗುರಾಣಿಯನ್ನು ಹಿಡಿದ.

ದ್ರೌಣಿಸ್ತದಪಿ ರಾಜೇಂದ್ರ ಭಲ್ಲೈಃ ಕ್ಷಿಪ್ರಂ ಮಹಾರಥಃ ।
ಚಿಚ್ಛೇದ ಸಮರೇ ವೀರಃ ಕ್ಷಿಪ್ರಹಸ್ತೋ ದೃಢಾಯುಧಃ ॥೪೭॥
ರಥಾದನವರೂಢಸ್ಯ ತದದ್ಭುತಮಿವಾಭವತ್ ॥೪೮॥

ಅಶ್ವತ್ಥಾಮನು ರಣದಲ್ಲಿ ವೀರ, ವೇಗದ ಹಸ್ತ ಮತ್ತು ದೃಢವಾದ ಆಯುಧ ಉಳ್ಳವನು, ಮಹಾರಥ. ಅವನು, ಮಹಾರಾಜ! ಧೃಷ್ಟದ್ಯುಮ್ನನು ಇನ್ನೂ ರಥದಿಂದ ಕೆಳಗಿಳಿಯುವ ಮೊದಲೇ ಭಲ್ಲೆಗಳಿಂದ ಬೇಗನೆ ಖಡ್ಗವನ್ನೂ ಗುರಾಣಿಯನ್ನೂ ಕತ್ತರಿಸಿದ. ಅದು ಅದ್ಭುತವಾಗಿತ್ತು.

ಧೃಷ್ಟದ್ಯುಮ್ನಂ ತು ವಿರಥಂ ಹತಾಶ್ವಂ ಛಿನ್ನಕಾರ್ಮುಕಮ್ ।
ಶರೈಶ್ಚ ಬಹುಧಾ ವಿದ್ಧಂ ಮರ್ಮಸ್ವೇವ ಸುತಾಡಿತಮ್ ॥೪೯॥
ನಾತರದ್ ಭರತಶ್ರೇಷ್ಠ ಯತಮಾನೋ ಮಹಾರಥಃ ॥೫೦॥

ಅಶ್ವತ್ಥಾಮನು ಧೃಷ್ಟದ್ಯುಮ್ನನನ್ನು ವಿರಥನನ್ನಾಗಿ ಮಾಡಿದ. ಅಶ್ವಗಳನ್ನು

ಕೊಂದ. ಬಿಲ್ಲನ್ನು ಕಡಿದ. ಬಾಣಗಳಿಂದ ಬಹಳವಾಗಿ ಹೊಡೆದ. ಮರ್ಮಸ್ಥಾನಗಳಲ್ಲಿ ತಿವಿದ. ಆದರೂ, ಮಹಾರಾಜ, ಮಹಾರಥನಾದ ಅಶ್ವತ್ಥಾಮ ಎಷ್ಟು ಯತ್ನಿಸಿದರೂ ದೃಷ್ಟದ್ಯುಮ್ನನನ್ನು ಕೊಲ್ಲಲು ಶಕ್ತನಾಗಲಿಲ್ಲ.

ತಸ್ಯಾಂತಮಿಷುಭೀ ರಾಜನ್ ಯದಾ ದ್ರೌಣಿರ್ನ ಜಗ್ಮಿವಾನ್ ।
ಅಥ ತ್ಯಕ್ತ್ವಾ ಧನುರ್ವೀರಃ ಪಾರ್ಷತಂ ತ್ವರಿತೋಽಭ್ಯಗಾತ್ ॥೫೧॥

ರಾಜನೆ, ವೀರ ಅಶ್ವತ್ಥಾಮನು ಬಾಣಗಳಿಂದ ಧೃಷ್ಟದ್ಯುಮ್ನನ ವಧೆಯನ್ನು ಮಾಡಲು ಶಕ್ತನಾಗದಿದ್ದಾಗ ಧನುಸ್ಸನ್ನು ಬಿಟ್ಟು ವೇಗವಾಗಿ ಅವನ ಕಡೆಗೆ ನುಗ್ಗಿದ.

ಆಸೀದಾದ್ರವತೋ ರಾಜನ್ ವೇಗಸ್ತಸ್ಯ ಮಹಾತ್ಮನಃ ।
ಗರುಡಸ್ಯೇವ ಪತತೋ ಜಿಘೃಕ್ಷೋಃ ಪನ್ನಗೋತ್ತಮಮ್ ॥೫೨॥

ರಾಜನೆ, ಮಹಾತ್ಮನಾದ ಅಶ್ವತ್ಥಾಮನು ನುಗ್ಗುವಾಗ ಅವನ ವೇಗವು ದೊಡ್ಡ ಹಾವನ್ನು ಹಿಡಿಯಲು ಹಾರಿ ಬರುವ ಗರುಡನ ವೇಗದಂತಿತ್ತು.

ಏತಸ್ಮಿನ್ನೇವ ಕಾಲೇ ತು ಮಾಧವೋಽರ್ಜುನಮಬ್ರವೀತ್ ।
ಪಶ್ಯ ಪಾರ್ಥ ಯಥಾ ದ್ರೌಣಿಃ ಪಾರ್ಷತಸ್ಯ ವಧಂ ಪ್ರತಿ ॥೫೩॥
ಯತ್ನಂ ಕರೋತಿ ವಿಪುಲಂ ಹನ್ಯಾಚ್ಚೈನಮಸಂಶಯಮ್ ॥೫೪॥

ಇದೇ ಸಮಯದಲ್ಲಿ ಕೃಷ್ಣ ಅರ್ಜುನನಿಗೆ ನುಡಿದ— ನೋಡು, ಅರ್ಜುನ, ಅಶ್ವತ್ಥಾಮನು ಧೃಷ್ಟದ್ಯುಮ್ನನ ವಧೆಗೆ ಹೇಗೆ ಯತ್ನ ಮಾಡುತ್ತಿದ್ದಾನೆ! ಅವನು ಕೊಲ್ಲುವನು, ಸಂಶಯವಿಲ್ಲ.

ತಂ ಮೋಚಯ ಮಹಾಬಾಹೋ ಪಾರ್ಷತಂ ಶತ್ರುತಾಪನಮ್ ।
ದ್ರೌಣೇರಾಸ್ಯಮನುಪ್ರಾಪ್ತಂ ಮೃತ್ಯೋರಾಸ್ಯಗತಂ ಯಥಾ ॥೫೫॥

ಮಹಾಬಾಹುವೆ, ಶತ್ರುತಾಪಕನಾದ ಧೃಷ್ಟದ್ಯುಮ್ನ ಮೃತ್ಯುವಿನ ದವಡೆಗೆ ಸಿಲುಕಿದಂತೆ ಅಶ್ವತ್ಥಾಮನ ದವಡೆಗೆ ಸಿಕ್ಕಿದ್ದಾನೆ. ಅವನನ್ನು ಬಿಡಿಸು.

ಏವಮುಕ್ತ್ವಾ ಮಹಾರಾಜ ವಾಸುದೇವಃ ಪ್ರತಾಪವಾನ್ ।
ಪ್ರೈಷಯತ್ತತ್ರ ತುರಗಾನ್ ಯತ್ರ ದ್ರೌಣಿರ್ವ್ಯವಸ್ಥಿತಃ ॥೫೬॥

ಮಹಾರಾಜ, ಪ್ರತಾಪಶಾಲಿಯಾದ ಕೃಷ್ಣನು ಹೀಗೆ ಹೇಳಿ ಅಶ್ವತ್ಥಾಮನು ಇರುವಲ್ಲಿಗೆ ಕುದುರೆಗಳನ್ನು ನಡೆಸಿದ.

ತೇ ಹಯಾಶ್ಚಂದ್ರಸಂಕಾಶಾಃ ಕೇಶವೇನ ಪ್ರಚೋದಿತಾಃ ।
ಪಿಬಂತ ಇವ ಚಾಕಾಶಂ ಜಗ್ಮುರ್ದ್ರೌಣೇರಥಂ ಪ್ರತಿ ॥೫೭॥

ಚಂದ್ರನಂತೆ ಹೊಳೆಯುವ ಆ ಕುದುರೆಗಳನ್ನು ಕೃಷ್ಣನು ಪ್ರಚೋದಿಸಿದಾಗ ಅವು ಆಕಾಶವನ್ನು ಕುಡಿಯುವಂತೆ ತಲೆಯೆತ್ತಿ ಅಶ್ವತ್ಥಾಮನ ರಥದ ಕಡೆಗೆ ಧಾವಿಸಿದುವು.

ದೃಷ್ಟ್ವಾSSಯಾಂತೌ ಮಹಾವೀರ್ಯಾವುಭೌ ಕೃಷ್ಣಧನಂಜಯೌ ।
ಧೃಷ್ಟದ್ಯುಮ್ನವಧೇ ರಾಜಂಶ್ಚಕ್ರೇ ಯತ್ನಂ ಮಹಾಬಲಃ ॥೫೮॥

ರಾಜನೆ, ಮಹಾವೀರ್ಯಶಾಲಿಗಳಾದ ಕೃಷ್ಣಾರ್ಜುನರು ಬರುತ್ತಿರುವುದನ್ನು ಕಂಡು ಮಹಾಬಲ ಅಶ್ವತ್ಥಾಮನು ಧೃಷ್ಟದ್ಯುಮ್ನನ ವಧೆಗೆ ಯತ್ನ ಮಾಡಿದ.

ವಿಕೃಷ್ಯಮಾಣಂ ದೃಷ್ಟ್ವೈವ ಧೃಷ್ಟದ್ಯುಮ್ನಂ ಜನೇಶ್ವರ ।
ಶರಾಂಶ್ಚಿಕ್ಷೇಪ ವೈ ಪಾರ್ಥೋ ದ್ರೌಣಿಂ ಪ್ರತಿ ಮಹಾಬಲಃ ॥೫೯॥

ರಾಜನೆ, ಅಶ್ವತ್ಥಾಮನು ಧೃಷ್ಟದ್ಯುಮ್ನನನ್ನು ಸೆಳೆಯುತ್ತಿದ್ದುದನ್ನು ನೋಡಿ ಮಹಾಬಲಿ ಅರ್ಜುನನು ಅವನ ಮೇಲೆ ಬಾಣಗಳನ್ನು ಎಸೆದ.

ತೇ ಶರಾ ಹೇಮವಿಕೃತಾ ಗಾಂಡೀವಪ್ರೇಷಿತಾ ಭೃಶಮ್ ।
ದ್ರೌಣಿಮಾಸಾದ್ಯ ವಿವಿಶುರ್ವಲ್ಮೀಕಮಿವ ಪನ್ನಗಾಃ ॥೬೦॥

ಬಂಗಾರದಿಂದ ಮಾಡಿದ ಆ ಬಾಣಗಳು ಚೆನ್ನಾಗಿ ಗಾಂಡೀವದಿಂದ ಮುಕ್ತವಾಗಿ ಅಶ್ವತ್ಥಾಮನನ್ನು ಸೇರಿ, ಹಾವುಗಳು ಹುತ್ತವನ್ನು ಪ್ರವೇಶಿಸುವಂತೆ ಅವನ ಮೈಯೊಳಗೆ ಹೊಕ್ಕವು.

ಸ ವಿದ್ಧಸ್ತೈಃ ಶರೈರ್ಘೋರೈರ್ದ್ರೌಣಿಪುತ್ರಃ ಪ್ರತಾಪವಾನ್ ॥೬೧॥
ಉತ್ಸೃಜ್ಯ ಸಮರೇ ರಾಜನ್ ಪಾಂಚಾಲ್ಯಮಮಿತೌಜಸಮ್ ॥೬೨॥

ರಥಮಾರುರುಹೇ ವೀರೋ ಧನಂಜಯಶರಾರ್ದಿತಃ ।
ಪ್ರಗೃಹ್ಯ ಚ ಧನುಃ ಶ್ರೇಷ್ಠಂ ಪಾರ್ಥಂ ವಿವ್ಯಾಧ ಸಾಯಕೈಃ ॥೬೩॥

ಪ್ರತಾಪಶಾಲಿ ಅಶ್ವತ್ಥಾಮನು ಅರ್ಜುನನ ಬಾಣಗಳಿಂದ ಹೊಡೆಸಿಕೊಂಡು, ರಣದಲ್ಲಿ ಅಮಿತ ಪರಾಕ್ರಮಿಯಾದ ಧೃಷ್ಟದ್ಯುಮ್ನನನ್ನು ಬಿಟ್ಟು ರಥವನ್ನೇರಿದ. ಅರ್ಜುನನ ಬಾಣಗಳಿಂದ ಪೀಡಿತನಾದ ವೀರನಾದ ಅವನು ಶ್ರೇಷ್ಠವಾದ ಧನುಸ್ಸನ್ನು ಎತ್ತಿಕೊಂಡು ಅರ್ಜುನನನ್ನು ಬಾಣಗಳಿಂದ ಹೊಡೆಯಲು ತೊಡಗಿದ.

ಏತಸ್ಮಿನ್ನಂತರೇ ವೀರಃ ಸಹದೇವೋ ಜನಾಧಿಪ ।
ಅಪೋವಾಹ ರಥೇನಾಜೌ ಪಾರ್ಷತಂ ಶತ್ರುತಾಪನಮ್ ॥೬೪॥

ರಾಜನೆ, ಆ ಸಮಯದಲ್ಲಿ ವೀರನಾದ ಸಹದೇವನು ರಣದಲ್ಲಿ ಶತ್ರುತಾಪಕನಾದ ಧೃಷ್ಟದ್ಯುಮ್ನನನ್ನು ರಥದಿಂದ ದೂರಕ್ಕೆ ಒಯ್ದ.

ಅರ್ಜುನೋಽಪಿ ಮಹಾರಾಜ ದ್ರೌಣಿಂ ವಿವ್ಯಾಧ ಪತ್ರಿಭಿಃ ।
ತಂ ದ್ರೋಣಪುತ್ರಃ ಸಂಕ್ರುದ್ಧೋ ಬಾಹ್ವೋರುರಸಿ ಚಾರ್ದಯತ್ ॥೬೫॥

ಮಹಾರಾಜ, ಅರ್ಜುನನು ಅಶ್ವತ್ಥಾಮನನ್ನು ಬಾಣಗಳಿಂದ ಹೊಡೆದ. ಅವನನ್ನು ಅಶ್ವತ್ಥಾಮನು ಕುಪಿತನಾಗಿ ತೋಳುಗಳಲ್ಲಿಯೂ ಎದೆಯಲ್ಲಿಯೂ ಹೊಡೆದ.

ಕ್ರೋಧಿತಸ್ತು ರಣೇ ಪಾರ್ಥೋ ನಾರಾಚಂ ಕಾಲಸಮ್ಮಿತಮ್ ।
ದ್ರೋಣಪುತ್ರಾಯ ಚಿಕ್ಷೇಪ ಕಾಲದಂಡಮಿವಾಪರಮ್ ॥೬೬॥
ಸ ಬ್ರಾಹ್ಮಣಸ್ಯಾಂಸದೇಶೇ ನಿಪಪಾತ ಮಹಾದ್ಯುತಿಃ ॥೬೭॥

ರಣದಲ್ಲಿ ಕೋಪಗೊಳಿಸಲ್ಪಟ್ಟ ಅರ್ಜುನನು ಮೃತ್ಯುವಿನಂತಿದ್ದ ಇನ್ನೊಂದು ಯಮದಂಡದಂಥ ಬಾಣವನ್ನು ಅಶ್ವತ್ಥಾಮನ ಮೇಲೆ ಎಸೆದ. ಮಹಾಪ್ರಕಾಶವುಳ್ಳ ಅದು ಅವನ ಹೆಗಲಿನಲ್ಲಿ ಬಿದ್ದಿತು.

ಸ ವಿಹ್ವಲೋ ಮಹಾರಾಜ ಶರವೇಗೇನ ಸಂಯುಗೇ ।
ನಿಷಸಾದ ರಥೋಪಸ್ಥೇ ವೈಕ್ಲವ್ಯಂ ಚ ಪರಂ ಯಯೌ ॥೬೮॥

ಅಶ್ವತ್ಥಾಮನು ರಣದಲ್ಲಿ ಬಾಣವೇಗದಿಂದ ವಿಹ್ವಲಗೊಂಡು ರಥದೊಳಗಿನ ಹಿಂಬಾಗದಲ್ಲಿ ಕುಳಿತುಕೊಂಡು ಬಹಳ ವೇದನೆಯನ್ನು ಹೊಂದಿದ.

ತತಃ ಕರ್ಣೋ ಮಹಾರಾಜ ವ್ಯಾಕ್ಷಿಪದ್ ವಿಜಯಂ ಧನುಃ ।
ಅರ್ಜುನಂ ಸಮರೇ ಕ್ರುದ್ಧಃ ಪ್ರೇಕ್ಷಮಾಣೋ ಮುಹುರ್ಮುಹುಃ ॥೬೯॥
ದ್ವೈರಥಂ ಚಾಪಿ ಪಾರ್ಥೇನ ಕಾಮಯಾನೋ ಮಹಾರಣೇ ॥೭೦॥

ಮಹಾರಾಜ, ಆಗ ಕರ್ಣನು ರಣದಲ್ಲಿ ಕ್ರುದ್ಧನಾಗಿ ಮಹಾರಣದಲ್ಲಿ ಅರ್ಜುನನೊಂದಿಗೆ ದ್ವೈರಥಯುದ್ಧ ಮಾಡಲು ಬಯಸಿ ಅವನನ್ನು ಪುನಃ ಪುನಃ ನೋಡುತ್ತ ತನ್ನ ವಿಜಯಧನುಸ್ಸನ್ನು ಠೇಂಕರಿಸಿದ.

ವಿಹ್ವಲಂ ತಂ ತು ವೀಕ್ಷ್ಯಾಥ ದ್ರೋಣಪುತ್ರಂ ಚ ಸಾರಥಿಃ ।
ಅಪೋವಾಹ ರಥೇನಾಜೌ ತ್ವರಮಾಣೋ ರಣಾಜಿರಾತ್ ॥೭೧॥

ಅಶ್ವತ್ಥಾಮನು ರಣದಲ್ಲಿ ವಿಹ್ವಲಗೊಂಡಿದ್ದನ್ನು ನೋಡಿ ಸಾರಥಿಯು ಅವನನ್ನು ರಥದಿಂದ ಬೇಗನೆ ರಣರಂಗದಿಂದಾಚೆಗೆ ಒಯ್ದ.

ಅಥೋತ್ಕ್ರುಷ್ಟಂ ಮಹಾರಾಜ ಪಾಂಚಾಲೈರ್ಜಿತಕಾಶಿಭಿಃ ।
ಮೋಕ್ಷಿತಂ ಪಾರ್ಷತಂ ದೃಷ್ಟ್ವಾ ದ್ರೋಣಪುತ್ರಂ ಚ ಪೀಡಿತಮ್ ॥೭೨॥

ಮಹಾರಾಜ, ಜಯದಿಂದ ಶೋಭಿಸುವ ಪಾಂಚಾಲರು ಧೃಷ್ಟದ್ಯುಮ್ನನು ಅಶ್ವತ್ಥಾಮನಿಂದ ಬಿಡುಗಡೆ ಹೊಂದಿದ್ದನ್ನೂ ಅಶ್ವತ್ಥಾಮ ಪೀಡಿತನಾದುದನ್ನೂ ಕಂಡು ದೊಡ್ಡ ಗರ್ಜನೆ ಮಾಡಿದರು.

ವಾದಿತ್ರಾಣಿ ಚ ದಿವ್ಯಾನಿ ಪ್ರಾವಾದ್ಯಂತ ಸಹಸ್ರಶಃ ।
ಸಿಂಹನಾದಶ್ಚ ಸಂಜಜ್ಞೇ ದೃಷ್ಟ್ವಾ ಘೋರಂ ಮಹಾದ್ಭುತಮ್ ॥೭೩॥

ಪಾಂಚಾಲರು ಸಾವಿರಾರು ದಿವ್ಯವಾದ್ಯಗಳನ್ನು ಮೊಳಗಿಸಿದರು. ಮಹಾದ್ಭುತವಾದ ಭಯಂಕರ ಯುದ್ಧವನ್ನು ಕಂಡು ಸಿಂಹನಾದ ಮಾಡಿದರು.

ಏವಂ ಕೃತ್ವಾಬ್ರವೀತ್ ಪಾರ್ಥೋ ವಾಸುದೇವಂ ಧನಂಜಯಃ ।
ಯಾಹಿ ಸಂಶಪ್ತಕಾನ್ ಕೃಷ್ಣ ಕಾರ್ಯಮೇತತ್ತ್ವರಂ ಮಮ ॥೭೪॥

ಅರ್ಜುನನು ಹೀಗೆ ಅಶ್ವತ್ಥಾಮನ ನಿಗ್ರಹವನ್ನು ಮಾಡಿ ಕೃಷ್ಣನಿಗೆ ಹೇಳಿದ 'ಕೃಷ್ಣ ಸಂಶಪ್ತಕರ ಬಳಿಗೆ ಹೋಗು. ಇದು ನನಗೆ ಮುಖ್ಯವಾದ ಕಾರ್ಯ' ಎಂದು.

ತತಃ ಪ್ರಯಾತೋ ದಾಶಾರ್ಹಃ ಶ್ರುತ್ವಾ ಪಾಂಡವಭಾಷಿತಮ್ ।
ರಥೇನಾತಿಪತಾಕೇನ ಮನೋಮಾರುತರಂಹಸಾ ॥೭೫॥

ಆಗ ಕೃಷ್ಣನು ಅರ್ಜುನನ ಮಾತನ್ನು ಕೇಳಿ ಬಹುಪತಾಕೆಗಳುಳ್ಳ ಮನೋವೇಗ ಹಾಗೂ ವಾಯುವೇಗಗಳುಳ್ಳ ರಥದಿಂದ ಹೊರಟ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಕರ್ಣಪರ್ವಣಿ ಧೃಷ್ಟದ್ಯುಮ್ನಪರಾಜಯೋ ನಾಮ ಷಟ್‌ಪಂಚಾಶೋಽಧ್ಯಾಯಃ ॥೫೬॥

❖

ಐವತ್ತೇಳನೆಯ ಅಧ್ಯಾಯ

ಯುಧಿಷ್ಠಿರನನ್ನು ಸೆರೆಹಿಡಿಯುವ ಯತ್ನ.
ಅದು ಭೀಮನಿಂದ ವಿಫಲವಾಗುತ್ತದೆ.

ಸಂಜಯಃ

ಏತಸ್ಮಿನ್ನಂತರೇ ಕೃಷ್ಣಃ ಪಾರ್ಥಂ ವಚನಮಬ್ರವೀತ್ ।
ದರ್ಶಯನ್ನಿವ ಕೌಂತೇಯಂ ಧರ್ಮರಾಜಂ ಯುಧಿಷ್ಠಿರಮ್ ॥೧॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ಈ ಸಮಯದಲ್ಲಿ ಕೃಷ್ಣನು ಅರ್ಜುನನಿಗೆ ಕುಂತೀಪುತ್ರ ಧರ್ಮರಾಜ ಯುಧಿಷ್ಠಿರನನ್ನು ತೋರಿಸುತ್ತ ನುಡಿದ.

ಏಷ ಪಾಂಡವ ತೇ ಭ್ರಾತಾ ಧಾರ್ತರಾಷ್ಟ್ರೈರ್ಮಹಾಬಲೈಃ ।
ಜಿಘಾಂಸುಭಿರ್ಮಹೇಷ್ವಾಸೈರ್ದ್ರುತಂ ಪಾರ್ಥಾನುಸಾರ್ಯತೇ ॥೨॥

'ಅರ್ಜುನ, ನಿನ್ನ ಸೋದರನನ್ನು ಮಹಾಬಲಿಗಳಾದ ಮಹಾಬಿಲ್ಲಾರರಾದ ವಧೇಚ್ಛುಗಳಾದ ಕೌರವರು ವೇಗವಾಗಿ ಬೆನ್ನಟ್ಟುತ್ತಿದ್ದಾರೆ.

ತಥಾನುಯಾಂತಿ ಸಂರಬ್ಧಾಃ ಪಾಂಚಾಲಾ ಯುದ್ಧದುರ್ಮದಾಃ ।
ಯುಧಿಷ್ಠಿರಂ ಮಹಾತ್ಮಾನಂ ಪರೀಪ್ಸಂತೋ ಮಹಾಜವಾಃ ॥೩॥

ಹಾಗೇ ಯುದ್ಧದಲ್ಲಿ ಮದಿಸುವ ಮಹಾವೇಗಶಾಲಿಗಳಾದ ಪಾಂಚಾಲರೂ ಕೂಡ ಕುಪಿತರಾಗಿ ಮಹಾತ್ಮ ಯುಧಿಷ್ಠಿರನನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಹಿಂದಿನಿಂದ ಬರುತ್ತಿದ್ದಾರೆ.

ಏಷ ದುರ್ಯೋಧನಃ ಪಾರ್ಥ ರಥಾನೀಕೇನ ದಂಸಿತಃ ।
ರಾಜಾ ಸರ್ವಸ್ಯ ಲೋಕಸ್ಯ ರಾಜಾನಮನುಧಾವತಿ ॥೪॥

ಅರ್ಜುನ, ಈ ರಾಜಾ ದುರ್ಯೋಧನನು ಸರ್ವಲೋಕದ ರಾಜನಾದ ಯುಧಿಷ್ಠಿರನನ್ನು ರಥಸೈನ್ಯಸನ್ನದ್ಧನಾಗಿ ಬೆನ್ನಟ್ಟುತ್ತಿದ್ದಾನೆ.

ಜಿಘಾಂಸುಃ ಪುರುಷವ್ಯಾಘ್ರಂ ಭ್ರಾತೃಭಿಃ ಸಹಿತೋ ಬಲೀ ।
ಆಶೀವಿಷಸಮಸ್ಪರ್ಶೈಃ ಸರ್ವಯುದ್ಧವಿಶಾರದೈಃ ॥೫॥

ದುರ್ಯೋಧನನು ವಿಷಸರ್ಪ ಸಮಾನ ಸ್ಪರ್ಶವುಳ್ಳ ಸರ್ವಯುದ್ಧ ವಿಶಾರದರಾದ ಸೋದರರಿಂದ ಸಹಿತನಾಗಿ ಬಲಿಷ್ಠನಾಗಿದ್ದು ಯುಧಿಷ್ಠಿರನನ್ನು ಸಂಹರಿಸುವ ಬಯಕೆ ಉಳ್ಳವನಾಗಿದ್ದಾನೆ.

ಏತೇ ಜಿಘೃಕ್ಷವೋ ಯಾಂತಿ ದ್ವಿಪಾಶ್ವರಥಪತ್ತಯಃ ।
ಯುಧಿಷ್ಠಿರಂ ಧಾರ್ತರಾಷ್ಟ್ರಾ ರತ್ನೋತ್ತಮಮಿವಾರ್ಥಿನಃ ॥೬॥

ಅರ್ಥಿಗಳು ಉತ್ತಮವಾದ ರತ್ನವನ್ನು ಪಡೆಯಲು ಬಯಸುವಂತೆ ದುರ್ಯೋಧನನ ಕಡೆಯ ಗಜ ಅಶ್ವ ರಥ ಪದಾತಿಗಳು ಯುಧಿಷ್ಠಿರನನ್ನು ಸೆರೆಹಿಡಿಯಲು ಬಯಸಿ ಹೋಗುತ್ತಿದ್ದಾರೆ.

ಪಶ್ಯ ಸಾತ್ವತಭೀಮಾಭ್ಯಾಂ ನಿರುದ್ಧಾಧಿಷ್ಠಿತಾಃ ಪುನಃ ।
ಜಿಹೀರ್ಷವೋऽಮೃತಂ ದೈತ್ಯಾಃ ಶಕ್ರಾಗ್ನಿಭ್ಯಾಮಿವಾವಶಾಃ ॥೭॥

ಅಮೃತವನ್ನು ಅಪಹರಿಸಲು ಬಯಸುವ ದೈತ್ಯರು ಇಂದ್ರಾಗ್ನಿಗಳಿಂದ ನಿರುದ್ಧರಾದರೂ ಕೂಡ ಅಮೃತದ ಮೇಲಿನ ಆಗ್ರಹವನ್ನು ಬಿಡುವುದಿಲ್ಲ. ಪುನಃ ಅದರಲ್ಲಿ ಅಧಿಷ್ಠಿತರೇ ಆಗಿರುತ್ತಾರೆ. ಹಾಗೇ ಕೌರವಸೈನಿಕರು ಯುಧಿಷ್ಠಿರನನ್ನು ಹಿಡಿಯಲು ಬಯಸಿ ಸಾತ್ಯಕಿ, ಭೀಮಸೇನರಿಂದ ನಿರುದ್ಧರಾದರೂ ಪರವಶತೆ ಯಿಂದ ಅವರು ಪುನಃ ಯುಧಿಷ್ಠಿರ ಗ್ರಹಣಕಾರ್ಯದಲ್ಲಿ ಅಧಿಷ್ಠಿತರೇ ಆಗ್ದಿದಾರೆ.

ಏತೇ ಬಹುತ್ವಾತ್ ತ್ವರಿತಾಃ ಪುನರ್ಗಚ್ಛಂತಿ ಪಾಂಡವಮ್ ।
ಸಮುದ್ರಮಿವ ವಾಯ್ವೋರ್ಘಾಃ ಪ್ರಾವೃಟ್‌ಕಾಲೇ ಮಹಾರಥಾಃ ॥೮॥

ಮಹಾರಥರಾದ ಇವರು ಬಹುಸಂಖ್ಯೆಯಲ್ಲಿರುವುದರಿಂದ ಬೇಗನೆ ಪುನಃ

ಯುಧಿಷ್ಠಿರನನ್ನು ನೀರಿನ ಪ್ರವಾಹಗಳು ಮಳೆಗಾಲದಲ್ಲಿ ಬಹುಸಂಖ್ಯೆಯಲ್ಲಿರುವುದರಿಂದ ಸಮುದ್ರವನ್ನು ಸೇರುವಂತೆ ಆಕ್ರಮಿಸುತ್ತಾರೆ.

ನದಂತಃ ಸಿಂಹನಾದಾಂಶ್ಚ ಧಮಂತಶ್ಚಾಪಿ ವಾರಿಜಾನ್ ।
ಬಲವಂತೋ ಮಹೇಷ್ವಾಸಾ ವಿಧೂನ್ವಂತೋ ಧನೂಂಷಿ ಚ ॥೯॥

ಸಿಂಹನಾದಗೈಯುತ್ತ ಶಂಖಗಳನ್ನು ಊದುತ್ತ ಧನುಸ್ಸುಗಳನ್ನು ಓಲಾಡಿಸುತ್ತ ಮಹಾಬಿಲ್ಲಾರರಾದ ಬಲಿಷ್ಠರಾದ ಕೌರವಸೈನಿಕರು ಬರುತ್ತಿದ್ದಾರೆ.

ಮೃತ್ಯೋರ್ಮುಖಗತಂ ಮನ್ಯೇ ಕುಂತೀಪುತ್ರಂ ಯುಧಿಷ್ಠಿರಮ್ ।
ಹುತಮಗ್ನೌ ಚ ಮನ್ಯೇಽಹಂ ದುರ್ಯೋಧನವಶಂ ಗತಮ್ ॥೧೦॥

ಕುಂತೀಪುತ್ರ ಯುಧಿಷ್ಠಿರನು ದುರ್ಯೋಧನನ ವಶನಾದರೆ ಮೃತ್ಯುವಿನ ದವಡೆಯನ್ನು ಸೇರಿದಂತೇ ಅಗ್ನಿಯಲ್ಲಿ ಆಹುತಿಯಾದಂತೆಯೇ ಎಂದು ಭಾವಿಸುತ್ತೇನೆ.

ಯಥಾಯುಕ್ತಮನೀಕಂ ಹಿ ಧಾರ್ತರಾಷ್ಟ್ರಸ್ಯ ಪಾಂಡವ ।
ನಾಸ್ಯ ಶಕ್ರೋಽಪಿ ಮುಚ್ಯೇತ ಸಂಪ್ರಾಪ್ತೋ ಬಾಣಗೋಚರಮ್ ॥೧೧॥

ಅರ್ಜುನ, ಕೌರವನ ಸೈನ್ಯ ಸರಿಯಾಗಿ ವ್ಯೂಹಗೊಂಡಿದೆ. ಅದರ ಬಾಣಗಳಿಗೆ ಗೋಚರನಾದರೆ ಇಂದ್ರನೂ ಬಿಡುಗಡೆ ಹೊಂದಲಾರ.

ದುರ್ಯೋಧನಸ್ಯ ಶೂರಸ್ಯ ದ್ರೌಣೇಃ ಶಾರದ್ವತಸ್ಯ ಚ ।
ಕರ್ಣಸ್ಯ ಚೇಷುವೇಗೋ ವೈ ಪರ್ವತಾನಪಿ ದಾರಯೇತ್ ॥೧೨॥

ಶೂರನಾದ ದುರ್ಯೋಧನನ, ಅಶ್ವತ್ಥಾಮನ, ಕೃಪನ ಮತ್ತು ಕರ್ಣನ ಬಾಣಗಳ ವೇಗವು ಬೆಟ್ಟಗಳನ್ನೇ ಸೀಳೀತು.

ದುರ್ಯೋಧನಸ್ಯ ಶೂರಸ್ಯ ಶರೌಘಾನ್ ಶೀಘ್ರಮಸ್ಯತಃ ।
ಸಂಕ್ರುದ್ಧಸ್ಯಾಂತಕಸ್ಯೇವ ಕೋ ವೇಗಂ ಸಂಸಹೇದ್ ರಣೇ ॥೧೩॥

ಶೂರ ದುರ್ಯೋಧನನು ಶೀಘ್ರವಾಗಿ ಬಾಣಸಮೂಹಗಳನ್ನು ಎಸೆಯುವವನು. ಕುಪಿತನಾದರೆ ಅಂತಕನಂತಾಗುವನು. ರಣದಲ್ಲಿ ಅವನ ಬಾಣವೇಗವನ್ನು ಯಾವು ಸಹಿಸಬಲ್ಲ?

ಕರ್ಣೇನ ಚ ಕೃತೋ ರಾಜಾ ವಿಮುಖಃ ಶತ್ರುತಾಪನಃ ।
ಬಲವಾಂಲ್ಲಘುಹಸ್ತಶ್ಚ ಕೃತೀ ಯುದ್ಧವಿಶಾರದಃ ॥೧೪॥

ರಾಧೇಯಃ ಪಾಂಡವಶ್ರೇಷ್ಠಂ ಶಕ್ತಃ ಪೀಡಯಿತುಂ ರಣೇ ।
ಸಹಿತೋ ಧೃತರಾಷ್ಟ್ರಸ್ಯ ಪುತ್ರೈಃ ಶೂರೋ ಮಹಾತ್ಮಭಿಃ ॥೧೫॥

ಶತ್ರುತಾಪಕನಾದ ರಾಜಾ ಯುಧಿಷ್ಠಿರನು ಕರ್ಣನಿಗೆ ಸೋತು ಪಲಾಯನ ಮಾಡುವಂತಾಯಿತು. ಆ ಕರ್ಣನು ಕೈಚಳಕ ಉಳ್ಳವನು, ಕುಶಲ, ಯುದ್ಧವಿಶಾರದ, ಶೂರ. ಮಹಾತ್ಮರಾದ ಧೃತರಾಷ್ಟ್ರಪುತ್ರರಿಂದ ಕೂಡಿ ಅವನು ರಣದಲ್ಲಿ ಯುಧಿಷ್ಠಿರನನ್ನು ಪೀಡಿಸಲು ಶಕ್ತನಾಗಿದ್ದಾನೆ.

ತಸ್ಯೈವಂ ಯುಧ್ಯಮಾನಸ್ಯ ಸಂಗ್ರಾಮೇ ಸಂಯತಾತ್ಮನಃ ।
ಅನ್ಯೈರಪಿ ಚ ಪಾರ್ಥಸ್ಯ ಹೃತಂ ವರ್ಮ ಮಹಾರಥೈಃ ॥೧೬॥

ಜಿತೇಂದ್ರಿಯನಾದ ಯುಧಿಷ್ಠಿರನು ಸಂಗ್ರಾಮದಲ್ಲಿ ಯುದ್ಧಮಾಡುವಾಗ ಅನ್ಯ ಮಹಾರಥರು ಕೂಡ ಅವನ ಕವಚವನ್ನು ಸೀಳಿದ್ದಾರೆ.

ಉಪವಾಸಕೃಶೋ ರಾಜಾ ಭೃಶಂ ಭರತಸತ್ತಮ ।
ಬ್ರಾಹ್ಮೇ ಬಲೇ ಸ್ಥಿತೋ ಹ್ಯೇಷ ನ ಕ್ಷತ್ರೇಽತಿಬಲೇ ವಿಭೋ ॥೧೭॥

ಅರ್ಜುನ, ರಾಜಾ ಯುಧಿಷ್ಠಿರನು ಉಪವಾಸವ್ರತಗಳಿಂದ ಕೃಶನಾಗಿದ್ದಾನೆ. ಬ್ರಾಹ್ಮಬಲದಲ್ಲಿಯೇ ಅವನಿಗೆ ನಿಷ್ಠೆ ಕ್ಷಾತ್ರಬಲದಲ್ಲಿ ಅಷ್ಟು ನಿಷ್ಠೆ ಇಲ್ಲ.

ಯತ್ರ ಯತ್ರ ಸ ಧರ್ಮಾತ್ಮಾ ದೃಷ್ಟ್ವಾ ದೃಷ್ಟಿಂ ವ್ಯಸರ್ಜಯತ್।
ತತ್ರ ತತ್ರ ವ್ಯಶೀರ್ಯಂತ ತಾವಕಾ ಭರತರ್ಷಭ (ಅ.59.ಶ್ಲೋ.27)

ಎಂದು ಮುಂದೆ ಹೇಳುವಂತೆ ಧರ್ಮರಾಜ ದೃಷ್ಟಿಯಿಂದಲೇ ಶತ್ರುನಾಶ ಮಾಡಬಲ್ಲ ಬ್ರಾಹ್ಮಬಲ ಉಳ್ಳವನು.

ನ ಜೀವತಿ ಮಹಾರಾಜೋ ಮನ್ಯೇ ಪಾರ್ಥ ಯುಧಿಷ್ಠಿರಃ ।
ಯದ್ ಭೀಮಸೇನಃ ಸಹತೇ ಸಿಂಹನಾದಮಮರ್ಷಣಃ ॥೧೮॥

ಅರ್ಜುನ, ಮಹಾರಾಜ ಯುಧಿಷ್ಠಿರನು ಇಂದು ಬದುಕಿ ಉಳಿಯಲಾರ ಎಂದೇ ಭಾವಿಸುತ್ತೇನೆ. ಏಕೆಂದರೆ ಸಹನೆ ಇಲ್ಲದ ಭೀಮಸೇನ, ಕೌರವರ ಸಿಂಹನಾದವನ್ನು ಸಹಿಸುತ್ತಿದ್ದಾನೆ.

ನರ್ದತಾಂ ಧಾರ್ತರಾಷ್ಟ್ರಾಣಾಂ ಪುನಃ ಪುನರರಿಂದಮ ।
ಧಮತಾಂ ಚ ಮಹಾಶಂಖಾನ್ ಸಂಗ್ರಾಮೇ ಜಿತಕಾಶಿನಾಮ್ ॥೧೯॥

ಅರ್ಜುನ, ಕೌರವರು ಪುನಃ ಪುನಃ ಗರ್ಜಿಸುತ್ತಿದ್ದಾರೆ. ಮಹಾಶಂಖಗಳನ್ನು ಮೊಳಗಿಸುತ್ತಿದ್ದಾರೆ. ಸಂಗ್ರಾಮದಲ್ಲಿ ಜಯದಿಂದ ಮೆರೆಯುತ್ತಿದ್ದಾರೆ. ಅವರ ಸಿಂಹನಾದವನ್ನು ಭೀಮಸೇನ ಸಹಿಸಿಕೊಳ್ಳುತ್ತಿದ್ದಾನೆ.

ಯುಧಿಷ್ಠಿರಂ ಪಾಂಡವೇಯಂ ಹತೇತಿ ಭರತರ್ಷಭ ।
ಸಂಚೋದಯತ್ಯಸೌ ಕರ್ಣೋ ಧಾರ್ತರಾಷ್ಟ್ರಾನ್ ಮಹಾಬಲಾನ್ ॥೨೦॥

ಅರ್ಜುನ, 'ಪಾಂಡುಪುತ್ರ ಯುಧಿಷ್ಠಿರನನ್ನು ವಧಿಸಿರಿ' ಎಂದು ಈ ಕರ್ಣನು ಮಹಾಬಲಿಗಳಾದ ಕೌರವರನ್ನು ಹುರಿದುಂಬಿಸುತ್ತಿದ್ದಾನೆ.

ಸ್ಥೂಣಾಕರ್ಣೇಂದ್ರಜಾಲೇನ ಪಾರ್ಥ ಪಾಶುಪತೇನ ಚ ।
ಪ್ರಚ್ಛಾದಯಂತೋ ರಾಜಾನಮನುಯಾಂತಿ ಮಹಾರಥಾಃ ॥೨೧॥

ಸ್ಥೂಣಾಕರ್ಣವೆಂಬ ಇಂದ್ರಜಾಲದಿಂದಲೂ ಪಾಶುಪತದಿಂದಲೂ ಯುಧಿಷ್ಠಿರನನ್ನು ಆಚ್ಛಾದಿಸುತ್ತ ಮಹಾರಥರು ಅವನನ್ನು ಬೆನ್ನಟ್ಟುತ್ತಿದ್ದಾರೆ.

ಆತುರೋ ಮೇ ಮತೋ ರಾಜಾ ಸನ್ನಿಷೇವ್ಯಶ್ಚ ಭಾರತ ॥೨೨॥

ಅರ್ಜುನ, ಯುಧಿಷ್ಠಿರನು ಈಗ ಕಷ್ಟದಲ್ಲಿದ್ದಾನೆ. ಅವನನ್ನು ನಾವು ರಕ್ಷಿಸಬೇಕಿದೆ ಎಂದು ನನಗೆ ಅನಿಸುತ್ತಿದೆ.

ಯಥೈನಮನುವರ್ತಂತೇ ಪಾಂಚಾಲಾಃ ಸಹ ಪಾಂಡವೈಃ ।
ತ್ವರಮಾಣಾಸ್ತ್ವರಾಕಾಲೇ ಸರ್ವಶಸ್ತ್ರಭೃತಾಂ ವರಾಃ ॥೨೩॥

ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ಪಾಂಚಾಲರೂ ಪಾಂಡವರೂ ತ್ವರೆ ಮಾಡಬೇಕಾದ ಈ ಕಾಲದಲ್ಲಿ ತ್ವರೆ ಮಾಡುತ್ತ ಯುಧಿಷ್ಠಿರನನ್ನು ಹಿಂಬಾಲಿಸಿ ಹೋಗುತ್ತಿದ್ದಾರೆ.

ಮಜ್ಜಂತಮಿವ ಪಾತಾಳೇ ಬಲಿನೋಽಪ್ಯುಜ್ಜಿಹೀರ್ಷವಃ ॥೨೪॥

ಪಾತಾಳದಲ್ಲಿ ಮುಳುಗುವವನನ್ನೂ ಎತ್ತಲು ಬಯಸುವವರು, ಬಲಿಷ್ಠರು ಈ ಪಾಂಚಾಲ ಪಾಂಡವಯೋಧರು.

ನ ಕೇತುರ್ದೃಶ್ಯತೇ ರಾಜ್ಞಃ ಕರ್ಣೇನ ನಿಹತಃ ಶರೈಃ ।
ಪಶ್ಯತೋರ್ಯಮಯೋಃ ಪಾರ್ಥ ಸಾತ್ಯಕೇಶ್ಚ ಶಿಖಂಡಿನಃ ॥೨೫॥

ಧೃಷ್ಟದ್ಯುಮ್ನಸ್ಯ ಭೀಮಸ್ಯ ಶತಾನೀಕಸ್ಯ ವಾ ವಿಭೋ ।
ಪಾಂಚಾಲಾನಾಂ ಚ ಸರ್ವೇಷಾಂ ಚೇದೀನಾಂ ಚೈವ ಭಾರತ ॥೨೬॥

ಯುಧಿಷ್ಠಿರನ ಧ್ವಜ ಕಾಣಿಸುತ್ತಿಲ್ಲ. ನಕುಲ-ಸಹದೇವರು ಸಾತ್ಯಕಿ ಶಿಖಂಡಿ ಧೃಷ್ಟದ್ಯುಮ್ನ ಭೀಮ ಶತಾನೀಕ ಮತ್ತು ಎಲ್ಲ ಪಾಂಚಾಲರು ಚೇದಿಗಳು ನೋಡುತ್ತಿರುವಂತೆಯೆ ಕರ್ಣನು ಯುಧಿಷ್ಠಿರನ ಧ್ವಜವನ್ನು ಕತ್ತರಿಸಿದ್ದಾನೆ.

ಏಷ ಕರ್ಣೋ ರಣೇ ಪಾರ್ಥ ಪಾಂಡವಾನಾಮನೀಕಿನೀಮ್ ।
ಶರೈರ್ವಿಧ್ವಂಸಯತಿ ವೈ ನಲಿನೀಮಿವ ಕುಂಜರಃ ॥೨೭॥

ಅರ್ಜುನ, ಈ ಕರ್ಣನು ಕೊಳವನ್ನು ಮದ್ದಾನೆ ಕದಡುವಂತೆ ಪಾಂಡವ ಸೇನೆಯನ್ನು ಬಾಣಗಳಿಂದ ನಾಶಮಾಡುತ್ತಿದ್ದಾನೆ.

ಏತೇ ದ್ರವಂತಿ ರಥಿನಸ್ತ್ವದೀಯಾಃ ಪಾಂಡುನಂದನ ।
ಪಶ್ಯ ಪಶ್ಯ ಯಥಾ ಪಾರ್ಥ ಗಚ್ಛಂತ್ಯೇತೇ ಮಹಾರಥಾಃ ॥೨೮॥

ಅರ್ಜುನ, ನಿನ್ನ ಕಡೆಯ ರಥಿಕರು ಪಲಾಯನ ಮಾಡುತ್ತಿದ್ದಾರೆ. ನೋಡು ನೋಡು, ಹೇಗೆ ಈ ಮಹಾರಥರು ಹೋಗುತ್ತಿದ್ದಾರೆ!

ಏತೇ ಭಾರತ ಮಾತಂಗಾಃ ಕರ್ಣೇನಾಭಿಹತಾ ರಣೇ ।
ಆರ್ತನಾದಾನ್ ವಿಕುರ್ವಾಣಾ ವಿದ್ರವಂತಿ ದಿಶೋ ದಶ ॥೨೯॥

ಅರ್ಜುನ, ಈ ಆನೆಗಳು ರಣದಲ್ಲಿ ಕರ್ಣನಿಂದ ಹೊಡೆಸಿಕೊಂಡು ಆರ್ತನಾದ ಮಾಡುತ್ತ ಹತ್ತು ದಿಕ್ಕುಗಳಿಗೆ ಓಡುತ್ತಿವೆ.

ರಥಾನಾಂ ದ್ರವತಾಂ ವೃಂದಂ ಪಶ್ಯ ಪಾರ್ಥ ಸಮಂತತಃ ।
ದ್ರಾವ್ಯಮಾಣಂ ರಣೇ ಚೈವ ಕರ್ಣೇನಾಮಿತ್ರಕರ್ಶಿನಾ ॥೩೦॥

ಅರ್ಜುನ, ನೋಡು, ಶತ್ರುನಾಶಕನಾದ ಕರ್ಣನು ರಣದಲ್ಲಿ ರಥಿಕರನ್ನು ಓಡಿಸುತ್ತಿದ್ದಾನೆ. ಎಲ್ಲ ಕಡೆ ಓಡುವ ರಥಿಕರ ಸಮೂಹವನ್ನು ನೋಡು.

ಹಸ್ತಿಕಕ್ಷ್ಯಾಂ ರಣೇ ಪಶ್ಯ ಚರಂತಿಂ ತತ್ರ ತತ್ರ ಹ ।
ರಥಸ್ಥಂ ಸೂತಪುತ್ರಸ್ಯ ಕೇತುಂ ಕೇತುಮತಾಂ ವರ ॥೩೧॥

ಧ್ವಜ ಉಳ್ಳವರಲ್ಲಿ ಶ್ರೇಷ್ಠನಾದ ಅರ್ಜುನನೆ, ಕರ್ಣನ ರಥದಲ್ಲಿರುವ ಕಾಕಧ್ವಜವನ್ನು ನೋಡು. ಅಲ್ಲಲ್ಲಿ ಅದು ಸಂಚರಿಸುತ್ತಿದೆ.

ಅಸೌ ಧಾವತಿ ರಾಧೇಯೋ ಭೀಮಸೇನರಥಂ ಪ್ರತಿ ।
ಕಿರನ್ ಶರಶತಾನೀವ ವಿನಿಘ್ನಂಸ್ತವ ವಾಹಿನೀಮ್ ॥೩೨॥

ಈ ಕರ್ಣನು ಈಗ ನೂರಾರು ಬಾಣಗಳನ್ನು ಎಸೆಯುತ್ತ ನಿನ್ನ ಸೈನ್ಯವನ್ನು ವಧಿಸುತ್ತ ಭೀಮಸೇನನ ರಥದ ಕಡೆಗೆ ಧಾವಿಸುತ್ತಿದ್ದಾನೆ.

ಏತಾನ್ ಪಶ್ಯ ಚ ಪಾಂಚಾಲಾನ್ ದ್ರಾವ್ಯಮಾಣಾನ್ ಸಮಂತತಃ ।
ಶಕ್ರೇಣೇವ ಯಥಾ ದೈತ್ಯಾನ್ ಹನ್ಯಮಾನಾನ್ ಮಹಾಹವೇ ॥೩೩॥

ಪಾಂಚಾಲರನ್ನು ಕರ್ಣ ಓಡಿಸುತ್ತಿದ್ದಾನೆ. ಅವರು ಓಡುವುದನ್ನು ನೋಡು. ಇಂದ್ರನು ಮಹಾರಣದಲ್ಲಿ ಹೊಡೆದಾಗ ದೈತ್ಯರು ಓಡುವಂತೆ ಹೇಗೆ ಓಡುತ್ತಾರೆ ನೋಡು.

ಏಷ ಕರ್ಣೋ ರಣೇ ಜಿತ್ವಾ ಪಾಂಚಾಲಾನ್ ಪಾಂಡುಸೃಂಜಯಾನ್ ।
ದಿಶೋ ವಿಪ್ರೇಕ್ಷತೇ ಸರ್ವಾಸ್ತ್ವದರ್ಥಮಿತಿ ಮೇ ಮತಿಃ ॥೩೪॥

ಕರ್ಣನು ಪಾಂಚಾಲರನ್ನು ಪಾಂಡವರನ್ನು ಸೃಂಜಯರನ್ನು ರಣದಲ್ಲಿ ಪರಾಭವಗೊಳಿಸಿ ಈಗ ನಿನಗಾಗಿ ಎಲ್ಲ ದಿಕ್ಕುಗಳನ್ನು ನೋಡುತ್ತಿದ್ದಾನೆ ಎಂದು ನನಗೆ ಅನಿಸುತ್ತಿದೆ.

ಪಶ್ಯ ಪಾರ್ಥ ಧನುಃ ಶ್ರೇಷ್ಠಂ ವಿಕರ್ಷನ್ ಸಾಧು ಶೋಭತೇ ।
ಶತ್ರೂನ್ ಜಿತ್ವಾ ಯಥಾ ಶಕ್ರೋ ದೇವಸಂಘೈಃ ಸಮಾವೃತಃ ॥೩೫॥

ನೋಡು ಅರ್ಜುನ, ಕರ್ಣನು ದೇವಸಮೂಹದಿಂದ ಸುತ್ತುವರಿಯಲ್ಪಟ್ಟ ಇಂದ್ರನಂತೆ ಶತ್ರುಗಳನ್ನು ಗೆದ್ದು ಶ್ರೇಷ್ಠವಾದ ಧನುಸ್ಸನ್ನು ಸೆಳೆದು ಚೆನ್ನಾಗಿ ಶೋಭಿಸುತ್ತಿದ್ದಾನೆ.

ಏತೇ ನದಂತಿ ಕೌರವ್ಯಾ ದೃಷ್ಟ್ವಾ ಕರ್ಣಸ್ಯ ವಿಕ್ರಮಮ್ ।
ತ್ರಾಸಯಂತೋ ರಣೇ ಪಾರ್ಥಾನ್ ಸೃಂಜಯಾಂಶ್ಚ ಸಹಸ್ರಶಃ ॥೩೬॥

ಕರ್ಣನ ಪರಾಕ್ರಮವನ್ನು ಕಂಡು ಈ ಕೌರವಸೈನಿಕರು ರಣದಲ್ಲಿ ಸಾವಿರಾರು ಪಾಂಡವ, ಸೃಂಜಯರನ್ನು ಭೀತಿಗೊಳಿಸುತ್ತ ಗರ್ಜಿಸುತ್ತಿದ್ದಾರೆ.

ಏಷ ಸರ್ವಾತ್ಮನಾ ಪಾಂಡೂನ್ ತ್ರಾಸಯಿತ್ವಾ ಮಹಾರಣೇ ।
ಅಭಿಭಾಷತಿ ರಾಧೇಯಃ ಸರ್ವಸೈನ್ಯಾನಿ ಮಾನದಃ ॥೩೭॥

ಶತ್ರುಗಳ ಮಾನ ಕಳೆವ ಈ ಕರ್ಣನು ಮಹಾರಣದಲ್ಲಿ ಪಾಂಡವ ಯೋಧರನ್ನು ಸರ್ವಾತ್ಮನಾ ಭೀತಿಗೊಳಿಸುತ್ತ ತನ್ನ ಎಲ್ಲ ಸೈನ್ಯಗಳಿಗೆ ಹೇಳುತ್ತಿದ್ದಾನೆ.

ಅಭಿದ್ರವತ ಭದ್ರಂ ವೋ ದ್ರುತಂ ದ್ರವತ ಕೌರವಾಃ ।
ಯಥಾ ಜೀವನ್ನ ವಃ ಕಶ್ಚಿನ್ಮುಚ್ಯತೇ ಯುಧಿ ಸೃಂಜಯಃ ॥೩೮॥

ತಥಾ ಕುರುತ ಸಂಯತ್ತಾ ವಯಂ ಯಾಸ್ಯಾಮ ಪೃಷ್ಠತಃ ।
ಏವಮುಕ್ತ್ವಾನುಯಾತ್ಯೇವ ಪೃಷ್ಠತೋ ವಿಕಿರನ್ ಶರೈಃ ॥೩೯॥

'ಕೌರವರೆ, ಸೃಂಜಯರನ್ನು ಬೆನ್ನಟ್ಟಿ ಧಾವಿಸಿರಿ. ನಿಮಗೆ ಶುಭವಾಗಲಿ. ಬೇಗನೆ ಧಾವಿಸಿರಿ. ಒಬ್ಬ ಸೃಂಜಯನೂ ಕೂಡ ರಣದಲ್ಲಿ ಜೀವಂತನಾಗಿ ನಿಮ್ಮಿಂದ ತಪ್ಪಿಸಿಕೊಳ್ಳದಂತೆ ಮಾಡಿರಿ. ಯತ್ನಶೀಲರಾಗಿರಿ. ನಾವು ನಿಮ್ಮ ಹಿಂದಿನಿಂದಲೆ ಬರುತ್ತೇವೆ' ಹೀಗೆ ಹೇಳುತ್ತ ಕರ್ಣನು ಸೃಂಜಯರ ಮೇಲೆ ಬಾಣಗಳನ್ನೆಸೆಯುತ್ತ ಹಿಂದಿನಿಂದ ಹಿಂಬಾಲಿಸಿ ಹೋಗುತ್ತಿದ್ದಾನೆ.

ಪಶ್ಯ ಕರ್ಣಂ ರಣೇ ಪಾರ್ಥ ಶ್ವೇತಚ್ಛತ್ರವಿರಾಜಿತಮ್ ।
ಉದಯಂ ಪರ್ವತಂ ಯದ್ವತ್ ಶಶಾಂಕೇನೋಪಶೋಭಿತಮ್ ॥೪೦॥

ಅರ್ಜುನ, ಕರ್ಣನನ್ನು ನೋಡು. ರಣದಲ್ಲಿ ಶ್ವೇತಛತ್ರದಿಂದ ವಿರಾಜಿತನಾಗಿ ಚಂದ್ರನಿಂದ ವಿರಾಜಿತವಾಗುವ ಉದಯಪರ್ವತದಂತೆ ಕಾಣಿಸುತ್ತಾನೆ.

ಪೂರ್ಣಚಂದ್ರನಿಕಾಶೇನ ಮೂರ್ಧ್ನಿ ಚ್ಛತ್ರೇಣ ಭಾರತ ।
ಧ್ರಿಯಮಾಣೇನ ಸಮರೇ ತಥಾ ಶತಶಲಾಕಿನಾ ॥೪೧॥

ಅರ್ಜುನ, ತಲೆಯ ಮೇಲೆ ಹಿಡಿದ ನೂರು ಸಲಾಕೆಗಳಿಂದ ಕೂಡಿದ ಪೂರ್ಣ ಚಂದ್ರನಂತೆ ಬೆಳಗುವ ಛತ್ರದಿಂದ ರಣದಲ್ಲಿ ಕರ್ಣನು ವಿರಾಜಿತನಾಗಿದ್ದಾನೆ.

ಏಷ ತ್ವಾಂ ಪ್ರೇಕ್ಷತೇ ಕರ್ಣಃ ಸಕಟಾಕ್ಷಂ ವಿಶಾಂಪತೇ ।
ಉತ್ತಮಂ ರಥಮಾಸ್ಥಾಯ ಧ್ರುವಮೇಷ್ಯತಿ ಸಂಯುಗೇ ॥೪೨॥

ಈ ಕರ್ಣನು ಓರೆಗಣ್ಣಿಂದ ನಿನ್ನನ್ನೇ ನೋಡುತ್ತಿದ್ದಾನೆ. ಉತ್ತಮವಾದ ರಥವನ್ನೇರಿ ನಿನ್ನ ಬಳಿಗೆ ರಣಕ್ಕೆ ನಿಶ್ಚಿತವಾಗಿ ಬರುತ್ತಾನೆ.

ಪಶ್ಯ ಹ್ಯೇನಂ ಮಹಾಬಾಹೋ ವಿಧುನ್ವಾನಂ ಮಹದ್ಧನುಃ ।
ಶರಾಂಶ್ಚಾಶೀವಿಷಾಕಾರಾನ್ ವಿಸೃಜಂತಂ ಮಹಾಬಲಮ್ ॥೪೩॥

ಅರ್ಜುನ, ಮಹಾಬಲಿಯಾದ ಕರ್ಣನನ್ನು ನೋಡು, ದೊಡ್ಡ ಧನುಸ್ಸನ್ನು ಓಲಾಡಿಸುತ್ತಿದ್ದಾನೆ. ಹಾವಿನಾಕಾರದ ಬಾಣಗಳನ್ನು ಎಸೆಯುತ್ತಾನೆ.

ಅಸೌ ನಿವೃತ್ತೋ ರಾಧೇಯೋ ದೃಶ್ಯತೇ ವಾನರಧ್ವಜ ।
ಪ್ರಾರ್ಥಯನ್ ಸಮರಂ ಪಾರ್ಥ ತ್ವಯಾ ಸಹ ಪರಂತಪ ।
ವಧಾಯ ಚಾತ್ಮನೋಽಭ್ಯೇತಿ ಪ್ರದೀಪಂ ಶಲಭೋ ಯಥಾ ॥೪೪॥

ಕರ್ಣನು ಈಗ ಈ ಕಡೆಗೆ ತಿರುಗಿರುವುದು ಕಂಡುಬರುತ್ತಿದೆ. ಅವನು ನಿನ್ನೊಡನೆ ಯುದ್ಧವನ್ನು ಅಪೇಕ್ಷಿಸಿ, ದೀಪವನ್ನು ದೀಪದ ಹುಳುವಿನಂತೆ ತನ್ನ ವಧೆಗಾಗಿಯೆ ಸಮೀಪಿಸುತ್ತಿದ್ದಾನೆ.

ಕರ್ಣಮೇಕಾಕಿನಂ ದೃಷ್ಟ್ವಾ ರಥಾನೀಕೇನ ಭಾರತ ।
ರಿರಕ್ಷಿಷುಃ ಸುಸಂಯತ್ತೋ ಧಾರ್ತರಾಷ್ಟ್ರೋಽಭಿವರ್ತತೇ ॥೪೫॥

ಕರ್ಣ ಏಕಾಕಿಯಾಗಿರುವುದನ್ನು ಕಂಡು ಅವನನ್ನು ರಕ್ಷಿಸುವ ಇಚ್ಛೆಯಿಂದ ಬಹು ಯತ್ನಶೀಲನಾಗಿ ದುರ್ಯೋಧನನು ರಥಸೈನ್ಯದೊಂದಿಗೆ ಬರುತ್ತಿದ್ದಾನೆ.

ಸರ್ವೈಃ ಸಹೈಭಿರ್ದುಷ್ಟಾತ್ಮಾ ವಧ್ಯ ಏಷ ಪ್ರಯತ್ನತಃ ।
ತ್ವಯಾ ಯಶಶ್ಚ ರಾಜ್ಯಂ ಚ ಸುಖಂ ಚೋತ್ತಮಮಿಚ್ಛತಾ ॥೪೬॥

ಯಶಸ್ಸು ರಾಜ್ಯ, ಉತ್ತಮಸುಖ ನಿನಗೆ ಬೇಕೆಂದರೆ ಈ ಎಲ್ಲರೊಂದಿಗೆ ಈ ದುಷ್ಪಾತ್ಮನಾದ ಕರ್ಣನನ್ನು ಯತ್ನಪೂರ್ವಕವಾಗಿ ಕೊಲ್ಲಬೇಕು.

ಅದೀನಯೋರ್ವಿಶ್ರುತಯೋರ್ಯುವಯೋರ್ಯೋತ್ಸ್ಯಮಾನಯೋಃ ।
ದೇವಾಸುರೇ ಪಾರ್ಥ ಮೃಧೇ ದೇವದಾನವಯೋರಿವ ॥೪೭॥

ತ್ವಾಂ ಚ ದೃಷ್ಟ್ವಾತಿಸಂರಬ್ಧಂ ಕರ್ಣಂ ಚ ಭರತರ್ಷಭ ।
ಅಸೌ ದುರ್ಯೋಧನಃ ಕ್ರುದ್ಧೋ ನೋತ್ತರಂ ಪ್ರತಿಪದ್ಯತೇ ॥೪೮॥

ದೇವಾಸುರರ ಯುದ್ಧದಲ್ಲಿ ದೇವ–ದಾನವರಂತೆ ಧೈರ್ಯಶಾಲಿಗಳಾದ ಪ್ರಸಿದ್ಧರಾದ ನೀವಿಬ್ಬರು ಯುದ್ಧಮಾಡಿದರೆ, ಅದರಲ್ಲಿ ಅತಿಕೋಪ ಮಾಡುವ ನಿನ್ನನ್ನೂ ಕರ್ಣನನ್ನೂ ದುರ್ಯೋಧನನು ಕಂಡು, ಕ್ರುದ್ಧನಾದ ಆತ ನಿರುತ್ತರನಾಗುತ್ತಾನೆ. ನೀನು ಹತನಾಗುವಿ ಎಂದು ಆತ ಹೇಳಲಾರ.

ಆತ್ಮಾನಂ ಚ ಕೃತಾತ್ಮಾನಂ ಸಮೀಕ್ಷ್ಯ ಭರತರ್ಷಭ ।
ಕೃತಾಗಸಂ ಚ ರಾಧೇಯಂ ಧರ್ಮಾತ್ಮನಿ ಯುಧಿಷ್ಠಿರೇ ॥೪೯॥

ಪ್ರತಿಪದ್ಯಸ್ವ ರಾಧೇಯಂ ಪ್ರಾಪ್ತಕಾಲಮನಂತರಮ್ ।
ಆರ್ಯಾಂ ಯುದ್ಧೇ ಮತಿಂ ಕೃತ್ವಾ ಪ್ರತ್ಯೇಹಿ ರಥಯೂಥಪಮ್ ॥೫೦॥

ನೀನು ಪುಣ್ಯಾತ್ಮ, ಕರ್ಣನು ಪುಣ್ಯಾತ್ಮನಾದ ಯುಧಿಷ್ಠಿರನಲ್ಲಿ ಪಾಪ ಮಾಡಿದ್ದಾನೆ. ಇದನ್ನು ಆಲೋಚಿಸಿ ವಿಲಂಬ ಮಾಡದೆ ಕಾಲೋಚಿತವಾದ ಕರ್ಮ ಮಾಡು. ಅರ್ಜುನ, ಯುದ್ಧದಲ್ಲಿ ಒಳ್ಳೆಯ ಸಂಕಲ್ಪ ಮಾಡಿ ರಥಸೇನಾಪತಿ ಯಾದ ಕರ್ಣನನ್ನು ಆಕ್ರಮಿಸು.

ಪಂಚ ಹ್ಯೇತಾನಿ ಮುಖ್ಯಾನಾಂ ರಥಾನಾಂ ರಥಸತ್ತಮ ।
ಶತಾನ್ಯಾಯಾಂತಿ ವೇಗೇನ ಬಲಿನಾಂ ಭೀಮತೇಜಸಾಮ್ ॥೫೧॥

ಪಂಚ ನಾಗಸಹಸ್ರಾಣಿ ದ್ವಿಗುಣಾ ವಾಜಿನಸ್ತಥಾ ।
ಅಭಿಸಂಹತ್ಯ ಕೌಂತೇಯ ಪದಾತಿಪ್ರಯುತಾನಿ ಚ ॥೫೨॥

ಅನ್ಯೋನ್ಯರಕ್ಷಿತಂ ವೀರ ಬಲಂ ತ್ವಾಮಭಿವರ್ತತೇ
ದ್ರೋಣಪುತ್ರಂ ಪುರಸ್ಕೃತ್ಯ ತಚ್ಛೀಘ್ರಂ ಸಂನಿಪೂದಯ ॥೫೩॥

ಅರ್ಜುನ, ಮಹಾಬಲಿಷ್ಠರಾದ ಐದುನೂರು ಮುಖ್ಯ ರಥಿಕರು, ಅವರನ್ನು ಅನುಸರಿಸಿ ಐದುಸಾವಿರ ಆನೆಗಳು, ಹತ್ತುಸಾವಿರ ಕುದುರೆಗಳು, ಹತ್ತು ಲಕ್ಷ ಪದಾತಿಗಳೂ ಅಶ್ವತ್ಥಾಮನನ್ನು ಮುಂದೆ ಮಾಡಿಕೊಂಡು ಪರಸ್ಪರ ರಕ್ಷಣೆ ಮಾಡಿಕೊಳ್ಳುತ್ತ ವೇಗದಿಂದ ನಿನ್ನ ಮೇಲೆ ಆಕ್ರಮಣ ಮಾಡಲು ಬರುತ್ತಿದ್ದಾರೆ. ಅವರನ್ನು ಬೇಗನೆ ಸಂಹರಿಸು.

ಸೂತಪುತ್ರೇ ಮಹೇಷ್ವಾಸೇ ದರ್ಶಯಾತ್ಮಾನಮಾತ್ಮನಾ ।
ಉತ್ತಮಂ ಯತ್ನಮಾಸ್ಥಾಯ ಪ್ರತ್ಯೇಹಿ ಭರತರ್ಷಭ ॥೫೪॥

ಮಹಾಬಿಲ್ಲಾರನಾದ ಕರ್ಣನಲ್ಲಿ ನೀನು ನಿನ್ನ ಪರಾಕ್ರಮವನ್ನು ಉತ್ತಮವಾಗಿ ಯತ್ನಪೂರ್ವಕವಾಗಿ ತೋರಿಸು, ಅವನನ್ನು ಆಕ್ರಮಿಸು.

ಅಸೌ ಕರ್ಣಃ ಸುಸಂರಬ್ಧಃ ಪಾಂಚಾಲಾನಭಿಧಾವತಿ ।
ಕೇತುಮಸ್ಯ ಹಿ ಪಶ್ಯಾಮಿ ಧೃಷ್ಟದ್ಯುಮ್ನರಥಂ ಪ್ರತಿ ॥೫೫॥
ಸಮುಚ್ಛೇತ್ಸ್ಯತಿ ಪಾಂಚಾಲಾನಿತಿ ಮನ್ಯೇ ಪರಂತಪ ॥೫೬॥

ಕ್ರುದ್ಧನಾದ ಕರ್ಣನು ಪಾಂಚಾಲರ ಕಡೆಗೆ ಹೋಗುತ್ತಾನೆ. ಅವನ ರಥಧ್ವಜವು ಧೃಷ್ಟದ್ಯುಮ್ನನ ರಥದ ಕಡೆಗೆ ಹೋಗುತ್ತಿರುವುದನ್ನು ಕಾಣುತ್ತಿದ್ದೇನೆ. ಅವನು ಪಾಂಚಾಲರನ್ನು ನಾಶಪಡಿಸುವನೆಂದು ನಾನು ಭಾವಿಸುತ್ತೇನೆ.

ಆಚಕ್ಷೇ ತು ಪ್ರಿಯಂ ಪಾರ್ಥ ತವೇದಂ ಭರತರ್ಷಭ ।
ರಾಜಾ ಜೀವತಿ ಕೌರವ್ಯೋ ಧರ್ಮಪುತ್ರೋ ಯುಧಿಷ್ಠಿರಃ ॥೫೭॥

ಅರ್ಜುನ, ನಿನಗೆ ಈಗ ಪ್ರಿಯವಾದ ಮಾತನ್ನು ಹೇಳುತ್ತೇನೆ, ಧರ್ಮಪುತ್ರ ರಾಜಾ ಯುಧಿಷ್ಠಿರ ಬದುಕಿದ್ದಾನೆ.

ಅಸೌ ಭೀಮೋ ಮಹಾಬಾಹುಃ ಸನ್ನಿವೃತ್ತಶ್ಚಮೂಮುಖೇ ।
ವೃತಃ ಸೃಂಜಯಸೈನ್ಯೇನ ಸಾತ್ವತೇನ ಚ ಭಾರತ ॥೫೮॥

ಮಹಾಬಾಹುವಾದ ಈ ಭೀಮನು ಸೈನ್ಯದ ಮುಂಭಾಗಕ್ಕೆ ಹಿಂದಿರುಗಿದ್ದಾನೆ. ಸೃಂಜಯ ಸೈನ್ಯದಿಂದಲೂ ಸಾತ್ಯಕಿಯಿಂದಲೂ ಯುಕ್ತನಾಗಿದ್ದಾನೆ.

ವಧ್ಯಂತ ಏತೇ ಸಮರೇ ಕೌರವಾ ನಿಶಿತೈಃ ಶರೈಃ ।
ಭೀಮಸೇನೇನ ಕೌಂತೇಯ ಪಾಂಚಾಲೈಶ್ಚ ಮಹಾತ್ಮಭಿಃ ॥೫೯॥

ಈ ಕೌರವಯೋಧರು ರಣದಲ್ಲಿ ತೀಕ್ಷ್ಣವಾದ ಬಾಣಗಳಿಂದ ಭೀಮಸೇನನಿಂದಲೂ ಮಹಾತ್ಮರಾದ ಪಾಂಚಾಲರಿಂದಲೂ ಹತರಾಗುತ್ತಿದ್ದಾರೆ.

ಸೇನಾ ಹಿ ಧಾರ್ತರಾಷ್ಟ್ರಸ್ಯ ವಿಮುಖಾ ಚಾಭವದ್ ರಣಾತ್ ।
ವಿಪ್ರಧಾವತಿ ವೇಗೇನ ಭೀಮಸ್ಯ ನಿಹತಾ ಶರೈಃ ॥೬೦॥

ದುರ್ಯೋಧನನ ಸೈನ್ಯ ರಣದಿಂದ ವಿಮುಖವಾಯಿತು. ಭೀಮನ ಬಾಣಗಳಿಂದ ಹೊಡೆಸಿಕೊಂಡು ವೇಗದಿಂದ ಪಲಾಯನ ಮಾಡುತ್ತಿದೆ.

ವಿಪನ್ನಸಸ್ಯೇವ ಮಹೀ ರುಧಿರೇಣ ಸಮುಕ್ಷಿತಾ ।
ಕೌರವೀ ಭರತಶ್ರೇಷ್ಠ ಸೇನಾ ಕೃಪಣದರ್ಶನಾ ॥೬೧॥

ರಕ್ತದಿಂದ ತೊಯ್ದ ಕೌರವಸೇವೆ ಸಸ್ಯನಾಶದಿಂದ ನೋಡಲು ದಯನೀಯವಾಗಿ ಕಾಣುವ ಹೊಲಗದ್ದೆಯಂತೇ ಕಂಡುಬಂದಿತು.

ನಿವೃತ್ತಂ ಪಶ್ಯ ಕೌಂತೇಯ ಭೀಮಸೇನಂ ಯುಧಾಂಪತಿಮ್ ।
ಆಶೀವಿಷಮಿವ ಕ್ರುದ್ಧಂ ದ್ರಾವಯಂತಂ ವರೂಥಿನೀಮ್ ॥೬೨॥

ಅರ್ಜುನ, ನೋಡು, ಯೋಧರಲ್ಲಿ ಶ್ರೇಷ್ಠನಾದ ಭೀಮಸೇನನನ್ನು ಅವನು ಯುದ್ಧಕ್ಕೆ ಹಿಂದಿರುಗಿ, ವಿಷಸರ್ಪದಂತೆ ಕುಪಿತನಾಗಿ ಶತ್ರುಸೈನ್ಯವನ್ನು ಹೊಡೆದೋಡಿಸುತ್ತಿದ್ದಾನೆ.

ಪೀತರಕ್ತಾಸಿತಸಿತಾಸ್ತಾರಾಚಂದ್ರಾರ್ಕಮಂಡಿತಾಃ ।
ಪತಾಕಾ ವಿಪ್ರಕೀರ್ಯಂತೇ ಛತ್ರಾಣ್ಯೇತಾನಿ ಚಾರ್ಜುನ ॥೬೩॥

ಅರ್ಜುನ, ಸೂರ್ಯ–ಚಂದ್ರ–ನಕ್ಷತ್ರಗಳ ಚಿಹ್ನೆಗಳಿಂದ ಅಲಂಕೃತವಾದ ಹಳದಿ ಕೆಂಪು ಕಪ್ಪು ಬಿಳಿ ಬಣ್ಣದ ಪತಾಕೆಗಳೂ ಛತ್ರಗಳೂ ರಣಭೂಮಿಯಲ್ಲಿ ಹರಡಿವೆ.

ಸೌವರ್ಣಾ ರಾಜತಾಶ್ಚೈವ ತೈಜಸಾಶ್ಚ ಪೃಥಗ್ವಿಧಾಃ ।
ಕೇತವೋ ವಿನಿಪಾತ್ಯಂತೇ ಹಸ್ತ್ಯಶ್ವಂ ಚ ವಿಶೀರ್ಯತೇ ॥೬೪॥

ಬಂಗಾರ ಬೆಳ್ಳಿ ಮುಂತಾದ ಲೋಹಗಳಿಂದಾಗುವ ನಾನಾ ವಿಧವಾದ ಧ್ವಜಗಳು ಬೀಳಿಸಲ್ಪಡುತ್ತಿವೆ. ಆನೆ ಕುದುರೆಗಳು ಹತವಾಗುತ್ತಿವೆ.

ರಥೇಭ್ಯಃ ಪ್ರಪತಂತ್ಯೇತೇ ರಥಿನೋ ವಿಗತಾಸವಃ ।
ನಾನಾವರ್ಣೈರ್ಹತಾ ಬಾಣೈಃ ಪಾಂಚಾಲೈರಪಲಾಯಿಭಿಃ ॥೬೫॥

ಈ ರಥಿಕರು ಅಸುನೀಗಿ ರಥಗಳಿಂದ ಬೀಳುತ್ತಿದ್ದಾರೆ. ಅವರು ಪಲಾಯನ ಮಾಡದ ಪಾಂಚಾಲರ ನಾನಾ ವರ್ಣದ ಬಾಣಗಳಿಂದ ಹತರಾದವರು.

ಸಮನುಷ್ಯಾನ್ ಗಜಾನಶ್ವಾನ್ ರಥಾಂಶ್ಚೈವ ಧನಂಜಯ ।
ಸಮಾದ್ರವಂತಿ ಪಾಂಚಾಲಾ ಧಾರ್ತರಾಷ್ಟ್ರಾಂಸ್ತರಸ್ವಿನಃ ॥೬೬॥

ಕೌರವರ ಆರೋಹಿಗಳುಳ್ಳ ಗಜ ಅಶ್ವ ರಥಗಳನ್ನು ಶಕ್ತಿಶಾಲಿಗಳಾದ ಪಾಂಚಾಲರು ಬೆನ್ನಟ್ಟುತ್ತಿದ್ದಾರೆ.

ಮೃದ್ನಂತಿ ಚ ನರವ್ಯಾಘ್ರಾ ಭೀಮಸೇನವ್ಯಪಾಶ್ರಯಾತ್ ।
ಬಲಂ ಪರೇಷಾಂ ದುರ್ಧರ್ಷಂ ತ್ಯಕ್ತ್ವಾ ಪ್ರಾಣಾನರಿಂದಮ ॥೬೭॥

ಆ ಯೋಧಶ್ರೇಷ್ಠರು ಭೀಮಸೇನನ ಆಸರೆಯಿಂದ ಪ್ರಾಣದ ಹಂಗುತೊರೆದು ಶತ್ರುಗಳ ಇದಿರಿಸಲಾಗದ ಸೈನ್ಯವನ್ನು ಪುಡಿಗೈಯ್ಯುತ್ತಾರೆ.

ಏತೇ ನದಂತಿ ಪಾಂಚಾಲಾ ಧಮಂತ್ಯಪಿ ಚ ವಾರಿಜಾನ್ ।
ಅಭಿದ್ರವಂತಿ ಚ ರಣೇ ನಿಘ್ನಂತಃ ಸಾಯಕೈಃ ಪರಾನ್ ॥೬೮॥

ಈ ಪಾಂಚಾಲರು ಗರ್ಜಿಸುತ್ತಿದ್ದಾರೆ. ಶಂಖಗಳನ್ನು ಊದುತ್ತಿದ್ದಾರೆ. ಶತ್ರುಗಳನ್ನು ಬಾಣಗಳಿಂದ ಹೊಡೆಯುತ್ತ ರಣದಲ್ಲಿ ನುಗ್ಗಿ ಬರುತ್ತಾರೆ.

ಪಶ್ಯೈಷಾಂ ಚ ಮಾಹಾತ್ಮ್ಯಂ ಪಾಂಚಾಲಾ ಹಿ ಪರಂತಪ ।
ಧಾರ್ತರಾಷ್ಟ್ರಾನ್ ವಿನಿಘ್ನಂತಿ ಕ್ರುದ್ಧಾಃ ಸಿಂಹಾ ಇವ ದ್ವಿಪಾನ್ ॥೬೯॥

ಈ ಪಾಂಚಾಲಯೋಧರ ಮಾಹಾತ್ಮ್ಯವನ್ನು ನೋಡು. ಕೋಪಗೊಂಡ ಸಿಂಹಗಳು ಆನೆಗಳನ್ನು ಕೊಲ್ಲುವಂತೆ ಪಾಂಚಾಲರು ಕೋಪಗೊಂಡು ಕೌರವರನ್ನು ಕೊಲ್ಲುತ್ತಿದ್ದಾರೆ.

ಶಸ್ತ್ರಮಾಚ್ಛಿದ್ಯ ಶತ್ರೂಣಾಂ ಸಾಯುಧಾನಾಂ ನಿರಾಯುಧಾಃ ।
ತೇನೈವೈತಾನಮೋಘಾಸ್ತ್ರಾ ನಿಘ್ನಂತಿ ಚ ನದಂತಿ ಚ ॥೭೦॥

ನಿರಾಯುಧರಾದ ಪಾಂಚಾಲರು ಸಾಯುಧರಾದ ಶತ್ರುಗಳ ಆಯುಧವನ್ನು ಕಿತ್ತುಕೊಂಡು ಅದರಿಂದಲೆ ಶತ್ರುಗಳನ್ನು ವಧಿಸುತ್ತಾರೆ, ಗರ್ಜಿಸುತ್ತಾರೆ.

ಶಿರಾಂಸ್ಯೇತಾನಿ ಪಾತ್ಯಂತೇ ಶತ್ರೂಣಾಂ ಬಾಹವೋಽಪಿ ಚ ।
ರಥನಾಗಹಯಾ ವೀರಾ ಯಶಸ್ಯಾಃ ಸರ್ವ ಏವ ಚ ॥೭೧॥

ಪಾಂಚಾಲಯೋಧರು ಶತ್ರುಗಳ ಶಿರಸ್ಸುಗಳನ್ನು ತೋಳುಗಳನ್ನು ಬೀಳಿಸುತ್ತಾರೆ. ರಥ ಗಜ ಅಶ್ವ ಪದಾತಿಗಳನ್ನು ಎಲ್ಲರನ್ನೂ ಕೆಡಹುತ್ತಾರೆ. ಎಲ್ಲರೂ ಯಶಸ್ಸನ್ನು ಗಳಿಸುತ್ತಾರೆ.

ಸರ್ವತಶ್ಚಾಭಿಪನ್ನೈಷಾ ಧಾರ್ತರಾಷ್ಟ್ರೀ ಮಹಾಚಮೂಃ ।
ಪಾಂಚಾಲೈರ್ಮಾನಸಾದೇತ್ಯ ಹಂಸೈರ್ಗಂಗೇವ ವೇಗಿತೈಃ ॥೭೨॥

ಮಾನಸ ಸರೋವರದಿಂದ ಹಂಸಗಳು ವೇಗದಿಂದ ಬಂದು ಗಂಗೆಯನ್ನು ಆಶ್ರಯಿಸುವಂತೆ, ಎಲ್ಲ ಕಡೆಗಳಿಂದ ಬಂದ ಪಾಂಚಾಲರೂ ವೇಗದಿಂದ ಕೌರವರ ಮಹಾ ಸೈನ್ಯವನ್ನು ಆಕ್ರಮಿಸಿದ್ದಾರೆ.

ಸುಭೃಶಂ ಚ ಪರಾಕ್ರಾಂತಾಃ ಪಾಂಚಾಲಾನಾಂ ನಿವಾರಣೇ ।
ಕೃಪಕರ್ಣಾದಯೋ ವೀರಾ ಋಷಭಾಣಾಮಿವರ್ಷಭಾಃ ॥೭೩॥

ಗೂಳಿಗಳು ಗೂಳಿಗಳ ಮುಂದೆ ಪರಾಕ್ರಮ ತೋರುವಂತೆ ಕೃಪ ಕರ್ಣ ಮುಂತಾದ ವೀರರು ಪಾಂಚಾಲರನ್ನು ತಡೆಯಲು ಬಹಳ ಪರಾಕ್ರಮ ತೋರಬೇಕಾಯಿತು.

ಸುನಿರ್ಭಗ್ನಾಂಶ್ಚ ಭೀಮಾಸ್ತ್ರೈರ್ಧಾರ್ತರಾಷ್ಟ್ರಾನ್ ಮಹಾರಥಾನ್ ।
ಧೃಷ್ಟದ್ಯುಮ್ನಮುಖಾ ವೀರಾ ಘ್ನಂತಿ ಶತ್ರೂನ್ ಸಹಸ್ರಶಃ ॥೭೪॥

ಭೀಮಸೇನನ ಅಸ್ತ್ರಗಳಿಂದ ಚೆನ್ನಾಗಿ ಭಗ್ನರಾದ ಕೌರವಮಹಾರಥರನ್ನು ಧೃಷ್ಟದ್ಯುಮ್ನ ಮುಂತಾದ ವೀರರು ಸಾವಿರಾರು ಸಂಖ್ಯೆಯಲ್ಲಿ ಸಂಹರಿಸುತ್ತಾರೆ.

ಪಾಂಚಾಲೇಷ್ವಭಿಭೂತೇಷು ದ್ವಿಷದ್ಭಿರಪಭೀರ್ನದನ್ ।
ಶತ್ರುಪಕ್ಷಮವಸ್ಕಂದ್ಯ ಶರಾನಸ್ಯತಿ ಮಾರುತಿಃ ॥೭೫॥

ಪಾಂಚಾಲರು ಶತ್ರುಗಳಿಂದ ಪರಾಜಿತರಾದಾಗ ಭಯವಿಲ್ಲದ ಭೀಮ ಗರ್ಜಿಸುತ್ತ ಶತ್ರುಪಕ್ಷವನ್ನು ಆಕ್ರಮಿಸಿ ಬಾಣಗಳನ್ನೆಸೆಯುತ್ತಾನೆ.

ವಿಷಣ್ಣಭೂಯಿಷ್ಠರಥಾ ಧಾರ್ತರಾಷ್ಟ್ರೀ ಮಹಾಚಮೂಃ ॥೭೬॥
ರಥಾಶ್ಚೈತೇ ಸುವಿತ್ರಸ್ತಾ ಭೀಮಸೇನಭಯಾರ್ದಿತಾಃ ॥೭೭॥

ಹೀಗೆ ಹೆಚ್ಚಿನ ರಥಿಕರೆಲ್ಲರೂ ಕೌರವಸೇನೆಯಲ್ಲಿ ಹತರಾದರು. ಎಲ್ಲ ರಥಿಕರೂ ಭೀಮಸೇನನ ಭಯದಿಂದ ಪೀಡಿತರಾಗಿ ನಡುಗಿದರು.

ಪಶ್ಯ ಭೀಮೇನ ನಾರಾಚೈಶ್ಛಿನ್ನಾ ನಾಗಾಃ ಪತನ್ತ್ಯಮೀ ।
ವಜ್ರೀವಜ್ರಾಹತಾನೀವ ಶಿಖರಾಣಿ ಮಹೀಭೃತಾಮ್ ॥೭೮॥

ಅರ್ಜುನ, ನೋಡು, ಇಂದ್ರನ ವಜ್ರಾಯುಧದಿಂದ ಕಡಿದ ಪರ್ವತಗಳ ಶಿಖರಗಳಂತೆ ಭೀಮನ ಬಾಣಗಳಿಂದ ಕಡಿದ ಆನೆಗಳು ಬೀಳುತ್ತಿವೆ.

ಭೀಮಸೇನಸ್ಯ ನಿರ್ವಿದ್ಧಾ ಬಾಣೈಃ ಸನ್ನತಪರ್ವಭಿಃ ।
ಸ್ವಾನ್ಯನೀಕಾನಿ ಮೃದ್ನಂತೋ ದ್ರವನ್ತ್ಯೇತೇ ಮಹಾಗಜಾಃ ॥೭೯॥

ಭೀಮಸೇನನ ಡೊಂಕುಗಿಣ್ಣಿನ ಬಾಣಗಳಿಂದ ಹೊಡೆಸಿಕೊಂಡ ಮಹಾಗಜಗಳು ತಮ್ಮ ಕಡೆಯ ಸೈನಿಕರನ್ನೇ ತುಳಿದು ಮರ್ದಿಸಿ ಓಡಿಹೋಗುತ್ತಿವೆ.

ಅಭಿಜಾನೀಹಿ ಭೀಮಸ್ಯ ಸಿಂಹನಾದಂ ದುರುತ್ಸಹಮ್ ।
ನದತೋಽರ್ಜುನ ಸಂಗ್ರಾಮೇ ವೀರಸ್ಯ ಜಿತಕಾಶಿನಃ ॥೮೦॥

ರಣದಲ್ಲಿ ಜಯದಿಂದ ಶೋಭಿಸುವ ಗರ್ಜಿಸುವ ವೀರ ಭೀಮನ, ಶತ್ರುಗಳಿಗೆ ಸಹಿಸಲಾಗದ ಸಿಂಹಗರ್ಜನೆ ಎಂದರೆ ಇದು ಎಂದು, ಅರ್ಜುನ, ನೀನು ಸರಿಯಾಗಿ ತಿಳಿದುಕೊಳ್ಳು.

ಏಷ ನೈಷಾದಿರಭ್ಯೇತಿ ದ್ವಿಪಮುಖ್ಯೇನ ಪಾಂಡವಮ್ ।
ಜಿಘಾಂಸುಸ್ತೋಮರೈಃ ಕ್ರುದ್ಧೋ ದಂಡಪಾಣಿರಿವಾಂತಕಃ ॥೮೧॥

ಈತ ನಿಷಾದರಾಜ ಪುತ್ರ,ಗಜೋತ್ತಮವನ್ನೇರಿ ಭೀಮನನ್ನು ತೋಮರಗಳಿಂದ ಕೊಲ್ಲಲು ಬಯಸಿ ಕ್ರುದ್ಧನಾಗಿ ದಂಡಪಾಣಿಯಾದ ಯಮನಂತೆ ಆಕ್ರಮಿಸಿದ.

ಸತೋಮರಾವಸ್ಯ ಭುಜೌ ಛಿನ್ನೌ ಭೀಮೇನ ಗರ್ಜತಃ ।
ತೀಕ್ಷ್ಣೈರಗ್ನಿಶಿಖಾಪ್ರಖ್ಯೈರ್ನಾರಾಚೈರ್ದಶಭಿರ್ಹತಃ ॥೮೨॥

ಆದರೆ ಈಗ ಭೀಮನು ಗರ್ಜಿಸುತ್ತ ತೀಕ್ಷ್ಣವಾದ ಅಗ್ನಿಜ್ವಾಲೆಯಂಥ ಹತ್ತು ಬಾಣಗಳಿಂದ ಅವನನ್ನು ಹೊಡೆದಿದ್ದಾನೆ. ತೋಮರಗಳನ್ನು ಹಿಡಿದ ಎರಡೂ ತೋಳುಗಳನ್ನೂ ಕತ್ತರಿಸಿದ್ದಾನೆ.

ಹತ್ವೈನಂ ಪುನರಾಯಾತಿ ನಾಗಾನನ್ಯಾನ್ ಪ್ರಹಾರಿಣಃ ।
ಪಶ್ಯ ನೀಲಾಂಬುದನಿಭಾನ್ ಮಹಾಮಾತ್ರೈರಧಿಷ್ಠಿತಾನ್ ॥೮೩॥
ಶಕ್ತಿತೋಮರನಾರಾಚೈರ್ವಿನಿಘ್ನಂತಂ ವೃಕೋದರಮ್ ॥೮೪॥

ಹೀಗೆ ನಿಷಾದರಾಜ ಪುತ್ರನನ್ನು ಕೊಂದ ಬಳಿಕ ತನ್ನ ಮೇಲೆ ಪ್ರಹಾರ ಮಾಡಿದ ಬೇರೆ ಗಜಯೋಧರನ್ನೂ ಭೀಮ ಇದಿರಿಸುತ್ತಾನೆ. ಮಾವಟಿಗರಿಂದ ಯುಕ್ತವಾದ ಕರಿಮೋಡಗಳಂಥ ಗಜಗಳನ್ನು ಶಕ್ತಿ ತೋಮರ ನಾರಾಚಗಳಿಂದ ಕೊಲ್ಲುತ್ತಾನೆ. ನೋಡು.

ಸಪ್ತ ಸಪ್ತ ಚ ನಾಗಾಂಸ್ತಾನ್ ವೈಜಯಂತೀಶ್ಚ ಸಧ್ವಜಾಃ ।
ನಿಹತ್ಯ ನಿಶಿತೈರ್ಬಾಣೈಶ್ಛಿನ್ನಾಃ ಪಾರ್ಥಾಗ್ರಜೇನ ತೇ ॥೮೫॥
ದಶಭಿರ್ದಶಭಿಶ್ಚೈಕೇ ನಾರಾಚೈರ್ನಿಹತಾ ಗಜಾಃ ॥೮೬॥

ನಿಮ್ಮಣ್ಣ ಭೀಮಸೇನನು ನಲವತ್ತೊಂಬತ್ತು ಆನೆಗಳನ್ನೂ ಕೊಂದು ಧ್ವಜಗಳನ್ನೂ ವೈಜಯಂತೀ ಪತಾಕೆಗಳನ್ನೂ ಕತ್ತರಿಸಿದ್ದಾನೆ. ಹತ್ತು ಹತ್ತು ಬಾಣಗಳಿಂದ ಒಂದೊಂದಾಗಿ ಆನೆಗಳನ್ನು ಕೊಂದಿದ್ದಾನೆ.

ನ ಚಾಸೌ ಧಾರ್ತರಾಷ್ಟ್ರಾಣಾಂ ಶ್ರೂಯತೇ ನಿನದಸ್ತಥಾ ।
ಪುರಂದರಸಮೇ ಕ್ರುದ್ಧೇ ನಿವೃತ್ತೇ ಭರತರ್ಷಭೇ ॥೮೭॥

ಇಂದ್ರನಿಗೆ ಸಮನಾದ ಭೀಮನೇ ಕ್ರುದ್ಧನಾಗಿ ಯುದ್ಧಕ್ಕೆ ಹಿಂತಿರುಗಿ ಬಂದಾಗ ಕೌರವಸೈನಿಕರ ಆ ಗರ್ಜನೆ ಈಗ ಕೇಳಿಬರುತ್ತಿಲ್ಲ.

ಅಕ್ಷೋಹಿಣ್ಯಸ್ತಥಾ ತಿಸ್ರೋ ಧಾರ್ತರಾಷ್ಟ್ರಸ್ಯ ಸಂಹತಾಃ ।
ಕ್ರುದ್ಧೇನ ನರಸಿಂಹೇನ ಭೀಮಸೇನೇನ ಪಾತಿತಾಃ ॥೪೪॥

ಕ್ರುದ್ಧನಾದರೆ ನರಸಿಂಹನಂತಾಗುವ ಭೀಮಸೇನ ಸುಸಂಘಟಿತವಾದ ಮೂರು ಅಕ್ಷೌಹಿಣಿ ಕೌರವಸೈನ್ಯವನ್ನು ಒಬ್ಬನೇ ಸಂಹರಿಸಿದ್ದಾನೆ.

ಸಂಜಯಃ

ಭೀಮಸೇನೇನ ತತ್ಕರ್ಮ ಕೃತಂ ದೃಷ್ಟ್ವಾ ಸುದುಷ್ಕರಮ್ ।
ಅರ್ಜುನೋ ವ್ಯಧಮತ್ ಶಿಷ್ಟಾನಹಿತಾನ್ನಿಶಿತೈಃ ಶರೈಃ ॥೪೯॥

ಸಂಜಯನು ನುಡಿದ— ಭೀಮಸೇನನು ಬಲುದುಷ್ಕರವಾದ ಸೈನ್ಯಸಂಹಾರ ಕಾರ್ಯವನ್ನು ಮಾಡಿದ್ದನ್ನು ನೋಡಿದ ಅರ್ಜುನನು ಸಂಶಪ್ತಕರಲ್ಲಿ ಉಳಿದ ಶತ್ರುಸೈನ್ಯಗಳನ್ನು ತೀಕ್ಷ್ಣವಾದ ಬಾಣಗಳಿಂದ ನಾಶಮಾಡಿದ.

ತೇ ವಧ್ಯಮಾನಾಃ ಸಮರೇ ಸಂಶಪ್ತಕಗಣಾಃ ಪ್ರಭೋ ।
ಶಕ್ರಸ್ಯಾತಿಥಿತಾಂ ಗತ್ವಾ ವಿಶೋಕಾ ಹ್ಯಭವನ್ ಮುದಾ ॥೫೦॥

ಸಂಶಪ್ತಕ ಗಣಗಳು ರಣದಲ್ಲಿ ಹತರಾಗಿ, ಮುದದಿಂದ ಇಂದ್ರನ ಅತಿಥಿಗಳಾಗಿ, ಶೋಕರಹಿತರಾದರು.

ಪಾರ್ಥಶ್ಚ ಪುರುಷವ್ಯಾಘ್ರಃ ಶರೈಃ ಸನ್ನತಪರ್ವಭಿಃ ।
ಜಘಾನ ಧಾರ್ತರಾಷ್ಟ್ರಸ್ಯ ಚತುರ್ವಿಧಬಲಾಂ ಚಮೂಮ್ ॥೫೧॥

ಪುರುಷೋತ್ತಮ ಅರ್ಜುನ ಡೊಂಕುಗಿಣ್ಣಿನ ಬಾಣಗಳಿಂದ ದುರ್ಯೋಧನನ ಚತುರಂಗ ಸೈನ್ಯವನ್ನು ಸಂಹರಿಸಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕೃಷ್ಣವಾಕ್ಯಂ ನಾಮ ಸಪ್ತಪಂಚಾಶೋऽಧ್ಯಾಯಃ ॥೫೭॥

❖

ಮಹಾಭಾರತತಾತ್ಪರ್ಯನಿರ್ಣಯ

ಅಥಾತ್ರ ರಾಜಾನಮಚಕ್ಷಮಾಣೋ
ಧನಂಜಯೋ ವಾಸುದೇವಪ್ರಣುನ್ನಃ ।
ಅಭ್ಯಾಯಯೌ ಪಾರ್ಷತಃ ಸ್ವಾಂ ತು ಸೇನಾಂ
ಕರ್ಣಾಹತಾಂ ವೀಕ್ಷ್ಯ ಕುರೂನಪೀಡಯತ್ ॥೮೮॥

ರಣರಂಗದಲ್ಲಿ ಯುಧಿಷ್ಠಿರನನ್ನು ಕಾಣದೆ ಅರ್ಜುನ ಶ್ರೀಕೃಷ್ಣನಿಂದ ಪ್ರೇರಿತನಾಗಿ ಶಿಬಿರದ ಕಡೆಗೆ ಹೊರಟ. ಧೃಷ್ಟದ್ಯುಮ್ನ ತನ್ನ ಸೇನೆಯನ್ನು ಕರ್ಣನು ನಾಶ ಮಾಡುವುದನ್ನು ಕಂಡು ಕೌರವರನ್ನು ಪೀಡಿಸಿದ.

ನ್ಯವಾರಯತ್ ಸಮಾಯಾಂತಂ ಕಪಿಪ್ರವರಕೇತನಮ್ ।
ದ್ರೌಣಿರ್ದುಃಶಾಸನಶ್ಚೈವ ಧೃಷ್ಟದ್ಯುಮ್ನಮವಾರಯತ್ ॥೮೯॥

ಅಶ್ವತ್ಥಾಮ ತನಗೆ ಎದುರಾಗಿ ಬರುತ್ತಿದ್ದ ಅರ್ಜುನನನ್ನು ತಡೆದ. ದುಃಶಾಸನ ಧೃಷ್ಟದ್ಯುಮ್ನನನ್ನು ತಡೆದ.

ಉಭಾವತಿರಥೌ ತೌ ತು ಶಸ್ತ್ರಾಸ್ತ್ರೈರಭ್ಯವರ್ಷತಾಮ್ ।
ದುಃಶಾಸನಃ ಪಾರ್ಷತಶ್ಚ ಕುರ್ವಂತೌ ಬಾಣಜಂ ತಮಃ ॥೯೦॥

ದುಃಶಾಸನ ಧೃಷ್ಟದ್ಯುಮ್ನರಿಬ್ಬರೂ ಅತಿರಥರು. ಅವರು ಪರಸ್ಪರ ಶಸ್ತ್ರಾಸ್ತ್ರಗಳ ಮಳೆಗರೆದುಕೊಂಡರು. ಬಾಣಗಳಿಂದ ಕತ್ತಲನ್ನು ಉಂಟುಮಾಡಿದರು.

ತತ್ರ ದುಃಶಾಸನೇನಾಜೌ ಸ್ತಂಭಿತೋ ದ್ರುಪದಾತ್ಮಜಃ ।
ಯತಮಾನೋऽಪಿ ನಿರ್ಯತ್ನಃ ಕೃತೋ ಯುದ್ಧೇ ನಿರಾಯುಧಃ ॥೯೧॥

ಆ ಯುದ್ಧದಲ್ಲಿ ಧೃಷ್ಟದ್ಯುಮ್ನ ದುಃಶಾಸನನಿಂದ ಸ್ತಂಭೀಭೂತನಾಗಿ ಮಾಡಲ್ಪಟ್ಟ. ಯತ್ನ ಮಾಡಿದರೂ ಯತ್ನವಿಲ್ಲದವನಾಗಿ ನಿರಾಯುಧನಾಗಿ ಮಾಡಲ್ಪಟ್ಟ.

❖

ಐವತ್ತೆಂಟನೆಯ ಅಧ್ಯಾಯ

ಕರ್ಣ–ಶಿಖಂಡಿ, ದುಃಶಾಸನ–ಧೃಷ್ಟದ್ಯುಮ್ನ, ನಕುಲ–ವೃಷಸೇನ, ಸಹದೇವ–ಉಲೂಕ, ಶಕುನಿ–ಸಾತ್ಯಕಿ, ಭೀಮ–ದುರ್ಯೋಧನ, ಕೃತವರ್ಮ–ಉತ್ತಮೌಜರ ಯುದ್ಧಗಳು. ಭೀಮನಿಂದ ಗಜಸೈನ್ಯದ ವಿನಾಶ.

ಧೃತರಾಷ್ಟ್ರಃ

ನಿವೃತ್ತೇ ಭೀಮಸೇನೇ ಚ ಪಾಂಡವೇ ಚ ಯುಧಿಷ್ಠಿರೇ ।
ವಧ್ಯಮಾನೇ ಬಲೇ ಚಾಪಿ ಮಾಮಕೇ ಪಾಂಡುಸೃಂಜಯೈಃ ॥೧॥

ದ್ರವಮಾಣೇ ಬಲೌಘೇ ಚ ನಿರಾನಂದೇ ಮುಹುರ್ಮುಹುಃ ।
ಕಿಮಕುರ್ವಂತ ಕುರವಸ್ತನ್ಮಮಾಚಕ್ಷ್ವ ಸಂಜಯ ॥೨॥

ಧೃತರಾಷ್ಟ್ರ ನುಡಿದ— ಭೀಮಸೇನ ಯುಧಿಷ್ಠಿರರು ಯುದ್ಧಕ್ಕೆ ಹಿಂದಿರುಗಿ ಬಂದಾಗ, ನನ್ನ ಸೈನ್ಯ ಸೃಂಜಯರಿಂದ ಹತವಾಗುವಾಗ, ನಿರುತ್ಸಾಹಗೊಂಡು ಪುನಃ ಪುನಃ ಪಲಾಯನ ಮಾಡುವಾಗ ಕುರುಗಳೇನು ಮಾಡಿದರು? ಅದನ್ನು ನನಗೆ ಹೇಳು.

ಸಂಜಯಃ

ದೃಷ್ಟ್ವಾ ಭೀಮಂ ಮಹಾಬಾಹುಂ ಸೂತಪುತ್ರಃ ಪ್ರತಾಪವಾನ್ ।
ಕ್ರೋಧರಕ್ತೇಕ್ಷಣೋ ರಾಜನ್ ಭೀಮಸೇನಮುಪಾದ್ರವತ್ ॥೩॥

ಸಂಜಯ ನುಡಿದ— ರಾಜನೆ, ಪ್ರತಾಪಶಾಲಿಯಾದ ಕರ್ಣನು ಮಹಾಬಾಹುವಾದ ಭೀಮನನ್ನು ನೋಡಿ ಕ್ರೋಧದಿಂದ ಕಣ್ಣು ಕೆಂಪು ಮಾಡಿಕೊಂಡು ಭೀಮಸೇನನ ಕಡೆಗೆ ಧಾವಿಸಿದ.

ತಾವಕಂ ಚ ಬಲಂ ದೃಷ್ಟ್ವಾ ಭೀಮಸೇನಾತ್ ಪರಾಙ್ಮುಖಮ್ ।
ಯತ್ನೇನ ಮಹತಾ ರಾಜನ್ ಪರ್ಯವಸ್ಥಾಪಯದ್ ಬಲೀ ॥೪॥

ರಾಜನೆ, ಭೀಮಸೇನನ ದೆಸೆಯಿಂದ ಪಲಾಯನ ಮಾಡುತ್ತಿದ್ದ ನಿನ್ನ ಸೈನ್ಯವನ್ನು ಬಲಿಷ್ಠನಾದ ಕರ್ಣನು ಮಹಾಪ್ರಯತ್ನದಿಂದ ತಡೆದು ನಿಲ್ಲಿಸಿದ.

ವ್ಯವಸ್ಥಾಪ್ಯ ಮಹಾಬಾಹುಸ್ತವ ಪುತ್ರಸ್ಯ ವಾಹಿನೀಮ್ ।
ಪ್ರತ್ಯುದ್ಯಯೌ ತದಾ ಕರ್ಣಃ ಪಾಂಡವಾನ್ ಯುದ್ಧದುರ್ಮದಾನ್ ॥೫॥

ಮಹಾಬಾಹು ಕರ್ಣನು ನಿನ್ನ ಮಗನ ಸೈನ್ಯವನ್ನು ಸರಿಯಾಗಿ ನಿಲ್ಲಿಸಿ ಯುದ್ಧದಲ್ಲಿ ಮದಿಸಿರುವ ಪಾಂಡವರ ಕಡೆಗೆ ಮುನ್ನುಗ್ಗಿ ಹೋದ.

ಪ್ರತ್ಯುದ್ಯಯುಸ್ತು ರಾಧೇಯಂ ಪಾಂಡವಾನಾಂ ಮಹಾರಥಾಃ ।
ಧುನ್ವಾನಾಃ ಕಾರ್ಮುಕಾನ್ಯಾಜೌ ವಿಕ್ಷಿಪಂತಶ್ಚ ಸಾಯಕಾನ್ ॥೬॥

ಪಾಂಡವರ ಮಹಾರಥರೂ ರಣದಲ್ಲಿ ಬಿಲ್ಲುಗಳನ್ನು ತೂಗಾಡಿಸುತ್ತ ಬಾಣಗಳನ್ನೆಸೆಯುತ್ತ ಕರ್ಣನ ಮುಂದೆ ನುಗ್ಗಿ ಬಂದರು.

ಭೀಮಸೇನಃ ಶಿನೇರ್ನಪ್ತಾ ಶಿಖಂಡೀ ಜನಮೇಜಯಃ ।
ಧೃಷ್ಟದ್ಯುಮ್ನಶ್ಚ ಬಲವಾನ್ ಸರ್ವೇ ಚಾಪಿ ಪ್ರಭದ್ರಕಾಃ ॥೭॥

ಜಿಘಾಂಸಂತೋ ನರವ್ಯಾಘ್ರಾಃ ಸಮಂತಾತ್ ತವ ವಾಹಿನೀಮ್ ।
ಅಭ್ಯದ್ರವಂತ ಸಂಕ್ರುದ್ಧಾಃ ಸಮರೇ ಜಿತಕಾಶಿನಃ ॥೮॥

ಭೀಮಸೇನ ಸಾತ್ಯಕಿ ಶಿಖಂಡಿ ಜನಮೇಜಯ ಬಲಿಷ್ಠನಾದ ಧೃಷ್ಟದ್ಯುಮ್ನ ಮತ್ತು ಎಲ್ಲ ಪ್ರಭದ್ರಕರು ರಣದಲ್ಲಿ ಜಯಶಾಲಿಗಳಾಗಿ ಮೆರೆಯುವವರು ಪುರುಷೋತ್ತಮರು ಬಹಳ ಕ್ರುದ್ಧರಾಗಿ ಎಲ್ಲ ಕಡೆ ನಿನ್ನ ಸೈನ್ಯವನ್ನು ವಧಿಸಲು ಬಯಸಿ ನುಗ್ಗಿ ಬಂದರು.

ತಥೈವ ತಾವಕಾ ರಾಜನ್ ಪಾಂಡವಾನಾಮನೀಕಿನೀಮ್ ।
ಅಭ್ಯದ್ರವಂತ ತ್ವರಿತಾ ಜಿಘಾಂಸಂತೋ ಮಹಾರಥಾಃ ॥೯॥

ಹಾಗೇ, ರಾಜನೆ, ನಿನ್ನ ಕಡೆಯ ಮಹಾರಥರೂ ವೇಗವಾಗಿ ಪಾಂಡವರ ಸೈನ್ಯವನ್ನು ಕೊಲ್ಲಲು ಬಯಸಿ ಮುನ್ನುಗ್ಗಿ ಹೋದರು.

ರಥನಾಗಾಶ್ವಕಲಿಲಂ ಪತ್ತಿಧ್ವಜಸಮಾಕುಲಮ್ ।
ಬಭೂವ ಪುರುಷವ್ಯಾಘ್ರ ಸೈನ್ಯಮದ್ಭುತದರ್ಶನಮ್ ॥೧೦॥

ಪುರುಷಶ್ರೇಷ್ಠನೆ, ಸೈನ್ಯವು ರಥ ಗಜ ಅಶ್ವ ಪದಾತಿ ಧ್ವಜಗಳಿಂದ ತುಂಬಿದ್ದು ನೋಡಲು ಅದ್ಭುತವಾಯಿತು.

ಶಿಖಂಡೀ ಚ ಯಯೌ ಕರ್ಣಂ ಧೃಷ್ಟದ್ಯುಮ್ನಃ ಸುತಂ ತವ ।
ದುಃಶಾಸನಂ ಮಹಾರಾಜ ಮಹತ್ಯಾ ಸೇನಯಾ ವೃತಮ್ ॥೧೧॥

ಮಹಾರಾಜ, ಶಿಖಂಡಿಯು ದೊಡ್ಡ ಸೈನ್ಯದಿಂದ ಯುಕ್ತನಾದ ಕರ್ಣನನ್ನು ಇದಿರಿಸಿದ. ಧೃಷ್ಟದ್ಯುಮ್ನನು ನಿನ್ನ ಮಗನಾದ ದುಃಶಾಸನನನ್ನು ಇದಿರಿಸಿದ.

ನಕುಲೋ ವೃಷಸೇನಂ ಚ ಚಿತ್ರಸೇನಂ ಯುಧಿಷ್ಠಿರಃ ।
ಉಲೂಕಂ ಸಮರೇ ರಾಜನ್ ಸಹದೇವಃ ಸಮಭ್ಯಯಾತ್ ॥೧೨॥

ರಾಜನೆ, ರಣದಲ್ಲಿ ನಕುಲನು ವೃಷಸೇನನನ್ನು ಯುಧಿಷ್ಠಿರನು ಚಿತ್ರಸೇನನನ್ನು ಸಹದೇವನು ಉಲೂಕನನ್ನು ಇದಿರಿಸಿದ.

ಸಾತ್ಯಕಿಃ ಶಕುನಿಂ ಚಾಪಿ ಭೀಮಸೇನಶ್ಚ ಕೌರವಾನ್ ।
ಅರ್ಜುನಂ ಚ ರಣೇ ಯತ್ತಂ ದ್ರೋಣಪುತ್ರೋ ಮಹಾರಥಃ ॥೧೩॥

ಮಹಾರಥನಾದ ಸಾತ್ಯಕಿಯು ಶಕುನಿಯನ್ನು ಭೀಮಸೇನನು ಕೌರವರನ್ನು ಅಶ್ವತ್ಥಾಮನು ರಣದಲ್ಲಿ ಯತ್ನಮಾಡುವ ಅರ್ಜುನನನ್ನು ಇದಿರಿಸಿದ.

ಯುಧಾಮನ್ಯುಂ ಮಹೇಷ್ವಾಸಂ ಗೌತಮೋಭ್ಯಪತದ್ ರಣೇ ।
ಕೃತವರ್ಮಾ ಚ ಬಲವಾನುತ್ತಮೌಜಸಮಾದ್ರವತ್ ॥೧೪॥

ಕೃಪನು ರಣದಲ್ಲಿ ಮಹಾಬಿಲ್ಲಾರನಾದ ಯುಧಾಮನ್ಯುವನ್ನು ಇದಿರಿಸಿದ. ಬಲಿಷ್ಠನಾದ ಕೃತವರ್ಮನು ಉತ್ತಮೌಜನನ್ನು ಇದಿರಿಸಿದ.

ಭೀಮಸೇನಃ ಕುರೂನ್ ಸರ್ವಾನ್ ಪುತ್ರಾಂಶ್ಚ ತವ ಮಾರಿಷ ।
ಸಹಾನೀಕಾನ್ ಮಹಾಬಾಹುರೇಕ ಏವಾಭ್ಯವಾರಯತ್ ॥೧೫॥

ರಾಜನೆ, ಕುರುಗಳನ್ನೂ ನಿನ್ನ ಎಲ್ಲ ಪುತ್ರರನ್ನೂ ಅವರ ಸೈನ್ಯಗಳೊಂದಿಗೆ ಮಹಾಬಾಹು ಭೀಮಸೇನನೊಬ್ಬನೆ ಆಕ್ರಮಿಸಿ ನಡೆದ.

ಶಿಖಂಡೀ ಚ ತತಃ ಕರ್ಣಂ ವಿಚರಂತಮಭೀತವತ್ ।
ಭೀಷ್ಮಹಂತಾ ಮಹಾರಾಜ ವಾರಯಾಮಾಸ ಪತ್ರಿಭಿಃ ॥೧೬॥

ಮಹಾರಾಜ, ನಿರ್ಭೀತಿಯಿಂದ ಸಂಚರಿಸುವ ಕರ್ಣನನ್ನು ಭೀಷ್ಮಮರಣಕ್ಕೆ ಕಾರಣನಾದ ಶಿಖಂಡಿಯು ಬಾಣಗಳಿಂದ ತಡೆದ.

ಪ್ರತಿರುದ್ಧಸ್ತತಃ ಕರ್ಣೋ ರೋಷಾತ್ ಪ್ರಸ್ಫುರಿತಾಧರಃ ।
ಶಿಖಂಡಿನಂ ತ್ರಿಭಿರ್ಬಾಣೈರ್ಭ್ರುವೋರ್ಮಧ್ಯೇ ವ್ಯತಾಡಯತ್ ॥೧೭॥

ಕರ್ಣನು ಶಿಖಂಡಿಯಿಂದ ತಡೆಯಲ್ಪಟ್ಟಾಗ ರೋಷದಿಂದ ತುಟಿ ಅದುರಿಸುತ್ತ ಶಿಖಂಡಿಯನ್ನು ಮೂರು ಬಾಣಗಳಿಂದ ಹುಬ್ಬುಗಳ ನಡುವೆ ಹೊಡೆದ.

ಧಾರಯಂಸ್ತು ಸ ತಾನ್ ಬಾಣಾನ್ ಶಿಖಂಡೀ ಬಹ್ವಶೋಭತ ।
ರಾಜತಃ ಪರ್ವತೋ ಯದ್ವತ್ತ್ರಿಭಿಃ ಶೃಂಗೈಃ ಸಮುಚ್ಛ್ರಿತೈಃ ॥೧೮॥

ಆ ಬಾಣಗಳನ್ನು ಧರಿಸಿ ಶಿಖಂಡಿಯು ಉನ್ನತವಾದ ಮೂರು ಶಿಖರಗಳಿಂದ ಶೋಭಿಸುವ ಬೆಳ್ಳಿಯ ಬೆಟ್ಟದಂತೆ ಶೋಭಿಸಿದ.

ಸೋಽತಿವಿದ್ಧೋ ಮಹೇಷ್ವಾಸಃ ಸೂತಪುತ್ರೇಣ ಸಂಯುಗೇ ।
ಕರ್ಣಂ ವಿವ್ಯಾಧ ಸಮರೇ ನವತ್ಯಾ ನಿಶಿತೈಃ ಶರೈಃ ॥೧೯॥

ಮಹಾಬಿಲ್ಲಾರ ಶಿಖಂಡಿಯು ಕರ್ಣನಿಂದ ರಣದಲ್ಲಿ ತಾಡಿತನಾಗಿ ತೀಕ್ಷ್ಣವಾದ ತೊಂಬತ್ತು ಬಾಣಗಳಿಂದ ರಣದಲ್ಲಿ ಕರ್ಣನನ್ನು ಹೊಡೆದ.

ತಸ್ಯ ಕರ್ಣೋ ಹಯಾನ್ ಹತ್ವಾ ಸಾರಥಿಂ ಚ ತ್ರಿಭಿಃ ಶರೈಃ ।
ಉನ್ಮಮಾಥ ಧ್ವಜಂ ಚಾಸ್ಯ ಕ್ಷುರಪ್ರೇಣ ಮಹಾರಥಃ ॥೨೦॥

ಮಹಾರಥನಾದ ಕರ್ಣನು ಶಿಖಂಡಿಯ ಕುದುರೆಗಳನ್ನೂ ಸಾರಥಿಯನ್ನೂ ಮೂರು ಬಾಣಗಳಿಂದ ಸಂಹರಿಸಿ ಒಂದು ಬಾಣದಿಂದ ಅವನ ಧ್ವಜವನ್ನು ಕಡಿದ.

ಹತಾಶ್ವಾತ್ತು ತತೋ ಯಾನಾದವಪ್ಲುತ್ಯ ಮಹಾರಥಃ ।
ಶಕ್ತಿಂ ಚಿಕ್ಷೇಪ ಕರ್ಣಾಯ ಸಂಕ್ರುದ್ಧಃ ಶತ್ರುತಾಪನಃ ॥೨೧॥

ಕುದುರೆಗಳು ಹತವಾದಾಗ ಶತ್ರುತಾಪಕನಾದ ಮಹಾರಥನಾದ ಶಿಖಂಡಿಯು ಬಲುಕ್ರುದ್ಧನಾಗಿ ರಥದಿಂದ ಕೆಳಗೆ ಹಾರಿ ಕರ್ಣನ ಮೇಲೆ ಶಕ್ತಿಯನ್ನು ಎಸೆದ.

ತಾಂ ಛಿತ್ತ್ವಾ ಸಮರೇ ಕರ್ಣಸ್ತ್ರಿಭಿರ್ಭಾರತ ಸಾಯಕೈಃ ।
ಶಿಖಂಡಿನಮಥಾವಿಧ್ಯನ್ನವಭಿರ್ನಿಶಿತೈಃ ಶರೈಃ ॥೨೨॥

ರಾಜನೆ, ಕರ್ಣನು ರಣದಲ್ಲಿ ಆ ಶಕ್ತಿಯನ್ನು ಮೂರು ಬಾಣಗಳಿಂದ ಕತ್ತರಿಸಿ, ತೀಕ್ಷ್ಣವಾದ ಒಂಬತ್ತು ಬಾಣಗಳಿಂದ ಶಿಖಂಡಿಯನ್ನು ಹೊಡೆದ.

ಕರ್ಣಚಾಪಚ್ಯುತಾನ್ ಬಾಣಾನ್ ವರ್ಜಯಂಸ್ತು ನರೋತ್ತಮಃ ।
ಅಪಯಾತಸ್ತತಸ್ತೂರ್ಣಂ ಶಿಖಂಡೀ ಜಯತಾಂ ವರಃ ॥೨೩॥

ಜಯಶಾಲಿಗಳಲ್ಲಿ ಶ್ರೇಷ್ಠನಾದ ಪುರುಷೋತ್ತಮನಾದ ಶಿಖಂಡಿ ಕರ್ಣನ ಬಿಲ್ಲಿನಿಂದ ಹೊರಡುವ ಬಾಣಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಬೇಗನೆ ಅಲ್ಲಿಂದ ದೂರ ಸರಿದ.

ತತಃ ಕರ್ಣೋ ಮಹಾರಾಜ ಪಾಂಡುಸೈನ್ಯಮಶಾತಯತ್ ।
ತೂಲರಾಶಿಂ ಸಮಾಸಾದ್ಯ ಯಥಾ ವಾಯುರ್ಮಹಾಜವಃ ॥೨೪॥

ಮಹಾರಾಜ, ಬಳಿಕ ಕರ್ಣನು, ಮಹಾವೇಗದಿಂದ ಬೀಸುವ ಗಾಳಿ ತನಗೆ ಸಿಕ್ಕಿದ ಹತ್ತಿಯ ರಾಶಿಯನ್ನು ಹಾರಿಸುವಂತೆ, ಪಾಂಡವಸೈನ್ಯವನ್ನು ಹೊಡೆದು ಓಡಿಸಿದ.

ಧೃಷ್ಟದ್ಯುಮ್ನೋ ಮಹಾರಾಜ ತವ ಪುತ್ರೇಣ ಪೀಡಿತಃ ।
ದುಃಶಾಸನಂ ತ್ರಿಭಿರ್ಬಾಣೈರಭ್ಯವಿಧ್ಯತ್ ಸ್ತನಾಂತರೇ ॥೨೫॥

ಮಹಾರಾಜ, ಧೃಷ್ಟದ್ಯುಮ್ನನು ನಿನ್ನ ಮಗ ದುಃಶಾಸನನಿಂದ ಪೀಡಿತನಾಗಿ ಅವನನ್ನು ಮೂರು ಬಾಣಗಳಿಂದ ಸ್ತನಗಳ ನಡುವೆ ಹೊಡೆದ.

ತಸ್ಯ ದುಃಶಾಸನೋ ಬಾಹುಂ ಸವ್ಯಂ ವಿವ್ಯಾಧ ಮಾರಿಷ ।
ಶಿತೇನ ರುಗ್ಮಪುಂಖೇನ ಭಲ್ಲೇನ ನತಪರ್ವಣಾ ॥೨೬॥

ರಾಜನೆ, ದುಃಶಾಸನನು ಡೊಂಕುಗಿಣ್ಣಿನ ಬಂಗಾರದ ಪುಕ್ಕವುಳ್ಳ ತೀಕ್ಷ್ಣವಾದ ಭಲ್ಲೆಯಿಂದ ಧೃಷ್ಟದ್ಯುಮ್ನನ ಎಡ ತೋಳಿಗೆ ಹೊಡೆದ.

ಧೃಷ್ಟದ್ಯುಮ್ನಸ್ತು ನಿರ್ವಿದ್ಧಃ ಶರಂ ಘೋರಮಮರ್ಷಣಃ ।
ದುಃಶಾಸನಾಯ ಸಂಕ್ರುದ್ಧಃ ಪ್ರೇಷಯಾಮಾಸ ಭಾರತ ॥೨೭॥

ರಾಜನೆ, ಸಹನೆ ಇಲ್ಲದ ಧೃಷ್ಟದ್ಯುಮ್ನ ಚೆನ್ನಾಗಿ ಹೊಡೆಸಿಕೊಂಡು ಬಹಳ ಕುಪಿತನಾಗಿ ದುಃಶಾಸನನ ಮೇಲೆ ಭಯಂಕರ ಬಾಣವನ್ನು ಎಸೆದ.

ಆಪತಂತಂ ಮಹಾವೇಗಂ ಧೃಷ್ಟದ್ಯುಮ್ನಸಮೀರಿತಮ್ ।
ಶರೈಶ್ಚಿಚ್ಛೇದ ಪುತ್ರಸ್ತೇ ತ್ರಿಭಿರೇವ ವಿಶಾಂಪತೇ ॥೨೮॥

ರಾಜನೆ, ಧೃಷ್ಟದ್ಯುಮ್ನನು ಎಸೆದ ಬಾಣವು ಮಹಾವೇಗದಿಂದ ತನ್ನ ಮೇಲೆ ಬೀಳುತ್ತಿದ್ದಂತೆ ನಿನ್ನ ಮಗನು ಮೂರು ಬಾಣಗಳಿಂದ ಕತ್ತರಿಸಿದ.

ಅಥಾಪರೈಃ ಸಪ್ತದಶೈರ್ಭಲ್ಲೈಃ ಕನಕಭೂಷಣೈಃ ।
ಧೃಷ್ಟದ್ಯುಮ್ನಂ ಸಮಾಸಾದ್ಯ ಬಾಹ್ವೋರುರಸಿ ಚಾರ್ದಯತ್ ॥೨೯॥

ಬಳಿಕ ಬಂಗಾರದಿಂದ ಅಲಂಕೃತವಾದ ಬೇರೆ ಹದಿನೇಳು ಭಲ್ಲೆಗಳಿಂದ ದುಃಶಾಸನನು ಧೃಷ್ಟದ್ಯುಮ್ನನನ್ನು ಆಕ್ರಮಿಸಿ ಎರಡು ತೋಳುಗಳಲ್ಲಿಯೂ ಎದೆಯಲ್ಲಿಯೂ ಪ್ರಹರಿಸಿದ.

ತತಃ ಸ ಪಾರ್ಷತಃ ಕ್ರುದ್ಧೋ ಧನುಶ್ಚಿಚ್ಛೇದ ಮಾರಿಷ ।
ಕ್ಷುರಪ್ರೇಣ ಸುತೀಕ್ಷ್ಣೇನ ತತ ಉಚ್ಚುಕ್ರುಶುರ್ಜನಾಃ ॥೩೦॥

ಅದರಿಂದ ರಾಜನೆ, ಕ್ರುದ್ಧನಾದ ಧೃಷ್ಟದ್ಯುಮ್ನನು ಬಲು ತೀಕ್ಷ್ಣವಾದ ಬಾಣ ದಿಂದ ದುಃಶಾಸನನ ಧನುಸ್ಸನ್ನು ಕಡಿದ. ಆಗ ಜನರು ಗಟ್ಟಿಯಾಗಿ ಕೂಗಿದರು.

ಅಥಾನ್ಯದ್ಧನುರಾದಾಯ ಪುತ್ರಸ್ತೇ ಭರತರ್ಷಭ ।
ಧೃಷ್ಟದ್ಯುಮ್ನಂ ಶರವ್ರಾತೈಃ ಸಮಂತಾತ್ ಪರ್ಯವಾರಯತ್ ॥೩೧॥

ರಾಜನೆ, ನಿನ್ನ ಮಗನು ಬೇರೆ ಧನುಸ್ಸನ್ನು ಎತ್ತಿಕೊಂಡು ಬಾಣಸಮೂಹ ಗಳಿಂದ ಧೃಷ್ಟದ್ಯುಮ್ನನನ್ನು ಎಲ್ಲ ಕಡೆಗಳಿಂದಲೂ ಆಚ್ಛಾದಿಸಿದ.

ತವ ಪುತ್ರಸ್ಯ ತೇ ದೃಷ್ಟ್ವಾ ವಿಕ್ರಮಂ ತಂ ಮಹಾತ್ಮನಃ ।
ವಿಸ್ಮಯಂತ ರಣೇ ಯೋಧಾಃ ಸಿದ್ಧಾಶ್ಚಾಪ್ಸರಸಾಂ ಗಣಾಃ ॥೩೨॥

ಮಹಾತ್ಮನಾದ ನಿನ್ನ ಮಗನ ಆ ಪರಾಕ್ರಮವನ್ನು ರಣದಲ್ಲಿ ಕಂಡು ಯೋಧರೂ ಸಿದ್ಧರೂ ಅಪ್ಸರೆಯರ ಸಮೂಹಗಳೂ ಅಚ್ಚರಿಗೊಂಡರು.

ತತಃ ಪ್ರವವೃತೇ ಯುದ್ಧಂ ತಾವಕಾನಾಂ ಪರೈಃ ಸಹ ।
ಘೋರೇ ಪ್ರಾಣಭೃತಾಂ ಕಾಲೇ ಘೋರರೂಪಂ ಪರಂತಪ ॥೩೩॥

ರಾಜನೆ, ಬಳಿಕ ನಿನ್ನವರಿಗೆ ಪರರೊಡನೆ, ಜೀವಿಗಳ ಘೋರ ವಿನಾಶಕಾಲದ ಘೋರರೂಪದ ಯುದ್ಧ ನಡೆಯಿತು.

ನಕುಲಂ ವೃಷಸೇನಸ್ತು ವಿದ್ಧ್ವಾ ಪಂಚಭಿರಾಯಸೈಃ ।
ಪಿತುಃ ಸಮೀಪೇ ತಿಷ್ಠಂತಂ ತ್ರಿಭಿರ್ಭೂಯೋಽಪ್ಯವಿಧ್ಯತ ॥೩೪॥

ವೃಷಸೇನನು ತಂದೆಯಾದ ಕರ್ಣನ ಸಮೀಪದಲ್ಲಿ ನಿಂತ ನಕುಲನನ್ನು ಐದು ಕಬ್ಬಿಣದ ಬಾಣಗಳಿಂದ ಹೊಡೆದು ಮತ್ತೂ ಮೂರು ಬಾಣಗಳಿಂದ ಹೊಡೆದ.

ನಕುಲಸ್ತು ತತಃ ಕ್ರುದ್ಧೋ ವೃಷಸೇನಂ ಸ್ಮಯನ್ನಿವ ।
ನಾರಾಚೇನ ಸುತೀಕ್ಷ್ಣೇನ ವಿವ್ಯಾಧ ಹೃದಯೇ ದೃಢಮ್ ॥೩೫॥

ನಕುಲನು ಅದಕ್ಕೆ ಕುಪಿತನಾಗಿ ನಗುತ್ತ ವೃಷಸೇನನನ್ನು ಎದೆಯಲ್ಲಿ ತೀಕ್ಷ್ಣವಾದ ಬಾಣದಿಂದ ದೃಢವಾಗಿ ಪ್ರಹರಿಸಿದ.

ಸೋಽತಿವಿದ್ಧೋ ಬಲವತಾ ಶತ್ರುಣಾ ಶತ್ರುಕರ್ಶನಃ ।
ಶತ್ರುಂ ವಿವ್ಯಾಧ ವಿಂಶತ್ಯಾ ಸ ಚ ತಂ ಪಂಚಭಿಃ ಶರೈಃ ॥೩೬॥

ಶತ್ರುನಾಶಕನಾದ ವೃಷಸೇನನು ಬಲಿಷ್ಠನಾದ ಶತ್ರುವಿನಿಂದ ಅತಿಯಾಗಿ ತಾಡಿತನಾಗಿ ಶತ್ರುವನ್ನು ಇಪ್ಪತ್ತು ಬಾಣಗಳಿಂದ ಹೊಡೆದ. ಅವನೂ ಐದು ಬಾಣಗಳಿಂದ ವೃಷಸೇನನನ್ನು ಹೊಡೆದ.

ತತಃ ಶರಸಹಸ್ರೇಣ ತಾವುಭೌ ಪುರುಷರ್ಷಭೌ ।
ಅನ್ಯೋನ್ಯಮಾಚ್ಛಾದಯತಾಮಥಾಭಜ್ಯತ ಭಾರತೀ ॥೩೭॥

ಆ ಪುರುಷಶ್ರೇಷ್ಠರಿಬ್ಬರು ಸಾವಿರಾರು ಬಾಣಗಳಿಂದ ಪರಸ್ಪರ ಆಚ್ಛಾದನ ಮಾಡಿದರು. ಆಗ ಕೌರವಸೈನ್ಯವು ವೃಷಸೇನನನ್ನು ಕಾಣದಿದ್ದರಿಂದ ಭಗ್ನವಾಯಿತು. ಪಲಾಯನ ಮಾಡಿತು.

ದೃಷ್ಟ್ವಾ ತು ಪ್ರದ್ರುತಾಂ ಸೇನಾಂ ಧಾರ್ತರಾಷ್ಟ್ರಸ್ಯ ಸೂತಜಃ ।
ನಿವಾರಯಾಮಾಸ ಬಲಾದನುಸೃತ್ಯ ವಿಶಾಂಪತೇ ॥೩೮॥

ರಾಜನೆ, ಕೌರವಸೈನ್ಯವು ಪಲಾಯನ ಮಾಡುವುದನ್ನು ಕಂಡು ಕರ್ಣನು ಅದರ ಹಿಂದೆ ಹೋಗಿ ಬಲಾತ್ಕಾರದಿಂದ ಅದನ್ನು ತಡೆದು ನಿಲ್ಲಿಸಿದ.

ನಿವೃತ್ತೇ ತು ತತಃ ಕರ್ಣೇ ನಕುಲಃ ಕೌರವಾನ್ ಯಯೌ ॥೩೯॥

ಹೀಗೆ ಕರ್ಣನು ಪಾಂಡವಸೈನ್ಯದಿಂದ ಆಚೆಗೆ ಹೊರಟುಹೋದಾಗ ನಕುಲನು ಕೌರವಸೈನ್ಯದ ಕಡೆಗೆ ನುಗ್ಗಿದ.

ಕರ್ಣಪುತ್ರಸ್ತು ಸಮರೇ ಹಿತ್ವಾ ನಕುಲಮೇವ ತು ।
ಜುಗೋಪ ಚಕ್ರಂ ತ್ವರಿತಂ ರಾಧೇಯಸ್ಯೈವ ಮಾರಿಷ ॥೪೦॥

ಕರ್ಣಪುತ್ರ ವೃಷಸೇನನು ರಣದಲ್ಲಿ ನಕುಲನನ್ನು ಬಿಟ್ಟು ಬೇಗನೆ ಕರ್ಣನ ರಥಚಕ್ರದ ರಕ್ಷಣೆಯಲ್ಲಿಯೆ ತೊಡಗಿದ.

ಉಲೂಕಸ್ತು ರಣೇ ಕ್ರುದ್ಧಃ ಸಹದೇವೇನ ವಾರಿತಃ ।
ತಸ್ಯಾಶ್ವಾಂಶ್ಚತುರೋ ಹತ್ವಾ ಸಹದೇವಃ ಪ್ರತಾಪವಾನ್ ॥೪೧॥
ಸಾರಥಿಂ ಪ್ರೇಷಯಾಮಾಸ ಯಮಸ್ಯ ಸದನಂ ಪ್ರತಿ ॥೪೨॥

ಉಲೂಕನು ರಣದಲ್ಲಿ ಕ್ರುದ್ಧನಾಗಿ ಸಹದೇವನನ್ನು ಇದಿರಿಸಿ ಅವನಿಂದ ತಡೆಯಲ್ಪಟ್ಟ ಪ್ರತಾಪಶಾಲಿಯಾದ ಸಹದೇವನು ಉಲೂಕನ ನಾಲ್ಕು ಕುದುರೆಗಳನ್ನು ಕೊಂದು ಸಾರಥಿಯನ್ನೂ ಯಮಸದನಕ್ಕೆ ಅಟ್ಟಿದ.

ಉಲೂಕಸ್ತು ತತೋ ಯಾನಾದವಪ್ಲುತ್ಯ ವಿಶಾಂಪತೇ ।
ತ್ರಿಗರ್ತಾನಾಂ ಬಲಂ ಪೂರ್ಣಂ ಜಗಾಮ ಪಿತೃನಂದನಃ ॥೪೩॥

ರಾಜನೆ, ತಂದೆಗೆ ಆನಂದನೀಡುವ ಉಲೂಕನು ಆಗ ರಥದಿಂದ ಕೆಳಗೆ ಹಾರಿ ತ್ರಿಗರ್ತರ ತುಂಬಿದ ಸೈನ್ಯದೊಳಗೆ ಸೇರಿಕೊಂಡ.

ಸಾತ್ಯಕಿಃ ಶಕುನಿಂ ವಿದ್ಧ್ವಾ ವಿಂಶತ್ಯಾ ನಿಶಿತೈಃ ಶರೈಃ ।
ಧ್ವಜಂ ಚಿಚ್ಛೇದ ಭಲ್ಲೇನ ಸೌಬಲಸ್ಯ ಹಸನ್ನಿವ ॥೪೪॥

ಸಾತ್ಯಕಿಯು ಶಕುನಿಯನ್ನು ತೀಕ್ಷ್ಣವಾದ ಇಪ್ಪತ್ತು ಬಾಣಗಳಿಂದ ಹೊಡೆದು ನಗುತ್ತ ಅವನ ಧ್ವಜವನ್ನು ಭಲ್ಲೆಯಿಂದ ಕಡಿದ.

ಸೌಬಲಸ್ತಸ್ಯ ಸಮರೇ ಕ್ರುದ್ಧೋ ರಾಜನ್ ಪ್ರತಾಪವಾನ್ ।
ವಿದಾರ್ಯ ಕವಚಂ ಭೂಯೋ ಧ್ವಜಂ ಚಿಚ್ಛೇದ ಕಾಂಚನಮ್ ॥೪೫॥

ರಾಜನೆ, ಪ್ರತಾಪಶಾಲಿಯಾದ ಶಕುನಿ ರಣದಲ್ಲಿ ಕ್ರುದ್ಧನಾಗಿ ಸಾತ್ಯಕಿಯ ಕವಚವನ್ನು ಸೀಳಿ ಪುನಃ ಅವನ ಬಂಗಾರದ ಧ್ವಜವನ್ನೂ ಕತ್ತರಿಸಿದ.

ಅಥೈನಂ ನಿಶಿತೈರ್ಬಾಣೈಃ ಸಾತ್ಯಕಿಃ ಪ್ರತ್ಯವಿಧ್ಯತ ।
ಸಾರಥಿಂ ಚ ಮಹಾರಾಜ ತ್ರಿಭಿರೇವ ಸಮಾರ್ದಯತ್ ॥೪೬॥

ಅಥಾಸ್ಯ ವಾಹಾಂಸ್ತ್ವರಿತಃ ಶರೈರ್ನಿನ್ಯೇ ಯಮಕ್ಷಯಮ್ ॥೪೭॥

ಮಹಾರಾಜ, ಸಾತ್ಯಕಿಯೂ ಹರಿತವಾದ ಬಾಣಗಳಿಂದ ಶಕುನಿಯನ್ನು ಪ್ರತಿಯಾಗಿ ಹೊಡೆದ. ಸಾರಥಿಯನ್ನೂ ಮೂರುಬಾಣಗಳಿಂದ ಗಾಯಗೊಳಿಸಿದ. ಬೇಗನೆ ಅವನ ಕುದುರೆಗಳನ್ನು ಸಂಹರಿಸಿದ.

ತತೋಽವಪ್ಲುತ್ಯ ಸಹಸಾ ಶಕುನಿರ್ಭರತರ್ಷಭ ।
ಆರುರೋಹ ರಥಂ ತೂರ್ಣಮುಲೂಕಸ್ಯ ಮಹಾರಥಃ ॥೪೮॥

ರಾಜನೆ, ಆಗ ಮಹಾರಥನಾದ ಶಕುನಿ ರಥದಿಂದ ಕೆಳಗೆ ಹಾರಿ ಬೇಗನೆ ಉಲೂಕನ ರಥವನ್ನು ಏರಿದ.

ಅಪೋವಾಹಾಥ ಶೀಘ್ರಂ ಸ ಶೈನೇಯಾದ್ ಯುದ್ಧಶಾಲಿನಃ ॥೪೯॥

ಯುದ್ಧದಲ್ಲಿ ಶೋಭಿಸುವ ಸಾತ್ಯಕಿಯ ಇದಿರಿನಿಂದ ಉಲೂಕನು ಆಚೆಗೆ ಹೊರಟುಹೋದ.

ಸಾತ್ಯಕಿಸ್ತು ರಣೇ ರಾಜನ್ ತಾವಕಾನಾಮನೀಕಿನೀಮ್ ।
ಅಭಿದುದ್ರಾವ ವೇಗೇನ ತತೋಽನೀಕಮಭಿದ್ಯತ ॥೫೦॥

ರಾಜನೆ, ಸಾತ್ಯಕಿಯು ನಿನ್ನವರ ಸೈನ್ಯವನ್ನು ವೇಗದಿಂದ ನುಗ್ಗಿದ. ಆಗ ಸೈನ್ಯವು ಭಗ್ನವಾಗಿ ಪಲಾಯನ ಮಾಡಿತು.

ಶೈನೇಯಶರನುನ್ನಂ ತು ತತಃ ಸೈನ್ಯಂ ವಿಶಾಂಪತೇ ।
ಭೇಜೇ ದಶ ದಿಶಸ್ತೂರ್ಣಂ ನ್ಯಪತಚ್ಚ ಗತಾಸುವತ್ ॥೫೧॥

ರಾಜನೆ, ಸಾತ್ಯಕಿಯ ಬಾಣಗಳಿಂದ ಪೀಡಿತವಾದ ನಿನ್ನ ಸೈನ್ಯವು ಬೇಗನೆ ಹತ್ತು ದಿಕ್ಕುಗಳಿಗೆ ಹೋಯಿತು. ನಿರ್ಜೀವವಾದಂತೆ ನೆಲದ ಮೇಲೆ ಬಿದ್ದಿತು.

ಭೀಮಸೇನಂ ತವ ಸುತೋ ವಾರಯಾಮಾಸ ಸಂಯುಗೇ ।
ತಂ ತು ಭೀಮೋ ಮುಹೂರ್ತೇನ ವ್ಯಶ್ವಸೂತರಥಧ್ವಜಮ್ ॥೫೨॥
ಚಕ್ರೇ ಲೋಕೇಶ್ವರಂ ತತ್ರ ತೇನಾತುಷ್ಯಂತ ಚಾರಣಾಃ ॥೫೩॥

ಭೀಮಸೇನನನ್ನು ನಿನ್ನ ಮಗ ದುರ್ಯೋಧನನು ರಣದಲ್ಲಿ ತಡೆದ. ಆದರೆ ಮುಹೂರ್ತಮಾತ್ರದಲ್ಲಿ ಭೀಮನು ಲೋಕೇಶ್ವರನಾದ ಅವನನ್ನು ಅಶ್ವ ಸೂತ ಛತ್ರ ಧ್ವಜ ರಹಿತನನ್ನಾಗಿ ಮಾಡಿದ. ಅದರಿಂದ ಚಾರಣರು ನೋಡಿ ಸಂತೋಷ ಪಟ್ಟರು.

ತತೋಽಪಾಯಾನ್ನೃಪಸ್ತತ್ರ ಭೀಮಸೇನಸ್ಯ ಗೋಚರಾತ್ ।
ಕುರುಸೈನ್ಯಂ ತತಃ ಸರ್ವಂ ಭೀಮಸೇನಮುಪಾದ್ರವತ್ ॥೫೪॥
ತತ್ರ ರಾವೋ ಮಹಾನಾಸೀದ್ ಭೀಮಮೇಕಂ ಜಿಘಾಂಸತಾಮ್ ॥೫೫॥

ದುರ್ಯೋಧನನು ಆಗ ಭೀಮಸೇನನ ಸಮ್ಮುಖದಿಂದ ಪಲಾಯನ ಮಾಡಿದ. ಬಳಿಕ ಕೌರವಸೈನ್ಯವಿಡೀ ಭೀಮಸೇನನನ್ನು ಆಕ್ರಮಿಸಿತು. ಏಕಾಕಿಯಾದ ಭೀಮನನ್ನು ಕೊಲ್ಲಲು ಬಯಸಿದ ಯೋಧರು ದೊಡ್ಡ ಗರ್ಜನೆ ಮಾಡಿದರು.

ಯುಧಾಮನ್ಯುಃ ಕೃಪಂ ವಿದ್ಧ್ವಾ ಧನುರಸ್ಯಾಶು ಚಿಚ್ಛಿದೇ ।
ಅಥಾನ್ಯದ್ಧನುರಾದಾಯ ಕೃಪಃ ಶಸ್ತ್ರಭೃತಾಂ ವರಃ ॥೫೬॥
ಯುಧಾಮನ್ಯೋರ್ಧ್ವಜಂ ಸೂತಂ ಛತ್ರಂ ಚಾಪಾತಯತ್ ಕ್ಷಿತೌ ।
ತತೋಽಪಾಯಾದ್ ರಥೇನೈವ ಯುಧಾಮನ್ಯುರ್ಮಹಾರಥಃ ॥೫೭॥

ಯುಧಾಮನ್ಯುವು ಕೃಪನನ್ನು ಬಾಣದಿಂದ ಹೊಡೆದು ಬೇಗನೆ ಅವನ ಬಿಲ್ಲನ್ನೂ ಕಡಿದ. ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಕೃಪನು ಬೇರೆ ಬಿಲ್ಲನ್ನೆತ್ತಿಕೊಂಡು ಯುಧಾಮನ್ಯುವಿನ ಧ್ವಜ ಸಾರಥಿ ಛತ್ರಗಳನ್ನು ನೆಲದಲ್ಲಿ ಕೆಡವಿದ. ಆಗ ಮಹಾರಥನಾದ ಯುಧಾಮನ್ಯು ರಥದಿಂದಲೆ ಪಲಾಯನಗೈದ.

ಉತ್ತಮೌಜಾಸ್ತು ಹಾರ್ದಿಕ್ಯಂ ಶರೈರ್ಭೀಮಪರಾಕ್ರಮಮ್ ।
ಛಾದಯಾಮಾಸ ಸಹಸಾ ಮೇಘೋ ವೃಷ್ಟ್ಯೇವ ಪರ್ವತಮ್ ॥೫೮॥

ಉತ್ತಮೌಜನು ಭಯಂಕರ ಪರಾಕ್ರಮಿಯಾದ ಕೃತವರ್ಮನನ್ನು ಮೋಡವು ಮಳೆಯಿಂದ ಬೆಟ್ಟವನ್ನು ಮುಚ್ಚುವಂತೆ, ಬೇಗನೆ ಬಾಣಗಳಿಂದ ಮುಚ್ಚಿದ.

ತದ್ಯುದ್ಧಂ ಸುಮಹಚ್ಚಾಸೀದ್ ಘೋರರೂಪಂ ಪರಂತಪ ।
ಯಾದೃಶಂ ನ ಮಯಾ ಯುದ್ಧಂ ದೃಷ್ಟಪೂರ್ವಂ ವಿಶಾಂಪತೇ ॥೫೯॥

ರಾಜನೆ, ಅವರ ಆ ಯುದ್ಧವು ದೊಡ್ಡದಾಗಿತ್ತು. ಭಯಂಕರಸ್ವರೂಪದ್ದಾಗಿತ್ತು. ಅಂಥ ಯುದ್ಧವನ್ನು ನಾನು ಹಿಂದೆ ಕಂಡೇ ಇರಲಿಲ್ಲ.

ಕೃತವರ್ಮಾ ತತೋ ರಾಜನ್ನುತ್ತಮೌಜಸಮಾಹವೇ ।
ಹೃದಿ ವಿವ್ಯಾಧ ಸ ತದಾ ರಥೋಪಸ್ಥ ಉಪಾವಿಶತ್ ॥೬೦॥

ರಾಜನೆ, ಕೃತವರ್ಮನು ರಣದಲ್ಲಿ ಉತ್ತಮೌಜನನ್ನು ಎದೆಯಲ್ಲಿ ಹೊಡೆದ. ಆಗ ಆತನು ರಥದ ಹಿಂಬಾಗದಲ್ಲಿ ಕುಳಿತುಕೊಂಡ.

ಸಾರಥಿಸ್ತಮಪೋವಾಹ ರಥೇನ ರಥಿನಾಂ ವರಮ್ ।
ತತಸ್ತು ಸತ್ವತೋ ರಾಜನ್ ಪಾಂಡುಸೈನ್ಯಮುಪಾದ್ರವತ್ ॥೬೧॥

ರಥಿಕರಲ್ಲಿ ಶ್ರೇಷ್ಠನಾದ ಉತ್ತಮೌಜನನ್ನು ಸಾರಥಿಯು ರಥದಿಂದ ದೂರಕ್ಕೆ ಒಯ್ದ. ಬಳಿಕ, ರಾಜನೆ, ಕೃತವರ್ಮನು ಪಾಂಡವಸೈನ್ಯವನ್ನು ಆಕ್ರಮಿಸಿದ.

ದುಃಶಾಸನಃ ಸೌಬಲಶ್ಚ ಗಜಾನೀಕೇನ ಪಾಂಡವಮ್ ।
ಮಹತಾ ಪರಿವಾಯ್ಯೈವ ಕ್ಷುರಪ್ರೈರಭ್ಯತಾಡಯತ್ ॥೬೨॥

ದುಃಶಾಸನ ಮತ್ತು ಶಕುನಿಗಳು ದೊಡ್ಡ ಗಜಸೈನ್ಯದಿಂದೊಡಗೂಡಿ ಭೀಮನನ್ನು ಬಾಣಗಳಿಂದ ಹೊಡೆದರು.

ತತೋ ಭೀಮಃ ಶರಶತೈರ್ದುರ್ಯೋಧನಮಮರ್ಷಣಮ್ ।
ವಿಮುಖೀಕೃತ್ಯ ತರಸಾ ಗಜಾನೀಕಮುಪಾದ್ರವತ್ ॥೬೩॥

ನೂರಾರು ಬಾಣಗಳಿಂದ ಅಸಹನೆವುಳ್ಳ ದುರ್ಯೋಧನನನ್ನು ಪಲಾಯನ ಗೈಯುವಂತೆ ಮಾಡಿದ್ದ ಭೀಮನು, ಬಳಿಕ ವೇಗದಿಂದ ಗಜಸೈನ್ಯವನ್ನೇ ಆಕ್ರಮಿಸಿದ.

ತಮಾಪತನ್ತಂ ಸಂಪ್ರೇಕ್ಷ್ಯ ಗಜಾನೀಕಂ ವೃಕೋದರಃ ॥೬೪॥

ಗಜೈರ್ಗಜಾನಭ್ಯಹನದ್ ವಜ್ರೀಣೇಂದ್ರ ಇವಾಸುರಾನ್ ।
ಶಲಭಾನಿವ ನಾಗಾಂಸ್ತಾನ್ ಅರ್ದಯಾಮಾಸ ಪಾಂಡವಃ ॥೬೫॥

ತನ್ನ ಮೇಲೆ ಎರಗುತ್ತಿರುವ ಗಜಸೈನ್ಯವನ್ನು ನೋಡಿದಮಾತ್ರಕ್ಕೆ ವಜ್ರಾಯುಧ ದಿಂದ ಇಂದ್ರನು ಅಸುರರನ್ನು ಸಂಹರಿಸುವಂತೆ ಗಜಗಳಿಂದಲೆ ಗಜಗಳನ್ನು ಭೀಮನು ಸಂಹರಿಸಿದ. ತನ್ನ ಬಲದ ಮುಂದೆ ಮಿಡತೆಗಳಂತಿದ್ದ ಆನೆಗಳನ್ನು ಹೀಗೆ ಭೀಮನು ಸಂಹರಿಸಿದ.

ತತೋऽಂತರಿಕ್ಷಂ ಬಾಣೌಘೈಃ ಶಲಭೈರಿವ ಪಾದಪಂ ।
ಛಾದಯಾಮಾಸ ಸಮರೇ ಗಜಾನ್ನಿಘ್ನನ್ ವೃಕೋದರಃ ॥೬೬॥

ಮಿಡತೆಗಳು ಮರವನ್ನು ಮುಚ್ಚುವಂತೆ ಆಕಾಶವನ್ನು ಮುಚ್ಚುವ ಬಾಣಸಮೂಹಗಳಿಂದಲೂ ಆನೆಗಳನ್ನು ಭೀಮನು ಸಂಹರಿಸಿದ.

ತತಃ ಕುಂಜರಯೂಥಾನಿ ಸಮೇತಾನಿ ಸಹಸ್ರಶಃ ।
ವ್ಯಧಮತ್ ತರಸಾ ಭೀಮೋ ಮೇಘಸಂಘಾನಿವಾನಿಲಃ ॥೬೭॥

ಸಾವಿರಾರು ಸಂಖ್ಯೆಯಲ್ಲಿ ಒಂದುಗೂಡಿದ ಗಜಸಮೂಹಗಳನ್ನು ಭೀಮ ವೇಗದಿಂದ ಬಿರುಗಾಳಿಯು ಮೋಡಸಮೂಹಗಳನ್ನು ನಾಶಮಾಡುವಂತೆ, ನಾಶಪಡಿಸಿದ.

ಸುವರ್ಣಜಾಲಾಪಿಹಿತಾ ಮಣಿಜಾಲೈಶ್ಚ ಕುಂಜರಾಃ ।
ರೇಜುರಭ್ಯಧಿಕಂ ಸಂಖೇ ವಿದ್ಯುತ್ವಂತ ಇವಾಂಬುದಾಃ ॥೬೮॥

ಸುವರ್ಣಹಾರ, ಮಣಿಹಾರಗಳಿಂದ ಅಲಂಕೃತವಾದ ಆನೆಗಳು ಮಿಂಚು ಗಳಿಂದ ಯುಕ್ತವಾದ ಮೋಡಗಳಂತೆ ರಣರಂಗದಲ್ಲಿ ಬಹಳವಾಗಿ ಕಂಗೊಳಿಸು ತ್ತಿದ್ದವು.

ತೇ ವಧ್ಯಮಾನಾ ಭೀಮೇನ ಗಜಾ ರಾಜನ್ ವಿದುದ್ರುವುಃ ।
ಕೇಚಿದ್ ವಿಭಿನ್ನಹೃದಯಾಃ ಕುಂಜರಾ ನ್ಯಪತನ್ ಭುವಿ ॥೬೯॥

ರಾಜನೆ, ಆ ಗಜಗಳನ್ನು ಭೀಮನು ಹೊಡೆದಾಗ ಅವು ಓಡಿಹೋದುವು. ಕೆಲವು ಆನೆಗಳು ಭಯದಿಂದ ಎದೆ ಒಡೆದು ನೆಲದ ಮೇಲೆ ಒರಗಿದುವು.

ಪತಿತೈರ್ನಿಪತದ್ಭಿಶ್ಚ ಗಜೈರ್ಹೇಮವಿಭೂಷಿತೈಃ ।
ಅಶೋಭತ ಮಹೀ ತತ್ರ ವಿಶೀರ್ಣೈರಿವ ಪರ್ವತೈಃ ॥೭೦॥

ಬಂಗಾರದಿಂದ ಅಲಂಕೃತವಾದ ಆನೆಗಳು ಬಿದ್ದಾಗಲೂ ಬೀಳುವಾಗಲೂ ರಣಭೂಮಿ ಜರಿದು ಬೀಳುವ ಪರ್ವತ ಶಿಖರಗಳಿಂದ ಭೂಮಿ ಶೋಭಿಸುವಂತೆ ಶೋಭಿಸಿತು.

ದೀಪ್ತಾಭರಣವದ್ಭಿಶ್ಚ ಪತಿತೈರ್ಗಜಯೋಧಿಭಿಃ ।
ರರಾಜ ಭೂಮಿಃ ಪತಿತೈಃ ಕ್ಷೀಣಪುಣ್ಯೈರಿವಾಮರೈಃ ॥೭೧॥

ಹೊಳೆಯುವ ಆಭರಣಗಳಿಂದ ಅಲಂಕೃತರಾದ ಗಜಯೋಧರು ಹತರಾಗಿ ಬಿದ್ದಾಗ, ಪುಣ್ಯಕ್ಷಯದಿಂದ ಸ್ವರ್ಗವಾಸಿಗಳು ಬಿದ್ದಂತೇ ಭೂಮಿ ಶೋಭಿಸಿತು.

ತತೋ ಭಿನ್ನಕಟಾ ನಾಗಾ ಭಿನ್ನಕುಮ್ಭಕರಾಸ್ತಥಾ ।
ದುದ್ರುವುಃ ಶತಶಃ ಸಂಖೇ ಭೀಮಸೇನಶರಾಹತಾಃ ॥೭೨॥

ಭೀಮನ ಬಾಣಗಳಿಂದ ಸೀಳಿದ ಕಪೋಲ ಗಂಡಸ್ಥಳ ಸೊಂಡಿಲುಗಳುಳ್ಳ ನೂರಾರು ಗಜಗಳು ರಣರಂಗದಲ್ಲಿ ಧಾವಿಸಿದುವು.

ಕೇಚಿದ್ ವಮಂತೋ ರುಧಿರಂ ಭಯಾರ್ತಾಃ ಪರ್ವತೋಪಮಾಃ ।
ವ್ಯದ್ರವನ್ ಶರವಿದ್ಧಾಂಗಾ ಧಾತುಚಿತ್ರಾ ಇವಾಚಲಾಃ ॥೭೩॥

ಬೆಟ್ಟದ ಗಾತ್ರದ ಆನೆಗಳು ಬಾಣಗಳ ಹೊಡೆತದಿಂದ ಭಯವಿಹ್ವಲವಾಗಿ ಓಡಿದುವು. ರಕ್ತ ಕಾರುತ್ತ ಕೆಲವು ಧಾತುಗಳಿಂದ ಚಿತ್ರಿತವಾದ ಬೆಟ್ಟಗಳಂತೆ ಕಂಡುಬಂದುವು.

ಮಹಾಭುಜಗಸಂಕಾಶೌ ಚಂದನಾಗರುರೂಷಿತೌ ।
ಅಪಶ್ಯಂ ಭೀಮಸೇನಸ್ಯ ಧನುರ್ವಿಕ್ಷಿಪತೋ ಭುಜೌ ॥೭೪॥

ಭೀಮನ ಬಾಹುಗಳು ಹೆಬ್ಬಾವುಗಳಂತೆ ನೀಳವಾಗಿದ್ದು ಚಂದನ ಅಗರುಗಳಿಂದ ಲೇಪಿತವಾಗಿದ್ದು ಅವು ಧನುಸ್ಸನ್ನು ಸೆಳೆಯುತ್ತಿದ್ದುದನ್ನು ನಾನು ಕಂಡಿದ್ದೇನೆ.

ತಸ್ಯ ಜ್ಯಾತಲನಿಷ್ಪೋಷಂ ಶ್ರುತ್ವಾಶನಿಸಮಸ್ವನಮ್ ।
ವಿಮುಂಚಂತಃ ಶಕೃನ್ಮೂತ್ರಂ ಗಜಾಃ ಪ್ರಾದುದ್ರುವುರ್ಭೃಶಮ್ ॥೭೫॥

ಗುಡುಗಿನಂತಿರುವ ಭೀಮನ ಧನುಷ್ಟಂಕಾರವನ್ನು ಕೇಳಿಯೇ ಗಜಗಳು ಬಹಳ ವಾಗಿ ಮಲ-ಮೂತ್ರಗಳನ್ನು ಸುರಿಸುತ್ತ ಓಡಿಹೋದುವು.

ಭೀಮಸೇನಸ್ಯ ತತ್ಕರ್ಮ ರಾಜನ್ನೇಕಸ್ಯ ನಿರ್ಬಭೌ ।
ನಿಘ್ನತಃ ಸರ್ವಭೂತಾನಿ ರುದ್ರಸ್ಯೇವ ಚ ನಿರ್ಬಭೌ ॥೭೬॥

ರಾಜನೆ, ಭೀಮಸೇನನು ಒಬ್ಬನೇ ಮಾಡಬಲ್ಲ ಆ ಯುದ್ಧ ಅವನಿಗೇ ಒಪ್ಪುವಂತಿತ್ತು. ಆ ಕರ್ಮ ಸರ್ವಪ್ರಾಣಿಗಳನ್ನು ಸಂಹರಿಸುವ ರುದ್ರನ ಲಯಕರ್ಮ ದಂತೇ ಶೋಭಿಸಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ಅಷ್ಟಪಂಚಾಶೋऽಧ್ಯಾಯಃ ॥೫೮॥

❖

ಐವತ್ತೊಂಬತ್ತನೆಯ ಅಧ್ಯಾಯ

ಸಹದೇವ ದುರ್ಯೋಧನರ ಯುದ್ಧ.
ಪುನಃ ಯುಧಿಷ್ಠಿರನನ್ನು ಸೆರೆಹಿಡಿವ ಯತ್ನ ವಿಫಲವಾಯಿತು

ಸಂಜಯಃ

ತತಃ ಶ್ವೇತಾಶ್ವಸಂಯುಕ್ತೇ ನಾರಾಯಣಸಮಾಹಿತೇ ।
ತಿಷ್ಠನ್ ರಥವರೇ ಶ್ರೀಮಾನರ್ಜುನಃ ಸಮಪದ್ಯತ ॥೧॥

ಸಂಜಯನು ನುಡಿದ— ಬಿಳಿಕುದುರೆಗಳನ್ನು ಹೂಡಿರುವ, ಶ್ರೀಕೃಷ್ಣನು ನಡೆಸುತ್ತಿರುವ, ಶ್ರೇಷ್ಠರಥದಲ್ಲಿ ನಿಂತು ಶ್ರೀಮಾನ್ ಅರ್ಜುನ ರಣಭೂಮಿಗೆ ಆಗಮಿಸಿದ.

ತದ್ಬಲಂ ನೃಪತಿಶ್ರೇಷ್ಠ ತಾವಕಂ ವಿಜಯೋ ರಣೇ ।
ವ್ಯಕ್ಷೋಭಯದುದೀರ್ಣಾಶ್ವಂ ಮಹೋದಧಿಮಿವಾನಿಲಃ ॥೨॥

ರಾಜನೆ, ಮಹಾಸಾಗರವನ್ನು ಚಂಡಮಾರುತ ಕ್ಷೋಭೆಗೊಳಿಸುವಂತೆ ದೊಡ್ಡ ಅಶ್ವಸೈನ್ಯಯುಕ್ತವಾದ ನಿನ್ನ ಕುರುಸೈನ್ಯವನ್ನು ಅರ್ಜುನನು ರಣದಲ್ಲಿ ಕ್ಷೋಭೆ ಗೊಳಿಸಿದ.

ದುರ್ಯೋಧನಸ್ತವ ಸುತಃ ಪ್ರಮಥನ್ ವೈರಿವಾಹಿನೀಮ್ ।
ಅಭ್ಯಯಾತ್ ಸಹಸಾ ಕ್ರುದ್ಧಃ ಸೈನ್ಯಾರ್ಧೇನಾಪಿ ಸಂವೃತಃ ॥೩॥

ನಿನ್ನ ಮಗ ದುರ್ಯೋಧನ ಅರ್ಧಸೈನ್ಯಯುಕ್ತನಾಗಿದ್ದರೂ ಕ್ರುದ್ಧನಾಗಿ ವೇಗದಿಂದ ಶತ್ರುಸೈನ್ಯವನ್ನು ಮರ್ದಿಸುತ್ತ ಆಕ್ರಮಿಸಿದ.

ಪರ್ಯವಾರಯದಾಯಾಂತಂ ಯುಧಿಷ್ಠಿರಮಮರ್ಷಣಃ ।
ಕ್ಷುರಪ್ರಾಣಾಂ ತ್ರಿಸಪ್ತತ್ಯಾ ತತೋಽವಿಧ್ಯತ ಪಾಂಡವಮ್ ॥೪॥

ಸಹನೆ ಇಲ್ಲದ ದುರ್ಯೋಧನನು ತನ್ನ ಕಡೆಗೆ ಬರುತ್ತಿದ್ದ ಯುಧಿಷ್ಠಿರನನ್ನು ಸುತ್ತಲೂ ಆಕ್ರಮಿಸಿದ. ಎಪ್ಪತ್ತಮೂರು ಬಾಣಗಳಿಂದ ಅವನನ್ನು ಹೊಡೆದ.

ಅಕ್ರುಧ್ಯತ ಭೃಶಂ ತತ್ರ ಕುಂತೀಪುತ್ರೋ ಯುಧಿಷ್ಠಿರಃ ।
ಸ ಭಲ್ಲಾಂಸ್ತ್ರಿಂಶತಸ್ತೂರ್ಣಂ ತವ ಪುತ್ರೇ ನ್ಯವೇಶಯತ್ ॥೫॥

ಕುಂತೀಪುತ್ರ ಯುಧಿಷ್ಠಿರನು ಬಲುಕುಪಿತನಾದ. ಮೂವತ್ತು ಭಲ್ಲೆಗಳನ್ನು ನಿನ್ನ ಮಗನ ಮೇಲೆ ಎಸೆದ.

ತತೋಽಧಾವಂತ ಕೌರವ್ಯಾ ಜಿಘೃಕ್ಷಂತೋ ಯುಧಿಷ್ಠಿರಮ್ ।
ದುಷ್ಟಭಾವಾನ್ ಪರಾನ್ ಜ್ಞಾತ್ವಾ ಸಮವೇತಾ ಮಹಾರಥಾಃ ॥೬॥

ಆಜಗ್ಮುಸ್ತಂ ಪರೀಪ್ಸಂತಃ ಕುಂತೀಪುತ್ರಂ ಯುಧಿಷ್ಠಿರಮ್ ।
ನಕುಲಃ ಸಹದೇವಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ॥೭॥
ಅಕ್ಷೌಹಿಣ್ಯಾ ಪರಿವೃತಾಸ್ತೇಭ್ಯಧಾವನ್ ಯುಧಿಷ್ಠಿರಮ್ ॥೮॥

ಆಗ ಕೌರವಸೈನಿಕರು ಯುಧಿಷ್ಠಿರನನ್ನು ಸೆರೆಹಿಡಿಯಲೆಂದು ಧಾವಿಸಿ ಬಂದರು. ಶತ್ರುಗಳ ಈ ದುರುದ್ದೇಶವನ್ನು ತಿಳಿದು ಪಾಂಡವರ ಮಹಾರಥರು ಕುಂತೀಪುತ್ರ ಯುಧಿಷ್ಠಿರನನ್ನು ರಕ್ಷಿಸಲು ಬಯಸುತ್ತ ಎಲ್ಲರೂ ಒಂದಾಗಿ ಸೇರಿಬಂದರು. ನಕುಲ–ಸಹದೇವ ಧೃಷ್ಟದ್ಯುಮ್ನರು ಒಂದು ಅಕ್ಷೌಹಿಣಿ ಸೈನ್ಯಸಮೇತರಾಗಿ ಯುಧಿಷ್ಠಿರನ ಬಳಿಗೆ ಧಾವಿಸಿ ಬಂದರು.

ಭೀಮಸೇನಶ್ಚ ಸಮರೇ ಮೃದ್ನಂಸ್ತವ ಮಹಾರಥಾನ್ ।
ಅಭ್ಯಧಾವದಭಿಪ್ರೇಪ್ಸುಃ ರಾಜಾನಂ ಶತ್ರುಭಿರ್ವೃತಮ್ ॥೯॥

ಭೀಮಸೇನನೂ ರಣದಲ್ಲಿ ನಿನ್ನಕಡೆಯ ಮಹಾರಥರನ್ನು ಮರ್ದಿಸುತ್ತ ರಾಜಾ ಯುಧಿಷ್ಠಿರನು ಶತ್ರುಗಳಿಂದ ಸುತ್ತುವರಿಯಲ್ಪಟ್ಟನೆಂದು ತಿಳಿದು, ಅವನನ್ನು ರಕ್ಷಿಸಲು ಧಾವಿಸಿಬಂದ.

ತಾಂಸ್ತು ಸರ್ವಾನ್ ಮಹೇಷ್ವಾಸಾನ್ ಕರ್ಣೋ ವೈಕರ್ತನೋ ನೃಪ ।
ಶರವರ್ಷೇಣ ಮಹತಾ ಪ್ರತ್ಯವಾರಯದಾಗತಾನ್ ॥೧೦॥

ರಾಜನೆ, ಬಂದ ಎಲ್ಲ ಮಹಾರಥರನ್ನು ಕರ್ಣನು ದೊಡ್ಡ ಬಾಣಗಳ ಮಳೆಯಿಂದ ತಡೆದ.

ಶರೌಘಾನ್ ವಿಸೃಜಂತಸ್ತೇ ಪ್ರೇರಯಂತಶ್ಚ ತೋಮರಾನ್ ।
ನ ಶೇಕುರ್ಯತ್ನವಂತೋಽಪಿ ರಾಧೇಯಂ ಪ್ರತಿವೀಕ್ಷಿತುಮ್ ॥೧೧॥

ಆ ಮಹಾರಥರು ಬಾಣಸಮೂಹಗಳನ್ನು ಎಸೆದರೂ ತೋಮರಗಳನ್ನು ಎಸೆದರೂ ಎಷ್ಟು ಪ್ರಯತ್ನಮಾಡಿದರೂ ಕರ್ಣನನ್ನು ಪ್ರತಿಯಾಗಿ ದಿಟ್ಟಿಸಿನೋಡಲು ಶಕ್ತರಾಗಲಿಲ್ಲ.

ತಾಂಶ್ಚ ಸರ್ವಾನ್ ಮಹೇಷ್ವಾಸಾನ್ ಸರ್ವಶಸ್ತ್ರಾಸ್ತ್ರಪಾರಗಃ ।
ಮಹತಾ ಶರವರ್ಷೇಣ ರಾಧೇಯಃ ಪ್ರತ್ಯವಾರಯತ್ ॥೧೨॥

ಸರ್ವಶಸ್ತ್ರ-ಅಸ್ತ್ರಗಳಲ್ಲಿ ಪಾರಂಗತನಾದ ಕರ್ಣನು ಆ ಎಲ್ಲ ಮಹಾ ಬಿಲ್ಲಾಳು ಗಳನ್ನು ದೊಡ್ಡ ಬಾಣವೃಷ್ಟಿಯಿಂದ ತಡೆದು ನಿಲ್ಲಿಸಿದ.

ದುರ್ಯೋಧನಂ ತು ವಿಂಶತ್ಯಾ ನಾರಾಚಾನಾಂ ಕೃತೀ ಬಲೀ ।
ಅವಿಧ್ಯತ್ತೂರ್ಣಮಭ್ಯೇತ್ಯ ಸಹದೇವೋ ಮಹಾರಥಃ ॥೧೩॥

ಯತ್ನಶೀಲ ಬಲಿಷ್ಠ ಮಹಾರಥನಾದ ಸಹದೇವನು ದುರ್ಯೋಧನನನ್ನು ಬೇಗನೆ ಆಕ್ರಮಿಸಿ, ಇಪ್ಪತ್ತು ಬಾಣಗಳಿಂದ ಹೊಡೆದ.

ಸೋಽತಿವಿದ್ಧೋ ಬಲವತಾ ರಾಜಾ ಬಲಸಮನ್ವಿತಃ ।
ಪ್ರಭಿನ್ನ ಇವ ಮಾತಂಗೋ ರುಧಿರೇಣ ಪರಿಪ್ಲುತಃ ॥೧೪॥

ಸೈನ್ಯಸಹಿತನಾದ ರಾಜಾದುರ್ಯೋಧನನು ಬಲಿಷ್ಠನಾದ ಸಹದೇವನಿಂದ ಬಹಳ ಹೊಡೆಸಿಕೊಂಡು ಬಹಳ ಸೀಳಿಹೋದ ಆನೆಯಂತೆ ರಕ್ತದಿಂದ ತೊಯ್ದು

ದೃಷ್ಟ್ವಾ ಸುತಂ ತವ ಶರೈರ್ಗಾಢವಿದ್ಧಂ ಸುತೇಜನೈಃ ।
ಅಭ್ಯಧಾವದ್ ಭೃಶಂ ಕ್ರುದ್ಧೋ ರಾಧೇಯೋ ರಥಿನಾಂ ವರಃ ॥೧೫॥

ನಿನ್ನ ಮಗನು ತೀಕ್ಷ್ಣವಾದ ಬಾಣಗಳಿಂದ ಗಾಢವಾಗಿ ಹೊಡೆಸಿಕೊಂಡಿದ್ದನ್ನು ನೋಡಿ ರಥಿಕರಲ್ಲಿ ಶ್ರೇಷ್ಠನಾದ ಕರ್ಣನು ಬಲುಕುಪಿತನಾಗಿ ಧಾವಿಸಿಬಂದ.

ದುರ್ಯೋಧನಂ ತಥಾ ದೃಷ್ಟ್ವಾ ಶೀಘ್ರಮಸ್ತ್ರಮುದೀರ್ಯ ಸಃ ।
ತೇನ ಯೌಧಿಷ್ಠಿರಂ ಸೈನ್ಯಮವಧೀತ್ ಪಾರ್ಷತಂ ತಥಾ ॥೧೬॥

ದುರ್ಯೋಧನನನ್ನು ಆ ಅವಸ್ಥೆಯಲ್ಲಿ ಕಂಡು ಕರ್ಣನು ಬೇಗನೆ ಅಸ್ತ್ರವನ್ನು ಪ್ರಯೋಗಿಸಿ ಅದರಿಂದ ಯುಧಿಷ್ಠಿರನ ಸೈನ್ಯವನ್ನೂ ಧೃಷ್ಟದ್ಯುಮ್ನನನ್ನೂ ಹೊಡೆದ.

ತತೋ ಯೌಧಿಷ್ಠಿರಂ ಸೈನ್ಯಂ ವಧ್ಯಮಾನಂ ಮಹಾತ್ಮನಾ ।
ಸಹಸಾ ಪ್ರಾದ್ರವದ್ ರಾಜನ್ ಸೂತಪುತ್ರಭಯಾರ್ದಿತಮ್ ॥೧೭॥

ರಾಜನೆ, ಮಹಾತ್ಮ ಕರ್ಣನಿಂದ ಹೊಡೆಸಿಕೊಂಡ ಯುಧಿಷ್ಠಿರಸೇನೆ ಕರ್ಣನ ಭಯದಿಂದ ವ್ಯಾಕುಲಗೊಂಡು ವೇಗವಾಗಿ ಓಡಲು ತೊಡಗಿತು.

ವಿವಿಧಾ ವಿಶಿಖಾಸ್ತತ್ರ ಸಂಪತಂತಃ ಪರಸ್ಪರಮ್ ।
ಪುಂಖೈಃ ಪುಂಖಾನ್ ಸಮಾಜಘ್ನುಃ ಸೂತಪುತ್ರಧನುಶ್ಚ್ಯುತಾಃ ॥೧೮॥

ಕರ್ಣನ ಧನುಸ್ಸಿನಿಂದ ಹೊರಟ ನಾನಾ ಬಗೆಯ ಬಾಣಗಳು ಪರಸ್ಪರ ಪುಂಖಾನುಪುಂಖವಾಗಿ ಸಾಲಾಗಿ ಹಾರುತ್ತ ಪುಕ್ಕಗಳನ್ನು ಪುಕ್ಕಗಳಿಂದ ಕೂಡಿ ಕೊಂಡವು.

ಅಂತರಿಕ್ಷೇ ಶರೌಘಾಣಾಂ ಪತತಾಂ ಚ ಪರಸ್ಪರಮ್ ।
ಸಂಘರ್ಷೇಣ ಮಹಾರಾಜ ಪಾವಕಃ ಸಮಜಾಯತ ॥೧೯॥

ಮಹಾರಾಜ, ಅಂತರಿಕ್ಷದಲ್ಲಿ ಹಾರುವ ಬಾಣಸಮೂಹಗಳಿಗೆ ಪರಸ್ಪರ ಸಂಘರ್ಷ ಉಂಟಾದ್ದರಿಂದ ಬೆಂಕಿ ಎದ್ದಿತು.

ತತೋ ದಶ ದಿಶಃ ಶೀಘ್ರೈಃ ಶಲಭೈರಿವ ಯಾಯಿಭಿಃ ।
ಅಭ್ಯಹಂಸ್ತರಸಾ ಕರ್ಣಃ ಶರೈಃ ಪರಶರೀರಗೈಃ ॥೨೦॥

ದಶ ದಿಕ್ಕುಗಳಿಗೆ ಮಿಡತೆಗಳಂತೆ ವೇಗವಾಗಿ ಹೋಗುವ, ಶತ್ರುಶರೀರಗಳಲ್ಲಿ ಚುಚ್ಚಿಕೊಳ್ಳುವ ಬಾಣಗಳಿಂದ ಕರ್ಣನು ವೇಗದಿಂದ ಹೊಡೆದ.

ರಕ್ತಚಂದನಸಂದಿಗ್ಧೌ ಮಣಿಹೇಮವಿಭೂಷಿತೌ ।
ಬಾಹೂ ವ್ಯತ್ಯಕ್ಷಿಪತ್ ಕರ್ಣಃ ಪರಮಾಸ್ತ್ರಂ ವಿದರ್ಶಯನ್ ॥೨೧॥

ಕೆಂಪುಗಂಧ ಪೂಸಿದ, ರತ್ನಬಂಗಾರಗಳಿಂದ ಅಲಂಕೃತವಾದ ಬಾಹುಗಳನ್ನು ಕರ್ಣನು ಉತ್ತಮ ಅಸ್ತ್ರಪ್ರದರ್ಶನದ ಈ ಕಾಲದಲ್ಲಿ ಓಲಾಡಿಸಿದ.

ತತಃ ಸರ್ವಾ ದಿಶೋ ರಾಜನ್ ಸಾಯಕೈರ್ವಿಪ್ರಮೋಹಯನ್ ।
ಅಪೀಡಯದ್ ಭೃಶಂ ಕರ್ಣೋ ಧರ್ಮಪುತ್ರಂ ಯುಧಿಷ್ಠಿರಮ್ ॥೨೨॥

ರಾಜನೆ, ಕರ್ಣನು ಎಲ್ಲ ದಿಕ್ಕುಗಳನ್ನು ಬಾಣಗಳಿಂದ ಭ್ರಾಂತಿಗೊಳಿಸುತ್ತ ಧರ್ಮಪುತ್ರ ಯುಧಿಷ್ಠಿರನನ್ನು ಬಹುವಾಗಿ ಪೀಡಿಸಿದ.

ತತಃ ಕ್ರುದ್ಧೋ ಮಹಾರಾಜ ಧರ್ಮಪುತ್ರೋ ಯುಧಿಷ್ಠಿರಃ ।
ನಿಶಿತೈರಿಷುಭಿಃ ಕರ್ಣಂ ಪಂಚಾಶದ್ಭಿಃ ಸಮಾರ್ಪಯತ್ ॥೨೩॥

ಮಹಾರಾಜ, ಆಗ ಕ್ರುದ್ಧನಾದ ಧರ್ಮಪುತ್ರ ಯುಧಿಷ್ಠಿರನು ತೀಕ್ಷ್ಣವಾದ ಐವತ್ತು ಬಾಣಗಳಿಂದ ಕರ್ಣನನ್ನು ಹೊಡೆದ.

ಬಾಣಾಂಧಕಾರಮಭವತ್ ತದ್ಯುದ್ಧಂ ಘೋರದರ್ಶನಮ್ ।
ಹಾಹಾಕಾರೋ ಮಹಾನಾಸೀತ್ ತಾವಕಾನಾಂ ವಿಶಾಂಪತೇ ॥೨೪॥
ವಧ್ಯಮಾನೇ ತದಾ ಸೈನ್ಯೇ ಧರ್ಮಪುತ್ರೇಣ ಮಾರಿಷ ॥೨೫॥

ರಾಜನೆ, ನೋಡಲು ಘೋರವಾದ ಆ ಯುದ್ಧವು ಬಾಣಗಳಿಂದ ಅಂಧಕಾರ ಉಂಟುಮಾಡಿತು. ನಿನ್ನ ಸೈನ್ಯವನ್ನು ಧರ್ಮಪುತ್ರನು ವಧಿಸುವಾಗ ನಿನ್ನ ಕಡೆಯಲ್ಲಿ ಮಹಾ ಹಾಹಾಕಾರ ಎದ್ದಿತು.

ಸಾಯಕೈರ್ವಿವಿಧೈಸ್ತೀಕ್ಷ್ಣೈಃ ಕಂಕಪತ್ರೈಃ ಶಿಲಾಶಿತೈಃ ।
ಭಲ್ಲೈರನೇಕೈರ್ವಿವಿಧೈಃ ಶಕ್ತ್ಯೃಷ್ಟಿಮುಸಲೈರಪಿ ॥೨೬॥

ಸಾಣೆ ಹಿಡಿದು ಹರಿತಗೊಳಿಸಿದ ಹದ್ದಿನ ರೆಕ್ಕೆಯುಳ್ಳ ನಾನಾ ಬಗೆಯ ಬಾಣಗಳಿಂದ, ಅನೇಕ ವಿಧದ ಅನೇಕ ಭಲ್ಲೆಗಳಿಂದ, ಶಕ್ತಿ–ಋಷ್ಟಿ ಮುಸಲಗಳಿಂದ ಧರ್ಮಪುತ್ರನು ನಿನ್ನ ಸೈನ್ಯವನ್ನು ವಧಿಸಿದ.

ಯತ್ರ ಯತ್ರ ಸ ಧರ್ಮಾತ್ಮಾ ದೃಷ್ಟ್ವಾ ದೃಷ್ಟಿಂ ವ್ಯಸರ್ಜಯತ್ ।
ತತ್ರ ತತ್ರ ವ್ಯಶೀರ್ಯಂತ ತಾವಕಾ ಭರತರ್ಷಭ ॥೨೭॥

ಧರ್ಮಾತ್ಮನಾದ ಯುಧಿಷ್ಠಿರನು ಎಲ್ಲೆಲ್ಲಿ ನೋಡಿ ದಿಟ್ಟಿಸಿದನೋ ಅಲ್ಲಲ್ಲಿ ನಿನ್ನ ಕಡೆಯವರು ಬಲಗುಂದಿದರು. ನಾಶ ಹೊಂದಿದರು.

ಕರ್ಣೋಽಪಿ ಭೃಶಸಂಕ್ರುದ್ಧೋ ಧರ್ಮರಾಜಂ ಯುಧಿಷ್ಠಿರಮ್ ।
ನಾರಾಚೈರರ್ಧಚಂದ್ರೈಶ್ಚ ವತ್ಸದಂತೈಶ್ಚ ಸಂಯುಗೇ ॥೨೮॥

ಅಮರ್ಷೀ ಕ್ರೋಧನಶ್ಚೈವ ರೋಷಪ್ರಸ್ಫುರಿತಾಧರಃ ।
ಸಾಯಕೈರಪ್ರಮೇಯಾತ್ಮಾ ಯುಧಿಷ್ಠಿರಮುಪಾದ್ರವತ್ ॥೨೯॥

ಅಪ್ರಮೇಯಾತ್ಮನಾದ ಕರ್ಣನೂ ಕೂಡ ಬಲುಕ್ರುದ್ಧನಾಗಿ ಅಸಹನೆಯಿಂದ ರೋಷದಿಂದ ತುಟಿ ಅದುರಿಸುತ್ತ ಧರ್ಮರಾಜಯುಧಿಷ್ಠಿರನನ್ನು ನಾರಾಚ ಅರ್ಧಚಂದ್ರ ವತ್ಸದಂತ ಸಾಯಕಗಳಿಂದ ಪೀಡಿಸಿದ.

ಯುಧಿಷ್ಠಿರಶ್ಚಾಪಿ ಸ ತಂ ಸ್ವರ್ಣಪುಂಖೈಃ ಶಿತೈಃ ಶರೈಃ ।
ಪ್ರಹಸನ್ನಿವ ತಂ ಕರ್ಣಃ ಕಂಕಪತ್ರೈಃ ಶಿಲಾಶಿತೈಃ ॥೩೦॥

ಉರಸ್ಯವಿಧ್ಯದ್ ರಾಜಾನಂ ತ್ರಿಭಿರ್ಭಲ್ಲೈಶ್ಚ ಪಾಂಡವಮ್ ॥೩೧॥

ಯುಧಿಷ್ಠಿರನೂ ಕೂಡ ಬಂಗಾರದ ಪುಕ್ಕವುಳ್ಳ ತೀಕ್ಷ್ಣವಾದ ಬಾಣಗಳಿಂದ ಕರ್ಣನನ್ನು ಪೀಡಿಸಿದ. ಕರ್ಣನು ನಗುತ್ತ ರಾಜಾ ಯುಧಿಷ್ಠಿರನನ್ನು ಹದ್ದಿನ ರೆಕ್ಕೆಯುಳ್ಳ ಸಾಣೆ ಹಿಡಿದು ಹರಿತಗೊಂಡ ಬಾಣಗಳಿಂದ ಎದೆಯಲ್ಲಿ ಹೊಡೆದ. ಮೂರು ಭಲ್ಲೆಗಳಿಂದಲೂ ಹೊಡೆದ.

ಸ ಪೀಡಿತೋ ಭೃಶಂ ತೇನ ಧರ್ಮರಾಜೋ ಯುಧಿಷ್ಠಿರಃ ।
ಉಪವಿಶ್ಯ ರಥೋಪಸ್ಥೇ ಸೂತಂ ಯಾಹೀತ್ಯಚೋದಯತ್ ॥೩೨॥

ಯುಧಿಷ್ಠಿರನು ಅದರಿಂದ ಬಹಳ ಪೀಡಿತನಾಗಿ ರಥದ ಒಳಭಾಗದಲ್ಲಿ ಕುಳಿತು ಸೂತನಿಗೆ ''ಶಿಬಿರದ ಕಡೆಗೆ ಹೋಗು'' ಎಂದ.

ಪ್ರಾಕ್ರೋಶಂತ ತತಃ ಸರ್ವೇ ಧಾರ್ತರಾಷ್ಟ್ರಾಃ ಸರಾಜಕಾಃ ।
ಗೃಹೀಧ್ವಮಿತಿ ರಾಜಾನಮಭ್ಯಧಾವಂತ ಸರ್ವಶಃ ॥೩೩॥

ಎಲ್ಲ ಕೌರವರೂ ರಾಜರೂ 'ಯುಧಿಷ್ಠಿರನನ್ನು ಸೆರೆ ಹಿಡಿಯಿರಿ' ಎಂದು ಕೂಗುತ್ತ ಎಲ್ಲೆಡೆಯಿಂದ ಧಾವಿಸಿಬಂದರು.

ತತಃ ಶರಶತೈ ರಾಜನ್ನೇಕೈಕಾನಾಂ ಪ್ರಹಾರಿಣಾಮ್ ।
ಪಾಂಚಾಲಸಹಿತಾ ರಾಜನ್ ಧಾರ್ತರಾಷ್ಟ್ರಾನ್ ನ್ಯವಾರಯನ್ ॥೩೪॥

ಆಗ, ರಾಜನೆ, ಧೃಷ್ಟದ್ಯುಮ್ನ ಸಹಿತರಾದ ರಾಜರು ಪ್ರತಿಯೊಬ್ಬ ಯೋಧರಿಗೆ ನೂರು ನೂರು ಬಾಣಗಳನ್ನು ಎಸೆಯುತ್ತ ಕೌರವರನ್ನು ತಡೆದರು.

ತಸ್ಮಿನ್ ಸುತುಮುಲೇ ಯುದ್ಧೇ ವರ್ತಮಾನೇ ಜನಕ್ಷಯೇ ।
ದುರ್ಯೋಧನಶ್ಚ ಭೀಮಶ್ಚ ಸಮೇಯಾತಾಂ ಮಹಾಬಲೌ ॥೩೫॥

ಆ ತುಮುಲ ಯುದ್ಧವು ಜನಕ್ಷಯಕಾರಿಯಾಗಿ ನಡೆಯುತ್ತಿದ್ದಂತೆ ಮಹಾಬಲಿಗಳಾದ ದುರ್ಯೋಧನ ಮತ್ತು ಭೀಮಸೇನರು ಪರಸ್ಪರ ಆಕ್ರಮಣ ಮಾಡಿದರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಏಕೋನಷಷ್ಟಿತಮೋऽಧ್ಯಾಯಃ ॥೫೯॥

❖

ಮಹಾಭಾರತತಾತ್ಪರ್ಯನಿರ್ಣಯ

ಹತಂ ತಮೀಕ್ಷ್ಯೈವ ವಿಕರ್ತನಾತ್ಮಜಃ
ಕ್ರೋಧಾನ್ವಿತೋ ಭೀಮಸೇನಂ ವಿಹಾಯ ।
ಯಯೌ ಪ್ರಮೃದ್ನೈವ ಚಮೂಂ ಯುಧಿಷ್ಠಿರಂ
ರಥೇऽಪರೇ ಸ್ವಶ್ವಯುತೇ ವ್ಯವಸ್ಥಿತಮ್ ॥೮೧॥

ಸುಷೇಣ ಹತನಾದುದನ್ನು ಕಂಡು ಕರ್ಣ ಕುಪಿತನಾಗಿ ಭೀಮನನ್ನು ಬಿಟ್ಟು

ಸೈನ್ಯವನ್ನು ಮರ್ದಿಸಿ ಒಳ್ಳೆಯ ಕುದುರೆಗಳಿಂದ ಯುಕ್ತವಾದ ಇನ್ನೊಂದು ರಥದಲ್ಲಿ ಕುಳಿತಿದ್ದ ಯುಧಿಷ್ಠಿರನನ್ನು ಇದಿರಿಸಿದ.

ನ್ಯವಾರಯೇತಾಂ ಶಿನಿಪೌತ್ರಪಾರ್ಷತೌ
ಕೃಷ್ಣಾಸುತಾಃ ಸೋಮಕಸಂಘಯುಕ್ತಾಃ ।
ಸ ತಾನ್ ಸಮಸ್ತಾನ್ ವಿರಥಾನ್ ವಿಧಾಯ
ಯುಧಿಷ್ಠಿರಂ ಪ್ರಾಪ ಯುತಂ ಯಮಾಭ್ಯಾಮ್ ॥೮೨॥

ಆಗ ಕರ್ಣನನ್ನು ಸಾತ್ಯಕಿ ಧೃಷ್ಟದ್ಯುಮ್ನರು ತಡೆದರು. ಪಾಂಚಾಲಸೇನೆಯಿಂದ ಯುಕ್ತರಾದ ದ್ರೌಪದೀಪುತ್ರರೂ ತಡೆದರು. ಕರ್ಣ ಅವರೆಲ್ಲರನ್ನೂ ವಿರಥರನ್ನಾಗಿ ಮಾಡಿ ನಕುಲ–ಸಹದೇವರಿಂದ ಕೂಡಿದ ಯುಧಿಷ್ಠಿರನನ್ನೆ ಆಕ್ರಮಿಸಿದ.

ನಿಹತ್ಯ ಸೋಶ್ವಾನ್ ಯುಧಿ ಧರ್ಮಸೂನೋ-
ರ್ನಿರಾಯುಧೌ ತೌ ಚ ಯಮೌ ಚಕಾರ ।
ತಾನೇಕಯಾನೋಪಗತಾನ್ ಪುನಶ್ಚ
ಮಮರ್ದ ಬಾಣೈಶ್ಚ ವಚೋಭಿರುಗ್ರೈಃ ॥೮೩॥

ಕರ್ಣ ಯುದ್ಧದಲ್ಲಿ ಯುಧಿಷ್ಠಿರನ ಕುದುರೆಗಳನ್ನು ಕೊಂದು, ನಕುಲ–ಸಹದೇವರನ್ನೂ ನಿರಾಯುಧರನ್ನಾಗಿ ಮಾಡಿದ. ಒಂದೇ ರಥವನ್ನೇರಿ ನಿಂತ ಆ ಮೂವರನ್ನೂ ಕ್ರೂರವಾದ ಬಾಣಗಳಿಂದಲೂ ಮಾತುಗಳಿಂದಲೂ ಪೀಡಿಸಿದ.

ತದೈವ ಮೋಕ್ಷಾಯ ನೃಪಸ್ಯ ಭೀಮೋ
ದುರ್ಯೋಧನಂ ವಿರಥಂ ಸಂವಿಧಾಯ ।
ವಿವ್ಯಾಧ ಮರ್ಮಸ್ವತಿತೀಕ್ಷ್ಣಸಾಯಕೈ-
ಸ್ತಂ ದರ್ಶಯಾಮಾಸ ರವೇಃ ಸುತಾಯ ॥೮೪॥

ಶಲ್ಯಸ್ತದಾ ಧರ್ಮಸುತಂ ವಿಹಾಯ
ಕರ್ಣೋ ಯಯೌ ತತ್ರ ಯುಧಿಷ್ಠಿರೋಽಪಿ ।
ಗತ್ವಾ ಶನೈಃ ಶಿಬಿರಂ ತತ್ರ ಶಿಶ್ಯೇ
ಕರ್ಣೋ ಯದಾ ರಾಜಗೃಧ್ನೀ ಜಗಾಮ ॥೮೫॥

ಆಗಲೆ ಯುಧಿಷ್ಠಿರನ ಬಿಡುಗಡೆಗಾಗಿ ಭೀಮ, ದುರ್ಯೋಧನನನ್ನು ವಿರಥನನ್ನಾಗಿ ಮಾಡಿ ಅತ್ಯಂತ ತೀಕ್ಷ್ಣವಾದ ಬಾಣಗಳಿಂದ ಮರ್ಮಗಳಲ್ಲಿ ಹೊಡೆದ. ಶಲ್ಯ ಅವನನ್ನು ಕರ್ಣನಿಗೆ ತೋರಿಸಿದ. ಆಗ ಕರ್ಣ ಯುಧಿಷ್ಠಿರನನ್ನು ಬಿಟ್ಟು ಹೊರಟುಹೋದ. ಅವನು ದುರ್ಯೋಧನನ ರಕ್ಷಣೆ ಮಾಡಲು ಬಯಸಿ ಅತ್ತ ಹೋದಾಗ ಯುಧಿಷ್ಠಿರ ಮೆಲ್ಲನೆ ಶಿಬಿರಕ್ಕೆ ಹೋಗಿ ಅಲ್ಲಿ ಮಲಗಿದ.

❖

ಅರವತ್ತನೆಯ ಅಧ್ಯಾಯ

ತನ್ನ ಶಿಬಿರಕ್ಕೆ ಹೊರಟಿದ್ದ ಯುಧಿಷ್ಠಿರನನ್ನು ಕರ್ಣ ಪೀಡಿಸಿದ. ಅದಕ್ಕೆ ಭೀಮ ದುರ್ಯೋಧನನನ್ನು ಪೀಡಿಸಿದ್ದರಿಂದ ಕರ್ಣ ಯುಧಿಷ್ಠಿರನನ್ನು ಬಿಟ್ಟ. ಯುಧಿಷ್ಠಿರ ತನ್ನ ಶಿಬಿರಕ್ಕೆ ಹೋಗಿ ಮಲಗಿದ.

ಸಂಜಯಃ

ಕರ್ಣೋऽಥ ಶರಜಾಲೇನ ಕೇಕಯಾನಾಂ ಮಹಾರಥಾನ್ ।
ವ್ಯಧಮತ್ ಪರಮೇಷ್ವಾಸಾನಗ್ರತಃ ಪರ್ಯವಸ್ಥಿತಾನ್ ॥೧॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ಕರ್ಣನು ತನ್ನ ಮುಂದೆ ಬಂದು ನಿಂತ ಕೇಕಯರ ಮಹಾಬಿಲ್ಲಾರರಾದ ಮಹಾರಥರನ್ನು ಬಾಣಸಮೂಹದಿಂದ ಸಂಹರಿಸಿದ.

ತೇಷಾಂ ಪ್ರಯತಮಾನಾನಾಂ ರಾಧೇಯಸ್ಯ ನಿವಾರಣೇ ।
ರಥಾನ್ ಪಂಚಶತಾನ್ ಕರ್ಣಃ ಪ್ರಾಹಿಣೋದ್ ಯಮಸಾದನಮ್ ।೨।

ಅವರು ಕರ್ಣನನ್ನು ತಡೆಯುವಾಗ ಅವನು ಅವರಲ್ಲಿ ಐದುನೂರು ರಥಿಕರನ್ನು ಯಮಲೋಕಕ್ಕೆ ಕಳಿಸಿದ.

ಅವಿಷಹ್ಯಂ ತತೋ ದೃಷ್ಟ್ವಾ ರಾಧೇಯಂ ಯುಧಿ ಯೋಧಿನಃ ।
ಭೀಮಸೇನಮುಪಾಗಚ್ಛನ್ ಕರ್ಣಬಾಣಪ್ರಪೀಡಿತಾಃ ॥೩॥

ಕರ್ಣನನ್ನು ರಣದಲ್ಲಿ ಇದಿರಿಸಲಾಗದವನೆಂದು ತಿಳಿದು ಕರ್ಣಬಾಣಗಳಿಂದ ಪೀಡಿತರಾದ ಕೇಕಯಯೋಧರು ಭೀಮಸೇನನ ಬಳಿಗೆ ಬಂದರು.

ರಥಾನೀಕಂ ವಿದಾರ್ಯೈವ ಶರಜಾಲೈರನೇಕಧಾ ।
ಕರ್ಣಸ್ತ್ವೇಕೋ ರಥೇನೈವ ಪುನರಾಯಾದ್ ಯುಧಿಷ್ಠಿರಮ್ ॥೪॥

ಹೀಗೆ ರಥಸೈನ್ಯವನ್ನು ಬಾಣಸಮೂಹಗಳಿಂದ ನಾನಾವಿಧವಾಗಿ ಪೀಡಿಸಿದ ಕರ್ಣನು ಒಬ್ಬನೇ ರಥದಿಂದ ಪುನಃ ಯುಧಿಷ್ಠಿರನನ್ನು ಆಕ್ರಮಿಸಿದ.

ಸೇನಾನಿವೇಶಮಾರ್ಚ್ಛಂತಂ ಮಾರ್ಗಣೈಃ ಕ್ಷತವಿಕ್ಷತಮ್ ।
ಯಮಯೋರ್ಮಧ್ಯಗಂ ವೀರಂ ಶನೈರ್ಯಾಂತಂ ವಿಚೇತಸಮ್ ॥೫॥

ಸಮಾಸಾದ್ಯ ತು ರಾಜಾನಂ ದುರ್ಯೋಧನಹಿತೇಪ್ಸಯಾ ।
ಸೂತಪುತ್ರಸ್ತ್ರಿಭಿಸ್ತೀಕ್ಷ್ಣೈರ್ವಿವ್ಯಾಧ ಪರಮೇಷುಭಿಃ ॥೬॥

ಸೇನಾಶಿಬಿರಕ್ಕೆ ಹೊರಟಿದ್ದ ಯುಧಿಷ್ಠಿರ ಬಾಣಗಳಿಂದ ಕ್ಷತವಿಕ್ಷತನಾಗಿದ್ದ. ನಕುಲ–ಸಹದೇವರ ನಡುವೆ ವ್ಯಗ್ರಚಿತ್ತನಾಗಿ ನಿಧಾನವಾಗಿ ಶಿಬಿರದ ಕಡೆಗೆ ಹೋಗುತ್ತಿದ್ದ ಆ ವೀರ ಯುಧಿಷ್ಠಿರನನ್ನು ದುರ್ಯೋಧನನ ಹಿತದ ಬಯಕೆಯಿಂದ ತೀಕ್ಷ್ಣವಾದ ಮೂರು ದೊಡ್ಡ ಬಾಣಗಳಿಂದ ಹೊಡೆದ.

ತಥೈವ ರಾಜಾ ರಾಧೇಯಂ ಪ್ರತ್ಯವಿಧ್ಯತ್ತ್ಸನಾಂತರೇ ।
ಶರೈಸ್ತ್ರಿಭಿಶ್ಚ ಯಂತಾರಂ ಚತುರ್ಭಿಶ್ಚತುರೋ ಹಯಾನ್ ॥೭॥

ಹಾಗೇ ಯುಧಿಷ್ಠಿರನೂ ಪ್ರತಿಯಾಗಿ ಕರ್ಣನನ್ನು ಮೂರುಬಾಣಗಳಿಂದ ಎದೆಯಲ್ಲಿ ಪ್ರಹರಿಸಿದ. ಮೂರು ಬಾಣಗಳಿಂದ ಸಾರಥಿಯನ್ನೂ ನಾಲ್ಕು ಬಾಣಗಳಿಂದ ನಾಲ್ಕು ಅಶ್ವಗಳನ್ನೂ ಹೊಡೆದ.

ಚಕ್ರರಕ್ಷೌ ತು ಪಾರ್ಥಸ್ಯ ಮಾದ್ರೀಪುತ್ರೌ ಪರಂತಪೌ ।
ತಾವಪ್ಯಧಾವತಾಂ ಕರ್ಣಂ ರಾಜಾನಂ ಮಾ ವಧೀರಿತಿ ॥೮॥

ಯುಧಿಷ್ಠಿರನಿಗೆ ಚಕ್ರರಕ್ಷಕರಾದ ಶತ್ರುತಾಪಕರಾದ ನಕುಲ–ಸಹದೇವರು ''ರಾಜನನ್ನು ಕೊಲ್ಲಬೇಡ'' ಎನ್ನುತ್ತ ಕರ್ಣನ ಕಡೆಗೆ ಧಾವಿಸಿದರು.

ಆವಾಂ ರಣೇ ವಿನಿರ್ಜಿತ್ಯ ಪಾತಯಾದ್ಯ ಮಹಾಭುಜ ।
ತ್ವಂ ಧರ್ಮಶಾಸ್ತ್ರವಿದ್ ವೀರ ಬ್ರಹ್ಮಣ್ಯಸ್ತ್ವಮನುತ್ತಮಃ ॥೯॥

"ನಮ್ಮಿಬ್ಬರನ್ನು ರಣದಲ್ಲಿ ಈಗ ಪರಾಭವಗೊಳಿಸಿ ಕೊಲ್ಲು ಮಹಾಬಾಹುವೆ, ವೀರನೆ, ನೀನು ಧರ್ಮಶಾಸ್ತ್ರವನ್ನು ತಿಳಿದವನು. ವೇದದಲ್ಲಿ ಶ್ರದ್ಧೆ ಉಳ್ಳವನು. ಅತ್ಯುತ್ತಮನು.

ಯುದ್ಧವಿಮುಖನಾಗಿ ವಿಶ್ರಾಂತಿಗಾಗಿ ಹಿಂತಿರುಗುತ್ತಿರುವ ಯೋಧನನ್ನು, ತತ್ರಾಪಿ ಪಟ್ಟಾಭಿಷಿಕ್ತನಾದ ರಾಜನನ್ನು ಕೊಲ್ಲುವುದು ಬ್ರಹ್ಮಹತ್ಯೆಗಿಂತಲೂ ಹೆಚ್ಚಿನ ಪಾಪ ಎಂದು ಧರ್ಮಶಾಸ್ತ್ರವಿದೆ.

ತ್ವಂ ದಾನಶೂರೋ ವಿಕ್ರಾಂತಸ್ತ್ವಂ ಧನುರ್ವೇದವಿದ್‌ವರಃ ।
ಮಾವಧೀರ್ಧರ್ಮರಾಜಾನಮಿತಿ ಚಾಕುಲತಾಂ ಗತೌ ॥೧೦॥

"ನೀನು ದಾನಶೂರ, ಪರಾಕ್ರಮಿ, ಧನುರ್ವೇದಜ್ಞರಲ್ಲಿ ಶ್ರೇಷ್ಠ ಧರ್ಮರಾಜನನ್ನು ವಧಿಸಬೇಡ" ಎಂದು ಕಳವಳಗೊಂಡು ಹೇಳಿದರು.

ತೌ ಪೃಥಕ್‌ಶರವರ್ಷಾಭ್ಯಾಂ ರಾಧೇಯಮಭ್ಯವರ್ಷತಾಮ್ ।
ನಕುಲಃ ಸಹದೇವಶ್ಚ ಪರಮಂ ಯತ್ನಮಾಸ್ಥಿತೌ ॥೧೧॥

ನಕುಲ–ಸಹದೇವರು ಬೇರೆಬೇರೆಯಾಗಿ ಬಹಳ ಯತ್ನಮಾಡುತ್ತ ಬಾಣವೃಷ್ಟಿಗಳಿಂದ ಕರ್ಣನನ್ನು ಆಚ್ಛಾದಿಸಿದರು.

ತಥೈವ ತೌ ಪ್ರತ್ಯವಿಧ್ಯತ್ ಸೂತಪುತ್ರಃ ಪ್ರತಾಪವಾನ್ ।
ಭಲ್ಲಾಭ್ಯಾಂ ಶಿತಧಾರಾಭ್ಯಾಂ ಮಹಾತ್ಮಾನಾವರಿಂದಮೌ ॥೧೨॥

ಹಾಗೇ ಪ್ರತಾಪಶಾಲಿಯಾದ ಕರ್ಣನೂ ಕೂಡ ಶತ್ರುನಾಶಕರಾದ ನಕುಲ–ಸಹದೇವರನ್ನು ತೀಕ್ಷ್ಣ ಅಲುಗುಗಳುಳ್ಳ ಭಲ್ಲೆಗಳಿಂದ ಪ್ರತಿಯಾಗಿ ಇರಿದ.

ದಂತವರ್ಣಾಂಸ್ತು ರಾಧೇಯೋ ನಿಜಘಾನ ಮನೋಜವಾನ್ ।
ಯುಧಿಷ್ಠಿರಸ್ಯ ಸಂಗ್ರಾಮೇ ಕಾಲವಾಲಾನ್ ಹಯೋತ್ತಮಾನ್ ॥೧೩॥

ಹಲ್ಲಿನಂತೆ ಬಿಳಿಯಾದ ಕಪ್ಪು ಬಾಲವುಳ್ಳ ಮನೋವೇಗದ ಉತ್ತಮವಾದ ಯುಧಿಷ್ಠಿರನ ಅಶ್ವಗಳನ್ನು ರಣದಲ್ಲಿ ಕರ್ಣ ಸಂಹರಿಸಿದ.

ತತೋಽಪರೇಣ ಭಲ್ಲೇನ ಶಿರಸ್ತ್ರಾಣಮಪಾತಯತ್ ।
ಕೌಂತೇಯಸ್ಯ ಮಹೇಷ್ವಾಸಃ ಪ್ರಹಸನ್ನಿವ ಸೂತಜಃ ॥೧೪॥

ಬಳಿಕ ಇನ್ನೊಂದು ಭಲ್ಲೆಯಿಂದ ಮಹಾಬಿಲ್ಲಾರ ಕರ್ಣ ನಗುತ್ತ ಯುಧಿಷ್ಠಿರನ ಶಿರಸ್ತ್ರಾಣವನ್ನು ಕೆಡವಿದ.

ತಥೈವ ನಕುಲಸ್ಯಾಪಿ ಹಯಾನ್ ಹತ್ವಾ ಪ್ರತಾಪವಾನ್ ।
ಈಷಾಂ ಧನುಶ್ಚ ಚಿಚ್ಛೇದ ಮಾದ್ರೀಪುತ್ರಸ್ಯ ಧೀಮತಃ ॥೧೫॥

ಹಾಗೆಯೇ ಪ್ರತಾಪಶಾಲಿ ಕರ್ಣನು ಧೀಮಂತನಾದ ನಕುಲನ ಅಶ್ವಗಳನ್ನು ಸಂಹರಿಸಿ ಈಷಾದಂಡವನ್ನು ಧನುಸ್ಸನ್ನೂ ಕತ್ತರಿಸಿದ.

ತೌ ಹತಾಶ್ವೌ ಹತರಥೌ ಪಾಂಡವೌ ಭೃಶವಿಕ್ಷತೌ ।
ಭ್ರಾತರಾವಾರುರುಹತುಃ ಸಹದೇವರಥಂ ತದಾ ॥೧೬॥

ಯುಧಿಷ್ಠಿರ–ನಕುಲರಿಬ್ಬರೂ ಸೋದರರು ಹೀಗೆ ಅಶ್ವ, ರಥಗಳನ್ನು ಕಳೆದುಕೊಂಡು ಬಹಳ ಗಾಯಗೊಂಡು ಸಹದೇವನ ರಥವನ್ನು ಏರಿದರು.

ತೌ ದೃಷ್ಟ್ವಾ ಮಾತುಲಸ್ತತ್ರ ವಿರಥೌ ಪರವೀರಹಾ ।
ಅಭ್ಯಭಾಷತ ರಾಧೇಯಂ ಮದ್ರರಾಜೋಽನುಕಮ್ಪಯಾ ॥೧೭॥

ರಥರಹಿತರಾದ ಅವರನ್ನು ಶತ್ರುವೀರ ನಾಶಕನಾದ ಸೋದರಮಾವ ಶಲ್ಯನು ನೋಡಿ ಅನುಕಂಪೆಯಿಂದ ಕರ್ಣನಿಗೆ ಹೇಳಿದ.

ಯೋದ್ಧವ್ಯಮದ್ಯ ಪಾರ್ಥೇನ ಫಲ್ಗುನೇನ ತ್ವಯಾ ಸಹ ।
ಕಿಮರ್ಥಂ ಧರ್ಮರಾಜೇನ ಯುಧ್ಯಸೇ ಭೃಶರೋಷಿತಃ ॥೧೮॥

ಈಗ ನಿನ್ನೊಂದಿಗೆ ಯುದ್ಧ ಮಾಡಬೇಕಾಗಿರುವುದು ಅರ್ಜುನ. ಬಲು ರೋಷದಿಂದ ಧರ್ಮರಾಜನೊಂದಿಗೆ ನೀನು ಏಕೆ ಯುದ್ಧ ಮಾಡುತ್ತಿರುವೆ?

ಕ್ಷೀಣಶಸ್ತ್ರಾಸ್ತ್ರಕವಚಃ ಕ್ಷೀಣಬಾಣೋ ವಿಬಾಣಧಿಃ ।
ಶ್ರಾಂತಸಾರಥಿವಾಹಶ್ಚ ಚ್ಛನ್ನೋಽಸ್ತ್ರೈರರಿಭಿಸ್ತಥಾ ॥೧೯॥
ಪಾರ್ಥಮಾಸಾದ್ಯ ರಾಧೇಯ ಉಪಹಾಸ್ಯೋ ಭವಿಷ್ಯಸಿ ॥೨೦॥

ಧರ್ಮರಾಜನು ಈಗ ಶಸ್ತ್ರ ಅಸ್ತ್ರ ಕವಚ ಬಾಣ ಬತ್ತಳಿಕೆಗಳೆಲ್ಲವನ್ನು ಕಳೆದು ಕೊಂಡು, ಆಯಾಸಗೊಂಡ ಸಾರಥಿ ಅಶ್ವಗಳುಳ್ಳವನಾಗಿ, ಶತ್ರುಗಳೆಸೆದ ಅಸ್ತ್ರಗಳಿಂದ

ಆಚ್ಛಾದಿತನಾಗಿದ್ದಾನೆ. ಕರ್ಣ! ನೀನು ಈ ಅವಸ್ಥೆಯಲ್ಲಿರುವ ಯುಧಿಷ್ಠಿರನನ್ನು ವಧಿಸಿದರೆ ನೀನೆ ಉಪಹಾಸಕ್ಕೊಳಗಾಗುವೆ.

ಏವಮುಕ್ತೋಪಿ ಕರ್ಣಸ್ತು ಮದ್ರರಾಜೇನ ಸಂಯುಗೇ ।
ತಥೈವ ಕರ್ಣಃ ಸಂರಬ್ಧೋ ಯುಧಿಷ್ಠಿರಮತಾಡಯತ್ ॥೨೧॥

ಶಲ್ಯನು ಹೀಗೆ ಹೇಳಿದರೂ ಕೂಡ ಕರ್ಣನು ಮತ್ತೂ ಕುಪಿತನಾಗಿ ಯುಧಿಷ್ಠಿರನನ್ನು ಹೊಡೆದ.

ಶರೈಸ್ತೀಕ್ಷ್ಣೈಃ ಪರಾವಿಧ್ಯ ಮಾದ್ರೀಪುತ್ರೌ ಚ ಪಾಂಡವೌ ।
ಪ್ರಹಸ್ಯ ಸಮರೇ ಕರ್ಣಶ್ಚಕಾರ ವಿಮುಖೌ ಶರೈಃ ॥೨೨॥

ತೀಕ್ಷ್ಣವಾದ ಬಾಣಗಳಿಂದ ನಕುಲ-ಸಹದೇವರನ್ನೂ ಹೊಡೆದು ಕರ್ಣನು ರಣದಲ್ಲಿ ಅಟ್ಟಹಾಸ ಮಾಡಿ ಬಾಣಗಳಿಂದ ಇಬ್ಬರನ್ನೂ ಯುದ್ಧವಿಮುಖರನ್ನಾಗಿ ಮಾಡಿದ.

ತತಃ ಶಲ್ಯಃ ಪ್ರಹಸ್ಯೇದಂ ಕರ್ಣಂ ಪುನರುವಾಚ ಹ ।
ರಥಸ್ಥಮತಿಸಂರಬ್ಧಂ ಯುಧಿಷ್ಠಿರವಧೇ ಧೃತಮ್ ॥೨೩॥

ಅತಿ ಕುಪಿತನಾಗಿ ಯುಧಿಷ್ಠಿರನ ವಧೆಗೆ ಮೊಂಡುತನ ಮಾಡುತ್ತ ರಥದಲ್ಲಿ ನಿಂತಿದ್ದ ಕರ್ಣನಿಗೆ ಶಲ್ಯ ಗಹಗಹಿಸಿ ನಗುತ್ತ ಪುನಃ ನುಡಿದ.

ಯದರ್ಥಂ ಧಾರ್ತರಾಷ್ಟ್ರೇಣ ಸತತಂ ಮಾನಿತೋ ಭವಾನ್ ।
ತಂ ಪಾರ್ಥಂ ಜಹಿ ರಾಧೇಯ ಕಿಂ ತೇ ಹತ್ವಾ ಯುಧಿಷ್ಠಿರಮ್ ॥೨೪॥

ಅರ್ಜುನ ವಧಕ್ಕಾಗಿಯೇ ದುರ್ಯೋಧನನು ಸದಾ ನಿನ್ನನ್ನು ಸಮ್ಮಾನಿಸುತ್ತಾನೆ ಎಂದಮೇಲೆ ಆ ಅರ್ಜುನನನ್ನೇ, ಕರ್ಣ, ನೀನು ವಧಿಸು, ಯುಧಿಷ್ಠಿರನನ್ನು ವಧಿಸಿ ನೀನಗೇನು ಲಾಭವಿದೆ?

ಶಂಖಯೋರ್ಧ್ಮಾಯತೋಃ ಶಬ್ದಃ ಸುಮಹಾನೇಷ ಕೃಷ್ಣಯೋಃ ।
ಶ್ರೂಯತೇ ಚಾಪಘೋಷೋಽಯಂ ಪ್ರಾವೃಷೀವಾಮ್ಬುದಸ್ಯ ಹ॥೨೫॥

ಕೃಷ್ಣಾರ್ಜುನರು ಶಂಖ ಊದುವುದರ ಮಹಾಶಬ್ದವಿದೊ ಕೇಳಿ ಬರುತ್ತಿದೆ. ಮಳೆಗಾಲದ ಮೋಡಗಳ ಧ್ವನಿಯಂಥ ಧನುಃಶಬ್ದವೂ ಕೇಳಿಬರುತ್ತಿದೆ.

ಅಸೌ ನಿಘ್ನನ್ ರಥೋದಾರಾನರ್ಜುನಃ ಶರವೃಷ್ಟಿಭಿಃ ।
ಸರ್ವಾಂ ಗ್ರಸತಿ ನಃ ಸೇನಾಂ ಕರ್ಣ ಪಶ್ಯೈನಮಾಹವೇ ॥೨೬॥

ಬಾಣವೃಷ್ಟಿಗಳಿಂದ ಶ್ರೇಷ್ಠರಥಿಕರನ್ನು ಸಂಹರಿಸುತ್ತ ಅರ್ಜುನನು ರಣದಲ್ಲಿ ನಮ್ಮ ಎಲ್ಲ ಸೈನ್ಯವನ್ನೂ ಆಹುತಿ ತೆಗೆದುಕೊಳ್ಳುತ್ತಾನೆ. ಕರ್ಣ, ಆತನನ್ನು ನೋಡು!

ಪೃಷ್ಠರಕ್ಷೌ ಚ ಶೂರಸ್ಯ ಯುಧಾಮನ್ಯೂತ್ತಮೌಜಸೌ ।
ಉತ್ತರಂ ಚಾಸ್ಯ ವೈ ಶೂರಶ್ಚಕ್ರಂ ರಕ್ಷತಿ ಸಾತ್ಯಕಿಃ ॥೨೭॥
ಧೃಷ್ಟದ್ಯುಮ್ನಸ್ತಥಾ ಚಾಸ್ಯ ಚಕ್ರಂ ರಕ್ಷತಿ ದಕ್ಷಿಣಮ್ ॥೨೮॥

ಶೂರ ಅರ್ಜುನನಿಗೆ ಯುಧಾಮನ್ಯು ಉತ್ತಮೌಜರು ಹಿಂಭಾಗದಲ್ಲಿ ರಕ್ಷಕರು. ಎಡದಲ್ಲಿ ಶೂರನಾದ ಸಾತ್ಯಕಿ ಚಕ್ರರಕ್ಷಕ. ಬಲದಲ್ಲಿ ಧೃಷ್ಟದ್ಯುಮ್ನನು ಚಕ್ರರಕ್ಷಕ.

ಭೀಮಸೇನಶ್ಚ ವೈ ರಾಜ್ಞಾ ಧಾರ್ತರಾಷ್ಟ್ರೇಣ ಯುಧ್ಯತೇ ।
ಯಥಾ ನ ಹನ್ಯಾತ್ತಂ ಭೀಮಃ ಸರ್ವೇಷಾಂ ನೋಽದ್ಯ ಪಶ್ಯತಾಮ್ ।
ತಥಾ ರಾಧೇಯ ಕ್ರಿಯತಾಂ ರಾಜಾ ಮುಚ್ಯೇತ ನೋ ಯಥಾ ॥೨೯॥

ಭೀಮಸೇನನು ರಾಜಾ ದುರ್ಯೋಧನನೊಂದಿಗೆ ಯುದ್ಧ ಮಾಡುತ್ತಿದ್ದಾನೆ. ನಾವೆಲ್ಲ ನೋಡುತ್ತಿರುವಂತೆ ಭೀಮನು ಅವನನ್ನು ಕೊಲ್ಲಬಾರದು, ಕರ್ಣ, ನಮ್ಮ ದುರ್ಯೋಧನನನ್ನು ಭೀಮ ಬಿಟ್ಟುಬಿಡುವಂತೆ ಮಾಡು.

ಪಶ್ಯೈನಂ ಭೀಮಸೇನೇನ ಗ್ರಸ್ತಮಾಹವಶೋಭಿನಾ ।
ಯದಿ ತ್ವಾಸಾದ್ಯ ಮುಚ್ಯೇತ ವಿಸ್ಮಯಃ ಸುಮಹಾನ್ ಭವೇತ್ ॥೩೦॥

ದುರ್ಯೋಧನನು ಈಗ ಯುದ್ಧದಲ್ಲಿ ಶೋಭಿಸುವ ಭೀಮನ ಕೈಯಲ್ಲಿ ಸಿಕ್ಕಿಕೊಂಡಿರುವುದನ್ನು ನೋಡು. ಅವನು ಭೀಮನನ್ನು ನಿಗ್ರಹಿಸಿ ಬಿಡುಗಡೆ ಹೊಂದಿದರೆ ಅದೊಂದು ದೊಡ್ಡ ಆಚ್ಚರಿಯೇ ಆದೀತು.

ಪರಿತ್ರಾಹ್ಯೇನಮಭ್ಯೇತ್ಯ ಸಂಶಯಂ ಪರಮಂ ಗತಮ್ ।
ಕಿಂ ನು ಮಾದ್ರೀಸುತೌ ಹತ್ವಾ ರಾಜಾನಂ ವಾ ಯುಧಿಷ್ಠಿರಮ್ ॥೩೧॥

ಸಾವು–ಬದುಕಿನ ದೊಡ್ಡ ಸಂಶಯಕ್ಕೆ ಈಡಾಗಿರುವ ದುರ್ಯೋಧನನನ್ನು

ಮೊದಲಿಗೆ ಕಾಪಾಡಿಕೊಳ್ಳು. ಭೀಮನನ್ನು ಆಕ್ರಮಿಸು. ನಕುಲ–ಸಹದೇವರನ್ನು ಯುಧಿಷ್ಠಿರನನ್ನು ಕೊಂದು ನಿನಗೆ ಏನು ಫಲ?

ಇತಿ ಶಲ್ಯವಚಃ ಶ್ರುತ್ವಾ ರಾಧೇಯಃ ಪೃಥಿವೀಪತೇ ।
ದೃಷ್ಟ್ವಾ ದುರ್ಯೋಧನಂ ಚೈವ ಭೀಮಗ್ರಸ್ತಂ ಮಹಾಹವೇ ॥೩೨॥

ರಾಜಗೃದ್ಧೀ ಭೃಶಂ ಚೈವ ಶಲ್ಯವಾಕ್ಯಪ್ರಚೋದಿತಃ ।
ಅಜಾತಶತ್ರುಮುತ್ಸೃಜ್ಯ ಮಾದ್ರೀಪುತ್ರೌ ಚ ಪಾಂಡವೌ ॥೩೩॥

ತವ ಪುತ್ರಂ ಪರಿತ್ರಾತುಮಭ್ಯಧಾವತ ವೀರ್ಯವಾನ್ ।
ಮದ್ರರಾಜಪ್ರಣುದಿತೈರಶ್ವೈರಾಕಾಶಗೈರಿವ ॥೩೪॥

ರಾಜನೆ, ಹೀಗೆ ಶಲ್ಯ ಹೇಳಿದ್ದನ್ನು ಕೇಳಿ, ದುರ್ಯೋಧನನು ರಣದಲ್ಲಿ ಭೀಮನ ವಶಕ್ಕೆ ಸಿಲುಕಿರುವುದನ್ನೂ ನೋಡಿ, ರಾಜನ ಸ್ನೇಹಾಕಾಂಕ್ಷಿಯಾದ ವೀರ್ಯಶಾಲಿ ಕರ್ಣನು ಶಲ್ಯನ ಮಾತಿನಿಂದ ಬಹಳ ಪ್ರಚೋದಿತನಾಗಿ, ಯುಧಿಷ್ಠಿರನನ್ನೂ ಬಿಟ್ಟು ನಕುಲ–ಸಹದೇವರನ್ನೂ ಬಿಟ್ಟು ನಿನ್ನ ಮಗನನ್ನು ರಕ್ಷಿಸುವುದಕ್ಕಾಗಿ ಶಲ್ಯನ ಸಾರಥ್ಯದಲ್ಲಿ ಆಕಾಶದಲ್ಲೇ ಹಾರುವಂತಿದ್ದ ಕುದುರೆಗಳಿಂದ ಧಾವಿಸಿದ.

ಗತೇ ಕರ್ಣೇ ತು ಕೌಂತೇಯಃ ಪಾಂಡುಪುತ್ರೋ ಯುಧಿಷ್ಠಿರಃ ।
ಅಪಾಯಾಜ್ಜವನೈರಶ್ವೈಃ ಸಹದೇವಸ್ಯ ಮಾರಿಷ ॥೩೫॥

ಕರ್ಣನು ಅತ್ತಹೋದಾಗ ಯುಧಿಷ್ಠಿರನು ಸಹದೇವನ ವೇಗವಾದ ಕುದುರೆಗಳಿಂದ ದೂರಕ್ಕೆ ಹೊರಟುಹೋದ.

ತಾಭ್ಯಾಂ ಸ ಸಹಿತಸ್ತೂರ್ಣಂ ವ್ರೀಡನ್ನಿವ ನರೇಶ್ವರಃ ।
ಪ್ರಾಪ್ಯ ಸೇನಾನಿವೇಶಂ ಚ ಮಾರ್ಗಣೈಃ ಕ್ಷತವಿಕ್ಷತಃ ॥೩೬॥

ಅವತೀರ್ಯೋ ರಥಾತ್ ತೂರ್ಣಮಾವಿಶಚ್ಛಯನಂ ಶುಭಮ್ ।
ಅಪೇತಶಲ್ಯಃ ಸುಭೃಶಂ ಹೃಚ್ಛಲ್ಯಾಭಿನಿಪೀಡಿತಃ ॥೩೭॥

ನಕುಲ–ಸಹದೇವರೊಂದಿಗೆ ರಾಜಾ ಯುಧಿಷ್ಠಿರ ನಾಚಿದವನಂತೆ ಬೇಗನೆ ಸೇನಾಶಿಬಿರಕ್ಕೆ ಹೋಗಿ, ಬಾಣಗಳಿಂದ ಬಲುಗಾಯಗೊಂಡಿದ್ದರಿಂದ ಬೇಗನೆ ರಥದಿಂದ ಇಳಿದು ಸುಖಕರವಾದ ಶಯ್ಯೆಯಲ್ಲಿ ಒರಗಿದ. ಮೈಯ ಶಲ್ಯವನ್ನು ತೆಗೆದರೂ ಮನಸಿನ ಶಲ್ಯದಿಂದ ಬಲು ಪೀಡಿತನೇ ಆದ.

ಸೋಽಬ್ರವೀದ್ ಭ್ರಾತರೌ ರಾಜಾ ಮಾದ್ರೀಪುತ್ರೌ ಮಹಾರಥೌ ।
ಅನೀಕಂ ಭೀಮಸೇನಸ್ಯ ಪಾಂಡವಾವಾಶು ಗಚ್ಛತಾಮ್ ॥೩೮॥

ಜೀಮೂತ ಇವ ನರ್ದಂಸ್ತು ಯುಧ್ಯತೇ ಸ ವೃಕೋದರಃ ॥೩೯॥

ಭೀಮಸೇನನ ಸೈನ್ಯವನ್ನು ಬೇಗನೆ ಹೋಗಿ ಸೇರಿಕೊಳ್ಳಿರಿ, ಮೇಘದಂತೆ ಗರ್ಜಿಸುತ್ತ ಅವನು ಇನ್ನೂ ಯುದ್ಧ ಮಾಡುತ್ತಿದ್ದಾನೆ ಎಂದು ರಾಜಾ ಯುಧಿಷ್ಠಿರ ನಕುಲ-ಸಹದೇವರಿಗೆ ಹೇಳಿದ.

ತತೋಽನ್ಯಂ ರಥಮಾಸ್ಥಾಯ ನಕುಲೋ ರಥಪುಂಗವಃ ।
ಸಹದೇವಶ್ಚ ತೇಜಸ್ವೀ ಭ್ರಾತರೌ ಶತ್ರುಕರ್ಶನೌ ॥೪೦॥

ತುರಗೈರಗ್ರ್ಯರಂಹೋಭಿರ್ಯಾತ್ವಾ ಭೀಮಸ್ಯ ಶುಷ್ಮಿಣೌ ।
ಅನೀಕಂ ಸಹಿತೌ ತತ್ರ ಭ್ರಾತರೌ ಪರ್ಯವಸ್ಥಿತೌ ॥೪೧॥

ರಥಿಕರಲ್ಲಿ ಶ್ರೇಷ್ಠನಾದ ನಕುಲನೂ ಪರಾಕ್ರಮಿಯಾದ ಸಹದೇವನೂ ಇಬ್ಬರು ಸೋದರರು ಶತ್ರುನಾಶಕರು ಬಲಿಷ್ಠರು ಬೇರೆ ರಥಗಳನ್ನೇರಿ ಬಲುವೇಗದ ಕುದುರೆಗಳಿಂದ ಭೀಮನ ಸೈನ್ಯಕ್ಕೆ ಹೋಗಿ ಸೇರಿಕೊಂಡು, ಇಬ್ಬರು ಸೋದರರೂ ಜೊತೆಯಾಗಿ ನಿಂತರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಷಷ್ಟಿತಮೋಧ್ಯಾಯಃ ॥೬೦॥

❖

ಮಹಾಭಾರತತಾತ್ಪರ್ಯನಿರ್ಣಯ

ಅಥಾತ್ರ ರಾಜಾನಮಚಕ್ಷಮಾಣೋ
ಧನಂಜಯೋ ವಾಸುದೇವಪ್ರಣುನ್ನಃ ।
ಅಭ್ಯಾಯಯೌ ಪಾರ್ಷತಃ ಸ್ವಾಂ ತು ಸೇನಾಂ
ಕರ್ಣಾಹತಾಂ ವೀಕ್ಷ್ಯ ಕುರೂನಪೀಡಯತ್ ॥೪೪॥

ರಣರಂಗದಲ್ಲಿ ಯುಧಿಷ್ಠಿರನನ್ನು ಕಾಣದೆ ಅರ್ಜುನ ಶ್ರೀಕೃಷ್ಣನಿಂದ ಪ್ರೇರಿತನಾಗಿ ಶಿಬಿರದ ಕಡೆಗೆ ಹೊರಟ. ಧೃಷ್ಟದ್ಯುಮ್ನ ತನ್ನ ಸೇನೆಯನ್ನು ಕರ್ಣ ನಾಶ ಮಾಡುವುದನ್ನು ಕಂಡು ಕೌರವರನ್ನು ಪೀಡಿಸಿದ.

ನ್ಯವಾರಯತ್ ಸಮಾಯಾತಂ ಕಪಿಪ್ರವರಕೇತನಮ್ ।
ದ್ರೌಣಿರ್ದುಃಶಾಸನಶ್ಚೈವ ಧೃಷ್ಟದ್ಯುಮ್ನಮವಾರಯತ್ ॥೮೯॥

ಅಶ್ವತ್ಥಾಮ ತನಗೆ ಎದುರಾಗಿ ಬರುತ್ತಿದ್ದ ಅರ್ಜುನನನ್ನು ತಡೆದ. ದುಃಶಾಸನ ಧೃಷ್ಟದ್ಯುಮ್ನನನ್ನು ತಡೆದ.

ಉಭಾವತಿರಥೌ ತೌ ತು ಶಸ್ತ್ರಾಸ್ತ್ರೈರಭ್ಯವರ್ಷತಾಮ್ ।
ದುಃಶಾಸನಃ ಪಾರ್ಷತಶ್ಚ ಕುರ್ವಂತೌ ಬಾಣಜಂ ತಮಃ ॥ ೯೦ ॥

ದುಃಶಾಸನ ಧೃಷ್ಟದ್ಯುಮ್ನರಿಬ್ಬರೂ ಅತಿರಥರು. ಅವರು ಪರಸ್ಪರ ಶಸ್ತ್ರಾಸ್ತ್ರಗಳ ಮಳೆಗರೆದುಕೊಂಡರು. ಬಾಣಗಳಿಂದ ಕತ್ತಲನ್ನು ಉಂಟುಮಾಡಿದರು.

ತತ್ರ ದುಃಶಾಸನೇನಾಜೌ ಸ್ತಂಭಿತೋ ದ್ರುಪದಾತ್ಮಜಃ ।
ಯತಮಾನೋಽಪಿ ನಿರ್ಯತ್ನಃ ಕೃತೋ ಯುದ್ಧೇ ನಿರಾಯುಧಃ ॥೯೧॥

ಆ ಯುದ್ಧದಲ್ಲಿ ಧೃಷ್ಟದ್ಯುಮ್ನ ದುಃಶಾಸನನಿಂದ ಸ್ತಂಭೀಭೂತನಾಗಿ ಮಾಡಲ್ಪಟ್ಟ. ಯತ್ನ ಮಾಡಿದರೂ ಯತ್ನವಿಲ್ಲದವನಾಗಿ ನಿರಾಯುಧನಾಗಿ ಮಾಡಲ್ಪಟ್ಟ.

ತದಾಽಭವದ್ ಯುದ್ಧಮತೀವ ದಾರುಣಂ
ದ್ರೌಣೇಸ್ತನೂಜೇನ ತು ವಜ್ರಪಾಣೇಃ ।
ತತ್ರಾಪಿ ಬದ್ಧಃ ಶರಪಂಜರೇಣ
ಪಾರ್ಥೋಽಪನುತ್ತಾಽಪಿ ಚ ಗಾಂಡಿವಜ್ಯಾ ॥ ೯೨ ॥

ಆಗ ಅಶ್ವತ್ಥಾಮ ಅರ್ಜುನರಿಗೆ ಅತ್ಯಂತ ದಾರುಣವಾದ ಯುದ್ಧ ನಡೆಯಿತು. ಆ ಯುದ್ಧದಲ್ಲಿಯೂ ಅರ್ಜುನ ಶರಪಂಜರದಲ್ಲಿ ಬದ್ಧನಾದ ಮತ್ತು ಗಾಂಡೀವದ ಹೆದೆಯೂ ಕಡಿಯಲ್ಪಟ್ಟಿತು.

ಪಾರ್ಥೋಽಥ ಕೃಷ್ಣೇರಧಿತಬಾಹುವೀರ್ಯೋ
ನಿಹತ್ಯ ಸೂತಂ ಗುರುಪುತ್ರಕಸ್ಯ ।
ಛಿತ್ವಾ ಚ ರಶ್ಮೀಂಸ್ತುರಗಾನಮುಷ್ಯ
ವಿದ್ರಾವಯಾಮಾಸ ಶರೈಃ ಸುದೂರಮ್ ॥ ೯೩ ॥

ಬಳಿಕ ಅರ್ಜುನನ ಬಾಹುಪರಾಕ್ರಮವನ್ನು ಶ್ರೀಕೃಷ್ಣ ಹೆಚ್ಚಿಸಿದ. ಅರ್ಜುನ

ಅಶ್ವತ್ಥಾಮನ ಸಾರಥಿಯನ್ನು ಕೊಂದು, ಅವನ ಕುದುರೆಗಳ ಹಗ್ಗಗಳನ್ನೂ ಕತ್ತರಿಸಿ ಕುದುರೆಗಳನ್ನು ಬಾಣಗಳಿಂದ ಬಲು ದೂರಕ್ಕೆ ಓಡಿಸಿದ.

ಅತೀತ್ಯ ಪುತ್ರಂ ತು ಗುರೋಃ ಸಮಾಗತೇ
ಪಾರ್ಥೇ ಕರ್ಣೋ ದ್ರಾವಯಾಮಾಸ ಸೇನಾಮ್ ।
ಪಾಂಡೋಃ ಸುತಾನಾಂ ಶರವರ್ಷಧಾರೋ
ದುರ್ಯೋಧನಶ್ಚಾನು ಯಯೌ ತಮೇವ ॥ ೯೪ ॥

ಅಶ್ವತ್ಥಾಮನನ್ನು ದಾಟಿ ಅರ್ಜುನ ಬಂದಾಗ ಅತ್ತ ಕರ್ಣ ಬಾಣಗಳ ಮಳೆ ಸುರಿಸುತ್ತ ಪಾಂಡವಸೇನೆಯನ್ನು ಓಡಿಸಿದ. ದುರ್ಯೋಧನ ಅವನನ್ನೇ ಹಿಂಬಾಲಿಸಿದ.

ಕರ್ಣಮಾಯಾಂತಮಾಲೋಕ್ಯ ದ್ರಾವಯಂತಂ ನಿಜಾಂ ಚಮೂಮ್ ।
ಧನುರನ್ಯತ್ ಸಮಾದಾಯ ಧೃಷ್ಟದ್ಯುಮ್ನೋ ನ್ಯವಾರಯತ್ ॥ ೯೫ ॥

ಕರ್ಣ ತನ್ನ ಸೈನ್ಯವನ್ನು ಓಡಿಸುತ್ತ ತನ್ನ ಕಡೆಗೇ ಬರುತ್ತಿದ್ದುದನ್ನು ಕಂಡು ಧೃಷ್ಟದ್ಯುಮ್ನ ಇನ್ನೊಂದು ಬಿಲ್ಲನ್ನೆತ್ತಿಕೊಂಡು ಅವನನ್ನು ತಡೆದ.

ತಯೋರಾಸೀನ್ಮಹದ್ ಯುದ್ಧಂ ಚಿರಂ ಸಮಮವಿಶ್ರಮಮ್ ।
ತದೈವ ಸಾತ್ಯಕಿರ್ವೀರೋ ದುರ್ಯೋಧನಮವಾರಯತ್ ॥ ೯೬ ॥

ಅವರಿಬ್ಬರಿಗೆ ದೀರ್ಘಕಾಲ ವಿಶ್ರಾಂತಿ ಇಲ್ಲದ ದೊಡ್ಡ ಯುದ್ಧ ನಡೆಯಿತು. ಅದು ಸಮವೇ ಆಗಿತ್ತು. ಆಗಲೆ ವೀರ ಸಾತ್ಯಕಿ ದುರ್ಯೋಧನನನ್ನು ತಡೆದ.

ನಿವಾರಿತಃ ಸಾತ್ಯಕಿನಾ ರಣೇ ದುರ್ಯೋಧನೋ ನೃಪಃ ।
ನಿಹತ್ಯ ಸಾತ್ಯಕೇರಶ್ವಾನ್ ದ್ರೌಪದೇಶ್ಚಾಪಮಚ್ಛಿನತ್ ॥ ೯೭ ॥

ಸಾತ್ಯಕಿ ತಡೆದಾಗ ರಾಜಾ ದುರ್ಯೋಧನ ಯುದ್ಧದಲ್ಲಿ ಸಾತ್ಯಕಿಯ ಕುದುರೆಗಳನ್ನು ಕೊಂದು ಧೃಷ್ಟದ್ಯುಮ್ನನ ಧನುಸ್ಸನ್ನು ಕಡಿದ.

ತದಂತರೈವ ಕರ್ಣೋಽಪಿ ಪಾರ್ಷತಾಶ್ವಾನಪಾತಯತ್ ।
ತಯೋರ್ವಿರಥಯೋರೇವ ಭಗ್ನಂ ತತ್ ಪಾಂಡವಂ ಬಲಮ್ ॥೯೮॥

ಈ ನಡುವೆ ಕರ್ಣನೂ ಧೃಷ್ಟದ್ಯುಮ್ನನ ಕುದುರೆಗಳನ್ನು ಕೊಂದ. ಸಾತ್ಯಕಿ ಧೃಷ್ಟದ್ಯುಮ್ನರು ವಿರಥರಾದೊಡನೆ ಪಾಂಡವಸೈನ್ಯ ಸೋತಿತು.

ಬಲಂ ಸ್ವಕೀಯಂ ಬಹುಧಾ ವಿಭಿನ್ನಂ
ಸಮೀಕ್ಷ್ಯ ಭೀಮೋ ಮೃಗರಾಜಕೇತುಃ ।
ಕೃತ್ವಾ ಧರಾಕಮ್ಪಕಮುಗ್ರನಾದಂ
ರಣೇऽಭ್ಯಯಾತ್ ಕೌರವರಾಜಸೈನ್ಯಮ್ ॥ ೯೯ ॥

ತನ್ನ ಸೇನೆ ಬಹಳ ಸೋತಾಗ ಅದನ್ನು ಕಂಡ ಸಿಂಹಧ್ವಜನಾದ ಭೀಮ ಭೂಮಿಯನ್ನು ನಡುಗಿಸುವಂಥ ಭಯಂಕರ ಸಿಂಹನಾದ ಮಾಡಿ ಯುದ್ಧದಲ್ಲಿ ಕೌರವರಾಜನ ಸೈನ್ಯವನ್ನು ಆಕ್ರಮಿಸಿದ.

ನಾದೇನ ಬಾಣೈಶ್ಚ ವೃಕೋದರೇಣ
ಭಗ್ನಂ ತದಾ ಕೌರವಸೈನ್ಯಮಾಶು ।
ದಿಶೋ ವಿದುದ್ರಾವ ಸುಯೋಧನೋऽಪಿ
ಕೃತೋ ರಣೇ ತೇನ ವಿವಾಹನಾಯುಧಃ ॥ ೧೦೦ ॥

ಸಿಂಹನಾದದಿಂದಲೂ ಬಾಣಗಳಿಂದಲೂ ಭೀಮ ಕೌರವಸೈನ್ಯವನ್ನು ಬೇಗನೆ ಪರಾಜಯಗೊಳಿಸಿದಾಗ ಅದು ಎಲ್ಲ ದಿಕ್ಕಿಗೆ ಪಲಾಯನ ಮಾಡಿತು. ದುರ್ಯೋಧನನೂ ಭೀಮನಿಂದ ಯುದ್ಧದಲ್ಲಿ ರಥ ಆಯುಧರಹಿತನಾಗಿ ಮಾಡಲ್ಪಟ್ಟ.

ದೃಷ್ಟ್ವೈವ ತತ್ ಪಾಂಡವಾನಾಂ ಚ ಸೇನಾ
ಸಮಾವೃತ್ತಾ ಕ್ಷಿಪ್ರಮವಾರ್ಯವೇಗಾ ।
ತಯಾ ಪುನಃ ಕೌರವಾಣಾಂ ಬಲಂ ತದ್
ಭಗ್ನಂ ದೂರಾದ್ ದೂರತರಂ ಪ್ರದುದ್ರುವೇ ॥ ೧೦೧ ॥

ಅದನ್ನು ನೋಡಿದೊಡನೆ ಶತ್ರುಗಳಿಗೆ ತಡೆಯಲಾಗದ ವೇಗವುಳ್ಳ ಪಾಂಡವಸೇನೆ ಬೇಗನೆ ಹಿಂತಿರುಗಿ ಬಂದಿತು. ಅದರಿಂದಲೂ ಪುನಃ ಕೌರವಸೈನ್ಯ ಸೋತು ದೂರದಿಂದ ದೂರಕ್ಕೇ ಓಡಿತು.

ಹನ್ಯಮಾನಂ ದಿಶೋ ಯಾತಂ ಪಾಂಚಾಲೈರ್ಭೀಮಸಂಶ್ರಯಾತ್ ।
ದುರ್ಯೋಧನಬಲಂ ದೃಷ್ಟ್ವಾ ಜಜ್ವಾಲಾಧಿರಥಿಃ ಕ್ರುಧಾ ॥ ೧೦೨ ॥

ದುರ್ಯೋಧನನ ಸೈನ್ಯ ಭೀಮನ ಆಸರೆಯಲ್ಲಿದ್ದ ಪಾಂಚಾಲಸೈನಿಕರಿಂದ ಹೊಡೆಸಿಕೊಂಡು ದಿಕ್ಕುಗಳಿಗೆ ಓಡುತ್ತಿದ್ದುದನ್ನು ಕಂಡು ಕರ್ಣ ಕೋಪದಿಂದ ಉರಿಯತೊಡಗಿದ.

ಸೋಽಮೋಘಂ ರಾಮದೈವತ್ಯಮಸ್ತ್ರಂ ಭಾರ್ಗವಸಂಜ್ಞಿತಮ್ ।
ಸರ್ವಾಸ್ತ್ರನಾಶಕಂ ದಿವ್ಯಮಪ್ರತಿದ್ವಂದ್ವಮಾದದೇ ॥ ೧೦೩ ॥

ಕರ್ಣ ಪರಶುರಾಮದೇವತಾಕವಾದ ಭಾರ್ಗವ ಎಂಬ ಹೆಸರಿನ ಅಮೋಘ ದಿವ್ಯಾಸ್ತ್ರವನ್ನು ಎತ್ತಿಕೊಂಡ. ಅದು ಎಲ್ಲ ಅಸ್ತ್ರಗಳನ್ನೂ ನಾಶಮಾಡಬಲ್ಲ ಪ್ರತ್ಯಸ್ತ್ರ ರಹಿತವಾದ ಅಸ್ತ್ರ

ತಚ್ಚ ಭೀಮಪುರೋಗೇಷು ಸೈನ್ಯೇಷ್ವಮುಚದುಲ್ಬಣಮ್ ।
ತದಸ್ತ್ರಂ ವರ್ಜಯಾಮಾಸ ಭೀಮಂ ರಾಮಪ್ರಸಾದತಃ ॥ ೧೦೪ ॥

ಕ್ರೂರವಾದ ಆ ಅಸ್ತ್ರವನ್ನು ಕರ್ಣ ಭೀಮನ ನಾಯಕತ್ವದಲ್ಲಿದ್ದ ಸೈನ್ಯಗಳ ಮೇಲೆ ಪ್ರಯೋಗಿಸಿದ. ಆದರೆ ಆ ಅಸ್ತ್ರ ಪರಶುರಾಮನ ಅನುಗ್ರಹದಿಂದ ಭೀಮನನ್ನು ಬಿಟ್ಟಿತು.

ಅನ್ಯೇ ತು ದುದ್ರುವುಃ ಕೇಚಿಚ್ಛಿಷ್ಟಾಃ ಪ್ರಾಪುರ್ಯಮಕ್ಷಯಮ್ ।
ನ ಹ್ಯಸ್ತ್ರಂ ದ್ರವಮಾಣಾಂಸ್ತದ್ಧಂತಿ ತೇನ ಸಪಾರ್ಷತಾಃ ॥೧೦೫॥

ಪಾಂಚಾಲಾ ದ್ರೌಪದೇಯಾಶ್ಚ ಶೈನೇಯಾದ್ಯಾಶ್ಚ ಸರ್ವಶಃ ।
ಪಲಾಯನೇನೋರ್ವರಿತಾ ಅರ್ಜುನೋಪ್ಯಸ್ತ್ರಮುದ್ಯತಮ್ ॥೧೦೬॥

ವೀಕ್ಷ್ಯ ಪ್ರತ್ಯಸ್ತ್ರಹೀನಂ ತದಪ್ರಾಪ್ಯೈವ ರವೇಃ ಸುತಮ್ ।
ವಾಸುದೇವಮಿದಂ ಪ್ರಾಹ ವರ್ಜಯಿತ್ವೈವ ಸೂತಜಮ್ ॥೧೦೭॥

ಅನ್ಯತ್ರ ಯಾಮಿ ನೈವಾಸ್ಮಾದಸ್ತ್ರಾಜ್ಜೀವನಮನ್ಯಥಾ ।
ಇತ್ಯೂಚಿವಾಂಸಂ ಪಾರ್ಥಂ ತಂ ಕೃಷ್ಣೋಽಪ್ರಾಪ್ಯೈವ ಸೂತಜಮ್
॥೧೦೮॥

ಇತರರು ಪಲಾಯನ ಮಾಡಿದರು. ಉಳಿದವರು ಕೆಲವರು ಯಮಲೋಕವನ್ನು ಸೇರಿದರು. ಪಲಾಯನ ಮಾಡುವವರನ್ನು ಆ ಅಸ್ತ್ರ ಕೊಲ್ಲುವುದಿಲ್ಲ

ಅದರಿಂದ ಧೃಷ್ಟದ್ಯುಮ್ನ ಸಮೇತರಾದ ಪಾಂಚಾಲರೂ ದ್ರೌಪದೀ ಪುತ್ರರೂ ಸಾತ್ಯಕಿ ಮುಂತಾದವರೂ ಎಲ್ಲರೂ ಪಲಾಯನ ಮಾಡಿದ್ದರಿಂದ ಉಳಿದರು. ಅರ್ಜುನ ಆಗ ಬೇರೆಯವರೊಡನೆ ಯುದ್ಧ ಮಾಡುತ್ತ ಪ್ರತ್ಯಸ್ತ್ರವಿಲ್ಲದ ಆ ಅಸ್ತ್ರ ಹೊರಟುದನ್ನು ಕಂಡು ಕರ್ಣನ ಇದಿರಿಗೆ ಹೋಗದೆ ಕೃಷ್ಣನಿಗೆ ಹೇಳಿದ– 'ಕರ್ಣನನ್ನು ಬಿಟ್ಟೇ ನಾನು ಬೇರೆ ದಾರಿಯಿಂದ ಹೋಗುವೆನು. ಹಾಗೆ ಮಾಡದಿದ್ದರೆ ಈ ಅಸ್ತ್ರದಿಂದ ನನಗೆ ಉಳಿವಿಲ್ಲ.' ಅರ್ಜುನ ಹೀಗೆ ಹೇಳಿದಾಗ ಸರ್ವಕರ್ತನಾದ ಕೃಷ್ಣ ಅವನನ್ನು ಕರ್ಣನ ಬಳಿಗೆ ಒಯ್ಯದೆಯೆ ಬೇರೆ ಮಾರ್ಗದಿಂದಲೆ ಭೀಮನ ಬಳಿಗೆ ಒಯ್ದ. ಅಲ್ಲಿ ಅರ್ಜುನ ಭೀಮನಿಗೆ ಹೇಳಿದ, 'ಯುಧಿಷ್ಠಿರನನ್ನು ಕಾಣಲು ಹೋಗು. ಅವನ ಸಮಾಚಾರವನ್ನು ತಿಳಿದುಕೊಳ್ಳು. ನನ್ನನ್ನು ಅಳಿದುಳಿದ ಸಂಶಪ್ತಕರು ಯುದ್ಧಕ್ಕೆ ಕರೆಯುತ್ತಿದ್ದಾರೆ. ಅದರಿಂದ ನಾನು ಅವರೊಡನೆ ಯುದ್ಧಕ್ಕೆ ಹೋಗುವೆನು.'

❖❖❖

ಅರವತ್ತೊಂದನೆಯ ಅಧ್ಯಾಯ

ಅರ್ಜುನ ಅಶ್ವತ್ಥಾಮನನ್ನು ಓಡಿಸಿದ. ಆದರೆ, ಕರ್ಣ ಭಾರ್ಗವಾಸ್ತ್ರವನ್ನು ಪ್ರಯೋಗಿಸಿದ್ದರಿಂದ, ಅವನ ಬಳಿಗೆ ಹೋಗಲಿಲ್ಲ.

ಸಂಜಯಃ

ದ್ರೌಣಿಸ್ತು ರಥವಂಶೇನ ಮಹತಾ ಪರಿವಾರಿತಃ ।
ಆಪತತ್ಸಹಸಾ ರಾಜನ್ ಯತ್ರ ಪಾರ್ಥೋ ವ್ಯವಸ್ಥಿತಃ ॥೧॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ರಾಜನೆ, ಅಶ್ವತ್ಥಾಮನು ದೊಡ್ಡರಥ ಸೈನ್ಯ ಸಮೂಹದಿಂದೊಡಗೂಡಿ ವೇಗದಿಂದ ಅರ್ಜುನನಿದ್ದಲ್ಲಿಗೆ ನುಗ್ಗಿಬಂದ.

ತಮಾಪತಂತಂ ಸಹಸಾ ಶೂರಃ ಶೌರಿಸಹಾಯವಾನ್ ।
ದಧಾರ ಸಹಸಾ ಪಾರ್ಥೋ ವೇಲೇವ ಮಕರಾಲಯಮ್ ॥೨॥

ವೇಗದಿಂದ ಬರುತ್ತಿದ್ದ ಅಶ್ವತ್ಥಾಮನನ್ನು, ತೀರವು ಸಮುದ್ರವನ್ನು ತಡೆದು ನಿಲ್ಲಿಸುವಂತೆ, ಕೃಷ್ಣನ ಸಹಾಯಯುಕ್ತನಾದ ಶೂರ ಅರ್ಜುನ ಬಲವಾಗಿ ತಡೆದು ನಿಲ್ಲಿಸಿಕೊಂಡ.

ತತಃ ಕ್ರುದ್ಧೋ ಮಹಾರಾಜ ದ್ರೋಣಪುತ್ರಃ ಪ್ರತಾಪವಾನ್ ।
ಅರ್ಜುನಂ ವಾಸುದೇವಂ ಚ ಚ್ಛಾದಯಾಮಾಸ ಸಾಯಕೈಃ ॥೩॥

ಮಹಾರಾಜ, ಆಗ ಪ್ರತಾಪಶಾಲಿಯಾದ ಅಶ್ವತ್ಥಾಮನು ಕ್ರುದ್ಧನಾಗಿ ಅರ್ಜುನನನ್ನೂ ಕೃಷ್ಣನನ್ನೂ ಬಾಣಗಳಿಂದ ಮುಚ್ಚಿದ.

ಅವಚ್ಛನ್ನೌ ತತಃ ಕೃಷ್ಣೌ ದೃಷ್ಟ್ವಾ ತತ್ರ ಮಹಾರಥಾಃ ।
ವಿಸ್ಮಯಂ ಪರಮಂ ಗತ್ವಾ ಪ್ರೈಕ್ಷಂತ ಕುರವಸ್ತದಾ ॥೪॥

ಕೃಷ್ಣಾರ್ಜುನರು ಬಾಣಗಳಲ್ಲಿ ಮುಚ್ಚಿಹೋದುದನ್ನು ಕಂಡು ಕೌರವರು ಮಹಾರಥರು ಪರಮ ವಿಸ್ಮಯ ಹೊಂದಿ ವೀಕ್ಷಿಸಿದರು.

ಅರ್ಜುನಸ್ತು ತತೋ ದಿವ್ಯಮಸ್ತ್ರಂ ಚಕ್ರೇ ಹಸನ್ನಿವ ।
ತದಸ್ತ್ರಂ ಬ್ರಾಹ್ಮಣೋ ಯುದ್ಧೇ ವಾರಯಾಮಾಸ ಭಾರತ ॥೫॥

ಅರ್ಜುನನು ನಗುತ್ತ ದಿವ್ಯ ಅಸ್ತ್ರವನ್ನು ಪ್ರಯೋಗಿಸಿದ. ರಾಜನೆ, ಆ ಅಸ್ತ್ರವನ್ನು ಅಶ್ವತ್ಥಾಮನು ರಣದಲ್ಲಿ ತಡೆದ.

ಯದ್ಯದ್ಧಿ ವ್ಯಾಕ್ಷಿಪದ್ ಯುದ್ಧೇ ಪಾಂಡವೋಽಸ್ತ್ರಂ ಜಿಘಾಂಸಯಾ ।
ತತ್ತದಸ್ತ್ರಂ ಮಹೇಷ್ವಾಸೋ ದ್ರೋಣಪುತ್ರೋ ವ್ಯಶಾತಯತ್ ॥೬॥

ಅರ್ಜುನನು ಏನೇನು ಅಸ್ತ್ರವನ್ನು ಅಶ್ವತ್ಥಾಮನಿಗೆ ಹೊಡೆಯಲು ಎಸೆದನೋ ಅದೆಲ್ಲವನ್ನೂ ಮಹಾಬಿಲ್ಲಾಳು ಅಶ್ವತ್ಥಾಮ ನಾಶಪಡಿಸಿದ.

ಅಸ್ತ್ರಯುದ್ಧೇ ತತೋ ರಾಜನ್ ವರ್ತಮಾನೇ ಭಯಾವಹೇ ।
ಅಪಶ್ಯಾಮ ರಥೇ ದ್ರೌಣಿಂ ವ್ಯಾತ್ತಾನನಮಿವಾಂತಕಮ್ ॥೭॥

ರಾಜನೆ, ಭಯಂಕರ ಅಸ್ತ್ರಯುದ್ಧ ನಡೆಯುವಾಗ ರಥದಲ್ಲಿ ಅಶ್ವತ್ಥಾಮನು ಬಾಯಿ ತೆರೆದ ಅಂತಕನಂತೆ ನಿಂತಿದ್ದನ್ನು ನಾವು ಕಂಡೆವು.

ಸ ದಿಶೋ ವಿದಿಶಶ್ಚೈವ ಛಾದಯಿತ್ವಾ ವಿಜಿಹ್ಮಗೈಃ ।
ವಾಸುದೇವಂ ತ್ರಿಭಿರ್ಬಾಣೈರವಿಧ್ಯದ್ ದಕ್ಷಿಣೇ ಭುಜೇ ॥೮॥

ಅಶ್ವತ್ಥಾಮನು ದಿಕ್ಕು ವಿದಿಕ್ಕುಗಳನ್ನು ಬಾಣಗಳಿಂದ ಮುಚ್ಚಿ ಕೃಷ್ಣನ ಬಲಭುಜಕ್ಕೆ ಮೂರು ಬಾಣಗಳಿಂದ ಹೊಡೆದ.

ತತೋಽರ್ಜುನೋ ಹಯಾನ್ ಹತ್ವಾ ಸರ್ವಾಂಸ್ತಸ್ಯ ಮಹಾತ್ಮನಃ ।
ಚಕಾರ ಸಮರೇ ಭೂಮಿಂ ಶೋಣಿತೌಘತರಂಗಿಣೀಮ್ ॥೯॥

ಆಗ ಅರ್ಜುನ ಮಹಾತ್ಮನಾದ ಅಶ್ವತ್ಥಾಮನ ಎಲ್ಲ ಅಶ್ವ ಸೈನಿಕರನ್ನು ಸಂಹರಿಸಿ ರಣದಲ್ಲಿ ನೆಲವೆಲ್ಲ ರಕ್ತಪ್ರವಾಹ ತರಂಗಗಳಿಂದ ಯುಕ್ತವಾಗುವಂತೆ ಮಾಡಿದ.

ನಿಹತಾ ರಥಿನಃ ಪೇತುಃ ಪಾರ್ಥಚಾಪಚ್ಯುತೈಃ ಶರೈಃ ।
ಹಯಾಶ್ಚ ಪರ್ಯಧಾವಂತ ಮುಕ್ತಯೋಕ್ತ್ರಾಸ್ತತಸ್ತತಃ ॥೧೦॥

ಅರ್ಜುನನ ಧನುಸ್ಸಿನಿಂದ ಹೊರಟ ಬಾಣಗಳಿಂದ ಹತರಾದ ರಥಿಕರು ಬಿದ್ದರು. ಕುದುರೆಗಳು ಲಗಾಮಿಲ್ಲದೆ ಅಲ್ಲಲ್ಲಿ ಸುತ್ತಲೂ ಧಾವಿಸಿದುವು.

ತದ್ ದೃಷ್ಟ್ವಾ ಕರ್ಮ ಪಾರ್ಥಸ್ಯ ದ್ರೌಣಿರಾಹವಶೋಭಿನಃ ।
ಅವಾಕಿರದ್ ರಣೇ ಕೃಷ್ಣೌ ಸಮಂತಾನ್ನಿಶಿತೈಃ ಶರೈಃ ॥೧೧॥

ಯುದ್ಧದಲ್ಲಿ ಶೋಭಿಸುವ ಅರ್ಜುನನ ಈ ಸಾಹಸವನ್ನು ಕಂಡು ಅಶ್ವತ್ಥಾಮನು ರಣದಲ್ಲಿ ಕೃಷ್ಣಾರ್ಜುನರನ್ನು ಹರಿತವಾದ ಬಾಣಗಳಿಂದ ಎಲ್ಲೆಡೆ ಮುಚ್ಚಿದ.

ಗಾಂಡೀವಧನ್ವಾ ಪ್ರಸಭಂ ಶರವರ್ಷೈರುದಾರಧೀಃ ।
ಸಂಛಾದ್ಯ ಸಮರೇ ದ್ರೌಣಿಂ ಚಿಚ್ಛೇದಾಸ್ಯ ಚ ಕಾರ್ಮುಕಂ ॥೧೨॥

ಗಾಂಡೀವಧನುಸ್ಸನ್ನು ಧರಿಸಿದ ಉತ್ತಮ ಬುದ್ಧಿಶಾಲಿಯಾದ ಅರ್ಜುನನು ಅಶ್ವತ್ಥಾಮನನ್ನು ಬಾಣಗಳ ಮಳೆಗಳಿಂದ ಆಚ್ಛಾದಿಸಿ ಅವನ ಬಿಲ್ಲನ್ನೂ ಕತ್ತರಿಸಿದ.

ಸ ಚ್ಛಿನ್ನಧನ್ವಾ ಪರಿಘಂ ವಜ್ರಸ್ಪರ್ಶಸಮಂ ಯುಧಿ ।
ಆದಾಯ ಚಿಕ್ಷೇಪ ತದಾ ದ್ರೋಣಪುತ್ರಃ ಕಿರೀಟಿನೇ ॥೧೩॥

ಬಿಲ್ಲು ಕಡಿದು ಹೋದಾಗ ಅಶ್ವತ್ಥಾಮನು ರಣದಲ್ಲಿ ವಜ್ರಾಯುಧದಂಥ ಸ್ಪರ್ಶವುಳ್ಳ ಪರಿಘಾಯುಧವನ್ನು ಎತ್ತಿಕೊಂಡು ಅರ್ಜುನನ ಮೇಲೆ ಎಸೆದ.

ತಮಾಪತಂತಂ ಪರಿಘಂ ಕಾರ್ತಸ್ವರವಿಭೂಷಿತಮ್ ।
ಪಾರ್ಥಶ್ಚಿಚ್ಛೇದ ಸಹಸಾ ತತ ಉಚ್ಚುಕ್ರುಶುರ್ಜನಾಃ ॥೧೪॥

ತನ್ನ ಮೇಲೆ ಬಂಗಾರದಿಂದ ಅಲಂಕೃತವಾದ ಪರಿಘ ಬೀಳುತ್ತಿದ್ದಂತೇ ಒಡನೆ ಅದನ್ನು ಅರ್ಜುನನು ಕತ್ತರಿಸಿದ.

ಸೋಽನೇಕಧಾಪತದ್ ಭೂಮೌ ರಣೇ ಪಾರ್ಥಸ್ಯ ಸಾಯಕೈಃ ।
ವಿಶೀರ್ಣಃ ಪರ್ವತೋ ರಾಜನ್ ಯಥಾ ವಜ್ರೇಣ ತಾಡಿತಃ ॥೧೫॥

ರಾಜನೆ, ಪರಿಘವು ರಣದಲ್ಲಿ ಪಾರ್ಥನ ಬಾಣಗಳಿಂದ ಅನೇಕ ಚೂರಾಗಿ ನಾಶವಾಗಿ, ವಜ್ರದ ಆಘಾತದಿಂದ ನಾಶವಾಗಿ ಬೀಳುವ ಪರ್ವತದಂತೆ, ನೆಲದಲ್ಲಿ ಬಿದ್ದಿತು.

ತತೋಽರ್ಜುನೋ ರಣೇ ದ್ರೌಣಿಂ ವಿವ್ಯಾಧ ದಶಭಿಃ ಶರೈಃ ।
ಸಾರಥಿಂ ಚಾಸ್ಯ ಭಲ್ಲೇನ ರಥನೀಡಾದಪಾಹರತ್ ॥೧೬॥

ಬಳಿಕ ಅರ್ಜುನನು ರಣದಲ್ಲಿ ಅಶ್ವತ್ಥಾಮನನ್ನು ಹತ್ತು ಬಾಣಗಳಿಂದ ಹೊಡೆದ. ಮತ್ತು ಭಲ್ಲೆಯಿಂದ ಅವನ ಸಾರಥಿಯನ್ನು ಅವನ ಆಸನದಿಂದ ಕೆಡವಿದ.

ಸ ಸಂಗೃಹ್ಯ ಸ್ವಯಂ ವಾಹಾನ್ ಕೃಷ್ಣೌ ಪ್ರಾಚ್ಛಾದಯಚ್ಛರೈಃ ।
ತತ್ರಾದ್ಭುತಮಪಶ್ಯಾಮ ದ್ರೌಣೇರಾಶು ಪರಾಕ್ರಮಮ್ ॥೧೭॥

ಅಶ್ವತ್ಥಾಮನು ತಾನೆ ಕುದುರೆಗಳ ಲಗಾಮು ಹಿಡಿದು ಕೃಷ್ಣ ಅರ್ಜುನರನ್ನು ಬಾಣಗಳಿಂದ ಮುಚ್ಚಿದ. ಆಗ ಅಶ್ವತ್ಥಾಮನ ಅದ್ಭುತವಾದ ವೇಗದ ಪರಾಕ್ರಮವನ್ನು ನಾವು ಕಂಡೆವು.

ಅಯಚ್ಛತ್ತುರಗಾನ್ ಯಚ್ಚ ಫಲ್ಗುನಂ ಚಾಪ್ಯಯೋಧಯತ್ ।
ತದಸ್ಯ ಸಮರೇ ರಾಜನ್ ಸರ್ವೇ ಯೋಧಾ ಅಪೂಜಯನ್ ॥೧೮॥

ಏಕಕಾಲದಲ್ಲಿ ರಣದಲ್ಲಿ ಕುದುರೆಗಳನ್ನೂ ನಿಯಂತ್ರಿಸಿದ, ಅರ್ಜುನನನ್ನೂ ಬಾಣಗಳಿಂದ ಹೊಡೆದ, ಅಶ್ವತ್ಥಾಮ. ಇದು ಅದ್ಭುತವಾಗಿತ್ತು. ರಾಜನೆ, ಇದನ್ನು ಎಲ್ಲ ಯೋಧರೂ ಪ್ರಶಂಸೆ ಮಾಡಿದರು.

ಯದಾ ತ್ವಗ್ರಸ್ಯತ ರಣೇ ದ್ರೋಣಪುತ್ರೇಣ ಫಲ್ಗುನಃ ।
ತತೋ ರಶ್ಮೀನ್ ರಥಾಶ್ವಾನಾಂ ಕ್ಷುರಪ್ರೈಶ್ಛಿಚ್ಛಿದೇ ಜಯಃ ॥೧೯॥

ಯಾವಾಗ ಅಶ್ವತ್ಥಾಮನು ರಣದಲ್ಲಿ ಫಲ್ಗುನನನ್ನು ಆಕ್ರಮಿಸಿದನೋ ಆಗ ಫಲ್ಗುನನು ಅವನ ರಥದ ಕುದುರೆಗಳ ಲಗಾಮುಗಳನ್ನು ಬಾಣಗಳಿಂದ ಕಡಿದ.

ಪ್ರಾದ್ರವಂಸ್ತುರಗಾಸ್ತೇ ತು ಶರವೇಗಪ್ರಪೀಡಿತಾಃ ।
ತತೋಭೂನ್ನಿನದೋ ಭೂಯಸ್ತವ ಸೈನ್ಯಸ್ಯ ಭಾರತ ॥೨೦॥

ರಾಜನೆ, ಆಗ ಬಾಣದ ವೇಗದಿಂದ ಪೀಡಿತವಾದ ಅಶ್ವತ್ಥಾಮನ ಕುದುರೆಗಳು ಓಡಿಹೋದುವು. ಆಗ ನಿನ್ನ ಸೈನ್ಯದಲ್ಲಿ ದೊಡ್ಡ ಸದ್ದುಗದ್ದಲ ಉಂಟಾಯಿತು.

ಪಾಂಡವಾಸ್ತು ಜಯಂ ಲಬ್ಧ್ವಾ ತವ ಸೈನ್ಯಮುಪಾದ್ರವನ್ ।
ಸಮನ್ತಾನ್ನಿಶಿತಾನ್ ಬಾಣಾನ್ ವಿಮುಂಚಂತೋ ಜಯೈಷಿಣಃ ॥೨೧॥

ಜಯಾಕಾಂಕ್ಷಿಗಳಾದ ಪಾಂಡವರು ಜಯವನ್ನು ಪಡೆದು ನಿನ್ನ ಸೈನ್ಯವನ್ನು ಎಲ್ಲೆಡೆ ತೀಕ್ಷ್ಣವಾದ ಬಾಣಗಳನ್ನು ಎಸೆದು ಹೊಡೆದೋಡಿಸಿದರು.

ಪಾಂಡವೈಸ್ತು ಮಹಾರಾಜ ಧಾರ್ತರಾಷ್ಟ್ರೀ ಮಹಾಚಮೂಃ ।
ಪುನಃ ಪುನರಥೋ ವೀರೈರಭಂಜಿ ಜಿತಕಾಶಿಭಿಃ ॥೨೨॥

ಮಹಾರಾಜ, ಕೌರವರ ದೊಡ್ಡಸೈನ್ಯವು ಜಯದಿಂದ ಶೋಭಿಸುವ ವೀರ ಪಾಂಡವರಿಂದ ಪುನಃಪುನಃ ಭಗ್ನವಾಯಿತು.

ಪಶ್ಯತಾಂ ತೇ ಮಹಾರಾಜ ಪುತ್ರಾಣಾಂ ಚಿತ್ರಯೋಧಿನಾಮ್ ।
ಶಕುನೇಃ ಸೌಬಲೇಯಸ್ಯ ಕರ್ಣಸ್ಯ ಚ ವಿಶಾಂಪತೇ ॥೨೩॥

ವಾರ್ಯಮಾಣಾ ಮಹಾಸೇನಾ ಪುತ್ರೈಸ್ತವ ಜನೇಶ್ವರ ।
ನಾವತಿಷ್ಠತ ಸಂಗ್ರಾಮೇ ತಾಡ್ಯಮಾನಾ ಸಮಂತತಃ ॥೨೪॥

ಮಹಾರಾಜ, ಸುಂದರವಾಗಿ ಯುದ್ಧಮಾಡುವವರು ನಿನ್ನ ಪುತ್ರರು. ಆದರೂ ಶಕುನಿ-ಕರ್ಣರು ನೋಡುತ್ತಿದ್ದಂತೇ, ನಿನ್ನ ಪುತ್ರರು ತಡೆಯುತ್ತಿದ್ದರೂ, ಎಲ್ಲೆಡೆ ಹೊಡೆತ ಬೀಳುತ್ತಿದ್ದುದರಿಂದ, ನಿನ್ನ ಸೈನ್ಯ ಸ್ಥಿರವಾಗಿ ರಣದಲ್ಲಿ ನಿಂತುಕೊಳ್ಳಲಿಲ್ಲ.

ತತೋ ಯೋಧೈರ್ಮಹಾರಾಜ ಪಲಾಯದ್ಭಿಸ್ತತಸ್ತತಃ ।
ಅಭವದ್ ವ್ಯಾಕುಲಂ ಭೀತೈಃ ಪುತ್ರಾಣಾಂ ತೇ ಮಹದ್
ಬಲಮ್ ॥೨೫॥

ಮಹಾರಾಜ, ಭೀತರಾದ ನಿನ್ನ ಯೋಧರು ದಿಕ್ಕಾಪಾಲಾಗಿ ಓಡುತ್ತಿದ್ದುದರಿಂದ ನಿನ್ನ ಮಕ್ಕಳ ದೊಡ್ಡಸೈನ್ಯ ವ್ಯಾಕುಲಗೊಂಡಿತು.

ತಿಷ್ಠ ತಿಷ್ಠೇತಿ ಸತತಂ ಸೂತಪುತ್ರಸ್ಯ ಜಲ್ಪತಃ ।
ನಾವತಿಷ್ಠತ ಸಾ ಸೇನಾ ವಧ್ಯಮಾನಾ ಮಹಾತ್ಮಭಿಃ ॥೨೬॥

ಕರ್ಣನು ಸತತವಾಗಿ ನಿಲ್ಲು ನಿಲ್ಲೆಂದು ಹೇಳುತ್ತಿದ್ದರೂ ಮಹಾತ್ಮರಾದ ಪಾಂಡವರಿಂದ ಹೊಡೆಸಿಕೊಳ್ಳುತ್ತಿದ್ದುದರಿಂದ ಸೈನ್ಯ ನಿಲ್ಲಲಿಲ್ಲ.

ಅಥೋತ್ಕ್ರುಷ್ಟಂ ಮಹಾರಾಜ ಪಾಂಡವೈರ್ಜಿತಕಾಶಿಭಿಃ ।
ಧಾರ್ತರಾಷ್ಟ್ರಬಲಂ ದೃಷ್ಟ್ವಾ ದ್ರವಮಾಣಂ ಸಮಂತತಃ ॥೨೭॥

ಮಹಾರಾಜ, ಜಯದಿಂದ ಶೋಭಿಸುವ ಪಾಂಡವರು ಎಲ್ಲಕಡೆಗೆ ಪಲಾಯನ ಮಾಡುತ್ತಿದ್ದ ಕೌರವಸೈನ್ಯವನ್ನು ಕಂಡು ಗಟ್ಟಿಯಾಗಿ ಗರ್ಜಿಸಿದರು.

ತತೋ ದುರ್ಯೋಧನಃ ಕರ್ಣಮಬ್ರವೀತ್ ಪ್ರಣಯಾದಿವ ।
ಪಶ್ಯ ಕರ್ಣ ಯಥಾ ಸೇನಾ ಪಾಂಡವೈರರ್ದಿತಾ ಭೃಶಮ್ ॥೨೮॥

ತ್ವಯಿ ತಿಷ್ಠತಿ ಸಂತ್ರಾಸಾತ್ ಪಲಾಯನಪರಾಯಣಾ ।
ಏತಜ್ಞಾತ್ವಾ ಮಹಾಬಾಹೋ ಕುರು ಪ್ರಾಪ್ತಮರಿಂದಮ ॥೨೯॥

ಆಗ ದುರ್ಯೋಧನನು ಕರ್ಣನಿಗೆ ಪ್ರೀತಿಯಿಂದ ನುಡಿದ, 'ನೋಡು, ಕರ್ಣ, ಪಾಂಡವರಿಂದ ಬಹಳ ಪೀಡಿತವಾದ ನಮ್ಮ ಸೈನ್ಯ ನೀನಿರುವಾಗಲೆ ಭಯದಿಂದ ಪಲಾಯನ ಮಾಡುತ್ತಿದೆ. ಇದನ್ನು ಅರಿತು ತಕ್ಕ ಉಪಾಯವೇನಾದರೂ ಮಾಡು.'

ಸಹಸ್ರಾಣಿ ಚ ಯೋಧಾನಾಂ ತ್ವಾಮೇವ ಪುರುಷರ್ಷಭ ।
ಕ್ರೋಶಂತಿ ಸಮರೇ ವೀರ ದ್ರಾವ್ಯಮಾಣಾನಿ ಪಾಂಡವೈಃ ॥೩೦॥

'ವೀರ ಕರ್ಣನೆ, ಸಾವಿರಗಟ್ಟಲೆ ಯೋಧರು ಪಾಂಡವರಿಂದ ಅಟ್ಟಿಸಿಕೊಂಡು ರಣದಲ್ಲಿ ನಿನ್ನನ್ನೇ ಸಹಾಯಕ್ಕಾಗಿ ಕೂಗುತ್ತಿದ್ದಾರೆ.'

ಏತಚ್ಛ್ರುತ್ವಾ ತು ರಾಧೇಯೋ ದುರ್ಯೋಧನವಚೋ ಮಹಾನ್ ।
ಮದ್ರರಾಜಮಿದಂ ವಾಕ್ಯಮಬ್ರವೀತ್ ಸೂತನಂದನಃ । ।೩೧।।

ದುರ್ಯೋಧನನ ಈ ಮಾತನ್ನು ಕೇಳಿ ಮಹಾತ್ಮ ಕರ್ಣನು ಶಲ್ಯನಿಗೆ ಹೀಗೆ ಹೇಳಿದ.

ಪಶ್ಯ ಮೇ ಭುಜಯೋರ್ವೀರ್ಯಮಸ್ತ್ರಾಣಾಂ ಚ ಜನೇಶ್ವರ ।
ಅದ್ಯ ಹನ್ಮಿ ರಣೇ ಸರ್ವಾನ್ ಪಾಂಚಾಲಾನ್ ಪಾಂಡುಭಿಃ ಸಹ ।।೩೨।।
ವಾಹಯಾಶ್ವಾನ್ನರವ್ಯಾಘ್ರ ಭದ್ರಾಯೈವ ನ ಸಂಶಯಃ ।।೩೩।।

'ರಾಜನೆ, ನನ್ನ ಬಾಹುಬಲ ಅಸ್ತ್ರಬಲಗಳನ್ನು ನೋಡು, ಈಗ ರಣದಲ್ಲಿ ನಾನು ಎಲ್ಲ ಪಾಂಚಾಲರನ್ನೂ ಪಾಂಡವರೊಂದಿಗೆ ಸಂಹರಿಸುತ್ತೇನೆ. ಅಶ್ವಗಳನ್ನು ನಡೆಸು. ಶುಭವಾಗುತ್ತದೆ, ಸಂಶಯ ಬೇಡ.'

ಏವಮುಕ್ತ್ವಾ ಮಹಾರಾಜ ಸೂತಪುತ್ರಃ ಪ್ರತಾಪವಾನ್ ।
ಪ್ರಗೃಹ್ಯ ವಿಜಯಂ ವೀರೋ ಧನುಃಶ್ರೇಷ್ಠಂ ಪುರಾತನಮ್ ।।೩೪।।
ಸಜ್ಯಂ ಕೃತ್ವಾ ಮಹಾರಾಜ ಸಮ್ಮೃಜ್ಯ ಚ ಪುನಃ ಪುನಃ ।।೩೫।।
ಸನ್ನಿವಾರ್ಯ ಚ ಯೋಧಾನ್ ಸ್ವಾನ್ ಸತ್ಯೇನ ಶಪಥೇನ ಚ ।
ಪ್ರಾಯೋಜಯದಮೇಯಾತ್ಮಾ ಭಾರ್ಗವಾಸ್ತ್ರಂ ಮಹಾಬಲಃ ।।೩೬।।

ಮಹಾರಾಜ, ಪ್ರತಾಪಶಾಲಿ ಅಮೇಯಾತ್ಮ ಮಹಾಬಲಿ ಕರ್ಣನು ವಿಜಯವೆಂಬ ಪುರಾತನವಾದ ಉತ್ತಮ ಧನುಸ್ಸನ್ನು ಎತ್ತಿಕೊಂಡು, ಹೆದೆಏರಿಸಿ, ಪುನಃ ಪುನಃ ಸವರಿ, ತನ್ನ ಯೋಧರನ್ನು ಓಡಿಹೋಗದಂತೆ ತಡೆದು, ಸತ್ಯದ ಮೇಲಾಣೆ ಇಟ್ಟು ಭಾರ್ಗವಾಸ್ತ್ರವನ್ನು ಪ್ರಯೋಗಿಸಿದ.

ತತೋ ರಾಜನ್ ಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ಕೋಟಿಶಶ್ಚ ಶರಾಸ್ತೀಕ್ಷ್ಣಾಃ ನಿರಗಚ್ಛನ್ ಮಹಾಮೃಧೇ ।।೩೭।।

ಆಗ ರಾಜನೆ, ಸಾವಿರಸಾವಿರ ಲಕ್ಷಲಕ್ಷ ಕೋಟಿ ಕೋಟಿ ಸಂಖ್ಯೆಯಲ್ಲಿ ಬಲುತೀಕ್ಷ್ಣವಾದ ಬಾಣಗಳು ಮಹಾರಣದಲ್ಲಿ ಧನುಸ್ಸಿನಿಂದ ಹೊರಗೆ ಹೊರಟವು.

ಜ್ವಲಿತೈಸ್ತೈರ್ಮಹಾಘೋರೈಃ ಕಂಕಬರ್ಹಿಣವಾಜಿತೈಃ ।
ಸಂಛನ್ನಾ ಪಾಂಡವೀ ಸೇನಾ ನ ಪ್ರಾಜ್ಞಾಯತ ಕಿಂಚನ ॥೩೮॥

ಹದ್ದಿನ ರೆಕ್ಕೆಗಳ ಪಕ್ಕವುಳ್ಳ ಮಹಾಘೋರವಾಗಿ ಉರಿವ ಆ ಬಾಣಗಳಿಂದ ಪಾಂಡವಸೈನ್ಯ ಮುಚ್ಚಿಹೋಯಿತು, ಏನೂ ಕಾಣಿಸುತ್ತಿರಲಿಲ್ಲ.

ಭಾರ್ಗವಂ ಭಾರ್ಗವಶ್ರೇಷ್ಠಾದವಾಪ್ತಮತಿ ತೇಜಸಂ ।
ಯೇನ ಪ್ರಯುಜ್ಯಮಾನೇನ ಸ ದೇವಾಸುರ ಮಾನವಂ ॥೩೯॥

ಸಪಾತಾಲಾರ್ಣವಜಲಂ ಸಂಪ್ರಾಪ್ತಂ ಪ್ರಲಯೋತ್ತಮಂ ।
ಸಶೈಲಕಾನನವನಂ ತ್ರೈಲೋಕ್ಯಮಶಿವಂ ಬಭೌ ॥೪೦॥

ಭೃಗುಕುಲತಿಲಕನಾದ ಪರಶುರಾಮ ಉಪದೇಶಿಸಿದ ಭಾರ್ಗವಾಸ್ತ್ರವು ಅತಿ ತೇಜಸ್ವಿ. ದೇವ ಅಸುರ ಮಾನವಸಹಿತವಾದ ಪಾತಾಲ ಸಮುದ್ರಜಲ ಪರ್ವತ ಅರಣ್ಯಸಮೇತವಾದ ಮೂರ್ಲೋಕಕ್ಕೂ ಕ್ಷೇಮವಿಲ್ಲದಂತೆ ಮಾಡುತ್ತ ಜ್ವಲಿಸಿತು. ಪ್ರಲಯ ಮಾಡಲು ತೊಡಗಿತು.

ಹಾಹಾಕಾರೋ ಮಹಾನಾಸೀತ್ ಪಾಂಚಾಲಾನಾಂ ವಿಶಾಂಪತೇ ।
ಪೀಡಿತಾನಾಂ ಬಲವತಾ ಭಾರ್ಗವಾಸ್ತ್ರೇಣ ಸಂಯುಗೇ ॥೪೧॥

ಮಹಾರಾಜ, ಪ್ರಬಲವಾದ ಭಾರ್ಗವಾಸ್ತ್ರದಿಂದ ರಣದಲ್ಲಿ ಪೀಡಿತರಾದ ಪಾಂಚಾಲರಲ್ಲಿ ದೊಡ್ಡ ಹಾಹಾಕಾರ ಉಂಟಾಯಿತು.

ನಿಪತದ್ಭಿರ್ಗಜೈ ರಾಜನ್ನರೈಶ್ಚಾಪಿ ಸಹಸ್ರಶಃ ।
ರಥೈಶ್ಚಾಪಿ ನರವ್ಯಾಘ್ರ ಹಯೈಶ್ಚಾಪಿ ಸಮಂತತಃ ॥೪೨॥

ಪ್ರಾಕಮ್ಪತ ಮಹೀ ರಾಜನ್ನಿಹತೈಸ್ತೈಸ್ತತಸ್ತತಃ ।
ವ್ಯಾಕುಲಂ ಸರ್ವಮಭವತ್ ಪಾಂಡವಾನಾಂ ಮಹದ್ಬಲಮ್ ॥೪೩॥

ರಾಜನೆ, ಸಾವಿರಾರು ಸಂಖ್ಯೆಯಲ್ಲಿ ಎಲ್ಲೆಡೆ ಹತವಾಗಿ ಬಿದ್ದ ಗಜ ಪದಾತಿ ರಥ ಅಶ್ವಗಳಿಂದ ಭೂಮಿ ನಡುಗಿತು. ಪಾಂಡವರ ಮಹಾಸೈನ್ಯವೆಲ್ಲವೂ ವ್ಯಾಕುಲ ಗೊಂಡಿತು.

ಕರ್ಣಸ್ತ್ವೇಕೋ ಯುಧಾಂ ಶ್ರೇಷ್ಠೋ ವಿಧೂಮ ಇವ ಪಾವಕಃ ।
ದಹನ್ ಶತ್ರೂನ್ನರವ್ಯಾಘ್ರ ಶುಶುಭೇ ಸ ಪರಂತಪಃ ॥೪೪॥

ರಾಜನೆ, ಯೋಧರಲ್ಲಿ ಶ್ರೇಷ್ಠನಾದ ಶತ್ರುನಾಶಕನಾದ ಕರ್ಣನೊಬ್ಬನೆ ಹೊಗೆಯಿಲ್ಲದ ಬೆಂಕಿಯಂತೆ ಶತ್ರುಗಳನ್ನು ಸುಡುತ್ತ ಶೋಭಿಸಿದ.

ತೇ ವಧ್ಯಮಾನಾಃ ಕರ್ಣೇನ ಪಾಂಚಾಲಾಶ್ಚೇದಿಭಿಃ ಸಹ ।
ತತ್ರ ತತ್ರ ವ್ಯಮುಹ್ಯಂತ ವನದಾಹೇ ಯಥಾ ದ್ವಿಪಾಃ ॥೪೫॥
ಚುಕ್ರುಶುಸ್ತೇ ನರವ್ಯಾಘ್ರ ಯಥಾಪ್ರಾಣಂ ನರೋತ್ತಮಾಃ ॥೪೬॥

ಕಾಳ್ಗಿಚ್ಚಿನಲ್ಲಿ ಆನೆಗಳಂತೆ ನರೋತ್ತಮರಾದ ಪಾಂಚಾಲ ಚೇದಿಯೋಧರು ಕರ್ಣನಿಂದ ಹೊಡೆಸಿಕೊಳ್ಳುತ್ತ ಅಲ್ಲಲ್ಲಿ ಮೈಮರೆತು ಅಲ್ಲಲ್ಲಿ ಬಿದ್ದರು. ಶಕ್ತಿ ಇದ್ದಷ್ಟು ಕೂಗಿಕೊಂಡರು.

ತೇಷಾಂ ತು ಕ್ರೋಶತಾಂ ದೀನಂ ಭೀತಾನಾಂ ರಣಮೂರ್ಧನಿ ।
ಧಾವತಾಂ ಚ ದಿಶೋ ರಾಜನ್ ವಿತ್ರಸ್ತಾನಾಂ ಸಮಂತತಃ ॥೪೭॥
ಆರ್ತನಾದೋ ಮಹಾನಾಸೀತ್ ಪ್ರೇತಾನಾಮಿವ ಸಂಪ್ಲವೇ ॥೪೮॥

ರಣಾಗ್ರದಲ್ಲಿ ಭಯದಿಂದ ನಡುಗಿ ಎಲ್ಲ ದಿಕ್ಕುಗಳಿಗೆ ಓಡುವ, ದೈನ್ಯದಿಂದ ಕೂಗುವ ಸೈನಿಕರ ದೊಡ್ಡ ಆರ್ತನಾದವು ಪ್ರಳಯದಲ್ಲಿ ಸಾಯುವ ಪ್ರಾಣಿಗಳ ಕೂಗಿನಂತೇ ಇತ್ತು.

ವಧ್ಯಮಾನಾಂಸ್ತು ತಾನ್ ದೃಷ್ಟ್ವಾ ಸೂತಪುತ್ರೇಣ ಮಾರಿಷ ।
ವಿತ್ರೇಸುಃ ಸರ್ವಭೂತಾನಿ ತಿರ್ಯಗ್ಯೋನಿಗತಾನ್ಯಪಿ ॥೪೯॥

ರಾಜನೆ, ಕರ್ಣನು ಅವರನ್ನು ವಧಿಸುತ್ತಿರುವುದನ್ನು ಕಂಡು ಪ್ರಾಣಿವರ್ಗಕ್ಕೆ ಸೇರಿದ ಎಲ್ಲ ಜೀವಿಗಳೂ ಕೂಡ ನಡುಗಿದುವು.

ತೇ ವಧ್ಯಮಾನಾಃ ಸಮರೇ ಸೂತಪುತ್ರೇಣ ಸೃಂಜಯಾಃ ।
ಅರ್ಜುನಂ ವಾಸುದೇವಂ ಚ ವ್ಯಾಕ್ರೋಶಂತ ಮುಹುರ್ಮುಹುಃ ॥೫೦॥

ಪ್ರೇತರಾಜಪುರೇ ಯದ್ವತ್ ಪ್ರೇತರಾಜಂ ವಿಚೇತಸಃ ॥೫೧॥

ರಣದಲ್ಲಿ ಕರ್ಣನಿಂದ ಹತರಾಗುತ್ತಿದ್ದ ಸೃಂಜಯರು ವ್ಯಗ್ರಚಿತ್ತರಾಗಿ,

ಯಮರಾಜಪಟ್ಟಣದಲ್ಲಿ ಯಮನನ್ನು ಕೂಗುವಂತೆ, ಅರ್ಜುನನನ್ನೂ ಕೃಷ್ಣನನ್ನೂ ಕೂಗಿದರು.

ಶ್ರುತ್ವಾ ತು ನಿನದಂ ತೇಷಾಂ ವಧ್ಯತಾಂ ಕರ್ಣಸಾಯಕೈಃ ॥೫೨॥

ಅಥಾಬ್ರವೀದ್ ವಾಸುದೇವಂ ಕುಂತೀಪುತ್ರೋ ಧನಂಜಯಃ ।
ಭಾರ್ಗವಾಸ್ತ್ರಂ ಮಹಾಘೋರಂ ದೃಷ್ಟ್ವಾ ತತ್ರ ಸಮೀರಿತಮ್ ॥೫೩॥

ಕರ್ಣನ ಬಾಣಗಳಿಂದ ಹತರಾಗುತ್ತಿದ್ದ ಸೃಂಜಯರ ಕೂಗನ್ನು ಕೇಳಿ ಅರ್ಜುನನು, ಕರ್ಣನು ಪ್ರಯೋಗಿಸಿದ ಮಹಾ ಘೋರವಾದ ಭಾರ್ಗವಾಸ್ತ್ರವನ್ನು ನೋಡಿ ಕೃಷ್ಣನಿಗೆ ನುಡಿದ.

ಪಶ್ಯ ಕೃಷ್ಣ ಮಹಾಬಾಹೋ ಭಾರ್ಗವಾಸ್ತ್ರಸ್ಯ ವಿಕ್ರಮಮ್ ।
ನೈತದಸ್ತ್ರಂ ಹಿ ಸಮರೇ ಶಕ್ಯಂ ಹಂತುಂ ಕಥಂಚನ ॥೫೪॥

ನೋಡು, ಭಾರ್ಗವಾಸ್ತ್ರದ ಪರಾಕ್ರಮವನ್ನು, ಮಹಾಬಾಹುವಾದ ಕೃಷ್ಣನೆ! ಈ ಅಸ್ತ್ರವನ್ನು ರಣದಲ್ಲಿ ನಿಷ್ಕ್ರಿಯಗೊಳಿಸಲು ಯಾವ ರೀತಿಯಿಂದಲೂ ಶಕ್ಯವಿಲ್ಲ.

ಸೂತಪುತ್ರಂ ಚ ಸಂರಬ್ಧಂ ಪಶ್ಯ ಕೃಷ್ಣ ಮಹಾರಣೇ ।
ಅಂತಕಪ್ರತಿಮಂ ವೀರಂ ಕುರ್ವಾಣಂ ಕರ್ಮ ದಾರುಣಮ್ ॥೫೫॥

ಮಹಾರಣದಲ್ಲಿ ಕುಪಿತನಾದ ವೀರ ಕರ್ಣನನ್ನು ನೋಡು, ಕೃಷ್ಣ! ಅಂತಕನಂತೆ ದಾರುಣವಾದ ಯುದ್ಧಕರ್ಮವನ್ನು ಮಾಡುತ್ತಿದ್ದಾನೆ.

ಅಭೀಕ್ಷ್ಣಂ ಚೋದಯನ್ನಶ್ವಾನ್ ಪ್ರೇಕ್ಷತೇ ಮಾಂ ಮುಹುರ್ಮುಹುಃ ।
ನ ಚ ಪಶ್ಯಾಮಿ ಸಮರೇ ಕರ್ಣಂ ಪ್ರತಿ ಪಲಾಯಿತುಮ್ ॥೫೬॥

ಕುದುರೆಗಳನ್ನು ನಡೆಸುತ್ತ ಪುನಃಪುನಃ ನನ್ನನ್ನೆ ನೋಡುತ್ತಿದ್ದಾನೆ. ಕರ್ಣನ ಕಡೆಗೆ ಪಲಾಯನ ಮಾಡಲು ನನ್ನನ್ನು ಬಿಟ್ಟು ಇನ್ನೊಬ್ಬ ಶಕ್ತನಾದವನನ್ನು ನಾ ಕಾಣೆ.

ಜೀವನ್ ಪ್ರಾಪ್ನೋತಿ ಪುರುಷಃ ಸಂಖ್ಯೇ ಜಯಪರಾಜಯೌ ।
ಮೃತಸ್ಯ ತು ಹೃಷೀಕೇಶ ವಧ ಏವ ಕುತೋ ಜಯಃ ॥೫೭॥

ಕೃಷ್ಣ ಬದುಕಿ ಉಳಿದಿದ್ದರೆ ರಣದಲ್ಲಿ ಪುರುಷನು ಜಯವನ್ನಾಗಲಿ, ಪರಾಜಯವನ್ನಾಗಲಿ ಹೊಂದಬಲ್ಲ. ಸತ್ತರೆ ಸಾವೇ ಲಭಿಸಿದಂತಾಯಿತು, ಜಯದಾಸೆ ಎಲ್ಲಿ?

ಇಲ್ಲಿ ಲಕ್ಷಾಲಂಕಾರ ಹೇಳುವಂತೆ 'ಪಲಾಯನ'ವೆಂದರೆ 'ಪರಾ' ಆಚೆಗೆ 'ಅಯನ' 'ಹೋಗುವುದು' ಎಂದಿಷ್ಟೇ ಅರ್ಥ. ಹೆದರಿ ಒಂದು ಪ್ರದೇಶದಿಂದ ಬೇರೆ ಪ್ರದೇಶಕ್ಕೆ ಹೋಗುವುದು ಎಂಬ ವಿಶೇಷಾರ್ಥ 'ಪಲಾಯನ' ಶಬ್ದಕ್ಕೆ ಸ್ವತಃ ಇಲ್ಲ. ಈ ವಿಶೇಷಾರ್ಥಕ್ಕಾಗಿ 'ಕರ್ಣಾತ್ ಪಲಾಯತೇ' 'ಕರ್ಣನಿಗೆ ಹೆದರಿ ಅವನಿಂದ ಬೇರೆಯೇ ಆದ ಪ್ರದೇಶಕ್ಕೆ ಹೋಗುತ್ತಾನೆ' ಎಂದು ಪಂಚಮೀವಿಭಕ್ತಿ ಇರಬೇಕಾಗುತ್ತದೆ. ಪಂಚಮೀ ಅಪಾದಾನಾರ್ಥದಲ್ಲಿರುವುದರಿಂದ ಈ ಅರ್ಥ ಪಂಚಮೀಪ್ರಯೋಗದಿಂದಲೆ ಬರುತ್ತದೆ. ಪ್ರಕೃತ 'ಕರ್ಣಂ ಪ್ರತಿ ಪಲಾಯಿತುಂ' ಎಂದು ದ್ವಿತೀಯಾವಿಭಕ್ತಿಯ ಪಾಠವಿದೆ. ಆಚೆಗೆ ಕರ್ಣನ ಕಡೆಗೆ ಹೋಗುವುದೆಂದೇ ಅರ್ಥ. ರಣರಂಗದಲ್ಲಿ ಇಲ್ಲಿಂದಾಚೆಗೆ ಕರ್ಣನ ಕಡೆಗೆ ಹೋಗುವ ಸಾಮರ್ಥ್ಯವಿರುವುದು ತನಗೆ, ಒಬ್ಬ ಅರ್ಜುನನಿಗೆ ಮಾತ್ರ. ಆದರೆ ಭಾರ್ಗವಾಸ್ತ್ರ ಬ್ರಹ್ಮಾಸ್ತ್ರಕ್ಕಿಂತ ಮಿಗಿಲು. ಅದಕ್ಕೆ ಪ್ರತ್ಯಸ್ತ್ರವೇ ಇಲ್ಲ. ನಾರಾಯಣಾಸ್ತ್ರದಂತೇ ಅದು. ಅದಕ್ಕೆ ಹೆದರಿ ಕರ್ಣನಿಂದಾಚೆಗೆ ಪಲಾಯನ ಮಾಡಿದರೆ ಮಾತ್ರ ಬದುಕಿ ಉಳಿಯಲು ಸಾಧ್ಯ. ಅರ್ಜುನ ವೀರಕ್ಷತ್ರಿಯ. ಪಲಾಯನ ಮಾಡಿ ತನ್ನ ಜೀವ ಉಳಿಸಿಕೊಳ್ಳುವವನಲ್ಲ. ಪಲಾಯನ ಮಾಡದೆ ಎದುರಿಗೆ ನಿಂತರೆ ಸಾವು ನಿಶ್ಚಿತ. ಧೃಷ್ಟದ್ಯುಮ್ನ ಮುಂತಾದವರು 'ಧಾವತಾಂ ಚ ದಿಶೋ ರಾಜನ್ ವಿತ್ರಸ್ತಾನಾಂ ಸಮಂತತಃ' (ಶ್ಲೋಕ.47) ಎಂದು ಹೇಳಿದಂತೆ ಪಲಾಯನ ಮಾಡಿ ಜೀವಉಳಿಸಿಕೊಂಡರು. ಅವರಿಗೆ ಬೇರೆ ಉಪಾಯವಿರಲಿಲ್ಲ. ಅದರಿಂದ ಅರ್ಜುನ ತಾನು ಇಲ್ಲಿಂದಾಚೆಗೆ ಕರ್ಣನ ಕಡೆಗೆ ಹೋಗದೇ ಈಚೆಗೇ ಬೇರೆ ದಾರಿಯಿಂದಲೇ ಶಿಬಿರದಲ್ಲಿರುವ ಧರ್ಮರಾಜನನ್ನು ಕಾಣಲು ಹೋಗುವೆನು ಎನ್ನುತ್ತಿದ್ದಾನೆ. ನಿರ್ಣಯದಲ್ಲಿ ಹೀಗೇ ಹೇಳಿದ್ದಾರೆ.

ಏವಮುಕ್ತಸ್ತು ಪಾರ್ಥೇನ ಕೃಷ್ಣೋ ಮತಿಮತಾಂ ವರಮ್ ।
ಧನಂಜಯಮುವಾಚೇದಂ ಪ್ರಾಪ್ತಕಾಲಮರಿಂದಮಮ್ ॥೫೮॥

ಹೀಗೆ ಪಾರ್ಥ ಹೇಳಿದಾಗ ಕೃಷ್ಣನು ಬುದ್ಧಿವಂತರಲ್ಲಿ ಶ್ರೇಷ್ಠನಾದ ಶತ್ರುನಾಶಕನಾದ ಅರ್ಜುನನಿಗೆ ಕಾಲೋಚಿತವಾದ ಈ ಮಾತನ್ನು ಹೇಳಿದ.

ಕರ್ಣೇನ ಹಿ ದೃಢಂ ರಾಜಾ ಕುಂತೀಪುತ್ರಃ ಪರಿಕ್ಷತಃ ।
ತಂ ದೃಷ್ಟ್ವಾ ऽऽಶ್ವಾಸ್ಯ ಚ ಪುನಃ ಕರ್ಣಂ ಪಾರ್ಥ ವಧಿಷ್ಯಸಿ ॥೫೯॥

'ಕರ್ಣನು ರಾಜಾ ಯುಧಿಷ್ಠಿರನಿಗೆ ಬಹಳ ಗಾಯ ಉಂಟು ಮಾಡಿದ್ದಾನೆ. ನೀನು ಈಗ ಯುಧಿಷ್ಠಿರನನ್ನು ಸಂತೈಸಿ ಬಳಿಕ, ಅರ್ಜುನ, ನೀನು ಕರ್ಣನನ್ನು ವಧಿಸು' ಎಂದು.

ತತೋ ಜನಾರ್ದನಃ ಪ್ರಾಯಾದ್ ದ್ರಷ್ಟುಮಿಚ್ಛನ್ಯುಧಿಷ್ಠಿರಮ್ ।
ಶ್ರಮೇಣ ಗ್ರಾಹಯಿಷ್ಯಂಶ್ಚ ಕರ್ಣಂ ಯುದ್ಧೇನ ಮಾರಿಷ ॥೬೦॥

ವಿಶ್ರಮಾರ್ಥಂ ಚ ಕೌರವ್ಯ ಪಾಂಡವಸ್ಯ ಮಹಾತ್ಮನಃ
ಅಪಯಾತೋ ರಣಾದ್ ವೀರೋ ರಾಜಾನಂ ದ್ರಷ್ಟುಮೇವ ಚ ॥೬೧॥

ಪ್ರತ್ಯನೀಕಮವಸ್ಥಾಪ್ಯ ಭೀಮಂ ಭೀಮಪರಾಕ್ರಮಮ್ ।
ಅಲಂ ವಿಷಹಿತುಂ ಹ್ಯೇಷ ಕುರೂಣಾಂ ಸಂಪ್ರಪದ್ಯತಾಮ್ ॥೬೨॥

ತತೋ ಧನಂಜಯೋ ದ್ರಷ್ಟುಂ ರಾಜಾನಂ ಬಾಣಪೀಡಿತಮ್ ।
ರಥೇನ ಪ್ರಯಯೌ ಕ್ಷಿಪ್ರಂ ಸಂಗ್ರಾಮೇ ಕೇಶವಾಜ್ಞಯಾ ॥೬೩॥

ಬಳಿಕ ಶ್ರೀಕೃಷ್ಣ ಯುಧಿಷ್ಠಿರನನ್ನು ನೋಡಲು ಹೊರಟನು. ಕರ್ಣನನ್ನು ಶ್ರಮಕರವಾದ ಯುದ್ಧದಲ್ಲಿ ಸಿಕ್ಕಿಹಾಕಿಕೊಳ್ಳುವಂತೆ ಮಾಡಲು ಮತ್ತು ಮಹಾತ್ಮ ಅರ್ಜುನನಿಗೆ ವಿಶ್ರಾಂತಿ ಸಿಗುವಂತೆ ಮಾಡಲು ಶ್ರೀಕೃಷ್ಣ ಹೀಗೆ ಮಾಡಿದ. ಕೌರವಸೈನಿಕರು ಆಕ್ರಮಿಸಲು ಬಂದಾಗ ಅವರಿಗೆ ಇದಿರಾಗಿ ಭೀಮಪರಾಕ್ರಮಿ ಭೀಮನನ್ನು 'ಅವರನ್ನು ಇದಿರಿಸಲು ಈತನೆ ಸಮರ್ಥ' ಎಂಬ ಅಭಿಪ್ರಾಯದಿಂದ ನಿಲ್ಲಿಸಿ, ರಣರಂಗದಿಂದಾಚೆ ಶಿಬಿರದ ಕಡೆಗೆ, ಬಾಣಗಳಿಂದ ಪೀಡಿತನಾಗಿದ್ದ ಯುಧಿಷ್ಠಿರನನ್ನು ಕಾಣಲು, ಅರ್ಜುನನು ಕೃಷ್ಣಾಜ್ಞೆಯಿಂದ ರಥದಿಂದ ಬೇಗನೆ ಹೋದನು.

ಗಚ್ಛನ್ನೇವ ತು ಕೌಂತೇಯೋ ಧರ್ಮರಾಜದಿದೃಕ್ಷಯಾ ।
ಸೈನ್ಯಮಾಲೋಕಯಾಮಾಸ ನಾಪಶ್ಯತ್ ತತ್ರ ಚಾಗ್ರಜಮ್ ॥೬೪॥

ಧರ್ಮರಾಜನನ್ನು ನೋಡಲೆಂದು ಹೋಗುವಾಗ ಅರ್ಜುನನು ಸೈನ್ಯವನ್ನು ನೋಡಿದ. ಅಲ್ಲಿ ಅಣ್ಣ ಕಾಣಿಸಲಿಲ್ಲ.

ಯುದ್ಧಂ ಕೃತ್ವಾ ತು ಕೌಂತೇಯೋ ದ್ರೋಣಪುತ್ರೇಣ ಭಾರತ ।
ದುಃಸಹಂ ವಜ್ರಿಣಾ ಸಂಖೇ ಪರಾಜಿಗ್ಯೇ ಗುರೋಃ ಸುತಮ್ ॥೬೫॥

ರಾಜನೆ, ಅರ್ಜುನನು ಅಶ್ವತ್ಥಾಮನೊಡನೆ ಯುದ್ಧ ಮಾಡಿ, ಇಂದ್ರನಿಗೂ ಯುದ್ಧದಲ್ಲಿ ಇದಿರಿಸಲಾಗದಂಥ ಆ ಅಶ್ವತ್ಥಾಮನನ್ನು ಗುರುಸುತನನ್ನು ಪರಾಭವಗೊಳಿಸಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಏಕಷಷ್ಟಿತಮೋಧ್ಯಾಯಃ ॥೬೧॥

❖ ❖ ❖

ಮಹಾಭಾರತತಾತ್ಪರ್ಯನಿರ್ಣಯ

ಅನ್ಯೇನೈವ ಪಥಾ ಭೀಮಂ ಪ್ರಾಪಯಾಮಾಸ ವಿಶ್ವಕೃತ್ ।
ತತ್ರಾರ್ಜುನೋಽವದದ್ ಭೀಮಂ ಯಾಹಿ ದ್ರಷ್ಟುಂ ಯುಧಿಷ್ಠಿರಮ್
॥ ೧೦೯ ॥

ಪ್ರವೃತ್ತಿಂ ವಿದ್ಧಿ ಭೂಪಸ್ಯ ಮಾಂ ತು ಸಂಶಪ್ತಕಾ ಯುಧೇ ।
ಆಹ್ವಯಂತಿ ಹತೋಚ್ಛೇಷಾಸ್ತಾನಹಂ ಯಾಮಿ ತದ್ ಯುಧೇ
॥ ೧೧೦ ॥

ಅರ್ಜುನ ಭೀಮನಿಗೆ ಹೇಳಿದ, 'ಯುಧಿಷ್ಠಿರನನ್ನು ಕಾಣಲು ಹೋಗು. ಅವನ ಸಮಾಚಾರವನ್ನು ತಿಳಿದುಕೊಳ್ಳು. ನನ್ನನ್ನು ಅಳಿದುಳಿದ ಸಂಶಪ್ತಕರು ಯುದ್ಧಕ್ಕೆ ಕರೆಯುತ್ತಿದ್ದಾರೆ. ಅದರಿಂದ ನಾನು ಅವರೊಡನೆ ಯುದ್ಧಕ್ಕೆ ಹೋಗುವೆನು.'

ಇತ್ಯೂಚಿವಾಂಸಂ ತಮುವಾಚ ಭೀಮೋ
ಜಾನನ್ ಸ್ವಬಾಹ್ವೋರ್ಬಲಮಪ್ರಮೇಯಮ್ ।
ಸಂಶಪ್ತಕಾನ್ ಸೂತಜಂ ಕೌರವಾಂಶ್ಚ
ಯೋತ್ಸ್ಯೇಹಮೇಕಸ್ತ್ವಮುಪೈಹಿ ಭೂಪಮ್ ॥ ೧೧೧ ॥

ಅರ್ಜುನ ಹೀಗೆ ಹೇಳಿದಾಗ ತನ್ನ ಬಾಹುಗಳ ಅಪರಿಮಿತವಾದ ಬಲವನ್ನು

ತಿಳಿದಿದ್ದ ಭೀಮ ಅವನಿಗೆ ಹೇಳಿದ, 'ಸಂಶಪ್ತಕರನ್ನೂ ಕರ್ಣನನ್ನೂ ಕೌರವರನ್ನೂ ನಾನೊಬ್ಬನೆ ಇದಿರಿಸುವೆನು. ನೀನು ಯುಧಿಷ್ಠಿರನ ಬಳಿಗೆ ಹೋಗು.'

ತ್ಯಕ್ತ್ವಾ ರಣಂ ನಾಹಮಿತೋ ವ್ರಜೇಯಂ
ನ ಮಾಂ ವದೇತ್ ಕಶ್ಚನ ಯುದ್ಧಭೀತಮ್ ।
ಇತಿ ಬ್ರುವಾಣಂ ತಮನಂತಶಕ್ತಿಃ
ಪ್ರೀತಃ ಕೃಷ್ಣಃ ಪ್ರಶಶಂಸಾಧಿಕೇಷ್ಟಮ್ ॥ ೧೧೨ ॥

'ಯುದ್ಧವನ್ನು ಬಿಟ್ಟು ನಾನು ಇಲ್ಲಿಂದ ಹೋಗಲಾರೆ. ಏಕೆಂದರೆ ಯುದ್ಧಕ್ಕೆ ಹೆದರಿದೆನೆಂದು ಯಾರೂ ನನ್ನ ಬಗ್ಗೆ ಆಡಿಕೊಳ್ಳಬಾರದು.' ಹೀಗೆ ಭೀಮ ಹೇಳಿದಾಗ ಸರ್ವಶಕ್ತನಾದ ಶ್ರೀಕೃಷ್ಣ ಸಂತುಷ್ಟನಾಗಿ ತನಗೆ ಅತ್ಯಂತ ಪ್ರಿಯನಾದ ಭೀಮನನ್ನು ಕೊಂಡಾಡಿದ.

ಯಯೌ ಯುಧಿಷ್ಠಿರಂ ದ್ರಷ್ಟುಂ ಶಿಬಿರಂ ಸಾರ್ಜುನೋ ಹರಿಃ ।
ದೃಷ್ಟ್ವಾ ತೌ ನೃಪತಿಃ ಕರ್ಣಂ ಹತಂ ಮತ್ವಾ ಶಶಂಸ ಹ ॥ ೧೧೩ ॥

ಅರ್ಜುನ ಸಮೇತನಾದ ಶ್ರೀಕೃಷ್ಣ ಯುಧಿಷ್ಠಿರನನ್ನು ಕಾಣಲು ಶಿಬಿರಕ್ಕೆ ಹೋದ. ಅವರನ್ನು ಕಂಡು ಯುಧಿಷ್ಠಿರ ಕರ್ಣ ಹತನಾದನೆಂದು ಬಗೆದು ಹೊಗಳಿದ.

❖❖❖

ಅರವತ್ತೆರಡನೆಯ ಅಧ್ಯಾಯ

ಯುಧಿಷ್ಠಿರ ಶಿಬಿರಕ್ಕೆ ಹೋಗಿರುವುದನ್ನು ಅರ್ಜುನ ಭೀಮನಿಂದ ತಿಳಿದು ಅವನನ್ನು ಕಾಣಲು ಶಿಬಿರಕ್ಕೆ ಹೋಗುತ್ತಾನೆ.

ಸಂಜಯಃ

ದ್ರೋಣಂ ಪರಾಜಿತ್ಯ ತತೋಽಗ್ರಧನ್ವಾ
ಕೃತ್ವಾ ಮಹದ್ ದುಷ್ಕರಮಾರ್ಯಕರ್ಮ ।
ಆಲೋಕಯಾಮಾಸ ತತಃ ಸ್ವಸೈನ್ಯಂ
ಧನಂಜಯಃ ಶತ್ರುಭಿರಪ್ರಧೃಷ್ಯಃ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಉತ್ತಮ ಧನುಸ್ಸನ್ನು ಧರಿಸಿ ಶತ್ರುಗಳಿಗೆ ಇದಿರಿಸಲಾಗದಿರುವವನಾದ ಅರ್ಜುನನು ಅಶ್ವತ್ಥಾಮನೊಂದಿಗೆ ಯುದ್ಧದಲ್ಲಿ ಮಹಾ ದುಷ್ಕರವಾದ ಪೂಜಾರ್ಹವಾದ ಅಸ್ತ್ರಪ್ರಯೋಗರೂಪವಾದ ಕರ್ಮಮಾಡಿ ಅಶ್ವತ್ಥಾಮನನ್ನು ಪರಾಭವಗೊಳಿಸಿ ತನ್ನ ಸೈನ್ಯವನ್ನು ಏಕ್ಷಿಸಿದ.

ಸ ಯುಧ್ಯಮಾನಃ ಪೃತನಾಮುಖಸ್ಥಾನ್
ಶೂರಾನ್ ಶೂರೋ ಹರ್ಷಯನ್ ಸವ್ಯಸಾಚೀ ।
ಪೂರ್ವಾಪದಾನೈಃ ಪ್ರಥಿತಃ ಪ್ರಶಂಸನ್
ಸ್ಥಿರಾಂಶ್ಚಕಾರಾತ್ಮರಥಾನನೀಕೇ ॥೨॥

ರಣರಂಗದ ಅಗ್ರಭಾಗದಲ್ಲಿ ನಿಲ್ಲುವ ಶೂರರನ್ನು ಹುರಿದುಂಬಿಸುತ್ತ ಪ್ರಶಂಸಿಸುತ್ತ ತಾನೂ ಯುದ್ಧ ಮಾಡುತ್ತ ಹಿಂದಿನ ಮಹಾಕಾರ್ಯಗಳಿಂದ ಪ್ರಸಿದ್ಧನಾದ ಶೂರನಾದ ಅರ್ಜುನನು ತನ್ನ ರಥಸೈನಿಕರನ್ನು ಸೈನ್ಯದಲ್ಲಿ ಸ್ಥಿರವಾಗಿ ನಿಲ್ಲಿಸಿದ.

ಅಪಶ್ಯಮಾನಸ್ತು ಕಿರೀಟಮಾಲೀ
ಯುಧಿ ಜ್ಯೇಷ್ಠಂ ಭ್ರಾತರಮಾಜಮೀಢಮ್ ।
ಉವಾಚ ಭೀಮಂ ತರಸಾಭ್ಯುಪೇತ್ಯ
ರಾಜ್ಞಃ ಪ್ರವೃತ್ತಿಸ್ತ್ವಿಹ ಕೇತಿ ರಾಜನ್ ॥೩॥

ರಾಜನೆ, ರಣದಲ್ಲಿ ಅಣ್ಣ ಯುಧಿಷ್ಠಿರನನ್ನು ಕಾಣದೆ ಬೇಗನೆ ಭೀಮನ ಬಳಿಗೆ ಬಂದು ಅರ್ಜುನನು 'ರಾಜಾಯುಧಿಷ್ಠಿರನ ಪ್ರವೃತ್ತಿ ರಣರಂಗದಲ್ಲಿ ಏನು?' ಎಂದು ಕೇಳಿದ.

ಭೀಮಃ

ಅಪಯಾತ ಇತೋ ರಾಜಾ ಧರ್ಮಪುತ್ರೋ ಯುಧಿಷ್ಠಿರಃ ।
ಕರ್ಣಬಾಣಾಭಿತಪ್ತಾಂಗೋ ಯದಿ ಜೀವೇತ್ ಕಥಂಚನ ॥೪॥

ಭೀಮ ನುಡಿದ— ರಾಜಾಧರ್ಮಪುತ್ರ ಯುಧಿಷ್ಠಿರನು ಕರ್ಣನ ಬಾಣಗಳಿಂದ

ಮೈಯೆಲ್ಲ ಸುಟ್ಟುಕೊಂಡು ಇಲ್ಲಿಂದ ಹೊರಟು ಹೋಗಿದ್ದಾನೆ. ಅವನು ಈಗ ಕಷ್ಟದಿಂದ ಬದುಕಿ ಉಳಿದಿರುವನೆ ಎಂಬುದು ಸಂದಿಗ್ಧವಾಗಿದೆ.

ಅರ್ಜುನಃ

ತಸ್ಮಾದ್ ಭವಾನ್ ಶೀಘ್ರಮಿತಃ ಪ್ರಯಾತು
ರಾಜ್ಞಃ ಪ್ರವೃತ್ತ್ಯೈ ಕುರುಸತ್ತಮಸ್ಯ ।
ನೂನಂ ಹಿ ವಿದ್ಧೋಽತಿಭೃಶಂ ಪೃಷತ್ಕೈಃ
ಕರ್ಣೇನ ರಾಜಾ ಶಿಬಿರಂ ಗತೋಽಸೌ ॥೫॥

ಅರ್ಜುನ ನುಡಿದ— ಅದರಿಂದ ರಾಜನ ವೃತ್ತಾಂತವನ್ನು ನೋಡಿಕೊಳ್ಳಲು ನೀನು ಬೇಗನೆ ಇಲ್ಲಿಂದ ಹೊರಡು. ಕರ್ಣನ ಬಾಣಗಳಿಂದ ಬಹಳ ಹೊಡೆಸಿ ಕೊಂಡು ರಾಜಾ ಯುಧಿಷ್ಠಿರನು ಈಗ ಪ್ರಾಯಶಃ ಶಿಬಿರಕ್ಕೇ ಹೋಗಿರುತ್ತಾನೆ.

ಯಃ ಸಂಪ್ರಹಾರೇ ನಿಶಿ ಸಂಪ್ರವೃತ್ತೇ
ದ್ರೋಣೇನ ವಿದ್ಧೋಽತಿಭೃಶಂ ತರಸ್ವೀ ।
ತಸ್ಥೌ ಚ ತತ್ರಾಪಿ ಜಯಪ್ರತೀಕ್ಷೋ
ದ್ರೋಣೋಽಪಿ ಯಾವನ್ನ ಹತಃ ಕಿಲಾಸೀತ್ ॥೬॥

ರಾತ್ರಿ ನಡೆದ ಯುದ್ಧದಲ್ಲಿ ದ್ರೋಣನಿಂದ ಬಹಳ ಹೊಡೆಸಿಕೊಂಡರೂ ರಣರಂಗದಿಂದ ಹೋಗದೆ, ಜಯವನ್ನು ನಿರೀಕ್ಷಿಸಿ ರಣರಂಗದಲ್ಲಿಯೇ ದ್ರೋಣನು ಹತನಾಗದಿರುವವರೆಗೂ ನಿಂತಿದ್ದ.

ಸ ಸಂಶಯಂ ಗಮಿತಃ ಪಾಂಡವಾಗ್ರ್ಯಃ
ಸಂಖ್ಯೇಽದ್ಯ ಕರ್ಣೇನ ಮಹಾನುಭಾವಃ ।
ಜ್ಞಾತುಂ ಪ್ರಯಾಹ್ಯಾಶು ತಮದ್ಯ ಭೀಮ
ಸ್ಥಾಸ್ಯಾಮ್ಯಹಂ ಶತ್ರುಗಣಾನ್ನಿರುಧ್ಯ ॥೭॥

ಅದರಿಂದ ಇಂದು ಮೊದಲೇ ಆಯಾಸಗೊಂಡಿದ್ದ ಮಹಾನುಭಾವ ಯುಧಿಷ್ಠಿರನು ಕರ್ಣನಿಂದ ರಣದಲ್ಲಿ ಹೊಡೆಸಿಕೊಂಡು ಜೀವನ–ಮರಣಗಳ ಸಂಶಯಕ್ಕೆ ಈಡಾಗಿದ್ದಾನೆ. ಭೀಮ, ಅವನ ಸ್ಥಿತಿಯನ್ನು ತಿಳಿಯಲು ನೀನು ಬೇಗನೆ ಹೋಗು. ಶತ್ರುಸಮೂಹವನ್ನು ತಡೆಯುತ್ತ ನಾನು ಇಲ್ಲಿ ಇರುತ್ತೇನೆ.

ಭೀಮಃ

ತ್ವಮೇವ ಜಾನೀಹಿ ಮಹಾನುಭಾವ
ರಾಜ್ಞಃ ಪ್ರವೃತ್ತಿಂ ಭರತರ್ಷಭಸ್ಯ ।
ಅಹಂ ಹಿ ಯದ್ಯರ್ಜುನ ಯಾಮಿ ತತ್ರ
ವಕ್ಷ್ಯಂತಿ ಮಾಂ ಭೀತ ಇತಿ ಪ್ರವೀರಾಃ ॥೮॥

ಭೀಮ ನುಡಿದ— 'ಮಹಾನುಭಾವ, ನೀನೇ ರಾಜಾ ಯುಧಿಷ್ಠಿರನ ವೃತ್ತಾಂತವನ್ನು ತಿಳಿದುಕೊಳ್ಳು. ಅರ್ಜುನ, ನಾನು ಅಲ್ಲಿಗೆ ಹೋದೆನೆಂದರೆ, ವೀರರು ನನ್ನನ್ನು ಭೀತನಾದೆನೆಂದು ಹೇಳಬಹುದು.'

ಭಾರ್ಗವಾಸ್ತ್ರಕ್ಕೆ ಪ್ರತ್ಯಸ್ತ್ರವಿಲ್ಲದ್ದರಿಂದ ಧೃಷ್ಟದ್ಯುಮ್ನ ಮುಂತಾದವರು ಪಲಾಯನ ಮಾಡಿದರು. ಭೀಮ ಪಲಾಯನ ಮಾಡಲಿಲ್ಲ. ಅಸ್ತ್ರಕ್ಕೆ ಆಹುತಿಯೂ ಆಗಲಿಲ್ಲ. ಈಗ ಧರ್ಮರಾಜನನ್ನು ಕಾಣಲೆಂದು ಭೀಮ ಹೊರಟು ಹೋದರೆ, ಅವನೂ ಧೃಷ್ಟದ್ಯುಮ್ನ ಮುಂತಾದವರಂತೆಯೇ ಪಲಾಯನ ಮಾಡಿದನೆಂದೇ ಎಲ್ಲರೂ ತಿಳಿಯುತ್ತಾರೆ. ಅದರಿಂದ 'ಅರ್ಜುನನೇ ಹೋಗಲಿ' ಎನ್ನುತ್ತಾನೆ, ಭೀಮ.

ತತೋಽಬ್ರವೀದರ್ಜುನೋ ಭೀಮಸೇನಂ
ಸಂಶಪ್ತಕಾಃ ಪ್ರತ್ಯನೀಕಂ ಸ್ಥಿತಾ ಮೇ ।
ಏತಾನಹತ್ವಾ ನ ಮಯಾ ತು ಶಕ್ಯಂ
ಇತೋಽಪಯಾತುಂ ರಿಪುಸಂಘಗೋಷ್ಠಾತ್ ॥೯॥

ಆಗ ಅರ್ಜುನನು ಭೀಮನಿಗೆ ನುಡಿದ— ನನಗೆ ವಿರೋಧವಾಗಿ ಸಂಶಪ್ತಕರು ನಿಂತಿದ್ದಾರೆ. ಅವರನ್ನು ಕೊಲ್ಲದೆ ಶತ್ರುಸಮೂಹಗೋಷ್ಠಿಯನ್ನು ಬಿಟ್ಟು ಇಲ್ಲಿಂದ ಹೋಗುವುದು ನನಗೆ ಶಕ್ಯವಲ್ಲ.

ಅಥಾಬ್ರವೀದರ್ಜುನಂ ಭೀಮಸೇನಃ
ಸ್ವವೀರ್ಯಮಾಶ್ರಿತ್ಯ ಕುರುಪ್ರವೀರ ।
ಸಂಶಪ್ತಕಾನ್ ಪ್ರತಿಯೋತ್ಸ್ಯಾಮಿ ಸಂಖ್ಯೇ
ಸರ್ವಾನಹಂ ಯಾಹಿ ಧನಂಜಯೇತಿ ॥೧೦॥

ಅರ್ಜುನನಿಗೆ ಭೀಮಸೇನ ನುಡಿದ— ಅರ್ಜುನ, ನಾನೇ ನನ್ನ ಬಲವನ್ನು ಅವಲಂಬಿಸಿ ಸಂಶಪ್ತಕರೆಲ್ಲರನ್ನೂ ರಣದಲ್ಲಿ ಇದಿರಿಸುತ್ತೇನೆ, ಅರ್ಜುನ, ನೀನೆ ಹೋಗು.

ತದ್ಭೀಮಸೇನಸ್ಯ ವಚೋ ನಿಶಮ್ಯ
ಧನಂಜಯೋ ಭ್ರಾತುರಮಿತ್ರಮಧ್ಯೇ ॥೧೧॥
ಸಂಶಪ್ತಕಾನೀಕಮಸಹ್ಯಮೇಕಃ
ಸುದುಷ್ಕರಂ ಧಾರಯಾಮೀತಿ ಪಾರ್ಥಃ ॥೧೨॥
ದ್ರಷ್ಟುಂ ಕುರುಶ್ರೇಷ್ಠಮಭಿಪ್ರಯಾಸ್ಯನ್
ಪ್ರೋವಾಚ ವೃಷ್ಣಿಪ್ರವರಂ ತದಾನೀಮ್ ॥೧೩॥

'ಶತ್ರುಗಳ ಮಧ್ಯದಲ್ಲಿ ಅಸಹನೀಯವಾದ ಬಹು ದುಷ್ಕರವಾದ ಸಂಶಪ್ತಕ ಸೈನ್ಯವನ್ನು ನಾನೊಬ್ಬನೆ ಇದಿರಿಸುತ್ತೇನೆ' ಎಂದು ಹೇಳಿದ ಸೋದರ ಭೀಮಸೇನನ ಮಾತನ್ನು ಕೇಳಿ ಅರ್ಜುನನು ಯುಧಿಷ್ಠಿರನ ಬಳಿಗೆ ಹೋಗಬಯಸಿ ಕೃಷ್ಣನಿಗೆ ನುಡಿದ.

ಚೋದಯಾಶ್ವಾನ್ ಹೃಷೀಕೇಶ ವಿಗಾಹ್ಯೈತಂ ರಥಾರ್ಣವಮ್ ।
ಅಜಾತಶತ್ರುಂ ರಾಜಾನಂ ದ್ರಷ್ಟುಮಿಚ್ಛಾಮಿ ಕೇಶವ ॥೧೪॥

ಹೃಷೀಕೇಶ, ನಾನು ಈ ರಥ ಸೈನ್ಯಸಾಗರವನ್ನು ಚೆನ್ನಾಗಿ ಮಥನಮಾಡಿದ ಬಳಿಕ ಈಗ ರಾಜಾ ಯುಧಿಷ್ಠಿರನನ್ನು ಕಾಣಲು ಬಯಸುತ್ತಿದ್ದೇನೆ. ಕುದುರೆಗಳನ್ನು ನಡೆಸು.

ತತೋ ಹಯಾನ್ ಸರ್ವದಾಶಾರ್ಹಮುಖ್ಯಃ
ಪ್ರಾಚೋದಯದ್ ಭೀಮಮುವಾಚ ಚೇದಮ್ ।
ನೈತಚ್ಚಿತ್ರಂ ತವ ಕರ್ಮಾದ್ಯ ವೀರ
ಯಾಸ್ಯಾಮಹೇ ಜಹಿ ಭೀಮಾರಿಸಂಘಾನ್ ॥೧೫॥

ಸರ್ವ ಯಾದವ ಶ್ರೇಷ್ಠನಾದ ಕೃಷ್ಣನು ಕುದುರೆಗಳನ್ನು ನಡೆಸತೊಡಗಿದ ಮತ್ತು ಭೀಮನಿಗೆ ಹೇಳಿದ, 'ವೀರನೆ, ಈಗ ನೀನು ಮಾಡುವ ಕಾರ್ಯ ನಿನಗೇನೂ

ಆಶ್ಚರ್ಯಕರವಲ್ಲ. ನಾವು ಹೋಗುವೆವು, ಭೀಮ! ನೀನೇ ಶತ್ರುಸಮೂಹಗಳನ್ನು ಸಂಹರಿಸು' ಎಂದು.

ತತೋ ಯಯೌ ಹೃಷೀಕೇಶೋ ಯತ್ರ ರಾಜಾ ಯುಧಿಷ್ಠಿರಃ ।
ಶೀಘ್ರಾತ್ ಶೀಘ್ರತರಂ ರಾಜನ್ ವಾಜಿಭಿರ್ಗರುಡೋಪಮೈಃ ॥೧೬॥

ರಾಜನೆ, ವೇಗದಲ್ಲಿ ಗರುಡನಂತಿರುವ ಕುದುರೆಗಳಿಂದ ಶೀಘ್ರಾತಿಶೀಘ್ರವಾಗಿ ರಾಜಾ ಯುಧಿಷ್ಠಿರನಿರುವಲ್ಲಿ ಶ್ರೀಕೃಷ್ಣ ಹೋದ.

ಪ್ರತ್ಯನೀಕೇ ವ್ಯವಸ್ಥಾಪ್ಯ ಭೀಮಸೇನಮರಿಂದಮಮ್ ।
ಸಂದಿಶ್ಯ ಚೈವ ರಾಜೇಂದ್ರ ಯುದ್ಧಂ ಪ್ರತಿ ವೃಕೋದರಮ್ ॥೧೭॥

ಶತ್ರುಗಳಿಗೆ ಇದಿರಾಗಿ ಶತ್ರುನಾಶಕನಾದ ಭೀಮನನ್ನು ನಿಲ್ಲಿಸಿ, ನೀನೇ ಯುದ್ಧ ಮಾಡೆಂದು ಹೇಳಿ ಶ್ರೀಕೃಷ್ಣ ರಾಜಾ ಯುಧಿಷ್ಠಿರನಿರುವಲ್ಲಿಗೆ ಹೋದ.

ತತಸ್ತು ಗತ್ವಾ ಪುರುಷಪ್ರವೀರೌ
ರಾಜಾನಮಾಸಾದ್ಯ ಶಯಾನಮೇಕಮ್ ।
ರಥಾದುಭೌ ಪ್ರತ್ಯವರುಹ್ಯ ತಸ್ಮಾದ್
ವವಂದತುರ್ಧರ್ಮರಾಜಸ್ಯ ಪಾದೌ ॥೧೮॥

ಪುರುಷೋತ್ತಮರಾದ ಕೃಷ್ಣಾರ್ಜುನರಿಬ್ಬರು ಶಯ್ಯೆಯ ಮೇಲೆ ಒಬ್ಬನೇ ಒರಗಿದ್ದ ರಾಜಾ ಯುಧಿಷ್ಠಿರನ ಬಳಿಗೆ ಹೋಗಿ ರಥದಿಂದ ಇಳಿದು ಅವನ ಪಾದಗಳನ್ನು ವಂದಿಸಿದರು.

ತೌ ದೃಷ್ಟ್ವಾ ಪುರುಷವ್ಯಾಘ್ರೌ ಕ್ಷೇಮಿಣೌ ಪುರುಷರ್ಷಭ ।
ಮುದಾಭ್ಯುಪಗತೌ ಕೃಷ್ಣಾವಶ್ವಿನಾವಿವ ವಾಸವಮ್ ॥೧೯॥

ತಾವಭ್ಯನಂದದ್ರಾಜಾ ಹಿ ವಿವಸ್ವಾನಶ್ವಿನಾವಿವ ।
ಹತೇ ಮಹಾಸುರೇ ಜಂಭೇ ಶಕ್ರವಿಷ್ಣೂ ಯಥಾ ಗುರುಃ ॥೨೦॥

ರಾಜನೆ, ಕ್ಷೇಮವಾಗಿ ಬಂದಿರುವ ಆ ಪುರುಷೋತ್ತಮರಾದ ಕೃಷ್ಣಾರ್ಜುನರು, ಇಂದ್ರನ ಬಳಿಗೆ ಅಶ್ವಿನೀದೇವತೆಗಳು ಬಂದಂತೆ, ರಾಜನ ಬಳಿಗೆ ಬಂದರು. ಅವರನ್ನು ಅಶ್ವಿನೀದೇವತೆಗಳನ್ನು ಸೂರ್ಯನಂತೆ, ಜಂಭಮಹಾಸುರನು

ಹತನಾದಾಗ ಇಂದ್ರ–ವಿಷ್ಣುಗಳನ್ನು ಬೃಹಸ್ಪತಿಯಂತೆ, ರಾಜಾ ಯುಧಿಷ್ಠಿರನು ಅಭಿನಂದಿಸಿದ.

ಮನ್ಯಮಾನೋ ಹತಂ ಕರ್ಣಂ ಧರ್ಮರಾಜೋ ಯುಧಿಷ್ಠಿರಃ ।
ಹರ್ಷಗದ್ಗದಯಾ ವಾಚಾ ಪ್ರೀತಃ ಪ್ರಾಹ ಪರಂತಪೌ ॥೨೧॥

ಕರ್ಣನು ಹತನಾದನೆಂದೇ ನಂಬಿದ ಧರ್ಮರಾಜ ಯುಧಿಷ್ಠಿರನು ಹರ್ಷದಿಂದ ಗದ್ಗದವಾದ ಧ್ವನಿಯಿಂದ ಶತ್ರುತಾಪಕರಾದ ಕೃಷ್ಣಾರ್ಜುನರಿಗೆ ನುಡಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಧರ್ಮರಾಜದರ್ಶನಂ ನಾಮ ದ್ವಿಷಷ್ಟಿತಮೋऽಧ್ಯಾಯಃ ॥೬೨॥

❖ ❖ ❖

ಅರವತ್ತಮೂರನೆಯ ಅಧ್ಯಾಯ

ಅರ್ಜುನ ಕರ್ಣವಧ ಮಾಡಿಯೇ ಬಂದಿರುವನೆಂದು ಬಗೆದು
ಯುಧಿಷ್ಠಿರ ಅಭಿನಂದಿಸುತ್ತಾನೆ.

ಸಂಜಯಃ

ಅಥೋಪಯಾತೌ ಪೃಥುಲೋಹಿತಾಕ್ಷೌ
ಶರಾಚಿತಾಂಗೌ ರುಧಿರಪ್ರದಿಗ್ಧೌ ।
ಸಮೀಕ್ಷ್ಯ ಸೇನಾಗ್ರನರಪ್ರವೀರೌ
ಯುಧಿಷ್ಠಿರೋ ವಾಕ್ಯಮಿದಂ ಬಭಾಷೇ ॥೧॥

ಮಹಾಸತ್ತ್ವೌ ತು ತೌ ದೃಷ್ಟ್ವಾ ಸಹಿತೌ ಕೇಶವಾರ್ಜುನೌ ।
ಹತಮಾಧಿರಥಿಂ ಮೇನೇ ಸಂಖ್ಯೇ ಗಾಂಡೀವಧನ್ವನಾ ॥೨॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ವಿಸ್ತಾರವಾದ ಕೆಂಪುಕಣ್ಣಿನವರು ಬಾಣಗಳಿಂದ ಗಾಯಹೊಂದಿದ ಮೈಉಳ್ಳವರು ನೆತ್ತರಿಂದ ತೊಯ್ದವರು ಸೈನ್ಯದ ಅಗ್ರ ಭಾಗದಲ್ಲಿ ನಿಲ್ಲುವ ಯೋಧರಲ್ಲಿ ಶ್ರೇಷ್ಠರು ಕೃಷ್ಣ ಮತ್ತು ಅರ್ಜುನರು ಒಳಿಗೆ

ಬಂದಾಗ ನೋಡಿ ಯುಧಿಷ್ಠಿರನು ಈ ಮಾತನ್ನು ನುಡಿದ. ಮಹಾಬಲಿಷ್ಠರಾದ ಕೃಷ್ಣ ಅರ್ಜುನರು ಜೊತೆಯಾಗಿ ಬಂದುದನ್ನು ಕಂಡು ಕರ್ಣನು ರಣದಲ್ಲಿ ಅರ್ಜುನನಿಂದ ಹತನಾದನೆಂದೇ ನಂಬಿದ.

ತಾವಭ್ಯನಂದತ್‌ಕೌಂತೇಯಃ ಸಾಮ್ನಾ ಪರಮವಲ್ಗುನಾ ।
ಸ್ಮಿತಪೂರ್ವಮಮಿತ್ರಘ್ನಃ ಪೂಜಯನ್ ಭರತರ್ಷಭ ॥೩॥

ರಾಜನೆ, ಶತ್ರುಸಂಹಾಕರನಾದ ಯುಧಿಷ್ಠಿರನು ಅವರಿಬ್ಬರನ್ನು ಬಲು ಸುಂದರವಾದ ನಯವಾದ ಮಾತಿನಿಂದ ನಗುತ್ತ ಹೊಗಳುತ್ತ ಅಭಿನಂದಿಸಿದ.

ಯುಧಿಷ್ಠಿರಃ

ಸ್ವಾಗತಂ ದೇವಕೀಮಾತಃ ಸ್ವಾಗತಂ ತೇ ಧನಂಜಯ ।
ಪ್ರಿಯಂ ಮೇ ದರ್ಶನಂ ಬಾಢಂ ಯುವಯೋರಚ್ಯುತಾರ್ಜುನೌ ॥೪॥

ಯುಧಿಷ್ಠಿರನು ನುಡಿದ. ದೇವಕೀಸುತನೆ, ನಿನಗೆ ಸ್ವಾಗತ, ಅರ್ಜುನನೆ, ನಿನಗೆ ಸ್ವಾಗತ. ಕೃಷ್ಣಾರ್ಜುನರೆ, ನಿಮ್ಮ ದರ್ಶನ ನನಗೆ ಬಲು ಸಂತೋಷದಾಯಕವಾಗಿದೆ.

ಅಕ್ಷತಾಭ್ಯಾಮರಿಷ್ಟಾಭ್ಯಾಂ ಹತಃ ಕರ್ಣೋ ಮಹಾರಥಃ ।
ಆಶೀವಿಷಸಮಂ ಯುದ್ಧೇ ಸರ್ವಶಸ್ತ್ರವಿಶಾರದಮ್ ॥೫॥

ಗಾಯ ಮಾಡಿಕೊಳ್ಳದೆ, ಕೇಡು ತಂದುಕೊಳ್ಳದೆ ನೀವು ಮಹಾರಥನಾದ ಕರ್ಣನನ್ನು ಕೊಂದು ಬಂದಿರುವಿರಿ. ಕರ್ಣನೆಂದರೆ ವಿಷಸರ್ಪದಂಥವನು, ಯುದ್ಧದಲ್ಲಿ ಸರ್ವಶಸ್ತ್ರಗಳಲ್ಲಿ ಪಾರಂಗತ. ಅವನನ್ನು ಕೊಂದು ಬಂದಿರಿ.

ಅಗ್ರಗಂ ಧಾರ್ತರಾಷ್ಟ್ರಾಣಾಂ ಸರ್ವೇಷಾಂ ಶರ್ಮ ವರ್ಮ ಚ ।
ರಕ್ಷಿತಂ ವೃಷಸೇನೇನ ಸುಷೇಣೇನ ಚ ಧನ್ವಿನಾ ॥೬॥

ಧೃತರಾಷ್ಟ್ರಪುತ್ರರಿಗೆಲ್ಲರಿಗೂ ಇವನು ಮುಂದೆ ಇರುವವನು. ಅವರಿಗೆ ಸುಖದಾಯಕನೂ ರಕ್ಷಕನೂ ಆಗಿದ್ದಾನೆ. ವೃಷಸೇನ ಸುಷೇಣರು ಬಿಲ್ಗಾರರು ಇವನಿಗೆ ರಕ್ಷಣೆ ನೀಡುವವರು. ಅವನನ್ನು ಕೊಂದು ಬಂದಿರಿ.

ಅನುಜ್ಞಾತಂ ಮಹಾವೀರ್ಯಂ ರಾಮೇಣಾಸ್ತ್ರೇಷು ದುರ್ಜಯಮ್ ।
ರಾಮೇಣ ಜಾಮದಗ್ನ್ಯೇನ ಅನುಜ್ಞಾತಂ ಯಶಸ್ವಿನಾ ।
ತ್ರಾತಾರಂ ಧಾರ್ತರಾಷ್ಟ್ರಾಣಾಂ ಗಂತಾರಂ ವಾಹಿನೀಮುಖೇ ॥೭॥

ಕೀರ್ತಿಶಾಲಿಯಾದ ಪರಶುರಾಮನಿಂದ ಶಸ್ತ್ರಜ್ಞನೆಂದು ಸಮ್ಮತನಾದವನು. ಮಹಾವೀರ್ಯಶಾಲಿ, ಅಸ್ತ್ರಗಳಲ್ಲಿ ಯಾರಿಗೂ ಸೋಲದವನು. ಕೌರವರ ರಕ್ಷಕನು, ಸೈನ್ಯದ ಮುಂಭಾಗದಲ್ಲಿ ನಿಲ್ಲುವವನು. ಅವನನ್ನು ಕೊಂದು ಬಂದಿರಿ.

ಹಂತಾರಮರಿಸೈನ್ಯಾನಾಮಮಿತ್ರಗಣಮರ್ದನಮ್ ।
ದುರ್ಯೋಧನಹಿತೇ ಯುಕ್ತಮಸ್ಮದ್ದುಃಖಾಯ ಚೋದ್ಯತಮ್ ॥೮॥

ಶತ್ರುಸೈನ್ಯನಾಶಕ, ಶತ್ರುಗಳಿಗೆ ನಾಶಕ, ದುರ್ಯೋಧನನ ಹಿತದಲ್ಲಿ ಉದ್ಯುಕ್ತ. ನಮ್ಮ ಪೀಡೆಗೆ ಉದ್ಯುಕ್ತ. ಅವನನ್ನು ಕೊಂದು ಬಂದಿರಿ.

ಅಪ್ರಧೃಷ್ಯಂ ಮಹಾಯುದ್ಧೇ ದೇವೈರಪಿ ಸವಾಸವೈಃ ।
ಅನಲಾನಿಲಯೋಸ್ತುಲ್ಯಂ ತೇಜಸಾ ಚ ಬಲೇನ ಚ ॥೯॥

ಮಹಾಯುದ್ಧದಲ್ಲಿ ಇಂದ್ರಾದಿದೇವತೆಗಳಿಗೂ ಇದಿರಿಸಲಾಗದವನು, ಪರಾಕ್ರಮದಲ್ಲಿ ಬಲದಲ್ಲಿ ಅಗ್ನಿ–ವಾಯುಗಳಿಗೆ ಸಮನು. ಅವನನ್ನು ಕೊಂದು ಬಂದಿರಿ.

ಪಾತಾಲಮಿವ ಗಂಭೀರಂ ಸುಹೃದಾನಂದವರ್ಧನಮ್ ।
ಅಂತಕಾಭಮಮಿತ್ರಾಣಾಂ ಕರ್ಣಂ ಹತ್ವಾ ಮಹಾಹವೇ ।
ದಿಷ್ಟ್ಯಾ ಯುವಾಮನುಪ್ರಾಪ್ತೌ ಜಿತ್ವಾಸುರಮಿವಾಮರೌ ॥೧೦॥

ಪಾತಾಲದಂತೆ ಗಂಭೀರ, ಮಿತ್ರರಿಗೆ ಆನಂದವರ್ಧನ. ಶತ್ರುಗಳಿಗೆ ಯಮ. ಅದೃಷ್ಟವಶದಿಂದ ಇಂಥ ಕರ್ಣನನ್ನು ಮಹಾಯುದ್ಧದಲ್ಲಿ ಕೊಂದು ಅಸುರನನ್ನು ಕೊಂದು ಬರುವ ದೇವತೆಗಳಂತೆ ನೀವು ಬಂದಿರುವಿರಿ.

ಘೋರಂ ಯುದ್ಧಮದೀನೇನ ಮಯಾ ಹ್ಯದ್ಯಾಚ್ಯುತಾರ್ಜುನೌ ।
ಕೃತಂ ತೇನಾಂತಕೇನೇವ ಪ್ರಜಾಃ ಸರ್ವಾ ಜಿಘಾಂಸತಾ ॥೧೧॥

ಕೃಷ್ಣಾರ್ಜುನರೇ, ನಾನು ಇಂದು ಎಲ್ಲ ಜನರ ಸಂಹಾರ ಮಾಡಲು ಹೊರಟ ಯಮನಂತಿದ್ದ ಕರ್ಣನೊಡನೆ ಧೈರ್ಯಗೆಡದೆ ಘೋರ ಯುದ್ಧವನ್ನೇ ಮಾಡಿದ್ದೇನೆ.

ತೇನ ಕೇತುಶ್ಚ ಮೇ ಛಿನ್ನೋ ಹತೌ ಚ ಪಾರ್ಷ್ಣಿಸಾರಥೀ ।
ಹತವಾಹಃ ಕೃತಶ್ಚಾಸ್ಮಿ ಯುಯುಧಾನಸ್ಯ ಪಶ್ಯತಃ ॥೧೨॥

ಧೃಷ್ಟದ್ಯುಮ್ನಸ್ಯ ಯಮಯೋರ್ವೀರಸ್ಯ ಚ ಶಿಖಂಡಿನಃ ।
ಪಶ್ಯತಾಂ ದ್ರೌಪದೇಯಾನಾಂ ಪಾಂಚಾಲಾನಾಂ ಚ ಸರ್ವಶಃ ॥೧೩॥

ಆದರೆ, ಯುಯುಧಾನನು ನೋಡುತ್ತಿದ್ದಂತೆಯೆ, ಧೃಷ್ಟದ್ಯುಮ್ನ ನಕುಲ-ಸಹದೇವರು, ವೀರಶಿಖಂಡಿ, ದ್ರೌಪದೀಪುತ್ರರು ಪಾಂಚಾಲರು ಎಲ್ಲರೂ ನೋಡುತ್ತಿದ್ದಂತೆಯೇ ಕರ್ಣನು ನನ್ನ ಧ್ವಜವನ್ನು ಕತ್ತರಿಸಿದ. ಹಿಂಭಾಗದ ರಕ್ಷಕರನ್ನು ಸಂಹರಿಸಿದ. ನನ್ನ ಕುದುರೆಗಳನ್ನೂ ಕೊಂದ.

ಏತಾನ್ ಜಿತ್ವಾ ಮಹಾವೀರ್ಯಾನ್ ಕರ್ಣಃ ಶತ್ರುಗಣಾನ್ ಬಹೂನ್ ।
ಜಿತವಾನ್ ಮಾಂ ಮಹಾಬಾಹೋ ಯತಮಾನಂ ಮಹಾರಣೇ ॥೧೪॥

ಮಹಾಬಾಹು ಕೃಷ್ಣ ಈ ಮಹಾವೀರ್ಯಶಾಲಿಗಳಾದ ಬಹು ಶತ್ರುಸಮೂಹಗಳನ್ನು ಕರ್ಣನು ಗೆದ್ದು ಮಹಾರಣದಲ್ಲಿ ಯತ್ನ ಮಾಡುತ್ತಿದ್ದ ನನ್ನನ್ನೂ ಪರಾಭವಗೊಳಿಸಿದ.

ಅನುಸೃತ್ಯ ಚ ಮಾಂ ಯುದ್ಧೇ ಪರುಷಾಣ್ಯುಕ್ತವಾನ್ ಬಹು ।
ತತ್ರ ಕರ್ಣೋ ಯುಧಾಂ ಶ್ರೇಷ್ಠಃ ಪರಿಭೂಯ ಧನಂಜಯ ॥೧೫॥

ಅರ್ಜುನ, ಯೋಧರಲ್ಲಿ ಶ್ರೇಷ್ಠನಾದ ಕರ್ಣನು ಯುದ್ಧದಲ್ಲಿ ನನ್ನನ್ನು ಪರಾಭವಗೊಳಿಸಿ ಹಿಂಬಾಲಿಸಿ ಬಂದು ಬಹಳ ಕಟುನುಡಿಗಳನ್ನು ಆಡಿದ.

ಭೀಮಸೇನಪ್ರಭಾವಾತ್ ತು ಯಜ್ಜೀವಾಮಿ ಧನಂಜಯ ।
ಬಹುನಾತ್ರ ಕಿಮುಕ್ತೇನ ನಾಹಂ ತತ್ಸೋಢುಮುತ್ಸಹೇ ॥೧೬॥

ಅರ್ಜುನ, ಭೀಮಸೇನನ ಪ್ರಭಾವದಿಂದ ನಾನು ಬದುಕಿದ್ದೇನೆ; ಹೆಚ್ಚು ಹೇಳುವುದರಿಂದೇನು? ನಾನು ಅದನ್ನು ಸಹಿಸಲಾರೆ.

ತ್ರಯೋದಶಾಹಂ ವರ್ಷಾಣಿ ಯಸ್ಮಾದ್ ಭೀತೋ ಧನಂಜಯ ।
ನ ಸ್ಮ ನಿದ್ರಾಂ ಲಭೇ ರಾತ್ರೌ ನ ಚಾಹನಿ ಸುಖಂ ಕ್ವಚಿತ್ ॥೧೭॥

ಅರ್ಜುನ, ಹದಿಮೂರು ವರ್ಷಗಳ ಕಾಲ ಕರ್ಣನ ಭೀತಿಯಿಂದ ನಾನು ಎಂದೂ ರಾತ್ರಿ ನಿದ್ರೆ ಹೊಂದಲಿಲ್ಲ. ಹಗಲು ನೆಮ್ಮದಿ ಹೊಂದಲಿಲ್ಲ.

ತಸ್ಯ ದ್ವೇಷೇಣ ಸಂಯುಕ್ತಃ ಪರಿದಹ್ಯೇ ಧನಂಜಯ ।
ಆತ್ಮನೋ ಮರಣಂ ಜಾನನ್ ವಾಧ್ರಾನಸ ಇವ ದ್ವಿಪಾತ್ । ೧೮॥

ಅರ್ಜುನ, ಕರ್ಣನ ಮೇಲಿನ ದ್ವೇಷದಿಂದ ಯುಕ್ತನಾಗಿ ಕರ್ಣನು ನನಗೆ ಮಾಡಿದ ಪರಾಭವವನ್ನೇ ಮರಣವೆಂದು ತಿಳಿದು ನಾನು, ಕಾಡುಕೋಣವು ಆನೆಯಿಂದ ಪರಾಭವಗೊಳ್ಳುವಂತೆ ನಾನೂ ಕರ್ಣನಿಂದ ಪರಾಭವ ಗೊಂಡೆನೆಂದು ಮನಸಿನೊಳಗೇ ಬೆಂದುಹೋಗುತ್ತಿದ್ದೇನೆ.

ಇಲ್ಲಿ ವಾಧ್ರಾಣಸ, ವಾಧ್ರ್ಯಾಣಸ, ವಾಧ್ರೀಣಸ, ವಾಧ್ರ್ಯಾನಸ ಎಂದು ಕೋಶಗಳಲ್ಲಿ ಅನೇಕ ಬಗೆ ಶಬ್ದೋಚ್ಚಾರಣ ಕಾಣುತ್ತದೆ. ನೀಲಕಂಠೀಯದಲ್ಲಿ 'ವಾಧ್ರೀಣಸ' ಎಂಬ ಶಬ್ದವಿಟ್ಟುಕೊಂಡು ನಾಸಿಕೆಯಲ್ಲಿ 'ವಾಧ್ರೀ'ಸದೃಶವಾದ ತೊಗಲಿನ ಬಾರಿನಂಥ ಚರ್ಮ ಉಳ್ಳ ಟಗರಿನ ಒಂದು ವಿಶೇಷ ಜಾತಿ ಎಂದು ಅರ್ಥ ಹೇಳಿದ್ದಾರೆ. ಮತ್ತು 'ದ್ವಿಪಾತ್' 'ಆನೆಯಿಂದ' ಎಂಬಲ್ಲಿ 'ದ್ವಿಪಃ' ಎಂದು ಪಾಠ ವಿಟ್ಟುಕೊಂಡು 'ಟಗರು ಮುಖ ಮತ್ತು ಕಿವಿಗಳಿಂದ ನೀರು ಕುಡಿಯುತ್ತದೆ' ಎಂದೂ ಅರ್ಥ ಮಾಡಿದ್ದಾರೆ. ಇದಕ್ಕೆ ಪ್ರಮಾಣದ ಆಧಾರವೇನಿಲ್ಲ. ಮತ್ತು ಯುಧಿಷ್ಠಿರನು ತಾನು ಯುದ್ಧದಲ್ಲಿ ಟಗರಿನಂತೆ ಪರಾಭವಗೊಂಡೆನೆನ್ನುವುದರಲ್ಲಿ ಏನು ಸ್ವಾರಸ್ಯವೂ ಇಲ್ಲ. ಕಪ್ಪುಕೊರಳು ಕೆಂಪುತಲೆ ಬಿಳಿರೆಕ್ಕೆಉಳ್ಳ ಪಕ್ಷಿಯೊಂದು 'ವಾಧ್ರೀಣಸ' ಎನಿಸುತ್ತದೆ. 'ದ್ವಿಜಃ' ಎಂದು ಪಾಠದಲ್ಲಿ ಈ ಪಕ್ಷಿಯನ್ನು ಶ್ಲೋಕದಲ್ಲಿ ಗ್ರಹಿಸಬಹುದೆಂದೂ ನೀಲಕಂಠೀಯದಲ್ಲಿದೆ. ಈ ಅರ್ಥದಲ್ಲಿಯೂ ಸ್ವಾರಸ್ಯವಿಲ್ಲ. ಅಮರಕೋಶವು ವಾಧ್ರೀಣಸಶಬ್ದವನ್ನೇ ಹೇಳಿಲ್ಲ. ಹಲಾಯುಧ ಕೋಶದಲ್ಲಿ,

'ಮಹಿಷಃ ಸೈರಭ ಉಕ್ಷೋ ರಕ್ತಾಕ್ಷಃ ಕಾಸರೋ ಲುಲಾಯಶ್ಚ ।
ವಾಧ್ರಾನಸಶ್ಚ ಖಡ್ಗೀ ಗಂಡಕ ಇತಿ ಕಥ್ಯತೇ ಸದ್ಭಿಃ ।'

ಎಂಬ ವಚನವಿದೆ. ಅದನ್ನು ಉದಾಹರಿಸಿ ಲಕ್ಷಾಲಂಕಾರದಲ್ಲಿ ವಾಧ್ರಾನಸ ಎಂದರೆ

ಕಾಡುಕೋಣ ಎಂದೂ 'ದ್ವಿಪಾತ್' ಆನೆಯಿಂದ ಅದು ಪರಾಭವಗೊಂಡು ಪರಿತಪಿಸುತ್ತದೆ ಎಂದೂ ಹೇಳಿದ್ದಾರೆ. ಇಲ್ಲಿ 'ಖಡ್ಗೀ ಗಂಡಕ ಇತಿ ಕಥ್ಯತೇ ಸದ್ಭಿಃ' ಎಂದರೆ 'ಖಡ್ಗಮೃಗವು, ಘೇಂಡಾಮೃಗವು 'ಗಂಡಕ' ಎನಿಸುತ್ತದೆ' ಎಂದು ಅನ್ವಯವಿಟ್ಟುಕೊಂಡರೆ 'ವಾಧ್ರಾನಸಶ್ಚ' 'ವಾಧ್ರಾನಸವೆಂದೂ ಕೂಡ ಮಹಿಷಃ' ಕಾಡುಕೋಣ ಕರೆಸಿಕೊಳ್ಳುತ್ತದೆ' ಎಂದು ಹೇಳಿದಂತಾಗುತ್ತದೆ. ನಿಘಂಟುಕಾರರು ಎಲ್ಲರೂ 'ವಾಧ್ರಾನಸಶ್ಚ ಖಡ್ಗೀ ಗಂಡಕ ಇತಿ ಕಥ್ಯತೇ ಸದ್ಭಿಃ' ಎಂದು ಅನ್ವಯಮಾಡಿ 'ವಾಧ್ರಾನಸವೆಂದರೆ ಖಡ್ಗಮೃಗ' ಎನ್ನುತ್ತಾರೆ. ಆದರೆ ಖಡ್ಗಮೃಗ ಆನೆಗೆ ಹೆದರುವ ಮೃಗವಲ್ಲ. ಅದರಿಂದ ವಾಧ್ರಾನಸವೆಂದರೆ ಮಹಿಷವೆಂದೇ ಹಲಾಯುಧಕೋಶದ ಅಭಿಪ್ರಾಯವಿಟ್ಟುಕೊಳ್ಳುವುದು ಪ್ರಕೃತದಲ್ಲಿ ಹೆಚ್ಚು ಯುಕ್ತವಾಗಿ ಕಾಣುತ್ತದೆ. ಲಕ್ಷಾಲಂಕಾರದಲ್ಲಿ ಹಾಗೇ ಹೇಳಿದ್ದಾರೆ.

ಯಸ್ಯಾಯಮಗಮತ್ ಕಾಲಶ್ಚಿಂತಯಾನಸ್ಯ ಮೇ ವಿಭೋ ।
ಕಥಂ ಶಕ್ಯೋ ಮಯಾ ಕರ್ಣೋ ಯುದ್ಧೇ ಕ್ಷಪಯಿತುಂ ಭವೇತ್॥೧೯॥

ಅರ್ಜುನ, ರಣದಲ್ಲಿ ಕರ್ಣನನ್ನು ನಾಶಪಡಿಸಲು ನನ್ನಿಂದ ಹೇಗೆ ಸಾಧ್ಯವಾದೀತೆಂದು ಚಿಂತಿಸುತ್ತಿದ್ದಂತೆಯೇ ನನಗೆ ಇಷ್ಟುಕಾಲ ಕಳೆದುಹೋಯಿತು.

ಜಾಗ್ರತ್‌ಸ್ವಪಂಶ್ಚ ಕೌಂತೇಯ ಕರ್ಣಮೇವ ಸದಾ ಹ್ಯಹಮ್ ।
ಪಶ್ಯಾಮಿ ತತ್ರ ತತ್ರೈವ ಕರ್ಣಭೂತಮಿದಂ ಜಗತ್ ॥೨೦॥

ಅರ್ಜುನ, ಎಚ್ಚರದಲ್ಲಿಯೂ ನಿದ್ದೆಯಲ್ಲಿಯೂ ಅಲ್ಲಲ್ಲಿ ಎಲ್ಲಕಡೆ ನಾನು ಕರ್ಣನನ್ನೇ ಸದಾ ಕಾಣುತ್ತಿದ್ದೆ. ನನಗೆ ಜಗತ್ತೇ ಕರ್ಣಮಯವಾಗಿತ್ತು.

ಯತ್ರ ಯತ್ರ ಹಿ ಗಚ್ಛಾಮಿ ಕರ್ಣಾದ್ ಭೀತೋ ಧನಂಜಯ ।
ತತ್ರ ತತ್ರ ಹಿ ಪಶ್ಯಾಮಿ ಕರ್ಣಮೇವಾಗ್ರತಃ ಸ್ಥಿತಮ್ ॥೨೧॥

ಅರ್ಜುನ, ಎಲ್ಲೆಲ್ಲಿ ನಾನು ಹೋಗುವೆನೋ ಅಲ್ಲಿ ಮುಂದೆ ಕರ್ಣನನ್ನು ನಿಂತಿರುವಂತೇ ಕಾಣುತ್ತಿದ್ದೆ.

ಸೋಽಹಂ ತೇನೈವ ವೀರೇಣ ಸಮರೇಷ್ವಪಲಾಯಿನಾ ।
ಸಹಯಃ ಸರಥಃ ಪಾರ್ಥ ಜಿತ್ವಾ ಜೀವನ್ ವಿಸರ್ಜಿತಃ ॥೨೨॥

ಅರ್ಜುನ, ರಣಗಳಲ್ಲಿ ಪಲಾಯನ ಮಾಡದ ಆ ವೀರ ಕರ್ಣನಿಂದು ನನ್ನನ್ನು ಕುದುರೆಗಳ ರಥಗಳ ಸಹಿತವಾಗಿ ಪರಾಭವಗೊಳಿಸಿ, ಜೀವಸಹಿತ ಬಿಟ್ಟಿದ್ದಾನೆ.

ಕೋ ನು ಮೇ ಜೀವಿತೇನಾರ್ಥೋ ರಾಜ್ಯೇನಾರ್ಥೋಽಥ ವಾ ಪುನಃ ।
ಮಮೈವ ಧಿಕೃತಸ್ಯೇಹ ಕರ್ಣೇನಾಹವಶೋಭಿನಾ ॥೨೩॥

ರಣದಲ್ಲಿ ಶೋಭಿಸಿದ ಕರ್ಣನಿಂದ ಧಿಕ್ಕಾರಕ್ಕೊಳಗಾದ ನಾನು ಇನ್ನು ಬದುಕಿದ್ದೇನು ಫಲ? ಅಥವಾ ರಾಜ್ಯ ಸಂಪಾದಿಸಿ ಏನು ಫಲ?

ನ ಪ್ರಾಪ್ತಪೂರ್ವಂ ಯದ್‌ಭೀಷ್ಮಾತ್ ಕೃಪಾದ್ ದ್ರೋಣಾಚ್ಚ
ಸಂಯುಗೇ ।
ತತ್‌ಪ್ರಾಪ್ತಮದ್ಯ ಮೇ ಯುದ್ಧೇ ಸೂತಪುತ್ರಾನ್ಮಹಾರಥಾತ್ ॥೨೪॥

ರಣದಲ್ಲಿ ಭೀಷ್ಮನಿಂದ ಕೃಪನಿಂದ ದ್ರೋಣನಿಂದಲೂ ನನಗೆ ಆಗದಿದ್ದ ಅವಮಾನ ಇಂದು ರಣದಲ್ಲಿ ಮಹಾರಥ ಸೂತಪುತ್ರನಿಂದ ನನಗಾಯಿತು!

ತತ್ತ್ವಾ ಪೃಚ್ಛಾಮಿ ಕೌಂತೇಯ ಯಥಾ ನಃ ಕುಶಲಂ ತಥಾ ।
ತನ್ಮಮಾಚಕ್ಷ್ವ ಕಾರ್ತ್ಸ್ನ್ಯೇನ ಯಥಾ ಕರ್ಣಸ್ತ್ವಯಾ ಹತಃ ॥೨೫॥

ಅದರಿಂದ ಅರ್ಜುನ, ನಾನು ಈಗ ನಿನ್ನನ್ನು ಕೇಳುತ್ತೇನೆ, ನಮಗೆ ಕ್ಷೇಮ ಹೇಗೆ ಉಂಟಾಯಿತು? ನೀನು ಕರ್ಣನನ್ನು ಹೇಗೆ ವಧಿಸಿದೆ? ಅದನ್ನು ಪೂರ್ತಿಯಾಗಿ ನನಗೆ ಹೇಳು.

ಶಕ್ರವೀರ್ಯಸಮೋ ಯುದ್ಧೇ ಯಮತುಲ್ಯಪರಾಕ್ರಮಃ ।
ರಾಮತುಲ್ಯಸ್ತಥಾಸ್ತ್ರೇ ಯಃ ಸ ಕಥಂ ವೈ ನಿಷೂದಿತಃ ॥೨೬॥

ಯುದ್ಧದಲ್ಲಿ ಇಂದ್ರನಿಗೆ ಸಮಾನ ಬಲವುಳ್ಳವನು, ಯಮನಿಗೆ ಸಮಾನ ಪರಾಕ್ರಮವುಳ್ಳವನು ಅಸ್ತ್ರದಲ್ಲಿ ಪರಶುರಾಮನಿಗೆ ಸಮಾನನಾಗಿರುವ ಕರ್ಣನು ನಿನ್ನಿಂದ ಹೇಗೆ ಹತನಾದ?

ಮಹಾರಥಃ ಸಮಾಖ್ಯಾತಃ ಸರ್ವಯುದ್ಧವಿಶಾರದಃ ।
ಧನುರ್ಧರಾಣಾಂ ಪ್ರವರಃ ಸರ್ವೇಷಾಮೇಕಪೌರುಷಃ ॥೨೭॥

ಪೂಜಿತೋ ಧೃತರಾಷ್ಟ್ರೇಣ ಸಪುತ್ರೇಣ ಮಹಾರಥಃ ।
ಸದಾ ತ್ವದರ್ಥಂ ರಾಧೇಯಃ ಸ ಕಥಂ ನಿಹತಸ್ತ್ವಯಾ ॥೨೮॥

ಮಹಾರಥನೆಂದು ಪ್ರಸಿದ್ಧ ಸರ್ವಯುದ್ಧಗಳಲ್ಲಿ ಪಾರಂಗತ, ಧನುರ್ಧಾರಿಗಳಲ್ಲಿ ಶ್ರೇಷ್ಠ ಎಲ್ಲರಿಗಿಂತ ಶ್ರೇಷ್ಠ ಪೌರುಷವುಳ್ಳವನು. ನಿನ್ನ ವಧೆಯ ಸಲುವಾಗಿಯೇ ಧೃತರಾಷ್ಟ್ರನೂ ಅವನ ಮಕ್ಕಳೂ ಸದಾ ಅವನನ್ನು ಆದರಿಸುತ್ತಿದ್ದರು. ಮಹಾರಥನಾದ ಅಂಥ ಕರ್ಣ ನಿನ್ನಿಂದ ಹೇಗೆ ಹತನಾದ?

ಧೃತರಾಷ್ಟ್ರೋ ಹಿ ಯೋಧೇಷು ಸರ್ವೇಷ್ವೇವ ಸದಾರ್ಜುನ ।
ತವ ಮೃತ್ಯುಂ ರಣೇ ಕರ್ಣಂ ಮನ್ಯತೇ ಪುರುಷರ್ಷಭಮ್ ॥೨೯॥

ಅರ್ಜುನ, ರಣದಲ್ಲಿ ಎಲ್ಲ ಯೋಧರಲ್ಲಿಯೂ ಪುರುಷಶ್ರೇಷ್ಠನಾದ ಕರ್ಣನನ್ನೇ ನಿನಗೆ ಮೃತ್ಯು ಎಂದು ಧೃತರಾಷ್ಟ್ರ ಸದಾ ತಿಳಿದಿದ್ದ.

ಸ ತ್ವಯಾ ಪುರುಷವ್ಯಾಘ್ರ ಕಥಂ ಯುದ್ಧೇ ನಿಷೂದಿತಃ ।
ತನ್ಮಮಾಚಕ್ಷ್ವ ಬೀಭತ್ಸೋ ಯಥಾ ಕರ್ಣೋ ಹತಸ್ತ್ವಯಾ ॥೩೦॥

ಪುರುಷಶ್ರೇಷ್ಠ ಅರ್ಜುನನೆ, ಅಂಥ ಕರ್ಣನು ರಣದಲ್ಲಿ ನಿನ್ನಿಂದ ಹೇಗೆ ಹತನಾದ? ಹೇಗೆ ಹತನಾದ? ಅದನ್ನು ನನಗೆ ಹೇಳು.

ಸೋಽತ್ಸೇಧಮಸ್ಯ ಚ ಶಿರಃ ಪಶ್ಯತಾಂ ಸುಹೃದಾಂ ಹೃತಮ್ ।
ತ್ವಯಾ ಪುರುಷಶಾರ್ದೂಲ ಶಾರ್ದೂಲೇನ ಯಥಾ ರುರೋಃ ॥೩೧॥

ಪುರುಷಶ್ರೇಷ್ಠನಾದ ಅರ್ಜುನನೆ, ಹುಲಿಯು ಜಿಂಕೆಯ ತಲೆಯನ್ನು ತೆಗೆಯುವಂತೆ ನೀನು ಪ್ರಾಯಃ ಕರ್ಣನ ತಲೆಯನ್ನು ಅವನ ಮಿತ್ರರು ನೋಡುತ್ತಿದ್ದಂತೆಯೇ ಕತ್ತರಿಸಿ ಚೆಂಡಿನಂತೆ ಮೇಲೆ ಹಾರಿಸಿ ಕೆಡವಿರುವೆ. ಹೌದು ತಾನೆ?

ಯಃ ಪರ್ಯುಪಾಸೀತ್ ಪ್ರದಿಶೋ ದಿಶಶ್ಚ
ತ್ವಾಂ ಸೂತಪುತ್ರಃ ಸಮರೇ ಪರೀಪ್ಸನ್ ।
ದಿತ್ಸುಃ ಕರ್ಣಃ ಸಮರೇ ಹಸ್ತಿಪೂಗಂ
ಸ ಹೀದಾನೀಂ ಕಂಕಪತ್ರೈಃ ಸುತೀಕ್ಷ್ಣೈಃ ॥೩೨॥

ತ್ವಯಾ ರಣೇ ನಿಹತಃ ಸೂತಪುತ್ರಃ
ಕಚ್ಚಿಚ್ಛೇತೇ ಭೂಮಿತಳೇ ದುರಾತ್ಮಾ ।
ಕಚ್ಚಿತ್ಪ್ರಿಯಂ ಮೇ ಪರಮಂ ತ್ವಯಾದ್ಯ
ಕೃತಂ ರಣೇ ಸೂತಪುತ್ರಂ ನಿಹತ್ಯ ॥೩೩॥

ಕರ್ಣನು ರಣದಲ್ಲಿ ನಿನ್ನನ್ನು ಹೊಂದಲು ಬಯಸಿ ದಿಕ್ಕು ವಿದಿಕ್ಕುಗಳಲ್ಲಿ ಸುತ್ತಿದ. ಅವನನ್ನು ರಣದಲ್ಲಿ ತೋರಿಸಿದವರಿಗೆ ಆನೆಗಳ ಸಮೂಹವನ್ನೇ ಕೊಡಲು ಬಯಸಿದ್ದ. ದುರಾತ್ಮನಾದ ಅವನೇ ಈಗ ನಿನ್ನಿಂದ ಬಲುತೀಕ್ಷ್ಣವಾದ, ಹದ್ದಿನ ರೆಕ್ಕೆವುಳ್ಳ ಬಾಣಗಳಿಂದ ಹತನಾಗಿ ಭೂತಲದಲ್ಲಿ ಒರಗಿದ್ದಾನೆ ತಾನೆ! ನೀನು ಈಗ ರಣದಲ್ಲಿ ಕರ್ಣನನ್ನು ವಧಿಸಿ ನನಗೆ ಅತ್ಯಂತ ಪ್ರಿಯವಾದ ಕಾರ್ಯವನ್ನು ಮಾಡಿರುವೆ ತಾನೆ !

ಯಃ ಸರ್ವತಃ ಪರ್ಯಪತತ್ ತ್ವದರ್ಥೇ
ಮದಾನ್ವಿತೋ ಗರ್ವಿತಃ ಸೂತಪುತ್ರಃ ।
ಸ ಶೂರಮಾನೀ ಸಮರೇ ಸಮೇತ್ಯ
ಕಚ್ಚಿತ್ತ್ವಯಾ ನಿಹತಃ ಪಾಪಬುದ್ಧಿಃ ॥೩೪॥

ಕರ್ಣ ನಿನಗಾಗಿ ಎಲ್ಲಕಡೆ ಸುತ್ತಿದ, ಮದ–ಗರ್ವಗಳಿಂದ ಕೂಡಿದವನು, ತಾನೇ ಶೂರನೆಂದು ತಿಳಿದವನು, ಆ ಪಾಪಬುದ್ಧಿಯವನಾದ ಸೂತಪುತ್ರ ಇಂದು ರಣದಲ್ಲಿ ನಿನ್ನನ್ನು ಇದಿರಿಸಿ ಹತನಾಗಿದ್ದಾನೆ ತಾನೆ !

ರೌಕ್ಮಂ ರಥಂ ಹಸ್ತಿವರೈಶ್ಚ ಯುಕ್ತಂ
ವರಂ ದಿತ್ಸುರ್ಯಃ ಪರೇಭ್ಯಸ್ತ್ವದರ್ಥೇ ।
ಸದಾ ರಣೇ ಸ್ಪರ್ಧತೇ ಯಃ ಸ ಪಾಪಃ
ಕಚ್ಚಿತ್ ತ್ವಯಾ ನಿಹತಃ ಸೂತಪುತ್ರಃ ॥೩೫॥

ಬಂಗಾರದ ಉತ್ತಮ ರಥವನ್ನು ಜೊತೆಗೆ ಉತ್ತಮ ಆನೆಗಳನ್ನು ನಿನ್ನ ಸಲುವಾಗಿ ಪರರಿಗೆ ಕೊಡಲು ಬಯಸಿದವನು, ಸದಾ ರಣದಲ್ಲಿ ನಿನ್ನೊಡನೆ ಸ್ಪರ್ಧಿಸುತ್ತಿದ್ದವನು ಪಾಪಿ ಸೂತಪುತ್ರನು ನಿನ್ನಿಂದ ಹತನಾಗಿದ್ದಾನೆ ತಾನೆ !

ಯೋಽಸೌ ನಿತ್ಯಂ ಶೌರ್ಯಮದೇನ ಮತ್ತೋ
ವಿಕತ್ಥತೇ ಸಂಸದಿ ಕೌರವಾಣಾಮ್ ।
ಪ್ರಿಯೋಽತ್ಯರ್ಥಂ ತಸ್ಯ ಸುಯೋಧನಸ್ಯ
ಕಚ್ಚಿತ್ ಸ ಪಾಪೋ ನಿಹತಸ್ತ್ವಯಾದ್ಯ ॥೩೬॥

ಸದಾ ಶೌರ್ಯಮದದಿಂದ ಮತ್ತನಾಗಿ ಕೌರವರ ಕೂಟದಲ್ಲಿ ಜಂಬ ಕೊಚ್ಚಿಕೊಳ್ಳುತ್ತಿದ್ದವನು. ಆ ಸುಯೋಧನನಿಗೆ ಅತ್ಯಂತ ಪ್ರಿಯ, ಪಾಪಿ ಕರ್ಣ ಇಂದು ನಿನ್ನಿಂದ ಹತನಾಗಿದ್ದಾನೆ ತಾನೆ!

ಕಚ್ಚಿತ್ ಸಮಾಗಮ್ಯ ಧನುಃಪ್ರಮುಕ್ತೈ
ಸ್ತ್ವತ್ಪ್ರೇಷಿತೈರ್ಘೋರಹಿತಾರ್ಥಿಭಿರ್ವಿಹಂಗೈಃ ।
ಶೇತೇಽದ್ಯ ಪಾಪಃ ಸ ವಿಭಿನ್ನಗಾತ್ರಃ
ಕಚ್ಚಿದ್ ಭಗ್ನೋ ಧಾರ್ತರಾಷ್ಟ್ರಸ್ಯ ಬಾಹುಃ ॥೩೭॥

ನಿನ್ನನ್ನಿದಿರಿಸಿ, ನಿನ್ನ ಧನುಸ್ಸಿನಿಂದ ಹೊರಟ, ನೀನು ಎಸೆದ, ರಕ್ತಪಿಪಾಸುವಾಗಿ ಆಕಾಶದಲ್ಲಿ ಹಾರಿ ಬರುವ ಬಾಣಗಳಿಂದ ಆ ಪಾಪಿ ಮೈಸೀಳಿಸಿಕೊಂಡು ನೆಲದಲ್ಲಿ ಒರಗಿದ್ದಾನೆ ತಾನೆ? ದುರ್ಯೋಧನನ ಒಂದು ತೋಳೇ ಕಡಿದು ಬಿದ್ದಂತಾಗಿದೆ ತಾನೆ?

ಯೋಽಸೌ ಸದಾ ಶ್ಲಾಘತೇ ರಾಜಮಧ್ಯೇ
ದುರ್ಯೋಧನಂ ಹರ್ಷಯನ್ ದರ್ಪಪೂರ್ಣಃ ।
ಅಹಂ ಹಂತಾ ಫಲ್ಗುನಸ್ಯೇತಿ ಮೋಹಾತ್
ಕಚ್ಚಿದ್ವಚಸ್ತಸ್ಯ ನ ವೈ ತಥಾ ತತ್ ॥೩೮॥

ರಾಜರ ಮಧ್ಯದಲ್ಲಿ ಕರ್ಣನು ದರ್ಪದಿಂದ ತುಂಬಿ ದುರ್ಯೋಧನನನ್ನು ಮೆಚ್ಚಿಸುವುದಕ್ಕಾಗಿ ಮೋಹದಿಂದ ತನ್ನನ್ನು ಹೊಗಳಿಕೊಳ್ಳುತ್ತಿದ್ದ 'ನಾನು ಅರ್ಜುನನನ್ನು ಕೊಲ್ಲುವವನು' ಎಂದು, ಅವನ ಆ ಮಾತು ಹಾಗೆ ಆಗಲಿಲ್ಲ ತಾನೆ?

ನಾಹಂ ಪಾದೌ ಧಾವಯಿಷ್ಯೇ ಕದಾಚಿದ್
ಯಾವತ್ಸ್ಥಿತಃ ಪಾರ್ಥ ಇತ್ಯಲ್ಪಬುದ್ಧೇಃ ।

ವ್ರತಂ ತಸ್ಯೈತತ್ಸರ್ವದಾ ಶಕ್ರಸೂನೋ
ಕಚ್ಚಿತ್ ತ್ವಯಾ ನಿಹತಃ ಸೋಽದ್ಯ ಕರ್ಣಃ ॥೩೯॥

ಅರ್ಜುನ, 'ಅರ್ಜುನ ಜೀವಂತನಿರುವಷ್ಟು ಕಾಲ ನಾನು ಇತರರಿಂದ ಕಾಲು ತೊಳೆಸಿಕೊಳ್ಳುವುದಿಲ್ಲ' ಎಂದು ಅಲ್ಪಬುದ್ಧಿಯಾದ ಕರ್ಣನ ಸದಾವ್ರತವಿದ್ದಿತು. ಅಂಥ ಕರ್ಣನನ್ನು ನೀನು ಕೊಂದಿರುವೆ ತಾನೆ?

ಯೋಽಸೌ ಕೃಷ್ಣಾಮಬ್ರವೀದ್ ದುಷ್ಟಬುದ್ಧಿಃ
ಕರ್ಣಃ ಸಭಾಯಾಂ ಕುರುವೀರಮಧ್ಯೇ ।
ಕಿಂ ಪಾಂಡವಾಂಸ್ತ್ವಂ ನ ಜಹಾಸಿ ಕೃಷ್ಣೇ
ಸುದುರ್ಬಲಾನ್ ಪತಿತಾನ್ ಹೀನಸತ್ತ್ವಾನ್ ॥೪೦॥

ಆ ದುಷ್ಟಬುದ್ಧಿ ದ್ರೌಪದಿಗೆ ಸಭೆಯಲ್ಲಿ ಕೌರವವೀರರ ಮಧ್ಯದಲ್ಲಿ ಹೇಳಿದ್ದ— 'ದ್ರೌಪದಿ, ದುರ್ಬಲರಾದ ಪತಿತರಾದ ಹೀನಸತ್ವರಾದ ಪಾಂಡವರನ್ನು ನೀನು ಏಕೆ ಬಿಡಲೊಲ್ಲೆ?' ಎಂದು.

ಯತ್ತತ್ಕರ್ಣಃ ಪ್ರತ್ಯಜಾನಾತ್ ತ್ವದರ್ಥೇ
ನಾಹತ್ವಾಹಂ ಸಹ ಕೃಷ್ಣೇನ ಪಾರ್ಥಮ್ ।
ಇಹೋಪಯಾತೇತಿ ಸ ಪಾಪಬುದ್ಧಿಃ
ಕಚ್ಚಿಚ್ಛೇತೇ ಶರಸಮ್ಭಿನ್ನಗಾತ್ರಃ ॥೪೧॥

ಪಾಪಬುದ್ಧಿಯಾದ ಕರ್ಣನು ನಿನ್ನ ಸಲುವಾಗಿ ಪ್ರತಿಜ್ಞೆಮಾಡಿದ್ದ ಕೃಷ್ಣನೊಂದಿಗೆ ಅರ್ಜುನನನ್ನು ಕೊಲ್ಲದೆ ನಾನು ಇಲ್ಲಿಗೆ ಹಿಂತಿರುಗಲಾರೆ ಎಂದು. ಅವನು ಬಾಣದಿಂದ ಚೂರು ಚೂರಾಗಿ ಒರಗಿದ್ದಾನೆ ತಾನೆ?

ಕಚ್ಚಿತ್ ಸಂಗ್ರಾಮೋ ವಿದಿತೋ ವೈ ತವಾಯಂ
ಸಮಾಗಮೇ ಸೃಂಜಯಕೌರವಾಣಾಮ್ ।
ಯತ್ರಾವಸ್ಥಾಮೀದೃಶೀಂ ಪ್ರಾಪಿತೋಽಹಂ
ಕಚ್ಚಿತ್ ತ್ವಯಾ ಸೋಽದ್ಯ ಹತಃ ಸಮೇತ್ಯ ॥೪೨॥

ಕರ್ಣನು ನನ್ನನ್ನು ಈ ಅವಸ್ಥೆಗೆ ಈಡಾಗುವಂತೆ ಮಾಡಿದ ಸೃಂಜಯ-ಕೌರವ ಸಂಘರ್ಷದ ಈ ಸಂಗ್ರಾಮ ನಿನಗೆ ತಿಳಿದಿದೆ ತಾನೆ? ಅವನನ್ನು ಇದಿರಿಸಿ ನೀನೀಗ ಕೊಂದಿರುವೆ ತಾನೆ?

ಕಚ್ಚಿತ್ ತ್ವಯಾ ತಸ್ಯ ಸುಮಂದಬುದ್ಧೇ-
ರ್ಗಾಂಡೀವಮುಕ್ತೈರ್ವಿಶಿಖೈರ್ಜ್ವಲದ್ಭಿಃ।
ಸಕುಂಡಲಂ ಭಾನುಮದುತ್ತಮಾಂಗಂ
ಕಾಯಾತ್ ಪ್ರಕೃತ್ತಂ ಯುಧಿ ಸವ್ಯಸಾಚಿನ್ ॥೪೩॥

ಅರ್ಜುನ, ಅತಿಮಂದಬುದ್ಧಿಯವನಾದ ಅವನ ಕುಂಡಲಯುಕ್ತವಾಗಿ ಹೊಳೆಯುತ್ತಿದ್ದ ತಲೆಯನ್ನು ರಣದಲ್ಲಿ ಅವನ ಶರೀರದಿಂದ, ಗಾಂಡೀವದಿಂದ ಹೊರಡುವ ಜ್ವಲಿಸುವ ಬಾಣಗಳಿಂದ ಚೆನ್ನಾಗಿ ಕತ್ತರಿಸಿ ತೆಗೆದೆಯಲ್ಲವೆ?

ಯತ್ತನ್ಮಯಾ ಬಾಣಸಮರ್ಪಿತೇನ
ಧ್ಯಾತೋಽಸಿ ಕರ್ಣಸ್ಯ ವಧಾಯ ವೀರ।
ತನ್ಮೇ ತ್ವಯಾ ಕಚ್ಚಿದಮೋಘಮದ್ಯ
ಧ್ಯಾತಂ ಕೃತಂ ಕರ್ಣನಿಪಾತನೇನ ॥೪೪॥

ವೀರ ಅರ್ಜುನ, ಕರ್ಣನ ಬಾಣಗಳಿಂದ ಗಾಯಗೊಂಡಾಗ ಅವನ ವಧೆಯ ಸಲುವಾಗಿ ನಾನು ನಿನ್ನನ್ನು ಏನು ನೆನೆಸಿಕೊಂಡೆನೋ ಅದನ್ನು ನೀನೀಗ ಕರ್ಣವಧೆಯಿಂದ ಸಫಲಗೊಳಿಸಿಬಿಟ್ಟೆ ತಾನೆ?

ಯದ್ದರ್ಪಪೂರ್ಣಃ ಸ ಸುಯೋಧನೋಽಸ್ಮಾನ್
ಅವೇಕ್ಷತೇ ಕರ್ಣಸಮಾಶ್ರಯೇಣ।
ಕಚ್ಚಿತ್ ತ್ವಯಾ ಸೋಽದ್ಯ ಸಮಾಶ್ರಯೋಽಸ್ಯ
ಭಗ್ನಃ ಪರಾಕ್ರಮ್ಯ ಸುಯೋಧನಸ್ಯ ॥೪೫॥

ಯಾವ ಕರ್ಣನ ಆಶ್ರಯಬಲದಿಂದ ದುರ್ಯೋಧನನು ದರ್ಪಪೂರ್ಣನಾಗಿ ನಮ್ಮನ್ನು ನೋಡುತ್ತಿದ್ದನೋ ಸುಯೋಧನನ ಆ ಆಶ್ರಯವನ್ನು ನೀನೀಗ ಪರಾಕ್ರಮದಿಂದ ಭಗ್ನಗೊಳಿಸಿರುವೆ ತಾನೆ?

ಯೋ ನಃ ಪುರಾ ಷಂಢತಿಲಾನವೋಚತ್
ಸಭಾಮಧ್ಯೇ ಕೌರವಾಣಾಂ ಸಮಕ್ಷಮ್ ।
ಸ ದುರ್ಮತಿಃ ಕಚ್ಚಿದುಪೇತ್ಯ ಸಂಖೇ
ತ್ವಯಾ ಹತಃ ಸೂತಪುತ್ರೋಽತ್ಯಮರ್ಷೀ ॥೪೬॥

ಅಂದು ಸಭೆಯ ನಡುವೆ ಕೌರವರ ಸಮಕ್ಷದಲ್ಲಿ ನಮ್ಮನ್ನು ಜೊಳ್ಳಾದ ಎಳ್ಳಿನ ಕಾಳುಗಳೆಂದು ಯಾವನು ಹಳಿದಿದ್ದನೋ, ಅತ್ಯಂತ ಅಸಹನೆಯ ದುಷ್ಟಬುದ್ಧಿಯ ಆ ಕರ್ಣನನ್ನು ಈಗ ರಣದಲ್ಲಿ ಇದಿರಿಸಿ ಕೊಂದಿರುವೆ ತಾನೆ?

ಯಃ ಸೂತಪುತ್ರಃ ಪ್ರಹಸನ್ ದುರಾತ್ಮಾ
ಪುರಾಬ್ರವೀನ್ನಿರ್ಜಿತಾಂ ಸೌಬಲೇನ ।
ಸ್ವಯಂ ಪ್ರಗೃಹ್ಯಾನಯ ಯಾಜ್ಞಸೇನೀ-
ಮಪೀಹ ಕಚ್ಚಿತ್ ಸ ಹತಸ್ತ್ವಯಾದ್ಯ ॥೪೭॥

ದುರಾತ್ಮನಾದ ಸೂತಪುತ್ರ ಅಂದು 'ದ್ರೌಪದಿಯನ್ನು ಶಕುನಿ ಜೂಜಿನಲ್ಲಿ ಗೆದ್ದಿದ್ದಾನೆ, ದುಃಶಾಸನ, ನೀನೆ ಅವಳನ್ನು ಹಿಡಿದು ಎಳೆದು ತಾ' ಎಂದು ಗಹಗಹಿಸಿ ನಗುತ್ತ ಹೇಳಿದ್ದ. ಅಂಥ ಕರ್ಣನನ್ನು ನೀನಿಂದು ಕೊಂದೆ ತಾನೆ?

ಕಚ್ಚಿತ್ ಪಾಪಂ ವಚನಂ ದ್ಯೂತಕಾಲೇ
ಯಚ್ಚಾಪ್ಯಸೌ ಸಮಿತೌ ವಾಸುದೇವೇ ।
ತದೋಕ್ತವಾನ್ ಪರುಷಂ ಸೋಽತಿಕಾಮಂ
ಹಿತಂ ಹತ್ವಾ ಹ್ಯಾಹಿತಂ ವೈ ಕುರೂಣಾಂ ॥೪೮॥

''ನಿಮಗೆ ಜೂಜಿನಲ್ಲಿ ಪಣವಾಗಿಡಲು ಇನ್ನೇನೂ ಸಂಪತ್ತು ಉಳಿದಿಲ್ಲ. ಕೃಷ್ಣನನ್ನು ಪಣವಾಗಿಟ್ಟು ಆಡಿರಿ'' ಎಂದು ದುರ್ಯೋಧನನಿಂದ ಕಠೋರವಾದ ಪಾಪಕರವಾದ ಮಾತನ್ನು ಜೂಜಿನ ಕಾಲದಲ್ಲಿ ಕೃಷ್ಣನ ವಿಷಯದಲ್ಲಿ ತುಂಬಿದ ಸಭೆಯಲ್ಲಿ ಅತಿಸ್ವಚ್ಛಂದವಾಗಿ ನುಡಿಸಿದವನು ಕರ್ಣ. ಅವನನ್ನು ಅರ್ಜುನ, ನೀನು ಕೊಂದು ಕುರುಕುಲಕ್ಕೇ ಹಿತವನ್ನು ಉಂಟು ಮಾಡಿದೆ ತಾನೆ?

ಯಃ ಶಸ್ತ್ರಭೃಚ್ಛ್ರೇಷ್ಠತಮಂ ಪೃಥಿವ್ಯಾಂ
ಪಿತಾಮಹಂ ವ್ಯಾಕ್ಷಿಪದಲ್ಪಚೇತಾಃ ।

ಸಂಖ್ಯಾಯಮಾನೋಽರ್ಧರಥಃ ಸ ಕಚ್ಚಿತ್
ತ್ವಯಾ ಹತೋಽದ್ಯಾಧಿರಥಿರ್ದುರಾತ್ಮಾ ॥೪೯॥

ತಾನು ಅರ್ಧರಥನೆಂದು ಗಣಿಸಲ್ಪಟ್ಟಾಗ ಪೃಥಿವಿಯಲ್ಲಿ ಶಸ್ತ್ರಧಾರಿಗಳಲ್ಲೆಲ್ಲ ಅತ್ಯಂತ ಶ್ರೇಷ್ಠನಾದ ಭೀಷ್ಮಪಿತಾಮಹನನ್ನು ಅಲ್ಪಬುದ್ಧಿಯ ದುರಾತ್ಮ ಸೂತಪುತ್ರ ಬಹಳ ಆಕ್ಷೇಪಿಸಿದ್ದ. ಅವನನ್ನು ನೀನೀಗ ಕೊಂದಿರುವೆ ತಾನೆ?

ಅಮರ್ಷಣಂ ನಿಕೃತಿಸಮೀರಣೇರಿತಂ
ಹೃದಿ ಶ್ರಿತಂ ಜ್ವಲನಮಿಮಂ ಸದಾ ಮಮ ।
ಹತೋ ಮಯಾ ಸೋಽದ್ಯ ಸಮೇತ್ಯ ಪಾಪಧೀ-
ರಿತಿ ಬ್ರುವನ್ ಪ್ರಶಮಯ ಮೇಽದ್ಯ ಫಲ್ಗುನ ॥೫೦॥

ಬೆಂಕಿಗೆ ಗಾಳಿ ಹಾಕಿದಂತೆ, ನನ್ನೆದೆಯಲ್ಲಿದ್ದ ಅಸಹನೀಯವಾದ ಕೋಪಾಗ್ನಿ ಈ ಪಾಪವಚನದಿಂದ ಸದಾ ಉರಿಯುತ್ತಿತ್ತು. ಅದನ್ನು 'ನಾನು ಈಗ ಪಾಪಬುದ್ಧಿಯ ಕರ್ಣನನ್ನು ಕೊಂದು ಬಂದಿರುವೆನು' ಎಂದು ಹೇಳಿ, ಅರ್ಜುನ, ನನ್ನ ಈ ಕೋಪಾಗ್ನಿಯನ್ನು ಈಗ ಆರಿಸು.

ಬ್ರವೀಹಿ ಮೇ ದುರ್ಲಭಮೇತದದ್ಯ
ಕಥಂ ತ್ವಯಾ ನಿಹತಃ ಸೂತಪುತ್ರಃ ?
ಅನುಧ್ಯಾಯೇ ತ್ವಾಂ ಸತತಂ ಪ್ರವೀರ
ವೃತ್ರೇ ಹತೇ ದೇವಗುರುರ್ಯಥೇಂದ್ರಂ ॥೫೧॥

ದುರ್ಲಭವಾದ ಈ ಮಾತನ್ನು ಈಗ ನನಗೆ ಹೇಳು. ಹೇಗೆ ನೀನು ಕರ್ಣನನ್ನು ಕೊಂದೆ? ವೀರ ಅರ್ಜುನನೆ, ವೃತ್ರವಧಗೈದ ಇಂದ್ರನನ್ನು ದೇವಗುರು ಬೃಹಸ್ಪತಿ ಸದಾ ನೆನಪಿಸಿಕೊಳ್ಳುವಂತೆ, ಕರ್ಣವಧ ಮಾಡಿದ ನಿನ್ನನ್ನು ನಾನು ಸದಾ ನೆನಪಿಸಿಕೊಳ್ಳುತ್ತೇನೆ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಧರ್ಮರಾಜಾರ್ಜುನಸಂವಾದೇ ತ್ರಿಷಷ್ಟಿತಮೋಧ್ಯಾಯಃ ॥೬೩॥

ಅರವತ್ತನಾಲ್ಕನೆಯ ಅಧ್ಯಾಯ

'ಕರ್ಣವಧವನ್ನು ಇನ್ನು ಮಾಡಬೇಕಷ್ಟೆ' ಎಂದು ಅರ್ಜುನ ಹೇಳುತ್ತಾನೆ. 'ಅನುಜ್ಞೆ ಕೊಡು' ಎನ್ನುತ್ತಾನೆ.

ಸಂಜಯಃ

ತದ್ಧರ್ಮಶೀಲಸ್ಯ ವಚೋ ನಿಶಮ್ಯ
ರಾಜ್ಞಃ ಕ್ರುದ್ಧಸ್ಯಾಧಿರಥೌ ಮಹಾತ್ಮಾ ।
ಉವಾಚ ದುರ್ಧರ್ಷಮದೀನಸತ್ತ್ವಂ
ಯುಧಿಷ್ಠಿರಂ ಜಿಷ್ಣುರನಂತವೀರ್ಯಃ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಕರ್ಣನ ವಿಷಯದಲ್ಲಿ ಕುಪಿತನಾದ ಧರ್ಮಶೀಲನಾದ ರಾಜಾ ಯುಧಿಷ್ಠಿರ ನುಡಿದ ಆ ಮಾತನ್ನು ಕೇಳಿ ಅನಂತಪರಾಕ್ರಮಿ ಮಹಾತ್ಮ ಅರ್ಜುನನು, ದೈನ್ಯವಿಲ್ಲದ ಬಲಶಾಲಿಯೂ ಶತ್ರುಗಳಿಗೆ ಇದಿರಿಸಲಾಗದವನೂ ಆದ ಯುಧಿಷ್ಠಿರನಿಗೆ ಹೇಳಿದ.

ಅರ್ಜುನಃ

ಸಂಶಪ್ತಕೈರ್ಯುಧ್ಯಮಾನಸ್ಯ ಮೇಽದ್ಯ
ಸೇನಾಗ್ರ್ಯಯಾಯೀ ಕುರುಸೈನ್ಯಸ್ಯ ರಾಜನ್ ।
ಆಶೀವಿಷಾಭಾನ್ ಖಗಮಾನ್ ಪ್ರಮುಂಚನ್
ದ್ರೌಣಿಃ ಪುರಸ್ತಾತ್ ಸಹಸಾ ವ್ಯತಿಷ್ಠತ್ ॥೨॥

ಅರ್ಜುನನು ನುಡಿದ— ಇಂದು, ರಾಜನೆ, ಸಂಶಪ್ತಕರೊಡನೆ ಯುದ್ಧ ಮಾಡುತ್ತಿದ್ದ ನನ್ನ ಮೇಲೆ ಕುರುಸೈನ್ಯದಲ್ಲಿ ಸೇನೆಯ ಮುಂಭಾಗಕ್ಕೆ ಹೋಗುವ ಅಶ್ವತ್ಥಾಮನು ವಿಷಸರ್ಪದಂಥ ಬಾಣಗಳನ್ನು ಎಸೆಯುತ್ತ ವೇಗವಾಗಿ ನನ್ನ ಮುಂದೆ ಬಂದು ನಿಂತ.

ದೃಷ್ಟ್ವಾ ರಥಂ ಮೇಘಸಮಾನನಾದಂ
ಸಮಸ್ತಸೇನಾ ಚ ರಣೇ ವ್ಯತಿಷ್ಠತ ।

ತೇಷಾಮಹಂ ಪಂಚ ಶತಾನಿ ಹತ್ವಾ
ತತೋ ದ್ರೌಣಿಮಗಮಂ ಪಾರ್ಥಿವಾಗ್ರ್ಯ ॥೩॥

ರಾಜನೆ, ಮೋಡದಂತೆ ಗುಡುಗುವ ನನ್ನ ರಥವನ್ನು ನೋಡಿ ಎಲ್ಲ ಕೌರವ ಸೈನ್ಯ ರಣದಲ್ಲಿ ಆಕ್ರಮಿಸಿತು. ನಾನು ಅವರಲ್ಲಿ ಐದುನೂರು ರಥಿಕರನ್ನು ಸಂಹರಿಸಿ ಬಳಿಕ ಅಶ್ವತ್ಥಾಮನನ್ನು ಇದಿರಿಸಿದೆ.

ಸ ಮಾಂ ಸಮಾಸಾದ್ಯ ನರೇಂದ್ರ ಯತ್ತಃ
ಸಮಭ್ಯುಪೇತಃ ಸಮರೇ ದ್ವಿಜೇಂದ್ರಃ ।
ಅಕಾರ್ಷೀಚ್ಚ ರಥಿನಾಮುಜ್ಜಿಹೀರ್ಷಾಂ
ಮಹಾರಾಜ ವಧ್ಯತಾಂ ಕೌರವಾಣಾಮ್ ॥೪॥

ರಾಜನೆ, ಅಶ್ವತ್ಥಾಮನು ರಣದಲ್ಲಿ ಯತ್ನಪೂರ್ವಕವಾಗಿ ನನ್ನನ್ನು ಇದಿರಿಸಿದ. ಹತರಾಗುತ್ತಿದ್ದ ಕೌರವರ ರಥಿಕರ ರಕ್ಷಣೆಯಲ್ಲಿ ಪ್ರಯತ್ನಮಾಡಿದ.

ತತೋ ರಣೇ ಭಾರತ ದುಷ್ಕ್ರಮ್ಯ
ಆಚಾರ್ಯಪುತ್ರಃ ಪ್ರವರಃ ಕುರೂಣಾಮ್ ।
ಮಾಮರ್ದಯಾಮಾಸ ಶಿತೈಃ ಪೃಷತ್ಕೈ-
ರ್ಜನಾರ್ದನಂ ಚೈವ ವಿಷಾಗ್ನಿಕಲ್ಪೈಃ ॥೫॥

ರಾಜನೆ, ರಣದಲ್ಲಿ ನಡುಗಿಸಲಾಗದವನೂ ಕುರುಸೈನ್ಯದಲ್ಲಿ ಪ್ರಮುಖನೂ ಆದ ಅಶ್ವತ್ಥಾಮನು ವಿಷ ಮತ್ತು ಅಗ್ನಿಗಳಂಥ ಹರಿತವಾದ ಬಾಣಗಳಿಂದ ನನ್ನನ್ನು ಮತ್ತು ಕೃಷ್ಣನನ್ನು ಪೀಡಿಸಿದ.

ಅಷ್ಟೌ ರಥಾನ್ಯಷ್ಟಗವಾನಿ ಬಾಣಾನ್
ಮಯಾ ಪ್ರಯುದ್ಧಸ್ಯ ವಹಂತಿ ತಸ್ಯ ।
ತಾಂಸ್ತೇನ ಮುಕ್ತಾನಹಮಸ್ಯ ಬಾಣೈ-
ರ್ವ್ಯನಾಶಯಂ ವಾಯುರಿವಾಭ್ರಜಾಲಮ್ ॥೬॥

ನನ್ನೊಂದಿಗೆ ಯುದ್ಧಮಾಡುತ್ತಿದ್ದಾಗ ಅವನ ಎಂಟುಬಂಡಿ ಬಾಣಗಳನ್ನು ಎಂಟು ಎತ್ತುಗಳು ಹೊತ್ತಿದ್ದುವು. ಅವನು ಅವುಗಳನ್ನು ಎಸೆಯುತ್ತಿದ್ದಂತೇ ಗಾಳಿ ಮೋಡ

ಸಮೂಹಗಳನ್ನು ನಾಶ ಮಾಡುವಂತೆ, ನಾನು ಬಾಣಗಳಿಂದ ಅವುಗಳನ್ನು ನಾಶ ಮಾಡಿದೆ.

ತತೋಽಪರಾನ್ ಬಾಣಸಂಘಾನನೇಕಾನ್
ಆಕರ್ಣಪೂರ್ಣಾಯತವಿಪ್ರಮುಕ್ತಾನ್ ।
ಸಸರ್ಜ ಶಿಕ್ಷಾಸ್ತ್ರಬಲಪ್ರಯತ್ನೈ-
ಸ್ತಥಾ ಯಥಾ ಪ್ರಾವೃಷಿ ಕಾಲಮೇಘಃ ॥೭॥

ಶಿಕ್ಷಣ ಅಸ್ತ್ರಬಲ ಪ್ರಯತ್ನಗಳಿಂದ, ಮಳೆಗಾಲದ ಕರಿಮೋಡ ಮಳೆಗರೆಯುವಂತೆ ಅವನು ಕಿವಿಯವರೆಗೆ ಪೂರ್ತಿ ಸೆಳೆದು ಎಸೆದ ಬೇರೆ ಅನೇಕ ಬಾಣಸಮೂಹಗಳ ಮಳೆಯನ್ನೆ ಉಂಟುಮಾಡಿದ.

ನೈವಾದದಾನಂ ನ ಚ ಸಂದಧಾನಂ
ಜಾನೀಮಹೇ ಕತರೇಣಾಸ್ಯತೀತಿ ।
ವಾಮೇನ ವಾ ಯದಿ ವಾ ದಕ್ಷಿಣೇನ
ಸ ದ್ರೋಣಪುತ್ರಃ ಸಮರೇ ಪರ್ಯವರ್ತತ್ ॥೮॥

ಅಶ್ವತ್ಥಾಮನು ಬಾಣಗಳನ್ನು ಯಾವಾಗ ಎತ್ತಿಕೊಳ್ಳುತ್ತಾನೆ, ಯಾವಾಗ ಬಿಲ್ಲಿನಲ್ಲಿ ಹೂಡುತ್ತಾನೆ, ಎಡಗೈಯಿಂದಲೊ ಅಥವಾ ಬಲಗೈಯಿಂದಲೊ, ಯಾವ ಕೈಯಿಂದ ಎಸೆಯುತ್ತಾನೆ— ಒಂದೂ ನಮಗೆ ತಿಳಿಯದಾಯಿತು. ಹೀಗೆ ರಣದಲ್ಲಿ ಕೈಗಳನ್ನು ಬದಲಿಸುತ್ತಿದ್ದ.

ತಸ್ಯಾತತಂ ಮಂಡಲಮೇವ ಸಜ್ಯಂ
ಪ್ರದೃಶ್ಯತೇ ಕಾರ್ಮುಕಂ ದ್ರೋಣಸೂನೋಃ ॥೯॥

ಹೆದೆಯೇರಿಸಿದ ಅಶ್ವತ್ಥಾಮನ ಬಿಲ್ಲು ಸದಾ ಮಂಡಲಾಕಾರವಾಗಿಯೆ ಕಾಣಿಸಿಕೊಂಡಿತು.

ಅವಿಧ್ಯನ್ ಮಾಂ ಪಂಚಭಿದ್ರೋರ್ಣಪುತ್ರಃ
ಶಿತೈಃ ಶರೈಃ ಪಂಚಭಿರ್ವಾಸುದೇವಮ್ ।
ಅಹಂ ತು ತಂ ತ್ರಿಂಶತಾ ವಜ್ರಕಲ್ಪೈಃ
ಸಮಾರ್ದಯಂ ನಿಮಿಷಸ್ಯಾಂತರೇಣ ॥೧೦॥

ಅಶ್ವತ್ಥಾಮನು ನನ್ನನ್ನು ಐದು ಬಾಣಗಳಿಂದಲೂ ಕೃಷ್ಣನನ್ನು ಹರಿತವಾದ ಐದು ಬಾಣ ಗಳಿಂದಲೂ ಹೊಡೆದಾಗ ನಾನು ನಿಮಿಷಮಾತ್ರದಲ್ಲಿ ಪ್ರತಿಯಾಗಿ ಅವನನ್ನು ವಜ್ರ ಸದೃಶವಾದ ಮೂವತ್ತು ಬಾಣಗಳಿಂದ ಹೊಡೆದ.

ಕ್ಷಣಾತ್ತಾವಿತ್‌ಸಮರೂಪೋ ಬಭೂವ
ಸಮಾರ್ದಿತೋ ಮದ್ವಿಸೃಷ್ಟೈಃ ಪೃಷತ್ಕೈಃ ॥೧೧॥

ಅಶ್ವತ್ಥಾಮ ಆಗ ನಾನೆಸೆದ ಬಾಣಗಳಿಂದ ಬಹಳಪೀಡಿತನಾಗಿ ಒಂದು ಕ್ಷಣಕಾಲ ಅಧೀರನಾದಂತೆ ಕಂಡುಬಂದ.

'ಆತ್ತಾ ಅವಿತ್' ಧೈರ್ಯದಿಂದ ಸ್ಥಿರವಾಗಿ ನಿಲ್ಲುವುದನ್ನು ಮರೆತವನು, ಅಧೀರನಾದವನು. 'ಆತ್ತಾವಿತ್ ಸಮರೂಪ' ಅಧೀರನಂತೆ ಆದವನು ಅಶ್ವತ್ಥಾಮ ಎಂದರ್ಥ. -ಲಕ್ಷಾಲಂಕಾರ.

ಸ ವಿಕ್ಷರನ್ ರುಧಿರಂ ಸರ್ವಗಾತ್ರೈ
ರಥಾನೀಕಂ ಸೂತಸೂನೋರ್ವಿವೇಶ ।
ಮಯಾಭಿಭೂತಃ ಸೈನಿಕಾನಾಂ ಪ್ರಬರ್ಹಾನ್
ಅಸಾವಪಶ್ಯದ್ ರುಧಿರೇಣ ಪ್ರದಿಗ್ಧಾನ್ ॥೧೨॥

ಅಶ್ವತ್ಥಾಮನು ನನ್ನಿಂದ ಪರಾಜಿತನಾಗಿ, ತನ್ನ ಸೈನಿಕರಲ್ಲಿ ಪ್ರಮುಖರು ಎಲ್ಲರೂ ನೆತ್ತರಿನಲ್ಲಿ ತೊಯ್ದಿರುವುದನ್ನೂ ಕಂಡ. ಅದರಿಂದ ಮೈಯೆಲ್ಲ ರಕ್ತವನ್ನು ಸುರಿಸುತ್ತ ಕರ್ಣನ ರಥಸೈನ್ಯವನ್ನು ಸೇರಿಕೊಂಡ.

ತತೋಽಭಿಭೂತಂ ಯುಧಿ ವೀಕ್ಷ್ಯ ಸೈನ್ಯಂ
ವಿಧ್ವಸ್ತಯೋಧಂ ದ್ರುತವಾಜಿನಾಗಮ್ ।
ಪಂಚಾಶತಾ ರಥಮುಖ್ಯೈಃ ಸಮೇತಃ
ಕರ್ಣಸ್ತ್ವರನ್ ಮಾಮುಪಾಯಾತ್ ಪ್ರಮಾಥೀ ॥೧೩॥

ರಣದಲ್ಲಿ ಪದಾತಿಗಳು ನಾಶವಾದರು, ಅಶ್ವ–ಗಜಸೈನ್ಯಗಳು ಪಲಾಯನ ಮಾಡಿದುವು. ಹೀಗೆ ಸೈನ್ಯವು ನನ್ನಿಂದ ಪರಾಜಯ ಹೊಂದಿದ್ದನ್ನು ನೋಡಿ ಕರ್ಣನು ಐದುನೂರು ಶ್ರೇಷ್ಠರಥಿಕರೊಂದಿಗೆ ಶತ್ರುಗಳನ್ನು ಮಥಿಸುತ್ತ ನನ್ನ ಬಳಿಗೆ ವೇಗವಾಗಿ ಬಂದ.

ತಾನ್ ಸೂದಯಿತ್ವಾಹಮಪಾಸ್ಯ ಕರ್ಣಂ
ದ್ರಷ್ಟುಂ ಭವಂತಂ ತ್ವರಯಾಭಿಯಾತಃ ।
ಸರ್ವೇ ಪಾಂಚಾಲಾ ಹ್ಯುದ್ವಿಜಂತೇ ಸ್ಮ ಕರ್ಣಾದ್
ಗಂಧಾದ್ಗವಃ ಕೇಸರಿಣೋ ಯಥೈವ ॥೧೪॥

ಆ ಐದುನೂರು ರಥಿಕರನ್ನು ನಾನು ನಾಶಮಾಡಿ ಕರ್ಣನನ್ನು ದೂರಮಾಡಿ ತ್ವರೆಯಿಂದ ನಿನ್ನನ್ನು ಕಾಣಲೆಂದು ಬಂದೆ. ಅತ್ತ ಎಲ್ಲ ಪಾಂಚಾಲರೂ, ಸಿಂಹದ ವಾಸನೆಗೆ ಗೋವುಗಳು ಭಯಪಡುವಂತೆ, ಕರ್ಣನಿಗೆ ಭಯಪಟ್ಟರು.

ಮಹಾರ್ಷಭಸ್ಯೇವ ಮುಖಂ ಪ್ರಪನ್ನಾಃ
ಪ್ರಭದ್ರಕಾಃ ಕರ್ಣಮಭಿದ್ರವಂತಿ ।
ಮೃತ್ಯೋರಾಸ್ಯಂ ವ್ಯಾತ್ತಮಿವಾನ್ವಪದ್ಯನ್
ಪ್ರಭದ್ರಕಾಃ ಕರ್ಣಮಾಸಾದ್ಯ ರಾಜನ್ ॥೧೫॥

ತಿಮಿಂಗಿಲದ ಬಾಯೊಳಗೆ ಪ್ರವೇಶಿಸಿದಂತೆ ಪ್ರಭದ್ರಕರು ಕರ್ಣನ ಇದಿರಿಗೆ ನುಗ್ಗುತ್ತಿದ್ದಾರೆ. ಮೃತ್ಯುವಿನ ತೆರೆದ ಬಾಯೊಳಗೆ ಹೊಕ್ಕಂತೆ ಅವರು ಕರ್ಣನನ್ನಿದಿರಿಸಿ ಸಂಕಟಪಡುವುದು ನಿಶ್ಚಿತ.

ರಥಾಂಸ್ತು ತಾನ್ ಸಪ್ತಶತಾನ್ನಿಮಗ್ನಾಂ-
ಸ್ತದಾ ಕರ್ಣಃ ಪ್ರಾಹಿಣೋನ್ ಮೃತ್ಯುಸದ್ಮ ।
ಏವಂ ಪ್ರಸಕ್ತೋಽನ್ಯದವಾಪ್ಯ ಸೈನ್ಯಂ
ನ ಮಾಂ ಪ್ರಾಪ್ತಃ ಸಂಯುಗೇ ಸೂತಪುತ್ರಃ ॥೧೬॥

ಈಗಾಗಲೆ ಯುದ್ಧದಲ್ಲಿ ಮಗ್ನರಾಗಿದ್ದ ಏಳುನೂರು ಸುಭದ್ರಕ ರಥಿಕರನ್ನು ಕರ್ಣನು ಯಮಲೋಕಕ್ಕೆ ಕಳಿಸಿದ್ದಾನೆ. ಹೀಗೆ ಯುದ್ಧದಲ್ಲಿ ನಿರತನಾದ ಕರ್ಣ ಪುನಃ ಬೇರೆ ಸೈನ್ಯವನ್ನು ತಂದು ನನ್ನ ಇದಿರು ರಣದಲ್ಲಿ ನಿಲ್ಲಲಿಲ್ಲ.

ಶ್ರುತ್ವಾ ತು ತ್ವಾಂ ತೇನ ದೃಷ್ಟಂ ಸಮೇತ-
ಮಶ್ವತ್ಥಾಮ್ನಾ ಪೂರ್ವತರಂ ಕ್ಷತಂ ಚ ।
ಮನ್ಯೇ ಕಾಲಮಪಯಾನಸ್ಯ ರಾಜನ್
ಕ್ರೂರಾತ್ ಕರ್ಣಾತ್ ತೇಽಹಮಚಿಂತ್ಯಕರ್ಮನ್ ॥೧೭॥

ಕರ್ಣನು ನಿನ್ನನ್ನು ಕಂಡು ಆಕ್ರಮಿಸಿದ್ದನ್ನು, ಅದಕ್ಕೂ ಮೊದಲು ಅಶ್ವತ್ಥಾಮನು ನಿನ್ನನ್ನು ಆಕ್ರಮಿಸಿ ಮೈಗಾಯಗೊಳಿಸಿದ್ದನ್ನು ನಾನು ಕೇಳಿ, ಅಚಿಂತ್ಯಕರ್ಮ ಮಾಡುವ ರಾಜನೆ, ನಿನಗೆ ಆಯಾಸವಾಗಿದ್ದರಿಂದ, ಕ್ರೂರನಾದ ಕರ್ಣನೊಡನೆ ಯುದ್ಧವನ್ನು ಬಿಟ್ಟು ಈಚೆಗೆ ಬರಲು ಯೋಗ್ಯಕಾಲವಿದು ಎಂದು ಭಾವಿಸುತ್ತೇನೆ.

ನ ಮೇ ಕರ್ಣಸ್ಯಾಸ್ತ್ರಮಿದಂ ಪುರಸ್ತಾದ್
ಯುದ್ಧೇ ದೃಷ್ಟಂ ಪಾಂಡವ ಚಿತ್ರರೂಪಮ್ ।
ನ ಹ್ಯನ್ಯಯೋದ್ಧಾ ವಿದ್ಯತೇ ಸೃಂಜಯಾನಾಂ
ಮಹಾರಥಂ ಯೋಽದ್ಯ ಸಹೇತ ಕರ್ಣಮ್ ॥೧೮॥

ಕರ್ಣನಲ್ಲಿ ಆಶ್ಚರ್ಯಕರವಾದ ಈ ಭಾರ್ಗವಾಸ್ತ್ರ ಇದ್ದುದನ್ನು ನಾನು ಹಿಂದೆ ರಣದಲ್ಲಿ ಕಣ್ಣಾರೆ ಕಂಡಿಲ್ಲ. ಮತ್ತು ಕರ್ಣನನ್ನು ಇದಿರಿಸಬಲ್ಲವನು ನನ್ನನ್ನು ಬಿಟ್ಟರೆ ಸೃಂಜಯರಲ್ಲಿ ಇನ್ನೊಬ್ಬನಿಲ್ಲ.

ಶೈನೇಯೋ ಮೇ ಸಾತ್ಯಕಿಶ್ಚಕ್ರರಕ್ಷೌ
ಧೃಷ್ಟದ್ಯುಮ್ನಶ್ಚಾಪಿ ತಥೈವ ರಾಜನ್ ।
ಯುಧಾಮನ್ಯುಶ್ಚೋತ್ತಮೌಜಾಶ್ಚ ಶೂರೌ
ಪೃಷ್ಠತೋ ಮಾಂ ರಕ್ಷತಾಂ ರಾಜಪುತ್ರೌ ॥೧೯॥

ರಾಜನೆ, ಸಾತ್ಯಕಿ ಮತ್ತು ಧೃಷ್ಟದ್ಯುಮ್ನರು ನನಗೆ ಚಕ್ರರಕ್ಷಕರಾಗಿರಲಿ. ಶೂರ ರಾಜಪುತ್ರರು ಯುಧಾಮನ್ಯು ಉತ್ತಮೌಜರು ಹಿಂಭಾಗದಲ್ಲಿ ನನಗೆ ರಕ್ಷಕರಾಗಿರಲಿ.

ರಥಪ್ರವೀರೇಣ ಮಹಾನುಭಾವ
ದ್ವಿಷತ್‌ಸೈನ್ಯೇ ವರ್ತತಾ ದುಸ್ತರೇಣ ॥೨೦॥

ಸಮೇತ್ಯಾಹಂ ಸೂತಪುತ್ರೇಣ ಸಂಖ್ಯೇ
ವೃತ್ರೇಣ ವಜ್ರೀವ ನರೇಂದ್ರಮುಖ್ಯ ।
ಯೋತ್ಸ್ಯೇ ಭೃಶಂ ಭಾರತ ಸೂತಪುತ್ರಮ್
ಅಸ್ಮಿನ್ ಸಂಗ್ರಾಮೇ ಯದಿ ವೈ ದೃಶ್ಯತೇಽದ್ಯ ॥೨೧॥

ರಾಜನೆ, ಆಗ ಶತ್ರುಸೈನ್ಯದಲ್ಲಿರುವ ರಥಿಕಶ್ರೇಷ್ಠನಾದ ದುರ್ಜಯನಾದ ಕರ್ಣನು ಈ ಯುದ್ಧದಲ್ಲಿ ಇಂದು ನನಗೆ ಕಾಣಿಸಿದ್ದೇ ಆದರೆ, ವೃತ್ರಾಸುರನೊಡನೆ ಇಂದ್ರನಂತೆ ನಾನು ಕರ್ಣನನ್ನು ಇದಿರಿಸಿ ಅವನೊಡನೆ ಚೆನ್ನಾಗಿ ಯುದ್ಧ ಮಾಡುವೆನು.

ಆಯಾಹಿ ಪಶ್ಯಾದ್ಯ ಯುಯುತ್ಸಮಾನಂ
ಮಾಂ ಸೂತಪುತ್ರಂ ಚ ವೃತೌ ಜಯಾಯ ।
ಷಟ್‌ಸಾಹಸ್ರಾ ಭಾರತ ರಾಜಪುತ್ರಾಃ
ಸ್ವರ್ಗಾಯ ಲೋಕಾಯ ರಥಾ ನಿಮಗ್ನಾಃ ॥೨೨॥

ರಾಜನೆ, ನೀನು ಬಾ, ನೋಡು, ನಾನೂ ಕರ್ಣನೂ ಯುದ್ಧ ಮಾಡುವೆವು, ಇಬ್ಬರೂ ಎರಡು ಪಕ್ಷಗಳಿಂದ ಜಯಕ್ಕಾಗಿ ಸ್ಪರ್ಧಿಸಲು ಆರಿಸಿ ಬಂದಿದ್ದೇವೆ. ಜೊತೆಗೆ ಆರು ಸಾವಿರ ರಾಜಕುಮಾರರು ಸ್ವರ್ಗಲೋಕಪ್ರಾಪ್ತಿಯ ಸಲುವಾಗಿ ಯುದ್ಧದಲ್ಲಿ ನಿಮಗ್ನರಾಗಿದ್ದಾರೆ.

ಕರ್ಣಂ ನ ಚೇದದ್ಯ ನಿಹನ್ಮಿ ರಾಜನ್
ಸಬಾಂಧವಂ ಯುಧ್ಯಮಾನಂ ಪ್ರಸಹ್ಯ ।
ಪ್ರತಿಶ್ರುತ್ಯಾಕುರ್ವತಾಂ ವೈ ಗತಿರ್ಯಾ
ಕಷ್ಟಾಂ ಗಚ್ಛೇಯಂ ತಾಮಹಂ ರಾಜಸಿಂಹ । ೨೩॥

ರಾಜನೆ, ನಾನಿಂದು ಯುದ್ಧಮಾಡುವ ಕರ್ಣನನ್ನು ಬಂಧುಸಮೇತವಾಗಿ ಬಲಾತ್ಕಾರದಿಂದ ಸಂಹರಿಸದೇ ಹೋದರೆ ಪ್ರತಿಜ್ಞೆ ಮಾಡಿ, ಅದನ್ನು ನಡೆಸದಿರುವವನಿಗೆ ಯಾವ ದುರ್ಗತಿ ಬರುವುದೋ ಅದನ್ನು ನಾನು ಹೊಂದುತ್ತೇನೆ.

ಆಮಂತ್ರಯೇ ತ್ವಾಂ ಬ್ರೂಹಿ ಜಯಂ ರಣೇ ಮೇ
ಪುರಾ ಭೀಮಂ ಧಾರ್ತರಾಷ್ಟ್ರಾ ಗ್ರಸಂತೇ ।
ಸೌತಿಂ ಹನಿಷ್ಯಾಮಿ ನರೇಂದ್ರಸಿಂಹ
ಸೈನ್ಯಂ ತಥಾ ಶತ್ರುಗಣಾಂಶ್ಚ ಸರ್ವಾನ್ ॥೨೪॥

ರಾಜನೆ, ಯುದ್ಧಕ್ಕೆ ಹೋಗಲು ನಿನ್ನ ಅನುಮತಿಯನ್ನು ಬೇಡುತ್ತೇನೆ. ರಣದಲ್ಲಿ ಜಯವಾಗಲೆಂದು ಆಶೀರ್ವದಿಸು. ಧೃತರಾಷ್ಟ್ರನ ಮಕ್ಕಳು ಭೀಮನನ್ನು ಆಕ್ರಮಿಸಲಿದ್ದಾರೆ. ಅದಕ್ಕೆ ಮೊದಲೇ ನಾನು ಕರ್ಣನನ್ನು ಕೊಲ್ಲುತ್ತೇನೆ. ಅವನ ಸೈನ್ಯವನ್ನೂ ಎಲ್ಲ ಶತ್ರುಸಮೂಹಗಳನ್ನೂ ಸಂಹರಿಸುತ್ತೇನೆ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಧರ್ಮರಾಜಾರ್ಜುನಸಂವಾದೇ ಚತುಷ್ಷಷ್ಟಿತಮೋऽಧ್ಯಾಯಃ ॥೬೪॥

❖

ಮಹಾಭಾರತತಾತ್ಪರ್ಯನಿರ್ಣಯ

ಅಭಿವಾದ್ಯ ಹನಿಷ್ಯಾಮೀತ್ಯುಕ್ತಃ ಪಾರ್ಥೇನ ಸ ಕ್ರುಧಾ ।
ಭೃಶಂ ವಿನಿಂದ್ಯ ಬೀಭತ್ಸುಮಾಹ ಕೃಷ್ಣಾಯ ಗಾಂಡಿವಮ್ ।
ದೇಹಿ ಪುತ್ರಂ ಸ ರಾಧಾಯಾ ಹನಿಷ್ಯತಿ ನ ಸಂಶಯಃ ॥೧೧೪॥

ಅರ್ಜುನ ಸಮೇತನಾದ ಶ್ರೀಕೃಷ್ಣ ಯುಧಿಷ್ಠಿರನನ್ನು ಕಾಣಲು ಶಿಬಿರಕ್ಕೆ ಹೋದ. ಅವರನ್ನು ಕಂಡು ಯುಧಿಷ್ಠಿರ ಕರ್ಣ ಹತನಾದನೆಂದು ಬಗೆದು ಹೊಗಳಿದ. ಅರ್ಜುನ ಅಭಿವಾದನ ಮಾಡಿ ಇನ್ನು ಮೇಲೆ ಕೊಲ್ಲುವೆನೆಂದಾಗ ಯುಧಿಷ್ಠಿರ ಕೋಪದಿಂದ ಚೆನ್ನಾಗಿ ನಿಂದಿಸಿ ನುಡಿದ– 'ಗಾಂಡೀವವನ್ನು ಕೃಷ್ಣನಿಗೆ ಕೊಡು. ಅವನು ಕರ್ಣನನ್ನು ಇನ್ನು ಮೇಲೆ ಕೊಲ್ಲುತ್ತಾನೆ, ಇದರಲ್ಲಿ ಸಂಶಯವಿಲ್ಲ.

ಅಥವಾ ಭೀಮ ಏವೈನಂ ನಿವೃತ್ತೇ ತ್ವಯಿ ಪಾತಯೇತ್ ।
ತ್ವಂ ತು ಕುಂತ್ಯಾ ವೃಥಾ ಸೂತಃ ಕ್ಲೀಬೋ ಮಿಥ್ಯಾಪ್ರತಿಶ್ರವಃ ॥೧೧೫॥

ಅಥವಾ ನೀನು ಯುದ್ಧ ಮಾಡುವುದನ್ನು ಕೈಬಿಟ್ಟಾಗ ಭೀಮನೆ ಕರ್ಣನನ್ನು ಕೊಲ್ಲುತ್ತಾನೆ. ನೀನು ಕುಂತಿಯಿಂದ ವ್ಯರ್ಥವಾಗಿ ಜನಿಸಿರುವಿ. ನೀನು ಷಂಢ. ನಿನ್ನ ಪ್ರತಿಜ್ಞೆ ಸುಳ್ಳು.'

❖ ❖ ❖

ಅರವತ್ತೈದನೆಯ ಅಧ್ಯಾಯ

'ನಿನಗೆ ಕರ್ಣನೆಂದರೆ ಭಯ! ನಿನಗೇಕೆ ಗಾಂಡೀವ?' ಎನ್ನುತ್ತಾನೆ ಯುಧಿಷ್ಠಿರ.

ಸಂಜಯಃ

ಶ್ರುತ್ವಾ ಕರ್ಣಂ ಕಲ್ಯಮುದಾರವೀರ್ಯಂ
ಕ್ರುದ್ಧಃ ಪಾರ್ಥಃ ಫಲ್ಗುನಸ್ಯಾಮಿತೌಜಾಃ ।
ಧನಂಜಯಂ ವಾಕ್ಯಮುವಾಚ ಚೇದಂ
ಯುಧಿಷ್ಠಿರಃ ಕರ್ಣಶರಾಭಿತಪ್ತಃ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಮಹಾಬಲಿಷ್ಠನಾದ ಕರ್ಣ ಕ್ಷೇಮದಿಂದಿರುವುದನ್ನು ಕೇಳಿ ಕರ್ಣನ ಬಾಣಗಳಿಂದ ವೇದನೆ ಅನುಭವಿಸುತ್ತಿದ್ದ ಅಮಿತ ಪರಾಕ್ರಮಿ ಯುಧಿಷ್ಠಿರನು ಅರ್ಜುನನ ಮೇಲೆ ಕೋಪಿಸಿಕೊಂಡು ಅವನಿಗೆ ಈ ಮಾತನ್ನು ಹೇಳಿದ.

ವಿಪ್ರದ್ರುತಾ ತಾತ ಚಮೂಸ್ತ್ವದೀಯಾ
ತಿರಸ್ಕೃತಾ ಚಾದ್ಯ ಯಥಾ ನ ಸಾಧು ।
ತ್ಯಕ್ತ್ವಾ ರಣೇ ಯದಪಾಯಾಃ ಸ ಭೀಮಂ
ಯನ್ನಾಶಕಃ ಸೂತಪುತ್ರಂ ನಿಹಂತುಮ್ ॥೨॥

ಅರ್ಜುನ, ನಿನ್ನ ಸೈನ್ಯ ಪಲಾಯನ ಮಾಡುತ್ತಿತ್ತೆಂದು ನೀನೇ ಹೇಳಿರುವೆ. ಅದನ್ನು ನೀನು ಅಲಕ್ಷ್ಯಮಾಡಿದೆ. ಅದು ಸರಿಯಲ್ಲ ಮತ್ತು ರಣದಲ್ಲಿ ಭೀಮನೊಬ್ಬನನ್ನೇ ಬಿಟ್ಟು ನೀನು ಹೊರಟು ಬಂದಿರುವೆ, ಅದೂ ಸರಿಯಲ್ಲ. ಇದಕ್ಕೆ ಕಾರಣ ನೀನು ಕರ್ಣನನ್ನು ಕೊಲ್ಲಲು ಶಕ್ತನಾಗಲಿಲ್ಲ ತಾನೆ?

ಭೀತೋ ಭೀಮಂ ತ್ಯಜ್ಯ ಚಾಯಾಸ್ತಥಾ ತ್ವಂ
ಯನ್ನಾಶಕಃ ಕರ್ಣಮಥೋ ನಿಹನ್ತುಮ್ ॥೩॥

ಕರ್ಣನನ್ನು ಕೊಲ್ಲಲು ನೀನು ಶಕ್ತನಾಗಲಿಲ್ಲವಾದ್ದರಿಂದ ಅವನಿಗೆ ಭಯಪಟ್ಟು ಭೀಮನನೊಬ್ಬನನ್ನು ಬಿಟ್ಟು ಹೊರಟು ಬಂದಿರುವೆ.

ಸ್ನೇಹಸ್ತ್ವಯಾ ಪಾರ್ಥ ಕೃತಃ ಪೃಥಾಯಾ
ಗರ್ಭಂ ಸಮಾವಿಶ್ಯ ಯಥಾ ನ ಸಾಧು ॥೪॥

ಪಾರ್ಥ, ನೀನು ಪೃಥೆಯ ಗರ್ಭವನ್ನು ಪ್ರವೇಶಿಸಿ ಸೋದರರಲ್ಲಿ ಸ್ನೇಹವನ್ನು ಮಾಡಿರುವೆ; ಆದರೆ ರಣದಲ್ಲಿ ಭೀಮನೊಬ್ಬನನ್ನೇ ಬಿಟ್ಟು ಅಲ್ಲಿಂದ ಹೊರಟು ಬಂದೆ. ಕರ್ಣನನ್ನು ವಧಿಸಲು ಶಕ್ತನಾಗಲಿಲ್ಲ. ಇದು ಸರಿಯಲ್ಲ.

ಯತ್ತದ್ವಾಕ್ಯಂ ದ್ವೈತವನೇ ತ್ವಯೋಕ್ತಂ
ಹಂತಾ ಕರ್ಣಮೇಕರಥೇನ ಸತ್ಯಮ್ ।
ತ್ಯಕ್ತ್ವಾ ತಂ ವೈ ಕಥಮದ್ಯಾಪಯಾತಃ
ಕರ್ಣಾದ್ ಭೀತೋ ಭೀಮಸೇನಂ ವಿಹಾಯ ॥೫॥

ದ್ವೈತವನದಲ್ಲಿ ನೀನು ಹೇಳಿದೆ, 'ಒಂದೇ ರಥದಿಂದ ಕರ್ಣನನ್ನು ಕೊಲ್ಲುವೆ, ಇದು ಸತ್ಯ' ಎಂದು. ಈಗ ಕರ್ಣನನ್ನು ಕೊಲ್ಲದೆ ಬಿಟ್ಟು ಹೇಗೆ ಹೊರಟುಬಂದೆ? ಕರ್ಣನಿಗೆ ಹೆದರಿ ಭೀಮಸೇನನನ್ನು ಬಿಟ್ಟು ಹೇಗೆ ಬಂದೆ?

ಇದಂ ಯದಿ ದ್ವೈತವನೇ ಹ್ಯವಕ್ಷ್ಯಃ
ಕರ್ಣಂ ಯೋದ್ಧುಂ ನ ಪ್ರಶಕ್ಷ್ಯೇ ನೃಪೇತಿ ।
ವಯಂ ತದಾ ಪ್ರಾಪ್ತಕಾಲಾನಿ ಸರ್ವೇ
ವೃತ್ತಾನ್ಯಪೈಷ್ಯಾಮ ತದೈವ ಪಾರ್ಥ ॥೬॥

'ಪಾರ್ಥನೆ, ಕರ್ಣನೊಡನೆ ಯುದ್ಧಮಾಡಲು ನಾನು ಶಕ್ತನಲ್ಲ' ಎಂದು ದ್ವೈತ ವನದಲ್ಲಿಯೇ ನೀನು ಹೇಳಿದ್ದರೆ ಆಗಲೇ ನಾವೆಲ್ಲರೂ ಸೇರಿ ಕಾಲೋಚಿತವಾದ ಕರ್ತವ್ಯವನ್ನು ಕೈಗೊಳ್ಳುತ್ತಿದ್ದೆವು.

ಧಿಗಸ್ತು ಮಜ್ಜೀವಿತಮದ್ಯ ಕೃಷ್ಣ
ಯೋಽಹಂ ವಶಂ ಸೂತಪುತ್ರಸ್ಯ ಯಾತಃ
ಮಧ್ಯೇ ಕುರೂಣಾಂ ಸಸುಯೋಧನಾನಾಂ
ಯೇ ಚಾಪ್ಯನ್ಯೇ ಯೋದ್ಧುಕಾಮಾಃ ಸಮೇತಾಃ ॥ ॥೭॥

ಕೃಷ್ಣ, ನನ್ನ ಬದುಕಿಗೇ ಧಿಕ್ಕಾರವಿರಲಿ. ದುರ್ಯೋಧನ ಮುಂತಾದ

ಕುರುಯೋಧರ ನಡುವೆ, ಯುದ್ಧೇಚ್ಛೆಯಿಂದ ಸೇರಿದ ಬೇರೆ ಯೋಧರ ನಡುವೆ ನಾನು ಸೂತಪುತ್ರನ ವಶನಾದೆ.

ಏಕಸ್ತು ಮೇ ಭೀಮಸೇನೋಽದ್ಯ ನಾಥೋ
ಯೇನಾಭಿಪನ್ನೋಽಸ್ಮಿ ರಣೇ ಮಹಾಭಯೇ ।
ವಿಮೋಚ್ಯ ಮಾಂ ಚಾಪಿ ರುಷಾನ್ವಿತಸ್ತತಃ
ಶರೇಣ ತೀಕ್ಷ್ಣೇನ ಬಿಭೇದ ಕರ್ಣಮ್ ॥೮॥

ಭೀಮಸೇನನೊಬ್ಬನೆ ನನಗೆ ಆಗ ರಕ್ಷಕನಾಗಿ ಬಂದ. ಮಹಾಭಯಂಕರವಾದ ರಣದಲ್ಲಿ ಅವನು ನನ್ನ ರಕ್ಷಣೆಗೆ ಬಂದ. ನನ್ನನ್ನು ಬಿಡಿಸಿಕೊಂಡು ಕೋಪದಿಂದ ತೀಕ್ಷ್ಣಬಾಣದಿಂದ ಕರ್ಣನನ್ನು ಸೀಳಿದ.

ಮಯಿ ಪ್ರತಿಶ್ರುತ್ಯ ವಧಂ ಹಿ ತಸ್ಯ
ನ ವೈ ಕೃತಂ ತಚ್ಚ ತಥೈವ ವೀರ ।
ಆನೀಯ ನಃ ಶತ್ರುಮಧ್ಯಂ ಚ ಕಸ್ಮಾತ್
ಸಮುತ್ಕ್ಷಿಪ್ಯ ಸ್ಥಂಡಿಲೇ ಪ್ರತ್ಯಪಿಂಷ್ಠಾಃ ॥೯॥

ನನ್ನ ಮುಂದೆ ಕರ್ಣನನ್ನು ವಧಿಸುವುದಾಗಿ ನೀನು ಪ್ರತಿಜ್ಞೆಮಾಡಿ, ಅದನ್ನು ಹಾಗೆ ನಡೆಸಲಿಲ್ಲ. ನಮ್ಮನ್ನು ಶತ್ರುಗಳ ಮಧ್ಯದಲ್ಲಿ ತಂದುಹಾಕಿ ಎತ್ತಿ ನೆಲದಲ್ಲಿ ಏಕೆ ಪುಡಿ ಮಾಡಿದೆ?

ಅನ್ವಾಶಿಷ್ಮ ಯದ್ ವಯಮರ್ಜುನ ತ್ವಯಿ
ಯಿಯಾಸವೋ ಬಹು ಕಲ್ಯಾಣಮಿಷ್ಟಮ್ ।
ತನ್ನಃ ಸರ್ವಂ ವಿಫಲಂ ರಾಜಪುತ್ರ
ಫಲಾರ್ಥಿನಾಂ ನಿಚುಲ ಇವಾತಿಪುಷ್ಪಃ ॥೧೦॥

ಅರ್ಜುನ! ಇಷ್ಟವಾದ ಬಹು ಶ್ರೇಯಸ್ಸನ್ನು ಪಡೆಯಲು ಬಯಸಿ ನಾವು ನಿನ್ನಲ್ಲಿ ಏನು ಆಸೆ ಇರಿಸಿಕೊಂಡಿದ್ದೆವು, ಅದೆಲ್ಲ ನಮಗೆ ನಿಷ್ಫಲವಾಯಿತು, ನೀರುಹಲಸಿನ ಗಿಡ ಅತಿಯಾಗಿ ಹೂ ಬಿಟ್ಟರೂ ಫಲ ನೀಡುವುದಿಲ್ಲ ಹಾಗೆ.

ಪ್ರಚ್ಛಾದಿತಂ ಬಡಿಶಮಿವಾಮಿಷೇಣ
ಸಂಧಾದಿತಂ ಗರಲಮಿವಾಶನೇನ ।
ಅನರ್ಥಕಂ ಮೇ ದರ್ಶಿತವಾನಸಿ ತ್ವಂ
ರಾಜ್ಯಾರ್ಥಿನೋ ರಾಜ್ಯರೂಪಂ ವಿನಾಶಮ್ ॥೧೧॥

ಗಾಳವನ್ನು ಮಾಂಸದಿಂದ ಮುಚ್ಚುವಂತೆ, ವಿಷವನ್ನು ಅನ್ನದಿಂದ ಮುಚ್ಚುವಂತೆ ರಾಜ್ಯಾರ್ಥಿಗಳಾದ ನಮಗೆ ಅನರ್ಥಕರವಾದ ವಿನಾಶವನ್ನೇ ರಾಜ್ಯಪ್ರಾಪ್ತಿರೂಪದಿಂದ ತೋರಿಸಿ ವಂಚಿಸುತ್ತಿರುವೆ.

ತ್ರಯೋದಶೇಮಾ ಹಿ ಸಮಾಃ ಸದಾ ವಯಂ
ತ್ವಾಮನ್ವಜೀವಿಷ್ಮ ಧನಂಜಯಾಶಯಾ ।
ಕಾಲೇ ವರ್ಷಂ ದೇವಮಿವೋಪ್ತಬೀಜಂ
ತನ್ನಃ ಸರ್ವಾನ್ನರಕೇ ತ್ವಂ ನ್ಯಮಜ್ಜಯಃ ॥೧೨॥

ಈ ಹದಿಮೂರು ವರ್ಷಗಳ ಕಾಲ ಸದಾ ನಾವು ನಿನ್ನನ್ನೇ ಆಸೆಯಿಂದ ಆಶ್ರಯಿಸಿ ಬದುಕಿದೆವು. ನೆಟ್ಟಬೀಜ ಮೊಳೆಯಲು ಸಕಾಲಿಕವಾದ ಮಳೆಯಲ್ಲಿ ಆಸೆ ಇಡುವಂತೆ. ಆದರೆ ನೀನು ನಮ್ಮೆಲ್ಲರನ್ನೂ ನರಕದಲ್ಲಿ ಮುಳುಗಿಸಿಬಿಟ್ಟೆ.

ಯತ್ತತ್ ಪೃಥಾಂ ವಾಗುವಾಚಾನ್ತರಿಕ್ಷೇ
ಸಪ್ತಾಹಜಾತೇ ತ್ವಯಿ ಮಂದಬುದ್ಧೌ ।
ಜಾತಃ ಪುತ್ರೋ ವಾಸವವಿಕ್ರಮೋಽಯಂ
ಸರ್ವಾನ್ ಶೂರಾನ್ ಶಾತ್ರವಾನ್ ಜೇಷ್ಯತೀತಿ ॥೧೩॥

ಮಂದಬುದ್ಧಿಯಾದ ನೀನು ಹುಟ್ಟಿ ಏಳುದಿವಸವಾದಾಗ ಪೃಥೆಗೆ ಆಕಾಶದಲ್ಲಿ ಮಾತು ಹೇಳಿತು– 'ಹುಟ್ಟಿದ ಈ ಪುತ್ರನು ಇಂದ್ರನಂತೆ ಪರಾಕ್ರಮಿ. ಶೂರರಾದ ಎಲ್ಲ ಶತ್ರುಗಳನ್ನು ಜಯಿಸುತ್ತಾನೆ' ಎಂದು.

ಅಯಂ ಜೇತಾ ಖಾಂಡವೇ ದೇವಸಂಘಾನ್
ಸರ್ವಾಣಿ ಭೂತಾನ್ಯಪಿ ಚೋತ್ತಮೌಜಾಃ ॥
ಅಯಂ ಜೇತಾ ಮದ್ರಕಲಿಂಗಕೇಕಯಾನ್
ಅಯಂ ಕುರೂನ್ ಹಂತಿ ಚ ರಾಜಮಧ್ಯೇ ॥೧೪॥

'ಮಹಾಶಕ್ತಿಶಾಲಿಯಾದ ಈತ ದೇವಸಮೂಹಗಳನ್ನೂ ಎಲ್ಲ ಪ್ರಾಣಿಗಳನ್ನೂ ಖಾಂಡವ ದಹನಕಾಲದಲ್ಲಿ ಗೆಲ್ಲುತ್ತಾನೆ. ಮದ್ರ ಕಲಿಂಗ ಕೇಕಯರನ್ನೂ ಗೆಲ್ಲುತ್ತಾನೆ. ರಾಜರ ಮಧ್ಯದಲ್ಲಿ ಕೌರವಸೈನಿಕರನ್ನು ಕೊಲ್ಲುತ್ತಾನೆ' ಎಂದು.

ಅಸ್ಮಾತ್ಪರೋ ನ ಭವಿತಾ ಧನುರ್ಧರೋ
ನ ವೈ ಭೂತಃ ಕಶ್ಚನ ಜಾತು ಜೇತಾ ।
ಇಚ್ಛನ್ನಯಂ ಸರ್ವಭೂತಾನಿ ಕುರ್ಯಾದ್
ವಶೇ ವಶೀ ಸರ್ವಸಮಾಪ್ತವಿದ್ಯಃ ॥೧೫॥

ಇವನಿಗಿಂತ ಮೇಲಾದ ಧನುರ್ಧರನೊಬ್ಬನು ಮುಂದೆ ಹುಟ್ಟುವುದಿಲ್ಲ. ಹಿಂದೆ ಹುಟ್ಟಿಲ್ಲ. ಯಾರೂ ಎಂದೂ ಇವನನ್ನು ಗೆಲ್ಲುವುದಿಲ್ಲ. ಇವನು ಎಲ್ಲ ವಿದ್ಯೆಗಳನ್ನೂ ಹೊಂದಿ, ಜಿತೇಂದ್ರಿಯನಾಗಿ, ಮನಸು ಮಾಡಿದರೆ ಸಕಲ ಪ್ರಾಣಿಗಳನ್ನು ವಶಕ್ಕೆ ತಂದುಕೊಳ್ಳಬಲ್ಲ.

ಕಾಂತ್ಯಾ ಶಶಾಂಕಸ್ಯ ಜವೇನ ವಾಯೋಃ
ಸ್ಥೈರ್ಯೇಣ ಮೇರೋಃ ಕ್ಷಮಯಾ ಪೃಥಿವ್ಯಾಃ ।
ಸೂರ್ಯಸ್ಯ ಭಾಸಾ ಧನದಸ್ಯ ಲಕ್ಷ್ಮ್ಯಾ
ಶೌರ್ಯೇಣ ಶಕ್ರಸ್ಯ ಬಲೇನ ವಿಷ್ಣೋಃ ॥೧೬॥

ತುಲ್ಯೋ ಮಹಾತ್ಮಾ ತವ ಕುಂತಿ ಪುತ್ರೋ
ಜಾತೋऽದಿತೇರ್ವಿಷ್ಣುರಿವಾರಿಹಂತಾ ।
ಸ್ವೇಷಾಂ ಜಯಾಯ ದ್ವಿಷತಾಂ ವಧಾಯ
ಖ್ಯಾತೋऽಮಿತೌಜಾಃ ಕುಲತಂತುಕರ್ತಾ ॥೧೭॥

ಕಾಂತಿಯಿಂದ ಚಂದ್ರನಿಗೆ, ವೇಗದಿಂದ ವಾಯುವಿಗೆ, ಸ್ಥೈರ್ಯದಿಂದ ಮೇರುವಿಗೆ, ಕ್ಷಮೆಯಿಂದ ಪೃಥಿವಿಗೆ, ಪ್ರಭೆಯಿಂದ ಸೂರ್ಯನಿಗೆ, ಐಶ್ವರ್ಯದಿಂದ ಕುಬೇರನಿಗೆ, ಶೌರ್ಯದಿಂದ ಇಂದ್ರನಿಗೆ, ಬಲದಿಂದ ವಿಷ್ಣುವಿಗೆ, ತುಲ್ಯನಾಗುವ ಮಹಾತ್ಮನು ನಿನ್ನ ಈ ಪುತ್ರ. ಕುಂತಿ, ಅದಿತಿಗೆ ವಿಷ್ಣುವಿನಂತೆ ನಿನಗೆ ಈತ ಮಗನಾಗಿ ಜನಿಸಿದ್ದಾನೆ. ಶತ್ರುನಾಶಕ, ಅಮಿತ ಪರಾಕ್ರಮಿ, ವಂಶೋದ್ಧಾರಕನಾದ ಪುತ್ರನನ್ನು

ಪಡೆಯುತ್ತಾನೆ. ತನ್ನವರಿಗೆ ಸರ್ವತ್ರವಿಜಯವನ್ನು ಶತ್ರುಗಳಿಗೆ ವಧವನ್ನು ಉಂಟು ಮಾಡಲೆಂದೇ ಜನಿಸಿದ ಈತ ಹಾಗೇ ವಿಜಯನೆಂದೇ ಪ್ರಸಿದ್ಧನಾಗುತ್ತಾನೆ.

ಇತ್ಯಂತರಿಕ್ಷೇ ಶತಶೃಂಗಮೂರ್ಧ್ನಿ
ತಪಸ್ವಿನಾಂ ಶೃಣ್ವತಾಂ ವಾಗುವಾಚ ।
ಏವಂವಿಧಂ ತ್ವಾಂ ತಚ್ಚ ನಾಭೂತ್ ತವಾದ್ಯ
ದೇವಾ ಹಿ ನೂನಮನೃತಂ ವದಂತಿ ॥೧೮॥

ಶತಶೃಂಗ ಬೆಟ್ಟದ ಮೇಲೆ ಅಂತರಿಕ್ಷದಲ್ಲಿ ತಪಸ್ವಿಗಳು ಕೇಳುತ್ತಿದ್ದಂತೆಯೇ ಅಶರೀರವಾಣಿ ಹೇಳಿತು— 'ನೀನು ಹೀಗೇ ಆಗುವಿ' ಎಂದು. ಆದರೆ ಅದು ನಿನ್ನ ವಿಷಯದಲ್ಲಿ ನಿಜವಾಗಲಿಲ್ಲ. ದೇವತೆಗಳು ಕೂಡ ನಿಶ್ಚಯವಾಗಿಯೂ ಸುಳ್ಳು ಹೇಳುತ್ತಾರೆ.

ತಥಾಪರೇಷಾಮೃಷಿಸತ್ತಮಾನಾಂ
ಶ್ರುತ್ವಾ ಗಿರಂ ಪೂಜಯತಾಂ ಸದೈವ ।
ನ ಸನ್ನತಿಂ ಪ್ರೈಮಿ ಸುಯೋಧನಸ್ಯ
ನ ತ್ವಾ ಜಾನಾಮ್ಯಾಧಿರಥೇರ್ಭಯಾರ್ತಮ್ ॥೧೯॥

ಸದಾ ನಿನ್ನನ್ನು ಹೊಗಳುವ ಶ್ರೇಷ್ಠ ಋಷಿಗಳೂ ಕೂಡ ಅಶರೀರವಾಣಿಯಂತೇ ಹೇಳುತ್ತಿದ್ದುದನ್ನು ಕೇಳಿ ನಾನು ಸುಯೋಧನನಿಗೆ ಶರಣಾಗಲಿಲ್ಲ. ನೀನು ಕರ್ಣನ ಭಯದಿಂದ ಆರ್ತನಾಗುವಿ ಎಂದೂ ತಿಳಿಯಲಿಲ್ಲ.

ತ್ವಷ್ಟಾ ಕೃತಂ ವಾಹಮಕೂಜನಾಕ್ಷಂ
ಶುಭಂ ಸಮಾಸ್ಥಾಯ ಕಪಿಧ್ವಜಂ ತ್ವಮ್ ।
ಖಡ್ಗಂ ಗೃಹೀತ್ವಾ ಹೇಮಚಿತ್ರಂ ಸಮಿದ್ಧಂ
ಧನುಶ್ಚೇದಂ ಗಾಂಡಿವಂ ತಾಲಮಾತ್ರಮ್ ॥೨೦॥

ಸ ಕೇಶವೇನೋಹ್ಯಮಾನಃ ಕಥಂ ನು
ಕರ್ಣಾದ್ ಭೀತೋ ವ್ಯಪಯಾತೋಸಿ ಪಾರ್ಥ ॥೨೧॥

ಪಾರ್ಥ, ನಿನ್ನ ರಥವು ವಿಶ್ವಕರ್ಮ ನಿರ್ಮಿತ. ಅದರ ಅಕ್ಷ ಶಬ್ದ ಉಂಟು

ಮಾಡದುದು. ಕಪಿಯು ಧ್ವಜವಾಗಿ ಕುಳಿತಿರುತ್ತಾನೆ. ಅಂಥ ರಥವನ್ನೇರಿ ಬಂಗಾರ ದಿಂದ ಅಲಂಕೃತವಾದ ಹೊಳೆಯುವ ಖಡ್ಗವನ್ನೂ ನಾಲ್ಕು ಮೊಳದ ಈ ಗಾಂಡಿವ ಧನುಸ್ಸನ್ನೂ ಹಿಡಿದು ಕೃಷ್ಣನ ಸಾರಥ್ಯದಲ್ಲಿ ರಣರಂಗಕ್ಕೆ ಹೋಗುವ ನೀನು, ಕರ್ಣನಿಗೆ ಭಯಪಟ್ಟು ಹೇಗೆ ಅಲ್ಲಿಂದ ಪಲಾಯನ ಮಾಡಿ ಬಂದೆ?

ಧನುಶ್ಚೈತತ್ ಕೇಶವಾಯ ಪ್ರದಾಯ
ಯಂತಾಽಭವಿಷ್ಯಸ್ತ್ವಂ ರಣೇ ಚೇದ್ ದುರಾತ್ಮನ್ ।
ತತೋಽಹನಿಷ್ಯತ್ಕೇಶವಃ ಕರ್ಣಮುಗ್ರಂ
ಮರುತ್ಪತಿರ್ವೃತ್ರಮಿವಾತ್ತವಜ್ರಃ ॥೨೨॥

ದುರಾತ್ಮನೆ, ನೀನು ಈ ಧನುಸ್ಸನ್ನು ಕೃಷ್ಣನಿಗೆ ಕೊಟ್ಟು ಅವನಿಗೆ ನೀನು ಸಾರಥಿಯಾಗಿದ್ದರೆ, ವಜ್ರಾಯುಧವನ್ನು ಹಿಡಿದ ಇಂದ್ರನು ವೃತ್ರಾಸುರನನ್ನು ಕೊಂದಂತೆ ಕೃಷ್ಣನೆ ಉಗ್ರನಾದ ಕರ್ಣನನ್ನು ಕೊಲ್ಲುತ್ತಿದ್ದ.

ರಾಧೇಯಮೇವಂ ಯದಿ ಚಾಪ್ಯಶಕ್ತ-
ಶ್ಚರಂತಮುಗ್ರಂ ಪ್ರತಿ ಯೋಧನಾಯ ।
ಪ್ರಯಚ್ಛಾಸ್ಮೈ ಗಾಂಡಿವಮೇತದದ್ಯ
ತ್ವತ್ತೋ ಯೋಽಸ್ತ್ರೈರಭ್ಯಧಿಕೋ ನರೇಷು ॥೨೩॥

ಅಥವಾ ರಣದಲ್ಲಿ ಸಂಚರಿಸುವ ಕರ್ಣನನ್ನು ಇದಿರಿಸಲು ನಿನ್ನಿಂದ ಶಕ್ಯವಾಗ ದಿದ್ದರೆ, ಅಸ್ತ್ರಗಳಲ್ಲಿ ನಿನಗಿಂತ ಶ್ರೇಷ್ಠನಾದ ಯೋಧನಿಗಾದರೂ ಈ ಗಾಂಡೀವವನ್ನು ಕೊಡು.

ಇಲ್ಲಿ ಯಾರು ಅರ್ಜುನನಿಗಿಂತಲೂ ಅಸ್ತ್ರಗಳಲ್ಲಿ ಶ್ರೇಷ್ಠ? ಭೀಮನೆ.

'ಏಕಸ್ತು ಮೇ ಭೀಮಸೇನೋಽದ್ಯ ನಾಥಃ (ಶ್ಲೋ.8)

ತಸ್ಮಾನ್ನೈವಂ ಪುತ್ರದಾರೈರ್ವಿಹೀನಾನ್
ಸುಖಾದ್ ಭ್ರಷ್ಟಾನ್ ರಾಜ್ಯನಾಶಾಚ್ಚ ಭೂಯಃ ।
ದ್ರಷ್ಟಾ ಲೋಕಃ ಪತಿತಾನಪ್ಯಗಾಧೇ
ಪಾಪೈರ್ಜುಷ್ಟೇ ನರಕೇ ಪಾಂಡವೇಯ ॥೨೪॥

ಹೀಗೆ ಮಾಡಿದರೆ, ಪುತ್ರ–ಪತ್ನೀಹೀನರಾಗಿ ಸುಖದಿಂದ ಭ್ರಷ್ಟರಾಗಿ ರಾಜ್ಯನಾಶ ದಿಂದ, ಪಾಪಿಗಳಿರುವ ಅಗಾಧವಾದ ನರಕದಲ್ಲಿ ನಾವು ಬೀಳುವುದನ್ನು ಲೋಕ ನೋಡದಂತಾದೀತು.

ಮಾಸೇऽಪತಿಷ್ಯಃ ಪಂಚಮೇ ತ್ವಂ ಪ್ರಕೃಚ್ಛ್ರೇ
ನ ವಾ ಗರ್ಭೋऽಪ್ಯಭವಿಷ್ಯಃ ಪೃಥಾಯಾಃ ।
ತತ್ತೇ ಶ್ರಮೋ ರಾಜಪುತ್ರಾಭವಿಷ್ಯ–
ನ್ನ ಸಂಗ್ರಾಮಾದಪಯಾತುಂ ದುರಾತ್ಮನ್ ॥೨೫॥

ದುರಾತ್ಮನೇ, ಕುಂತಿಯ ಗರ್ಭದಿಂದ ಐದನೇ ತಿಂಗಳಲ್ಲಿಯಾದರೂ ನೀನು ಗರ್ಭಪಾತ ಹೊಂದಬಹುದಿತ್ತು. ಗರ್ಭದಲ್ಲಿ ಇಲ್ಲದೆಯೂ ಇರಬಹುದಿತ್ತು. ಆಗ ರಣರಂಗದಿಂದ ಪಲಾಯನ ಮಾಡುವ ಶ್ರಮ ನಿನಗೆ ಇರುತ್ತಿರಲಿಲ್ಲ.

(ಗರ್ಭಿಣಿಯರಲ್ಲಿ ಗರ್ಭಪಾತ ಹೆಚ್ಚಾಗಿ ಐದನೇ ತಿಂಗಳಲ್ಲಿ ಸಂಭವಿಸುತ್ತದೆ)

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಕರ್ಣಪರ್ವಣಿ ಧರ್ಮರಾಜಾರ್ಜುನಸಂವಾದೇ ಪಂಚಷಷ್ಟಿತಮೋऽಧ್ಯಾಯಃ ॥೬೫॥

❖

ಮಹಾಭಾರತತಾತ್ಪರ್ಯನಿರ್ಣಯ

ಅಹಂ ಹಿ ಸೂತಪುತ್ರೇಣ ಕ್ಲಿಷ್ಟೋ ಮಾರುತತೇಜಸಾ ।
ಜೀವಾಮೀತ್ಯಗ್ರಜೇನೋಕ್ತ ಉದ್ಬಬರ್ಹಾಸಿಮುತ್ತಮಮ್ ॥೧೧೬॥

ವಾಸುದೇವಸ್ತಮಾಹೇದಂ ಕಿಮೇತದಿತಿ ಸರ್ವವಿತ್ ॥೧೧೭॥

'ನಾನು ಕರ್ಣನಿಂದ ಹಿಂಸೆಪಟ್ಟು ಭೀಮನ ಪರಾಕ್ರಮದಿಂದಾಗಿ ಬದುಕಿ ಉಳಿದಿದ್ದೇನೆ.' ಯುಧಿಷ್ಠಿರ ಹೀಗೆ ಹೇಳಿದಾಗ ಅರ್ಜುನ ಅವನ ಮೇಲೆ ಉತ್ತಮವಾದ ಖಡ್ಗವನ್ನೆತ್ತಿದ. ಸರ್ವಜ್ಞನಾದ ಶ್ರೀಕೃಷ್ಣ ಅವನನ್ನು ಕೇಳಿದ, 'ಇದೇನು ಮಾಡುತ್ತಿರುವೆ? ಏಕೆ?'

ತಮಾಹ ಗಾಂಡಿವಂ ದಾತುಂ ಯೋ ವದೇತ್ ತದ್ವಧೋ ಮಯಾ ।
ಪ್ರತಿಜ್ಞಾತಸ್ತತೋ ಹನ್ಮಿ ನೃಪಮಿತ್ಯಾಹ ತಂ ಹರಿಃ ॥೧೧೮॥

ಅರ್ಜುನ ಕೃಷ್ಣನಿಗೆ ಹೇಳಿದ– 'ಗಾಂಡೀವವನ್ನು ಇನ್ನೊಬ್ಬರಿಗೆ ಕೊಡಲು ಯಾವನು ಹೇಳುವನೊ ಅವನ ವಧೆ ಮಾಡುವುದಾಗಿ ನಾನು ಪ್ರತಿಜ್ಞೆ ಮಾಡಿರುವೆನು' ಎಂದು.

ಸತ್ಯಸ್ಯ ವಚನಂ ಶ್ರೇಯಃ ಸತ್ಯಜ್ಞಾನಂ ತು ದುಷ್ಕರಮ್ ।
ಯತ್ ಸತಾಂ ಹಿತಮತ್ಯಂತಂ ತತ್ ಸತ್ಯಮಿತಿ ನಿಶ್ಚಯಃ ॥೧೧೯॥

ಧರ್ಮಸ್ಯ ಚರಣಂ ಶ್ರೇಯೋ ಧರ್ಮಜ್ಞಾನಂ ತು ದುಷ್ಕರಮ್ ।
ಯಃ ಸತಾಂ ಧಾರಕೋ ನಿತ್ಯಂ ಸ ಧರ್ಮ ಇತಿ ನಿಶ್ಚಯಃ ॥೧೨೦॥

ಶ್ರೀಕೃಷ್ಣನುಡಿದ, 'ಸತ್ಯವನ್ನು ನುಡಿಯುವುದು ಶ್ರೇಯಸ್ಕರವೆ. ಆದರೆ ಸತ್ಯವನ್ನು ತಿಳಿಯುವುದು ದುಷ್ಕರ. ಸಜ್ಜನರಿಗೆ ಅತ್ಯಂತ ಹಿತಕರವಾದುದೆ ಸತ್ಯವೆನ್ನುವುದು ಶಾಸ್ತ್ರಗಳ ನಿಶ್ಚಯ. ಧರ್ಮದ ಆಚರಣೆ ಶ್ರೇಯಸ್ಕರ. ಆದರೆ ಧರ್ಮವನ್ನು ತಿಳಿಯುವುದು ದುಷ್ಕರ. ಸಜ್ಜನರನ್ನು ಸದಾ ಪೋಷಿಸುವುದೇ ಧರ್ಮವೆಂದು ಶಾಸ್ತ್ರಗಳ ನಿಶ್ಚಯ.

ಕೌಶಿಕಾಖ್ಯೋ ಬ್ರಾಹ್ಮಣೋ ಹಿ ಲೀನಂ ಗ್ರಾಮಜನಂ ಕ್ವಚಿತ್ ।
ತಸ್ಕರೇಷ್ವಭಿಧಾಯೈವ ನಿರಯಂ ಪ್ರತ್ಯಪದ್ಯತ ॥೧೨೧॥

ಕೌಶಿಕನೆಂಬ ಮುನಿ ಸತ್ಯವಾದಿ ಎಂದು ಪ್ರಸಿದ್ಧನಾಗಿದ್ದ. ಅವನು ಒಂದೆಡೆ ಅಡಗಿ ಕುಳಿತಿದ್ದ ಗ್ರಾಮದ ಜನರನ್ನು ದರೋಡೆಕೋರರಿಗೆ ತಿಳಿಸಿಯೆ ನರಕವನ್ನು ಹೊಂದಿದ.

ಕಶ್ಚಿದ್ ವ್ಯಾಧೋ ಮೃಗಂ ಹತ್ವಾ ಮಾತಾಪಿತೃನಿಮಿತ್ತತಃ ।
ಭಕ್ಷಾರ್ಥಮಭ್ಯಗಾತ್ ಸ್ವರ್ಗಮಸುರೋಸೌ ಮೃಗೋ ಯತಃ ॥೧೨೨॥

ಉಪದ್ರವಾಯ ಲೋಕಸ್ಯ ತಪಶ್ಚರತಿ ದುರ್ಮತಿಃ

ಬಲಾಕನೆಂಬ ಒಬ್ಬ ಬೇಡ ಮಾತಾಪಿತೃಗಳ ಸಲುವಾಗಿ ಆಹಾರಕ್ಕಾಗಿ ಮೃಗವನ್ನು ಕೊಂದು ಸ್ವರ್ಗವನ್ನು ಹೊಂದಿದ. ಏಕೆಂದರೆ ಆ ಮೃಗರೂಪದಿಂದ ಬಂದವನು ಒಬ್ಬ ಅಸುರನಾಗಿದ್ದ. ಲೋಕನಾಶಕ್ಕಾಗಿಯೆ ದುರ್ಬುದ್ಧಿಯವನಾದ ಆತ ಬ್ರಹ್ಮನ ಕುರಿತು ತಪಸ್ಸು ಮಾಡುತ್ತಿದ್ದ.

ಹೀಗೆ ಮಾಡಿದರೆ, ಪುತ್ರ–ಪತ್ನೀಹೀನರಾಗಿ ಸುಖದಿಂದ ಭ್ರಷ್ಟರಾಗಿ ರಾಜ್ಯನಾಶ ದಿಂದ, ಪಾಪಿಗಳಿರುವ ಅಗಾಧವಾದ ನರಕದಲ್ಲಿ ನಾವು ಬೀಳುವುದನ್ನು ಲೋಕ ನೋಡದಂತಾದೀತು.

ಮಾಸೇऽಪತಿಷ್ಯಃ ಪಂಚಮೇ ತ್ವಂ ಪ್ರಕೃಚ್ಛ್ರೇ
ನ ವಾ ಗರ್ಭೋऽಪ್ಯಭವಿಷ್ಯಃ ಪೃಥಾಯಾಃ ।
ತತ್ತೇ ಶ್ರಮೋ ರಾಜಪುತ್ರಾಭವಿಷ್ಯ-
ನ್ನ ಸಂಗ್ರಾಮಾದಪಯಾತುಂ ದುರಾತ್ಮನ್ ॥೨೫॥

ದುರಾತ್ಮನೇ, ಕುಂತಿಯ ಗರ್ಭದಿಂದ ಐದನೇ ತಿಂಗಳಲ್ಲಿಯಾದರೂ ನೀನು ಗರ್ಭಪಾತ ಹೊಂದಬಹುದಿತ್ತು. ಗರ್ಭದಲ್ಲಿ ಇಲ್ಲದೆಯೂ ಇರಬಹುದಿತ್ತು. ಆಗ ರಣರಂಗದಿಂದ ಪಲಾಯನ ಮಾಡುವ ಶ್ರಮ ನಿನಗೆ ಇರುತ್ತಿರಲಿಲ್ಲ.

(ಗರ್ಭಿಣಿಯರಲ್ಲಿ ಗರ್ಭಪಾತ ಹೆಚ್ಚಾಗಿ ಐದನೇ ತಿಂಗಳಲ್ಲಿ ಸಂಭವಿಸುತ್ತದೆ)

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಕರ್ಣಪರ್ವಣಿ ಧರ್ಮರಾಜಾರ್ಜುನಸಂವಾದೇ ಪಂಚಷಷ್ಟಿತಮೋऽಧ್ಯಾಯಃ ॥೬೫॥

❖

ಮಹಾಭಾರತತಾತ್ಪರ್ಯನಿರ್ಣಯ

ಅಹಂ ಹಿ ಸೂತಪುತ್ರೇಣ ಕ್ಲಿಷ್ಟೋ ಮಾರುತತೇಜಸಾ ।
ಜೀವಾಮೀತ್ಯಗ್ರಜೇನೋಕ್ತ ಉದ್ಬಬರ್ಹಾಸಿಮುತ್ತಮಮ್ ॥೧೧೬॥

ವಾಸುದೇವಸ್ತಮಾಹೇದಂ ಕಿಮೇತದಿತಿ ಸರ್ವವಿತ್ ॥೧೧೭॥

'ನಾನು ಕರ್ಣನಿಂದ ಹಿಂಸೆಪಟ್ಟು ಭೀಮನ ಪರಾಕ್ರಮದಿಂದಾಗಿ ಬದುಕಿ ಉಳಿದಿದ್ದೇನೆ.' ಯುಧಿಷ್ಠಿರ ಹೀಗೆ ಹೇಳಿದಾಗ ಅರ್ಜುನ ಅವನ ಮೇಲೆ ಉತ್ತಮವಾದ ಖಡ್ಗವನ್ನೆತ್ತಿದ. ಸರ್ವಜ್ಞನಾದ ಶ್ರೀಕೃಷ್ಣ ಅವನನ್ನು ಕೇಳಿದ, 'ಇದೇನು ಮಾಡುತ್ತಿರುವೆ? ಏಕೆ?'

ತಮಾಹ ಗಾಂಡಿವಂ ದಾತುಂ ಯೋ ವದೇತ್ ತದ್ವಧೋ ಮಯಾ ।
ಪ್ರತಿಜ್ಞಾತಸ್ತತೋ ಹನ್ಮಿ ನೃಪಮಿತ್ಯಾಹ ತಂ ಹರಿಃ ॥೧೧೮॥

ಅರ್ಜುನ ಕೃಷ್ಣನಿಗೆ ಹೇಳಿದ– 'ಗಾಂಡೀವವನ್ನು ಇನ್ನೊಬ್ಬರಿಗೆ ಕೊಡಲು ಯಾವನು ಹೇಳುವನೊ ಅವನ ವಧೆ ಮಾಡುವುದಾಗಿ ನಾನು ಪ್ರತಿಜ್ಞೆ ಮಾಡಿರುವೆನು' ಎಂದು.

ಸತ್ಯಸ್ಯ ವಚನಂ ಶ್ರೇಯಃ ಸತ್ಯಜ್ಞಾನಂ ತು ದುಷ್ಕರಮ್ ।
ಯತ್ ಸತಾಂ ಹಿತಮತ್ಯಂತಂ ತತ್ ಸತ್ಯಮಿತಿ ನಿಶ್ಚಯಃ ॥೧೧೯॥

ಧರ್ಮಸ್ಯ ಚರಣಂ ಶ್ರೇಯೋ ಧರ್ಮಜ್ಞಾನಂ ತು ದುಷ್ಕರಮ್ ।
ಯಃ ಸತಾಂ ಧಾರಕೋ ನಿತ್ಯಂ ಸ ಧರ್ಮ ಇತಿ ನಿಶ್ಚಯಃ ॥೧೨೦॥

ಶ್ರೀಕೃಷ್ಣನುಡಿದ, 'ಸತ್ಯವನ್ನು ನುಡಿಯುವುದು ಶ್ರೇಯಸ್ಕರವೆ. ಆದರೆ ಸತ್ಯವನ್ನು ತಿಳಿಯುವುದು ದುಷ್ಕರ. ಸಜ್ಜನರಿಗೆ ಅತ್ಯಂತ ಹಿತಕರವಾದುದೆ ಸತ್ಯವೆನ್ನುವುದು ಶಾಸ್ತ್ರಗಳ ನಿಶ್ಚಯ. ಧರ್ಮದ ಆಚರಣೆ ಶ್ರೇಯಸ್ಕರ. ಆದರೆ ಧರ್ಮವನ್ನು ತಿಳಿಯುವುದು ದುಷ್ಕರ. ಸಜ್ಜನರನ್ನು ಸದಾ ಪೋಷಿಸುವುದೇ ಧರ್ಮವೆಂದು ಶಾಸ್ತ್ರಗಳ ನಿಶ್ಚಯ.

ಕೌಶಿಕಾಖ್ಯೋ ಬ್ರಾಹ್ಮಣೋ ಹಿ ಲೀನಂ ಗ್ರಾಮಜನಂ ಕ್ವಚಿತ್ ।
ತಸ್ಕರೇಷ್ವಭಿಧಾಯೈವ ನಿರಯಂ ಪ್ರತ್ಯಪದ್ಯತ ॥೧೨೧॥

ಕೌಶಿಕನೆಂಬ ಮುನಿ ಸತ್ಯವಾದಿ ಎಂದು ಪ್ರಸಿದ್ಧನಾಗಿದ್ದ. ಅವನು ಒಂದೆಡೆ ಅಡಗಿ ಕುಳಿತಿದ್ದ ಗ್ರಾಮದ ಜನರನ್ನು ದರೋಡೆಕೋರರಿಗೆ ತಿಳಿಸಿಯೆ ನರಕವನ್ನು ಹೊಂದಿದ.

ಕಶ್ಚಿದ್ ವ್ಯಾಧೋ ಮೃಗಂ ಹತ್ವಾ ಮಾತಾಪಿತೃನಿಮಿತ್ತತಃ ।
ಭಕ್ಷಾರ್ಥಮಭ್ಯಗಾತ್ ಸ್ವರ್ಗಮಸುರೋಸೌ ಮೃಗೋ ಯತಃ ॥೧೨೨॥

ಉಪದ್ರವಾಯ ಲೋಕಸ್ಯ ತಪಶ್ಚರತಿ ದುರ್ಮತಿಃ

ಬಲಾಕನೆಂಬ ಒಬ್ಬ ಬೇಡ ಮಾತಾಪಿತೃಗಳ ಸಲುವಾಗಿ ಆಹಾರಕ್ಕಾಗಿ ಮೃಗವನ್ನು ಕೊಂದು ಸ್ವರ್ಗವನ್ನು ಹೊಂದಿದ. ಏಕೆಂದರೆ ಆ ಮೃಗರೂಪದಿಂದ ಬಂದವನು ಒಬ್ಬ ಅಸುರನಾಗಿದ್ದ. ಲೋಕನಾಶಕ್ಕಾಗಿಯೆ ದುರ್ಬುದ್ಧಿಯವನಾದ ಆತ ಬ್ರಹ್ಮನ ಕುರಿತು ತಪಸ್ಸು ಮಾಡುತ್ತಿದ್ದ.

ತಸ್ಮಾತ್ ಸದ್ಧಾರಕೋ ಧರ್ಮ ಇತಿ ಕೃತ್ವಾ ವಿನಿಶ್ಚಯಮ್ ।
ಮಾ ನೃಪಂ ಜಹಿ ಸತ್ಯಾಂ ತ್ವಂ ಕುರು ವಾಚಂ ತಿರಸ್ಕುರು ॥ ೧೨೩ ॥

ಅದರಿಂದ ಸಜ್ಜನರಿಗೆ ಪೋಷಕವಾದುದೇ ಧರ್ಮ ಎಂದು ನಿಶ್ಚಯ ಮಾಡಿಕೊಂಡು ಯುಧಿಷ್ಠಿರನನ್ನು ಕೊಲ್ಲದಿರು. ಆದರೆ ಅವನನ್ನು 'ನೀನು' ಎನ್ನುತ್ತ ಅವಮಾನಿಸು. ಆ ಮೂಲಕ ಪ್ರತಿಜ್ಞೆಯನ್ನು ಸತ್ಯವನ್ನಾಗಿ ಮಾಡು.'

❖ ❖ ❖

ಅರವತ್ತಾರನೆಯ ಅಧ್ಯಾಯ

ಯುಧಿಷ್ಠಿರನ ವಧೆಗೆ ಕತ್ತಿ ಹಿರಿಯುತ್ತಾನೆ ಅರ್ಜುನ.
ಹಿರಿಯರನ್ನು ಕೊಲ್ಲಬೇಕೆಂದರೆ ಅದು ಕತ್ತಿಯಿಂದಲ್ಲ, ಮಾತಿನಿಂದ
ಎನ್ನುತ್ತಾ ಶ್ರೀಕೃಷ್ಣ ಸತ್ಯ ಸುಳ್ಳುಗಳ ವಿವೇಚನೆಯನ್ನು ಉಪದೇಶಿಸುತ್ತಾನೆ.

ಸಂಜಯಃ

ಯುಧಿಷ್ಠಿರೇಣೈವಮುಕ್ತಃ ಕೌಂತೇಯಃ ಶ್ವೇತವಾಹನಃ ।
ಅಸಿಂ ಜಗ್ರಾಹ ಸಂಕ್ರುದ್ಧೋ ಜಿಘಾಂಸುರ್ಭರತರ್ಷಭಮ್ ॥೧॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ಯುಧಿಷ್ಠಿರ ಹೀಗೆ ಹೇಳಿದೊಡನೆ ಅವನನ್ನು ಕೊಲ್ಲಲು ಬಯಸಿ ಅರ್ಜುನನು ಕ್ರುದ್ಧನಾಗಿ ಖಡ್ಗವನ್ನೆತ್ತಿದ.

ತಸ್ಯ ಕೋಪಂ ಸಮುದ್ವೀಕ್ಷ್ಯ ಚಿತ್ತಜ್ಞಃ ಕೇಶವಸ್ತದಾ ।
ಉವಾಚ ಕಿಮಿದಂ ಪಾರ್ಥ ಗೃಹೀತಃ ಖಡ್ಗ ಇತ್ಯುತ ॥೨॥

ಅವನ ಕೋಪವನ್ನು ನೋಡಿ ಚಿತ್ತಜ್ಞನಾದ ಕೃಷ್ಣ ನುಡಿದ, 'ಪಾರ್ಥ, ಇದೇನು ಖಡ್ಗವನ್ನೆತ್ತಿಕೊಂಡಿರುವೆ?' ಎಂದು.

ನೇಹ ಪಶ್ಯಾಮಿ ಯೋದ್ಧವ್ಯಂ ತವ ಕಿಂಚಿದ್ ಧನಂಜಯ ।
ನೇಹಾಗತಾ ಧಾರ್ತರಾಷ್ಟ್ರಾಃ ಸರ್ವೇ ಭೀಮೇನ ವಾರಿತಾಃ ॥೩॥

'ಅರ್ಜುನ, ನಿನಗೆ ಇಲ್ಲಿ ಯುದ್ಧ ಮಾಡಬೇಕಾಗಿರುವ ಕಾರಣವೇನೂ ನನಗೆ

ಕಾಣುವುದಿಲ್ಲ. ಧೃತರಾಷ್ಟ್ರನ ಮಕ್ಕಳು ಇಲ್ಲಿಗೆ ಬಂದಿಲ್ಲ. ಎಲ್ಲರನ್ನೂ ಭೀಮ ತಡೆದಿದ್ದಾನೆ.

ಉಪಾಗತೋಽಸಿ ಕೌಂತೇಯ ರಾಜಾ ದ್ರಷ್ಟವ್ಯ ಇತ್ಯಪಿ ।
ಸ ರಾಜಾ ಭವತಾ ದೃಷ್ಟಃ ಕುಶಲೀ ಚ ಯುಧಿಷ್ಠಿರಃ ॥೪॥

ಅರ್ಜುನ, ನೀನು ರಾಜನನ್ನು ನೋಡಬೇಕೆಂದು ಬಂದಿರುವಿ. ಅವನನ್ನು ನೀನು ನೋಡಿದ್ದಾಯಿತು. ಅವನು ಕ್ಷೇಮವಾಗಿದ್ದಾನೆ.

ತಂ ದೃಷ್ಟ್ವಾ ನೃಪಶಾರ್ದೂಲಂ ಶಾರ್ದೂಲಸಮವಿಕ್ರಮಮ್ ।
ಹರ್ಷಕಾಲೇ ತು ಸಂಪ್ರಾಪ್ತೇ ಕಿಮಿದಂ ಮೋಹಕಾರಿತಮ್ ॥೫॥

ಹುಲಿಯಂಥ ಪರಾಕ್ರಮವುಳ್ಳ ರಾಜನನ್ನು ನೋಡಿ ಹರ್ಷಪಡುವ ಕಾಲ ಪ್ರಾಪ್ತವಾಗಿರುವಾಗ ಇದೇನು ಮೋಹದಿಂದ ಏನೋ ಮಾಡುತ್ತಿರುವೆ?

ನ ತಂ ಪಶ್ಯಾಮಿ ಕೌಂತೇಯ ಯಸ್ತೇ ವಧ್ಯೋ ಭವಿಷ್ಯತಿ ।
ಪ್ರಹರ್ತುಮಿಚ್ಛಸೇ ಕಸ್ಮಾತ್ ಕಿಂ ವಾ ತೇ ಚಿತ್ತವಿಭ್ರಮಃ ॥೬॥

ಅರ್ಜುನ, ನೀನು ಕೊಲ್ಲಬೇಕಾಗಿರುವ ವ್ಯಕ್ತಿ ಯಾರೂ ನನಗೆ ಕಾಣುತ್ತಿಲ್ಲ. ಯಾವ ಕಾರಣದಿಂದ ಪ್ರಹಾರ ಮಾಡಲು ಬಯಸುವೆ? ಇದೇನು ಮತಿಭ್ರಮೆ ನಿನಗೆ ಉಂಟಾಗಿದೆ?

ಕಸ್ಮಾದ್ಭವಾನ್ ಮಹಾಖಡ್ಗಂ ಪರಿಗೃಹ್ಣಾತಿ ಸತ್ವರಮ್ ॥೭॥

ಯಾವ ಕಾರಣದಿಂದ ನೀನು ವೇಗದಿಂದ ಮಹಾಖಡ್ಗವನ್ನು ಎತ್ತಿಕೊಳ್ಳುತ್ತ ಇರುವೆ?

ತತ್ತ್ವಾ ಪೃಚ್ಛಾಮಿ ಕೌಂತೇಯ ಕಿಮಿದಂ ತೇ ಚಿಕೀರ್ಷಿತಮ್ ।
ಪರಾಮೃಶಸಿ ಯತ್ಕ್ರುದ್ಧಃ ಖಡ್ಗಮದ್ಭುತವಿಕ್ರಮ ॥೮॥

ನಾನು ನಿನ್ನನ್ನು ಕೇಳುತ್ತಿದ್ದೇನೆ, ಅರ್ಜುನ, ನೀನೇನು ಮಾಡಲು ಹೊರಟಿರುವೆ? ಕೋಪದಿಂದ ಖಡ್ಗವನ್ನು ಏಕೆ ಎತ್ತಿಕೊಳ್ಳುತ್ತಿರುವೆ?'

ಏವಮುಕ್ತಸ್ತು ಕೃಷ್ಣೇನ ಪ್ರೇಕ್ಷಮಾಣೋ ಯುಧಿಷ್ಠಿರಮ್ ।
ಅರ್ಜುನಃ ಪ್ರಾಹ ಗೋವಿಂದಂ ಕ್ರುದ್ಧಃ ಸರ್ಪ ಇವ ಶ್ವಸನ್ ॥೯॥

ಕೃಷ್ಣನು ಹೀಗೆ ಹೇಳಿದಾಗ ಅರ್ಜುನನು ಯುಧಿಷ್ಠಿರನನ್ನು ನೋಡುತ್ತ ಕುಪಿತವಾದ ಸರ್ಪದಂತೆ ಭುಸುಗುಟ್ಟುತ್ತ ಕೃಷ್ಣನಿಗೆ ಹೇಳಿದ.

ದದ ಗಾಂಡೀವಮನ್ಯಸ್ಮಾ ಇತಿ ಮಾಂ ಯೋಽಭಿಚೋದಯೇತ್ ।
ಛಿಂದ್ಯಾಮಹಂ ಶಿರಸ್ತಸ್ಯ ಇತ್ಯುಪಾಂಶುವ್ರತಂ ಮಮ ॥೧೦॥

'ಗಾಂಡೀವವನ್ನು ಇನ್ನೊಬ್ಬನಿಗೆ ಕೊಡು' ಎಂದು ನನಗೆ ಯಾವನು ಹೇಳುವನೋ ಅವನ ಶಿರಸ್ಸನ್ನು ಕತ್ತರಿಸುವೆನೆಂದು ನನ್ನದೊಂದು ಉಪಾಂಶು ವ್ರತವಿದೆ. ಯಾರೊಡನೆಯೂ ಹೇಳದೆ ಗುರುದ್ರೋಣರ ಮುಂದೆ ರಹಸ್ಯವಾಗಿ ಮಾಡಿಕೊಂಡಿರುವ ಪ್ರತಿಜ್ಞೆ ಇದೆ.

ಇದು ರಹಸ್ಯಪ್ರತಿಜ್ಞೆಯಾಗಿದ್ದರಿಂದ ಧರ್ಮರಾಜನಿಗೆ ತಿಳಿದಿರಲಿಲ್ಲ. ಅದರಿಂದ ಆತ ಗಾಂಡೀವದ ನಿಂದೆ ಮಾಡಿದ್ದಾನೆ. (ನೋಡಿ:67.5)

ತದುಕ್ತೋಹಮದೀನಾತ್ಮನ್ ರಾಜ್ಞಾಮಿತಪರಾಕ್ರಮ ।
ಸಮಕ್ಷಂ ತವ ಗೋವಿಂದ ನ ತತ್ ಕ್ಷಂತುಮಿಹೋತ್ಸಹೇ ॥೧೧॥

ಮಹಾತ್ಮ, ಅಮಿತ ಪರಾಕ್ರಮ, ಗೋವಿಂದ, ರಾಜನು ಅಂಥ ಮಾತನ್ನು ನನಗೆ ನಿನ್ನ ಸಮ್ಮುಖದಲ್ಲಿಯೇ ಹೇಳಿದ್ದಾನೆ. ಅದನ್ನು ನಾನು ಕ್ಷಮಿಸಲಾರೆ.

ತಸ್ಮಾದೇನಂ ವಧಿಷ್ಯಾಮಿ ರಾಜಾನಂ ಧರ್ಮಭೀರುಕಃ ।
ಪ್ರತಿಜ್ಞಾಂ ಪಾಲಯಿಷ್ಯಾಮಿ ಹತ್ವೇಮಂ ಯದುಸತ್ತಮ ॥೧೨॥
ಏತದರ್ಥಂ ಮಯಾ ಖಡ್ಗೋ ಗೃಹೀತೋ ಯದುನಂದನ ॥೧೩॥

ಅದರಿಂದ ಯದುಶ್ರೇಷ್ಠನೆ, ಧರ್ಮಭೀರುವಾದ ನಾನು ಪ್ರತಿಜ್ಞೆಯನ್ನು ಪಾಲಿಸಲೆಬೇಕಾದ್ದರಿಂದ ರಾಜನನ್ನು ವಧಿಸುತ್ತೇನೆ. ಈತನನ್ನು ಕೊಂದು, ನನ್ನ ಪ್ರತಿಜ್ಞೆಯನ್ನು ಪಾಲಿಸುತ್ತೇನೆ, ಅದಕ್ಕಾಗಿ ನಾನು ಖಡ್ಗವನ್ನು ಎತ್ತಿಕೊಂಡಿದ್ದೇನೆ.

ಸೋಽಹಂ ಯುಧಿಷ್ಠಿರಂ ಹತ್ವಾ ಸತ್ಯಸ್ಯಾನೃಣ್ಯತಾಂ ಗತಃ ।
ವಿಶೋಕೋ ವಿಜ್ವರಶ್ಚಾಪಿ ಭವಿಷ್ಯಾಮಿ ಜನಾರ್ದನ ॥೧೪॥

ಜನಾರ್ದನ, ಯುಧಿಷ್ಠಿರನನ್ನು ಕೊಂದು, ಸತ್ಯದ ಋಣಪರಿಹಾರ ಮಾಡಿಕೊಂಡು ಶೋಕ–ಭಯವಿಲ್ಲದವನಾಗುತ್ತೇನೆ.

ಕಿಂ ವಾ ತ್ವಂ ಮನ್ಯಸೇ ಪ್ರಾಪ್ತಮಸ್ಮಿನ್ ಕಾಲೇ ಸಮುತ್ಥಿತೇ ।
ತ್ವಮಸ್ಯ ಜಗತಸ್ತಾತ ವೇತ್ಥ ಸರ್ವಂ ಗತಾಗತಮ್ ॥೧೫॥

ತತ್ತಥಾ ಪ್ರಕರಿಷ್ಯಾಮಿ ಯಥಾ ಮಾಂ ವಕ್ಷ್ಯತೇ ಭವಾನ್ ॥೧೬॥

ಆದರೆ ಇಂಥ ಸಂದರ್ಭ ಬಂದಾಗ ನಾನೇನು ಮಾಡುವುದು ಯುಕ್ತವೆಂದು ನಿನ್ನ ಅಭಿಪ್ರಾಯ? ನೀನು ಈ ಜಗತ್ತಿನ ಎಲ್ಲ ಆಗುಹೋಗುಗಳನ್ನು ತಿಳಿದಿರುವೆ. ನೀನು ಹೇಗೆ ಹೇಳುವೆಯೋ ಹಾಗೆ ನಾನು ಮಾಡುವೆನು.

ಸಂಜಯಃ

ಧಿಗ್ ಧಿಗಿತ್ಯೇವ ಗೋವಿಂದಃ ಪಾರ್ಥಮುಕ್ತಾ ಽಬ್ರವೀತ್ ಪುನಃ ॥೧೭॥

ಸಂಜಯನು ನುಡಿದ– 'ಧಿಕ್ಕಾರ! ಧಿಕ್ಕಾರ!' ಎಂದು ಕೃಷ್ಣ ಅರ್ಜುನನಿಗೆ ಹೇಳಿ ಪುನಃ ಹೇಳಿದ.

ಶ್ರೀಭಗವಾನ್

ಇದಾನೀಂ ಪಾರ್ಥ ಜಾನಾಮಿ ನ ವೃದ್ಧಾಃ ಸೇವಿತಾಸ್ತ್ವಯಾ ।
ಅಕಾಲೇ ಪುರುಷವ್ಯಾಘ್ರ ಸಂರಂಭಕ್ರಿಯಯಾನಯಾ ॥೧೮॥

ನ ಹಿ ಧರ್ಮವಿಭಾಗಜ್ಞಃ ಕುರ್ಯಾದೇವಂ ಧನಂಜಯ ॥೧೯॥

ಕೃಷ್ಣ ಹೇಳಿದ— ಈಗ ನನಗೆ ತಿಳಿಯಿತು, ಅರ್ಜುನ, ನೀನು ಹಿರಿಯರ ಸೇವೆ ಮಾಡಲಿಲ್ಲ. ಅಕಾಲದಲ್ಲಿ ನೀನು ಮಾಡುತ್ತಿರುವ ಈ ಕೋಪಕಾರ್ಯವನ್ನು ನೋಡಿದಾಗ ನನಗಿದು ತಿಳಿಯಿತು. ಧರ್ಮದಲ್ಲಿ ಸಾಮಾನ್ಯ ವಿಶೇಷ ವಿಭಾಗ, ಮುಖ್ಯ–ಅಮುಖ್ಯವಿಭಾಗ, ದೇಶ–ಕಾಲಾದಿ ವಿಭಾಗಗಳನ್ನು ಬಲ್ಲವನು ಹೀಗೆ ಮಾಡಲಾರ.

ಅಕಾರ್ಯಾಣಾಂ ಚ ಕಾರ್ಯಾಣಾಂ ಸಂಯೋಗಂ ಯಃ ಕರೋತಿ ವೈ ।
ಕಾರ್ಯಾಣಾಮಕ್ರಿಯಾಣಾಂ ಚ ಸ ಪಾರ್ಥ ಪುರುಷಾಧಮಃ ॥೨೦॥

ಅಣ್ಣನ ವಧೆಯಂಥ ಅಕಾರ್ಯವನ್ನು ಪ್ರತಿಜ್ಞಾಪಾಲನರೂಪ ಕಾರ್ಯದೊಂದಿಗೆ ಜತೆಗೂಡಿಸುವುದನ್ನೂ ಮತ್ತು ಹಾಗೇ ಕಾರ್ಯವನ್ನು ಅಕಾರ್ಯ

ದೊಂದಿಗೆ ಜೊತೆಗೂಡಿಸುವುದನ್ನೂ ಯಾವನು ಮಾಡುವನೋ ಅವನು ಪುರುಷಾಧಮ.

ಯಥಾ ತ್ವಂ ಪಾಂಡವಾದ್ಯೇಹ ಧರ್ಮಭೀರುರಪಂಡಿತಃ ॥೨೧॥

ಇದಕ್ಕೆ ಉದಾಹರಣೆ, ಅರ್ಜುನ, ಈಗ ನೀನೆ, ಧರ್ಮಭೀರುವಾಗಿದ್ದು ಜ್ಞಾನವಿಲ್ಲದವನು. ಅಣ್ಣನ ವಧೆ ಮಾಡಬಾರದೆಂಬ ಜ್ಞಾನವಿಲ್ಲ, ಆದರೆ ಪ್ರತಿಜ್ಞಾ ಪಾಲನೆ ಮಾಡದಿದ್ದರೆ ಪಾಪವೆಂದು ಧರ್ಮವಿಷಯದಲ್ಲಿ ಭೀರುವಾಗಿರುವೆ.

ಅನುಸೃತ್ಯ ತು ಯೇ ಧರ್ಮಂ ಕವಯಃ ಸಮುಪಾಸತೇ ।
ಸಮಾಸವಿಸ್ತರವಿದಾಂ ನ ತೇಷಾಂ ವೇತ್ಥ ನಿಶ್ಚಯಮ್ ॥೨೨॥

ಧರ್ಮವನ್ನು ಅನುಸರಿಸಿ ಯಾವ ಜ್ಞಾನಿಗಳು ಅನುಷ್ಠಾನ ಮಾಡುವರೋ ಅವರು ಸಾಮಾನ್ಯ ಧರ್ಮ, ವಿಶೇಷ ಧರ್ಮಗಳೆಂದು ಧರ್ಮದಲ್ಲಿ ವಿಭಾಗ ನಿರ್ಣಯ ಮಾಡಿದ್ದಾರೆ. ನೀನು ಈ ನಿರ್ಣಯವನ್ನು ತಿಳಿದಿಲ್ಲ.

ಅನಿಶ್ಚಯಜ್ಞೋ ಹಿ ನರಃ ಕಾರ್ಯಾಕಾರ್ಯವಿನಿಶ್ಚಯೇ ।
ಅವಶೋ ಮುಹ್ಯತೇ ಪಾರ್ಥ ಯಥಾ ತ್ವಂ ಮೂಢ ಏವ ತು ॥೨೩॥

ನಿರ್ಣಯವನ್ನು ತಿಳಿಯದ ಮಾನವನು ಕಾರ್ಯ–ಅಕಾರ್ಯಗಳ ನಿಶ್ಚಯ ಮಾಡುವಲ್ಲಿ ಪರವಶನಾಗಿ ದಾರಿತಪ್ಪುತ್ತಾನೆ. ಇದಕ್ಕೆ ಉದಾಹರಣೆ ಮೂಢನಾದ ನೀನೆ.

ನ ಹಿ ಕಾರ್ಯಮಕಾರ್ಯಂ ವಾ ಸುಖಂ ಜ್ಞಾತುಂ ಕಥಂಚನ ।
ಶ್ರುತೇನ ಜ್ಞಾಯತೇ ಸರ್ವಂ ತಚ್ಚ ತ್ವಂ ನಾವಬುಧ್ಯಸೇ ॥೨೪॥

ಧರ್ಮಸಮ್ಮತರೀತಿಯಲ್ಲಿ ಕಾರ್ಯವನ್ನಾಗಲಿ, ಅಕಾರ್ಯವನ್ನಾಗಲಿ ತಿಳಿಯುವುದು ಸರ್ವಥಾ ಸುಲಭವಲ್ಲ. ಅಧ್ಯಯನದಿಂದಲೆ ಅದೆಲ್ಲವೂ ತಿಳಿಯುತ್ತದೆ. ಅದು ನಿನಗೆ ತಿಳಿದಿಲ್ಲ.

ಅವಿಜ್ಞಾನಾದ್ ಭವಾನ್ ಯಚ್ಚ ಧರ್ಮಂ ರಕ್ಷಿತುಮಿಚ್ಛತಿ ।
ಪ್ರಾಣಿನಾಂ ಹಿ ವಧಂ ಪಾರ್ಥ ಧಾರ್ಮಿಕೋ ನಾವಬುಧ್ಯತೇ ॥೨೫॥

ತಿಳಿಯದೇ ಪ್ರತಿಜ್ಞಾಪಾಲನ ಧರ್ಮವನ್ನು ರಕ್ಷಿಸಲು ನೀನು ಬಯಸುವಿ. ಪ್ರಾಣಿಗಳ ವಧವನ್ನು ಅಧರ್ಮವೆಂದು ಧಾರ್ಮಿಕನಾದ ನೀನು ತಿಳಿದಿಲ್ಲ.

ಪ್ರಾಣಿನಾಮವಧಸ್ತಾತ ಸರ್ವಜ್ಯಾಯಾನ್ ಮತೋ ಮಮ ।
ಅನೃತಂ ತು ಭವೇದ್ ವಾಚ್ಯಂ ನ ಚ ಹಿಂಸ್ಯಾತ್ ಕಥಂಚನ ॥೨೬॥

ಪ್ರಾಣಿವಧ ಮಾಡದಿರುವುದು ಎಲ್ಲಕ್ಕಿಂತ ದೊಡ್ಡ ಧರ್ಮ ಎನ್ನುವುದು ನನ್ನ ಅಭಿಪ್ರಾಯ. ಗುರು–ಹಿರಿಯರ, ಬಂಧುಗಳ ವಧ ಮಾಡಲೇಬೇಕಾದ ಸಂದರ್ಭ ಒದಗಿಬಂದಾಗ ಸುಳ್ಳು ಹೇಳಿಯಾದರೂ ಅದನ್ನು ತಪ್ಪಿಸಿಕೊಳ್ಳಬೇಕು. ಹೇಗಾದರೂ ಪ್ರಯತ್ನಮಾಡಿ ಹಿಂಸೆ ಮಾಡದಿರಬೇಕು.

ಸ ಕಥಂ ಭ್ರಾತರಂ ಜ್ಯೇಷ್ಠಂ ರಾಜಾನಂ ಧರ್ಮಕೋವಿದಮ್ ।
ಹನ್ಯಾದ್ ಭವಾನ್ ನರಶ್ರೇಷ್ಠ ಪ್ರಾಕೃತೋಽನ್ಯಃ ಪುಮಾನಿವ ॥೨೭॥

ಹೀಗಿರುವಾಗ ಯುಧಿಷ್ಠಿರ ನಿನಗೆ ಸೋದರ, ಜ್ಯೇಷ್ಠ ರಾಜ ಮತ್ತು ಧರ್ಮಜ್ಞನಾಗಿದ್ದಾನೆ. ಇಂಥ ಯುಧಿಷ್ಠಿರನನ್ನು ಅಜ್ಞನಾದ ಬೇರೆ ಮನುಷ್ಯನಂತೆ, ನೀನು ಹೇಗೆ ವಧಿಸುವೆ?

ಅಯುಧ್ಯಮಾನಸ್ಯ ವಧಸ್ತಥಾಶಸ್ತ್ರಸ್ಯ ಭಾರತ ।
ಪರಾಙ್ಮುಖಸ್ಯ ದ್ರವತಃ ಶರಣಂ ವಾಭಿಗಚ್ಛತಃ ॥೨೮॥

ಕೃತಾಂಜಲೇಃ ಪ್ರಪನ್ನಸ್ಯ ಪ್ರಮತ್ತಸ್ಯ ತಥೈವ ಚ ।
ನ ವಧಃ ಪೂಜ್ಯತೇ ಸದ್ಭಿಸ್ತಚ್ಚ ಸರ್ವಂ ಗುರೌ ತವ ॥೨೯॥

ಶತ್ರುವೂ ಕೂಡ, ಅವನು ಯುದ್ಧ ಮಾಡದಿರುವಾಗ, ಅವನಲ್ಲಿ ಶಸ್ತ್ರವಿಲ್ಲದಿರುವಾಗ, ಅವನು ಹೆದರಿ ಪಲಾಯನ ಮಾಡುವಾಗ, ಶರಣು ಹೊಂದಿರುವಾಗ, ಕೈಮುಗಿದು ಆಸರೆಯನ್ನು ಬೇಡುತ್ತಿರುವಾಗ, ಕುಡಿದು ಅಮಲೇರಿರುವಾಗ ವಧಮಾಡುವುದನ್ನು ಸಜ್ಜನರು ಮೆಚ್ಚುವುದಿಲ್ಲ. ಈ ಎಲ್ಲ ಕಾರಣಗಳೂ ನಿನ್ನ ಪೂಜ್ಯ ಅಣ್ಣನಲ್ಲಿರುವಾಗ ಅವನನ್ನು ಕೊಲ್ಲುವುದು ತಪ್ಪು.

ತ್ವಯಾ ಚೈವ ವ್ರತಂ ಪಾರ್ಥ ಬಾಲೇನೈವ ಕೃತಂ ಪುರಾ ।
ತಸ್ಮಾದಧರ್ಮಸಂಯುಕ್ತಂ ಮೌಢ್ಯಾತ್ ಕರ್ಮ ವ್ಯವಸ್ಯಸಿ ॥೩೦॥

ನೀನು ಹಿಂದೆ ಪ್ರತಿಜ್ಞೆ ಮಾಡಿರಬಹುದು, ಆದರೆ ಅದು ನೀನು ಧರ್ಮದ ಅಜ್ಞಾನದಿಂದಲೆ ಮಾಡಿದ್ದಾಗಿದೆ. ಅದರಿಂದ ಅಧರ್ಮಯುಕ್ತವಾಗಿ ಅದರ ಪಾಲನ ಕರ್ಮವನ್ನು ಮೂಢತನದಿಂದ ಮಾಡಲು ಹೊರಟಿರುವೆ.

ಸ ಗುರುಂ ಪಾರ್ಥ ಕಸ್ಮಾತ್ತ್ವಂ ಹನ್ಯಾ ಧರ್ಮಮನುಸ್ಮರನ್ ।
ಅಸಂಪ್ರಧಾರ್ಯ ಧರ್ಮಾಣಾಂ ಗತಿಂ ಸೂಕ್ಷ್ಮಾಂ
ದುರನ್ವಯಾಮ್ ॥೩೧॥

ಕೇವಲ ಒಂದು ಧರ್ಮವನ್ನು ಆಲೋಚಿಸಿ, ಎಲ್ಲ ಧರ್ಮಗಳ ಸೂಕ್ಷ್ಮವಾದ ಅತಿಗಹನವಾದ ಅನುಷ್ಠಾನಕ್ರಮವನ್ನು ನಿರ್ಧಾರ ಮಾಡದೆ, ಹಿರಿಯನಾದ ರಾಜನನ್ನು ನೀನು ಹೇಗೆ ವಧಿಸುತ್ತಿರುವೆ?

ಇದಂ ಧರ್ಮರಹಸ್ಯಂ ಚ ವಕ್ಷ್ಯಾಮಿ ಭರತರ್ಷಭ ।
ಯದ್ ಬ್ರೂಯಾತ್ ತವ ಭೀಷ್ಮೋ ವಾ ಧರ್ಮಜ್ಞೋ
ವಾ ಯುಧಿಷ್ಠಿರಃ ॥೩೨॥

ವಿದುರೋ ವಾ ತಥಾ ಕ್ಷತ್ತಾ ಕುಂತೀ ವಾಪಿ ಯಶಸ್ವಿನೀ ।
ತತ್ತೇ ವಕ್ಷ್ಯಾಮಿ ತತ್ತ್ವೇನ ತನ್ನಿಬೋಧ ಧನಂಜಯ ॥೩೩॥

ಧರ್ಮದ ಈ ಸೂಕ್ಷ್ಮರಹಸ್ಯವನ್ನು ನಿನಗೆ ಭೀಷ್ಮನಾಗಲಿ, ಧರ್ಮಜ್ಞನಾದ ಯುಧಿಷ್ಠಿರನಾಗಲಿ ವಿದುರನಾಗಲಿ ಯಶಸ್ವಿನಿಯಾದ ಕುಂತಿಯಾಗಲಿ ಹೇಳಬಲ್ಲರು. ಅದನ್ನು ಈಗ ನಾನು ನಿನಗೆ ಸರಿಯಾಗಿ ಹೇಳುತ್ತೇನೆ, ಕೇಳು, ಅರ್ಜುನ!

ಸತ್ಯಸ್ಯ ವಚನಂ ಸಾಧು ನ ಸತ್ಯಾದ್ ವಿದ್ಯತೇ ಪರಮ್ ।
ಸುದುರ್ವಿದಂ ಹಿ ತತ್ತ್ವೇನ ತತ್ ಸತ್ಯಮಿತಿ ಮೇ ಮತಿಃ ॥೩೪॥

ಸತ್ಯ ಹೇಳುವುದು ಪುಣ್ಯಕರ. ಸತ್ಯ ಹೇಳುವುದಕ್ಕಿಂತ ಹೆಚ್ಚಿನ ಪುಣ್ಯಕಾರ್ಯ ಬೇರೆ ಇಲ್ಲ. ಆದರೆ ಸತ್ಯವ್ರತ ಅನುಷ್ಠಾನ ಮಾಡುವವನಿಗೆ ಅದನ್ನು ಸರಿಯಾಗಿ ತಿಳಿಯುವುದು ಬಲು ಕಷ್ಟ

ಭವೇತ್ ಸತ್ಯಮವಕ್ತವ್ಯಂ ವಕ್ತವ್ಯಮನೃತಂ ಭವೇತ್ ।
ಯತ್ರಾನೃತಂ ಭವೇತ್ ಸತ್ಯಂ ಸತ್ಯಂ ಚಾಪ್ಯನೃತಂ ಭವೇತ್ ॥೩೫॥

ಕೆಲವು ಕಡೆ ಸತ್ಯವನ್ನು ಹೇಳದೆಯೇ ಇರಬೇಕು ಮತ್ತು ಸುಳ್ಳನ್ನೇ ಹೇಳಬೇಕು. ಎಲ್ಲಿ ಎಂದರೆ, ಎಲ್ಲಿ ಸುಳ್ಳೇ ಸತ್ಯವಾಗುವುದೊ, ಸತ್ಯವೇ ಸುಳ್ಳಾಗುವುದೋ ಅಲ್ಲಿ.

ವಿವಾಹಕಾಲೇ ರತಿಸಂಪ್ರಯೋಗೇ
ಪ್ರಾಣಾತ್ಯಯೇ ಸರ್ವಧನಾಪಹಾರೇ ।
ವಿಪ್ರಸ್ಯ ಚಾರ್ಥೇ ಹ್ಯನೃತಂ ವದೇತ
ಪಂಚಾನೃತಾನ್ಯಾಹುರಪಾತಕಾನಿ ॥೩೬॥

ಸುಳ್ಳು ಸತ್ಯವಾಗುವದಕ್ಕೆ ಉದಾಹರಣೆಗಳು— ಶುಭಕಾರ್ಯಗಳು ನಿಂತು ಹೋಗುವ ಸಂದರ್ಭದಲ್ಲಿ ಶತ್ರುಸಂಬಂಧಿಸ್ತ್ರೀಯರೊಡನೆ ರಮಿಸುವ ಕಾಲದಲ್ಲಿ ಸತ್ಯ ಹೇಳಿದಾಗ ಪ್ರಾಣಾಪಾಯವಿರುವಲ್ಲಿ ಮತ್ತು ಸರ್ವಸ್ವ ಅಪಹಾರವಾಗುವ ಭಯವಿರುವಲ್ಲಿ ಮತ್ತು ವಿಪ್ರನಿಗೆ ಹಿಂಸೆ ಆಗುವಲ್ಲಿ, ಹೀಗೆ ಐದುಕಡೆ ಸುಳ್ಳು ಹೇಳಿದರೆ ಪಾಪವಿರುವುದಿಲ್ಲ.

ಸರ್ವಸ್ವಸ್ಯಾಪಹಾರೇ ತು ವಕ್ತವ್ಯಮನೃತಂ ಭವೇತ್ ॥೩೭॥

ಸರ್ವಸ್ವ ಅಪಹಾರವಾಗುವ ಸಂದರ್ಭದಲ್ಲಿ ಸುಳ್ಳು ಹೇಳುವುದು ಆವಶ್ಯಕ.

ಪ್ರಾಣಾತ್ಯಯೇ ವಿವಾಹೇ ಚ ವಕ್ತವ್ಯಮನೃತಂ ಭವೇತ್ ।
ತತ್ಸಾನೃತಂ ಭವೇತ್ ಸತ್ಯಂ ಸತ್ಯಂ ಚಾಪ್ಯನೃತಂ ಭವೇತ್ ॥೩೮॥

ಪ್ರಾಣಾಪಾಯ, ವಿವಾಹಕಾರ್ಯಗಳಲ್ಲಿ ಸುಳ್ಳು ಹೇಳಬೇಕು. ಏಕೆಂದರೆ ಅಲ್ಲಿ ಸುಳ್ಳು ಸತ್ಯವಾಗುವುದು. ಸತ್ಯ ಸುಳ್ಳಾಗುವುದು.

ತಾದೃಶಂ ಮನ್ಯತೇऽಬಾಲೋ ಯತ್ರ ಸತ್ಯಮನಿಶ್ಚಿತಮ್ ॥೩೯॥

ಎಲ್ಲಿ ಸತ್ಯವು ನಿಶ್ಚಿತವಾಗಿರುವುದಿಲ್ಲವೋ ಅಲ್ಲಿಯೂ ಸುಳ್ಳು ಹೇಳಿದರೆ ದೋಷವಿರುವುದಿಲ್ಲ ಎಂದು 'ಅಬಾಲ'ನು, ಅಂದರೆ ಪ್ರೌಢನು ತಿಳಿಯುತ್ತಾನೆ.

ಸತ್ಯಾನೃತೇ ವಿನಿಶ್ಚಿತ್ಯ ತತೋ ಭವತಿ ಧರ್ಮವಿತ್ ॥೪೦॥

ಅದರಿಂದ ಸತ್ಯ, ಸುಳ್ಳುಗಳನ್ನು ನಿಶ್ಚಯಿಸಿ ಪ್ರೌಢನು ಧರ್ಮವನ್ನು ತಿಳಿಯುತ್ತಾನೆ.

ಕಿಮಾಶ್ಚರ್ಯಂ ಕೃತಪ್ರಜ್ಞಃ ಪುರುಷೋಽಪಿ ಸುದಾರುಣಃ ।
ಸುಮಹತ್‌ಪ್ರಾಪ್ನುಯಾತ್ ಪುಣ್ಯಂ ಬಲಾಕೋಽಂಧವಧಾದಿವ ॥೪೧॥

ಏನು ಆಶ್ಚರ್ಯ! ಧರ್ಮವನ್ನು ಚೆನ್ನಾಗಿ ತಿಳಿದವನು ಮಾತ್ರವಲ್ಲದೆ, ಬಲುಕ್ರೂರಿಯಾದ ಪುರುಷನು ಕೂಡ ಕೆಲವೊಮ್ಮೆ ಮಹತ್ತಾದ ಪುಣ್ಯವನ್ನು ಸಂಪಾದಿಸಬಹುದು. ಇದಕ್ಕೆ ಉದಾಹರಣೆ ಬಲಾಕ ಎಂಬ ಬೇಡನು ಕಣ್ಣುಕಾಣದ ಒಂದು ಮೃಗವನ್ನು ಕೊಂದು ಮಹಾಪುಣ್ಯಕ್ಕೆ ಭಾಗಿಯಾಗಿದ್ದಾನೆ.

ಪ್ರಭವಾರ್ಥಾಯ ಭೂತಾನಾಂ ಧರ್ಮಪ್ರವಚನಂ ಸ್ಮೃತಮ್ ।
ಯತ್‌ಸ್ಯಾದಹಿಂಸಾಸಂಯುಕ್ತಂ ಸ ಧರ್ಮ ಇತಿ ನಿಶ್ಚಯಃ ॥೪೨॥

ಸಜ್ಜನರ ಅಭ್ಯುದಯಕ್ಕಾಗಿ ಶಾಸ್ತ್ರದಲ್ಲಿ ಧರ್ಮೋಪದೇಶವಿರುತ್ತದೆ. ಯಾವ ಕಾರ್ಯದಲ್ಲಿ ಸಜ್ಜನರ ಅಹಿಂಸೆ ತಳುಕು ಹಾಕಿಕೊಂಡಿರುತ್ತದೋ ಅದು ಧರ್ಮಕಾರ್ಯವೆನಿಸುತ್ತದೆ.

ಅಹಿಂಸಾರ್ಥಾಯ ಭೂತಾನಾಂ ಧರ್ಮಪ್ರವಚನಂ ಕೃತಂ ।
ಯಶ್ಚಾತ್ರಾಧಾರಸಂಯುಕ್ತಃ ಸ ಧರ್ಮ ಇತಿ ನಿಶ್ಚಿತಃ ॥೪೩॥

ಸಜ್ಜನರ ಅಹಿಂಸೆಗಾಗಿ ಶಾಸ್ತ್ರದಲ್ಲಿ ಧರ್ಮೋಪದೇಶವಿರುತ್ತದೆ. ಹೀಗಾಗಿ ಒಂದು ಕಾರ್ಯದಿಂದ ಸಜ್ಜನರಿಗೆ ಆಧಾರವಾಗಬಲ್ಲ ಅಭ್ಯುದಯ ಒಂದು ಕಡೆ, ಹಾಗೇ ಸಜ್ಜನರಿಗೆ ಆಧಾರವಾಗಬಲ್ಲ ಅಹಿಂಸೆ ಇನ್ನೊಂದು ಕಡೆ ಇರುವುದಾದಲ್ಲಿ ಅದು ಧರ್ಮವೆ ಎಂದು ನಿಶ್ಚಯ.

ಧರ್ಮರಾಜನ ನಿಂದೆಯ ಮೂಲಕ ಅರ್ಜುನ ತನ್ನ ಪ್ರತಿಜ್ಞಾಪಾಲನೆ ಮಾಡಿದರೆ ಅದರಿಂದ ಅರ್ಜುನನಿಗೆ ಅಭ್ಯುದಯ, ಧರ್ಮರಾಜನಿಗೆ ಅಹಿಂಸೆ ಇವೆರಡೂ ಸಾಧ್ಯವಾಗುವುವು.

ಕಿಮಾಶ್ಚರ್ಯಂ ಪುನರ್ಮೂಢೋ ಧರ್ಮಕಾಮೋಽಪ್ಯಪಂಡಿತಃ ।
ಸುಮಹತ್‌ಪ್ರಾಪ್ನುಯಾತ್ ಪಾಪಮಾಪಗಾಸ್ವಿವ ಕೌಶಿಕಃ ॥೪೪॥

ಏನು ಆಶ್ಚರ್ಯ! ಮೂರ್ಖನು ಮಾತ್ರವಲ್ಲದೆ ಧಾರ್ಮಿಕನಾದ ಅಜ್ಞನೂ ಕೂಡ ನದಿಗಳ ಸಂಗಮಕ್ಷೇತ್ರದಲ್ಲಿದ್ದ ಕೌಶಿಕನೆಂಬ ವಿಪ್ರನಂತೆ ಮಹಾಪಾಪಕ್ಕೆ ಭಾಗಿಯಾಗುವನು.

ಅರ್ಜುನಃ

ಆಚಕ್ಷ್ವ ಭಗವನ್ನೇತದ್ ಯಥಾ ವಿದ್ಯಾಮಹಂ ತಥಾ ।
ಬಲಾಕಾಂಧಾಭಿಸಂಬದ್ಧಂ ನದೀನಾಂ ಕೌಶಿಕಸ್ಯ ಚ ॥೪೫॥

ಅರ್ಜುನನು ನುಡಿದ— ಭಗವಂತನೆ, ಬಲಾಕ–ಅಂಧಮೃಗಗಳ ಮತ್ತು ನದೀಸಂಗಮ–ಕೌಶಿಕವಿಪ್ರರ ಸಂಬಂಧವಾಗಿ ಪುಣ್ಯಪಾಪಪ್ರಾಪ್ತಿಯ ವೃತ್ತಾಂತವನ್ನು ನಾನು ತಿಳಿಯುವಂತೆ ನನಗೆ ಉಪದೇಶಿಸು.

ಕೃಷ್ಣಃ

ಮೃಗವ್ಯಾಧೋಽಭವತ್ ಕಶ್ಚಿದ್ ಬಲಾಕೋ ನಾಮ ಭಾರತ ।
ಯಾತ್ರಾರ್ಥಂ ಪುತ್ರದಾರಸ್ಯ ಮೃಗಾನ್ ಹಂತಿ ನ ಕಾಮತಃ ॥೪೬॥

ಶ್ರೀಕೃಷ್ಣ ನುಡಿದ– ಅರ್ಜುನ, ಬಲಾಕನೆಂಬ ಒಬ್ಬ ಬೇಟೆಗಾರನಿದ್ದ. ಅವನು ಪುತ್ರ–ಪತ್ನಿಯರ ಬದುಕಿಗಾಗಿ ಮೃಗಗಳನ್ನು ಕೊಲ್ಲುತ್ತಿದ್ದ. ಹಿಂಸಾಕಾಮನೆಯಿಂದಲ್ಲ.

ವೃದ್ಧೌ ಚ ಮಾತಾಪಿತರೌ ಬಿಭರ್ತ್ಯನ್ಯಾಂಶ್ಚ ಸಂಶ್ರಿತಾನ್ ।
ಸ್ವಧರ್ಮನಿರತೋ ನಿತ್ಯಂ ಸತ್ಯವಾಗನಸೂಯಕಃ ॥೪೭॥

ಅವನು ವೃದ್ಧರಾದ ಮಾತಾಪಿತರನ್ನೂ ತನ್ನನ್ನು ಆಶ್ರಯಿಸಿರುವ ಬೇರೆ ಹೆಂಡತಿ ಮಕ್ಕಳನ್ನೂ ನಿತ್ಯ ಸ್ವಧರ್ಮನಿರತನಾಗಿ, ಸತ್ಯವಾದಿಯಾಗಿ ಪರದ್ವೇಷಮಾಡದೇ ಸಾಕುತ್ತಿದ್ದ.

ಸ ಕದಾಚಿನ್ಮೃಗಂ ಲಿಪ್ಸುರ್ನಾನ್ವವಿಂದತ್ ಪ್ರಯತ್ನವಾನ್ ।
ಅಪಃ ಪಿಬಂತಂ ದದೃಶೇ ಶ್ವಾಪದಂ ಘ್ರಾಣಚಕ್ಷುಷಮ್ ॥೪೮॥

ಒಮ್ಮೆ ಅವನು ಒಂದು ಮೃಗವನ್ನು ಸಂಪಾದಿಸಲು ಬಯಸಿ ಯತ್ನಮಾಡಿದರೂ ಅದು ಅವನಿಗೆ ಸಿಗಲಿಲ್ಲ. ಕೊನೆಗೆ ಮೂಗೇ ಕಣ್ಣಾಗಿ ಉಳ್ಳ ಅಂದರೆ ಕಣ್ಣಿಲ್ಲದ್ದರಿಂದ ವಾಸನೆಯಿಂದಲೆ ಎಲ್ಲವನ್ನೂ ತಿಳಿಯುತ್ತಿದ್ದ ಒಂದು ಹಿಂಸ್ರಮೃಗ ತೋಳವು ನೀರು ಕುಡಿಯುತ್ತಿದ್ದನ್ನು ಕಂಡ.

ಅದೃಷ್ಟಪೂರ್ವಮಪಿ ತತ್ತತ್ತ್ವಂ ತೇನ ಹತಂ ತದಾ ।
ಅಂಧೇ ಹತೇ ತತೋ ವ್ಯೋಮ್ನಃ ಪುಷ್ಪವರ್ಷಮವಾಪತತ್ ॥೪೯॥

ಕಿಮಾಶ್ಚರ್ಯಂ ಕೃತಪ್ರಜ್ಞಃ ಪುರುಷೋಽಪಿ ಸುದಾರುಣಃ ।
ಸುಮಹತ್‌ಪ್ರಾಪ್ನುಯಾತ್ ಪುಣ್ಯಂ ಬಲಾಕೋಽಂಧವಧಾದಿವ ॥೪೧॥

ಏನು ಆಶ್ಚರ್ಯ! ಧರ್ಮವನ್ನು ಚೆನ್ನಾಗಿ ತಿಳಿದವನು ಮಾತ್ರವಲ್ಲದೆ, ಬಲುಕ್ರೂರಿಯಾದ ಪುರುಷನು ಕೂಡ ಕೆಲವೊಮ್ಮೆ ಮಹತ್ತಾದ ಪುಣ್ಯವನ್ನು ಸಂಪಾದಿಸಬಹುದು. ಇದಕ್ಕೆ ಉದಾಹರಣೆ ಬಲಾಕ ಎಂಬ ಬೇಡನು ಕಣ್ಣುಕಾಣದ ಒಂದು ಮೃಗವನ್ನು ಕೊಂದು ಮಹಾಪುಣ್ಯಕ್ಕೆ ಭಾಗಿಯಾಗಿದ್ದಾನೆ.

ಪ್ರಭವಾರ್ಥಾಯ ಭೂತಾನಾಂ ಧರ್ಮಪ್ರವಚನಂ ಸ್ಮೃತಮ್ ।
ಯತ್‌ಸ್ಯಾದಹಿಂಸಾಸಂಯುಕ್ತಂ ಸ ಧರ್ಮ ಇತಿ ನಿಶ್ಚಯಃ ॥೪೨॥

ಸಜ್ಜನರ ಅಭ್ಯುದಯಕ್ಕಾಗಿ ಶಾಸ್ತ್ರದಲ್ಲಿ ಧರ್ಮೋಪದೇಶವಿರುತ್ತದೆ. ಯಾವ ಕಾರ್ಯದಲ್ಲಿ ಸಜ್ಜನರ ಅಹಿಂಸೆ ತಳುಕು ಹಾಕಿಕೊಂಡಿರುತ್ತದೋ ಅದು ಧರ್ಮಕಾರ್ಯವೆನಿಸುತ್ತದೆ.

ಅಹಿಂಸಾರ್ಥಾಯ ಭೂತಾನಾಂ ಧರ್ಮಪ್ರವಚನಂ ಕೃತಂ ।
ಯಶ್ಚಾತ್ರಾಧಾರಸಂಯುಕ್ತಃ ಸ ಧರ್ಮ ಇತಿ ನಿಶ್ಚಿತಃ ॥೪೩॥

ಸಜ್ಜನರ ಅಹಿಂಸೆಗಾಗಿ ಶಾಸ್ತ್ರದಲ್ಲಿ ಧರ್ಮೋಪದೇಶವಿರುತ್ತದೆ. ಹೀಗಾಗಿ ಒಂದು ಕಾರ್ಯದಿಂದ ಸಜ್ಜನರಿಗೆ ಆಧಾರವಾಗಬಲ್ಲ ಅಭ್ಯುದಯ ಒಂದು ಕಡೆ, ಹಾಗೇ ಸಜ್ಜನರಿಗೆ ಆಧಾರವಾಗಬಲ್ಲ ಅಹಿಂಸೆ ಇನ್ನೊಂದು ಕಡೆ ಇರುವುದಾದಲ್ಲಿ ಅದು ಧರ್ಮವೆ ಎಂದು ನಿಶ್ಚಯ.

ಧರ್ಮರಾಜನ ನಿಂದೆಯ ಮೂಲಕ ಅರ್ಜುನ ತನ್ನ ಪ್ರತಿಜ್ಞಾಪಾಲನೆ ಮಾಡಿದರೆ ಅದರಿಂದ ಅರ್ಜುನನಿಗೆ ಅಭ್ಯುದಯ, ಧರ್ಮರಾಜನಿಗೆ ಅಹಿಂಸೆ ಇವೆರಡೂ ಸಾಧ್ಯವಾಗುವುವು.

ಕಿಮಾಶ್ಚರ್ಯಂ ಪುನರ್ಮೂಢೋ ಧರ್ಮಕಾಮೋಽಪ್ಯಪಂಡಿತಃ ।
ಸುಮಹತ್‌ಪ್ರಾಪ್ನುಯಾತ್ ಪಾಪಮಾಪಗಾಸ್ವಿವ ಕೌಶಿಕಃ ॥೪೪॥

ಏನು ಆಶ್ಚರ್ಯ! ಮೂರ್ಖನು ಮಾತ್ರವಲ್ಲದೆ ಧಾರ್ಮಿಕನಾದ ಅಜ್ಞನೂ ಕೂಡ ನದಿಗಳ ಸಂಗಮಕ್ಷೇತ್ರದಲ್ಲಿದ್ದ ಕೌಶಿಕನೆಂಬ ವಿಪ್ರನಂತೆ ಮಹಾಪಾಪಕ್ಕೆ ಭಾಗಿಯಾಗುವನು.

ಅರ್ಜುನಃ

ಆಚಕ್ಷ್ವ ಭಗವನ್ನೇತದ್ ಯಥಾ ವಿದ್ಯಾಮಹಂ ತಥಾ ।
ಬಲಾಕಾಂಧಾಭಿಸಂಬದ್ಧಂ ನದೀನಾಂ ಕೌಶಿಕಸ್ಯ ಚ ॥೪೫॥

ಅರ್ಜುನನು ನುಡಿದ— ಭಗವಂತನೆ, ಬಲಾಕ–ಅಂಧಮೃಗಗಳ ಮತ್ತು ನದೀಸಂಗಮ–ಕೌಶಿಕವಿಪ್ರರ ಸಂಬಂಧವಾಗಿ ಪುಣ್ಯಪಾಪಪ್ರಾಪ್ತಿಯ ವೃತ್ತಾಂತವನ್ನು ನಾನು ತಿಳಿಯುವಂತೆ ನನಗೆ ಉಪದೇಶಿಸು.

ಕೃಷ್ಣಃ

ಮೃಗವ್ಯಾಧೋಽಭವತ್ ಕಶ್ಚಿದ್ ಬಲಾಕೋ ನಾಮ ಭಾರತ ।
ಯಾತ್ರಾರ್ಥಂ ಪುತ್ರದಾರಸ್ಯ ಮೃಗಾನ್ ಹಂತಿ ನ ಕಾಮತಃ ॥೪೬॥

ಶ್ರೀಕೃಷ್ಣ ನುಡಿದ– ಅರ್ಜುನ, ಬಲಾಕನೆಂಬ ಒಬ್ಬ ಬೇಟೆಗಾರನಿದ್ದ. ಅವನು ಪುತ್ರ–ಪತ್ನಿಯರ ಬದುಕಿಗಾಗಿ ಮೃಗಗಳನ್ನು ಕೊಲ್ಲುತ್ತಿದ್ದ. ಹಿಂಸಾಕಾಮನೆಯಿಂದಲ್ಲ.

ವೃದ್ಧೌ ಚ ಮಾತಾಪಿತರೌ ಬಿಭರ್ತ್ಯನ್ಯಾಂಶ್ಚ ಸಂಶ್ರಿತಾನ್ ।
ಸ್ವಧರ್ಮನಿರತೋ ನಿತ್ಯಂ ಸತ್ಯವಾಗನಸೂಯಕಃ ॥೪೭॥

ಅವನು ವೃದ್ಧರಾದ ಮಾತಾಪಿತರನ್ನೂ ತನ್ನನ್ನು ಆಶ್ರಯಿಸಿರುವ ಬೇರೆ ಹೆಂಡತಿ ಮಕ್ಕಳನ್ನೂ ನಿತ್ಯ ಸ್ವಧರ್ಮನಿರತನಾಗಿ, ಸತ್ಯವಾದಿಯಾಗಿ ಪರದ್ವೇಷಮಾಡದೇ ಸಾಕುತ್ತಿದ್ದ.

ಸ ಕದಾಚಿನ್ಮೃಗಂ ಲಿಪ್ಸುರ್ನಾನ್ವವಿಂದತ್ ಪ್ರಯತ್ನವಾನ್ ।
ಅಪಃ ಪಿಬಂತಂ ದದೃಶೇ ಶ್ವಾಪದಂ ಘ್ರಾಣಚಕ್ಷುಷಮ್ ॥೪೮॥

ಒಮ್ಮೆ ಅವನು ಒಂದು ಮೃಗವನ್ನು ಸಂಪಾದಿಸಲು ಬಯಸಿ ಯತ್ನಮಾಡಿದರೂ ಅದು ಅವನಿಗೆ ಸಿಗಲಿಲ್ಲ. ಕೊನೆಗೆ ಮೂಗೇ ಕಣ್ಣಾಗಿ ಉಳ್ಳ ಅಂದರೆ ಕಣ್ಣಿಲ್ಲದ್ದರಿಂದ ವಾಸನೆಯಿಂದಲೆ ಎಲ್ಲವನ್ನೂ ತಿಳಿಯುತ್ತಿದ್ದ ಒಂದು ಹಿಂಸ್ರಮೃಗ ತೋಳವು ನೀರು ಕುಡಿಯುತ್ತಿದ್ದನ್ನು ಕಂಡ.

ಅದೃಷ್ಟಪೂರ್ವಮಪಿ ತತ್ತತ್ತ್ವಂ ತೇನ ಹತಂ ತದಾ ।
ಅಂಧೇ ಹತೇ ತತೋ ವ್ಯೋಮ್ನಃ ಪುಷ್ಪವರ್ಷಮವಾಪತತ್ ॥೪೯॥

ಅಂಥ ಒಂದು ತೋಳವನ್ನು ಅವನು ಹಿಂದೆ ಎಂದೂ ಕಂಡಿರಲಿಲ್ಲ. ಆದರೂ ಅದನ್ನು ಅವನು ಕೊಂದ. ಅಂಧವಾದ ಮೃಗ ಹೀಗೆ ಹತವಾದಾಗ ಆಕಾಶದಿಂದ ಹೂಮಳೆ ಸುರಿಯಿತು.

ಅಪ್ಸರೋಗೀತವಾದಿತ್ರೈರ್ನಾದಿತಂ ಚ ಮನೋರಮಮ್ ।
ವಿಮಾನಮಾಗಮತ್ ಸ್ವರ್ಗಾನ್ ಮೃಗವ್ಯಾಧನಿನೀಷಯಾ ॥೫೦॥

ಅಪ್ಸರೆಯರ ಗೀತ–ವಾದ್ಯಧ್ವನಿಯಿಂದ ತುಂಬಿದ ಮನೋಹರವಾದ ವಿಮಾನವು ಬೇಡನನ್ನು ಒಯ್ಯುವುದಕ್ಕಾಗಿ ಸ್ವರ್ಗದಿಂದ ಇಳಿದು ಬಂದಿತು.

ತದ್ಭೂತಂ ಸರ್ವಭೂತಾನಾಮಭಾವಾಯ ಕಿಲಾರ್ಜುನ ।
ತಪಸ್ತಪ್ತ್ವಾ ವರಂ ಪ್ರಾಪ್ತಂ ಕೃತಮಂಧಂ ಸ್ವಯಂಭುವಾ ॥೫೧॥

ಏಕೆಂದರೆ ಆ ಅಂಧಮೃಗ ತೋಳವು ಎಲ್ಲ ಪ್ರಾಣಿಗಳ ನಾಶಕ್ಕಾಗಿ ತಪಸ್ಸು ಮಾಡಿ ಬ್ರಹ್ಮನಿಂದ ವರ ಪಡೆದಿತ್ತು. ಬ್ರಹ್ಮ ಅದನ್ನು ಕುರುಡಾಗಿ ಮಾಡಿದ್ದ.

ತದ್ದತ್ತ್ವಾ ಸರ್ವಭೂತಾನಾಮಭಾವಕೃತನಿಶ್ಚಯಮ್ ।
ತತೋ ಬಲಾಕಃ ಸ್ವರಗಾದೇವಂ ಧರ್ಮಃ ಸುದುರ್ವಿದಃ ॥೫೨॥

ಎಲ್ಲ ಪ್ರಾಣಿಗಳ ನಾಶಮಾಡಲು ನಿಶ್ಚಯ ಮಾಡಿದ ಆ ರಾಕ್ಷಸ ಪ್ರಾಣಿಯನ್ನು ಕೊಂದು ಬಲಾಕನು ಸ್ವರ್ಗವನ್ನು ಪಡೆದ. ಏಕೆಂದರೆ ಅದು ಧರ್ಮವಾಯಿತು. ಅದು ಹಿಂಸೆಯಾದರೂ ಅದರಿಂದ ಲೋಕಕ್ಕೆ ಅಭ್ಯುದಯರೂಪವಾದ ಆಧಾರದ ಸಂಪಾದನೆಯಾಗಿತ್ತು. ಹೀಗೆ ಧರ್ಮ ಹೇಗೆ ಆಧಾರ ಸಂಪಾದನೆಯಿಂದ ಧರ್ಮವಾಗುತ್ತದೆ ಎಂಬುದು 'ಸುದುರ್ವಿದ' ತಿಳಿಯಲು ಬಲುಕಷ್ಟವಿದೆ.

ಕೌಶಿಕೋऽಭ್ಯವದ್ ವಿಪ್ರಸ್ತಪಸ್ವೀ ನ ಬಹುಶ್ರುತಃ ।
ನದೀನಾಂ ಸಂಗಮೇ ಗ್ರಾಮಾದದೂರೇ ಸ ಕಿಲಾವಸತ್ ॥೫೩॥

ಕೌಶಿಕವಿಪ್ರನು ತಪಸ್ವಿಯೇ ಆಗಿದ್ದರೂ ಧರ್ಮದ ಬಗ್ಗೆ ಹೆಚ್ಚು ತಿಳಿದಿರಲಿಲ್ಲ. ಗ್ರಾಮದಿಂದ ಹೆಚ್ಚು ದೂರವಲ್ಲದ ನದೀ ಸಂಗಮ ಪ್ರದೇಶದಲ್ಲಿ ವಾಸಮಾಡಿದ್ದ.

ಸತ್ಯಂ ಮಯಾ ಸದಾ ವಾಚ್ಯಮಿತಿ ತಸ್ಯಾಭವದ್ ವ್ರತಮ್ ।
ಸತ್ಯವಾದೀತಿ ವಿಖ್ಯಾತಃ ಸ ತದಾಸೀದ್ಧನಂಜಯ ॥೫೪॥

'ನಾನು ಸದಾ ಸತ್ಯವನ್ನೇ ಹೇಳಬೇಕು' ಎಂದು ಅವನ ವ್ರತವಿದ್ದಿತು. ಅದರಿಂದ, ಅರ್ಜುನ, ಅವನು 'ಸತ್ಯವಾದಿ' ಎಂದು ವಿಖ್ಯಾತನಾಗಿದ್ದ.

ಅಥ ದಸ್ಯುಭಯಾತ್ ಕೇಚಿತ್ತದಾ ತದ್ವನಮಾವಿಶನ್ ।
ತತ್ರಾಪಿ ದಸ್ಯವಃ ಕ್ರೂರಾ ವ್ಯಮಾರ್ಗಂತ ಪ್ರಯತ್ನತಃ ॥೫೫॥

ದರೋಡೆಕೋರರ ಭಯದಿಂದ ಕೆಲವರು ಅವನ ತಪೋವನವನ್ನು ಹೊಕ್ಕು ಅಡಗಿ ಕುಳಿತರು. ಕ್ರೂರರಾದ ದರೋಡೆಕೋರರು ಅಲ್ಲಿಯೂ ಬಂದು ಅವರನ್ನು ಪ್ರಯತ್ನಪೂರ್ವಕವಾಗಿ ಹುಡುಕಿದರು.

ಅಥ ಕೌಶಿಕಮಭ್ಯೇತ್ಯ ಪ್ರಾಹುಸ್ತಂ ಸತ್ಯವಾದಿನಮ್ ।
ಕತರೇಣ ಪಥಾ ಯಾತಾ ಭಗವನ್ ಬಹವೋ ಜನಾಃ ।
ಸತ್ಯೇನ ಪೃಷ್ಟಃ ಪ್ರಬ್ರೂಹಿ ಯದಿ ತಾನ್ವೇತ್ಥ ಶಂಸ ನಃ ॥೫೬॥

ಕೊನೆಗೆ ಸತ್ಯವಾದಿಯಾದ ಕೌಶಿಕನ ಇದಿರಿಗೆ ಬಂದು ಕೇಳಿದರು, 'ಪೂಜ್ಯನೆ, ಬಹುಜನರು ಇಲ್ಲಿಗೆ ಬಂದು ಯಾವ ದಾರಿಯಿಂದ ಹೋದರು? ನಾವು ಕೇಳುತ್ತೇವೆ, ನೀನು ತಿಳಿದಿದ್ದರೆ ಸತ್ಯವಾಗಿ ಹೇಳು.'

ಸ ಪೃಷ್ಟಃ ಕೌಶಿಕಃ ಸತ್ಯಂ ವಚನಂ ತಾನುವಾಚ ಹ ।
ಬಹುವೃಕ್ಷಲತಾಗುಲ್ಮಮೇತದ್ ವನಮುಪಾಶ್ರಿತಾಃ ॥೫೭॥

ಹೀಗೆ ಕೇಳಿದಾಗ ಆ ಕೌಶಿಕನು ಅವರಿಗೆ ಸತ್ಯವನ್ನೇ ನುಡಿದ: 'ಬಹುವೃಕ್ಷ ಲತೆ ಪೊದೆಗಳುಳ್ಳ ಈ ವನದ ದಾರಿಯನ್ನು ಹಿಡಿದು ಹೋದರು' ಎಂದು.

ಇತಿ ತಾನ್ ಖ್ಯಾಪಯಾಮಾಸ ಸ ತೇಭ್ಯಃ ಪಾರ್ಥ ಕೌಶಿಕಃ ।
ತತಸ್ತೇ ತಾನ್ ಸಮಾಸಾದ್ಯ ಕ್ರೂರಾ ಜಘ್ನುರಿತಿ ಶ್ರುತಿಃ ॥೫೮॥

ಅರ್ಜುನ, ಆ ಕೌಶಿಕನು ಅವರಿಗೆ ಹೀಗೇ ತಿಳಿಸಿದ. ಅದರಿಂದ ಕ್ರೂರರಾದ ಆ ದರೋಡೆಕೋರರು ಅವರನ್ನು ಕಂಡು ಹಿಡಿದು ಕೊಂದರು ಎಂದು ಕೇಳಿದ್ದೇವೆ.

ತೇನಾಧರ್ಮೇಣ ಮಹತಾ ಸುದುರುಕ್ತೇನ ಕೌಶಿಕಃ ।
ಗತಃ ಸ ಕಷ್ಟಂ ನರಕಂ ಸೂಕ್ಷ್ಮಧರ್ಮೇಷ್ವಕೋವಿದಃ ॥೫೯॥

ಬಲು ಕೆಟ್ಟದಾದ ಈ ಸತ್ಯವಚನದ ಪಾಪದಿಂದ ಸೂಕ್ಷ್ಮಧರ್ಮದ ಸ್ವರೂಪ ದಲ್ಲಿ ಹೆಚ್ಚು ತಿಳಿಯದಿದ್ದ ಆ ಕೌಶಿಕನು ದುಃಖಕರವಾದ ನರಕವನ್ನು ಹೊಂದಿದ.

ಅಪ್ರಭೂತಶ್ರುತೋ ಮೂಢೋ ಧರ್ಮಾಣಾಮವಿಭಾಗವಿತ್ ॥೬೦॥

ಆ ಕೌಶಿಕನು ಹೆಚ್ಚಿನ ಉಪದೇಶಗಳನ್ನು ಶ್ರವಣ ಮಾಡಿಲ್ಲದ್ದರಿಂದ ಧರ್ಮಗಳ ಸೂಕ್ಷ್ಮವಿಭಾಗಗಳನ್ನು ತಿಳಿಯದ ಮೂಢನಾಗಿದ್ದ.

ವೃದ್ಧಾನಪೃಷ್ಟ್ವಾ ಸಂದೇಹಂ ಅಂಧಃ ಶ್ವಭ್ರಮಿವರ್ಚ್ಛತಿ ।
ತತ್ರ ತಲ್ಲಕ್ಷಣಾದೇಶಃ ಕಶ್ಚಿದೇವ ಭವಿಷ್ಯತಿ ॥೬೧॥

ಜ್ಞಾನಿಗಳಲ್ಲಿ ಸಂದೇಹವನ್ನು ಕೇಳದಿದ್ದರೆ ಹೀಗೇ, ಅಂಧನು ಹಾಳು ಬಾವಿಗೆ ಬೀಳುವಂತೇ, ನರಕಗಾಮಿಯಾಗುತ್ತಾನೆ. ಈ ಸಂದೇಹ ಪರಿಹಾರಕ್ಕೆ ಸೂಕ್ಷ್ಮಧರ್ಮ ಗಳ ಲಕ್ಷಣಗಳನ್ನು ಉಪದೇಶಿಸುವವನು ವಿರಳ. ಯಾವನೋ ಒಬ್ಬನು ಮಾತ್ರ ಸಿಗುತ್ತಾನೆ.

ದುಷ್ಕರಂ ಪರಮಜ್ಞಾನಂ ತರ್ಕೇಣಾತ್ರ ವ್ಯವಸ್ಯತಿ ।
ಶ್ರುತಿರ್ಧರ್ಮ ಇತಿ ಹ್ಯೇಕೇ ವದಂತಿ ಬಹವೋ ಜನಾಃ ॥೬೨॥

ಉತ್ತಮಜ್ಞಾನ ದುಷ್ಕರ. ಅದನ್ನು ಶ್ರುತಿವಿಚಾರದಿಂದ ತಿಳಿಯಬೇಕು. ಶ್ರುತಿಯು ಹೇಳಿದ್ದೇ ಧರ್ಮ ಎಂದು ಲೋಕದಲ್ಲಿ ಬಹುಜನರು ಹೇಳುತ್ತಾರೆ.

ಧಾರಣಾದ್ಧರ್ಮಮಿತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ ।
ಯಃ ಸ್ಯಾದ್ಧಾರಣಸಂಯುಕ್ತಃ ಸ ಧರ್ಮ ಇತಿ ನಿಶ್ಚಯಃ ।
ತತ್ತೇ ತ್ವನ ತತ್ ಪ್ರಸೂಯಾಮಿ ನಹಿ ಸರ್ವಂ ವಿಧೀಯತೇ ॥೬೩॥

ಆದರೆ ನಿನಗೆ ನಿಜವಾದ ಧರ್ಮಸ್ವರೂಪದ ರಹಸ್ಯಜ್ಞಾನವನ್ನು 'ಪ್ರಸೂಯಾಮಿ' ನಾನು ಸರಿಯಾಗಿ ಉಂಟುಮಾಡಿಕೊಡುತ್ತೇನೆ. ಒಂದು ವಿಧಿವಾಕ್ಯ ದಲ್ಲಿಯೆ ಧರ್ಮದ ಎಲ್ಲ ಸೂಕ್ಷ್ಮರಹಸ್ಯವು ವಿಹಿತವಾಗುವುದಿಲ್ಲ. ವೇದವಿಚಾರ ನಿಪುಣರು ಅದನ್ನು ಹೇಳಬೇಕಾಗುತ್ತದೆ. ಧರ್ಮ ಎಂದರೆ ಲೋಕವನ್ನು ಧಾರಣಮಾಡುವ ಕರ್ಮ. ಧರ್ಮವು ಪ್ರಾಣಿಗಳಿಗೆ ಸ್ವರ್ಗಾದಿ ವಿಷಯಸುಖ, ಮೋಕ್ಷಸುಖಗಳನ್ನು ಕೊಟ್ಟು ಧಾರಣ ಮಾಡುತ್ತದೆ. ಅದರಿಂದ ಸಜ್ಜನರ

ಧಾರಣರೂಪ ಪ್ರಯೋಜನಕ್ಕಾಗಿ, ಅದರಿಂದ ಯುಕ್ತವಾದುದೇ ಧರ್ಮ ಎಂದು ನಿಶ್ಚಯವಾಗಿ ಹೇಳಬಹುದು. ದುರ್ಜನರ ಪ್ರಯೋಜನಕ್ಕಲ್ಲ.

ಯೇಽನ್ಯಾಯೇನ ಜಿಹೀರ್ಷಂತೋ ಧನಮಿಚ್ಛಂತಿ ಕಸ್ಯಚಿತ್ ।
ಅಕೂಜನೇನ ಚೇನ್ಮೋಕ್ಷೋ ನಾತ್ರ ಕೂಜೇತ್ ಕಥಂಚನ ॥೬೪॥

ಅನ್ಯಾಯದಿಂದ ದುರ್ಜನರು ಕೆಲವೊಮ್ಮೆ ಹಣವನ್ನು ಬಯಸಿ, 'ನಿನ್ನಲ್ಲಿ ಹಣವಿದ್ದರೆ ಹೇಳು' ಎಂದು ಹೇಳಬಹುದು. ಆಗ ಸುಮ್ಮನಿದ್ದು 'ಇದೆ' ಎಂದು ಹೇಳದಿದ್ದರೆ ಆಪತ್ತಿನಿಂದ ಬಿಡುಗಡೆ ಸಾಧ್ಯ ಎನ್ನುವುದಾದರೆ ಆಗ 'ಇದೆ' ಎಂದು ಸರ್ವಥಾ ಹೇಳಬಾರದು.

ಅವಶ್ಯಂ ಕೂಜಿತವ್ಯಂ ವಾ ಶಂಕೇರನ್ ವಾಪ್ಯಕೂಜತಃ ।
ಶ್ರೇಯಸ್ತತ್ರಾನೃತಂ ವಕ್ತುಂ ಸತ್ಯಾದಿತಿ ವಿನಿಶ್ಚಿತಮ್ ॥೬೫॥

ಇಲ್ಲವೆಂದಾಗಲಿ, ಇದೆ ಎಂದಾಗಲಿ ಏನೂ ಹೇಳದಿರಲಾಗದು ಅಥವಾ ಹೇಳದಿದ್ದರೆ ಅವರು ನಮ್ಮ ಮೇಲೆ ಅನುಮಾನಪಡಬಹುದು. ಅದರಿಂದ ಅವಶ್ಯ ಏನಾದರೂ ಹೇಳಬೇಕಾಗುತ್ತದೆ ಎಂದರೆ, ಆಗ ಸತ್ಯವನ್ನು ಹೇಳುವುದಕ್ಕಿಂತ ಸುಳ್ಳನ್ನು ಹೇಳುವುದೇ ಶ್ರೇಯಸ್ಕರ.

ಯಃ ಕಾರ್ಯೇಭ್ಯೋ ವ್ರತಂ ಕೃತ್ವಾ ಕರ್ಮಣಾ ನೋಪಪಾದಯೇತ್ ।
ನ ತತ್ಫಲವಾಪ್ನೋತಿ ಏವಮಾಹುರ್ಮನೀಷಿಣಃ ॥೬೬॥

ಫಲಗಳಿಗಾಗಿ ವ್ರತಸಂಕಲ್ಪ ಕೈಕೊಂಡವನು ಅದನ್ನು ಕಾರ್ಯರೂಪಕ್ಕೆ ತಾರದಿದ್ದರೆ ಅದರ ಫಲವನ್ನು ಅವನು ಹೊಂದಲಾರ. ಹೀಗೆ ಹೇಳುತ್ತಾರೆ, ಬಲ್ಲವರು. ಹೀಗಾಗಿ, ಸತ್ಯದಿಂದ ನಿನ್ನ ಪ್ರತಿಜ್ಞಾಪಾಲನ ವ್ರತ ಪೂರ್ತಿಯಾಗದಿದ್ದಲ್ಲಿ ಸುಳ್ಳಿನಿಂದಲೇ ಪೂರ್ತಿ ಮಾಡಬೇಕಾಗುತ್ತದೆ. ಅದರಿಂದ ದೋಷವಿಲ್ಲ. ನೀನು ಸುಳ್ಳನೆನಿಸುವುದಿಲ್ಲ.

ಪ್ರಾಣಾತ್ಯಯೇ ವಿವಾಹೇ ವಾ ಸರ್ವಜ್ಞಾತಿಧನಕ್ಷಯೇ ।
ನರ್ಮಣ್ಯಭಿಪ್ರವೃತ್ತೇ ವಾ ಪ್ರವಕ್ತವ್ಯಂ ಮೃಷಾ ಭವೇತ್ ॥೬೭॥

ಅಧರ್ಮಂ ನಾತ್ರ ಪಶ್ಯಂತಿ ಧರ್ಮತತ್ತ್ವಾರ್ಥದರ್ಶಿನಃ ॥೬೮॥

ಪ್ರಾಣಾಪಾಯ, ವಿವಾಹ, ಸರ್ವ ಬಂಧು–ಧನವಿನಾಶಗಳು ಉಂಟಾಗುವ ಪರಿಸ್ಥಿತಿಗಳಲ್ಲಿಯಾಗಲಿ, ವಿನೋದ ಪ್ರಸಂಗದಲ್ಲಾಗಲಿ ಸುಳ್ಳು ಹೇಳಬಹುದು. ಅದರಲ್ಲಿ 'ಪಾಪ ಇದೆ' ಎಂದು ಧರ್ಮದ ಯಥಾರ್ಥಸ್ವರೂಪ ಬಲ್ಲವರು ತಿಳಿಯುವುದಿಲ್ಲ.

ಯತ್ ಸ್ತೇನೈಃ ಸಹ ಸಂಬಂಧಾನ್ಮುಚ್ಯತೇ ಶಪಥೈರಪಿ ।
ಶ್ರೇಯಸ್ತತ್ರಾನೃತಂ ವಕ್ತುಂ ತತ್ಸತ್ಯಮವಿಚಾರಿತಮ್ ॥೬೯॥

ದರೋಡೆಕೋರರೊಡನೆ ವ್ಯವಹರಿಸುವಾಗ ಶಪಥ ಮಾಡಿ ಹೇಳಿದರೇ ಆಪತ್ತಿನಿಂದ ಬಿಡುಗಡೆ ಎನ್ನುವ ಪ್ರಸಂಗ ಬಂದರೆ ಅಥವಾ ಸುಳ್ಳು ಶಪಥಗಳಿಂದಲೂ ಬಿಡುಗಡೆ ಶಕ್ಯವಿರುವುದಾದರೆ ಆಗ ಸುಳ್ಳು ಹೇಳುವುದೇ ಶ್ರೇಯಸ್ಕರ. ಆ ಸುಳ್ಳೇ ಸತ್ಯವಾಗುವುದು, ಸಂಶಯವಿಲ್ಲ.

ನ ಚ ತೇಭ್ಯೋ ಧನಂ ದೇಯಂ ಶಕ್ಯೇ ಸತಿ ಕಥಂಚನ ।
ಪಾಪೇಭ್ಯೋ ಹಿ ಧನಂ ದತ್ತಂ ದಾತಾರಮಪಿ ಪೀಡಯೇತ್ ॥೭೦॥

ತಸ್ಮಾದ್ಧರ್ಮಾರ್ಥಮನೃತಮುಕ್ತ್ವಾನಾನೃತವಾಗ್ಭವೇತ್ ॥೭೧॥

ಸತ್ಯ ಹೇಳಿ ನಮ್ಮಲ್ಲಿರುವ ಹಣವನ್ನೆಲ್ಲ ಅವರಿಗೆ ದಾನ ಮಾಡಬಾರದು. ಶಕ್ಯವಿದ್ದರೆ ಸರ್ವಥಾ ಕೊಡದೇ ಇರಬೇಕು. ಪಾಪಿಗಳಿಗೆ ಧನದಾನ ಮಾಡಿದರೆ ಆ ಧನವು ದಾತೃವಿಗೇ ಅನಿಷ್ಟ ಪೀಡೆ ಉಂಟುಮಾಡುತ್ತದೆ. ಅದರಿಂದ ಪುಣ್ಯಕ್ಕಾಗಿ ಸುಳ್ಳು ಹೇಳಿದರೆ ಅವನು ಸುಳ್ಳನೆನಿಸುವುದಿಲ್ಲ.

ಏಷ ತೇ ಲಕ್ಷಣೋದ್ದೇಶಃ ಸಮುದ್ದಿಷ್ಟೋ ಯಥಾವಿಧಿ ॥೭೨॥
ಯಥಾಧರ್ಮಂ ಯಥಾಬುದ್ಧಿ ಮಯಾ ಪಾರ್ಥ ಹಿತಾರ್ಥಿನಾ ।
ಏತಚ್ಛ್ರುತ್ವಾ ಬ್ರೂಹಿ ಪಾರ್ಥ ಯದಿ ವಧ್ಯೋ ಯುಧಿಷ್ಠಿರಃ ॥೭೩॥

ಇದು ಸತ್ಯಲಕ್ಷಣದ ಉಪದೇಶ. ವಿಧ್ಯನುಸಾರವಾಗಿ ಇದನ್ನು ನಿನಗೆ ಹೇಳಿದ್ದೇನೆ. ಸತ್ಯವು ಧರ್ಮವಾಗುವಂತೆ ಹೇಳಿದ್ದೇನೆ. ಅದು ನಿನ್ನ ಬುದ್ಧಿಗೆ ತಿಳಿಯುವಂತೆ ನಿನ್ನ ಹಿತಾರ್ಥಿಯಾಗಿ ನಿನಗೆ ಹೇಳಿದ್ದೇನೆ. ಇದನ್ನು ಕೇಳಿದ ಮೇಲೂ, ಅರ್ಜುನ, ಹೇಳು, ಯುಧಿಷ್ಠಿರನು ಈಗ ನಿನಗೆ ವಧ್ಯನೆ?

ಅರ್ಜುನಃ

ಯಥಾ ಬ್ರೂಯಾನ್ಮಹಾಪ್ರಾಜ್ಞೋ ಯಥಾ ಬ್ರೂಯಾನ್ಮಹಾಮತಿಃ ।
ಹಿತಂ ಚೈವ ಯಥಾಸ್ಮಾಕಂ ತಥೈತದ್ವಚನಂ ತವ ॥೭೪॥

ಅರ್ಜುನ ನುಡಿದ— ಮಹಾಪ್ರಾಜ್ಞನು ನುಡಿಯುವಂತೆ, ಒಳ್ಳೆ ಬುದ್ಧಿವಂತನು ಆಡುವಂತೆ ನಮಗೆ ಹಿತಕರವಾಗುವಂತೇ ಇದೆ ಈಗ ನೀನು ಹೇಳಿದ ಮಾತು.

ಭವಾನ್ಮಾತೃಸಮೋಽಸ್ಮಾಕಂ ತಥಾ ಪಿತೃಸಮೋಽಪಿ ಚ ।
ಗತಿಶ್ಚ ಪರಮಾ ಕೃಷ್ಣ ತ್ವಮೇವ ಚ ಪರಾಯಣಮ್ ॥೭೫॥

ನೀನು ನಮಗೆ ತಾಯಿಗೆ ಸಮಾನ, ತಂದೆಗೆ ಸಮಾನ, ನೀನೆ ನಮಗೆ ಪರಗತಿ ತೋರುವವನು. ನೀನೇ ನಮಗೆ ಕೊನೆಯ ಆಶ್ರಯ.

ನ ಹಿ ತೇ ತ್ರಿಷು ಲೋಕೇಷು ವಿದ್ಯತೇಽವಿದಿತಂ ಕ್ವಚಿತ್ ।
ತಸ್ಮಾದ್ಭವಾನ್ ಪರಂ ಧರ್ಮಂ ವೇದ ಸರ್ವಂ ಯಥಾತಥಮ್ ॥೭೬॥

ನಿನಗೆ ತಿಳಿಯದಿರುವುದು ಮೂಲೋಕದಲ್ಲಿ ಎಲ್ಲಿಯೂ ಇಲ್ಲ. ಪರಧರ್ಮ ಎಲ್ಲವನ್ನೂ ನೀನು ಯಥಾವತ್ತಾಗಿ ತಿಳಿದಿರುವೆ.

ಅವಧ್ಯಂ ಪಾಂಡವಂ ಮನ್ಯೇ ಧರ್ಮರಾಜಂ ಯುಧಿಷ್ಠಿರಮ್ ।
ತಸ್ಮಿನ್ ಸಮಯಸಂಯೋಗೇ ಬ್ರೂಹಿ ಕಿಂಚಿದನುಗ್ರಹಮ್ ॥೭೭॥

ಧರ್ಮರಾಜಯುಧಿಷ್ಠಿರನನ್ನು ಅವಧ್ಯನೆಂದೇ ನಾನೀಗ ತಿಳಿದೆ. ಆದರೆ ಈ ಅಹಿಂಸೆಯಲ್ಲಿ ನನ್ನ ಪ್ರತಿಜ್ಞಾಪಾಲನೆ ತಳಕು ಹಾಕಿಕೊಂಡಿದೆ. ಅದರ ವಿಷಯದಲ್ಲಿ ನೀನು ಸ್ವಲ್ಪ ಅನುಗ್ರಹ ಮಾಡಿ ಹೇಳು.

ಇದಂ ಚಾಪರಮತ್ರೈವ ಶೃಣು ಕೃತ್ಸ್ನಂ ವಿವಕ್ಷಿತಮ್ ॥೭೮॥

ಈ ಪ್ರತಿಜ್ಞೆಯ ವಿಷಯದಲ್ಲಿ ನಾನು ನಿನಗೆ ಹೇಳಬೇಕಾಗಿರುವುದನ್ನು ಪೂರ್ತಿ ಹೇಳುತ್ತೇನೆ, ಕೇಳು.

ಜಾನಾಸಿ ದಾಶಾರ್ಹ ಮಮ ವ್ರತಂ ತ್ವಂ
ಯೋ ಮಾಂ ಬ್ರೂಯಾತ್ಕಶ್ಚನ ಮಾನುಷೇಷು ।
ಅನ್ಯಸ್ಮೈ ತ್ವಂ ಗಾಂಡಿವಂ ದೇಹಿ ಪಾರ್ಥ
ಯಸ್ತ್ವತ್ತೋಽಸ್ತ್ರೈರ್ವೀರ್ಯತೋ ವಾ ವಿಶಿಷ್ಟಃ ॥೭೯॥

ಹನ್ಯಾಮಹಂ ಕೇಶವ ತಂ ಪ್ರಸಹ್ಯ
ಭೀಮೋ ಹನ್ಯಾತ್ ತೂಬರಕೇತಿ ಚೋಕ್ತಃ ।
ತನ್ಮೇ ರಾಜಾ ಪ್ರೋಕ್ತವಾಂಸ್ತೇ ಸಮಕ್ಷಂ
ಧನುರ್ದೇಹೀತ್ಯಸಕೃದ್ ವೃಷ್ಣಿಸಿಂಹ ॥೮೦॥

ಕೃಷ್ಣ ನನ್ನ ವ್ರತ ಏನೆಂಬುದು ನಿನಗೆ ತಿಳಿದೇ ಇದೆ. ಮಾನವರಲ್ಲಿ ಯಾರೇ ಆಗಲಿ, 'ಅರ್ಜುನ, ನಿನಗಿಂತ ಬೇರೆಯಾಗಿ ಅಸ್ತ್ರವಿದ್ಯೆಯಲ್ಲಾಗಲಿ ಪರಾಕ್ರಮದಲ್ಲಾಗಲಿ ಯಾವನು ಹೆಚ್ಚೋ ಅವನಿಗೇ ನಿನ್ನ ಈ ಗಾಂಡೀವವನ್ನು ಕೊಡು' ಎಂದು ಹೇಳಿದರೆ, ಕೃಷ್ಣ ನಾನು ಬಲಾತ್ಕಾರವಾಗಿ ಅವನನ್ನು ಕೊಲ್ಲುವೆನು ಎಂದು ಗುರು ದ್ರೋಣರ ಮುಂದೆ ರಹಸ್ಯವಾಗಿ ವ್ರತಸ್ವೀಕಾರ ಮಾಡಿದ್ದೆ ಮತ್ತು ಭೀಮನೂ ಕೂಡ, ಅವನನ್ನು ಕುರುಚಲು ಗಡ್ಡದವನೆಂದು ಯಾರಾದರೂ ಹೇಳಿದರೆ, ಅವನನ್ನು ಕೊಲ್ಲುವ ವ್ರತ ಸ್ವೀಕರಿಸಿದ್ದಾನೆ. ರಾಜಾಯುಧಿಷ್ಠಿರನು ನಿನ್ನ ಸಮಕ್ಷಮದಲ್ಲಿಯೇ ನನಗೆ 'ಧನುಸ್ಸನ್ನು ಬೇರೆಯವರಿಗೆ ಕೊಡೆಂದು' ಅನೇಕ ಬಾರಿ ಹೇಳಿದ್ದಾನೆ.

ಧನುರ್ವಿದ್ಯೆಯ ಪ್ರಥಮ ಆಚಾರ್ಯನಾದ ಪರಶುರಾಮ, ಶಿಷ್ಯರಿಗೆ ಆದೇಶ ನೀಡಿದ್ದ: 'ನೀವು ನಿಮ್ಮ ಶಿಷ್ಯರಿಗೆ ಅಭ್ಯಾಸ ಮಾಡಿಸುವಾಗ ಅವರಿಂದ ಒಂದು ರಹಸ್ಯವಾದ ವ್ರತಸ್ವೀಕಾರ ಮಾಡಿಸಬೇಕು. ಆ ವ್ರತ ಶತ್ರುವಧ ರೂಪವಾಗಿರಬೇಕು, ಲೋಕೋಪದ್ರವಕಾರಿಯಾಗದಿರಬೇಕು' ಎಂದು. ಆದರಿಂದ ಭೀಮ ದ್ರೋಣರ ಮುಂದೆ ತಾನು ಒಳ್ಳೆಯ ಗಡ್ಡ ಉಳ್ಳವನೇ ಒಳ್ಳೆಯ ಪೌರುಷ ಉಳ್ಳವನೇ ಆದರೂ 'ಹರಕುಗಡ್ಡದವನು' 'ತೂಬರ' ಷಂಡ ಎಂದು ತನ್ನನ್ನು ಶತ್ರು ಕರೆದರೆ ಅವನನ್ನು ತಾನು ಕೊಲ್ಲುವೆನೆಂದು, ಅರ್ಜುನ ತನ್ನ ಗಾಂಡೀವವನ್ನು 'ಅದು ನಿನಗೆ ಯೋಗ್ಯವಲ್ಲ, ಅನ್ಯರಿಗೆ ಕೊಡೆ'ಂದರೆ ಕೊಲ್ಲುವೆನೆಂದು ವ್ರತಸ್ವೀಕಾರ ಮಾಡಿದ್ದ.

ತಂ ಚೇದ್ಧನ್ಯಾಂ ಕೇಶವ ಜೀವಲೋಕೇ
ಸ್ಥಾತಾ ಕಾಲಂ ನಾಹಮಪ್ಯಲ್ಪಮಾತ್ರಮ್ ।
ಧ್ಯಾತ್ವಾ ನೂನಂ ಹ್ಯೇನಸಾ ಚಾಪಿ ಯುಕ್ತೋ
ವಧಂ ರಾಜ್ಞೋ ಭ್ರಷ್ಟವೀರ್ಯೋ ವಿಚೇತಾಃ ॥೮೧॥

ಆದರೆ ಕೃಷ್ಣ ನಾನು ಯುಧಿಷ್ಠಿರನನ್ನು ಕೊಂದರೆ, ಜೀವಲೋಕದಲ್ಲಿ ಅಲ್ಪಕಾಲ ಮಾತ್ರವೂ ಕೂಡ ಬದುಕಿರಲಾರೆ. ರಾಜವಧೆಯನ್ನು ಮಾಡಿದೆನೆಂದು ಸದಾ

ನೆನೆದು ಮತ್ತು ಪಾಪದಿಂದಲೂ ಯುಕ್ತನಾಗಿ ಶಕ್ತಿಯುಡುಗಿ ಬುದ್ಧಿವಿಕಲನೂ ಆಗುತ್ತೇನೆ.

ಸಾ ಚ ಪ್ರತಿಜ್ಞಾ ಮಮ ಲೋಕಸಿದ್ಧ್ಯೈ
ಭವೇತ್ಸತ್ಯಾ ಧರ್ಮಭೃತಾಂ ವರಿಷ್ಠ ।
ಯಥಾ ಜೀವೇತ್ ಪಾಂಡವೋಽಹಂ ಚ ಕೃಷ್ಣ
ತಥಾ ಬುದ್ಧಿಂ ದಾತುಮದ್ಯಾರ್ಹಸಿ ತ್ವಮ್ ॥೮೨॥

ಧರ್ಮಧಾರಕರಲ್ಲಿ ಶ್ರೇಷ್ಠನಾದ ಕೃಷ್ಣನೆ, ಪರಲೋಕದ ಸಿದ್ಧಿಗಾಗಿ ನನ್ನ ಆ ಪ್ರತಿಜ್ಞೆಯೂ ಸತ್ಯವಾಗಿ ಈಡೇರಬೇಕು ಮತ್ತು ಯುಧಿಷ್ಠಿರನೂ ನಾನೂ ಇಬ್ಬರೂ ಬದುಕಿರಬೇಕು, ಅಂಥ ಒಂದು ಉಪಾಯವನ್ನು ನೀನು ನನಗೆ ಉಪದೇಶಿಸಬೇಕು.

ವಾಸುದೇವಃ

ರಾಜಾ ಶ್ರಾಂತೋ ಜಗತೋ ವಿಕ್ಷತಶ್ಚ
ಕರ್ಣೇನ ಸಂಖ್ಯೇ ನಿಶಿತೈರ್ಬಾಣಸಂಘೈಃ ॥೮೩॥

ಕೃಷ್ಣ ನುಡಿದ— ಜಗತ್ತಿನ ರಾಜ ಯುಧಿಷ್ಠಿರ ಮೊದಲೇ ಆಯಾಸಗೊಂಡಿದ್ದ ಆದರೂ ಕರ್ಣನೊಡನೆ ರಣದಲ್ಲಿ ತೀಕ್ಷ್ಣವಾದ ಬಾಣಸಮೂಹಗಳಿಂದ ಮೈಯೆಲ್ಲ ಬಹಳ ಗಾಯ ಮಾಡಿಕೊಂಡ.

ಯಶ್ಚಾನಿಶಂ ಸೂತಪುತ್ರೇಣ ವೀರ
ಶರೈರ್ಭೃಶಂ ತಾಡಿತೋ ಯುಧ್ಯಮಾನಃ ।
ಅತಸ್ತ್ವಮೇತೇನ ಸರೋಷಮುಕ್ತೋ
ದುಃಖಾನ್ವಿತೇ ನೇದಮಯುಕ್ತರೂಪಮ್ ॥೮೪॥

ವೀರನೆ, ಎಡೆಬಿಡದೆ ಕರ್ಣನೊಂದಿಗೆ ಯುದ್ಧಮಾಡಿ ಬಾಣಗಳಿಂದ ಬಹಳ ಹೊಡೆಸಿಕೊಂಡ. ಆದರಿಂದ ದುಃಖಯುಕ್ತನಾದ ಅವನು ಕೋಪದಿಂದ ನಿನಗೆ ಅಯುಕ್ತವಾದ ಈ ಮಾತನ್ನಾಡಿದ್ದಾನೆ. ದುಃಖಯುಕ್ತನಾದ ವ್ಯಕ್ತಿಯಲ್ಲಿ ಇದೇನೂ ಅಯುಕ್ತವಲ್ಲ.

ಅಕೋಪಿತೋ ಹ್ಯೇಷ ಯದಿ ಸ್ಮ ಸಂಖೇ
ಕರ್ಣಂ ನ ಹನ್ಯಾದಿತಿ ಚಾಬ್ರವೀಚ್ಚ ।
ಜಾನಾತಿ ತಂ ಪಾಂಡವ ಏಷ ಚಾಪಿ
ಪಾಪಂ ಲೋಕೇ ಕರ್ಣಮಸಹ್ಯಮನ್ಯೈಃ ॥೮೫॥

ಮತ್ತು 'ಈ ಅರ್ಜುನನನ್ನು ನಾನು ಕೋಪಗೊಳಿಸದಿದ್ದರೆ ಈತ ಕರ್ಣನನ್ನು ಕೊಲ್ಲದಿರಬಹುದು' ಎಂಬ ಅಭಿಪ್ರಾಯದಿಂದಲೂ ನಿನ್ನ ಮುಂದೆ ಈ ಮಾತನ್ನಾಡಿದ್ದಾನೆ. ಮತ್ತು ಯುಧಿಷ್ಠಿರನು, ಪಾಪಿ ಕರ್ಣನು ಲೋಕದಲ್ಲಿ ಅನ್ಯರಿಂದ ಮಣಿಸಲಾಗದವನೆಂದೂ ತಿಳಿದಿದ್ದಾನೆ.

ತತಸ್ತ್ವಮುಕ್ತೋ ಭೃಶರೋಷಿತೇನ
ರಾಜ್ಞಾ ಸಮಕ್ಷಂ ಪರುಷಾಣಿ ಪಾರ್ಥ ॥೮೬॥

ತಸ್ಮಾತ್ ಪಾರ್ಥ ತ್ವಾಂ ಪರುಷಾಣ್ಯವೋಚತ್
ಕರ್ಣೋಽಬ್ರವೀದ್ ಯತ್ ಪುರಾ ದ್ಯೂತಕಾಲೇ ॥೮೭॥

ಅದರಿಂದಲೆ ಬಹಳ ಕೋಪಗೊಂಡ ಯುಧಿಷ್ಠಿರನು ನನ್ನೆದುರಿನಲ್ಲಿಯೆ ನಿನಗೆ ಕಟುನುಡಿಗಳನ್ನು ಆಡಿದ್ದಾನೆ. ಅದರಿಂದಲೇ ಕರ್ಣನೂ ಕೂಡ ಹಿಂದೆ ದ್ಯೂತಕಾಲದಲ್ಲಿ ನಿನಗೆ 'ಬಸವ ಬಸವ' 'ಏನೂ ಕೆಲಸಕ್ಕೆ ಬಾರದವ' ಎಂದು ಮುಂತಾಗಿ ಯಾವ ಕಟುನುಡಿಗಳನ್ನು ಆಡಿದ್ದನೋ ಅವುಗಳನ್ನೇ ಈಗ ಯುಧಿಷ್ಠಿರನೂ ನಿನಗೆ ಆಡಿದ್ದಾನೆ. 'ನಿನಗೇಕೆ ಈ ಗಾಂಡೀವ?' ಎಂದು.

ತಸ್ಮಿನ್ ಹತೇ ಕುರವೋ ನಿರ್ಜಿತಾಃ ಸ್ಯುಃ
ಏವಂಬುದ್ಧಿಃ ಪಾರ್ಥಿವೋ ಧರ್ಮಪುತ್ರಃ ॥೮೮॥

ಕರ್ಣನನ್ನು ನೀನು ಕೊಂದೆಯಾದರೆ ಕೌರವರನ್ನು ಸುಲಭವಾಗಿ ನಾವು ಗೆಲ್ಲಲು ಸಾಧ್ಯವಾಗುತ್ತದೆ, ಇದು ಧರ್ಮರಾಜನ ಅಭಿಪ್ರಾಯ.

ತತೋ ವಧಂ ನಾರ್ಹತಿ ಧರ್ಮಪುತ್ರ-
ಸ್ತ್ವಯಾ ಪ್ರತಿಜ್ಞಾರ್ಜುನ ಪಾಲನೀಯಾ ।
ಜೀವನ್ನಯಂ ಯೇನ ಮೃತೋ ಭವೇದ್ಧಿ
ತನ್ಮೇ ನಿಬೋಧೇಹ ತವಾನುರೂಪಮ್ ॥೮೯॥

ಅದರಿಂದ ಧರ್ಮರಾಜ ನಿನಗೆ ವಧಾರ್ಹನಲ್ಲ ಅರ್ಜುನ, ನೀನೀಗ ನಿನ್ನ ಪ್ರತಿಜ್ಞೆಯನ್ನು ಪಾಲನೆ ಮಾಡಬೇಕಾಗಿದೆ. ಹೇಗೆ ಎಂದರೆ ಧರ್ಮರಾಜ ಜೀವಂತನಿದ್ದೇ ಮೃತನೆನಿಸಬೇಕು. ಹಾಗೆ ಮಾಡು, ಹಾಗೆ ಮಾಡಿದರೆ ಅದು ನಿನಗೆ ಅನುರೂಪವೆನಿಸುವುದು. ಅದಾದರೂ ಹೇಗೆ ಸಾಧ್ಯ ಎಂದರೆ ಅದನ್ನು ನಾನು ಹೇಳುತ್ತೇನೆ, ಕೇಳು.

ಯದಾ ಮಾನಂ ಲಭತೇ ಮಾನನಾರ್ಹ-
ಸ್ತದಾ ಸ ವೈ ಜೀವತಿ ಜೀವಲೋಕೇ ॥೯೦॥

ಯದಾವಮಾನಂ ಲಭತೇ ಮಹಾಂತಂ
ತದಾ ಜೀವನ್ಮೃತ ಇತ್ಯುಚ್ಯತೇ ಸಃ ॥೯೧॥

ಸಮ್ಮಾನಕ್ಕೆ ಅರ್ಹನಾದವನು ಸಮ್ಮಾನ ಪಡೆಯುತ್ತಿದ್ದರೆ ಆಗ ಅವನು ಜೀವಲೋಕದಲ್ಲಿ ಜೀವಂತನೆನಿಸುತ್ತಾನೆ. ಮಹಾ ಅವಮಾನವನ್ನು ಪಡೆದರೆ ಅವನು ಜೀವಂತನಿದ್ದೂ ಮೃತ ಎಂದೇ ಎನಿಸುತ್ತಾನೆ.

ಸಮ್ಮಾನಿತಃ ಪಾರ್ಥಿವೋಽಯಂ ಸದೈವ
ತ್ವಯಾ ಸಭೀಮೇನ ತಥಾ ಯಮಾಭ್ಯಾಮ್ ।
ವೃದ್ಧೈಶ್ಚ ಲೋಕೇ ಪುರುಷಪ್ರವೀರೈ-
ಸ್ತಸ್ಯಾವಮಾನಂ ಕಲಯಾ ತ್ವಂ ಪ್ರಯುಂಕ್ಷ್ವ ॥೯೨॥

ಈ ಯುಧಿಷ್ಠಿರನು ನಿನ್ನಿಂದ, ಭೀಮನಿಂದ, ನಕುಲ-ಸಹದೇವರಿಂದ, ಲೋಕದಲ್ಲಿ ಗುರು-ಹಿರಿಯರಿಂದ ಮತ್ತು ಮಹಾವೀರಪುರುಷರಿಂದಲೂ ಸದಾ ಸಮ್ಮಾನಿತನಾಗಿರುವನು. ಅವನಿಗೆ ನೀನು ಈಗ 'ಕಲಯಾ' ಸ್ವಲ್ಪ ಅವಮಾನ ಮಾಡು.

ಹೆಚ್ಚು ಬೇಡ. ದೊಡ್ಡ ಧ್ವನಿಯಿಂದ ಎಲ್ಲರ ಎದುರಿಗೆ ಅವಮಾನ ಮಾಡಬೇಡ. ನಮ್ಮೊಳಗೇ ಏಕಾಂತದಲ್ಲಿ ಸಣ್ಣಧ್ವನಿಯಿಂದ ಅವಮಾನ ಮಾಡು.

ತ್ವಮಿತ್ಯತ್ರಭವಂತಂ ಹಿ ಬ್ರೂಹಿ ಪಾರ್ಥ ಯುಧಿಷ್ಠಿರಮ್ ।
ತ್ವಮಿತ್ಯುಕ್ತೋ ಹಿ ನಿಹತೋ ಗುರುರ್ಭವತಿ ಭಾರತ ॥೯೩॥

ಅಕೋಪಿತೋ ಹ್ಯೇಷ ಯದಿ ಸ್ಮ ಸಂಖ್ಯೇ
ಕರ್ಣಂ ನ ಹನ್ಯಾದಿತಿ ಚಾಬ್ರವೀಚ್ಚ ।
ಜಾನಾತಿ ತಂ ಪಾಂಡವ ಏಷ ಚಾಪಿ
ಪಾಪಂ ಲೋಕೇ ಕರ್ಣಮಸಹ್ಯಮನ್ಯೈಃ ॥೮೫॥

ಮತ್ತು 'ಈ ಅರ್ಜುನನನ್ನು ನಾನು ಕೋಪಗೊಳಿಸದಿದ್ದರೆ ಈತ ಕರ್ಣನನ್ನು ಕೊಲ್ಲದಿರಬಹುದು' ಎಂಬ ಅಭಿಪ್ರಾಯದಿಂದಲೂ ನಿನ್ನ ಮುಂದೆ ಈ ಮಾತನ್ನಾಡಿದ್ದಾನೆ. ಮತ್ತು ಯುಧಿಷ್ಠಿರನು, ಪಾಪಿ ಕರ್ಣನು ಲೋಕದಲ್ಲಿ ಅನ್ಯರಿಂದ ಮಣಿಸಲಾಗದವನೆಂದೂ ತಿಳಿದಿದ್ದಾನೆ.

ತತಸ್ತ್ವಮುಕ್ತೋ ಭೃಶರೋಷಿತೇನ
ರಾಜ್ಞಾ ಸಮಕ್ಷಂ ಪರುಷಾಣಿ ಪಾರ್ಥ ॥೮೬॥

ತಸ್ಮಾತ್ ಪಾರ್ಥ ತ್ವಾಂ ಪರುಷಾಣ್ಯವೋಚತ್
ಕರ್ಣೋಽಬ್ರವೀದ್ ಯತ್ ಪುರಾ ದ್ಯೂತಕಾಲೇ ॥೮೭॥

ಅದರಿಂದಲೆ ಬಹಳ ಕೋಪಗೊಂಡ ಯುಧಿಷ್ಠಿರನು ನನ್ನೆದುರಿನಲ್ಲಿಯೆ ನಿನಗೆ ಕಟುನುಡಿಗಳನ್ನು ಆಡಿದ್ದಾನೆ. ಅದರಿಂದಲೇ ಕರ್ಣನೂ ಕೂಡ ಹಿಂದೆ ದ್ಯೂತಕಾಲದಲ್ಲಿ ನಿನಗೆ 'ಬಸವ ಬಸವ' 'ಏನೂ ಕೆಲಸಕ್ಕೆ ಬಾರದವ' ಎಂದು ಮುಂತಾಗಿ ಯಾವ ಕಟುನುಡಿಗಳನ್ನು ಆಡಿದ್ದನೋ ಅವುಗಳನ್ನೇ ಈಗ ಯುಧಿಷ್ಠಿರನೂ ನಿನಗೆ ಆಡಿದ್ದಾನೆ. 'ನಿನಗೇಕೆ ಈ ಗಾಂಡೀವ?' ಎಂದು.

ತಸ್ಮಿನ್ ಹತೇ ಕುರವೋ ನಿರ್ಜಿತಾಃ ಸ್ಯುಃ
ಏವಂಬುದ್ಧಿಃ ಪಾರ್ಥಿವೋ ಧರ್ಮಪುತ್ರಃ ॥೮೮॥

ಕರ್ಣನನ್ನು ನೀನು ಕೊಂದೆಯಾದರೆ ಕೌರವರನ್ನು ಸುಲಭವಾಗಿ ನಾವು ಗೆಲ್ಲಲು ಸಾಧ್ಯವಾಗುತ್ತದೆ, ಇದು ಧರ್ಮರಾಜನ ಅಭಿಪ್ರಾಯ.

ತತೋ ವಧಂ ನಾರ್ಹತಿ ಧರ್ಮಪುತ್ರ-
ಸ್ತ್ವಯಾ ಪ್ರತಿಜ್ಞಾರ್ಜುನ ಪಾಲನೀಯಾ ।
ಜೀವನ್ನಯಂ ಯೇನ ಮೃತೋ ಭವೇದ್ಧಿ
ತನ್ಮೇ ನಿಬೋಧೇಹ ತವಾನುರೂಪಮ್ ॥೮೯॥

ಅದರಿಂದ ಧರ್ಮರಾಜ ನಿನಗೆ ವಧಾರ್ಹನಲ್ಲ. ಅರ್ಜುನ, ನೀನೀಗ ನಿನ್ನ ಪ್ರತಿಜ್ಞೆಯನ್ನು ಪಾಲನೆ ಮಾಡಬೇಕಾಗಿದೆ. ಹೇಗೆ ಎಂದರೆ ಧರ್ಮರಾಜ ಜೀವಂತನಿದ್ದೇ ಮೃತನೆನಿಸಬೇಕು. ಹಾಗೆ ಮಾಡು, ಹಾಗೆ ಮಾಡಿದರೆ ಅದು ನಿನಗೆ ಅನುರೂಪವೆನಿಸುವುದು. ಅದಾದರೂ ಹೇಗೆ ಸಾಧ್ಯ ಎಂದರೆ ಅದನ್ನು ನಾನು ಹೇಳುತ್ತೇನೆ, ಕೇಳು.

ಯದಾ ಮಾನಂ ಲಭತೇ ಮಾನನಾರ್ಹ-
ಸ್ತದಾ ಸ ವೈ ಜೀವತಿ ಜೀವಲೋಕೇ ॥೯೦॥

ಯದಾವಮಾನಂ ಲಭತೇ ಮಹಾಂತಂ
ತದಾ ಜೀವನ್ಮೃತ ಇತ್ಯುಚ್ಯತೇ ಸಃ ॥೯೧॥

ಸಮ್ಮಾನಕ್ಕೆ ಅರ್ಹನಾದವನು ಸಮ್ಮಾನ ಪಡೆಯುತ್ತಿದ್ದರೆ ಆಗ ಅವನು ಜೀವಲೋಕದಲ್ಲಿ ಜೀವಂತನೆನಿಸುತ್ತಾನೆ. ಮಹಾ ಅವಮಾನವನ್ನು ಪಡೆದರೆ ಅವನು ಜೀವಂತನಿದ್ದೂ ಮೃತ ಎಂದೇ ಎನಿಸುತ್ತಾನೆ.

ಸಮ್ಮಾನಿತಃ ಪಾರ್ಥಿವೋಽಯಂ ಸದೈವ
ತ್ವಯಾ ಸಭೀಮೇನ ತಥಾ ಯಮಾಭ್ಯಾಮ್ ।
ವೃದ್ಧೈಶ್ಚ ಲೋಕೇ ಪುರುಷಪ್ರವೀರೈ-
ಸ್ತಸ್ಯಾವಮಾನಂ ಕಲಯಾ ತ್ವಂ ಪ್ರಯುಂಕ್ಷ್ವ ॥೯೨॥

ಈ ಯುಧಿಷ್ಠಿರನು ನಿನ್ನಿಂದ, ಭೀಮನಿಂದ, ನಕುಲ-ಸಹದೇವರಿಂದ, ಲೋಕದಲ್ಲಿ ಗುರು-ಹಿರಿಯರಿಂದ ಮತ್ತು ಮಹಾವೀರಪುರುಷರಿಂದಲೂ ಸದಾ ಸಮ್ಮಾನಿತನಾಗಿರುವನು. ಅವನಿಗೆ ನೀನು ಈಗ 'ಕಲಯಾ' ಸ್ವಲ್ಪ ಅವಮಾನ ಮಾಡು.

ಹೆಚ್ಚು ಬೇಡ. ದೊಡ್ಡ ಧ್ವನಿಯಿಂದ ಎಲ್ಲರ ಎದುರಿಗೆ ಅವಮಾನ ಮಾಡಬೇಡ. ನಮ್ಮೊಳಗೇ ಏಕಾಂತದಲ್ಲಿ ಸಣ್ಣಧ್ವನಿಯಿಂದ ಅವಮಾನ ಮಾಡು.

ತ್ವಮಿತ್ಯತ್ರಭವಂತಂ ಹಿ ಬ್ರೂಹಿ ಪಾರ್ಥ ಯುಧಿಷ್ಠಿರಮ್ ।
ತ್ವಮಿತ್ಯುಕ್ತೋ ಹಿ ನಿಹತೋ ಗುರುರ್ಭವತಿ ಭಾರತ ॥೯೩॥

ಹೇಗೆ ಅವಮಾನ ಮಾಡಬೇಕೆಂದರೆ, ಯುಧಿಷ್ಠಿರನನ್ನು ಗೌರವದಿಂದ 'ಅತ್ರಭವಾನ್' ಪೂಜ್ಯರಾದ 'ತಾವು' ಎನ್ನದೆ, ತಿರಸ್ಕಾರದಿಂದ 'ತ್ವಂ' 'ನೀನು' ಎಂದು ಸಂಬೋಧಿಸಿ ನಿಂದೆ ಮಾಡು. ಕಿರಿಯನು 'ನೀನು' ಎಂದು ಸಂಬೋಧಿಸಿದರೆ ಹಿರಿಯನಿಗೆ ಅದೇ ವಧೆ ಎನಿಸುತ್ತದೆ.

ಏವಮಾಚರ ಕೌಂತೇಯ ಧರ್ಮರಾಜೇ ಯುಧಿಷ್ಠಿರೇ ।
ಅಧರ್ಮಯುಕ್ತಂ ತ್ವಂಯೋಗಂ ಕುರುಷ್ವೈವಂ ಕುರೂದ್ವಹ ॥೯॥

ಧರ್ಮರಾಜನಾದ ಯುಧಿಷ್ಠಿರನಲ್ಲಿ ಅರ್ಜುನ, ನೀನು ಹೀಗೇ ಮಾಡು. ಹೀಗೆ ಪಾಪಯುಕ್ತವಾದ 'ನೀನು' ಎಂಬ ಸಂಬೋಧನವನ್ನು ಮಾಡು.

ಆಥರ್ವಾಂಗಿರಸೀ ಹ್ಯೇಷಾ ಶ್ರುತೀನಾಮುತ್ತಮಾ ಶ್ರುತಿಃ ।
ಅವಿಚಾರ್ಯೈವ ಕಾರ್ಯೈಷಾ ಶ್ರೇಯಃಕಾಮೈರ್ನರೈಃ ಸದಾ ॥೯॥

ಅವಧೇನ ವಧಃ ಪ್ರೋಕ್ತೋ ಯದ್ಗುರುಸ್ತ್ವಮಿತಿ ಪ್ರಭುಃ ।
ತದ್ ಬ್ರೂಹಿ ತ್ವಂ ಯನ್ಮಯೋಕ್ತಂ ಧರ್ಮರಾಜಸ್ಯ ಧರ್ಮವಿತ್ ॥೯೬॥

'ಪ್ರಭುಃ ಗುರುಃ' ಪ್ರಭುವೆನಿಸಿರುವ ಹಿರಿಯನು 'ತ್ವಮಿತಿ ಪ್ರೋಕ್ತಃ' ನೀನೆಂದು ಸಂಬೋಧಿಸಲ್ಪಡುವುದೇನಿದೆಯೋ ಅದು 'ಅವಧೇನ ವಧಃ' ಪ್ರತ್ಯಕ್ಷ ವಧೆಯಿಲ್ಲದೇ ಮಾಡುವ ಒಂದು ಬಗೆಯ ವಧೆಯೆ'—ಈ ವಚನವು ಅಥರ್ವವೇದದಲ್ಲಿ ಬರುವ, ಶ್ರುತಿಗಳಲ್ಲಿ ಶ್ರೇಷ್ಠವಾದ ಶ್ರುತಿ. ಈ ಶ್ರುತಿ ಹೇಳಿದಂತೆ ಮಾಡುವುದು ಶ್ರೇಯಸ್ಕರ. ಶ್ರೇಯಸ್ಸನ್ನು ಬಯಸುವವರು ಏನೂ ಅನುಮಾನ ಮಾಡದೆ ಈ ಶ್ರುತಿಯನ್ನು ಸದಾ ಆಚರಣೆಯಲ್ಲಿ ತರಬೇಕು. ಅದರಿಂದ ಧರ್ಮಜ್ಞನಾದ ನೀನು ಧರ್ಮರಾಜನಿಗೆ ನಾನು ಹೇಳಿದ 'ತ್ವಂ' ಶಬ್ದ ಸಂಬೋಧನವನ್ನು ಉಚ್ಚರಿಸು.

ವಧೋ ಹ್ಯಯಂ ಪಾಂಡವ ಧರ್ಮರಾಜ್ಞ-
ಸ್ತತ್ತೋ ಯುಕ್ತೋ ವೇತ್ಸ್ಯತೇ ಚೈವಮೇಷಃ ।
ತತೋಽಸ್ಯ ಪಾದಾವಭಿವಾದ್ಯ ಪಶ್ಚಾತ್
ಸಮಂ ಬ್ರೂಯಾಃ ಸಾಂತ್ವಪೂರ್ವಂ ಚ ಪಾರ್ಥಮ್ ॥೯೭॥

ನಿನ್ನಿಂದ ಈ ಬಗೆಯ ಧರ್ಮರಾಜವಧವೇ ಯುಕ್ತವಾಗುತ್ತದೆ. ಧರ್ಮರಾಜನೂ ಅದನ್ನು ಹಾಗೇ ತಿಳಿಯುತ್ತಾನೆ. ಬಳಿಕ ಅವನ ಪಾದಗಳಿಗೆ ಎರಗಿ ಸಮಾಧಾನಪೂರ್ವಕವಾಗಿ ಸರಿಯಾದ ಸಂಬೋಧನವನ್ನೇ ಮಾಡು.

ಭ್ರಾತಾ ಪ್ರಾಜ್ಞಸ್ತವ ಕೋಪಂ ನ ಜಾತು
ಕುರ್ಯಾದ್ ರಾಜಾ ಕಂಚನ ಪಾಂಡವೇಯಃ ।
ಮುಕ್ತೋಽನೃತಾದ್ ಭ್ರಾತೃವಧಾಚ್ಚ ಪಾರ್ಥ
ಹೃಷ್ಟಃ ಕರ್ಣಂ ತ್ವಂ ಜಹಿ ಸೂತಪುತ್ರಮ್ ॥೯೮॥

ನಿನ್ನ ಸೋದರ ಇದೆಲ್ಲವನ್ನೂ ಚೆನ್ನಾಗಿ ತಿಳಿದವನು. ನಿನ್ನ ವಿಷಯದಲ್ಲಿ ಎಂದೂ ಏನೂ ಕೋಪ ಮಾಡಲಾರ. ಅದರಿಂದ ಸುಳ್ಳಿನಿಂದಲೂ ಸೋದರ ವಧೆಯಿಂದಲೂ ಮುಕ್ತನಾಗಿ ಉತ್ಸಾಹಗೊಂಡು ಸೂತಪುತ್ರನಾದ ಕರ್ಣನನ್ನು ನೀನು ವಧಿಸು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಧರ್ಮರಾಜಾರ್ಜುನಸಂವಾದೇ ಕೃಷ್ಣವಾಕ್ಯಂ ನಾಮ
ಷಟ್‌ಷಷ್ಟಿತಮೋಽಧ್ಯಾಯಃ ॥೬೬॥

❖

ಮಹಾಭಾರತತಾತ್ಪರ್ಯನಿರ್ಣಯ

ಇತ್ಯುಕ್ತೋ ಬಹುಧಾಽನಿಂದತ್ ಕ್ರೋಧಾದೇವಾರ್ಜುನೋ ನೃಪಮ್ ।
ತ್ವಂ ನೃಶಂಸಃ ಕೃತಘ್ನಶ್ಚ ನಿರ್ವೀರ್ಯಃ ಪರುಷಂವದಃ ॥ ೧೨೪ ॥

ತ್ವತ್ತಃ ಸುಖಿಂ ನಾಸ್ತಿ ಕಿಂಚಿನ್ನ ಮಾಂ ಗರ್ಹಿತುಮರ್ಹಸಿ ।
ಭೀಮೋ ಮಾಂ ಗರ್ಹಿತುಂ ಯೋಗ್ಯೋ ಯೋ ಹ್ಯಸ್ಮಾಕಂ ಸದಾ ಗತಿಃ
॥ ೧೨೫ ॥

ಯೋ ಯುದ್ಧ್ಯತೇ ಸರ್ವವೀರೈರದ್ಯಾಪಿ ತ್ವಂ ತು ನಿಂದಕಃ ।
ಇತ್ಯಾದ್ಯುಕ್ತ್ವಾತ್ಮನಾಶಾಯ ವಿಕೋಶಂ ಕೃತವಾನಸಿಮ್ ॥ ೧೨೬ ॥

ಕೃಷ್ಣ ಹೀಗೆ ಹೇಳಿದಾಗ ಅರ್ಜುನ ಧರ್ಮರಾಜನನ್ನು ಸಿಟ್ಟಿನಿಂದಲೆ ಬಹುವಾಗಿ

ನಿಂದಿಸಿದ. 'ನೀನು ಕ್ರೂರ, ಕೃತಘ್ನ ನಿರ್ವೀರ್ಯ. ಸದಾ ಕಟುನುಡಿಗಳನ್ನಾಡುವವ, ನಿನ್ನಿಂದ ನಮಗೆ ಏನೂ ಸುಖವಿಲ್ಲ. ನಿನಗೆ ನನ್ನನ್ನು ನಿಂದಿಸಲು ಅರ್ಹತೆ ಇಲ್ಲ. ಭೀಮನಾದರೋ ನನ್ನನ್ನು ನಿಂದಿಸಲು ಯೋಗ್ಯ. ಏಕೆಂದರೆ ನಾವು ಸದಾ ಅವನ ರಕ್ಷಣೆಯಲ್ಲಿರುತ್ತೇವೆ. ಭೀಮನು ಈಗಲೂ ಎಲ್ಲ ವೀರರೊಡನೆ ಯುದ್ಧ ಮಾಡುತ್ತಿದ್ದಾನೆ. ನೀನು ಮಾತ್ರ ಎಲ್ಲರನ್ನೂ ನಿಂದಿಸುವವ.' ಎಂದು ಮುಂತಾಗಿ ಹೇಳಿ ಅರ್ಜುನ ಆತ್ಮಹತ್ಯೆಗಾಗಿ ಖಡ್ಗವನ್ನು ಒರೆಯಿಂದ ತೆಗೆದ.

ಪುನಃ ಕೃಷ್ಣೇನ ಪೃಷ್ಟಃ ಸ ಸ್ವಭಿಪ್ರಾಯಮುವಾಚ ತಮ್ ।
ತಚ್ಛ್ರುತ್ವಾ ಗರ್ಹಯಿತ್ವೈನಂ ಪುನರಾಹ ಜನಾರ್ದನಃ ॥೧೨೭॥

ಇದೇನು, ಏಕೆ ಎಂದು ಪುನಃ ಶ್ರೀಕೃಷ್ಣ ಕೇಳಿದಾಗ, ಅರ್ಜುನ ತನ್ನ ಅಭಿಪ್ರಾಯವನ್ನು ಹೇಳಿದ. ಅದನ್ನು ಕೇಳಿ ಶ್ರೀಕೃಷ್ಣ ಅವನನ್ನು ಬೈದು ಪುನಃ ಹೇಳಿದ.

ಮತಿಪೂರ್ವಂ ದೇಹಹಾನಾತ್(ನಾಶಾತ್) ಪಾಪಂ ಮಹದವಾಪ್ಯತೇ ।
ಧರ್ಮಾರ್ಥಕಾಮಮೋಕ್ಷಾಣಾಂ ಸಾಧನಂ ದೇಹತೋಽಸ್ತಿ ಯತ್ ॥

ತಿಳಿದು ತಿಳಿದು ದೇಹನಾಶ ಮಾಡಿಕೊಳ್ಳುವುದರಿಂದ ಮಹಾಪಾಪ ಬರುತ್ತದೆ. ಏಕೆಂದರೆ ಧರ್ಮ ಅರ್ಥ ಕಾಮ ಮೋಕ್ಷಗಳ ಸಾಧನೆ ದೇಹದಿಂದಲೆ ಸಾಧ್ಯವಿರುತ್ತದೆ.

ಅತೋ ಮಾ ತ್ಯಜ ದೇಹಂ ತು ಕುರು ಚಾತ್ಮಪ್ರಶಂಸನಮ್ ।
ವಧೋ ಗುರೂಣಾಂ ತ್ವಂಕಾರಃ ಸ್ವಪ್ರಶಂಸೈವ ಚಾತ್ಮನಃ ॥೧೨೯॥

ಅದರಿಂದ ದೇಹವನ್ನು ಪರಿತ್ಯಜಿಸಬೇಡ. ದೇಹತ್ಯಾಗಕ್ಕೆ ಸಮವಾದ ಆತ್ಮಪ್ರಶಂಸೆ ಮಾಡಿಕೊಳ್ಳು. ಏಕೆಂದರೆ ನೀನು ಎನ್ನುತ್ತ ಅವಮಾನಿಸುವುದು ಹಿರಿಯರಿಗೆ ವಧೆ. ಆತ್ಮಪ್ರಶಂಸೆಯೇ ತನಗೆ ವಧೆ.

ಇತ್ಯುಕ್ತಃ ಸ ತ್ವಹಂಕಾರಾಚ್ಛಶಂಸ ಸ್ವಗುಣಾನಲಮ್ ॥೧೩೦॥

ಶ್ರೀಕೃಷ್ಣ ಹೀಗೆ ಹೇಳಿದಾಗ ಅರ್ಜುನ ಅಹಂಕಾರದಿಂದ ತನ್ನ ಗುಣಗಳನ್ನು ಬಹಳ ಹೊಗಳಿಕೊಂಡ.

ಗುರುನಿಂದಾऽऽತ್ಮಪೂಜಾ ಚ ನ ಧರ್ಮಾಯ ಭವೇತ್ ಕ್ವಚಿತ್ ।
ತಥಾಪ್ಯರ್ಜುನಹಾರ್ದಂ ತತ್ ಸಂಪ್ರಕಾಶ್ಯ ಜನಾರ್ದನಃ ॥೧೩೧॥

ತಸ್ಯ ಲಜ್ಜಾಂ ಸಮುತ್ಪಾದ್ಯ ನಾಶಯಿತ್ವಾ ಚ ತಂ ಮದಮ್ ।
ನಾಹಂ ವೇದ ಪರಂ ಧರ್ಮಂ ಕೃಷ್ಣ ಏವ ಗತಿರ್ಮಮ ॥೧೩೨॥

ಇತಿ ಭಾವಂ ಸಮುತ್ಪಾದ್ಯ ದೋಷಾನ್ ನಾಶಯಿತುಂ ಹರಿಃ ।
ಕಾರಯಾಮಾಸ ತತ್ ಸರ್ವಮರ್ಜುನೇನ ಜಗತ್ಪತಿಃ ॥೧೩೩॥

ಹಿರಿಯರ ನಿಂದೆಯಾಗಲಿ ಆತ್ಮಪ್ರಶಂಸೆಯಾಗಲಿ ಎಂದೂ ಧರ್ಮಕ್ಕೆ ಅನುಕೂಲವಲ್ಲ. ಆದರೂ ಅರ್ಜುನನ ಹೃದ್ಗತ ಪ್ರಕಟವಾಗುವಂತೆ ಮಾಡಿ ತನಗೆ ಧರ್ಮರಹಸ್ಯ ತಿಳಿದಿಲ್ಲವೆಂದು ಅವನಿಗೆ ಲಜ್ಜೆ ಉಂಟುಮಾಡುವ ಮೂಲಕ ತಾನು ಎಲ್ಲ ಧರ್ಮ ತಿಳಿದವನೆಂಬ ಅಹಂಕಾರವನ್ನು ಕಳೆದು 'ಮುಖ್ಯ ಧರ್ಮವನ್ನು ನಾನು ತಿಳಿದಿಲ್ಲ. ನನಗೆ ಕೃಷ್ಣನೆ ಮಾರ್ಗದರ್ಶಕ' ಎಂಬ ಭಾವವನ್ನು ಹುಟ್ಟಿಸಿ ದೋಷ ಗಳನ್ನು ಕಳೆಯಲು ಜಗದೊಡೆಯ ಜನಾರ್ದನ ಹರಿ ಎಲ್ಲವನ್ನೂ ಅರ್ಜುನನಿಂದ ಮಾಡಿಸಿದ.

ತತ ಏತದವಿಜ್ಞಾನಾತ್ ಕುಪಿತೋ ನೃಪತಿರ್ಭೃಶಮ್ ।
ಆಹಾಸ್ತು ರಾಜಾ ಭೀಮಸ್ತ್ವಂ ಯುವಾ ಮಾಂ ಜಹಿ ಚ ಸ್ವಯಮ್ ।
ವನಂ ವಾ ವಿಫಲೋ ಯಾಮೀತ್ಯುಕ್ತ್ವೋತ್ತಸ್ಥೌ ಸ್ವತಲ್ಪತಃ ॥೧೩೪॥

ಇದೆಲ್ಲದರ ಅರಿವೇ ಇಲ್ಲದೆ ಧರ್ಮರಾಜ ಬಹಳ ಕುಪಿತನಾದ. ಹೇಳಿದ, 'ಭೀಮನೆ ರಾಜನಾಗಲಿ, ನೀನು ಯುವರಾಜನಾಗು, ನನ್ನನ್ನು ನೀನು ಕೊಂದು ಬಿಡು ಅಥವಾ ಅಪ್ರಯೋಜಕನಾದ ನಾನು ಕಾಡಿಗೆ ಹೋಗುತ್ತೇನೆ.' ಹೀಗೆ ಹೇಳಿ ತನ್ನ ಹಾಸಿಗೆಯಿಂದ ಎದ್ದ.

ತಂ ವಾಸುದೇವಃ ಪ್ರತಿಗೃಹ್ಯ ಹೇತು-
ಮುಕ್ತ್ವಾ ಸರ್ವಂ ಶಮಯಾಮಾಸ ನೇತಾ ।
ಪಾರ್ಥಶ್ಚ ಭೂಪಸ್ಯ ಪಪಾತ ಪಾದಯೋಃ
ಕ್ಷಮಾಪಯನ್ ಸೋऽಪಿ ಸುಪ್ರೀತಿಮಾಪ ॥೧೩೫॥

ಶ್ರೀಕೃಷ್ಣ ಧರ್ಮರಾಜನನ್ನು ಹಿಡಿದು ಎಲ್ಲ ಕಾರಣವನ್ನೂ ತಿಳಿಸಿ ಸಮಾಧಾನಪಡಿಸಿದ. ಅರ್ಜುನನೂ ಧರ್ಮರಾಜನ ಕ್ಷಮೆ ಬೇಡುತ್ತ ಕಾಲುಗಳಿಗೆ ಬಿದ್ದ. ಧರ್ಮರಾಜ ಬಲು ಸಂತೋಷಗೊಂಡ.

ತೌ ಭ್ರಾತರೌ ವಾಸುದೇವಪ್ರಸಾದಾ-
ನ್ಮಹಾಪದೋ ಮುಕ್ತಮಾಪ್ಯಾತಿಹೃಷ್ಟೌ।
ಭಕ್ತ್ಯಾ ಸಮಸ್ತಾಧಿಪತಿಂ ಶಶಂಸತು-
ಸ್ತ್ವಯಾ ಸಮಃ ಕೋ ನು ಹರೇ ಹಿತೋ ನಃ ॥೧೩೬॥

ಆ ಇಬ್ಬರೂ ಸೋದರರೂ ಕೃಷ್ಣನ ಅನುಗ್ರಹದಿಂದ ದೊಡ್ಡ ಆಪತ್ತಿನಿಂದ ಬಿಡುಗಡೆ ಹೊಂದಿ ಬಹಳ ಸಂತುಷ್ಟರಾದರು. ಭಕ್ತಿಯಿಂದ ಸರ್ವೇಶ್ವರನನ್ನು ಕೊಂಡಾಡಿದರು, 'ಹರಿ! ನಮಗೆ ನಿನ್ನಂಥ ಹಿತಕಾರಿ ಇನ್ನು ಯಾವನಿದ್ದಾನೆ?' ಎಂದು.

❖❖❖

ಅರವತ್ತೇಳನೆಯ ಅಧ್ಯಾಯ

ಯುಧಿಷ್ಠಿರನನ್ನು ಮಾತಿನಿಂದ ಕೊಲ್ಲುತ್ತಾನೆ, ಅರ್ಜುನ. ಅದಕ್ಕೆ ಪ್ರಾಯಶ್ಚಿತ್ತವಾಗಿ ಆತ್ಮಶ್ಲಾಘನೆಯಿಂದ ತನ್ನನ್ನು ಕೊಂದುಕೊಳ್ಳುತ್ತಾನೆ. ಬೇಸತ್ತ ಯುಧಿಷ್ಠಿರನಲ್ಲಿ ಎಲ್ಲಕ್ಕೂ ಕ್ಷಮೆ ಬೇಡುತ್ತಾನೆ.

ಸಂಜಯಃ

ಇತ್ಯೇವಮುಕ್ತಸ್ತು ಜನಾರ್ದನೇನ
ಪಾರ್ಥಃ ಪ್ರಶಸ್ಯಾಥ ಸುಹೃದ್ವಧಂ ತಮ್ ।
ತತೋಽಬ್ರವೀದರ್ಜುನೋ ಧರ್ಮರಾಜ-
ಮನುಕ್ತಪೂರ್ವಂ ಪರುಷಂ ಪ್ರಸಹ್ಯ ॥೧॥

ಸಂಜಯ ಧೃತರಾಷ್ಟ್ರನಿಗೆ ನುಡಿದ— ಶ್ರೀಕೃಷ್ಣನು ಹೀಗೆ ಹೇಳಿದಾಗ ಅರ್ಜುನ ಈ ಬಗೆಯ ಬಂಧುವಧವನ್ನು ಪ್ರಶಂಸೆ ಮಾಡಿ ಧರ್ಮರಾಜನಿಗೆ ಹಿಂದೆ ಎಂದೂ ಹೇಳದಿದ್ದ ಅವಹೇಳನಕಾರಿಯಾದ ಮಾತನ್ನು ಬಲವಾಗಿ ಆಡಿದ.

ಅರ್ಜುನಃ

ಮಾ ತ್ವಂ ರಾಜನ್ ವ್ಯಾಹರಸ್ವಾದ್ಯ ಪಾಪಂ
ಯಸ್ತಿಷ್ಠಸೇ ಕ್ರೋಶಮಾತ್ರೇ ರಣಾದ್ ವೈ ।
ಭೀಮಸ್ತು ಮಾಮರ್ಹತಿ ಗರ್ಹಣಾಯ
ಯೋ ಯುಧ್ಯತೇ ಸರ್ವಯೋಧಪ್ರವೀರೈಃ ॥೨॥

ಕಾಲೇ ಹಿ ಶತ್ರೂನ್ ಪರಿಪೀಡ್ಯ ಸಂಖೇ
ಹತ್ವಾ ಚ ಶೂರಾನ್ ಪೃಥಿವೀಪತೀಂಸ್ತಾನ್ ॥೩॥

ಅರ್ಜುನ ನುಡಿದ— 'ರಾಜನೆ, ನೀನು ಹೀಗೆ ಕೆಟ್ಟಮಾತುಗಳಿಂದ ನನ್ನನ್ನು ನಿಂದಿಸಬೇಡ. ರಣದಿಂದ ಕ್ರೋಶದಷ್ಟು ದೂರ ಸರಿದು ನಿಲ್ಲುವ ನಿನಗೆ ನನ್ನನ್ನು ಅವಹೇಳನ ಮಾಡಲು ಅರ್ಹತೆ ಇಲ್ಲ. ಭೀಮನು ಎಲ್ಲ ವೀರಯೋಧರೊಡನೆ ಯುದ್ಧಮಾಡುವವನು. ಅವನಿಗೆ ನನ್ನನ್ನು ಅವಹೇಳನ ಮಾಡಲು ಅರ್ಹತೆ ಇದೆ.

ರಥಪ್ರಧಾನೋತ್ತಮನಾಗಮುಖ್ಯಾನ್
ಸಾದಿಪ್ರವೇಕಾನಮಿತಾಂಶ್ಚ ಶೂರಾನ್ ॥೪॥

ಯಃ ಕುಂಜರಾಣಾಮಧಿಕಂ ಸಹಸ್ರಂ
ಹತ್ವಾನದತ್ ತುಮುಲಂ ಸಿಂಹನಾದಮ್ ॥೫॥

ಕಾಮ್ಬೋಜಾನಾಮಯುತಂ ಪಾರ್ವತೀಯಾನ್
ಮೃಗಾನ್ ಸಿಂಹೋ ವಿನಿಹತ್ಯೇವ ಚಾಜೌ ॥೬॥

'ಭೀಮನು ಸರಿಯಾದ ಕಾಲದಲ್ಲಿ ರಣದಲ್ಲಿ ಶತ್ರುಗಳನ್ನು ಚೆನ್ನಾಗಿ ಪೀಡಿಸಿ, ಶೂರರಾದ ಆ ರಾಜರನ್ನೂ ಕೊಂದು, ಮಹಾರಥರನ್ನೂ ಉತ್ತಮ ಗಜಯೋಧರನ್ನೂ ಮುಖ್ಯ ಅಶ್ವಯೋಧರನ್ನೂ ಅಸಂಖ್ಯ ಶತ್ರುಗಳನ್ನೂ ಸಾವಿರಾರು ಆನೆಗಳನ್ನೂ ಕೊಂದು ದೊಡ್ಡ ಸಿಂಹನಾದವನ್ನು ಮಾಡುತ್ತಾನೆ. ಸಿಂಹವು ಮೃಗಗಳನ್ನು ಕೊಂದು ಗರ್ಜಿಸುವಂತೆ. ಹತ್ತಾರು ಸಾವಿರ ಕಾಂಬೋಜ ಪಾರ್ವತೀಯ ಯೋಧರನ್ನು ಕೊಲ್ಲುತ್ತಾನೆ.

ಸುದುಷ್ಕರಂ ಕರ್ಮ ಕರೋತಿ ಭೀಮಃ
ಕರ್ತುಂ ಯಥಾ ನಾರ್ಹಸಿ ತ್ವಂ ಕದಾಚಿತ್ ।

ರಥಾದವಪ್ಲುತ್ಯ ಗದಾಂ ಪರಾಮೃಶಂ-
ಸ್ತಯಾ ನಿಹಂತ್ಯಶ್ವನರದ್ವಿಪಾನ್ ರಣೇ ॥೭॥

'ನಿನಗೆ ಎಂದೂ ಸಾಧ್ಯವಾಗದಂಥ ಅಸಾಧ್ಯವಾದ ಯುದ್ಧಕರ್ಮವನ್ನು ಭೀಮ ಮಾಡುತ್ತಾನೆ. ರಥದಿಂದ ಕೆಳಗೆ ಹಾರಿ ಗದೆಯನ್ನೆತ್ತಿಕೊಂಡು ಅಶ್ವಪದಾತಿ ಗಜಯೋಧರನ್ನು ರಣದಲ್ಲಿ ಸಂಹರಿಸುತ್ತಾನೆ.

ವರಾಸಿನಾ ವಾಪಿ ರಥಾಶ್ವಕುಂಜರಾನ್
ತಥಾ ರಥಾಂಗೈರ್ಧನುಷಾ ಚ ಹನ್ಯರೀನ್ ।
ಪ್ರಮೃದ್ಯ ಪದ್ಭ್ಯಾಮಹಿತಾನ್ ನಿಹನ್ತಿ ಯಃ
ಪುನಶ್ಚ ದೋರ್ಭ್ಯಾಂ ಶತಮನ್ಯುವಿಕ್ರಮಃ ॥೮॥

'ದೊಡ್ಡ ಖಡ್ಗದಿಂದಲೂ ರಥ ಅಶ್ವ ಗಜಗಳನ್ನು ಸಂಹರಿಸುತ್ತಾನೆ. ಚಕ್ರ ಧನುಸ್ಸುಗಳಿಂದಲೂ ಶತ್ರುಗಳನ್ನು ಕೊಲ್ಲುತ್ತಾನೆ. ಪುನಃ ಶತ್ರುಗಳನ್ನು ಕಾಲಿಂದ ತುಳಿದು ತೋಳುಗಳಿಂದಲೂ ಇಂದ್ರನಂತೆ ಪರಾಕ್ರಮ ತೋರುತ್ತ ಸಂಹರಿಸುತ್ತಾನೆ.

ಮಹಾಬಲೋ ವೈಶ್ರವಣಾಂತಕೋಪಮಃ
ಪ್ರಸಹ್ಯ ಹಂತಾ ದ್ವಿಷತಾಮ್ ಅನೀಕಿನೀಮ್ ।
ಸ ಭೀಮಸೇನೋऽರ್ಹತಿ ಗರ್ಹಣಾಂ ಮೇ
ನ ತ್ವಂ ನಿತ್ಯಂ ರಕ್ಷ್ಯಸೇ ಯಃ ಸುಹೃದ್ಭಿಃ ॥೯॥

'ಕುಬೇರನಂತೆ ಯಮನಂತೆ ಮಹಾಬಲನಾದ ಭೀಮ ಶತ್ರುಸೈನ್ಯವನ್ನು ಆಕ್ರಮಿಸಿ ನಾಶಪಡಿಸುತ್ತಾನೆ. ಆ ಭೀಮಸೇನನು ನನ್ನನ್ನು ಅವಹೇಳನ ಮಾಡಿದರೆ ಅದು ಅವನಿಗೆ ಒಪ್ಪುತ್ತದೆ. ನಿನಗೆ ಒಪ್ಪಲಾರದು. ನೀನು ಸದಾ ಬಂಧುಗಳಿಂದ ರಕ್ಷಣೆ ಪಡೆಯುತ್ತಿರುವೆ.

ಮಹಾರಥಾನ್ ನಾಗವರಾನ್ ಹಯಾಂಶ್ಚ
ಪದಾತಿಮುಖ್ಯಾನಪಿ ಚ ಪ್ರಮಥ್ಯ ।
ಏಕೋ ಭೀಮೋ ಧಾರ್ತರಾಷ್ಟ್ರೇಷು ಮಗ್ನಃ
ಸ ಮಾಮುಪಾಲಬ್ಧುಮರಿಂದಮೋऽರ್ಹತಿ ॥೧೦॥

'ಮಹಾರಥರನ್ನು ಮಹಾಗಜಯೋಧರನ್ನು ಅಶ್ವಯೋಧರನ್ನು ಪ್ರಧಾನ ಪದಾತಿಗಳನ್ನು ನಾಶಮಾಡುತ್ತ ಭೀಮನೊಬ್ಬನು ಕೌರವಸೈನ್ಯದಲ್ಲಿ ಮುಳುಗಿರುತ್ತಾನೆ. ಶತ್ರುನಾಶಕನಾದ ಅವನು ನನ್ನನ್ನು ನಿಂದಿಸಲು ಅರ್ಹನಾಗಿರುತ್ತಾನೆ.

ಕಲಿಂಗವಂಗಾಂಗನಿಷಾದಮಾಗಧಾನ್
ಸದಾ ಮದಾನ್ನೀಲಬಲಾಹಕೋಪಮಾನ್ ।
ನಿಹಂತಿ ಯಃ ಶತ್ರುಗಣಾನನೇಕಶಃ
ಸ ಮಾಭಿವಕ್ತುಂ ಪ್ರಭವತ್ಯನಾಗಸಮ್ ॥೧೧॥

ಸದಾ ದರ್ಪದಿಂದ ಬೀಗುವ, ಕರಿಮೋಡಗಳಂತಿರುವ ಕಲಿಂಗ ವಂಗ ಅಂಗ ನಿಷಾದ ಮಗಧ ದೇಶಗಳ ಅನೇಕ ಶತ್ರುಸಮೂಹಗಳನ್ನು ಭೀಮ ಸಂಹರಿಸುತ್ತಾನೆ. ಏನೂ ತಪ್ಪು ಮಾಡದಿರುವ ನನ್ನನ್ನು ಕೂಡ ನಿಂದಿಸಲು ಅವನು ಅರ್ಹನೆ ಆಗಿರುತ್ತಾನೆ.

ಸುಯುಕ್ತಮಾಸ್ಥಾಯ ರಥಂ ಹಿ ಕಾಲೇ
ಧನುರ್ವಿಧುನ್ವನ್ ಶರಪೂರ್ಣಮುಷ್ಟಿಃ ।
ಸೃಜತ್ಯಸೌ ಶರವರ್ಷಾಣಿ ವೀರೋ
ಮಹಾಹವೇ ಮೇಘ ಇವಾಂಬುಧಾರಾಃ ॥೧೨॥

ಚೆನ್ನಾಗಿ ಸಜ್ಜಾದ ರಥವನ್ನೇರಿ ಯೋಗ್ಯಕಾಲದಲ್ಲಿ ಬಿಲ್ಲನ್ನು ತೂಗುತ್ತ ಮುಷ್ಟಿ ತುಂಬ ಬಾಣಗಳನ್ನು ಹಿಡಿದು, ಮೋಡವು ನೀರಿನ ಧಾರಾಕಾರವಾದ ಮಳೆ ಸುರಿಸುವಂತೆ, ವೀರ ಭೀಮಸೇನನು ಮಹಾಸಮರದಲ್ಲಿ ಬಾಣಗಳ ಮಳೆಯನ್ನೇ ಸುರಿಸುತ್ತಾನೆ.

ಶತಾನ್ಯಷ್ಟೌ ವಾರಣಾನಾಮಪಶ್ಯಂ
ವಿಶಾತಿತ್ಯೈಃ ಕುಂಭಕಟಾಗ್ರಹಸ್ತೈಃ ।
ಭೀಮೇನಾಜೌ ನಿಹತಾನ್ಯದ್ಯ ಬಾಣೈಃ
ಸ ಮಾಂ ಕ್ರೂರಂ ವಕ್ತುಮರ್ಹತ್ಯರಿಘ್ನಃ ॥೧೩॥

ಕತ್ತರಿಸಿ ತೆಗೆದ ಆನೆಗಳ ಕುಂಭಸ್ಥಳ ಕಪೋಲ ಸೊಂಡಿಲುಗಳ ತುದಿಗಳಿಂದಲೆ

ಹೊಡೆದು ಬಾಣಗಳಿಂದಲೂ ಹೊಡೆದು ಭೀಮನು ರಣದಲ್ಲಿ ಇಂದು ಎಂಟು ನೂರು ಗಜಯೋಧರನ್ನು ಕೊಂದಿದ್ದನ್ನು ನಾನು ಕಂಡಿದ್ದೇನೆ. ಶತ್ರುಸಂಹಾರಕ ನಾದ ಅವನೇ ನನಗೆ ಕ್ರೂರನುಡಿ ನುಡಿಯಲು ಅರ್ಹನಾಗಿದ್ದಾನೆ.

ತೇನಾಸ್ಮಿ ವಾಚ್ಯೋ ನ ತ್ವಯಾಹಂ ಕದಾಚಿನ್
ಮಾ ಮಾ ವೋಚಃ ಕ್ರೂರಮಿಹಾದ್ಯ ಪಾರ್ಥ ।
ನಾಸ್ಮದ್‌ವಿಧೋ ವೈ ಭವತಾ ತು ವಾಚ್ಯೋ
ಯಥಾ ಭವಾನ್ ಮರ್ತ್ಯಲೋಕಸ್ಯ ವಾಚ್ಯಃ ॥೧೪॥

ಯುಧಿಷ್ಠಿರ, ನಾನು ನಿನ್ನಿಂದ ಎಂದೂ ಅವಹೇಳನ ಮಾಡಿಸಿಕೊಳ್ಳಲಾರೆ. ನನಗೆ ಕ್ರೂರನುಡಿ ನುಡಿಯಬೇಡ. ನೀನು ಮನುಷ್ಯಲೋಕದಲ್ಲಿ ನಿಂದಾರ್ಹನಾಗಿರು ವಂತೆ, ನಮ್ಮಂಥವರು ನಿನ್ನಿಂದ ನಿಂದ್ಯರಾಗಿರುವುದಿಲ್ಲ.

ತ್ವನ್ಮೂಲಮಸ್ಮಾಭಿರಿದಂ ಹಿ ವೈರಂ
ಪ್ರಾಪ್ತಂ ತಥಾ ವ್ಯಸನಂ ಚಾತಿಘೋರಮ್ ।
ದ್ಯೂತಪ್ರಮತ್ತೇನ ಕೃತಂ ತ್ವಯಾऽಸಕೃತ್
ಕಸ್ಮಾದುಪಾಲಬ್ಧುಮಿಹಾರ್ಹಸಿ ತ್ವಮ್ ॥೧೫॥

ನಾವು ಬಂಧುಗಳೊಡನೆ ಈ ವೈರವನ್ನೂ ಅತಿಘೋರವಾದ ದುಃಖವನ್ನೂ ಹೊಂದಲು ಮೂಲಕಾರಣನು ನೀನು. ಜೂಜಿನ ಅಮಲೇರಿ ನೀನು ಮತ್ತೆಮತ್ತೆ ವೈರ, ದುಃಖಗಳನ್ನು ತಂದುಕೊಂಡೆ. ನಮ್ಮನ್ನು ಹಳಿಯಲು ನೀನು ಹೇಗೆ ಅರ್ಹನಾಗುವೆ?

ತ್ವಮೇವ ರಾಜನ್ ಸತತಂ ಪ್ರಮತ್ತ-
ಸ್ತ್ವಮೇವ ಮೂಢೋ ಭರತಾನಾಮಸಾಧುಃ ।
ತ್ವಾಂ ಪ್ರಾಪ್ಯ ರಾಜ್ಯಂ ಚ ವಿನಷ್ಟಮೇತತ್
ಪ್ರಾಪ್ತಾ ಮಹತ್ ಪಾಂಡವಾಶ್ಚಾಪಿ ದಾಸ್ಯಮ್ ॥೧೬॥

ರಾಜನೇ, ನೀನೇ ಸದಾ ತಪ್ಪು ಮಾಡುವವನು. ನೀನೇ ಮೂರ್ಖ. ಕುರುವಂಶದವರಲ್ಲಿ ನೀನೇ ಏನೂ ಸರಿಯಿಲ್ಲದವನು. ನಿನ್ನ ಸಂಬಂಧದಿಂದ ನಮಗೆ ಈ ರಾಜ್ಯನಾಶ ಬಂದೊದಗಿತು. ಪಾಂಡವರಾದ ನಾವೆಲ್ಲರೂ ದೊಡ್ಡ ದಾಸ್ಯಕ್ಕೆ ಭಾಗಿಯಾದೆವು.

ತ್ವತ್ತಃ ಕೃತೋಽಸ್ಮದ್ವನವಾಸದುಃಖಂ
ರಾಜ್ಯಸ್ಯ ನಾಶೋ ಹ್ಯಭಿಮನ್ಯೋಶ್ಚ ಘೋರಃ ॥೧೭॥

ನಮಗೆ ನಿನ್ನಿಂದ ವನವಾಸ ದುಃಖ ಉಂಟಾಯಿತು. ರಾಜ್ಯನಾಶ ಉಂಟಾಯಿತು. ಘೋರವಾದ ಅಭಿಮನ್ಯುಮರಣವೂ ಉಂಟಾಯಿತು.

ಆತ್ಮಾನಮೇವ ಸುನೃಶಂಸರೂಪಂ
ಜ್ಞಾತ್ವಾ ಕಿಮರ್ಥಂ ಗರ್ಹಸೇ ಮಾಽದ್ಯ ವೀರ ।
ಲಜ್ಜಸ್ವ ರಾಜನ್ ಯದಿ ತೇಸ್ತಿ ಲಜ್ಜಾ
ತೂಷ್ಣೀಂಭೂತಃ ಪಶ್ಯ ಸರ್ವಂ ಕೃತಘ್ನಃ ॥೧೮॥

ತನ್ನನ್ನು ಹೀಗೆ ಬಲುಕ್ರೂರ ಸ್ವಭಾವದವನೆಂದು ತಿಳಿದುಕೂಡ ನೀನು ನನ್ನನ್ನು ಏಕೆ ನಿಂದಿಸುವೆ? ರಾಜನೆ, ನಿನಗೆ ಲಜ್ಜೆ ಎಂಬುದಿದೆಯಾದರೆ ಇದಕ್ಕೆ ಲಜ್ಜೆಪಡು, ಕೃತಘ್ನ ನೀನು, ಏನೂ ಮಾತನಾಡದೆ ಸುಮ್ಮನೆ ಎಲ್ಲವನ್ನೂ ನೋಡುತ್ತಿರು.

ಬಲಂ ತು ವಾಚಿ ದ್ವಿಜಸತ್ತಮಾನಾಂ
ಕ್ಷಾತ್ರಂ ಬುಧಾ ಬಾಹುಬಲಂ ವದಂತಿ ।
ತ್ವಂ ವಾಗ್ಬಲೋ ಭಾರತ ನಿಷ್ಠುರೋಽಸಿ
ತ್ವಮೇವ ಮಾಂ ವೇತ್ಸಿ ಯಥಾವಿಧೋಽಹಮ್ ॥೧೯॥

ಉತ್ತಮಬ್ರಾಹ್ಮಣರಿಗೆ ಮಾತಿನಲ್ಲಿ ಬಲ. ಕ್ಷತ್ರಿಯರಿಗೆ ಬಾಹುವಿನಲ್ಲಿ ಬಲ ಎಂದು ಹೇಳುತ್ತಾರೆ. ನೀನು, ರಾಜನೆ, ಕೇವಲ ಮಾತಿನಲ್ಲಿ ಬಲ ಉಳ್ಳವನು. ನಿಷ್ಠುರವಾಗಿ ಮಾತನ್ನಾಡುವವನು ನೀನೆ. ನಾನು ಎಂಥವನೆಂದು ನಿನಗೇ ಗೊತ್ತಿದೆ.

ಯತೇ ಹಿ ನಿತ್ಯಂ ತವ ಕರ್ತುಮಿಷ್ಟಂ
ದಾರೈಃ ಸುತೈರ್ಜೀವಿತೇನಾತ್ಮನಾ ಚ ।
ಏವಂ ಚ ಮಾಂ ವಾಗ್ವಿಶಿಖೈರ್ನಿಹಂಸಿ
ತ್ವತ್ತಃ ಸುಖಂ ನ ವಯಂ ವಿದ್ಮ ಕಿಂಚಿತ್ ॥೨೦॥

ನಾನು ಹೆಂಡತಿ–ಮಕ್ಕಳಿಂದ ಬದುಕಿನಿಂದ ಮತ್ತು ಶರೀರದಿಂದ ನಿನ್ನ ಇಷ್ಟವನ್ನೇ ಸಾಧಿಸಲು ಸದಾ ಯತ್ನಿಸುತ್ತಿದ್ದೇನೆ. ಹೀಗಿದ್ದರೂ ನನ್ನನ್ನು ಮಾತಿನ ಬಾಣಗಳಿಂದ

ಕೊಲ್ಲುತ್ತಿರುವೆ. ನಿನ್ನಿಂದ ನಮಗೆ ಏನಾದರೂ ಸುಖವಿದ್ದೀತೆಂದು ನಾನು ಭಾವಿಸುವುದಿಲ್ಲ.

ಮಾಂ ಮಾವಮಂಸ್ಥಾ ದ್ರೌಪದೀತಲ್ಪಸಂಸ್ಥೋ
ಮಹಾರಥಾನ್ ಪ್ರತಿಹನ್ಮಿ ತ್ವದರ್ಥೇ ।
ತೇನಾತಿಶಂಕೇ ಭಾರತ ನಿಷ್ಠುರೋಽಸಿ
ತ್ವತ್ತಃ ಸುಖಂ ನಾಭಿಜಾನಾಮಿ ಕಿಂಚಿತ್ ॥೨೧॥

ದ್ರೌಪದಿಯ ಜೊತೆಗೆ ಸುಖವಾಗಿ ಶಯನದಲ್ಲಿರುವ ನೀನು ನನ್ನನ್ನು ಅವಮಾನಿಸಬೇಡ. ನಾನು ನಿನಗಾಗಿ ಮಹಾರಥರನ್ನು ಸಂಹರಿಸುತ್ತಿದ್ದೇನೆ. ನನ್ನ ಬಗ್ಗೆ ಅತಿಯಾಗಿ ಶಂಕಿಸಿ ನಿಷ್ಠುರವಾಗಿ ನುಡಿಯುವೆ, ರಾಜನೆ, ನಿನ್ನಿಂದ ಸುಖವೇನನ್ನೂ ನಾ ಕಾಣೆ.

ಪ್ರೋಕ್ತಃ ಸ್ವಯಂ ಸತ್ಯಸಂಧೇನ ಮೃತ್ಯು-
ಸ್ತವ ಪ್ರಿಯಾರ್ಥಂ ನರದೇವ ಯುದ್ಧೇ ।
ವೀರಃ ಶಿಖಂಡೀ ದ್ರೌಪದೋಽಸೌ ಮಹಾತ್ಮಾ
ಮಯಾಭಿಗುಪ್ತೇನ ಹತಶ್ಚ ತೇನ ॥೨೨॥

ಸತ್ಯಸಂಧನಾದ ಭೀಷ್ಮನು ಸ್ವತಃ ತನಗೆ ಶಿಖಂಡಿಯೇ ಮರಣಕಾರಣ ಎಂದು ಹೇಳಿದ್ದರಿಂದ ನಾನು ಶಿಖಂಡಿಯನ್ನು ರಕ್ಷಿಸಿ ಅವನ ಮೂಲಕ ಭೀಷ್ಮನನ್ನು ಕೊಲ್ಲಿಸಿದ್ದೇನೆ.

ನ ಚಾಭಿನಂದಾಮಿ ತವಾಧಿರಾಜ್ಯಂ
ಯತಸ್ತ್ವಮಕ್ಷೇಷ್ವಹಿತಾಯ ಸಕ್ತಃ ।
ಸ್ವಯಂ ಕೃತ್ವಾ ಪಾಪಮನಾರ್ಯಜುಷ್ಟ-
ಮಸ್ಮಾಭಿರ್ವಾ ತರ್ತುಮಿಚ್ಛಸ್ಯರಿಂಸ್ತ್ವಮ್ ॥೨೩॥

ನಿನ್ನ ಈ ರಾಜ್ಯದ ಒಡೆತನವನ್ನು ನಾನು ಪ್ರಶಂಸೆಮಾಡುವುದಿಲ್ಲ. ಏಕೆಂದರೆ ನೀನು ಅನಿಷ್ಟಕಾರಣವಾದ ಜೂಜಿನಲ್ಲಿ ಆಸಕ್ತನಾಗಿರುವೆ. ಹೀನ ಜನರು ಮಾಡುವ ಪಾಪಕೃತ್ಯವನ್ನು ನೀನು ಸ್ವತಃ ಮಾಡಿ ನಮ್ಮ ಸಹಾಯದಿಂದ ಈಗ ಶತ್ರು ಭಯದಿಂದ ಪಾರಾಗಲು ಬಯಸುತ್ತಿರುವೆ.

ಅಕ್ಷೇಷು ದೋಷಾ ಬಹವೋ ವಿಧರ್ಮಾಃ
ಶ್ರುತಾಸ್ತ್ವಯಾ ಸಹದೇವೋऽಬ್ರವೀದ್ ಯಾನ್ ।
ತಾನ್ನೈಷಿ ತ್ವಂ ತ್ಯಕ್ತುಮಸಾಧುಜುಷ್ಟಾಂ-
ಸ್ತೇನ ಸ್ಮ ಸರ್ವೇ ನಿರಯೇ ತ್ವಯಾಸ್ತಾಃ ॥೨೪॥

ಜೂಜಿನಲ್ಲಿ ಬಹಳ ದೋಷಗಳಿವೆ, ಪಾಪಕರ್ಮಗಳಿವೆ ಎಂದು ನೀನು ಕೇಳಿರುವೆ. ಸಹದೇವನೂ ಅವನ್ನು ಹೇಳಿದ್ದಾನೆ. ಹೀನಜನರು ಮಾಡುವ ಆ ಪಾಪಕರ್ಮಗಳನ್ನು ಬಿಡಲು ನಿನಗೆ ಮನಸ್ಸಿಲ್ಲ. ಅದರಿಂದ ನಮ್ಮನ್ನೆಲ್ಲರನ್ನೂ ನರಕದಲ್ಲಿ ಹಾಕಿರುವೆ.

ಸುಖಂ ತ್ವತ್ತೋ ನಾಭಿಜಾನೀಮ ಕಿಂಚಿದ್
ಯತಸ್ತ್ವಮಕ್ಷೈರ್ದೇವಿತುಂ ಸಂಪ್ರವೃತ್ತಃ ।
ಸ್ವಯಂ ಕೃತ್ವಾ ಪರುಷಂ ಪಾಂಡವ ತ್ವಂ
ಭೂಯಸ್ತೀಕ್ಷ್ಣಾಃ ಶ್ರಾವಯಸ್ಯದ್ಯ ವಾಚಃ ॥೨೫॥

ನಿನ್ನಿಂದ ಒಂದಿಷ್ಟೂ ಸುಖ ನಮಗಾಗುವುದನ್ನು ನಾವು ಕಂಡಿಲ್ಲ. ಏಕೆಂದರೆ ಜೂಜಾಡುವುದರಲ್ಲೇ ನೀನು ನಿರತನಾಗಿರುವೆ. ಸ್ವತಃ ನೀನು ಕ್ರೂರಕರ್ಮವನ್ನು ಮಾಡಿ ಪುನಃ ನಮಗೆ ತೀಕ್ಷ್ಣವಾದ ಮಾತುಗಳನ್ನು ನಮ್ಮ ಮುಂದೆ ನುಡಿಯುವೆ.

ಶೇತೇಸ್ಮಾಭಿರ್ನಿಹತಾ ಶತ್ರುಸೇನಾ
ಛಿನ್ನೈರ್ಗಾತ್ರೈರ್ಭೂಮಿತಳೇ ನದಂತೀ ।
ತ್ವಯಾ ಹಿ ತತ್ಕರ್ಮ ಕೃತಂ ನೃಶಂಸಂ
ಯಸ್ಮಾದ್ದೋಷಃ ಕೌರವಾಣಾಂ ವಧಶ್ಚ ॥೨೬॥

ಶತ್ರುಸೈನ್ಯವು ಈಗ ನಮ್ಮಿಂದ ಹೊಡೆಸಿಕೊಂಡು ಅಂಗಾಂಗಗಳನ್ನು ಕಡಿದುಕೊಂಡು ಅಳುತ್ತ ನೆಲದ ಮೇಲೊರಗುತ್ತಿದೆ. ಆ ಕ್ರೂರಕರ್ಮವನ್ನು ಮಾಡಿದ್ದು ನೀನು. ಅದರ ಫಲವೇ ಈ ದೋಷ ಮತ್ತು ಕುರುವಂಶದವರ ವಿನಾಶ.

ಹತಾ ಉದೀಚ್ಯಾ ನಿಹತಾಃ ಪ್ರತೀಚ್ಯಾ
ನಷ್ಟಾಃ ಪ್ರಾಚ್ಯಾ ದಾಕ್ಷಿಣಾತ್ಯಾ ವಿಶಸ್ತಾಃ ।

ಕೃತಂ ಕರ್ಮಾಪ್ರತಿರೂಪಂ ಮಹದ್ಭಿಃ
ತೇಷಾಂ ಯೋಧೈರಸ್ಮದೀಯೈಶ್ಚ ಯುದ್ಧೇ ॥೨೭॥

ಉತ್ತರ ಪಶ್ಚಿಮ ಪೂರ್ವ ದಕ್ಷಿಣದೇಶಗಳ ಎಲ್ಲ ಕ್ಷತ್ರಿಯರು ಹತರಾದರು. ಅವರ ಕಡೆಯ ಹಿರಿಯರೂ ನಮ್ಮವರೂ ಎಲ್ಲರೂ ಯುದ್ಧದಲ್ಲಿ ಅನುಪಮವಾದ ಕಾರ್ಯವನ್ನು ಮಾಡಿದರು.

ತ್ವಂ ದೇವಿತಾ ತ್ವತ್ಕೃತೇ ರಾಜ್ಯನಾಶಃ
ತತ್ಸಂಭವಂ ವ್ಯಸನಂ ನೋ ನರೇಂದ್ರ ।
ಮಾಸ್ಮಾನ್ ಕ್ರೂರೈರ್ವಾಕ್ಪ್ರತೋದೈಸ್ತುದ ತ್ವಂ
ಭೂಯೋ ರಾಜನ್ ಕೋಪಯನ್ನಲ್ಪಬುದ್ಧ್ಯಾ ॥೨೮॥

ನೀನು ಜೂಜಾಡಿದವನು, ನಿನಗಾಗಿ ರಾಜ್ಯನಾಶವಾಯಿತು. ನಮ್ಮ ವ್ಯಸನ ನಿನ್ನಿಂದ ಉಂಟಾಯಿತು. ಅದರಿಂದ ಕ್ರೂರವಾದ ಮಾತಿನ ಚಾಟಿಯಿಂದ ನಮ್ಮನ್ನು ಹೊಡೆಯಬೇಡ. ಅಲ್ಪಬುದ್ಧಿಯಿಂದ, ರಾಜನೆ, ನೀನು ನಮಗೆ ಮತ್ತೆ ಮತ್ತೆ ಕೋಪ ಬರಿಸಬೇಡ.

ಸಂಜಯಃ

ಏತಾ ವಾಚಃ ಪರುಷಾಃ ಸವ್ಯಸಾಚೀ
ಸ್ಥಿರಪ್ರಜ್ಞಃ ಶ್ರಾವಯಿತ್ವಾ ತತಕ್ಷ ।
ಬಭೂವಾಸೌ ವಿಮನಾ ಧರ್ಮಭೀರುಃ
ಕೃತ್ವಾ ಪ್ರಾಜ್ಞಃ ಪಾತಕಂ ಕಿಂಚಿದೇವಮ್ ॥೨೯॥

ಸಂಜಯ ನುಡಿದ— ಸ್ಥಿರಪ್ರಜ್ಞ ಅರ್ಜುನನು ಹೀಗೆ ಯುಧಿಷ್ಠಿರನಿಗೆ ಕಟುನುಡಿಗಳನ್ನಾಡಿ ನೋಯಿಸಿದ. ಅವನು ಧರ್ಮವಿಷಯದಲ್ಲಿ ಭಯಪಡುವವನಾದ್ದರಿಂದ ತಾನು ಸ್ವಲ್ಪ ಪಾಪ ಮಾಡಿಬಿಟ್ಟೆನೆಂದು ಮನಸಿನೊಳಗೆ ನೊಂದು ಕೊಂಡ.

ಭೃತ್ಯರಿಂದಾಗುವ ಕೆಲಸವನ್ನು ರಾಜನಿಂದ ನಿರೀಕ್ಷಿಸಲಾಗದು. ಮತ್ತು ಧರ್ಮರಾಜ ಶಕುನಿಯೊಂದಿಗೆ ಅನ್ಯಾಯದ ಜೂಜಾಡಿದ್ದು ಜೂಜಿನ ಚಟದಿಂದಲ್ಲ. ದೇವಕಾರ್ಯಸಿದ್ಧಿಗಾಗಿ, ಮುಹೂರ್ತಕಾಲ ಕಲ್ಯಾವೇಶಕ್ಕೊಳಗಾಗಿ,

ಧೃತರಾಷ್ಟ್ರನ ಪ್ರೀತಿಗಾಗಿ ಆಡಿದ. ಧೃತರಾಷ್ಟ್ರನ ಪ್ರೀತಿಗಾಗಿಯೆ, ವನವಾಸಾದಿ ಕಷ್ಟನಷ್ಟಗಳನ್ನು ತನಗೆ ತಂದುಕೊಂಡ. ಇದು ಸ್ಪಷ್ಟವೇ ಇದ್ದರೂ ಅರ್ಜುನನು ಕೃಷ್ಣ ಹೇಳಿದಂತೆ 'ವಧವಿಲ್ಲದ ವಧ' ಮಾಡುವುದಕ್ಕಾಗಿ ಪೂಜ್ಯನಾದ ಅಣ್ಣನನ್ನು ತಾನು ಹೇಗಾದರೂ ಅವಮಾನಿಸಬೇಕಾಯಿತು ಎಂದು ನೊಂದುಕೊಂಡ.

ತದಾನುತೇಪೇ ಸುರರಾಜಪುತ್ರೋ
ವಿನಿಃಶ್ವಸಂಶ್ಚಾಪ್ಯಸಿಮುದ್ಬಬರ್ಹ ॥೩೦॥

ಅರ್ಜುನನು ಆಗ ಪಶ್ಚಾತ್ತಾಪಪಟ್ಟ ನಿಟ್ಟುಸಿರಿಡುತ್ತ ಖಡ್ಗವನ್ನೆತ್ತಿಕೊಂಡ.

ತಮಾಹ ಕೃಷ್ಣಃ ಕಿಮಿದಂ ಪುನರ್ಭವಾನ್
ವಿಕೋಶಮಾಕಾಶನಿಭಂ ಕರೋತ್ಯಸಿಮ್ ।
ಪ್ರಬ್ರೂಹಿ ಸತ್ಯಂ ಪುನರುತ್ತರಂ ವಚ-
ಸ್ತಥಾ ಪ್ರವಕ್ಷ್ಯಾಮ್ಯಹಮರ್ಥಸಿದ್ಧಯೇ ॥೩೧॥

ಶ್ರೀಕೃಷ್ಣ ಆಗ ಅರ್ಜುನನನ್ನು ತಡೆದು ಕೇಳಿದ, 'ಇದೇನು? ಪುನಃ ನೀನು ಆಕಾಶದಂತೆ ನೀಲವಾದ ಖಡ್ಗವನ್ನು ಒರೆಯಿಂದ ಹೊರಗೆ ತೆಗೆಯುತ್ತಿರುವೆ? ಸತ್ಯವನ್ನು ಹೇಳು. ನಿನ್ನ ಸಮಸ್ಯೆಗೆ ಪರಿಹಾರದ ಮಾತನ್ನು ನಿನ್ನ ಇಷ್ಟಸಿದ್ಧಿಗಾಗಿ ಪುನಃ ಹೇಳುತ್ತೇನೆ.'

ಇತ್ಯೇವ ಪೃಷ್ಟಃ ಪುರುಷೋತ್ತಮೇನ
ಸುದುಃಖಿತಃ ಕೇಶವಮಾಹ ವಾಕ್ಯಮ್ ।
ಅಹಂ ಹನಿಷ್ಯೇ ಸ್ವಶರೀರಮೇವ
ಪ್ರಸಹ್ಯ ಯೇನಾಹಿತಮಾಚರಂ ವೈ ॥೩೨॥

ಪುರುಷೋತ್ತಮ ಶ್ರೀಕೃಷ್ಣ ಹೀಗೆ ಕೇಳಿದಾಗ ಅರ್ಜುನ ಬಲು ದುಃಖಿತನಾಗಿ ಹೇಳಿದ. 'ಅಣ್ಣನನ್ನು ಅಪಮಾನಿಸುವ ಮೂಲಕ ಬಹಳ ಅಹಿತವನ್ನಾಚರಿಸಿದ ನನ್ನ ಈ ಶರೀರವನ್ನು ನಾನು ನಾಶಮಾಡಿಕೊಳ್ಳುವೆನು' ಎಂದು.

ನಿಶಮ್ಯ ತತ್ಪಾರ್ಥವಚೋऽಬ್ರವೀದಿದಂ
ಧನಂಜಯಂ ಧರ್ಮಭೃತಾಂ ವರಿಷ್ಠಃ ॥೩೩॥

ಅರ್ಜುನನ ಆ ಮಾತನ್ನು ಕೇಳಿ ಧರ್ಮರಕ್ಷಕರಲ್ಲಿ ಶ್ರೇಷ್ಠನಾದ ಶ್ರೀಕೃಷ್ಣ ಈ ಮಾತನ್ನಾಡಿದ.

ರಾಜಾನಮೇನಂ ತ್ವಮಿತೀದಮುಕ್ತ್ವಾ
ಕಿಂ ಕಶ್ಮಲಂ ಪ್ರಾವಿಶಃ ಪಾರ್ಥ ಘೋರಮ್ ।
ತ್ವಂ ಚಾತ್ಮಾನಂ ಹಂತುಮಿಚ್ಛಸ್ಯರಿಘ್ನ
ನೇದಂ ಸದ್ಭಿಃ ಸೇವಿತಂ ವೈ ಕಿರೀಟಿನ್ ॥೩೪॥

ಈ ರಾಜನನ್ನು 'ನೀನು' ಎಂದು ಸಂಬೋಧಿಸಿದ ಮಾತ್ರಕ್ಕೇ ನೀನು ಏಕೆ ಘೋರವಾದ ಮೋಹದಲ್ಲಿ ಮುಳುಗಿದೆ? ಶತ್ರುನಾಶಕನೆ, ನೀನು ನಿನ್ನನ್ನೇ ನಾಶಪಡಿಸಿಕೊಳ್ಳಲು ಬಯಸುತ್ತಿರುವೆ. ಅರ್ಜುನ, ಸಜ್ಜನರು ಇಂಥ ಕೆಲಸವನ್ನು ಮಾಡುವುದಿಲ್ಲ.

ಧರ್ಮಾತ್ಮಾನಂ ಭ್ರಾತರಂ ಜ್ಯೇಷ್ಠಮದ್ಯ
ಖಡ್ಗೇನ ಚೈನಂ ಯದಿ ಹನ್ಯಾ ನೃವೀರ ।
ಧರ್ಮಾದ್ಭೀತಸ್ತ್ವಂ ಕಥಂ ನಾಮ ತಸ್ಮಾತ್
ಕಿಂಚೋತ್ತರಂ ವಾऽಕರಿಷ್ಯಸ್ತ್ವಮೇವ ॥೩೫॥

'ಧರ್ಮಾತ್ಮನಾದ ಈ ಅಣ್ಣನನ್ನು ಖಡ್ಗದಿಂದ ಕೊಂದರೆ ಅದು ಒಂದು ಧರ್ಮದ ಕೊಲೆಯಾಗುವುದೆಂದು ಭೀತನಾಗುವವನು ನೀನು, ಧರ್ಮದ ಇನ್ನೊಂದು ಕೊಲೆಯಿಂದಲೇ ಆತ್ಮಹತ್ಯಾರೂಪವಾದ 'ಉತ್ತರಕರ್ಮ'ವನ್ನು ಪ್ರಾಯಶ್ಚಿತ್ತವನ್ನು ಏಕೆ, ಹೇಗೆ ಮಾಡಿಕೊಳ್ಳುವೆ?

ಒಂದು ಧರ್ಮನಾಶಕ್ಕೆ ಪ್ರಾಯಶ್ಚಿತ್ತವೆಂದು ಇನ್ನೊಂದು ಧರ್ಮನಾಶ ಮಾಡುವುದು ಯುಕ್ತವಾಗುವುದೆ?

ಸೂಕ್ಷ್ಮೋ ಧರ್ಮೋ ದುರ್ವಿದಶ್ಚಾಪಿ ಪಾರ್ಥ
ವಿಶೇಷತೋऽಜ್ಞೈಃ ಪ್ರೋಚ್ಯಮಾನಂ ನಿಬೋಧ ।
ಹತ್ವಾತ್ಮಾನಮಾತ್ಮನಾ ಪ್ರಾಪ್ನುಯಾಸ್ತ್ವಂ
ವಧಾದ್ ಭ್ರಾತುರ್ನರಕಂ ಚಾತಿಘೋರಮ್ ॥೩೬॥

'ಸೂಕ್ಷ್ಮವಾದ ಧರ್ಮವನ್ನು ತಿಳಿಯುವುದು ವಿಶೇಷವಾಗಿ ಅಜ್ಞಾನಿಗಳಿಗೆ ಬಲು

ಕಷ್ಟ ನಾನು ಹೇಳುವುದನ್ನು ಕೇಳು. ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ಅಣ್ಣನ ಹತ್ಯೆಗಿಂತಲೂ ಹೆಚ್ಚು ಅತಿಘೋರ ನರಕಕ್ಕೇ ನೀನು ಭಾಗಿಯಾಗುವೆ.

ಪ್ರಬ್ರೂಹಿ ಪಾರ್ಥ ಸ್ವಗುಣಾನಿಹಾತ್ಮನ-
ಸ್ತತೋ ಹತಾತ್ಮಾ ಭವಿತಾಸಿ ಪಾರ್ಥ ॥೩೭॥

'ಅದಕ್ಕೆ, ಅರ್ಜುನ, ನೀನು ನಿನ್ನ ಗುಣಗಳ ಪ್ರಶಂಸೆ ಮಾಡಿಕೊಳ್ಳು. ಆತ್ಮಪ್ರಶಂಸೆ ಆತ್ಮಹತ್ಯೆಗೆ ಸಮಾನವಾಗಿರುವುದರಿಂದ ನಿನ್ನನ್ನು ನೀನು ಕೊಂದಂತೇ ಆಗುವುದು.'

ತಥಾಸ್ತು ಕೃಷ್ಣೇತ್ಯಭಿನಂದ್ಯ ವಾಕ್ಯಂ
ಧನಂಜಯಃ ಪ್ರಾಹ ಧನುರ್ವಿನಾಮ್ಯ ।
ಯುಧಿಷ್ಠಿರಂ ಧರ್ಮಭೃತಾಂ ವರಿಷ್ಠಂ
ಶೃಣುಷ್ವ ರಾಜನ್ನಿತಿ ಶಕ್ರಸೂನುಃ ॥೩೮॥

ಅರ್ಜುನನು 'ಹಾಗೇ ಆಗಲಿ ಕೃಷ್ಣ' ಎನ್ನುತ್ತ ಕೃಷ್ಣನ ಮಾತನ್ನು ಅಭಿನಂದಿಸಿ ಬಿಲ್ಲನ್ನು ಬಾಗಿಸಿ, ಧರ್ಮರಕ್ಷಕರಲ್ಲಿ ಶ್ರೇಷ್ಠನಾದ ಯುಧಿಷ್ಠಿರನ ಮುಂದೆ 'ರಾಜನೆ ಕೇಳು' ಎಂದು ಹೇಳಲುತೊಡಗಿದ.

ನ ಮಾದೃಶೋಽನ್ಯೋ ನರದೇವ ವಿದ್ಯತೇ
ಧನುರ್ಧರೋ ದೇವಮೃತೇ ಪಿನಾಕಿನಮ್ ।
ಅಹಂ ಹಿ ತೇನಾನುಮತೋ ಮಹಾತ್ಮನಾ
ಕ್ಷಣೇನ ಹನ್ಯಾಂ ಸಚರಾಚರಂ ಜಗತ್ ॥೩೯॥

ರಾಜನೆ, ನನ್ನಂಥ ಧನುರ್ಧಾರಿಯು ರುದ್ರದೇವನನ್ನು ಬಿಟ್ಟರೆ ಇನ್ನೊಬ್ಬನಿಲ್ಲ. ಮಹಾತ್ಮನಾದ ರುದ್ರನು ಅನುಮತಿ ಕೊಟ್ಟರೆ ಕ್ಷಣದಲ್ಲಿ ಈ ಚರಾಚರ ಪ್ರಪಂಚವನ್ನೇ ನಾನು ನಾಶಮಾಡಬಲ್ಲೆ.

ಮಯಾ ಹಿ ರಾಜನ್ ಸದಿಗೀಶ್ವರಾ ದಿಶೋ
ವಿಜಿತ್ಯ ಸರ್ವಾ ಭವತಃ ಕೃತಾ ವಶೇ ।
ಸ ರಾಜಸೂಯಶ್ಚ ಸಮಾಪ್ತದಕ್ಷಿಣಃ
ಸಭಾ ಚ ದಿವ್ಯಾ ಭವತೋ ಮಮೌಜಸಾ ॥೪೦॥

ರಾಜನೆ, ನಾನು ದಿಕ್ಪಾಲಕರೊಂದಿಗೆ ದಿಕ್ಕುಗಳೆಲ್ಲವನ್ನೂ ಗೆದ್ದು ನಿನ್ನ ವಶ ಮಾಡಿದ್ದೇನೆ. ನನ್ನ ಪರಾಕ್ರಮದಿಂದಲೆ ನಿನ್ನ ರಾಜಸೂಯದಲ್ಲಿ ದಕ್ಷಿಣೆ ನೀಡುವುದು ನಿನಗೆ ಸಾಧ್ಯವಾಯಿತು. ದಿವ್ಯವಾದ ಸುಧರ್ಮಸಭೆಯೂ ನಿನಗೆ ನನ್ನ ಪರಾಕ್ರಮದಿಂದ ದೊರಕಿತು.

ಪಾಣೌ ಪೃಷ್ಠತ್ಕಾ ಲಿಖಿತಾ ಮಮೇಮೇ
ಧನುಶ್ಚ ಸಜ್ಯಂ ವಿತತಂ ಸಬಾಣಮ್ ।
ಪಾದೌ ಚ ಮೇ ಸಶರೌ ಸಹಧ್ವಜೌ
ನ ಮಾದೃಶಂ ಯುದ್ಧಗತಂ ಜಯಂತಿ ॥೪೧॥

ನನ್ನ ಎಡ ಹಾಗೂ ಬಲ ಅಂಗೈಗಳಲ್ಲಿ ಬಾಣಗಳ ಮತ್ತು ಹೆದೆಯೇರಿಸಿ ಬಾಗಿಸಿದ ಬಿಲ್ಲಿನ ಬಾಣಚಿಹ್ನೆಗಳಿವೆ. ನನ್ನ ಪಾದಗಳಲ್ಲಿಯೂ ರಥ ಮತ್ತು ಧ್ವಜ ಚಿಹ್ನೆಗಳಿವೆ. ನನ್ನಂಥ ವೀರನು ಯುದ್ಧದಲ್ಲಿ ನಿಂತರೆ ಅವನನ್ನು ಯಾರೂ ಗೆಲ್ಲಲಾರರು.

ಹತಾ ಉದೀಚ್ಯಾ ನಿಹತಾಃ ಪ್ರತೀಚ್ಯಾಃ
ಪ್ರಾಚ್ಯಾ ನಿರಸ್ತಾ ದಾಕ್ಷಿಣಾತ್ಯಾ ವಿಶಸ್ತಾಃ ।
ಸಂಶಪ್ತಕಾನಾಂ ಕಿಂಚಿದೇವಾವಶಿಷ್ಟಂ
ಸರ್ವಸ್ಯ ಸೈನ್ಯಸ್ಯ ಹತಂ ಮಯಾರ್ಧಮ್ ॥೪೨॥

ಉತ್ತರ ಪಶ್ಚಿಮ ಪೂರ್ವ ದಕ್ಷಿಣದೇಶಗಳ ಯೋಧರನ್ನೆಲ್ಲ ನಾನು ನಾಶಪಡಿಸಿದ್ದೇನೆ. ಸಂಶಪ್ತಕರಲ್ಲಿ ಸ್ವಲ್ಪ ಅಂಶ ಉಳಿದಿದೆ. ಇಡೀ ಕುರುಸೈನ್ಯದ ಅರ್ಧಾಂಶವನ್ನು ನಾನು ನಾಶಪಡಿಸಿದ್ದೇನೆ.

ಹಸ್ತ–ಪಾದಗಳಲ್ಲಿ ತೋರುವ ಧನುರ್ಬಾಣಚಿಹ್ನೆಗಳಿಗೆ ಅನುಗುಣವಾಗಿಯೇ ನನ್ನಲ್ಲಿ ಯುದ್ಧಕೌಶಲವಿದೆ.

ಶೇತೇ ಮಯಾ ನಿಹತಾ ಭಾರತೀಯಂ
ಚಮೂ ರಾಜನ್ ದೇವಚಮೂಪ್ರಕಾಶಾ ।
ಯೇ ನಾಸ್ತ್ರಜ್ಞಾಸ್ತಾನಹಂ ಹನ್ಮಿ ಶಸ್ತ್ರೈ-
ಸ್ತಸ್ಮಾಲ್ಲೋಕಂ ನೇಹ ಕರೋಮಿ ಭಸ್ಮಸಾತ್ ॥೪೩॥

ರಾಜನೆ, ದೇವಸೈನ್ಯದಂಥ ಕೌರವಸೈನ್ಯ ನನ್ನಿಂದ ಹತವಾಗಿ ನೆಲದ ಮೇಲೆ ಒರಗಿದೆ. ಅಸ್ತ್ರಬಲ್ಲದವರನ್ನು ಶಸ್ತ್ರಗಳಿಂದಲೆ ಕೊಲ್ಲುತ್ತೇನೆ. ಅದರಿಂದ ನಾನು ಅಸ್ತ್ರದಿಂದ ಲೋಕವನ್ನು ಭಸ್ಮ ಮಾಡುವುದಿಲ್ಲ.

ಜೈತ್ರಂ ರಥಂ ಭೀಮಮಾಸ್ಥಾಯ ಕೃಷ್ಣ
ಪ್ರಯಾವ ಶೀಘ್ರಂ ಸೂತಪುತ್ರಂ ನಿಹಂತುಮ್ ।
ರಾಜಾ ಭವತ್ವದ್ಯ ಸುನಿರ್ವೃತೋಽಯಂ
ಕರ್ಣಂ ರಣೇ ನಾಶಯಿತಾಸ್ಮಿ ಬಾಣೈಃ ॥೪೪॥

ಕೃಷ್ಣ ಸದಾ ಜಯವನ್ನೇ ತಂದುಕೊಡುವ ಶತ್ರುಭಯಂಕರವಾದ ನಮ್ಮ ರಥವನ್ನೇರಿ ನಾವು ಬೇಗನೆ ಕರ್ಣನನ್ನು ವಧಿಸಲು ಹೋಗೋಣ. ರಾಜಾ ಯುಧಿಷ್ಠಿರನು ಇಲ್ಲಿಯೆ ಸುಖವಾಗಿರಲಿ. ಕರ್ಣನನ್ನು ರಣದಲ್ಲಿ ಬಾಣಗಳಿಂದ ನಾನೇ ವಧಿಸುತ್ತೇನೆ.

ಅದ್ಯಾಪುತ್ರಾ ತೇನ ರಾಧಾ ಭವಿತ್ರೀ
ಕುಂತೀ ಮಯಾ ವಾ ತದ್ಧತಂ ವಿದ್ಧಿ ಕೃಷ್ಣ ।
ಸತ್ಯಂ ವದಾಮ್ಯದ್ಯ ನ ಕರ್ಣಮಾಜೌ
ಶರೈರಹತ್ವಾ ಕವಚಂ ವಿಮೋಕ್ಷ್ಯೇ ॥೪೫॥

ಕೃಷ್ಣ ಇಂದು ಕರ್ಣನು ಹತನಾಗುವುದರಿಂದ ರಾಧೆ ಅಪುತ್ರಳೆನಿಸುತ್ತಾಳೆ, ಇಲ್ಲವೆ, ನಾನು ಹತನಾಗುವುದರಿಂದ ಕುಂತಿ ಅಪುತ್ರಳಾಗುತ್ತಾಳೆ, ಇದು ಸತ್ಯ. ನಾನು ಇನ್ನೂ ಒಂದು ಸತ್ಯವನ್ನು ಹೇಳುತ್ತೇನೆ– ರಣದಲ್ಲಿ ಕರ್ಣನನ್ನು ಕೊಲ್ಲದೆ ನಾನು ನನ್ನ ಕವಚವನ್ನು ಬಿಚ್ಚುವುದಿಲ್ಲ.

ಸಂಜಯಃ

ಇತ್ಯೇವಮುಕ್ತ್ವಾ ಪುನರಾಹ ಪಾರ್ಥೋ
ಯುಧಿಷ್ಠಿರಂ ಧರ್ಮಭೃತಾಂ ವರಿಷ್ಠಮ್ ॥೪೬॥

ಸಂಜಯ ನುಡಿದ— ಅರ್ಜುನ ಹೀಗೆ ಹೇಳಿ ಪುನಃ ಯುಧಿಷ್ಠಿರನಿಗೆ ಹೇಳಿದ.

ವಿಮುಕ್ತಶಸ್ತ್ರಾಸ್ತ್ರಧನುರ್ವಿಸೃಜ್ಯ
ಕೋಶೇ ಚ ಖಡ್ಗಂ ವಿನಿಧಾಯ ತೂರ್ಣಮ್ ।

ಸ ವ್ರೀಡಯಾ ನಮ್ರಶಿರಾಃ ಕಿರೀಟೀ
ಯುಧಿಷ್ಠಿರಂ ಪ್ರಾಂಜಲಿರಭ್ಯುವಾಚ ॥೪೭॥

ಶಸ್ತ್ರಾಸ್ತ್ರಗಳನ್ನು ಬಿಲ್ಲನ್ನು ಕೆಳಗಿಟ್ಟು ಖಡ್ಗವನ್ನು ಒರೆಯಲ್ಲಿ ಸೇರಿಸಿ, ಲಜ್ಜೆಯಿಂದ ತಲೆತಗ್ಗಿಸಿಕೊಂಡು ಯುಧಿಷ್ಠಿರನಿಗೆ ಅರ್ಜುನ ಬೇಗನೆ ಕೈಮುಗಿದು ಹೇಳಿದ.

ಪ್ರಸೀದ ರಾಜನ್ ಕ್ಷಮ ಯನ್ಮಯೋಕ್ತಂ
ಕಾಲೇ ಭವಾನ್ ವೇತ್ಸ್ಯತಿ ತನ್ನಮಸ್ತೇ ॥೪೮॥

'ರಾಜನೆ, ನಾನು ಹೇಳಿದ್ದನ್ನು ಕ್ಷಮಿಸು, ಪ್ರಸನ್ನನಾಗು. ನಾನೀಗ ಹೇಳಿದ್ದು ಸೋದರಹತ್ಯೆ ಮತ್ತು ಆತ್ಮಹತ್ಯೆಗಳಿಗೆ ಪರ್ಯಾಯವಾಗಿ ಕಾಲಾನುಸಾರ ಹೇಳಿದ್ದಾದ್ದರಿಂದ ಅದನ್ನು ಹಾಗೇ ತಿಳಿಯುವಿ ಎಂದು ನಂಬುತ್ತೇನೆ. ನಿನಗೆ ನಮಿಸುತ್ತೇನೆ.'

ಪ್ರಸಾದ್ಯ ರಾಜಾನಮಮಿತ್ರಸಾಹಂ
ಸ್ಥಿತೋಽಬ್ರವೀಚ್ಚೈನಮಭಿಪ್ರಪನ್ನಃ ।
ನೈವಂ ಚಿರಾತ್ ಕ್ಷಿಪ್ರಮಿದಂ ಭವಿಷ್ಯತ್
ಕೃಷ್ಣಪ್ರಸಾದಾತ್ ತವ ಚೈವ ರಾಜನ್ ॥೪೯॥

ಶತ್ರುಗಳನ್ನು ಇದಿರಿಸಬಲ್ಲ ರಾಜಾ ಯುಧಿಷ್ಠಿರನನ್ನು ಅರ್ಜುನ ಸಮಾಧಾನ ಪಡಿಸಿ ಭಕ್ತಿಯಿಂದ ನಮಿಸಿ ಹೇಳಿದ– 'ರಾಜನೆ, ಇಂಥ ಕಹಿಪ್ರಸಂಗ ಕೃಷ್ಣಾನುಗ್ರಹ ದಿಂದ ನಿನಗೆ ಇಂದೂ ಮುಂದೂ ಎಂದೆಂದಿಗೂ ಮರುಕಳಿಸದು.

ಯಾಮ್ಯೇಷ ಭೀಮಂ ಸಮರಾತ್ ಪ್ರಮೋಕ್ತುಂ
ಸರ್ವಾತ್ಮನಾ ಸೂತಪುತ್ರಂ ಚ ಹಂತುಮ್ ॥೫೦॥

ತವ ಪ್ರಿಯಾರ್ಥಂ ಮಮ ಜೀವಿತಂ ಹಿ
ಬ್ರವೀಮಿ ಸತ್ಯಂ ತದವೇಹಿ ರಾಜನ್ ।
ಇತಿ ಪ್ರಯಾಸ್ಯನ್ನುಪಸಂಗೃಹ್ಯ ಪಾದೌ
ಸಮುತ್ಥಿತೋ ದೀಪ್ತತೇಜಾಃ ಕಿರೀಟೀ ॥೫೧॥

'ಸಮರದಿಂದ ಭೀಮನಿಗೆ ವಿರಾಮ ನೀಡುವುದಕ್ಕೂ ಸರ್ವಾತ್ಮನಾ ಕರ್ಣನನ್ನು ವಧಿಸುವುದಕ್ಕೂ ನಾನು ತೆರಳುತ್ತೇನೆ. ನಿನ್ನ ಪ್ರಿಯ ಹಿತಕ್ಕಾಗಿ ನನ್ನ ಬಾಳು

ಮುಡಿಪಾಗಿದೆ. ನಿಜವನ್ನೇ ಹೇಳುತ್ತಿದ್ದೇನೆ, ತಿಳಿದುಕೊ ರಾಜನೆ' ಎಂದು ರಣಕ್ಕೆ ಹೋಗುವ ಮುನ್ನ ಅಣ್ಣನ ಕಾಲುಗಳನ್ನು ಮುಟ್ಟಿ ಹೊಳೆಯುವ ತೇಜಸ್ಸುಳ್ಳ ಅರ್ಜುನ ಎದ್ದುನಿಂತ.

ಏತಚ್ಛ್ರುತ್ವಾ ಪಾಂಡವೋ ಧರ್ಮರಾಜೋ
ಭ್ರಾತುರ್ವಾಕ್ಯಂ ಪರುಷಂ ಫಲ್ಗುನಸ್ಯ ।
ಉತ್ಥಾಯ ತಸ್ಮಾಚ್ಛಯನಾದುವಾಚ
ಪಾರ್ಥಂ ತತೋ ದುಃಖಪರೀತಚೇತಾಃ ॥೫೨॥

ಆದರೆ ಧರ್ಮರಾಜ ಅರ್ಜುನನ ಕಟುನುಡಿಗಳನ್ನು ಕೇಳಿ ಮನದಲ್ಲಿ ದುಃಖ ತುಂಬಿಕೊಂಡು ಶಯ್ಯೆಯಿಂದ ಎದ್ದು ಅರ್ಜುನನಿಗೆ ನುಡಿದ.

ಕೃತಂ ಮಯಾ ಪಾರ್ಥ ಯಥಾ ನ ಸಾಧು
ಯೇನ ಪ್ರಾಪ್ತಂ ವ್ಯಸನಂ ವಃ ಸುಘೋರಮ್ ।
ತಸ್ಮಾಚ್ಛಿರಶ್ಛಿಂಧಿ ಮಮೇದಮದ್ಯ
ಕುಲಾಂತಕಸ್ಯಾಧಮಪೂರುಷಸ್ಯ ॥೫೩॥

ಅರ್ಜುನ, ನಾನು ಮಾಡಿದ್ದು ಸರಿಯಲ್ಲ. ನಿಮಗೆ ಘೋರವಾದ ವ್ಯಸನ ಉಂಟಾಗುವಂತೆ ಮಾಡಿದ್ದೇನೆ. ಅದರಿಂದ ನನ್ನ ತಲೆಯನ್ನು ಈಗಲೆ ಕತ್ತರಿಸು. ನಾನು ಕುಲಕ್ಕೆ ಮೃತ್ಯು, ಅಧಮ ಪುರುಷ.

ಪಾಪಸ್ಯ ಪಾಪವ್ಯಸನಾನ್ವಿತಸ್ಯ
ವಿಮೂಢಬುದ್ಧೇರಲಸಸ್ಯ ಭೀರೋಃ ।
ವೃದ್ಧಾವಮಂತುಃ ಪರುಷಸ್ಯ ಚೈವ
ಕಿಂ ತೇ ಚಿರಂ ಮಾಮನುವೃತ್ಯ ರೂಕ್ಷಮ್ ॥೫೪॥

ಪಾಪಿ ನಾನು, ಪಾಪಕರವಾದ ಜೂಜಿನ ಚಟ ಉಳ್ಳವನು. ಮಂಕು ಬುದ್ಧಿಯವನು. ಸೋಮಾರಿ, ಹೇಡಿ, ಹಿರಿಯರನ್ನು ಅವಮಾನಿಸುವವನು, ಕಠಿನ ಸ್ವಭಾವದವನು. ಒರಟು ಸ್ವಭಾವದವನು. ಸದಾ ನನ್ನ ಸೇವೆ ಮಾಡಿದರೆ ನಿನಗೇನು ಫಲ?

ಗಚ್ಛಾಮ್ಯಹಂ ವನಮೇವಾದ್ಯ ಪಾಪಃ
ಸುಖಂ ಭವಾನ್ ವರ್ತತಾಂ ಮದ್ವಿಹೀನಃ ।
ಯೋಗ್ಯೋ ರಾಜಾ ಭೀಮಸೇನೋ ಮಹಾತ್ಮಾ
ಕ್ಲೀಬಸ್ಯ ವಾ ಮಮ ಕಿಂ ರಾಜ್ಯಕೃತ್ಯಮ್ ॥೫೫॥

ನಾನು ಇಂದೇ ವನವಾಸಕ್ಕೆ ಹೋಗುವೆನು, ಪಾಪಿ, ನಾನಿಲ್ಲದಿರುವುದರಿಂದ ನೀನು ಸುಖವಾಗಿರು. ಮಹಾತ್ಮ ಭೀಮನೆ ಯೋಗ್ಯರಾಜನಾಗಬಲ್ಲ. ನಾನು ನಪುಂಸಕ. ನನ್ನಿಂದ ರಾಜಕಾರ್ಯ ಏನು ನಡೆದೀತು?

ನ ಚಾಸ್ಮಿ ಶಕ್ತಃ ಪರುಷಾಣಿ ಸೋಢುಂ
ಪುನಸ್ತವೇಮಾನಿ ರುಷಾನ್ವಿತಸ್ಯ ।
ಭೀಮೋಽಸ್ತು ರಾಜಾ ಮಮ ಜೀವಿತೇನ
ಕಿಂ ಕಾರ್ಯಮದ್ಯಾವಮತಸ್ಯ ವೀರ ॥೫೬॥

ಕೋಪದಿಂದ ನೀನಾಡುವ ಈ ಕಟುನುಡಿಗಳನ್ನು ಪುನಃ ಸಹಿಸಿಕೊಳ್ಳಲು ನನಗೆ ಶಕ್ತಿ ಇಲ್ಲ. ಭೀಮ ರಾಜನಾಗಲಿ. ಅವಮಾನಿತನಾದ ನಾನು ಈಗ ಬದುಕಿದ್ದು ಏನು ಫಲ?

ಇತ್ಯೇವಮುಕ್ತ್ವಾ ಸಹಸೋತ್ಪಪಾತ
ರಾಜಾ ತತಸ್ತಚ್ಛಯನಂ ವಿಹಾಯ ।
ಇಯೇಷ ನಿರ್ಗಂತುಮಥೋ ವನಾಯ
ತಂ ವಾಸುದೇವಃ ಪ್ರಣತೋಽಭ್ಯುವಾಚ ॥೫೭॥

ಹೀಗೆ ಹೇಳಿ ಧರ್ಮರಾಜ ಹಾಸಿಗೆಬಿಟ್ಟು ಥಟ್ಟನೆ ಎದ್ದುನಿಂತ. ಕಾಡಿಗೆ ಹೋಗಲು ಬಯಸಿದ. ಅವನಿಗೆ ಕೃಷ್ಣ ನಮಸ್ಕರಿಸಿ ನುಡಿದ.

ರಾಜನ್ ನ ವಿದಿತಂ ತತ್ತೇ ಯಥಾ ಗಾಂಡೀವಧನ್ವನಃ ।
ಪ್ರತಿಜ್ಞಾ ಸತ್ಯಸಂಧಸ್ಯ ಗಾಂಡೀವಂ ಪ್ರತಿ ವೈ ಶ್ರುತಾ ॥೫೮॥

ರಾಜನೆ, ಸತ್ಯಸಂಧ ಗಾಂಡೀವಧನುರ್ಧಾರಿ ಅರ್ಜುನನು ಗಾಂಡೀವದ ವಿಷಯದಲ್ಲಿ ಮಾಡಿದ ಪ್ರತಿಜ್ಞೆಯನ್ನು ನೀನೀಗಲೇ ಕೇಳಿರುವೆ. ಇದು ನಿನಗೆ ಗೊತ್ತಿರಲಿಲ್ಲ.

ಬ್ರೂಯಾದ್ಯ ಏವಂ ಗಾಂಡೀವಂ ದೇಹ್ಯನ್ಯಸ್ಮೈ ತ್ವಮಿತ್ಯುತ ।
ಸ ವಧ್ಯೋಽಸ್ಯ ಪುಮಾಂಲ್ಲೋಕೇ ತ್ವಯಾ ಚೋಕ್ತೋಯಮೀದೃಶಮ್
॥೫೯॥

ಗಾಂಡೀವವನ್ನು ಇನ್ನೊಬ್ಬನಿಗೆ ಕೊಡು ಎಂದು ಲೋಕದಲ್ಲಿ ಯಾವನಾದರೂ ಹೇಳಿದರೆ ಅವನು ಅರ್ಜುನನ ಕೈಯಲ್ಲಿ ವಧ್ಯನಾಗುವನು. ನೀನೀಗ ಇಂಥ ಮಾತನ್ನು ಆಡಿರುವೆ.

ಅತಃ ಸತ್ಯಾಂ ಪ್ರತಿಜ್ಞಾಂ ತಾಂ ಪಾರ್ಥೇನ ಪರಿರಕ್ಷತಾ ।
ಮಚ್ಛಂದಾದವಮಾನೋಽಯಂ ಕೃತಸ್ತವ ಮಹೀಪತೇ ॥೬೦॥

ತಾನು ಮಾಡಿದ್ದ ಪ್ರತಿಜ್ಞೆಯನ್ನು ಸತ್ಯವಾಗಿಸಿ ರಕ್ಷಣೆ ಮಾಡುವುದಕ್ಕಾಗಿ ಅರ್ಜುನನು ನನ್ನ ಇಚ್ಛೆಯಂತೆಯೆ ನಿನಗೆ ಅವಮಾನ ಮಾಡಿದ್ದಾನೆ.

ಗುರೂಣಾಮವಮಾನೋ ಹಿ ವಧ ಇತ್ಯಭಿಧೀಯತೇ ॥೬೧॥

ಹಿರಿಯರಿಗೆ ಅವಮಾನ ಮಾಡಿದರೆ ಅವರಿಗೆ ಅದು ವಧವೆನಿಸುತ್ತದೆ.

ತಸ್ಮಾತ್ತ್ವಂ ವೈ ಮಹಾಬಾಹೋ ಮಮ ಪಾರ್ಥಸ್ಯ ಚೋಭಯೋಃ ।
ವ್ಯತಿಕ್ರಮಮಿಮಂ ರಾಜನ್ ಸಂಕ್ಷಮಸ್ವಾರ್ಜುನಂ ಪ್ರತಿ ॥೬೨॥

ಅದರಿಂದ, ರಾಜನೆ, ನನ್ನ ಮತ್ತು ಅರ್ಜುನ ಇಬ್ಬರ ಈ ಅಪಚಾರವನ್ನು ನೀನು ಅರ್ಜುನನಿಗಾಗಿ ಕ್ಷಮಿಸು.

ಶರಣಂ ತ್ವಾಂ ಮಹಾರಾಜ ಪ್ರಪನ್ನೌ ಸ್ವ ಉಭಾವಪಿ ।
ಕ್ಷನ್ತುಮರ್ಹಸಿ ಮೇ ರಾಜನ್ ಪ್ರಣತಸ್ಯಾಭಿಯಾಚತಃ ॥೬೩॥

ಮಹಾರಾಜ, ನಾವಿಬ್ಬರೂ ನಿನ್ನನ್ನು ಶರಣು ಹೊಂದಿದ್ದೇವೆ. ನಾನು ನಮಿಸಿ ಬೇಡಿಕೊಳ್ಳುತ್ತೇನೆ, ಕ್ಷಮಿಸು.

ರಾಧೇಯಸ್ಯಾದ್ಯ ಪಾಪಸ್ಯ ಭೂಮಿಃ ಪಾಸ್ಯತಿ ಶೋಣಿತಮ್ ।
ಸತ್ಯಂ ತೇ ಪ್ರತಿಜಾನಾಮಿ ಹತಂ ವಿದ್ಧ್ಯದ್ಯ ಸೂತಜಮ್ ॥೬೪॥

ಪಾಪಿ ಕರ್ಣನ ನೆತ್ತರನ್ನು ಧರೆ ಪಾನ ಮಾಡುತ್ತದೆ, ಇದು ಸತ್ಯ, ಶಪಥ ಮಾಡಿ ನಿನಗೆ ಹೇಳುತ್ತೇನೆ. ಕರ್ಣನು ಇಂದು ಸತ್ತನೆಂದೇ ತಿಳಿ.

ಯಸ್ಯೇಚ್ಛಸಿ ವಧಂ ತಸ್ಯ ಗತಮೇವಾದ್ಯ ಜೀವಿತಮ್ ॥೬೫॥

ನೀನು ಅವನ ವಧವನ್ನು ಬಯಸುವಿ ಎಂದಮೇಲೆ ಅವನ ಆಯುಸ್ಸು ಇಂದೇ ತೀರಿತು.

ಇತಿ ಕೃಷ್ಣವಚಃ ಶ್ರುತ್ವಾ ಧರ್ಮರಾಜೋ ಯುಧಿಷ್ಠಿರಃ ।
ಸಸಂಭ್ರಮಂ ಹೃಷೀಕೇಶಮುತ್ಥಾಪ್ಯ ಪ್ರಣತಂ ತದಾ ॥೬೬॥

ಕೃತಾಂಜಲಿಮಿದಂ ವಾಕ್ಯಮುವಾಚಾನಂತರಂ ವಚಃ ॥೬೭॥

ಹೀಗೆ ಕೃಷ್ಣನ ಮಾತನ್ನು ಕೇಳಿ ಧರ್ಮರಾಜ ಸಡಗರದಿಂದ ನಮಿಸಿದ್ದ ಕೃಷ್ಣನನ್ನು ಎಬ್ಬಿಸಿ, ಕೈಮುಗಿದು ಅವನಿಗೆ ಒಡನೆ ಈ ಮಾತನ್ನು ನುಡಿದ.

ಏವಮೇತದ್ಯಥಾತ್ಥ ತ್ವಮಸ್ಯೇಷೋಽತಿಕ್ರಮೋ ಮಮ ।
ಅನುನೀತೋಽಸ್ಮಿ ಗೋವಿಂದ ತಾರಿತಶ್ಚಾದ್ಯ ಮಾಧವ ॥೬೮॥

ಕೃಷ್ಣ ನೀನು ಹೇಳಿದ್ದು ಸರಿಯೆ. ನನ್ನಿಂದ ಈ ಒಂದು ಅತಿಕ್ರಮ ನಡೆದಿದೆ. ಅದರಿಂದ ನನ್ನನ್ನು ಮುನ್ನಡೆಸಿ ಪಾರುಮಾಡಿರುವೆ.

ಮೋಕ್ಷಿತಾ ವ್ಯಸನಾದ್ ಘೋರಾದ್ ವಯಮದ್ಯ ತ್ವಯಾಚ್ಯುತ ॥೬೯॥

ಘೋರ ಆಪತ್ತಿನಿಂದ ನೀನು ನಮ್ಮನ್ನು ಬಿಡುಗಡೆ ಮಾಡಿರುವೆ.

ಭವಂತಂ ನಾವಮಾಸಾದ್ಯ ಹ್ಯಾವಾಂ ವ್ಯಸನಸಾಗರಾತ್ ।
ಘೋರಾದದ್ಯ ಸಮುತ್ತೀರ್ಣಾವುಭಾವಜ್ಞಾನಮೋಹಿತೌ ॥೭೦॥

ಘೋರವಾದ ದುಃಖಸಾಗರದಿಂದ ಇಂದು ಅಜ್ಞಾನಮೋಹಿತರಾದವರು ಇಬ್ಬರೂ ನಾವು ನಿನ್ನನ್ನು ನೌಕೆಯಾಗಿ ಮಾಡಿಕೊಂಡು ದಾಟಿಬಿಟ್ಟೆವು.

ತ್ವದ್ಬುದ್ಧಿಪ್ಲವಮಾಸಾದ್ಯ ದುಃಖಶೋಕಾರ್ಣವಾದ್ ವಯಮ್ ।
ಸಮುತ್ತೀರ್ಣಾಃ ಸಹಾಮಾತ್ಯಾಃ ಸನಾಥಾಃ ಸ್ಮ ತ್ವಯಾಚ್ಯುತ ॥೭೧॥

ನಿನ್ನ ಬುದ್ಧಿಯನ್ನು ನೌಕೆಯಾಗಿ ಆಶ್ರಯಿಸಿಕೊಂಡು ದುಃಖ–ಶೋಕ

ಸಾಗರದಿಂದ ನಾವು ನಮ್ಮ ಪರಿವಾರದೊಂದಿಗೆ ಪಾರಾದೆವು, ನೀನೇ ನಮಗೆ ರಕ್ಷಕನಾಗಿರುವೆ, ಕೃಷ್ಣ

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಧರ್ಮರಾಜಾರ್ಜುನಸಂವಾದೇ ಸಪ್ತಷಷ್ಟಿತಮೋಽಧ್ಯಾಯಃ ॥೬೭॥

❖

ಮಹಾಭಾರತತಾತ್ಪರ್ಯನಿರ್ಣಯ

ತತಃ ಪ್ರಣಮ್ಯ ಬೀಭತ್ಸುರಗ್ರಜಂ ಪರಿರಂಭಿತಃ ।
ತೇನಾಭಿನಂದಿತಃ ಪ್ರೀತ್ಯಾ ಚಾಶೀರ್ಭಿಃ ಪ್ರಯಯೌ ಯುಧೇ ॥೧೩೭॥

ಬಳಿಕ ಅರ್ಜುನ ಅಣ್ಣನನ್ನು ನಮಿಸಿ ಅವನ ಆಲಿಂಗನ ಪಡೆದು ಅವನಿಂದ ಪ್ರೀತಿಯ ಆಶೀರ್ವಾದಗಳಿಂದ ಅಭಿನಂದಿತನೂ ಆಗಿ ಯುದ್ಧಕ್ಕೆ ಹೊರಟ.

❖❖❖

ಅರವತ್ತೆಂಟನೆಯ ಅಧ್ಯಾಯ

ಯುಧಿಷ್ಠಿರ ಕ್ಷಮಿಸಿ ಕರ್ಣವಧೆಗೆ ಅನುಜ್ಞೆಯನ್ನು,
ಜಯಾಶೀರ್ವಾದಗಳನ್ನು ಅರ್ಜುನನಿಗೆ ನೀಡುತ್ತಾನೆ.

ಸಂಜಯಃ

ಇತಿ ಸ್ಮ ಕೃಷ್ಣವಚನಾತ್ಪತ್ಯುಚ್ಚಾರ್ಯ ಯುಧಿಷ್ಠಿರಮ್ ।
ಬಭೂವ ವಿಮನಾಃ ಪಾರ್ಥ ಕಿಂಚಿತ್ ಕೃತ್ವೇವ ಪಾತಕಮ್ ॥೧॥

ಸಂಜಯ ನುಡಿದ— ಹೀಗೆ ಕೃಷ್ಣನ ಆದೇಶದಂತೆ ಅರ್ಜುನನು ಯುಧಿಷ್ಠಿರನಲ್ಲಿ ಕ್ಷಮಾಯಾಚನೆ ಮಾಡಿಯೂ ಕೂಡ ತಾನು ಪಾಪ ಮಾಡಿದ್ದಂತೂ ನಿಜವೆ ಎಂದು ಮನಸ್ಸಿನಲ್ಲಿ ಸ್ವಲ್ಪ ದುಃಖಿತನಾದ.

ತತೋಽಬ್ರವೀದ್ ವಾಸುದೇವಃ ಪ್ರಹಸನ್ನಿವ ಪಾಂಡವಮ್ ।
ಕಥಂ ನಾಮ ಭವೇದೇತದ್ ಯದಿ ತ್ವಂ ಪಾರ್ಥ ಧರ್ಮಜಮ್ ।
ಅಸಿನಾ ತೀಕ್ಷ್ಣಧಾರೇಣ ಹನ್ಯಾ ಧರ್ಮೇ ವ್ಯವಸ್ಥಿತಮ್ ॥೨॥

ಆಗ ಕೃಷ್ಣ ನಕ್ಕು ಹೇಳಿದ– ಅರ್ಜುನ, ಒಂದುವೇಳೆ ಧರ್ಮದಲ್ಲಿ ಸ್ಥಿರನಾಗಿದ್ದ

ಧರ್ಮರಾಜನನ್ನು ನೀನು ಹರಿತವಾದ ಅಲುಗಿನ ಖಡ್ಗದಿಂದ ಸಂಹರಿಸಿದ್ದರೆ ಅದರ ಪರಿಣಾಮ ಹೇಗಿರುತ್ತಿತ್ತು?

ತ್ವಮಿತ್ಯುಕ್ತೆ ತ್ವಯೈವ ರಾಜಾನಮೇವಂ ಕಶ್ಮಲಮಾವಿಶಃ ।
ಹತ್ವಾ ತು ನೃಪತಿಂ ಪಾರ್ಥ ಅಕರಿಷ್ಯಃ ಕಿಮುತ್ತರಮ್ ।
ಏವಂ ಸುದುರ್ವಿದೋ ಧರ್ಮೋ ಮಂದಪ್ರಜ್ಞೈರ್ವಿಶೇಷತಃ ॥೩॥

ಕೇವಲ 'ನೀನು' ಎಂಬ ಸಂಬೋಧನೆ ಮಾಡಿಯೇ ಹೀಗೆ ನೀನು ದುಃಖಿತನಾಗಿರುವೆ. ಇನ್ನು, ರಾಜನನ್ನು ಖಡ್ಗದಿಂದ ಸಂಹರಿಸಿದ್ದರೆ ಅದಕ್ಕೆ ಏನು ಪರಿಹಾರ ಮಾಡುತ್ತಿದ್ದೆ? ಹೀಗೆ ಧರ್ಮವು ವಿಶೇಷವಾಗಿ ಮಂದಬುದ್ಧಿಯವರಿಗೆ ತಿಳಿಯಲು ಅಶಕ್ಯ.

ಹಿಂದೆ (ಅ.67-ಶ್ಲೋ.34, 35) ಹೇಳಿದ್ದೇ ಇಲ್ಲಿ ಪುನರುಕ್ತವಾಗಿದೆ, ಏಕೆಂದರೆ ಅರ್ಜುನ ಈಗ ಹಿಂದಿನಂತೇ ಪುನಃ ದುಃಖಿತನಾಗಿದ್ದಾನೆ. ಅದರಿಂದ ಪುನರುಕ್ತಿ ದೋಷವಲ್ಲ. ಪ್ರಕ್ಷಿಪ್ತವೂ ಅಲ್ಲ.

ಸ ಭವಾನ್ ಧರ್ಮಭೀರುತ್ವಾದ್ ಧ್ರುವಮೈಷ್ಯನ್ಮಹತ್ತಮಃ ।
ನರಕಂ ಘೋರರೂಪಂ ಚ ಭ್ರಾತುರ್ಜ್ಯೇಷ್ಠಸ್ಯ ವೈ ವಧಾತ್ ॥೪॥

ಧರ್ಮವಿಷಯದಲ್ಲಿ ಭಯಪಡುವವನಾದ್ದರಿಂದ ನೀನು ಈ ಅಣ್ಣನ ವಧಕ್ಕಿಂತಲೂ ನಿಶ್ಚಯವಾಗಿ ಘೋರಸ್ವರೂಪದ ನರಕವನ್ನೂ ಮಹಾ ದುಃಖವನ್ನೂ ನಿಶ್ಚಯವಾಗಿ ಹೊಂದುತ್ತಿದ್ದೆ.

ಸ ತ್ವಂ ಧರ್ಮಭೃತಾಂ ಶ್ರೇಷ್ಠಂ ರಾಜಾನಂ ಧರ್ಮಸಂಹಿತಮ್ ।
ಪ್ರಸಾದಯ ಕುರುಶ್ರೇಷ್ಠಮೇತದತ್ರ ಮತಂ ಮಮ ॥೫॥

ಈಗ ನೀನು ಧರ್ಮರಕ್ಷಕರಲ್ಲಿ ಶ್ರೇಷ್ಠನಾದ ಧರ್ಮಾಸಕ್ತನಾದ ರಾಜನನ್ನು ಒಲಿಸಿಕೊಳ್ಳು. ಈ ವಿಷಯದಲ್ಲಿ ನನ್ನ ಅಭಿಪ್ರಾಯ ಇದು.

ಪ್ರಸಾದ್ಯ ಭಕ್ತ್ಯಾ ರಾಜಾನಂ ಪ್ರೀತಂ ಚೈವ ಯುಧಿಷ್ಠಿರಮ್ ।
ಪ್ರಯಾಮಸ್ತ್ವರಿತಾ ಯೋದ್ಧುಂ ಸೂತಪುತ್ರರಥಂ ಪ್ರತಿ ॥೬॥

ಭಕ್ತಿಯಿಂದ ಸಂತುಷ್ಟನಾಗುವ ಯುಧಿಷ್ಠಿರನನ್ನು ಒಲಿಸಿಕೊಂಡು ನಾವು ಬೇಗನೆ ಯುದ್ಧ ಮಾಡಲು ಕರ್ಣನ ರಥದ ಕಡೆಗೆ ಹೋಗೋಣ.

ಹತ್ವಾ ಸುದುರ್ಜಯಂ ಕರ್ಣಂ ತ್ವಮದ್ಯ ನಿಶಿತೈಃ ಶರೈಃ ।
ವಿಪುಲಂ ಪ್ರೀತಿಮಾಧತ್ಸ್ವ ಧರ್ಮಪುತ್ರಸ್ಯ ಮಾನದ ॥೭॥

ಜಯಿಸಲಾಗದ ಕರ್ಣನನ್ನು ನೀನು ತೀಕ್ಷ್ಣವಾದ ಬಾಣಗಳಿಂದ ಸಂಹರಿಸಿ ಧರ್ಮರಾಜನಿಗೆ ಬಹಳ ಸಂತೋಷವನ್ನುಂಟು ಮಾಡು.

ಏತದತ್ರ ಮಹಾಬಾಹೋ ಪ್ರಾಪ್ತಕಾಲಂ ಮತಂ ಮಮ ।
ಏವಂ ಕೃತೇ ಕೃತಂ ಚೈವ ತವ ಕಾರ್ಯಂ ಭವಿಷ್ಯತಿ ॥೮॥

ಅರ್ಜುನ, ಇದು ನೀನು ಈಗ ಮಾಡಬೇಕಾಗಿರುವ ಕೆಲಸವೆಂದು ನನ್ನ ಅಭಿಪ್ರಾಯ. ಹೀಗೆ ಮಾಡಿದಾಗಲೆ ನಿನ್ನ ಕರ್ಣವಧ ಕಾರ್ಯ ಕೈಗೂಡುವುದು.

ತತೋಽರ್ಜುನೋ ಮಹಾರಾಜ ಲಜ್ಜಯಾ ವೈ ಸಮನ್ವಿತಃ ।
ಧರ್ಮರಾಜಸ್ಯ ಚರಣೌ ಪ್ರಪೇದೇ ಶಿರಸಾಽನಘ ॥೯॥

ಆಗ, ಮಹಾರಾಜ, ಅರ್ಜುನನು ಲಜ್ಜಾಯುಕ್ತನಾಗಿ ಧರ್ಮರಾಜನ ಕಾಲುಗಳ ಮೇಲೆ ತಲೆ ಇಟ್ಟು ನಮಿಸಿದ.

ಉವಾಚ ಭರತಶ್ರೇಷ್ಠ ಪ್ರಸೀದೇತಿ ಪುನಃ ಪುನಃ ।
ಕ್ಷಮಸ್ವ ರಾಜನ್ ಯತ್ಪ್ರೋಕ್ತಂ ಧರ್ಮಕಾಮೇನ ಭೀರುಣಾ ॥೧೦॥

ಪ್ರಸನ್ನನಾಗೆಂದು ಪುನಃ ಪುನಃ ನುಡಿದ. 'ಪ್ರತಿಜ್ಞಾಪಾಲನರೂಪವಾದ ಧರ್ಮದ ಬಯಕೆಯಿಂದ ಭೀತನಾಗಿ ನಿನ್ನ ಮುಂದೆ ನಾನೇನು ನಿಷ್ಠುರವಾಗಿ ಮಾತನಾಡಿದೆನೊ ಅದನ್ನು ಕ್ಷಮಿಸು' ಎಂದ.

ಪಾದಯೋಃ ಪತಿತಂ ದೃಷ್ಟ್ವಾ ಧರ್ಮರಾಜೋ ಯುಧಿಷ್ಠಿರಃ ।
ಧನಂಜಯಮಮಿತ್ರಘ್ನಂ ರುದಂತಂ ಭರತರ್ಷಭ ॥೧೧॥

ಉತ್ಥಾಪ್ಯ ಭ್ರಾತರಂ ರಾಜಾ ಧರ್ಮರಾಜೋ ಧನಂಜಯಮ್ ।
ಸಮಾಶ್ಲಿಷ್ಯ ಚ ಸಸ್ನೇಹಂ ಪ್ರರುರೋದ ಮಹೀಪತಿಃ ॥೧೨॥

ಕಣ್ಣೀರು ಸುರಿಸುತ್ತ ಕಾಲಿಗೆ ಬಿದ್ದ ಶತ್ರುನಾಶಕನಾದ ಅರ್ಜುನನನ್ನು ನೋಡಿ

ರಾಜಾ ಯುಧಿಷ್ಠಿರನು ಅವನನ್ನು ಎಬ್ಬಿಸಿ, ಪ್ರೀತಿಯಿಂದ ಆಲಿಂಗಿಸಿ ಕಣ್ಣೀರು ಸುರಿಸಿದ.

ರುದಿತ್ವಾ ತು ಚಿರಂ ಕಾಲಂ ಭ್ರಾತರೌ ಸುಮಹಾದ್ಯುತೀ ।
ಕೃತಶೌಚೌ ನರವ್ಯಾಘ್ರೌ ಪ್ರೀತಿಮಂತೌ ಬಭೂವತುಃ ॥೧೩॥

ಮಹಾಪ್ರಕಾಶವುಳ್ಳ ಸೋದರರು ಇಬ್ಬರೂ ಬಹಳ ಹೊತ್ತು ಕಣ್ಣೀರು ಸುರಿಸಿ ಅದಕ್ಕೆ ಶುದ್ಧಿ ಮಾಡಿಕೊಂಡು ಪ್ರಸನ್ನರಾದರು.

ತತ ಆಶ್ಲಿಷ್ಯ ಸ ಪ್ರೇಮ್ಣಾ ಮೂರ್ಧ್ನಿ ಚಾಘ್ರಾಯ ಪಾಂಡವಮ್ ।
ಪ್ರೀತ್ಯಾ ಪರಮಯಾ ಯುಕ್ತಃ ಪ್ರಸ್ಮಯಂಶ್ಚಾಬ್ರವೀಜ್ಜಯಮ್ ॥೧೪॥

ಬಳಿಕ ಯುಧಿಷ್ಠಿರನು ಅರ್ಜುನನನ್ನು ಪ್ರೇಮದಿಂದ ತಬ್ಬಿಕೊಂಡು ನೆತ್ತಿಯಲ್ಲಿ ಆಘ್ರಾಣಿಸಿ ಪರಮ ಸಂತುಷ್ಟನಾಗಿ ಮಂದಹಾಸಪೂರ್ವಕವಾಗಿ ನುಡಿದ.

ಕರ್ಣೇನ ಮೇ ಮಹಾಬಾಹೋ ಸರ್ವಸೈನ್ಯಸ್ಯ ಪಶ್ಯತಃ ।
ಕವಚಂ ಚ ಧ್ವಜಶ್ಚೈವ ಧನುಃ ಶಕ್ತಿರ್ಹಯಾ ಗದಾ ।
ಶರೈಃ ಕೃತ್ತಾ ಮಹೇಷ್ವಾಸ ಯತಮಾನಸ್ಯ ಸಂಯುಗೇ ॥೧೫॥

ಅರ್ಜುನ, ಎಲ್ಲ ಸೈನ್ಯವು ನೋಡುತ್ತಿದ್ದಂತೇ ಕರ್ಣನು, ರಣದಲ್ಲಿ ಯತ್ನ ಮಾಡುತ್ತಿದ್ದ ನನ್ನ ಕವಚ ಧ್ವಜ ಧನುಸ್ಸು ಶಕ್ತಿ ಅಶ್ವಗಳು ಗದೆ ಇವೆಲ್ಲವನ್ನೂ ಬಾಣಗಳಿಂದ ಕತ್ತರಿಸಿದ.

ಸೋಽಹಂ ಜ್ಞಾತ್ವಾ ರಣೇ ತಸ್ಯ ಕರ್ಮ ಕರ್ಣಸ್ಯ ಫಲ್ಗುನ ।
ವ್ಯವಸೀದಾಮಿ ದುಃಖೇನ ನ ಚ ಮೇ ಜೀವಿತಂ ಪ್ರಿಯಮ್ ॥೧೬॥

ಅರ್ಜುನ, ರಣದಲ್ಲಿ ಅವನು ಮಾಡಿದ ಈ ಅವಮಾನವನ್ನು ಕಂಡು ನಾನು ದುಃಖದಿಂದ ಬೇಯಲು ತೊಡಗಿದೆ. ನನಗೆ ಬದುಕೇ ಬೇಡವಾಯಿತು.

ತಮದ್ಯ ಯದಿ ವೈ ವೀರ ನ ಹನಿಷ್ಯಸಿ ಸೂತಜಮ್ ।
ಪ್ರಾಣಾನೇವ ಪರಿತ್ಯಕ್ಷ್ಯೇ ಜೀವಿತಾರ್ಥೋ ಹಿ ಕೋ ಮಮ ॥೧೭॥

ಅವನನ್ನು ನೀನು ಕೊಲ್ಲದಿದ್ದರೆ ನಾನು ಪ್ರಾಣಗಳನ್ನೇ ಬಿಡುತ್ತೇನೆ. ಬದುಕಿರುವುದರಿಂದ ನನಗೆ ಏನು ಫಲ?

ಏವಮುಕ್ತಃ ಪ್ರತ್ಯುವಾಚ ವಿಜಯೋ ಭರತರ್ಷಭ ।
ಸತ್ಯೇನ ತೇ ಶಪೇ ರಾಜನ್ ಪ್ರಸಾದೇನ ತವೈವ ಚ ॥೧೮॥

ಭೀಮೇನ ಚ ನರಶ್ರೇಷ್ಠ ಯಮಾಭ್ಯಾಂ ಚ ಮಹೀಪತೇ ॥೧೯॥

ಮಹಾರಾಜ, ಯುಧಿಷ್ಠಿರನು ಹೀಗೆ ಹೇಳಿದಾಗ ಅರ್ಜುನ ನುಡಿದ– 'ರಾಜನೆ, ನಾನು ಸತ್ಯದ ಮೇಲೆ ನಿನ್ನೊಲುಮೆಯ ಮೇಲೆ, ಭೀಮನ ಮೇಲೆ, ನಕುಲ–ಸಹದೇವರ ಮೇಲೆ ಆಣೆಯಿಟ್ಟು ಹೇಳುತ್ತೇನೆ.

ಯಥಾದ್ಯ ಸಮರೇ ಕರ್ಣಂ ಹನಿಷ್ಯಾಮಿ ಹತೋಽಥ ವಾ ।
ಮಹೀತಳೇ ಪತಿಷ್ಯಾಮಿ ಸತ್ಯೇನಾಯುಧಮಾಲಭೇ ॥೨೦॥

'ಇಂದು ಸಮರದಲ್ಲಿ ಕರ್ಣನನ್ನು ಕೊಲ್ಲುತ್ತೇನೆ, ಇಲ್ಲವೆ ನಾನೇ ಹತನಾಗುತ್ತೇನೆ. ನೆಲದಲ್ಲಿ ಬೀಳುತ್ತೇನೆ. ಸತ್ಯದ ಮೇಲೆ ಆಣೆಯಿಟ್ಟು ಆಯುಧವನ್ನು ಸ್ಪರ್ಶಿಸುತ್ತೇನೆ'.

ಏವಮಾಭಾಷ್ಯ ರಾಜಾನಮಬ್ರವೀನ್ಮಾಧವಂ ವಚಃ ।
ಅದ್ಯ ಕರ್ಣಂ ರಣೇ ಕೃಷ್ಣ ಸೂದಯಿಷ್ಯೇ ನ ಸಂಶಯಃ ।
ತದನುಧ್ಯಾಹಿ ಭದ್ರಂ ತೇ ವಧಂ ತಸ್ಯ ದುರಾತ್ಮನಃ ॥೨೧॥

ಹೀಗೆ ಅರ್ಜುನನು ರಾಜನಿಗೆ ಹೇಳಿ, ಕೃಷ್ಣನಿಗೂ ಹೇಳಿದ– 'ಇಂದು, ಕೃಷ್ಣ ನಾನು ರಣದಲ್ಲಿ ಕರ್ಣನನ್ನು ಸಂಹರಿಸುವೆ, ಸಂಶಯವಿಲ್ಲ. ದುರಾತ್ಮನಾದ ಅವನ ವಧವನ್ನು ಹಾರೈಸು. ನಿನಗೆ ಒಳ್ಳೆಯದಾಗಲಿ.'

ಏವಮುಕ್ತೋಽಬ್ರವೀತ್ ಪಾರ್ಥಂ ಕೇಶವೋ ರಾಜಸತ್ತಮ ।
ಶಕ್ತೋಽಸಿ ಭರತಶ್ರೇಷ್ಠ ಹಂತುಂ ಕರ್ಣಂ ಮಹಾಬಲಮ್ ॥೨೨॥

ಅರ್ಜುನ ಹೀಗೆ ಹೇಳಿದಾಗ ಕೃಷ್ಣ ಹೇಳಿದ– 'ಅರ್ಜುನ, ಮಹಾಬಲ ಕರ್ಣನನ್ನು ಕೊಲ್ಲಲು ನೀನು ಶಕ್ತನಾಗಿರುವೆ.

ಏವಂ ಚಾಪಿ ಹಿ ಮೇ ಕಾಮೋ ನಿತ್ಯಮೇವ ಮಹಾರಥ ।
ಕಥಂ ಭವಾನ್ ರಣೇ ಕರ್ಣಂ ನಿಹನ್ಯಾದಿತಿ ಮೇ ಮತಿಃ ॥೨೩॥

ನನ್ನ ಅಭಿಲಾಷೆಯೂ ಸದಾ ಹೀಗೇ ಇದೆ. 'ನೀನು ಹೇಗೆ ಕರ್ಣನನ್ನು ಕೊಲ್ಲುವಿಯೊ!' ಎಂದು ಚಿಂತಿಸುತ್ತಿದ್ದೇನೆ.'

ಭೂಯಶ್ಚೋವಾಚ ಮತಿಮಾನ್ ಮಾಧವೋ ಧರ್ಮನಂದನಮ್ ।
ಯುಧಿಷ್ಠಿರೇಮಂ ಬೀಭತ್ಸುಂ ತ್ವಂ ಸಾಂತ್ವಯಿತುಮರ್ಹಸಿ ।
ಅನುಜ್ಞಾತುಂ ಚ ಕರ್ಣಸ್ಯ ವಧಾಯಾದ್ಯ ದುರಾತ್ಮನಃ ॥೨೪॥

ಕೃಷ್ಣ ಧರ್ಮರಾಜನಿಗೆ ಪುನಃ ನುಡಿದ– 'ಯುಧಿಷ್ಠಿರ, ಅರ್ಜುನನನ್ನು ನೀನು ಸಂತಯಿಸು. ದುರಾತ್ಮಕರ್ಣನ ವಧೆಗೈಯಲು ಅನುಜ್ಞೆ ನೀಡು.

ಶ್ರುತ್ವಾ ಹ್ಯಯಮಹಂ ಚೈವ ತ್ವಾಂ ಕರ್ಣಶರಪೀಡಿತಮ್ ।
ಪ್ರವೃತ್ತಿಂ ಜ್ಞಾತುಮಾಯಾತಾವಿಹ ಪಾಂಡವನಂದನ ॥೨೫॥

ನೀನು ಕರ್ಣನ ಬಾಣಗಳಿಂದ ಪೀಡಿತನಾಗಿರುವೆ ಎಂದು ಕೇಳಿ ನಾನೂ ಅರ್ಜುನನೂ ನಿನ್ನ ವೃತ್ತಾಂತವನ್ನು ತಿಳಿಯಲು ಬಂದಿದ್ದೆವು.

ದಿಷ್ಟ್ಯಾಸಿ ರಾಜನ್ ನಿರುಜೋ ದಿಷ್ಟ್ಯಾ ನ ಗ್ರಹಣಂ ಗತಃ ।
ಪರಿಸಾಂತ್ವಯ ಬೀಭತ್ಸುಂ ಜಯಮಾಶಾಧಿ ಚಾನಘ ॥೨೬॥

ಅದೃಷ್ಟವಶಾತ್ ನೀನು ಅಪಾಯ ಹೊಂದಲಿಲ್ಲ. ಬಂಧನದಲ್ಲಿಯೂ ಸಿಲುಕಿ ಕೊಳ್ಳಲಿಲ್ಲ. ಅದರಿಂದ ಅರ್ಜುನನನ್ನು ಸಂತಯಿಸು. ಅವನಿಗೆ ಜಯವಾಗಲಿ ಎಂದು ಹರಸು.'

ಯುಧಿಷ್ಠಿರಃ

ಏಹ್ಯೇಹಿ ಪಾರ್ಥ ಬೀಭತ್ಸೋ ಮಾಂ ಪರಿಷ್ವಜ್ಯ ಪಾಂಡವ ।
ವಕ್ತವ್ಯಮುಕ್ತೋಽಸ್ಮ್ಯಹಿತಂ ತ್ವಯಾ ಕ್ಷಾಂತಂ ಚ ತನ್ಮಯಾ ॥೨೭॥

ಯುಧಿಷ್ಠಿರ ನುಡಿದ— ಬಾ, ಬಾ, ಅರ್ಜುನ, ನನ್ನನ್ನು ಆಲಿಂಗಿಸು. ನೀನು

ನನಗೆ ಹೇಳಬೇಕಾಗಿದ್ದ ಕಟುನುಡಿಯನ್ನೇ ನೀನು ಹೇಳಿರುವೆ. ನಾನೂ ಅದನ್ನು ಕ್ಷಮಿಸಿದ್ದೇನೆ.

ಅಹಂ ತ್ವಾಮನುಜಾನಾಮಿ ಜಹಿ ಕರ್ಣಂ ಧನಂಜಯ ।
ಮನ್ಯುಂ ಚ ಮಾ ಕೃಥಾಃ ಪಾರ್ಥ ಯನ್ಮಯೋಕ್ತೋಽಸಿ
ದಾರುಣಮ್ ॥೨೮॥

ನಾನು ನಿನಗೆ ಅನುಜ್ಞೆ ನೀಡುತ್ತಿದ್ದೇನೆ. ಅರ್ಜುನ, ಕರ್ಣನನ್ನು ವಧಿಸು. ನಾನು ನಿನಗೆ ಕಟುನುಡಿಗಳನ್ನಾಡಿದ್ದನ್ನು ಮರೆತುಬಿಡು, ಕೋಪಿಸಿಕೊಳ್ಳಬೇಡ.

ಸಂಜಯಃ

ತತೋ ಧನಂಜಯೋ ರಾಜನ್ ಶಿರಸಾ ಪ್ರಣತಸ್ತದಾ ।
ಪಾದೌ ಜಗ್ರಾಹ ಪಾಣಿಭ್ಯಾಂ ಭ್ರಾತುರ್ಜ್ಯೇಷ್ಠಸ್ಯ ಮಾರಿಷ ॥೨೯॥

ಸಂಜಯನು ನುಡಿದ— ರಾಜನೆ, ಬಳಿಕ ಅರ್ಜುನನು ಯುಧಿಷ್ಠಿರನಿಗೆ ತಲೆಬಾಗಿ ನಮಿಸುತ್ತ ಎರಡೂ ಕೈಗಳಿಂದ ಅಣ್ಣನ ಪಾದಗಳನ್ನು ಹಿಡಿದುಕೊಂಡ.

ಸಮುತ್ಥಾಪ್ಯ ತತೋ ರಾಜಾ ಪರಿಷ್ವಜ್ಯ ಚ ಪೀಡಿತಮ್ ।
ಮೂರ್ಧ್ನ್ಯುಪಾಘ್ರಾಯ ಚೈವೈನಮಿದಂ ಪುನರುವಾಚ ಹ ॥೩೦॥

ರಾಜಾ ಯುಧಿಷ್ಠಿರನು ದುಃಖಪೀಡಿತನಾಗಿದ್ದ ಅರ್ಜುನನನ್ನು ಮೇಲೆಬ್ಬಿಸಿ ಆಲಿಂಗಿಸಿ ನೆತ್ತಿಯಲ್ಲಿ ಆಘ್ರಾಣಿಸಿ ಅವನಿಗೆ ಪುನಃ ಹೇಳಿದ.

ಧನಂಜಯ ಮಹಾಬಾಹೋ ಮಾನಿತೋಽಸ್ಮಿ ದೃಢಂ ತ್ವಯಾ ।
ಮಾಹಾತ್ಮ್ಯಂ ವಿಜಯಂ ಚೈವ ಭೂಯಃ ಪ್ರಾಪ್ನುಹಿ ಶಾಶ್ವತಮ್ ॥೩೧॥

ಅರ್ಜುನ, ನೀನು ದೃಢವಾಗಿ ನನ್ನನ್ನು ಒಲೈಸಿರುವೆ. ಅದರಿಂದ ನೀನು ಇನ್ನೂ ಹೆಚ್ಚಿನ ಮಹಿಮೆಯನ್ನೂ ವಿಜಯವನ್ನೂ ಶಾಶ್ವತವಾಗಿ ಪಡೆ.

ಅರ್ಜುನಃ

ಅದ್ಯ ತಂ ಪಾಪಕರ್ಮಾಣಂ ಸಾನುಬಂಧಂ ರಣೇ ಶರೈಃ ।
ನಯಾಮ್ಯಂತಂ ಸಮಾಸಾದ್ಯ ರಾಧೇಯಂ ಬಲಗರ್ವಿತಮ್ ॥೩೨॥

ಅರ್ಜುನ ನುಡಿದ— ಪಾಪಕರ್ಮ ಮಾಡಿರುವ ಮತ್ತು ಬಲದಿಂದ ದರ್ಪಿತನಾಗಿರುವ ಕರ್ಣನನ್ನೂ ಅವನ ಪರಿವಾರವನ್ನೂ ನಾನು ಇಂದು ರಣದಲ್ಲಿ ಬಾಣಗಳಿಂದ ಇದಿರಿಸಿ ಕೊನೆಗಾಣಿಸುತ್ತೇನೆ.

ಯೇನ ತ್ವಂ ಪೀಡಿತೋ ಬಾಣೈರ್ದೃಢಮಾಯಮ್ಯ ಕಾರ್ಮುಕಮ್ ।
ತಸ್ಯಾದ್ಯ ಕರ್ಮಣಃ ಕರ್ಣಃ ಫಲಂ ಪ್ರಾಪ್ಸ್ಯತಿ ದಾರುಣಮ್ ॥೩೩॥

ಬಿಲ್ಲನ್ನು ಬಲವಾಗಿ ಬಾಗಿಸಿ ಬಾಣಗಳಿಂದ ನಿನ್ನನ್ನು ಕರ್ಣನು ಏನು ಪೀಡಿಸಿರುವನೋ ಆ ಕರ್ಮದ ದಾರುಣವಾದ ಫಲವನ್ನು ಅವನು ಇಂದು ಪಡೆಯುತ್ತಾನೆ.

ಅದ್ಯ ತ್ವಾಮಹಮೇಷ್ಯಾಮಿ ಕರ್ಣಂ ಹತ್ವಾ ಮಹೀಪತೇ ।
ಸಭಾಜಯಿತುಮಾಕ್ರಂದಾದಿತಿ ಸತ್ಯಂ ಬ್ರವೀಮಿ ತೇ ॥೩೪॥

ರಾಜನೆ, ನಾನಿಂದು ಕರ್ಣನನ್ನು ಕೊಂದು ನಿನ್ನ ವ್ಯಥೆಯನ್ನು ಕಳೆದು ಸಂತೈಸಲು ನಿನ್ನ ಬಳಿಗೆ ಬರುವೆನು. ಸತ್ಯವನ್ನೇ ಹೇಳುತ್ತಿದ್ದೇನೆ.

ನಾಹತ್ವಾ ವಿನಿವರ್ತೇಽಹಂ ಕರ್ಣಮದ್ಯ ರಣಾಜಿರಾತ್ ।
ಇತಿ ಸತ್ಯೇನ ತೇ ಪಾದೌ ಸ್ಪೃಶಾಮಿ ಜಗತೀಪತೇ ॥೩೫॥

ರಾಜನೆ, ಇಂದು ಕರ್ಣನನ್ನು ಕೊಲ್ಲದೆ ನಾನು ರಣಾಂಗಣದಿಂದ ಹಿಂತಿರುಗಿ ಬರಲಾರೆ ಎಂದು ಸತ್ಯದ ಮೇಲೆ ಆಣೆಯಿಟ್ಟು ನಿನ್ನ ಪಾದಗಳನ್ನು ಸ್ಪರ್ಶಿಸುತ್ತಿದ್ದೇನೆ.

ಸಂಜಯಃ

ಇತಿ ಬ್ರುವಾಣಂ ಸುಮನಾಃ ಕಿರೀಟಿನಂ
ಯುಧಿಷ್ಠಿರಃ ಪ್ರಾಹ ವಚೋ ಬೃಹತ್ತರಮ್ ।
ಯಶೋಽಕ್ಷಯಂ ಜೀವಿತಮೀಪ್ಸಿತಂ ತೇ
ಜಯಂ ಸದಾ ವೀರ್ಯಮರಿಕ್ಷಯಂ ತದಾ ॥೩೬॥

ಪ್ರಯಾಹಿ ವೃದ್ಧಿಂ ಚ ದಿಶಂತು ದೇವತಾ
ಯಥಾಹಮಿಚ್ಛಾಮಿ ತವಾಸ್ತು ತತ್ತಥಾ ।

ಪ್ರಯಾಹಿ ಶೀಘ್ರಂ ಜಹಿ ಕರ್ಣಮಾಹವೇ
ಪುರಂದರೋ ವೃತ್ರಮಿವಾತ್ಮವೃದ್ಧಯೇ ॥೩೭॥

ಸಂಜಯನು ನುಡಿದ— ಅರ್ಜುನ ಹೀಗೆ ನುಡಿದಾಗ ಯುಧಿಷ್ಠಿರನು ಪ್ರಸನ್ನ ಮನಸಿನಿಂದ ಬಲು ದೊಡ್ಡ ಹಾರೈಕೆಯನ್ನು ನುಡಿದ: 'ಅಕ್ಷಯವಾದ ಯಶಸ್ಸು ಇಷ್ಟವಾದ ಬದುಕು, ಸದಾ ವಿಜಯ ವೀರ್ಯ ಶತ್ರುಕ್ಷಯ ಎಲ್ಲವೂ ನಿನ್ನವೇ ಆಗಲಿ. ದೇವತೆಗಳು ನಿನಗೆ ಸುಖಸಮೃದ್ಧಿ ಉಂಟುಮಾಡಲಿ, ಎಂದು ನಾನು ಬಯಸುತ್ತೇನೆ. ನಾನು ಬಯಸಿದಂತೆಯೇ ಎಲ್ಲವೂ ನಿನಗೆ ಲಭಿಸಲಿ. ಬೇಗನೆ ಹೋಗು. ಇಂದ್ರನು ವೃತ್ರನನ್ನು ಸಂಹರಿಸಿದಂತೆ ನೀನು ಕರ್ಣನನ್ನು ವಧಿಸು. ನಿನ್ನ ಅಭೀಪ್ಸಗಳು ವರ್ಧಿಸಲಿ.'

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಧರ್ಮರಾಜಾರ್ಜುನಸಂವಾದೇ ಅರ್ಜುನಸಾನ್ತ್ವನವಚನಂ ನಾಮ
ಅಷ್ಟಪಷ್ಟಿತಮೋऽಧ್ಯಾಯಃ ॥೬೮॥

❖

ಮಹಾಭಾರತತಾತ್ಪರ್ಯನಿರ್ಣಯ

ತಂ ಶಂಕಿತಂ ಕರ್ಣಜಯೇ ಸ್ವಿನ್ನಗಾತ್ರಂ ಹರಿಸ್ತದಾ ।
ಸಂಕೀರ್ತ್ಯ ಪೂರ್ವಕರ್ಮಾಣಿ ನರಾವೇಶಂ ವಿಶೇಷತಃ ।
ವ್ಯಂಜಯಾಮಾಸ ಧೈರ್ಯಂ ಚ ತಸ್ಯಾऽಸೀತ್ ತೇನ ಸುಸ್ಥಿರಮ್॥೧೩೮॥

ಅರ್ಜುನ ಕರ್ಣನನ್ನು ಗೆಲ್ಲುವ ವಿಷಯದಲ್ಲಿ ಸಂದೇಹಪಟ್ಟು ಮೈಬೆವೆತು ಕೊಂಡಾಗ ಕೃಷ್ಣ ಅವನ ಹಿಂದಿನ ನಿವಾತಕವಚ ಸಂಹಾರಾದಿ ಸಾಧನೆಗಳನ್ನು ಹೇಳಿ ಅವನಲ್ಲಿ ವಿಶೇಷವಾಗಿ ನರಾವೇಶವನ್ನು ಪ್ರಕಟಗೊಳಿಸಿದ. ಆದರಿಂದ ಅವನಲ್ಲಿ ಸ್ಥಿರವಾದ ಧೈರ್ಯ ಉಂಟಾಯಿತು.

❖❖

ಅರವತ್ತೊಂಬತ್ತನೆಯ ಅಧ್ಯಾಯ

'ಕರ್ಣವಧೆ ಸಾಧ್ಯವೆ?' ಎಂದು ಚಿಂತೆಯಿಂದ ಮೈಬೆವರಿದ
ಅರ್ಜುನನಿಗೆ ಶ್ರೀಕೃಷ್ಣ ಹುರಿದುಂಬಿಸುತ್ತಾನೆ.

ಸಂಜಯಃ

ಪ್ರಸಾದ್ಯ ಧರ್ಮರಾಜಾನಂ ಪ್ರಹೃಷ್ಟೇನಾಂತರಾತ್ಮನಾ ।
ಪಾರ್ಥಃ ಪ್ರೋವಾಚ ಗೋವಿಂದಂ ಸೂತಪುತ್ರವಧೋದ್ಯತಃ ॥೧॥

ಸಂಜಯನು ನುಡಿದ— ಯುಧಿಷ್ಠಿರನ ಮನಒಲಿಸಿಕೊಂಡು ಅಂತರಾತ್ಮದಲ್ಲಿ ಒಳ್ಳೆಯ ಉತ್ಸಾಹಗೊಂಡು ಕರ್ಣವಧದಲ್ಲಿ ಉದ್ಯುಕ್ತನಾಗಿ ಅರ್ಜುನ ಕೃಷ್ಣನಿಗೆ ನುಡಿದ.

ಕಲ್ಪ್ಯತಾಂ ಚ ರಥೋ ಭೂಯೋ ಯುಜ್ಯತಾಂ ಚ ಹಯೋತ್ತಮಾಃ ।
ಆಯುಧಾನಿ ಸಮಸ್ತಾನಿ ಸಜ್ಜ್ಯಂತಾಂ ವೈ ಮಹಾರಥೇ ॥೨॥

ಪುನಃ ರಥವನ್ನು ಪ್ರಯಾಣಕ್ಕೆ ಸಜ್ಜುಗೊಳಿಸು. ಒಳ್ಳೆಯ ಕುದುರೆಗಳನ್ನು ಹೂಡು. ಮಹಾರಥದಲ್ಲಿ ಎಲ್ಲ ಆಯುಧಗಳನ್ನು ಸಜ್ಜಾಗಿರಿಸು.

ಉಪಾವೃತ್ತಾಶ್ಚ ತುರಗಾಃ ಶಿಕ್ಷಿತಾಶ್ಚಾಶ್ವಸಾದಿನಃ ।
ರಥೋಪಕರಣೈಃ ಸರ್ವೈರುಪಾಯಾನ್ತು ತ್ವರಾನ್ವಿತಾಃ ॥೩॥

ಪ್ರಯಾಹಿ ಶೀಘ್ರಂ ಗೋವಿಂದ ಸೂತಪುತ್ರಜಿಘಾಂಸಯಾ ॥೪॥

ವಿಶ್ರಾಂತಿ ಪಡೆದು ಹಿಂತಿರುಗಿ ಬಂದಿರುವ ಅಶ್ವಾರೋಹಿಗಳಿಂದ ತರಬೇತುಗೊಳಿಸಲ್ಪಟ್ಟ ಕುದುರೆಗಳು ಎಲ್ಲ ರಥೋಪಕರಣಗಳೊಂದಿಗೆ ಬೇಗನೆ ಬರಲಿ ಕೃಷ್ಣ ಕರ್ಣವಧೆಯ ಉದ್ದೇಶದಿಂದ ಬೇಗನೆ ನಡೆ.

ಏವಮುಕ್ತೇ ಮಹಾರಾಜ ಫಲ್ಗುನೇನ ಮಹಾತ್ಮನಾ ।
ಉವಾಚ ದಾರುಕಂ ಕೃಷ್ಣಃ ಕುರು ಸರ್ವಂ ಯಥಾಬ್ರವೀತ್ ।
ಅರ್ಜುನೋ ಭರತಶ್ರೇಷ್ಠಃ ಶ್ರೇಷ್ಠಃ ಸರ್ವಧನುಷ್ಮತಾಮ್ ॥೫॥

ಮಹಾರಾಜ, ಮಹಾತ್ಮ ಅರ್ಜುನನು ಹೀಗೆ ಹೇಳಿದಾಗ ಕೃಷ್ಣನು ದಾರುಕನಿಗೆ

ಹೇಳಿದ– ಸರ್ವ ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಅರ್ಜುನ ಹೇಗೆ ಹೇಳಿದನೋ ಹಾಗೇ ಮಾಡು.

ಆಜ್ಞಪ್ತಸ್ತ್ವಥ ಕೃಷ್ಣೇನ ದಾರುಕೋ ರಾಜಸತ್ತಮ ।
ಯೋಜಯಾಮಾಸ ಸ ರಥಂ ವೈಯಾಘ್ರಂ ಶತ್ರುತಾಪನಮ್ ॥೬॥

ರಾಜನೆ, ಕೃಷ್ಣನಾಜ್ಞೆಯಂತೆ ದಾರುಕನು ಶತ್ರುತಾಪಕವಾದ ವ್ಯಾಘ್ರಚರ್ಮ ಹೊದ್ದಿಸಿದ ರಥವನ್ನು ಸಜ್ಜುಗೊಳಿಸಿದ.

ಯುಕ್ತಂ ತು ರಥಮಾಸ್ಥಾಯ ದಾರುಕೇಣ ಮಹಾತ್ಮನಾ ।
ಆಪೃಚ್ಛ್ಯ ಧರ್ಮರಾಜಾನಂ ಬ್ರಾಹ್ಮಣಾನ್ ಸ್ವಸ್ತಿ ವಾಚ್ಯ ಚ ।
ಸಮಂಗಲಸ್ವಸ್ತ್ಯಯನಮಾರುರೋಹ ರಥೋತ್ತಮಮ್ ॥೭॥

ದಾರುಕನು ಸಜ್ಜುಗೊಳಿಸಿದ ರಥವನ್ನೇರಿ, ಅರ್ಜುನನು ಧರ್ಮರಾಜನ ಅನುಜ್ಞೆಯನ್ನು ಪಡೆದು, ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿಕೊಂಡು, ಮಂಗಲಕ್ಷೇಮಯುಕ್ತವಾದ ಆ ರಥವನ್ನೇರಿದ.

ತಸ್ಯ ರಾಜಾ ಮಹಾಪ್ರಾಜ್ಞೋ ಧರ್ಮರಾಜೋ ಯುಧಿಷ್ಠಿರಃ ।
ಆಶಿಷೋಽಯುಂಕ್ತ ಪರಮಾ ಯುಕ್ತಾಃ ಕರ್ಣವಧಂ ಪ್ರತಿ ॥೮॥

ಮಹಾಪ್ರಾಜ್ಞನಾದ ಧರ್ಮರಾಜನು ಅರ್ಜುನನಿಗೆ ಕರ್ಣವಧ ವಿಷಯದಲ್ಲಿ ಉತ್ತಮವಾದ ಆಶೀರ್ವಾದವನ್ನು ಮಾಡಿದ.

ತಂ ಪ್ರಯಾಂತಂ ಮಹೇಷ್ವಾಸಂ ದೃಷ್ಟ್ವಾ ಭೂತಾನಿ ಭಾರತ ।
ನಿಹತಂ ಮೇನಿರೇ ಕರ್ಣಂ ಪಾಂಡವೇನ ಮಹಾತ್ಮನಾ ॥೯॥

ಮಹಾಬಿಲ್ಲಾರ ಅರ್ಜುನನು ಪ್ರಯಾಣಕ್ಕೆ ಹೊರಟಾಗ ಅದನ್ನು ನೋಡಿ ಎಲ್ಲ ಜನರೂ ಮಹಾತ್ಮ ಅರ್ಜುನನಿಂದ ಕರ್ಣನು ಇನ್ನು ಹತನಾದನೆಂದೇ ಭಾವಿಸಿದರು.

ಬಭೂವುರ್ವಿಮಲಾಃ ಸರ್ವಾ ದಿಶೋ ರಾಜನ್ ಸಮಂತತಃ ।
ಚಾಷಾಶ್ಚ ಶತಪತ್ರಾಶ್ಚ ಕ್ರೌಂಚಾಶ್ಚೈವ ಜನೇಶ್ವರ ।
ಪ್ರದಕ್ಷಿಣಮಕುರ್ವಂತ ತದಾ ವೈ ಪಾಂಡುನಂದನಮ್ ॥೧೦॥

ರಾಜನೆ, ಎಲ್ಲಕಡೆ ಎಲ್ಲ ದಿಕ್ಕುಗಳೂ ನಿರ್ಮಲವಾದುವು. ಶಕುನದ ಹಕ್ಕಿ ಮರಕುಟಿಗನ ಹಕ್ಕಿ ನೀರುಕೊಕ್ಕರೆ ಹಕ್ಕಿಗಳು ಅರ್ಜುನನಿಗೆ ಪ್ರದಕ್ಷಿಣವಾಗಿ ಹಾರಿದುವು.

ಬಹವಃ ಪಕ್ಷಿಣೋ ರಾಜನ್ ಪುಂನಾಮಾನಃ ಶುಭಾಃ ಶಿವಾಃ ।
ತ್ವರಯಂತೋಽರ್ಜುನಂ ಯುದ್ಧೇ ಹೃಷ್ಟರೂಪಾ ವವಾಶಿರೇ ॥೧೧॥

ಮಂಗಳಕರವಾದ ಕ್ಷೇಮ ಉಂಟುಮಾಡುವ ಪುಲ್ಲಿಂಗ ಶಬ್ದಗಳಿಂದ ಕರೆಸಿಕೊಳ್ಳುವ ಬಹಳ ಪಕ್ಷಿಗಳು ಉತ್ಸಾಹಗೊಂಡು ಅರ್ಜುನನನ್ನು ಯುದ್ಧಕ್ಕೆ ತ್ವರೆಪಡಿಸುತ್ತ ಕೂಗಿದುವು.

ಕಂಕಾ ಗೃಧ್ರಾ ವಟಾಶ್ಚೈವ ವಾಯಸಾಶ್ಚ ವಿಶಾಂಪತೇ ।
ಆಗಚ್ಛನ್ನಗ್ರತಸ್ತಸ್ಯ ಮಾಂಸಹೇತೋರ್ಭಯಾನಕಾಃ ॥೧೨॥

ಭಯಾನಕವಾದ ಹದ್ದು ರಣಹದ್ದು, ವಟವೆಂಬ ಪಕ್ಷಿ ಕಾಗೆಗಳು ಮಾಂಸಕ್ಕಾಗಿ ಮುಂದೆ ಹಾರಿದುವು.

ನಿಮಿತ್ತಾನಿ ಚ ಧನ್ಯಾನಿ ಪಾರ್ಥಸ್ಯ ಪ್ರಶಶಂಸಿರೇ ।
ವಿನಾಶಮರಿಸೈನ್ಯಾನಾಂ ಕರ್ಣಸ್ಯ ಚ ವಧಂ ತಥಾ ॥೧೩॥

ಶುಭ ಶಕುನಗಳು ಅರ್ಜುನನಿಗೆ ಶುಭವನ್ನೂ, ಶತ್ರುಗಳಿಗೆ ವಿನಾಶವನ್ನೂ ಕರ್ಣನಿಗೆ ವಧವನ್ನೂ ತಿಳಿಸಿದುವು.

ಪ್ರಯಾತಸ್ಯಾಥ ಪಾರ್ಥಸ್ಯ ಮಹಾನ್ ಸ್ವೇದೋ ವ್ಯಜಾಯತ ।
ಚಿಂತಾ ಚ ವಿಪುಲಾ ಜಜ್ಞೇ ಕಥಂ ನ್ವೇತದ್ ಭವಿಷ್ಯತಿ ॥೧೪॥

ಪ್ರಯಾಣ ಮಾಡುವಾಗ ಅರ್ಜುನನಿಗೆ ಬಹಳ ಬೆವರುಂಟಾಯಿತು. ಹೇಗೆ ಏನಾಗುವುದೋ! ಎಂದು ಬಹಳ ದುಗುಡ ಉಂಟಾಯಿತು.

ತತೋ ಗಾಂಡೀವಧನ್ವಾನಮಬ್ರವೀನ್ಮಧುಸೂದನಃ ।
ದೃಷ್ಟ್ವಾ ಪಾರ್ಥಂ ತಥಾವಸ್ಥಂ ಚಿಂತಾಪರಿಗತಂ ತದಾ ॥೧೫॥

ಅರ್ಜುನ ಈ ಅವಸ್ಥೆಯಲ್ಲಿರುವುದನ್ನು ಚಿಂತೆಮಾಡುವುದನ್ನು ಕಂಡು ಕೃಷ್ಣ ನುಡಿದ.

ಶ್ರೀವಾಸುದೇವಃ

ಗಾಂಡೀವಧನ್ವನ್ ಸಂಗ್ರಾಮೇ ಯೇ ತ್ವಯಾ ಧನುಷಾ ಜಿತಾಃ ।
ನ ತೇಷಾಂ ಮಾನುಷೋ ಜೇತಾ ತ್ವದನ್ಯ ಇಹ ವಿದ್ಯತೇ ॥೧೬॥

ಶ್ರೀಕೃಷ್ಣ ನುಡಿದ– ಅರ್ಜುನ, ರಣದಲ್ಲಿ ನೀನು ಧನುಸ್ಸಿನಿಂದ ಯಾರನ್ನು ಗೆದ್ದಿರುವೆಯೋ ಅವರನ್ನು ಗೆಲ್ಲುವವನು ನಿನ್ನ ಹೊರತಾಗಿ ಅನ್ಯ ಮಾನವನು ಇಲ್ಲ.

ದೃಷ್ಟಾ ಹಿ ಬಹವಃ ಶೂರಾಃ ಶಕ್ರತುಲ್ಯಪರಾಕ್ರಮಾಃ ।
ತ್ವಾಂ ಪ್ರಾಪ್ಯ ಸಮರೇ ವೀರಂ ಯೇ ಗತಾಃ ಪರಮಾಂ ಗತಿಮ್ ॥೧೭॥

ಇಂದ್ರಸಮ ಪರಾಕ್ರಮಿಗಳಾದ ಶೂರರನ್ನು ಬಹಳ ಕಂಡಿದ್ದೇನೆ. ಅವರು ವೀರನಾದ ನಿನ್ನನ್ನು ಇದಿರಿಸಿ ಪರಗತಿಯನ್ನೇ ಪಡೆದರು.

ಕೋ ಹಿ ದ್ರೋಣಂ ಚ ಭೀಷ್ಮಂ ಚ ಭಗದತ್ತಂ ಚ ಭಾರತ ।
ವಿಂದಾನುವಿಂದಾವಾವಂತ್ಯೌ ಕಾಂಬೋಜಂ ಚ ಸುದಕ್ಷಿಣಮ್ ॥೧೮॥

ಶ್ರುತಾಯುಷಂ ಮಹಾವೀರ್ಯಮಚ್ಯುತಾಯುಷಮೇವ ಚ ।
ಪ್ರತ್ಯುದ್ಗಮ್ಯ ಭವೇತ್ಕ್ಷೇಮೀ ಯೋ ನ ಸ್ಯಾತ್ತ್ವಮಿವ ಪ್ರಭೋ ॥೧೯॥

ದ್ರೋಣ, ಭೀಷ್ಮ, ಭಗದತ್ತ, ಅವಂತಿಯ ವಿಂದ–ಅನುವಿಂದರು, ಕಾಂಬೋಜದ ಸುದಕ್ಷಿಣ, ಶ್ರುತಾಯು, ಅಚ್ಯುತಾಯು ಇವರನ್ನು ಇದಿರಿಸಿ, ನಿನ್ನಂಥವನಲ್ಲದವನು ಯಾವನು ತಾನೆ ಕ್ಷೇಮವಾಗಿರಬಲ್ಲ?

ತವ ಹ್ಯಸ್ತ್ರಾಣಿ ದಿವ್ಯಾನಿ ಲಾಘವಂ ಬಲಮೇವ ಚ ॥೨೦॥
ವೇಧಃ ಪಾತಶ್ಚ ಲಕ್ಷಶ್ಚ ಯೋಗಶ್ಚೈವ ತವಾರ್ಜುನ ।
ಅಸಮ್ಮೋಹಶ್ಚ ಯುದ್ಧೇಷು ವಿಜ್ಞಾನಸ್ಯ ಚ ಸನ್ನತಿಃ ॥೨೧॥

ನಿನಗೆ ದಿವ್ಯ ಅಸ್ತ್ರಗಳಿವೆ. ಅಸ್ತ್ರ ಎಸೆಯುವುದರಲ್ಲಿ ವೇಗವಿದೆ, ಬಲವಿದೆ. ಲಕ್ಷ್ಯವನ್ನು ಬಾಣದಿಂದ ಹೊಡೆಯುವುದು, ಬೀಳಿಸುವುದು, ಗುರಿಯಿಡುವುದು, ಬಾಣವನ್ನು ಬಿಲ್ಲಿಗೆ ಹೂಡುವುದು ನಿನಗೆ ಗೊತ್ತಿದೆ. ಯುದ್ಧಗಳಲ್ಲಿ ಪ್ರಮಾದವೆಸಗದಿರುವುದು, ನಿನ್ನಲ್ಲಿದೆ. ಧನ್ರ್ವಿದ್ಯೆಯ ಮೇಲಿನ ಹಿಡಿತ ನಿನ್ನಲ್ಲಿದೆ.

ಭವಾನ್ ದೇವಾಸುರಾನ್ ಸರ್ವಾನ್ ಹನ್ಯಾತ್ ಸಹಚರಾಚರಾನ್ ।
ಪೃಥಿವ್ಯಾಂ ಹಿ ರಣೇ ಪಾರ್ಥ ನ ಯೋದ್ಧಾ ತ್ವತ್ಸಮಃ ಪುಮಾನ್ ॥೨೨॥

ನೀನು ಚರಾಚರಗಳ ಸಮೇತವಾಗಿ ದೇವ–ಅಸುರರನ್ನು ಸಂಹರಿಸಬಲ್ಲೆ. ಭೂಮಿಯಲ್ಲಿ ನಿನಗೆ ಸಮನಾಗಿ ರಣರಂಗದಲ್ಲಿ ಯುದ್ಧಮಾಡಬಲ್ಲ ವ್ಯಕ್ತಿ ಇಲ್ಲ.

ಧನುರ್ಗ್ರಹಾ ಹಿ ಯೇ ಕೇಚಿತ್ ಕ್ಷತ್ರಿಯಾ ಯುದ್ಧದುರ್ಮದಾಃ ।
ಆ ದೇವಾತ್ತತ್ಸಮಂ ತೇಷಾಂ ನ ಪಶ್ಯಾಮಿ ಶೃಣೋಮಿ ವಾ ॥೨೩॥

ಬಿಲ್ಲು ಹಿಡಿದು ಯುದ್ಧಮಾಡುವ ಹವ್ಯಾಸ ಉಳ್ಳ ಕ್ಷತ್ರಿಯರಲ್ಲಿ ನಿನಗೆ ಸಮನಾದವನನ್ನು ದೇವತೆಗಳು ಮುಂತಾದವರಲ್ಲಿ ನಾನು ಕಂಡಿಲ್ಲ ಕೇಳಿಲ್ಲ.

ಬ್ರಹ್ಮಣಾ ಚ ಪ್ರಜಾಃ ಸೃಷ್ಟಾ ಗಾಂಡೀವಂ ಚ ಮಹಾದ್ಭುತಮ್ ।
ಯೇನ ತ್ವಂ ಯುಧ್ಯಸೇ ಪಾರ್ಥ ತಸ್ಮಾನ್ನಾಸ್ತಿ ತ್ವಯಾ ಸಮಃ ॥೨೪॥

ಬ್ರಹ್ಮನು ಎಲ್ಲವನ್ನು ಸೃಜಿಸಿದರೂ ಅವನು ಸೃಜಿಸಿರುವ ಗಾಂಡೀವ ಮಾತ್ರ ಮಹಾ ಅದ್ಭುತ. ನೀನು ಆ ಗಾಂಡೀವದಿಂದ ಯುದ್ಧಮಾಡುವೆ ಎಂದಮೇಲೆ, ನಿನಗೆ ಸಮಾನನಿಲ್ಲ.

ಅವಶ್ಯಂ ತು ಮಯಾ ವಾಚ್ಯಂ ಯತ್ಪಥ್ಯಂ ತವ ಪಾಂಡವ ।
ಮಾವಮಂಸ್ಥಾ ಮಹಾಬಾಹೋ ಕರ್ಣಮಾಹವಶೋಭಿನಮ್ ॥೨೫॥

ಆದರೂ ನಿನಗೊಂದು ಹಿತವಚನವನ್ನು ನಾನು ಅವಶ್ಯ ಹೇಳಬೇಕು. ಮಹಾಬಾಹುವೆ, ಯುದ್ಧದಲ್ಲಿ ಶೋಭಿಸುವ ಕರ್ಣನನ್ನು ನೀನು ಅವಮಾನಿಸಬೇಡ.

ಶ್ರೀಕೃಷ್ಣ ಅರ್ಜುನನಿಗೆ ಅವಶ್ಯ ಹೇಳಬೇಕಾಗಿದ್ದ ಹಿತವಚನ—'ಕರ್ಣನನ್ನು ಅವಮಾನಿಸಬೇಡ. ಆತ ನಿನಗೆ ಸಮಾನ ಅಥವಾ ಹೆಚ್ಚೆ ಎನ್ನಬಹುದು' ಎಂದು. ಸುಗ್ರೀವಾವಾತಾರದಲ್ಲಿ ಶ್ರೀರಾಮನಿಗೆ ಬಹಳ ಸೇವೆ ಮಾಡಿದ ಭಕ್ತ, ಆತ. ಹರಿಯ ವಿಶೇಷ ಸನ್ನಿಧಾನ ಪಾತ್ರ. ಅವನು ಯುಧಿಷ್ಠಿರನಿಗೆ ಅವಮಾನ ಮಾಡಿದ್ದು ದುರ್ಯೋಧನನ ಪ್ರೀತಿಗಾಗಿ. 'ಸಂಘರ್ಷಜನನ' ಕನ್ಯಾಪುತ್ರನಾಗಿ ಜನಿಸಿದ್ದರಿಂದಲೆ ಅವನು ಕೌರವನಿಗೆ ಮೆಚ್ಚಿಗೆಯಾಗುವಂತೇ ಪಾಂಡವರಲ್ಲಿ

ಸದಾ ದ್ವೇಷಮಾಡಿದ್ದಂತೆ ತೋರಿಕೊಂಡ. ಅರ್ಜುನನಿಂದ ತಾನು ಪವಿತ್ರ ರಣಯಜ್ಞದಲ್ಲಿ ಆತ್ಮಾಹುತಿ ಮಾಡಿಕೊಳ್ಳಲು ಬಯಸಿದ್ದೂ ಈ ದ್ವೇಷ ಪ್ರದರ್ಶನಕ್ಕೆ ಮೂಲವಾಗಿತ್ತು. ಅಸುರಾವೇಶದಿಂದ ಈ ದ್ವೇಷಪ್ರದರ್ಶನ ಸಾಧ್ಯವಾಯಿತಷ್ಟೆ. ಅದಕ್ಕೆ ಅವನು ಪಶ್ಚಾತ್ತಾಪಪಡುತ್ತಾನೆ.

ಕರ್ಣೋ ಹಿ ಬಲವಾನ್ ಧೃಷ್ಟಃ ಕೃತಾಸ್ತ್ರಶ್ಚ ಮಹಾರಥಃ ।
ಕೃತೀ ಚ ಚಿತ್ರಯೋಧೀ ಚ ದೇಶೇ ಕಾಲೇ ಚ ಕೋವಿದಃ ॥೨೬॥

ಕರ್ಣನು ಬಲಶಾಲಿ, ಧೈರ್ಯಶಾಲಿ, ಅಸ್ತ್ರವಿದ್ಯಾಪಾರಂಗತ, ಮಹಾರಥ, ಪ್ರಯತ್ನಶಾಲಿ, ಆಶ್ಚರ್ಯಕರವಾಗಿ ಯುದ್ಧ ಮಾಡುವವನು. ದೇಶ–ಕಾಲಗಳ ವಿಷಯದಲ್ಲಿ ಜಾಣ.

ಬಹುನಾತ್ರ ಕಿಮುಕ್ತೇನ ಸಂಕ್ಷೇಪಾಚ್ಛೃಣು ಪಾಂಡವ ।
ತ್ವತ್ಸಮಂ ತ್ವದ್ವಿಶಿಷ್ಟಂ ವಾ ಕರ್ಣಂ ಮನ್ಯೇ ಮಹಾರಥಮ್ ।
ಪರಮಂ ಯತ್ನಮಾಸ್ಥಾಯ ತ್ವಯಾ ವಧ್ಯೋ ಮಹಾಹವೇ ॥೨೭॥

ಹೆಚ್ಚೇನು ಹೇಳಬೇಕು? ಸಂಕ್ಷೇಪವಾಗಿ ಹೇಳುತ್ತೇನೆ, ಕೇಳು. ಮಹಾರಥನಾದ ಕರ್ಣನನ್ನು ನಿನಗೆ ಸಮಾನ ಅಥವಾ ಹೆಚ್ಚೇ ಎಂದು ನಾನು ಭಾವಿಸುತ್ತೇನೆ. ಮಹಾರಣದಲ್ಲಿ ಮಹಾಪ್ರಯತ್ನ ಮಾಡಿಯೇ ನೀನು ಅವನನ್ನು ಕೊಲ್ಲಬೇಕಾಗುತ್ತದೆ.

ತೇಜಸಾ ವಹ್ನಿಸದೃಶೋ ವಾಯುವೇಗಸಮೋ ಜವೇ ।
ಅಂತಕಪ್ರತಿಮಃ ಕ್ರೋಧೇ ಸಿಂಹಸಂಹನನೋ ಬಲೀ ॥೨೮॥

ಶತ್ರುವಿಗೆ ತಾಪ ನೀಡುವಲ್ಲಿ ಕರ್ಣನು ಅಗ್ನಿಸಮಾನ. ವೇಗದಲ್ಲಿ ವಾಯು ಸಮಾನ. ಕ್ರೋಧದಲ್ಲಿ ಅಂತಕನಿಗೆ ಸಮಾನ. ಸಿಂಹದಂಥ ದೃಢಶರೀರಿ, ಬಲಿಷ್ಠ

ಅಷ್ಟರತ್ನಿರ್ಮಹಾಬಾಹುರ್ವ್ಯೂಢೋರಸ್ಕಃ ಸುದುರ್ಜಯಃ ।
ಅತಿಮಾನೀ ಚ ಶೂರಶ್ಚ ಪ್ರವೀರಃ ಪ್ರಿಯದರ್ಶನಃ ॥೨೯॥

ಕರ್ಣನು ಎಂಟು ರತ್ನಿಯಷ್ಟು ಅಂದರೆ ನೂರ ಅರವತ್ತೆಂಟು ಅಂಗುಲಗಳಷ್ಟು ಎತ್ತರದ ಆಜಾನುಬಾಹುವಾದ ಶರೀರವುಳ್ಳವನು. (ಒಂದು ರತ್ನಿ ಅಂದರೆ ಮೊಳಕೈಯಿಂದ ಮುಚ್ಚಿದ ಅಂಗೈವರೆಗಿನ ಉದ್ದದಷ್ಟು ಇಪ್ಪತ್ತೊಂದು ಅಂಗುಲಗಳು.)

ಭವಾನ್ ದೇವಾಸುರಾನ್ ಸರ್ವಾನ್ ಹನ್ಯಾತ್ ಸಹಚರಾಚರಾನ್ ।
ಪೃಥಿವ್ಯಾಂ ಹಿ ರಣೇ ಪಾರ್ಥ ನ ಯೋದ್ಧಾ ತ್ವತ್ಸಮಃ ಪುಮಾನ್ ॥೨೨॥

ನೀನು ಚರಾಚರಗಳ ಸಮೇತವಾಗಿ ದೇವ–ಅಸುರರನ್ನು ಸಂಹರಿಸಬಲ್ಲೆ. ಭೂಮಿಯಲ್ಲಿ ನಿನಗೆ ಸಮನಾಗಿ ರಣರಂಗದಲ್ಲಿ ಯುದ್ಧಮಾಡಬಲ್ಲ ವ್ಯಕ್ತಿ ಇಲ್ಲ.

ಧನುರ್ಗ್ರಹಾ ಹಿ ಯೇ ಕೇಚಿತ್ ಕ್ಷತ್ರಿಯಾ ಯುದ್ಧದುರ್ಮದಾಃ ।
ಆ ದೇವಾತ್ತತ್ತ್ವಮಂ ತೇಷಾಂ ನ ಪಶ್ಯಾಮಿ ಶೃಣೋಮಿ ವಾ ॥೨೩॥

ಬಿಲ್ಲು ಹಿಡಿದು ಯುದ್ಧಮಾಡುವ ಹವ್ಯಾಸ ಉಳ್ಳ ಕ್ಷತ್ರಿಯರಲ್ಲಿ ನಿನಗೆ ಸಮನಾದವನನ್ನು ದೇವತೆಗಳು ಮುಂತಾದವರಲ್ಲಿ ನಾನು ಕಂಡಿಲ್ಲ ಕೇಳಿಲ್ಲ.

ಬ್ರಹ್ಮಣಾ ಚ ಪ್ರಜಾಃ ಸೃಷ್ಟಾ ಗಾಂಡೀವಂ ಚ ಮಹಾದ್ಭುತಮ್ ।
ಯೇನ ತ್ವಂ ಯುಧ್ಯಸೇ ಪಾರ್ಥ ತಸ್ಮಾನ್ನಾಸ್ತಿ ತ್ವಯಾ ಸಮಃ ॥೨೪॥

ಬ್ರಹ್ಮನು ಎಲ್ಲವನ್ನು ಸೃಜಿಸಿದರೂ ಅವನು ಸೃಜಿಸಿರುವ ಗಾಂಡೀವ ಮಾತ್ರ ಮಹಾ ಅದ್ಭುತ. ನೀನು ಆ ಗಾಂಡೀವದಿಂದ ಯುದ್ಧಮಾಡುವೆ ಎಂದಮೇಲೆ, ನಿನಗೆ ಸಮಾನನಿಲ್ಲ.

ಅವಶ್ಯಂ ತು ಮಯಾ ವಾಚ್ಯಂ ಯತ್ಪಥ್ಯಂ ತವ ಪಾಂಡವ ।
ಮಾವಮಂಸ್ಥಾ ಮಹಾಬಾಹೋ ಕರ್ಣಮಾಹವಶೋಭಿನಮ್ ॥೨೫॥

ಆದರೂ ನಿನಗೊಂದು ಹಿತವಚನವನ್ನು ನಾನು ಅವಶ್ಯ ಹೇಳಬೇಕು. ಮಹಾಬಾಹುವೆ, ಯುದ್ಧದಲ್ಲಿ ಶೋಭಿಸುವ ಕರ್ಣನನ್ನು ನೀನು ಅವಮಾನಿಸಬೇಡ.

ಶ್ರೀಕೃಷ್ಣ ಅರ್ಜುನನಿಗೆ ಅವಶ್ಯ ಹೇಳಬೇಕಾಗಿದ್ದ ಹಿತವಚನ—'ಕರ್ಣನನ್ನು ಅವಮಾನಿಸಬೇಡ. ಆತ ನಿನಗೆ ಸಮಾನ ಅಥವಾ ಹೆಚ್ಚೆ ಎನ್ನಬಹುದು' ಎಂದು. ಸುಗ್ರೀವಾವತಾರದಲ್ಲಿ ಶ್ರೀರಾಮನಿಗೆ ಬಹಳ ಸೇವೆ ಮಾಡಿದ ಭಕ್ತ, ಆತ. ಹರಿಯ ವಿಶೇಷ ಸನ್ನಿಧಾನ ಪಾತ್ರ. ಅವನು ಯುಧಿಷ್ಠಿರನಿಗೆ ಅವಮಾನ ಮಾಡಿದ್ದು ದುರ್ಯೋಧನನ ಪ್ರೀತಿಗಾಗಿ. 'ಸಂಘರ್ಷಜನನ' ಕನ್ಯಾಪುತ್ರನಾಗಿ ಜನಿಸಿದ್ದರಿಂದಲೆ ಅವನು ಕೌರವನಿಗೆ ಮೆಚ್ಚಿಗೆಯಾಗುವಂತೇ ಪಾಂಡವರಲ್ಲಿ

ಸದಾ ದ್ವೇಷಮಾಡಿದ್ದಂತೆ ತೋರಿಕೊಂಡ. ಅರ್ಜುನನಿಂದ ತಾನು ಪವಿತ್ರ ರಣಯಜ್ಞದಲ್ಲಿ ಆತ್ಮಾಹುತಿ ಮಾಡಿಕೊಳ್ಳಲು ಬಯಸಿದ್ದೂ ಈ ದ್ವೇಷ ಪ್ರದರ್ಶನಕ್ಕೆ ಮೂಲವಾಗಿತ್ತು. ಅಸುರಾವೇಶದಿಂದ ಈ ದ್ವೇಷಪ್ರದರ್ಶನ ಸಾಧ್ಯವಾಯಿತಷ್ಟೆ. ಅದಕ್ಕೆ ಅವನು ಪಶ್ಚಾತ್ತಾಪಪಡುತ್ತಾನೆ.

ಕರ್ಣೋ ಹಿ ಬಲವಾನ್ ಧೃಷ್ಟಃ ಕೃತಾಸ್ತ್ರಶ್ಚ ಮಹಾರಥಃ ।
ಕೃತೀ ಚ ಚಿತ್ರಯೋಧೀ ಚ ದೇಶೇ ಕಾಲೇ ಚ ಕೋವಿದಃ ॥೨೬॥

ಕರ್ಣನು ಬಲಶಾಲಿ, ಧೈರ್ಯಶಾಲಿ, ಅಸ್ತ್ರವಿದ್ಯಾಪಾರಂಗತ, ಮಹಾರಥ, ಪ್ರಯತ್ನಶಾಲಿ, ಆಶ್ಚರ್ಯಕರವಾಗಿ ಯುದ್ಧ ಮಾಡುವವನು. ದೇಶ–ಕಾಲಗಳ ವಿಷಯದಲ್ಲಿ ಜಾಣ.

ಬಹುನಾತ್ರ ಕಿಮುಕ್ತೇನ ಸಂಕ್ಷೇಪಾಚ್ಛೃಣು ಪಾಂಡವ ।
ತ್ವತ್ಸಮಂ ತ್ವದ್ವಿಶಿಷ್ಟಂ ವಾ ಕರ್ಣಂ ಮನ್ಯೇ ಮಹಾರಥಮ್ ।
ಪರಮಂ ಯತ್ನಮಾಸ್ಥಾಯ ತ್ವಯಾ ವಧ್ಯೋ ಮಹಾಹವೇ ॥೨೭॥

ಹೆಚ್ಚೇನು ಹೇಳಬೇಕು? ಸಂಕ್ಷೇಪವಾಗಿ ಹೇಳುತ್ತೇನೆ, ಕೇಳು. ಮಹಾರಥನಾದ ಕರ್ಣನನ್ನು ನಿನಗೆ ಸಮಾನ ಅಥವಾ ಹೆಚ್ಚೇ ಎಂದು ನಾನು ಭಾವಿಸುತ್ತೇನೆ. ಮಹಾರಣದಲ್ಲಿ ಮಹಾಪ್ರಯತ್ನ ಮಾಡಿಯೇ ನೀನು ಅವನನ್ನು ಕೊಲ್ಲ ಬೇಕಾಗುತ್ತದೆ.

ತೇಜಸಾ ವಹ್ನಿಸದೃಶೋ ವಾಯುವೇಗಸಮೋ ಜವೇ ।
ಅಂತಕಪ್ರತಿಮಃ ಕ್ರೋಧೇ ಸಿಂಹಸಂಹನನೋ ಬಲೀ ॥೨೮॥

ಶತ್ರುವಿಗೆ ತಾಪ ನೀಡುವಲ್ಲಿ ಕರ್ಣನು ಅಗ್ನಿಸಮಾನ. ವೇಗದಲ್ಲಿ ವಾಯು ಸಮಾನ. ಕ್ರೋಧದಲ್ಲಿ ಅಂತಕನಿಗೆ ಸಮಾನ. ಸಿಂಹದಂಥ ದೃಢಶರೀರಿ, ಬಲಿಷ್ಠ

ಅಷ್ಟರತ್ನಿರ್ಮಹಾಬಾಹುರ್ವ್ಯೂಢೋರಸ್ಕಃ ಸುದುರ್ಜಯಃ ।
ಅತಿಮಾನೀ ಚ ಶೂರಶ್ಚ ಪ್ರವೀರಃ ಪ್ರಿಯದರ್ಶನಃ ॥೨೯॥

ಕರ್ಣನು ಎಂಟು ರತ್ನಿಯಷ್ಟು ಅಂದರೆ ನೂರ ಅರವತ್ತೆಂಟು ಅಂಗುಲಗಳಷ್ಟು ಎತ್ತರದ ಆಜಾನುಬಾಹುವಾದ ಶರೀರವುಳ್ಳವನು. (ಒಂದು ರತ್ನಿ ಅಂದರೆ ಮೊಳಕೈಯಿಂದ ಮುಚ್ಚಿದ ಅಂಗೈವರೆಗಿನ ಉಳತೆಯಷ್ಟು ಇಪ್ಪತ್ತೊಂದು ಅಂಗುಲಗಳು.)

ಮಹಾಬಾಹುಉಳ್ಳವನು, ವಿಶಾಲವಾದ ಎದೆ ಉಳ್ಳವನು. ಯಾರಿಗೂ ಗೆಲ್ಲಲು ಅಸಾಧ್ಯ. ಅತಿಯಾದ ದರ್ಪ ಉಳ್ಳವನು, ಶೂರ, ವೀರ, ನೋಡಲೂ ಸುಂದರ.

ಸರ್ವೈರ್ಯೋಧಗುಣೈರ್ಯುಕ್ತೋ ಮಿತ್ರಾಣಾಮಭಯಂಕರಃ ।
ಸತತಂ ಪಾಂಡವದ್ವೇಷೀ ಧಾರ್ತರಾಷ್ಟ್ರಹಿತೇ ರತಃ ॥೫೦॥

ಯೋಧರಿಗಿರಬೇಕಾದ ಎಲ್ಲ ಗುಣಗಳಿಂದ ಕೂಡಿದವನು. ಮಿತ್ರರಿಗೆ ಅಭಯ ನೀಡುವವನು, ಅಸುರಾವೇಶದಿಂದ ಸತತವಾಗಿ ಪಾಂಡವರನ್ನು ದ್ವೇಷಿಸುತ್ತಾನೆ. ಕೌರವರಿಗೆ ಹಿತ ಮಾಡುವುದರಲ್ಲಿ ಆಸಕ್ತನಾಗಿದ್ದಾನೆ.

ಸರ್ವೈರವಧ್ಯೋ ರಾಧೇಯೋ ದೇವೈರಪಿ ಸವಾಸವೈಃ ।
ಋತೇ ತ್ವಾಮಿತಿ ಮೇ ಬುದ್ಧಿಸ್ತ್ವಮದ್ಯ ಜಹಿ ಸೂತಜಮ್ ॥೫೧॥

ಕರ್ಣನು ನಿನ್ನೊಬ್ಬನನ್ನು ಬಿಟ್ಟರೆ ಇಂದ್ರಾದಿ ದೇವತೆಗಳಿಂದಲೂ ಯಾರಿಂದಲೂ ಕೊಲ್ಲಲಾಗದವನು ಎಂದು ನಾನು ಭಾವಿಸುತ್ತೇನೆ. ಅವನನ್ನು ನೀನು ಈಗ ಕೊಲ್ಲು.

ದೇವೈರಪಿ ಹಿ ಸಂಯತ್ತೈರ್ಬಿಭ್ರದ್ಭಿರ್ಮಾಂಸಶೋಣಿತಮ್ ।
ಅಶಕ್ಯಃ ಸಮರೇ ಜೇತುಂ ಸರ್ವೈರಪಿ ಯುಯುತ್ಸುಭಿಃ ॥೫೨॥

ಮಾಂಸ–ರಕ್ತಮಯ ಶರೀರದವರಾದ ದೇವತೆಗಳಿಂದಲೂ ಯತ್ನಪೂರ್ವಕವಾಗಿ ಯುದ್ಧಮಾಡಲು ಬಯಸುವ ಯಾರಿಂದಲೂ ಕೂಡ ರಣದಲ್ಲಿ ಅವನನ್ನು ಗೆಲ್ಲುವುದು ಶಕ್ಯವಿಲ್ಲ.

ದುರಾತ್ಮಾನಂ ಪಾಪಮತಿಂ ನೃಶಂಸಂ
ದುಷ್ಪ್ರಜ್ಞಂ ಪಾಂಡವೇಯೇಷು ನಿತ್ಯಮ್ ।
ಹೀನಸ್ವಾರ್ಥಂ ಪಾಂಡವೇಯೈರ್ವಿರೋಧೇ
ಹತ್ವಾ ಕರ್ಣಂ ಧಿಷ್ಠಿತಾರ್ಥೋ ಭವಾದ್ಯ ॥೫೩॥

ದುರಾತ್ಮ, ಪಾಪಬುದ್ಧಿಯವನು, ಕ್ರೂರಿ, ಪಾಂಡವರನ್ನು ವಿರೋಧಿಸುವಲ್ಲಿ ಸ್ವಪ್ರಯೋಜನವಿಲ್ಲದಿದ್ದರೂ ಪಾಂಡವರ ವಿಷಯದಲ್ಲಿ ಸದಾ ದುರ್ಭಾವನೆ ತಳೆದವನು. ಇಂಥ ಕರ್ಣನನ್ನು ಕೊಂದು ನೀನು ಕೃತಾರ್ಥನಾಗು.

ತಂ ಸೂತಪುತ್ರಂ ರಥಿನಾಂ ವರಿಷ್ಠಂ
ನಿಷ್ಕಾಲಿಕಂ ಕಾಲವಶಂ ನಯಾದ್ಯ ।
ಸದಾವಜಾನಾತಿ ಹಿ ಪಾಂಡುಪುತ್ರಾ-
ನಸೌ ದರ್ಪಾತ್ ಸೂತಪುತ್ರೋ ದುರಾತ್ಮಾ ॥೩೪॥

ರಥಿಕರಲ್ಲಿ ಶ್ರೇಷ್ಠ ಈ ಸೂತಪುತ್ರ ಆಯುಷ್ಯ ತೀರಿದವನು. ಅವನನ್ನು ಈಗಲೇ ಮೃತ್ಯುವಿನ ವಶಕ್ಕೇ ಒಯ್ಯು. ದುರಾತ್ಮನಾದ ಈ ಕರ್ಣ ದರ್ಪದಿಂದ ಸದಾ ಪಾಂಡವರನ್ನು ಅಪಮಾನಿಸುತ್ತಾನೆ.

ವೀರವನ್ಮನ್ಯತೇತ್ಮಾನಂ ಯೇನ ಪಾಪಃ ಸುಯೋಧನಃ ।
ತಮದ್ಯ ಮೂಲಂ ಪಾಪಾನಾಂ ಜಯ ಸೌತಿಂ ಧನಂಜಯ ॥೩೫॥

ಕರ್ಣನು ಜೊತೆಗೆ ಇರುವುದರಿಂದಲೇ ದುರ್ಯೋಧನ ತನ್ನನ್ನು ವೀರನಂತೆ ತಿಳಿದಿದ್ದಾನೆ. ಅವನ ಪಾಪಕರ್ಮಗಳಿಗೆ ಮೂಲ ಪ್ರೇರಕನಾದ ತೃಪ್ತನಾದ ಕರ್ಣನನ್ನು ಅರ್ಜುನ, ನೀನು ಇಂದು ಗೆಲ್ಲು.

ಖಡ್ಗಜಿಹ್ವಂ ಧನುರಾಸ್ಯಂ ಶರದಂಷ್ಟ್ರಂ ತರಸ್ವಿನಮ್ ।
ದೃಪ್ತಂ ಪುರುಷಶಾರ್ದೂಲಂ ಜಹಿ ಕರ್ಣಂ ಧನಂಜಯ ॥೩೬॥

ಪುರುಷರಲ್ಲಿ ಕರ್ಣನೆಂದರೆ, ಖಡ್ಗವೇ ನಾಲಿಗೆ, ಧನುಸ್ಸೇ ಮುಖ, ಬಾಣಗಳೇ ಹಲ್ಲುಗಳು. ಇಂಥ ಮಹಾವೇಗವುಳ್ಳ ದರ್ಪದಿಂದ ಕೊಬ್ಬಿದ ಹೆಬ್ಬುಲಿಯಾಗಿದ್ದಾನೆ. ಅವನನ್ನು ಕೊಲ್ಲು.

ಅಹಂ ತ್ವಾಮನುಜಾನಾಮಿ ವೀರ್ಯೇಣ ಚ ಬಲೇನ ಚ ।
ಜಹಿ ಕರ್ಣಂ ರಣೇ ಶೂರಂ ಮಾತಂಗಮಿವ ಕೇಸರೀ ॥೩೭॥

ನಾನು ನಿನಗೆ ಅನುಜ್ಞೆ ನೀಡುತ್ತೇನೆ. ವೀರ್ಯದಿಂದಲೂ ಬಲದಿಂದಲೂ, ಸಿಂಹವು ಆನೆಯನ್ನು ಕೊಲ್ಲುವಂತೆ, ನೀನು ರಣದಲ್ಲಿ ಶೂರಕರ್ಣನನ್ನು ಕೊಲ್ಲು.

ಯಸ್ಯ ವೀರ್ಯೇಣ ವೀರ್ಯಂ ತೇ ಧಾರ್ತರಾಷ್ಟ್ರೋಽವಮನ್ಯತೇ ।
ತಮದ್ಯ ಪಾರ್ಥ ಸಂಗ್ರಾಮೇ ಕರ್ಣಂ ವೈಕರ್ತನಂ ಜಹಿ ॥೩೮॥

ಕರ್ಣನ ವೀರ್ಯದ ಬಲದಿಂದ ದುರ್ಯೋಧನನು ನಿನ್ನನ್ನು ಅವಮಾನಿಸುತ್ತಿದ್ದಾನೆ. ಅಂಥ ಕರ್ಣನನ್ನು ಇಂದು ರಣದಲ್ಲಿ ಕೊಲ್ಲು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಂ ಕರ್ಣಪರ್ವಣಿ ಕೃಷ್ಣವಾಕ್ಯೇ ಕರ್ಣಗುಣವರ್ಣನಂ ನಾಮ
ಏಕೋನಸಪ್ತತಿತಮೋಧ್ಯಾಯಃ ॥೬೯॥

❖

ಎಪ್ಪತ್ತನೆಯ ಅಧ್ಯಾಯ

ದುರ್ಯೋಧನನ ಎಲ್ಲ ಅಕೃತ್ಯಗಳಿಗೂ ಪ್ರೇರಣೆ ನೀಡಿದವನೇ ಕರ್ಣ.
ಅವನ ವಧೆ ಅತ್ಯಂತ ಆವಶ್ಯಕ ಎಂದು ಶ್ರೀಕೃಷ್ಣನ ಉಪದೇಶ.

ಸಂಜಯಃ

ತತಃ ಪುನರಮೇಯಾತ್ಮಾ ಕೇಶವೋಽರ್ಜುನಮಬ್ರವೀತ್ ।
ಕೃತಸಂಕಲ್ಪಮಾಯಾಂತಂ ವಧೇ ಕರ್ಣಸ್ಯ ಭಾರತ ॥೧॥

ಸಂಜಯನು ನುಡಿದ— ಅಮೇಯಾತ್ಮನಾದ ಶ್ರೀಕೃಷ್ಣನು ಪುನಃ, ಕರ್ಣವಧಕ್ಕೆ ಸಂಕಲ್ಪಮಾಡಿ ರಣರಂಗಕ್ಕೆ ಬರುತ್ತಿರುವಾಗ, ಅರ್ಜುನನಿಗೆ ನುಡಿದ.

ಅದ್ಯ ಸಪ್ತದಶಾಹಾನಿ ವರ್ತಮಾನಸ್ಯ ನಿತ್ಯಶಃ ।
ವಿನಾಶಸ್ಯಾತಿಘೋರಸ್ಯ ನರವಾರಣವಾಜಿನಾಮ್ ॥೨॥

ಪದಾತಿ ಗಜ ಅಶ್ವ ಸೈನಿಕರ ಅತಿಘೋರವಾದ ವಿನಾಶ ನಿತ್ಯ ನಡೆಯುತ್ತಿದ್ದಂತೆ ಅದು ಪ್ರಾರಂಭವಾಗಿ ಇಂದಿಗೆ ಹದಿನೇಳು ದಿನಗಳಾಗುತ್ತಿವೆ.

ಭೂತ್ವಾ ಚ ವಿಪುಲಾ ಸೇನಾ ತಾವಕಾನಾಂ ಪರೈಃ ಸಹ ।
ಅನ್ಯೋನ್ಯಂ ಸಮರೇ ಪ್ರಾಪ್ಯ ಕಿಂಚಿಚ್ಛೇಷಾ ಮಹಾಭಯೇ ॥೩॥

ಪ್ರಾರಂಭದಲ್ಲಿ ಅಪಾರವಾಗಿದ್ದ ಸೈನ್ಯವು, ನಿಮ್ಮವರಿಗೆ ಪರರೊಂದಿಗೆ ಉಂಟಾದ ಮಹಾಭಯಂಕರವಾದ ಸಮರದಲ್ಲಿ ಸೇರಿಕೊಂಡು ಬಳಿಕ, ಈಗ ಸ್ವಲ್ಪ ಭಾಗ ಮಾತ್ರವಾಗಿ ಉಳಿದಿದೆ.

ಭೂತ್ವಾ ವೈ ಕೌರವಾಃ ಪಾರ್ಥ ಪ್ರಭೂತಗಜವಾಜಿನಃ ।
ತ್ವಾಂ ಹಿ ಶತ್ರುಂ ಸಮಾಸಾದ್ಯ ವಿನಷ್ಟಾ ರಣಮೂರ್ಧನಿ ॥೪॥

ಅರ್ಜುನ, ಕೌರವರಲ್ಲಿ ಬಹಳ ಗಜ ಅಶ್ವ ಸೈನಿಕರಿದ್ದರೂ ಅವರೆಲ್ಲರೂ ರಣಾಂಗಣದ ಮುಂಭಾಗದಲ್ಲಿ ಶತ್ರುವಾಗಿ ನಿಂತ ನಿನ್ನನ್ನು ಇದಿರಿಸಿ ವಿನಾಶ ಹೊಂದಿದರು.

ಏತೇ ಚ ಸರ್ವೇ ಪಾಂಚಾಲಾಃ ಸೃಂಜಯಾಶ್ಚ ಸಹಾನ್ವಯಾಃ ।
ತ್ವಾಂ ಸಮಾಶ್ರಿತ್ಯ ವರ್ಧಂತೇ ಪಾಂಡವಾಶ್ಚ ವ್ಯವಸ್ಥಿತಾಃ ॥೫॥

ಈ ಎಲ್ಲ ಪಾಂಚಾಲರೂ ಸೃಂಜಯರೂ ಪಾಂಡವರೂ ತಮ್ಮ ಕಡೆಯವ ರೊಂದಿಗೆ ಯುದ್ಧ ಸನ್ನದ್ಧರಾಗಿ ನಿಂತು ನಿನ್ನನ್ನು ಆಶ್ರಯಿಸಿ ಜಯಹೊಂದುತ್ತಿದ್ದಾರೆ.

ಪಾಂಚಾಲೈಃ ಪಾಂಡವೈರ್ಮತ್ಸ್ಯೈಃ ಕಾರೂಷೈಶ್ಚೇದಿಕೇಕಯೈಃ ।
ತ್ವಯಾ ಗುಪ್ತೈರಮಿತ್ರಘ್ನ ಕೃತಃ ಶತ್ರುಗಣಕ್ಷಯಃ ॥೬॥

ಶತ್ರುನಾಶಕನೆ, ಪಾಂಚಾಲ ಪಾಂಡವ ಮತ್ಸ್ಯ ಕಾರೂಷ ಚೇದಿ ಕೇಕಯರು ನಿನ್ನ ರಕ್ಷಣೆಯಲ್ಲಿದ್ದು ಶತ್ರುಸಮೂಹಗಳನ್ನು ನಾಶಮಾಡಿದ್ದಾರೆ.

ಕೋ ಹಿ ಶಕ್ತೋ ರಣೇ ಜೇತುಂ ಕೌರವಾಂಸ್ತಾತ ಸಂಗತಾನ್ ।
ಅನ್ಯತ್ರ ಪಾಂಡವಾದ್ ಯುದ್ಧೇ ಶ್ವೇತಾಶ್ವಾದ್ ವಾನರಧ್ವಜಾತ್ ॥೭॥

ಶ್ವೇತ ಅಶ್ವಗಳಿಂದ ವಾನರಧ್ವಜದಿಂದ ಯುಕ್ತನಾದ ನಿನ್ನ ಹೊರತು ಇನ್ನು ಯಾವನು ಯುದ್ಧದಲ್ಲಿ ಎಲ್ಲರೂ ಒಟ್ಟಾಗಿ ಬಂದ ಕೌರವರನ್ನು ಗೆಲ್ಲಲು ಶಕ್ತನಾಗುತ್ತಾನೆ?

ತ್ವಂ ಹಿ ಶಕ್ತೋ ರಣೇ ಜೇತುಂ ಸಸುರಾಸುರಮಾನುಷಾನ್ ।
ತ್ರೀನ್ ಲೋಕಾನ್ ಸಮಮುದ್ಯುಕ್ತಾನ್ ಕಿಂ ಪುನಃ ಕೌರವಂ
ಬಲಮ್ ॥೮॥

ಸುರ ಅಸುರ ಮಾನವರಿಂದ ಯುಕ್ತವಾದ ಮೂರು ಲೋಕಗಳು ಒಟ್ಟಾಗಿ ಉದ್ಯುಕ್ತವಾದರೂ ನೀನು ರಣದಲ್ಲಿ ಗೆಲ್ಲಬಲ್ಲೆ.

ಭಗದತ್ತಂ ಹಿ ರಾಜಾನಂ ಕೋಽನ್ಯಃ ಶಕ್ತಸ್ತ್ವಯಾ ವಿನಾ ।
ಜೇತುಂ ಪುರುಷಶಾರ್ದೂಲ ಯೋಽಪಿ ಸ್ಯಾದ್ ವಾಸವೋಪಮಃ ॥೯॥

ಪುರುಷಶ್ರೇಷ್ಠನೆ, ಇಂದ್ರನಂಥ ರಾಜಾ ಭಗದತ್ತನನ್ನು ನಿನ್ನ ಹೊರತು ಇನ್ನಾವನು ಗೆಲ್ಲಬಲ್ಲ?

ತಥೇಮಾಂ ವಿಪುಲಾಂ ಸೇನಾಂ ಗುಪ್ತಾಂ ಪಾರ್ಥ ತ್ವಯಾನಘ ।
ನ ಶೇಕುಃ ಪಾರ್ಥಿವಾಃ ಸರ್ವೇ ಚಕ್ಷುರ್ಭಿರಭಿವೀಕ್ಷಿತುಮ್ ॥೧೦॥

ಅರ್ಜುನ, ನಮ್ಮ ಈ ಅಪಾರಸೈನ್ಯ ನಿನ್ನಿಂದ ರಕ್ಷಿತವಾದ್ದರಿಂದ ರಾಜರು ಯಾರೂ ಅದನ್ನು ಕಣ್ಣುಗಳಿಂದ ದಿಟ್ಟಿಸಲೂ ಸಮರ್ಥರಾಗಲಿಲ್ಲ.

ತಥೈವ ಸತತಂ ಪಾರ್ಥ ರಕ್ಷಿತಾಭ್ಯಾಂ ತ್ವಯಾ ರಣೇ ।
ಧೃಷ್ಟದ್ಯುಮ್ನಶಿಖಂಡಿಭ್ಯಾಂ ಭೀಷ್ಮದ್ರೋಣೌ ನಿಪಾತಿತೌ ॥೧೧॥

ಹಾಗೇ ರಣದಲ್ಲಿ ಸತತವಾಗಿ ನಿನ್ನ ರಕ್ಷಣೆಯಲ್ಲಿದ್ದ ಧೃಷ್ಟದ್ಯುಮ್ನ ಶಿಖಂಡಿಗಳಿಂದ ಭೀಷ್ಮ ದ್ರೋಣರು ಹತರಾದರು.

ಕೋ ಹಿ ಶಕ್ತೋ ರಣೇ ಪಾರ್ಥ ಪಾಂಚಾಲಾನಾಂ ಮಹಾರಥೌ ।
ಭೀಷ್ಮದ್ರೋಣೌ ಯುಧಾ ಜೇತುಂ ಶಕ್ರತುಲ್ಯಪರಾಕ್ರಮೌ ॥೧೨॥

ಇಂದ್ರಸಮಾನ ಪರಾಕ್ರಮಿಗಳಾದ ಮಹಾರಥರಾದ ಭೀಷ್ಮ ದ್ರೋಣರನ್ನು ರಣದಲ್ಲಿ ಹೋರಾಟದಿಂದ ಗೆಲ್ಲಲು ಪಾಂಚಾಲರಲ್ಲಿ ಯಾವನು ಶಕ್ತನಿದ್ದಾನೆ?

ಕೋ ಹಿ ಶಾಂತನವಂ ಸಂಖ್ಯೇ ದ್ರೋಣಂ ವೈಕರ್ತನಂ ಕೃಪಮ್ ।
ದ್ರೌಣಿಂ ಚ ಸೌಮದತ್ತಿಂ ಚ ಕೃತವರ್ಮಾಣಮೇವ ಚ ।
ಸೈಂಧವಂ ಮದ್ರರಾಜಂ ಚ ರಾಜಾನಂ ಚ ಸುಯೋಧನಮ್ ॥೧೩॥

ವೀರಾನ್ ಕೃತಾಸ್ತ್ರಾನ್ ಸಮರೇ ಸರ್ವಾನೇವಾನಿವರ್ತಿನಃ ।
ಅಕ್ಷೋಹಿಣೀಪತೀನುಗ್ರಾನ್ ಸಂರಬ್ಧಾನ್ ಯುದ್ಧದುರ್ಮದಾನ್ ।
ತ್ವಾಮೃತೇ ಪುರುಷವ್ಯಾಘ್ರ ಜೇತುಂ ಶಕ್ತಃ ಪುಮಾನಿಹ ॥೧೪॥

ಭೀಷ್ಮ ದ್ರೋಣ ಕರ್ಣ ಕೃಪ ಅಶ್ವತ್ಥಾಮ ಸೌಮದತ್ತಿ ಕೃತವರ್ಮ ಜಯದ್ರಥ

ಶಲ್ಯ ರಾಜಾ ಸುಯೋಧನ ಇವರೆಲ್ಲರೂ ವೀರರು, ಅಸ್ತ್ರವಿದ್ಯಾಪಾರಂಗತರು. ರಣದಲ್ಲಿ ಹಿಮ್ಮೆಟ್ಟದವರು. ಅಕ್ಷೋಹಿಣಿಸೇನಾಧಿಪತಿಗಳು ಉಗ್ರರು ಕುಪಿತರು ಯುದ್ಧದಲ್ಲಿ ಹವ್ಯಾಸಿಗಳು, ಇವರನ್ನು ಅರ್ಜುನ, ನೀನಲ್ಲದೆ ಇನ್ನಾವ ಪುರುಷನು ಗೆಲ್ಲಲು ಶಕ್ತ?

ಸೇನಾಶ್ಚ ಬಹುಲಾಃ ಕ್ಷೀಣಾಃ ಪ್ರದೀರ್ಣಾಶ್ವರಥದ್ವಿಪಾಃ ।
ನಾನಾಜನಪದಾಶ್ಚೋಗ್ರಾಃ ಕ್ಷತ್ರಿಯಾಣಾಮಮರ್ಷಿಣಾಮ್ ॥೧೫॥

ನಾನಾ ದೇಶಗಳಿಂದ ಬಂದ ಅಸಹನಶೀಲರಾದ ಕ್ಷತ್ರಿಯರ ಅಪಾರವಾದ ಉಗ್ರವಾದ ಸೈನ್ಯಗಳು ಅಶ್ವರಥಗಜ ನಾಶದಿಂದ ಈಗ ಕ್ಷೀಣವಾಗಿವೆ.

ಗೋವಾಸದಾಸಮೀಯಾನಾಂ ವಸಾತೀನಾಂ ಚ ಭಾರತ ।
ವ್ರಾತ್ಯಾನಾಂ ವಾಟಧಾನಾನಾಂ ಭೋಜಾನಾಂ ಚಾಪಿ
ಮಾನಿನಾಮ್ ॥೧೬॥

ಉದೀರ್ಣಾಶ್ಚ ಮಹಾಸೇನಾ ಬ್ರಹ್ಮಕ್ಷತ್ರಸ್ಯ ಭಾರತ ।
ತ್ವಾಂ ಸಮಾಸಾದ್ಯ ನಿಧನಂ ಗತಾ ಭೀಮಂ ಚ ಭಾರತ ॥೧೭॥

ಗೋವಾಸರು ದಾಸಮೀಯರು ವಸಾತಿಗಳು ವ್ರಾತ್ಯರು ವಾಟಧಾನರು, ಭೋಜರು ಇವರೆಲ್ಲರು ದರ್ಪಿಷ್ಠರು. ಇವರ ಬ್ರಾಹ್ಮಣ ಕ್ಷತ್ರಿಯಯೋಧರಿಂದ ಯುಕ್ತವಾದ ಶ್ರೇಷ್ಠವಾದ ಮಹಾಸೈನ್ಯಗಳು ನಿನ್ನನ್ನೂ ಭೀಮನನ್ನೂ ಇದಿರಿಸಿ ನಾಶವಾದುವು.

ಉಗ್ರಾಶ್ಚ ಕ್ರೂರಕರ್ಮಾಣಸ್ತುಷಾರಾ ಯವನಾಃ ಖಶಾಃ ।
ದಾರ್ವಾಭಿಸಾರಾ ದರದಾಃ ಶಾಕಾ ಮಾತರತಂಗಣಾಃ ॥೧೮॥

ಆಂಧ್ರಕಾಶ್ಚ ಪುಲಿಂದಾಶ್ಚ ಕಿರಾತಾಶ್ಚೋಗ್ರವಿಕ್ರಮಾಃ ।
ಮ್ಲೇಚ್ಛಾಶ್ಚ ಪಾರ್ವತೀಯಾಶ್ಚ ಸಾಗರಾನೂಪವಾಸಿನಃ ।
ಸಂರಮ್ಭಿಣೋ ಯುದ್ಧಶೌಂಡಾ ಬಲಿನೋ ದಂಡಪಾಣಯಃ ॥೧೯॥

ಏತೇ ಸುಯೋಧನಸ್ಯಾರ್ಥೇ ಸಂರಬ್ಧಾಃ ಕುರುಭಿಃ ಸಹ ।
ನ ಶಕ್ಯಾ ಯುಧಿ ನಿರ್ಜೇತುಂ ತ್ವದನ್ಯೇನ ಪರಂತಪ ॥೨೦॥

ತುಷಾರ ಯವನ ಖಶ ದಾರ್ವಾಭಿಸಾರ ದರದ ಶಾಕ ಮಾಠರ ತಂಗಣ ಆಂಧ್ರ ಪುಲಿಂದ ಕಿರಾತ ಮ್ಲೇಚ್ಛ ಪಾರ್ವತೀಯ ಸಮುದ್ರತೀರವಾಸಿಗಳು ಇವರೆಲ್ಲರೂ ಉಗ್ರರು ಕ್ರೂರಕರ್ಮಿಗಳು ಉಗ್ರಪರಾಕ್ರಮಿಗಳು ಕೋಪಿಷ್ಠರು ಯುದ್ಧನಿಪುಣರು, ಬಲಿಷ್ಠರು ದಂಡಪಾಣಿಗಳು, ಇವರು ಕುಪಿತರಾಗಿ ಕೌರವರೊಂದಿಗೆ ಸೇರಿ ಯುದ್ಧ ಮಾಡುವವರು. ಶತ್ರುನಾಶಕನೆ, ಇವರನ್ನು ರಣದಲ್ಲಿ ಗೆಲ್ಲಲು ನಿನ್ನ ಹೊರತು ಅನ್ಯನಿಂದ ಶಕ್ಯವಿಲ್ಲ.

ಧಾರ್ತರಾಷ್ಟ್ರಮುದಗ್ರಂ ಹಿ ವ್ಯೂಢಂ ದೃಷ್ಟ್ವಾ ಮಹಾಬಲಮ್ ।
ಯದಿ ತ್ವಂ ನ ಭವೇಸ್ತ್ರಾತಾ ಪ್ರತೀಯಾತ್ ಕೋ ನು ಮಾನವಃ ॥೨೧॥

ವ್ಯೂಹವಾಗಿ ನಿಂತ ಶ್ರೇಷ್ಠವಾದ ದುರ್ಯೋಧನನ ಮಹಾ ಸೈನ್ಯವನ್ನು ನೀನು ರಕ್ಷಕನಾಗಿ ನಿಲ್ಲದಿದ್ದರೆ, ಯಾವ ಮಾನವನು ತಾನೆ ಇದಿರಿಸಿಯಾನು?

ತತ್ ಸಾಗರಮಿವೋದ್ಧೂತಂ ರಜಸಾ ಸಂವೃತಂ ಬಲಮ್ ।
ವಿದಾರ್ಯ ಪಾಂಡವೈಃ ಕ್ರುದ್ಧೈಸ್ತ್ವಯಾ ಗುಪ್ತೈರ್ಹತಂ ವಿಭೋ ॥೨೨॥

ಧೂಳಿನಿಂದ ಮುಚ್ಚಿಕೊಂಡು ಸಮುದ್ರದಂತೆ ಉಕ್ಕಿಬರುವ ಕೌರವಸೈನ್ಯವನ್ನು ನಿನ್ನ ರಕ್ಷಣೆಯಲ್ಲಿರುವ ಪಾಂಡವ ಸೈನಿಕರು ಭೇದಿಸಿ ನಾಶಮಾಡಿದ್ದಾರೆ.

ಮಾಗಧಾನಾಮಧಿಪತಿರ್ಜಯತ್ಸೇನೋ ಮಹಾಬಲಃ ।
ಅದ್ಯ ಸಪ್ತೈವ ಚಾಹಾನಿ ಹತಃ ಸಂಖೇಽಭಿಮನ್ಯುನಾ ॥೨೩॥

ಮಗಧದೇಶಾಧಿಪತಿ ಮಹಾಬಲಿಷ್ಠ ಜಯತ್ಸೇನ ಇಂದಿಗೆ ಏಳೇ ದಿನಗಳ ಹಿಂದೆ ರಣದಲ್ಲಿ ಅಭಿಮನ್ಯುವಿನಿಂದ ಹತನಾಗಿದ್ದಾನೆ.

ತತೋ ದಶಸಹಸ್ರಾಣಿ ಗಜಾನಾಂ ಭೀಮಕರ್ಮಣಾಮ್ ।
ಜಘಾನ ಗದಯಾ ಭೀಮಸ್ತಸ್ಯ ರಾಜ್ಞಃ ಪರಿಚ್ಛದಮ್ ।
ತತೋಽನ್ಯೇಽಪಿ ಹತಾ ನಾಗಾ ರಥಾಶ್ಚ ಶತಶೋ ಬಲಾತ್ ॥೨೪॥

ಬಳಿಕ ಆ ರಾಜನ ಕಡೆಯಲ್ಲಿದ್ದ ಭಯಂಕರ ಕರ್ಮಗಳನ್ನು ಮಾಡುವ ಹತ್ತು ಸಾವಿರ ಗಜಯೋಧರನ್ನು ಭೀಮನು ಗದೆಯಿಂದ ಕೊಂದಿದ್ದಾನೆ. ಬೇರೆ ನೂರಾರು ಗಜ ರಥ ಯೋಧರನ್ನೂ ಬಲಾತ್ಕಾರದಿಂದ ಭೀಮನು ಕೊಂದಿದ್ದಾನೆ.

ತದೇವಂ ಸಮರೇ ತಾತ ವರ್ತಮಾನೇ ಮಹಾಭಯೇ ।
ಭೀಮಸೇನಂ ಸಮಾಸಾದ್ಯ ತ್ವಾಂ ಚ ಪಾಂಡವ ಕೌರವಾಃ ।
ಸವಾಜಿರಥನಾಗಾಶ್ಚ ಮೃತ್ಯುಲೋಕಮಿತೋ ಗತಾಃ ॥೨೫॥

ಹೀಗೆ ಮಹಾಭಯಂಕರವಾದ ಯುದ್ಧ ನಡೆಯುತ್ತಿದ್ದಾಗ ನಿನ್ನನ್ನೂ ಭೀಮನನ್ನೂ ಇದಿರಿಸಿ, ಕೌರವರು ಅಶ್ವರಥಗಜ ಸಮೇತರಾಗಿ ಇಹವನ್ನು ತೊರೆದು ಯಮಲೋಕಕ್ಕೆ ಹೋಗಿದ್ದಾರೆ.

ತಥಾ ಸೇನಾಮುಖೇ ತತ್ರ ನಿಹತೇ ಪಾರ್ಥ ಪಾಂಡವೈಃ ।
ಭೀಷ್ಮಃ ಪ್ರಾಸೃಜದುಗ್ರಾಣಿ ಶರವರ್ಷಾಣಿ ಸಂಘಶಃ ॥೨೬॥

ಕೌರವಸೇನೆಯ ಪ್ರಧಾನಯೋಧರನ್ನು ಪಾಂಡವರು ವಧಿಸುತ್ತಿದ್ದಂತೆಯೇ ಅತ್ತ ಭೀಷ್ಮನು ಉಗ್ರಬಾಣಗಳ ಮಳೆಸಮೂಹಗಳನ್ನೇ ಉಂಟುಮಾಡಿದ.

ಸ ಚೇದಿಕಾಶಿಪಾಂಚಾಲಾನ್ ಕರೂಷಾನ್ ಮತ್ಸ್ಯಕೇಕಯಾನ್ ।
ಶರೈಃ ಪ್ರಚ್ಛಾದ್ಯ ನಿಧನಮನಯತ್ ಪರಮಾಸ್ತ್ರವಿತ್ ॥೨೭॥

ಭೀಷ್ಮನು ಶ್ರೇಷ್ಠ ಅಸ್ತ್ರಜ್ಞಾನಿ. ಅವನು ಚೇದಿ ಕಾಶಿ ಪಾಂಚಾಲ ಕರೂಷ ಮತ್ಸ್ಯ ಕೇಕಯ ಯೋಧರನ್ನು ಬಾಣಗಳಿಂದ ಮುಚ್ಚಿ ಸಂಹರಿಸಿದ.

ತಸ್ಯ ಚಾಪಚ್ಯುತೈರ್ಬಾಣೈಃ ಪರದೇಹವಿದಾರಣೈಃ ।
ಪೂರ್ಣಮಾಕಾಶಮಭವದ್ ರುಗ್ಮಪುಂಖೈರಜಿಹ್ಮಗೈಃ ॥೨೮॥

ಬಂಗಾರದ ಬುಡದಿಂದ ಯುಕ್ತವಾಗಿ ನೇರವಾಗಿ ಹೋಗುತ್ತ ಶತ್ರುಗಳ ಶರೀರ ನಾಶಮಾಡುವ ಭೀಷ್ಮನ ಬಾಣಗಳು ಅವನ ಧನುಸ್ಸಿನಿಂದ ಹೊರಟು ಆಕಾಶವನ್ನು ಪೂರ್ತಿಯಾಗಿ ತುಂಬಿದುವು.

ಗತ್ವಾ ದಶಮ್ಯಾ ತೇ ಗತ್ವಾ ಜಘ್ನುರ್ವಾಜಿರಥದ್ವಿಪಾನ್ ।
ಹಿತ್ವಾ ನವ ಗತೀರ್ಜಘ್ನುಃ ಸ್ವಬಾಣಾನಾಹವೇऽಮುಚನ್ ॥೨೯॥

ಹತ್ತು ಹೆಜ್ಜೆ ಮುಂದಿಟ್ಟು ಅಶ್ವರಥಗಜಗಳನ್ನು ಸಂಹರಿಸುತ್ತಿದ್ದ ಪಾಂಡವ ಸೈನಿಕರು, ಭೀಷ್ಮನ ಬಾಣಗಳನ್ನು ಇದಿರಿಸಲಾಗದೆ, ಒಂಬತ್ತು ಹೆಜ್ಜೆ ಹಿಂದಿಟ್ಟು ತಮ್ಮ ಬಾಣಗಳನ್ನು ರಣದಲ್ಲಿ ಪ್ರಯೋಗಿಸಬೇಕಾಯಿತು.

ತುಷಾರ ಯವನ ಖಶ ದಾರ್ವಾಭಿಸಾರ ದರದ ಶಾಕ ಮಾಠರ ತಂಗಣ ಆಂಧ್ರ ಪುಲಿಂದ ಕಿರಾತ ಮ್ಲೇಚ್ಛ ಪಾರ್ವತೀಯ ಸಮುದ್ರತೀರವಾಸಿಗಳು ಇವರೆಲ್ಲರೂ ಉಗ್ರರು ಕ್ರೂರಕರ್ಮಿಗಳು ಉಗ್ರಪರಾಕ್ರಮಿಗಳು ಕೋಪಿಷ್ಠರು ಯುದ್ಧನಿಪುಣರು, ಬಲಿಷ್ಠರು ದಂಡಪಾಣಿಗಳು, ಇವರು ಕುಪಿತರಾಗಿ ಕೌರವರೊಂದಿಗೆ ಸೇರಿ ಯುದ್ಧ ಮಾಡುವವರು. ಶತ್ರುನಾಶಕನೆ, ಇವರನ್ನು ರಣದಲ್ಲಿ ಗೆಲ್ಲಲು ನಿನ್ನ ಹೊರತು ಅನ್ಯನಿಂದ ಶಕ್ಯವಿಲ್ಲ.

ಧಾರ್ತರಾಷ್ಟ್ರಮುದಗ್ರಂ ಹಿ ವ್ಯೂಢಂ ದೃಷ್ಟ್ವಾ ಮಹಾಬಲಮ್ ।
ಯದಿ ತ್ವಂ ನ ಭವೇಸ್ತ್ರಾತಾ ಪ್ರತೀಯಾತ್ ಕೋ ನು ಮಾನವಃ ॥೨೧॥

ವ್ಯೂಹವಾಗಿ ನಿಂತ ಶ್ರೇಷ್ಠವಾದ ದುರ್ಯೋಧನನ ಮಹಾ ಸೈನ್ಯವನ್ನು ನೀನು ರಕ್ಷಕನಾಗಿ ನಿಲ್ಲದಿದ್ದರೆ, ಯಾವ ಮಾನವನು ತಾನೆ ಇದಿರಿಸಿಯಾನು?

ತತ್ ಸಾಗರಮಿವೋದ್ಧೂತಂ ರಜಸಾ ಸಂವೃತಂ ಬಲಮ್ ।
ವಿದಾರ್ಯ ಪಾಂಡವೈಃ ಕ್ರುದ್ಧೈಸ್ತ್ವಯಾ ಗುಪ್ತೈರ್ಹತಂ ವಿಭೋ ॥೨೨॥

ಧೂಳಿನಿಂದ ಮುಚ್ಚಿಕೊಂಡು ಸಮುದ್ರದಂತೆ ಉಕ್ಕಿಬರುವ ಕೌರವಸೈನ್ಯವನ್ನು ನಿನ್ನ ರಕ್ಷಣೆಯಲ್ಲಿರುವ ಪಾಂಡವ ಸೈನಿಕರು ಭೇದಿಸಿ ನಾಶಮಾಡಿದ್ದಾರೆ.

ಮಾಗಧಾನಾಮಧಿಪತಿರ್ಜಯತ್ಸೇನೋ ಮಹಾಬಲಃ ।
ಅದ್ಯ ಸಪ್ತೈವ ಚಾಹಾನಿ ಹತಃ ಸಂಖೇಽಭಿಮನ್ಯುನಾ ॥೨೩॥

ಮಗಧದೇಶಾಧಿಪತಿ ಮಹಾಬಲಿಷ್ಠ ಜಯತ್ಸೇನ ಇಂದಿಗೆ ಏಳೇ ದಿನಗಳ ಹಿಂದೆ ರಣದಲ್ಲಿ ಅಭಿಮನ್ಯುವಿನಿಂದ ಹತನಾಗಿದ್ದಾನೆ.

ತತೋ ದಶಸಹಸ್ರಾಣಿ ಗಜಾನಾಂ ಭೀಮಕರ್ಮಣಾಮ್ ।
ಜಘಾನ ಗದಯಾ ಭೀಮಸ್ತಸ್ಯ ರಾಜ್ಞಃ ಪರಿಚ್ಛದಮ್ ।
ತತೋಽನ್ಯೇಽಪಿ ಹತಾ ನಾಗಾ ರಥಾಶ್ಚ ಶತಶೋ ಬಲಾತ್ ॥೨೪॥

ಬಳಿಕ ಆ ರಾಜನ ಕಡೆಯಲ್ಲಿದ್ದ ಭಯಂಕರ ಕರ್ಮಗಳನ್ನು ಮಾಡುವ ಹತ್ತು ಸಾವಿರ ಗಜಯೋಧರನ್ನು ಭೀಮನು ಗದೆಯಿಂದ ಕೊಂದಿದ್ದಾನೆ. ಬೇರೆ ನೂರಾರು ಗಜ ರಥ ಯೋಧರನ್ನೂ ಬಲಾತ್ಕಾರದಿಂದ ಭೀಮನು ಕೊಂದಿದ್ದಾನೆ.

ತದೇವಂ ಸಮರೇ ತಾತ ವರ್ತಮಾನೇ ಮಹಾಭಯೇ ।
ಭೀಮಸೇನಂ ಸಮಾಸಾದ್ಯ ತ್ವಾಂ ಚ ಪಾಂಡವ ಕೌರವಾಃ ।
ಸವಾಜಿರಥನಾಗಾಶ್ಚ ಮೃತ್ಯುಲೋಕಮಿತೋ ಗತಾಃ ॥೨೫॥

ಹೀಗೆ ಮಹಾಭಯಂಕರವಾದ ಯುದ್ಧ ನಡೆಯುತ್ತಿದ್ದಾಗ ನಿನ್ನನ್ನೂ ಭೀಮನನ್ನೂ ಇದಿರಿಸಿ, ಕೌರವರು ಅಶ್ವರಥಗಜ ಸಮೇತರಾಗಿ ಇಹವನ್ನು ತೊರೆದು ಯಮಲೋಕಕ್ಕೆ ಹೋಗಿದ್ದಾರೆ.

ತಥಾ ಸೇನಾಮುಖೇ ತತ್ರ ನಿಹತೇ ಪಾರ್ಥ ಪಾಂಡವೈಃ ।
ಭೀಷ್ಮಃ ಪ್ರಾಸೃಜದುಗ್ರಾಣಿ ಶರವರ್ಷಾಣಿ ಸಂಘಶಃ ॥೨೬॥

ಕೌರವಸೇನೆಯ ಪ್ರಧಾನಯೋಧರನ್ನು ಪಾಂಡವರು ವಧಿಸುತ್ತಿದ್ದಂತೆಯೇ ಅತ್ತ ಭೀಷ್ಮನು ಉಗ್ರಬಾಣಗಳ ಮಳೆಸಮೂಹಗಳನ್ನೇ ಉಂಟುಮಾಡಿದ.

ಸ ಚೇದಿಕಾಶಿಪಾಂಚಾಲಾನ್ ಕರೂಷಾನ್ ಮತ್ಸ್ಯಕೇಕಯಾನ್ ।
ಶರೈಃ ಪ್ರಚ್ಛಾದ್ಯ ನಿಧನಮನಯತ್ ಪರಮಾಸ್ತ್ರವಿತ್ ॥೨೭॥

ಭೀಷ್ಮನು ಶ್ರೇಷ್ಠ ಅಸ್ತ್ರಜ್ಞಾನಿ. ಅವನು ಚೇದಿ ಕಾಶಿ ಪಾಂಚಾಲ ಕರೂಷ ಮತ್ಸ್ಯ ಕೇಕಯ ಯೋಧರನ್ನು ಬಾಣಗಳಿಂದ ಮುಚ್ಚಿ ಸಂಹರಿಸಿದ.

ತಸ್ಯ ಚಾಪಚ್ಯುತೈರ್ಬಾಣೈಃ ಪರದೇಹವಿದಾರಣೈಃ ।
ಪೂರ್ಣಮಾಕಾಶಮಭವದ್ ರುಗ್ಮಪುಂಖೈರಜಿಹ್ಮಗೈಃ ॥೨೮॥

ಬಂಗಾರದ ಬುಡದಿಂದ ಯುಕ್ತವಾಗಿ ನೇರವಾಗಿ ಹೋಗುತ್ತ ಶತ್ರುಗಳ ಶರೀರ ನಾಶಮಾಡುವ ಭೀಷ್ಮನ ಬಾಣಗಳು ಅವನ ಧನುಸ್ಸಿನಿಂದ ಹೊರಟು ಆಕಾಶವನ್ನು ಪೂರ್ತಿಯಾಗಿ ತುಂಬಿದುವು.

ಗತ್ವಾ ದಶಮ್ಯಾ ತೇ ಗತ್ವಾ ಜಘ್ನುರ್ವಾಜಿರಥದ್ವಿಪಾನ್ ।
ಹಿತ್ವಾ ನವ ಗತೀರ್ದುಷ್ಟಾಃ ಸ್ವಬಾಣಾನಾಹವೇऽಮುಚನ್ ॥೨೯॥

ಹತ್ತು ಹೆಜ್ಜೆ ಮುಂದಿಟ್ಟು ಅಶ್ವರಥಗಜಗಳನ್ನು ಸಂಹರಿಸುತ್ತಿದ್ದ ಪಾಂಡವ ಸೈನಿಕರು, ಭೀಷ್ಮನ ಬಾಣಗಳನ್ನು ಇದಿರಿಸಲಾಗದೆ, ಒಂಬತ್ತು ಹೆಜ್ಜೆ ಹಿಂದಿಟ್ಟು ತಮ್ಮ ಬಾಣಗಳನ್ನು ರಣದಲ್ಲಿ ಪ್ರಯೋಗಿಸಬೇಕಾಯಿತು.

ದಿನಾನಿ ದಶ ಭೀಷ್ಮೇಣ ನಿಘ್ನತಾ ತಾವಕಂ ಬಲಮ್ ।
ಶೂನ್ಯಾಃ ಕೃತಾ ರಥೋಪಸ್ಥಾ ಹತಾಶ್ಚ ಗಜವಾಜಿನಃ ॥೩೦॥

ಹತ್ತು ದಿನಗಳ ಕಾಲ ನಿನ್ನ ಸೈನ್ಯವನ್ನು ಸಂಹರಿಸುತ್ತಿದ್ದ ಭೀಷ್ಮ ರಥಗಳಲ್ಲಿ ರಥಿಕರಿಲ್ಲದಂತೆ ಮಾಡಿದ. ಗಜ ಅಶ್ವಯೋಧರನ್ನೂ ನಾಶಪಡಿಸಿದ.

ದರ್ಶಯಿತ್ವಾತ್ಮನೋ ರೂಪಂ ರುದ್ರೋಪೇಂದ್ರಸಮಂ ಯುಧಿ ।
ಪಾಂಡವಾನಾಮನೀಕಾನಿ ಪ್ರವಿಗಾಹ್ಯ ವ್ಯಶಾತಯತ್ ॥೩೧॥

ಭೀಷ್ಮನು ರಣದಲ್ಲಿ ರುದ್ರ–ಉಪೇಂದ್ರರಂಥ ತನ್ನ ರೂಪವನ್ನು ತೋರಿ ಪಾಂಡವ ಸೈನಿಕರ ನಡುವೆ ಹೊಕ್ಕು ನಾಶಪಡಿಸಿದ.

ವಿನಿಘ್ನನ್ ಪೃಥಿವೀಪಾಲಾಂಶ್ಚೇದಿಪಾಂಚಾಲಕೇಕಯಾನ್ ।
ವ್ಯದಹತ್ ಪಾಂಡವೀಂ ಸೇನಾಂ ನರಾಶ್ವಗಜಸಂಕುಲಾಮ್ ॥೩೨॥

ಭೀಷ್ಮನು ಚೇದಿ ಪಾಂಚಾಲ ಕೇಕಯ ರಾಜರನ್ನು ಸಂಹರಿಸುತ್ತ ಪದಾತಿ ಅಶ್ವಗಜ ಸೈನಿಕರಿಂದ ತುಂಬಿದ ಪಾಂಡವ ಸೈನ್ಯವನ್ನು ಅಸ್ತ್ರಗಳಿಂದ ಸುಟ್ಟುಬಿಟ್ಟ.

ಮಜ್ಜಂತಮಪ್ಲವೇ ಮಂದಮುಜ್ಜಿಹೀರ್ಷುಂ ಸುಯೋಧನಮ್ ।
ತಥಾ ಚರಂತಂ ಸಮರೇ ತಪಂತಮಿವ ಭಾಸ್ಕರಮ್ ॥೩೩॥

ಪದಾತಿಕೋಟಿಸಾಹಸ್ರಾಃ ಪ್ರವರಾಯುಧಪಾಣಯಃ ।
ನ ಶೇಕುಃ ಸೃಂಜಯಾ ದ್ರಷ್ಟುಂ ತಥೈವಾನ್ಯೇ ಮಹೀಕ್ಷಿತಃ ॥೩೪॥

ಮಂದ ಬುದ್ಧಿಯ ದುರ್ಯೋಧನನು ದೋಣಿ ಇಲ್ಲದೆ ಮುಳುಗುವುದರಲ್ಲಿ ಇದ್ದಾಗ ಭೀಷ್ಮ ಅವನನ್ನು ಎತ್ತಿಹಾಕಲು ಬಯಸಿ ರಣದಲ್ಲಿ ಸೂರ್ಯನಂತೆ ಪ್ರಕಾಶಿಸುತ್ತ ಸಂಚರಿಸಿದ. ಆಗ ಅವನನ್ನು ದಿಟ್ಟಿಸಿ ನೋಡುವುದಕ್ಕೂ ಶ್ರೇಷ್ಠ ಆಯುಧ ಧರಿಸಿದ ಸಾವಿರಕೋಟಿ ಪದಾತಿಯುಕ್ತರಾದ ಸೃಂಜಯರು ಮತ್ತು ಬೇರೆ ರಾಜರು ಶಕ್ತರಾಗಲಿಲ್ಲ.

ವಿಚರಂತಂ ತಥಾ ತಂ ತು ಸಂಗ್ರಾಮೇ ಜಿತಕಾಶಿನಮ್ ।
ಸರ್ವೋದ್ಯಮೇನ ಮಹತಾ ಪಾಂಡವಾಃ ಸಮುಪಾದ್ರವನ್ ॥೩೫॥

ಭೀಷ್ಮನು ರಣದಲ್ಲಿ ಜಯದಿಂದ ಮೆರೆಯುತ್ತ ಸಂಚರಿಸುವಾಗ ಪಾಂಡವರು ತಮ್ಮ ಎಲ್ಲ ಮಹಾಪ್ರಯತ್ನಗಳನ್ನು ಮಾಡಿ ಅವನನ್ನು ಆಕ್ರಮಿಸಿದರು.

ಸ ತು ವಿದ್ರಾವ್ಯ ಸಮರೇ ಪಾಂಡವಾನ್ ಸೃಂಜಯಾನಪಿ ।
ಏಕ ಏವ ರಣೇ ಭೀಷ್ಮ ಏಕವೀರತ್ವಮಾಗತಃ ॥೩೬॥

ಭೀಷ್ಮನು ಸಮರದಲ್ಲಿ ಪಾಂಡವರನ್ನೂ ಸೃಂಜಯರನ್ನೂ ದೂರಕ್ಕೆ ಅಟ್ಟಿ ಒಬ್ಬನೇ ನಿಂತು ಅದ್ವಿತೀಯ ವೀರನೆನಿಸಿದ.

ತಂ ಶಿಖಂಡೀ ಸಮಾಸಾದ್ಯ ತ್ವಯಾ ಗುಪ್ತೋ ಮಹಾರಥಮ್ ।
ಜಘಾನ ಪುರುಷವ್ಯಾಘ್ರಂ ಶರೈಃ ಸನ್ನತಪರ್ವಭಿಃ ॥೩೭॥

ಮಹಾರಥನಾದ, ಪುರುಷೋತ್ತಮನಾದ ಭೀಷ್ಮನನ್ನು ನಿನ್ನ ರಕ್ಷಣೆಯಲ್ಲಿದ್ದ ಶಿಖಂಡಿ ಇದಿರಿಸಿ ಡೊಂಕುಗಿಣ್ಣಿನ ಬಾಣಗಳಿಂದ ಹೊಡೆದ.

ಸ ಏಷ ಪತಿತಃ ಶೇತೇ ಶರತಲ್ಪೇ ಪಿತಾಮಹಃ ।
ತ್ವಾಂ ಪ್ರಾಪ್ಯ ಪುರುಷವ್ಯಾಘ್ರ ವೃತ್ರಃ ಪ್ರಾಪ್ಯೇವ ವಾಸವಮ್ ॥೩೮॥

ಪುರುಷಶ್ರೇಷ್ಠನೇ, ವೃತ್ರನು ಇಂದ್ರನನ್ನು ಇದಿರಿಸಿದಂತೆ ಈ ಪಿತಾಮಹ ಭೀಷ್ಮನು ನಿನ್ನನ್ನು ಇದಿರಿಸಿ ಬಿದ್ದು ಶರತಲ್ಪದಲ್ಲಿ ಒರಗಿದ.

ದ್ರೋಣಃ ಪಂಚ ದಿನಾನ್ಯುಗ್ರೋ ವಿಧಮ್ಯ ರಿಪುವಾಹಿನೀಃ ।
ಕೃತ್ವಾ ವ್ಯೂಹಂ ಮಹಾಯುದ್ಧೇ ಪಾತಯಿತ್ವಾ ಮಹಾರಥಾನ್ ॥೩೯॥

ಜಯದ್ರಥಸ್ಯ ಸಮರೇ ಕೃತ್ವಾ ರಕ್ಷಾಂ ಮಹಾರಥಃ ।
ಅಂತಕಪ್ರತಿಮೋ ಘೋರೋ ರಾತ್ರಿಯುದ್ಧೇऽದಹತ್ತ್ವಜಾಃ ॥೪೦॥

ಮಹಾರಥನಾದ ದ್ರೋಣನು ಐದು ದಿನಗಳ ಕಾಲ ಉಗ್ರನಾಗಿ ವ್ಯೂಹವನ್ನು ರಚಿಸಿ ಶತ್ರುಸೈನ್ಯಗಳನ್ನು ನಾಶಮಾಡಿ ಮಹಾಯುದ್ಧದಲ್ಲಿ ಮಹಾರಥರನ್ನು ಬೀಳಿಸಿ, ರಣದಲ್ಲಿ ಜಯದ್ರಥನಿಗೆ ರಕ್ಷಣೆ ನೀಡಿ, ಮೃತ್ಯುಸಮ ಘೋರರೂಪವಾಗಿ ರಾತ್ರಿಯುದ್ಧದಲ್ಲಿ ಯೋಧರನ್ನು ದಹಿಸಿದ.

ದಗ್ಧ್ವಾ ಯೋಧಾನ್ ಶರೈರ್ವೀರೋ ಭಾರದ್ವಾಜಃ ಪ್ರತಾಪವಾನ್ ।
ಧೃಷ್ಟದ್ಯುಮ್ನಂ ಸಮಾಸಾದ್ಯ ಸ ಗತಃ ಪರಮಾಂ ಗತಿಮ್ ॥೪೧॥

ದ್ರೋಣನು ಪ್ರತಾಪಶಾಲಿ, ವೀರ, ಯೋಧರನ್ನು ಬಾಣಗಳಿಂದ ಸುಟ್ಟು ಧೃಷ್ಟದ್ಯುಮ್ನನನ್ನು ಇದಿರಿಸಿ ಪರಮಗತಿಯನ್ನು ಹೊಂದಿದ.

ಯದಿ ಚೈವ ಪರಾನ್ ಯುದ್ಧೇ ಸೂತಪುತ್ರಮುಖಾನ್ ರಥಾನ್ ।
ನಾವಾರಯಿಷ್ಯಃ ಸಂಗ್ರಾಮೇ ನ ಸ್ಮ ದ್ರೋಣೋ ವ್ಯನಂಕ್ಷ್ಯತ ॥೪೨॥

ಆದರೆ ಆಗ ಕರ್ಣ ಮುಂತಾದ ಮಹಾರಥರಾದ ಶತ್ರುಗಳನ್ನು ನೀನು ರಣದಲ್ಲಿ ತಡೆಯದಿರುತ್ತಿದ್ದರೆ, ದ್ರೋಣನು ರಣದಲ್ಲಿ ಧೃಷ್ಟದ್ಯುಮ್ನನಿಂದ ನಾಶ ಹೊಂದುತ್ತಿರಲಿಲ್ಲ.

ಭವತಾ ತು ಬಲಂ ಸರ್ವಂ ಧಾರ್ತರಾಷ್ಟ್ರಸ್ಯ ವಾರಿತಮ್ ।
ತತೋ ದ್ರೋಣೋ ಹತೋ ಯುದ್ಧೇ ಪಾರ್ಷತೇನ ಧನಂಜಯ ॥೪೩॥

ಅರ್ಜುನ, ನೀನು ಕೌರವನ ಸಮಸ್ತ ಸೈನ್ಯವನ್ನು ದ್ರೋಣನ ರಕ್ಷಣೆಗೆ ಬಾರದಂತೆ ತಡೆದೆ. ಅದರಿಂದ ದ್ರೋಣನು ರಣದಲ್ಲಿ ಧೃಷ್ಟದ್ಯುಮ್ನನಿಂದ ಹತನಾದ.

ಏವಂ ವಾ ಕೋ ರಣೇ ಕುರ್ಯಾತ್ ತ್ವದನ್ಯಃ ಕ್ಷತ್ರಿಯೋ ಭುವಿ ।
ಯಾದೃಶಂ ತೇ ಕೃತಂ ಪಾರ್ಥ ಜಯದ್ರಥವಧಂ ಪ್ರತಿ ॥೪೪॥

ನೀನು ಜಯದ್ರಥವಧಕ್ಕೆ ರಣದಲ್ಲಿ ಎಂಥ ಯುದ್ಧ ಮಾಡಿದೆಯೋ ಅಂಥ ಯುದ್ಧವನ್ನು ಭೂಮಿಯಲ್ಲಿ ನಿನ್ನ ಹೊರತು ಅನ್ಯಕ್ಷತ್ರಿಯನು ಯಾವನು ತಾನೆ ಮಾಡಿಯಾನು?

ನಿವಾರ್ಯ ಸೇನಾಂ ಮಹತೀಂ ಹತ್ವಾ ಶೂರಾಂಶ್ಚ ಪಾರ್ಥಿವಾನ್ ।
ನಿಹತಃ ಸೈಂಧವೋ ರಾಜಾ ತ್ವಯಾಸ್ತ್ರಬಲತೇಜಸಾ ॥೪೫॥

ಮಹಾಸೈನ್ಯವನ್ನು ತಡೆದು, ಶೂರ ರಾಜರನ್ನು ಕೊಂದ ನೀನು ಅಸ್ತ್ರಬಲ ಪರಾಕ್ರಮದಿಂದ ರಾಜಾ ಜಯದ್ರಥನನ್ನು ಕೊಂದಿರುವೆ.

ಆಶ್ಚರ್ಯಂ ಸಿಂಧುರಾಜಸ್ಯ ವಧಂ ಜಾನಂತಿ ಪಾರ್ಥಿವಾಃ ।
ಅನಾಶ್ಚರ್ಯಂ ಹಿ ತತ್ ತ್ವತ್ತಸ್ತ್ವಂ ಹಿ ಪಾರ್ಥ ಮಹಾರಥಃ ॥೪೬॥

ಜಯದ್ರಥವಧವನ್ನು ರಾಜರು ಆಶ್ಚರ್ಯವೆಂದುಕೊಳ್ಳುತ್ತಾರೆ. ಆದರೆ ನಿನ್ನಿಂದ ಆ ಕಾರ್ಯ ನಡೆದುದು ಆಶ್ಚರ್ಯವಲ್ಲ. ಏಕೆಂದರೆ ಅರ್ಜುನ, ನೀನು ಮಹಾರಥ.

ತ್ವಾಂ ಹಿ ಪ್ರಾಪ್ಯ ರಣೇ ಕ್ಷತ್ರಮೇಕಾಹಾದಿಹ ಭಾರತ ।
ತಪ್ಯಮಾನಮಹಂಯುಕ್ತಂ ನ ಭವೇದಿತಿ ಮೇ ಮತಿಃ ॥೪೭॥

ಅರ್ಜುನ, ನಿನ್ನನ್ನಿದಿರಿಸಿದರೆ ಅಹಂಕಾರಯುಕ್ತವಾದ ಇಡೀ ಕ್ಷತ್ರಿಯ ಸಮೂಹವು ಒಂದೇ ದಿನದಲ್ಲಿ ಹೊಡೆಸಿಕೊಂಡು, ಇನ್ನಿಲ್ಲವಾದೀತೆಂದು ನನಗೆ ಅನಿಸುತ್ತದೆ.

ಸೇಯಂ ಪಾರ್ಥ ಚಮೂರ್ಘೋರಾ ಧಾರ್ತರಾಷ್ಟ್ರಸ್ಯ ಸಂಯುಗೇ ।
ಹತಾ ಸಸರ್ವವೀರಾ ಹಿ ಭೀಷ್ಮದ್ರೋಣೌ ಯದಾ ಹತೌ ॥೪೮॥

ಭೀಷ್ಮ-ದ್ರೋಣರು ರಣದಲ್ಲಿ ಹತರಾದಾಗಲೇ, ದುರ್ಯೋಧನನ ಭಯಂಕರವಾದ ಸೈನ್ಯವು ಎಲ್ಲ ವೀರರೊಂದಿಗೆ ಹತವಾದಂತೇ.

ಶೀರ್ಣಪ್ರವರಯೋಧಾದ್ಯ ಹತವಾಜಿನರದ್ವಿಪಾ ।
ಹೀನಾ ಸೂರ್ಯೇಂದುನಕ್ಷತ್ರೈರ್ದ್ಯೌರಿವಾಭಾತಿ ಭಾರತೀ ॥೪೯॥

ಪ್ರಮುಖ ಯೋಧರು ಹತರಾದ್ದರಿಂದ, ಅಶ್ವಪದಾತಿಗಜಸೈನ್ಯಗಳೂ ಹತವಾದ್ದರಿಂದ ಕೌರವರ ಸೈನ್ಯವು ಸೂರ್ಯ ಚಂದ್ರ ನಕ್ಷತ್ರಗಳಿಲ್ಲದ ಆಕಾಶದಂತೆ ಶೂನ್ಯವಾಗಿ ಕಾಣುತ್ತಿದೆ.

ವಿಧ್ವಸ್ತಾ ಹಿ ರಣೇ ಪಾರ್ಥ ಸೇನೇಯಂ ಭೀಮವಿಕ್ರಮಾತ್ ।
ಆಸುರೀವ ಪುರಾ ಸೇನಾ ಶಕ್ರಸ್ಯೇವ ಪರಾಕ್ರಮೈಃ ॥೫೦॥

ಅರ್ಜುನ, ರಣದಲ್ಲಿ ಭೀಮನ ಪರಾಕ್ರಮದಿಂದ ಈ ಕೌರವಸೈನ್ಯ ಹಿಂದೆ ದೇವೇಂದ್ರನ ಪರಾಕ್ರಮದಿಂದ ಅಸುರಸೈನ್ಯ ನಾಶವಾದಂತೆ ನಾಶವಾಗಿದೆ.

ತೇಷಾಂ ಹತಾವಶಿಷ್ಟಾಸ್ತು ಪಂಚ ಸಂತಿ ಮಹಾರಥಾಃ ।
ಅಶ್ವತ್ಥಾಮಾ ಕೃತವರ್ಮಾ ಕರ್ಣೋ ಮದ್ರಾಧಿಪಃ ಕೃಪಃ ॥೫೧॥

ಅವರಲ್ಲಿ ಉಳಿದುಳಿದ ಮಹಾರಥರು ಐವರಿದ್ದಾರೆ. ಅಶ್ವತ್ಥಾಮ, ಕೃತವರ್ಮ ಕರ್ಣ ಶಲ್ಯ ಮತ್ತು ಕೃಪ ಎಂದು.

ತಾಂಸ್ತ್ವಮದ್ಯ ನರವ್ಯಾಘ್ರ ಹತ್ವಾ ಪಂಚ ಮಹಾರಥಾನ್ ।
ಹತಾಮಿತ್ರಾಂ ಪ್ರಯಚ್ಛೈನಾಂ ರಾಜ್ಞೇ ಸದ್ವೀಪಪತ್ತನಾಮ್ ॥೫೨॥

ಅರ್ಜುನ, ಆ ಐವರು ಮಹಾರಥರನ್ನು ನೀನು ಕೊಂದರೆ, ಶತ್ರುಗಳೇ ಇಲ್ಲದ ದ್ವೀಪಪಟ್ಟಣಯುಕ್ತವಾದ ಭೂಮಿಯನ್ನು ಯುಧಿಷ್ಠಿರನಿಗೆ ಒಪ್ಪಿಸಬಲ್ಲೆ.

ಸಾಕಾಶಜಲಪಾತಾಲಾಂ ಸಪರ್ವತಮಹಾವನಾಮ್ ।
ಪ್ರಾಪ್ನೋತ್ವಮಿತವೀರ್ಯಶ್ರೀರದ್ಯ ಪಾರ್ಥೋ ವಸುಂಧರಾಮ್ ॥೫೩॥

ಆಕಾಶ ಸಮುದ್ರ ಪಾತಾಳಗಳಿಂದ ಯುಕ್ತವಾದ, ಪರ್ವತ ಮಹಾರಣ್ಯ ಯುಕ್ತವಾದ ಭೂಮಿಯನ್ನು ಅಪರಿಮಿತ ಪರಾಕ್ರಮ ಸಂಪತ್ತುಳ್ಳ ಯುಧಿಷ್ಠಿರನು ಇಂದು ಪಡೆದುಕೊಳ್ಳಲಿ.

ಏತಾನ್ ಪುರಾ ವಿಷ್ಣುರಿವ ಹತ್ವಾ ದೈತೇಯದಾನವಾನ್ ।
ಪ್ರಯಚ್ಛ ಮೇದಿನೀಂ ರಾಜ್ಞೇ ಶಕ್ರಾಯೈವ ಯಥಾ ಹರಿಃ ॥೫೪॥

ಹಿಂದೆ ದೈತ್ಯ–ದಾನವರನ್ನು ವಿಷ್ಣುವಿನಂತೆ, ಇವರನ್ನು ನೀನು ಸಂಹರಿಸಿ, ಇಂದ್ರನಿಗೇ ಉಪೇಂದ್ರನಂತೆ, ಯುಧಿಷ್ಠಿರನಿಗೇ ನೀನು ಭೂಮಿಯನ್ನು ನೀಡು.

ಅದ್ಯ ಮೋದಂತು ಪಾಂಚಾಲಾ ನಿಹತೇಷ್ವರಿಷು ತ್ವಯಾ ।
ವಿಷ್ಣುನಾ ನಿಹತೇಷ್ವೇವ ದಾನವೇಷ್ವಿವ ದೇವತಾಃ ॥೫೫॥

ಹಿಂದೆ ವಿಷ್ಣುವಿನಿಂದ ದಾನವರು ಹತರಾದಾಗ ದೇವತೆಗಳಂತೆ, ಇಂದು ನಿನ್ನಿಂದ ಶತ್ರುಗಳು ಹತರಾದಾಗ ಪಾಂಚಾಲರು ಸಂತೋಷಪಡಲಿ.

ಯದಿ ವಾ ದ್ವಿಪದಾಂ ಶ್ರೇಷ್ಠ ದ್ರೋಣಂ ಮಾನಯತೋ ಗುರುಮ್ ।
ಅಶ್ವತ್ಥಾಮ್ನಿ ಕೃಪಾ ತೇಽಸ್ತಿ ಕೃಪೇ ಚಾಚಾರ್ಯಗೌರವಾತ್ ॥೫೬॥

ಅತ್ಯಂತಸಂಮತಾನ್ ಬಂಧೂನ್ ಮಾನಯನ್ ಮಾತೃಗೌರವಾತ್ ।
ಕೃತವರ್ಮಾಣಮಾಸಾದ್ಯ ನ ನೇಷ್ಯಸಿ ಯಮಕ್ಷಯಮ್ ॥೫೭॥

ಭ್ರಾತರಂ ಮಾತುರಾಸಾದ್ಯ ಶಲ್ಯಂ ಮದ್ರಜನಾಧಿಪಮ್ ।
ಯದಿ ತ್ವಮರವಿಂದಾಕ್ಷ ದಯಾವಾನ್ನ ಜಿಘಾಂಸಸಿ ॥೫೮॥

ಇಮಂ ಪಾಪಮತಿಂ ಕ್ಷುದ್ರಮತ್ಯಂತಂ ಪಾಂಡವಾನ್ ಪ್ರತಿ ।
ಕರ್ಣಮದ್ಯ ನರಶ್ರೇಷ್ಠ ಜಹ್ಯಾಶು ನಿಶಿತೈಃ ಶರೈಃ ॥೫೯॥

ಪುರುಷಶ್ರೇಷ್ಠನಾದ ಅರ್ಜುನನೆ, ದ್ರೋಣನನ್ನು ಗುರುವೆಂದು ಪೂಜಿಸುವ ನಿನಗೆ ಅಶ್ವತ್ಥಾಮನಲ್ಲಿ ಕೃಪೆ ಇರುವುದಾದರೆ, ಕೃಪನಲ್ಲಿಯೂ ಆಚಾರ್ಯನೆಂದು ಗೌರವದಿಂದ ಪೂಜಿಸುವ ನಿನಗೆ ಕೃಪೆ ಇರುವುದಾದರೆ, ಅತ್ಯಂತ ಪ್ರೀತಿಯ ಬಂಧುಗಳಾದ ಯಾದವರನ್ನು ಮಾತೆ ಕುಂತಿಯ ಮೇಲಿನ ಗೌರವದಿಂದ ಪೂಜಿಸುವ ನೀನು ಕೃತವರ್ಮನನ್ನು ಇದಿರಿಸಿ ಅವನನ್ನೂ ಯಮಸದನಕ್ಕೆ ಕಳಿಸಲಾರೆಯಾದರೆ, ತಾಯಿ ಮಾದ್ರಿಯ ಸೋದರನಾದ ಶಲ್ಯರಾಜನನ್ನು ಇದಿರಿಸಿ ದಯೆಯುಳ್ಳ ನೀನು ಅವನನ್ನು ಕೊಲ್ಲಲು ಬಯಸದಿರುವೆಯಾದರೆ, ಅದು ಸರಿಯೆ. ಆದರೆ ಅರ್ಜುನ, ಪಾಂಡವರ ವಿಷಯದಲ್ಲಿ ಅತ್ಯಂತ ಪಾಪಬುದ್ಧಿಯವನಾದ ಕರ್ಣನನ್ನು ಮಾತ್ರ ಹರಿತವಾದ ಬಾಣಗಳಿಂದ ಬೇಗನೆ ಕೊಲ್ಲು.

ಏತತ್ತೇ ಸುಕೃತಂ ಕರ್ಮ ನಾತ್ರ ಕಿಂಚನ ಯುಜ್ಯತೇ ।
ವಯಮಪ್ಯನುಜಾನೀಮೋ ನಾತ್ರ ದೋಷೋಽಸ್ತಿ ಕಶ್ಚನ ॥೬೦॥

ಇದು ನಿನಗೆ ಪುಣ್ಯಕಾರ್ಯ. ಕರ್ಣನ ವಧೆ ಮಾಡದಿರಲು, ಮೇಲೆ ಹೇಳಿದಂಥ ಯಾವ ಕಾರಣವೂ ಯುಕ್ತವಾಗುವುದಿಲ್ಲ. ಕರ್ಣವಧೆಗೆ ನಾನೂ ಅನುಜ್ಞೆ ನೀಡುತ್ತಿದ್ದೇನೆ. ಇದರಲ್ಲಿ ಯಾವ ದೋಷವೂ ಇರುವುದಿಲ್ಲ.

ದಹತೇ ಯತ್ಸಪುತ್ರಾಯಾ ನಿಶಿ ಮಾತುಸ್ತವಾನಘ ।
ದ್ಯೂತಂ ಯಚ್ಚೈವ ಯುಷ್ಮಾಕಂ ಪ್ರಾವರ್ತತ ಸುಯೋಧನಾತ್ ।
ತತ್ರ ಸರ್ವತ್ರ ದುಷ್ಟಾತ್ಮಾ ಕರ್ಣೋ ಮೂಲಮಿಹಾರ್ಜುನ ॥೬೧॥

ತೇಷಾಂ ಹತಾವಶಿಷ್ಟಾಸ್ತು ಪಂಚ ಸಂತಿ ಮಹಾರಥಾಃ ।
ಅಶ್ವತ್ಥಾಮಾ ಕೃತವರ್ಮಾ ಕರ್ಣೋ ಮದ್ರಾಧಿಪಃ ಕೃಪಃ ॥೫೧॥

ಅವರಲ್ಲಿ ಉಳಿದುಳಿದ ಮಹಾರಥರು ಐವರಿದ್ದಾರೆ. ಅಶ್ವತ್ಥಾಮ, ಕೃತವರ್ಮ ಕರ್ಣ ಶಲ್ಯ ಮತ್ತು ಕೃಪ ಎಂದು.

ತಾಂಸ್ತ್ವಮದ್ಯ ನರವ್ಯಾಘ್ರ ಹತ್ವಾ ಪಂಚ ಮಹಾರಥಾನ್ ।
ಹತಾಮಿತ್ರಾಂ ಪ್ರಯಚ್ಛೈನಾಂ ರಾಜ್ಞೇ ಸದ್ವೀಪಪತ್ತನಾಮ್ ॥೫೨॥

ಅರ್ಜುನ, ಆ ಐವರು ಮಹಾರಥರನ್ನು ನೀನು ಕೊಂದರೆ, ಶತ್ರುಗಳೇ ಇಲ್ಲದ ದ್ವೀಪಪಟ್ಟಣಯುಕ್ತವಾದ ಭೂಮಿಯನ್ನು ಯುಧಿಷ್ಠಿರನಿಗೆ ಒಪ್ಪಿಸಬಲ್ಲೆ.

ಸಾಕಾಶಜಲಪಾತಾಲಾಂ ಸಪರ್ವತಮಹಾವನಾಮ್ ।
ಪ್ರಾಪ್ನೋತ್ವಮಿತವೀರ್ಯಶ್ರೀರದ್ಯ ಪಾರ್ಥೋ ವಸುಂಧರಾಮ್ ॥೫೩॥

ಆಕಾಶ ಸಮುದ್ರ ಪಾತಾಳಗಳಿಂದ ಯುಕ್ತವಾದ, ಪರ್ವತ ಮಹಾರಣ್ಯ ಯುಕ್ತವಾದ ಭೂಮಿಯನ್ನು ಅಪರಿಮಿತ ಪರಾಕ್ರಮ ಸಂಪತ್ತುಳ್ಳ ಯುಧಿಷ್ಠಿರನು ಇಂದು ಪಡೆದುಕೊಳ್ಳಲಿ.

ಏತಾನ್ ಪುರಾ ವಿಷ್ಣುರಿವ ಹತ್ವಾ ದೈತೇಯದಾನವಾನ್ ।
ಪ್ರಯಚ್ಛ ಮೇದಿನೀಂ ರಾಜ್ಞೇ ಶಕ್ರಾಯೈವ ಯಥಾ ಹರಿಃ ॥೫೪॥

ಹಿಂದೆ ದೈತ್ಯ–ದಾನವರನ್ನು ವಿಷ್ಣುವಿನಂತೆ, ಇವರನ್ನು ನೀನು ಸಂಹರಿಸಿ, ಇಂದ್ರನಿಗೇ ಉಪೇಂದ್ರನಂತೆ, ಯುಧಿಷ್ಠಿರನಿಗೇ ನೀನು ಭೂಮಿಯನ್ನು ನೀಡು.

ಅದ್ಯ ಮೋದಂತು ಪಾಂಚಾಲಾ ನಿಹತೇಷ್ವರಿಷು ತ್ವಯಾ ।
ವಿಷ್ಣುನಾ ನಿಹತೇಷ್ವೇವ ದಾನವೇಷ್ವಿವ ದೇವತಾಃ ॥೫೫॥

ಹಿಂದೆ ವಿಷ್ಣುವಿನಿಂದ ದಾನವರು ಹತರಾದಾಗ ದೇವತೆಗಳಂತೆ, ಇಂದು ನಿನ್ನಿಂದ ಶತ್ರುಗಳು ಹತರಾದಾಗ ಪಾಂಚಾಲರು ಸಂತೋಷಪಡಲಿ.

ಯದಿ ವಾ ದ್ವಿಪದಾಂ ಶ್ರೇಷ್ಠ ದ್ರೋಣಂ ಮಾನಯತೋ ಗುರುಮ್ ।
ಅಶ್ವತ್ಥಾಮ್ನಿ ಕೃಪಾ ತೇಽಸ್ತಿ ಕೃಪೇ ಚಾಚಾರ್ಯಗೌರವಾತ್ ॥೫೬॥

ಅತ್ಯಂತಸಂಮತಾನ್ ಬಂಧೂನ್ ಮಾನಯನ್ ಮಾತೃಗೌರವಾತ್ ।
ಕೃತವರ್ಮಾಣಮಾಸಾದ್ಯ ನ ನೇಷ್ಯಸಿ ಯಮಕ್ಷಯಮ್ ॥೫೭॥

ಭ್ರಾತರಂ ಮಾತುರಾಸಾದ್ಯ ಶಲ್ಯಂ ಮದ್ರಜನಾಧಿಪಮ್ ।
ಯದಿ ತ್ವಮರವಿಂದಾಕ್ಷ ದಯಾವಾನ್ನ ಜಿಘಾಂಸಸಿ ॥೫೮॥

ಇಮಂ ಪಾಪಮತಿಂ ಕ್ಷುದ್ರಮತ್ಯಂತಂ ಪಾಂಡವಾನ್ ಪ್ರತಿ ।
ಕರ್ಣಮದ್ಯ ನರಶ್ರೇಷ್ಠ ಜಹ್ಯಾಶು ನಿಶಿತೈಃ ಶರೈಃ ॥೫೯॥

ಪುರುಷಶ್ರೇಷ್ಠನಾದ ಅರ್ಜುನನೆ, ದ್ರೋಣನನ್ನು ಗುರುವೆಂದು ಪೂಜಿಸುವ ನಿನಗೆ ಅಶ್ವತ್ಥಾಮನಲ್ಲಿ ಕೃಪೆ ಇರುವುದಾದರೆ, ಕೃಪನಲ್ಲಿಯೂ ಆಚಾರ್ಯನೆಂದು ಗೌರವದಿಂದ ಪೂಜಿಸುವ ನಿನಗೆ ಕೃಪೆ ಇರುವುದಾದರೆ, ಅತ್ಯಂತ ಪ್ರೀತಿಯ ಬಂಧುಗಳಾದ ಯಾದವರನ್ನು ಮಾತೆ ಕುಂತಿಯ ಮೇಲಿನ ಗೌರವದಿಂದ ಪೂಜಿಸುವ ನೀನು ಕೃತವರ್ಮನನ್ನು ಇದಿರಿಸಿ ಅವನನ್ನೂ ಯಮಸದನಕ್ಕೆ ಕಳಿಸಲಾರೆಯಾದರೆ, ತಾಯಿ ಮಾದ್ರಿಯ ಸೋದರನಾದ ಶಲ್ಯರಾಜನನ್ನು ಇದಿರಿಸಿ ದಯೆಯುಳ್ಳ ನೀನು ಅವನನ್ನು ಕೊಲ್ಲಲು ಬಯಸದಿರುವೆಯಾದರೆ, ಅದು ಸರಿಯೆ. ಆದರೆ ಅರ್ಜುನ, ಪಾಂಡವರ ವಿಷಯದಲ್ಲಿ ಅತ್ಯಂತ ಪಾಪಬುದ್ಧಿಯವನಾದ ಕರ್ಣನನ್ನು ಮಾತ್ರ ಹರಿತವಾದ ಬಾಣಗಳಿಂದ ಬೇಗನೆ ಕೊಲ್ಲು.

ಏತತ್ತೇ ಸುಕೃತಂ ಕರ್ಮ ನಾತ್ರ ಕಿಂಚನ ಯುಜ್ಯತೇ ।
ವಯಮಪ್ಯನುಜಾನೀಮೋ ನಾತ್ರ ದೋಷೋಽಸ್ತಿ ಕಶ್ಚನ ॥೬೦॥

ಇದು ನಿನಗೆ ಪುಣ್ಯಕಾರ್ಯ. ಕರ್ಣನ ವಧೆ ಮಾಡದಿರಲು, ಮೇಲೆ ಹೇಳಿದಂಥ ಯಾವ ಕಾರಣವೂ ಯುಕ್ತವಾಗುವುದಿಲ್ಲ. ಕರ್ಣವಧೆಗೆ ನಾನೂ ಅನುಜ್ಞೆ ನೀಡುತ್ತಿದ್ದೇನೆ. ಇದರಲ್ಲಿ ಯಾವ ದೋಷವೂ ಇರುವುದಿಲ್ಲ.

ದಹತೇ ಯತ್ಸಪುತ್ರಾಯಾ ನಿಶಿ ಮಾತುಸ್ತವಾನಘ ।
ದ್ಯೂತಂ ಯಚ್ಚೈವ ಯುಷ್ಮಾಕಂ ಪ್ರಾವರ್ತತ ಸುಯೋಧನಾತ್ ।
ತತ್ರ ಸರ್ವತ್ರ ದುಷ್ಟಾತ್ಮಾ ಕರ್ಣೋ ಮೂಲಮಿಹಾರ್ಜುನ ॥೬೧॥

ರಾತ್ರಿ ನಿದ್ದೆಯಲ್ಲಿಯೂ ಕೂಡ ಮಕ್ಕಳ ಜೊತೆಯಲ್ಲಿ ನಿಮ್ಮ ತಾಯಿಯ ಹೃದಯ ದುಃಖದಿಂದ ಬೇಯುತ್ತಿದೆ. ಮತ್ತು ನಿಮಗೆ ಆ ಜೂಜು ದುರ್ಯೋಧನನಿಂದಾಯಿತು. ಆ ಎಲ್ಲಕಡೆ ದುಷ್ಟಬುದ್ಧಿಯ ಕರ್ಣನು ಮೂಲವಾಗಿದ್ದಾನೆ.

ಕರ್ಣಾದ್ಧಿ ಮನ್ಯತೇ ತ್ರಾಣಂ ನಿತ್ಯಮೇವ ಸುಯೋಧನಃ ।
ತತೋ ಮಾಮಪಿ ಸಂರಬ್ಧೋ ನಿಗ್ರಹೀತುಂ ಪ್ರಚಕ್ರಮೇ ॥೬೨॥

ಸುಯೋಧನನು ಸದಾ ತನ್ನ ರಕ್ಷಣೆ ಕರ್ಣನಿಂದಲೇ ಆಗುತ್ತದೆ ಎಂದು ತಿಳಿದಿದ್ದಾನೆ. ಅವನ ರಕ್ಷಣೆ ಇದೆ ಎಂದೇ ಧೈರ್ಯದಿಂದ ಸುಯೋಧನ ಕುಪಿತನಾಗಿ ನನ್ನನ್ನು ಕೂಡ ಬಂಧಿಸಲು ತೊಡಗಿದ.

ಸ್ಥಿರಾ ಬುದ್ಧಿರ್ನರೇಂದ್ರಸ್ಯ ಧಾರ್ತರಾಷ್ಟ್ರಸ್ಯ ಮಾನದ ।
ಕರ್ಣಃ ಪಾರ್ಥಾನ್ ರಣೇ ಸರ್ವಾನ್ ವಿಜೇಷ್ಯತಿ ನ ಸಂಶಯಃ ॥೬೩॥

'ಕರ್ಣನು ಪಾಂಡವರೆಲ್ಲರನ್ನೂ ರಣದಲ್ಲಿ ಗೆಲ್ಲುತ್ತಾನೆ, ಸಂಶಯವಿಲ್ಲ' ಎಂದು ರಾಜಾ ದುರ್ಯೋಧನನಿಗೆ ದೃಢವಾದ ನಂಬಿಕೆ ಇದೆ.

ಕರ್ಣಮಾಶ್ರಿತ್ಯ ಕೌಂತೇಯ ಧಾರ್ತರಾಷ್ಟ್ರೇಣ ವಿಗ್ರಹಃ ।
ರೋಚಿತೋ ಭವತಾ ಸಾರ್ಧಂ ಜಾನತಾಪಿ ಬಲಂ ತವ ॥೬೪॥

ದುರ್ಯೋಧನನಿಗೆ ನಿನ್ನ ಬಲ ಗೊತ್ತಿದ್ದರೂ ಕರ್ಣನ ಮೇಲೆ ಭರವಸೆ ಇಟ್ಟು ನಿನ್ನೊಡನೆ ಯುದ್ಧ ಮಾಡಲು ಅವನು ಬಯಸಿದ.

ಕರ್ಣೋ ಹಿ ಭಾಷತೇ ನಿತ್ಯಮಹಂ ಪಾರ್ಥಾನ್ ಸಮಾಗತಾನ್ ।
ವಾಸುದೇವಂ ಸರಾಜಾನಂ ವಿಜೇಷ್ಯಾಮಿ ಮಹಾರಣೇ ॥೬೫॥

ಕರ್ಣ ಸದಾ ಹೇಳುತ್ತಾನೆ— 'ಮಹಾರಣದಲ್ಲಿ ಎದುರಿಗೆ ಬಂದರೆ, ಪಾಂಡವರನ್ನೂ ಕೃಷ್ಣನನ್ನೂ ಯುಧಿಷ್ಠಿರನನ್ನೂ ನಾನು ಗೆಲ್ಲುವೆ' ಎಂದು.

ಪ್ರೋತ್ಸಾಹಯನ್ ದುರಾತ್ಮಾನಂ ಧಾರ್ತರಾಷ್ಟ್ರಂ ಸುದುರ್ಮತಿಃ ।
ಸಮಿತೌ ಗರ್ಜತೇ ಕರ್ಣಸ್ತಮದ್ಯ ಜಹಿ ಭಾರತ ॥೬೬॥

ದುರಾತ್ಮನಾದ ದುರ್ಯೋಧನನನ್ನು ಹುರಿದುಂಬಿಸುವುದಕ್ಕಾಗಿ ಕರ್ಣನು ರಾಜರ ಸಭೆಯಲ್ಲಿಯೂ ರಣದಲ್ಲಿಯೂ ಗರ್ಜನೆ ಮಾಡುತ್ತಾನೆ. ಅವನನ್ನು ಈಗ ಕೊಲ್ಲು ಅರ್ಜುನ.

ಯಚ್ಚ ಯುಷ್ಮಾಸು ಪಾಪಂ ವೈ ಧಾರ್ತರಾಷ್ಟ್ರಃ ಪ್ರಯುಕ್ತವಾನ್ ।
ತತ್ರ ಸರ್ವತ್ರ ದುಷ್ಪಾತ್ಮಾ ಕರ್ಣಃ ಪಾಪಮತಿರ್ಮುಖಮ್ ॥೬೭॥

ದುರ್ಯೋಧನನು ನಿಮ್ಮಲ್ಲಿ ಏನು ದುರ್ವ್ಯವಹಾರ ಮಾಡುತ್ತಲೇ ಬಂದಿದ್ದಾನೊ ಅವೆಲ್ಲವುಗಳಲ್ಲಿ ಪಾಪಬುದ್ಧಿ ದುಷ್ಟಬುದ್ಧಿಯವನಾದ ಕರ್ಣನದೇ ಪ್ರಮುಖಪಾತ್ರ.

ಯಚ್ಚ ತದಾರ್ತರಾಷ್ಟ್ರಾಣಾಂ ಕ್ರೂರೈಃ ಷಡ್ಭಿರ್ಮಹಾರಥೈಃ ।
ಅಪಶ್ಯಂ ನಿಹತಂ ವೀರಂ ಸೌಭದ್ರಮೃಷಭೇಕ್ಷಣಮ್ ॥೬೮॥

ದ್ರೋಣದ್ರೌಣಿಕೃಪಾನ್ ವೀರಾನ್ ಕಂಪಯಂತಂ ಮಹಾರಥಾನ್ ।
ನಿರ್ಮನುಷ್ಯಾಂಶ್ಚ ಮಾತಂಗಾನ್ ವಿರಥಾಂಶ್ಚ ಮಹಾರಥಾನ್ ॥೬೯॥

ವ್ಯಶ್ವಾರೋಹಾಂಶ್ಚ ತುರಗಾನ್ ಪತ್ತೀನ್ ವ್ಯಾಯುಧಜೀವಿತಾನ್ ।
ಕುರ್ವಂತಮೃಷಭಸ್ಕಂಧಂ ಕುರುವೃಷ್ಣಿಯಶಸ್ಕರಮ್ ॥೭೦॥

ವಿಧಮಂತಮನೀಕಾನಿ ವ್ಯಥಯಂತಂ ಮಹಾರಥಾನ್ ।
ಮನುಷ್ಯವಾಜಿಮಾತಂಗಾನ್ ಪ್ರಹಿಣ್ವಂತಂ ಯಮಕ್ಷಯಮ್ ॥೭೧॥

ಶರೈಃ ಸೌಭದ್ರಮಾಯಸ್ತಂ ದಹಂತಮಿವ ವಾಹಿನೀಮ್ ।
ತನ್ಮೇ ದಹತಿ ಗಾತ್ರಾಣಿ ಸಖೇ ಸತ್ಯೇನ ತೇ ಶಪೇ ॥೭೨॥

ಸುಭದ್ರಾತನಯ ಅಭಿಮನ್ಯು ವೀರ, ಗೂಳಿಯಂಥ ವಿಶಾಲಕಣ್ಣುಳ್ಳವ. ದ್ರೋಣ, ಅಶ್ವತ್ಥಾಮ, ಕೃಪರಂಥ ವೀರ ಮಹಾರಥರನ್ನು ನಡುಗಿಸುವವನು. ಗಜಗಳಲ್ಲಿ ಗಜಾರೋಹಿಗಳಿಲ್ಲದಂತೆ ಮಹಾರಥಿಕರಿಗೆ ರಥವಿಲ್ಲದಂತೆ ಅಶ್ವಗಳಲ್ಲಿ ಅಶ್ವಾರೋಹಿಗಳಿಲ್ಲದಂತೆ, ಪದಾತಿಗಳನ್ನು ಆಯುಧಗಳೊಂದಿಗೆ ಪ್ರಾಣಗಳನ್ನೂ ಕಳೆದುಕೊಳ್ಳುವಂತೆ ಮಾಡುವವನು, ಗೂಳಿಯಂತೆ ಉನ್ನತ ಭುಜವುಳ್ಳವನು, ಕುರುಕುಲ ಯಾದವಕುಲಗಳಿಗೆ ಕೀರ್ತಿ ತರುವವನು, ಶತ್ರುಸೈನ್ಯಗಳನ್ನು ನಾಶ

ಮಾಡುವವನು, ಮಹಾರಥರಿಗೆ ವ್ಯಥೆ ಉಂಟುಮಾಡುವವನು. ಪದಾತಿ ಅಶ್ವಗಜ ಸೈನಿಕರನ್ನು ಯಮಸದನಕ್ಕೆ ಅಟ್ಟುವವನು, ಬಾಣಗಳಿಂದ ಶತ್ರುಸೈನ್ಯವನ್ನು ಸುಡುವ ಪ್ರಯತ್ನ ಮಾಡುವವನು. ಇಂಥ ಅಭಿಮನ್ಯುವನ್ನು ಕೌರವರ ಆರುಮಂದಿ ಕ್ರೂರ ಮಹಾರಥರು– ದ್ರೋಣ, ಅಶ್ವತ್ಥಾಮ, ಶಲ್ಯ, ಕರ್ಣ, ಕೃಪ ಮತ್ತು ಕೃತವರ್ಮರು ಒಟ್ಟು ಸೇರಿ ಸಂಹರಿಸಿದರು. ಇದನ್ನು ತಿಳಿದ ಮೇಲೆ ಅದು ನನ್ನ ಮೈಯೆಲ್ಲವನ್ನು ಈಗಲೂ ಸುಡುತ್ತಿದೆ. ಮಿತ್ರ, ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ಯತ್ತತ್ರಾಪಿ ಚ ದುಷ್ಪಾತ್ಮಾ ಕರ್ಣೋ೯ಽಭ್ಯದ್ರುಹ್ಯತ ಪ್ರಭೋ ।
ಅಶಕ್ನುವಂಶ್ಚಾಭಿಮನ್ಯೋಃ ಕರ್ಣಃ ಸ್ಥಾತುಂ ರಣೇಽಗ್ರತಃ ॥೭೩॥

ಆ ಯುದ್ಧದಲ್ಲಿಯೂ ಕೂಡ ದುಷ್ಟಬುದ್ಧಿಯಾದ ಕರ್ಣನು ದ್ರೋಹ ಮಾಡಿದ್ದಾನೆ. ಏಕೆಂದರೆ ರಣದಲ್ಲಿ ಅಭಿಮನ್ಯುವಿನ ಮುಂದೆ ನಿಲ್ಲಲು ಆತ ಅಶಕ್ತನಾಗಿದ್ದ.

ಸೌಭದ್ರಶರನಿರ್ಭಿನ್ನೋ ವಿಸಂಜ್ಞಃ ಶೋಣಿತೋಕ್ಷಿತಃ ।
ನಿಃಶ್ವಸನ್ ಕ್ರೋಧಸಂದೀಪ್ತೋ ವಿಮುಖಃ ಸಾಯಕಾರ್ದಿತಃ ॥೭೪॥

ಕರ್ಣನು ಅಭಿಮನ್ಯುವಿನ ಬಾಣದಿಂದ ಗಾಯಗೊಂಡು ಮೂರ್ಛೆಹೊಂದಿ ಮೈಯೆಲ್ಲ ನೆತ್ತರಿನಿಂದ ತೊಯ್ದು ನಿಟ್ಟುಸಿರಿಡುತ್ತ ಕೋಪದಿಂದ ಉರಿಯುತ್ತ ಬಾಣಗಳಿಂದ ಪೀಡಿತನಾಗಿ ರಣದಿಂದ ಹಿಮ್ಮೆಟ್ಟಿದ.

ಅಪಯಾನಕೃತೋತ್ಸಾಹೋ ನಿರಾಶಶ್ಚಾಪಿ ಜೀವಿತೇ ।
ತಸ್ಥೌ ಸುವಿಹ್ವಲಃ ಸಂಖೇ ಪ್ರಹಾರಜನಿತಶ್ರಮಃ ॥೭೫॥

ಕರ್ಣನು ಯುದ್ಧದಿಂದ ಪಲಾಯನ ಮಾಡುವಲ್ಲಿ ಉತ್ಸಾಹಗೊಂಡ, ಬದುಕಿನಲ್ಲೇ ಆಸೆಯನ್ನು ತೊರೆದ. ರಣದಲ್ಲಿ ಶಸ್ತ್ರಪ್ರಹಾರದಿಂದ ಉಂಟಾದ ಶ್ರಮದಿಂದ ಬಹಳ ಕಳವಳಗೊಂಡು ನಿಂತ.

ಅಥ ದ್ರೋಣಸ್ಯ ಸಮರೇ ತತ್ಕಾಲಸದೃಶಂ ತದಾ ।
ಶ್ರುತ್ವಾ ಕರ್ಣೋ ವಚಃ ಕ್ರೂರಂ ತತಶ್ಚಿಚ್ಛೇದ ಕಾರ್ಮುಕಮ್ ॥೭೬॥

ಬಳಿಕ ರಣದಲ್ಲಿ ದ್ರೋಣನು ಆ ಕಾಲಕ್ಕೆ ಉಚಿತವಾಗಿ ನುಡಿದ ಕ್ರೂರವಾದ ಮಾತನ್ನು ಕೇಳಿ ಅದರಂತೆ ಕರ್ಣನು ಅಭಿಮನ್ಯುವಿನ ಕೈಯಲ್ಲಿದ್ದ ಬಿಲ್ಲನ್ನು ಕಡಿದ.

ತತಶ್ಛಿನ್ನಾಯುಧಂ ತೇನ ರಣೇ ಪಂಚ ಮಹಾರಥಾಃ ।
ಸ ಚೈವ ನಿಕೃತಿಪ್ರಜ್ಞಃ ಪ್ರಾವಧೀಚ್ಛರವೃಷ್ಟಿಭಿಃ ॥೭೭॥

ಹೀಗೆ ನಿರಾಯುಧನಾದ ಅಭಿಮನ್ಯುವಿನ ಮೇಲೆ ಐದು ಮಂದಿ ಮಹಾರಥರೂ ಕಪಟ ಬುದ್ಧಿಯ ಕರ್ಣನೂ ಸೇರಿ ಬಾಣಗಳ ಮಳೆಗರೆದರು.

ತಸ್ಮಿನ್ ವಿನಿಹತೇ ವೀರೇ ಸರ್ವೇಷಾಂ ದುಃಖಮಾವಿಶತ್ ।
ಪ್ರಾಹಸತ್ ಸ ತು ದುಷ್ಟಾತ್ಮಾ ಕರ್ಣಃ ಸ ಚ ಸುಯೋಧನಃ ॥೭೮॥

ವೀರ ಅಭಿಮನ್ಯು ಹತನಾಗಿ ಬಿದ್ದಾಗ ಎಲ್ಲರಿಗೂ ದುಃಖ ಉಂಟಾಯಿತು. ಆದರೆ ದುಷ್ಟಬುದ್ಧಿಯ ಕರ್ಣನೂ ಸುಯೋಧನನೂ ಜೋರಾಗಿ ನಕ್ಕರು.

ಯಚ್ಚ ಕರ್ಣೋಽಬ್ರವೀತ್ ಕೃಷ್ಣಾಂ ಸಭಾಯಾಂ ಪರುಷಂ ವಚಃ ।
ಪ್ರಮುಖೇ ಪಾಂಡವೇಯಾನಾಂ ಕುರೂಣಾಂ ಚ ನೃಶಂಸವತ್ ॥೭೯॥

ಕರ್ಣನು ದ್ಯೂತಸಭೆಯಲ್ಲಿ ದ್ರೌಪದಿಗೆ ಪಾಂಡವರ ಕೌರವರ ಸಮ್ಮುಖದಲ್ಲಿ ನಿರ್ದಯಿಯಂತೆ ಕಠಿನವಾದ ಮಾತನ್ನಾಡಿದ್ದ.

ವಿನಷ್ಟಾಃ ಪಾಂಡವಾಃ ಕೃಷ್ಣೇ ಶಾಶ್ವತಂ ನರಕಂ ಗತಾಃ ।
ಪತಿಮನ್ಯಂ ಪೃಥುಶ್ರೋಣಿ ವೃಣೀಷ್ವ ಮಿತಭಾಷಿಣಿ ॥೮೦॥

ದ್ರೌಪದಿ, ಪಾಂಡವರು ನಾಶವಾದರು. ಶಾಶ್ವತವಾದ ನರಕಕ್ಕೇ ಹೋದರು. ಪೃಥುಶ್ರೋಣಿ ಮಿತಭಾಷಿಣಿ, ನೀನೀಗ ಬೇರೊಬ್ಬ ಪತಿಯನ್ನು ವರಿಸು.

ಏಷಾ ತ್ವಂ ಧಾರ್ತರಾಷ್ಟ್ರಸ್ಯ ದಾಸೀ ಭೂತ್ವಾ ನಿವೇಶನಮ್ ।
ಪ್ರವಿಶಾರಾಲಪಕ್ಷ್ಮಾಕ್ಷಿ ನ ಸಂತಿ ಪತಯಸ್ತವ ॥೮೧॥

ನೀನೀಗ ದುರ್ಯೋಧನನಿಗೆ ದಾಸಿಯಾಗಿ ಅವನ ಅರಮನೆಯನ್ನು ಪ್ರವೇಶಿಸು. ಬಾಗಿದ ರೆಪ್ಪೆಯುಳ್ಳ ಕಣ್ಣಿನವಳೆ, ನಿನಗೆ ಇನ್ನು ಪತಿಗಳಿಲ್ಲ.'

ಇತ್ಯುಕ್ತವಾನಧರ್ಮಜ್ಞಸ್ತದಾ ಪರಮದುರ್ಮತಿಃ ।
ಪಾಪಃ ಪಾಪಂ ವಚಃ ಕರ್ಣಃ ಶೃಣ್ವತಸ್ತವ ಭಾರತ ॥೮೨॥

ಧರ್ಮವನ್ನು ತಿಳಿಯದ ಪರಮ ದುಷ್ಟಬುದ್ಧಿಯವನಾದ ಪಾಪಿ ಕರ್ಣನು ನೀನು ಕೇಳುತ್ತಿದ್ದಂತೆಯೇ ಪಾಪದ ಮಾತನ್ನು ಹೇಳಿದ್ದಾನೆ.

ತಸ್ಯ ಪಾಪಸ್ಯ ತದ್ವಾಕ್ಯಂ ಸುವರ್ಣವಿಕೃತಾಃ ಶರಾಃ ।
ಶಮಯಂತು ಶಿಲಾಧೌತಾಸ್ತ್ವಯಾಸ್ತಾ ಜೀವಿತಚ್ಛಿದಃ ॥೮೩॥

ಪಾಪಿಯಾದ ಆ ಕರ್ಣನ ಆ ಮಾತನ್ನು, ನೀನು ಎಸೆಯುವ, ಬಂಗಾರದಿಂದ ಮಾಡಿದ, ಸಾಣೆಹಿಡಿದ, ಶತ್ರುವಿನ ಪ್ರಾಣ ತೆಗೆಯುವಂಥ ಬಾಣಗಳು ಶಮನಮಾಡಲಿ.

ಯಾನಿ ಚಾನ್ಯಾನಿ ದುಷ್ಟಾತ್ಮಾ ಪಾಪಾನಿ ಕೃತವಾಂಸ್ತ್ವಯಿ ।
ತಾನ್ಯದ್ಯ ಜೀವಿತಂ ಚಾಸ್ಯ ಶಮಯಂತು ಶರಾಸ್ತವ ॥೮೪॥

ದುಷ್ಟಬುದ್ಧಿಯ ಕರ್ಣನು ಇನ್ನೂ ಏನೇನು ಬೇರೆ ಅಪರಾಧಗಳನ್ನು ನಿನ್ನಲ್ಲಿ ಎಸಗಿರುವನೋ ಅವುಗಳನ್ನೂ ಜೊತೆಗೆ ಅವನ ಪ್ರಾಣವನ್ನೂ ಈಗ ನಿನ್ನ ಬಾಣಗಳು ಶಮನಗೊಳಿಸಲಿ.

ಗಾಂಡೀವಪ್ರಹಿತಾನ್ ಘೋರಾನದ್ಯ ಗಾತ್ರೈಃ ಸ್ಪೃಶನ್ ಶರಾನ್ ।
ಕರ್ಣಃ ಸ್ಮರತು ದುಷ್ಟಾತ್ಮಾ ವಚನಂ ದ್ರೋಣಭೀಷ್ಮಯೋಃ ॥೮೫॥

ಗಾಂಡೀವದಿಂದ ಹೊರಡುವ ಘೋರವಾದ ಬಾಣಗಳನ್ನು ಕರ್ಣನು ಸರ್ವಾಂಗಗಳಿಂದ ಸ್ಪರ್ಶಿಸುವಾಗ ದುಷ್ಟಬುದ್ಧಿಯ ಆತನು ದ್ರೋಣ, ಭೀಷ್ಮರ ಮಾತುಗಳನ್ನೂ ಸ್ಮರಣೆಗೆ ತಂದುಕೊಳ್ಳಲಿ.

ಸುವರ್ಣಪುಂಖಾ ನಾರಾಚಾಃ ಶತ್ರುಘ್ನಾ ವೈದ್ಯುತಪ್ರಭಾಃ ।
ತ್ವಯಾಸ್ತಾಸ್ತಸ್ಯ ಮರ್ಮಾಣಿ ಭಿತ್ತ್ವಾ ಪಾಸ್ಯಂತಿ ಶೋಣಿತಮ್ ॥೮೬॥

ಬಂಗಾರದ ಪುಕ್ಕಗಳುಳ್ಳ ಮಿಂಚಿನಂತೆ ಹೊಳೆವ ಶತ್ರುನಾಶಕವಾದ ಬಾಣಗಳನ್ನು ನೀನು ಎಸೆದಾಗ ಅವು ಅವನ ಮರ್ಮಗಳನ್ನು ಭೇದಿಸಿ ರಕ್ತವನ್ನು ಕುಡಿಯುತ್ತವೆ.

ಉಗ್ರಾಸ್ತ್ವದ್ಭುಜನಿರ್ಮುಕ್ತಾ ಮರ್ಮ ಭಿತ್ತ್ವಾ ಶಿತಾಃ ಶರಾಃ ।
ಅದ್ಯ ಕರ್ಣಂ ಮಹಾವೇಗಾಃ ಪ್ರೇಷಯಂತು ಯಮಕ್ಷಯಮ್ ॥೮೭॥

ಉಗ್ರವಾದ ಹರಿತವಾದ ಮಹಾವೇಗದ ಬಾಣಗಳು ನಿನ್ನ ಬಾಹುಗಳಿಂದ ಹೊರಟು ಮರ್ಮಗಳನ್ನು ಭೇದಿಸಿ ಕರ್ಣನನ್ನು ಯಮಸದನಕ್ಕೆ ಅಟ್ಟಲಿ.

ಅದ್ಯ ಹಾಹಾಕೃತಾ ದೀನಾ ವಿಷಣ್ಣಾಸ್ತ್ವದ್ಭರಾರ್ದಿತಾಃ ।
ಪ್ರಪತಂತಂ ರಥಾತ್ಕರ್ಣಂ ಪಶ್ಯಂತು ವಸುಧಾಧಿಪಾಃ ॥೪೪॥

ಈಗ ನಿನ್ನ ಬಾಣಗಳಿಂದ ಪೀಡಿತರಾಗುತ್ತಿರುವ ರಾಜರು ವಿಷಣ್ಣರಾಗಿ ದೀನರಾಗಿ ಹಾಹಾಕಾರ ಮಾಡುತ್ತ, ರಥದಿಂದ ಕರ್ಣನು ಬೀಳುವುದನ್ನೂ ನೋಡಲಿ.

ಅದ್ಯ ಸ್ವಶೋಣಿತೇ ಮಗ್ನಂ ಶಯಾನಂ ಪತಿತಂ ಭುವಿ ।
ಅಪವಿದ್ಧಾಯುಧಂ ಕರ್ಣಂ ಪಶ್ಯಂತು ಸುಹೃದೋ ನಿಜಾಃ ॥೪೯॥

ಈಗ ತನ್ನ ರಕ್ತದ ಮಡುವಿನಲ್ಲಿ ತಾನು ಮುಳುಗಿ, ನೆಲದ ಮೇಲೊರಗಿದ, ಆಯುಧವನ್ನು ಚೆಲ್ಲಿರುವ ಕರ್ಣನನ್ನು ಅವನ ಸ್ವಂತ ಸಂಬಂಧಿಗಳು ನೋಡಲಿ.

ಹಸ್ತಿಕಕ್ಷ್ಯೋ ಮಹಾನಸ್ಯ ಭಲ್ಲೇನೋನ್ಮಥಿತಸ್ತ್ವಯಾ ।
ಪ್ರಕಮ್ಪಮಾನಃ ಪತತು ಭೂಮಾವಾಧಿರಥೇರ್ಧ್ವಜಃ ॥೫೦॥

ಹಸ್ತಪ್ರಮಾಣದ ಕಾಕಪ್ರತಿಮಾಯುಕ್ತವಾದ ಕರ್ಣನ ಮಹಾಧ್ವಜವನ್ನು ನೀನು ಭಲ್ಲೆಯಿಂದ ಕಡಿದಾಗ ಅದು ಕಂಪಿಸುತ್ತ ನೆಲದ ಮೇಲೆ ಬೀಳಲಿ.

ತ್ವಯಾ ಶರಶತೈಶ್ಛಿನ್ನಂ ರಥಂ ಹೇಮವಿಭೂಷಿತಮ್ ।
ಹತಯೋಧಂ ಸಮುತ್ಸೃಜ್ಯ ಭೀತಃ ಶಲ್ಯಃ ಪಲಾಯತಾಮ್ ॥೫೧॥

ಬಂಗಾರದಿಂದ ಅಲಂಕೃತವಾದ ಕರ್ಣನ ರಥವನ್ನು ನೀನು ನೂರಾರು ಬಾಣಗಳಿಂದ ಕಡಿದಾಗ, ಯೋಧನು ಇಲ್ಲದ ಆ ರಥವನ್ನು ಬಿಟ್ಟು ಭಯದಿಂದ ಶಲ್ಯನೂ ಪಲಾಯನ ಮಾಡಲಿ.

ತತಃ ಸುಯೋಧನೋ ದೃಷ್ಟ್ವಾ ಹತಮಾಧಿರಥಿಂ ತ್ವಯಾ ।
ನಿರಾಶೋ ಜೀವಿತೇ ತ್ವದ್ಯ ರಾಜ್ಯೇ ಚೈವ ಭವಿಷ್ಯತಿ ॥೫೨॥

ಧರ್ಮವನ್ನು ತಿಳಿಯದ ಪರಮ ದುಷ್ಟಬುದ್ಧಿಯವನಾದ ಪಾಪಿ ಕರ್ಣನು ನೀನು ಕೇಳುತ್ತಿದ್ದಂತೆಯೇ ಪಾಪದ ಮಾತನ್ನು ಹೇಳಿದ್ದಾನೆ.

ತಸ್ಯ ಪಾಪಸ್ಯ ತದ್ವಾಕ್ಯಂ ಸುವರ್ಣವಿಕೃತಾಃ ಶರಾಃ ।
ಶಮಯಂತು ಶಿಲಾಧೌತಾಸ್ತ್ವಯಾಸ್ತಾ ಜೀವಿತಚ್ಛಿದಃ ॥೮೩॥

ಪಾಪಿಯಾದ ಆ ಕರ್ಣನ ಆ ಮಾತನ್ನು, ನೀನು ಎಸೆಯುವ, ಬಂಗಾರದಿಂದ ಮಾಡಿದ, ಸಾಣೆಹಿಡಿದ, ಶತ್ರುವಿನ ಪ್ರಾಣ ತೆಗೆಯುವಂಥ ಬಾಣಗಳು ಶಮನಮಾಡಲಿ.

ಯಾನಿ ಚಾನ್ಯಾನಿ ದುಷ್ಟಾತ್ಮಾ ಪಾಪಾನಿ ಕೃತವಾಂಸ್ತ್ವಯಿ ।
ತಾನ್ಯದ್ಯ ಜೀವಿತಂ ಚಾಸ್ಯ ಶಮಯಂತು ಶರಾಸ್ತವ ॥೮೪॥

ದುಷ್ಟಬುದ್ಧಿಯ ಕರ್ಣನು ಇನ್ನೂ ಏನೇನು ಬೇರೆ ಅಪರಾಧಗಳನ್ನು ನಿನ್ನಲ್ಲಿ ಎಸಗಿರುವನೋ ಅವುಗಳನ್ನೂ ಜೊತೆಗೆ ಅವನ ಪ್ರಾಣವನ್ನೂ ಈಗ ನಿನ್ನ ಬಾಣಗಳು ಶಮನಗೊಳಿಸಲಿ.

ಗಾಂಡೀವಪ್ರಹಿತಾನ್ ಘೋರಾನದ್ಯ ಗಾತ್ರೈಃ ಸ್ಪೃಶನ್ ಶರಾನ್ ।
ಕರ್ಣಃ ಸ್ಮರತು ದುಷ್ಟಾತ್ಮಾ ವಚನಂ ದ್ರೋಣಭೀಷ್ಮಯೋಃ ॥೮೫॥

ಗಾಂಡೀವದಿಂದ ಹೊರಡುವ ಘೋರವಾದ ಬಾಣಗಳನ್ನು ಕರ್ಣನು ಸರ್ವಾಂಗಗಳಿಂದ ಸ್ಪರ್ಶಿಸುವಾಗ ದುಷ್ಟಬುದ್ಧಿಯ ಆತನು ದ್ರೋಣ, ಭೀಷ್ಮರ ಮಾತುಗಳನ್ನೂ ಸ್ಮರಣೆಗೆ ತಂದುಕೊಳ್ಳಲಿ.

ಸುವರ್ಣಪುಂಖಾ ನಾರಾಚಾಃ ಶತ್ರುಘ್ನಾ ವೈದ್ಯುತಪ್ರಭಾಃ ।
ತ್ವಯಾಸ್ತಾಸ್ತಸ್ಯ ಮರ್ಮಾಣಿ ಭಿತ್ತ್ವಾ ಪಾಸ್ಯಂತಿ ಶೋಣಿತಮ್ ॥೮೬॥

ಬಂಗಾರದ ಪುಕ್ಕಗಳುಳ್ಳ ಮಿಂಚಿನಂತೆ ಹೊಳೆವ ಶತ್ರುನಾಶಕವಾದ ಬಾಣಗಳನ್ನು ನೀನು ಎಸೆದಾಗ ಅವು ಅವನ ಮರ್ಮಗಳನ್ನು ಭೇದಿಸಿ ರಕ್ತವನ್ನು ಕುಡಿಯುತ್ತವೆ.

ಉಗ್ರಾಸ್ತ್ವದ್ಭುಜನಿರ್ಮುಕ್ತಾ ಮರ್ಮ ಭಿತ್ತ್ವಾ ಶಿತಾಃ ಶರಾಃ ।
ಅದ್ಯ ಕರ್ಣಂ ಮಹಾವೇಗಾಃ ಪ್ರೇಷಯಂತು ಯಮಕ್ಷಯಮ್ ॥೮೭॥

ಉಗ್ರವಾದ ಹರಿತವಾದ ಮಹಾವೇಗದ ಬಾಣಗಳು ನಿನ್ನ ಬಾಹುಗಳಿಂದ ಹೊರಟು ಮರ್ಮಗಳನ್ನು ಭೇದಿಸಿ ಕರ್ಣನನ್ನು ಯಮಸದನಕ್ಕೆ ಅಟ್ಟಲಿ.

ಅದ್ಯ ಹಾಹಾಕೃತಾ ದೀನಾ ವಿಷಣ್ಣಾಸ್ತ್ವಚ್ಛರಾರ್ದಿತಾಃ ।
ಪ್ರಪತಂತಂ ರಥಾತ್ಕರ್ಣಂ ಪಶ್ಯಂತು ವಸುಧಾಧಿಪಾಃ ॥೮೮॥

ಈಗ ನಿನ್ನ ಬಾಣಗಳಿಂದ ಪೀಡಿತರಾಗುತ್ತಿರುವ ರಾಜರು ವಿಷಣ್ಣರಾಗಿ ದೀನರಾಗಿ ಹಾಹಾಕಾರ ಮಾಡುತ್ತ, ರಥದಿಂದ ಕರ್ಣನು ಬೀಳುವುದನ್ನೂ ನೋಡಲಿ.

ಅದ್ಯ ಸ್ವಶೋಣಿತೇ ಮಗ್ನಂ ಶಯಾನಂ ಪತಿತಂ ಭುವಿ ।
ಅಪವಿದ್ಧಾಯುಧಂ ಕರ್ಣಂ ಪಶ್ಯಂತು ಸುಹೃದೋ ನಿಜಾಃ ॥೮೯॥

ಈಗ ತನ್ನ ರಕ್ತದ ಮಡುವಿನಲ್ಲಿ ತಾನು ಮುಳುಗಿ, ನೆಲದ ಮೇಲೊರಗಿದ, ಆಯುಧವನ್ನು ಚೆಲ್ಲಿರುವ ಕರ್ಣನನ್ನು ಅವನ ಸ್ವಂತ ಸಂಬಂಧಿಗಳು ನೋಡಲಿ.

ಹಸ್ತಿಕಕ್ಷ್ಯೋ ಮಹಾನಸ್ಯ ಭಲ್ಲೇನೋನ್ಮಥಿತಸ್ತ್ವಯಾ ।
ಪ್ರಕಮ್ಪಮಾನಃ ಪತತು ಭೂಮಾವಾಧಿರಥೇರ್ಧ್ವಜಃ ॥೯೦॥

ಹಸ್ತಪ್ರಮಾಣದ ಕಾಕಪ್ರತಿಮಾಯುಕ್ತವಾದ ಕರ್ಣನ ಮಹಾಧ್ವಜವನ್ನು ನೀನು ಭಲ್ಲೆಯಿಂದ ಕಡಿದಾಗ ಅದು ಕಂಪಿಸುತ್ತ ನೆಲದ ಮೇಲೆ ಬೀಳಲಿ.

ತ್ವಯಾ ಶರಶತೈಶ್ಛಿನ್ನಂ ರಥಂ ಹೇಮವಿಭೂಷಿತಮ್ ।
ಹತಯೋಧಂ ಸಮುತ್ಸೃಜ್ಯ ಭೀತಃ ಶಲ್ಯಃ ಪಲಾಯತಾಮ್ ॥೯೧॥

ಬಂಗಾರದಿಂದ ಅಲಂಕೃತವಾದ ಕರ್ಣನ ರಥವನ್ನು ನೀನು ನೂರಾರು ಬಾಣಗಳಿಂದ ಕಡಿದಾಗ, ಯೋಧನು ಇಲ್ಲದ ಆ ರಥವನ್ನು ಬಿಟ್ಟು ಭಯದಿಂದ ಶಲ್ಯನೂ ಪಲಾಯನ ಮಾಡಲಿ.

ತತಃ ಸುಯೋಧನೋ ದೃಷ್ಟ್ವಾ ಹತಮಾಧಿರಥಿಂ ತ್ವಯಾ ।
ನಿರಾಶೋ ಜೀವಿತೇ ತ್ವದ್ಯ ರಾಜ್ಯೇ ಚೈವ ಭವಿಷ್ಯತಿ ॥೯೨॥

ಧರ್ಮವನ್ನು ತಿಳಿಯದ ಪರಮ ದುಷ್ಟಬುದ್ಧಿಯವನಾದ ಪಾಪಿ ಕರ್ಣನು ನೀನು ಕೇಳುತ್ತಿದ್ದಂತೆಯೇ ಪಾಪದ ಮಾತನ್ನು ಹೇಳಿದ್ದಾನೆ.

ತಸ್ಯ ಪಾಪಸ್ಯ ತದ್ವಾಕ್ಯಂ ಸುವರ್ಣವಿಕೃತಾಃ ಶರಾಃ ।
ಶಮಯಂತು ಶಿಲಾಧೌತಾಸ್ತ್ವಯಾಸ್ತಾ ಜೀವಿತಚ್ಛಿದಃ ॥೮೩॥

ಪಾಪಿಯಾದ ಆ ಕರ್ಣನ ಆ ಮಾತನ್ನು, ನೀನು ಎಸೆಯುವ, ಬಂಗಾರದಿಂದ ಮಾಡಿದ, ಸಾಣೆಹಿಡಿದ, ಶತ್ರುವಿನ ಪ್ರಾಣ ತೆಗೆಯುವಂಥ ಬಾಣಗಳು ಶಮನಮಾಡಲಿ.

ಯಾನಿ ಚಾನ್ಯಾನಿ ದುಷ್ಟಾತ್ಮಾ ಪಾಪಾನಿ ಕೃತವಾಂಸ್ತ್ವಯಿ ।
ತಾನ್ಯದ್ಯ ಜೀವಿತಂ ಚಾಸ್ಯ ಶಮಯಂತು ಶರಾಸ್ತವ ॥೮೪॥

ದುಷ್ಟಬುದ್ಧಿಯ ಕರ್ಣನು ಇನ್ನೂ ಏನೇನು ಬೇರೆ ಅಪರಾಧಗಳನ್ನು ನಿನ್ನಲ್ಲಿ ಎಸಗಿರುವನೋ ಅವುಗಳನ್ನೂ ಜೊತೆಗೆ ಅವನ ಪ್ರಾಣವನ್ನೂ ಈಗ ನಿನ್ನ ಬಾಣಗಳು ಶಮನಗೊಳಿಸಲಿ.

ಗಾಂಡೀವಪ್ರಹಿತಾನ್ ಘೋರಾನದ್ಯ ಗಾತ್ರೈಃ ಸ್ಪೃಶನ್ ಶರಾನ್ ।
ಕರ್ಣಃ ಸ್ಮರತು ದುಷ್ಟಾತ್ಮಾ ವಚನಂ ದ್ರೋಣಭೀಷ್ಮಯೋಃ ॥೮೫॥

ಗಾಂಡೀವದಿಂದ ಹೊರಡುವ ಘೋರವಾದ ಬಾಣಗಳನ್ನು ಕರ್ಣನು ಸರ್ವಾಂಗಗಳಿಂದ ಸ್ಪರ್ಶಿಸುವಾಗ ದುಷ್ಟಬುದ್ಧಿಯ ಆತನು ದ್ರೋಣ, ಭೀಷ್ಮರ ಮಾತುಗಳನ್ನೂ ಸ್ಮರಣೆಗೆ ತಂದುಕೊಳ್ಳಲಿ.

ಸುವರ್ಣಪುಂಖಾ ನಾರಾಚಾಃ ಶತ್ರುಘ್ನಾ ವೈದ್ಯುತಪ್ರಭಾಃ ।
ತ್ವಯಾಸ್ತಾಸ್ತಸ್ಯ ಮರ್ಮಾಣಿ ಭಿತ್ತ್ವಾ ಪಾಸ್ಯಂತಿ ಶೋಣಿತಮ್ ॥೮೬॥

ಬಂಗಾರದ ಪುಕ್ಕಗಳುಳ್ಳ ಮಿಂಚಿನಂತೆ ಹೊಳೆವ ಶತ್ರುನಾಶಕವಾದ ಬಾಣಗಳನ್ನು ನೀನು ಎಸೆದಾಗ ಅವು ಅವನ ಮರ್ಮಗಳನ್ನು ಭೇದಿಸಿ ರಕ್ತವನ್ನು ಕುಡಿಯುತ್ತವೆ.

ಉಗ್ರಾಸ್ತ್ವದ್ಭುಜನಿರ್ಮುಕ್ತಾ ಮರ್ಮ ಭಿತ್ತ್ವಾ ಶಿತಾಃ ಶರಾಃ ।
ಅದ್ಯ ಕರ್ಣಂ ಮಹಾವೇಗಾಃ ಪ್ರೇಷಯಂತು ಯಮಕ್ಷಯಮ್ ॥೮೭॥

ಉಗ್ರವಾದ ಹರಿತವಾದ ಮಹಾವೇಗದ ಬಾಣಗಳು ನಿನ್ನ ಬಾಹುಗಳಿಂದ ಹೊರಟು ಮರ್ಮಗಳನ್ನು ಭೇದಿಸಿ ಕರ್ಣನನ್ನು ಯಮಸದನಕ್ಕೆ ಅಟ್ಟಲಿ.

ಅದ್ಯ ಹಾಹಾಕೃತಾ ದೀನಾ ವಿಷಣ್ಣಾಸ್ತ್ವಚ್ಛರಾರ್ದಿತಾಃ ।
ಪ್ರಪತಂತಂ ರಥಾತ್ಕರ್ಣಂ ಪಶ್ಯಂತು ವಸುಧಾಧಿಪಾಃ ॥೮೮॥

ಈಗ ನಿನ್ನ ಬಾಣಗಳಿಂದ ಪೀಡಿತರಾಗುತ್ತಿರುವ ರಾಜರು ವಿಷಣ್ಣರಾಗಿ ದೀನರಾಗಿ ಹಾಹಾಕಾರ ಮಾಡುತ್ತ, ರಥದಿಂದ ಕರ್ಣನು ಬೀಳುವುದನ್ನೂ ನೋಡಲಿ.

ಅದ್ಯ ಸ್ವಶೋಣಿತೇ ಮಗ್ನಂ ಶಯಾನಂ ಪತಿತಂ ಭುವಿ ।
ಅಪವಿದ್ಧಾಯುಧಂ ಕರ್ಣಂ ಪಶ್ಯಂತು ಸುಹೃದೋ ನಿಜಾಃ ॥೮೯॥

ಈಗ ತನ್ನ ರಕ್ತದ ಮಡುವಿನಲ್ಲಿ ತಾನು ಮುಳುಗಿ, ನೆಲದ ಮೇಲೊರಗಿದ, ಆಯುಧವನ್ನು ಚೆಲ್ಲಿರುವ ಕರ್ಣನನ್ನು ಅವನ ಸ್ವಂತ ಸಂಬಂಧಿಗಳು ನೋಡಲಿ.

ಹಸ್ತಿಕಕ್ಷ್ಯೋ ಮಹಾನಸ್ಯ ಭಲ್ಲೇನೋನ್ಮಥಿತಸ್ತ್ವಯಾ ।
ಪ್ರಕಮ್ಪಮಾನಃ ಪತತು ಭೂಮಾವಾಧಿರಥೇರ್ಧ್ವಜಃ ॥೯೦॥

ಹಸ್ತಪ್ರಮಾಣದ ಕಾಕಪ್ರತಿಮಾಯುಕ್ತವಾದ ಕರ್ಣನ ಮಹಾಧ್ವಜವನ್ನು ನೀನು ಭಲ್ಲೆಯಿಂದ ಕಡಿದಾಗ ಅದು ಕಂಪಿಸುತ್ತ ನೆಲದ ಮೇಲೆ ಬೀಳಲಿ.

ತ್ವಯಾ ಶರಶತೈಶ್ಛಿನ್ನಂ ರಥಂ ಹೇಮವಿಭೂಷಿತಮ್ ।
ಹತಯೋಧಂ ಸಮುತ್ಸೃಜ್ಯ ಭೀತಃ ಶಲ್ಯಃ ಪಲಾಯತಾಮ್ ॥೯೧॥

ಬಂಗಾರದಿಂದ ಅಲಂಕೃತವಾದ ಕರ್ಣನ ರಥವನ್ನು ನೀನು ನೂರಾರು ಬಾಣಗಳಿಂದ ಕಡಿದಾಗ, ಯೋಧನು ಇಲ್ಲದ ಆ ರಥವನ್ನು ಬಿಟ್ಟು ಭಯದಿಂದ ಶಲ್ಯನೂ ಪಲಾಯನ ಮಾಡಲಿ.

ತತಃ ಸುಯೋಧನೋ ದೃಷ್ಟ್ವಾ ಹತಮಾಧಿರಥಿಂ ತ್ವಯಾ ।
ನಿರಾಶೋ ಜೀವಿತೇ ತ್ವದ್ಯ ರಾಜ್ಯೇ ಚೈವ ಭವಿಷ್ಯತಿ ॥೯೨॥

ಅರ್ಜುನ, ನಿನ್ನಿಂದ ಕರ್ಣನು ಹತನಾದಾಗ ಅದನ್ನು ದುರ್ಯೋಧನನು ನೋಡಿ ತನ್ನ ಬದುಕಿನಲ್ಲಿಯೂ ರಾಜ್ಯದಲ್ಲಿಯೂ ನಿರಾಸೆ ಹೊಂದುವನು.

ಏತೇ ದ್ರವಂತಿ ಪಾಂಚಾಲಾ ವಧ್ಯಮಾನಾಃ ಶಿತೈಃ ಶರೈಃ ।
ಕರ್ಣೇನ ಭರತಶ್ರೇಷ್ಠ ತಾನ್ ಸಮುದ್ಧರ ಪಾಂಡವ ॥೯೩॥

ಈ ಪಾಂಚಾಲರು ಕರ್ಣನ ಹರಿತವಾದ ಬಾಣಗಳಿಂದ ಹೊಡೆಸಿಕೊಂಡು ಪಲಾಯನ ಮಾಡುತ್ತಿದ್ದಾರೆ. ಅವರನ್ನು ರಕ್ಷಿಸು, ಅರ್ಜುನ.

ಪಾಂಚಾಲಾನ್ ದ್ರೌಪದೇಯಾಂಶ್ಚ ಧೃಷ್ಟದ್ಯುಮ್ನಶಿಖಂಡಿನೌ ।
ಧೃಷ್ಟದ್ಯುಮ್ನತನೂಜಾಂಶ್ಚ ಶತಾನೀಕಂ ಚ ನಾಕುಲಿಮ್ ॥೯೪॥

ನಕುಲಂ ಸಹದೇವಂ ಚ ದುರ್ಮುಖಂ ಜನಮೇಜಯಮ್ ।
ಸುವರ್ಮಾಣಂ ಸಾತ್ಯಕಿಂ ಚ ವಿದ್ಧಿ ಕರ್ಣವಶಂ ಗತಾನ್ ॥೯೫॥

ಪಾಂಚಾಲರು ದ್ರೌಪದೀಪುತ್ರರು, ಧೃಷ್ಟದ್ಯುಮ್ನ ಶಿಖಂಡಿಗಳು, ಧೃಷ್ಟದ್ಯುಮ್ನನ ಪುತ್ರರು, ನಕುಲ ಪುತ್ರ ಶತಾನೀಕ, ನಕುಲ ಸಹದೇವ ದುರ್ಮುಖ ಜನಮೇಜಯ, ಒಳ್ಳೆಯ ಕವಚವುಳ್ಳ ಸಾತ್ಯಕಿ ಇವರೆಲ್ಲರೂ ಕರ್ಣನ ವಶಕ್ಕೆ ಬಂದಿದ್ದಾರೆ.

ಅಭ್ಯಾಹತಾನಾಂ ಕರ್ಣೇನ ಪಾಂಚಾಲಾನಾಂ ಮಹಾರಣೇ ।
ಶ್ರೂಯತೇ ನಿನದೋ ಘೋರಸ್ತದ್‌ಬಂಧೂನಾಂ ಪರಂತಪ ॥೯೬॥

ಮಹಾರಣದಲ್ಲಿ ಕರ್ಣನಿಂದ ಹೊಡೆಸಿಕೊಂಡ ನಿನ್ನ ಬಂಧುಗಳಾದ ಪಾಂಚಾಲರ ಘೋರವಾದ ಆರ್ತನಾದ ಕೇಳಿ ಬರುತ್ತಿದೆ; ಅರ್ಜುನ!

ನ ತ್ವೇವ ಭೀತಾಃ ಪಾಂಚಾಲಾಃ ಕಥಂಚಿತ್ ಸ್ಯುಃ ಪರಾಙ್ಮುಖಾಃ ।
ನ ಹಿ ಮೃತ್ಯುಂ ಮಹೇಷ್ವಾಸಾ ಗಣಯಂತಿ ಮಹಾರಥಾಃ ॥೯೭॥

ಪಾಂಚಾಲರು ಎಷ್ಟುಮಾತ್ರಕ್ಕೂ ಭೀತರಾಗಿ ಪಲಾಯನ ಮಾಡುವವರಲ್ಲ. ಮಹಾಬಿಲ್ಲಾಳುಗಳಾದ ಮಹಾರಥರಾದ ಅವರು ಮೃತ್ಯುವನ್ನು ಪರಿಗಣಿಸುವುದಿಲ್ಲ.

ಯ ಏಕಃ ಪಾಂಡವೀಂ ಸೇನಾಂ ಶರೌಘೈಃ ಸಮವೇಷ್ಟಯತ್ ।
ತಂ ಸಮಾಸಾದ್ಯ ಪಾಂಚಾಲಾ ಭೀಷ್ಮಂ ನಾಸನ್ ಪರಾಙ್ಮುಖಾಃ ॥೯೮॥

ಭೀಷ್ಮ ಏಕಾಂಗಿಯಾಗಿ ಪಾಂಡವಸೈನ್ಯವನ್ನು ಬಾಣಪ್ರವಾಹಗಳಿಂದ ಮುಚ್ಚಿದ್ದ. ಅಂಥ ಭೀಷ್ಮನನ್ನು ಇದಿರಿಸಿಯೂ ಕೂಡ ಪಾಂಚಾಲರು ಪರಾಙ್ಮುಖರಾಗಲಿಲ್ಲ!

ತಥಾ ಜ್ವಲಂತಮಸ್ತ್ರಾಗ್ನಿಂ ಗುರುಂ ಸರ್ವಧನುಷ್ಮತಾಮ್ ।
ನಿರ್ದಹಂತಂ ಸಮಾರೋಹನ್ ದುರ್ಧರ್ಷಂ ದ್ರೋಣಮೋಜಸಾ॥೯೯॥

ಹಾಗೇ ಎಲ್ಲ ಬಿಲ್ಲಾಳುಗಳಿಗೂ ಆಚಾರ್ಯರಾದ, ಜ್ವಲಿಸುವ ಅಸ್ತ್ರಾಗ್ನಿ ಸ್ವರೂಪರಂತಿದ್ದು ಶತ್ರುಗಳನ್ನು ದಹಿಸುತ್ತಿದ್ದ, ಯಾರಿಗೂ ಮಣಿಯದ ದ್ರೋಣನನ್ನೂ ಇದಿರಿಸಿದ್ದರು ಪಾಂಚಾಲರು.

ತೇ ನಿತ್ಯಮುದಿತಾ ಜೇತುಂ ಯುದ್ಧೇ ಶತ್ರೂನರಿಂದಮಾಃ ।
ನ ಜಾತ್ವಾಧಿರಥೇಭ್ಯೋತಾಃ ಪಾಂಚಾಲಾಃ ಸ್ಯುಃ ಪರಾಙ್ಮುಖಾಃ ॥೧೦೦॥

ಶತ್ರುನಾಶಕರಾದ ಆ ಪಾಂಚಾಲರು ನಿತ್ಯವೂ ರಣದಲ್ಲಿ ಶತ್ರುಗಳನ್ನು ಜಯಿಸಲು ಉದ್ಯುಕ್ತರಾಗಿರುವರು. ಕರ್ಣನಿಗೆ ಹೆದರಿ ಎಂದೂ ಪರಾಙ್ಮುಖರಾಗಲಾರರು.

ತೇಷಾಮಾಪತತಾಂ ಶೂರಃ ಪಾಂಚಾಲಾನಾಂ ತರಸ್ವಿನಾಮ್ ।
ಆದತ್ತೇऽಸೂನ್ ಶರೈಃ ಕರ್ಣಃ ಪತಂಗಾನಾಮಿವಾನಲಃ ॥೧೦೧॥

ಪಾಂಚಾಲರು ವೇಗದಿಂದ ತನ್ನಿದಿರಿಗೆ ಬರುತ್ತಿದ್ದಂತೆ, ದೀಪದ ಹುಳುಗಳ ಪ್ರಾಣಗಳನ್ನು ಬೆಂಕಿ ಆಹುತಿ ತೆಗೆದುಕೊಳ್ಳುವಂತೆ, ಕರ್ಣನು ಪಾಂಚಾಲರ ಪ್ರಾಣಗಳನ್ನು ಬಾಣಗಳಿಂದ ಆಹುತಿ ತೆಗೆದುಕೊಳ್ಳುತ್ತಾನೆ.

ತಾಂಸ್ತಥಾಭಿಮುಖಾನ್ ವೀರಾನ್ ಮಿತ್ರಾರ್ಥೇ ತ್ಯಕ್ತಜೀವಿತಾನ್ ।
ಕ್ಷಯಂ ನಯತಿ ರಾಧೇಯಃ ಪಾಂಚಾಲಾನ್ ಶತಶೋ ರಣೇ ॥೧೦೨॥

ಹಾಗೆ ಮಿತ್ರರಾದ ಪಾಂಡವರ ಸಲುವಾಗಿ ಪ್ರಾಣದ ಹಂಗು ತೊರೆದು ಕರ್ಣನ ಇದಿರಿಗೆ ಬರುವ ನೂರಾರು ಪಾಂಚಾಲ ವೀರರನ್ನು ಕರ್ಣನು ನಾಶಮಾಡುತ್ತಿದ್ದಾನೆ.

ತದ್ಭಾರತ ಮಹೇಷ್ವಾಸಾನಗಾಧೇ ಮಜ್ಜತೋऽಪ್ಲವೇ ।
ಕರ್ಣಾರ್ಣವೇ ಪ್ಲವೋ ಭೂತ್ವಾ ಪಾಂಚಾಲಾನ್ ತ್ರಾತುಮರ್ಹಸಿ ೧೦೩

ಅಗಾಧವಾದ, ನಾವೆಯೂ ಇಲ್ಲದಿರುವ ಕರ್ಣಸಮುದ್ರದಲ್ಲಿ ಮುಳುಗಿ ಹೋಗುತ್ತಿರುವ ಪಾಂಚಾಲರಿಗೆ ಅರ್ಜುನ, ನೀನು ನಾವೆಯಾಗಿ ಅವರನ್ನು ಪಾರುಮಾಡು.

ಅಸ್ತ್ರಂ ಹಿ ರಾಮಾತ್ ಕರ್ಣೇನ ಭಾರ್ಗವಾದೃಷಿಸತ್ತಮಾತ್ ।
ಯದುಪಾತ್ತಂ ಪುರಾ ಘೋರಂ ತಸ್ಯ ರೂಪಮುದೀರ್ಯತೇ ॥೧೦೪॥

ಕರ್ಣನು ಈಗ ಪ್ರಯೋಗಿಸಿರುವ ಅಸ್ತ್ರವು ಹಿಂದೆ ಕರ್ಣನು ಋಷಿ ಶ್ರೇಷ್ಠನಾದ ಪರಶುರಾಮನಿಂದ ಸ್ವೀಕರಿಸಿದ್ದು. ಅದರ ಸ್ವರೂಪ ಘೋರವೆನಿಸಿದೆ.

ತಾಪನಂ ಸರ್ವಸೈನ್ಯಾನಾಂ ಘೋರರೂಪಂ ಸುದಾರುಣಮ್ ।
ಸಮಾವೃತ್ಯ ಮಹಾಸೇನಾಂ ಜ್ವಲತಿ ಸ್ವೇನ ತೇಜಸಾ ॥೧೦೫॥

ಎಲ್ಲ ಸೈನ್ಯಗಳನ್ನೂ ಸುಡುವ ಈ ಅಸ್ತ್ರವು ಘೋರಸ್ವರೂಪದ್ದು ಬಲುದಾರುಣ. ಮಹಾಸೈನ್ಯವನ್ನು ಆವರಿಸಿ ತನ್ನ ತೇಜಸ್ಸಿನಿಂದ ಜ್ವಲಿಸುತ್ತಿದೆ.

ಏತೇ ಚರಂತಿ ಸಂಗ್ರಾಮೇ ಕರ್ಣಚಾಪಚ್ಯುತಾಃ ಶರಾಃ ।
ಭ್ರಮರಾಣಾಮಿವ ವ್ರಾತಾಸ್ತಾಪಯಂತಃ ಸ್ಮ ತಾವಕಾನ್ ॥೧೦೬॥

ಕರ್ಣನ ಧನುಸ್ಸಿನಿಂದ ಹೊರಟ ಈ ಬಾಣಗಳು ದುಂಬಿಗಳ ಸಾಲುಗಳಂತೆ ಬಂದು ನಿನ್ನವರನ್ನು ಸುಡುತ್ತ ರಣದಲ್ಲಿ ಸಂಚರಿಸುತ್ತಿವೆ.

ಏತೇ ಚರಂತಿ ಪಾಂಚಾಲಾ ದಿಕ್ಷು ಸರ್ವಾಸು ಭಾರತ ।
ಕರ್ಣಾಸ್ತ್ರಂ ಸಮರೇ ಪ್ರಾಪ್ಯ ದುರ್ನಿವಾರಮನಾತ್ಮಭಿಃ ॥೧೦೭॥

ಈ ಪಾಂಚಾಲರು ಇಂದ್ರಿಯಜಯವಿಲ್ಲದವರಿಗೆ ನಿವಾರಿಸಲಾಗದ ಕರ್ಣಾಸ್ತ್ರಕ್ಕೆ ಬಲಿಯಾಗಿ ರಣದಲ್ಲಿ ಎಲ್ಲ ದಿಕ್ಕುಗಳಿಗೆ ಪಲಾಯನ ಮಾಡುತ್ತಿದ್ದಾರೆ.

ಏಷ ಭೀಮೋ ದೃಢಕ್ರೋಧೋ ವೃತಃ ಪಾರ್ಥ ಸಮಂತತಃ ।
ಸೃಂಜಯೈರ್ಯೋಧಯನ್ ಕರ್ಣಂ ಪೀಡ್ಯತೇ ಸ್ಮ ಶಿತೈಃ ಶರೈಃ ॥೧೦೮॥

ಅರ್ಜುನ, ಈ ಭೀಮನು ಮಾತ್ರ ದೃಢ ಕ್ರೋಧದಿಂದ ಸುತ್ತಲೂ

ಸೃಂಜಯರಿಂದ ಪರಿವೃತನಾಗಿ ಕರ್ಣನೊಡನೆ ಹೋರಾಡುತ್ತ ಅವನ ಹರಿತವಾದ ಬಾಣಗಳಿಂದ ಪೀಡಿತನಾಗುತ್ತಿದ್ದಾನೆ.

ಪಾಂಡವಾನ್ ಸೃಂಜಯಾಂಶ್ಚೈವ ಪಾಂಚಾಲಾಂಶ್ಚೈವ ಭಾರತ ।
ಹನ್ಯಾದುಪೇಕ್ಷಿತಃ ಕರ್ಣೋ ರೋಗೋ ದೇಹಮಿವಾತತಃ ॥೧೦೯॥

ರೋಗವು ಉಪೇಕ್ಷೆ ಮಾಡಿದರೆ ದೇಹವನ್ನು ವ್ಯಾಪಿಸಿ ನಾಶಗೊಳಿಸುವಂತೆ ಕರ್ಣನನ್ನು ಉಪೇಕ್ಷಿಸಿದರೆ ಅವನು ಪಾಂಡವ ಸೃಂಜಯ ಪಾಂಚಾಲರೆಲ್ಲರನ್ನೂ ಸಂಹರಿಸುತ್ತಾನೆ.

ನಾನ್ಯಂ ತ್ವತ್ತೋಽಭಿಪಶ್ಯಾಮಿ ಯೋಧಂ ಯೌಧಿಷ್ಠಿರೇ ಬಲೇ ।
ಯಃ ಸಮಾಸಾದ್ಯ ರಾಧೇಯಂ ಸ್ವಸ್ತಿಮಾನಾವ್ರಜೇದ್ ಗೃಹಮ್ ॥೧೧೦॥

ಯುಧಿಷ್ಠಿರನ ಸೈನ್ಯದಲ್ಲಿ ಕರ್ಣನನ್ನು ಇದಿರಿಸಿ ಕ್ಷೇಮದಿಂದ ಮನೆಗೆ ಹಿಂತಿರುಗಬಲ್ಲ ಯೋಧನನ್ನು ನಿನ್ನ ಹೊರತು ಇನ್ನೊಬ್ಬನನ್ನು ನಾನು ಕಾಣೆ.

ತಮದ್ಯ ನಿಶಿತೈರ್ಬಾಣೈರ್ನಿಹತ್ಯ ಭರತರ್ಷಭ ।
ಯಥಾಪ್ರತಿಜ್ಞಂ ಪಾರ್ಥ ತ್ವಂ ಕೃತ್ವಾ ಕೀರ್ತಿಮವಾಪ್ನುಹಿ ॥೧೧೧॥

ಅವನನ್ನು ಈಗ ಹರಿತವಾದ ಬಾಣಗಳಿಂದ ಕೊಂದು ಪ್ರತಿಜ್ಞಾನುಸಾರವಾಗಿ ಅನುಷ್ಠಾನ ಮಾಡಿ ಕೀರ್ತಿಯನ್ನು ಪಡೆದುಕೊ.

ತ್ವಂ ಹಿ ಶಕ್ತೋ ರಣೇ ಜೇತುಂ ಸಕರ್ಣಾನಪಿ ಕೌರವಾನ್ ।
ನಾನ್ಯೋ ಯುಧಿ ಯುಧಾಂ ಶ್ರೇಷ್ಠ ಸತ್ಯಮೇತದ್
ಬ್ರವೀಮಿ ತೇ ॥೧೧೨॥

ಯೋಧಶ್ರೇಷ್ಠನೆ, ನೀನು ಕರ್ಣಸಮೇತರಾದ ಕೌರವರನ್ನು ರಣದಲ್ಲಿ ಗೆಲ್ಲಲು ಶಕ್ತ. ಇನ್ನೊಬ್ಬನಿಂದ ಇದು ಶಕ್ಯವಿಲ್ಲ ಇದು ಸತ್ಯವೆಂದು ನಿನಗೆ ಹೇಳುತ್ತಿದ್ದೇನೆ.

ಏತತ್ಕೃತ್ವಾ ಮಹತ್ಕರ್ಮ ಹತ್ವಾ ಕರ್ಣಂ ಮಹಾರಥಮ್ ।
ಕೃತಾರ್ಥಃ ಸಫಲಃ ಪಾರ್ಥ ಸುಖೀ ಭವ ನರೋತ್ತಮ । ೧೧೩॥

ನರೋತ್ತಮನಾದ ಅರ್ಜುನ, ನೀನು ಮಹಾರಥನಾದ ಕರ್ಣನನ್ನು ಕೊಂದು, ಆ ಮೂಲಕ ಮಹತ್ತಾದ ಕಾರ್ಯ ಒಂದನ್ನು ಮಾಡಿ ಕೃತಾರ್ಥನಾಗು, ಸಫಲನಾಗು, ಸುಖಿಯಾಗು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕೃಷ್ಣಾರ್ಜುನಸಂವಾದೇ ಅರ್ಜುನಾಶೀರ್ವಚನಂ ನಾಮ
ಸಪ್ತತಿತಮೋಽಧ್ಯಾಯಃ ॥೭೦॥

❖

ಎಪ್ಪತ್ತೊಂದನೆಯ ಅಧ್ಯಾಯ

ಅರ್ಜುನನು ಮಾಡುವ ಕರ್ಣವಧೆಯ ವೀರಸಂಕಲ್ಪ.

ಸಂಜಯಃ

ಸ ಕೇಶವಸ್ಯ ಬೀಭತ್ಸುಃ ಶ್ರುತ್ವಾ ಭಾರತ ಭಾಷಿತಮ್ ।
ವಿಶೋಕಃ ಸಂಪ್ರಹೃಷ್ಟಶ್ಚ ಕ್ಷಣೇನ ಸಮಪದ್ಯತ ॥೧॥

ಸಂಜಯ ನುಡಿದ— ಅರ್ಜುನನು ಕೃಷ್ಣನ ಮಾತನ್ನು ಕೇಳಿ, ಕ್ಷಣದಲ್ಲಿ ಅಣ್ಣನನ್ನು ಹಳಿದೆನೆಂಬ ದುಗುಡವನ್ನು ಕಳೆದುಕೊಂಡು ಕರ್ಣವಧೆಯಲ್ಲಿ ಉತ್ಸಾಹಭರಿತನಾದ.

ತತೋ ಜ್ಯಾಮನುಮೃಜ್ಯಾಶು ವ್ಯಾಕ್ಷಿಪದ್ ಗಾಂಡಿವಂ ಧನುಃ ।
ದಧ್ಮೌ ಕರ್ಣವಿನಾಶಾಯ ಕೇಶವಂ ಚಾಭ್ಯಭಾಷತ ॥೨॥

ಬಳಿಕ ಹೆದೆಯನ್ನು ಸವರಿ, ಬಿಲ್ಲಿಗೆ ಏರಿಸಿದ. ಗಾಂಡೀವಧನುಸ್ಸನ್ನು ಕರ್ಣವಿನಾಶಕ್ಕಾಗಿ ಧರಿಸಿದ. ಕೃಷ್ಣನಿಗೆ ನುಡಿದ.

ತ್ವಯಾ ನಾಥೇನ ಗೋವಿಂದ ಧ್ರುವ ಏಷ ಜಯೋ ಮಮ ।
ಪ್ರಸನ್ನೋ ಯಸ್ಯ ಮೇಽದ್ಯ ತ್ವಂ ಭೂತಭವ್ಯಭವತ್ಪ್ರಭುಃ ॥೩॥

‘ಗೋವಿಂದ, ನೀನು ರಕ್ಷಕನಾಗಿ ಇರುವುದರಿಂದ ನನಗೆ ಕರ್ಣನೊಂದಿಗೆ

ಸಮರದಲ್ಲಿ ಜಯ ನಿಶ್ಚಿತ. ಹಿಂದೆ ಮುಂದೆ ಈಗಿರುವ ಎಲ್ಲಕ್ಕೂ ಪ್ರಭು ನೀನು, ಈಗ ನನ್ನಲ್ಲಿ ವಿಶೇಷವಾಗಿ ಪ್ರಸನ್ನನಾಗಿರುವೆ.

ತ್ವತ್ಸಹಾಯೋ ಹ್ಯಹಂ ಕೃಷ್ಣ ತ್ರೀನ್ ಲೋಕಾನ್ ವೈ ಸಮಾಗತಾನ್ ।
ಪ್ರಾಪಯೇಯಂ ಪರಂ ಲೋಕಂ ಕಿಮು ಕರ್ಣಂ ಮಹಾರಣೇ ॥೪॥

ನಿನ್ನ ಸಹಾಯದ ಬಲದಿಂದ ಕೃಷ್ಣ ನಾನು ಮೂರು ಲೋಕಗಳು ಇದಿರಿಗೆ ಬಂದರೂ ಪರಲೋಕಕ್ಕೆ ಕಳಿಸಬಲ್ಲೆ. ಇನ್ನು ಮಹಾರಣದಲ್ಲಿ ಕರ್ಣನನ್ನು ಪರಲೋಕಕ್ಕೆ ಅಟ್ಟುವೆನೆಂದು ಬೇರೆ ಏನು ಹೇಳಬೇಕು?

ಪಶ್ಯಾಮಿ ದ್ರವತೀಂ ಸೇನಾಂ ಪಾಂಚಾಲಾನಾಂ ಜನಾರ್ದನ ।
ಪಶ್ಯಾಮಿ ಕರ್ಣಂ ಸಮರೇ ವಿಚರಂತಮಭೀತವತ್ ॥೫॥

ಈಗ ಕೃಷ್ಣ ನಾನು ಪಾಂಚಾಲ ಸೈನ್ಯ ರಣದಲ್ಲಿ ಹಿಮ್ಮೆಟ್ಟುವುದನ್ನು ಕಾಣುತ್ತಿದ್ದೇನೆ. ಕರ್ಣನು ಭೀತಿ ಇಲ್ಲದೆ ಓಡಾಡುವುದನ್ನು ಕಾಣುತ್ತಿದ್ದೇನೆ.

ಭಾರ್ಗವಾಸ್ತ್ರಂ ಚ ಪಶ್ಯಾಮಿ ವಿಚರನ್ತಂ ಸಮಂತತಃ ।
ಸೃಷ್ಟಂ ಕರ್ಣೇನ ವಾಷ್ಣೇಯ ಶಕ್ರೇಣೇವ ಮಹಾಶನಿಮ್ ॥೬॥

ಭಾರ್ಗವಾಸ್ತ್ರವು ಎಲ್ಲೆಡೆ ಸಂಚರಿಸುವುದನ್ನು ನೋಡುತ್ತಿದ್ದೇನೆ. ಇಂದ್ರನು ಎಸೆದ ವಜ್ರಾಯುಧದಂತಿದೆ, ಕರ್ಣನು ಎಸೆದ ಭಾರ್ಗವಾಸ್ತ್ರ.

ಅಯಂ ಖಲು ಸ ಸಂಗ್ರಾಮೋ ಯತ್ರ ಕೃಷ್ಣ ಮಯಾ ಕೃತಮ್ ।
ಕಥಯಿಷ್ಯಂತಿ ಭೂತಾನಿ ಯಾವದ್ ಭೂಮಿರ್ಧರಿಷ್ಯತಿ ॥೭॥

ಕೃಷ್ಣ ಈಗ ನಾನು ಮಾಡುತ್ತಿರುವ ಯುದ್ಧ ಎಂಥ ಯುದ್ಧವೆಂದರೆ ಅದರಲ್ಲಿ ನಾನು ತೋರುವ ಪರಾಕ್ರಮವನ್ನು ಎಷ್ಟುಕಾಲ ಈ ಭೂಮಿ ಇರುವುದೋ ಅಷ್ಟುಕಾಲ ಎಲ್ಲರೂ ಮುಂದೆ ಹೊಗಳುತ್ತಾರೆ.

ಅದ್ಯ ಕೃಷ್ಣ ವಿಕರ್ಣಾ ಮೇ ಕರ್ಣಂ ನೇಷ್ಯಂತಿ ಮೃತ್ಯವೇ ।
ಗಾಂಡೀವಮುಕ್ತಾಃ ಕ್ಷಿಣ್ವಂತೋ ಮಮ ಹಸ್ತಪ್ರಚೋದಿತಾಃ ॥೮॥

ಈಗ ಹಂದಿಕಿವಿಯಾಕಾರದ ಉತ್ತಮವಾದ ನನ್ನ ಬಾಣಗಳು ('ವಿ-ಕರ್ಣ'

ನರೋತ್ತಮನಾದ ಅರ್ಜುನ, ನೀನು ಮಹಾರಥನಾದ ಕರ್ಣನನ್ನು ಕೊಂದು, ಆ ಮೂಲಕ ಮಹತ್ತಾದ ಕಾರ್ಯ ಒಂದನ್ನು ಮಾಡಿ ಕೃತಾರ್ಥನಾಗು, ಸಫಲನಾಗು, ಸುಖಿಯಾಗು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕೃಷ್ಣಾರ್ಜುನಸಂವಾದೇ ಅರ್ಜುನಾಶೀರ್ವಚನಂ ನಾಮ
ಸಪ್ತತಿತಮೋಽಧ್ಯಾಯಃ ॥೭೦॥

❖

ಎಪ್ಪತ್ತೊಂದನೆಯ ಅಧ್ಯಾಯ

ಅರ್ಜುನನು ಮಾಡುವ ಕರ್ಣವಧೆಯ ವೀರಸಂಕಲ್ಪ.

ಸಂಜಯಃ

ಸ ಕೇಶವಸ್ಯ ಬೀಭತ್ಸುಃ ಶ್ರುತ್ವಾ ಭಾರತ ಭಾಷಿತಮ್ ।
ವಿಶೋಕಃ ಸಂಪ್ರಹೃಷ್ಟಶ್ಚ ಕ್ಷಣೇನ ಸಮಪದ್ಯತ ॥೧॥

ಸಂಜಯ ನುಡಿದ— ಅರ್ಜುನನು ಕೃಷ್ಣನ ಮಾತನ್ನು ಕೇಳಿ, ಕ್ಷಣದಲ್ಲಿ ಅಣ್ಣನನ್ನು ಹಳಿದೆನೆಂಬ ದುಗುಡವನ್ನು ಕಳೆದುಕೊಂಡು ಕರ್ಣವಧೆಯಲ್ಲಿ ಉತ್ಸಾಹಭರಿತನಾದ.

ತತೋ ಜ್ಯಾಮನುಮೃಜ್ಯಾಶು ವ್ಯಾಕ್ಷಿಪದ್ ಗಾಂಡಿವಂ ಧನುಃ ।
ದಧ್ರೇ ಕರ್ಣವಿನಾಶಾಯ ಕೇಶವಂ ಚಾಭ್ಯಭಾಷತ ॥೨॥

ಬಳಿಕ ಹೆದೆಯನ್ನು ಸವರಿ, ಬಿಲ್ಲಿಗೆ ಏರಿಸಿದ. ಗಾಂಡೀವಧನುಸ್ಸನ್ನು ಕರ್ಣವಿನಾಶಕ್ಕಾಗಿ ಧರಿಸಿದ. ಕೃಷ್ಣನಿಗೆ ನುಡಿದ.

ತ್ವಯಾ ನಾಥೇನ ಗೋವಿಂದ ಧ್ರುವ ಏಷ ಜಯೋ ಮಮ ।
ಪ್ರಸನ್ನೋ ಯಸ್ಯ ಮೇಽದ್ಯ ತ್ವಂ ಭೂತಭವ್ಯಭವತ್ಪ್ರಭುಃ ॥೩॥

‘ಗೋವಿಂದ, ನೀನು ರಕ್ಷಕನಾಗಿ ಇರುವುದರಿಂದ ನನಗೆ ಕರ್ಣನೊಂದಿಗೆ

ಸಮರದಲ್ಲಿ ಜಯ ನಿಶ್ಚಿತ. ಹಿಂದೆ ಮುಂದೆ ಈಗಿರುವ ಎಲ್ಲಕ್ಕೂ ಪ್ರಭು ನೀನು, ಈಗ ನನ್ನಲ್ಲಿ ವಿಶೇಷವಾಗಿ ಪ್ರಸನ್ನನಾಗಿರುವೆ.

ತ್ವತ್ಸಹಾಯೋ ಹ್ಯಹಂ ಕೃಷ್ಣ ತ್ರೀನ್ ಲೋಕಾನ್ ವೈ ಸಮಾಗತಾನ್ ।
ಪ್ರಾಪಯೇಯಂ ಪರಂ ಲೋಕಂ ಕಿಮು ಕರ್ಣಂ ಮಹಾರಣೇ ॥೪॥

ನಿನ್ನ ಸಹಾಯದ ಬಲದಿಂದ ಕೃಷ್ಣ ನಾನು ಮೂರು ಲೋಕಗಳು ಇದಿರಿಗೆ ಬಂದರೂ ಪರಲೋಕಕ್ಕೆ ಕಳಿಸಬಲ್ಲೆ. ಇನ್ನು ಮಹಾರಣದಲ್ಲಿ ಕರ್ಣನನ್ನು ಪರಲೋಕಕ್ಕೆ ಅಟ್ಟುವೆನೆಂದು ಬೇರೆ ಏನು ಹೇಳಬೇಕು?

ಪಶ್ಯಾಮಿ ದ್ರವತೀಂ ಸೇನಾಂ ಪಾಂಚಾಲಾನಾಂ ಜನಾರ್ದನ ।
ಪಶ್ಯಾಮಿ ಕರ್ಣಂ ಸಮರೇ ವಿಚರಂತಮಭೀತವತ್ ॥೫॥

ಈಗ ಕೃಷ್ಣ ನಾನು ಪಾಂಚಾಲ ಸೈನ್ಯ ರಣದಲ್ಲಿ ಹಿಮ್ಮೆಟ್ಟುವುದನ್ನು ಕಾಣುತ್ತಿದ್ದೇನೆ. ಕರ್ಣನು ಭೀತಿ ಇಲ್ಲದೆ ಓಡಾಡುವುದನ್ನು ಕಾಣುತ್ತಿದ್ದೇನೆ.

ಭಾರ್ಗವಾಸ್ತ್ರಂ ಚ ಪಶ್ಯಾಮಿ ವಿಚರನ್ತಂ ಸಮಂತತಃ ।
ಸೃಷ್ಟಂ ಕರ್ಣೇನ ವಾರ್ಷ್ಣೇಯ ಶಕ್ರೇಣೇವ ಮಹಾಶನಿಮ್ ॥೬॥

ಭಾರ್ಗವಾಸ್ತ್ರವು ಎಲ್ಲೆಡೆ ಸಂಚರಿಸುವುದನ್ನು ನೋಡುತ್ತಿದ್ದೇನೆ. ಇಂದ್ರನು ಎಸೆದ ವಜ್ರಾಯುಧದಂತಿದೆ, ಕರ್ಣನು ಎಸೆದ ಭಾರ್ಗವಾಸ್ತ್ರ

ಅಯಂ ಖಲು ಸ ಸಂಗ್ರಾಮೋ ಯತ್ರ ಕೃಷ್ಣ ಮಯಾ ಕೃತಮ್ ।
ಕಥಯಿಷ್ಯಂತಿ ಭೂತಾನಿ ಯಾವದ್ ಭೂಮಿರ್ಧರಿಷ್ಯತಿ ॥೭॥

ಕೃಷ್ಣ ಈಗ ನಾನು ಮಾಡುತ್ತಿರುವ ಯುದ್ಧ ಎಂಥ ಯುದ್ಧವೆಂದರೆ ಅದರಲ್ಲಿ ನಾನು ತೋರುವ ಪರಾಕ್ರಮವನ್ನು ಎಷ್ಟುಕಾಲ ಈ ಭೂಮಿ ಇರುವುದೋ ಅಷ್ಟುಕಾಲ ಎಲ್ಲರೂ ಮುಂದೆ ಹೊಗಳುತ್ತಾರೆ.

ಅದ್ಯ ಕೃಷ್ಣ ವಿಕರ್ಣಾ ಮೇ ಕರ್ಣಂ ನೇಷ್ಯಂತಿ ಮೃತ್ಯವೇ ।
ಗಾಂಡೀವಮುಕ್ತಾಃ ಕ್ಷಿಣ್ವಂತೋ ಮಮ ಹಸ್ತಪ್ರಚೋದಿತಾಃ ॥೮॥

ಈಗ ಹಂದಿಕಿವಿಯಾಕಾರದ ಉತ್ತಮವಾದ ನನ್ನ ಬಾಣಗಳು ('ವಿ–ಕರ್ಣ'

ವಿಶಿಷ್ಟವಾದ ವರಾಹಕರ್ಣದ ಆಕಾರ ಉಳ್ಳ ಬಾಣ. ಕರ್ಣನನ್ನು 'ಏ' ಇನ್ನಿಲ್ಲದಂತೆ ಮಾಡುವ ಬಾಣ.) ಗಾಂಡೀವದಲ್ಲಿ ಹೂಡಿ ಕೈಯಿಂದ ಬಲವಾಗಿ ಸೆಳೆದುಬಿಟ್ಟಾಗ ಕರ್ಣನನ್ನು ಕ್ಷತ ವಿಕ್ಷತನನ್ನಾಗಿ ಮಾಡಿ ಮೃತ್ಯುವಿನ ಬಳಿಗೆ ಒಯ್ಯುತ್ತವೆ.

ಅದ್ಯ ರಾಜಾ ಧೃತರಾಷ್ಟ್ರಃ ಸ್ವಾಂ ಬುದ್ಧಿಮವಮಂಸ್ಯತೇ ।
ದುರ್ಯೋಧನಮರಾಜ್ಯಾರ್ಹಂ ಯಯಾ ರಾಜ್ಯೇಽಭ್ಯಷೇಚಯತ್ ॥೯।

ಇಂದು ರಾಜಾ ಧೃತರಾಷ್ಟ್ರ ತನ್ನ ಬುದ್ಧಿಕೌಶಲವನ್ನು ಹಳಿಯುತ್ತಾನೆ. ರಾಜ್ಯಾರ್ಹನಲ್ಲದ ದುರ್ಯೋಧನನನ್ನು ರಾಜ್ಯದಲ್ಲಿ ಅಭಿಷೇಕ ಮಾಡಿದೆನಲ್ಲ! ಎಂದುಕೊಳ್ಳುತ್ತಾನೆ.

ಅದ್ಯ ರಾಜ್ಯಾತ್ ಸುಖಾಚ್ಚೈವ ಶ್ರಿಯೋ ರಾಷ್ಟ್ರಾತ್ ತಥಾ ಪುರಾತ್ ।
ಪುತ್ರೇಭ್ಯಶ್ಚ ಮಹಾಬಾಹೋ ಧೃತರಾಷ್ಟ್ರೋ ವಿಯೋಕ್ಷ್ಯತೇ ॥೧೦॥

ಇಂದು ಧೃತರಾಷ್ಟ್ರನು ರಾಜ್ಯ ಸುಖ ಸಂಪತ್ತು ರಾಷ್ಟ್ರ ಪಟ್ಟಣಗಳಿಂದ ಮಾತ್ರವಲ್ಲದೆ ತನ್ನೆಲ್ಲ ಮಕ್ಕಳಿಂದಲೂ ವಿಯೋಗ ಹೊಂದುತ್ತಾನೆ.

ಅದ್ಯ ದುರ್ಯೋಧನೋ ರಾಜಾ ಜೀವಿತಾಚ್ಚ ನಿರಾಶಕಃ ।
ಭವಿಷ್ಯತಿ ಹತೇ ಕರ್ಣೇ ಕೃಷ್ಣ ಸತ್ಯಂ ಬ್ರವೀಮಿ ತೇ ॥೧೧॥

ಇಂದು ರಾಜಾ ದುರ್ಯೋಧನನು, ಕರ್ಣ ಹತನಾದಾಗ ತನ್ನ ಬದುಕಿನಲ್ಲಿಯೇ ಆಸೆಯನ್ನು ಬಿಡುತ್ತಾನೆ. ಕೃಷ್ಣ ನಾನು ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ.

ಅದ್ಯ ದೃಷ್ಟ್ವಾ ಮಯಾ ಕರ್ಣಂ ಶರೈರ್ವಿಶಕಲೀಕೃತಮ್ ।
ಪುರಾ ದೇವಾಸುರೇ ಯುದ್ಧೇ ವೃತ್ರಂ ಬಲಭಿದಾ ಯಥಾ ॥೧೨॥

ಸ್ಮರತಾಂ ತವ ವಾಕ್ಯಾನಿ ಶಮಂ ಪ್ರತಿ ಜನೇಶ್ವರಃ ॥೧೩॥

ಹಿಂದೆ ದೇವಾಸುರಯುದ್ಧದಲ್ಲಿ ವೃತ್ರನನ್ನು ಇಂದ್ರನು ಕ್ಷತವಿಕ್ಷತಗೊಳಿಸಿದಂತೆ ನಾನು ಇಂದು ಕರ್ಣನನ್ನು ಬಾಣಗಳಿಂದ ಚೂರುಚೂರಾಗಿ ಮಾಡುವುದನ್ನು ಕಂಡು, ಅಂದು ಸಂಧಾನಕ್ಕಾಗಿ ನೀನು ನುಡಿದುದೆಲ್ಲವನ್ನೂ ರಾಜಾ ದುರ್ಯೋಧನನು ಸ್ಮರಿಸಿಕೊಳ್ಳಲಿ.

ಅದ್ಯಾಸೌ ಸೌಬಲಃ ಕೃಷ್ಣ ಗ್ಲಹಂ ಜಾನಾತು ವೈ ಶರಾನ್ ।
ದುರೋದರಂ ಚ ಗಾಂಡೀವಂ ಮಂಡಲಂ ಚ ರಥಂ ಮಮ ॥೧೪॥

ಕೃಷ್ಣ ಇಂದು ಶಕುನಿಯು, ನನ್ನ ದ್ಯೂತದಲ್ಲಿ ನನ್ನ ಗಾಂಡೀವವೆ ಜೂಜಾಡುತ್ತದೆ. ಅದಕ್ಕೆ ನನ್ನ ಬಾಣಗಳೇ ಪಣಗಳು. ನನ್ನ ರಥವೇ ಜೂಜಿನ ಕಟ್ಟೆ ಎಂಬುದನ್ನು ತಿಳಿದುಕೊಳ್ಳಲಿ.

ಯೋಽಸೌ ರಣೇ ನರಂ ನಾನ್ಯಂ ಪೃಥಿವ್ಯಾಮಭಿಮನ್ಯತೇ ।
ತಸ್ಯಾದ್ಯ ಸೂತಪುತ್ರಸ್ಯ ಭೂಮಿಃ ಪಾಸ್ಯತಿ ಶೋಣಿತಮ್ ॥೧೫॥

ಕರ್ಣನು ಭೂಮಿಯಲ್ಲಿ ತನಗಿಂತ ಬೇರೊಬ್ಬ ಯೋಧನೇ ಇಲ್ಲ ಎಂದು ದುರಹಂಕಾರ ತಾಳಿದ್ದಾನೆ. ಅಂಥ ಕರ್ಣನ ಮೈಯ ರಕ್ತವನ್ನು ಭೂಮಿ ಪಾನ ಮಾಡಲಿದೆ.

ಮಯಾ ಹಸ್ತವತಾ ಮುಕ್ತಾ ನಾರಾಚಾ ವೈದ್ಯುತತ್ವಿಷಃ ।
ಗಾಂಡೀವಸೃಷ್ಟಾ ದಾಸ್ಯಂತಿ ಕರ್ಣಸ್ಯ ಪರಮಾಂ ಗತಿಮ್ ॥೧೬॥

ನನ್ನ ಹಸ್ತಬಲದಿಂದ ಗಾಂಡೀವದಿಂದ ಹೊರಟ ಮಿಂಚಿನಂತೆ ಹೊಳೆವ ನನ್ನ ಬಾಣಗಳು ಕರ್ಣನಿಗೆ ಪರಲೋಕಗತಿಯನ್ನು ನೀಡುತ್ತವೆ.

ಅದ್ಯ ತಪ್ಸ್ಯತಿ ರಾಧೇಯಃ ಪಾಂಚಾಲೀಂ ಯತ್ತದಾಬ್ರವೀತ್ ।
ಸಭಾಮಧ್ಯೇ ವಚಃ ಕ್ರೂರಂ ಕುತ್ಸಯನ್ ಪಾಂಡವಾನ್ ಪ್ರತಿ ॥೧೭॥

ಅಂದು ದ್ಯೂತಸಭೆಯಲ್ಲಿ ಪಾಂಡವರನ್ನು ಹಳಿಯುತ್ತ ಕರ್ಣನು ದ್ರೌಪದಿಗೆ ಏನು ಕ್ರೂರವಾದ ಮಾತನ್ನು ಆಡಿದನೋ ಅದಕ್ಕೆ ಇಂದು ಅವನು ಪಶ್ಚಾತ್ತಾಪಪಡುವಂತಾಗುವುದು.

ಯೇ ವೈ ಷಂಢತಿಲಾಸ್ತತ್ರ ಭವಿತಾರೋಽದ್ಯ ತೇ ತಿಲಾಃ ।
ಹತೇ ವೈಕರ್ತನೇ ಕರ್ಣೇ ಸೂತಪುತ್ರೇ ದುರಾತ್ಮನಿ ॥೧೮॥

ಆ ಸಭೆಯಲ್ಲಿ ಜೊಳ್ಳು ಎಳ್ಳಿನ ಕಾಳುಗಳೆಂದೆನಿಸಿದವರೇ ಇಂದು ಎಣ್ಣೆ ತುಂಬಿದ ಎಳ್ಳಿನ ಕಾಳುಗಳೆನಿಸುವರು. ಏಕೆಂದರೆ ದುರಾತ್ಮಕರ್ಣನು ಇಂದು ಹತನಾಗುತ್ತಾನೆ.

ಅಹಂ ವಃ ಪಾಂಡುಪುತ್ರೇಭ್ಯಸ್ತ್ರಾಸ್ಯಾಮೀತಿ ಯದಬ್ರವೀತ್ ।
ಧೃತರಾಷ್ಟ್ರಸುತಾನ್ ಕರ್ಣಃ ಶ್ಲಾಘಮಾನೋಽಽತ್ಮನೋ ಗುಣಾನ್ ।
ಅನೃತಂ ತತ್ಕರಿಷ್ಯಂತಿ ಮಾಮಕಾ ನಿಶಿತಾಃ ಶರಾಃ ॥೧೯॥

ನಾನು ನಿಮ್ಮನ್ನು ಪಾಂಡವರಿಂದ ಕಾಪಾಡುವೆನೆಂದು ತನ್ನ ಗುಣಗಳನ್ನು ಹೊಗಳಿಕೊಳ್ಳುತ್ತ ಕರ್ಣನು ಅಂದು ಧೃತರಾಷ್ಟ್ರನ ಮಕ್ಕಳಿಗೆ ಏನು ಭರವಸೆ ಇತ್ತನೋ ಅದನ್ನು ಇಂದು ನನ್ನ ಹರಿತವಾದ ಬಾಣಗಳು ಸುಳ್ಳಾಗಿಸುತ್ತವೆ.

ಹಂತಾಹಂ ಪಾಂಡವಾನ್ ಸರ್ವಾನ್ ಸಪುತ್ರಾನಿತಿ ಯೋಽಬ್ರವೀತ್ ।
ತಮದ್ಯ ಕರ್ಣಂ ಹಂತಾಸ್ಮಿ ಮಿಷತಾಂ ಸರ್ವಧನ್ವಿನಾಮ್ ॥೨೦॥

ಪಾಂಡವರನ್ನು ಅವರ ಮಕ್ಕಳೊಂದಿಗೆ ಎಲ್ಲರನ್ನೂ ನಾನು ಕೊಲ್ಲುವೆನೆಂದು ಯಾವ ಕರ್ಣನು ಅಂದು ಹೇಳಿದ್ದನೋ ಅವನನ್ನು ಇಂದು ನಾನು ಎಲ್ಲ ಬಿಲ್ಲಾಳುಗಳು ನೋಡುತ್ತಿದ್ದಂತೆಯೆ ಕೊಲ್ಲುವೆನು.

ಯಸ್ಯ ವೀರ್ಯೇ ಸಮಾಶ್ವಸ್ಯ ಧಾರ್ತರಾಷ್ಟ್ರೋಽಭ್ಯಮರ್ಷಣಃ ।
ಅವಾಮನ್ಯತ ದುರ್ಬುದ್ಧಿರ್ನಿತ್ಯಮಸ್ಮಾನ್ ದುರಾತ್ಮವಾನ್ ।
ತಮದ್ಯ ಕರ್ಣಂ ರಾಧೇಯಂ ಹಂತಾಸ್ಮಿ ಮಧುಸೂದನ ॥೨೧॥

ಕೃಷ್ಣ ಯಾವ ಕರ್ಣನ ಪರಾಕ್ರಮದಲ್ಲಿ ಭರವಸೆ ಇಟ್ಟುಕೊಂಡು ಸಹನೆ ಇಲ್ಲದವ, ದುರ್ಬುದ್ಧಿ ದುರಾತ್ಮನಾದ ದುರ್ಯೋಧನನು ಸದಾ ನಮ್ಮನ್ನು ಅವಮಾನಿಸುತ್ತಲೇ ಬಂದಿರುವನೋ ಆ ಕರ್ಣನನ್ನು ನಾನು ಇಂದು ಕೊಲ್ಲುವೆನು.

ಅದ್ಯ ಕರ್ಣೇ ಹತೇ ಕೃಷ್ಣ ಧಾರ್ತರಾಷ್ಟ್ರಾಃ ಸರಾಜಕಾಃ ।
ವಿದ್ರವಂತು ದಿಶೋ ಭೀತಾಃ ಸಿಂಹತ್ರಸ್ತಾ ಮೃಗಾ ಇವ ॥೨೨॥

ಕೃಷ್ಣ ಇಂದು ನಾನು ಕರ್ಣನನ್ನು ವಧಿಸಿದಾಗ ಧೃತರಾಷ್ಟ್ರನ ಮಕ್ಕಳು ಭಯಭೀತರಾಗಿ ಸಿಂಹಕ್ಕೆ ಹೆದರಿ ಜಿಂಕೆಗಳು ಓಡುವಂತೆ, ಎಲ್ಲ ರಾಜರೊಂದಿಗೆ ಎಲ್ಲ ದಿಕ್ಕುಗಳಿಗೆ ಓಡಲಿ.

ಅದ್ಯ ದುರ್ಯೋಧನೋ ರಾಜಾ ಆತ್ಮಾನಂ ಚಾನುಶೋಚತಾಮ್ ।
ಹತೇ ಕರ್ಣೇ ಮಯಾ ಸಂಖ್ಯೇ ಸಪುತ್ರೇ ಸಸುಹೃಜ್ಜನೇ ॥೨೩॥

ಇಂದು ನಾನು ರಣರಂಗದಲ್ಲಿ ಕರ್ಣನನ್ನು ಅವನ ಪುತ್ರರೊಂದಿಗೆ ಬಂಧುಗಳೊಂದಿಗೆ ಕೊಂದಾಗ ರಾಜಾ ದುರ್ಯೋಧನನು ತನ್ನ ಬಗ್ಗೆಯೇ ತಾನು ಪರಿತಪಿಸಲಿ.

ಅದ್ಯ ಕರ್ಣಂ ಹತಂ ದೃಷ್ಟ್ವಾ ಧಾರ್ತರಾಷ್ಟ್ರೋತ್ಯಮರ್ಷಣಃ ।
ಜಾನಾತು ಮಾಂ ರಣೇ ಕೃಷ್ಣ ಪ್ರವರಂ ಸರ್ವಧನ್ವಿನಾಮ್ ॥೨೪॥

ಅತಿ ಅಸಹನೆಯಿಂದ ಕೂಡಿರುವ ದುರ್ಯೋಧನನು, ಇಂದು ನಾನು ಕರ್ಣನನ್ನು ಕೊಂದಾಗ, ನಾನು ಎಲ್ಲ ಬಿಲ್ಗಾರರಿಗಿಂತ ಹೇಗೆ ಶ್ರೇಷ್ಠನೆಂಬುದನ್ನು ತಿಳಿದುಕೊಳ್ಳಲಿ.

ಅದ್ಯ ರಾಜ್ಯೇ ಕರಿಷ್ಯಾಮಿ ಧೃತರಾಷ್ಟ್ರಂ ಜನೇಶ್ವರಮ್ ।
ಸಪುತ್ರಪೌತ್ರಂ ಸಾಮಾತ್ಯಂ ಸಭೃತ್ಯಂ ಚ ನಿರಾಶಿಷಮ್ ॥೨೫॥

ನಾನು ಇಂದು ಪುತ್ರ ಪೌತ್ರ ಮಿತ್ರ ಭೃತ್ಯರಿಂದ ಯುಕ್ತನಾದ ರಾಜಾ ಧೃತರಾಷ್ಟ್ರನನ್ನು ರಾಜ್ಯದಲ್ಲಿ ನಿರಾಶೆ ಹೊಂದುವಂತೆ ಮಾಡುವೆನು.

ಅದ್ಯಾಹಮನೃಣಃ ಕೃಷ್ಣ ಭವಿಷ್ಯಾಮಿ ಧನುರ್ಭೃತಾಮ್ ।
ಕ್ರೋಧಸ್ಯ ಚ ಕುರೂಣಾಂ ಚ ಶರಾಣಾಂ ಗಾಂಡಿವಸ್ಯ ಚ ॥೨೬॥

ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಕರ್ಣನನ್ನು ಪರಲೋಕಕ್ಕೆ ಕಳಿಸುವುದರಿಂದ ಧನುರ್ಧಾರಿಗಳ ಋಣದಿಂದ ಮುಕ್ತನಾಗುತ್ತೇನೆ. ನನ್ನಲ್ಲಿ ಕ್ರೋಧ ಉಂಟುಮಾಡಿದ ಕೌರವರನ್ನು ಕ್ರೋಧದಿಂದ ಯಮಸದನಕ್ಕೆ ಕಳಿಸುವುದರಿಂದ ಅವರ ಋಣವೂ ಕ್ರೋಧದ ಋಣವೂ ಪರಿಹಾರವಾಗುತ್ತದೆ. ಬಾಣಪ್ರಯೋಗದಲ್ಲಿ ಬಲುಉಪಕಾರ ಮಾಡಿದ ಗಾಂಡೀವದಿಂದಲೆ ಕರ್ಣನಾಶಕವಾದ ಬಾಣವನ್ನೆಸೆಯುವುದರಿಂದ ಗಾಂಡೀವದ ಮತ್ತು ಬಾಣಗಳ ಋಣಪರಿಹಾರ. ಹೀಗೆ ನಾನು, ಕೃಷ್ಣ ನಿನ್ನ ಅನುಗ್ರಹದಿಂದ ಅನೃಣನೆನಿಸುತ್ತೇನೆ.

ಅದ್ಯ ದುಃಖಮಹಂ ಮೋಕ್ಷ್ಯೇ ತ್ರಯೋದಶಸಮಾರ್ಜಿತಮ್ ।
ಹತ್ವಾ ಕರ್ಣಂ ರಣೇ ಕೃಷ್ಣ ಶಂಬರಂ ಮಘವಾನಿವ ॥೨೭॥

ಹದಿಮೂರು ವರ್ಷಕಾಲ ನಮ್ಮೊಳಗೇ ನಾವು ಕೂಡಿಟ್ಟಿರುವ ಎಲ್ಲ ದುಃಖವನ್ನು ಹಿಂದೆ ಶಂಬರಾಸುರನನ್ನು ದೇವೇಂದ್ರ ಕೊಂದಂತೆ, ಇಂದು ಕರ್ಣನನ್ನು ನಾನು ಕೊಲ್ಲುವುದರ ಮೂಲಕ, ಬಿಡುಗಡೆಗೊಳಿಸುತ್ತೇನೆ.

ಅದ್ಯ ಕರ್ಣೇ ಹತೇ ಯುದ್ಧೇ ಸೋಮಕಾನಾಂ ಮಹಾರಥಾಃ ।
ಕೃತಂ ಕಾರ್ಯಂ ಚ ಮನ್ಯಂತಾಂ ಮಿತ್ರಕಾರ್ಯೇಷ್ವವೋ ಯುಧಿ ।೨೮।

ಇಂದು ರಣದಲ್ಲಿ ಕರ್ಣ ಹತನಾದಾಗ, ಮಿತ್ರಕಾರ್ಯವನ್ನು ಬಯಸಿ ಬಂದ ಪಾಂಚಾಲಮಹಾರಥರು ಆ ಕಾರ್ಯ ಕೈಗೂಡಿತೆಂದೇ ತಿಳಿಯಲಿ.

ನ ಜಾನೇ ಚ ಕಥಂ ಪ್ರೀತಿಃ ಶೈನೇಯಸ್ಯಾದ್ಯ ಮಾಧವ ।
ಭವಿಷ್ಯತಿ ಹತೇ ಕರ್ಣೇ ಮಯಿ ಚಾಪಿ ಜಯಾಧಿಕೇ ॥೨೯॥

ಕೃಷ್ಣ ನಾನಿಂದು ಕರ್ಣನನ್ನು ಕೊಂದು ವಿಜಯದಿಂದ ಅಧಿಕಕೀರ್ತಿಯನ್ನು ಪಡೆದುಕೊಂಡಾಗ ಸಾತ್ಯಕಿಗೆ ಎಂಥ ಸಂತೋಷವಾದೀತೆಂಬುದನ್ನು ನಾನು ಊಹಿಸಲಾರೆ.

ಅಹಂ ಹತ್ವಾ ರಣೇ ಕರ್ಣಂ ಪುತ್ರಂ ಚಾಸ್ಯ ಮಹಾರಥಮ್ ।
ಪ್ರೀತಿಂ ದಾಸ್ಯಾಮಿ ಭೀಮಸ್ಯ ಯಮಯೋಃ ಸಾತ್ಯಕೇರಪಿ ॥೩೦॥

ನಾನು ರಣದಲ್ಲಿ ಕರ್ಣನನ್ನು ಕೊಂದು ಅವನ ಪುತ್ರನಾದ ಮಹಾರಥ ವೃಷಸೇನನನ್ನೂ ಕೊಂದು ಭೀಮನಿಗೂ ನಕುಲ-ಸಹದೇವರಿಗೂ ಸಾತ್ಯಕಿಗೂ ಸಂತೋಷವನ್ನು ನೀಡುತ್ತೇನೆ.

ಧೃಷ್ಟದ್ಯುಮ್ನಶಿಖಂಡಿಭ್ಯಾಂ ಪಾಂಚಾಲಾನಾಂ ಚ ಮಾಧವ ।
ಅದ್ಯಾನೃಣ್ಯಂ ಗಮಿಷ್ಯಾಮಿ ಹತ್ವಾ ಕರ್ಣಂ ಮಹಾರಣೇ ॥೩೧॥

ಧೃಷ್ಟದ್ಯುಮ್ನ ಮತ್ತು ಶಿಖಂಡಿಗಳಿಗೂ ಪಾಂಚಾಲವೀರರಿಗೂ ಇಂದು ನಾನು ಕರ್ಣನನ್ನು ಮಹಾರಣದಲ್ಲಿ ಕೊಂದು ಋಣ ಪರಿಹಾರ ಮಾಡಿಕೊಳ್ಳುತ್ತೇನೆ.

ಅದ್ಯ ಪಶ್ಯಂತು ಸಂಗ್ರಾಮೇ ಧನಂಜಯಮಮರ್ಷಣಮ್ ।
ಯುಧ್ಯಂತಂ ಕೌರವಾನ್ ಸಂಖ್ಯೇ ಪಾತಯಂತಂ ಚ ಸೂತಜಮ್ ।
ಭವತ್ಸಕಾಶೇ ವಕ್ಷ್ಯೇ ಚ ಪುನರೇವಾತ್ಮಸಂಸ್ತವಮ್ ॥೩೨॥

ನೀವೆಲ್ಲರೂ ಸಂಗ್ರಾಮದಲ್ಲಿ ಸಹನೆ ಇಲ್ಲದ ಈ ಅರ್ಜುನ, ಕೌರವರೊಡನೆ ಯುದ್ಧ ಮಾಡುವುದನ್ನೂ ಕರ್ಣನನ್ನು ವಧಿಸುವುದನ್ನೂ ಪ್ರತ್ಯಕ್ಷ ನೋಡಿರಿ. ಬಳಿಕ ನಿಮ್ಮ ಮುಂದೆ ಪುನಃ ನನ್ನ ಆತ್ಮಸ್ತುತಿ ಮಾಡಿಕೊಳ್ಳುವೆನು.

ಧನುರ್ವೇದೇ ಮತ್ಸಮೋ ನಾಸ್ತಿ ಲೋಕೇ
ಪರಾಕ್ರಮೇ ವಾ ಮಮ ಕೋಽಸ್ತಿ ತುಲ್ಯಃ ।
ಕೋ ವಾಪ್ಯನ್ಯೋ ಮತ್ಸಮೋಽಸ್ತಿ ಕ್ಷಮಾಯಾಂ
ತಥಾ ಕ್ರೋಧೇ ಸದೃಶೋಽನ್ಯೋ ನ ಮೇಽಸ್ತಿ ॥೩೩॥

ಧನುರ್ವಿದ್ಯೆಯಲ್ಲಿ ಲೋಕದಲ್ಲಿ ನನಗೆ ಸಮಾನನಿಲ್ಲ. ಪರಾಕ್ರಮದಲ್ಲಾಗಲಿ ನನಗೆ ಯಾರು ತುಲ್ಯ? ಕ್ಷಮೆಯಲ್ಲಿ ನನಗೆ ಸಮನು ಬೇರೆ ಯಾರು? ಹಾಗೇ ಕ್ರೋಧದಲ್ಲಿಯೂ ಸದೃಶನು ನನಗಿಂತ ಬೇರೆ ಇಲ್ಲ.

ಅಹಂ ಧನುಷ್ಮಾನಸುರಾನ್ ಸುರಾಂಶ್ಚ
ಸರ್ವಾಣಿ ಭೂತಾನಿ ಚ ಸಂಗತಾನಿ ।
ಸ್ವಬಾಹುವೀರ್ಯಾದ್ ಗಮಯೇ ಪರಾಭವಂ
ಮತ್ಪೌರುಷಂ ವಿದ್ಧಿ ಪರಂ ಪರೇಭ್ಯಃ ॥೩೪॥

ಬಿಲ್ಲಾರನಾದ ನಾನು ಅಸುರರನ್ನು ಸುರರನ್ನು ಎಲ್ಲ ಯೋಧರನ್ನೂ ಒಟ್ಟಾಗಿ ಬಂದರೂ ನನ್ನ ಬಾಹುಬಲದಿಂದ ಪರಾಭವಗೊಳಿಸಬಲ್ಲೆ. ಪರರ ಎಲ್ಲ ಪೌರುಷಗಳಿಗಿಂತಲೂ ಮೇಲು ನನ್ನ ಪೌರುಷ.

ಶರಾರ್ಚಿಷಾ ಗಾಂಡಿವೇನಾಹಮೇಕಃ
ಸರ್ವಾನ್ ಕುರೂನ್ ಬಾಹ್ಲಿಕಾಂಶ್ಚಾಭಿಪತ್ಯ ।
ಹಿಮಾತ್ಯಯೇ ಕಕ್ಷಗತೋ ಯಥಾಗ್ನಿ-
ಸ್ತಥಾ ದಹೇಯಂ ಸಗಣಾನ್ ಪ್ರಸಹ್ಯ ॥೩೫॥

ಬಾಣದ ಜ್ವಾಲೆಯಿಂದ ಕೂಡಿದ ಗಾಂಡೀವ ಒಂದರಿಂದಲೆ ನಾನೊಬ್ಬನೇ ಕುರುಗಳನ್ನೂ ಬಾಹ್ಲಿಕರನ್ನೂ ಆಕ್ರಮಿಸಿ, ಬೇಸಿಗೆಯಲ್ಲಿ ಹುಲ್ಲಿನ ಪೊದೆಯಲ್ಲಿ ಬಿದ್ದ ಬೆಂಕಿಯಂತೆ ಪರಿವಾರ ಸಮೇತವಾಗಿ ಎಲ್ಲರನ್ನೂ ಬಲಾತ್ಕಾರವಾಗಿ ಸುಡಬಲ್ಲೆ.

ಪಾಣೌ ಪೃಷತ್ಕಾ ಲಿಖಿತಾ ಮಮೈತೇ
ಧನುಶ್ಚ ಸರ್ವೇ ನಿಹಿತಂ ಸಬಾಣಮ್ ।
ಪಾದೌ ಚ ಮೇ ಸರಥೌ ಸಧ್ವಜೌ ಚ
ನ ಮಾದೃಶಂ ಯುದ್ಧಗತಂ ಜಯಂತಿ ॥೩೬॥

ನನ್ನ ಬಲ ಅಂಗೈಯಲ್ಲಿ ಬಾಣದ ಚಿಹ್ನೆಗಳು ಲಿಖಿತವಾಗಿವೆ. ಎಡ ಅಂಗೈಯಲ್ಲಿಯೂ ಧನುರ್ಬಾಣಗಳ ಚಿಹ್ನೆ ಇದೆ. ಎರಡೂ ಪಾದಗಳಲ್ಲಿ ರಥ ಮತ್ತು ಧ್ವಜಗಳ ಚಿಹ್ನೆಗಳಿವೆ. ನನ್ನಂಥವನು ಯುದ್ಧಕ್ಕೆ ನಿಂತರೆ ಅವನನ್ನು ಯಾರೂ ಗೆಲ್ಲಲಾರರು.'

ಇತ್ಯೇವಮುಕ್ತ್ವಾ ಽಚ್ಯುತಮೇಕವೀರಃ
ಕ್ಷಿಪ್ರಂ ರಿಪುಕ್ಷಿತ್ ಕ್ಷತಜೋಪಮಾಕ್ಷಃ ।
ಭೀಮಂ ಮುಮುಕ್ಷುಃ ಸಮರೇ ಪ್ರಯಾತಃ
ಕರ್ಣಸ್ಯ ಕಾಯಾಚ್ಚ ಶಿರೋ ಜಿಹೀರ್ಷುಃ ॥೩೭॥

ಹೀಗೆ ಕೃಷ್ಣನಿಗೆ ಹೇಳಿ ಅಸದೃಶವೀರನಾದ ಶತ್ರುನಾಶಕನಾದ ರಕ್ತದಂತೆ ಕೆಂಪಾದ ಕಣ್ಣುಳ್ಳ ಅರ್ಜುನನು ಭೀಮನಿಗೆ ಯುದ್ಧದಿಂದ ಸ್ವಲ್ಪ ಬಿಡುವು ನೀಡುವುದಕ್ಕೂ ಕರ್ಣನ ಮೈಯಿಂದ ತಲೆಯನ್ನು ತೆಗೆಯುವುದಕ್ಕೂ ಬಯಸಿ ಸಮರಕ್ಕೆ ತೆರಳಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕೃಷ್ಣಾರ್ಜುನಸಂವಾದೇ ಅರ್ಜುನಸತ್ತ್ವವಚನಂ ನಾಮ
ಏಕಸಪ್ತತಿತಮೋ ಽಧ್ಯಾಯಃ ॥೭೧॥

❖

ಮಹಾಭಾರತತಾತ್ಪರ್ಯನಿರ್ಣಯ

ನಿವಾರ್ಯ ಕರ್ಣಂ ಚ ಶರೈರಮುಷ್ಯ
ಸೂನೋಃ ಸುಷೇಣಸ್ಯ ಶಿರಶ್ಚಕರ್ತ ।
ಪಪಾತ ಭೂಮೌ ಸ ಪಿತುಃ ಸಮೀಪೇ
ಯಥಾ ಹತಃ ಸತ್ಯಸೇನೋಮುನೈವ ।
ಯಥೈವ ಕರ್ಣಾವರಜೌ ಪುರೈವ
ನಿಶಾಯುದ್ಧೇ ಕರ್ಣಪುರಃ ಪ್ರಪಾತಿತೌ ॥ ೮೦ ॥

ಭೀಮ, ಕರ್ಣನನ್ನು ಬಾಣಗಳಿಂದ ತಡೆದು ಅವನ ಮಗನಾದ ಸುಷೇಣನ ಶಿರವನ್ನು ಕತ್ತರಿಸಿದ. ಹಿಂದೆ ಭೀಮನಿಂದಲೆ ಹತನಾದ ಸತ್ಯಸೇನ ಹೇಗೆ ಕರ್ಣನ ಬಳಿಯಲ್ಲಿಯೆ ಬಿದ್ದನೋ ಹಿಂದೆ ರಾತ್ರಿ ಯುದ್ಧದಲ್ಲಿ ಭೀಮನಿಂದಲೆ ಕರ್ಣನ ಇಬ್ಬರು ತಮ್ಮಂದಿರು ಕರ್ಣನ ಎದುರಿಗೇ ನೆಲದಲ್ಲಿ ಹೇಗೆ ಬೀಳಿಸಲ್ಪಟ್ಟರೋ ಹಾಗೇ ಈ ಸುಷೇಣನೂ ತಂದೆಯ ಬಳಿಯಲ್ಲಿಯೆ ನೆಲದಲ್ಲಿ ಬಿದ್ದ.

❖

ಎಪ್ಪತ್ತೆರಡನೆಯ ಅಧ್ಯಾಯ

ಭೀಮನಿಂದ ಕರ್ಣಪುತ್ರ ಸುಷೇಣನ ವಧ. ಉತ್ತಮೌಜ ಕೃಪನನ್ನು ವಿರಥನನ್ನಾಗಿ ಮಾಡಿದ. ಅಶ್ವತ್ಥಾಮ ಕೃಪನನ್ನು ಕಾಪಾಡಿದ.

ಧೃತರಾಷ್ಟ್ರಃ

ಸಮಾಗಮೇ ಪಾಂಡವಸೃಂಜಯಾನಾಂ
ಮಹಾಭಯೇ ಮಾಮಕಾನಾಮಗಾಧೇ ।
ಧನಂಜಯೇ ತಾತ ರಣಾಯ ಯಾತೇ
ಬಭೂವ ತದ್ ಯುದ್ಧಮಥೋ ನು ಕೀದೃಕ್ ॥೧॥

ಧೃತರಾಷ್ಟ್ರ ನುಡಿದ— ಸಂಜಯ, ಪಾಂಡವ ಸೃಂಜಯರಿಗೂ ನಮ್ಮವರಿಗೂ ಅಗಾಧವಾದ ಮಹಾಭಯಂಕರ ಯುದ್ಧ ನಡೆಯುತ್ತಿದ್ದಾಗ ಧನಂಜಯನು ರಣಕ್ಕೆ ಬಂದಿದ್ದಾನೆ, ಆಗ ಆ ಯುದ್ಧ ಯಾವ ರೀತಿ ನಡೆಯಿತು?

ಸಂಜಯಃ

ತೇಷಾಮನೀಕಾನಿ ಬೃಹದ್‌ಧ್ವಜಾನಿ
ರಣೇ ಸಮೃದ್ಧಾನಿ ಸಮಾಗತಾನಿ ।
ಭೇರೀನಿನಾದೈರ್ಮುಖರಾಣ್ಯಗರ್ಜನ್
ಮೇಘಾ ಯಥಾ ಪ್ರಾವೃಷಿ ತೋಯಪೂರ್ಣಾಃ ॥೨॥

ಸಂಜಯನು ನುಡಿದ— ದೊಡ್ಡ ಧ್ವಜಯುಕ್ತವಾದ ಬಲಸಮೃದ್ಧವಾದ ಅವರ ಸೈನ್ಯಗಳು ರಣದಲ್ಲಿ ಪರಸ್ಪರ ಇದಿರಾದಾಗ ಭೇರೀನಾದದಿಂದ ಶಬ್ದಮಾಡುತ್ತ ಮಳೆಗಾಲದಲ್ಲಿ ನೀರು ತುಂಬಿದ ಮೋಡಗಳಂತೆ ಗರ್ಜಿಸಿದುವು.

ಮಹಾಗಜಾಭ್ರಸ್ರುತಶೋಣಿತೌಘಂ
ವಾದಿತ್ರನೇಮೀತಳಶಬ್ದವಚ್ಚ ।
ಹಿರಣ್ಮಚಿತ್ರಾಯುಧವೈದ್ಯುತಂ ಚ
ಶರಾಸಿನಾರಾಚಮಹಾಸ್ತ್ರಧಾರಮ್ ॥೩॥

ಆ ಯುದ್ಧ ಹೇಗಿತ್ತೆಂದರೆ, ಮಹಾಗಜಗಳೆಂಬ ಮೋಡಗಳಿಂದ ನೆತ್ತರಿನ ಮಳೆ ಸುರಿದಂತಿತ್ತು. ರಣವಾದ್ಯ ರಥಚಕ್ರ ಧನುಷ್ಟಂಕಾರಗಳೆಂಬ ಗುಡುಗುಗಳು ಕೇಳಿಬರುತ್ತಿದ್ದುವು. ಬಂಗಾರದ ಸುಂದರ ಆಯುಧಗಳ ಮಿಂಚು ಹೊಳೆಯುತ್ತಿತ್ತು. ಶರ ಅಸಿ ನಾರಾಚ ಮುಂತಾದ ಮಹಾ ಅಸ್ತ್ರಗಳ ಜಲಧಾರೆ ಸುರಿಯುತ್ತಿತ್ತು.

ತದ್ಭೀಮವೇಗಂ ರುಧಿರೌಘವಾಹಿ
ಖಡ್ಗಾಕುಲಂ ಕ್ಷತ್ರಿಯಜೀವವಾಹಿ ।
ಅನಾರ್ತವಂ ಕ್ರೂರಮನಿಷ್ಟವರ್ಷಂ
ಬಭೂವ ತತ್ಸಂಹರಣಂ ಪ್ರಜಾನಾಮ್ ॥೪॥

ಅಕಾಲಿಕವಾದ ಕ್ರೂರವಾದ ಅನಿಷ್ಟವಾದ ಮಳೆ ಇದು ಭಯಂಕರವೇಗ ಉಳ್ಳದ್ದು ನೆತ್ತರಿನ ಹೊಳೆಯನ್ನು ಹರಿಸಿತು. ಖಡ್ಗಗಳಿಂದ ತುಂಬಿದ್ದು ಕ್ಷತ್ರಿಯ ವೀರರ ಜೀವಗಳನ್ನು ಕೊಚ್ಚಿಕೊಂಡು ಹೋಯಿತು. ಕ್ಷತ್ರಿಯವೀರರೆಲ್ಲರ ಹತ್ಯಾಕಾಂಡ ರೂಪವಾಯಿತು.

ಏಕಂ ರಥಂ ಸಂಪರಿವಾರ್ಯ ಮೃತ್ಯುಂ
ನಯನ್ತ್ಯನೇಕೇ ಚ ರಥಾಃ ಸಮೇತಾಃ ।
ಏಕಸ್ತಥೈಕಂ ರಥಿನಂ ರಥಾಗ್ರ್ಯಂ-
ಸ್ತಥಾ ರಥಶ್ಚಾಪಿ ರಥಾನನೇಕಾನ್ ॥೫॥

ಒಬ್ಬ ರಥಿಕನನ್ನು ಅನೇಕ ರಥಿಕರು ಸುತ್ತುವರಿದು ಅವನನ್ನು ಮೃತ್ಯುವಿನ ಬಳಿಗೆ ಒಯ್ದರು. ಒಬ್ಬ ರಥಿಕನು ಒಬ್ಬ ರಥಿಕನನ್ನು ಹಾಗೇ ಒಬ್ಬ ರಥಿಕನು ಅನೇಕ ಶ್ರೇಷ್ಠರಥಿಕರನ್ನು ಯಮಾಲಯಕ್ಕೆ ಕಳಿಸಿದರು.

ರಥಂ ಸಸೂತಂ ಸಹಯಂ ಚ ಕಂಚಿತ್
ಕಶ್ಚಿದ್ ರಥೀ ಮೃತ್ಯುವಶಂ ನಿನಾಯ ।
ನಿನಾಯ ಚಾಪ್ಯೇಕಗಜೇನ ಕಶ್ಚಿದ್
ರಥಾನ್ ಬಹೂನ್ ಮೃತ್ಯುವಶೇ ತಥಾಶ್ವಾನ್ ॥೬॥

ರಥಾನ್ ಸೂತಾನ್ ಸಹಯಾನ್ ಗಜಾಂಶ್ಚ
ಸರ್ವಾನರೀನ್ ಮೃತ್ಯುವಶಂ ಶರೌಘೈಃ ।
ನಿನ್ಯೇ ಹಯಾಂಶ್ಚೈವ ತಥಾ ಸಸಾದೀನ್
ಪದಾತಿಸಂಘಾಂಶ್ಚ ತಥೈವ ಪಾರ್ಥಃ ॥೭॥

ಒಬ್ಬ ರಥಿಕನು ಇನ್ನೊಬ್ಬ ರಥಿಕನನ್ನು ಸಾರಥಿ ಅಶ್ವಗಳ ಸಮೇತವಾಗಿ ಮೃತ್ಯುವಶಕ್ಕೆ ಕಳಿಸಿದ. ಒಬ್ಬ ಗಜಾರೋಹಿಯು ಒಂದು ಗಜದಿಂದ ಬಹು ಸಾರಥಿಗಳನ್ನು ಅಶ್ವಗಳನ್ನು ಮೃತ್ಯುವಶಕ್ಕೆ ಕಳಿಸಿದ. ಆದರೆ ಪಾರ್ಥನೊಬ್ಬನೇ ರಥ ಸಾರಥಿ ಅಶ್ವ ಗಜ ಗಜಸೈನಿಕರನ್ನು ಅಶ್ವಾರೋಹಿಸಮೇತ ಅಶ್ವಗಳನ್ನು ಪದಾತಿ ಸಮೂಹಗಳನ್ನು ಎಲ್ಲ ಶತ್ರುಗಳನ್ನೂ ಬಾಣಪ್ರವಾಹಗಳಿಂದ ಮೃತ್ಯುವಶಕ್ಕೆ ಕಳಿಸಿದ.

ಕೃಪಃ ಶಿಖಂಡೀ ಚ ರಣೇ ಸಮೇತೌ
ದುರ್ಯೋಧನಂ ಸಾತ್ಯಕಿರಭ್ಯಗಚ್ಛತ್ ।
ಶ್ರುತಶ್ರವಾ ದ್ರೋಣಸುತೇನ ಸಾರ್ಧಂ
ಯುಧಾಮನ್ಯುಶ್ಚಿತ್ರಸೇನೇನ ಚಾಪಿ ॥೮॥

ಕೃಪನೂ ಶಿಖಂಡಿಯೂ ರಣದಲ್ಲಿ ಇದಿರಾದರು. ದುರ್ಯೋಧನನನ್ನು ಸಾತ್ಯಕಿ

ಇದಿರಿಸಿದ. ಶ್ರುತಶ್ರವನು ಅಶ್ವತ್ಥಾಮನೊಡನೆ ಮತ್ತು ಯುಧಾಮನ್ಯು ಚಿತ್ರಸೇನನೊಡನೆ ರಣಕ್ಕೆ ನಿಂತರು.

ಕರ್ಣಸ್ಯ ಪುತ್ರಂ ತು ರಥೀ ಸುಷೇಣಂ
ಸಮಾಗತಃ ಸೃಂಜಯಶ್ಚೋತ್ತಮೌಜಾಃ ।
ಗಾಂಧಾರರಾಜಂ ಸಹದೇವಃ ಕ್ಷುಧಾರ್ತೋ
ಮಹರ್ಷಭಂ ಸಿಂಹ ಇವಾಭ್ಯಧಾವತ್ ॥೯॥

ಕರ್ಣಪುತ್ರನಾದ ಸುಷೇಣನನ್ನು ಸೃಂಜಯರ ಕಡೆಯ ಉತ್ತಮೌಜನು ರಣದಲ್ಲಿ ಇದಿರಿಸಿದನು. ಹಸಿದ ಸಿಂಹವು ದೊಡ್ಡ ಎತ್ತನ್ನು ಆಕ್ರಮಿಸುವಂತೆ ಸಹದೇವನು ಶಕುನಿಯನ್ನು ಆಕ್ರಮಿಸಿದ.

ಶತಾನೀಕೋ ನಾಕುಲಿಃ ಕರ್ಣಪುತ್ರಂ
ಯುವಾ ಯುವಾನಂ ವೃಷಸೇನಂ ಶರೌಘೈಃ ।
ಸಮಾರ್ದಯತ್ ಕರ್ಣಸುತಶ್ಚ ವೀರಃ
ಪಾಂಚಾಲೇಯಂ ಶರವರ್ಷೈರನೇಕೈಃ ॥೧೦॥

ಯುವಕನಾದ ನಕುಲಪುತ್ರ ಶತಾನೀಕನು ಯುವಕನಾದ ಕರ್ಣಪುತ್ರ ವೃಷಸೇನನನ್ನು ಬಾಣಪ್ರವಾಹಗಳಿಂದ ಪೀಡಿಸಿದ. ವೀರ ಕರ್ಣಪುತ್ರನೂ ಪಾಂಚಾಲೀ ನಕುಲರ ಪುತ್ರನಾದ ಆ ಶತಾನೀಕನನ್ನು ಅನೇಕ ಬಾಣವೃಷ್ಟಿಗಳಿಂದ ಪೀಡಿಸಿದ.

ರಥರ್ಷಭಃ ಕೃತವರ್ಮಾಣಮಾರ್ಚ್ಛ-
ನ್ಮಾದ್ರೀಪುತ್ರೋ ನಕುಲಶ್ಚಿತ್ರಯೋಧೀ ।
ಪಾಂಚಾಲಾನಾಮಧಿಪೋ ಯಾಜ್ಞಸೇನಿಃ
ಸೇನಾಪತಿಂ ಕರ್ಣಮಾರ್ಚ್ಛತ್ ಸಸೈನ್ಯಮ್ ॥೧೧॥

ಸುಂದರವಾಗಿ ಯುದ್ಧಮಾಡುವ ಶ್ರೇಷ್ಠರಥಿಕನಾದ ಮಾದ್ರೀಪುತ್ರ ನಕುಲನು ಕೃತವರ್ಮನನ್ನು ಇದಿರಿಸಿದ. ಪಾಂಚಾಲ ಸೇನಾಧಿಪತಿಯಾದ ಧೃಷ್ಟದ್ಯುಮ್ನನು ಕೌರವಸೇನಾಧಿಪತಿಯಾದ ಕರ್ಣನನ್ನೂ ಅವನ ಸೈನ್ಯವನ್ನೂ ಇದಿರಿಸಿದ.

ದುಃಶಾಸನೋ ಭಾರತ ಭಾರತೀ ಚ
ಸಂಶಪ್ತಕಾನಾಂ ಪೃತನಾ ಸಮೃದ್ಧಾ ।
ಭೀಮಂ ರಣೇ ಶಸ್ತ್ರಭೃತಾಂ ವರಿಷ್ಠಂ
ತದಾ ಸಮಾರ್ಚ್ಛತ್ತಮಸಹ್ಯವೇಗಮ್ ॥೧೨॥

ರಾಜನೆ, ದುಃಶಾಸನನೂ ಸಮೃದ್ಧವಾದ ಕೌರವಸೈನ್ಯವೂ ಸಂಶಪ್ತಕ ಸೈನ್ಯವೂ ಸೇರಿ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಸಹಿಸಲಾಗದ ವೇಗದವನಾದ ಒಬ್ಬ ಭೀಮನನ್ನು ಆಗ ರಣದಲ್ಲಿ ಇದಿರಿಸಿದರು.

ಕರ್ಣಾತ್ಮಜಂ ತತ್ರ ಜಘಾನ ಶೂರ-
ಸ್ತನುಚ್ಛಿದಾ ಸೋತ್ತಮೌಜಾಃ ಪ್ರಸಹ್ಯ ।
ತಸ್ಯೋತ್ತಮಾಂಗಂ ನಿಪಪಾತ ಭೂಮೌ
ನಿನಾದಯದ್ ಗಾಂ ನಿನದೇನ ಖಂ ಚ ॥೧೩॥

ಉತ್ತಮೌಜನಿಂದ ಯುಕ್ತನಾದ ಆ ಶೂರ ಭೀಮನು ಕರ್ಣಪುತ್ರನಾದ ಸುಷೇಣನನ್ನು ಶರೀರನಾಶಕವಾದ ಬಾಣದಿಂದ ಬಲವಾಗಿ ಹೊಡೆದ. ಅವನ ಶಿರವು ಆರ್ತನಾದದಿಂದ ಭೂಮ್ಯಂತರಿಕ್ಷಗಳಲ್ಲಿ ಪ್ರತಿಧ್ವನಿ ಉಂಟುಮಾಡುತ್ತ ಭೂಮಿಯಲ್ಲಿ ಬಿದ್ದಿತು.

ನಿರ್ಣಯದಲ್ಲಿ ಹೇಳಿದಂತೆ ಸುಷೇಣನನ್ನು ಕೊಂದವನು, ಹಿಂದಿನ ಶ್ಲೋಕದಲ್ಲಿ ಉಕ್ತನಾದ, ಭೀಮ. ಉತ್ತಮೌಜ ಅವನಿಗೆ ಚಕ್ರರಕ್ಷಕನಾಗಿದ್ದ. ಮುದೆ 17ನೇ ಶ್ಲೋಕದಲ್ಲಿ ಇದು ಸ್ಪಷ್ಟವಾಗುತ್ತದೆ.

ಸುಷೇಣಶೀರ್ಷಂ ಪತಿತಂ ಪೃಥಿವ್ಯಾಂ
ವಿಲೋಕ್ಯ ಕರ್ಣೋಽಥ ತದಾರ್ತರೂಪಃ ।
ಕ್ರೋಧಾದ್ಧಯಾಂಸ್ತಸ್ಯ ರಥಂ ಧ್ವಜಂ ಚ
ಬಾಣೈಃ ಸುಘೋರೈರ್ನಿಶಿತೈರ್ನ್ಯಕೃಂತತ್ ॥೧೪॥

ತನ್ನ ಮಗ ಸುಷೇಣನ ತಲೆ ನೆಲದಲ್ಲಿ ಬಿದ್ದಿದ್ದನ್ನು ಕಂಡು ಕರ್ಣನು ದುಃಖಾರ್ತನಾಗಿ ಕ್ರೋಧದಿಂದ ಉತ್ತಮೌಜಸನ ಕುದುರೆಗಳನ್ನೂ ರಥವನ್ನೂ ಧ್ವಜವನ್ನೂ ಹರಿತವಾದ ಘೋರವಾದ ಬಾಣಗಳಿಂದ ಕತ್ತರಿಸಿದ.

ಸ ತೂತ್ತಮೌಜಾ ನಿಶಿತೈಃ ಪೃಷತ್ಕೈ-
ರ್ವಿವ್ಯಾಧ ಖಡ್ಗೇನ ಚ ಭಾಸ್ವರೇಣ ।
ಪಾರ್ಷ್ಣಿಂ ಹಯಾಂಶ್ಚೈವ ಕೃಪಸ್ಯ ಹತ್ವಾ
ಶಿಖಂಡಿವಾಹಂ ಸ ತತೋಽಭ್ಯರೋಹತ್ ॥೧೫॥

ಉತ್ತಮೌಜನು ಕರ್ಣನನ್ನು ಹರಿತವಾದ ಬಾಣಗಳಿಂದ ಹೊಡೆದ ಮತ್ತು ಹೊಳೆಯುವ ಖಡ್ಗದಿಂದ ಕೃಪನ ಪೃಷ್ಠರಕ್ಷಕನನ್ನೂ ಅಶ್ವಗಳನ್ನೂ ವಧಿಸಿ ಶಿಖಂಡಿಯ ರಥವನ್ನೇರಿದ.

ಕೃಪಂ ತು ದೃಷ್ಟ್ವಾ ವಿರಥಂ ರಥಸ್ಥೋ
ನೈಚ್ಛಚ್ಛರೈಸ್ತಾಡಯಿತುಂ ಶಿಖಂಡೀ ।
ತಂ ದ್ರೌಣಿರಾವಾರ್ಯ ರಥಂ ಕೃಪಂ ಸ್ಮ
ಸಮುಜ್ಜಹ್ರೇ ಪಂಕಗತಾಂ ಯಥಾ ಗಾಮ್ ॥೧೬॥

ಕೃಪನು ರಥರಹಿತನಾಗಿದ್ದನ್ನು ಕಂಡು ರಥದಲ್ಲಿದ್ದ ಶಿಖಂಡಿ ಬಾಣಗಳಿಂದ ಹೊಡೆಯಲು ಇಚ್ಛಿಸಲಿಲ್ಲ. ಅವನನ್ನು ಅಶ್ವತ್ಥಾಮನು ತಡೆದು ನಿಲ್ಲಿಸಿ, ಕೆಸರಲ್ಲಿ ಸಿಕ್ಕಿಕೊಂಡ ಹಸುವನ್ನೆತ್ತುವಂತೆ ರಥಿಕನಾದ ಕೃಪನನ್ನು ಕಾಪಾಡಿದನು.

ಹಿರಣ್ಯವರ್ಮಾ ನಿಶಿತೈಃ ಪೃಷತ್ಕೈ-
ಸ್ತವಾತ್ಮಜಾನಾಮನಿಲಾತ್ಮಜೋ ವೈ ।
ಅತಾಪಯತ್ ಸೈನ್ಯಮತೀವ ಭೀಮಃ
ಕಾಲೇ ಶುಚೌ ಮಧ್ಯಗತೋ ಯಥಾರ್ಕಃ ॥೧೭॥

ಬಂಗಾರದ ಕವಚಧರಿಸಿದ ಭೀಮನು ಹರಿತವಾದ ಬಾಣಗಳಿಂದ ನಿನ್ನ ಮಕ್ಕಳ ಸೈನ್ಯವನ್ನು ಆಷಾಢಮಾಸದ ಆಗಸದಲ್ಲಿ ನಡುನೆತ್ತಿಗೆ ಬಂದ ಸೂರ್ಯನಂತೆ ಅತೀವ ತಾಪಗೊಳಿಸಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಸಂಕುಲಯುದ್ಧಂ ನಾಮ ದ್ವಿಸಪ್ತತಿತಮೋಽಧ್ಯಾಯಃ ॥೭೨॥

❖

ಮಹಾಭಾರತತಾತ್ಪರ್ಯನಿರ್ಣಯ

ಭೀಮಸ್ತದಾ ಶತ್ರುಬಲಂ ಸಮಸ್ತಂ
ವಿದ್ರಾವಯಾಮಾಸ ಜಘಾನ ಚಾಜೌ ।
ವೀರಾನ್ ರಣಾಯಾಭಿಮುಖಾನ್ ಸ್ವಯಂತ್ರಾ
ಕುರ್ವಂಶ್ಚ ವಾರ್ತಾ ರಮಮಾಣ ಏವ ॥ ೧೩೯॥

ಭೀಮ ಆಗ ಸಾರಥಿ ವಿಶೋಕನೊಡನೆ ವಿನೋದವಾಗಿ ಮಾತನಾಡುತ್ತ ಆನಂದಿಸುತ್ತಲೆ ಸಮಸ್ತ ಶತ್ರುಸೇನೆಯನ್ನು ಓಡಿಸಿದ. ಯುದ್ಧಕ್ಕೆ ಎದುರಾದ ವೀರರನ್ನು ಕೊಂದ.

❖

ಎಪ್ಪತ್ತಮೂರನೆಯ ಅಧ್ಯಾಯ

ಸಾರಥಿ ವಿಶೋಕನೊಡನೆ ವಿನೋದದ ಮಾತುಗಳನ್ನಾಡುತ್ತ
ಭೀಮನು ಶತ್ರುಸೈನ್ಯವನ್ನು ಓಡಿಸುತ್ತಾನೆ.

ಸಂಜಯಃ

ಅಥ ತ್ವಿದಾನೀಂ ತುಮುಲೇ ವಿಮರ್ದೇ
ದ್ವಿಷದ್ಭಿರೇಕೋ ಬಹುಭಿಃ ಸಮಾವೃತಃ ।
ಮಹಾಭಯೇ ಸಾರಥಿಮಿತ್ಯುವಾಚ
ಭೀಮಶ್ಚಮೂಂ ವಾರಯನ್ ಧಾರ್ತರಾಷ್ಟ್ರೀಮ್ ॥೧॥

ಸಂಜಯ ನುಡಿದ— ಈಗ ಮಹಾಭಯಂಕರವಾಗಿ ಈ ತುಮುಲ ಸಂಗ್ರಾಮದಲ್ಲಿ ಬಹುಶತ್ರುಗಳಿಂದ ಸುತ್ತುವರಿಯಲ್ಪಟ್ಟ ಒಬ್ಬ ಭೀಮನು ಕೌರವಸೈನ್ಯವನ್ನು ತಡೆಯುತ್ತ ಸಾರಥಿಯಾದ ಅಶೋಕನಿಗೆ ನುಡಿದ.

ತ್ವಂ ಸಾರಥೇ ಯಾಹಿ ಜವೇನ ವಾಹೈ-
ರ್ನಯಾಮ್ಯೇತಾನ್ ಧಾರ್ತರಾಷ್ಟ್ರಾನ್ ಯಮಾಯ ॥೨॥

ಸಾರಥಿಯೆ, ನೀನು ಅಶ್ವಗಳಿಂದ ವೇಗವಾಗಿ ರಥವನ್ನು ನಡೆಸು. ಈ ಕೌರವರನ್ನು ಯಮನಿಗೆ ಕಳಿಸುತ್ತೇನೆ.

ಸಂಚೋದಿತೋ ಭೀಮಸೇನೇನ ಚೈವಂ
ಸ ಸಾರಥಿಃ ಪುತ್ರಬಲಂ ತ್ವದೀಯಮ್ ।
ಪ್ರಾಯಾತ್ ತತಃ ಸತ್ವರಮುಗ್ರವೇಗೋ
ಯತೋ ಯತೋ ಭೀಮಸೇನೋಽಭ್ಯಗರ್ಜತ್ ॥೩॥

ಭೀಮಸೇನ ಹೀಗೆ ಹೇಳಿದಾಗ ಉಗ್ರವೇಗವುಳ್ಳ ಸಾರಥಿಯು ಭೀಮನು ಯಾವ ಯಾವ ಕಡೆಗೆ ಗರ್ಜನೆ ಮಾಡಿದನೋ ಆ ಕಡೆಗೆ ನಿನ್ನ ಮಕ್ಕಳ ಸೈನ್ಯದೊಳಕ್ಕೆ ರಥವನ್ನು ವೇಗವಾಗಿ ನಡೆಸಿದ.

ತತೋಽಪರೇ ನಾಗರಥಾಶ್ವಪತ್ತಿಭಿಃ
ಪ್ರತ್ಯುದ್ಯಯುಃ ಕುರವಸ್ತಂ ಸಮಂತಾತ್ ।
ಭೀಮಸ್ಯ ವಾಹಾಗ್ರ್ಯಮುದಾರವೇಗಂ
ಸಮಂತತೋ ಬಾಣಗಣೈರ್ನಿಜಘ್ನುಃ ॥೪॥

ಆಗ ಶತ್ರುಗಳಾದ ಕೌರವರು ಭೀಮನನ್ನು ಎಲ್ಲೆಡೆ ಗಜ ರಥ ಅಶ್ವ ಪದಾತಿ ಸೈನ್ಯಗಳಿಂದ ಇದಿರಿಸಿದರು. ಬಹಳ ವೇಗವುಳ್ಳ ಭೀಮನ ಶ್ರೇಷ್ಠವಾದ ಕುದುರೆಯನ್ನು ಎಲ್ಲೆಡೆ ಬಾಣಸಮೂಹಗಳಿಂದ ಹೊಡೆದರು.

ತತಃ ಶರಾನಾಪತತೋ ಮಹಾತ್ಮಾ
ಚಿಚ್ಛೇದ ಬಾಣೈಸ್ತಪನೀಯಪುಂಖೈಃ ।
ತೇ ವೈ ನಿಪೇತುಸ್ತಪನೀಯಪುಂಖಾ
ದ್ವಿಧಾ ತ್ರಿಧಾ ಭೀಮಶರೈರ್ನಿಕೃತ್ತಾಃ ॥೫॥

ಆಗ ಮಹಾತ್ಮ ಭೀಮಸೇನನು, ಶತ್ರುಗಳ ಬಾಣಗಳು ಬರುತ್ತಿದ್ದಂತೆಯೆ, ಬಂಗಾರದ ಪುಕ್ಕಉಳ್ಳ ಬಾಣಗಳಿಂದ ಕತ್ತರಿಸಿದ. ಬಂಗಾರದ ಪುಕ್ಕಉಳ್ಳ ಆ ಶತ್ರುಗಳ ಬಾಣಗಳು ಭೀಮನ ಬಾಣಗಳಿಂದ ಎರಡಾಗಿ ಮೂರಾಗಿ ಕಡಿದುಬಿದ್ದುವು.

ತತೋ ರಾಜನ್ನಾಗರಥಾಶ್ವಯೂನಾಂ
ಭೀಮಾಹತಾನಾಂ ತವ ರಾಜಮಧ್ಯೇ ।
ಘೋರೋ ನಿನಾದಃ ಪ್ರಬಭೌ ನರೇಂದ್ರ
ವಜ್ರಾಹತಾನಾಮಿವ ಪರ್ವತಾನಾಮ್ ॥೬॥

ರಾಜನೆ, ಆಗ, ನಿನ್ನ ಕಡೆಯ ರಾಜರ ನಡುವೆ ಗಜ ರಥ ಅಶ್ವಾರೋಹಿ ಯುವಕರು ಭೀಮನಿಂದ ಹೊಡೆಸಿಕೊಂಡಾಗ, ವಜ್ರದ ಆಘಾತಕ್ಕೊಳಗಾದ ಪರ್ವತಗಳ ಧ್ವನಿಯಂತೆ ಘೋರವಾದ ಆರ್ತನಾದ ಕೇಳಿಬಂದಿತು.

ತೇ ವಧ್ಯಮಾನಾಶ್ಚ ನರೇಂದ್ರಮುಖ್ಯಾ
ನಿರ್ಭಿನ್ನಾ ವೈ ಭೀಮಸೇನಪ್ರವೇಕೈಃ ।
ಭೀಮಂ ಸಮಂತಾತ್ ಸಮರೇऽಧ್ಯರೋಹನ್
ವೃಕ್ಷಂ ಶಕುಂತಾ ಇವ ಜಾತಪಕ್ಷಾಃ ॥೭॥

ಆ ರಾಜರು ಭೀಮಸೇನನ ಬಾಣಗಳಿಂದ ಹೊಡೆಸಿಕೊಳ್ಳುತ್ತ ಬಹಳ ಗಾಯಗೊಂಡು, ರೆಕ್ಕೆ ಬಲಿತ ಹಕ್ಕಿಗಳು ಮರವನ್ನು ಮುತ್ತುವಂತೆ, ಭೀಮಸೇನನನ್ನು ರಣದಲ್ಲಿ ಎಲ್ಲ ಕಡೆ ಮುತ್ತಿದರು.

ತತೋऽಭಿಯಾತೇ ತವ ಸೈನ್ಯೇ ಸ ಭೀಮಃ
ಪ್ರಾದುಶ್ಚಕ್ರೇ ವೇಗಮನಂತವೇಗಃ ।
ಯಥಾನ್ತಕಾಲೇ ಕ್ಷಪಯನ್ ದಿಧಕ್ಷು-
ರ್ಭೂತಾಂತಕೃತ್ ಕಾಲ ಇವಾತ್ತದಂಡಃ ॥೮॥

ನಿನ್ನ ಸೈನ್ಯ ಹೀಗೆ ಮುತ್ತಿಗೆ ಹಾಕಿದಾಗ ಅನಂತ ವೇಗಶಾಲಿಯಾದ ಭೀಮನು, ಪ್ರಳಯಕಾಲದಲ್ಲಿ ನಾಶಮಾಡಲು ಸುಡಲು ಬಯಸುವ ಕಾಲಯಮನು ದಂಡವನ್ನು ಹಿಡಿಯುವಂತೆ, ತನ್ನ ವೇಗವನ್ನು ವ್ಯಕ್ತಗೊಳಿಸಿದ, ಕೈಗೆ ಎತ್ತಿಕೊಂಡ.

ತಸ್ಯಾತಿವೇಗಸ್ಯ ರಣೇऽತಿವೇಗಂ
ನಾಶಕ್ನುವನ್ ಧಾರಯಿತುಂ ತ್ವದೀಯಾಃ ।
ವ್ಯಾತ್ತಾನನಸ್ಯಾಪತತೋ ಯಥೈವ
ಕಾಲಸ್ಯ ಕಾಲೇ ಹರತಃ ಪ್ರಜಾ ವೈ ॥೯॥

ಅತಿವೇಗಶಾಲಿಯಾದ ಆ ಭೀಮನ ವೇಗವನ್ನು ರಣದಲ್ಲಿ ತಡೆದುಕೊಳ್ಳಲು ನಿನ್ನ ಕಡೆಯವರು ಶಕ್ತರಾಗಲಿಲ್ಲ. ಪ್ರಳಯಕಾಲದಲ್ಲಿ ಎಲ್ಲರನ್ನೂ ಸಂಹರಿಸುವ ಮೃತ್ಯು ಬಾಯ್ತೆರೆದು ವೇಗವಾಗಿ ಬಂದಾಗ ಪ್ರಾಣಿಗಳು ಅದನ್ನು ತಡೆದುಕೊಳ್ಳಲಾರವು ಹೇಗೋ ಹಾಗೆ.

ತತೋ ಬಲಂ ಭಾರತ ಭಾರತಾನಾಂ
ಪ್ರದಹ್ಯಮಾನಂ ಸಮರೇ ಮಹಾತ್ಮನಾ ।
ಭೀತಂ ದಿಶೋಽಕೀರ್ಯತ ಭೀಮನುನ್ನಂ
ಮಹಾನಿಲೇನಾಭ್ರಗಣೋ ಯಥೈವ ॥೧೦॥

ರಾಜನೆ, ಕೌರವರ ಸೈನ್ಯವು ಸಮರದಲ್ಲಿ ಮಹಾತ್ಮಭೀಮನಿಂದ ದಗ್ಧವಾಗುತ್ತ ಮಹಾಬಿರುಗಾಳಿಯಿಂದ ಭಯಂಕರವಾಗಿ ಹೊಡೆಸಿಕೊಂಡ ಮೋಡಸಮೂಹ ಚದುರಿಹೋಗುವಂತೆ, ಭಯಭೀತವಾಗಿ ಎಲ್ಲ ದಿಕ್ಕುಗಳಲ್ಲಿ ಚದುರಿತು.

ತತೋ ಧೀಮಾನ್ ಸಾರಥಿಮಬ್ರವೀದ್ ಬಲೀ
ಸ ಭೀಮಸೇನಃ ಪುನರೇವ ಹೃಷ್ಟಃ ।
ಸೂತಾಭಿಜಾನೀಹಿ ಪರಾನ್ ಸ್ವಕಾನ್ ವಾ
ರಥಾನ್ ಧ್ವಜಾಂಶ್ಚಾಪತತಃ ಸಮೇತಾನ್ ।
ಯುಧ್ಯನ್ನಹಂ ನಾಭಿಜಾನಾಮಿ ಕಿಂಚಿ-
ನ್ಮಾ ಸೈನ್ಯಂ ಸ್ವಂ ಛಾದಯಿಷ್ಯೇ ಪೃಷತ್ಕೈಃ ॥೧೧॥

ಆಗ ಧೀಮಂತ ಬಲಿಷ್ಠ ಹೃಷ್ಟನಾದ ಭೀಮಸೇನನು ಪುನಃ ಸಾರಥಿಗೆ ವಿನೋದಕ್ಕಾಗಿ ನುಡಿದ, ಸಾರಥಿಯೆ, ನನ್ನ ಕಡೆಗೆ ಧಾವಿಸಿ ಬರುವ ರಥಗಳನ್ನೂ ಧ್ವಜಗಳನ್ನೂ ಅವು ಪರಕೀಯವೆ ಸ್ವಕೀಯವೆ ನೋಡು. ಏಕೆಂದರೆ ಯುದ್ಧಮಾಡುವಾಗ ಅದು ಏನೂ ನನ್ನ ಗಮನಕ್ಕೇ ಬರುವುದಿಲ್ಲ. ನಮ್ಮ ಸೈನ್ಯವನ್ನು ನಾನು ಬಾಣಗಳಿಂದ ಮುಚ್ಚುವಂತಾಗಬಾರದು ತಾನೆ?

ಅರೀನ್ ವಿಶೋಕಾಭಿನಿರೀಕ್ಷ್ಯ ಸರ್ವತೋ
ಮನಸ್ತು ಚಿಂತಾ ಪ್ರದುನೋತಿ ಮೇ ಭೃಶಮ್ ।
ರಾಜಾऽऽತುರೋ ನಾಗಮದ್ ಯತ್ಕಿರೀಟೀ
ಬಹೂನಿ ದುಃಖಾನ್ಯಭಿಜಾತೋಸ್ಮಿ ಸೂತ ॥೧೨॥

ವಿಶೋಕ! ಎಲ್ಲ ಕಡೆ ಶತ್ರುಗಳನ್ನು ನೋಡಿ ನನ್ನ ಮನಸ್ಸನ್ನು ಚಿಂತೆಯು ಪೀಡಿಸುತ್ತಿದೆ. ರಾಜಾಯುಧಿಷ್ಠಿರನು ದುಃಖಿತನಾಗಿದ್ದಾನೆ. ಅವನನ್ನು ಕಾಣಲು

ಹೋಗಿರುವ ಅರ್ಜುನನು ಇನ್ನೂ ಹಿಂತಿರುಗಿ ಬಂದಿಲ್ಲ. ನನಗೆ ಬಹಳ ದುಃಖಗಳುಂಟಾಗಿವೆ, ಸಾರಥಿಯೆ!

ಏತದ್ ದುಃಖಂ ಸಾರಥೇ ಧರ್ಮರಾಜೋ
ಯನ್ಮಾಂ ಹಿತ್ವಾ ಯಾತವಾನ್ ಶತ್ರುಮಧ್ಯೇ ।
ನೈನಂ ಜೀವನ್ನಾಪಿ ಜಾನಾಮ್ಯಜೀವನ್
ಬೀಭತ್ಸುಂ ವಾ ತನ್ಮಮಾದ್ಯಾತಿದುಃಖಮ್ ॥೧೩॥

ಸಾರಥಿ, ಧರ್ಮರಾಜನು ನನ್ನನ್ನು ಶತ್ರುಗಳ ಮಧ್ಯದಲ್ಲಿ ಬಿಟ್ಟು ಹೋಗಿದ್ದಾನೆ ಎಂದಮೇಲೆ ಅವನು ಬದುಕಿರುವನೆ ಇಲ್ಲವೆ, ಒಂದನ್ನೂ ನಾನು ಅರಿಯೆ. ಅರ್ಜುನನನ್ನೂ ನಾನು ಕಾಣುತ್ತಿಲ್ಲ. ಅದರಿಂದ ನನಗೆ ಈಗ ಬಹಳ ದುಃಖ ಉಂಟಾಗಿದೆ.

ಸೋಽಹಂ ದ್ವಿಷತ್ಸೈನ್ಯಮುದಗ್ರಕಲ್ಪಂ
ವಿನಾಶಯಿಷ್ಯೇ ಪರಮಪ್ರತೀತಃ ।
ಏತಾನ್ನಿಹತ್ಯಾಜಿಮಧ್ಯೇ ಸಮೇತಾನ್
ಪ್ರೀತೋ ಭವಿಷ್ಯಾಮಿ ಸಹ ತ್ವಯಾದ್ಯ ॥೧೪॥

ಆದರೂ ಯುಧಿಷ್ಠಿರನ ಕ್ಷೇಮವಿಷಯದಲ್ಲಿ ಬಹಳ ವಿಶ್ವಾಸವಿಟ್ಟುಕೊಂಡು ನಾನು ಬಲಿಷ್ಠವಾಗಿರುವಂತೆ ಕಾಣುವ ಈ ಶತ್ರುಸೈನ್ಯವನ್ನು ನಾಶಗೊಳಿಸುತ್ತೇನೆ. ರಣರಂಗದ ನಡುವೆ ಇದಿರಿಸಿ ಬರುವ ಇವರನ್ನು ಸಂಹರಿಸಿ ಈಗಲೆ ನಿನ್ನೊಡನೆ ನಾನು ಸಂತೋಷಪಡುತ್ತೇನೆ.

ಅವೇಕ್ಷಸ್ವ ಮೇ ಇಷುಧೀ ವಿಶೋಕ
ಕಿಯಂತೋ ವಾ ಇಷವೋ ಮೇಽವಶಿಷ್ಟಾಃ ।
ಕೇ ವಾ ಜಿತಾಃ ಕಿಂ ಪ್ರಮಾಣಂ ಚ ತೇಷಾಂ
ಜ್ಞಾತ್ವಾ ವ್ಯಕ್ತಂ ತನ್ಮಮಾಚಕ್ಷ್ವ ಸೂತ ॥೧೫॥

ಕತಿ ವಾ ಸಹಸ್ರಾಣಿ ಕತಿ ವಾ ಶತಾನಿ
ಹ್ಯಾಚಕ್ಷ್ವ ಮೇ ಸಾರಥೇ ಕ್ಷಿಪ್ರಮೇವ ॥೧೬॥

ವಿಶೋಕ, ನನ್ನ ಎರಡೂ ಬತ್ತಳಿಕೆಗಳನ್ನು ನೋಡು. ನನ್ನ ಬಾಣಗಳು ಈಗ

ಎಷ್ಟು ಉಳಿದಿವೆ? ಯಾವ ಯಾವ ರಾಜರು ಪರಾಜಿತರಾಗಿದ್ದಾರೆ? ಅವರ ಸೈನ್ಯ ಪ್ರಮಾಣವೆಷ್ಟು? ಚೆನ್ನಾಗಿ ತಿಳಿದು ನನಗೆ ಹೇಳು. ಎಷ್ಟು ಸಾವಿರ ಅಥವಾ ಎಷ್ಟು ನೂರು ಎಂದು ಬೇಗನೆ ಹೇಳು.

ವಿಶೋಕಃ

ಸರ್ವಂ ವಿದಿತ್ವೈವಮಹಂ ವದಾಮಿ
ತವಾರ್ಥಸಿದ್ಧಿಪ್ರದಮದ್ಯ ವೀರ।
ಕೈಕೇಯಕಾಮ್ಬೋಜಸುರಾಷ್ಟ್ರಬಾಹ್ಲಿಕಾ
ಮ್ಲೇಚ್ಛಾಶ್ಚ ಸುಹ್ಮಾಃ ಪರತಂಕಣಾಶ್ಚ ॥೧೭॥

ಮದ್ರಾಶ್ಚ ವಂಗಾ ಮಗಧಾಃ ಕುಣಿಂದಾ
ಆನರ್ತಕಾವರ್ತಕಾಃ ಪಾರ್ವತೀಯಾಃ।
ಸರ್ವೇ ಗೃಹೀತಪ್ರವರಾಯುಧಾಸ್ತಾ ಂ
ಸಂವೇಷ್ಟ್ಯ ಸಂವೇಷ್ಟ್ಯ ತತೋ ವಿನೇದುಃ ॥೧೮॥

ವಿಶೋಕನು ನುಡಿದ— ವೀರನೆ, ಹೀಗೇ ಎಲ್ಲವನ್ನೂ ತಿಳಿದು ನಾನು ನಿನಗೆ ಕಾರ್ಯಸಿದ್ಧಿಪ್ರದವಾದ ಮಾತನ್ನು ಈಗಲೆ ಹೇಳುತ್ತೇನೆ. ಇಷ್ಟರವರೆಗೆ ಕೈಕೇಯ ಕಾಂಬೋಜ ಸುರಾಷ್ಟ್ರ ಬಾಹ್ಲಿಕ ಮ್ಲೇಚ್ಛ ಸುಹ್ಮ ಪರತಂಕಣ ಮದ್ರ ವಂಗ ಮಗಧ ಕುಣಿಂದ, ಆನರ್ತಕ ಆವರ್ತಕ ಪಾರ್ವತೀಯ ದೇಶಗಳ ರಾಜರು, ಎಲ್ಲರೂ ಉತ್ತಮವಾದ ಆಯುಧಗಳನ್ನು ಹಿಡಿದವರು, ನಿನ್ನನ್ನು ಸುತ್ತುವರಿದು ಸುತ್ತುವರಿದು ಗರ್ಜಿಸಿದ್ದರು.

ಜಾನಾಮಿ ಕಾಲಂ ಚ ದಶಾಂ ಗತಿಂ ಚ
ಪಕ್ಷದ್ವಯೋಶ್ಚಾಪಿ ಬಲಾಬಲಂ ಚ।
ಅಶ್ವಾಂಶ್ಚ ಯೋದ್ಧಾರಮಥಾಯುಧಂ ಚ
ಕ್ಷಿಪ್ರಂ ನಯೇಯಂ ರಥಮೇವ ವೀರ ॥೧೯॥

ಅವರ ಕಾಲ, ಅವಸ್ಥೆ ಗತಿಗಳನ್ನು ನಮ್ಮ ಎರಡೂ ಪಕ್ಷಗಳ ಬಲ ಅಬಲಗಳನ್ನು ಅಶ್ವಗಳನ್ನೂ ಯೋಧರನ್ನೂ ಆಯುಧವನ್ನೂ ನಾನು ತಿಳಿದಿರುವೆನು. ವೀರನೆ, ಬೇಗನೆ ರಥವನ್ನು ನಡೆಸುವೆನು.

ಷಣ್ಮಾರ್ಗಣಾನಾಮಯುತಾನಿ ವೀರ
ಕ್ಷುರಾಶ್ಚ ಭಲ್ಲಾಶ್ಚ ತಥಾಯುತಾಖ್ಯಾಃ ।
ನಾರಾಚಾನಾಂ ದ್ವೇ ಸಹಸ್ರೇ ತು ವೀರ
ತ್ರೀಣ್ಯೇವ ಚ ಪ್ರದರಾಣಾಂ ಚ ಪಾರ್ಥ ॥೨೦॥

ಮಾರ್ಗಣಗಳು ಈಗ ನಿನ್ನ ಬಳಿ ಆರವತ್ತು ಸಾವಿರ ಇವೆ. ಆರವತ್ತು ಸಾವಿರ ಕ್ಷುರಗಳೂ ಇವೆ. ಹತ್ತು ಸಾವಿರ ಭಲ್ಲೆಗಳಿವೆ. ಎರಡು ಸಾವಿರ ನಾರಾಚಗಳಿವೆ. ಮೂರು ಸಾವಿರ ಪ್ರದರಗಳೂ ಇವೆ.

(ಇವೆಲ್ಲವೂ ಬೇರೆ ಬೇರೆ ಬಗೆಯ ಬಾಣಗಳು.)

ಅಸ್ತ್ಯಾಯುಧಂ ಪಾಂಡವೇಯಾವಶಿಷ್ಟಂ
ನ ಯದ್ವಹೇಚ್ಛಕಟಂ ಷಡ್ಗವೀಯಮ್ ।
ಏತದ್ ವಿದ್ವನ್ ಮುಂಚ ಸಹಸ್ರಶೋಽಪಿ
ಗದಾಸಿಬಾಹುದ್ರವಿಣಂ ಚ ತೇಽಸ್ತಿ ॥೨೧॥

ಪ್ರಾಸಾಶ್ಚ ಖಡ್ಗಾಃ ಶಕ್ತಯಸ್ತೋಮರಾಶ್ಚ
ಮಾ ಭೈಷೀಸ್ತ್ವಂ ಸಂಕ್ಷಯಾದಾಯುಧಾನಾಮ್ ॥

ಭೀಮಸೇನ, ನಿನ್ನ ಬಳಿ ಉಳಿದಿರುವ ಆಯುಧಗಳು ಎಷ್ಟೆಂದರೆ ಅವುಗಳನ್ನು ಆರು ಎತ್ತುಗಳು ಎಳೆಯಬಲ್ಲ ಬಂಡಿ ಕೂಡ ಹೊರಲಾರದು. ಅವುಗಳನ್ನು ಸಾವಿರಸಾವಿರಗಟ್ಟಲೆ ನೀನು ಎಸೆಯಬಹುದು. ಮತ್ತು ಜೊತೆಗೆ ಗದೆ ಕತ್ತಿಗಳೂ ನಿನ್ನ ಬಾಹುಬಲ ಸಂಪತ್ತುಗಳೂ ನಿನ್ನಲ್ಲಿ ಇವೆ. ಪ್ರಾಸ ಖಡ್ಗ ಶಕ್ತಿ ತೋಮರಗಳೂ ಇವೆ. ಆಯುಧಗಳು ಮುಗಿದು ಹೋಗುವುದೆಂದು ಭಯ ಪಡಬೇಡ.

ಶ್ರೀಭೀಮಸೇನಃ

ಅದ್ಯೈವ ನೂನಂ ಕಥಯಂತಿ ಸಿದ್ಧಾಂ
ಮಮ ಪ್ರತಿಜ್ಞಾಂ ಸರ್ವಲೋಕೇ ವಿಶೋಕ ।
ನ ಮೋಕ್ಷ್ಯಂತೇ ವಾ ಸಮರೇ ಭೀಮಸೇನ
ಏಕಃ ಕುರೂನ್ ವಃ ಸಮರೇ ವ್ಯಜೈಷೀತ್ ॥೨೨॥

ಆಶಂಸಿತಾನಾಮಿದಮೇಕಮಸ್ತು
ತನ್ಮೇ ದೇವಾಃ ಸಫಲಂ ಸಾಧಯಂತು ॥೨೩॥

ಭೀಮಸೇನ ನುಡಿದ— ವಿಶೋಕ, ಎಲ್ಲ ಲೋಕಗಳಲ್ಲಿ ನಾನು ನನ್ನ ಪ್ರತಿಜ್ಞೆ ಪೂರೈಸಿದ್ದನ್ನು ಜನರು ಈಗಲೇ ಹೇಳುತ್ತಾರೆ. 'ಭೀಮಸೇನನ ಸಮರದಲ್ಲಿ ಶತ್ರುಗಳು ನೀವು ಮುಕ್ತರಾಗುವುದಿಲ್ಲ. ಭೀಮಸೇನನೊಬ್ಬನೇ ಕೌರವರನ್ನು ಸಮರದಲ್ಲಿ ಪರಾಭವಗೊಳಿಸುತ್ತಾನೆ' ಎನ್ನುತ್ತಾರೆ. ನಾನು ಅಪೇಕ್ಷಿಸಿದ ಕಾರ್ಯಗಳಲ್ಲಿ ಇದೊಂದೇ ಮುಖ್ಯವಾಗಿ ಕೈಗೂಡಲಿ. ಅದನ್ನು ದೇವತೆಗಳು ಸಫಲವಾಗಿ ನಡೆಸಿಕೊಡಲಿ.

ದುಃಶಾಸನನ ಎದೆಬಗಿಯುವುದು ಮತ್ತು ದುರ್ಯೋಧನನ ತೊಡೆ ಮುರಿದು ತಲೆಯನ್ನು ಕಾಲಿಂದ ತುಳಿಯುವುದು ಈ ಎರಡು ಪ್ರತಿಜ್ಞೆಗಳ ಪಾಲನೆಯೊಂದೇ ನನಗೆ ಮುಖ್ಯವಾದ ಕಾರ್ಯ. ಅದನ್ನು 'ದೇವತೆಗಳು' ಶ್ರೀಕೃಷ್ಣ ವ್ಯಾಸ ಪರಶುರಾಮರು ಸಫಲವಾಗಿ ನಡೆಸಿಕೊಡಲಿ' ಎಂದು ಅವರಲ್ಲಿ ಭೀಮನು 'ಹಂತಾರಂ ಶತ್ರೂಣಾಂ ಕೃಧಿ ವಿರಾಜಂ ಗೋಪತಿಂ ಗವಾಂ' ಎಂದು ಪ್ರಾರ್ಥಿಸುತ್ತಾನೆ.

ಸೂತಾದ್ಯ ಮೇ ಬಾಹುವಿಮುಕ್ತಶಸ್ತ್ರೈಃ
ಸಂಭಿನ್ನಗಾತ್ರಾಃ ಪಾರ್ಥಿವಾ ನಾಶಮೀಯುಃ ।
ಕಳಿಂಗವಂಗಾಂಗ ಕರೂಶತಂಕಣಾಃ
ಸೌವೀರಸೌರಾಷ್ಟ್ರಕುಣಿಂದಮಾಗಧಾಃ ॥೨೪॥

ಕೈಕೇಯಕಾಂಬೋಜವಿದೇಹಚೇದಿಕಾ
ಗಾಂಧಾರಕಾಶೀಪ್ರಮುಖಾಶ್ಚ ಸೂತ ॥೨೫॥

ಸಾರಥಿ, ನನ್ನ ಬಾಹುವಿನಿಂದ ಹೊರಟ ಶಸ್ತ್ರಗಳಿಂದ ಕಳಿಂಗ ವಂಗ ಅಂಗ ಕರೂಷ ತಂಕಣ ಸೌವೀರ ಸೌರಾಷ್ಟ್ರ ಕುಣಿಂದ ಮಾಗಧ ಕೈಕೇಯ ಕಾಂಬೋಜ ವಿದೇಹ ಚೇದಿ ಗಾಂಧಾರ ಕಾಶಿ ಮುಂತಾದ ರಾಜರು ಮೈಯೆಲ್ಲ ಗಾಯಗೊಂಡು ನಾಶ ಹೊಂದಿದರು.

ಸೂತಾದ್ಯೇಮಂ ಪಶ್ಯ ಭೀಮಪ್ರಮುಕ್ತೈಃ
ಸಂಭಿಂದದ್ಭಿಃ ಪಾರ್ಥಿವಾನಾಶುವೇಗೈಃ ।

ಉಗ್ರೈರ್ಬಾಣೈರಾಹವಂ ಘೋರರೂಪಂ
ನಷ್ಟಾದಿತ್ಯಂ ಮೃತ್ಯುಲೋಕೇನ ತುಲ್ಯಮ್ ॥೨೬॥

ಸಾರಥಿ, ಈಗ ನೋಡು, ಭೀಮನು ಎಸೆವ ಬಲುವೇಗವುಳ್ಳ ಉಗ್ರವಾದ ಬಾಣಗಳು ರಾಜರನ್ನು ಸೀಳುತ್ತ ಈ ರಣರಂಗವನ್ನು ಸೂರ್ಯದರ್ಶನವಿಲ್ಲದಂತೆ ಮೃತ್ಯುಲೋಕಕ್ಕೆ ತುಲ್ಯವಾಗುವಂತೆ ಘೋರಸ್ವರೂಪವನ್ನಾಗಿ ಮಾಡುತ್ತವೆ.

ಅದ್ಯೈವ ತದ್ವಿದಿತಂ ಪಾರ್ಥಿವಾನಾಂ
ಭವಿಷ್ಯತಿ ಹ್ಯಾಕುಮಾರಂ ಚ ಸೂತ ।
ನಿಮಗ್ನೋ ವಾ ಸಮರೇ ಭೀಮಸೇನ
ಏಕಃ ಕುರೂನ್ ವಾ ಸಮರೇ ವಿಜೇತಾ ॥೨೭॥

ಸಾರಥಿ, ಭೀಮಸೇನನು ರಣದಲ್ಲಿ ಮುಳುಗಿಹೋಗುವನೆ ಅಥವಾ ಒಬ್ಬನೆ ರಣದಲ್ಲಿ ಕೌರವರನ್ನು ಗೆಲ್ಲುವನೆ ಎಂಬುದು ರಾಜರಿಗೆ, ಮಕ್ಕಳವರೆಗಿನ ಅವರ ಎಲ್ಲ ಬಂಧುಗಳಿಗೆ ಇಂದೇ ತಿಳಿಯುತ್ತದೆ.

ಸರ್ವೇ ಸಂಖೇ ಕುರವೋ ನಿಷ್ಪತಂತು
ಮಾಂ ವಾ ಲೋಕಾಃ ಕೀರ್ತಯಂತ್ವಾಕುಮಾರಮ್ ।
ಸರ್ವಾನೇಕಸ್ತಾನಹಂ ಪಾತಯಿಷ್ಯೇ
ತೇ ವಾ ಸರ್ವೇ ಭೀಮಸೇನಂ ತುದಂತು ॥೨೮॥

ಎಲ್ಲ ಕೌರವರೂ ರಣದಲ್ಲಿ ಕರ್ಣನ ನಾಯಕತ್ವದಲ್ಲಿ ನನ್ನ ಮೇಲೇ ಎರಗುವರೊ ಅಥವಾ ಚಿಕ್ಕಮಕ್ಕಳವರೆಗೂ ಎಲ್ಲ ಜನರೂ ಅಜೇಯರಾಗಿ ನಿಲ್ಲುವ ನನ್ನನ್ನು ಹೊಗಳುವರೊ, ಎಲ್ಲರನ್ನೂ ಈಗ ನಾನೊಬ್ಬನೇ ನೆಲದ ಮೇಲೆ ಒರಗಿಸುವೆನೊ ಇಲ್ಲವೆ, ಅವರೆಲ್ಲರೂ ಭೀಮಸೇನನನ್ನೊಬ್ಬನನ್ನು ಒರೆಸುವರೊ, ಎಂಬುದು ಇಂದೇ ತಿಳಿಯುತ್ತದೆ.

ಆಶಾಸ್ತಾರಃ ಕರ್ಮ ಚಾತ್ಯದ್ಭುತಂ ಮೇ
ತೇ ವೈ ದೇವಾಃ ಸಫಲಂ ಸಾಧಯಂತು ।
ಆಯಾತ್ವಿಹಾದ್ಯಾರ್ಜುನಃ ಶತ್ರುಘಾತೀ
ಶಕ್ರಸ್ತೂರ್ಣಂ ಯಜ್ಞ ಇವೋಪಹೂತಃ ॥೨೯॥

ನನ್ನಿಂದ ನಡೆಯುವ ಅತ್ಯದ್ಭುತವಾದ ಕರ್ಮವನ್ನು ಬಯಸುವ ದೇವತೆಗಳು ತಮ್ಮ ಆ ಬಯಕೆಯನ್ನು ಸಫಲಗೊಳಿಸಿಕೊಳ್ಳಲಿ. ಯಜ್ಞದಲ್ಲಿ ಆಹುತಿ ಸ್ವೀಕರಿಸಲು ಆಹ್ವಾನ ನೀಡಿದಾಗ ಇಂದ್ರನು ಬೇಗ ಬರುವಂತೆ ಶತ್ರುನಾಶಕನಾದ ಅರ್ಜುನನು ಇಲ್ಲಿಗೆ ಬರಲಿ, ಕರ್ಣಸಂಹಾರವನ್ನು ಮಾಡಲಿ.

ಈಕ್ಷಸ್ವೈತಾಂ ಭಾರತೀಂ ದೀರ್ಯಮಾಣಾ-
ಮೇತೇ ಕಸ್ಮಾದ್ ವಿದ್ರವಂತೇ ನರೇಂದ್ರಾಃ ।
ವ್ಯಕ್ತಂ ಧೀಮಾನ್ ಸವ್ಯಸಾಚೀ ನರಾಗ್ರ್ಯಃ
ಸೈನ್ಯಂ ಹ್ಯೇತಚ್ಛಾದಯತ್ಯಾಶು ಬಾಣೈಃ ॥೩೦॥

ಈ ಕೌರವಸೈನ್ಯವು ನಾಶವಾಗುತ್ತಿರುವುದನ್ನು ನೋಡು. ಈ ರಾಜರು ಏಕೆ ಪಲಾಯನಗೈಯುತ್ತಿದ್ದಾರೆ? ಧೀಮಂತ ನರೋತ್ತಮ ಸವ್ಯಸಾಚಿಯೆ ಈ ಸೈನ್ಯವನ್ನು ವೇಗವಾಗಿ ಬಾಣಗಳಿಂದ ಮುಚ್ಚುತ್ತಿದ್ದಾನೆ, ಇದು ನಿಶ್ಚಯ.

ಪಶ್ಯ ಧ್ವಜಾಂಶ್ಚ ದ್ರವತೋ ವಿಶೋಕ
ನಾಗಾನ್ ಹಯಾನ್ ಪತ್ತಿಸಂಘಾಂಶ್ಚ ಸಂಖೇ ।
ರಥಾನ್ ವಿಶೀರ್ಣಾನ್ ಶರಶಕ್ತಿತಾಡಿತಾನ್
ಪಶ್ಯೈತಾನ್ ರಥಿನಶ್ಚೈವ ಸೂತ ॥೩೧॥

ವಿಶೋಕ, ನೋಡು, ರಣದಲ್ಲಿ ಧಾವಿಸುತ್ತಿರುವ ಧ್ವಜ ಗಜ ಅಶ್ವ ಪದಾತಿ ಸಮೂಹಗಳನ್ನು, ಪುಡಿಯಾದ ರಥಗಳನ್ನು ಬಾಣ ಶಕ್ತ್ಯಾಯುಧಗಳಿಂದ ಹೊಡೆಸಿಕೊಂಡ ಈ ರಥಿಕರನ್ನು ನೋಡು.

ಆದೀರ್ಯತೇ ಕೌರವೀ ಚಾಪ್ಯಭೀಕ್ಷ್ಣಂ
ಸೇನಾ ಹ್ಯಸೌ ಸುಭೃಶಂ ಹನ್ಯಮಾನಾ ।
ಧನಂಜಯಸ್ಯಾಶನಿತುಲ್ಯವೇಗೈ-
ರ್ಗ್ರಸ್ತಾ ಶರೈರ್ಬರ್ಹಿಸುವರ್ಣವಾಜ್ಯೈಃ ॥೩೨॥

ಈ ಕೌರವಸೈನ್ಯವು ಸುವರ್ಣಮಯವಾದ ನವಿಲಿನ ಪುಕ್ಕದಿಂದ ಕೂಡಿದ ಮಿಂಚಿನಂತೆ ವೇಗವುಳ್ಳ ಅರ್ಜುನನ ಬಾಣಗಳಿಗೆ ತುತ್ತಾಗಿ ಪುನಃಪುನಃ ಬಹಳವಾಗಿ ಹೊಡೆಸಿಕೊಂಡು ನಾಶವಾಗುತ್ತಿವೆ.

ಏತೇ ದ್ರವಂತಿ ಸ್ಮ ರಥಾಶ್ವನಾಗಾಃ
ಪದಾತಿಸಂಘಾನವಮರ್ದಯಂತಃ ।
ಸಮ್ಮುಹ್ಯಮಾನಾಃ ಕೌರವಾಃ ಸರ್ವ ಏವ
ದ್ರವಂತಿ ನಾಗಾ ಇವ ದಾವಭೀತಾಃ ।
ಹಾಹಾಕೃತಾಶ್ಚೈವ ರಣೇ ವಿಶೋಕ
ಮುಂಚಂತಿ ನಾದಾನ್ ವಿಪುಲಾನ್ ಗಜೇಂದ್ರಾಃ ॥೩೩॥

ಈ ರಥ ಅಶ್ವ ಗಜಸೈನ್ಯಗಳು ಪದಾತಿಸಮೂಹಗಳನ್ನು ಹೊಸಕುತ್ತ ಧಾವಿಸುತ್ತಿವೆ. ಕೌರವರೆಲ್ಲರೂ ದಿಗ್ಭ್ರಮೆಗೊಂಡು ಕಾಳ್ಗಿಚ್ಚಿಗೆ ಹೆದರಿದ ಆನೆಗಳಂತೆ ರಣದಲ್ಲಿ ಹಾಹಾಕಾರ ಮಾಡುತ್ತ ಧಾವಿಸುತ್ತಿದ್ದಾರೆ. ಮದ್ದಾನೆಗಳು ಕೂಡ ಬಹಳ ಆರ್ತನಾದ ಮಾಡುತ್ತಿವೆ.

ವಿಶೋಕಃ

ಕಿಂ ಭೀಮ ನೈನಂ ತ್ವಮಿಹಾಶೃಣೋಷಿ
ವಿಸ್ಫಾರಿತಂ ಗಾಂಡಿವಸ್ಯಾತಿಘೋರಮ್ ।
ಕ್ರುದ್ಧೇನ ಪಾರ್ಥೇನ ವಿಕೃಷ್ಯತೋಽದ್ಯ
ಕಚ್ಚಿನ್ನೇಮೌ ತವ ಕರ್ಣೌ ವಿನಷ್ಟೌ ॥೩೪॥

ವಿಶೋಕನು ನುಡಿದ— ಭೀಮ, ನೀನು ಈಗ ಕ್ರುದ್ಧನಾದ ಅರ್ಜುನನು ಸೆಳೆಯುವ ಗಾಂಡೀವದ ಅತಿಘೋರವಾದ ಠೇಂಕಾರವನ್ನು ಕೇಳುತ್ತಿಲ್ಲವೇನು? ನಿನ್ನ ಈ ಕಿವಿಗಳು ಕಿವುಡಾಗಿಲ್ಲ ತಾನೆ?

ಸರ್ವೇ ಕಾಮಾಃ ಪಾಂಡವ ತೇ ಸಮೃದ್ಧಾಃ
ಕಪಿಧ್ವಜೋ ದೃಶ್ಯತೇ ಹಸ್ತಿಸೈನ್ಯೇ ।
ನೀಲಾದ್ಘನಾದ್ ಉತ್ಪತಂತೀವ ವಿದ್ಯುತ್
ತಥಾ ಪಶ್ಯ ವಿಸ್ಫುರದ್ ವೈ ಧನುಸ್ತತ್ ॥೩೫॥

ಭೀಮ, ನಿನ್ನ ಕಾಮನೆಗಳು ಸಮೃದ್ಧವಾಗಿ ಕೈಗೂಡಿವೆ. ಗಜಸೈನ್ಯದಲ್ಲಿ ಅರ್ಜುನನ ಕಪಿಧ್ವಜ ಕಾಣಿಸುತ್ತಿದೆ. ಕಾರ್ಮೋಡದಿಂದ ಒಗೆಯುವ ಮಿಂಚಿನಂತೆ ಅವನ ಆ ಧನುಸ್ಸು ಕೂಡ ಹೊಳೆಯುತ್ತಿದೆ, ನೋಡು.

ನನ್ನಿಂದ ನಡೆಯುವ ಅತ್ಯದ್ಭುತವಾದ ಕರ್ಮವನ್ನು ಬಯಸುವ ದೇವತೆಗಳು ತಮ್ಮ ಆ ಬಯಕೆಯನ್ನು ಸಫಲಗೊಳಿಸಿಕೊಳ್ಳಲಿ. ಯಜ್ಞದಲ್ಲಿ ಆಹುತಿ ಸ್ವೀಕರಿಸಲು ಆಹ್ವಾನ ನೀಡಿದಾಗ ಇಂದ್ರನು ಬೇಗ ಬರುವಂತೆ ಶತ್ರುನಾಶಕನಾದ ಅರ್ಜುನನು ಇಲ್ಲಿಗೆ ಬರಲಿ, ಕರ್ಣಸಂಹಾರವನ್ನು ಮಾಡಲಿ.

ಈಕ್ಷಸ್ವೈತಾಂ ಭಾರತೀಂ ದೀರ್ಯಮಾಣಾ-
ಮೇತೇ ಕಸ್ಮಾದ್ ವಿದ್ರವಂತೇ ನರೇಂದ್ರಾಃ ।
ವ್ಯಕ್ತಂ ಧೀಮಾನ್ ಸವ್ಯಸಾಚೀ ನರಾಗ್ರ್ಯಃ
ಸೈನ್ಯಂ ಹ್ಯೇತಚ್ಛಾದಯತ್ಯಾಶು ಬಾಣೈಃ ॥೩೦॥

ಈ ಕೌರವಸೈನ್ಯವು ನಾಶವಾಗುತ್ತಿರುವುದನ್ನು ನೋಡು. ಈ ರಾಜರು ಏಕೆ ಪಲಾಯನಗೈಯುತ್ತಿದ್ದಾರೆ? ಧೀಮಂತ ನರೋತ್ತಮ ಸವ್ಯಸಾಚಿಯೆ ಈ ಸೈನ್ಯವನ್ನು ವೇಗವಾಗಿ ಬಾಣಗಳಿಂದ ಮುಚ್ಚುತ್ತಿದ್ದಾನೆ, ಇದು ನಿಶ್ಚಯ.

ಪಶ್ಯ ಧ್ವಜಾಂಶ್ಚ ದ್ರವತೋ ವಿಶೋಕ
ನಾಗಾನ್ ಹಯಾನ್ ಪತ್ತಿಸಂಘಾಂಶ್ಚ ಸಂಖೇ ।
ರಥಾನ್ ವಿಶೀರ್ಣಾನ್ ಶರಶಕ್ತಿತಾಡಿತಾನ್
ಪಶ್ಯೈತಾನ್ ರಥಿನಶ್ಚೈವ ಸೂತ ॥೩೧॥

ವಿಶೋಕ, ನೋಡು, ರಣದಲ್ಲಿ ಧಾವಿಸುತ್ತಿರುವ ಧ್ವಜ ಗಜ ಅಶ್ವ ಪದಾತಿ ಸಮೂಹಗಳನ್ನು, ಪುಡಿಯಾದ ರಥಗಳನ್ನು ಬಾಣ ಶಕ್ತ್ಯಾಯುಧಗಳಿಂದ ಹೊಡೆಸಿಕೊಂಡ ಈ ರಥಿಕರನ್ನು ನೋಡು.

ಆದೀರ್ಯತೇ ಕೌರವೀ ಚಾಪ್ಯಭೀಕ್ಷ್ಣಂ
ಸೇನಾ ಹ್ಯಸೌ ಸುಭೃಶಂ ಹನ್ಯಮಾನಾ ।
ಧನಂಜಯಸ್ಯಾಶನಿತುಲ್ಯವೇಗೈ-
ರ್ಗ್ರಸ್ತಾ ಶರೈರ್ಬರ್ಹಿಸುವರ್ಣವಾಜ್ಯೈಃ ॥೩೨॥

ಈ ಕೌರವಸೈನ್ಯವು ಸುವರ್ಣಮಯವಾದ ನವಿಲಿನ ಪುಕ್ಕದಿಂದ ಕೂಡಿದ ಮಿಂಚಿನಂತೆ ವೇಗವುಳ್ಳ ಅರ್ಜುನನ ಬಾಣಗಳಿಗೆ ತುತ್ತಾಗಿ ಪುನಃಪುನಃ ಬಹಳವಾಗಿ ಹೊಡೆಸಿಕೊಂಡು ನಾಶವಾಗುತ್ತಿವೆ.

ಏತೇ ದ್ರವಂತಿ ಸ್ಮ ರಥಾಶ್ವನಾಗಾಃ
ಪದಾತಿಸಂಘಾನವಮರ್ದಯಂತಃ ।
ಸಮ್ಮುಹ್ಯಮಾನಾಃ ಕೌರವಾಃ ಸರ್ವ ಏವ
ದ್ರವಂತಿ ನಾಗಾ ಇವ ದಾವಭೀತಾಃ ।
ಹಾಹಾಕೃತಾಶ್ಚೈವ ರಣೇ ವಿಶೋಕ
ಮುಂಚಂತಿ ನಾದಾನ್ ವಿಪುಲಾನ್ ಗಜೇಂದ್ರಾಃ ॥೩೩॥

ಈ ರಥ ಅಶ್ವ ಗಜಸೈನ್ಯಗಳು ಪದಾತಿಸಮೂಹಗಳನ್ನು ಹೊಸಕುತ್ತ ಧಾವಿಸುತ್ತಿವೆ. ಕೌರವರೆಲ್ಲರೂ ದಿಗ್ಭ್ರಮೆಗೊಂಡು ಕಾಳ್ಗಿಚ್ಚಿಗೆ ಹೆದರಿದ ಆನೆಗಳಂತೆ ರಣದಲ್ಲಿ ಹಾಹಾಕಾರ ಮಾಡುತ್ತ ಧಾವಿಸುತ್ತಿದ್ದಾರೆ. ಮದ್ದಾನೆಗಳು ಕೂಡ ಬಹಳ ಆರ್ತನಾದ ಮಾಡುತ್ತಿವೆ.

ವಿಶೋಕಃ

ಕಿಂ ಭೀಮ ನೈನಂ ತ್ವಮಿಹಾಶೃಣೋಷಿ
ವಿಸ್ಫಾರಿತಂ ಗಾಂಡಿವಸ್ಯಾತಿಘೋರಮ್ ।
ಕ್ರುದ್ಧೇನ ಪಾರ್ಥೇನ ವಿಕೃಷ್ಯತೋऽದ್ಯ
ಕಚ್ಚಿನ್ನೇಮೌ ತವ ಕರ್ಣೌ ವಿನಷ್ಟೌ ॥೩೪॥

ವಿಶೋಕನು ನುಡಿದ— ಭೀಮ, ನೀನು ಈಗ ಕ್ರುದ್ಧನಾದ ಅರ್ಜುನನು ಸೆಳೆಯುವ ಗಾಂಡೀವದ ಅತಿಘೋರವಾದ ಠೇಂಕಾರವನ್ನು ಕೇಳುತ್ತಿಲ್ಲವೇನು? ನಿನ್ನ ಈ ಕಿವಿಗಳು ಕಿವುಡಾಗಿಲ್ಲ ತಾನೆ?

ಸರ್ವೇ ಕಾಮಾಃ ಪಾಂಡವ ತೇ ಸಮೃದ್ಧಾಃ
ಕಪಿಧ್ವಜೋ ದೃಶ್ಯತೇ ಹಸ್ತಿಸೈನ್ಯೇ ।
ನೀಲಾದ್ಘನಾದ್ ಉತ್ಪತಂತೀವ ವಿದ್ಯುತ್
ತಥಾ ಪಶ್ಯ ವಿಸ್ಫುರದ್ ವೈ ಧನುಸ್ತತ್ ॥೩೫॥

ಭೀಮ, ನಿನ್ನ ಕಾಮನೆಗಳು ಸಮೃದ್ಧವಾಗಿ ಕೈಗೂಡಿವೆ. ಗಜಸೈನ್ಯದಲ್ಲಿ ಅರ್ಜುನನ ಕಪಿಧ್ವಜ ಕಾಣಿಸುತ್ತಿದೆ. ಕಾರ್ಮೋಡದಿಂದ ಒಗೆಯುವ ಮಿಂಚಿನಂತೆ ಅವನ ಆ ಧನುಸ್ಸು ಕೂಡ ಹೊಳೆಯುತ್ತಿದೆ, ನೋಡು.

ಕಪಿರ್ಯಸೌ ವೀಕ್ಷತೇ ಸರ್ವತೋ ವೈ
ಧ್ವಜಾಗ್ರಮಾರುಹ್ಯ ಧನಂಜಯಸ್ಯ ।
ವಿತ್ರಾಸಯನ್ ದ್ವಿಪಸಂಘಾನ್ ವಿಮರ್ದೇ
ಬಿಭೇಮ್ಯಸ್ಮಾದಾತ್ಮನೈವಾಭಿವೀಕ್ಷ್ಯ ॥೩೬॥

ಅರ್ಜುನನ ಧ್ವಜಾಗ್ರದಲ್ಲಿ ವಾನರ ಕುಳಿತು, ಎಲ್ಲ ಕಡೆಗೆ ದಿಟ್ಟಿಸುತ್ತಿದ್ದಾನೆ, ಯುದ್ಧದಲ್ಲಿ ಆನೆಸೈನ್ಯಗಳ ಸಮೂಹಗಳನ್ನು ಭಯಪಡಿಸುತ್ತಿದ್ದಾನೆ. ಅವನನ್ನು ನೋಡಿ ಸ್ವತಃ ನಾನೂ ಭಯಪಡುತ್ತೇನೆ.

ವಿಭ್ರಾಜತೇ ಜಾತಿಮಾತ್ರಂ ಕಿರೀಟಂ
ವಿಚಿತ್ರಮೇತಚ್ಚ ಧನಂಜಯಸ್ಯ ।
ದಿವಾಕರಾಭೋ ಮಣಿರೇಷ ದಿವ್ಯೋ
ವಿಭ್ರಾಜತೇ ಚೈವ ಕಿರೀಟಸಂಸ್ಥಃ ॥೩೭॥

ಅರ್ಜುನನ ಈ ಕಿರೀಟ ವಿಚಿತ್ರವಾಗಿದೆ. ಎಲ್ಲಕ್ಕಿಂತ ಅತಿಯಾಗಿ ಪ್ರಕಾಶಿಸುತ್ತಿದೆ. ಕಿರೀಟದಲ್ಲಿರುವ ಈ ದಿವ್ಯ ಮಣಿಯೂ ಸಹ ಸೂರ್ಯನಂತೆ ಹೊಳೆಯುತ್ತಿದೆ.

ಪಾರ್ಶ್ವೇ ಭೀಮಂ ಪಾಂಡುರಾಭ್ರಪ್ರಕಾಶಂ
ಪಶ್ಯೇಮಂ ತ್ವಂ ದೇವದತ್ತಂ ಸುಘೋಷಮ್ ।
ಅಭೀಶುಹಸ್ತಸ್ಯ ರಥಾಂಗಪಾಣೇ-
ರ್ವಿಗಾಹಮಾನಸ್ಯ ಚಮೂಂ ಪರೇಷಾಮ್ ॥೩೮॥

ರವಿಪ್ರಭಂ ವಜ್ರನಾಭಂ ಕ್ಷುರಾಂತಂ
ಪಾರ್ಶ್ವೇ ಸ್ಥಿತಂ ಪಶ್ಯ ಜನಾರ್ದನಸ್ಯ ।
ಚಕ್ರಂ ಯಶೋ ವರ್ಧಯದೇತದಸ್ಯ
ಸದಾರ್ಚಿತಂ ಯದುಭಿಃ ಪಶ್ಯ ವೀರ ॥೩೯॥

ವೀರಭೀಮನೆ, ಬಿಳಿಮೋಡದಂತೆ ಹೊಳೆವ ಮಂಗಳಕರ ಧ್ವನಿವುಳ್ಳ ಶತ್ರು ಭಯಂಕರವಾದ ಈ ದೇವದತ್ತ ಶಂಖವನ್ನು ಅರ್ಜುನನ ಬಳಿಯಲ್ಲಿ ನೋಡು. ಕುದುರೆಯ ಲಗಾಮು ಹಿಡಿದು ಶತ್ರುಸೈನ್ಯವನ್ನು ಪ್ರವೇಶಿಸುವ ಚಕ್ರಪಾಣಿಯಾದ

ಶ್ರೀಕೃಷ್ಣನ ಪಾರ್ಶ್ವದಲ್ಲಿ ಮಧ್ಯಭಾಗ ವಜ್ರದಂತೆಯೂ ಅಲುಗು ಕತ್ತಿಯಂತೆಯೂ ಇರುವ ಸೂರ್ಯನಂತೆ ಹೊಳೆವ ಚಕ್ರವಿರುವುದನ್ನೂ ನೋಡು. ಅದು ಕೃಷ್ಣನ ಕೀರ್ತಿಯನ್ನು ಹೆಚ್ಚಿಸುವಂಥದ್ದು. ಯಾದವರು ಸದಾ ಪೂಜಿಸುವಂಥದ್ದು.

ಮಹಾದ್ವಿಪಾನಾಂ ಸರಳದ್ರುಮೋಪಮಾಃ
ಕರಾ ನಿಕೃತ್ತಾಃ ಪ್ರಪತನ್ತ್ಯಮೀ ಕ್ಷುರೈಃ ।
ಕಿರೀಟಿನಾನೇನ ಪುನಃ ಸಸಾದಿನಃ
ಶರೈರ್ನಿಕೃತ್ತಾಃ ಕುಲಿಶೈರಿವಾದ್ರಯಃ ॥೪೦॥

ಮಹಾಗಜಗಳ ದೇವದಾರು ವೃಕ್ಷಸಮಾನವಾದ ಸೊಂಡಿಲುಗಳು ಅರ್ಜುನನ ಬಾಣಗಳಿಂದ ಕಡಿದು ಬೀಳುತ್ತಿವೆ. ಆ ಗಜಗಳೂ ಕೂಡ ಆರೋಹಿಗಳ ಸಮೇತವಾಗಿ, ವಜ್ರಾಘಾತಗಳಿಂದ ಮುರಿದು ಬೀಳುವ ಬೆಟ್ಟಗಳಂತೆ, ಅರ್ಜುನನ ಬಾಣಗಳಿಂದ ಕಡಿದು ಬೀಳುತ್ತಿವೆ.

ತಥೈವ ಕೃಷ್ಣಸ್ಯ ಚ ಪಾಂಚಜನ್ಯಂ
ಮಹಾರ್ಹಮೇತದ್ ದ್ವಿಜರಾಜವರ್ಣಮ್ ।
ಕೌಂತೇಯ ಪಶ್ಯೋರಸಿ ಕೌಸ್ತುಭಂ ಚ
ಜಾಜ್ವಲ್ಯಮಾನಾಂ ವಿಜಯಸ್ರಜಂ ಚ ॥೪೧॥

ಭೀಮಸೇನ, ಶ್ರೀಕೃಷ್ಣನ ಪಾಂಚಜನ್ಯ ಶಂಖವನ್ನೂ ನೋಡು. ನಕ್ಷತ್ರರಾಜನಾದ ಚಂದ್ರನ ಬಣ್ಣದಿಂದೊಪ್ಪುವ ಬಹುಮೂಲ್ಯವಾದ ಶಂಖ ಅದು. ಹಾಗೇ ಕೃಷ್ಣನ ಎದೆಯಲ್ಲಿ ಕೌಸ್ತುಭಮಣಿಯನ್ನೂ ಜಾಜ್ವಲ್ಯಮಾನವಾದ ವೈಜಯಂತೀಮಾಲೆಯನ್ನೂ ನೋಡು.

ಶ್ರೀಕೃಷ್ಣ ತನ್ನ ಪ್ರತಿಜ್ಞೆಯಂತೆ ಚಕ್ರದಿಂದ ಯುದ್ಧ ಮಾಡದಿದ್ದರೂ ತನ್ನ ಲಕ್ಷಣವಾದ ಆಯುಧ, ಆಭರಣಗಳನ್ನು ಪರಿತ್ಯಾಗ ಮಾಡಿರಲಿಲ್ಲ. ಪರಿತ್ಯಾಗ ಮಾಡುವುದಾಗಿ ಏನೂ ಪ್ರತಿಜ್ಞೆ ಮಾಡಿರಲಿಲ್ಲ.

ಧ್ರುವಂ ರಥಾಗ್ರ್ಯಃ ಸಮುಪೈತಿ ಪಾರ್ಥೋ
ವಿದ್ರಾವಯನ್ ಸೈನ್ಯಮಿದಂ ಪರೇಷಾಮ್ ।

ಸಿತಾಭ್ರವರ್ಣೈ ರಜತಪ್ರಕಾಶೈ-
ರ್ಭಲ್ಲೈರ್ಮಹಾರ್ಹೈ ರಥಿನಾಂ ವರಿಷ್ಠಃ ॥೪೨॥

ನಿಶ್ಚಯವಾಗಿ ಮಹಾರಥನಾದ ಪಾರ್ಥನೆ ಬರುತ್ತಿದ್ದಾನೆ. ಈ ಶತ್ರುಸೈನ್ಯವನ್ನು ಹಿಮ್ಮೆಟ್ಟಿಸುತ್ತ ಬಿಳಿ ಮೋಡಗಳ ಬಣ್ಣದ, ಬೆಳ್ಳಿಯಂತೆ ಬೆಳಗುವ, ಬಹುಮೂಲ್ಯದ ಭಲ್ಲೆಗಳೊಂದಿಗೆ ರಥಿಕರಲ್ಲಿ ಶ್ರೇಷ್ಠನಾದ ಅರ್ಜುನ ಬರುತ್ತಿದ್ದಾನೆ.

ತಥಾ ಹಯಾಃ ಪತ್ತಿಗಣಾಶ್ಚ ಸಾಯಕೈ-
ರ್ವಿದಾರಿತಾಃ ಪಶ್ಯ ಪತಂತ್ಯಮೀ ಯಥಾ ।
ತವಾನುಜೇನಾಮರರಾಜತೇಜಸಾ
ಮಹಾವನಾನೀವ ಸುಪರ್ಣವಾಯುನಾ ॥೪೩॥

ಈ ಅಶ್ವಸೈನ್ಯ ಪದಾತಿಸೈನ್ಯಸಮೂಹಗಳೂ ಕೂಡ ಇಂದ್ರಸಮಾನ ಪರಾಕ್ರಮಿಯಾದ ನಿನ್ನ ತಮ್ಮನ ಬಾಣಗಳಿಂದ ಛಿನ್ನಭಿನ್ನವಾಗಿ ಗರುಡನ ರೆಕ್ಕೆಯ ಗಾಳಿಯಿಂದ ಮಹಾವನಗಳು ನೆಲಸಮವಾಗುವಂತೆ ರಣರಂಗದಲ್ಲಿ ಬೀಳುತ್ತಿವೆ, ನೋಡು.

ಚತುಃಶತಾನ್ ಪಶ್ಯ ರಥಾನಿಮಾನ್ ಹತಾನ್
ಸವಾಜಿಸೂತಾನ್ ಸಮರೇ ಕಿರೀಟಿನಾ ।
ಮಹೇಷುಭಿಃ ಸಪ್ತಶತಾನಿ ದಂತಿನಾಂ
ಪದಾತಿಸಾದೀಂಶ್ಚ ಹತಾನನೇಕಶಃ ॥೪೪॥

ಈ ನಾನ್ನೂರು ರಥಗಳು ಕುದುರೆ, ಸಾರಥಿಗಳೊಂದಿಗೆ ರಣದಲ್ಲಿ ಅರ್ಜುನನಿಂದ ಹತರಾಗಿರುವುದನ್ನು ನೋಡು, ಭೀಮ. ದೊಡ್ಡ ಬಾಣಗಳಿಂದ ಏಳುನೂರು ಗಜಸೈನಿಕರನ್ನೂ ಅನೇಕ ಪದಾತಿ ಅಶ್ವಸೈನಿಕರನ್ನೂ ಅರ್ಜುನ ಸಂಹರಿಸಿದ್ದಾನೆ.

ಅಯಂ ಸಮಭ್ಯೇತಿ ತವಾಂತಿಕಂ ಬಲೀ
ನಿಘ್ನನ್ ಕುರೂನ್ ಕೇತುರಿವೋತ್ಥಿತೋಽರ್ಜುನಃ ।
ಸಮೃದ್ಧಕಾಮೋಽಸಿ ಹತಾಸ್ತವಾರಯೋಃ
ಬಲಂ ತವಾಯುಶ್ಚ ಚಿರಾಯ ವರ್ಧತಾಮ್ ॥೪೫॥

ಕೌರವರಿಗೆ ಧೂಮಕೇತುವಿನಂತೆ ಉದಿಸಿದ ಬಲಿಷ್ಠನಾದ ಅರ್ಜುನನು ಕೌರವರನ್ನು ಸಂಹರಿಸುತ್ತ ನಿನ್ನ ಬಳಿಗೆ ಬರುತ್ತಿದ್ದಾನೆ. ನಿನ್ನ ಅಭಿಲಾಷೆಗಳು ಸಮೃದ್ಧವಾಗಿಯೆ ಪೂರೈಸಿವೆ. ನಿನ್ನ ಶತ್ರುಗಳು ಹತರಾಗಿದ್ದಾರೆ. ನಿನ್ನ ಬಲ, ಆಯುಷ್ಯಗಳು ಬಹುಕಾಲ ವರ್ಧಿಸುತ್ತಿರಲಿ.

ಭೀಮಃ

ದದಾಮಿ ತೇ ಗ್ರಾಮವರಾಂಶ್ಚತುರ್ದಶ
ಪ್ರಿಯಾಖ್ಯಾನೇ ಸಾರಥೇ ಸುಪ್ರಸನ್ನಃ ।
ದಾಸೀಶತಂ ಚಾಪಿ ರಥಾಂಶ್ಚ ವಿಂಶತಿಂ
ಯದರ್ಜುನಂ ವೇದಯಸೇ ವಿಶೋಕ ॥೪೬॥

ಭೀಮಸೇನ ನುಡಿದ— ಸಾರಥಿಯೆ, ನಿನಗೆ ನಾನು ಹದಿನಾಲ್ಕು ಗ್ರಾಮಗಳನ್ನು ಬಹುಮಾನವಾಗಿ ನೀಡುತ್ತೇನೆ. ನನಗೆ ಪ್ರಿಯವಾದುದನ್ನೇ ನೀನು ಹೇಳಿರುವೆ. ನಾನು ಪ್ರಸನ್ನನಾಗಿದ್ದೇನೆ. ವಿಶೋಕ, ಅರ್ಜುನ ಬರುತ್ತಿರುವುದನ್ನು ನನಗೆ ತಿಳಿಸಿದೆಯಾದ್ದರಿಂದ ನಿನಗೆ ನೂರು ದಾಸಿಯರನ್ನೂ ಇಪ್ಪತ್ತು ರಥಗಳನ್ನೂ ನೀಡುತ್ತೇನೆ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಭೀಮವಿಶೋಕಸಂವಾದೇ ಅರ್ಜುನಾಗಮನಪ್ರಶಂಸನಂ ನಾಮ
ತ್ರಿಸಪ್ತತಿತಮೋಧ್ಯಾಯಃ ॥೭೩॥

❖

ಮಹಾಭಾರತತಾತ್ಪರ್ಯನಿರ್ಣಯ

ತದಾಸದತ್ ತಂ ಶಕುನಿಃ ಸಸೈನ್ಯೋ
ದುರ್ಯೋಧನಸ್ಯಾವರಜೈರುಪೇತಃ ।
ತಂ ಭೀಮಸೇನೋ ವಿರಥಂ ನಿರಾಯುಧಂ
ವಿಧಾಯ ಬಾಣೈರ್ಭುವಿ ಚ ನ್ಯಪಾತಯತ್ ॥ ೧೪೦ ॥

ಆಗ ಶಕುನಿ ದುರ್ಯೋಧನನ ತಮ್ಮಂದಿರೊಡಗೂಡಿ ಸೈನ್ಯಸಮೇತನಾಗಿ

ಭೀಮನಿಗೆ ಎದುರಾದ. ಭೀಮ ಅವನನ್ನು ಬಾಣಗಳಿಂದ ವಿರಥನನ್ನಾಗಿ ನಿರಾಯುಧನನ್ನಾಗಿ ಮಾಡಿ ನೆಲದ ಮೇಲೆ ಕೆಡವಿದ.

ನ ಜಘ್ನಿವಾಂಸ್ತಂ ಸಹದೇವಭಾಗಂ
ಪ್ರಕಲ್ಪಿತಂ ಸ್ವೇನ ತದಾಕ್ಷಗೋಷ್ಠ್ಯಮ್ ।
ತಂ ಮೂರ್ಛಿತಂ ಶ್ವಾಸಮಾತ್ರಾವಶೇಷಂ
ದುರ್ಯೋಧನಃ ಸ್ವರಥೇನಾಪನಿನ್ಯೇ ॥ ೧೪೧ ॥

ಭೀಮ ಶಕುನಿಯನ್ನು ಕೊಲ್ಲಲಿಲ್ಲ. ಏಕೆಂದರೆ ದ್ಯೂತಸಭೆಯಲ್ಲಿ ಶಕುನಿಯ ವಧೆ ಸಹದೇವನ ಪಾಲಿಗೆ ಎಂದು ತಾನೆ ವ್ಯವಸ್ಥೆ ಮಾಡಿದ್ದ. ಅದರಿಂದ ಮೂರ್ಛಿತನಾಗಿ ಶ್ವಾಸ ಮಾತ್ರ ಉಳಿದಿದ್ದ ಶಕುನಿಯನ್ನು ದುರ್ಯೋಧನ ಎತ್ತಿಕೊಂಡು ತನ್ನ ರಥದಿಂದ ದೂರಕ್ಕೊಯ್ದ.

ದುರ್ಯೋಧನಸ್ಯಾವರಜಾ ದಶಾತ್ರ
ಪ್ರದುದ್ರುವುರ್ಭೀಮಸೇನಂ ವಿಹಾಯ ।
ತದಾರ್ಜುನಂ ವಾಸುದೇವಂ ಚ ದೃಷ್ಟ್ವಾ
ಪ್ರೀತಃ ಶ್ರುತ್ವಾ ಧರ್ಮರಾಜಪ್ರವೃತ್ತಿಮ್ ॥ ೧೪೨ ॥

ದುರ್ಯೋಧನನ ಹತ್ತು ಮಂದಿ ತಮ್ಮಂದಿರು ಭೀಮಸೇನನನ್ನು ಬಿಟ್ಟು ದೂರ ಓಡಿದರು. ಆಗ ಭೀಮ ಅರ್ಜುನನನ್ನೂ ಕೃಷ್ಣನನ್ನೂ ಕಂಡು ಧರ್ಮರಾಜನ ಕ್ಷೇಮಸಮಾಚಾರವನ್ನೂ ಕೇಳಿ ಸಂತುಷ್ಟನಾದ.

❖

ಎಪ್ಪತ್ತನಾಲ್ಕನೆಯ ಅಧ್ಯಾಯ

ಭೀಮ ಶಕುನಿಯನ್ನು ಮೂರ್ಛೆಗೊಳಿಸಿ, ಅವನ ವಧೆಯನ್ನು ಸಹದೇವನ ಪಾಲಿಗೆ ಬಿಟ್ಟ. ದುರ್ಯೋಧನ ಶಕುನಿಯನ್ನು ದೂರಕ್ಕೆ ಒಯ್ದ.

ಸಂಜಯಃ

ಶ್ರುತ್ವಾ ಚ ರಥನಿರ್ಘೋಷಂ ಸಿಂಹನಾದಂ ಚ ಸಂಯುಗೇ ।
ಅರ್ಜುನಃ ಪ್ರಾಹ ಗೋವಿಂದಂ ಶೀಘ್ರಂ ಚೋದಯ ವಾಜಿನಃ ॥೧॥

ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ— ರಣದಲ್ಲಿ ರಥಧ್ವನಿಯನ್ನೂ ಭೀಮನ ಸಿಂಹನಾದಗಳನ್ನೂ ಕೇಳಿ ಅರ್ಜುನನು ಕೃಷ್ಣನಿಗೆ ಹೇಳಿದ, 'ಕುದುರೆಗಳನ್ನು ವೇಗವಾಗಿ ನಡೆಸು' ಎಂದು.

ಅರ್ಜುನಸ್ಯ ವಚಃ ಶ್ರುತ್ವಾ ಗೋವಿಂದೋऽರ್ಜುನಮಬ್ರವೀತ್ ।
ಏಷ ಗಚ್ಛಾಮಿ ಸುಕ್ಷಿಪ್ರಂ ಯತ್ರ ಭೀಮೋ ವ್ಯವಸ್ಥಿತಃ ॥೨॥

ಅರ್ಜುನನ ಮಾತನ್ನು ಕೇಳಿ ಗೋವಿಂದನು ಅರ್ಜುನನಿಗೆ ನುಡಿದ— 'ಕರ್ಣನೊಡನೆ ಹೋರಾಡುತ್ತಿರುವ ಭೀಮನಿರುವಲ್ಲಿಗೇ ನಾನೀಗ ಬಲು ಬೇಗನೆ ಹೋಗುತ್ತಿದ್ದೇನೆ' ಎಂದು.

ಆಯಾಂತಮಶ್ವೈರ್ಹಿಮಶಂಖವರ್ಣೈಃ
ಸುವರ್ಣಮುಕ್ತಾಮಣಿಜಾಲನದ್ಧೈಃ ।
ಜಂಭಂ ಜಿಘಾಂಸುಂ ಪ್ರಗೃಹೀತವಜ್ರಂ
ಜಯಾಯ ದೇವೇಂದ್ರಮಿವೋಗ್ರಮನ್ಯುಮ್ ॥೩॥

ರಥಾಶ್ವಮಾತಂಗಪದಾತಿಸಂಘಾ
ಬಾಣಸ್ವನೈರ್ನೇಮಿಖುರಸ್ವನೈಶ್ಚ ।
ಸನ್ನಾದಯಂತೋ ವಸುಧಾಂ ದಿಶಶ್ಚ
ಕ್ರುದ್ಧಾ ನೃಸಿಂಹಾ ಜಯಮಭ್ಯುದೀಯುಃ ॥೪॥

ಹಿಮದಂತೆ ಶಂಖದಂತೆ ಬಿಳುಪಾದ ಬಂಗಾರ ಮುತ್ತು ಮಣಿಮಾಲೆಗಳಿಂದ ಅಲಂಕೃತವಾದ ಕುದುರೆಗಳಿಂದ, ಜಂಭಾಸುರನ ಸಂಹಾರಕ್ಕೆ ಬಯಸಿ ವಜ್ರಾಯುಧ ಧರಿಸಿದ ದೇವೇಂದ್ರನಂತೆ, ಉಗ್ರಕೋಪದಿಂದ ಜಯಕ್ಕಾಗಿ ಅರ್ಜುನನು ಬರುತ್ತಿದ್ದಂತೇ, ನಡುವೆ ರಥ ಅಶ್ವ ಗಜ ಪದಾತಿಸಮೂಹಗಳ ಶ್ರೇಷ್ಠ ಯೋಧರು ಬಾಣಧ್ವನಿ ರಥಚಕ್ರಧ್ವನಿ ಅಶ್ವಗಳ ಗೊರಸುಗಳ ಧ್ವನಿಗಳಿಂದ ಯುಕ್ತವಾಗಿ ಭೂಮಿ ಅಂತರಿಕ್ಷಗಳಲ್ಲಿ ಪ್ರತಿಧ್ವನಿ ಉಂಟಾಗುವಂತೆ ಮಾಡುತ್ತ ಕ್ರುದ್ಧರಾಗಿ ಆ ಅರ್ಜುನನನ್ನು ಇದಿರಿಸಿದರು.

ತೇಷಾಂ ಚ ಪಾರ್ಥಸ್ಯ ಮಹತ್ತದಾಸೀದ್
ದೇಹಾಸುಪಾಪ್ಮಕ್ಷಪಣಂ ಸುಯುದ್ಧಮ್ ।

ತ್ರೈಲೋಕ್ಯಹೇತೋರಸುರೈರ್ಯಥಾಸೀದ್
ದೇವಸ್ಯ ವಿಷ್ಣೋರ್ಜಯತಾಂ ವರಸ್ಯ ॥೫॥

ಮೂಲೋಕಗಳ ಪ್ರಾಪ್ತಿಗಾಗಿ ಜಯಗಳಿಸುವವರಲ್ಲಿ ಶ್ರೇಷ್ಠನಾದ ವಿಷ್ಣುದೇವನಿಗೂ ಅಸುರರಿಗೂ ನಡೆದ ಯುದ್ಧದಂತೆ, ದೇಹ ಪ್ರಾಣ ಪಾಪ ಕ್ಷಯಕಾರಿಯಾದ ಒಳ್ಳೆಯ ಮಹಾಯುದ್ಧವು ಪಾರ್ಥನಿಗೂ ಕೌರವ ಯೋಧರಿಗೂ ನಡೆಯಿತು.

ತೈರಸ್ತಮುಚ್ಚಾವಚಮಾಯುಧೌಘ-
ಮೇಕಃ ಪ್ರಚಿಚ್ಛೇದ ಕಿರೀಟಮಾಲೀ ।
ಕ್ಷುರಾರ್ಧಚಂದ್ರೈರ್ನಿಶಿತೈಶ್ಚ ಬಾಣೈಃ
ಶಿರಾಂಸಿ ತೇಷಾಂ ಬಹುಧಾ ಚ ಬಾಹೂನ್ ॥೬॥

ಅವರು ಎಸೆದ ದೊಡ್ಡ ಸಣ್ಣ ಆಯುಧಗಳ ಪ್ರವಾಹವನ್ನು ಅರ್ಜುನನು ಒಬ್ಬನೆ ಕ್ಷುರ, ಅರ್ಧಚಂದ್ರಗಳೆಂಬ ಹರಿತವಾದ ಬಾಣಗಳಿಂದ ಕಡಿದ. ಅವರ ಶಿರಸ್ಸು ಬಾಹುಗಳನ್ನೂ ಬಹುವಾಗಿ ಕತ್ತರಿಸಿದ.

ಛತ್ರಾಣಿ ವಾಲವ್ಯಜನಾನಿ ಕೇತೂ-
ನಶ್ವಾನ್ ರಥಾನ್ ಪತ್ತಿಗಣಾನ್ ದ್ವಿಪಾಂಶ್ಚ ।
ತೇ ಪೇತುರುರ್ವ್ಯಾಂ ಬಹುಧಾ ವಿರೂಪಾ
ವಾತಪ್ರಭಗ್ನಾನಿ ಯಥಾ ವನಾನಿ ॥೭॥

ಛತ್ರ–ಚಾಮರ ಬಾಲವ್ಯಜನಗಳನ್ನೂ ಧ್ವಜ ಅಶ್ವ ರಥಗಳನ್ನೂ ಪದಾತಿ ಸಮೂಹಗಳನ್ನೂ ಗಜಸೈನ್ಯಗಳನ್ನೂ ಅರ್ಜುನನು ಬಾಣಗಳಿಂದ ಕತ್ತರಿಸಿದ. ಬಿರುಗಾಳಿಯಿಂದ ಮುರಿದು ಬೀಳುವ ವನಗಳಂತೆ ಅವರೆಲ್ಲರೂ ಬಹುವಾಗಿ ವಿರೂಪಗೊಂಡು ರಣಭೂಮಿಯಲ್ಲಿ ಒರಗಿದರು.

ಸುವರ್ಣಜಾಲಾವಿತತಾ ಮಹಾಗಜಾಃ
ಸವೈಜಯಂತೀಧ್ವಜಯೋಧಕಲ್ಪಿತಾಃ ।
ಸುವರ್ಣಪುಂಖೈರಿಷುಭಿಃ ಸಮಾಚಿತಾ-
ಶ್ಚಕಾಶಿರೇ ಪ್ರಜ್ವಲಿತಾ ಯಥಾಚಲಾಃ ॥೮॥

ಬಂಗಾರದ ಮಾಲೆಗಳಿಂದ ತುಂಬಿದ, ವೈಜಯಂತೀ ಧ್ವಜ ಯೋಧರಿಂದ ಶೋಭಿತವಾದ ಮಹಾಗಜಗಳು, ಬಂಗಾರದ ಪುಕ್ಕಉಳ್ಳ ಅರ್ಜುನನ ಬಾಣಗಳು ಮೈಯೆಲ್ಲ ನಾಟಿದಾಗ, ಕಾಳ್ಗಿಚ್ಚಿನಿಂದ ಉರಿವ ಬೆಟ್ಟಗಳಂತೆ ಕಂಡುಬಂದುವು.

ವಿದಾರ್ಯ ನಾಗಾಂಶ್ಚ ರಥಾಂಶ್ಚ ವಾಜಿನಃ
ಶರೋತ್ತಮೈರ್ವಾಸವವಜ್ರಸನ್ನಿಭೈಃ।
ದ್ರುತಂ ಯಯೌ ಕರ್ಣಜಿಘಾಂಸಯಾ ತಥಾ
ಯಥಾ ಮರುತ್ವಾನ್ ಬಲಭೇದನೇ ಪುರಾ ॥೯॥

ಗಜ ರಥ ಅಶ್ವ ಸೈನಿಕರನ್ನು ಇಂದ್ರನ ವಜ್ರಾಯುಧಕ್ಕೆ ಸಮವಾದ ಉತ್ತಮ ಬಾಣಗಳಿಂದ ಭೇದಿಸಿ, ಹಿಂದೆ ಬಲಾಸುರನನ್ನು ಭೇದಿಸಲು ಹೊರಟ ಇಂದ್ರನಂತೆ, ಅರ್ಜುನನು ಕರ್ಣನನ್ನು ವಧಿಸಲು ವೇಗವಾಗಿ ಮುಂದೆ ನಡೆದ.

ತತಃ ಸ ಪುರುಷವ್ಯಾಘ್ರಃ ಸೂತಸೈನ್ಯಮರಿಂದಮಃ ।
ಪ್ರವಿವೇಶ ಮಹಾಬಾಹುರ್ಮಕರಃ ಸಾಗರಂ ಯಥಾ ॥೧೦॥

ಶತ್ರುನಾಶಕನಾದ ಮಹಾಬಾಹು ಪುರುಷಶ್ರೇಷ್ಠನಾದ ಅರ್ಜುನನು ಕರ್ಣನ ಸೈನ್ಯವನ್ನು ಸಾಗರವನ್ನು ಮೊಸಳೆಯಂತೆ, ಪ್ರವೇಶಿಸಿದ.

ತಂ ದೃಷ್ಟ್ವಾ ತಾವಕಾ ರಾಜನ್ ರಥಪತ್ತಿಸಮನ್ವಿತಾಃ ।
ಗಜಾಶ್ವಸಾದಿಬಹುಲಾಃ ಪಾಂಡವಂ ಸಮುಪಾದ್ರವನ್ ॥೧೧॥

ರಾಜನೆ, ಅರ್ಜುನನನ್ನು ನೋಡಿ ರಥ–ಪದಾತಿಯುಕ್ತವಾದ ಗಜ–ಅಶ್ವಯೋಧರಿಂದ ತುಂಬಿದ್ದ ನಿನ್ನ ಸೈನಿಕರು ಅವನನ್ನು ಆಕ್ರಮಿಸಿದರು.

ತತ್ರಾಭಿದ್ರವತಾಂ ಪಾರ್ಥಮಾರಾವಃ ಸುಮಹಾನಭೂತ್ ।
ಸಾಗರಸ್ಯೇವ ಮತ್ತಸ್ಯ ಯಥಾ ಸ್ಯಾತ್ ಸಲಿಲಸ್ವನಃ ॥೧೨॥

ಅರ್ಜುನನನ್ನು ಆಕ್ರಮಿಸುವಾಗ ನಿನ್ನ ಸೈನಿಕರ ಗರ್ಜನೆ ಕ್ಷುಬ್ಧವಾದ ಸಾಗರ ಜಲದ ಭೋರ್ಗರೆವ ಶಬ್ದದಂತೆ ಬಲು ದೊಡ್ಡದಾಗಿತ್ತು.

ತೇ ತು ತಂ ಪುರುಷವ್ಯಾಘ್ರಂ ವ್ಯಾಘ್ರಾ ಇವ ಮಹಾರಥಾಃ ।
ಅಭ್ಯದ್ರವಂತ ಸಂಗ್ರಾಮೇ ತ್ಯಕ್ತ್ವಾ ಪ್ರಾಣಕೃತಂ ಭಯಮ್ ॥೧೩॥

ಪುರುಷಶ್ರೇಷ್ಠನಾದ ಅರ್ಜುನನ ಬಳಿಗೆ ಮಹಾರಥರು ಪ್ರಾಣಭಯವನ್ನು ಬಿಟ್ಟು ಹುಲಿಗಳಂತೆ ಮೇಲೇರಿ ಬಂದರು.

ತೇಷಾಮಾಪತತಾಂ ತತ್ರ ಶರವರ್ಷಾಣಿ ಮುಂಚತಾಮ್ ।
ಅರ್ಜುನೋ ವ್ಯಧಮತ್ ಸೈನ್ಯಂ ಮಹಾವಾತೋ ಘನಾನಿವ ॥೧೪॥

ಬಾಣಗಳ ಮಳೆ ಸುರಿಸುತ್ತ ತನ್ನ ಮೇಲೇರಿ ಬರುತ್ತಿದ್ದ ಆ ಶತ್ರುಗಳ ಸೈನ್ಯವನ್ನು ಮೋಡಗಳನ್ನು ಬಿರುಗಾಳಿಯಂತೆ ಅರ್ಜುನನು ಚದುರಿಸಿದ.

ತೇऽರ್ಜುನಂ ಸಹಿತಾ ಭೂತ್ವಾ ರಥವಂಶೈಃ ಪ್ರಹಾರಿಣಃ ।
ಅಭಿಯಾಯ ಮಹೇಷ್ವಾಸಾ ವಿವ್ಯಧುರ್ನಿಶಿತೈಃ ಶರೈಃ ॥೧೫॥

ಮಹಾಬಿಲ್ಲಾಳುಗಳಾದ ಅವರೆಲ್ಲರೂ ಪುನಃ ಒಟ್ಟಾಗಿ ರಥಸಮೂಹಗಳಿಂದ ಬಾಣಪ್ರಹಾರ ಮಾಡುತ್ತ ಇದಿರಿಗೆ ಬಂದು ಹರಿತವಾದ ಬಾಣಗಳಿಂದ ಅರ್ಜುನನನ್ನು ಹೊಡೆದರು.

ತತೋऽರ್ಜುನಃ ಸಹಸ್ರಾಣಿ ರಥವಾರಣವಾಜಿನಾಮ್ ।
ಪ್ರೇಷಯಾಮಾಸ ವಿಶಿಖೈರ್ಯಮಸ್ಯ ಸದನಂ ಪ್ರತಿ ॥೧೬॥

ಆಗ ಅರ್ಜುನನು ಸಾವಿರಾರು ರಥ ಗಜ ಅಶ್ವಗಳನ್ನು ಬಾಣಗಳಿಂದ ಯಮಸದನಕ್ಕೆ ಅಟ್ಟಿದ.

ತೇ ವಧ್ಯಮಾನಾಃ ಸಮರೇ ಪಾರ್ಥಚಾಪಚ್ಯುತೈಃ ಶರೈಃ ।
ತತ್ರ ತತ್ರ ಸ್ಮ ಲೀಯಂತೇ ಭಯೇ ಜಾತೇ ಮಹಾರಥಾಃ ॥೧೭॥

ಮಹಾರಥಿಕರಿಗೆ ಈಗ ಭಯಉಂಟಾದ್ದರಿಂದ ರಣದಲ್ಲಿ ಪಾರ್ಥನ ಧನುಸ್ಸಿನಿಂದ ಹೊರಟ ಬಾಣಗಳಿಂದ ಹೊಡೆಸಿಕೊಳ್ಳುತ್ತಿದ್ದಂತೇ ಅಲ್ಲಲ್ಲಿ ಅಡಗಿದರು.

ತೇಷಾಂ ಚತುಃಶತಾನ್ ವೀರಾನ್ ಯತಮಾನಾನ್ ಮಹಾರಥಾನ್ ।
ಅರ್ಜುನೋ ನಿಶಿತೈರ್ಬಾಣೈರನಯದ್ ಯಮಸಾದನಮ್ ॥೧೮॥

ಅವರಲ್ಲಿ ಇನ್ನೂ ನಿಂತು ಯುದ್ಧ ಮಾಡುತ್ತಿದ್ದ ನಾನ್ನೂರು ಮಹಾರಥರನ್ನು ಅರ್ಜುನನು ಹರಿತವಾದ ಬಾಣಗಳಿಂದ ಯಮಸದನಕ್ಕೆ ಕಳಿಸಿದ.

ತೇ ವಧ್ಯಮಾನಾಃ ಸಮರೇ ನಾನಾಲಿಂಗೈಃ ಶಿತೈಃ ಶರೈಃ ।
ಅರ್ಜುನಂ ಸಮಭಿತ್ಯಜ್ಯ ದುದ್ರುವುರ್ವೈ ದಿಶೋ ಭಯಾತ್ ॥೧೯॥

ಅರ್ಜುನನು ಬೇರೆಬೇರೆ ಬಗೆಯ ಹರಿತವಾದ ಬಾಣಗಳಿಂದ ಹೊಡೆಯುವಾಗ ಅವರು ಭಯದಿಂದ ಅವನನ್ನು ಬಿಟ್ಟು ದಿಕ್ಕುಗಳಿಗೆ ಓಡಿದರು.

ತೇಷಾಂ ಶಬ್ದೋ ಮಹಾನಾಸೀದ್ ದ್ರವತಾಂ ವಾಹಿನೀಮುಖೇ ।
ಮಹೌಘಸ್ಯೇವ ಭದ್ರಸ್ಯ ಗಿರಿಮಾಸಾದ್ಯ ದೀರ್ಯತಃ ॥೨೦॥

ಅವರು ಓಡುವಾಗ ಸೈನ್ಯದ ಮುಂಭಾಗದಲ್ಲಿ ಬೆಟ್ಟದ ಬುಡಕ್ಕೆ ವೇಗವಾಗಿ ಬಂದು ಒಡೆಯುವ ದೊಡ್ಡಜಲಪ್ರವಾಹದಂತೆ ದೊಡ್ಡಶಬ್ದ ಉಂಟಾಯಿತು.

ತಾಂ ತು ಸೇನಾಂ ಭೃಶಂ ವಿದ್ಧ್ವಾ ದ್ರಾವಯಿತ್ವಾರ್ಜುನಃ ಶರೈಃ ।
ಪ್ರಾಯಾದಭಿಮುಖಃ ಪಾರ್ಥಃ ಸೂತಾನೀಕಾನಿ ಮಾರಿಷ ॥೨೧॥

ಆ ಸೈನ್ಯವನ್ನು ಬಾಣಗಳಿಂದ ಚೆನ್ನಾಗಿ ಹೊಡೆದು ಓಟ್ಟಿಸಿಕೊಂಡು ಹೋಗಿ, ತಿರುಗಿ ಕರ್ಣನ ಸೈನ್ಯದ ಕಡೆಗೇ ಅರ್ಜುನನು ಬಂದ.

ತಸ್ಯ ಶಬ್ದೋ ಮಹಾನಾಸೀತ್ ಪರಾನಭಿಮುಖಸ್ಯ ವೈ ।
ಗರುಡಸ್ಯೇವ ಪತತಃ ಪನ್ನಗಾರ್ಥೇ ಯಥಾ ಪುರಾ ॥೨೨॥

ಶತ್ರುಗಳ ಕಡೆಗೆ ಅಭಿಮುಖವಾಗಿ ಅರ್ಜುನನು ಹಿಂತಿರುಗಿ ಬರುವಾಗ, ಹಿಂದೆ ಹಾವುಗಳನ್ನೆತ್ತಿಕೊಳ್ಳಲು ಗರುಡನು ಆಗಮಿಸಿದಾಗ ಹೇಗೋ ಹಾಗೇ, ದೊಡ್ಡ ಶಬ್ದ ಉಂಟಾಯಿತು.

ತಂ ತು ಶಬ್ದಮಭಿಶ್ರುತ್ಯ ಭೀಮಸೇನೋ ಮಹಾಬಲಃ ।
ಬಭೂವ ಪರಮಪ್ರೀತಃ ಪಾರ್ಥದರ್ಶನಲಾಲಸಃ ॥೨೩॥

ಆ ಶಬ್ದವನ್ನು ಕೇಳಿ ಮಹಾಬಲಿ ಭೀಮಸೇನನು ಅರ್ಜುನನ ದರ್ಶನ ಲಾಲಸೆಯಿಂದ ಬಹಳ ಸಂತುಷ್ಟನಾದ.

ಶ್ರುತ್ವೈವ ಪಾರ್ಥಮಾಯಾಂತಂ ಭೀಮಸೇನಃ ಪ್ರತಾಪವಾನ್ ।
ತ್ಯಕ್ತ್ವಾ ಪ್ರಾಣಾನ್ ಮಹಾರಾಜ ಸೇನಾಂ ತವ ಮಮರ್ದ ಹ ॥೨೪॥

ಅರ್ಜುನನು ತನ್ನ ಬಳಿಗೆ ಬರುವ ಶಬ್ದವನ್ನು ಕೇಳಿದ ಮಾತ್ರಕ್ಕೇ ಪ್ರತಾಪಶಾಲಿ ಭೀಮಸೇನನು, ಮಹಾರಾಜ, ಪ್ರಾಣಭಯವನ್ನು ತೊರೆದು ನಿನ್ನ ಸೈನ್ಯವನ್ನು ಪುಡಿಗೈದ.

ಸ ವಾಯುವೀರ್ಯಪ್ರತಿಮೋ ವಾಯುವೇಗಸಮೋ ಜವೇ ।
ವಾಯುವದ್ ವ್ಯಚರದ್ ಭೀಮೋ ವಾಯುಪುತ್ರಃ
ಪ್ರತಾಪವಾನ್ ॥೨೫॥

ವೀರ್ಯದಲ್ಲಿ ವಾಯುಸಮ, ವೇಗದಲ್ಲಿಯೂ ವಾಯುವೇಗಸಮ, ಪ್ರತಾಪಶಾಲಿ ವಾಯುಪುತ್ರ ಭೀಮನು ವಾಯುವಿನಂತೆ, ರಣದಲ್ಲಿ ಸಂಚರಿಸಿದ.

ತೇನಾರ್ದ್ಯಮಾನಾ ರಾಜೇಂದ್ರ ಸೇನಾ ತವ ವಿಶಾಂಪತೇ ।
ವ್ಯಭ್ರಾಮ್ಯತ ಮಹಾರಾಜ ಭಿನ್ನಾ ನೌರಿವ ಸಾಗರೇ ॥೨೬॥

ರಾಜನೆ, ಭೀಮನಿಂದ ಪೀಡಿತವಾಗುವಾಗ ನಿನ್ನ ಸೈನ್ಯವು ಸಾಗರದಲ್ಲಿ ಒಡೆದ ನೌಕೆಯಂತೆ ದಿಗ್ಭ್ರಮೆ ಹೊಂದಿತು.

ತಾಂ ತು ಸೇನಾಂ ತದಾ ಭೀಮೋ ದರ್ಶಯನ್ ಪಾಣಿಲಾಘವಮ್ ।
ಶರೈರವಚಕರ್ತೋರ್ಗ್ಯೈಃ ಪ್ರೇಷಯಿಷ್ಯನ್ ಯಮಕ್ಷಯಮ್ ॥೨೭॥

ಆಗ ಭೀಮನು ತನ್ನ ಕೈಚಳಕವನ್ನು ತೋರುತ್ತ ಆ ಸೈನ್ಯವನ್ನು ಯಮಸದನಕ್ಕೆ ಅಟ್ಟುವುದಕ್ಕಾಗಿ ಉಗ್ರಬಾಣಗಳಿಂದ ಚೂರುಚೂರು ಮಾಡಿದ.

ತತ್ರ ಭಾರತ ಭೀಮಸ್ಯ ಬಲಂ ದೃಷ್ಟ್ವಾತಿಮಾನುಷಮ್ ।
ವ್ಯತ್ರಸ್ಯಂತ ರಣೇ ಯೋಧಾಃ ಕಾಲಸ್ಯೇವ ಯುಗಕ್ಷಯೇ ॥೨೮॥

ರಾಜನೆ, ಭೀಮನ ಅತಿಮಾನುಷವಾದ ಬಲವನ್ನು ಕಂಡು ಪ್ರಾಣಿಗಳು ಯುಗಪ್ರಳಯದಲ್ಲಿ ಕಾಲಯಮನಿಗೆ ಹೆದರುವಂತೆ ರಣದಲ್ಲಿ ಯೋಧರು ಭೀಮನಿಗೆ ಹೆದರಿದರು.

ತಥಾರ್ದಿತಾನ್ ಭೀಮಬಲಾನ್ ಭೀಮಸೇನೇನ ಭಾರತ ।
ದೃಷ್ಟ್ವಾ ದುರ್ಯೋಧನೋ ರಾಜಾ ಇದಂ ವಚನಮಬ್ರವೀತ್ ॥೨೯॥

ಭಯಂಕರ ಬಲಉಳ್ಳ ಕೌರವಯೋಧರು ಭೀಮಸೇನನಿಂದ ಹೊಡೆಸಿ ಕೊಳ್ಳುತ್ತಿರುವುದನ್ನು ಕಂಡು ರಾಜಾ ದುರ್ಯೋಧನನು ನುಡಿದ.

ಸೈನಿಕಾನ್ ಸ ಮಹೇಷ್ವಾಸೋ ಯೋಧಾಂಶ್ಚ ಭರತರ್ಷಭ ।
ಸಮಾದಿಶದ್ ರಣೇ ಸರ್ವಾನ್ ಹತ ಭೀಮಮಿತಿ ಸ್ಮ ಹ ।
ತಸ್ಮಿನ್ ಹತೇ ಹತಂ ಮನ್ಯೇ ಸರ್ವಸೈನ್ಯಮಶೇಷತಃ ॥೩೦॥

ರಾಜನೆ, ಮಹಾ ಬಿಲ್ಲಾಳುವಾದ ದುರ್ಯೋಧನನು ಎಲ್ಲ ಸೈನಿಕ ಯೋಧರನ್ನು ರಣದಲ್ಲಿ ಆದೇಶಿಸಿದ: 'ಭೀಮನನ್ನು ಸಂಹರಿಸಿರಿ. ಅವನು ಹತನಾದರೆ ಪಾಂಡವರ ಎಲ್ಲ ಸೈನ್ಯವು ಹತವಾಯಿತೆಂದೇ ತಿಳಿಯುತ್ತೇನೆ' ಎಂದು.

ಪ್ರತಿಗೃಹ್ಯ ಚ ತಾಮಾಜ್ಞಾಂ ತವ ಪುತ್ರಸ್ಯ ಪಾರ್ಥಿವಾಃ ।
ಭೀಮಂ ಪ್ರಚ್ಛಾದಯಾಮಾಸುಃ ಶರವರ್ಷೈಃ ಸಮಂತತಃ ॥೩೧॥

ನಿನ್ನ ಮಗನಾದ ದುರ್ಯೋಧನನ ಆಜ್ಞೆಯನ್ನು ಶಿರಸಾವಹಿಸಿ ರಾಜರು ಎಲ್ಲ ಕಡೆಯಿಂದ ಭೀಮನನ್ನು ಬಾಣಗಳ ಮಳೆಯಿಂದ ಮುಚ್ಚಿದರು.

ಗಜಾಶ್ಚ ಬಹುಲಾ ರಾಜನ್ನರಾಶ್ಚ ಜಯಗೃದ್ಧಿನಃ ।
ರಥಾ ಹಯಾಶ್ಚ ರಾಜೇಂದ್ರ ಪರಿವವ್ರುರ್ವೃಕೋದರಮ್ ॥೩೨॥

ರಾಜನೆ, ಜಯಾಕಾಂಕ್ಷಿಗಳಾದ ಬಹುಮಂದಿ ಗಜ ಪದಾತಿ ರಥಅಶ್ವಯೋಧರು ಭೀಮನನ್ನು ಸುತ್ತುವರಿದರು.

ಸ ತೈಃ ಪರಿವೃತಃ ಶೂರೈಃ ಶೂರೋ ರಾಜನ್ ಸಮಂತತಃ ।
ಶುಶುಭೇ ಭರತಶ್ರೇಷ್ಠ ನಕ್ಷತ್ರೈರಿವ ಚಂದ್ರಮಾಃ ॥೩೩॥

ರಾಜನೆ, ಶೂರರಾದ ಆ ರಾಜರೆಲ್ಲರಿಂದ ಎಲ್ಲೆಡೆ ಸುತ್ತುವರಿದ ಶೂರ ಭೀಮನು ನಕ್ಷತ್ರಗಳಿಂದ ಸುತ್ತುವರಿದ ಚಂದ್ರನಂತೆ ಶೋಭಿಸಿದ.

ಸ ರರಾಜ ತಥಾ ಸಂಖ್ಯೇ ದರ್ಶನೀಯೋ ನರೋತ್ತಮಃ ।
ನಿರ್ವಿಶೇಷಂ ಮಹಾರಾಜ ಯಥಾ ಹಿ ವಿಜಯಸ್ತಥಾ ॥೩೪॥

ಮಹಾರಾಜ, ಅರ್ಜುನನಂತೆಯೇ ನರೋತ್ತಮನಾದ ಭೀಮನೂ ಕೂಡ ಏನೂ ವ್ಯತ್ಯಾಸವಿಲ್ಲದೆ ರಣದಲ್ಲಿ ಪ್ರೇಕ್ಷಣೀಯನಾಗಿ ಕಂಗೊಳಿಸಿದ.

ತತ್ರ ತೇ ಪಾರ್ಥಿವಾಃ ಸರ್ವೇ ಶರವೃಷ್ಟೀಃ ಸಮಾಸೃಜನ್ ।
ಕ್ರೋಧರಕ್ತೇಕ್ಷಣಾಃ ಕ್ರೂರಾ ಹಂತುಕಾಮಾ ವೃಕೋದರಮ್ ॥೩೫॥

ಆಗ ಕ್ರೂರರಾದ ಆ ಎಲ್ಲ ರಾಜರೂ ಭೀಮನನ್ನು ಕೊಲ್ಲಲು ಬಯಸಿ ಕ್ರೋಧದಿಂದ ಕೆಂಪುಕಣ್ಣಿನವರಾಗಿ ಬಾಣಗಳ ಮಳೆಗರೆದರು.

ಸ ವಿದಾರ್ಯ ಮಹಾಸೇನಾಂ ಶರೈಃ ಸನ್ನತಪರ್ವಭಿಃ ।
ನಿಶ್ಚಕ್ರಾಮ ರಣಾದ್ ಭೀಮೋ ಮತ್ಸ್ಯೋ ಜಾಲಾದಿವಾಂಭಸಿ ॥೩೬॥

ಭೀಮಸೇನನು ಡೊಂಕುಗಿಣ್ಣಿನ ಬಾಣಗಳಿಂದ ಮಹಾಸೈನ್ಯವನ್ನು ಭೇದಿಸಿ ನೀರಿನಲ್ಲಿ ಮೀನು ಬಲೆಯಿಂದ ಹೊರಗೆ ಬರುವಂತೆ ರಣದಿಂದ ಮುಕ್ತನಾಗಿ ಹೊರಬಂದ.

ಹತ್ವಾ ದಶ ಸಹಸ್ರಾಣಿ ಗಜಾನಾಮನಿವರ್ತಿನಾಮ್ ।
ನೃಣಾಂ ಶತಸಹಸ್ರೇ ದ್ವೇ ದ್ವೇ ಶತೇ ಚೈವ ಭಾರತ ॥೩೭॥

ಪಂಚ ಚಾಶ್ವಸಹಸ್ರಾಣಿ ರಥಾನಾಂ ಶತಮೇವ ಚ ।
ಹತ್ವಾ ಪ್ರಾಸ್ಯಂದಯದ್ ಭೀಮೋ ನದೀಂ
ಶೋಣಿತಕರ್ದಮಾಮ್ ॥೩೮॥

ಯುದ್ಧದಿಂದ ಹಿಮ್ಮೆಟ್ಟದಿರುವ ಹತ್ತು ಸಾವಿರ ಗಜಯೋಧರನ್ನೂ ಎರಡು ಲಕ್ಷದ ಇನ್ನೂರು ಪದಾತಿಗಳನ್ನೂ ಐದುಸಾವಿರ ಅಶ್ವಯೋಧರನ್ನೂ ನೂರು ರಥಿಕರನ್ನೂ ಕೊಂದು ಭೀಮನು ರಕ್ತದ ಕೆಸರಿನ ಹೊಳೆಯನ್ನೇ ಹರಿಸಿದ.

ಶೋಣಿತೋದಾಂ ರಥಾವರ್ತಾಂ ಹಸ್ತಿಗ್ರಾಹಸಮಾಕುಲಾಮ್ ।
ನರಮೀನಾಮಶ್ವನಕ್ರಾಂ ಕೇಶಶೈವಲಶಾದ್ವಲಾಮ್ ॥೩೯॥

ಅಲ್ಲಿ ರಕ್ತವೆ ನೀರು. ರಥವೆ ಸುಳಿ. ಗಜಗಳೆಂಬ ಮೊಸಳೆಗಳಿಂದ ತುಂಬಿದೆ. ಪದಾತಿಗಳು ಮೀನುಗಳು, ಅಶ್ವಗಳು ಮೊಸಳೆಗಳು. ಕೇಶಗಳು ಪಾಚಿಗಳು.

ಸಂಛನ್ನಭುಜನಾಗೇಂದ್ರಾಂ ಬಹುರತ್ನಾಪಹಾರಿಣೀಮ್ ।
ಊರುಗ್ರಾಹಾಂ ಮಜ್ಜಪಂಕಾಂ ಶೀರ್ಷೋಪಲಸಮಾಕುಲಾಮ್ ॥೪೦॥

ಆ ನದಿಯಲ್ಲಿ ಕತ್ತರಿಸಿಬಿದ್ದ ಬಾಹುಗಳೇ ದೊಡ್ಡಹಾವುಗಳು. ಯೋಧರ ಬಹುರತ್ನಗಳನ್ನು ಆ ಪ್ರವಾಹ ಕೊಚ್ಚಿಕೊಂಡು ಹೋಗುತ್ತಿತ್ತು. ತೊಡೆಗಳು ಮೊಸಳೆಗಳಂತೆ, ಮಜ್ಜೆ ಕೆಸರಿನಂತೆ, ಶಿರಸ್ಸುಗಳು ಕಲ್ಲುಗಳಂತೆ ತುಂಬಿದ್ದುವು.

ಧನುಷ್ಕಾಶಾಂ ಶರಾವಾಪಾಂ ಗದಾಪರಿಘಪನ್ನಗಾಮ್ ।
ಹಂಸಚ್ಛತ್ರಧ್ವಜೋಪೇತಾಮುಷ್ಣೀಷವರಫೇನಿಲಾಮ್ ॥೪೧॥

ಆ ನದಿಯಲ್ಲಿ ಧನುಸ್ಸುಗಳು ಜೊಂಡುಹುಲ್ಲುಗಳು ಬಾಣಗಳು ತರಂಗಗಳು. ಗದೆ–ಪರಿಘಗಳು ಹಾವುಗಳು, ಛತ್ರ ಧ್ವಜಗಳೇ ಹಂಸಗಳು. ಶಿರಸ್ತ್ರಾಣಗಳೇ ನೊರೆಗಳು.

ಹಾರಪದ್ಮಾಕರಾಂ ಚೈವ ಭೂಮಿರೇಣೂರ್ಮಿಮಾಲಿನೀಮ್ ।
ಇತ್ಥಂವೃತ್ತವತೀಂ ಸಂಖೇ ಸುತರಾಂ ಭೀರುದುಸ್ತರಾಮ್ ।
ಯೋಧವ್ರಾತವತೀಂ ಸಂಖೇ ವಹಂತೀಂ ಯಮಸಾದನಮ್ ॥೪೨॥

ಆ ರಕ್ತನದಿಯಲ್ಲಿ ಹಾರಗಳೇ ಕಮಲಸಮೂಹ. ರಣಭೂಮಿಯಲ್ಲಿ ಏಳುವ ಧೂಳು ಅಲೆಗಳ ಸಾಲುಗಳು. ಇಂಥ ಹರಿವು ಉಳ್ಳ ರಕ್ತನದಿ ರಣದಲ್ಲಿ ಸುತರಾಂ ಹೇಡಿಗಳಿಗೆ ದುಸ್ತರವಾದುದು. ಯೋಧಸಮೂಹಗಳನ್ನು ತನ್ನಲ್ಲಿ ತುಂಬಿಕೊಂಡು ಯಮಸದನಕ್ಕೇ ಹರಿಯುತ್ತಿದೆ.

ಕ್ಷಣೇನ ಪುರುಷವ್ಯಾಘ್ರಃ ಪ್ರಾವರ್ತಯತ ನಿಮ್ನಗಾಮ್ ।
ಯಥಾ ವೈತರಣೀಮುಗ್ರಾಂ ದುಸ್ತರಾಮಕೃತಾತ್ಮಭಿಃ ॥೪೩॥

ಪುರುಷಶ್ರೇಷ್ಠನಾದ ಭೀಮಸೇನನು ಒಂದು ಕ್ಷಣದಲ್ಲಿ ವೈತರಣೀ ನದಿಯಂತೆ ಉಗ್ರವಾದ ಮನೋನಿಗ್ರಹವಿಲ್ಲದವರಿಗೆ ದುಸ್ತರವಾದ ರಕ್ತದ ನದಿಯನ್ನೇ ಹರಿಸಿದ.

ಯತೋ ಯತಃ ಪಾಂಡವೇಯಃ ಪ್ರವೃತ್ತೋ ರಥಸತ್ತಮಃ ।
ತತಸ್ತತೋऽಪಾತಯತ ಯೋಧಾನ್ ಶತಸಹಸ್ರಶಃ ॥೪೪॥

ಶ್ರೇಷ್ಠರಥಿಕನಾದ ಭೀಮಸೇನನು ರಣರಂಗದಲ್ಲಿ ಎಲ್ಲೆಲ್ಲಿ ನಡೆದಾಡುವನೋ ಅಲ್ಲಲ್ಲಿ ನೂರಾರು ಸಾವಿರಾರು ಯೋಧರನ್ನು ನೆಲದಲ್ಲಿ ಕೆಡವಿದ.

ಏವಂ ದೃಷ್ಟ್ವಾ ಕೃತಂ ಕರ್ಮ ಭೀಮಸೇನೇನ ಸಂಯುಗೇ ।
ದುರ್ಯೋಧನೋ ಮಹಾರಾಜ ಶಕುನಿಂ ವಾಕ್ಯಮಬ್ರವೀತ್ ॥೪೫॥

ಹೀಗೆ ಭೀಮಸೇನನು ರಣದಲ್ಲಿ ಮಾಡಿದ ಕರ್ಮವನ್ನು ನೋಡಿ, ಮಹಾರಾಜ, ದುರ್ಯೋಧನನು ಶಕುನಿಗೆ ಈ ಮಾತನ್ನು ನುಡಿದ.

ಜಹಿ ಮಾತುಲ ಸಂಗ್ರಾಮೇ ಭೀಮಂ ಭೀಮಂ ಮಹಾಬಲಮ್ ।
ಅಸ್ಮಿನ್ ಜಿತೇ ಜಿತಂ ಸರ್ವಂ ಪಾಂಡವೇಯಂ ಮಹದ್‌ಬಲಮ್ ॥೪೬॥

ಮಾವ, ಭಯಂಕರ ಮಹಾಬಲಶಾಲಿಯಾದ ಭೀಮನನ್ನು ಸಂಗ್ರಾಮದಲ್ಲಿ ಸಂಹರಿಸು. ಈತನೊಬ್ಬ ಜಿತನಾದರೆ ಪಾಂಡವರ ಇಡಿ ಮಹತ್ತಾದ ಸೈನ್ಯವೇ ಜಿತವಾಗುವುದು.

ತತಃ ಪ್ರಾಯಾನ್ಮಹಾರಾಜ ಸೌಬಲೇಯಃ ಪ್ರತಾಪವಾನ್ ।
ರಣಾಯ ಮಹತೇ ಯುಕ್ತೋ ಭ್ರಾತೃಭಿಃ ಪರಿವಾರಿತಃ ॥೪೭॥

ಮಹಾರಾಜ, ಒಡನೆ ಪ್ರತಾಪಶಾಲಿಯಾದ ಶಕುನಿಯು ಸೋದರರಿಂದ ಪರಿವೃತನಾಗಿ ದೊಡ್ಡ ರಣಕ್ಕೆ ಸನ್ನದ್ಧನಾಗಿ ಹೊರಟ.

ಸ ಸಮಾಸಾದ್ಯ ಸಂಗ್ರಾಮೇ ಭೀಮಂ ಭೀಮಪರಾಕ್ರಮಮ್ ।
ವಾರಯಾಮಾಸ ತಂ ವೀರೋ ವೇಲೇವ ಮಕರಾಲಯಮ್ ॥೪೮॥
ಅಭ್ಯವರ್ತತ ತಂ ಭೀಮೋ ವಾರ್ಯಮಾಣಃ ಶಿತೈಃ ಶರೈಃ ॥೪೯॥

ಶಕುನಿಯು ರಣದಲ್ಲಿ ಭಯಂಕರ ಪರಾಕ್ರಮಿಯಾದ ಭೀಮನನ್ನು ಇದಿರಿಸಿ ಅವನನ್ನು ಸಾಗರವನ್ನು ತೀರವು ತಡೆಯುವಂತೆ ತಡೆದ. ಆದರೆ ಶಕುನಿ ತಡೆಯುತ್ತಿದ್ದಂತೆಯೇ ಭೀಮನು ಅವನನ್ನು ಆಕ್ರಮಿಸಿದ.

ಶಕುನಿಸ್ತಸ್ಯ ರಾಜೇಂದ್ರ ವಾಮೇ ಪಾರ್ಶ್ವೇ ಸ್ತನಾಂತರೇ ।
ಪ್ರೇಷಯಾಮಾಸ ನಾರಾಚಾನ್ ರುಗ್ಮಪುಂಖಾನ್ ಶಿಲಾಶಿತಾನ್ ॥೫೦॥

ಶಕುನಿಯು ಭೀಮನೆದೆಯ ಎಡಭಾಗಕ್ಕೆ ಬಂಗಾರದ ಪುಕ್ಕವುಳ್ಳ ಸಾಣೆಹಿಡಿದ ಬಾಣಗಳನ್ನು ಎಸೆದ.

ವರ್ಮ ಭಿತ್ತ್ವಾ ತು ಸೌವರ್ಣಂ ಬಾಣಾಸ್ತಸ್ಯ ಮಹಾತ್ಮನಃ ।
ನ್ಯಮಜ್ಜಂತ ಮಹಾರಾಜ ಕಂಕಬರ್ಹಿಣವಾಸಸಃ ॥೫೧॥

ಮಹಾರಾಜ, ಹದ್ದಿನ ನವಿಲಿನ ರೆಕ್ಕೆಗಳುಳ್ಳ ಆ ಬಾಣಗಳು ಮಹಾತ್ಮನಾದ ಭೀಮನ ಕವಚವನ್ನು ಭೇದಿಸಿ ಒಳಗೆ ಪ್ರವೇಶಿಸಿದವು.

ಸೋಽತಿವಿದ್ಧೋ ರಣೇ ಭೀಮಃ ಶರಂ ಹೇಮವಿಭೂಷಿತಮ್ ।
ಪ್ರೇಷಯಾಮಾಸ ಸಹಸಾ ಸೌಬಲಂ ಪ್ರತಿ ಭಾರತ ॥೫೨॥

ರಾಜನೆ, ರಣದಲ್ಲಿ ಅತಿಯಾಗಿ ಹೊಡೆಸಿಕೊಂಡ ಭೀಮನು ಒಡನೆ ಶಕುನಿಗೆ ಬಂಗಾರದಿಂದ ಅಲಂಕೃತವಾದ ಬಾಣವನ್ನು ಎಸೆದ.

ತಮಾಯಾಂತಂ ಶರಂ ಘೋರಂ ಶಕುನಿಃ ಶತ್ರುತಾಪನಃ ।
ಚಿಚ್ಛೇದ ಶತಧಾ ರಾಜನ್ ಕೃತಹಸ್ತೋ ಮಹಾಬಲಃ ॥೫೩॥

ರಾಜನೆ, ಘೋರವಾದ ಆ ಬಾಣ ಬರುತ್ತಿದ್ದಂತೆ, ಕೈಚಳಕವುಳ್ಳ ಶತ್ರುನಾಶಕ ಮಹಾಬಲಿ ಶಕುನಿಯು ನೂರುಚೂರುಗಳಾಗಿ ಕತ್ತರಿಸಿದ.

ತಸ್ಮಿನ್ನಿಪತಿತೇ ಭೂಮೌ ಭೀಮಃ ಕ್ರುದ್ಧೋ ವಿಶಾಂಪತೇ ।
ಧನುಶ್ಚಿಚ್ಛೇದ ಭಲ್ಲೇನ ಸೌಬಲಸ್ಯ ಹಸನ್ನಿವ ॥೫೪॥

ರಾಜನೆ, ಆ ಬಾಣವು ನೆಲದಲ್ಲಿ ಬಿದ್ದಾಗ ಭೀಮನು ಕ್ರುದ್ಧನಾಗಿ ನಗುತ್ತ ಭಲ್ಲೆಯಿಂದ ಶಕುನಿಯ ಧನುಸ್ಸನ್ನು ಕತ್ತರಿಸಿದ.

ತದಪಾಸ್ಯ ಧನುಶ್ಛಿನ್ನಂ ಸೌಬಲೇಯಃ ಪ್ರತಾಪವಾನ್ ।
ಅನ್ಯದಾದತ್ತ ವೇಗೇನ ಧನುರ್ಭಲ್ಲಾಂಶ್ಚ ಷೋಡಶ ॥೫೫॥

ಮುರಿದ ಆ ಧನುಸ್ಸನ್ನು ದೂರಕ್ಕೆ ಎಸೆದು ಪ್ರತಾಪಶಾಲಿಯಾದ ಶಕುನಿಯು ಬೇಗನೆ ಇನ್ನೊಂದು ಧನುಸ್ಸನ್ನೂ ಹದಿನಾರು ಭಲ್ಲೆಗಳನ್ನೂ ಎತ್ತಿಕೊಂಡ.

ತೈಸ್ತಸ್ಯ ತು ಮಹಾರಾಜ ಭಲ್ಲೈಃ ಸನ್ನತಪರ್ವಭಿಃ ।
ಚತುರ್ಭಿಃ ಸಾರಥಿಂ ಹ್ಯಾರ್ಚ್ಛದ್ ಭೀಮಂ ಪಂಚಭಿರೇವ ಚ ॥೫೬॥

ಮಹಾರಾಜ, ಡೊಂಕುಗಿಣ್ಣಿನ ಆ ನಾಲ್ಕು ಭಲ್ಲೆಗಳಿಂದ ಭೀಮನ ಸಾರಥಿಯನ್ನೂ ಐದು ಭಲ್ಲೆಗಳಿಂದ ಭೀಮನನ್ನೂ ಹೊಡೆದ.

ಧ್ವಜಮೇಕೇನ ಚಿಚ್ಛೇದ ಛತ್ರಂ ದ್ವಾಭ್ಯಾಂ ವಿಶಾಂಪತೇ ।
ಚತುರ್ಭಿಶ್ಚತುರೋ ವಾಹಾನ್ ವಿವ್ಯಾಧ ಸುಬಲಾತ್ಮಜಃ ॥೫೭॥

ಮತ್ತು ರಾಜನೆ, ಶಕುನಿಯು ಒಂದು ಭಲ್ಲೆಯಿಂದ ಭೀಮನ ಧ್ವಜವನ್ನೂ ಎರಡು ಭಲ್ಲೆಗಳಿಂದ ಛತ್ರವನ್ನೂ ನಾಲ್ಕು ಭಲ್ಲೆಗಳಿಂದ ನಾಲ್ಕು ಅಶ್ವಗಳನ್ನೂ ಹೊಡೆದ.

ತತಃ ಕ್ರುದ್ಧೋ ಮಹಾರಾಜ ಭೀಮಸೇನಃ ಪ್ರತಾಪವಾನ್ ।
ಶಕ್ತಿಂ ಚಿಕ್ಷೇಪ ಸಮರೇ ರುಗ್ಮದಂಡಾಮಯಸ್ಮಯೀಮ್ ॥೫೮॥

ಆಗ, ಮಹಾರಾಜ, ಪ್ರತಾಪಶಾಲಿ ಭೀಮಸೇನನು ಕ್ರುದ್ಧನಾಗಿ ರಣದಲ್ಲಿ ಬಂಗಾರದ ದಂಡಉಳ್ಳ ಕಬ್ಬಿಣದಿಂದಾದ ಶಕ್ತ್ಯಾಯುಧವನ್ನು ಎಸೆದ.

ಸಾ ಭೀಮಭುಜನಿರ್ಮುಕ್ತಾ ನಾಗಜಿಹ್ವೇವ ಚಂಚಲಾ ।
ನಿಪಪಾತ ರಥೇ ತೂರ್ಣಂ ಸೌಬಲಸ್ಯ ಮಹಾತ್ಮನಃ ॥೫೯॥

ಆ ಶಕ್ತ್ಯಾಯುಧವು ಭೀಮನ ಭುಜದಿಂದ ಹೊರಟು ಹಾವಿನ ನಾಲಿಗೆಯಂತೆ ಚಂಚಲವಾಗಿ ವೇಗವಾಗಿ ಮಹಾತ್ಮ ಶಕುನಿಯ ರಥದ ಮೇಲೆ ಬಿದ್ದಿತು.

ತತಸ್ತಾಮೇವ ಸಂಗೃಹ್ಯ ಶಕ್ತಿಂ ಕನಕಭೂಷಣಾಮ್ ।
ಭೀಮಸೇನಾಯ ಚಿಕ್ಷೇಪ ಕ್ರುದ್ಧರೂಪೋ ವಿಶಾಂಪತೇ ॥೬೦॥

ರಾಜನೆ, ಆಗ ಕ್ರುದ್ಧನಾದ ಶಕುನಿಯು ಬಂಗಾರದಿಂದ ಅಲಂಕೃತವಾದ ಅದೇ ಶಕ್ತ್ಯಾಯುಧವನ್ನು ಹಿಡಿದು ತಿರುಗಿ ಭೀಮಸೇನನ ಮೇಲೆ ಎಸೆದ.

ಸಾ ನಿರ್ಭಿದ್ಯ ಭುಜಂ ಸವ್ಯಂ ಪಾಂಡವಸ್ಯ ಮಹಾತ್ಮನಃ ।
ಪಪಾತ ಚ ತತೋ ಭೂಮೌ ಯಥಾ ವಿದ್ಯುನ್ನಭಶ್ಚ್ಯುತಾ ॥೬೧॥

ಆ ಶಕ್ತಿಯು ಮಹಾತ್ಮನಾದ ಭೀಮನ ಎಡ ತೋಳನ್ನು ಭೇದಿಸಿ, ಆಗಸದಿಂದ ಬೀಳುವ ಮಿಂಚಿನಂತೆ ನೆಲದಲ್ಲಿ ಬಿದ್ದಿತು.

ಅಥೋತ್ಕ್ರುಷ್ಟಂ ಮಹಾರಾಜ ಧಾರ್ತರಾಷ್ಟ್ರೈಃ ಸಮಂತತಃ ।
ನ ತು ತಂ ಮಮೃಷೇ ಭೀಮಃ ಸಿಂಹನಾದಂ ತರಸ್ವಿನಾಮ್ ॥೬೨॥

ಮಹಾರಾಜ, ಆಗ ಕೌರವರು ಎಲ್ಲೆಡೆ ಜೋರಾಗಿ ಗರ್ಜಿಸಿದರು. ವೇಗಶಾಲಿಗಳಾದ ಕೌರವರ ಆ ಸಿಂಹನಾದವನ್ನು ಭೀಮನು ಸಹಿಸಲಿಲ್ಲ.

ಸ ಸಂಗೃಹ್ಯ ಧನುಃ ಸಜ್ಯಂ ತ್ವರಮಾಣೋ ಮಹಾರಥಃ ।
ಮುಹೂರ್ತಾದಿವ ರಾಜೇಂದ್ರ ಛಾದಯಾಮಾಸ ಸಾಯಕೈಃ ।
ಸೌಬಲಸ್ಯ ಬಲಂ ಸಂಖೇ ತ್ಯಕ್ತ್ವಾತ್ಮಾನಂ ಮಹಾಬಲಃ ॥೬೩॥

ರಾಜನೆ, ಮಹಾರಥನಾದ ಮಹಾಬಲಿಯಾದ ಭೀಮನು ಪ್ರಾಣದ ಹಂಗುತೊರೆದು ಬೇಗನೆ ಹೆದೆಏರಿಸಿದ್ದ ಬಿಲ್ಲನ್ನೆತ್ತಿಕೊಂಡು ಒಂದು ಮುಹೂರ್ತದೊಳಗೇ ಶಕುನಿಯ ಸೈನ್ಯವನ್ನು ರಣದಲ್ಲಿ ಬಾಣಗಳಿಂದ ಮುಚ್ಚಿದ.

ತಸ್ಯಾಶ್ವಾಂಶ್ಚತುರೋ ಹತ್ವಾ ಸೂತಂ ಚೈವ ವಿಶಾಂಪತೇ ।
ಧ್ವಜಂ ಚಿಚ್ಛೇದ ಭಲ್ಲೇನ ತ್ವರಮಾಣಃ ಪರಾಕ್ರಮೀ ॥೬೪॥

ರಾಜನೆ, ಶಕುನಿಯ ನಾಲ್ಕೂ ಕುದುರೆಗಳನ್ನು ಕೊಂದು, ಸಾರಥಿಯನ್ನೂ ಕೊಂದು, ಪರಾಕ್ರಮಿ ಭೀಮನು ಬೇಗನೆ ಶಕುನಿಯ ಧ್ವಜವನ್ನೂ ಕಡಿದ.

ಹತಾಶ್ವಂ ರಥಮುತ್ಸೃಜ್ಯ ತ್ವರಮಾಣೋ ನರೋತ್ತಮಃ ।
ತಸ್ಥೌ ವಿಸ್ಫಾರಯನ್ ಚಾಪಂ ಕ್ರೋಧರಕ್ತೇಕ್ಷಣಃ ಶ್ವಸನ್ ॥೬೫॥
ಶರೈಶ್ಚ ಬಹುಧಾ ರಾಜನ್ ಭೀಮಮಾರ್ಚ್ಛತ್ ಸಮಂತತಃ ॥೬೬॥

ನರೋತ್ತಮ ಶಕುನಿಯು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಭುಸುಗುಟ್ಟುತ್ತ ಕುದುರೆ ಇಲ್ಲದ ಆ ರಥವನ್ನು ತೊರೆದು ಬಿಲ್ಲನ್ನು ಸೆಳೆದುನಿಂತ. ರಾಜನೆ, ಬಾಣಗಳಿಂದ ಬಹುವಾಗಿ ಎಲ್ಲೆಡೆ ಭೀಮನನ್ನು ಪೀಡಿಸಿದ.

ಪ್ರತಿಹತ್ಯ ತು ವೇಗೇನ ಭೀಮಸೇನಃ ಪ್ರತಾಪವಾನ್ ।
ಧನುಶ್ಚಿಚ್ಛೇದ ಸಂಕ್ರುದ್ಧೋ ವಿವ್ಯಾಧ ಚ ಶಿತೈಃ ಶರೈಃ ॥೬೭॥

ಆದರೆ ಪ್ರತಾಪಶಾಲಿಯಾದ ಭೀಮನು ಕ್ರುದ್ಧನಾಗಿ ಹರಿತವಾದ ಬಾಣಗಳಿಂದ ಹೊಡೆದು ವೇಗದಿಂದ ಶಕುನಿಯ ಧನುಸ್ಸನ್ನೂ ಕಡಿದ.

ಸೋಽತಿವಿದ್ಧೋ ಬಲವತಾ ಶತ್ರುಣಾ ಶತ್ರುಕರ್ಶನಃ ।
ನಿಪಪಾತ ತತೋ ಭೂಮೌ ಕಂಚಿತ್ಕಾಲಮಿವೋ ನರಾಧಿಪ ॥೬೮॥

ರಾಜನೆ, ಶತ್ರುನಾಶಕನಾದ ಶಕುನಿಯು ಬಲಿಷ್ಠನಾದ ಶತ್ರುವಿನಿಂದ ಅತಿಯಾಗಿ ಹೊಡೆಸಿಕೊಂಡು ಸ್ವಲ್ಪವೆ ಉಸಿರಾಡುತ್ತ ನೆಲದಲ್ಲಿ ಬಿದ್ದ.

ತತಸ್ತಂ ವಿಹ್ವಲಂ ಜ್ಞಾತ್ವಾ ಪುತ್ರಸ್ತವ ವಿಶಾಂಪತೇ ।
ಅಪೋವಾಹ ರಥೇನಾಜೌ ಭೀಮಸೇನಸ್ಯ ಪಶ್ಯತಃ ॥೬೯॥

ರಾಜನೆ, ಶಕುನಿಯು ವಿಹ್ವಲನಾಗಿರುವುದನ್ನು ಕಂಡು ನಿನ್ನ ಮಗನು ಅವನನ್ನು ಭೀಮನು ನೋಡುತ್ತಿದ್ದಂತೆಯೇ ರಣದಲ್ಲಿ ರಥದಿಂದ ದೂರಕ್ಕೆ ಒಯ್ದ.

ಶಕುನಿಂ ವಿಹ್ವಲಂ ದೃಷ್ಟ್ವಾ ಧಾರ್ತರಾಷ್ಟ್ರಾಃ ಪರಾಙ್ಮುಖಾಃ ।
ಪ್ರದುದ್ರುವುರ್ದಿಶೋ ಭೀತಾ ಭೀಮಸೇನಭಯಾತ್ ಪ್ರಭೋ ॥೭೦॥

ರಾಜನೆ, ಶಕುನಿಯು ವಿಹ್ವಲನಾಗಿರುವುದನ್ನು ಕಂಡು ಭೀಮನ ಭಯದಿಂದ ಭೀತರಾದ ಹತ್ತುಮಂದಿ ದುರ್ಯೋಧನನ ತಮ್ಮಂದಿರು ಬೆನ್ನು ತಿರುಗಿಸಿ ದಿಕ್ಕುಗಳಿಗೆ ಧಾವಿಸಿದರು.

ಸೌಬಲೇ ನಿರ್ಜಿತೇ ರಾಜನ್ ಭೀಮಸೇನೇನ ಧನ್ವಿನಾ ।
ಭಯೇನ ಮಹತಾವಿಷ್ಟಃ ಪುತ್ರೋ ದುರ್ಯೋಧನಸ್ತವ ।
ಅಪಾಯಾಜ್ಜವನೈರಶ್ವೈಃ ಸಾಕ್ಷೇಪೋ ಮಾತುಲಂ ಪ್ರತಿ ॥೭೧॥

ಬಿಲ್ಗಾರನಾದ ಭೀಮನಿಂದ ಶಕುನಿ ಪರಾಜಿತನಾದಾಗ ನಿನ್ನ ಪುತ್ರ ದುರ್ಯೋಧನನು ಮಹಾಭಯದಿಂದ ಆವಿಷ್ಟನಾಗಿ ಮಾವನನ್ನು ಆಕ್ಷೇಪಿಸುತ್ತ ವೇಗದ ಕುದುರೆಗಳಿಂದ ದೂರಕ್ಕೆ ಹೊರಟುಹೋದ.

ಪರಾಙ್ಮುಖಂ ತು ರಾಜಾನಂ ದೃಷ್ಟ್ವಾ ಸೈನ್ಯಾನಿ ಭಾರತ ।
ವಿಪ್ರಜಗ್ಮುಃ ಸಮುತ್ಸೃಜ್ಯ ದ್ವೈರಥಾನಿ ಸಮಂತತಃ ॥೭೨॥

ರಾಜನೆ, ರಾಜಾ ದುರ್ಯೋಧನನು ಯುದ್ಧದಿಂದ ವಿಮುಖನಾಗಿ ಹೋದುದನ್ನು ಕಂಡು ಸೈನ್ಯಗಳು ಎಲ್ಲೆಡೆ ದ್ವೈರಥ ಯುದ್ಧಗಳನ್ನು ತೊರೆದು ಹೊರಟುಹೋದವು.

ತಾನ್ ದೃಷ್ಟ್ವಾತಿರಥಾನ್ ಸರ್ವಾನ್ ಧಾರ್ತರಾಷ್ಟ್ರಾನ್
ಪರಾಙ್ಮುಖಾನ್ ।
ಜವೇನಾಭ್ಯಪತದ್ ಭೀಮಃ ಕಿರನ್ ಶರಶತಾನ್ ಬಹೂನ್ ॥೭೩॥

ಅತಿರಥರಾದ ಕೌರವರೆಲ್ಲರೂ ಪಲಾಯನ ಮಾಡುವುದನ್ನು ಕಂಡು ಭೀಮನು ವೇಗದಿಂದ ನೂರಾರು ಬಾಣಗಳನ್ನು ಎಸೆಯುತ್ತ ಅವರನ್ನು ಆಕ್ರಮಿಸಿದ.

ತೇ ವಧ್ಯಮಾನಾ ಭೀಮೇನ ಧಾರ್ತರಾಷ್ಟ್ರಾಃ ಪರಾಙ್ಮುಖಾಃ ।
ಕರ್ಣಮಾಸಾದ್ಯ ಸಮರೇ ಸ್ಥಿತಾ ರಾಜನ್ ಸಮಂತತಃ ।
ಸ ಹಿ ತೇಷಾಂ ಮಹಾವೀರ್ಯೋ ದ್ವೀಪೋಽಭೂತ್ಸುಮಹಾಬಲಃ॥೭೪॥

ಪಲಾಯನ ಮಾಡಲು ತೊಡಗಿದ ಕೌರವರು ಭೀಮನಿಂದ ಹೊಡೆಸಿಕೊಳ್ಳುತ್ತ ಕರ್ಣನ ಬಳಿಗೆ ಧಾವಿಸಿ ಬಂದು ಅವನನ್ನು ಸುತ್ತುವರಿದು ನಿಂತರು. ಅವರಿಗೆ ಮಹಾವೀರ್ಯ ಮಹಾಬಲಿಯಾದ ಕರ್ಣನೇ ಈಗ ಆಶ್ರಯದಾತನಾದ.

ಭಿನ್ನನೌಕಾ ಯಥಾ ರಾಜನ್ ದ್ವೀಪಮಾಸಾದ್ಯ ನಿರ್ವೃತಾಃ ।
ಭವಂತಿ ಪುರುಷವ್ಯಾಘ್ರ ನಾವಿಕಾಃ ಕಾಲಪರ್ಯಯೇ ॥೭೫॥

ನೌಕೆ ಒಡೆದಾಗ ನಾವಿಕರು ಸಮುದ್ರದಲ್ಲಿ ಕಾಲಾಂತರದಲ್ಲಿ ಒಂದು ದ್ವೀಪವನ್ನು ಹೊಂದಿ ನೆಮ್ಮದಿ ಪಡೆಯುತ್ತಾರೆ.

ತಥಾ ಕರ್ಣಂ ಸಮಾಸಾದ್ಯ ತಾವಕಾ ಭರತರ್ಷಭ ।
ಸಮಾಶ್ವಸ್ತಾಃ ಸ್ಥಿತಾ ರಾಜನ್ ಸಂಪ್ರಹೃಷ್ಟಾಃ ಪರಸ್ಪರಮ್ ।
ಸಮಾಜಗ್ಮುಶ್ಚ ಯುದ್ಧಾಯ ಮೃತ್ಯುಂ ಕೃತ್ವಾ ನಿವರ್ತನಮ್ ॥೭೬॥

ಹಾಗೇ, ರಾಜನೆ, ನಿನ್ನ ಸೈನಿಕರು ಕರ್ಣನನ್ನು ಹೊಂದಿ ನೆಮ್ಮದಿ ಪಡೆದರು.

ಬಳಿಕ ಯುದ್ಧೋತ್ಸಾಹದಿಂದ ಮರಣದಿಂದಲೇ ತಮಗೆ ಯುದ್ಧನಿವೃತ್ತಿ ಎಂದು ನಿಶ್ಚಯ ಮಾಡಿಕೊಂಡು ಪರಸ್ಪರ ಇದಿರಿಸಿ ನಿಂತರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಶಕುನಿಪರಾಜಯೋ ನಾಮ ಚತುಃಸಪ್ತತಿತಮೋಽಧ್ಯಾಯಃ ॥೭೪॥

❖

ಎಪ್ಪತ್ತೈದನೆಯ ಅಧ್ಯಾಯ

ಕರ್ಣನ ಪ್ರತಾಪ, ಪಾಂಡವಸೈನ್ಯಕ್ಕೆ ಪರಾಜಯ

ಧೃತರಾಷ್ಟ್ರಃ

ತತೋ ಭಗ್ನೇಷು ಸೈನ್ಯೇಷು ಭೀಮಸೇನೇನ ಸಂಯುಗೇ ।
ದುರ್ಯೋಧನೋಽಬ್ರವೀತ್ ಕಿಂ ನು ಸೌಬಲೋ ವಾಪಿ ಸಂಜಯ ॥೧॥

ಕರ್ಣೋ ವಾ ಜಯತಾಂ ಶ್ರೇಷ್ಠೋ ಯೋಧಾ ವಾ ಮಾಮಕಾ ಯುಧಿ।
ಕೃಪೋ ವಾ ಕೃತವರ್ಮಾ ವಾ ದ್ರೌಣಿರ್ದುಃಶಾಸನೋಽಪಿ ವಾ ॥೨॥

ಧೃತರಾಷ್ಟ್ರನು ನುಡಿದ— ಸಂಜಯ, ಕೌರವಸೈನ್ಯಗಳು ರಣದಲ್ಲಿ ಭೀಮಸೇನನಿಂದ ಪರಾಜಿತವಾದಾಗ ದುರ್ಯೋಧನನು ಏನು ಹೇಳಿದ? ಶಕುನಿಯಾದರೂ ಏನು ಹೇಳಿದ? ಜಯಶಾಲಿಗಳಲ್ಲಿ ಶ್ರೇಷ್ಠನಾದ ಕರ್ಣನಾಗಲಿ, ನನ್ನ ಕಡೆಯ ಯೋಧರಾಗಲಿ ಕೃಪನಾಗಲಿ ಕೃತವರ್ಮನಾಗಲಿ ಅಶ್ವತ್ಥಾಮ ದುಃಶಾಸನರಾಗಲಿ ಏನು ಹೇಳಿದರು?

ಅತ್ಯದ್ಭುತಮಹಂ ಮನ್ಯೇ ಪಾಂಡವೇಯಸ್ಯ ವಿಕ್ರಮಮ್ ।
ಯದೇಕಃ ಸಮರೇ ಸರ್ವಾನ್ ಯೋಧಯಾಮಾಸ ಮಾಮಕಾನ್ ।
ಯಥಾಪ್ರತಿಜ್ಞಂ ಯೋಧಾನಾಂ ರಾಧೇಯಃ ಕೃತವಾನಪಿ ॥೩॥

ಭೀಮನ ಪರಾಕ್ರಮ ಅತ್ಯದ್ಭುತವೆಂದು ನಾನು ಭಾವಿಸುತ್ತೇನೆ. ಏಕೆಂದರೆ ನಮ್ಮವರನ್ನು ಎಲ್ಲರನ್ನೂ ಅವನು ಒಬ್ಬನೆ ರಣದಲ್ಲಿ ಇದಿರಿಸಿದ್ದಾನೆ!

ಯೋಧರು ಮಾಡಿದ್ದ ಪ್ರತಿಜ್ಞೆಯಂತೇ ಕರ್ಣನೇನೋ ಯುದ್ಧ ಮಾಡಿದ್ದಾನೆ.

ಕುರೂಣಾಮಪಿ ಸರ್ವೇಷಾಂ ಕರ್ಣಃ ಶತ್ರುನಿಷೂದನಃ ।
ಶರ್ಮ ವರ್ಮ ಪ್ರತಿಷ್ಠಾ ಚ ಜೀವಿತಾಶಾ ಚ ಸಂಜಯ ॥೪॥

ಸಂಜಯ, ಕರ್ಣನೊಬ್ಬನೆ ಕೌರವರಿಗೆಲ್ಲರಿಗೂ ಶತ್ರುನಾಶಕ; ಸುಖದಾಯಕ, ರಕ್ಷಕ, ಆಶ್ರಯದಾತ. ಬದುಕಿಗೆ ಆಸರೆಯೂ ಆಗಿದ್ದಾನೆ.

ತತ್‌ಪ್ರಭಗ್ನಂ ಬಲಂ ದೃಷ್ಟ್ವಾ ಕೌಂತೇಯೇನಾಮಿತೌಜಸಾ ।
ರಾಧೇಯೋ ವಾಪ್ಯಾಧಿರಥಿಃ ಕರ್ಣಃ ಕಿಮಕರೋದ್ ಯುಧಿ ॥೫॥

ಅಮಿತ ಪರಾಕ್ರಮಿಯಾದ ಭೀಮನು ನಮ್ಮ ಸೈನ್ಯವನ್ನು ಪುಡಿಗೈಯುವುದನ್ನು ನೋಡಿ ರಣದಲ್ಲಿ ಕರ್ಣನೇನು ಮಾಡಿದ?

ಪುತ್ರಾ ವಾ ಮಮ ದುರ್ಧರ್ಷಾ ರಾಜಾನೋ ವಾ ಮಹಾರಥಾಃ ।
ಏತನ್ಮೇ ಸರ್ವಮಾಚಕ್ಷ್ವ ಕುಶಲೋ ಹ್ಯಸಿ ಸಂಜಯ ॥೬॥

ನನ್ನ ಪುತ್ರರಾಗಲಿ, ಮಣಿಸಲಾಗದ ಮಹಾರಥರಾದ ರಾಜರಾಗಲಿ ಏನು ಮಾಡಿದರು? ಇದೆಲ್ಲವನ್ನೂ ನನಗೆ ಹೇಳು, ಸಂಜಯ, ನೀನು ನಿಪುಣನಾಗಿರುವೆ.

ಸಂಜಯಃ

ಅಪರಾಹ್ಣೇ ಮಹಾರಾಜ ಸೂತಪುತ್ರಃ ಪ್ರತಾಪವಾನ್ ।
ಜಘಾನ ಸೋಮಕಾನ್ ಸರ್ವಾನ್ ಭೀಮಸೇನಸ್ಯ ಪಶ್ಯತಃ ॥೭॥

ಭೀಮೋಽಪ್ಯತಿಬಲಃ ಸೈನ್ಯಂ ಧಾರ್ತರಾಷ್ಟ್ರಂ ವ್ಯಪೋಥಯತ್ ॥೮॥

ಸಂಜಯ ನುಡಿದ— ಪ್ರತಾಪಶಾಲಿಯಾದ ಕರ್ಣನು ಅಪರಾಹ್ಣಕಾಲದಲ್ಲಿ ಭೀಮಸೇನನು ನೋಡುತ್ತಿದ್ದಂತೆಯೆ ಎಲ್ಲ ಸೋಮಕರನ್ನು ಸಂಹರಿಸಿದ, ಅತಿಬಲಿಷ್ಠನಾದ ಭೀಮನೂ ಕೂಡ ಕೌರವಸೈನ್ಯವನ್ನು ಧ್ವಂಸಮಾಡಿದ.

ದ್ರಾವ್ಯಮಾಣಂ ಬಲಂ ದೃಷ್ಟ್ವಾ ಭೀಮಸೇನೇನ ಧೀಮತಾ ।
ಯಂತಾರಮಬ್ರವೀತ್ ಕರ್ಣಃ ಪಾಂಚಾಲಾನೇವ ಮಾ ವಹ ॥೯॥

ಧೀಮಂತನಾದ ಭೀಮಸೇನನು ಕೌರವಸೈನ್ಯವನ್ನು ಹೊಡೆದೋಡಿಸುತ್ತಿದ್ದುದನ್ನು ಕಂಡು ಕರ್ಣನು ತನ್ನ ಸಾರಥಿಗೆ ನುಡಿದ, 'ನನ್ನನ್ನು ಪಾಂಚಾಲರ ಕಡೆಗೇ ಒಯ್ಯು' ಎಂದು.

ಮದ್ರರಾಜಸ್ತತಃ ಶಲ್ಯಃ ಶ್ವೇತಾನಶ್ವಾನ್ ಮಹಾಜವಾನ್ ।
ಪ್ರಾಹಿಣೋಚ್ಚೇದಿಪಾಂಚಾಲಾನ್ ಕರೂಷಾಂಶ್ಚ ಮಹಾಬಲಃ ॥೧೦॥

ಮಹಾಬಲಿ ಮದ್ರರಾಜ ಶಲ್ಯನು ಮಹಾವೇಗಉಳ್ಳ ಬಿಳಿಕುದುರೆಗಳನ್ನು ಚೇದಿ ಪಾಂಚಾಲ ಕರೂಷರ ಬಳಿಗೆ ನಡೆಸಿದ.

ಪ್ರವಿಶ್ಯ ಚ ಸ ತಾಂ ಸೇನಾಂ ಶಲ್ಯಃ ಪರಬಲಾರ್ದನಃ ।
ನ್ಯಯಚ್ಛತ್ ತುರಗಾನ್ ಹೃಷ್ಟೋ ಯತ್ರ ಯತ್ರೈಚ್ಛದ್ಗಣೇಃ ॥೧೧॥

ಶತ್ರುಸೈನ್ಯನಾಶಕನಾದ ಶಲ್ಯನು ಆ ಸೈನ್ಯವನ್ನು ಪ್ರವೇಶಿಸಿ, ನಾಯಕನಾದ ಕರ್ಣನು ಎಲ್ಲೆಲ್ಲಿಗೆ ಹೋಗಲು ಬಯಸಿದನೋ ಅಲ್ಲಿಗೆ ಉತ್ಸಾಹಿತನಾಗಿ ಕುದುರೆಗಳನ್ನು ನಡೆಸಿದ.

ತಂ ರಥಂ ಮೇಘಸಂಕಾಶಂ ವೈಯಾಘ್ರಪರಿವಾರಣಮ್ ।
ಸಂದೃಶ್ಯ ಪಾಂಡುಪಾಂಚಾಲಾಸ್ತ್ರಸ್ತಾ ಆಸನ್ ವಿಶಾಂಪತೇ ॥೧೨॥

ಮೋಡದಂತೆ ಕಾಣುವ ಹುಲಿತೊಗಲಿನಿಂದ ಮುಚ್ಚಿದ ಕರ್ಣನ ರಥವನ್ನು ಕಂಡು, ರಾಜನೆ, ಪಾಂಡವ ಪಾಂಚಾಲ ಸೈನಿಕರು ಭಯಪಟ್ಟರು.

ತತೋ ರಥಸ್ಯ ನಿನದಃ ಪ್ರಾದುರಾಸೀನ್ಮಹಾರಣೇ ।
ಪರ್ಜನ್ಯಸಮನಿರ್ಘೋಷಃ ಪರ್ವತಸ್ಯೇವ ದೀರ್ಯತಃ ॥೧೩॥

ಮೋಡಗಳ ಗುಡುಗಿನಂಥ ಪರ್ವತವೇ ಸೀಳಿಹೋಗುವಂಥ ಕರ್ಣರಥದ ಧ್ವನಿ ಮಹಾರಣದಲ್ಲಿ ಪ್ರಾದುರ್ಭವಿಸಿತು.

ತತಃ ಶರಶತೈಸ್ತೀಕ್ಷ್ಣೈಃ ಕರ್ಣೋಽಪ್ಯಾಕರ್ಣನಿಃಸೃತೈಃ ।
ಜಘಾನ ಪಾಂಡವಬಲಂ ಶತಶೋಽಥ ಸಹಸ್ರಶಃ ॥೧೪॥

ಕರ್ಣನು ಕಿವಿವರೆಗೆ ಸೆಳೆದು ಎಸೆದ ತೀಕ್ಷ್ಣವಾದ ನೂರಾರು ಬಾಣಗಳಿಂದ ಪಾಂಡವಸೈನ್ಯದಲ್ಲಿ ನೂರಾರು ಸಾವಿರಾರು ಸೈನಿಕರನ್ನು ಸಂಹರಿಸಿದ.

ತಂ ತಥಾ ಸಮರೇ ಕರ್ಮ ಕುರ್ವಾಣಮತಿಮಾನುಷಮ್ ।
ಪರಿವವ್ರುರ್ಮಹೇಷ್ವಾಸಾಃ ಪಾಂಡವಾನಾಂ ಮಹಾರಥಾಃ ॥೧೫॥

ಕರ್ಣನು ರಣದಲ್ಲಿ ಹಾಗೆ ಅಮಾನುಷವಾಗಿ ವಧೆಮಾಡುವಾಗ ಪಾಂಡವಪಕ್ಷದ ಮಹಾಬಿಲ್ಗಾರರಾದ ಮಹಾರಥರು ಅವನನ್ನು ಸುತ್ತುವರಿದರು.

ತಂ ಶಿಖಂಡೀ ಚ ಭೀಮಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ನಕುಲಃ ಸಹದೇವಶ್ಚ ದ್ರೌಪದೇಯಾಃ ಸಸಾತ್ಯಕಾಃ ।
ಪರಿವವ್ರುರ್ಜಿಘಾಂಸಂತೋ ರಾಧೇಯಂ ಶರವೃಷ್ಟಿಭಿಃ ॥೧೬॥

ಶಿಖಂಡಿ ಭೀಮ ಧೃಷ್ಟದ್ಯುಮ್ನ ನಕುಲ-ಸಹದೇವ ದ್ರೌಪದೀಪುತ್ರರು ಸಾತ್ಯಕಿ ಇವರೆಲ್ಲರೂ ಕರ್ಣನನ್ನು ಬಾಣಗಳ ಮಳೆಗರೆದು ಕೊಲ್ಲಲು ಬಯಸಿ ಸುತ್ತುವರಿದರು.

ಸಾತ್ಯಕಿಸ್ತು ತತಃ ಕರ್ಣಂ ವಿಂಶತ್ಯಾ ನಿಶಿತೈಃ ಶರೈಃ ।
ಅತಾಡಯದ್ ರಣೇ ಶೂರೋ ಜತ್ರುದೇಶೇ ನರೋತ್ತಮಃ ॥೧೭॥

ಪುರುಷಶ್ರೇಷ್ಠನಾದ ಶೂರ ಸಾತ್ಯಕಿಯು ರಣದಲ್ಲಿ ಇಪ್ಪತ್ತು ತೀಕ್ಷ್ಣಬಾಣಗಳಿಂದ ಕರ್ಣನ ಕೊರಳಿನ ಎಲುಬಿಗೆ ಹೊಡೆದ.

ಶಿಖಂಡೀ ಪಂಚವಿಂಶತ್ಯಾ ಧೃಷ್ಟದ್ಯುಮ್ನಶ್ಚ ಸಪ್ತಭಿಃ ।
ದ್ರೌಪದೇಯಾಶ್ಚತುಃಷಷ್ಟ್ಯಾ ಸಹದೇವಶ್ಚ ಸಪ್ತಭಿಃ ।
ನಕುಲಶ್ಚ ಶತೇನಾಜೌ ಕರ್ಣಂ ವಿವ್ಯಾಧ ಸಾಯಕೈಃ ॥೧೮॥

ಶಿಖಂಡಿಯು ಇಪ್ಪತ್ತೈದು, ಧೃಷ್ಟದ್ಯುಮ್ನನು ಏಳು, ದ್ರೌಪದೀಪುತ್ರರು ಅರವತ್ತನಾಲ್ಕು, ಸಹದೇವನು ಏಳು, ನಕುಲನು ನೂರು, ಈ ಕ್ರಮದಿಂದ ಬಾಣಗಳನ್ನೆಸೆದು ಕರ್ಣನನ್ನು ಹೊಡೆದರು.

ಭೀಮಸೇನಸ್ತು ರಾಧೇಯಂ ನವತ್ಯಾ ನತಪರ್ವಣಾಮ್ ।
ವಿವ್ಯಾಧ ಸಮರೇ ಕ್ರುದ್ಧೋ ಜತ್ರುದೇಶೇ ಮಹಾಬಲಃ ॥೧೯॥

ಮಹಾಬಲಿ ಭೀಮಸೇನನು ಕ್ರುದ್ಧನಾಗಿ ಡೊಂಕುಗಿಣ್ಣಿನ ತೊಂಬತ್ತು ಬಾಣಗಳಿಂದ ರಣದಲ್ಲಿ ಕರ್ಣನ ಕೊರಳಿನೆಲುಬಿಗೆ ಹೊಡೆದ.

ತತಃ ಪ್ರಹಸ್ಯಾಧಿರಥಿರ್ವಿಕ್ಷಿಪನ್ ಧನುರುತ್ತಮಮ್ ।
ಮುಮೋಚ ನಿಶಿತಾನ್ ಬಾಣಾನ್ ಪೀಡಯನ್ ಸುಮಹಾಬಲಃ ।
ತಾನ್ ಪ್ರತ್ಯವಿಧ್ಯದ್ ರಾಧೇಯಃ ಪಂಚಭಿಃ ಪಂಚಭಿಃ ಶರೈಃ ॥೨೦॥

ಆಗ ಮಹಾಬಲಿ ರಾಧೇಯ ಅಧಿರಥಿ ಕರ್ಣನು ನಕ್ಕು ಉತ್ತಮವಾದ

ಧನುಸ್ಸನ್ನು ಸೆಳೆದು ತೀಕ್ಷ್ಣವಾದ ಬಾಣಗಳನ್ನು ಪಾಂಡವಮಹಾರಥರ ಮೇಲೆ ಎಸೆದ. ಅವರಲ್ಲಿ ಪ್ರತಿಯೊಬ್ಬರನ್ನೂ ಐದೈದು ಬಾಣಗಳಿಂದ ಪೀಡಿಸುತ್ತ ಹೊಡೆದ.

ಸಾತ್ಯಕೇಸ್ತು ಧನುಶ್ಛಿತ್ತ್ವಾ ಧ್ವಜಂ ಚ ಪುರುಷರ್ಷಭಃ ।
ಅಥೈನಂ ನವಭಿರ್ಬಾಣೈರಾಜಘಾನ ಸ್ತನಾಂತರೇ ॥೨೧॥

ಸಾತ್ಯಕಿಯ ಧನುಸ್ಸನ್ನೂ ಧ್ವಜವನ್ನೂ ಕಡಿದು ಒಂಬತ್ತು ಬಾಣಗಳಿಂದ ಅವನ ಎದೆಗೆ ಹೊಡೆದ.

ಭೀಮಸೇನಸ್ತು ತಂ ಕ್ರುದ್ಧೋ ವಿವ್ಯಾಧ ತ್ರಿಂಶತಾ ಶರೈಃ ।
ಸಾರಥಿಂ ಚ ತ್ರಿಭಿರ್ಬಾಣೈರಾಜಘಾನ ಪರಂತಪಃ ॥೨೨॥

ಶತ್ರುನಾಶಕನಾದ ಭೀಮಸೇನನು ಕ್ರುದ್ಧನಾಗಿ ಕರ್ಣನನ್ನು ಮೂವತ್ತು ಬಾಣಗಳಿಂದ ಹೊಡೆದ, ಮೂರು ಬಾಣಗಳಿಂದ ಸಾರಥಿಯನ್ನೂ ಹೊಡೆದ.

ವಿರಥಾನ್ ದ್ರೌಪದೇಯಾಂಶ್ಚ ಚಕಾರ ಪುರುಷರ್ಷಭಃ ।
ಅಕ್ಷ್ಣೋರ್ನಿಮೇಷಮಾತ್ರೇಣ ತದದ್ಭುತಮಿವಾಭವತ್ ॥೨೩॥

ಕರ್ಣನು ದ್ರೌಪದೀಪುತ್ರರನ್ನು ಕಣ್ಣುರೆಪ್ಪೆ ಹೊಡೆಯುವುದರೊಳಗೇ ವಿರಥರನ್ನಾಗಿ ಮಾಡಿದ. ಇದು ಅದ್ಭುತವಾಗಿತ್ತು.

ವಿಮುಖೀಕೃತ್ಯ ತಾನ್ ಸರ್ವಾನ್ ಶರೈಃ ಸನ್ನತಪರ್ವಭಿಃ ।
ಪಾಂಚಾಲಾನಹನತ್ ಶೂರಶ್ಚೇದೀನಾಂ ಚ ಮಹಾರಥಾನ್ ॥೨೪॥

ಅವರೆಲ್ಲರನ್ನೂ ಡೊಂಕುಗಿಣ್ಣಿನ ಬಾಣಗಳಿಂದ ಹಿಮ್ಮೆಟ್ಟಿಸಿ, ಶೂರ ಕರ್ಣನು ಪಾಂಚಾಲ ಮತ್ತು ಚೇದಿ ಮಹಾರಥರನ್ನು ಸಂಹರಿಸಿದ.

ತೇ ವಧ್ಯಮಾನಾಃ ಸಮರೇ ಚೇದಿಮತ್ಸ್ಯಾ ವಿಶಾಂಪತೇ ।
ಕರ್ಣಮೇಕಮಭಿದ್ರುತ್ಯ ಶರಸಂಘೈಃ ಸಮಾರ್ದಯನ್ ।
ತಾನ್ ಜಘಾನ ಶಿತೈರ್ಬಾಣೈಃ ಸೂತಪುತ್ರೋ ಮಹಾರಥಃ ॥೨೫॥

ರಾಜನೆ, ರಣದಲ್ಲಿ ಚೇದಿ–ಮತ್ಸ್ಯರು ಕರ್ಣನಿಂದ ಹೊಡೆಸಿಕೊಳ್ಳುತ್ತ ಕರ್ಣನೊಬ್ಬನನ್ನು ಆಕ್ರಮಿಸಿ ಬಾಣಸಮೂಹಗಳಿಂದ ಪೀಡಿಸಿದರು. ಅವರನ್ನು ಮಹಾರಥನಾದ ಕರ್ಣನು ಹರಿತವಾದ ಬಾಣಗಳಿಂದ ಹೊಡೆದ.

ಏತದತ್ಯದ್ಭುತಂ ಕರ್ಣೇ ದೃಷ್ಟವಾನಸ್ಮಿ ಭಾರತ ।
ಯದೇಕಃ ಸಮರೇ ಶೂರಾನ್ ಸೂತಪುತ್ರಃ ಪ್ರತಾಪವಾನ್ ॥೨೬॥

ಯತಮಾನಾನ್ ಪರಂ ಶಕ್ತ್ಯಾ ಯೋಧಯತ್ ತಾಂಶ್ಚ ಧನ್ವಿನಃ ।
ಪಾಂಡವೇಯಾನ್ ಮಹಾರಾಜ ಶರೈರ್ವಾರಿತವಾನ್ ರಣೇ ॥೨೭॥

ರಾಜನೆ, ಕರ್ಣನಲ್ಲಿ ನಾನೊಂದು ಅತಿ ಅದ್ಭುತವನ್ನು ಕಂಡೆ. ಅದೇನೆಂದರೆ ಪ್ರತಾಪಶಾಲಿಯಾದ ಅವನು ಒಬ್ಬನೆ ಸಮರದಲ್ಲಿ ಪಾಂಡವಪಕ್ಷದ ಅನೇಕ ಬಿಲ್ಲಾಳುಗಳಾದ ಶೂರರನ್ನು ಅವರು ಜಯಕ್ಕೆ ಬಹಳ ಯತ್ನಿಸುತ್ತಿರುವಾಗಲೆ ಸ್ವಶಕ್ತಿಯಿಂದ ಇದಿರಿಸಿದ ಮತ್ತು ರಣದಲ್ಲಿ ಬಾಣಗಳಿಂದ ತಡೆದ.

ತತ್ರ ಭಾರತ ಕರ್ಣಸ್ಯ ಲಾಘವೇನ ಮಹಾತ್ಮನಃ ।
ತುತುಷುರ್ದೇವತಾಃ ಸರ್ವಾಃ ಸಿದ್ಧಾಶ್ಚ ಪರಮರ್ಷಯಃ ॥೨೮॥

ರಾಜನೆ, ಆಗ ಮಹಾತ್ಮನಾದ ಕರ್ಣನ ವೇಗದಿಂದ ಎಲ್ಲ ದೇವತೆಗಳೂ ಸಿದ್ಧರೂ ಮಹರ್ಷಿಗಳೂ ಸಂತೋಷಪಟ್ಟರು.

ಅಪೂಜಯನ್ ಮಹೇಷ್ವಾಸಾ ಧಾರ್ತರಾಷ್ಟ್ರಾ ನರೋತ್ತಮಮ್ ।
ಕರ್ಣಂ ರಥವರಶ್ರೇಷ್ಠಂ ಶ್ರೇಷ್ಠಂ ಸರ್ವಧನುಷ್ಮತಾಮ್ ॥೨೯॥

ಕರ್ಣನು ಶ್ರೇಷ್ಠ ರಥಿಕರಲ್ಲಿ ಶ್ರೇಷ್ಠ, ಎಲ್ಲ ಬಿಲ್ಲಾಳುಗಳಿಗಿಂತ ಶ್ರೇಷ್ಠ ಪುರುಷಶ್ರೇಷ್ಠನೆಂದು ಮಹಾಬಿಲ್ಲಾಳುಗಳಾದ ಕೌರವರು ಅಭಿನಂದಿಸಿದರು.

ತತಃ ಕರ್ಣೋ ಮಹಾರಾಜ ದದಾಹ ರಿಪುವಾಹಿನೀಮ್ ।
ಕಕ್ಷಮಿದ್ಧೋ ಯಥಾ ವಹ್ನಿರ್ದಾಘೇ ಜ್ವಲಿತೋ ಮಹಾನ್ ॥೩೦॥

ಮಹಾರಾಜ, ಬೇಸಿಗೆಯಲ್ಲಿ ಹುಲ್ಲಿನ ಪೊದೆಯಲ್ಲಿ ಬಿದ್ದ ಬೆಂಕಿ ದೊಡ್ಡದಾಗಿ ಜ್ವಲಿಸಿ ಪೊದೆಯನ್ನು ಸುಡುವಂತೆ ಕರ್ಣನು ಶತ್ರುಸೈನ್ಯವನ್ನು ದಹಿಸಿದ.

ತೇ ವಧ್ಯಮಾನಾಃ ಕರ್ಣೇನ ಪಾಂಡವೇಯಾಸ್ತತಸ್ತತಃ ।
ಪ್ರಾದ್ರವಂತ ರಣೇ ಭೀತಾಃ ಕರ್ಣಂ ದೃಷ್ಟ್ವಾ ಮಹಾಬಲಮ್ ॥೩೧॥

ಪಾಂಡವರ ಸೈನಿಕರು ಕರ್ಣನಿಂದ ಪೀಡಿತರಾಗುವಾಗ ಮಹಾಬಲಿಯಾದ ಕರ್ಣನನ್ನು ರಣದಲ್ಲಿ ಕಂಡು ಭೀತರಾಗಿ ಎಲ್ಲೆಡೆ ಪಲಾಯನಗೈದರು.

ತತ್ರಾಕ್ರಂದೋ ಮಹಾನಾಸೀತ್ ಪಾಂಚಾಲಾನಾಂ ಮಹಾರಣೇ ।
ವಧ್ಯತಾಂ ಸಾಯಕೈಸ್ತೀಕ್ಷ್ಣೈಃ ಕರ್ಣಚಾಪವರಚ್ಯುತೈಃ ॥೩೨॥

ಮಹಾರಣದಲ್ಲಿ ಕರ್ಣನ ಉತ್ತಮ ಧನುಸ್ಸಿನಿಂದ ಹೊರಟ ತೀಕ್ಷ್ಣವಾದ ಬಾಣಗಳಿಂದ ಹತರಾಗುವ ಪಾಂಚಾಲರ ಆರ್ತನಾದ ಬಹಳ ದೊಡ್ಡದಾಗಿತ್ತು.

ತೇನ ಶಬ್ದೇನ ಏತ್ರಸ್ತಾ ಪಾಂಡವಾನಾಂ ಮಹಾಚಮೂಃ ।
ಕರ್ಣಮೇಕಂ ರಣೇ ಯೋಧಂ ಮೇನಿರೇ ತತ್ರ ಶಾತ್ರವಾಃ ॥೩೩॥

ಆ ಶಬ್ದದಿಂದಲೆ ಪಾಂಡವರ ಮಹಾಸೈನ್ಯ ಭಯಗ್ರಸ್ತವಾಯಿತು. ಆಗ ಶತ್ರುಗಳು ಕರ್ಣನೊಬ್ಬನೆ ರಣದಲ್ಲಿ ಯೋಧನೆಂದು ತಿಳಿದರು.

ತತ್ರಾದ್ಭುತಂ ಪರಂ ಚಕ್ರೇ ರಾಧೇಯಃ ಶತ್ರುಕರ್ಶನಃ ।
ಯದೇಕಂ ಪಾಂಡವಾಃ ಸರ್ವೇ ನ ಶೇಕುರಭಿವೀಕ್ಷಿತುಮ್ ॥೩೪॥

ಆಗ ಶತ್ರುನಾಶಕನಾದ ಕರ್ಣನು ಒಂದು ಅದ್ಭುತವನ್ನೇ ಮಾಡಿದ್ದ ಅದೇನೆಂದರೆ ಅವನೊಬ್ಬನನ್ನು ಪಾಂಡವಯೋಧರು ಯಾರೂ ದಿಟ್ಟಿಸಿ ನೋಡುವುದಕ್ಕೂ ಶಕ್ತರಾಗಲಿಲ್ಲ.

ಯಥೌಘಃ ಪರ್ವತಶ್ರೇಷ್ಠಮಾಸಾದ್ಯಾಭಿಪ್ರದೀರ್ಯತೇ ।
ತಥಾ ತತ್ಪಾಂಡವಂ ಸೈನ್ಯಂ ಕರ್ಣಮಾಸಾದ್ಯ ದೀರ್ಯತೇ ॥೩೫॥

ದೊಡ್ಡ ನೀರಿನ ಪ್ರವಾಹವು ಬಂದು ಬೆಟ್ಟದ ಬುಡದಲ್ಲಿ ಒಡೆದು ಭಾಗವಾಗುವಂತೆ ಪಾಂಡವಸೈನ್ಯವು ಕರ್ಣನ ಇದಿರಿಗೆ ನಿಂತರೆ ಒಡನೆ ಚದುರಿತು.

ಕರ್ಣೋಽಪಿ ಸಮರೇ ರಾಜನ್ ವಿಧೂಮೋಽಗ್ನಿರಿವ ಜ್ವಲನ್ ।
ದಹಂಸ್ತಸ್ಥೌ ಮಹಾಬಾಹುಃ ಪಾಂಡವಾನಾಂ ಮಹಾಚಮೂಮ್ ॥೩೬॥

ಮಹಾಬಾಹು ಕರ್ಣನು ಸಮರದಲ್ಲಿ ಹೊಗೆಯಿಲ್ಲದ ಬೆಂಕಿಯಂತೆ ಜ್ವಲಿಸುತ್ತ ಪಾಂಡವರ ಮಹಾಸೈನ್ಯವನ್ನು ಸುಡುತ್ತ ನಿಂತ.

ಶಿರಾಂಸಿ ಚ ಮಹಾರಾಜ ಕರ್ಣಾಂಶ್ಚೈಷ ಸಕುಂಡಲಾನ್ ।
ಬಾಹೂಂಶ್ಚ ವೀರೋ ವೀರಾಣಾಂ ಚಿಚ್ಛೇದ ಲಘು ಚೇಷುಭಿಃ ॥೩೭॥

ಮಹಾರಾಜ, ವೀರಕರ್ಣನು ವೀರರ ಶಿರಸ್ಸುಗಳನ್ನೂ ಕುಂಡಲಸಹಿತವಾದ ಕಿವಿಗಳನ್ನೂ ಬಾಹುಗಳನ್ನೂ ಬೇಗನೆ ಬಾಣಗಳಿಂದ ಕತ್ತರಿಸಿದ.

ಹಸ್ತಿದಂತಾನ್ತ್ಸರೂನ್ ಖಡ್ಗಾನ್ ಧ್ವಜಾನ್ ಶಕ್ತೀರ್ಹಯಾನ್ ಗಜಾನ್ ।
ರಥಾಂಶ್ಚ ವಿವಿಧಾನ್ ರಾಜನ್ ಪತಾಕಾ ವ್ಯಜನಾನಿ ಚ ॥೩೮॥

ಅಕ್ಷೇಷಾಯುಗಯೋಕ್ತ್ರಾಣಿ ಚಕ್ರಾಣಿ ವಿವಿಧಾನಿ ಚ ।
ಚಿಚ್ಛೇದ ಶತಧಾ ಕರ್ಣೋ ಯೋಧವ್ರತಮನುಷ್ಠಿತಃ ॥೩೯॥

ಯೋಧರ ವ್ರತವನ್ನು ನಡೆಸುವ ಕರ್ಣನು ಶತ್ರುಗಳ ಹಸ್ತಿದಂತನಿರ್ಮಿತ ಖಡ್ಗದ ಹಿಡಿಗಳನ್ನೂ ಖಡ್ಗಗಳನ್ನೂ ಧ್ವಜಗಳನ್ನೂ ಶಕ್ತಿಗಳನ್ನೂ ನಾನಾವಿಧ ಅಶ್ವ ಗಜ ರಥಗಳನ್ನೂ ಪತಾಕೆಗಳನ್ನೂ ವ್ಯಜನಗಳನ್ನೂ ಅಕ್ಷ ಈಷಾ ಯುಗ ಯೋಕ್ತ್ರ ಗಳನ್ನೂ ನಾನಾ ವಿಧವಾದ ಚಕ್ರಗಳನ್ನೂ ನೂರು ಚೂರುಗಳಾಗಿ ಕತ್ತರಿಸಿದ.

ತತ್ರ ಭಾರತ ಕರ್ಣೇನ ನಿಹತೈರ್ಗಜವಾಜಿಭಿಃ ।
ಅಗಮ್ಯರೂಪಾ ಪೃಥಿವೀ ಮಾಂಸಶೋಣಿತಕರ್ದಮಾ ॥೪೦॥

ರಾಜನೆ, ಕರ್ಣನು ವಧಿಸಿದ ಗಜ ಅಶ್ವಗಳಿಂದ ರಣಭೂಮಿ ಮಾಂಸ ರಕ್ತಗಳಿಂದ ತುಂಬಿ ದುರ್ಗಮವಾಯಿತು.

ವಿಷಮಂ ಚ ಸಮಂ ಚೈವ ಹತೈರಶ್ವಪದಾತಿಭಿಃ ।
ರಥೈಶ್ಚ ಕುಂಜರೈಶ್ಚೈವ ನ ಪ್ರಾಜ್ಞಾಯತ ಕಿಂಚನ ॥೪೧॥

ಕುದುರೆ ಪದಾತಿಗಳು ರಥ ಗಜಗಳು ಹತವಾಗಿ ಎಲ್ಲೆಡೆ ಹರಡಿದ್ದರಿಂದ ರಣಭೂಮಿಯಲ್ಲಿ ಹಳ್ಳ-ತಿಟ್ಟುಗಳೊಂದೂ ತಿಳಿಯದಾಯಿತು.

ನಾಪಿ ಸ್ವೇ ನ ಪರೇ ಯೋಧಾಃ ಪ್ರಾಜ್ಞಾಯಂತ ಪರಸ್ಪರಮ್ ।
ಘೋರೇ ಶರಾಂಧಕಾರೇ ತು ಕರ್ಣಾಸ್ತ್ರೇ ಚ ವಿಜೃಮ್ಭಿತೇ ॥೪೨॥

ಯೋಧರಲ್ಲಿ ತಮ್ಮವರು ಪರಕೀಯರು ಎಂದು ಪರಸ್ಪರ ಭೇದವೂ ತಿಳಿಯದಾಯಿತು. ಘೋರವಾದ ಬಾಣಗಳ ಅಂಧಕಾರದಲ್ಲಿ ಕರ್ಣನ ಅಸ್ತ್ರ ಒಂದೇ ಎಲ್ಲೆಡೆ ಕಾಣುತ್ತಿತ್ತು.

ರಾಧೇಯಚಾಪನಿರ್ಮುಕ್ತೈಃ ಶರೈಃ ಕಾಂಚನಭೂಷಿತೈಃ ।
ಸಂಛಾದಿತಾ ಮಹಾರಾಜ ಯತಮಾನಾ ಮಹಾರಥಾಃ ॥೪೩॥

ತೇ ಪಾಂಡವೇಯಾಃ ಸಮರೇ ಕರ್ಣೇನ ಸ್ಮ ಪುನಃ ಪುನಃ ।
ಅಭಜ್ಯಂತ ಮಹಾರಾಜ ಯತಮಾನಾ ಮಹಾರಥಾಃ ॥೪೪॥

ಮಹಾರಾಜ, ಕರ್ಣನ ಧನುಸ್ಸಿನಿಂದ ಹೊರಟ ಬಂಗಾರದಿಂದ ಅಲಂಕೃತವಾದ ಬಾಣಗಳಿಂದ, ಪಾಂಡವಪಕ್ಷದ ಮಹಾರಥರು ಎಷ್ಟು ಯತ್ನಿಸಿದರೂ ಮುಚ್ಚಿ ಹೋದರು. ರಣದಲ್ಲಿ ಕರ್ಣನಿಂದ ಪುನಃಪುನಃ ಪರಾಜಿತರಾದರು.

ಮೃಗಸಂಘಾನ್ಯಥಾ ಕ್ರುದ್ಧಃ ಸಿಂಹೋ ದ್ರಾವಯತೇ ವನೇ ।
ಕರ್ಣಸ್ತು ಸಮರೇ ಯೋಧಾನ್ ತತ್ರ ತತ್ರ ಮಹಾಯಶಾಃ ।
ಕಾಲಯಾಮಾಸ ತತ್ಸೈನ್ಯಂ ಯಥಾ ಪಶುಗಣಾನ್ ವೃಕಃ ॥೪೫॥

ಕಾಡಿನಲ್ಲಿ ಕ್ರುದ್ಧವಾದ ಸಿಂಹವು ಮೃಗಸಮೂಹಗಳನ್ನು ಬೆನ್ನಟ್ಟುವಂತೆ, ತೋಳವು ಪಶುಸಮೂಹಗಳನ್ನು ಸಂಹರಿಸುವಂತೆ, ರಣದಲ್ಲಿ ಮಹಾ ಯಶಸ್ವಿಯಾದ ಕರ್ಣನು ಪಾಂಡವರ ಸೈನ್ಯವನ್ನು, ಅವರ ಯೋಧರನ್ನು ಎಲ್ಲೆಡೆ ನಾಶಮಾಡುತ್ತ ನಡೆದ.

ದೃಷ್ಟ್ವಾ ತು ಪಾಂಡವೀಂ ಸೇನಾಂ ಧಾರ್ತರಾಷ್ಟ್ರಾಃ ಪರಾಙ್ಮುಖೀಮ್ ।
ಅಭಿಜಗ್ಮುರ್ಮಹೇಷ್ವಾಸಾ ರುವಂತೋ ಭೈರವಾನ್ ರವಾನ್ ॥೪೬॥

ಪಾಂಡವರ ಸೈನ್ಯ ಹಿಮ್ಮೆಟ್ಟುತ್ತಿರುವುದನ್ನು ಕಂಡು ಕೌರವರು ಭಯಂಕರ ಧ್ವನಿಯಿಂದ ಗರ್ಜನೆ ಮಾಡುತ್ತ ಅವರನ್ನು ಆಕ್ರಮಿಸಿದರು.

ದುರ್ಯೋಧನೋ ಹಿ ರಾಜೇಂದ್ರ ಮುದಾ ಪರಮಯಾ ಯುತಃ ।
ವಾದಯಾಮಾಸ ಸಂಹೃಷ್ಟೋ ನಾನಾವಾದ್ಯಾನಿ ಸರ್ವಶಃ ॥೪೭॥

ಮಹಾರಾಜ, ದುರ್ಯೋಧನನು ಪರಮ ಸಂತೋಷಯುಕ್ತನಾಗಿ, ಬಲು ಉತ್ಸಾಹಿತನಾಗಿ ಎಲ್ಲೆಡೆ ನಾನಾ ವಾದ್ಯಗಳನ್ನು ಮೊಳಗಿಸಿದ.

ಪಾಂಚಾಲಾಶ್ಚ ಮಹೇಷ್ವಾಸಾ ಭಗ್ನಾಸ್ತತ್ರ ಮಹಾರಣೇ ।
ನ್ಯವರ್ತಂತ ತಥಾ ಶೂರಾ ಮೃತ್ಯುಂ ಕೃತ್ವಾ ನಿವರ್ತನಮ್ ॥೪೮॥

ಆದರೆ ಆ ಮಹಾರಣದಲ್ಲಿ ಪರಾಭವಗೊಳ್ಳುತ್ತಿದ್ದ ಪಾಂಚಾಲ ಬಿಲ್ಲಾಳುಗಳು ಮಾತ್ರ ಧೃತಿಗೆಡದೆ, 'ಮರಣ ಬಂದರೇ ಯುದ್ಧದಿಂದ ನಿವೃತ್ತಿ' ಎಂದು ನಿಶ್ಚಯ ಮಾಡಿಕೊಂಡು, ಪಲಾಯನ ಮಾಡುತ್ತಿದ್ದವರು ಹಿಂತಿರುಗಿದರು.

ತಾನ್ನಿವೃತ್ತಾನ್ ರಣೇ ಶೂರಾನ್ ರಾಧೇಯಃ ಶತ್ರುತಾಪನಃ ।
ಅನೇಕಶೋ ಮಹಾರಾಜ ಬಭಂಜ ಪುರುಷರ್ಷಭಃ ॥೪೯॥

ಮಹಾರಾಜ, ರಣದಲ್ಲಿ ಹಿಂತಿರುಗಿ ಬಂದ ಶೂರರಾದ ಅನೇಕ ಪಾಂಚಾಲರನ್ನು ಪುರುಷಶ್ರೇಷ್ಠ ಶತ್ರುನಾಶಕ ಕರ್ಣನು ಪರಾಭವಗೊಳಿಸಿದ.

ತತ್ರ ಭಾರತ ಕರ್ಣೇನ ಪಾಂಚಾಲಾ ವಿಂಶತೀ ರಥಾಃ ।
ನಿಹತಾಃ ಸಾದಯಃ ಕ್ರೋಧಾಚ್ಚೇದಯಶ್ಚ ಪರಃಶತಾಃ ॥೫೦॥

ರಾಜನೆ, ಆಗ ಕರ್ಣನಿಂದ ಇಪ್ಪತ್ತು ಪಾಂಚಾಲ ರಥಿಕರೂ ನೂರಕ್ಕೂ ಹೆಚ್ಚು ಚೇದಿ ಅಶ್ವಯೋಧರೂ ಕೋಪದಿಂದ ಹತರಾದರು.

ಕೃತ್ವಾ ಶೂನ್ಯಾನ್ ರಥೋಪಸ್ಥಾನ್ ವಾಜಿಪೃಷ್ಠಾಂಶ್ಚ ಭಾರತ ।
ನಿರ್ಮನುಷ್ಯಾನ್ ಗಜಸ್ಕಂಧಾನ್ ಪಾದಾತಾಂಶ್ಚೈವ ವಿದ್ರುತಾನ್ ॥೫೧॥

ಆದಿತ್ಯ ಇವ ಮಧ್ಯಾಹ್ನೇ ದುರ್ನಿರೀಕ್ಷ್ಯಃ ಪರಂತಪಃ ।
ಕಾಲಾಂತಕವಪುಃ ಕ್ರೂರಃ ಸೂತಪುತ್ರಶ್ಚಚಾರ ಹ ॥೫೨॥

ರಾಜನೆ, ರಥದೊಳಗಿನ ಆಸನಗಳನ್ನೂ ಅಶ್ವಗಳ ಬೆನ್ನು ಮತ್ತು ಗಜಗಳ ಹೆಗಲುಗಳನ್ನೂ ಮನುಷ್ಯರಿಲ್ಲದೆ ಶೂನ್ಯವಾಗುವಂತೆ ಮಾಡಿ ಪದಾತಿಗಳನ್ನು ಪಲಾಯನ ಗೈಸಿ ಕಾಲಯಮನಂಥ ರೂಪದ ಕ್ರೂರನಾದ ಶತ್ರುತಾಪಕನಾದ ಕರ್ಣನು ಮಧ್ಯಾಹ್ನದ ಸೂರ್ಯನಂತೆ ದಿಟ್ಟಿಸಿ ನೋಡಲೂ ಅಶಕ್ಯನಾದ.

ಏವಮೇತಾನ್ ಮಹಾರಾಜ ನರವಾಜಿರಥದ್ವಿಪಾನ್ ।
ಹತ್ವಾ ತಸ್ಥೌ ಮಹೇಷ್ವಾಸಃ ಕರ್ಣೋ೭ರಿಗಣಸೂದನಃ ॥೫೩॥

ಮಹಾರಾಜ, ಹೀಗೆ ಮಹಾಬಿಲ್ಲಾರನಾದ ಶತ್ರುಸಮೂಹನಾಶಕನಾದ ಕರ್ಣನು ಈ ಪದಾತಿ ಅಶ್ವ ರಥ ಗಜ ಯೋಧರನ್ನು ಸಂಹರಿಸಿ ಅಜೇಯನಾಗಿ ನಿಂತ.

ಯಥಾ ಭೂತಗಣಾನ್ ಹತ್ವಾ ಕಾಲಸ್ತಿಷ್ಠೇನ್ಮಹಾಬಲಃ ।
ತಥಾ ಸ ಸೋಮಕಾನ್ ಹತ್ವಾ ತಸ್ಥಾವೇಕೋ ಮಹಾರಥಃ ॥೫೪॥

ಪ್ರಾಣಿಸಮೂಹಗಳನ್ನು ಸಂಹರಿಸಿ ಮಹಾಬಲಿ ಕಾಲಯಮನು ನಿಲ್ಲುವಂತೆ ಮಹಾರಥನಾದ ಕರ್ಣನು ಸೋಮಕರನ್ನು ಸಂಹರಿಸಿ ಒಬ್ಬನೇ ನಿಂತ.

ತತ್ರಾದ್ಭುತಮಪಶ್ಯಾಮ ಪಾಂಚಾಲಾನಾಂ ಪರಾಕ್ರಮಮ್ ।
ವಧ್ಯಮಾನಾಶ್ಚ ಯೇ ಕರ್ಣಂ ನ ಜಹೂ ರಣಮೂರ್ಧನಿ ॥೫೫॥

ಆಗ ಪಾಂಚಾಲರ ಪರಾಕ್ರಮ ಅದ್ಭುತವಾಗಿದ್ದುದನ್ನು ನಾವು ಕಂಡೆವು. ಅವರು ಕರ್ಣನಿಂದ ಹೊಡೆಸಿಕೊಳ್ಳುತ್ತಿದ್ದರೂ ರಣರಂಗದ ಮುಂಭಾಗದಲ್ಲಿ ಕರ್ಣನನ್ನು ಬಿಡಲಿಲ್ಲ.

ರಾಜಾ ದುಃಶಾಸನಶ್ಚೈವ ಕೃಪಃ ಶಾರದ್ವತಸ್ತಥಾ ।
ಅಶ್ವತ್ಥಾಮಾ ಕೃತವರ್ಮಾ ಶಕುನಿಶ್ಚಾಪಿ ಸೌಬಲಃ ।
ನ್ಯಹನನ್ ಪಾಂಡವೀಂ ಸೇನಾಂ ಶತಶೋಽಥ ಸಹಸ್ರಶಃ ॥೫೬॥

ದುರ್ಯೋಧನ ದುಃಶಾಸನ ಕೃಪ ಅಶ್ವತ್ಥಾಮ ಕೃತವರ್ಮ ಶಕುನಿ ಇವರೆಲ್ಲರೂ ಪಾಂಡವ ಸೈನ್ಯವನ್ನು ನೂರಾರು ಸಾವಿರಾರು ಸಂಖ್ಯೆಯಲ್ಲಿ ಸಂಹರಿಸಿದರು.

ಕರ್ಣಪುತ್ರೌ ಚ ರಾಜೇಂದ್ರ ಭ್ರಾತರೌ ಸತ್ಯವಿಕ್ರಮೌ ।
ಅನಾಶಯೇತಾಂ ಬಲಿನಃ ಪಾಂಚಾಲಾನ್ ವೈ ತತಸ್ತತಃ ।
ತತ್ರ ಯುದ್ಧಂ ತದಾ ಹ್ಯಾಸೀತ್‌ಕ್ರೂರಂ ವಿಶಸನಂ ಮಹತ್ ॥೫೭॥

ರಾಜನೆ, ಕರ್ಣನ ಇಬ್ಬರು ಪುತ್ರರು ನಿಜವಾದ ಪರಾಕ್ರಮವನ್ನು ತೋರುವ ಸೋದರರು ಬಲಿಷ್ಠರಾದ ಪಾಂಚಾಲರನ್ನು ಎಲ್ಲೆಡೆ ನಾಶಗೊಳಿಸಿದರು. ಆಗ ನಡೆದ ಯುದ್ಧ ಕ್ರೂರವಾಗಿತ್ತು. ಮಹಾವಿನಾಶಕಾರಿಯಾಗಿತ್ತು.

ತಥೈವ ಪಾಂಡವಾಃ ಶೂರಾ ಧೃಷ್ಟದ್ಯುಮ್ನಶಿಖಂಡಿನೌ ।
ದ್ರೌಪದೇಯಾಶ್ಚ ಸಂಕ್ರುದ್ಧಾ ಅಭ್ಯಘ್ನನ್ ತಾವಕಂ ಬಲಮ್ ॥೫೮॥

ಹಾಗೆಯೇ ಶೂರರಾದ ಪಾಂಡವರೂ ಧೃಷ್ಟದ್ಯುಮ್ನ ಶಿಖಂಡಿಗಳೂ ದ್ರೌಪದೀಪುತ್ರರೂ ಬಲುಕುಪಿತರಾಗಿ ನಿನ್ನ ಸೈನ್ಯವನ್ನು ಆಕ್ರಮಿಸಿ ಹೊಡೆದರು.

ಏವಮೇವ ಕ್ಷಯೋ ವೃತ್ತಃ ಪಾಂಡವಾನಾಂ ತತಸ್ತತಃ ।
ತಾವಕಾನಾಮಪಿ ರಣೇ ಭೀಮಂ ಪ್ರಾಪ್ಯ ಮಹಾಬಲಮ್ ॥೫೯॥

ಹೀಗೇ ಎಲ್ಲೆಡೆ ಪಾಂಡವಯೋಧರ ವಿನಾಶವೂ ಆಯಿತು. ಮಹಾಬಲಿ ಭೀಮನನ್ನು ಇದಿರಿಸಿ ನಿನ್ನ ಕಡೆ ಯೋಧರ ವಿನಾಶವೂ ಉಂಟಾಯಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಜಯೋ ನಾಮ ಪಂಚಸಪ್ತತಿತಮೋऽಧ್ಯಾಯಃ ॥೭೫॥

❖

ಎಪ್ಪತ್ತಾರನೆಯ ಅಧ್ಯಾಯ

ತೇಜೋವಧೆ ಮಾಡುತ್ತಿದ್ದ ಶಲ್ಯ ಕರ್ಣನನ್ನು ಈಗ ಹುರಿದುಂಬಿಸುತ್ತಾನೆ.

ಸಂಜಯಃ

ಅರ್ಜುನಸ್ತು ಮಹಾರಾಜ ಹತ್ವಾ ಸೈನ್ಯಂ ಚತುರ್ವಿಧಮ್ ।
ಸೂತಪುತ್ರಂ ಸುಸಂರಬ್ಧಂ ದೃಷ್ಟ್ವಾ ಚೈವ ಮಹಾರಣೇ ॥೧॥

ಶೋಣಿತೋದಾಂ ಮಹೀಂ ಕೃತ್ವಾ ಮಾಂಸಮಜ್ಜಾಸ್ಥಿವಾಹಿನೀಮ್ ।
ಮನುಷ್ಯಶೀರ್ಷಪಾಷಾಣಾಂ ಹಸ್ಯಶ್ವಕೃತರೋಧಸಮ್ ॥೨॥

ಶೂರಾಸ್ಥಿಚಯಸಂಕೀರ್ಣಾಂ ಕಾಕಗೃಧ್ರಾನುನಾದಿತಾಮ್ ।
ಛತ್ರಹಂಸಪ್ಲವೋಪೇತಾಂ ವೀರವೃಕ್ಷಾಪಹಾರಿಣೀಮ್ ॥೩॥

ಹಾರಪದ್ಮಾಕರವತೀಮುಷ್ಣೀಷವರಫೇನಿಲಾಮ್ ।
ಧನುಃಶರಧ್ವಜೋಪೇತಾಂ ನರಕ್ಷುದ್ರಕಪಾಲಿನೀಮ್ ॥೪॥

ಚರ್ಮವರ್ಮಭ್ರಮೋಪೇತಾಂ ರಥೋಡುಪಸಮಾಕುಲಾಮ್ ।
ಜಯೈಷಿಣಾಂ ಚ ಸುತರಾಂ ಭೀರೂಣಾಂ ಚ ಸುದುಸ್ತರಾಮ್ ।
ತಾಂ ನದೀಂ ಪ್ರಾಪಯಿತ್ವಾ ತು ಬೀಭತ್ಸುಃ ಪರವಾಹಿನೀಮ್ ॥೫॥

ಯಥಾ ಭೂತಗಣಾನ್ ಹತ್ವಾ ಕಾಲಸ್ತಿಷ್ಠೇನ್ಮಹಾಬಲಃ ।
ತಥಾ ಸ ಸೋಮಕಾನ್ ಹತ್ವಾ ತಸ್ಥಾವೇಕೋ ಮಹಾರಥಃ ॥೫೪॥

ಪ್ರಾಣಿಸಮೂಹಗಳನ್ನು ಸಂಹರಿಸಿ ಮಹಾಬಲಿ ಕಾಲಯಮನು ನಿಲ್ಲುವಂತೆ ಮಹಾರಥನಾದ ಕರ್ಣನು ಸೋಮಕರನ್ನು ಸಂಹರಿಸಿ ಒಬ್ಬನೇ ನಿಂತ.

ತತ್ರಾದ್ಭುತಮಪಶ್ಯಾಮ ಪಾಂಚಾಲಾನಾಂ ಪರಾಕ್ರಮಮ್ ।
ವಧ್ಯಮಾನಾಶ್ಚ ಯೇ ಕರ್ಣಂ ನ ಜಹೂ ರಣಮೂರ್ಧನಿ ॥೫೫॥

ಆಗ ಪಾಂಚಾಲರ ಪರಾಕ್ರಮ ಅದ್ಭುತವಾಗಿದ್ದುದನ್ನು ನಾವು ಕಂಡೆವು. ಅವರು ಕರ್ಣನಿಂದ ಹೊಡೆಸಿಕೊಳ್ಳುತ್ತಿದ್ದರೂ ರಣರಂಗದ ಮುಂಭಾಗದಲ್ಲಿ ಕರ್ಣನನ್ನು ಬಿಡಲಿಲ್ಲ.

ರಾಜಾ ದುಃಶಾಸನಶ್ಚೈವ ಕೃಪಃ ಶಾರದ್ವತಸ್ತಥಾ ।
ಅಶ್ವತ್ಥಾಮಾ ಕೃತವರ್ಮಾ ಶಕುನಿಶ್ಚಾಪಿ ಸೌಬಲಃ ।
ನ್ಯಹನನ್ ಪಾಂಡವೀಂ ಸೇನಾಂ ಶತಶೋಽಥ ಸಹಸ್ರಶಃ ॥೫೬॥

ದುರ್ಯೋಧನ ದುಃಶಾಸನ ಕೃಪ ಅಶ್ವತ್ಥಾಮ ಕೃತವರ್ಮ ಶಕುನಿ ಇವರೆಲ್ಲರೂ ಪಾಂಡವ ಸೈನ್ಯವನ್ನು ನೂರಾರು ಸಾವಿರಾರು ಸಂಖ್ಯೆಯಲ್ಲಿ ಸಂಹರಿಸಿದರು.

ಕರ್ಣಪುತ್ರೌ ಚ ರಾಜೇಂದ್ರ ಭ್ರಾತರೌ ಸತ್ಯವಿಕ್ರಮೌ ।
ಅನಾಶಯೇತಾಂ ಬಲಿನಃ ಪಾಂಚಾಲಾನ್ ವೈ ತತಸ್ತತಃ ।
ತತ್ರ ಯುದ್ಧಂ ತದಾ ಹ್ಯಾಸೀತ್ಕ್ರೂರಂ ವಿಶಸನಂ ಮಹತ್ ॥೫೭॥

ರಾಜನೆ, ಕರ್ಣನ ಇಬ್ಬರು ಪುತ್ರರು ನಿಜವಾದ ಪರಾಕ್ರಮವನ್ನು ತೋರುವ ಸೋದರರು ಬಲಿಷ್ಠರಾದ ಪಾಂಚಾಲರನ್ನು ಎಲ್ಲೆಡೆ ನಾಶಗೊಳಿಸಿದರು. ಆಗ ನಡೆದ ಯುದ್ಧ ಕ್ರೂರವಾಗಿತ್ತು. ಮಹಾವಿನಾಶಕಾರಿಯಾಗಿತ್ತು.

ತಥೈವ ಪಾಂಡವಾಃ ಶೂರಾ ಧೃಷ್ಟದ್ಯುಮ್ನಶಿಖಂಡಿನೌ ।
ದ್ರೌಪದೇಯಾಶ್ಚ ಸಂಕ್ರುದ್ಧಾ ಅಭ್ಯಘ್ನನ್ ತಾವಕಂ ಬಲಮ್ ॥೫೮॥

ಹಾಗೆಯೇ ಶೂರರಾದ ಪಾಂಡವರೂ ಧೃಷ್ಟದ್ಯುಮ್ನ ಶಿಖಂಡಿಗಳೂ ದ್ರೌಪದೀಪುತ್ರರೂ ಬಲುಕುಪಿತರಾಗಿ ನಿನ್ನ ಸೈನ್ಯವನ್ನು ಆಕ್ರಮಿಸಿ ಹೊಡೆದರು.

ಏವಮೇವ ಕ್ಷಯೋ ವೃತ್ತಃ ಪಾಂಡವಾನಾಂ ತತಸ್ತತಃ ।
ತಾವಕಾನಾಮಪಿ ರಣೇ ಭೀಮಂ ಪ್ರಾಪ್ಯ ಮಹಾಬಲಮ್ ॥೫೯॥

ಹೀಗೇ ಎಲ್ಲೆಡೆ ಪಾಂಡವಯೋಧರ ವಿನಾಶವೂ ಆಯಿತು. ಮಹಾಬಲಿ ಭೀಮನನ್ನು ಇದಿರಿಸಿ ನಿನ್ನ ಕಡೆ ಯೋಧರ ವಿನಾಶವೂ ಉಂಟಾಯಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಜಯೋ ನಾಮ ಪಂಚಸಪ್ತತಿತಮೋऽಧ್ಯಾಯಃ ॥೭೫॥

❖

ಎಪ್ಪತ್ತಾರನೆಯ ಅಧ್ಯಾಯ

ತೇಜೋವಧೆ ಮಾಡುತ್ತಿದ್ದ ಶಲ್ಯ ಕರ್ಣನನ್ನು ಈಗ ಹುರಿದುಂಬಿಸುತ್ತಾನೆ.

ಸಂಜಯಃ

ಅರ್ಜುನಸ್ತು ಮಹಾರಾಜ ಹತ್ವಾ ಸೈನ್ಯಂ ಚತುರ್ವಿಧಮ್ ।
ಸೂತಪುತ್ರಂ ಸುಸಂರಬ್ಧಂ ದೃಷ್ಟ್ವಾ ಚೈವ ಮಹಾರಣೇ ॥೧॥

ಶೋಣಿತೋದಾಂ ಮಹೀಂ ಕೃತ್ವಾ ಮಾಂಸಮಜ್ಜಾಸ್ಥಿವಾಹಿನೀಮ್ ।
ಮನುಷ್ಯಶೀರ್ಷಪಾಷಾಣಾಂ ಹಸ್ತ್ಯಶ್ವಕೃತರೋಧಸಮ್ ॥೨॥

ಶೂರಾಸ್ಥಿಚಯಸಂಕೀರ್ಣಾಂ ಕಾಕಗೃಧ್ರಾನುನಾದಿತಾಮ್ ।
ಛತ್ರಹಂಸಪ್ಲವೋಪೇತಾಂ ವೀರವೃಕ್ಷಾಪಹಾರಿಣೀಮ್ ॥೩॥

ಹಾರಪದ್ಮಾಕರವತೀಮುಷ್ಣೀಷವರಫೇನಿಲಾಮ್ ।
ಧನುಃಶರಧ್ವಜೋಪೇತಾಂ ನರಕ್ಷುದ್ರಕಪಾಲಿನೀಮ್ ॥೪॥

ಚರ್ಮವರ್ಮಭ್ರಮೋಪೇತಾಂ ರಥೋಡುಪಸಮಾಕುಲಾಮ್ ।
ಜಯೈಷಿಣಾಂ ಚ ಸುತರಾಂ ಭೀರೂಣಾಂ ಚ ಸುದುಸ್ತರಾಮ್ ।
ತಾಂ ನದೀಂ ಪ್ರಾಪಯಿತ್ವಾ ತು ಬೀಭತ್ಸುಃ ಪರವಾಹಿನೀಮ್ ॥೫॥

ವಾಸುದೇವಮಿದಂ ವಾಕ್ಯಮಬ್ರವೀತ್ ಪುರುಷರ್ಷಭ ॥೬॥

(ಅರ್ಜುನನು 74ನೆಯ ಅಧ್ಯಾಯದಲ್ಲಿ ಹೊರಟು, ಮಾರ್ಗದಲ್ಲಿ ಇದಿರಾದ ವೀರಯೋಧರನ್ನು ಸಂಹರಿಸಿ, ರಕ್ತದ ಹೊಳೆಗಳನ್ನು ಹರಿಸಿ, ಇದೀಗ ಈ ಅಧ್ಯಾಯದಲ್ಲಿ ಕರ್ಣನ ಬಳಿಗೆ ಬರುತ್ತಿದ್ದಾನೆ.)

ಸಂಜಯ ನುಡಿದ— ಮಹಾರಾಜ, ಅರ್ಜುನನು ಹರಿಸಿದ ರಕ್ತನದಿಯಲ್ಲಿ ರಕ್ತವೇ ನೀರು. ಮಾಂಸ ಮಜ್ಜ ಅಸ್ಥಿಗಳನ್ನು ಪ್ರವಾಹದಲ್ಲಿ ಒಯ್ಯುತ್ತಿದೆ. ತಲೆಬುರುಡೆಗಳೇ ಕಲ್ಲುಗಳು. ಆನೆ ಕುದುರೆಗಳ ಶವಗಳೆ ನದೀತೀರಗಳು. ಶೂರರ ಅಸ್ಥಿರಾಶಿಗಳಿಂದ ತುಂಬಿದೆ. ಕಾಗೆ ಹದ್ದುಗಳ ಧ್ವನಿ ಕೇಳಿಬರುತ್ತಿವೆ. ಛತ್ರಗಳೇ ಹಂಸಗಳಂಥ ದೋಣಿಗಳು. ವೀರರನ್ನು ವೃಕ್ಷಗಳಂತೆ ಪ್ರವಾಹವು ಕೊಚ್ಚಿ ಒಯ್ಯುತ್ತಿದೆ. ಹಾರಗಳಿಂದ ಕಮಲಾಕರವೆನಿಸಿದೆ. ಒಳ್ಳೆಯ ರುಮಾಲುಗಳೆ ನೊರೆಗಳು. ಧನುಸ್ಸು ಬಾಣ ಧ್ವಜಗಳು ತುಂಬಿವೆ. ಪದಾತಿಗಳ ಒಡೆದ ಕಪಾಲಗಳು ತುಂಬಿವೆ. ಗುರಾಣಿ ಕವಚಗಳು ನದಿಯಲ್ಲಿ ಸುಳಿಗಳಂತಿವೆ. ರಥಗಳೇ ದೋಣಿಗಳಂತಿವೆ. ಈ ನದಿಯು ಜಯೇಚ್ಛುಗಳಿಗೂ ದಾಟಲು ಅಶಕ್ಯ. ಹೇಡಿಗಳಿಗೆ ಸುತರಾಂ ದಾಟಲಸಾಧ್ಯ. ಅರ್ಜುನನು ಇಂಥ ನದಿಯನ್ನು ಶತ್ರುಸೇನೆಗೆ ಒದಗಿಸಿಕೊಟ್ಟು ಕೃಷ್ಣನಿಗೆ ನುಡಿದ.

ಅರ್ಜುನಃ

ಏಷ ಕೇತೂ ರಣೇ ಕೃಷ್ಣ ಸೂತಪುತ್ರಸ್ಯ ದೃಶ್ಯತೇ ।
ಭೀಮಸೇನಾದಯಶ್ಚೈತೇ ಯೋಧಯಂತಿ ಮಹಾರಥಾನ್ ।
ಏತೇ ದ್ರವಂತಿ ಪಾಂಚಾಲಾಃ ಕರ್ಣತ್ರಸ್ತಾ ಜನಾರ್ದನ ॥೭॥

ಅರ್ಜುನನು ನುಡಿದ— ಕೃಷ್ಣ ಕರ್ಣನ ಧ್ವಜವಿದು ಕಾಣಿಸುತ್ತಿದೆ. ಭೀಮಸೇನ ಮುಂತಾದವರು ಇಲ್ಲಿ ಮಹಾರಥರೊಂದಿಗೆ ಹೋರಾಡುತ್ತಿದ್ದಾರೆ. ಪಾಂಚಾಲರು ಕರ್ಣನಿಗೆ ಹೆದರಿ ಹಿಮ್ಮೆಟ್ಟುತ್ತಿದ್ದಾರೆ.

ಏಷ ದುರ್ಯೋಧನೋ ರಾಜಾ ಶ್ವೇತಚ್ಛತ್ರೇಣ ಭಾಸ್ವತಾ ।
ಕರ್ಣೇನ ಭಗ್ನಾನ್ ಪಾಂಚಾಲಾನ್ ದ್ರಾವಯನ್ ಬಹು
ಶೋಭತೇ ॥೮॥

ಹೊಳೆಯುವ ಶ್ವೇತಚ್ಛತ್ರದಿಂದ ಯುಕ್ತನಾದ ಈ ದುರ್ಯೋಧನನು ಕರ್ಣನಿಂದ ಪರಾಭವಗೊಂಡ ಪಾಂಚಾಲರನ್ನು ಬೆನ್ನಟ್ಟುತ್ತ ಬಹಳ ಶೋಭಿಸುತ್ತಿದ್ದಾನೆ.

ಕೃಪಶ್ಚ ಕೃತವರ್ಮಾ ಚ ದ್ರೌಣಿಶ್ಚೈವ ಮಹಾಬಲಃ ।
ಏತೇ ರಕ್ಷಂತಿ ರಾಜಾನಂ ಸೂತಪುತ್ರೇಣ ರಕ್ಷಿತಾಃ ।
ಅವಧ್ಯಮಾನಾಸ್ತೇऽಸ್ಮಾಭಿರ್ಘಾತಯಿಷ್ಯಂತಿ ಸೋಮಕಾನ್ ॥೯॥

ಕೃಪ ಕೃತವರ್ಮ ಹಾಗೂ ಮಹಾಬಲಿ ಅಶ್ವತ್ಥಾಮರು ಸೂತಪುತ್ರ ಕರ್ಣನ ರಕ್ಷಣೆಯಲ್ಲಿ ರಾಜಾ ದುರ್ಯೋಧನನನ್ನು ರಕ್ಷಿಸುತ್ತಿದ್ದಾರೆ. ನಾವು ಅವರನ್ನು ಈಗ ವಧಿಸುತ್ತಿಲ್ಲವಾದ್ದರಿಂದ ಅವರು ಸೋಮಕರನ್ನು ಸಂಹರಿಸಲಿದ್ದಾರೆ.

ಏಷ ಶಲ್ಯೋ ರಥೋಪಸ್ಥೇ ರಶ್ಮಿಸಂಚಾರಕೋವಿದಃ ।
ಸೂತಪುತ್ರರಥಂ ಕೃಷ್ಣ ವಾಹಯನ್ ಬಹು ಶೋಭತೇ ॥೧೦॥

ಈತ ಶಲ್ಯ, ರಥದ ಆಸನದಲ್ಲಿ ಲಗಾಮನ್ನು ತಿರುಗಿಸುವಲ್ಲಿ ಕೋವಿದನಾಗಿ ಕುಳಿತು ಕರ್ಣನ ರಥವನ್ನು ನಡೆಸುತ್ತ ಬಹಳ ಶೋಭಿಸುತ್ತಿದ್ದಾನೆ.

ತತ್ರ ಮೇ ಬುದ್ಧಿರುತ್ಪನ್ನಾ ವಾಹಯಾತ್ರ ಮಹಾರಥಮ್ ।
ನಾಹತ್ವಾ ಸಮರೇ ಕರ್ಣಂ ನಿವರ್ತಿಷ್ಯೇ ಕಥಂಚನ ॥೧೧॥

ಅಲ್ಲಿಗೆ ನಮ್ಮ ಮಹಾರಥವನ್ನು ನಡೆಸು. ಸಮರದಲ್ಲಿ ಕರ್ಣನನ್ನು ಕೊಲ್ಲದೆ ನಾನು ಸರ್ವಥಾ ಹಿಂತಿರುಗುವುದಿಲ್ಲ ಹಿಂತಿರುಗಬಾರದು ಎಂದು ನನಗೆ ದೃಢ ಬುದ್ಧಿ ಉಂಟಾಗಿದೆ.

ರಾಧೇಯೋऽಪ್ಯನ್ಯಥಾ ಪಾರ್ಥಾನ್ ಸೃಂಜಯಾಂಶ್ಚ ಮಹಾರಥಾನ್ ।
ನಿಃಶೇಷಾನ್ ಸಮರೇ ಕುರ್ಯಾತ್ ಪಶ್ಯತೋರ್ನೋ ಜನಾರ್ದನ ॥೧೨॥

ಕರ್ಣನನ್ನು ನಾನೀಗ ಕೊಲ್ಲದೆ ಬಿಟ್ಟರೆ ಅವನು, ನಾವು ನೋಡುತ್ತಿದ್ದಂತೆಯೇ, ಮಹಾರಥರಾದ ಪಾಂಡವರನ್ನೂ ಸೃಂಜಯರನ್ನೂ ರಣದಲ್ಲಿ ನಿಃಶೇಷಗೊಳಿಸುತ್ತಾನೆ ಕೃಷ್ಣ!

ಸಂಜಯಃ

ತತಃ ಪ್ರಾಯಾದ್ ರಥೇನಾಶು ಕೇಶವಸ್ತವ ವಾಹಿನೀಮ್ ।
ಕರ್ಣಂ ಪ್ರತಿ ಮಹೇಷ್ವಾಸಂ ದ್ವೈರಥೇ ಸವ್ಯಸಾಚಿನಾ ॥೧೩॥

ಸಂಜಯ ನುಡಿದ— ಆಗ ಕೃಷ್ಣನು ರಥದಿಂದ ನಿನ್ನ ಸೈನ್ಯದ ಕಡೆಗೆ, ಮಹಾಬಿಲ್ಲಾರನಾದ ಕರ್ಣನ ಬಳಿಗೆ, ಅರ್ಜುನನೊಡನೆ ದ್ವೈರಥಯುದ್ಧದ ಸಲುವಾಗಿ ಬೇಗನೆ ನಡೆದ.

ಪ್ರಯಾತಶ್ಚ ಮಹಾಬಾಹುಃ ಪಾಂಡವಾನುಜ್ಞಯಾ ಹರಿಃ ।
ಆಶ್ವಾಸಯನ್ ರಥೇನೈವ ಪಾಂಡುಸೈನ್ಯಾನಿ ಸರ್ವಶಃ ॥೧೪॥

ಅರ್ಜುನನ ಅಪೇಕ್ಷೆಯಂತೆ ಮಹಾಬಾಹುವಾದ ಕೃಷ್ಣನು ರಥದಿಂದಲೇ ಎಲ್ಲ ಪಾಂಡುಸೈನ್ಯಗಳಿಗೆ ಆಶ್ವಾಸನೆ ಉಂಟುಮಾಡುತ್ತ ನಡೆದ.

ರಥಘೋಷಃ ಸ ಸಂಗ್ರಾಮೇ ಪಾಂಡವೇಯಸ್ಯ ಸಂಬಭೌ ।
ವಾಸವಾಶನಿತುಲ್ಯಸ್ಯ ಮೇಘೌಘಸ್ಯೇವ ಮಾರಿಷ ॥೧೫॥

ರಾಜನೆ, ಇಂದ್ರನ ವಜ್ರಾಯುಧದಂಥ, ಮೋಡಸಮೂಹದ ಧ್ವನಿಯಂಥ ಅರ್ಜುನನ ರಥಘೋಷವು ಸಂಗ್ರಾಮದಲ್ಲಿ ಬಹಳ ಶೋಭಿಸಿತು.

ಮಹತಾ ರಥಘೋಷೇಣ ಪಾಂಡವಃ ಸತ್ಯವಿಕ್ರಮಃ ।
ಅಭ್ಯಯಾದಪ್ರಮೇಯಾತ್ಮಾ ವಿಜಯಸ್ತವ ವಾಹಿನೀಮ್ ॥೧೬॥

ನಿಜವಾದ ಪರಾಕ್ರಮವುಳ್ಳ ಅಮೇಯಾತ್ಮನಾದ 'ವಿಜಯ' ಎಂಬ ಹೆಸರಿನಿಂದಲೆ ಪ್ರಸಿದ್ಧನಾದ ಪಾಂಡುಪುತ್ರ ಅರ್ಜುನನು ಮಹಾರಥ ಘೋಷದೊಂದಿಗೆ ನಿನ್ನ ಸೈನ್ಯಕ್ಕೆ ಇದಿರಾಗಿ ನಡೆದ.

ತಮಾಯಾಂತಂ ಸಮೀಕ್ಷ್ಯೈವ ಶ್ವೇತಾಶ್ವಂ ಕೃಷ್ಣಸಾರಥಿಮ್ ।
ಮದ್ರರಾಜೋಽಬ್ರವೀತ್ ಕರ್ಣಂ ಕೇತುಂ ದೃಷ್ಟ್ವಾ ಮಹಾತ್ಮನಃ ॥೧೭॥

ಬಿಳಿ ಅಶ್ವಗಳುಳ್ಳ, ಕೃಷ್ಣನೇ ಸಾರಥಿಯಾಗಿರುವ ಆ ರಥ ಬರುತ್ತಿರುವುದನ್ನು

ಕಂಡು, ಅದರಲ್ಲಿ ಮಹಾತ್ಮನಾದ ಅರ್ಜುನನ ಕಪಿಧ್ವಜವಿರುವುದನ್ನು ಕಂಡು, ಶಲ್ಯನು ನುಡಿದ.

ಅಯಂ ಸ ರಥ ಆಯಾತಿ ಶ್ವೇತಾಶ್ವಃ ಕೃಷ್ಣಸಾರಥಿಃ ।
ನಿಘ್ನನ್ನಮಿತ್ರಾನ್ ಸಮರೇ ಯಂ ಕರ್ಣ ಪರಿಪೃಚ್ಛಸಿ ॥೧೮॥

ಕರ್ಣನೆ, ನೀನು ಯಾವ ರಥವನ್ನು ಎಲ್ಲಿ ಎಲ್ಲಿ ಎಂದು ಕೇಳುತ್ತಿರುವೆಯೋ ಅದೇ ಈ ರಥ ಬಿಳಿ ಅಶ್ವಗಳುಳ್ಳದ್ದು ಕೃಷ್ಣನೆ ಸಾರಥಿಯಾಗಿರುವುದು, ರಣದಲ್ಲಿ ಶತ್ರುಗಳನ್ನು ಸಂಹರಿಸುತ್ತ ಬರುತ್ತಿದೆ.

ಏಷ ತಿಷ್ಠತಿ ಕೌಂತೇಯಃ ಸಂಸ್ಪೃಶನ್ ಗಾಂಡಿವಂ ಧನುಃ ।
ತಂ ಹನಿಷ್ಯಸಿ ಚೇದದ್ಯ ತನ್ನಃ ಶ್ರೇಯೋ ಭವಿಷ್ಯತಿ ॥೧೯॥

ಈ ಅರ್ಜುನನು ಗಾಂಡೀವ ಧನುಸ್ಸನ್ನು ಹಿಡಿದು ನಿಂತಿದ್ದಾನೆ. ಅವನನ್ನು ನೀನು ಈಗ ಸಂಹರಿಸುವೆಯಾದರೆ ನಮಗೆ ಶ್ರೇಯಸ್ಸು ಉಂಟಾಗುವುದು.

ಏಷಾ ವಿದೀರ್ಯತೇ ಸೇನಾ ಧಾರ್ತರಾಷ್ಟ್ರೀ ಸಮಂತತಃ ।
ಅರ್ಜುನಸ್ಯ ಭಯಾತ್ ತೂರ್ಣಂ ನಿಘ್ನತಃ ಶಾತ್ರವಾನ್
ಬಹೂನ್ ॥೨೦॥

ಈ ಕೌರವಸೈನ್ಯವು ಬಹಳ ಶತ್ರುಗಳನ್ನು ಕೊಲ್ಲುವ ಅರ್ಜುನನ ಭಯದಿಂದ ಬೇಗನೆ ಎಲ್ಲೆಡೆ ನಶಿಸುತ್ತಿರುವುದು.

ವರ್ಜಯನ್ ಸರ್ವಸೈನ್ಯಾನಿ ತ್ವರತೇ ಹಿ ಧನಂಜಯಃ ।
ತ್ವದರ್ಥಮಿತಿ ಮನ್ಯೇಽಹಂ ಯಥಾಸ್ಯೋದೀರ್ಯತೇ ವಪುಃ ॥೨೧॥

ನ ಹ್ಯವಸ್ಥಾಪ್ಯತೇ ಪಾಥೋ ಯುಯುತ್ಸುಃ ಕೇನಚಿತ್ ಸಹ ।
ತ್ವಾಮೃತೇ ಕ್ರೋಧದೀಪ್ತೋ ಹಿ ಪೀಡ್ಯಮಾನೇ ವೃಕೋದರೇ ॥೨೨॥

ಬೇರೆ ಎಲ್ಲ ಸೈನ್ಯಗಳನ್ನು ಬಿಟ್ಟು ನಿನ್ನ ಬಳಿಗೇ ಬರಲು ಅರ್ಜುನನು ಅವಸರ ಪಡುತ್ತಿದ್ದಾನೆ, ಅವನ ಮೈ ಉತ್ಸಾಹದಿಂದ ಉಬ್ಬಿದ್ದನ್ನು ಕಂಡರೆ ನನಗೆ ಹಾಗೇ ಎನಿಸುತ್ತಿದೆ. ನಿನ್ನ ಹೊರತು ಬೇರೆ ಯಾರ ಜೊತೆಗೂ ಯುದ್ಧದಲ್ಲಿ ಅರ್ಜುನನನ್ನು

ತಡೆದು ನಿಲ್ಲಿಸಲಾಗದು. ಭೀಮನು ಪೀಡಿತನಾಗುತ್ತಿರುವುದರಿಂದ ಅರ್ಜುನನು ಕೋಪದಿಂದ ಉರಿಯುತ್ತ ನಿನ್ನೊಡನೇ ಯುದ್ಧವನ್ನು ಬಯಸುತ್ತಿದ್ದಾನೆ.

ವಿರಥಂ ಧರ್ಮರಾಜಂ ಚ ದೃಷ್ಟ್ವಾ ಸುದೃಢವಿಕ್ಷತಮ್ ।
ಶಿಖಂಡಿನಂ ಸಾತ್ಯಕಿಂ ಚ ಧೃಷ್ಟದ್ಯುಮ್ನಂ ಚ ಪಾರ್ಷತಮ್ ॥೨೩॥

ದ್ರೌಪದೇಯಾನ್ ಯುಧಾಮನ್ಯುಮುತ್ತಮೌಜಸಮೇವ ಚ ।
ನಕುಲಂ ಸಹದೇವಂ ಚ ಭ್ರಾತರೌ ದ್ವೌ ಸಮೀಕ್ಷ್ಯ ಚ ॥೨೪॥

ಸಹಸೈಕರಥಃ ಪಾರ್ಥಸ್ತ್ವಾಮಭ್ಯೇತಿ ಪರಂತಪ ।
ಕ್ರೋಧರಕ್ತೇಕ್ಷಣಃ ಕ್ರುದ್ಧೋ ಜಿಘಾಂಸುಃ ಸರ್ವಪಾರ್ಥಿವಾನ್ ॥೨೫॥

ಧರ್ಮರಾಜನು ವಿರಥನಾಗಿ ಬಲುಗಾಢವಾಗಿ ಗಾಯಗೊಂಡಿದ್ದನ್ನು ಕಂಡು, ಮತ್ತು ಶಿಖಂಡಿ ಸಾತ್ಯಕಿ ಧೃಷ್ಟದ್ಯುಮ್ನ ದ್ರೌಪದೀಪುತ್ರರು ಯುಧಾಮನ್ಯು ಉತ್ತಮೌಜರು ನಕುಲ–ಸಹದೇವ ಸೋದರರು ಇವರೆಲ್ಲರನ್ನೂ ಕಂಡು ಕ್ರುದ್ಧನಾಗಿ ಕೋಪದಿಂದ ಕೆಂಪಾದ ಕಣ್ಣಿನವನಾಗಿ, ಎಲ್ಲ ರಾಜರನ್ನು ಕೊಲ್ಲಲು ಬಯಸಿರುವ ಏಕರಥನಾದ ಪಾರ್ಥನು, ಶತ್ರುತಾಪಕನೆ, ನಿನ್ನ ಬಳಿಗೆ ಬರುತ್ತಿದ್ದಾನೆ.

ತ್ವರಿತೋಽಭಿಪತತ್ಯಸ್ಮಾಂಸ್ತ್ಯಕ್ತ್ವಾ ಸೈನ್ಯಾನ್ಯಸಂಶಯಮ್ ।
ತ್ವಂ ಕರ್ಣ ಪ್ರತಿಯಾಹ್ಯೇನಂ ನಾಸ್ತ್ಯನ್ಯೋ ಹಿ ಧನುರ್ಧರಃ ॥೨೬॥

ಅರ್ಜುನನು ಬೇರೆ ಎಲ್ಲ ಸೈನ್ಯಗಳನ್ನು ಬಿಟ್ಟು ತ್ವರೆಯಿಂದ ನಮ್ಮ ಮೇಲೇ ಏರಿ ಬರುತ್ತಾನೆ, ಸಂಶಯವಿಲ್ಲ. ಅವನನ್ನು ಕರ್ಣ! ನೀನು ಇದಿರಿಸು. ನಿನ್ನ ಹೊರತು ಅನ್ಯ ಧನುರ್ಧರನಿಲ್ಲ.

ನ ತಂ ಪಶ್ಯಾಮಿ ಲೋಕೇಽಸ್ಮಿನ್ ತ್ವತ್ತೋಽಪ್ಯನ್ಯಂ ಧನುರ್ಧರಮ್ ।
ಅರ್ಜುನಂ ಸಮರೇ ಕ್ರುದ್ಧಂ ಯೋ ವೇಲಾಮಿವ ಧಾರಯೇತ್ ॥೨೭॥

ಸಮರದಲ್ಲಿ ಕ್ರುದ್ಧನಾದ ಅರ್ಜುನನನ್ನು ತಡೆಯಬಲ್ಲ ಸಮುದ್ರಕ್ಕೆ ತೀರದಂತಿರುವ, ಧನುರ್ಧರನನ್ನು ನಿನ್ನ ಹೊರತು ಅನ್ಯನನ್ನು ಈ ಲೋಕದಲ್ಲಿ ನಾನು ಕಾಣುತ್ತಿಲ್ಲ.

ನ ಚಾಸ್ಯ ರಕ್ಷಾಂ ಪಶ್ಯಾಮಿ ಪೃಷ್ಠತೋ ನ ಚ ಪಾರ್ಶ್ವತಃ ।
ಏಕ ಏವಾಭಿಯಾತಿ ತ್ವಾಂ ಪಶ್ಯ ಸಾಕಲ್ಯಮಾತ್ಮನಃ ॥೨೮॥

ಅವನ ರಕ್ಷಣೆಗೆ ಹಿಂದೆಯೂ ಯಾರೂ ಕಾಣಿಸುತ್ತಿಲ್ಲ. ಪಾರ್ಶ್ವಗಳಲ್ಲಿಯೂ ಯಾರೂ ಕಾಣಿಸುತ್ತಿಲ್ಲ. ಏಕಾಂಗಿಯಾಗಿ ಅವನು ನಿನ್ನ ಮೇಲೇರಿ ಬರುತ್ತಿದ್ದಾನೆ. ನೀನು ನಿನ್ನಿಂದಾಗಬಹುದಾದ ಎಲ್ಲ ಪ್ರಯತ್ನಸಮೂಹವನ್ನು ಈಗ ಆಲೋಚಿಸು.

ತ್ವಂ ಹಿ ಕೃಷ್ಣೌ ರಣೇ ಶಕ್ತಃ ಸಂಸಾಧಯಿತುಮಾಹವೇ ।
ತವೈಷ ಭಾರೋ ರಾಧೇಯ ಪ್ರತ್ಯುದ್ಯಾಹಿ ಧನಂಜಯಮ್ ॥೨೯॥

ನೀನೇ ರಣದಲ್ಲಿ ಕೃಷ್ಣಾರ್ಜುನರನ್ನು ಇದಿರಿಸಲು ಸಮರ್ಥ. ಕರ್ಣ, ಇದರ ಭಾರ ನಿನ್ನ ಮೇಲೇ ಬಿದ್ದಿದೆ. ಅರ್ಜುನನನ್ನು ಇದಿರಿಸು.

ತ್ವಂ ಕೃತೋ ಹ್ಯೇವ ಭೀಷ್ಮೇಣ ದ್ರೋಣದ್ರೌಣಿಕೃಪೈರಪಿ ।
ಸವ್ಯಸಾಚಿಪ್ರತಿರಥಸ್ತಂ ನಿವರ್ತಯ ಪಾಂಡವಮ್ ॥೩೦॥

ಭೀಷ್ಮ ದ್ರೋಣ ಅಶ್ವತ್ಥಾಮ ಕೃಪರು ಎಲ್ಲರೂ ತಾವು ವಿಫಲರಾಗಿ ನಿನ್ನನ್ನೇ ಅರ್ಜುನನಿಗೆ ಸರಿಯಾದ ಪ್ರತಿರಥನನ್ನಾಗಿ ಮಾಡಿದ್ದಾರೆ. ನೀನೇ ಅರ್ಜುನನನ್ನು ಹಿಮ್ಮೆಟ್ಟಿಸಬೇಕು.

ಲೇಲಿಹಾನಂ ಯಥಾ ಸರ್ಪಂ ಗರ್ಜಂತಮೃಷಭಂ ಯಥಾ ।
ವನಸ್ಥಿತಂ ಯಥಾ ವ್ಯಾಘ್ರಂ ಜಹಿ ಕರ್ಣ ಧನಂಜಯಮ್ ॥೩೧॥

ಕಟವಾಯಿಗಳನ್ನು ನೆಕ್ಕಿಕೊಳ್ಳುವ ಸರ್ಪದಂತೆ, ಗರ್ಜಿಸುವ ವೃಷಭದಂತೆ, ಕಾಡಿನಲ್ಲಿರುವ ಹುಲಿಯಂತೆ ಈ ಅರ್ಜುನ, ಕರ್ಣ! ನೀನು ಅವನನ್ನು ಕೊಲ್ಲು.

ಏತೇ ದ್ರವಂತಿ ಸಮರೇ ಧಾರ್ತರಾಷ್ಟ್ರಾ ಮಹಾರಥಾಃ ।
ಅರ್ಜುನಸ್ಯ ಭಯಾತ್ ತೂರ್ಣಂ ನಿರಪೇಕ್ಷಾ ಜನಾಧಿಪಾಃ ॥೩೨॥

ಅರ್ಜುನನ ಭಯದಿಂದ ರಣದಲ್ಲಿ ಜಯಾಪೇಕ್ಷೆಯನ್ನು ತೊರೆದು, ಕೌರವ ಪಕ್ಷದ ಮಹಾರಥರಾದ ರಾಜರು ಬೇಗಬೇಗನೆ ಪಲಾಯನ ಮಾಡುತ್ತಿದ್ದಾರೆ.

ದ್ರವತಾಮಥ ತೇಷಾಂ ತು ಯುಧಿ ನಾನ್ಯೋಽಸ್ತಿ ಮಾನವಃ ।
ಭಯಹಾ ಯೋ ಭವೇದ್ ವೀರ ತ್ವಾಮೃತೇ ಸೂತನಂದನ ॥೩೩॥

ವೀರ ಕರ್ಣನೆ, ರಣದಲ್ಲಿ ಪಲಾಯನ ಮಾಡುತ್ತಿರುವ ಅವರಿಗೆ ಅಭಯ ನೀಡಬಲ್ಲವನು ನಿನ್ನ ಹೊರತು ಅನ್ಯಮಾನವನಿಲ್ಲ.

ಏತೇ ತ್ವಾಂ ಕುರವಃ ಸರ್ವೇ ದ್ವೀಪಮಾಸಾದ್ಯ ಸಂಯುಗೇ ।
ವಿಷ್ಠಿತಾಃ ಪುರುಷವ್ಯಾಘ್ರ ತತ್ತಃ ಶರಣಕಾಂಕ್ಷಿಣಃ ॥೩೪॥

ಈ ಕುರುಯೋಧರೆಲ್ಲರೂ ನಿನ್ನಿಂದಲೆ ರಕ್ಷಣೆಯನ್ನು ಬಯಸಿ, ಸಮುದ್ರದಲ್ಲಿ ಮುಳುಗುವವರಿಗೆ ದ್ವೀಪದಂತೆ, ರಣದಲ್ಲಿ ಹಿಮ್ಮೆಟ್ಟುವವರಿಗೆ ನೀನೇ ಆಶ್ರಯದಾತ ಎಂದು ನಂಬಿದ್ದಾರೆ.

ವೈದೇಹಾಂಬಷ್ಠಕಾಂಬೋಜಾಸ್ತಥಾ ನಗ್ನಜಿತಸ್ತ್ವಯಾ ।
ಗಾಂಧಾರಾಶ್ಚ ಯಯಾ ಧೃತ್ಯಾ ಜಿತಾಃ ಸಂಖ್ಯೇ ಸುದುರ್ಜಯಾಃ ॥೩೫॥

ತಾಂ ಧೃತಿಂ ಕುರು ರಾಧೇಯ ತತಃ ಪ್ರತ್ಯೇಹಿ ಪಾಂಡವಮ್ ।
ವಾಸುದೇವಂ ಚ ವಾರ್ಷ್ಣೇಯಂ ಪ್ರೀಯಮಾಣಂ ಕಿರೀಟಿನಾ ॥೩೬॥

ವಿದೇಹ ಅಂಬಷ್ಠ ಕಾಂಬೋಜ ನಗ್ನಜಿತ ಗಾಂಧಾರರು ರಣದಲ್ಲಿ ಅತ್ಯಂತ ದುರ್ಜಯರು. ಅವರನ್ನು ನೀನು ಯಾವ ಧೈರ್ಯದ ಬಲದಿಂದ ಗೆದ್ದಿರುವೆಯೋ ಆ ಧೈರ್ಯವನ್ನು ಈಗ ನಿನ್ನಲ್ಲಿ ತಂದುಕೊಳ್ಳು. ಅರ್ಜುನನ್ನು ಇದಿರಿಸು. ಅರ್ಜುನನ ಜೊತೆಯಲ್ಲಿ ಸಂತುಷ್ಟನಾಗುವ ಕೃಷ್ಣನನ್ನೂ ಇದಿರಿಸು.

ಕರ್ಣಃ

ಪ್ರಕೃತಿಸ್ಥೋ ಹಿ ಮೇ ಶಲ್ಯ ಇದಾನೀಂ ಸಮ್ಮತಸ್ತಥಾ ।
ಪ್ರತಿಭಾಸಿ ಮಹಾಬಾಹೋ ವಿಭೀಶ್ಚೈವ ಧನಂಜಯಾತ್ ॥೩೭॥

ಕರ್ಣನು ನುಡಿದ— ಮಹಾಬಾಹು ಶಲ್ಯನೆ, ನೀನು ಈಗ ನಿನ್ನ ಸಹಜಸ್ಥಿತಿಯಲ್ಲಿರುವೆ. ನನಗೆ ಈಗ ನಂಬಿಗಸ್ಥನೂ ಆಗಿರುವೆ ಎಂದು ನನಗೆ ಎನಿಸುತ್ತಿದೆ. ಅರ್ಜುನನ ಭಯ ನಿನಗಿಲ್ಲ ಎಂದೂ ಎನಿಸುತ್ತಿದೆ.

ಪಶ್ಯ ಬಾಹ್ವೋರ್ಬಲಂ ಮೇಽದ್ಯ ಶಿಕ್ಷಿತಸ್ಯ ಚ ಪಶ್ಯ ಮೇ ।
ಏಕೋಽದ್ಯ ನಿಹನಿಷ್ಯಾಮಿ ಪಾಂಡವಾನಾಂ ಮಹಾಚಮೂಮ್ ॥೩೮॥

ಈಗ ನೀನು ನನ್ನ ಬಾಹುಬಲವನ್ನು ನೋಡು. ಧನುರ್ವೇದ ಶಿಕ್ಷಣದ ಬಲವನ್ನೂ ನೋಡು, ಪಾಂಡವರ ಮಹಾಸೈನ್ಯವನ್ನು ನಾನೊಬ್ಬನೆ ಸಂಹರಿಸುವೆನು.

ಕೃಷ್ಣೌ ಚ ಪುರುಷವ್ಯಾಘ್ರೌ ತಚ್ಚ ಸತ್ಯಂ ಬ್ರವೀಮಿ ತೇ ।
ನಾಹತ್ವಾ ಯುಧಿ ತೌ ವೀರಾವಪಯಾಸ್ಯೇ ಕಥಂಚನ ॥೩೯॥

ಕೃಷ್ಣಾರ್ಜುನರೂ ಕೂಡ ಪುರುಷರಲ್ಲಿ ಶ್ರೇಷ್ಠರೆ, ಅದು ಸತ್ಯವೆಂದು ನಿನಗೆ ಹೇಳುತ್ತಿದ್ದೇನೆ. ಆದರೆ ರಣದಲ್ಲಿ ಆ ಇಬ್ಬರು ವೀರರನ್ನು ಕೊಲ್ಲದೆ ನಾನು ಸರ್ವಥಾ ಹಿಂತಿರುಗಲಾರೆ.

ಸ್ವಪ್ಸ್ಯೇ ವಾ ನಿಹತಸ್ತಾಭ್ಯಾಮನಿತ್ಯೋ ಹಿ ರಣೇ ಜಯಃ ।
ಕೃತಾರ್ಥೋ ವಾ ಭವಿಷ್ಯಾಮಿ ಹತ್ವಾ ವಾಪ್ಯಥವಾ ಹತಃ ॥೪೦॥

ನಾನು ಒಂದುವೇಳೆ ಅವರಿಂದ ಹತನಾಗಿ ನೆಲದ ಮೇಲೊರಗಿಯೇನು, ರಣದಲ್ಲಿ ಯಾರಿಗೂ ಜಯ ನಿಶ್ಚಿತವಲ್ಲವಾದ್ದರಿಂದ, ನಾನು ಅವರ ಹನನ ಮಾಡಿಯಾಗಲಿ, ನಾನೇ ಹತನಾಗಿಯಾಗಲಿ, ಕೃತಾರ್ಥನಂತೂ ಆದೇನು.

ನೈತಾದೃಶೋ ಜಾತು ಬಭೂವ ಲೋಕೇ
ರಥೋತ್ತಮೋ ಯಾವದನುಶ್ರುತಂ ನಃ ।
ತಮೀದೃಶಂ ಪ್ರತಿಯೋತ್ಸ್ಯಾಮಿ ಪಾರ್ಥಂ
ಮಹಾಹವೇ ಪಶ್ಯ ಚ ಪೌರುಷಂ ಮೇ ॥೪೧॥

ನಾವು ಕೇಳಿ ತಿಳಿದಮಟ್ಟಿಗೆ, ಇಂಥ ಒಬ್ಬ ಶ್ರೇಷ್ಠ ರಥಿಕನು ಲೋಕದಲ್ಲಿ ಎಂದೂ ಹುಟ್ಟಿಲ್ಲ. ಇಂಥ ಪಾರ್ಥನನ್ನು ನಾನು ರಣದಲ್ಲಿ ಇದಿರಿಸುತ್ತೇನೆ. ನೋಡು ನನ್ನ ಪೌರುಷವನ್ನು.

ರಥಾನ್ ವರಾನೇತಿ ರಥಪ್ರವೀರಃ
ಶೀಘ್ರೈರ್ಹಯೈಃ ಕೌರವರಾಜಪುತ್ರಃ ।

ಸ ಚಾದ್ಯ ಮಾಂ ನೇಷ್ಯತಿ ಕ್ಷಿಪ್ರಮಂತಂ
ಕರ್ಣೋಽಸ್ಯಾಂತೇಽಪ್ಯತ್ರ ಭವೇತ್ ಸಮರ್ಥಃ ॥೪೨॥

ರಥಿಕರಲ್ಲಿ ಶ್ರೇಷ್ಠವೀರನೆನಿಸಿದ ಕುರುವಂಶದ ರಾಜಕುಮಾರ ಅರ್ಜುನನು ವೇಗದ ಕುದುರೆಗಳಿಂದ ರಥಿಕರನ್ನು ಆಕ್ರಮಿಸುತ್ತಿದ್ದಾನೆ. ಅವನೂ ನನ್ನನ್ನು ಶೀಘ್ರವಾಗಿ ಕೊಲ್ಲಬಲ್ಲ. ಈ ಕರ್ಣನೂ ಅವನ ವಧೆಗೆ ಸಮರ್ಥನಾಗಬಲ್ಲ.

ಅಸ್ವೇದಿನೌ ರಾಜಪುತ್ರಸ್ಯ ಹಸ್ತಾ-
ವವೇಪಿನೌ ಜಾತಕಿಣೌ ಬೃಹಂತೌ ।
ದೃಢಾಯುಧಃ ಕೃತಿಮಾನ್ ಕ್ಷಿಪ್ರಹಸ್ತೋ
ನ ಪಾಂಡವೇಯೇನ ಸಮೋಽಸ್ತಿ ಯೋಧಃ ॥೪೩॥

ರಾಜಪುತ್ರನಾದ ಅರ್ಜುನನ ಕೈಗಳು ಬೆವರುವುದಿಲ್ಲ. ನಡುಗುವುದಿಲ್ಲ. ಸಡ್ಡು ಗಟ್ಟಿವೆ. ನೀಳವಾಗಿವೆ. ದೃಢವಾಗಿ ಆಯುಧವನ್ನು ಹಿಡಿಯಬಲ್ಲನು, ಪ್ರಯತ್ನಶೀಲ, ಕೈಚಳಕ ಉಳ್ಳವನು. ಇಂಥ ಅರ್ಜುನನಿಗೆ ಸಮನಾದ ಯೋಧನಿಲ್ಲ.

ಗೃಹ್ಣಾತ್ಯನೇಕಾನಪಿ ಕಂಕಪತ್ರಾ-
ನೇಕಂ ಯಥಾ ತಾನ್ ಪ್ರಹಿಣೋತಿ ಚಾಶು ।
ತೇ ಕ್ರೋಶಮಾತ್ರಂ ನಿಪತಂತ್ಯಮೋಘಾಃ
ಕಸ್ತೇನ ಯೋಧೋಽಸ್ತಿ ಸಮಃ ಪೃಥಿವ್ಯಾಮ್ ॥೪೪॥

ಒಮ್ಮೆಲೆ ಅನೇಕ ಬಾಣಗಳನ್ನು ಎತ್ತಿಕೊಳ್ಳುತ್ತಾನೆ. ಒಮ್ಮೆಲೆ ಎಲ್ಲವನ್ನೂ ಬೇಗನೆ ಒಂದಾಗಿ ಕಾಣುವಂತೆ ಎಸೆಯುತ್ತಾನೆ. ಅಮೋಘವಾದ ಆ ಬಾಣಗಳು ಕ್ರೋಶದಷ್ಟು ದೂರದವರೆಗೂ ಹಾರುತ್ತವೆ. ಅವನಿಗೆ ಸಮನಾದ ಯೋಧನು ಭೂಮಿಯಲ್ಲಿ ಯಾವನಿದ್ದಾನೆ? (ಕ್ರೋಶ ಎಂದರೆ ಸುಮಾರು ಐದಾರು ಕಿ.ಮೀ.)

ಅತೋಷಯತ್ ಪಾಂಡವೇಯೋ ಹುತಾಶಂ
ಕೃಷ್ಣದ್ವಿತೀಯೋಽತಿರಥಸ್ತರಸ್ವೀ ।
ಲೇಭೇ ಚಕ್ರಂ ಯತ್ರ ಕೃಷ್ಣೋ ಮಹಾತ್ಮಾ
ಧನುರ್ಗಾಂಡೀವಂ ಪಾಂಡವಃ ಸವ್ಯಸಾಚೀ ॥೪೫॥

ಅರ್ಜುನನು ಅಗ್ನಿಯನ್ನು ಖಾಂಡವವನದಲ್ಲಿ ಸಂತೋಷಪಡಿಸಿದ. ಅವನಿಗೆ ಕೃಷ್ಣನ ಸಹಾಯವಿದೆ. ವೇಗಉಳ್ಳ ಅತಿರಥನು ಆತ. ಖಾಂಡವವನದಲ್ಲಿ ಮಹಾತ್ಮಕೃಷ್ಣನು ಚಕ್ರವನ್ನೂ ಸವ್ಯಸಾಚಿ ಅರ್ಜುನನು ಗಾಂಡೀವವನ್ನೂ ಪಡೆದ.

ಶ್ವೇತಾಶ್ವಯುಕ್ತಂ ಚ ಸುಘೋಷಮಗ್ರ್ಯಂ
ರಥಂ ಮಹಾಬಾಹುರದೀನಸತ್ತ್ವಃ ।
ಮಹೇಷುಧೀ ಚಾಕ್ಷಯೌ ದಿವ್ಯರೂಪೌ
ಶಸ್ತ್ರಾಣಿ ದಿವ್ಯಾನಿ ಚ ಹವ್ಯವಾಹಾತ್ ॥೪೬॥

ಅರ್ಜುನನು ಆಗ ಗಾಂಡೀವವನ್ನು ಮಾತ್ರವಲ್ಲದೆ ಬಿಳಿಕುದುರೆಯುಳ್ಳ ಒಳ್ಳೆ ಧ್ವನಿ ಮಾಡುವ ಉತ್ತಮವಾದ ರಥವನ್ನೂ ಅಗ್ನಿಯಿಂದ ಪಡೆದ. ಮಹಾಬಾಹು ಹಾಗೂ ಮಹಾಸತ್ವಶಾಲಿಯಾದ ಆತ ದಿವ್ಯವಾದ ದೊಡ್ಡ ಎರಡು ಅಕ್ಷಯ ಬತ್ತಳಿಕೆಗಳನ್ನೂ ದಿವ್ಯ ಆಯುಧಗಳನ್ನೂ ಅಗ್ನಿದೇವನಿಂದ ಪಡೆದ.

ತಥೇಂದ್ರಲೋಕೇ ನಿಜಘಾನ ದೈತ್ಯಾ-
ನಸಂಖ್ಯೇಯಾನ್ ಕಾಲಕೇಯಾಂಶ್ಚ ಸರ್ವಾನ್ ।
ಲೇಭೇ ಶಂಖಂ ದೇವದತ್ತಂ ಸ್ಮ ತತ್ರ
ಕೋ ನಾಮ ತೇನಾಭ್ಯಧಿಕಃ ಪೃಥಿವ್ಯಾಮ್ ॥೪೭॥

ಇಂದ್ರಲೋಕಕ್ಕೆ ಹೋಗಿ ಲೆಕ್ಕವಿಲ್ಲದಷ್ಟು ಕಾಲಕೇಯ ದೈತ್ಯರೆಲ್ಲರನ್ನೂ ಸಂಹರಿಸಿದ. ಆಗ ದೇವದತ್ತ ಎಂಬ ಶಂಖವನ್ನು ಪಡೆದ. ಅವನಿಗಿಂತ ಶ್ರೇಷ್ಠನು ಭೂಮಿಯಲ್ಲಿ ಯಾವನು ತಾನೆ ಇರಬಲ್ಲ?

ಮಹಾದೇವಂ ತೋಷಯಾಮಾಸ ಚೈವ
ಸಾಕ್ಷಾತ್ಸುಯುದ್ಧೇನ ಮಹಾನುಭಾವಃ ।
ಲೇಭೇ ತತಃ ಪಾಶುಪತಂ ಸುಘೋರಂ
ತ್ರೈಲೋಕ್ಯಸಂಹಾರಕರಂ ಮಹಾಸ್ತ್ರಮ್ ॥೪೮॥

ಮಹಾನುಭಾವ ಅರ್ಜುನನು ಒಳ್ಳೆಯ ಯುದ್ಧದಿಂದ ಸಾಕ್ಷಾತ್ ಮಹಾದೇವನನ್ನು ಸಂತೋಷಪಡಿಸಿದ. ಮಹಾದೇವನಿಂದ ಬಲುಘೋರವಾದ ಪಾಶುಪತಾಸ್ತ್ರವೆಂಬ ಮೂರ್ಲೋಕ ಸಂಹಾರಮಾಡಬಲ್ಲ ಮಹಾ ಅಸ್ತ್ರವನ್ನೂ ಪಡೆದುಕೊಂಡ.

ಪೃಥಕ್ ಪೃಥಗ್ಲೋಕಪಾಲಾಃ ಸಮೇತಾ
ದದುರ್ಹ್ಯಸ್ತ್ರಾಣ್ಯಪ್ರಮೇಯಾಣಿ ಯಸ್ಯ ।
ಯೈಸ್ತಾನ್ ಜಘಾನಾಶು ರಣೇ ನೃಸಿಂಹಾನ್
ಸ ಕಾಲಖಂಜಾನಸುರಾನ್ ಸಮೇತಾನ್ ॥೪೯॥

ಬೇರೆಬೇರೆ ಲೋಕಪಾಲರೂ ಕೂಡಿ ಅಪ್ರಮೇಯವಾದ ಅಸ್ತ್ರಗಳನ್ನು ಅವನಿಗೆ ನೀಡಿದರು. ಆ ಅಸ್ತ್ರಗಳಿಂದ, ಪುರುಷಶ್ರೇಷ್ಠರಾದ ಕಾಲಖಂಜರೆಂಬ ಅಸುರರೆಲ್ಲ ಸಾವಿರಾರು ಮಂದಿ ಒಟ್ಟಾಗಿ ಬಂದರೂ, ಅವರೆಲ್ಲರನ್ನೂ ಅರ್ಜುನನು ಸಂಹಾರ ಮಾಡಿದ.

ತಥಾ ವಿರಾಟಸ್ಯ ಪುರೇ ಸಮೇತಾನ್
ಸರ್ವಾನಸ್ಮಾನೇಕರಥೇನ ಜಿತ್ವಾ ।
ಜಹಾರ ತದ್ಗೋಧನಮಾಜಿಮಧ್ಯೇ
ವಸ್ತ್ರಾಣಿ ಚಾದತ್ತ ಮಹಾರಥೇಭ್ಯಃ ॥೫೦॥

ವಿರಾಟನಗರದಲ್ಲಿ ನಾವೆಲ್ಲರೂ ಒಟ್ಟಾಗಿ ಗೋಗ್ರಹಣಕ್ಕೆ ಬಂದಾಗ ಅವನು ಒಂದು ರಥದಿಂದ ರಣದಲ್ಲಿ ನಮ್ಮನ್ನು ಗೆದ್ದು ಗೋಧನವನ್ನು ಒಯ್ದ ಮತ್ತು ಮಹಾರಥರಿಂದ ವಸ್ತ್ರಗಳನ್ನು ಅಪಹರಿಸಿದ.

ತಮೀದೃಶಂ ವೀರ್ಯಗುಣೋಪಪನ್ನಂ
ಕೃಷ್ಣದ್ವಿತೀಯಂ ವರಯೇ ರಣಾಯ ।
ಅನಂತವೀರ್ಯೇಣ ಚ ಕೇಶವೇನ
ನಾರಾಯಣೇನಾಪ್ರತಿಮೇನ ಗುಪ್ತಮ್ ॥೫೧॥

ಇಂಥ ವೀರ್ಯಗುಣಸಂಪನ್ನನಾದ ಅರ್ಜುನನು ಕೃಷ್ಣನ ಸಹಾಯವನ್ನು ಹೊಂದಿದ್ದಾನೆ. ಅನಂತವೀರ್ಯವುಳ್ಳ ಅಪ್ರತಿಮನಾದ ನಾರಾಯಣಾವತಾರನಾದ ಕೃಷ್ಣನಿಂದ ರಕ್ಷಿತನೂ ಆಗಿದ್ದಾನೆ. ಇಂಥ ಅರ್ಜುನನನ್ನು ನಾನು ಯುದ್ಧಕ್ಕೆ ವರಿಸುತ್ತಿದ್ದೇನೆ.

ವಪುರ್ಯುತ್ತೈರ್ಯಸ್ಯ ಗುಣಾ ನ ಶಕ್ಯಾ
ವಕ್ತುಂ ಸಮೇತ್ಯೈರಪಿ ಸರ್ವಲೋಕೈಃ।
ಮಹಾತ್ಮನಃ ಶಂಖಿಚಕ್ರಾಸಿಪಾಣೇ-
ರ್ವಿಷ್ಣೋರ್ಜಿಷ್ಣೋರ್ವಸುದೇವಾತ್ಮಜಸ್ಯ ॥೫೨

ವಸುದೇವಪುತ್ರನಾದ ಕೃಷ್ಣನ ಗುಣಗಳನ್ನು ಪ್ರಾಕೃತಶರೀರಿಗಳಾದ ಸರ್ವಲೋಕದ ಜನರು ಎಲ್ಲರೂ ಜೊತೆಗೆ ಸೇರಿದರೂ, ಹೇಳಲು ಶಕ್ತರಾಗಲಾರರು. ಅವನು ಮಹಾತ್ಮ. ಶಂಖ ಚಕ್ರ ಖಡ್ಗಪಾಣಿಯಾದ ಜಯಶೀಲನಾದ ವಿಷ್ಣುವಿನ ಅವತಾರ.

ಭಯಂ ಮೇ ವೈ ಜಾಯತೇ ಸಾಧ್ವಸಂ ಚ
ದೃಷ್ಟ್ವಾ ಕೃಷ್ಣಾವೇಕರಥೇ ಸಮೇತೌ ॥೫೩

ನನಗೆ ನಿಜವಾಗಿ ಮನಸ್ಸಿನಲ್ಲಿ ಭಯ, ಮೈಯಲ್ಲಿ ನಡುಕ ಉಂಟಾಗುತ್ತಿದೆ, ಒಂದು ರಥದಲ್ಲಿ ಕೃಷ್ಣಾರ್ಜುನರು ಜೊತೆಗಿರುವುದನ್ನು ಕಂಡಾಗ.

ಅತೀವ ಪಾರ್ಥೋ ಯುಧಿ ಕಾರ್ಮುಕಿಭ್ಯೋ
ನಾರಾಯಣಶ್ಚಾಪ್ರತಿಮಶ್ಚ ಯುದ್ಧೇ।
ಏವಂವಿಧೌ ಪಾಂಡವವಾಸುದೇವೌ
ಚಲೇತ್ಸ್ವದೇಶಾದ್ಧಿಮವಾನ್ನ ಕೃಷ್ಣೌ ॥೫೪॥

ರಣದಲ್ಲಿ ಬಿಲ್ಲಾಳುಗಳೆಲ್ಲರಿಗಿಂತ ಅತಿಶ್ರೇಷ್ಠನು ಅರ್ಜುನ. ಚಕ್ರಯುದ್ಧದಲ್ಲಿ ಅಪ್ರತಿಮನು ನಾರಾಯಣ. ಇಂಥವರು ಕೃಷ್ಣಾರ್ಜುನರು. ಒಂದುವೇಳೆ ಹಿಮಾಲಯ ಪರ್ವತವಾದರೂ ತನ್ನ ಸ್ಥಾನದಿಂದ ಚಲಿಸಬಹುದು. ಕೃಷ್ಣಾರ್ಜುನರು ಮಾತ್ರ ವಿಚಲಿತರಾಗಲಾರರು.

ಉಭೌ ಹಿ ಶೂರೌ ಕೃತಿನೌ ದೃಢಾಸ್ತ್ರೌ
ಮಹಾರಥೌ ಸಂಹನನೋಪಪನ್ನೌ।
ಏತಾದೃಶೌ ಫಲ್ಗುನವಾಸುದೇವೌ
ಕೋಽನ್ಯಃ ಪ್ರತೀಯಾನ್ ಮದೃತೇ ನು ಶಲ್ಯ ॥೫೫॥

ಕೃಷ್ಣಾರ್ಜುನರಿಬ್ಬರೂ ಪ್ರಯತ್ನಶೀಲರು, ದೃಢವಾದ ಅಸ್ತ್ರವುಳ್ಳವರು, ಮಹಾರಥರು, ಒಳ್ಳೆಯ ಮೈಕಟ್ಟುಳ್ಳವರು. ಇಂಥ ಕೃಷ್ಣಾರ್ಜುನರನ್ನು ಶಲ್ಯ! ನನ್ನ ಹೊರತು ಇನ್ನಾವನು ಯುದ್ಧದಲ್ಲಿ ಇದಿರಿಸಿಯಾನು?

ಮನೋರಥೋ ಯಸ್ತು ಮಮಾದ್ಯ ಶಲ್ಯ
ಮದ್ರೇಶ ಯುದ್ಧಂ ಪ್ರತಿ ಪಾಂಡವಸ್ಯ ।
ನೇದಂ ಚಿರಾದಾಶು ಭವಿಷ್ಯತೀದ-
ಮತ್ಯದ್ಭುತಂ ಚಿತ್ರಮತುಲ್ಯರೂಪಮ್ ॥೫೬॥

ಶಲ್ಯ, ಅರ್ಜುನನ ಇದಿರಿನಲ್ಲಿ ಯುದ್ಧ ಮಾಡುವ ನನ್ನ ಈ ಮನೋರಥವು ಫಲಿಸಲು ತಡವಿಲ್ಲ ಬೇಗನೇ ಫಲಿಸುವುದು. ಅದು ಅತ್ಯದ್ಭುತ, ಸುಂದರ, ಅನುಪಮವಾಗಿರುತ್ತದೆ.

ಏತಾವಹಂ ಯುಧಿ ವಾ ಪಾತಯಿಷ್ಯೇ
ಮಾಂ ವಾ ಕೃಷ್ಣೌ ನಿಹನಿಷ್ಯತೋಽದ್ಯ ॥೫೭॥

ಇವರಿಬ್ಬರನ್ನು ನಾನು ಈಗ ಬೀಳಿಸುವೆ ಅಥವಾ ಅವರು ನನ್ನನ್ನು ಸಂಹರಿಸುವರು.

ಸಂಜಯಃ

ಇತಿ ಬ್ರುವನ್ ಶಲ್ಯಮಮಿತ್ರಹಂತಾ
ಕರ್ಣೋ ರಣೇ ಮೇಘ ಇವೋನ್ನನಾದ ॥೫೮॥

ಸಂಜಯನು ನುಡಿದ— ಶತ್ರುನಾಶಕನಾದ ಕರ್ಣನು ಶಲ್ಯನಿಗೆ ಹೀಗೆ ಹೇಳುತ್ತ ಮೇಘದಂತೆ ಗರ್ಜನೆ ಮಾಡಿದ.

ಅಭ್ಯೇತ್ಯ ಪುತ್ರೇಣ ತವಾಭಿನಂದಿತಃ ।
ಸಮೇತ್ಯ ಚೋವಾಚ ಕುರುಪ್ರವೀರಾನ್ ।
ಕೃಪಂ ಚ ಭೋಜಂ ಚ ಮಹಾಭುಜಾವುಭೌ
ತಥೈವ ಗಾಂಧಾರನೃಪಂ ಸಹಾನುಜಮ್ ।
ಗುರೋಃ ಸುತಂ ಚಾವರಜಂ ತಥಾತ್ಮನಃ
ಪದಾತಿನೋಽಥ ದ್ವಿಪಸಾದಿನೋಽನ್ಯಾನ್ ॥೫೯॥

ನಿನ್ನ ಮಗ ದುರ್ಯೋಧನನು ಬಂದು ಕರ್ಣನನ್ನು ಅಭಿನಂದಿಸಿದ. ಅವನೊಂದಿಗೆ ಕರ್ಣನು ನಿಂತು ಮಹಾಬಾಹುಗಳಾದ ಕೃಪ ಕೃತವರ್ಮರನ್ನೂ ಸೋದರರೊಂದಿಗೆ ಯುಕ್ತನಾದ ಶಕುನಿಯನ್ನೂ ಅಶ್ವತ್ಥಾಮನನ್ನೂ ತನ್ನ ತಮ್ಮನನ್ನೂ ಪದಾತಿ ಗಜ ಅಶ್ವ ಸೈನಿಕರನ್ನೂ ಕುರಿತು ನುಡಿದ.

ಕರ್ಣಃ

ನಿರುಂಧತಾಭಿದ್ರವತಾಚ್ಯುತಾರ್ಜುನೌ
ಶ್ರಮೇಣ ಸಂಯೋಜಯತಾಶು ಸರ್ವಶಃ ।
ಯಥಾ ಭವದ್ಭಿರ್ಭೃಶವಿಕ್ಷತಾವುಭೌ
ಸುಖೇನ ಹನ್ಯಾಮಹಮದ್ಯ ಭೂಮಿಪಾಃ ॥೬೦॥

ಕರ್ಣನು ನುಡಿದ— ರಾಜರೆ, ಕೃಷ್ಣಾರ್ಜುನರನ್ನು ತಡೆಯಿರಿ, ಆಕ್ರಮಿಸಿರಿ, ಎಲ್ಲ ಕಡೆಯಿಂದ ಅವರಿಗೆ ಶ್ರಮವಾಗುವಂತೆ ದಾಳಿ ಮಾಡಿರಿ. ನೀವು ಅವರನ್ನು ಬಹಳ ಗಾಯಗೊಳಿಸಿದಾಗ ನಾನು ಅವರನ್ನು ನಿರಾಯಾಸವಾಗಿ ಕೊಲ್ಲಬಲ್ಲೆ.

ಸಂಜಯಃ

ತಥೇತಿ ಚೋಕ್ತ್ವಾ ತ್ವರಿತಾಃ ಸ್ಮ ತೇಽರ್ಜುನಂ
ಜಿಘಾಂಸವೋ ವೀರತಮಾಃ ಸಮಭ್ಯಯುಃ ।
ಶರೈಶ್ಚ ಜಘ್ನುರ್ಯುಧಿ ತಂ ಮಹಾರಥಾ
ಧನಂಜಯಂ ಕರ್ಣನಿದೇಶಕಾರಿಣಃ ॥೬೧॥

ನದೀನದಾನ್ ಭೂರಿಜಲೋ ಮಹಾರ್ಣವೋ
ಯಥಾ ತಥಾ ತಾನ್ ಸಮರೇಽರ್ಜುನೋಽಗ್ರಸತ್ ॥೬೨॥

ಸಂಜಯನು ನುಡಿದ— ಮಹಾವೀರರಾದ ಆ ರಾಜರು 'ಹಾಗೇ ಆಗಲಿ' ಎಂದು ಹೇಳಿ ಬೇಗನೆ ಅರ್ಜುನನನ್ನು ಇದಿರಿಸಿದರು. ಆ ಮಹಾರಥರು ಸೇನಾಧಿಪತಿಯಾದ ಕರ್ಣನ ಆದೇಶದಂತೆ ರಣದಲ್ಲಿ ಅರ್ಜುನನನ್ನು ಬಾಣಗಳಿಂದ ಹೊಡೆದರು. ಅಪಾರ ಜಲ ಉಳ್ಳ ಮಹಾಸಮುದ್ರವು ಎಲ್ಲ ನದೀ ನದಜಲಗಳನ್ನು ಅನಾಯಾಸವಾಗಿ ಕಬಳಿಸುವಂತೆ ಅರ್ಜುನನು ಅವರೆಲ್ಲರ ಬಾಣಗಳನ್ನು ಅನಾಯಾಸವಾಗಿ ನಾಶಪಡಿಸಿದ.

ನ ಸಂದಧಾನೋ ನ ತಥಾ ಶರೋತ್ತಮಾನ್
ಪ್ರಮುಂಚಮಾನೋ ರಿಪುಭಿಃ ಪ್ರದೃಶ್ಯತೇ ।
ಧನಂಜಯಸ್ತಸ್ಯ ಶರೈಶ್ಚ ದಾರಿತಾ
ಹತಾಶ್ಚ ಪೇತುರ್ನರವಾಜಿಕುಂಜರಾಃ ॥೬೩॥

ಅರ್ಜುನನು ಉತ್ತಮವಾಗಿ ಬಾಣಗಳನ್ನು ಯಾವಾಗ ಬಿಲ್ಲಿಗೆ ಹೂಡುತ್ತಾನೆ, ಯಾವಾಗ ಬಿಡುತ್ತಾನೆ ಎಂಬುದು ಶತ್ರುಗಳಿಗೆ ಕಾಣಿಸುವುದಿಲ್ಲ. ಅವನ ಬಾಣಗಳಿಂದ ಹೊಡೆಸಿಕೊಂಡು ಪದಾತಿ ಅಶ್ವಗಜಯೋಧರು ಸತ್ತುಬಿದ್ದರು. ಇದು ಮಾತ್ರ ಎಲ್ಲರಿಗೂ ಕಾಣಿಸಿಕೊಂಡಿತು.

ಶರಾರ್ಚಿಷಂ ಗಾಂಡಿವಚಾರುಮಂಡಲಂ
ಯುಗಾಂತಸೂರ್ಯಪ್ರತಿಮಾನತೇಜಸಮ್ ।
ನ ಕೌರವಾಃ ಶೇಕುರುದೀಕ್ಷಿತುಂ ಜಯಂ
ಯಥಾ ರವಿಂ ವ್ಯಾಧಿತಚಕ್ಷುಷೋ ಜನಾಃ ॥೬೪॥

ಪ್ರಳಯಕಾಲದ ಸೂರ್ಯನ ತೇಜಸ್ಸು ಅರ್ಜುನನದು. ಬಾಣಗಳು ಈ ಸೂರ್ಯನ ಕಿರಣಗಳು. ವೃತ್ತಾಕಾರವಾಗಿ ಬಾಗಿದ ಬಿಲ್ಲು ಅವನ ಸೂರ್ಯ ಮಂಡಲ. ಕಣ್ಣುಬೇನೆಯವರು ಸೂರ್ಯದರ್ಶನ ಮಾಡಲು ಶಕ್ತರಾಗುವುದಿಲ್ಲ. ಹಾಗೇ ಅರ್ಜುನನನ್ನು ದಿಟ್ಟಿಸಿ ನೋಡಲು ಕೌರವರು ಶಕ್ತರಾಗಲಿಲ್ಲ.

ಶರೋತ್ತಮಾನ್ ಸ ಪ್ರಹಿತಾನ್ ಮಹಾರಥೈ-
ಶ್ಚಿಚ್ಛೇದ ಪಾರ್ಥಃ ಪ್ರಹಸನ್ ಶರೌಘೈಃ ।
ಭೂಯಶ್ಚ ತಾನಹನದ್ ಬಾಣಸಂಘೈ-
ರ್ಗಾಂಡೀವಧನ್ವಾऽऽಯತಪೂರ್ಣಮಂಡಲಃ ॥೬೫॥

ಸೆಳೆದು ಪೂರ್ಣಮಂಡಲಾಕಾರವಾಗಿಸಿದ ಗಾಂಡೀವಬಿಲ್ಲನ್ನು ಧರಿಸಿದ ಅರ್ಜುನನು ನಗುತ್ತ ಮಹಾರಥರು ಎಸೆದ ಉತ್ತಮವಾದ ಬಾಣಗಳನ್ನು ಬಾಣಸಮೂಹಗಳಿಂದ ಕತ್ತರಿಸಿದ. ಪುನಃ ಬಾಣಸಮೂಹಗಳಿಂದ ಅವರನ್ನು ಹೊಡೆದ.

ಯಥೋಗ್ರರಶ್ಮಿಃ ಶುಚಿಶುಕ್ಲಮಧ್ಯಗಃ
ಸುಖಂ ವಿವಸ್ವಾನ್ ಹರತೇ ಜಲೌಘಾನ್ ।
ತಥಾರ್ಜುನೋ ಬಾಣಗಣಾನ್ ನಿರಸ್ಯ
ದದಾಹ ಸೇನಾಂ ತವ ಪಾರ್ಥಿವೇಂದ್ರ ॥೬೬॥

ಮಹಾರಾಜ, ಜ್ಯೇಷ್ಠ-ಆಷಾಢ ಮಾಸ ಮಧ್ಯದ ಸೂರ್ಯನು ಪ್ರಖರ ರಶ್ಮಿ ಉಳ್ಳವನಾಗಿದ್ದು ಕಿರಣಗಳಿಂದ ಎಲ್ಲ ನೀರಿನ ಪ್ರವಾಹಗಳನ್ನು ಸುಖವಾಗಿ ಹೀರಿಕೊಳ್ಳುವಂತೆ ಅರ್ಜುನನು ಬಾಣಸಮೂಹಗಳನ್ನು ಎಸೆದು ನಿನ್ನ ಸೈನ್ಯವನ್ನು ಅನಾಯಾಸವಾಗಿ ಸುಟ್ಟುಬಿಟ್ಟ.

ತಮಭ್ಯಧಾವದ್ ವಿಸೃಜನ್ ಶರಾನ್ ಕೃಪ-
ಸ್ತಥೈವ ಭೋಜಸ್ತವ ಚಾತ್ಮಜಃ ಸ್ವಯಮ್ ।
ಮಹಾರಥೋ ದ್ರೋಣಸುತಶ್ಚ ಸಾಯಕೈ-
ರವಾಕಿರಂಸ್ತೋಯಧರಾ ಯಥಾಚಲಮ್ ।
ಜಿಘಾಂಸುಭಿಸ್ತಾನ್ ಕುಶಲೈಃ ಶರೋತ್ತಮಾನ್
ಮಹಾಹವೇ ಸಂಜವಿತಾನ್ ಪ್ರಯತ್ನತಃ ॥೬೭॥

ಶರೈಃ ಪ್ರಚಿಚ್ಛೇದ ಸ ಪಾಂಡವಸ್ತ್ವರನ್
ಪರಾಭಿನದ್ ವಕ್ಷಸಿ ಚ ತ್ರಿಭಿಸ್ತ್ರಿಭಿಃ ॥೬೮॥

ಅರ್ಜುನನನ್ನು ಕೃಪ ಕೃತವರ್ಮ ಸ್ವಯಂ ನಿನ್ನ ಮಗ ದುರ್ಯೋಧನ ಮತ್ತು ಮಹಾರಥನಾದ ಅಶ್ವತ್ಥಾಮ ಇವರೆಲ್ಲರೂ, ಮೋಡಗಳು ಬೆಟ್ಟವನ್ನು ಮಳೆಯಿಂದ ತೋಯಿಸುವಂತೆ, ಬಾಣಗಳಿಂದ ಮುಚ್ಚಿದರು. ಅರ್ಜುನನನ್ನು ಕೊಲ್ಲುವ ಇಚ್ಛೆಯಿಂದ ಅಸ್ತ್ರಕುಶಲರು ಎಸೆದ ಆ ಉತ್ತಮವಾದ ಬಾಣಗಳನ್ನು ಮಹಾರಣದಲ್ಲಿ ಅವರು ಪ್ರಯತ್ನದಿಂದ ವೇಗಯುಕ್ತವಾಗಿ ಎಸೆದಿದ್ದರೂ, ಅವುಗಳನ್ನು ಅರ್ಜುನನು ವೇಗದಿಂದಲೆ ಬಾಣಗಳಿಂದ ಕತ್ತರಿಸಿದ. ಎಲ್ಲರಿಗೂ ಮೂರು ಮೂರು ಬಾಣಗಳಿಂದ ಎದೆಯಲ್ಲಿ ಹೊಡೆದ.

ಸ ಗಾಂಡಿವಾಭ್ಯಾಯತಪೂರ್ಣಮಂಡಲ-
ಸ್ತಪನ್ ರಿಪೂನರ್ಜುನಭಾಸ್ಕರೋ ಬಭೌ ।

ಶರೋಗ್ರರಶ್ಮಿಃ ಶುಚಿಶುಕ್ಲಮಧ್ಯಗೋ
ಯಥೈವ ಸೂರ್ಯಃ ಪರಿವೇಷಗಸ್ತಥಾ ॥೬೯॥

ಅರ್ಜುನನು ಚೆನ್ನಾಗಿ ಸೆಳೆದು ಮಂಡಲಾಕಾರವಾಗಿ ಬಾಗಿಸಿದ ಗಾಂಡೀವಧಾರಿಯಾದ್ದರಿಂದ, ಬಾಣಗಳೆಂಬ ಉಗ್ರರಶ್ಮಿಯುಕ್ತನಾದ ಆ ಅರ್ಜುನ ಭಾಸ್ಕರನು ಶತ್ರುಗಳನ್ನು ಸುಡುತ್ತ ಜ್ಯೇಷ್ಠ ಆಷಾಢಮಧ್ಯಗತನಾದ ಸೂರ್ಯನು ಮಂಡಲಾಕಾರದಲ್ಲಿ ಪರಿವೇಷಗೊಂಡರೆ ಹೇಗೆ ಕಾಣುವನೋ ಹಾಗೆ ಕಾಣಿಸಿಕೊಂಡ.

ಅಥಾಗ್ರ್ಯಬಾಣೈರ್ದಶಭಿರ್ಧನಂಜಯಂ
ಪರಾಭಿನದ್ ದ್ರೋಣಸುತೋಽಚ್ಯುತಂ ತ್ರಿಭಿಃ ।
ಚತುರ್ಭಿರಶ್ವಾಂಶ್ಚತುರಃ ಕಪಿಂ ತಥಾ
ಶರೈಃ ಸ ನಾರಾಚವರೈರವಾಕಿರತ್ ॥೭೦॥

ಅಶ್ವತ್ಥಾಮನು ಹತ್ತು ಉತ್ತಮಬಾಣಗಳಿಂದ ಅರ್ಜುನನನ್ನೂ ಮೂರು ಬಾಣಗಳಿಂದ ಕೃಷ್ಣನನ್ನೂ ಹೊಡೆದ. ನಾಲ್ಕು ಬಾಣಗಳಿಂದ ನಾಲ್ಕು ಅಶ್ವಗಳನ್ನೂ ಉತ್ತಮ ನಾರಾಚಗಳಿಂದ ಕಪಿಧ್ವಜವನ್ನೂ ಹೊಡೆದ.

ತಥಾ ತು ತತ್ತತ್ಸ್ಫುರದಾತ್ತಕಾರ್ಮುಕಂ
ತ್ರಿಭಿಃ ಶರೈರ್ಯಂತೃಶಿರಃ ಕ್ಷುರೇಣ ।
ಹಯಾಂಶ್ಚತುರ್ಭಿಶ್ಚತುರಸ್ತ್ರಿಭಿರ್ಧ್ವಜಂ
ಧನಂಜಯೋ ದ್ರೌಣಿರಥಾನ್ನ್ಯಪಾತಯತ್ ॥೭೧॥

ಅರ್ಜುನನು ಅಶ್ವತ್ಥಾಮನ ಹೊಳೆಯುವ ಆ ಧನುಸ್ಸನ್ನು ಮೂರು ಬಾಣಗಳಿಂದ; ಅವನ ಸಾರಥಿಯ ಶಿರಸ್ಸನ್ನು ಒಂದು ಕ್ಷುರದಿಂದ, ನಾಲ್ಕು ಅಶ್ವಗಳನ್ನು ನಾಲ್ಕು ಕ್ಷುರಗಳಿಂದ ಕತ್ತರಿಸಿದ. ಧ್ವಜವನ್ನು ಮೂರು ಕ್ಷುರಗಳಿಂದ ಕಡಿದು ಅಶ್ವತ್ಥಾಮನ ರಥದಿಂದ ಬೀಳಿಸಿದ.

ಸ ರೋಷಪೂರ್ಣೋ ಮಣಿವಜ್ರಹಾಟಕೈ-
ರಲಂಕೃತಂ ತಕ್ಷಕಭೋಗವರ್ಚಸಮ್ ।
ಮಹಾಧನಂ ಕಾರ್ಮುಕಮನ್ಯದಾದದೇ
ಯಥಾ ಮಹಾಹಿಪ್ರವರಂ ಗಿರಿಸ್ತಥಾ ॥೭೨॥

ಅಶ್ವತ್ಥಾಮನು ರೋಷಪೂರ್ಣನಾಗಿ ಮಣಿ ವಜ್ರ ಬಂಗಾರಗಳಿಂದ ಅಲಂಕೃತವಾದ ತಕ್ಷಕನ ಶರೀರದಂತಿರುವ ಬಹುಮೂಲ್ಯವಾದ ಇನ್ನೊಂದು ಬಿಲ್ಲನ್ನು ಮಂದರಪರ್ವತವು ವಾಸುಕಿಯೆಂಬ ಮಹಾ ಸರ್ಪಶ್ರೇಷ್ಠವನ್ನು ಸ್ವೀಕರಿಸಿದಂತೆ ಸ್ವೀಕರಿಸಿದ.

ಸ್ವಮಾಯುಧಂ ಚಾಪಿ ವಿಕೃಷ್ಯ ಭೂತಳೇ
ಧನುಶ್ಚ ಕೃತ್ವಾ ಸಗುಣಂ ಗುಣಾಧಿಕಃ ।
ಸಮಾನಯಾನಾವಜಿತೌ ನರೋತ್ತಮೌ
ಶರೋತ್ತಮೈರ್ದ್ರೌಣಿರವಿಧ್ಯದಂತಿಕಾತ್ ॥೭೩॥

ಅಶ್ವತ್ಥಾಮನ ರಥದೊಳಗಿನ ಆಸನವು ಭೂತಲದಂತಾಗಿತ್ತು. ಏಕೆಂದರೆ ಸಾರಥಿ ಅಶ್ವಧ್ವಜಗಳೆಲ್ಲ ನಾಶವಾಗಿದ್ದುವು. ಅಂಥ ಭೂತಲತುಲ್ಯವಾದ ರಥದ ಆಸನದ ಮೇಲೆ ಅಶ್ವತ್ಥಾಮನು ಕೋಶದಿಂದ ತನ್ನ ಆಯುಧಗಳನ್ನು ತಾನೇ ಹೊರಗೆ ಸೆಳೆದು ಹಾಕಿ, ಬಿಲ್ಲಿಗೆ ಹೆದೆಯೇರಿಸಿ, ಒಂದೇ ರಥದಲ್ಲಿ ಜೊತೆಯಾಗಿ ನಿಂತ ಕೃಷ್ಣಾರ್ಜುನರನ್ನು ಉತ್ತಮವಾದ ಬಾಣಗಳಿಂದ ಸಮೀಪದಿಂದಲೆ ಹೊಡೆದ.

ಕೃಪಶ್ಚ ಭೋಜಶ್ಚ ತಥಾತ್ಮಜಶ್ಚ ತೇ
ಶರೈರನೇಕೈರ್ಯುಧಿ ಪಾಂಡವರ್ಷಭಮ್ ।
ಮಹಾರಥಾಃ ಸಂಯುಗಮೂರ್ಧನಿ ಸ್ಥಿತಾ
ಸ್ತಮೋನುದಂ ವಾರಿಧರಾ ಇವಾಪತನ್ ॥೭೪॥

ರಣರಂಗದಲ್ಲಿ ಅಗ್ರಭಾಗದಲ್ಲಿ ನಿಂತ ಮಹಾರಥರಾದ ಕೃಪ ಕೃತವರ್ಮ ದುರ್ಯೋಧನರು ಅರ್ಜುನನನ್ನು ಅನೇಕ ಬಾಣಗಳಿಂದ, ಸೂರ್ಯನನ್ನು ಮೋಡಗಳಂತೆ, ಆಕ್ರಮಿಸಿದರು.

ಕೃಪಸ್ಯ ಪಾರ್ಥಃ ಸಶರಂ ಶರಾಸನಂ
ಹಯಾನ್ ಧ್ವಜಂ ಸಾರಥಿಮೇವ ಪತ್ರಿಭಿಃ ।
ನ್ಯಪಾತಯದ್ ಬಾಹುಸಹಸ್ರವಿಕ್ರಮ-
ಸ್ತಥಾ ಯಥಾ ವಜ್ರಧರಃ ಪುರಾ ಬಲೇಃ ॥೭೫॥

ಸಾವಿರ ತೋಳುಗಳುಳ್ಳ ಕಾರ್ತವೀರ್ಯಾರ್ಜುನನಂಥ ಪರಾಕ್ರಮಿಯಾದ ಅರ್ಜುನನು ಕೃಪನ ಧನುರ್ಬಾಣಗಳನ್ನೂ ಅಶ್ವ ಧ್ವಜ ಸಾರಥಿಗಳನ್ನೂ ಬಾಣಗಳಿಂದ ಹಿಂದೆ ದೇವೇಂದ್ರನು ಬಲಿಚಕ್ರವರ್ತಿಯ ಧನುರ್ಬಾಣ ಮುಂತಾದುವನ್ನು ಬೀಳಿಸಿದಂತೆ ಬೀಳಿಸಿದ.

ಸ ಪಾರ್ಥಬಾಣೈರ್ವಿನಿಪಾತಿತಾಯುಧೋ
ಧ್ವಜಾವಮರ್ದೇ ಚ ಕೃತೇ ಮಹಾಹವೇ ।
ಕೃತಃ ಕೃಪೋ ಬಾಣಸಹಸ್ರಯಂತ್ರಿತೋ
ಯಥಾಪಗೇಯಃ ಪ್ರಥಮಂ ಕಿರೀಟಿನಾ ॥೭೬॥

ಅರ್ಜುನನ ಬಾಣಗಳಿಂದ ಕೃಪನ ಆಯುಧ ಧ್ವಜಗಳು ಬಿದ್ದ ಬಳಿಕ, ಹಿಂದೆ ಅರ್ಜುನನು ಸಾವಿರಾರು ಬಾಣಗಳಿಂದ ಭೀಷ್ಮನನ್ನು ಮುಚ್ಚಿದಂತೆ ಈಗ ಕೃಪನನ್ನೂ ಹಾಗೇ ಮುಚ್ಚಿದ.

ಶರೈಃ ಪ್ರಚಿಚ್ಛೇದ ತವಾತ್ಮಜಸ್ಯ
ಧ್ವಜಂ ಧನುಶ್ಚ ಪ್ರಚಕರ್ತ ನರ್ದತಃ ।
ಜಘಾನ ಚಾಶ್ವಾನ್ ಕೃತವರ್ಮಣಃ ಶುಭಾನ್
ಧ್ವಜಂ ಚ ಚಿಚ್ಛೇದ ತತಃ ಪ್ರತಾಪವಾನ್ ॥೭೭॥

ಪ್ರತಾಪಶಾಲಿ ಅರ್ಜುನನು ಗರ್ಜನೆ ಮಾಡುತ್ತಿದ್ದ ದುರ್ಯೋಧನನ ಧ್ವಜವನ್ನೂ ಧನುಸ್ಸನ್ನೂ ಬಾಣಗಳಿಂದ ಚೆನ್ನಾಗಿ ಕತ್ತರಿಸಿದ. ಕೃತವರ್ಮನ ಸುಂದರವಾದ ಅಶ್ವಗಳನ್ನು ಕೊಂದ. ಧ್ವಜವನ್ನೂ ಕಡಿದ.

ಸವಾಜಿಸೂತೇಷ್ವಸನಾನ್ ಸಕೇತನಾನ್
ಜಘಾನ ನಾಗಾಶ್ವರಥಾಂಸ್ತರಂಶ್ಚ ಸಃ ।
ತತಃ ಪ್ರಕೀರ್ಣಂ ಸುಮಹದ್ಬಲಂ ತವ
ಪ್ರದಾರಿತಂ ಸೇತುರಿವಾಂಭಸಾ ಯಥಾ ।
ತತೋಽರ್ಜುನಸ್ಯಾಶು ರಥೇನ ಕೇಶವ-
ಶ್ಚಕಾರ ಶತ್ರೂನಪಸವ್ಯಮಾತುರಾನ್ ॥೭೮॥

ಅರ್ಜುನನು ಬೇಗನೆ ಗಜ ಅಶ್ವ ರಥಯೋಧರನ್ನು ಅಶ್ವಸಾರಥಿ ಧನುಸ್ ಧ್ವಜಸಮೇತವಾಗಿ ಸಂಹರಿಸಿದ. ಆಗ, ಪ್ರವಾಹದಿಂದ ಅಣೆಕಟ್ಟು ಒಡೆಯುವಂತೆ ಸಂಘಟಿತವಾಗಿದ್ದ ನಿನ್ನ ಮಹಾಸೈನ್ಯವೀಗ ಚದುರಿ ನಾಶವಾಯಿತು. ಅರ್ಜುನನ ರಥದಿಂದ ಕೃಷ್ಣನು ಪೀಡಿತರಾಗಿದ್ದ ಶತ್ರುಗಳನ್ನು ಬಲಕ್ಕೆ ಬಿಟ್ಟು ನಡೆದ.

ತತಃ ಪ್ರಯಾಂತಂ ತ್ವರಿತಂ ಧನಂಜಯಂ
ಶತಕ್ರತುಂ ವೃತ್ರನಿಜಘ್ನುಷಂ ಯಥಾ ।
ಸಮನ್ವಧಾವನ್ ಪುನರುಚ್ಛ್ರಿತೈರ್ಧ್ವಜೈ
ರಥೈಃ ಸುಯುಕ್ತೈರಪರೇ ಯುಯುತ್ಸವಃ ॥೭೯॥

ವೃತ್ರಾಸುರನನ್ನು ಕೊಲ್ಲಲು ಬಯಸಿ ವೇಗವಾಗಿ ಹೋಗುತ್ತಿದ್ದ ದೇವೇಂದ್ರನನ್ನು ಅಸುರರು ಹಿಂಬಾಲಿಸಿದಂತೆ ಕರ್ಣನ ವಧೆಗಾಗಿ ಹೋಗುತ್ತಿದ್ದ ಅರ್ಜುನನನ್ನು ಎತ್ತರವಾದ ಧ್ವಜಗಳಿಂದ ಯುಕ್ತವಾದ ಸಜ್ಜಾದ ರಥಗಳಿಂದ ಬೇರೆ ಯುದ್ಧಾಕಾಂಕ್ಷಿಗಳಾದ ಶತ್ರುಗಳು ಹಿಂಬಾಲಿಸಿದರು.

ಅಥಾಭಿಸೃತ್ಯ ಪ್ರತಿವಾರ್ಯ ತಾನರೀನ್
ಧನಂಜಯಸ್ಯಾಭಿ ರಥಂ ಮಹಾರಥಾಃ ।
ಶಿಖಂಡಿಶೈನೇಯಯಮಾಃ ಶಿತೈಃ ಶರೈಃ
ವಿದಾರಯಂತೋ ವ್ಯನದನ್ಸುಭೈರವಮ್ ॥೮೦॥

ಅರ್ಜುನನ ರಥವನ್ನು ಹಿಂಬಾಲಿಸಿದ ಆ ಶತ್ರುಗಳನ್ನು ಇದಿರಿಸಿ ತಡೆದು ಮಹಾರಥರಾದ ಶಿಖಂಡಿ ಸಾತ್ಯಕಿ ನಕುಲ–ಸಹದೇವರು ಹರಿತವಾದ ಬಾಣಗಳಿಂದ ನಾಶಪಡಿಸುತ್ತ ಭಯಂಕರವಾಗಿ ಗರ್ಜಿಸಿದರು.

ತತೋಽಭಿಜಗ್ಮುಃ ಕುಪಿತಾಃ ಪರಸ್ಪರಂ
ಶರೈಸ್ತದಾಂಜೋಗತಿಭಿಃ ಸುತೇಜನೈಃ ।
ಕುರುಪ್ರವೀರಾಃ ಸಹ ಸೃಂಜಯೈರ್ಯಥಾ-
ಸುರಾಃ ಪುರಾ ದೇವವರೈರಯೋಧಯನ್ ॥೮೧॥

ಆಗ ಕೌರವರ ವೀರರು ಕುಪಿತರಾಗಿ ಸೃಂಜಯಯೋಧರೊಡನೆ ಹರಿತವಾದ

ವೇಗದ ಗತಿಯುಳ್ಳ ಬಾಣಗಳಿಂದ ಪರಸ್ಪರವಾಗಿ ಇದಿರಿಸಿ ಹಿಂದೆ ಅಸುರರು ದೇವೋತ್ತಮರೊಂದಿಗೆ ಯುದ್ಧ ಮಾಡಿದಂತೆ ಹೋರಾಡಿದರು.

ಜಯೇಪ್ಸವಃ ಸ್ವರ್ಗಮನಾಯ ಚೋತ್ಸುಕಾಃ
ಪತಂತಿ ನಾಗಾಶ್ವರಥಾಃ ಪರಂತಪ ।
ಜಗರ್ಜುರುಚ್ಚೈರ್ಬಲವಚ್ಚ ವಿವ್ಯಧುಃ
ಶರೈಃ ಸುಮುಕ್ತೈರಿತರೇತರಂ ಪೃಥಕ್ ॥೮೨॥

ರಾಜನೆ, ವಿಜಯೇಚ್ಛುಗಳಾಗಿ ಅಥವಾ ಸತ್ತು ಸ್ವರ್ಗಕ್ಕೆ ಗಮನೋತ್ಸುಕರಾಗಿ ಗಜ ಅಶ್ವ ರಥಯೋಧರು ಪರಸ್ಪರವಾಗಿ ಪ್ರತ್ಯೇಕವಾಗಿ ಆಕ್ರಮಿಸಿದರು. ಗಟ್ಟಿಯಾಗಿ ಪರಸ್ಪರ ಚೆನ್ನಾಗಿ ಎಸೆದ ಬಾಣಗಳಿಂದ ಬಲವಾಗಿ ಹೊಡೆದರು.

ಶರಾಂಧಕಾರೇ ತು ಮಹಾತ್ಮಭಿಃ ಕೃತೇ
ಮಹಾಮೃಧೇ ಯೋಧವರೈಃ ಪರಸ್ಪರಮ್ ।
ಚತುರ್ದಿಶೋ ವೈ ವಿದಿಶಶ್ಚ ಪಾರ್ಥಿವ
ಪ್ರಭಾ ಚ ಸೂರ್ಯಸ್ಯ ತಮೋವೃತಾಭವತ್ ॥೮೩॥

ಮಹಾತ್ಮರಾದ ಶ್ರೇಷ್ಠ ಯೋಧರು ಮಹಾರಣದಲ್ಲಿ ಪರಸ್ಪರವಾಗಿ ಬಾಣಗಳಿಂದ ಅಂಧಕಾರವನ್ನು ಉಂಟುಮಾಡಿದಾಗ ನಾಲ್ಕು ದಿಕ್ಕುಗಳೂ ವಿದಿಕ್ಕುಗಳೂ ಸೂರ್ಯನ ಪ್ರಭೆಯೂ ಕತ್ತಲಿಂದ ಆಚ್ಛಾದಿತವಾದುವು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಷಟ್‌ಸಪ್ತತಿತಮೋऽಧ್ಯಾಯಃ ॥೭೬॥

❖

ಎಪ್ಪತ್ತೇಳನೆಯ ಅಧ್ಯಾಯ

ಅರ್ಜುನನಿಂದ ಕುರುಸೈನ್ಯದ ವಿನಾಶ.

ಸಂಜಯಃ

ರಾಜನ್ ಕುರೂಣಾಂ ಪ್ರವರೈರ್ಬಲೈರ್ಭೀಮಮಭಿದ್ರುತಮ್ ।
ಮಜ್ಜಂತಮಿವ ಕೌಂತೇಯಮುಜ್ಜಿಹೀರ್ಷುರ್ಧನಂಜಯಃ ॥೧॥

ವಿಮೃದ್ಯ ಸೂತಪುತ್ರಸ್ಯ ಸೇನಾಂ ಭಾರತ ಸಾಯಕೈಃ ।
ಪ್ರಾಹಿಣೋತ್ ಮೃತ್ಯುಲೋಕಾಯ ಪರವೀರಾನ್ ಧನಂಜಯಃ ॥೨॥

ಸಂಜಯ ನುಡಿದ— ರಾಜನೆ, ಕೌರವರ ಶ್ರೇಷ್ಠ ಸೈನ್ಯಗಳಿಂದ ಆಕ್ರಮಿಸಲ್ಪಟ್ಟು ಮುಳುಗುತ್ತಿದ್ದಂತೆ ಕಂಡ ಭೀಮನನ್ನು ಪಾರುಮಾಡಲು ಬಯಸಿ ಅರ್ಜುನನು ಕರ್ಣನ ಸೈನ್ಯವನ್ನು ಬಾಣಗಳಿಂದ ಮರ್ದಿಸಿ ಶತ್ರುವೀರರನ್ನು ಯಮಲೋಕಕ್ಕೆ ಕಳಿಸಿದನು.

ತತೋಽಸ್ಯಾಂಬರಮಾವೃತ್ಯ ಶರಜಾಲಾನಿ ಭಾರತ ।
ಅದೃಶ್ಯಂತ ತಥಾನ್ಯೇ ಚ ನಿಜಘ್ನುಸ್ತವ ವಾಹಿನೀಮ್ ॥೩॥

ರಾಜನೆ, ಅರ್ಜುನನ ಬಾಣಸಮೂಹಗಳು ಆಕಾಶವನ್ನು ಆವರಿಸಿ ಕಂಗೊಳಿಸಿದುವು. ಹಾಗೇ ಬೇರೆ ಪಾಂಡವಯೋಧರೂ ನಿನ್ನ ಸೈನ್ಯವನ್ನು ನಾಶಮಾಡಿದರು.

ಸ ಪಕ್ಷಿಸಂಘಾಚರಿತಮಾಕಾಶಂ ಪೂರಯನ್ ಶರೈಃ ।
ಧನಂಜಯೋ ಮಹಾರಾಜ ಕುರೂಣಾಮಂತಕೋಽಭವತ್ ॥೪॥

ಮಹಾರಾಜ, ಅರ್ಜುನನು, ಪಕ್ಷಿಸಮೂಹಗಳು ಹೇಗೆ ಗುಂಪಾಗಿ ಹಾರಾಡುವುವೋ, ಆಕಾಶದಲ್ಲಿ ಬಾಣಗಳನ್ನೂ ಹಾಗೇ ತುಂಬಿಸುತ್ತ ಕೌರವರಿಗೆ ಅಂತಕನಂತಾದ.

ತತೋ ಭಲ್ಲೈಃ ಕ್ಷುರಪ್ರೈಶ್ಚ ನಾರಾಚೈರ್ನಿರ್ಮಲೈರಪಿ ।
ಗಾತ್ರಾಣಿ ಪ್ರಾಕ್ಷಿಣೋತ್ ಪಾರ್ಥಃ ಶಿರಾಂಸಿ ಚ ಚಕರ್ತ ಹ ॥೫॥

ನಿರ್ಮಲವಾದ ಭಲ್ಲ ಕ್ಷುರಪ್ರ ನಾರಾಚ ಬಾಣಗಳಿಂದ ಕುರುಯೋಧರ ಶರೀರಗಳನ್ನು ಸೀಳುತ್ತ ಅರ್ಜುನನು ಅವರ ಶಿರಸ್ಸುಗಳನ್ನು ಕತ್ತರಿಸಿದ.

ಛಿನ್ನಗಾತ್ರೈರ್ವಿಕವಚೈರ್ವಿಶಿರಸ್ಕೈಃ ಸಮಂತತಃ ।
ಪತಿತೈಶ್ಚ ಪತದ್ಭಿಶ್ಚ ಯೋಧೈರಾಸೀತ್ ಸಮಾವೃತಮ್ ॥೬॥

ಶತ್ರುಯೋಧರು ಮೈಗಾಯಗೊಂಡು ಕವಚರಹಿತರಾಗಿ ತಲೆ ಇಲ್ಲದವರೂ ಆಗಿ ಎಲ್ಲೆಡೆ ಬಿದ್ದಿದ್ದಾರೆ. ಬೀಳುತ್ತಿದ್ದಾರೆ. ಅವರಿಂದ ರಣಭೂಮಿ ತುಂಬಿ ಹೋಯಿತು.

ಧನಂಜಯಶರಧ್ವಸ್ತೈಃ ಸ್ಯಂದನಾಶ್ವನರದ್ವಿಪೈಃ ।
ಸಂಛಿನ್ನಭಿನ್ನವಿಧ್ವಸ್ತೈರ್ವ್ಯಂಗಾಂಗಾವಯವೈಃ ಸ್ಮೃತಾ ॥೭॥

ಸುದುರ್ಗಮಾ ಸುವಿಷಮಾ ಘೋರಾತ್ಯರ್ಥಂ ಸುದುರ್ದೃಶಾ ।
ರಣಭೂಮಿರಭೂದ್ ರಾಜನ್ ಮಹಾವೈತರಣೀ ಯಥಾ ॥೮॥

ಅರ್ಜುನನ ಬಾಣಗಳಿಂದ ಪುಡಿಯಾದ ರಥ ಅಶ್ವ ಪದಾತಿ ಗಜಗಳು ಅಂಗಾಂಗಗಳಲ್ಲಿ ಛಿನ್ನಭಿನ್ನಗೊಂಡು ಧ್ವಸ್ತವಾಗಿ ಎಲ್ಲೆಡೆ ಹರಡಿದುವು. ಅದರಿಂದ ರಣಭೂಮಿ ಬಲು ದುರ್ಗಮ ವಿಷಮ ಘೋರವಾಗಿ ನೋಡಲು ಅತ್ಯಂತ ಅಶಕ್ಯವಾಯಿತು. ಯಮಲೋಕದ ಮಹಾವೈತರಣೀ ನದಿಯಂತೆ ಕಂಡುಬಂದಿತು.

ಈಷಾಚಕ್ರಾಕ್ಷಭಂಗೈಶ್ಚ ವ್ಯಶ್ವೈಃ ಸಾಶ್ವೈಶ್ಚ ಯುಧ್ಯತಾಮ್ ।
ಸಸೂತೈರ್ಹತಸೂತೈಶ್ಚ ರಥೈಃ ಸ್ತೀರ್ಣಾಭವನ್ಮಹೀ ॥೯॥

ರಥಗಳ ಈಷಾ ಚಕ್ರ ಅಕ್ಷಗಳು ಮುರಿದುವು. ಅವುಗಳಿಗೆ ಕೆಲವಕ್ಕೆ ಅಶ್ವಗಳಿವೆ ಕೆಲವಕ್ಕೆ ಇಲ್ಲ ಕೆಲವಕ್ಕೆ ಸಾರಥಿಗಳಿದ್ದಾರೆ, ಕೆಲವಕ್ಕೆ ಸತ್ತಿದ್ದಾರೆ, ಶತ್ರುಯೋಧರ ಇಂಥ ರಥಗಳಿಂದ ರಣಭೂಮಿ ವ್ಯಾಪ್ತವಾಯಿತು.

ಸುವರ್ಣವರ್ಮಸನ್ನಾಹೈರ್ಯೋಧೈಃ ಕನಕಭೂಷಣೈಃ ।
ಆಸ್ತಿತಾಃ ಕೃತವರ್ಮಾಣೋ ಭದ್ರಾ ನಿತ್ಯಮದಾ ದ್ವಿಪಾಃ ।
ಕ್ರುದ್ಧಾಃ ಕ್ರುದ್ಧೈರ್ಮಹಾಮಾತ್ರೈಃ ಪಾರ್ಷ್ಣ್ಯಂಗುಷ್ಠಪ್ರಚೋದಿತಾಃ
॥೧೦॥

ಚತುಃಶತಾಃ ಶರವರ್ಷೈರ್ಹತಾಃ ಪೇತುಃ ಕಿರೀಟಿನಾ ।
ಪರ್ಯಸ್ತಾನೀವ ಶೃಂಗಾಣಿ ಸಸತ್ತ್ವಾನಿ ಮಹಾಗಿರೇಃ ॥೧೧॥

ಬಂಗಾರದ ಕವಚ ಮುಂತಾದುವನ್ನು ಧರಿಸಿದ, ಬಂಗಾರದಿಂದ ಅಲಂಕೃತ ರಾದ ಗಜಯೋಧರು, ಕವಚವನ್ನು ಹೊತ್ತ ಮಂಗಳಕರವಾದ ನಿತ್ಯಮದಿಸಿದ ಗಜಗಳನ್ನು ಏರಿದ್ದಾರೆ. ಆ ಗಜಗಳು ಕೋಪಗೊಳ್ಳುತ್ತವೆ. ಕೋಪಗೊಂಡ ಮಾವುತರು ಹಿಮ್ಮಡಿ, ಅಂಗುಷ್ಠಗಳಿಂದ ಅವುಗಳನ್ನು ತಿವಿಯುತ್ತಾರೆ. ಇಂಥ ನಾನ್ನೂರು ಗಜಗಳು ಅರ್ಜುನನ ಬಾಣಗಳ ಮಳೆಗಳಿಂದ, ದೊಡ್ಡಬೆಟ್ಟಗಳ ಶಿಖರಗಳು ಜೀವಜಂತುಗಳೊಂದಿಗೇ ಉರುಳಿ ಬೀಳುವಂತೆ ಸತ್ತುಬಿದ್ದುವು.

ಧನಂಜಯಶರಧ್ವಸ್ತೈಃ ಸ್ತೀರ್ಣಾ ಭೂರ್ವರವಾರಣೈಃ ।

ಧನಂಜಯನ ಬಾಣಗಳಿಂದ ಧ್ವಸ್ತವಾದ ಶ್ರೇಷ್ಠ ಗಜಗಳಿಂದ ರಣಭೂಮಿ ಎಲ್ಲೆಡೆ ತುಂಬಿಹೋಯಿತು.

ಸಮಂತಾದ್ ಜಲದಪ್ರಖ್ಯಾನ್ ವಾರಣಾನ್ ಮದವರ್ಷಿಣಃ ।
ಅಭಿಪೇದೇऽರ್ಜುನರಥೋ ಘನಾನ್ ಭಿಂದನ್ನಿವಾಂಶುಮಾನ್ ॥೧೨॥

ಎಲ್ಲೆಡೆ ಮದಜಲವನ್ನು ಸುರಿಸುವ ಮೋಡಗಳಂತೇ ಕಾಣುವ ಗಜಗಳು ಸತ್ತುಬಿದ್ದಲ್ಲಿ ಅವುಗಳನ್ನು ಅರ್ಜುನ ರಥವು, ಮೋಡಗಳ ನಡುವೆ ಸೂರ್ಯನಂತೆ, ಸೀಳಿಕೊಂಡು ಮುಂದೆ ನಡೆಯಿತು.

ಹತೈರ್ಗಜಮನುಷ್ಯಾಶ್ವೈರ್ಭಗ್ನೈಶ್ಚ ಬಹುಧಾ ರಥೈಃ ।
ವಿಶಸ್ತ್ರಚರ್ಮಕವಚೈರ್ಯುದ್ಧಶೌಂಡೈರ್ಗತಾಸುಭಿಃ ।
ಅಪವಿದ್ಧಾಯುಧೈರ್ಮಾರ್ಗಸ್ತೀರ್ಣೋऽಭೂತ್ ಫಲ್ಗುನೇನ ವೈ ॥೧೩॥

ಗಜ ಪದಾತಿ ಅಶ್ವಗಳು ಎಲ್ಲೆಡೆ ಸತ್ತುಬಿದ್ದಿವೆ, ರಥಗಳು ಬಹಳ ಚೂರಾಗಿವೆ. ಯುದ್ಧನಿಪುಣರು ಶಸ್ತ್ರ ಗುರಾಣಿ ಕವಚರಹಿತರಾಗಿ ಆಯುಧಗಳನ್ನು ಚೆಲ್ಲಿ ಸತ್ತು ಬಿದ್ದಿದ್ದಾರೆ. ಇಂಥ ಮಾರ್ಗವನ್ನು ಅರ್ಜುನ ಕ್ರಮಿಸಬೇಕಾಯಿತು.

ವ್ಯಸ್ಫೂರ್ಜಯಚ್ಚ ಗಾಂಡೀವಂ ಸುಮಹದ್ ಭೈರವಸ್ವನಮ್ ।
ಘೋರಂ ವಜ್ರವಿನಿಷ್ಪೇಷಂ ಸ್ತನಯಿತ್ನುರಿವಾಂಬರೇ ॥೧೪॥

ಆಕಾಶದಲ್ಲಿ ಮೋಡವು ಘೋರವಾದ ಗುಡುಗಿನ ಧ್ವನಿ ಮಾಡುವಂತೆ ಅರ್ಜುನನು ಭೀಕರ ಧ್ವನಿಯುಳ್ಳ ಮಹತ್ತಾದ ಗಾಂಡೀವಧನುಸ್ಸನ್ನು ಠೇಂಕರಿಸಿದ.

ತತಃ ಪ್ರಾದೀರ್ಯತ ಚಮೂರ್ಧನಂಜಯಶರಾಹತಾ ।
ಮಹಾವಾತಸಮಾವಿದ್ಧಾ ಮಹಾನೌರಿವ ಸಾಗರೇ ॥೧೫॥

ಬಳಿಕ ಧನಂಜಯನ ಬಾಣಗಳಿಂದ ಹೊಡೆಸಿಕೊಂಡು ಶತ್ರುಸೈನ್ಯವು ಸಾಗರದಲ್ಲಿ ಬಿರುಗಾಳಿಗೆ ಸಿಲುಕಿದ ನೌಕೆಯಂತೆ ವಿಚಲಿತವಾಯಿತು.

ನಾನಾರೂಪಾಃ ಪ್ರಹರಣಾಃ ಶರಾ ಗಾಂಡೀವಚೋದಿತಾಃ ।
ಉಲಾತೋಲ್ಕಾಶನಿಪ್ರಖ್ಯಾಸ್ತವ ಸೈನ್ಯಂ ವಿನಿರ್ದಹನ್ ॥೧೬॥

ಗಾಂಡೀವದಿಂದ ಹೊರಟ ನಾನಾ ಬಗೆಯ ಬಾಣಗಳು ಆಯುಧಗಳು ಕೊಳ್ಳಿ ಉಲ್ಕೆ ಮಿಂಚುಗಳಂತೇ ಇದ್ದು ನಿನ್ನ ದೊಡ್ಡ ಸೈನ್ಯವನ್ನು ಸುಟ್ಟವು.

ಮಹಾಗಿರೌ ವೇಣುವನಂ ನಿಶಿ ಪ್ರಜ್ವಲಿತಂ ಯಥಾ ।
ತಥಾ ತವ ಮಹತ್‌ಸೈನ್ಯಂ ಪ್ರಾಸ್ಫುರಚ್ಛರಪೀಡಿತಮ್ ॥೧೭॥

ದೊಡ್ಡಬೆಟ್ಟದಲ್ಲಿ ಬಿದಿರುಮೆಳೆ ರಾತ್ರಿ ಹೊತ್ತು ಹೊತ್ತಿಉರಿವಂತೆ ನಿನ್ನ ದೊಡ್ಡ ಸೈನ್ಯವು ಅರ್ಜುನನ ಬಾಣಗಳಿಂದ ಉರಿದು ಹೋಯಿತು.

ಸಂಪಿಷ್ಟದಗ್ಧವಿಧ್ವಸ್ತಂ ತವ ಸೈನ್ಯಂ ಕಿರೀಟಿನಾ ।
ಹತಂ ಪ್ರವಿಹತಂ ಬಾಣೈಃ ಸರ್ವತಃ ಪ್ರದ್ರುತಂ ದಿಶಃ ॥೧೮॥

ನಿನ್ನ ಸೈನ್ಯವು ಅರ್ಜುನನ ಬಾಣಗಳಿಂದ ಮತ್ತೂ ಮತ್ತೂ ಹೊಡೆಸಿಕೊಂಡು ಪುಡಿಯಾಗಿ ಸುಟ್ಟು ನಾಶ ಹೊಂದಿತು ಅಥವಾ ಎಲ್ಲ ದಿಕ್ಕುಗಳಿಗೆ ಪಲಾಯನ ಮಾಡಿತು.

ಮಹಾವನೇ ಮೃಗಗಣಾ ದಾವಾಗ್ನಿಗ್ರಸಿತಾ ಯಥಾ ।
ಕುರವಃ ಪರ್ಯವರ್ತಂತ ನಿರ್ದಗ್ಧಾಃ ಸವ್ಯಸಾಚಿನಾ ॥೧೯॥

ಮಹಾಅರಣ್ಯದಲ್ಲಿ ಮೃಗಸಮೂಹಗಳು ಕಾಳ್ಗಿಚ್ಚಿನಲ್ಲಿ ಸಿಲುಕಿದಂತೆ ಕೌರವರ ಸೈನ್ಯಗಳು ಅರ್ಜುನನ ಬಾಣಗಳಿಂದ ಸುಟ್ಟು ಅತ್ತಿತ್ತ ಪಲಾಯನಗೈದುವು.

ಉತ್ಸೃಜ್ಯ ಹಿ ಮಹಾಬಾಹುಂ ಭೀಮಸೇನಂ ತದಾ ರಣೇ ।
ಬಲಂ ಕುರೂಣಾಮುದ್ವಿಗ್ನಂ ಸರ್ವಮಾಸೀತ್ ಪರಾಙ್ಮುಖಮ್ ॥೨೦॥

ಕೌರವಸೈನ್ಯವೆಲ್ಲವೂ ಭಯಗೊಂಡು ರಣದಲ್ಲಿ ಮಹಾಬಾಹುವಾದ ಭೀಮಸೇನನನ್ನು ಬಿಟ್ಟು ಪಲಾಯನಗೈದಿತು.

ತತಃ ಕುರುಷು ಭಗ್ನೇಷು ಬೀಭತ್ಸುರಪರಾಜಿತಃ ।
ಭೀಮಸೇನಂ ಸಮಾಸಾದ್ಯ ಮುಹೂರ್ತಂ ಸೋಽಭ್ಯವರ್ತತ ॥೨೧॥

ಕೌರವರು ಚದುರಿಹೋದಾಗ ಅಪರಾಜಿತನಾದ ಅರ್ಜುನನು ಭೀಮಸೇನನ ಬಳಿಸಾರಿ ಮುಹೂರ್ತಕಾಲ ಅಲ್ಲಿಯೇ ನಿಂತ.

ಸಮಾಗಮ್ಯ ಸ ಭೀಮೇನ ಮಂತ್ರಯಿತ್ವಾ ಚ ಫಲ್ಗುನಃ ।
ವಿಶಲ್ಯಮರುಜಂ ಚಾಸ್ತ್ರೈ ಕಥಯಿತ್ವಾ ಯುಧಿಷ್ಠಿರಮ್ ॥೨೨॥

ಭೀಮಸೇನಾಭ್ಯನುಜ್ಞಾತಸ್ತತಃ ಪ್ರಾಯಾದ್ ಧನಂಜಯಃ ।
ನಾದಯನ್ ರಥಘೋಷೇಣ ಪೃಥಿವೀಂ ದ್ಯಾಂ ಚ ಭಾರತ ॥೨೩॥

ಭೀಮನನ್ನು ಸಂಧಿಸಿ ಮಂತ್ರಾಲೋಚನೆಗೈದು ಅರ್ಜುನನು ಯುಧಿಷ್ಠಿರನ ಬಗ್ಗೆ ಅವನಿಗೆ ಶಲ್ಯಚಿಕಿತ್ಸೆ ಮಾಡಿಸಿ, ನೋವನ್ನು ಕಳೆದ ವಿಷಯವನ್ನು ಹೇಳಿ, ಭೀಮನ ಅನುಜ್ಞೆಪಡೆದು, ರಥಘೋಷದಿಂದ ಪೃಥಿವಿಯನ್ನೂ ಅಂತರಿಕ್ಷವನ್ನೂ ತುಂಬಿಸುತ್ತ ಕರ್ಣನ ಕಡೆಗೆ ಹೊರಟ.

ತತಃ ಪರಿವೃತೋ ವೀರೈರ್ದಶಭಿಃ ಶತ್ರುಪುಂಗವೈಃ ।
ದುಃಶಾಸನಾದವರಜೈಸ್ತವ ಪುತ್ರೈರ್ಧನಂಜಯಃ ॥೨೪॥

ಆಗ ಶತ್ರುಗಳಲ್ಲಿ ಮುಖ್ಯರಾದ ವೀರರಾದ ದುಃಶಾಸನನ ತಮ್ಮಂದಿರಾದ ಹತ್ತುಮಂದಿ ನಿನ್ನ ಪುತ್ರರಿಂದ ಅರ್ಜುನನು ಸುತ್ತುವರಿಯಲ್ಪಟ್ಟ.

ತೇ ತಮಭ್ಯರ್ದಯನ್ ಬಾಣೈರುಲ್ಕಾಭಿರಿವ ಕುಂಜರಮ್ ।
ಆತತೇಷ್ವಸನಾಃ ಕ್ರೂರಾ ನೃತ್ಯಂತ ಇವ ಭಾರತ ॥೨೫॥

ಅವರು ಅವನನ್ನು ಆನೆಯನ್ನು ಪಂಜುಗಳಿಂದ ಪೀಡಿಸುವಂತೆ, ಬಾಣಗಳಿಂದ ಪೀಡಿಸಿದರು. ಅವರು ಕ್ರೂರರು, ಬಿಲ್ಲನ್ನು ಸೆಳೆದು ನೃತ್ಯಮಾಡುವಂತೆ ಕಂಡು ಬಂದರು.

ಅಪಸವ್ಯಾಂಸ್ತು ತಾಂಶ್ಚಕ್ರೇ ರಥೇನ ಮಧುಸೂದನಃ ।
ತತಸ್ತೇ ಪ್ರಾದ್ರವನ್ ಶೂರಾಃ ಪರಾಙ್ಮುಖರಥೇऽರ್ಜುನೇ ॥೨೬॥

ಅವರನ್ನು ಬಲಕ್ಕೆ ಬಿಟ್ಟು ಕೃಷ್ಣನು ರಥದಿಂದ ಮುಂದೆ ನಡೆದ. ಅರ್ಜುನನ ರಥವು ಹೀಗೆ ಪರಾಙ್ಮುಖವಾದಾಗ ಶೂರರಾದ ಅವರು ಬೆನ್ನಟ್ಟಿ ಧಾವಿಸಿಬಂದರು.

ತೇಷಾಮಾಪತತಾಂ ಕೇತೂನ್ ರಥಾಂಶ್ಚಾಪಾನಿ ಸಾಯಕಾನ್ ।
ನಾರಾಚೈರರ್ಧಚಂದ್ರೈಶ್ಚ ಕ್ಷಿಪ್ರಂ ಪಾರ್ಥೋ ನ್ಯಪಾತಯತ್ ॥೨೭॥

ಅವರು ಆಕ್ರಮಣ ಮಾಡಿದಾಗ ಪಾರ್ಥನು ಬೇಗನೆ ಅವರ ರಥ ಧ್ವಜ ಬಿಲ್ಲು ಬಾಣಗಳನ್ನು ನಾರಾಚಗಳಿಂದ ಮತ್ತು ಅರ್ಧಚಂದ್ರಗಳಿಂದ ಕಡಿದು ಬೀಳಿಸಿದ.

ಅಥಾನ್ಯೈರ್ದಶಭಿರ್ಭಲ್ಲೈಃ ಶಿರಾಂಸ್ಯೇಷಾಂ ನ್ಯಪಾತಯತ್ ।
ರೋಷಸಂರಕ್ತನೇತ್ರಾಣಿ ಸಂದಷ್ಟೌಷ್ಠಾನಿ ಭೂತಲೇ ।
ತಾನಿ ವಕ್ತ್ರಾಣಿ ವಿಬಭುರ್ಯೋಧಿನ್ನಾ ತಾರಾಗಣಾ ಇವ ॥೨೮॥

ಇನ್ನೂ ಬೇರೆ ಹತ್ತು ಭಲ್ಲೆಗಳಿಂದ ಅವರ ಶಿರಸ್ಸುಗಳನ್ನೂ ಬೀಳಿಸಿದ.ಆಗ ಅವರ ಕಣ್ಣುಗಳು ಕೋಪದಿಂದ ಕೆಂಪಾಗಿದ್ದುವು. ಅವುಡು ಕಚ್ಚಿದ್ದರು. ಭೂಮಿಯಲ್ಲಿ ಅವರ ಶಿರಸ್ಸುಗಳು ಆಕಾಶದಲ್ಲಿನ ನಕ್ಷತ್ರಗಳಂತೆ ಕಂಡುಬಂದುವು.

ತಾಂಸ್ತು ಭಲ್ಲೈರ್ಮಹಾವೇಗೈರ್ದಶಭಿರ್ದಶ ಕೌರವಾನ್ ।
ರುಗ್ಮಾಂಗದಾನ್ ರುಗ್ಮಪುಂಖೈರ್ವಿದ್ಧ್ವಾ ಪ್ರಾಯಾದಮಿತ್ರಹಾ ॥೨೯॥

ಬಂಗಾರದ ತೋಳ್ಬಳೆಗಳನ್ನು ಧರಿಸಿದ್ದ ಆ ಹತ್ತುಮಂದಿ ಕೌರವರನ್ನು ಪಾರ್ಥನು ಬಂಗಾರದ ಪುಕ್ಕಉಳ್ಳ ಬಲುವೇಗದ ಹತ್ತು ಭಲ್ಲೆಗಳಿಂದ ಕೊಂದು ಹೊರಟುಹೋದ.

ಇಲ್ಲಿ 'ಪಾರ್ಥ'ನೆಂದರೆ ಅರ್ಜುನನಲ್ಲ, ಭೀಮನೆಂದಿಟ್ಟುಕೊಳ್ಳಬೇಕು. ಏಕೆಂದರೆ ನೂರುಮಂದಿ ಧೃತರಾಷ್ಟ್ರ ಪುತ್ರರನ್ನೂ ಕೊಂದವನು ಭೀಮನೆ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಸಪ್ತಸಪ್ತತಿತಮೋऽಧ್ಯಾಯಃ ॥೭೭॥

❖

ಎಪ್ಪತ್ತೆಂಟನೆಯ ಅಧ್ಯಾಯ

ಭೀಮಾರ್ಜುನರಿಂದ ಕುರುಸೈನ್ಯದ ನಾಶ.

ಸಂಜಯಃ

ತಂ ತು ಯಾನ್ತಂ ಮಹಾವೇಗೈರಶ್ವೈಃ ಕಪಿವರಧ್ವಜಮ್ ।
ಯುದ್ಧಾಯಾಭ್ಯದ್ರವನ್ವೀರಾಃ ಕುರೂಣಾಂ ನವತೀ ರಥಾಃ ।
ಪರಿವವ್ರುರ್ನರವ್ಯಾಘ್ರಾ ನರವ್ಯಾಘ್ರಂ ರಣೇऽರ್ಜುನಮ್ ॥೧॥

ಸಂಜಯ ನುಡಿದ— ಮಹಾವೇಗವುಳ್ಳ ಅಶ್ವಗಳಿಂದ ಮುನ್ನಡೆಯುತ್ತಿದ್ದ ಕಪಿವರವೆ ಧ್ವಜವಾಗಿ ಉಳ್ಳ ಅರ್ಜುನನನ್ನು ಕೌರವರ ತೊಂಬತ್ತು ರಥಿಕರು ಸಂಶಪ್ತಕರು ಯುದ್ಧಕ್ಕಾಗಿ ಇದಿರಿಸಿದರು. ಪುರುಷಶ್ರೇಷ್ಠನಾದ ಅರ್ಜುನನನ್ನು ಪುರುಷಶ್ರೇಷ್ಠರಾದ ಆ ರಥಿಕರು ರಣದಲ್ಲಿ ಸುತ್ತುವರಿದರು.

ಕೃಷ್ಣಃ ಶ್ವೇತಾನ್ ಮಹಾವೇಗಾನಶ್ವಾನ್ ಕನಕಭೂಷಣಾನ್ ।
ಮುಕ್ತಾಜಾಲಪ್ರತಿಚ್ಛನ್ನಾನ್ ಪ್ರೈಷೀತ್ ಕರ್ಣರಥಂ ಪ್ರತಿ ॥೨॥

ಕೃಷ್ಣನು ಬಂಗಾರದ ಭೂಷಣಉಳ್ಳ ಮಹಾವೇಗವುಳ್ಳ, ಮುತ್ತಿನ ಮಾಲೆಗಳಿಂದ ಮುಚ್ಚಿಹೋದ ಆ ಬಿಳಿಯಾದ ಕುದುರೆಗಳನ್ನು ಕರ್ಣರಥದ ಕಡೆಗೇ ನಡೆಸಿದ.

ತತಃ ಕರ್ಣರಥಂ ಯಾಂತಮರೀನ್ ಘ್ನಂತಂ ಧನಂಜಯಮ್ ।
ಬಾಣವರ್ಷೈರಭಿಘ್ನಂತಃ ಸಂಶಪ್ತಕರಥಾ ಯಯುಃ ॥೩॥

ಕರ್ಣರಥದ ಕಡೆಗೆ ಹೋಗುತ್ತ ದಾರಿಯಲ್ಲಿ ತಡೆಯುವ ಶತ್ರುಗಳನ್ನು ನಾಶಪಡಿಸುತ್ತಲೇ ಇದ್ದ ಅರ್ಜುನನನ್ನು ಬಾಣಗಳ ಮಳೆಯಿಂದ ಹೊಡೆಯುತ್ತ (ತೊಂಬತ್ತು) ಸಂಶಪ್ತಕ ರಥಿಕರು ಬೆನ್ನಟ್ಟಿ ಬಂದರು.

ತ್ವರಮಾಣಾಂಸ್ತು ತಾನ್ ಸರ್ವಾನ್ ಸಸೂತೇಷ್ವಸನಧ್ವಜಾನ್ ।
ಜಘಾನ ನವತಿಂ ವೀರಾನರ್ಜುನೋ ನಿಶಿತೈಃ ಶರೈಃ ॥೪॥

ತ್ವರೆಮಾಡುತ್ತಿದ್ದ ಆ ತೊಂಬತ್ತು ವೀರರಥಿಕರೆಲ್ಲರನ್ನೂ ಅರ್ಜುನನು ಹರಿತವಾದ ಬಾಣಗಳಿಂದ ಸಾರಥಿ ಧನುಸ್ ಧ್ವಜಗಳೊಂದಿಗೇ ಸಂಹರಿಸಿದ.

ತೇऽಪತಂತ ಹತಾ ಬಾಣೈರ್ನಾನಾರೂಪೈಃ ಕಿರೀಟಿನಾ ।
ಸವಿಮಾನಾ ಯಥಾ ಸಿದ್ಧಾಃ ಸ್ವರ್ಗಾತ್ ಪುಣ್ಯಕ್ಷಯೇ ತಥಾ ॥೫॥

ಅರ್ಜುನನಿಂದ ನಾನಾರೂಪದ ಬಾಣಗಳಿಂದ ಹತರಾಗಿ ಅವರು, ಪುಣ್ಯಕ್ಷಯವಾದಾಗ ಸ್ವರ್ಗದಿಂದ ವಿಮಾನಸಹಿತವಾಗಿ ಭೂಮಿಗೆ ಬೀಳುವ ಸಿದ್ಧರಂತೆ, ಬಿದ್ದರು.

ತತಃ ಸರಥನಾಗಾಶ್ವಾಃ ಕುರವಃ ಕುರುಸತ್ತಮ ।
ನಿರ್ಭಯಾ ಭರತಶ್ರೇಷ್ಠಮಭ್ಯವರ್ತಂತ ಫಲ್ಗುನಮ್ ॥೬॥

ಬಳಿಕ, ರಾಜನೆ, ರಥ ಗಜ ಅಶ್ವ ಸೈನ್ಯಸಹಿತರಾದ ಕೌರವರು ಕುರುಶ್ರೇಷ್ಠನಾದ ಅರ್ಜುನನನ್ನು ನಿರ್ಭಯರಾಗಿ ಆಕ್ರಮಿಸಿದರು.

ತದಾಯತ್ತಮನುಷ್ಯಾಶ್ವಮುದೀರ್ಣರಥವಾರಣಮ್ ।
ಪುತ್ರಾಣಾಂ ತೇ ಮಹತ್ಸೈನ್ಯಂ ಸಮರೌತ್ಸೀದ್ಧನಂಜಯಃ ॥೭॥

ಆಗ ಯತ್ನಶೀಲವಾದ ಪದಾತಿ ಅಶ್ವಗಳುಳ್ಳ ಶ್ರೇಷ್ಠವಾದ ರಥಗಜಗಳುಳ್ಳ ನಿನ್ನ ಮಕ್ಕಳ ಮಹಾಸೈನ್ಯವನ್ನು ಧನಂಜಯನು ತಡೆದ.

ಶಕ್ತ್ಯೃಷ್ಟಿತೋಮರಪ್ರಾಸೈರ್ಗದಾನಿಸ್ತ್ರಿಂಶಸಾಯಕೈಃ ।
ಪ್ರಾಚ್ಛಾದಯನ್ಮಹೇಷ್ವಾಸಾಃ ಕುರವಃ ಕುರುನಂದನಮ್ ॥೮॥

ಶಕ್ತಿ—ಋಷ್ಟಿ–ತೋಮರ–ಪ್ರಾಸ–ಗದಾ–ಖಡ್ಗ–ಬಾಣಗಳಿಂದ ಮಹಾ ಬಿಲ್ಲಾರರಾದ ಕೌರವರು ಕುರುನಂದನನಾದ ಅರ್ಜುನನನ್ನು ಆಚ್ಛಾದಿಸಿದರು.

ತಾಂ ಕುರೂಣಾಂ ಪ್ರವಿತತಾಂ ಶಸ್ತ್ರವೃಷ್ಟಿಂ ಸಮುದ್ಯತಾಮ್ ।
ವ್ಯಧಮತ್ ಪಾಂಡವೋ ಬಾಣೈಸ್ತಮಃ ಸೂರ್ಯ ಇವಾಂಶುಭಿಃ ॥೯॥

ವ್ಯಾಪಕವಾಗಿ ಉದ್ಭವಿಸಿದ ಕೌರವರ ಬಾಣಗಳ ಮಳೆಯನ್ನು ಸೂರ್ಯನು ಕತ್ತಲನ್ನು ಸ್ವಕಿರಣಗಳಿಂದ ನಾಶಗೊಳಿಸುವಂತೆ, ಅರ್ಜುನನು ಬಾಣಗಳಿಂದ ನಾಶಪಡಿಸಿದ.

ತತೋ ಮ್ಲೇಚ್ಛಾಃ ಸ್ಥಿತಾ ಮತ್ತೈಃ ತ್ರಯೋದಶಶತೈರ್ಗಜೈಃ ।
ಪಾರ್ಶ್ವತೋಽಭ್ಯಹನನ್ಪಾರ್ಥಂ ತವ ಪುತ್ರಸ್ಯ ಶಾಸನಾತ್ ॥೧೦॥

ಬಳಿಕ ಪಾರ್ಶ್ವದಲ್ಲಿ ನಿಂತಿದ್ದ ಮ್ಲೇಚ್ಛರು ಒಂದು ಸಾವಿರ ಮುನ್ನೂರು ಮದವೇರಿದ ಗಜಗಳಿಂದ ನಿನ್ನ ಮಗನಾದ ದುರ್ಯೋಧನನ ಆದೇಶಾನುಸಾರವಾಗಿ ಪಾರ್ಥನನ್ನು ಹೊಡೆದರು.

ಕರ್ಣೈನಾಲೀಕನಾರಾಚೈಸ್ತೋಮರೈಃ ಪ್ರಾಸಶಕ್ತಿಭಿಃ ।
ಮುಸಲೈರ್ಭಿಂಡಿಪಾಲೈಶ್ಚ ರಥಸ್ಥಂ ಪಾರ್ಥಮಾರ್ದಯನ್ ॥೧೧॥

ಮ್ಲೇಚ್ಛರು ಕರ್ಣಿ ನಾಲೀಕ ನಾರಾಚ ತೋಮರ ಪ್ರಾಸ ಶಕ್ತಿ ಮುಸಲ ಭಿಂಡಿಪಾಲಗಳಿಂದ ರಥದಲ್ಲಿದ್ದ ಅರ್ಜುನನನ್ನು ಹೊಡೆದರು.

ತಾಮಸ್ತ್ರವೃಷ್ಟಿಂ ಪ್ರಹಿತಾಂ ದ್ವಿಪಸ್ಥೈರ್ಯವನೈಃ ಸ್ಮಯನ್ ।
ಚಿಚ್ಛೇದ ನಿಶಿತೈರ್ಭಲ್ಲೈರರ್ಧಚಂದ್ರೈಶ್ಚ ಫಲ್ಗುನಃ ॥೧೨॥

ಆನೆಗಳಲ್ಲಿದ್ದ ಮ್ಲೇಚ್ಛರು ಎಸೆದ ಅಸ್ತ್ರವೃಷ್ಟಿಯನ್ನು ಅರ್ಜುನನು ನಗುತ್ತ ಹರಿತವಾದ ಭಲ್ಲೆಗಳಿಂದಲೂ ಅರ್ಧಚಂದ್ರಗಳಿಂದಲೂ ಕತ್ತರಿಸಿದ.

ಅಥ ತಾನ್ ದ್ವಿರದಾನ್ ಸರ್ವಾನ್ನಾನಾಲಿಂಗೈರ್ಮಹಾಶರೈಃ ।
ಸಪತಾಕಾನ್ ಸಹಾರೋಹಾನ್ ಗಿರೀನ್ ವಜ್ರೈರಿವಾಭಿನತ್ ॥೧೩॥

ಬಳಿಕ ಅರ್ಜುನನು ಆ ಎಲ್ಲ ಗಜಗಳನ್ನೂ ನಾನಾಬಗೆಯ ಮಹಾಶರಗಳಿಂದ ಆರೋಹಿಗಳೊಂದಿಗೆ ಪತಾಕೆಗಳೊಂದಿಗೆ ಬೆಟ್ಟಗಳನ್ನು ವಜ್ರಾಯುಧದಿಂದ ಭೇದಿಸುವಂತೆ ಭೇದಿಸಿದ.

ತೇ ಹೇಮಪುಂಖೈರಿಷುಭಿರಾಚಿತಾ ಹೇಮಮಾಲಿನಃ ।
ಹತಾಃ ಪೇತುರ್ಮಹಾನಾಗಾಃ ಸಾಗ್ನಿಜ್ವಾಲಾ ಇವಾದ್ರಯಃ ॥೧೪॥

ಅಗ್ನಿಜ್ವಾಲೆಗಳೊಂದಿಗೆ ಪರ್ವತಗಳಂತೆ, ಬಂಗಾರದ ಮಾಲೆಗಳಿಂದ ಆವೃತವಾದ ಆ ಮಹಾಗಜಗಳು ಬಂಗಾರದ ಪುಕ್ಕಗುಳ್ಳ ಅರ್ಜುನನ ಬಾಣಗಳಿಂದ ಹತವಾಗಿ ನೆಲದಲ್ಲಿ ಒರಗಿದುವು.

ತತೋ ಗಾಂಡೀವನಿರ್ಘೋಷೋ ಮಹಾನಾಸೀದ್ ವಿಶಾಂಪತೇ ।
ಸ್ತನತಾಂ ಕೂಜತಾಂ ಚೈವ ಮನುಷ್ಯಗಜವಾಜಿನಾಮ್ ॥೧೫॥

ರಾಜನೆ, ಆಗ ಗಾಂಡೀವದ ಘೋಷವೂ ದೊಡ್ಡದಾಗಿತ್ತು. ಪದಾತಿ ಗಜ ಅಶ್ವಸೈನಿಕರ ಆಕ್ರಂದನದ ಆರ್ತಧ್ವನಿಯೂ ದೊಡ್ಡದಾಗಿತ್ತು.

ಕುಂಜರಾಶ್ಚ ಹತಾ ರಾಜನ್ ಪ್ರಾದ್ರವಂಸ್ತೇ ಸಮಂತತಃ ।
ಅಶ್ವಾಶ್ಚ ಪರ್ಯಧಾವಂತ ಹತಾರೋಹಾ ದಿಶೋ ದಶ ॥೧೬॥

ರಾಜನೆ, ಆನೆಗಳು ಹೊಡೆಸಿಕೊಂಡು ಆರೋಹಿಗಳೊಂದಿಗೆ ಎಲ್ಲೆಡೆ ಧಾವಿಸಿದುವು. ಅಶ್ವಗಳೂ ಆರೋಹಿಗಳು ಹತರಾದಾಗ ಹತ್ತು ದಿಕ್ಕಿಗಳಿಗೆ ಓಡಿದುವು.

ರಥಾ ಹೀನಾ ಮಹಾರಾಜ ರಥಿಭಿರ್ವಾಜಿಭಿಸ್ತಥಾ ।
ಗಂಧರ್ವನಗರಾಕಾರಾ ದೃಶ್ಯಂತೇ ಸ್ಮ ಸಹಸ್ರಶಃ ॥೧೭॥

ಮಹಾರಾಜ, ಸಾವಿರಾರು ರಥಗಳೂ ಕೂಡ ರಥಿಕರಿಲ್ಲದೆ ಕುದುರೆಗಳಿಲ್ಲದೆ ಗಂಧರ್ವನಗರಾಕಾರವಾಗಿ ರಣದಲ್ಲಿ ಎಲ್ಲೆಡೆ ಹರಡಿದುವು.

ಅಶ್ವಾರೋಹಾ ಮಹಾರಾಜ ಧಾವಮಾನಾಸ್ತತಸ್ತತಃ ।
ತತ್ರ ತತ್ರೈವ ದೃಶ್ಯಂತೇ ಪತಿತಾಃ ಪಾರ್ಥಸಾಯಕೈಃ ॥೧೮॥

ಅಶ್ವಾರೋಹಿಗಳು ಕೂಡ, ಮಹಾರಾಜ, ಪಾರ್ಥನ ಬಾಣಗಳಿಂದ ಎಲ್ಲೆಡೆ ಧಾವಿಸುತ್ತ ಅಲ್ಲಲ್ಲಿ ಬೀಳುವುದು ಕಂಡುಬಂದಿತು.

ತಸ್ಮಿನ್ ಕ್ಷಣೇ ಪಾಂಡವಸ್ಯ ಬಾಹ್ವೋರ್ಬಲಮದೃಶ್ಯತ ।
ಯತ್ತಾದಿನೋ ವಾರಣಾಂಶ್ಚ ರಥಾಂಶ್ಚೈಕೋऽಜಯದ್ ಯುಧಿ ॥೧೯॥

ಆ ಕ್ಷಣದಲ್ಲಿ ಅರ್ಜುನನು ಅಶ್ವಗಜರಥಾರೋಹಿಗಳೆಲ್ಲರನ್ನೂ ಒಬ್ಬನೆ ರಣದಲ್ಲಿ ಪರಾಭವಗೊಳಿಸಿದ್ದರಿಂದ ಅವನ ಬಾಹುಬಲ ಚೆನ್ನಾಗಿ ಗೋಚರವಾಯಿತು.

ತತಸ್ತ್ರ್ಯಂಗೇಣ ಮಹತಾ ಬಲೇನ ಭರತರ್ಷಭ ।
ದೃಷ್ಟ್ವಾ ಪರಿವೃತಂ ರಾಜನ್ ಭೀಮಸೇನಃ ಕಿರೀಟಿನಮ್ ॥೨೦॥

ಹತಾವಶೇಷಾನುತ್ಸೃಜ್ಯ ತ್ವದೀಯಾನ್ ಕತಿಚಿದ್ ರಥಾನ್ ।
ಜವೇನಾಭ್ಯದ್ರವದ್ ರಾಜನ್ ಧನಂಜಯರಥಂ ಪ್ರತಿ ॥೨೧॥

ರಾಜನೆ, ಅಶ್ವಗಜಪದಾತಿಗಳೆಂಬ ಮೂರು ಅಂಗಗಳಿಂದ ಕೂಡಿದ ದೊಡ್ಡ ಸೈನ್ಯವು ಅರ್ಜುನನನ್ನು ಸುತ್ತುವರಿದಿದ್ದುದನ್ನು ಕಂಡು ಭೀಮನು ಉಳಿದುಳಿದಿದ್ದ ನಿನ್ನ ಪಕ್ಷದ ಕೆಲವು ರಥಿಕರನ್ನು ಬಿಟ್ಟು ವೇಗದಿಂದ ಅರ್ಜುನನ ರಥದ ಕಡೆಗೆ ಧಾವಿಸಿ ಬಂದ.

ತತಸ್ತತ್‌ಪ್ರಾದ್ರವತ್ ಸೈನ್ಯಂ ಹತಭೂಯಿಷ್ಠಮಾತುರಮ್ ।
ದೃಷ್ಟ್ವಾ ಯದರ್ಜುನಂ ಭೀಮೋ ಜಗಾಮ ಭ್ರಾತರಂ ಪ್ರತಿ ॥೨೨॥

ಅದರಿಂದ ಹೆಚ್ಚಿನ ಮಟ್ಟಿಗೆ ನಾಶ ಹೊಂದಿದ್ದ ಆ ಸೈನ್ಯವು ಆಗಲೆ ಪೀಡಿತವಾಗಿದ್ದು, ತಮ್ಮನಾದ ಅರ್ಜುನನ ಬಳಿಗೆ ಅಣ್ಣ ಭೀಮ ಬಂದುದನ್ನು ಕಂಡೊಡನೆ, ಪಲಾಯನ ಮಾಡಿತು.

ಹತಾವಶಿಷ್ಟಾಂಸ್ತುರಗಾನರ್ಜುನೇನ ಮಹಾಜವಾನ್ ।
ಭೀಮೋ ವ್ಯಧಮದಶ್ರಾಂತೋ ಗದಾಪಾಣಿರ್ಮಹಾಹವೇ ॥೨೩॥

ಅರ್ಜುನನಿಂದ ಹತವಾಗಿ ಉಳಿದುಕೊಂಡಿದ್ದ ಮಹಾವೇಗದ ಅಶ್ವಗಳನ್ನು ಮಹಾರಣದಲ್ಲಿ ಶ್ರಮವನ್ನೆ ಕಂಡರಿಯದ ಭೀಮನು ಗದಾಪಾಣಿಯಾಗಿ ಧ್ವಂಸಗೈದ.

ಕಾಲರಾತ್ರಿಮಿವಾತ್ಯುಗ್ರಾಂ ನರನಾಗಾಶ್ವಭೋಜನಾಮ್ ।
ಪ್ರಾಕಾರಾಟ್ಟಪುರದ್ವಾರದಾರಣೀಮತಿದಾರುಣಾಮ್ ॥೨೪॥

ತತೋ ಗದಾಂ ನೃನಾಗಾಶ್ವೇಷ್ವಾಶು ಭೀಮೋ ವ್ಯವಾಸೃಜತ್ ।
ಸಾ ಜಘಾನ ಬಹೂನಶ್ವಾನಶ್ವಾರೋಹಾಂಶ್ಚ ಮಾರಿಷ ॥೨೫॥

ರಾಜನೆ, ಭೀಮನ ಗದೆ ಎಂದರೆ ಶತ್ರುಗಳಿಗೆ ಕಾಲರಾತ್ರಿಯಂತೆ ಅತಿ ಉಗ್ರ. ಪದಾತಿ ಗಜ ಅಶ್ವಸೈನ್ಯಗಳೆ ಅದಕ್ಕೆ ಆಹಾರ. ಪ್ರಾಕಾರ ಉಪ್ಪರಿಗೆ ಪುರದ್ವಾರಗಳನ್ನು ಒಡೆಯುವಂಥ ದಾರುಣವಾದ ಆಯುಧ. ಅಂಥ ಗದೆಯನ್ನು ಭೀಮನು ಪದಾತಿ ಗಜ ಅಶ್ವಗಳ ಮೇಲೆ ಬೀಸಿದ. ಅದು ಬಹು ಅಶ್ವ ಅಶ್ವಾರೋಹಿಗಳನ್ನು ವಧಿಸಿತು.

ಕಾಂಸ್ಯಾಯಸತನುತ್ರಾಂಸ್ತಾನ್ನರಾನಶ್ವಾಂಶ್ಚ ಪಾಂಡವಃ ।
ಪೋಥಯಾಮಾಸ ಗದಯಾ ಸಶಬ್ದಂ ತೇಽಪತನ್ ಹತಾಃ ॥೨೬॥

ಕಂಚು ಕಬ್ಬಿಣಗಳ ಕವಚಗಳನ್ನು ತೊಟ್ಟ ಪದಾತಿ ಅಶ್ವಾರೋಹಿಗಳನ್ನು ಭೀಮನು ಗದೆಯಿಂದ ಹೊಡೆದ. ಅವರು ಹತರಾಗಿ ಕೂಗಿಕೊಳ್ಳುತ್ತ ನೆಲದಲ್ಲಿ ಒರಗಿದರು.

ದಂತೈರ್ದಶಂತೋ ವಸುಧಾಂ ಶೇರತೇ ಕ್ಷತಜೋಕ್ಷಿತಾಃ ।
ಭಗ್ನಮೂರ್ಧಾಸ್ಥಿಚರಣಾಃ ಕ್ರವ್ಯಾದಗಣಭೋಜನಾಃ ॥೨೭॥

ಆ ಪದಾತಿ ಅಶ್ವಾರೋಹಿಗಳು ನೆತ್ತರಿನಿಂದ ತೊಯ್ದು ಹಲ್ಲುಗಳಿಂದ ನೆಲವನ್ನು ಕಚ್ಚಿಕೊಂಡೇ ಬಿದ್ದರು. ತಲೆಬುರುಡೆ ಕಾಲು ಮುರಿದುಕೊಂಡು ಮಾಂಸಾಶಿ ಜಂತುಗಳಿಗೆ ಆಹಾರವಾದರು.

ಅಸೃಜ್ಮಾಂಸವಸಾಭಿಶ್ಚ ತೃಪ್ತಿಮಾಪ್ಯಾಯಸೀ ಗದಾ ।
ಅಸ್ಥೀನ್ಯಪ್ಯಶ್ನತೀ ತಸ್ಥೌ ಕಾಲರಾತ್ರೀವ ದುರ್ದೃಶಾ ॥೨೮॥

ಭೀಮನ ಆ ಕಬ್ಬಿಣದ ಗದೆ ರಕ್ತ ಮಾಂಸ ವಸಾಗಳಿಂದ ತೃಪ್ತಿಗೊಂಡೂ ಕೂಡ ಅಸ್ಥಿಗಳನ್ನೂ ಬಿಡದೆ ಉಂಡು ಕಾಲರಾತ್ರಿಯಂತೆ ನೋಡಲು ಶಕ್ಯವಾಗದಂತಿತ್ತು.

ಸಹಸ್ರಾಣಿ ದಶಾಶ್ವಾನಾಂ ಹತ್ವಾ ಪತ್ತೀಂಶ್ಚ ಭೂಯಸಾ ।
ಭೀಮೋಽಭ್ಯಧಾವತ್ ಸಂಕ್ರುದ್ಧೋ ಗದಾಪಾಣಿರಿತಸ್ತತಃ ॥೨೯॥

ಭೀಮನು ಬಲುಕ್ರುದ್ಧನಾಗಿ ಗದೆಯನ್ನು ಹಿಡಿದು ಹತ್ತುಸಾವಿರ ಅಶ್ವಸೈನಿಕರನ್ನೂ ಲೆಕ್ಕವಿಲ್ಲದಷ್ಟು ಕಾಲಾಳುಗಳನ್ನೂ ಸಂಹರಿಸುತ್ತ ರಣದಲ್ಲಿ ಎಲ್ಲೆಡೆ ಸಂಚರಿಸಿದ.

ಗದಾಪಾಣಿಂ ತತೋ ಭೀಮಂ ದೃಷ್ಟ್ವಾ ಭಾರತ ತಾವಕಾಃ ।
ಮೇನಿರೇ ಸಮನುಪ್ರಾಪ್ತಂ ಕಾಲಂ ದಂಡೋದ್ಯತಂ ಯಥಾ ॥೩೦॥

ರಾಜನೆ, ಗದಾಪಾಣಿಯಾದ ಭೀಮನನ್ನು ಕಂಡೊಡನೆ ನಿನ್ನವರು ಕಾಲಯಮನೇ ದಂಡಪಾಣಿಯಾಗಿ ಬಂದಂತೆ ತಿಳಿದರು.

ಸ ಮತ್ತ ಇವ ಮಾತಂಗಃ ಸಂಕ್ರುದ್ಧಃ ಪಾಂಡುನಂದನಃ ।
ಪ್ರವಿವೇಶ ಗಜಾನೀಕಂ ಮಕರಃ ಸಾಗರಂ ಯಥಾ ॥೩೧॥

ಮದಿಸಿದ ಮದ್ದಾನೆಯಂತೆ ಕ್ರುದ್ಧನಾದ ಭೀಮ ಗಜಸೈನ್ಯವನ್ನು ಮೊಸಳೆ ಸಾಗರವನ್ನು ಪ್ರವೇಶಿಸುವಂತೆ ಪ್ರವೇಶಿಸಿದ.

ವಿಗಾಹ್ಯ ಚ ಗಜಾನೀಕಂ ಪ್ರಗೃಹ್ಯ ಮಹತೀಂ ಗದಾಮ್ ।
ಕ್ಷಣೇನ ಭೀಮಃ ಸಂಕ್ರುದ್ಧಸ್ತಾನ್ನಿನ್ಯೇ ಯಮಸಾದನಮ್ ॥೩೨॥

ದೊಡ್ಡಗದೆಯನ್ನು ಹಿಡಿದು ಗಜಸೈನ್ಯವನ್ನು ಹೊಕ್ಕು ಕ್ರುದ್ಧನಾಗಿ ಕ್ಷಣದಲ್ಲಿ ಅವರನ್ನು ಯಮಸದನಕ್ಕೆ ಅಟ್ಟಿದ, ಭೀಮ.

ಗಜಾನ್ ಸಕಂಕಟಾನ್ ಮತ್ತಾನ್ ಸಾರೋಹಾನ್ ಸಪತಾಕಿನಃ ।
ಪತತಃ ಸಮಪಶ್ಯಾಮ ಸಪಕ್ಷಾನ್ ಪರ್ವತಾನಿವ ॥೩೩॥

ಕವಚಯುಕ್ತವಾದ ಮದಿಸಿದ ಗಜಗಳು ಆರೋಹಿಗಳೊಂದಿಗೆ, ಪತಾಕೆಗಳೊಂದಿಗೆ, ರೆಕ್ಕೆಗಳೊಂದಿಗೆ ಪರ್ವತಗಳು ಬೀಳುವಂತೆ, ಬೀಳುವುದನ್ನು ಕಂಡೆವು.

ಹತ್ವಾ ತು ತದ್ಗಜಾನೀಕಂ ಭೀಮಸೇನೋ ಮಹಾಬಲಃ ।
ಪುನಃ ಸ್ವರಥಮಾಸ್ಥಾಯ ಪೃಷ್ಠತೋಽರ್ಜುನಮನ್ವಗಾತ್ ॥೩೪॥

ಹೀಗೆ ಗಜಸೈನ್ಯವನ್ನು ಕೂಡ ಸಂಹರಿಸಿ ಮಹಾಬಲನಾದ ಭೀಮಸೇನನು ಪುನಃ ತನ್ನ ರಥವನ್ನೇರಿ ಅರ್ಜುನನಿಗೆ ಪೃಷ್ಠರಕ್ಷಕನಾಗಿ ನಡೆದ.

ಹತಂ ಪರಾಙ್ಮುಖಪ್ರಾಯಂ ನಿರುತ್ಸಾಹಂ ಬಲಂ ತವ ।
ವ್ಯಲಂಬತ ಮಹಾರಾಜ ಪ್ರಾಯಶಃ ಶಸ್ತ್ರಪೀಡಿತಮ್ (ವೇಷ್ಟಿತಮ್)॥೩೫॥

ಮಹಾರಾಜ, ನಿನ್ನ ಸೈನ್ಯವು ಹೊಡೆಸಿಕೊಂಡು, ಶಸ್ತ್ರಗಳಿಂದ ಪೀಡಿತವಾಗಿ, ಉತ್ಸಾಹ ಕಳೆದುಕೊಂಡು ಪ್ರಾಯಶಃ ಹಿಮ್ಮೆಟ್ಟಿದಂತೇ ಇದ್ದು ಜಡವಾಯಿತು.

ವಿಲಂಬಮಾನಂ ತತ್ ಸೈನ್ಯಮಪ್ರಗಲ್ಭಮವಸ್ಥಿತಮ್ ।
ದೃಷ್ಟ್ವಾ ಪ್ರಾಚ್ಛಾದಯದ್ ಬಾಣೈರರ್ಜುನಃ ಪ್ರಾಣತಾಪನೈಃ ॥೩೬॥

ಆ ಸೈನ್ಯವು ಜಡವಾಗಿ ಅಸಮರ್ಥವಾಗಿದ್ದುದನ್ನು ಕಂಡು ಅರ್ಜುನನು ಪ್ರಾಣನಾಶಕವಾದ ಬಾಣಗಳಿಂದ ಅದನ್ನು ಚೆನ್ನಾಗಿ ಆಚ್ಛಾದಿಸಿದ.

ನರಾಶ್ವರಥಮಾತಂಗಾ ಯುಧಿ ಗಾಂಡೀವಧನ್ವನಾ ।
ಶರವ್ರಾತೈಶ್ಚಿತಾ ರೇಜುಃ ಕದಂಬಾಃ ಇವ ಕೇಸರೈಃ ॥೩೭॥

ಪದಾತಿ ಅಶ್ವ ರಥ ಗಜಗಳು ರಣದಲ್ಲಿ ಅರ್ಜುನನ ಬಾಣಸಮೂಹಗಳಿಂದ ಆಚ್ಛಾದಿತವಾದಾಗ ಕೇಸರಯುಕ್ತವಾದ ಕಡಹದ ಹೂಗಳಂತೆ ಕಂಡುಬಂದರು.

ತತಃ ಕುರೂಣಾಮಭವದಾರ್ತನಾದೋ ಮಹಾಮೃಧೇ ।
ರಥಾಶ್ವನಾಗಾಸುಹರೈರ್ವಧ್ಯತಾಮರ್ಜುನೇಷುಭಿಃ ॥೩೮॥

ಆಗ ರಥ ಅಶ್ವ ಗಜಗಳ ಪ್ರಾಣವನ್ನು ತೆಗೆವ ಅರ್ಜುನನ ಬಾಣಗಳಿಂದ ಹೊಡೆಸಿಕೊಂಡ ಕುರುಯೋಧರ ಆರ್ತನಾದ ಮಹಾರಣದಲ್ಲಿ ಕೇಳಿಬಂದಿತು.

ಹಾಹಾಕೃತಂ ಭೃಶತ್ರಸ್ತಂ ಲೀಯಮಾನಂ ಪರಸ್ಪರಮ್ ।
ಕುಲಾಲಚಕ್ರವತ್ ಸೈನ್ಯಂ ತದಾಭ್ರಮತ ತಾವಕಮ್ ॥೩೯॥

ನಿನ್ನ ಸೈನ್ಯವು ಜೋರಾಗಿ ಹಾಹಾಕಾರ ಮಾಡುತ್ತ ಬಲುಭೀತಿಗೊಂಡು ಪರಸ್ಪರ ತಮ್ಮತಮ್ಮಲ್ಲಿಯೇ ಅಡಗಿಕೊಳ್ಳುತ್ತ ಕುಂಬಾರನ ಚಕ್ರದಂತೆ ರಣರಂಗದಲ್ಲಿ ಸುತ್ತಿತು.

ತತಸ್ತದ್ ಧ್ವಸ್ತಮಭವತ್ ಕುರೂಣಾಂ ಸುಮಹದ್ ಬಲಮ್ ।
ನ ಹ್ಯತ್ರಾಸೀದನಿರ್ಭಿನ್ನೋ ರಥಃ ಸಾದೀ ಹಯೋ ಗಜಃ ॥೪೦॥

ಅದರಿಂದ ಕೌರವರ ಮಹಾಸೈನ್ಯವು ಧ್ವಸ್ತವಾಯಿತು. ರಥ ಪದಾತಿ ಅಶ್ವಗಜ ಯಾವುದೂ ಅದರಲ್ಲಿ ಗಾಯಗೊಳ್ಳದಿರಲಿಲ್ಲ.

ಆದೀಪ್ತಮಿವ ತತ್ ಸೈನ್ಯಂ ಶರೈಶ್ಛಿನ್ನತನುಚ್ಛದಮ್ ।
ಆಸೀತ್ಸ್ರವೋಣಿತಕ್ಲಿನ್ನಂ ಫುಲ್ಲಾಶೋಕವನಂ ಯಥಾ ॥೪೧॥

ಆ ಸೈನ್ಯವು, ಬಾಣಗಳಿಂದ ಕವಚಗಳು ಒಡೆದುದರಿಂದ ನೆತ್ತರಿನಿಂದ ತೊಯ್ದು ಅರಳಿದ ಅಶೋಕವನದಂತಾಗಿ ಹೊತ್ತಿ ಉರಿಯುವಂತೆ ಕಂಡುಬಂದಿತು.

ತದ್ ದೃಷ್ಟ್ವಾ ಕುರವಸ್ತತ್ರ ವಿಕ್ರಾಂತಂ ಸವ್ಯಸಾಚಿನಃ ।
ನಿರಾಶಾಃ ಸಮಪದ್ಯಂತ ಸರ್ವೇ ಕರ್ಣಸ್ಯ ಜೀವಿತೇ ॥೪೨॥

ಆ ರೀತಿಯ ಅರ್ಜುನನ ಪರಾಕ್ರಮವನ್ನು ಕಂಡು ಕೌರವರು ಎಲ್ಲರೂ ಕರ್ಣನು ಬದುಕಿ ಉಳಿಯುವ ವಿಷಯದಲ್ಲಿ ನಿರಾಶೆ ಹೊಂದಿದರು.

ಅವಿಷಹ್ಯಂ ತು ಪಾರ್ಥಸ್ಯ ಶರಸಂಪಾತಮಾಹವೇ ।
ಮತ್ವಾ ನ್ಯವರ್ತನ್ ಕುರವೋ ಜಿತಾ ಗಾಂಡೀವಧನ್ವನಾ ॥೪೩॥

ರಣದಲ್ಲಿ ಅರ್ಜುನನ ಬಾಣಗಳ ಆಘಾತವು ಸಹಿಸಲಾಗದುದೆಂದು ತಿಳಿದು ಕೌರವಯೋಧರು ಅರ್ಜುನನಿಗೆ ಸೋತು ಹಿಮ್ಮೆಟ್ಟಿದರು.

ತೇ ಹಿತ್ವಾ ಸಮರೇ ಪಾರ್ಥಂ ವಧ್ಯಮಾನಾಶ್ಚ ಸಾಯಕೈಃ ।
ಪ್ರದುದ್ರುವುರ್ದಿಶೋ ಭೀತಾಶ್ಚುಕ್ರುಶುಶ್ಚಾಪಿ ಸೂತಜಮ್ ॥೪೪॥

ಅವರು ಬಾಣಗಳಿಂದ ಹೊಡೆಸಿಕೊಳ್ಳುತ್ತ ರಣದಲ್ಲಿ ಅರ್ಜುನನನ್ನು ಬಿಟ್ಟು ಭಯದಿಂದ ದಿಕ್ಕುಗಳಿಗೆ ಪಲಾಯನ ಮಾಡಿದರು. ಮತ್ತು ಕರ್ಣನನ್ನು ರಕ್ಷಣೆಗಾಗಿ ಕೂಗಿದರು.

ಅಭ್ಯದ್ರವತ ತಾನ್ ಪಾರ್ಥಃ ಕಿರನ್ ಶರಶತಾನ್ ಶಿತಾನ್ ।
ಹರ್ಷಯನ್ ಪಾಂಡವಾನ್ ಯೋಧಾನ್
ಭೀಮಸೇನಪುರೋಗಮಾನ್ ॥೪೫॥

ಅರ್ಜುನನು ಹರಿತವಾದ ನೂರಾರು ಬಾಣಗಳನ್ನು ಎಸೆಯುತ್ತ ಕೌರವ ಸೈನಿಕರನ್ನು ಬೆನ್ನಟ್ಟಿದ. ಭೀಮಸೇನ ಮುಂತಾದ ಪಾಂಡವಯೋಧರಿಗೆ ಉತ್ಸಾಹ ಉಂಟು ಮಾಡಿದ.

ಪುತ್ರಾಸ್ತು ತೇ ಮಹಾರಾಜ ಜಗ್ಮುಃ ಕರ್ಣರಥಂ ಪ್ರತಿ ।
ಅಗಾಧೇ ಮಜ್ಜತಾಂ ತೇಷಾಂ ದ್ವೀಪಃ ಕರ್ಣೋಽಭವತ್ ತದಾ ॥೪೬॥

ಮಹಾರಾಜ, ನಿನ್ನ ಮಕ್ಕಳು ಕರ್ಣನ ರಥದ ಕಡೆಗೆ ರಕ್ಷಣೆಗಾಗಿ ಧಾವಿಸಿದರು. ಅಗಾಧವಾದ ಆಪತ್ತಿನಲ್ಲಿ ಮುಳುಗುತ್ತಿದ್ದ ಅವರಿಗೆ ಆಗ ಕರ್ಣನೇ ಆಶ್ರಯದಾತನಾದ.

ಕುರವೋ ಹಿ ಮಹಾರಾಜ ನಿರ್ವಿಷಾಃ ಪನ್ನಗಾ ಇವ ।
ಕರ್ಣಮೇವೋಪಲೀಯಂತ ಭಯಾದ್ ಗಾಂಡೀವಧನ್ವನಃ ॥೪೭॥

ಮಹಾರಾಜ, ಕೌರವರ ಯೋಧರು ವಿಷವಿಲ್ಲದ ಹಾವುಗಳಂತಾಗಿ ಅರ್ಜುನನ ಭಯದಿಂದ ಕರ್ಣನ ಬಳಿಯಲ್ಲೇ ಅಡಗಿಕೊಂಡರು.

ಯಥಾ ಸರ್ವಾಣಿ ಭೂತಾನಿ ಮೃತ್ಯೋರ್ಭೀತಾನಿ ಭಾರತ ।
ಧರ್ಮಮೇವೋಪಲೀಯಂತೇ ಧರ್ಮಂ ಲೋಕಪರಾಯಣಮ್ ॥೪೮॥

ತಥಾ ಕರ್ಣಂ ಮಹೇಷ್ವಾಸಂ ಪುತ್ರಾಸ್ತವ ನರಾಧಿಪ ।
ಉಪಾಲೀಯಂತ ಸಂತ್ರಾಸಾತ್ ಪಾಂಡವಸ್ಯ ಮಹಾತ್ಮನಃ ॥೪೯॥

ರಾಜನೆ, ಮೃತ್ಯುಭಯಭೀತರಾದ ಎಲ್ಲರೂ ಧರ್ಮವನ್ನೇ ಆಶ್ರಯಿಸುತ್ತಾರೆ. ಧರ್ಮವೇ ಲೋಕಕ್ಕೆ ದೊಡ್ಡ ಆಶ್ರಯ. ಹಾಗೇ, ರಾಜನೆ, ಮಹಾತ್ಮನಾದ ಅರ್ಜುನನ ಭಯದಿಂದ ನಿನ್ನ ಮಕ್ಕಳು ಮಹಾಬಿಲ್ಲಾಳುವಾದ ಕರ್ಣನ ಬಳಿ ಹೋಗಿ ಅಡಗಿಕೊಂಡರು.

ತಾನ್ ಶೋಣಿತಪರಿಕ್ಲಿನ್ನಾನ್ ವಿಷಮಸ್ಥಾನ್ ಶರಾತುರಾನ್ ।
ಮಾ ಭೈಷ್ಟೇತ್ಯಬ್ರವೀತ್ ಕರ್ಣೋ ಹ್ಯಭಿತೋ ಮಾಮಿತೇತಿ ಚ ॥೫೦॥

ರಕ್ತದಿಂದ ತೊಯ್ದು ಬಾಣದಿಂದ ವೇದನೆಪಡುತ್ತ ಆಪತ್ತಿನಲ್ಲಿದ್ದ ಅವರಿಗೆ ಕರ್ಣನು, 'ಹೆದರಬೇಡಿರಿ, ನನ್ನ ಕಡೆಗೇ ಬನ್ನಿರಿ' ಎಂದ.

ಸಂಭಗ್ನಂ ಹಿ ಬಲಂ ದೃಷ್ಟ್ವಾ ಬಲಾತ್ಪಾರ್ಥೇನ ತಾವಕಮ್ ।
ಧನುರ್ವಿಸ್ಫಾರಯನ್ ಕರ್ಣಸ್ತಸ್ಥೌ ಶತ್ರುಜಿಘಾಂಸಯಾ ॥೫೧॥

ಅರ್ಜುನನಿಂದ ಬಲಾತ್ಕಾರವಾಗಿ ನಿನ್ನ ಸೈನ್ಯ ಭಂಗಗೊಂಡಿರುವುದನ್ನು ನೋಡಿ ಕರ್ಣನು ಧನುಷ್ಟಂಕಾರಮಾಡಿ ಶತ್ರುವಧೇಚ್ಛೆಯಿಂದ ಸನ್ನದ್ಧನಾಗಿ ನಿಂತ.

ಪಾಂಚಾಲಾನ್ ಪುನರಾಧಾವತ್ ಪಶ್ಯತಃ ಸವ್ಯಸಾಚಿನಃ ।
ತತಃ ಕ್ಷಣೇನ ಕ್ಷಿತಿಪಾಃ ಕ್ಷತಜಪ್ರತಿಮೇಕ್ಷಣಾಃ ॥೫೨॥

ಕರ್ಣಂ ವವರ್ಷುರ್ಬಾಣೌಘೈರ್ಯಥಾ ಮೇಘಾ ಮಹೀಧರಮ್ ।

ಅರ್ಜುನನು ನೋಡುತ್ತಿದ್ದಂತೆಯೇ ಕರ್ಣನು ಪುನಃ ಪಾಂಚಾಲರನ್ನು

ಆಕ್ರಮಿಸಿದ. ರಕ್ತದಂತೆ ಕೆಂಪಾದ ಕಣ್ಣುಳ್ಳ ಪಾಂಚಾಲರಾಜರು ಕ್ಷಣದಲ್ಲಿ ಕರ್ಣನ ಮೇಲೆ, ಬೆಟ್ಟದ ಮೇಲೆ ಮೋಡಗಳು ಮಳೆಗರೆವಂತೆ, ಬಾಣಗಳ ಮಳೆಗರೆದರು.

ತತಃ ಶರಸಹಸ್ರಾಣಿ ಕರ್ಣಮುಕ್ತಾನಿ ಮಾರಿಷ ।
ವ್ಯಯೋಜಯಂತ ಪಾಂಚಾಲಾನ್ ಪ್ರಾಣೈಃ ಪ್ರಾಣಭೃತಾಂ ವರ ॥೫೩॥

ಆಗ ರಾಜನೆ, ಕರ್ಣನು ಎಸೆದ ಸಾವಿರಾರು ಬಾಣಗಳು ಪಾಂಚಾಲ ಯೋಧರಿಗೆ ಪ್ರಾಣವಿಯೋಗವನ್ನುಂಟು ಮಾಡಿದುವು.

ತತೋ ರಣೋ ಮಹಾನಾಸೀತ್ ಪಾಂಚಾಲಾನಾಂ ವಿಶಾಂಪತೇ ।
ವಧ್ಯತಾಂ ಸೂತಪುತ್ರೇಣ ಮಿತ್ರಾರ್ಥೇ ಮಿತ್ರಗೃದ್ಧಿನಾ ॥೫೪॥

ಮಿತ್ರಕೌರವನ ಜಯವನ್ನು ಬಯಸುವ ಕರ್ಣನಿಂದ ಮಿತ್ರಪಾಂಡವರಿಗಾಗಿ ಹೊಡೆಸಿಕೊಳ್ಳುತ್ತಿದ್ದ ಪಾಂಚಾಲಯೋಧರಿಗೆ ಕರ್ಣನೊಡನೆ ಮಹಾಯುದ್ಧ ನಡೆಯಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಅಷ್ಟಸಪ್ತತಿತಮೋऽಧ್ಯಾಯಃ ॥೭೮॥

❖

ಮಹಾಭಾರತತಾತ್ಪರ್ಯನಿರ್ಣಯ

ಪುನಶ್ಚ ನಿಘ್ನಂತಮರಿಪ್ರವೀರಾನ್
ವಿದ್ರಾವಯಂತಂ ಚ ನಿಜಾಂ ವರೂಥಿನೀಮ್ ।
ಸಸಾರ ದುಃಶಾಸನ ಆತ್ತಧನ್ವಾ
ಭೀಮೋಪಿ ತಂ ಸಿಂಹ ಇವಾಭಿಪೇದಿವಾನ್ ॥ ೧೪೩ ॥

ಪುನಃ ಶತ್ರುವೀರರನ್ನು ಕೊಲ್ಲುತ್ತ ತನ್ನ ಸೇನೆಯನ್ನು ಓಡಿಸುತ್ತಿದ್ದ ಭೀಮನನ್ನು ಧನುರ್ಧಾರಿ ದುಃಶಾಸನ ಸಮೀಪಿಸಿದ. ಭೀಮ ಅವನನ್ನು ಸಿಂಹದಂತೆ ಆಕ್ರಮಿಸಿದ.

❖

ಎಪ್ಪತ್ತೊಂಬತ್ತನೆಯ ಅಧ್ಯಾಯ

ಸಾತ್ಯಕಿಯಿಂದ ಕರ್ಣಪುತ್ರ ಪ್ರಸೇನನ ವಧ. ಕರ್ಣನಿಂದ ಐದು ಮಂದಿ ದ್ರುಪದಪುತ್ರರ ಪರಾಭವ. ಭೀಮ-ದುಃಶಾಸನರ ಯುದ್ಧ.

ಸಂಜಯಃ

ತತಃ ಕರ್ಣಃ ಕುರುಷು ಪ್ರದ್ರುತೇಷು
ಸೇನಾಪತಿಃ ಶ್ವೇತಹಯೇನ ರಾಜನ್ ।
ಪಾಂಚಾಲಪುತ್ರಾನ್ ವ್ಯಧಮತ್ ಸೂತಪುತ್ರೋ
ಮಹೇಷುಭಿರ್ವಾತ ಇವಾಭ್ರಸಂಘಾನ್ ॥೧॥

ಸಂಜಯನು ನುಡಿದ— ರಾಜನೆ, ಕೌರವಯೋಧರು ಪಲಾಯನಗೈದಾಗ ಸೇನಾಪತಿ ಸೂತಪುತ್ರ ಕರ್ಣನು ಬಿಳಿಕುದುರೆಯ ರಥದಿಂದ, ಗಾಳಿಯು ಮೋಡಸಮೂಹಗಳನ್ನು ಚದುರಿಸುವಂತೆ, ದೊಡ್ಡ ಬಾಣಗಳಿಂದ ಜನಮೇಜಯ ಧೃಷ್ಟದ್ಯುಮ್ನ ಮುಂತಾದ ಪಾಂಚಾಲಯೋಧರನ್ನು ಪರಾಭವಗೊಳಿಸಿದ.

ಸೂತಂ ರಥಾದಂಜಲಿಕೇನ ಪಾತ್ಯ
ಜಘಾನ ಚಾಶ್ವಾನ್ ಜನಮೇಜಯಸ್ಯ ।
ಶತಾನೀಕಂ ಸುತಸೋಮಂ ಚ ಭಲ್ಲೈ-
ರವಾಕಿರದ್ಧನುಷೀ ಚಾಪ್ಯಕೃಂತತ್ ॥೨॥

ಅಂಜಲಿಕ ಬಾಣದಿಂದ ಜನಮೇಜಯನ ಸಾರಥಿಯನ್ನು ಕೆಡವಿ ಅಶ್ವಗಳನ್ನು ಕೊಂದ. ಶತಾನೀಕನನ್ನು ಸುತಸೋಮನನ್ನು ಭಲ್ಲೆಗಳಿಂದ ಮುಚ್ಚಿದ, ಇಬ್ಬರ ಧನುಸ್ಸುಗಳನ್ನೂ ಕತ್ತರಿಸಿದ.

ಧೃಷ್ಟದ್ಯುಮ್ನಂ ನಿರ್ಬಿಭೇದಾಥ ಷಡ್ಭಿ-
ರ್ಜಘಾನ ಚಾಶ್ವಾಂಸ್ತರಸಾ ತಸ್ಯ ಸಂಖೇ ।
ಹತ್ವಾ ಚಾಶ್ವಾನ್ ಸಾತ್ಯಕೇಃ ಸೂತಪುತ್ರಃ
ಕೈಕೇಯಪುತ್ರಂ ನ್ಯವಧೀದ್ ವಿಶೋಕಮ್ ॥೩॥

ಬಳಿಕ ಧೃಷ್ಟದ್ಯುಮ್ನನನ್ನು ರಣದಲ್ಲಿ ಆರು ಭಲ್ಲೆಗಳಿಂದ ಹೊಡೆದ. ಅವನ ಕುದುರೆಗಳನ್ನೂ ಬೇಗನೆ ಕೊಂದ. ಸಾತ್ಯಕಿಯ ಕುದುರೆಗಳನ್ನು ಕೊಂದು ಕೈಕೇಯ ರಾಜನ ಪುತ್ರ ವಿಶೋಕನನ್ನೂ ಕೊಂದ.

ತಮಭ್ಯಧಾವನ್ನಿಹತೇ ಕುಮಾರೇ
ಕೈಕೇಯಸೇನಾಪತಿರುಗ್ರಧನ್ವಾ ।
ಶರೈರ್ವಿಭಿನ್ನಂ ಭೃಶಮುಗ್ರವೇಗೈಃ
ಕರ್ಣಾತ್ಮಜಂ ಸೋಽಭ್ಯಹನದ್ ಪ್ರಸೇನಮ್ ॥೪॥

ಮಗನು ಹತನಾದಾಗ ಉಗ್ರ ಧನುಸ್ಸುಳ್ಳ ಕೈಕೇಯದ ಸೇನಾಪತಿಯು ಉಗ್ರವೇಗವುಳ್ಳ ಬಾಣಗಳಿಂದ ಬಲುಗಾಯಗೊಂಡಿದ್ದ ಕರ್ಣಪುತ್ರನಾದ ಪ್ರಸೇನನನ್ನು ಹೊಡೆದ.

ತಸ್ಯಾರ್ಧಚಂದ್ರೈಸ್ತ್ರಿಭಿರುಚ್ಚಕರ್ತ
ಪ್ರಸಹ್ಯ ಬಾಹೂ ಚ ಶಿರಶ್ಚ ಕರ್ಣಃ ।
ಸ ಸ್ಯಂದನಾದ್ ಗಾಮಪತದ್ ಗತಾಸುಃ
ಪರಶ್ವಧೈಃ ಶಾಲ ಇವಾವರುಗ್ಣಃ ॥೫॥

ಅವನ ಬಾಹುಗಳನ್ನೂ ಶಿರಸ್ಸನ್ನೂ ಕರ್ಣನು ಮೂರು ಅರ್ಧಚಂದ್ರಬಾಣಗಳಿಂದ ಬಲಾತ್ಕಾರವಾಗಿ ಕತ್ತರಿಸಿದ. ಕೊಡಲಿಯಿಂದ ಕಡಿದ ಸಾಲವೃಕ್ಷದಂತೆ ಅವನು ಸತ್ತು ರಥದಿಂದ ನೆಲಕ್ಕೆ ಬಿದ್ದ.

ಹತಾಶ್ವಮಂಜೋಗತಿಭಿಃ ಪ್ರಸೇನಃ
ಶಿನಿಪ್ರವೀರಂ ನಿಶಿತೈಃ ಪೃಷತ್ಕೈಃ ।
ಪ್ರಚ್ಛಾದ್ಯ ನೃತ್ಯನ್ನಿವ ಸೂತಪುತ್ರಃ
ಶೈನೇಯಬಾಣಾಭಿಹತಃ ಪಪಾತ ॥೬॥

ಅಶ್ವರಹಿತನಾಗಿದ್ದ ಸಾತ್ಯಕಿಯನ್ನು ಕರ್ಣಪುತ್ರ ಪ್ರಸೇನನು ಬಲುವೇಗವುಳ್ಳ ಹರಿತವಾದ ಬಾಣಗಳಿಂದ ಮುಚ್ಚಿ ಕುಣಿದಾಡುತ್ತ, ಸಾತ್ಯಕಿಯ ಬಾಣಕ್ಕೆ ತುತ್ತಾಗಿ ಸತ್ತುಬಿದ್ದ.

ಪುತ್ರೇ ಹತೇ ಕ್ರೋಧಪರೀತಚೇತಾಃ
ಕರ್ಣಃ ಶಿನೀನಾಮೃಷಭಂ ಜಿಘಾಂಸುಃ ।
ಹತೋಽಸಿ ಶೈನೇಯ ಇತಿ ಬ್ರುವನ್ ಸ
ವ್ಯವಾಸೃಜದ್ ಬಾಣಮಮಿತ್ರಸಾಹಮ್ ॥೭॥

ಪುತ್ರನು ಹತನಾದ ಕೋಪ ತುಂಬಿದ ಮನಸ್ಸಿನ ಕರ್ಣನು ಸಾತ್ಯಕಿಯನ್ನು ಕೊಲ್ಲಲು ಬಯಸಿ 'ಸಾತ್ಯಕಿ! ನೀನೀಗ ಹತನಾದೆ!' ಎನ್ನುತ್ತ ಶತ್ರುನಾಶಕವಾದ ಬಾಣವನ್ನು ಎಸೆದ.

ಸ ತಸ್ಯ ಚಿಚ್ಛೇದ ಶರಂ ಶಿಖಂಡೀ
ತ್ರಿಭಿಸ್ತ್ರಿಭಿಶ್ಚ ಪ್ರತುತೋದ ಕರ್ಣಮ್ ।
ಶಿಖಂಡಿನಃ ಕಾರ್ಮುಕಂ ಸ ಧ್ವಜಂ ಚ
ಚ್ಛಿತ್ತ್ವಾ ಶರಾಭ್ಯಾಮಹನಚ್ಚ ಸೂತಮ್ ॥೮॥

ಆದರೆ ಆ ಬಾಣವನ್ನು ಮೂರು ಬಾಣಗಳಿಂದ ಶಿಖಂಡಿ ಕತ್ತರಿಸಿದ. ಮೂರು ಬಾಣಗಳಿಂದ ಕರ್ಣನನ್ನೂ ಅವನು ಹೊಡೆದ. ಕರ್ಣನು ಎರಡು ಬಾಣಗಳಿಂದ ಶಿಖಂಡಿಯ ಬಿಲ್ಲನ್ನೂ ಧ್ವಜವನ್ನೂ ಕತ್ತರಿಸಿ ಸಾರಥಿಯನ್ನೂ ಕೊಂದ.

ಶಿಖಂಡಿನಂ ಷಡ್ಭಿರವಿಧ್ಯದುಗ್ರೋ
ದಾಂತೋ ಧಾರ್ಷ್ಟದ್ಯುಮ್ನಿಶ್ಚ ರಥಶ್ಚಕರ್ತ ।
ಅಥಾಭಿನತ್ ಸುತಸೋಮಂ ಶರೇಣ
ಸ ಸಂಶಿತೇನಾಧಿರಥಿರ್ಮಹಾತ್ಮಾ ॥೯॥

ಉಗ್ರನಾದ ಮಹಾತ್ಮ ಕರ್ಣನು ಆರು ಬಾಣಗಳಿಂದ ಶಿಖಂಡಿಯನ್ನು ಹೊಡೆದ. ದಮಗುಣಉಳ್ಳ ಅವನು ಧೃಷ್ಟದ್ಯುಮ್ನಸುತನ ಶಿರವನ್ನೂ ಕತ್ತರಿಸಿದ. ಸುತಸೋಮನನ್ನೂ ಬಲುತೀಕ್ಷ್ಣವಾದ ಬಾಣದಿಂದ ಪೀಡಿಸಿದ.

ಜನಾಕ್ರಂದೇ ತುಮುಲೇ ವರ್ತಮಾನೇ
ಧಾರ್ಷ್ಟದ್ಯುಮ್ನೇ ನಿಹತೇ ತತ್ರ ಕೃಷ್ಣಃ ।
ಅಪಾಂಚಾಲ್ಯಂ ಕ್ರಿಯತೇ ಯಾಹಿ ಪಾರ್ಥ
ಕರ್ಣಂ ಜಹೀತ್ಯಬ್ರವೀದ್ ರಾಜಸಿಂಹ ॥೧೦॥

ರಾಜನೆ, ಜನರ ಆರ್ತಧ್ವನಿಯುಕ್ತವಾದ ಭಯಂಕರ ಯುದ್ಧ ನಡೆಯುವಾಗ, ಧೃಷ್ಟದ್ಯುಮ್ನನ ಪುತ್ರನೂ ಹತನಾದಾಗ ಕೃಷ್ಣನು 'ಪಾರ್ಥ, ಕರ್ಣನು ಪಾಂಚಾಲರನ್ನು ನಾಶಮಾಡುತ್ತಿದ್ದಾನೆ, ಅವನನ್ನು ಕೊಲ್ಲು ಹೋಗು' ಎಂದ.

ತತಃ ಪ್ರಹಸ್ಯಾಶು ನರಪ್ರವೀರೋ
ರಥಂ ರಥೇನಾಧಿರಥೇರ್ಜಗಾಮ ।
ಭಯೇ ತೇಷಾಂ ತ್ರಾಣಮಿಚ್ಛನ್ ಸುಬಾಹು-
ರಭ್ಯಾಹತಾನಾಂ ರಥಯೂಥಪಾನಾಮ್ ॥೧೧॥

ಆಗ ಬಾಹುಶಾಲಿ ಅರ್ಜುನನು ನಕ್ಕು, ಕರ್ಣನಿಂದ ಹೊಡೆಸಿಕೊಂಡ ರಥಿಕರಿಗೆ ನಾಯಕರಾದ ಆ ಪಾಂಚಾಲರಿಗೆ ಆಪತ್ತಿನಲ್ಲಿ ರಕ್ಷಣೆ ನೀಡುವುದಕ್ಕಾಗಿ ರಥದಿಂದ ಕರ್ಣನ ರಥವನ್ನು ಇದಿರಿಸಿದ.

ವಿಸ್ಫಾರ್ಯ ಗಾಂಡೀವಮಥೋಗ್ರಘೋಷಂ
ಜ್ಯಯಾ ಸಮಾಹತ್ಯ ತಳೇ ಭೃಶಂ ಚ ।
ಬಾಣಾಂಧಕಾರಂ ಸಹಸೈವ ಕೃತ್ವಾ
ಜಘಾನ ನಾಗಾಶ್ವರಥಾನ್ ನರಾಂಶ್ಚ ॥೧೨॥

ಅರ್ಜುನನು ಉಗ್ರಶಬ್ದಮಾಡುವ ಗಾಂಡೀವವನ್ನು ಠೇಂಕರಿಸಿ ಹೆದೆಯಿಂದ ಹಸ್ತತಲಕ್ಕೆ ಚೆನ್ನಾಗಿ ಹೊಡೆದುಕೊಂಡು ಬಲುಬೇಗನೆ ಬಾಣಗಳಿಂದ ಅಂಧಕಾರವನ್ನು ಉಂಟುಮಾಡಿ ಗಜ ಅಶ್ವ ರಥಗಳನ್ನೂ ಕಾಲಾಳುಗಳನ್ನೂ ಸಂಹರಿಸಿದ.

ಪ್ರತಿಶ್ರುತಿಃ ಪ್ರಾಚರದಂತರಿಕ್ಷೇ
ಗುಹಾ ಗಿರೀಣಾಮಪತನ್ ವಯಾಂಸಿ ।
ಯನ್ಮಂಡಲಜ್ಯೇನ ವಿಜೃಂಭಮಾಣೋ
ರೌದ್ರೇ ಮುಹೂರ್ತೇಭ್ಯಪತತ್ ಕಿರೀಟೀ ॥೧೩॥

ಅಂತರಿಕ್ಷದಲ್ಲಿ ಪ್ರತಿಧ್ವನಿ ಉಂಟಾಯಿತು. ಅಲ್ಲಿ ಹಾರುವ ಪಕ್ಷಿಗಳು ಪರ್ವತಗುಹೆಗಳನ್ನು ಸೇರಿಕೊಂಡುವು. ಏಕೆಂದರೆ ಬಿಲ್ಲಿನ ಹಗ್ಗವನ್ನು

ಮಂಡಲಾಕಾರವಾಗಿ ಸೆಳೆದು ಭಯಂಕರವಾದ ಆ ಮುಹೂರ್ತದಲ್ಲಿ ಅರ್ಜುನನು ಚೆನ್ನಾಗಿ ಶೋಭಿಸಿದ.

ತಂ ಭೀಮಸೇನೋನು ಯಯೌ ರಥೇನ
ಪೃಷ್ಠೇ ರಕ್ಷನ್ ಪಾಂಡವಮೇಕವೀರಮ್ ।
ತೌ ರಾಜಪುತ್ರೌ ತ್ವರಿತೌ ರಥಾಭ್ಯಾಂ
ಕರ್ಣಾಯ ಯಾತಾವರಿಭಿರ್ವಿಮುಕ್ತೌ ॥೧೪॥

ಏಕವೀರನಾದ ಅವನನ್ನು ಹಿಂದಿನಿಂದ ರಕ್ಷಿಸುತ್ತ ಭೀಮಸೇನನು ಹಿಂಬಾಲಿಸಿದ. ಶತ್ರುಗಳಿಂದ ಮುಕ್ತರಾಗಿದ್ದ ರಾಜಕುಮಾರರಾದ ಭೀಮ ಮತ್ತು ಅರ್ಜುನರು ರಥಗಳಿಂದ ಕರ್ಣನ ಕಡೆಗೆ ಹೋದರು.

ಅತ್ರಾಂತರೇ ಸುಮಹತ್ ಸೂತಪುತ್ರ-
ಶ್ಚಕ್ರೇ ಯುದ್ಧಂ ಸೋಮಕಾನ್ ಸಂಪ್ರಮೃದ್ನನ್ ।
ರಥಾಶ್ವಮಾತಂಗಗಣಾನ್ ಜಘಾನ
ಪ್ರಚ್ಛಾದಯಾಮಾಸ ದಿಶಃ ಶರೈಶ್ಚ ॥೧೫॥

ಈ ನಡುವೆ ಕರ್ಣನು ಸೋಮಕರನ್ನು ಸಂಹರಿಸುತ್ತ ದೊಡ್ಡ ಯುದ್ಧವನ್ನು ನಡೆಸಿದ. ರಥ ಅಶ್ವ ಗಜಸಮೂಹಗಳನ್ನು ಸಂಹರಿಸಿದ. ದಿಕ್ಕುಗಳನ್ನು ಬಾಣಗಳಿಂದ ಮುಚ್ಚಿದ.

ತಮುತ್ತಮೌಜಾ ಜನಮೇಜಯಶ್ಚ
ಕ್ರುದ್ಧೌ ಯುಧಾಮನ್ಯುಶಿಖಂಡಿನೌ ಚ ।
ಕರ್ಣಂ ವಿನೇದುಃ ಸಹಿತಾಃ ಪೃಷತ್ಕೈಃ
ಸಮ್ಮರ್ದಮಾನಾಃ ಸಹ ಪಾರ್ಷತೇನ ॥೧೬॥

ಉತ್ತಮೌಜ, ಜನಮೇಜಯ, ಕ್ರುದ್ಧರಾದ ಯುಧಾಮನ್ಯು ಮತ್ತು ಶಿಖಂಡಿಗಳು ಧೃಷ್ಟದ್ಯುಮ್ನನೊಂದಿಗೆ ಕೂಡಿ ಬಾಣಗಳಿಂದ ಕರ್ಣನನ್ನು ಪೀಡಿಸುತ್ತ ಗರ್ಜಿಸಿದರು.

ತೇ ಪಂಚ ಪಾಂಚಾಲರಥಪ್ರವೀರಾ
ವೈಕರ್ತನಂ ಕರ್ಣಮಭಿದ್ರವಂತಃ ।

ತಸ್ಮಾದ್ ರಥಾಚ್ಚ್ಯಾವಯಿತುಂ ನ ಶೇಕು-
ರ್ಧೈರ್ಯಾತ್ ಕೃತಾತ್ಮಾನಮಿವೇಂದ್ರಿಯಾಣಿ ॥೧೭॥

ಆ ಐದುಮಂದಿ ಮಹಾವೀರರಾದ ಪಾಂಚಾಲರಥಿಕರು ಕರ್ಣನನ್ನು ಇದಿರಿಸುತ್ತ ಅವನನ್ನು ವಿರಥನನ್ನಾಗಿಸಲು ಶಕ್ತರಾಗಲಿಲ್ಲ. ಧೈರ್ಯದಿಂದ ಮನೋನಿಗ್ರಹ ಮಾಡಿಕೊಂಡವನನ್ನು ವಿಚಲಿತಗೊಳಿಸಲು ಇಂದ್ರಿಯಗಳು ಶಕ್ತವಾಗುವುದಿಲ್ಲ.

ತೇಷಾಂ ಧ್ವಜಾನ್ ವಾಜಿಸೂತಾನ್ ಪತಾಕಾ
ಸ್ತೂಣೇರ್ಧನೂಂಷಿ ಪ್ರಚಕರ್ತ ಬಾಣೈಃ ।
ತಾನ್ ಪಂಚಭಿಃ ಸ ತ್ವಹನತ್ ಪೃಷತ್ಕೈಃ
ಕರ್ಣಸ್ತತಃ ಸಿಂಹ ಇವೋನ್ನನಾದ ॥೧೮॥

ಕರ್ಣನು ಅವರ ಧ್ವಜ ಅಶ್ವ ಸಾರಥಿ ಪತಾಕೆ ಬತ್ತಳಿಕೆ ಬಿಲ್ಲುಗಳನ್ನು ಬಾಣಗಳಿಂದ ಕತ್ತರಿಸಿದ. ಅವರನ್ನೂ ಐದು ಬಾಣಗಳಿಂದ ಹೊಡೆದ. ಸಿಂಹದಂತೆ ಗರ್ಜಿಸಿದ.

ತಸ್ಯಾಸ್ಯತಸ್ತಾನಭಿನಿಘ್ನತಶ್ಚ
ಜ್ಯಾಬಾಣಹಸ್ತಸ್ಯ ಧನುಃಸ್ವನೇನ ।
ಸಾದ್ರಿದ್ರುಮಾ ಸ್ಯಾತ್ ಪೃಥಿವೀ ವಿಶೀರ್ಣೇ-
ತ್ಯತೀವ ಮತ್ವಾ ಜನತಾ ವ್ಯಷೀದತ್ ॥೧೯॥

ಕರ್ಣನು ಕೈಯನ್ನು ಹೆದೆ ಮತ್ತು ಬಾಣಗಳಲ್ಲಿಟ್ಟು ಬಾಣಗಳನ್ನೆಸೆದು ಹೊಡೆಯುವಾಗ ಧನುಸ್ಸಿನ ಶಬ್ದದಿಂದ ಪರ್ವತ ವೃಕ್ಷ ಸಹಿತವಾದ ಭೂಮಿಯೇ ಬಿರಿಯಬಹುದೆಂದು ಜನಸಮೂಹವು ಅತೀವ ವಿಷಾದಕ್ಕೊಳಗಾಯಿತು.

ಸ ಶಕ್ರಚಾಪಪ್ರತಿಮೇನ ಧನ್ವನಾ
ಭೃಶಾತತೇನಾಧಿರಥಿಃ ಶರಾನ್ ಸೃಜನ್ ।
ಬಭೌ ರಣೇ ದೀಪ್ತಮರೀಚಿಮಂಡಲೋ
ಯಥಾಂಶುಮಾಲೀ ಪರಿವೇಷವಾಂಸ್ತಥಾ ॥೨೦॥

ಮಂಡಲಾಕಾರವಾಗಿ ಸೆಳೆದು ಭಯಂಕರವಾದ ಆ ಮುಹೂರ್ತದಲ್ಲಿ ಅರ್ಜುನನು ಚೆನ್ನಾಗಿ ಶೋಭಿಸಿದ.

ತಂ ಭೀಮಸೇನೋನು ಯಯೌ ರಥೇನ
ಪೃಷ್ಠೇ ರಕ್ಷನ್ ಪಾಂಡವಮೇಕವೀರಮ್ ।
ತೌ ರಾಜಪುತ್ರೌ ತ್ವರಿತೌ ರಥಾಭ್ಯಾಂ
ಕರ್ಣಾಯ ಯಾತಾವರಿಭಿರ್ವಿಮುಕ್ತೌ ॥೧೪॥

ಏಕವೀರನಾದ ಅವನನ್ನು ಹಿಂದಿನಿಂದ ರಕ್ಷಿಸುತ್ತ ಭೀಮಸೇನನು ಹಿಂಬಾಲಿಸಿದ. ಶತ್ರುಗಳಿಂದ ಮುಕ್ತರಾಗಿದ್ದ ರಾಜಕುಮಾರರಾದ ಭೀಮ ಮತ್ತು ಅರ್ಜುನರು ರಥಗಳಿಂದ ಕರ್ಣನ ಕಡೆಗೆ ಹೋದರು.

ಅತ್ರಾಂತರೇ ಸುಮಹತ್ ಸೂತಪುತ್ರ-
ಶ್ಚಕ್ರೇ ಯುದ್ಧಂ ಸೋಮಕಾನ್ ಸಂಪ್ರಮೃದ್ನನ್ ।
ರಥಾಶ್ವಮಾತಂಗಗಣಾನ್ ಜಘಾನ
ಪ್ರಚ್ಛಾದಯಾಮಾಸ ದಿಶಃ ಶರೈಶ್ಚ ॥೧೫॥

ಈ ನಡುವೆ ಕರ್ಣನು ಸೋಮಕರನ್ನು ಸಂಹರಿಸುತ್ತ ದೊಡ್ಡ ಯುದ್ಧವನ್ನು ನಡೆಸಿದ. ರಥ ಅಶ್ವ ಗಜಸಮೂಹಗಳನ್ನು ಸಂಹರಿಸಿದ. ದಿಕ್ಕುಗಳನ್ನು ಬಾಣಗಳಿಂದ ಮುಚ್ಚಿದ.

ತಮುತ್ತಮೌಜಾ ಜನಮೇಜಯಶ್ಚ
ಕ್ರುದ್ಧೌ ಯುಧಾಮನ್ಯುಶಿಖಂಡಿನೌ ಚ ।
ಕರ್ಣಂ ವಿನೇದುಃ ಸಹಿತಾಃ ಪೃಷತ್ಕೈಃ
ಸಮ್ಮರ್ದಮಾನಾಃ ಸಹ ಪಾರ್ಷತೇನ ॥೧೬॥

ಉತ್ತಮೌಜ, ಜನಮೇಜಯ, ಕ್ರುದ್ಧರಾದ ಯುಧಾಮನ್ಯು ಮತ್ತು ಶಿಖಂಡಿಗಳು ಧೃಷ್ಟದ್ಯುಮ್ನನೊಂದಿಗೆ ಕೂಡಿ ಬಾಣಗಳಿಂದ ಕರ್ಣನನ್ನು ಪೀಡಿಸುತ್ತ ಗರ್ಜಿಸಿದರು.

ತೇ ಪಂಚ ಪಾಂಚಾಲರಥಪ್ರವೀರಾ
ವೈಕರ್ತನಂ ಕರ್ಣಮಭಿದ್ರವಂತಃ ।

ತಸ್ಮಾದ್ ರಥಾಚ್ಚ್ಯಾವಯಿತುಂ ನ ಶೇಕು-
ರ್ಧೈರ್ಯಾತ್ ಕೃತಾತ್ಮಾನಮಿವೇಂದ್ರಿಯಾಣಿ ॥೧೭॥

ಆ ಐದುಮಂದಿ ಮಹಾವೀರರಾದ ಪಾಂಚಾಲರಥಿಕರು ಕರ್ಣನನ್ನು ಇದಿರಿಸುತ್ತ ಅವನನ್ನು ವಿರಥನನ್ನಾಗಿಸಲು ಶಕ್ತರಾಗಲಿಲ್ಲ. ಧೈರ್ಯದಿಂದ ಮನೋನಿಗ್ರಹ ಮಾಡಿಕೊಂಡವನನ್ನು ವಿಚಲಿತಗೊಳಿಸಲು ಇಂದ್ರಿಯಗಳು ಶಕ್ತವಾಗುವುದಿಲ್ಲ.

ತೇಷಾಂ ಧ್ವಜಾನ್ ವಾಜಿಸೂತಾನ್ ಪತಾಕಾ
ಸ್ತೂಣೇರ್ಧನೂಂಷಿ ಪ್ರಚಕರ್ತ ಬಾಣೈಃ ।
ತಾನ್ ಪಂಚಭಿಃ ಸ ತ್ವಹನತ್ ಪೃಷತ್ಕೈಃ
ಕರ್ಣಸ್ತತಃ ಸಿಂಹ ಇವೋನ್ನನಾದ ॥೧೮॥

ಕರ್ಣನು ಅವರ ಧ್ವಜ ಅಶ್ವ ಸಾರಥಿ ಪತಾಕೆ ಬತ್ತಳಿಕೆ ಬಿಲ್ಲುಗಳನ್ನು ಬಾಣಗಳಿಂದ ಕತ್ತರಿಸಿದ. ಅವರನ್ನೂ ಐದು ಬಾಣಗಳಿಂದ ಹೊಡೆದ. ಸಿಂಹದಂತೆ ಗರ್ಜಿಸಿದ.

ತಸ್ಯಾಸ್ಯತಸ್ತಾನಭಿನಿಘ್ನತಶ್ಚ
ಜ್ಯಾಬಾಣಹಸ್ತಸ್ಯ ಧನುಃಸ್ವನೇನ ।
ಸಾದ್ರಿದ್ರುಮಾ ಸ್ಯಾತ್ ಪೃಥಿವೀ ವಿಶೀರ್ಣೇ-
ತ್ಯತೀವ ಮತ್ವಾ ಜನತಾ ವ್ಯಷೀದತ್ ॥೧೯॥

ಕರ್ಣನು ಕೈಯನ್ನು ಹೆದೆ ಮತ್ತು ಬಾಣಗಳಲ್ಲಿಟ್ಟು ಬಾಣಗಳನ್ನೆಸೆದು ಹೊಡೆಯುವಾಗ ಧನುಸ್ಸಿನ ಶಬ್ದದಿಂದ ಪರ್ವತ ವೃಕ್ಷ ಸಹಿತವಾದ ಭೂಮಿಯೇ ಬಿರಿಯಬಹುದೆಂದು ಜನಸಮೂಹವು ಅತೀವ ವಿಷಾದಕ್ಕೊಳಗಾಯಿತು.

ಸ ಶಕ್ರಚಾಪಪ್ರತಿಮೇನ ಧನ್ವನಾ
ಭೃಶಾತತೇನಾಧಿರಥಿಃ ಶರಾನ್ ಸೃಜನ್ ।
ಬಭೌ ರಣೇ ದೀಪ್ತಮರೀಚಿಮಂಡಲೋ
ಯಥಾಂಶುಮಾಲೀ ಪರಿವೇಷವಾಂಸ್ತಥಾ ॥೨೦॥

ಬಿಲ್ಲನ್ನು ಚೆನ್ನಾಗಿ ಬಾಗಿಸಿ ಬಾಣಬಿಡುವಾಗ ಕರ್ಣನು ಇಂದ್ರಚಾಪದಂಥ ಬಿಲ್ಲಿನಿಂದ ಯುಕ್ತನಾಗಿ ರಣದಲ್ಲಿ, ಹೊಳೆಯುವ ತೇಜೋ ಮಂಡಲವುಳ್ಳ ಸೂರ್ಯನು ಪರಿವೇಷಗೊಂಡಂತೆ, ಶೋಭಿಸಿದ.

ಶಿಖಂಡಿನಂ ದ್ವಾದಶಭಿಃ ಪರಾಭಿನ-
ಚ್ಛಿತ್ತೈಃ ಶರೈಃ ಷಡ್ಭಿರಥೋತ್ತಮೌಜಸಮ್ ।
ತ್ರಿಭಿರ್ಯುಧಾಮನ್ಯುಮವಿಧ್ಯದಾಶುಗೈ-
ಸ್ತ್ರಿಭಿಸ್ತ್ರಿಭಿಃ ಸೋಮಕಪಾರ್ಷತಾತ್ಮಜೌ ॥೨೧॥

ಕರ್ಣನು ಶಿಖಂಡಿಯನ್ನು ಹನ್ನೆರಡು ಬಾಣಗಳಿಂದ ಹೊಡೆದ. ತೀಕ್ಷ್ಣವಾದ ಆರು ಬಾಣಗಳಿಂದ ಉತ್ತಮೌಜನನ್ನು ಹೊಡೆದ. ಮೂರು ಬಾಣಗಳಿಂದ ಯುಧಾಮನ್ಯುವನ್ನೂ ಮೂರು ಮೂರು ಬಾಣಗಳಿಂದ ಜನಮೇಜಯ ಧೃಷ್ಟದ್ಯುಮ್ನರನ್ನೂ ಹೊಡೆದ.

ಪರಾಜಿತಾಃ ಪಂಚಮಹಾರಥಾಸ್ತು ತೇ
ಮಹಾಹವೇ ಸೂತಸುತೇನ ಮಾರಿಷ ।
ನಿರುದ್ಯಮಾಸ್ತಸ್ಥುರಮಿತ್ರಮರ್ದನಾ
ಯಥೇಂದ್ರಿಯಾರ್ಥಾ ವಶಿನಾ ಪರಾಜಿತಾಃ ॥೨೨॥

ರಾಜನೆ, ಶತ್ರುನಾಶಕರಾದ ಐದು ಮಹಾರಥರೂ ರಣದಲ್ಲಿ ಕರ್ಣನಿಂದ ಪರಾಜಿತರಾಗಿ ಇಂದ್ರಿಯನಿಗ್ರಹ ಮಾಡಿಕೊಂಡಿರುವವನಿಂದ ಪರಾಜಿತವಾದ ಐದು ಇಂದ್ರಿಯವಿಷಯಪದಾರ್ಥಗಳಂತೆ ನಿಷ್ಕ್ರಿಯರಾದರು.

ನಿಮಜ್ಜತಸ್ತಾನಥ ಕರ್ಣಸಾಗರೇ
ವಿಪನ್ನನಾವೋ ವಣಿಜೋ ಯಥಾರ್ಣವೇ ।
ಉದ್ದಧ್ರಿರೇ ನೌಭಿರಿವಾರ್ಣವಾದ್ ರಥೈಃ
ಸುಕಲ್ಪಿತೈರ್ದ್ರೌಪದಿಜಾಃ ಸ್ವಮಾತುಲಾನ್ ॥೨೩॥

ಕರ್ಣಸಾಗರದಲ್ಲಿ ಮುಳುಗುತ್ತಿದ್ದ ತಮ್ಮ ಸೋದರಮಾವಂದಿರನ್ನು

ದ್ರೌಪದೀಪುತ್ರರು ತಮ್ಮ ಸಜ್ಜಾದ ರಥಗಳಿಂದ ಸಾಗರದಲ್ಲಿ ನೌಕೆ ಒಡೆದಾಗ ಮುಳುಗುವ ವರ್ತಕರನ್ನು ಬೇರೆ ನೌಕೆಗಳಿಂದ ಒಯ್ಯುವಂತೆ ದೂರಕ್ಕೆ ಒಯ್ದರು.

ತತಃ ಶಿನೀನಾಮೃಷಭಃ ಶಿತೈಃ ಶರೈ-
ರ್ನಿಕೃತ್ತ್ಯ ಕರ್ಣಪ್ರಹಿತಾನಿಷೂನ್ ಬಹೂನ್ ।
ವಿದಾರ್ಯ ಕರ್ಣಂ ನಿಶಿತೈರಯಸ್ಮಯೈ-
ಸ್ತವಾತ್ಮಜಂ ಜ್ಯೇಷ್ಠಮವಿಧ್ಯದಷ್ಟಭಿಃ ॥೨೪॥

ಬಳಿಕ ಸಾತ್ಯಕಿಯು ತೀಕ್ಷ್ಣವಾದ ಬಾಣಗಳಿಂದ ಕರ್ಣನೆಸೆದ ಬಹುಬಾಣಗಳನ್ನು ಕತ್ತರಿಸಿ ತೀಕ್ಷ್ಣವಾದ ಕಬ್ಬಿಣದ ಬಾಣಗಳಿಂದ ಕರ್ಣನನ್ನು ಹೊಡೆದು ನಿನ್ನ ಹಿರಿಮಗನನ್ನೂ ಎಂಟು ಬಾಣಗಳಿಂದ ಹೊಡೆದ.

ಕೃಪೋಽಥ ಭೋಜಶ್ಚ ತವಾತ್ಮಜಸ್ತಥಾ
ಸ್ವಯಂ ಚ ಕರ್ಣೋ ನಿಶಿತೈರತಾಡಯತ್ ।
ಸ ತೈಶ್ಚತುರ್ಭಿರ್ಯುಯುಧೇ ಯದೂತ್ತಮೋ
ದಿಗೀಶ್ವರೈರ್ದೈತ್ಯಪತಿರ್ಯಥಾ ತಥಾ ॥೨೫॥

ಕೃಪ ಕೃತವರ್ಮ ದುರ್ಯೋಧನ ಮತ್ತು ಸ್ವತಃಕರ್ಣನೂ ತೀಕ್ಷ್ಣವಾದ ಬಾಣಗಳಿಂದ ಸಾತ್ಯಕಿಯನ್ನು ಹೊಡೆದ. ದೈತ್ಯರಾಜ ಹಿರಣ್ಯಕಶಿಪು ನಾಲ್ವರು ದಿಕ್ಪಾಲರೊಡನೆ ಹೋರಾಡಿದಂತೆ ಯದುಶ್ರೇಷ್ಠನಾದ ಸಾತ್ಯಕಿಯೂ ಆ ನಾಲ್ಕು ಯೋಧರೊಂದಿಗೆ ಹೋರಾಡಿದ.

ಸಮಾಯತೇನೇಷ್ವಸನೇನ ಕೂಜತಾ
ಮಹಾಸ್ವನೇನಾಮಿತಬಾಣವರ್ಷಿಣಾ ।
ಬಭೂವ ದುರ್ಧರ್ಷತರಃ ಸ ಸಾತ್ಯಕಿಃ
ಶರನ್ನಭೋಮಧ್ಯಗತೋ ಯಥಾ ರವಿಃ ॥೨೬॥

ಚೆನ್ನಾಗಿ ಸೆಳೆದ, ಬಹುಬಾಣಗಳ ಮಳೆಗರೆವ, ಶಬ್ದಮಾಡುವ ಬಿಲ್ಲಿನಿಂದ ಯುಕ್ತನಾಗಿ, ಮಹಾಗರ್ಜನ ಮಾಡುತ್ತಿದ್ದ ಸಾತ್ಯಕಿಯು, ಶರತ್ಕಾಲದ ಆಕಾಶ ಮಧ್ಯದಲ್ಲಿರುವ ಸೂರ್ಯನಂತೆ ಯಾರಿಗೂ ಮಣಿಸಲಾಗದವನಾದ.

ಪುನಃ ಸಮಾಸಾದ್ಯ ರಥಾನ್ ಸುದಂಸಿತಾಃ
ಶಿನಿಪ್ರವೀರಂ ಜುಗುಪುಃ ಪರಂತಪಾಃ ।
ಸಮೇತ್ಯ ಪಾಂಚಲರಥಾ ಮಹಾರಣೇ
ಮರುದ್ಗಣಾಃ ಶಕ್ರಮಿವಾರಿನಿಗ್ರಹೇ ॥೨೭॥

ಶತ್ರುನಾಶಕರಾದ ಪಾಂಚಾಲರಥಯೋಧರು ಪುನಃ ಸುಸಜ್ಜಿತರಾಗಿ ರಥಗಳನ್ನು ಏರಿಬಂದು ಒಟ್ಟಿಗೆ ಸೇರಿ ಮಹಾರಣದಲ್ಲಿ ಸಾತ್ಯಕಿಯನ್ನು ಶತ್ರುನಿಗ್ರಹದಲ್ಲಿ ಇಂದ್ರನನ್ನು ಮರುದ್ಗಣಗಳು ರಕ್ಷಿಸಿದಂತೆ ರಕ್ಷಿಸಿದರು.

ತತೋऽಭವದ್ ಯುದ್ಧಮತೀವ ದಾರುಣಂ
ತವಾಹಿತಾನಾಂ ತವ ಸೈನಿಕೈಃ ಸಹ ।
ರಥಾಶ್ವಮಾತಂಗವಿನಾಶನಂ ತಥಾ
ಯಥಾ ಸುರಾಣಾಮಸುರೈಃ ಪುರಾಭವತ್ ॥೨೮॥

ಆಗ ನಿನ್ನ ಶತ್ರುಗಳಿಗೆ ನಿನ್ನ ಸೈನಿಕರೊಂದಿಗೆ ರಥ ಅಶ್ವ ಗಜನಾಶಕವಾದ ಅತ್ಯಂತ ದಾರುಣವಾದ ಯುದ್ಧ ಹಿಂದೆ ಸುರರಿಗೆ ಅಸುರರೊಂದಿಗೆ ಯುದ್ಧ ನಡೆದಂತೆ ನಡೆಯಿತು.

ರಥದ್ವಿಪಾ ವಾಜಿಪದಾತಯೋऽಪಿ ವಾ
ಭ್ರಮಂತಿ ನಾನಾವಿಧಶಸ್ತ್ರವೇಷ್ಟಿತಾಃ ।
ಪರಸ್ಪರೇಣಾಭಿಹತಾಶ್ಚ ಚಸ್ಖಲು-
ರ್ನಿನೇದುರಾರ್ತಾ ವ್ಯಸವೋಪತಂತ ಚ ॥೨೯॥

ರಥ ಗಜ ಅಶ್ವ ಪದಾತಿಗಳು ನಾನಾವಿಧವಾದ ಶಸ್ತ್ರಗಳಿಂದ ಮುಚ್ಚಿದ್ದು ಪಲಾಯನದ ಅವಸರದಲ್ಲಿ ಪರಸ್ಪರ ತಗುಲಿಕೊಂಡು ಎಡವಿ ಬೀಳುತ್ತ ಆರ್ತರಾಗಿ ಕೂಗುತ್ತ ಅಲ್ಲಲ್ಲೆ ಸುತ್ತಿದರು. ಅಸುನೀಗಿ ಬಿದ್ದರು.

ತಥಾ ಗತೇ ಭೀಮಮಭೀಸ್ತವಾತ್ಮಜಃ
ಸಸಾರ ರಾಜಾವರಜಃ ಕಿರನ್ ಶರೈಃ ।

ತಮಭ್ಯಧಾವತ್ ತ್ವರಿತೋ ವೃಕೋದರೋ
ಮಹಾರುರುಂ ಸಿಂಹ ಇವಾಭಿಪೇತಿವಾನ್ ॥೩೦॥

ಯುದ್ಧ ಹಾಗೇ ನಡೆಯುತ್ತಿರಲು ನಿನ್ನ ಮಗ ದುಃಶಾಸನನು ನಿರ್ಭೀತಿಯಿಂದ ಭೀಮನನ್ನು ಬಾಣಗಳಿಂದ ಮುಚ್ಚುತ್ತ ಸಮೀಪಿಸಿದ. ದೊಡ್ಡ ಜಿಂಕೆಯನ್ನು ಸಿಂಹವು ಆಕ್ರಮಿಸುವಂತೆ ಭೀಮನು ವೇಗವಾಗಿ ದುಃಶಾಸನನನ್ನು ಆಕ್ರಮಿಸಿದ.

ತತಸ್ತಯೋರ್ಯುದ್ಧಮತೀತಮಾನುಷಂ
ಪ್ರದೀವ್ಯತೋಃ ಪ್ರಾಣದುರೋದರೇऽಭವತ್ ।
ಪರಸ್ಪರೇಣಾಭಿನಿವಿಷ್ಟರೋಷಯೋ-
ರುದಗ್ರಯೋಃ ಶಂಬರಶಕ್ರಯೋರ್ಯಥಾ ॥೩೧॥

ಪ್ರಚಂಡರಾದ ಭೀಮ–ದುಃಶಾಸನರು ಪರಸ್ಪರ ಆಗ್ರಹಯುಕ್ತವಾದ ರೋಷದಿಂದ ಕೂಡಿದ್ದರು. ಪ್ರಾಣವನ್ನು ಪಣಕ್ಕಿಟ್ಟು ಯುದ್ಧದ ಜೂಜಾಡುತ್ತಿದ್ದರು. ಶಂಬರಾಸುರ ಮತ್ತು ದೇವೇಂದ್ರರಿಗೆ ನಡೆದಂತಹ ಅತಿಮಾನುಷವಾದ ಯುದ್ಧ ಅವರೊಳಗೆ ನಡೆಯಿತು.

ಶರೈಃ ಶರೀರಾಂತಕರೈಃ ಸುತೇಜನೈ-
ರ್ನಿಜಘ್ನತುಸ್ತಾವಿತರೇತರಂ ಭೃಶಮ್ ।
ಸಕೃತ್ಪ್ರಭಿನ್ನಾವಿವ ವಾಶಿತಾಂತರೇ
ಮಹಾಗಜೌ ಮನ್ಮಥಸಕ್ತಚೇತಸೌ ॥೩೨॥

ಬೆದೆಗೆ ಬಂದ ಹೆಣ್ಣಾನೆಯ ಬಳಿಯಲ್ಲಿ ಕಾಮಾಸಕ್ತಮನಸಿನ ಆಗತಾನೆ ಮದಿಸಿದ ಎರಡು ಮದ್ದಾನೆಗಳಂತೆ, ಭೀಮ–ದುಃಶಾಸನರು ಶರೀರನಾಶಕವಾದ ತೀಕ್ಷ್ಣವಾದ ಬಾಣಗಳಿಂದ ಪರಸ್ಪರವಾಗಿ ಬಲು ಜೋರಾಗಿ ಹೊಡೆದರು.

ತವಾತ್ಮಜಸ್ಯಾಥ ವೃಕೋದರಸ್ತ್ವರನ್
ಧನುಃ ಕ್ಷುರಾಭ್ಯಾಂ ಧ್ವಜಮೇವ ಚಾಚ್ಛಿನತ್ ।
ಲಲಾಟಮಪ್ಯಸ್ಯ ಬಿಭೇದ ಪತ್ರಿಣಾ
ಶಿರಶ್ಚ ಕಾಯಾತ್ ಪ್ರಜಹಾರ ಸಾರಥೇಃ ॥೩೩॥

ಭೀಮನು ಬೇಗನೆ ನಿನ್ನ ಮಗನ ಧನುಸ್ಸನ್ನೂ ಧ್ವಜವನ್ನೂ ಎರಡು ಕ್ಷುರಗಳಿಂದ ಬೇಗನೆ ಕತ್ತರಿಸಿದ. ಅವನ ಹಣೆಗೂ ಬಾಣದಿಂದ ಹೊಡೆದ. ಸಾರಥಿಯ ಶರೀರದಿಂದ ತಲೆಯನ್ನು ಉರುಳಿಸಿದ.

ಸ ರಾಜಪುತ್ರೋಽನ್ಯದವಾಪ್ಯ ಕಾರ್ಮುಕಂ
ವೃಕೋದರಂ ದ್ವಾದಶಭಿಃ ಪರಾಭಿನತ್ ।
ಸ್ವಯಂ ನಿಯಚ್ಛಂಸ್ತುರಗಾನಜಿಹ್ಮಗೈಃ
ಶರೈಶ್ಚ ಭೀಮಂ ಪುನರಭ್ಯವೀವೃಷತ್ ॥೩೪॥

ದುಃಶಾಸನನು ಇನ್ನೊಂದು ಬಿಲ್ಲನ್ನು ಎತ್ತಿಕೊಂಡು ಹನ್ನೆರಡು ಬಾಣಗಳಿಂದ ಭೀಮನನ್ನು ಹೊಡೆದ. ತಾನೇ ಕುದುರೆಗಳನ್ನು ನಡೆಸುತ್ತ ನೇರವಾಗಿ ಹೋಗುವ ಬಾಣಗಳಿಂದ ಪುನಃ ಭೀಮನ ಮೇಲೆ ಮಳೆಗರೆದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಭೀಮ-ದುಃಶಾಸನಯುದ್ಧೇ ಏಕೋನಾಶೀತಿತಮೋಧ್ಯಾಯಃ ॥೭೯॥

❖

ಮಹಾಭಾರತತಾತ್ಪರ್ಯನಿರ್ಣಯ

ಪುನಶ್ಚ ನಿಘ್ನಂತಮರಿಪ್ರವೀರಾನ್
ವಿದ್ರಾವಯಂತಂ ಚ ನಿಜಾಂ ವರೂಥಿನೀಮ್ ।
ಸಸಾರ ದುಃಶಾಸನ ಆತ್ತಧನ್ವಾ
ಭೀಮೋಪಿ ತಂ ಸಿಂಹ ಇವಾಭಿಪೇದಿವಾನ್ ॥ ೧೪೩ ॥

ಪುನಃ ಶತ್ರುವೀರರನ್ನು ಕೊಲ್ಲುತ್ತ ತನ್ನ ಸೇನೆಯನ್ನು ಓಡಿಸುತ್ತಿದ್ದ ಭೀಮನನ್ನು ಧನುರ್ಧಾರಿ ದುಃಶಾಸನ ಸಮೀಪಿಸಿದ. ಭೀಮ ಅವನನ್ನು ಸಿಂಹದಂತೆ ಆಕ್ರಮಿಸಿದ.

ತಂ ರೂಕ್ಷವಾಚೋ ಮುಹುರರ್ಪಯಂತಂ
ವಿಧಾಯ ಭೀಮೋ ವಿರಥಂ ಕ್ಷಣೇನ ।
ಪ್ರಗೃಹ್ಯ ಭೂಮೌ ವಿನಿಪಾತ್ಯ ವಕ್ಷೋ
ವಿದಾರಯಾಮಾಸ ಗದಾಪ್ರಹಾರತಃ ॥ ೧೪೪॥

ಪುನಃ ಪುನಃ ಕೆಟ್ಟ ಮಾತುಗಳನ್ನಾಡುತ್ತಿದ್ದ ದುಃಶಾಸನನನ್ನು ಭೀಮ ಕ್ಷಣದಲ್ಲಿ ವಿರಥನನ್ನಾಗಿ ಮಾಡಿ ಹಿಡಿದು ನೆಲದಲ್ಲಿ ಕೆಡವಿ ಗದಾಪ್ರಹಾರದಿಂದ ಎದೆಯನ್ನು ಸೀಳಿದ.

ಆಕ್ರಮ್ಯ ಕಂಠಂ ಚ ಪದೋದರೇಽಸ್ಯ
ನಿವಿಶ್ಯ ಪಶ್ಯನ್ ಮುಖಮಾತ್ತರೋಷಃ ।
ವಿಕೋಶಮಾಕಾಶನಿಭಂ ವಿಧಾಯ
ಮಹಾಸಿಮಸ್ಯೋರಸಿ ಸಂಚಖಾನ ॥೧೪೫॥

ಭೀಮ ದುಃಶಾಸನನ ಗಂಟಲನ್ನು ಕಾಲುಗಳಿಂದ ಒತ್ತಿ ಹೊಟ್ಟೆಯ ಮೇಲೆ ಕುಳಿತು ಕೋಪಾವಿಷ್ಟನಾಗಿ ಮುಖವನ್ನೆ ನೋಡುತ್ತ ಆಕಾಶದಂತೆ ನೀಲವಾಗಿರುವ ದೊಡ್ಡ ಖಡ್ಗವನ್ನು ಒರೆಯಿಂದ ತೆಗೆದು ಅವನೆದೆಯಲ್ಲಿ ತಿವಿದ.

ಕೃತ್ವಾಽಸ್ಯ ವಕ್ಷಸ್ಯುರುಸತ್ತಟಾಕಂ
ಪಪೌ ನಿಕಾಮಂ ತೃಷಿತೋಽಮೃತೋಪಮಮ್ ।
ತಚ್ಛೋಣಿತಾಂಭೋ ಭ್ರಮದಕ್ಷಮೇನಂ
ಸಂಸ್ಮಾರಯಾಮಾಸ ಪುರಾಕೃತಾನಿ ॥೧೪೬॥

ಭೀಮ ದುಃಶಾಸನನ ಎದೆಯಲ್ಲಿ ದೊಡ್ಡ ನೆತ್ತರ ಮಡುವನ್ನು ನಿರ್ಮಿಸಿ ಬಾಯಾರಿದವ ಅಮೃತವನ್ನೆಂಬಂತೆ ನೆತ್ತರನ್ನು ಯಥೇಚ್ಛ ಪಾನ ಮಾಡಿದ. ದುಃಶಾಸನನ ಕಣ್ಣು ತಿರುಗುತ್ತಿದ್ದಂತೆಯೆ ಅವನು ಹಿಂದೆ ಮಾಡಿದ್ದ ದುಷ್ಕರ್ಮ ಗಳನ್ನು ನೆನಪಿಸಿದ.

ವಾಕ್ಸಾಯಕಾಂಶ್ಚಾಸ್ಯ ಪುರಾ ಸಮರ್ಪಿತಾನ್
ಸಂಸ್ಮಾರಯಾಮಾಸ ಪುನಃಪುನರ್ಭೃಶಮ್ ।
ದಂತಾಂತರಂ ನ ಪ್ರವಿವೇಶ ತಸ್ಯ
ರಕ್ತಂ ಹ್ಯಪೇಯಂ ಪುರುಷಸ್ಯ ಜಾನತಃ ॥೧೪೭॥

ಭೀಮ ಹಿಂದೆ ದುಃಶಾಸನನಾಡಿದ್ದ ಬಾಣಗಳಂಥ ಚುಚ್ಚು ಮಾತುಗಳನ್ನು ಪುನಃ ಪುನಃ ಚೆನ್ನಾಗಿ ನೆನಪಿಸಿದ. ಮಾನವನ ರಕ್ತ ಪಾನಯೋಗ್ಯವಲ್ಲವೆಂದು ಭೀಮ ತಿಳಿದಿದ್ದುದರಿಂದ ಅವನ ಹಲ್ಲಿನ ಒಳಗೆ ದುಃಶಾಸನನ ರಕ್ತ ಪ್ರವೇಶಿಸಿರಲಿಲ್ಲ.

ತಥಾಪಿ ಶತ್ರುಪ್ರತಿಭೀಷಣಾಯ
ಪಪಾವಿವಾऽऽಸ್ವಾದ್ಯ ಪುನಃಪುನರ್ಭೃಶಮ್ ।
ಸ್ಮರನ್ ನೃಸಿಂಹಂ ಭಗವಂತಮೀಶ್ವರಂ
ಸ ಮನ್ಯುಸೂಕ್ತಂ ಚ ದದರ್ಶ ಭಕ್ತ್ಯಾ ॥೧೪೮॥

ಆದರೂ ಶತ್ರುಗಳಿಗೆ ಭಯ ಉಂಟುಮಾಡುವುದಕ್ಕಾಗಿ ಭೀಮ ದುಃಶಾಸನನ ರಕ್ತವನ್ನು ಪುನಃ ಪುನಃ ಆಸ್ವಾದಿಸಿ ಯಥೇಚ್ಛ ಕುಡಿದಂತೆ ತೋರಿಕೊಂಡ. ಜಗದೊಡೆಯನಾದ ಭಗವಾನ್ ನೃಸಿಂಹನನ್ನು ಭಕ್ತಿಯಿಂದ ನೆನೆಯುತ್ತ ಮನ್ಯುಸೂಕ್ತವನ್ನು ಕಂಡುಕೊಂಡ.

ಯಸ್ತೇ ಮನ್ಯೋ ಇತ್ಯತೋ ನಾರಸಿಂಹಂ
ಸೋಮಂ ತಸ್ಮೈ ಚಾರ್ಪಯಚ್ಛೋಣಿತಾಖ್ಯಮ್ ।
ಯುದ್ಧಾಖ್ಯಯಜ್ಞೇ ಸೋಮಬುದ್ಧ್ಯಾರಿವಕ್ಷ
ಇಹೇತಿ ಸಾಮ್ನಾ ಗದಯಾ ವಿಭಿಂದನ್ ॥೧೪೯॥

ಮನ್ಯುನಾಮಕ ನೃಸಿಂಹ ದೇವತಾಕವಾದ 'ಯಸ್ತೇ ಮನ್ಯೋ' ಎಂಬ ಮನ್ಯು ಸೂಕ್ತವನ್ನು ಕಂಡು ನೆತ್ತರೆಂಬ ಸೋಮರಸವನ್ನು ಯುದ್ಧಯಜ್ಞದಲ್ಲಿ ಅವನಿಗೆ ಭೀಮ ಅರ್ಪಿಸಿದ. ಆಗ ಶತ್ರುವಿನ ಎದೆಯನ್ನೆ ಸೋಮಲತೆಯೆಂದು ತಿಳಿದು 'ಇಹ' ಎಂಬ ಸ್ತೋಭಾಕ್ಷರಯುಕ್ತವಾದ ಸಾಮಮಂತ್ರದಿಂದ ಗದೆಯಿಂದ ಜಜ್ಜಿದ.

ಉವಾಚ ವಾಚಂ ಪುರುಷಪ್ರವೀರಃ
ಸತ್ಯಾಂ ಪ್ರತಿಜ್ಞಾಂ ಲೋಕಮಧ್ಯೇ ವಿಧಾಯ ।
ಯಾಃ ಸಪತಯಸ್ತಾ ಅಪತಯೋ ಹಿ ಜಾತಾ
ಯಾ ಸಾऽಪತಿಃ ಸಾ ಸಪತಿಶ್ಚ ಜಾತಾ ॥೧೫೦॥

ಜೀವೋತ್ತಮನಾದ ಭೀಮಸೇನ ತನ್ನ ಪ್ರತಿಜ್ಞೆಯನ್ನು ಲೋಕದ ಮಧ್ಯದಲ್ಲಿ ಸತ್ಯವಾಗಿಸಿ ಈ ಮಾತನ್ನು ಆಡಿದ: 'ಯಾವ ಸ್ತ್ರೀಯರು ಹಿಂದೆ ಪತಿಯುಕ್ತ ರು ಆಗಿದ್ದರೋ ಅವರಿಂದು ಪತಿರಹಿತರಾದರು. ಯಾವಳು ಹಿಂದೆ ಪತಿರಹಿತಳೆನಿಸಿ ದ್ದಳೋ ಅವಳು ಇಂದು ಪತಿಯುಕ್ತಳೆನಿಸಿಕೊಂಡಳು'

ಪಶ್ಯಂತು ಚಿತ್ರಾಂ ಪರಮಸ್ಯ ಶಕ್ತಿಂ
ಯೇ ವೈ ತಿಲಾಃ ಷಂಢತಿಲಾ ಬಭೂವುಃ ।
ಏನಂ ಗೃಹೀತಂ ಚ ಮಯಾ ಯದೀಹ
ಕಶ್ಚಿತ್ ಪುಮಾನ್ ಮೋಚಯತು ಸ್ವವೀರ್ಯಾತ್ ॥೧೫೧೧॥

ಸರ್ವೋತ್ತಮನ ವಿಚಿತ್ರ ಶಕ್ತಿಯನ್ನು ಕಾಣಿರಿ. ಯಾರು ಹಿಂದೆ ಗಟ್ಟಿ ಎಳ್ಳು ಕಾಳೆನಿಸಿದ್ದರೋ ಅವರು ಈಗ ಜೊಳ್ಳುಕಾಳು ಎನಿಸಿದ್ದಾರೆ. ಯಾರು ಹಿಂದೆ ಜೊಳ್ಳುಕಾಳು ಎನಿಸಿದ್ದರೋ ಅವರು ಈಗ ಗಟ್ಟಿ ಕಾಳುಗಳೆನಿಸಿದ್ದಾರೆ. ಜೊಳ್ಳು ಎಳ್ಳೆನಿಸಿದ್ದ ನಾನೀಗ ದುಃಶಾಸನನನ್ನು ಹಿಡಿದುಕೊಂಡಿದ್ದೇನೆ. ಗಟ್ಟಿ ಎಳ್ಳು, ಗಂಡು ಮನುಷ್ಯ ಯಾರಾದರೂ ಇರುವುದಾದರೆ ತನ್ನ ಪರಾಕ್ರಮದಿಂದ ಈತನನ್ನು ಬಿಡಿಸಿಕೊಳ್ಳಲಿ.

ಇತಿ ಬ್ರುವಾಣಃ ಪುನರೇವ ರಕ್ತಂ
ಪಪೌ ಸುಧಾಂ ದೇವವರೋ ಯಥಾ ದಿವಿ ।
ಪುನಶ್ಚ ಸಪ್ರಾಣಮಮುಂ ವಿಸೃಜ್ಯ
ನದನ್ ನನರ್ತಾರಿಬಲೇ ನಿರಾಯುಧಃ ॥೧೫೨॥

ಹೀಗೆ ಹೇಳುತ್ತ ಸ್ವರ್ಗಲೋಕದಲ್ಲಿ ದೇವೇಂದ್ರ ಅಮೃತಪಾನ ಮಾಡುವಂತೆ ಭೀಮ ಪುನಃ ಪುನಃ ರಕ್ತಪಾನ ಮಾಡಿದ. ಇನ್ನೂ ಉಸಿರಾಡುತ್ತಲೆ ಇದ್ದ ದುಃಶಾಸನನನ್ನು ಬಿಟ್ಟು ನಿರಾಯುಧನಾಗಿ ಸಿಂಹನಾದ ಮಾಡುತ್ತ ಶತ್ರುಸೈನ್ಯದ ನಡುವೆ ಕುಣಿದಾಡಿದ.

ಪ್ರತ್ಯನೃತ್ಯನ್ ಪುರಾ ಯೇಽಸ್ಮಾನ್ ಪುನರ್ಗೌರಿತಿ ಗೌರಿತಿ ।
ತಾನ್ ವಯಂ ಪ್ರತಿನೃತ್ಯಾಮಃ ಪುನರ್ಗೌರಿತಿ ಗೌರಿತಿ ॥೧೫೩॥

ಹಿಂದೆ ಯಾರು ನಮ್ಮನ್ನು ಗೂಳಿ ಗೂಳಿ ಎಂದು ಮತ್ತೆ ಮತ್ತೆ ಅಣಕಿಸಿ ಕುಣಿದರೋ ಅವರನ್ನು ಈಗ ನಾವು ಗೂಳಿ ಗೂಳಿ ಎಂದು ಮತ್ತೆ ಮತ್ತೆ ಅಣಕಿಸಿ ಕುಣಿದಾಡುವೆವು.

ಇತಿ ಬ್ರುವನ್ ನೃತ್ಯಮಾನೋರಿಮಧ್ಯ
ಆಸ್ಫೋಟಯನ್ ಶತ್ರುಗಣಾನಜೋಹವೀತ್ ।

ಶಶಾಕ ಚ ದ್ರಷ್ಟುಮಮುಂ ನ ಕಶ್ಚಿದ್
ವೈಕರ್ತನದ್ರೌಣಿಸುಯೋಧನಾದಿಷು ॥೧೫೪॥

ಹೀಗೆ ಹೇಳುತ್ತ ಶತ್ರುಗಳ ನಡುವೆ ಕುಣಿದಾಡುತ್ತ ತೊಡೆ ತಟ್ಟಿಕೊಳ್ಳುತ್ತ ಭೀಮಸೇನ ಶತ್ರುಸಮೂಹಗಳನ್ನು ಯುದ್ಧಕ್ಕೆ ಕರೆದ. ಕರ್ಣ ಅಶ್ವತ್ಥಾಮ ದುರ್ಯೋಧನ ಮುಂತಾದವರಲ್ಲಿ ಯಾವನೊಬ್ಬನೂ ಭೀಮನನ್ನು ನೋಡಲೂ ಶಕ್ತನಾಗಲಿಲ್ಲ.

ಭಯಾಚ್ಚ ಕರ್ಣಸ್ಯ ಪಪಾತ ಕಾರ್ಮುಕಂ
ನಿಮೀಲಯಾಮಾಸ ತದಾಽಕ್ಷಿಣೀ ಚ ।
ಸಂಬೋಧಿತೋ ಮದ್ರರಾಜೇನ ಯುದ್ಧೇ
ಸ್ಥಿತಃ ಕಥಂಚಿತ್ ಸ ತು ಪಾರ್ಥಭಾಗಃ ॥೧೫೫॥

ಆಗ ಭಯದಿಂದ ಕರ್ಣನ ಬಿಲ್ಲು ಬಿದ್ದಿತು. ಆತ ಕಣ್ಣುಗಳನ್ನು ಮುಚ್ಚಿಕೊಂಡ. ಶಲ್ಯ ಎಚ್ಚರಿಸಿದಾಗ ಅರ್ಜುನನ ಪಾಲಿಗೆ ಎಂದೇ ಮೀಸಲಾಗಿದ್ದ ಕರ್ಣ ಬಲು ಕಷ್ಟದಿಂದ ಯುದ್ಧದಲ್ಲಿ ಸ್ಥಿರನಾಗಿ ನಿಂತ.

ದ್ರೌಣಿರ್ವಿಹಾಯೈನಮಪಾಜಗಾಮ
ದೂರಂ ತದಾ ಭೀಮಸೇನೋ ಜಗಾದ ।
ಪೀತಃ ಸೋಮೋ ಯುದ್ಧಯಜ್ಞೇ ಮಯಾಽದ್ಯ
ವಧ್ಯಃ ಪಶುರ್ಮೇ ಹರಯೇ ಸುಯೋಧನಃ ॥೧೫೬॥

ಅಶ್ವತ್ಥಾಮ ಭೀಮನನ್ನು ಬಿಟ್ಟೇ ದೂರ ನಡೆದ. ಆಗ ಭೀಮ ನುಡಿದ, 'ಯುದ್ಧ ಯಜ್ಞದಲ್ಲಿ ಸೋಮಪಾನ ಮಾಡಿದ್ದೇನೆ. ಇನ್ನು ಶ್ರೀಹರಿಗಾಗಿ ದುರ್ಯೋಧನನೆಂಬ ಪಶುವನ್ನು ನಾನು ಕೊಲ್ಲಬೇಕು.'

ಇತಿ ಬ್ರುವನ್ ಮೃತಮುತ್ಸೃಜ್ಯ ಶತ್ರುಂ
ದುರ್ಯೋಧನಂ ಚಾಶು ರುಷಾಽಭಿದುದ್ರುವೇ ।
ಆಯಾಂತಮೀಕ್ಷ್ಯೈವ ತಮುಗ್ರಪೌರುಷಂ
ದುದ್ರಾವ ಭೀತಃ ಸ ಸುಯೋಧನೋ ಭೃಶಮ್ ॥೧೫೭॥

ಹೀಗೆ ಹೇಳುತ್ತ ಭೀಮ ಮೃತನಾದ ದುಃಶಾಸನನನ್ನು ಬಿಟ್ಟು ದುರ್ಯೋಧನನನ್ನು ಬೇಗನೆ ಕೋಪದಿಂದ ಬೆನ್ನಟ್ಟಿದ. ಭಯಂಕರ ಪೌರುಷಶಾಲಿಯಾದ ಆ

ಭೀಮ ಬರುವುದನ್ನು ಕಂಡೇ ದುರ್ಯೋಧನ ಬಲುಭೀತನಾಗಿ ಪಲಾಯನ ಮಾಡಿದ.

ಬಲದ್ವಯಂ ಚಾಪಯಯೌ ವಿಹಾಯ
ಭಯಾದ್ ಭೀಮಂ ಕೃಷ್ಣಪಾರ್ಥೌ ವಿನೈವ ।
ಆಯೋಧನಂ ಶೂನ್ಯಮಭೂನ್ಮುಹೂರ್ತಂ
ನನರ್ತ ಭೀಮೋ ವ್ಯಾಘ್ರಪದೇನ ಹರ್ಷಾತ್ ॥೧೫೮॥

ಕೃಷ್ಣಾರ್ಜುನರ ಹೊರತು ಎರಡೂ ಸೈನ್ಯ ಭಯದಿಂದ ಭೀಮನನ್ನು ಬಿಟ್ಟು ಪಲಾಯನ ಮಾಡಿತು. ಒಂದು ಮುಹೂರ್ತಕಾಲ ರಣರಂಗ ಶೂನ್ಯವಾಯಿತು. ಭೀಮ ಆನಂದದಿಂದ ಎರಡೂ ಕೈಗಳನ್ನು ನೆಲಕ್ಕೆ ಊರಿ ಹುಲಿಯಂತೆ ಹೆಜ್ಜೆ ಹಾಕುತ್ತ ಕುಣಿದ.

ಸಂಕಲ್ಪ್ಯ ಶತ್ರೂನ್ ಗೋವದೇವಾಜಿಮಧ್ಯೇ
ಶಾರ್ದೂಲವತ್ ತಚ್ಚರಿತಂ ನಿಶಾಮ್ಯ ।
ಜಹಾಸ ಕೃಷ್ಣಶ್ಚ ಧನಂಜಯಶ್ಚ
ಶಶಂಸತುಶ್ಚೈನಮತಿಪ್ರಹೃಷ್ಟೌ ॥೧೫೯॥

ಭೀಮ ರಣರಂಗದ ನಡುವೆ ಶತ್ರುಗಳನ್ನು ಪಶುಗಳಂತೆ ಭಾವಿಸಿ ಹುಲಿಯಂತೆ ಕುಣಿದುದನ್ನು ಕಂಡು ಕೃಷ್ಣ ನಕ್ಕ. ಅರ್ಜುನನೂ ನಕ್ಕ. ಇಬ್ಬರೂ ಬಹಳ ಸಂತುಷ್ಟರಾಗಿ ಭೀಮನನ್ನು ಹೊಗಳಿದರು.

❖ ❖ ❖

ಎಂಬತ್ತನೆಯ ಅಧ್ಯಾಯ

ಭೀಮನಿಂದ ದುಃಶಾಸನನ ರಕ್ತಪಾನ. ಯುಧಾಮನ್ಯು ಚಿತ್ರಸೇನನನ್ನು ವಧಿಸಿದ.

ಸಂಜಯಃ

ತತ್ರಾಕರೋದ್ ದುಷ್ಕರಂ ರಾಜಪುತ್ರೋ
ದುಃಶಾಸನಸ್ತುಮುಲೇ ಯುಧ್ಯಮಾನಃ ।

ಚಿಚ್ಛೇದ ಭೀಮಸ್ಯ ಧನುಃ ಕ್ಷುರೇಣ
ಷಡ್ಭಿಃ ಶರೈಃ ಸಾರಥಿಮಪ್ಯವಿಧ್ಯತ್ ॥೧॥

ಸಂಜಯ ನುಡಿದ— ರಾಜಕುಮಾರ ದುಃಶಾಸನನು ದೊಡ್ಡ ಯುದ್ಧದಲ್ಲಿ ಹೋರಾಡುತ್ತ ದುಷ್ಕರವಾದ ಕರ್ಮವನ್ನು ಮಾಡಿದ. ಭೀಮನ ಧನುಸ್ಸನ್ನು ಕ್ಷುರದಿಂದ ಕಡಿದ. ಆರು ಬಾಣಗಳಿಂದ ಸಾರಥಿಯನ್ನು ಹೊಡೆದ.

ತತಃ ಕ್ರುದ್ಧೋ ಭೀಮಸೇನಸ್ತರಸ್ವೀ
ಶಕ್ತಿಂ ಚೋಗ್ರಾಂ ಪ್ರಾಹಿಣೋತ್ ತೇ ಸುತಾಯ ।
ತಾಮಾಪತಂತೀಂ ಸಹಸಾತಿಘೋರಾಂ
ದೃಷ್ಟ್ವಾ ಸುತಸ್ತೇ ಜ್ವಲಿತಾಮಿವೋಲ್ಕಾಂ ॥೨॥

ಆಕರ್ಣಪೂರ್ಣೈರಿಷುಭಿರ್ಮಹಾತ್ಮಾ
ಚಿಚ್ಛೇದ ಪುತ್ರೋ ದಶಭಿಃ ಪೃಷತ್ಕೈಃ ।
ದೃಷ್ಟ್ವಾ ತು ತತ್ಕರ್ಮ ಕೃತಂ ಸುದುಷ್ಕರಂ
ಪ್ರಾಪೂಜಯನ್ ಸರ್ವಯೋಧಾಃ ಪ್ರಹೃಷ್ಟಾಃ ॥೩॥

ಕ್ರುದ್ಧನಾದ ಭೀಮಸೇನ ಭಯಂಕರ ಶಕ್ತ್ಯಾಯುಧವನ್ನು ದುಃಶಾಸನನಿಗೆ ಎಸೆದ. ಉಲ್ಕೆಯಂತೆ ಜ್ವಲಿಸುತ್ತ ಅತಿಘೋರವಾದ ಆ ಶಕ್ತಿ ಬರುತ್ತಿದ್ದುದನ್ನು ಕಂಡು ದುಃಶಾಸನನು ಕಿವಿವರೆಗೆ ಹೆದೆಯನ್ನೆಳೆದು ಎಸೆದ ಹತ್ತು ಬಾಣಗಳಿಂದ ಪುಡಿಗೈದ. ಆ ದುಷ್ಕರವಾದ ಕರ್ಮವನ್ನು ಕಂಡು ಎಲ್ಲ ಯೋಧರೂ ಬಲು ಹರ್ಷಗೊಂಡು ಪ್ರಶಂಸೆ ಮಾಡಿದರು.

ಅಥಾಶು ಭೀಮಂ ಚ ಶರೇಣ ಭೂಯೋ
ಗಾಢಂ ಸ ವಿವ್ಯಾಧ ಸುತಸ್ತ ವದೀಯಃ ।
ಚುಕ್ರೋಧ ಭೀಮಃ ಪುನರಾಶು ತಸ್ಮೈ
ಭೃಶಂ ಪ್ರಜಜ್ವಾಲ ರುಷಾಭಿವೀಕ್ಷ್ಯ ॥೪॥

ಬಳಿಕ ದುಃಶಾಸನನು ಪುನಃ ಬಾಣದಿಂದ ಭೀಮನನ್ನು ಚೆನ್ನಾಗಿ ಹೊಡೆದ.

ಭೀಮ ಅದಕ್ಕೆ ಪುನಃ ಕ್ರುದ್ಧನಾದ. ಕೋಪದಿಂದ ದಿಟ್ಟಿಸಿ ನೋಡಿ ಬಹಳವಾಗಿ ಜ್ವಲಿಸಿದ.

ವಿದ್ಧೋಽಸ್ಮಿ ವೀರಾಶು ಭೃಶಂ ತ್ವಯಾದ್ಯ
ಸಹಸ್ವ ಭೂಯೋಽಪಿ ಗದಾಪ್ರಹಾರಂ ।
ಉಕ್ತ್ವೈವಮುಚ್ಚೈಃ ಕುಪಿತೋಽಥ ಭೀಮೋ
ಜಗ್ರಾಹ ತಾಂ ಭೀಮಗದಾಂ ವಧಾಯ ॥೫॥

ನೀನೀಗ ನನ್ನನ್ನು ಚೆನ್ನಾಗಿ ಹೊಡೆದಿರುವೆ. ಅದಕ್ಕೆ ನನ್ನ ಗದಾಪ್ರಹಾರವನ್ನು ಸಹಿಸಿಕೊ. ಹೀಗೆ ಹೇಳಿ ಭೀಮಸೇನ ಬಲುಕುಪಿತನಾಗಿ ದುಃಶಾಸನನ ವಧೆಗಾಗಿ ಭಯಂಕರವಾದ ಗದೆಯನ್ನು ಎತ್ತಿಕೊಂಡ.

ಉವಾಚ ಚಾದ್ಯಾಹಮಹೋ ದುರಾತ್ಮನ್
ಪಾಸ್ಯಾಮಿ ತೇ ಶೋಣಿತಮಾಜಿಮಧ್ಯೇ ।
ಅಥೈವಮುಕ್ತಸ್ತನಯಸ್ತವೋಗ್ರಾಂ
ಶಕ್ತಿಂ ವೇಗಾತ್ ಪ್ರಾಹಿಣೋನ್ಮೃತ್ಯುರೂಪಾಮ್ ॥೬॥

'ದುರಾತ್ಮನೆ, ರಣರಂಗಮಧ್ಯದಲ್ಲಿ ನಾನೀಗ ನಿನ್ನ ನೆತ್ತರನ್ನು ಕುಡಿವೆ' ಎಂದು ಭೀಮ ನುಡಿದ. ದುಃಶಾಸನನು ಮೃತ್ಯುವಿನಂತಿರುವ ಘೋರವಾದ ಶಕ್ತಿಯನ್ನು ಭೀಮನಿಗೆ ವೇಗದಿಂದ ಎಸೆದ.

ಆವಿಧ್ಯ ಭೀಮೋಽಪಿ ಗದಾಂ ಸುಘೋರಾಂ
ವಿಚಿಕ್ಷಿಪೇ ರೋಷಪರೀತಮೂರ್ತಿಃ ।
ಸಾ ತಸ್ಯ ಶಕ್ತಿಂ ಸಹಸಾ ವಿರುಜ್ಯ
ಪುತ್ರಂ ತವಾಜೌ ತಾಡಯಾಮಾಸ ಮೂರ್ಧ್ನಿ ॥೭॥

ಭೀಮನು ಘೋರವಾದ ಗದೆಯನ್ನು ತಿರುಗಿಸಿ, ಮೈಯೆಲ್ಲ ರೋಷದಿಂದ ತುಂಬಿಕೊಂಡು, ದುಃಶಾಸನನ ಮೇಲೆ ಗದೆಯನ್ನು ಎಸೆದ. ಅದು ಒಡನೆ ಆ ಶಕ್ತಿಯನ್ನು ಮುರಿದು, ದುಃಶಾಸನನ ತಲೆಯ ಮೇಲೆ ಹೊಡೆಯಿತು.

ನಿಪಾತಯಿತ್ವಾ ಪೃಥಿವೀತಲೇ ಭೃಶಂ
ಸಂತಾಡಯಾಮಾಸ ಬಲೀ ವೃಕೋದರಃ ।
ಅತೀವ ಸಂತಾಡಿತಭಿನ್ನಗಾತ್ರೋ
ದುಃಶಾಸನೋ ವೈ ನಿಪಪಾತ ಭೂಮೌ ॥೮॥

ದುಃಶಾಸನನನ್ನು ನೆಲದ ಮೇಲೆ ಕೆಡಹಿ ಚೆನ್ನಾಗಿ ಗದೆಯಿಂದ ಹೊಡೆದ, ಬಲಿಷ್ಠನಾದ ಭೀಮ. ದುಃಶಾಸನನು ಹೀಗೆ ಮೈಯೆಲ್ಲ ಅತಿಯಾಗಿ ಹೊಡೆಸಿಕೊಂಡು ನೆಲದಲ್ಲಿ ಬಿದ್ದ.

ಆಕ್ರಮ್ಯ ಕಂಠೇ ಯುಧಿ ರಾಜಪುತ್ರಂ
ಸಂರಕ್ತನೇತ್ರೋ ಹ್ಯಬ್ರವೀದ್ ಧಾರ್ತರಾಷ್ಟ್ರಮ್ ।
ತದ್ ಬ್ರೂಹಿ ಕಿಂ ತ್ವಂ ಪರಿಮಾರ್ಗಮಾಣೋ
ಹ್ಯಸ್ಮಾನ್ ಪರಾಭೂಯ ಇಹಾಗತಃ ಪುನಃ ॥೯॥

ಭೀಮಸೇನ ರಣರಂಗದಲ್ಲಿ ದುಃಶಾಸನನ ಗಂಟಲನ್ನು ಕಾಲುಗಳಿಂದ ಒತ್ತಿಹಿಡಿದು, ಕಣ್ಣು ಕೆಂಪು ಮಾಡಿಕೊಂಡು, ಅವನನ್ನು ಕೇಳಿದ, 'ಹೇಳು, ನಮ್ಮನ್ನು ಇಂದಿನವರೆಗೆ ಬಹುಕಾಲ ಪೀಡಿಸಿ, ಇದೀಗ ನಮ್ಮನ್ನು ಹುಡುಕುತ್ತ ಪುನಃ ಇಲ್ಲಿಗೆ ಬಂದಿರುವೆ ಏನು?'

ತದಿದಮದ್ಯ ಭೃಶಸಂಭೃತಂ ಮೇ
ಚಿರಾರ್ಜಿತಂ ರೋಷಮಾದೀಪಯತ್ತತ್ ।
ಮಧು ಪ್ರಪಾಸ್ಯೇ ತವ ಕೋಷ್ಣಭಾಜನಾದ್
ಇತ್ಯಬ್ರವೀದ್ ಭೀಮಸೇನಸ್ತರಸ್ವೀ ॥೧೦॥

'ಈಗ ನಮ್ಮ ಬಳಿಗೆ ನೀನು ಬಂದುದು, ಬಹುಕಾಲದಿಂದ ನಾವು ನಮ್ಮೊಳಗೆ ಸಂಗ್ರಹಿಸಿ, ಬೆಳೆಸಿ, ಇಟ್ಟುಕೊಂಡಿದ್ದ ರೋಷವನ್ನು ಭುಗಿಲೆಬ್ಬಿಸಿದೆ. ಅದರಿಂದ ಮಧುಪಾತ್ರೆಯಂತಿರುವ ನಿನ್ನೆದೆಯಿಂದ ಮಧುವಿನಂತೆ ಸವಿಯಾದ, ನೆತ್ತರನ್ನು ನಾನೀಗ ಪಾನ ಮಾಡುವೆನು' ಎಂದ ಬಲಭೀಮ.

ತಂ ಪಾತಯಿತ್ವಾಥ ವೃಕೋದರೋಽಯಂ
ಜಗರ್ಜ ಹರ್ಷೇಣ ವಿನಾದಯನ್ ದಿಶಃ ।

ನಾದೇನ ತೇನಾಖಿಲ ಪಾರ್ಶ್ವವರ್ತಿನೋ
ಮೂರ್ಛಾಕುಲಾಃ ಪತಿತಾಸ್ತಾ ಜಮೀಢ ॥೧೧॥

ವೃಕೋದರನು ದುಃಶಾಸನನನ್ನು ಕೆಡಹಿ ಹರ್ಷದಿಂದ ದಿಕ್ಕುಗಳು ಪ್ರತಿ ಧ್ವನಿಸುವಂತೆ ಸಿಂಹನಾದ ಗೈದ. ರಾಜನೆ, ಆ ಧ್ವನಿಯಿಂದ ಪಾರ್ಶ್ವಗಳಲ್ಲಿದ್ದವ ರೆಲ್ಲರೂ ಮೂರ್ಛೆಗೊಂಡು ಬಿದ್ದರು.

ದಿಷ್ಟ್ಯಾಸಿ ದುಃಶಾಸನ ಅದ್ಯದೃಷ್ಟ
ಋಣಂ ಪ್ರತೀಚ್ಛೇಃ ಸಹವೃದ್ಧಿಮೂಲಮ್ ।
ಚಿರೋದ್ಯತಂ ತಂ ಯನ್ಮಯಾ ತೇ ಸಭಾಯಾಂ
ಕೃಷ್ಣಾಭೀಮರ್ಶೇನ ಗೃಹಾಣ ಮತ್ತಃ ॥೧೨॥

'ದುಃಶಾಸನ, ನೀನೀಗ ಅದೃಷ್ಟವಶದಿಂದ ನನ್ನ ಕಣ್ಣಿಗೆ ಬಿದ್ದಿರುವೆ. ನಾನು ನಿಮ್ಮ ಋಣವನ್ನು ತೀರಿಸುತ್ತೇನೆ. ಬಡ್ಡಿಸಮೇತ ಅಸಲನ್ನು ಕೊಡುತ್ತಿದ್ದೇನೆ. ಬಹು ಹಿಂದೆ ಸಭೆಯಲ್ಲಿ ದ್ರೌಪದಿಯನ್ನು ಎಳೆದುತಂದುದರ ಋಣವನ್ನು ನಾನು ನಿನ್ನಿಂದ ಪಡೆದಿದ್ದೆ. ಈಗ ನನ್ನಿಂದ ಸ್ವೀಕರಿಸು.'

ಸ ಏವಮುಕ್ತಸ್ತು ತತೋ ಮಹಾತ್ಮಾ
ದುಃಶಾಸನೋ ವಾಕ್ಯಮುವಾಚ ವೀರಃ ।
ಸರ್ವಂ ಸ್ಮರೇ ನೈವ ಚ ವಿಸ್ಮರಾಮಿ
ಉದೀರ್ಯಮಾಣಂ ಶೃಣು ಭೀಮಸೇನ ॥೧೩॥

ಭೀಮ ಹೀಗೆ ಹೇಳಿದಾಗ ಮಹಾತ್ಮ ವೀರ ದುಃಶಾಸನನು ನುಡಿದ, 'ಎಲ್ಲವನ್ನೂ ಸ್ಮರಿಸುವೆನು, ಸರ್ವಥಾ ಮರೆಯಲಾರೆ. ಅದನ್ನು ನಾನು ಹೇಳುತ್ತೇನೆ, ಕೇಳು ಭೀಮಸೇನ !

ಸ್ಮರಾಮಿ ಚಾತ್ಮಪ್ರಭವಂ ಚಿರಾಯ
ಯಜ್ಞಾತುಷೇ ವೇಶ್ಮನಿ ರಾತ್ರ್ಯಹಾನಿ ।
ವಿಶ್ವಾಸಹೀನಾ ಮೃಗಯಾಂ ಚರಂತೋ
ವಸಂತಿ ಸರ್ವತ್ರ ನಿರಾಕೃತಾಸ್ತು ॥೧೪॥

'ಅರಗಿನ ಮನೆಯಲ್ಲಿ ನಾವು ನಿಮ್ಮನ್ನು ಸುಡಿಸಿದ್ದನ್ನು ನಮ್ಮಿಂದಾದ ಕೃತ್ಯವೆಂದೇ ನಾನು ಸ್ಮರಿಸುತ್ತೇನೆ. ಬಳಿಕ ನೀವು ರಾತ್ರಿ–ಹಗಲು ರಾಜ್ಯ ಸಂಪಾದನೆಯಲ್ಲಿ ವಿಶ್ವಾಸ ಕಳೆದುಕೊಂಡು ಬೇಟೆಯಾಡುತ್ತ ವನವಾಸ ಮಾಡಿದಿರಿ. ಎಲ್ಲಿಯೂ ನಿಮಗೆ ಆಶ್ರಯ ನೀಡಲು ಜನರು ನಿರಾಕರಿಸಿದರು.

ಮಹಾಭಯಂ ರಾತ್ರ್ಯಹನೀ ಸ್ಮರಂತ-
ಸ್ತಥೋಪಭೋಗಾಚ್ಚ ಸುಖಾಚ್ಚ ಹೀನಾಃ ।
ವನೇಷ್ವಟಂತೋ ಗಿರಿಗಹ್ವರಾಣಿ
ಪಾಂಚಾಲರಾಜಸ್ಯ ಪುರಂ ಪ್ರವಿಷ್ಟಾಃ ॥೧೫॥

'ರಾತ್ರಿ–ಹಗಲು ಮಹಾಭಯವನ್ನೇ ಚಿಂತಿಸುತ್ತ ಎಲ್ಲ ಸುಖಭೋಗಗಳಿಂದ ವಂಚಿತರಾಗಿ ಕಾಡಿನಲ್ಲಿ ಬೆಟ್ಟಗವಿಗಳಲ್ಲಿ ಸಂಚರಿಸುತ್ತ ಪಾಂಚಾಲರಾಜನ ಪಟ್ಟಣವನ್ನು ನೀವು ಹೊಕ್ಕಿದಿರಿ.

ಮಾಯಾಂ ಯೂಯಂ ಕಾಮಪಿ ಸಂಪ್ರವಿಷ್ಟಾ
ಯತೋ ವೃತಃ ಕೃಷ್ಣಯಾ ಫಲ್ಗುನೋ ವಃ ।
ಸಂಭೂಯ ಪಾಪೈಸ್ತದನಾರ್ಯವೃತ್ತಂ
ಕೃತಂ ತದಾ ಮಾತೃಕೃತಾನುರೂಪಮ್ ॥೧೬॥

'ನೀವು ಯಾವುದೋ ಒಂದು ವ್ಯಾಮೋಹದಲ್ಲಿ ಸಿಲುಕಿದಿರಿ. ಏಕೆಂದರೆ ನಿಮ್ಮಲ್ಲಿ ಅರ್ಜುನನನ್ನೊಬ್ಬನನ್ನು ದ್ರೌಪದಿ ವರಿಸಿದರೆ ನೀವೆಲ್ಲರೂ ಪಾಪಿಗಳು ಅವಳೊಡನೆ ಕೂಡಿದಿರಿ. ನಿಮ್ಮ ತಾಯಿ ಏನು ಮಾಡಿದ್ದಳೊ ಅದಕ್ಕೆ ಅನುರೂಪವಾಗಿ ಮಕ್ಕಳು ನೀವು ಅದೇ ದುರಾಚಾರವನ್ನೇ ಮಾಡಿದಿರಿ.

ನಿಮ್ಮ ತಾಯಿಯನ್ನು ಯಮ ವಾಯು ಮುಂತಾದವರು ಅನೇಕರು ಕೂಡಿದರು. ದ್ರೌಪದಿಯನ್ನು ನೀವೂ ಅನೇಕರು ಕೂಡಿರುವಿರಿ.

ಏಕಾ ವೃತಾ ಪಂಚಭಿಃ ಸಾಭಿಪನ್ನಾ
ಹ್ಯಲಜ್ಜಮಾನೈಶ್ಚ ಪರಸ್ಪರಸ್ಯ
ಸ್ಮರೇ ಸಭಾಯಾಂ ಸುಬಲಾತ್ಮಜೇನ
ದಾಸೀಕೃತಾಃ ಸ್ಥ ಸಹ ಕೃಷ್ಣಯಾ ತು ॥೧೭॥

'ದ್ರೌಪದಿಯು ಒಬ್ಬನನ್ನು ವರಿಸಿದರೆ ನೀವು ಐವರು ಅವಳನ್ನು ಕೂಡಿದಿರಿ. ಪರಸ್ಪರ ಲಜ್ಜೆಯ ಭಾವನೆಯನ್ನೇ ಬಿಟ್ಟಿರಿ. ದ್ಯೂತಸಭೆಯಲ್ಲಿ ಶಕುನಿ ದ್ರೌಪದೀಸಮೇತ ನಿಮ್ಮೆಲ್ಲರನ್ನೂ ದಾಸರನ್ನಾಗಿ ಮಾಡಿದ್ದನ್ನೂ ನೆನಪಿಸಿ ಕೊಳ್ಳುತ್ತೇನೆ.'

ತೇನೈವಮುಕ್ತಸ್ತು ತವಾತ್ಮಜೇನ
ಸುಬಾಲಚಿತ್ತೇನ ವೃಕೋದರೋಽಪಿ ।
ಪ್ರಗೃಹ್ಯ ಚಾಪಂ ಭ್ರುಕುಟಿಂ ಲಲಾಟೇ
ಪಾಂಡೋಃ ಸುತಃ ಕೋಪವಶಂ ಜಗಾಮ ॥೧೮॥

ನಿನ್ನ ಮಗ ದುಃಶಾಸನನು ಅಜ್ಞಬಾಲಕನ ಬುದ್ಧಿಯಿಂದ ಹೀಗೆ ಹೇಳಿದಾಗ ವೃಕೋದರನು ಹಣೆಯಲ್ಲಿ ಹುಬ್ಬನ್ನು ಬಿಲ್ಲಿನಂತೆ ಬಾಗಿಸಿಕೊಂಡು ಕೋಪಾವಿಷ್ಟನಾದ.

ತಸ್ಮಿನ್ ಸುಘೋರೇ ತುಮುಲೇ ವರ್ತಮಾನೇ
ಪ್ರಧಾನಭೂಯಿಷ್ಠತರೈಃ ಸಮಂತಾತ್ ।
ದುಃಶಾಸನಂ ತತ್ರ ಸಮೀಕ್ಷ್ಯ ರಾಜನ್
ಭೀಮೋ ಮಹಾಬಾಹುರಚಿಂತ್ಯಕರ್ಮಾ ॥೧೯॥

ಸ್ಮೃತ್ವಾಥ ಕೇಶಗ್ರಹಣಂ ಚ ದೇವ್ಯಾ
ವಸ್ತ್ರಾಪಹಾರಂ ಚ ರಜಸ್ವಲಾಯಾಃ ।
ಅನಾಗಸೋ ಭರ್ತೃಪರಾಜ್ಮುಖಾಯಾ
ದುಃಖಾನಿ ದತ್ತಾನ್ಯಪಿ ವಿಪ್ರಚಿಂತ್ಯ ॥೨೦॥

ಜಜ್ವಾಲ ಕ್ರೋಧಾದಥ ಭೀಮಸೇನ
ಆಜ್ಯಪ್ರಸಿಕ್ತೋ ಹಿ ಯಥಾ ಹುತಾಶಃ ।
ತತ್ರಾಹ ಕರ್ಣಂ ಚ ಸುಯೋಧನಂ ಚ
ಕೃಪಂ ದ್ರೌಣಿಂ ಕೃತವರ್ಮಾಣಮೇವ ॥೨೧॥

ರಾಜನೆ, ಹೆಚ್ಚಾಗಿ ಪ್ರಧಾನವೀರರಿಂದಲೇ ಎಲ್ಲೆಡೆ ನಡೆದ ಭೀಕರವಾದ

ಕದನದಲ್ಲಿ ಅಚಿಂತ್ಯಕರ್ಮವನ್ನೇ ಮಾಡುವ ಮಹಾಬಾಹುವಾದ ಭೀಮನು ದುಃಶಾಸನನನ್ನು ದಿಟ್ಟಿಸಿ ನೋಡಿ, ರಜಸ್ವಲೆಯಾಗಿದ್ದ ದೇವಿಯ ಕೇಶಗ್ರಹಣ, ವಸ್ತ್ರಾಪಹಾರ, ಆ ಸಮಯದಲ್ಲಿ ಅಸಹಾಯಕತೆಯಿಂದ ಪತಿಗಳೈವರೂ ಅವಳಿಂದ ಪರಾಙ್ಮುಖರಾಗಿ ಕುಳಿತಿರುವಂತೆ ಮಾಡಿದ್ದು ನಾನಾ ದುಃಖಗಳನ್ನು ಕೊಟ್ಟಿದ್ದು ಇವೆಲ್ಲವನ್ನೂ ನೆನೆದು, ಆಜ್ಯಾಹುತಿಗೊಂಡ ಅಗ್ನಿಯಂತೆ ಜ್ವಲಿಸಿದ. ಕರ್ಣ ದುರ್ಯೋಧನ ಕೃಪ ಅಶ್ವತ್ಥಾಮ ಕೃತವರ್ಮರನ್ನು ಕುರಿತು ನುಡಿದ.

ನಿಹನ್ಮಿ ದುಃಶಾಸನಮದ್ಯ ಪಾಪಂ
ಸಂರಕ್ಷ್ಯತಾಮದ್ಯ ಸಮಸ್ತಯೋಧಾಃ ।
ಇತ್ಯೇವಮುಕ್ತ್ವಾ ಸಹಸಾಭ್ಯಧಾವತ್
ನಿಹಂತುಕಾಮೋಽತಿಬಲಸ್ತರಸ್ವೀ ॥೨೨॥

'ಪಾಪಿ ದುಃಶಾಸನನನ್ನು ಈಗ ಕೊಲ್ಲುತ್ತಿದ್ದೇನೆ. ಎಲ್ಲ ಯೋಧರೂ ಈಗ ನಿಮ್ಮಲ್ಲಿ ಶಕ್ತಿ ಇರುವುದಾದರೆ ಅವನನ್ನು ರಕ್ಷಿಸಿಕೊಳ್ಳಿ' ಎಂದು ನುಡಿದು ಅತಿ ಬಲ–ವೇಗವುಳ್ಳ ಭೀಮನು ವೇಗದಿಂದ ದುಃಶಾಸನನನ್ನು ಆಕ್ರಮಿಸಿದ.

ತಥಾ ತು ವಿಕ್ರಮ್ಯ ರಣೇ ವೃಕೋದರೋ
ಮಹಾಗಜಂ ಕೇಸರಿಕೋ ಯಥೈವ ।
ನಿಗೃಹ್ಯ ದುಃಶಾಸನಮೇಕವೀರಃ
ಸುಯೋಧನಸ್ಯಾಧಿರಥೇಃ ಸಮಕ್ಷಮ್ ॥೨೩॥

ಏಕವೀರನಾದ ಭೀಮನು ಉಗ್ರವೇಗದಿಂದ ರಣದಲ್ಲಿ ಕಾಡಿನಲ್ಲಿ ಮದ್ದಾನೆಯನ್ನು ಸಿಂಹವು ಹಿಡಿದುಕೊಳ್ಳುವಂತೆ, ದುಃಶಾಸನನನ್ನು ದುರ್ಯೋಧನನ, ಕರ್ಣನ ಸಮಕ್ಷಮದಲ್ಲಿಯೇ ಹಿಡಿದುಕೊಂಡ.

ವದಾಸು ಯದ್ ಗೌರಿತಿ ತದ್ಬ್ರುವಾಣೋ
ಹೃಷ್ಟಃ ಸಮಂ ಕರ್ಣಸುಯೋಧನಾಭ್ಯಾಮ್ ।
ಯೇ ರಾಜಸೂಯಾವಭೃಥೇ ಪವಿತ್ರಾ
ಜಾತಾಃ ಕಚಾ ಯಾಜ್ಞಸೇನ್ಯಾ ದುರಾತ್ಮನ್ ॥

ತೇ ಪಾಣಿನಾ ಕತರೇಣಾವಕೃಷ್ಟಾ-
ಸ್ತದ್ ಬ್ರೂಹಿ ತ್ವಾಂ ಪೃಚ್ಛತಿ ಭೀಮಸೇನಃ ॥೨೪॥

ಭೀಮಸೇನನು ನುಡಿದ— 'ದುರಾತ್ಮನೆ, ಹೇಳು, ನೀನು ಅಂದು ಕರ್ಣ ದುರ್ಯೋಧನರೊಂದಿಗೆ ಸೇರಿಕೊಂಡು ಹೃಷ್ಟನಾಗಿ, 'ಪಾಂಡವರು ಇನ್ನು ಯಾವ ಕೆಲಸಕ್ಕೂ ಬಾರದವರಾಗಿ ಬೀದಿಬಸವನಂತೆ ಅಲೆಯುತ್ತಾರೆ' ಎಂದು ಹೇಳಿದವನು, ರಾಜಸೂಯಯಾಗದ ಅವಭೃಥಸ್ನಾನದಿಂದ ಪವಿತ್ರವಾಗಿರುವ ದ್ರೌಪದಿಯ ಕೇಶಗಳನ್ನು ನೀನು ಅಂದು ಯಾವ ಕೈಯಿಂದ ಹಿಡಿದೆಳೆದೆ? ಹೇಳು', ಭೀಮಸೇನನು ಪ್ರಶ್ನಿಸುತ್ತಿದ್ದಾನೆ.

ಉಕ್ತಸ್ತಥಾಜೌ ಸ ತದಾ ಸರೋಷಂ
ಜಗಾದ ಭೀಮಂ ಪರಿವೃತ್ಯ ನೇತ್ರೇ ॥
ಅಯಂ ಕರಿಕರಾಕಾರಃ ಪೀನಸ್ತನವಿಮರ್ದನಃ ।
ಗೋಸಹಸ್ರಪ್ರದಾತಾ ಚ ಕ್ಷತ್ರಿಯಾಂತಕರಃ ಕರಃ ॥

ಅನೇನ ಯಾಜ್ಞಸೇನ್ಯಾ ಮೇ ಭೀಮ ಕೇಶಾ ವಿಕರ್ಷಿತಾಃ ।
ಪಶ್ಯತಾಂ ಕುರುಮುಖ್ಯಾನಾಂ ಯುಷ್ಮಾಕಂ ಚ ಸಭಾಸದಾಮ್ ॥೨೫॥

ಭೀಮಸೇನನು ರಣದಲ್ಲಿ ಹೀಗೆ ಹೇಳಿದಾಗ ದುಃಶಾಸನನು ಕಣ್ಣು ತಿರುಗಿಸುತ್ತ ನುಡಿದ— 'ಆನೆಯ ಸೊಂಡಿಲಿನಂಥ ಈ ನನ್ನ ಕೈ ಪೀನಸ್ತನಗಳನ್ನು ಮರ್ದಿಸುವಂಥದ್ದು, ಸಾವಿರ ಗೋದಾನ ಮಾಡುವಂಥದ್ದು, ಕ್ಷತ್ರಿಯರ ನಾಶ ಮಾಡುವಂಥದ್ದು, ಈ ನನ್ನ ಕೈಯಿಂದ, ಭೀಮನೆ! ನಾನು, ಅಂದು ಕುರುಶ್ರೇಷ್ಠರು ನೀವು ಮತ್ತು ಎಲ್ಲ ಸಭಾಸದರೂ ನೋಡುತ್ತಿದ್ದಂತೆಯೇ ದ್ರೌಪದಿಯ ಕೇಶಗಳನ್ನು ಹಿಡಿದೆಳೆದಿದ್ದೇನೆ.

ಮಮೇಪ್ಸಿತಂ ಚೈವಮನೇನ ಸರ್ವಂ
ಕೃತಂ ಮಯಾ ಯತ್ ಸ್ವಯಮೇವ ಕೃತ್ಯಮ್ ।
ಸತ್ಯಂ ಪ್ರತಿಜ್ಞಾಂ ಕುರು ಮಾ ನಿರರ್ಥಂ
ಸುಜಾತಿಜಾತಾ ನ ವೃಥಾ ವದಂತಿ ॥೨೬॥

ನಾನು ಬಯಸಿದ್ದ ಇದೆಲ್ಲ ಕೃತ್ಯವನ್ನೂ ಸ್ವಯಂ ನಾನೇ ನನ್ನ ಈ ಕೈಯಿಂದಲೇ ಮಾಡಿದ್ದೇನೆ. ನೀನು ನಿನ್ನ ಪ್ರತಿಜ್ಞೆಯನ್ನು ಸತ್ಯವಾಗಿಸು. ನಿರರ್ಥಕಗೊಳಿಸಬೇಡ. ಒಳ್ಳೆಯ ಜನ್ಮದಲ್ಲಿ ಹುಟ್ಟಿದವರು ವ್ಯರ್ಥಪ್ರತಿಜ್ಞೆ ಮಾಡುವುದಿಲ್ಲ.

ಅನ್ಯತ್ ತ್ವಯೋಕ್ತಂ ರುಧಿರಂ ಪಿಬಾಮಿ
ಪಿಬಂತು ಮೇ ಶ್ವಾದಿ ಖಿಗಾಃ ಸೃಗಾಲಾಃ
ತ್ವಂ ಚೈವಮೇಷಾಂ ತು ಸಮಾನಭೂತೋ
ಮನ್ಯುರ್ನ ಮೇ ತ್ವಸ್ತಿ ಕೃತಾಕೃತಸ್ಯ ॥೨೭॥

ಇನ್ನೊಂದು ಮಾತನ್ನು ನೀನು ನನಗೆ ಹೇಳುತ್ತಿರುವೆ. 'ನಿನ್ನ ರಕ್ತವನ್ನು ಪಾನ ಮಾಡುತ್ತೇನೆ' ಎಂದು. ಆದರೆ ನಾಯಿನರಿಹದ್ದುಗಳು ಕೂಡ ನನ್ನ ರಕ್ತವನ್ನು ಪಾನ ಮಾಡುತ್ತವೆ. ಮಾಡಲಿ. ಜೊತೆಗೆ ನೀನು ಕೂಡ ಪಾನ ಮಾಡುವಿಯಾದರೆ ಮಾಡು, ಈ ನಾಯಿ–ನರಿಗಳಿಗೇ ನೀನು ಸಮಾನ. ಆದರಿಂದ, ನೀನು ಪಾನ ಮಾಡು ಇಲ್ಲವೆ ಬಿಡು, ನನಗೇನೂ ಆದರಿಂದ ದುಃಖವಿಲ್ಲ!

ತಾನೇ ನಾಯಿ–ನರಿಗಳಿಗಿಂತ ನೀಚ! ಮಂತ್ರಪೂರ್ವಕ ಭಕ್ತಿಯಿಂದ ವಿಧ್ಯುಕ್ತವಾದ ರೀತಿಯಿಂದ ಸೋಮಪಾನ ಮಾಡುವ ಜೀವೋತ್ತಮ ಮುಖ್ಯಪ್ರಾಣನನ್ನು ನಾಯಿಗೆ ಸಮನೆನ್ನುತ್ತಾನೆ!

ಏವಂ ಬ್ರುವಾಣಸ್ಯ ತು ಭೀಮಸೇನ
ಉತ್ಪಾಟಯಾಮಾಸ ಭುಜಂ ಮಹಾತ್ಮಾ
ತತಃ ಸ ರಾವಂತಮತೀವ ರುಷ್ಟಃ
ಸಂತಾಡಯಾಮಾಸ ಭುಜೇನ ತೇನ ॥೨೮॥

ದುಃಶಾಸನನು ಹೀಗೆ ಹೇಳುತ್ತಿದ್ದಂತೇ ಭೀಮಸೇನನು ಅವನ ಬಾಹುವನ್ನು ಕಿತ್ತು ಕೆಟ್ಟ ಮಾತುಗಳನ್ನು ಮತ್ತೆ ಮತ್ತೆ ಆಡುತ್ತಿದ್ದ ಆತನನ್ನು ಅವನ ಆ ಬಾಹುವಿನಿಂದಲೇ ಹೊಡೆದ.

ನಿಗೃಹ್ಯ ಚೈನಂ ಪರಮೇಣ ಕರ್ಮಣಾ
ಉತ್ಕ್ಷಿಪ್ಯ ಚೋತ್ಕ್ಷಿಪ್ಯ ಚ ತೂರ್ಣಮೇನಮ್ ।

ಭೂಮೌ ತದಾ ನಿಷ್ಪಿಪೇಷಾಥ ವೀರಃ
ಅಸಿಂ ವಿಕೋಶಂ ವಿಮಲಂ ಚಕಾರ ॥೨೯॥

ನಿನ್ನ ಮಗನಾದ ದುಃಶಾಸನನನ್ನು ಹಿಡಿದು ಎತ್ತಿ ಎತ್ತಿ ನೆಲದ ಮೇಲೆ ಕೆಡವಿ, ತನ್ನ ಪ್ರತಿಜ್ಞೆಯನ್ನು ಸತ್ಯ ಪ್ರತಿಜ್ಞೆಯನ್ನಾಗಿ ಮಾಡಲು ಬಯಸಿದ ಬುದ್ಧಿಶಾಲಿಯಾದ ಭೀಮನು ಕತ್ತಿಯನ್ನು ಒರೆಯಿಂದ ಹೊರಗೆ ತೆಗೆದ.

ಅಸಿಂ ಸಮೃದ್ಧೃತ್ಯ ಶಿತಂ ಸುಧಾರಂ
ಕಂಠೇ ಸಮಾಕ್ರಮ್ಯ ಚ ವೇಪಮಾನಮ್ ।
ಉತೃತ್ಯ ವಕ್ಷಃ ಪತಿತಸ್ಯ ಭೂಮಾ-
ವಥಾಪಿಬಚ್ಛೋಣಿತಮಸ್ಯ ಕೋಷ್ಣಮ್ ॥೩೦॥

ಭೀಮನು ಹರಿತವಾದ ಕತ್ತಿಯನ್ನೆತ್ತಿಕೊಂಡು ಕಾಲುಗಳಿಂದ ದುಃಶಾಸನನ ಗಂಟಲನ್ನು ಒತ್ತಿಹಿಡಿದು, ಹೊಟ್ಟೆಯ ಮೇಲೆ ಕುಳಿತು, ಅವನು ನೆಲದಲ್ಲಿ ಒರಗಿ ನಡುಗುತ್ತಿದ್ದಂತೆಯೇ ಎದೆಯನ್ನು ಕತ್ತಿಯಿಂಪ ತಿವಿದು ಸೀಳಿ ಬಿಸಿನೆತ್ತರನ್ನು ಪಾನ ಮಾಡಿದ.

ಆಸ್ವಾದ್ಯ ಚಾಸ್ವಾದ್ಯ ಚ ವೀಕ್ಷಮಾಣಃ
ಕ್ರುದ್ಧೋಽತಿವೇಲಂ ಪ್ರಜಗಾದ ವಾಕ್ಯಮ್ ॥೩೧॥

ರಕ್ತವನ್ನು ಪುನಃ ಪುನಃ ಆಸ್ವಾದಿಸಿ ನೋಡುತ್ತ ಅತ್ಯಂತ ಕ್ರುದ್ಧನಾಗಿ ನುಡಿದ.

ಇದು ತೋರಿಕೆಗೆ. ವಸ್ತುತಃ ಭೀಮ ರಕ್ತವನ್ನು ತುಟಿಯಿಂದ ಸ್ಪರ್ಶಿಸಿದನೆ ಹೊರತು ಕುಡಿಯಲಿಲ್ಲ. ಇದನ್ನು ಭೀಮನೆ ಮುಂದೆ, ಗಾಂಧಾರಿಯ ಮುಂದೆ ಹೇಳುತ್ತಾನೆ.

ಸ್ತನ್ಯಸ್ಯ ಮಾತುರ್ಮಧುಸರ್ಪಿಷೋ ವಾ
ಮಾಧ್ವೀಕಪಾನಸ್ಯ ಚ ಸತ್ಕೃತಸ್ಯ ।
ದಿವ್ಯಸ್ಯ ವಾ ತೋಯರಸಸ್ಯ ಪಾನಾತ್
ಪಯೋದಧಿಭ್ಯಾಂ ಮಥಿತಾಚ್ಚ ಮುಖ್ಯಾತ್ ॥೩೨॥

ಅನ್ಯಾನಿ ಪಾನಾನಿ ಚ ಯಾನಿ ಲೋಕೇ
ಸುಧಾಮೃತಸ್ವಾದುರಸಾನಿ ತೇಭ್ಯಃ ।

ಸರ್ವೇಭ್ಯ ಏವಾಭ್ಯಧಿಕೋ ರಸೋಽಯಂ
ಮತೋ ಮಮಾದ್ಯಾಹಿತಲೋಹಿತಸ್ಯ ॥೩೩॥

ತಾಯಿಯ ಮೊಲೆಹಾಲಿಗಿಂತಲೂ, ಜೇನುತುಪ್ಪ–ಆಕಳತುಪ್ಪಗಳಿಗಿಂತಲೂ ಚೆನ್ನಾಗಿ ದ್ರಾಕ್ಷಾರಸ ಸಿದ್ಧವಾದ ಪಾನೀಯಕ್ಕಿಂತಲೂ ಹಾಲುಮೊಸರು ಕಡೆದುಬರುವ ಮಜ್ಜಿಗೆಗಿಂತಲೂ ಲೋಕದಲ್ಲಿ ಲಭ್ಯವಿರುವ ಸುಧಾಮೃತದಂತೆ ಸ್ವಾದುವಾದ ಪಾನಗಳೆಲ್ಲಕ್ಕಿಂತ ನನಗೆ ಈ ಶತ್ರುರಕ್ತದ ರಸವೆ ಹೆಚ್ಚು ಸವಿಯಾಗಿದೆ.

ಭಕ್ತಿಯಿಂದ ನರಸಿಂಹನನ್ನು 'ಯಸ್ತೇ ಮನ್ಯೋ' ಎಂಬ ಮನ್ಯುಸೂಕ್ತದಿಂದ ಸ್ತುತಿಸುತ್ತ 'ಇಹ' ಎಂಬ ಸ್ತೋಭಾಕ್ಷರ ಯುಕ್ತವಾದ ಸಾಮಗಾನ ಪೂರ್ವಕವಾಗಿ ಸೋಮಾಹುತಿರೂಪದಿಂದ ಬಿಸಿನೆತ್ತರನ್ನು ಅವನಿಗೆ ಅರ್ಪಿಸಿದ ಭೀಮಸೇನ. ಮಹಾಭಾರತದಲ್ಲಿ ಈ ಅಂಶ ಇದೀಗ ಲುಪ್ತವಾಗಿದೆ.

ಯಾ ಸಾಽಪತಿಃ ಸಾ ಸಪತಿರ್ಹಿ ಜಾತಾ
ಯಾಸ್ತಾಃ ಸಪತ್ಯೋಽಪತಯಸ್ತು ಜಾತಾಃ ।
ಪಶ್ಯಂತು ಚಿತ್ರಂ ವಿವಿಧಂ ಹಿ ಲೋಕೇ
ಯೇ ವೈ ತಿಲಾಃ ಷಂಢತಿಲಾ ಬಭೂವುಃ ॥೩೪॥

ದುಃಶಾಸನನು ಹಿಂದೆ ದ್ಯೂತಸಭೆಯಲ್ಲಿ ''ಸುಂದರಿ, ನೀನಿನ್ನು ಕೌರವನ ಬಳಿಗೆ ಹೋಗು, ನಿನಗಿನ್ನು ಪತಿಗಳಿಲ್ಲ ಇವರು ಎಣ್ಣೆ ಇಲ್ಲದ ಜೊಳ್ಳು ಎಳ್ಳುಕಾಳುಗಳು, ನಪುಂಸಕರು'' ಎಂದಿದ್ದ. ಯಾರು ಹಿಂದೆ ಅಪತಿ 'ಪತಿ ಇಲ್ಲದವಳೆ'ನಿಸಿದ್ದಳೋ ಅವಳು, ದ್ರೌಪದಿ, ಇಂದು 'ಸಪತಿ' ಪತಿಯುಕ್ತಳೆನಿಸಿದ್ದಾಳೆ. ಯಾರು ಹಿಂದೆ ಪತಿಯುಕ್ತರಾಗಿದ್ದರೋ ಅವರು, ಶತ್ರುಸ್ತ್ರೀಯರು ಇಂದು, ನಾವು ಶತ್ರುವಧ ಮಾಡಿದ್ದರಿಂದ, 'ಅಪತಿ'ಗಳಾದರು, ವಿಧವೆಯಾದರು. ಎಲ್ಲರೂ ನೋಡಿರಿ. ಲೋಕದಲ್ಲಿ ಅನೇಕ ಬಗೆಯ ವೈಚಿತ್ರ್ಯಗಳು ಸಂಭವಿಸುತ್ತವೆ. ಶತ್ರುಗಳು ತಾವೇ ಗಟ್ಟಿ ಎಳ್ಳುಕಾಳುಗಳೆಂದುಕೊಂಡಿದ್ದರು. ತಾವೇ ಪೌರುಷ ಉಳ್ಳವರೆಂದುಕೊಂಡಿದ್ದರು. ಈಗ ಅವರೇ ಜೊಳ್ಳು ಕಾಳೆನಿಸಿದ್ದಾರೆ. ನಪುಂಸಕರೆನಿಸಿದ್ದಾರೆ!

ಭೀಮೋಽಪಿ ಹತ್ವಾ ತತ್ರೈವ ದುಃಶಾಸನಮಮರ್ಷಣಮ್ ।
ಪೂರಯಿತ್ವಾಂಜಲಿಂ ಭೂಯೋ ರುಧಿರಸ್ಯೋಗ್ರನಿಸ್ವನಃ ॥೩೫॥

ಶೃಣ್ವತಾಂ ಲೋಕವೀರಾಣಾಮಿದಂ ವಚನಮಬ್ರವೀತ್ ।
ಏಷ ತೇ ರುಧಿರಂ ಸ್ವಾದು ಪಿಬಾಮಿ ಪುರುಷಾಧಮ ।
ಬ್ರೂಹೀದಾನೀಂ ಸುಸಂರಬ್ಧಃ ಪುನರ್ಗೌರಿತಿ ಗೌರಿತಿ ॥೩೬॥

ಇತ್ತ ಭೀಮನು ಸಹನೆ ಇಲ್ಲದ ದುಃಶಾಸನನನ್ನು ಹೊಡೆದು ಕೊಂದಿಲ್ಲ, ಅವನು ಇನ್ನೂ ಉಸಿರೆಳೆಯುತ್ತಿದ್ದಂತೆಯೆ ಉಗ್ರವಾದ ಸಿಂಹನಾದಮಾಡುತ್ತ ಪುನಃ ಬೊಗಸೆಯನ್ನು ರಕ್ತದಿಂದ ತುಂಬಿಸಿ, ಅವನು ಮತ್ತು ಎಲ್ಲ ಲೋಕಪ್ರಸಿದ್ಧರಾದ ವೀರರು ಕೇಳುತ್ತಿರುವಂತೆ, ಈ ಮಾತನ್ನು ನುಡಿದ: 'ದುಃಶಾಸನ, ಪುರುಷಾಧಮ, ಈ ಭೀಮಸೇನನು ನಾನು ಸವಿಯಾದ ನಿನ್ನ ಬಿಸಿನೆತ್ತರನ್ನು ಕುಡಿಯುತ್ತಿದ್ದೇನೆ. ನೀನು ಈಗ ಕ್ರುದ್ಧನಾಗಿ ಪುನಃ ನಮ್ಮನ್ನು ಬೀದಿಬಸವಗಳು, ಬೀದಿಬಸವಗಳೆಂದು ಗೇಲಿ ಮಾಡುತ್ತ ನುಡಿ!

ಯೇ ತದಾಸ್ಮಾನ್ ಪ್ರನೃತ್ಯಂತಿ ಪುನರ್ಗೌರಿತಿ ಗೌರಿತಿ ।
ತಾನ್ ಸಂಪ್ರತಿ ಪ್ರನೃತ್ಯಾಮಃ ಪುನರ್ಗೌರಿತಿ ಗೌರಿತಿ ॥೩೭॥

ಹಿಂದೆ ದ್ಯೂತಕಾಲದಲ್ಲಿ ನಮ್ಮನ್ನು 'ಬೀದಿಬಸವ ಬೀದಿಬಸವ' ಎಂದು ಪುನಃ ಪುನಃ ಗೇಲಿಮಾಡಿ ಯಾರು ಕುಣಿದರೋ ಅವರನ್ನು ನಾವು ಇಂದು 'ಬೀದಿಬಸವ ಬೀದಿ ಬಸವ' ಎಂದು ಪುನಃ ಪುನಃ ಗೇಲಿಮಾಡಿ ಕುಣಿಯುವೆವು.

ಬಂದ ಅತಿಥಿಗಳಿಗೆ ಮಧುಪರ್ಕದಲ್ಲಿ ಗೌಃ ಗೌಃ ಗೌಃ ಎಂದು ಮೂರು ಬಾರಿ ಹೇಳಿ ಒಂದು ಗೂಳಿಯನ್ನು ಉತ್ಸರ್ಜನ ಮಾಡುವುದು ರೂಢಿಯಲ್ಲಿತ್ತು. ಆ ಗೂಳಿ 'ದೇವರಿಗೆ ಬಿಟ್ಟಿದ್ದು' ಎಂದುಕೊಂಡು ಯಾರೂ ನೋಡಿಕೊಳ್ಳುತ್ತಿರಲಿಲ್ಲ. 'ಬೀದಿಬಸವ'ನಾಗಿ ಸಂಚರಿಸುತ್ತಿತ್ತು. ಹಾಗೇ ಪಾಂಡವರು ಇನ್ನು ಬೀದಿಬಸವನಂತೆ ಅಲೆಯುತ್ತಾರೆ ಯಾವ ಕೆಲಸಕ್ಕೂ ಬಾರದವರಾಗುತ್ತಾರೆ ಎಂದು ದುಃಶಾಸನನೇ ಅಂದು ಗೇಲಿ ಮಾಡಿ ಪಾಂಡವರನ್ನು ಕಾಡಿಗೆ ಕಳಿಸಿದ್ದ. ಪಾಂಡವರ ಆ ಸ್ಥಿತಿ ಈಗ ಕೌರವರಿಗೆ ಬಂದಿದೆ, ನಾವೇಕೆ ಅವರನ್ನು ಹಾಗೆ ಹಾಸ್ಯ ಮಾಡಬಾರದು ಎನ್ನುತ್ತಿದ್ದಾನೆ ಭೀಮ.

ಪ್ರಮಾಣಕೋಟ್ಯಾಂ ಶಯನಂ ಕಾಲಕೂಟಸ್ಯ ಭೋಜನಮ್ ।
ದಶನಂ ಚಾಹಿಭಿಃ ಕೃಷ್ಣೈರ್ದಾಹಂ ಚ ಜತುವೇಶ್ಮನಿ ॥೩೮॥

ದ್ಯೂತೇನ ರಾಜ್ಯಹರಣಮರಣ್ಯೇ ವಸತಿಶ್ಚ ಯಾ ।
ದ್ರೌಪದ್ಯಾಃ ಕೇಶಪಕ್ಷಸ್ಯ ಗ್ರಹಣಂ ಚ ಸುದಾರುಣಮ್ ।
ಇಷ್ವಸ್ತ್ರಾಣಿ ಚ ಸಂಗ್ರಾಮೇಷ್ವಸುಖಾನಿ ಚ ವೇಶ್ಮಸು ॥೫೯॥

ವಿರಾಟಭವನೇ ಯಶ್ಚ ಕ್ಲೇಶೋಸ್ಮಾಕಂ ಪೃಥಗ್ವಿಧಃ ॥೪೦॥

ದುಃಖಾನ್ಯೇತಾನಿ ಜಾನೀಮೋ ನ ಸುಖಾನಿ ಕದಾಚನ ।
ಧೃತರಾಷ್ಟ್ರಸ್ಯ ದೌರಾತ್ಮ್ಯಾತ್ ಸಪುತ್ರಸ್ಯ ಸದಾ ವಯಮ್ ॥೪೧॥

ಗಂಗಾನದಿಯ ಪ್ರಮಾಣಕೋಟಿ ಎಂಬ ಮಡುವಿನಲ್ಲಿ ನನ್ನನ್ನು ತಳ್ಳಿದ್ದು, ಕಾಲಕೂಟ ವಿಷದ ಲಡ್ಡುಗೆ ತಿನ್ನಿಸಿದ್ದು, ಕೃಷ್ಣಸರ್ಪಗಳಿಂದ ಕಚ್ಚಿಸಿದ್ದು, ಅರಗಿನ ಮನೆಯಲ್ಲಿ ಸುಡಿಸಿದ್ದು, ಜೂಜಿನಿಂದ ರಾಜ್ಯವನ್ನು ಅಪಹರಿಸಿದ್ದು, ಅರಣ್ಯವಾಸ ಮಾಡಿಸಿದ್ದು, ದ್ರೌಪದಿಯ ಕೇಶಪಾಶವನ್ನು ಹಿಡಿದು ಎಳೆದದ್ದು, ಬಲು ದಾರುಣವಾದ ಆಯುಧಗಳನ್ನು ಯುದ್ಧಗಳಲ್ಲಿ ಪ್ರಯೋಗಿಸಿದ್ದು, ಮನೆಗಳಲ್ಲಿಯೂ ಅಜ್ಞಾತವಾಸದಲ್ಲಿ ಸುಖವಾಗಿರದಂತೆ ಮಾಡಿದ್ದು, ವಿರಾಟನಗರದಲ್ಲಿ ಗೋಗ್ರಹಣದಿಂದ ನಮಗೆ ಬೇರೆ ರೀತಿಯಿಂದ ಕ್ಲೇಶ ಕೊಟ್ಟಿದ್ದು, ಧೃತರಾಷ್ಟ್ರನ ಮತ್ತು ಅವನ ಮಕ್ಕಳ ದೌರ್ಜನ್ಯದ ಕಾರಣದಿಂದಾಗಿ ನಾವು ಇಂಥ ದುಃಖಗಳನ್ನೇ ಇಂದಿನವರೆಗೆ ಸದಾ ಉಂಡು ಬಲ್ಲೆವು, ಹೊರತು ಸುಖಗಳನ್ನು ನಾವು ಕಂಡೇ ಇಲ್ಲ.

ಇತ್ಯುಕ್ತ್ವಾ ವಚನಂ ರಾಜನ್ ಜಯಂ ಪ್ರಾಪ್ಯ ವೃಕೋದರಃ ।
ಪುನರಾಹ ಮಹಾರಾಜ ಸ್ಮಯಂಸ್ತೌ ಕೇಶವಾರ್ಜುನೌ ॥೪೨॥

ರಾಜನೆ, ಭೀಮಸೇನನು ಹೀಗೆ ಹೇಳಿ ಜಯಶಾಲಿಯಾಗಿ ನಗುತ್ತ ಕೃಷ್ಣಾರ್ಜುನರಿಗೆ ಹೇಳಿದ.

ಇದು ಭೀಮಸೇನನು ನಡೆಸಿದ ಸೋಮಯಾಗದ ಕೃಷ್ಣಾರ್ಪಣ ರೂಪವಾಗಿದೆ.

ದುಃಶಾಸನೇ ಯದ್ ರಣೇ ಸಂಶ್ರುತಂ ಮೇ
ತದ್ವೈ ಸರ್ವಂ ಕೃತಮದ್ಯೇಹ ವೀರೌ ।
ಅತ್ಯೈವ ದಾಸ್ಯಾಮ್ಯಪರಂ ದ್ವಿತೀಯಂ
ದುರ್ಯೋಧನಂ ಯಜ್ಞಪಶುಂ ನಿಹತ್ಯ ॥೪೩॥

'ಏನಾರೆ, ದುಃಶಾಸನನ ವಿಷಯದಲ್ಲಿ ನಾನು ಏನು ಪ್ರತಿಜ್ಞೆ ಮಾಡಿದ್ದೆನೋ ರಣದಲ್ಲಿ ಈಗ ನಾನು ಅದೆಲ್ಲವನ್ನು ಅಂದರೆ ಪ್ರಧಾನ ಸೋಮಯಾಗವನ್ನು ಮಾಡಿ ಮುಗಿಸಿದ್ದೇನೆ. ಸೋಮಯಾಗಾಂಗ ಸವನೀಯ ಯಜ್ಞಪಶುವಾಗಿರುವ ದುರ್ಯೋಧನನನ್ನು ಮುಂದೆ ಇಲ್ಲಿಯೇ ವಧಿಸಿ ಬಲಿಕೊಡುತ್ತೇನೆ. ಇದು ಸಂಕಲ್ಪ.

ಶಿರೋ ಮೃದಿತ್ವಾ ಚ ಪದಾ ದುರಾತ್ಮನಃ
ಶಾಂತಿಂ ಲಪ್ಸ್ಯೇ ಕೌರವಾಣಾಂ ಸಮಕ್ಷಮ್ ॥೪೪॥

ಕೌರವಯೋಧರ ಸಮಕ್ಷಮದಲ್ಲಿಯೇ ದುರಾತ್ಮನಾದ ದುರ್ಯೋಧನನ ತಲೆಯನ್ನು ಕಾಲಿನಿಂದ ಮೆಟ್ಟಿ ನೆಮ್ಮದಿ ಪಡೆಯುವೆನು.

ಏತಾವದುಕ್ತ್ವಾ ವಚನಂ ಪ್ರಹೃಷ್ಟೋ
ನನಾದ ಚೋಚ್ಚೈ ರುಧಿರಾರ್ದ್ರಗಾತ್ರಃ ।
ನನರ್ತ ಚೈವಾತಿಬಲೋ ಮಹಾತ್ಮಾ
ವೃತ್ರಂ ನಿಹತ್ಯೇವ ಸಹಸ್ರನೇತ್ರಃ ॥೪೫॥

ಮೈಯೆಲ್ಲ ರಕ್ತದಿಂದ ತೊಯ್ದ ಅತಿಬಲಿಷ್ಠನಾದ ಮಹಾತ್ಮ ಭೀಮಸೇನನು ಪ್ರಹೃಷ್ಟನಾಗಿ ವೃತ್ರಾಸುರನನ್ನು ಕೊಂದ ದೇವೇಂದ್ರನಂತೆ ಸಿಂಹನಾದ ಗೈದ, ಹುಲಿಯಂತೆ ವೀರನೃತ್ಯ ಮಾಡಿದ.

ಮುಂದೆ (೮.೮೪.೩೪)ರಲ್ಲಿ ದುರ್ಯೋಧನ 'ಶಾರ್ದೂಲವದೇವ ಪ್ರಸಹ್ಯ' ಎಂದು ಹುಲಿಕುಣಿತವನ್ನು ಹೇಳುತ್ತಾನೆ. ಭೀಮನ ಈ ಹುಲಿವೇಷದ ಕುಣಿತ ಕೃಷ್ಣನಿಗೆ ಇಷ್ಟವಾಯಿತು.

ಉದ್ಯೋಗಪರ್ವದಲ್ಲಿ ಕರ್ಣನು ಕೃಷ್ಣನ ಮುಂದೆ ಈ ಕುರುಕ್ಷೇತ್ರ ಯುದ್ಧವನ್ನು ಯಜ್ಞವೆಂದು ಬಣ್ಣಿಸುತ್ತ ಭೀಮನು ಪ್ರಸ್ತೋತೃವಾಗಿ ಸಾಮಗಾನ ಮಾಡಿ ಸೋಮಪಾನ ಮಾಡುವನೆಂದೂ ದುರ್ಯೋಧನನ ವಧದಿಂದ ಅವನೇ ಯಜ್ಞಸಮಾಪ್ತಿ ಮಾಡುವನೆಂದೂ ಹೇಳಿದ್ದ—

ಸ ಏವ ರಾಜಾ ಧರ್ಮಾತ್ಮಾ ಶಾಶ್ವತೋऽಸ್ತು ಯುಧಿಷ್ಠಿರಃ ।
ದುಃಶಾಸನಸ್ಯ ರುಧಿರಂ ಯದಾ ಪಾಸ್ಯತಿ ಪಾಂಡವಃ ।
ಆನರ್ದಂ ನರ್ದತಃ ಸಮ್ಯಕ್ ತದಾ ಸ್ತುತ್ಯಂ ಭವಿಷ್ಯತಿ ।

ದುರ್ಯೋಧನಂ ಯದಾ ಹಂತಾ ಭೀಮಸೇನೋ ಮಹಾಬಲಃ ।
ತದಾ ಸಮಾಪ್ಸ್ಯತೇ ಯಜ್ಞೋ ಧಾರ್ತರಾಷ್ಟ್ರಸ್ಯ ಮಾಧವ ॥
ಗೀತಂ ಸ್ತೋತ್ರಂ ಸ ಸೌಭದ್ರಃ ಸಮ್ಯಕ್ ತತ್ರ ಭವಿಷ್ಯತಿ ।
ಉದ್ಗಾತಾತ್ರ ಪುನರ್ಭೀಮಃ ಪ್ರಸ್ತೋತಾ ಸುಮಹಾಬಲಃ ।
ವಿನದನ್ ಸ ನರವ್ಯಾಘ್ರೋ ನಾಗಾನೀಕಾಂತಕೃದ್ ರಣೇ ॥

ಕರ್ಣ ತಾನೂ ಅರ್ಜುನನಿಂದ ಹತನಾಗಿ ಈ ಯಜ್ಞದಲ್ಲಿ ಪಶುಯಾಗಕ್ಕೆ ಕುಂಡವಾಗುವೆನು ಎಂದು ಇಲ್ಲಿ ಉತ್ಸಾಹದಿಂದ ಹೇಳಿದ್ದನ್ನೂ ಗಮನಿಸಬೇಕು–

ಯದಾ ದ್ರಕ್ಷ್ಯಸಿ ಮಾಂ ಕೃಷ್ಣ ನಿಹತಂ ಸವ್ಯಸಾಚಿನಾ
ಪುನಶ್ಚಿತಿಸ್ತದಾ ಚಾಸ್ಯ ಯಜ್ಞಸ್ಯಾಥ ಭವಿಷ್ಯತಿ ।

ಯದ್ಯಪಿ ಈ ಯಜ್ಞದಲ್ಲಿ ದುರ್ಯೋಧನ 'ದೀಕ್ಷಿತ ಅಂದರೆ ಯಜಮಾನ' ನಾದಂತೆ ಮೇಲುನೋಟಕ್ಕೆ ಕಾಣುತ್ತದೆ. ಆದರೆ ಲಕ್ಷಾಲಂಕಾರದಲ್ಲಿ—

ದೀಕ್ಷಿತೋ ಧಾರ್ತರಾಷ್ಟ್ರೋಽತ್ರ ಪತ್ನೀ ಚಾಸ್ಯ ಮಹಾಚಮೂಃ'

ಎಂಬುದಕ್ಕೆ 'ದೀಕ್ಷಿತಃ ದೀಕ್ಷಾಂ ಪ್ರಾಪಿತಃ ಪಶುಃ ।' ಎಂದು ದೀಕ್ಷಿತ ಶಬ್ದಕ್ಕೆ ಪಶು ಎಂದು ವ್ಯಾಖ್ಯಾನಿಸಿದ್ದಾರೆ.

'ಧಾರ್ತರಾಷ್ಟ್ರಸ್ಯ ವಾರ್ಷ್ಣೇಯ ಶಸ್ತ್ರಯಜ್ಞೋ ಭವಿಷ್ಯತಿ' ಎಂಬಲ್ಲಿ 'ದುರ್ಯೋಧನನನ್ನೇ ಮುಖ್ಯವಾಗಿ ಪಶುವಾಗಿ ಆಹುತಿಗೊಳ್ಳುವ ಯಜ್ಞ ಇದು' ಎಂದೇ ಕರ್ಣ ಹೇಳುತ್ತಾನೆ.

ಅಥಾಹ ಭೀಮಃ ಪುನರುಗ್ರಕರ್ಮಾ
ದುಃಶಾಸನಂ ಕ್ರೋಧಪರೀತಚೇತಾಃ ।
ಗತಾಸುಮಾಲೋಕ್ಯ ವಿಹಸ್ಯ ಸುಸ್ವರಂ
ಕಿಂ ವಾ ಕುರ್ಯಾಂ ಮೃತ್ಯುನಾ ರಕ್ಷಿತೋಽಸಿ ॥೪೬॥

ಬಳಿಕ ಉಗ್ರಕರ್ಮಗಳನ್ನು ಮಾಡುವ ಭೀಮನು, ಅಷ್ಟರಲ್ಲಿ ದುಃಶಾಸನನು ಸತ್ತಿದ್ದನ್ನು ಕಂಡು, ಇನ್ನೂ ಹೆಚ್ಚು ಕ್ರೋಧದಿಂದ ಕೂಡಿದ ಚಿತ್ತದಿಂದ ಅಟ್ಟಹಾಸಪೂರ್ವಕ ದೊಡ್ಡ ಧ್ವನಿಯಿಂದ "ಈಗ ನಾನೇನು ಮಾಡಲಿ? ಮೃತ್ಯು ನಿನ್ನನ್ನು ಕಾಪಾಡಿತು. ನೀನು ಬದುಕಿದ್ದರೆ ಇನ್ನೂ ಚಿತ್ರಹಿಂಸೆ ಮಾಡಿ ನನ್ನ ಕ್ರೋಧವನ್ನು ಶಮನಗೊಳಿಸಿಕೊಳ್ಳುತ್ತಿದ್ದೆ!" ಎಂದ.

ಏವಂ ಬ್ರುವಾಣಂ ಪುನರುತ್ಥಿತಂ ತ-
ಮಾಸ್ಫೋಟ್ಯ ವಲ್ಗಂತಮತಿಪ್ರಹೃಷ್ಟಮ್ ।
ಯೇ ಭೀಮಸೇನಂ ದದೃಶುಸ್ತದಾನೀಂ
ಭಯೇನ ತೇಪಿ ವ್ಯಥಿತಾ ನಿಪೇತುಃ ॥೪೭॥

ಹೀಗೆ ಹೇಳುತ್ತ ಪುನಃ ದುಃಶಾಸನನನ್ನು ಆಕ್ರಮಿಸಿ ಅತಿಹೃಷ್ಟನಾಗಿ ಕುಣಿಯುವ ಭೀಮನನ್ನು ಯಾರು ಕಂಡರೋ ಅವರು ಭಯಾರ್ತರಾಗಿ ಬಿದ್ದರು.

ದೃಷ್ಟ್ವಾತು ನೃತ್ಯಂತಮುದಗ್ರರೂಪಂ
ಕಾಲಂ ಯಥಾ ತ್ವಂತಕಾಲೇ ಪ್ರಜಾನಾಮ್ ।
ಮಹದ್ ಭಯಂ ಚಾಧಿರಥಿಂ ವಿವೇಶ
ಜಯೇ ನಿರಾಶಾಶ್ಚ ಸುತಾಸ್ತ್ವದೀಯಾಃ ॥೪೮॥

ವೀರನೃತ್ಯ ಮಾಡುವ ಭೀಮನನ್ನು ಕಂಡಾಗ ಜನರಿಗೆ ಪ್ರಳಯಕಾಲದ ಕಾಲಯಮನ ದರ್ಶನವಾದಂತಾಯಿತು. ಕರ್ಣನನ್ನೂ ಮಹಾಭಯ ಪ್ರವೇಶಿಸಿತು. ರಾಜನೆ, ನಿನ್ನ ಮಕ್ಕಳು ಯುದ್ಧಜಯದಲ್ಲಿ ನಿರಾಸೆ ಹೊಂದಿದರು.

ಯೇ ಚಾಪಿ ತತ್ರಾಪತಿತಾ ಮನುಷ್ಯಾ-
ಸ್ತೇಷಾಂ ಕರೇಭ್ಯಃ ಪತಿತಂ ತು ಶಸ್ತ್ರಮ್ ।
ಭಯಾಚ್ಚ ಸಂಚುಕ್ರುಶುರುಚ್ಚಕೈಸ್ತೇ
ನಿಮೀಲಿತಾಕ್ಷಾ ಮುಮುಹುಶ್ಚ ತತ್ರ ॥೪೯॥

ಯಾರು ಮನುಷ್ಯರು ಬೀಳಲಿಲ್ಲವೋ, ಅವರ ಕೈಯಿಂದ ಅಸ್ತ್ರಗಳಂತೂ ಬಿದ್ದೇ ಹೋದುವು. ಎಲ್ಲರೂ ಭಯದಿಂದ ಜೋರಾಗಿ ಕೂಗಿಕೊಂಡರು. ಕಣ್ಣುಮುಚ್ಚಿ ದರು. ಮೂರ್ಛೆ ಹೊಂದಿದರು.

ಯೇ ತತ್ರ ಭೀಮಂ ದದೃಶುಃ ಸಮಂತಾದ್
ದೌಃಶಾಸನಂ ತದ್ರುಧಿರಂ ಪಿಬಂತಮ್ ।
ಸರ್ವೇ ಪಲಾಯಂತ ಭಯಾಭಿಪನ್ನಾ
ನಾಯಂ ಮನುಷ್ಯ ಇತಿ ಭಾಷಮಾಣಾಃ ॥೫೦॥

ದುಃಶಾಸನನ ರಕ್ತವನ್ನು ಭೀಮ ಕುಡಿಯುತ್ತಿದ್ದುದನ್ನು ಸುತ್ತಲೂ ಯಾರು ನೋಡಿದರೋ ದುರ್ಯೋಧನನೂ ಸೇರಿದಂತೆ ಅವರೆಲ್ಲರೂ ಭಯಾವಿಷ್ಟರಾಗಿ 'ಈತ ಮನುಷ್ಯನಲ್ಲ' ಎನ್ನುತ್ತ ಪಲಾಯನ ಗೈದರು.

ರಕ್ತಾರ್ದ್ರಗಾತ್ರಸ್ತು ತತೋ ಮಹಾತ್ಮಾ
ಗದಾಪಾಣಿಃ ಕಾಲ ಇವಾಂತಕಾಲೇ ।
ವಿಭೀಷಯಾನಸ್ತವ ಪುತ್ರಸೈನ್ಯಂ
ಇತಸ್ತತೋ ಧಾವತಿ ವಾಹಿನೀಂ ತೇ ॥೫೧॥

ನೆತ್ತರಿಂದ ಮೈ ತೊಯಿಸಿಕೊಂಡು ಗದಾಪಾಣಿಯಾಗಿ ಅಂತ್ಯಕಾಲದ ಕಾಲಯಮನಂತೆ ನಿನ್ನ ಮಕ್ಕಳ ಸೈನ್ಯವನ್ನು ಭೀತಿಗೊಳಿಸುತ್ತ ವೇಗವಾಗಿ ಎಲ್ಲ ಕಡೆ ಭೀಮಸೇನ ಸಂಚರಿಸಿದ.

ತತಃ ಕ್ಷಣಾದ್ ಭಾರತ ಶೂನ್ಯಮಾಸೀದ್
ಆಯೋಧನಂ ಘೋರತರಂ ಕುರೂಣಾಮ್ ।
ಯತ್ರಾಜಿಮಧ್ಯೇ ಪ್ರಾಪಿಬದ್ ಭೀಮಸೇನೋ
ದುಃಶಾಸನಸ್ಯ ರುಧಿರಂ ಕ್ರೋಧದೀಪ್ತಃ ॥೫೨॥

ರಾಜನೆ, ಬಳಿಕ ಕ್ಷಣದಲ್ಲಿ ಅತಿಘೋರವಾದ ಕುರುಕ್ಷೇತ್ರದ ರಣರಂಗ ಶೂನ್ಯವಾಯಿತು. ಏಕೆಂದರೆ ರಣರಂಗದ ಮಧ್ಯದಲ್ಲಿ ಕ್ರೋಧದಿಂದ ಉರಿಯುತ್ತ ಭೀಮಸೇನನು ದುಃಶಾಸನನ ರಕ್ತವನ್ನು ಪಾನಮಾಡಿದ.

ತಸ್ಮಿನ್ ಕೃತೇ ಭೀಮಸೇನೇನ ರೂಪೇ
ದೃಷ್ಟ್ವಾ ಸೇನಾಃ ಶೋಣಿತಂ ಪೀಯಮಾನಮ್ ।
ಸಂಪ್ರಾದ್ರವಂಶ್ಚಿತ್ರಸೇನೇನ ಸಾರ್ಧಂ
ಭೀಮಂ ರಕ್ಷೋ ಭಾಷಮಾಣಾ ಭಯಾರ್ತಾಃ ॥೫೩॥

ಭೀಮಸೇನ ಭಯಂಕರ ರೂಪು ತಳೆದು ರಕ್ತಪಾನ ಮಾಡುವುದನ್ನು ಕಂಡು 'ಇವನು ರಾಕ್ಷಸನೆ' ಎನ್ನುತ್ತ ಭಯಾರ್ತರಾಗಿ ಯೋಧರು ಕರ್ಣನ ತಮ್ಮನಾದ ಚಿತ್ರಸೇನನೊಂದಿಗೆ ಪಲಾಯನ ಮಾಡತೊಡಗಿದರು.

ಯುಧಾಮನ್ಯುಃ ಪ್ರದ್ರುತಂ ಚಿತ್ರಸೇನಂ
ಸಹಾನೀಕಂ ಸ್ಮಾಭ್ಯಯಾದ್ ರಾಜಪುತ್ರಃ ।
ವಿವ್ಯಾಧ ಚೈನಂ ನಿಶಿತೈಃ ಪೃಷತ್ಕೈ-
ರ್ವ್ಯಪೇತಭೀಃ ಸಪ್ತಭಿರಾಶುಮುಕ್ಷೈಃ ॥೫೪॥

ಚಿತ್ರಸೇನನು ಸೈನ್ಯದೊಂದಿಗೆ ಪಲಾಯನ ಮಾಡುತ್ತಿರುವುದನ್ನು ಕಂಡು ಭಯರಹಿತನಾದ ಯುಧಾಮನ್ಯು ತಡೆದು ಆಕ್ರಮಿಸಿದ. ತೀಕ್ಷ್ಣವಾದ ಏಳು ಬಾಣಗಳನ್ನು ವೇಗವಾಗಿ ಎಸೆದು ಅವನನ್ನು ಹೊಡೆದ.

ಪದಾಕ್ರಾಂತಃ ಸರ್ಪವಲ್ಲೇಲಿಹಾನೋ
ಮಹೋರಗಃ ಕ್ರೋಧವಿಷಂ ಸಿಸೃಕ್ಷುಃ ।
ನಿವೃತ್ಯ ಪಾಂಚಾಲಜಮಭ್ಯವಿಧ್ಯತ್
ತ್ರಿಭಿಃ ಶರೈಃ ಸಾರಥಿಂ ಚಾಪ್ಯವಿಧ್ಯತ್ ॥೫೫॥

ಚಿತ್ರಸೇನನಿಗೆ ಇದರಿಂದ ಕಾಲಿಂದ ತುಳಿದಷ್ಟು ಅವಮಾನವಾಯಿತು. ನಾಲಿಗೆ ಹೊರಚಾಚಿದ ಕ್ರೋಧವಿಷವನ್ನು ಕಾರುವ ದೊಡ್ಡ ಹಾವಿನಂತಾಗಿ ಅವನು ಹಿಂತಿರುಗಿ ಯುಧಾಮನ್ಯುವನ್ನು ಅವನ ಸಾರಥಿಯನ್ನು ಮೂರು ಬಾಣಗಳಿಂದ ಹೊಡೆದ.

ತತಃ ಸುಪುಂಖೇನ ಸುಪತ್ರಿತೇನ
ಸುಸಂಶಿತಾಗ್ರೇಣ ಶರೇಣ ಶೂರಃ ।
ಆಕರ್ಣಮುಕ್ತೇನ ಸಮಾಹಿತೇನ
ಯುಧಾಮನ್ಯುಸ್ತಸ್ಯ ಶಿರೋ ಜಹಾರ ॥೫೬॥

ಆಗ ಶೂರನಾದ ಯುಧಾಮನ್ಯು ಒಳ್ಳೆಯ ಪುಕ್ಕರೆಕ್ಕೆ, ಹರಿತವಾದ ತುದಿಗಳುಳ್ಳ ಬಾಣವನ್ನು ಕಿವಿವರೆಗೆ ಸೆಳೆದು ಏಕಾಗ್ರತೆಯಿಂದ ಎಸೆದು ಚಿತ್ರಸೇನನ ತಲೆಯನ್ನು ಕೆಡವಿದ.

ತಸ್ಮಿನ್ ಹತೇ ಭ್ರಾತರಿ ಚಿತ್ರಸೇನೇ
ಕ್ರುದ್ಧಃ ಕರ್ಣಃ ಪೌರುಷಂ ದರ್ಶಯಾನಃ ।

ದುದ್ರಾವ ತತ್ಪಾಂಡವಾನಾಮನೀಕಂ
ಪ್ರತ್ಯುದ್ಯಾತೋ ನಕುಲೇನಾಮಿತೌಜಾಃ ॥೫೭॥

ಸೋದರ ಚಿತ್ರಸೇನನು ಹತನಾದಾಗ ಕ್ರುದ್ಧನಾದ ಕರ್ಣನು ಪೌರುಷ ತೋರುತ್ತ ಪಾಂಡವಸೈನ್ಯದ ಕಡೆಗೆ ಧಾವಿಸಿದ. ಅಮಿತಪರಾಕ್ರಮಿಯಾದ ಆತನನ್ನು ನಕುಲ ಇದಿರಿಸಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ದುಃಶಾಸನವಧೋ ನಾಮ ಅಶೀತಿತಮೋऽಧ್ಯಾಯಃ ॥೮೦॥

❖

ಮಹಾಭಾರತತಾತ್ಪರ್ಯನಿರ್ಣಯ

ಯದಾ ಸ ರಂಗಃ ಪವಮಾನಸೂನುನಾ
ಶೂನ್ಯಃ ಕೃತಸ್ತತ್ರ ಮುಹೂರ್ತಮಾತ್ರಾತ್ ।
ದುರ್ಯೋಧನಸ್ಯಾವರಜಾಃ ಶರೌಘೈ-
ರವೀವೃಷನ್ ಭೀಮಮುದಾರಸತ್ತ್ವಮ್ ॥೧೬೦॥

ಹೀಗೆ ರಣರಂಗ ಭೀಮನಿಂದ ಶೂನ್ಯವಾಗಿ ಮಾಡಲ್ಪಟ್ಟಾಗ ಒಂದು ಮುಹೂರ್ತ ಮಾತ್ರ ಕಳೆದೊಡನೆ ದುರ್ಯೋಧನನ ತಮ್ಮಂದಿರು ಮಹಾಬಲಿಷ್ಠನಾದ ಭೀಮನ ಮೇಲೆ ಬಾಣಗಳ ಮಳೆಗರೆದರು.

ತಾನ್ ಮಾರುತಿರ್ಬಾಣವರೈರ್ನಿಕೃತ್ತ-
ಶೀರ್ಷಾನ್ ಯಮಾಯಾನಯದಾಶು ವೀರಃ ।
ತಸ್ಮಿನ್ ದಿನೇ ವಿಂಶತಿರ್ಧಾರ್ತರಾಷ್ಟ್ರಾ
ಹತಾಸ್ತದನ್ಯೇ ಸಮರಾತ್ ಪ್ರದುದ್ರುವುಃ ॥ ೧೬೧ ॥

ಅವರನ್ನು ವೀರನಾದ ಭೀಮ ಬೇಗನೆ ಉತ್ತಮ ಬಾಣಗಳಿಂದ ಶಿರಶ್ಛೇದಗೈದು ಯಮನ ಬಳಿಗೆ ಅಟ್ಟಿದ. ಆ ದಿನದಲ್ಲಿ ಇಪ್ಪತ್ತು ಮಂದಿ ಧೃತರಾಷ್ಟ್ರಪುತ್ರರು ಹತರಾದರು. ಉಳಿದವರು ರಣರಂಗದಿಂದ ಪಲಾಯನ ಮಾಡಿದರು.

ಕರ್ಮಾಣ್ಯನನ್ಯೋಪಯಿಕಾನಿ ಭೀಮೇ
ಕುರ್ವತ್ಯೇವಂ ಭೀತಭೀತೇರಿಸಂಘೇ ।
ನಿಮೀಲಿತಾಕ್ಷೇ ಚ ಭಯೇನ ಕರ್ಣೇ
ಕರ್ಣಾತ್ಮಜೋ ನಕುಲಂ ಪ್ರತ್ಯಧಾವತ್ ॥ ೧೬೨ ॥

ಹೀಗೆ ಭೀಮ ಇತರರಿಗೆ ಅಸಾಧ್ಯವಾದ ಕರ್ಮಗಳನ್ನು ಮಾಡುತ್ತಿದ್ದಾಗ, ಶತ್ರು ಸಮೂಹ ಬಹಳ ಭಯಗ್ರಸ್ತವಾದಾಗ, ಕರ್ಣನೂ ಕೂಡ ಭಯದಿಂದ ಕಣ್ಣುಮುಚ್ಚಿಕೊಂಡಿದ್ದಾಗ ಕರ್ಣನ ಮಗ ವೃಷಸೇನ ನಕುಲನ ಮುಂದೆ ಯುದ್ಧಕ್ಕೆ ಧಾವಿಸಿ ಬಂದ.

ಮಾದ್ರೀಸುತೋ ವೃಷಸೇನಂ ಶರೌಘೈ-
ರವಾರಯತ್ ತಂ ವಿರಥಂ ಚಕಾರ ।
ಕರ್ಣಾತ್ಮಜಃ ಸೋಽಪ್ಯಸಿಚರ್ಮಪಾಣಿ-
ಸ್ತಸ್ಯಾನುಗಾಂಸ್ತ್ರಿಸಹಸ್ರಂ ಜಘಾನ ॥೧೬೩॥

ನಕುಲ ವೃಷಸೇನನನ್ನು ಬಾಣಸಮೂಹಗಳಿಂದ ತಡೆದ. ವೃಷಸೇನ ಅವನನ್ನು ವಿರಥನನ್ನಾಗಿ ಮಾಡಿದ. ಆದರೆ ನಕುಲ ಕತ್ತಿ-ಗುರಾಣಿಗಳನ್ನು ಹಿಡಿದು ಅವನ ಮೂರು ಸಾವಿರ ಸೈನಿಕರನ್ನು ಕೊಂದ.

ಕರ್ಣಾತ್ಮಜಸ್ತಸ್ಯ ಸಂಛಿದ್ಯ ಚರ್ಮ
ಭೀಮಾರ್ಜುನಾದೀನಪಿ ಬಾಣಸಂಘೈಃ ।
ಅವೀವೃಷತ್ ತಸ್ಯ ಪಾರ್ಥಃ ಶರೇಣ
ಗ್ರೀವಾಬಾಹೂರೂನ್ ಯುಗಪಚ್ಚಕರ್ತ ॥೧೬೪॥

ವೃಷಸೇನ ನಕುಲನ ಗುರಾಣಿಯನ್ನು ಕತ್ತರಿಸಿ ಭೀಮಾರ್ಜುನಾದಿಗಳ ಮೇಲೂ ಬಾಣಸಮೂಹಗಳ ಮಳೆಗರೆದ. ಅರ್ಜುನ ಒಂದೇ ಬಾಣದಿಂದ ಒಮ್ಮೆಲೆ ವೃಷಸೇನನ ಕುತ್ತಿಗೆ ಭುಜ ತೊಡೆಗಳನ್ನು ಕತ್ತರಿಸಿದ.

❖❖❖

ಎಂಬತ್ತೊಂದನೆಯ ಅಧ್ಯಾಯ

ಧೃತರಾಷ್ಟ್ರನ ಒಂಬತ್ತು ಪುತ್ರರ ವಧ.
ಅರ್ಜುನನಿಂದ ಕರ್ಣಪುತ್ರ ವೃಷಸೇನನ ವಧ.

ಸಂಜಯಃ

ದುಃಶಾಸನೇ ತು ನಿಹತೇ ಪುತ್ರಾಸ್ತವ ಮಹಾರಥಾಃ ।
ಮಹಾಕ್ರೋಧವಿಷಾ ವೀರಾಃ ಸಮರೇಷ್ವಪಲಾಯಿನಃ ॥೧॥

ತೇ ತು ರಾಜನ್ ಮಹಾವೀರ್ಯಾ ಭೀಮಂ ಪ್ರಾಚ್ಛಾದಯನ್ ಶರೈಃ ೨।
ನಿಷಂಗೀ ಕವಚೀ ಖಡ್ಗೀ ದಂಡಧಾರೋ ಧನುರ್ಧರಃ ।
ಅಲಂಬುರ್ಜಲಸಂಧಶ್ಚ ವಾತವೇಗಸುವರ್ಚಸೌ ॥೩॥

ಸಂಜಯ ನುಡಿದ— ರಾಜನೆ, ನಿನ್ನ ಪುತ್ರರು ಮಹಾಬಲಿಷ್ಠರು, ಸಮರದಲ್ಲಿ ಪಲಾಯನ ಮಾಡದ ಮಹಾರಥರು, ವೀರರು. ದುಃಶಾಸನನು ಹತನಾದಾಗ ಅವರು ಒಂಬತ್ತು ಮಂದಿ ಮಹಾಕ್ರೋಧದ ವಿಷವನ್ನು ಕಾರುತ್ತ ಭೀಮನನ್ನು ಬಾಣಗಳಿಂದ ಮುಚ್ಚಿದರು. ಅವರು ನಿಷಂಗಿ–ಕವಚಿ–ಖಡ್ಗಿ–ದಂಡಧಾರ–ಧನುರ್ಧರ– ಅಲಂಬು–ಜಲಸಂಧ–ವಾತವೇಗ ಮತ್ತು ಸುವರ್ಚರು.

ಏತೇ ಸಮೇತ್ಯ ಸಹಿತಾ ಭ್ರಾತೄವ್ಯಸನಕರ್ಶಿತಾಃ ।
ಭೀಮಸೇನಂ ಮಹಾಬಾಹುಂ ಮಾರ್ಗಣೈಃ ಸಮವಾರಯನ್ ॥೪॥

ಇವರು ಒಂಬತ್ತುಮಂದಿ ಜೊತೆಗೆ ಸೇರಿ, ತೊಂಬತ್ತು ಮಂದಿ ಸೋದರರು ಆಗಲೆ ಭೀಮನಿಂದ ಹತರಾಗಿರುವುದರಿಂದ ವ್ಯಸನದಿಂದ ಕುಗ್ಗಿ ಹೋಗಿದ್ದರೂ ಕೂಡ, ಮಹಾಬಾಹುವಾದ ಭೀಮಸೇನನನ್ನು ಬಾಣಗಳಿಂದ ಮುಚ್ಚಿದರು.

ಸ ವಾರ್ಯಮಾಣೋ ವಿಶಿಖೈಃ ಸಮಂತಾತ್ ತೈರ್ಮಹಾರಥೈಃ ।
ಭೀಮಃ ಕ್ರೋಧಾಭಿರಕ್ತಾಕ್ಷಃ ಕ್ರುದ್ಧಃ ಕಾಲ ಇವಾಬಭೌ ॥೫॥

ಭೀಮನನ್ನು ಆ ಮಹಾರಥರು ಸುತ್ತಲೂ ಬಾಣಗಳಿಂದ ತಡೆದಾಗ ಕೋಪದಿಂದ ಕಣ್ಣು ಕೆಂಪು ಮಾಡಿಕೊಂಡು ಕ್ರುದ್ಧನಾದ ಕಾಲಯಮನಂತೆ ಕಂಡುಬಂದ.

ತಾಂಸ್ತು ಭಲ್ಲೈರ್ಮಹಾವೇಗೈರ್ದಶಭಿರ್ದಶಭಿಃ ಶಿತೈಃ ।
ರುಗ್ಣಾಂಗದೋ ರುಗ್ಣಪುಂಖೈಃ ಪಾರ್ಥೋ ನಿನ್ಯೇ ಯಮಕ್ಷಯಮ್ ॥೬॥

ಅವರೆಲ್ಲರನ್ನೂ ಬಂಗಾರದ ತೋಳ್ಬಳೆ ಉಳ್ಳ ಭೀಮನು ಬಂಗಾರದ ಪುಕ್ಕಉಳ್ಳ ಮಹಾವೇಗದ ಹರಿತವಾದ ಹತ್ತು ಹತ್ತು ಭಲ್ಲೆಗಳಿಂದ ಯಮಸನದಕ್ಕೆ ಅಟ್ಟಿದ.

ಇಲ್ಲಿಗೆ ತೊಂಬತ್ತೊಂಬತ್ತು ಕೌರವರು ಹತರಾದರು. ಇನ್ನು ಉಳಿದವನು ದುರ್ಯೋಧನನು ಒಬ್ಬನೆ.

ಹತೇಷು ತೇಷು ವೀರೇಷು ಪ್ರದುದ್ರಾವ ಬಲಂ ತವ ।
ಪಶ್ಯತಃ ಸೂತಪುತ್ರಸ್ಯ ಪಾಂಡವಸ್ಯ ಭಯಾರ್ದಿತಮ್ ॥೭॥

ಕರ್ಣನು ನೋಡುತ್ತಿದ್ದಂತೆಯೇ ಆ ವೀರರು ಹತರಾದಾಗ ಭೀಮನ ಭಯದಿಂದ ನಿನ್ನ ಸೈನ್ಯವು ಪಲಾಯನ ಮಾಡಿತು.

ತತಃ ಕರ್ಣೋ ಮಹಾರಾಜ ಪ್ರವಿವೇಶ ಮಹಾರಣಮ್ ।
ದೃಷ್ಟ್ವಾ ಭೀಮಸ್ಯ ವಿಕ್ರಾಂತಮಂತಕಸ್ಯ ಪ್ರಜಾಸ್ವಿವ ॥೮॥

ಮಹಾರಾಜ, ಜಂತುಗಳಲ್ಲಿ ಅಂತಕನ ಪರಾಕ್ರಮದಂತೆ ಶತ್ರುಗಳಲ್ಲಿ ಭೀಮನ ಪರಾಕ್ರಮ ಮೆರೆಯುತ್ತಿರುವುದನ್ನು ಕಂಡು ಕರ್ಣನು ಮಹಾರಣವನ್ನು ಪ್ರವೇಶಿಸಿದ.

ಒಂದು ಮುಹೂರ್ತಕಾಲ ಭೀಮನ ಭಯದಿಂದ ಎಲ್ಲ ಕೌರವಸೈನಿಕರೂ ಪಲಾಯನ ಮಾಡಿ ರಣರಂಗವನ್ನು ಶೂನ್ಯವಾಗಿ ಮಾಡಿದ್ದರು. ಬಳಿಕ ಬಂದ ಒಂಬತ್ತು ಮಂದಿ ಕೌರವರೂ ಸತ್ತುದರಿಂದ ರಣರಂಗ ಶೂನ್ಯವೇ ಆಯಿತು. ಆಗ ಕರ್ಣನು ರಂಗವನ್ನು ಪ್ರವೇಶಿಸಿದ.

ತಸ್ಯ ತ್ವಾಕಾರಭಾವಜ್ಞಃ ಶಲ್ಯಃ ಸಮಿತಿಶೋಭನಃ ।
ಉವಾಚ ವಚನಂ ಕರ್ಣಂ ಪ್ರಾಪ್ತಕಾಲಮರಿಂದಮ ॥೯॥

ರಾಜನೆ, ಕರ್ಣನ ಮುಖಚರ್ಯೆಯಿಂದ ಅವನ ಮನದೊಳಗಿನ ಭಾವವನ್ನು ಅರಿತುಕೊಳ್ಳಬಲ್ಲ ಯುದ್ಧದಲ್ಲಿ ಶೋಭಿಸುವ ಸಾರಥಿಯಾದ ಶಲ್ಯರಾಜನು ತತ್ಕಾಲಕ್ಕೆ ಉಚಿತವಾದ ಮಾತನ್ನು ಕರ್ಣನಿಗೆ ಹೇಳಿದ.

ಶಲ್ಯಃ

ಮಾ ವ್ಯಥಾಂ ಕುರು ರಾಧೇಯ ನೈತತ್ತ್ವಯ್ಯುಪಪದ್ಯತೇ ॥೧೦॥

ಶಲ್ಯ ನುಡಿದ– ಕರ್ಣ, ವ್ಯಥೆ ಮಾಡಬೇಡ. ಇದು ನಿನಗೆ ಶೋಭಿಸುವುದಿಲ್ಲ.

ಏತೇ ದ್ರವಂತಿ ರಾಜಾನೋ ಭೀಮಸೇನಭಯಾರ್ದಿತಾಃ ।
ದುರ್ಯೋಧನಶ್ಚ ಸಂಮೂಢೋ ಭ್ರಾತೃವ್ಯಸನದುಃಖಿತಃ ॥೧೧॥

ಭೀಮಸೇನನ ಭಯದಿಂದ ಆರ್ತರಾದ ಈ ರಾಜರು ಪಲಾಯನ ಮಾಡುತ್ತಿದ್ದಾರೆ. ದುರ್ಯೋಧನನೂ ಕೂಡ ಸೋದರರ ಮರಣದುಃಖದಿಂದ ಮಂಕಾಗಿ ಕುಳಿತಿದ್ದಾನೆ.

ದುಃಶಾಸನಸ್ಯ ರುಧಿರೇ ಪೀಯಮಾನೇ ಮಹಾತ್ಮನಾ ।
ವ್ಯಾಪನ್ನಚೇತಸಶ್ಚೈವ ಶೋಕೋಪಹತಮನ್ಯವಃ ॥೧೨॥

ಉಪಾಸತೇ ತ್ವಾಮೇತೇ ಹಿ ಪರಿವಾರ್ಯ ಮಹಾರಥಾಃ ।
ಕೃಪಪ್ರಭೃತಯಃ ಕರ್ಣ ಹತಶೇಷಾಶ್ಚ ಬಾಂಧವಾಃ ॥೧೩॥

ಮಹಾತ್ಮ ಭೀಮನು ದುಃಶಾಸನನ ರಕ್ತವನ್ನು ಪಾನಮಾಡುವಾಗ ಕೃಪ ಮುಂತಾದ ಮಹಾರಥರೂ ಉಳಿದುಳಿದ ಬಂಧುಗಳೂ ಶೋಕದಿಂದ ಕೋಪವನ್ನು ಮರೆತು ಬುದ್ಧಿಗೆಟ್ಟವರಾಗಿ ನಿನ್ನನ್ನೇ ನಂಬಿ ಕುಳಿತಿದ್ದಾರೆ.

ಪಾಂಡವಾ ಲಬ್ಧಲಕ್ಷ್ಯಾಶ್ಚ ಧನಂಜಯಪುರೋಗಮಾಃ ।
ತ್ವಾಮೇವಾಭಿಮುಖಾಃ ಶೂರಾ ಯುದ್ಧಾಯ ಸಮುಪಸ್ಥಿತಾಃ ॥೧೪॥

ಅರ್ಜುನನೇ ಮುಂತಾದ ಶೂರಪಾಂಡವರು ಗುರಿಮುಟ್ಟಿ ಈಗ ನಿನ್ನನ್ನೇ ನಿರೀಕ್ಷಿಸುತ್ತ ಯುದ್ಧಕ್ಕೆ ಸನ್ನದ್ಧರಾಗಿದ್ದಾರೆ.

ಸ ತ್ವಂ ಪುರುಷಶಾರ್ದೂಲ ಪೌರುಷೇ ಮಹತಿ ಸ್ಥಿತಃ ।
ಕ್ಷತ್ರಧರ್ಮಂ ಪುರಸ್ಕೃತ್ಯ ಪ್ರತ್ಯುದ್ಯಾಹಿ ಧನಂಜಯಮ್ ॥೧೫॥

ಪುರುಷಶ್ರೇಷ್ಠನೆ, ನೀನೀಗ ಕ್ಷಾತ್ರಧರ್ಮವನ್ನು ಪುರಸ್ಕರಿಸಿ ಒಳ್ಳೆಯ ಪೌರುಷವನ್ನು ತೋರುತ್ತ ಅರ್ಜುನನನ್ನು ಇದಿರಿಸು.

ಭಾರೋ ಹಿ ಧಾರ್ತರಾಷ್ಟ್ರೇಣ ತ್ವಯಿ ಸರ್ವಃ ಸಮರ್ಪಿತಃ ।
ತಮುದ್ವಹ ಮಹಾಬಾಹೋ ಯಥಾಶಕ್ತಿ ಯಥಾಬಲಮ್ ।
ಜಯೇ ಸ್ಯಾದ್ ವಿಪುಲಾ ಕೀರ್ತಿರ್ಧ್ರುವಃ ಸ್ವರ್ಗಃ ಪರಾಜಯೇ ॥೧೬॥

ಮಹಾಬಾಹುವೆ, ಈ ಯುದ್ಧದ ಎಲ್ಲ ಭಾರವನ್ನು ದುರ್ಯೋಧನನು ನಿನ್ನಲ್ಲಿ ಇರಿಸಿದ್ದಾನೆ. ಅದನ್ನು ನೀನು ನಿನ್ನ ಶಕ್ತಿಗೆ, ಬಲಕ್ಕೆ ಅನುಸಾರವಾಗಿ ನಿರ್ವಹಿಸು.

ವೃಷಸೇನಶ್ಚ ರಾಧೇಯ ಸಂಕ್ರುದ್ಧಸ್ತನಯಸ್ತವ ।
ತ್ವಯಿ ಮೋಹಸಮಾಪನ್ನೇ ಪಾಂಡವಾನಭಿಧಾವತಿ ॥೧೭॥

ನೀನು ಮಂಕಾಗಿ ಕುಳಿತಿರುವುದನ್ನು ಕಂಡು ನಿನ್ನ ಮಗ ವೃಷಸೇನ ಕ್ರುದ್ಧನಾಗಿ ಪಾಂಡವರನ್ನು ಇದಿರಿಸಲು ಹೊರಟಿದ್ದಾನೆ.

ಸಂಜಯಃ

ಏತಚ್ಛ್ರುತ್ವಾ ತು ವಚನಂ ಶಲ್ಯಸ್ಯಾಮಿತತೇಜಸಃ ।
ಹೃದಿ ಧೈರ್ಯಯುತಂ ಭಾವಂ ಕೃತ್ವಾ ಯುದ್ಧಾಯ ಸೋದ್ರವತ್ ॥೧೮॥

ಸಂಜಯ ನುಡಿದ— ಅಮಿತ ಪರಾಕ್ರಮಿಯಾದ ಶಲ್ಯನ ಈ ಮಾತನ್ನು ಕೇಳಿ ಕರ್ಣನು ಹೃದಯದಲ್ಲಿ ಧೈರ್ಯಯುಕ್ತವಾದ ಭಾವವನ್ನು ಮಾಡಿಕೊಂಡು ಯುದ್ಧಕ್ಕೆ ಹೊರಟ.

ತತಃ ಕ್ರುದ್ಧೋ ವೃಷಸೇನೋಽಭ್ಯಧಾವ-
ದಾತಸ್ಥಿವಾಂಸಂ ಸ್ವರಥಂ ಹತಾರಿಮ್ ।
ವೃಕೋದರಂ ಕಾಲಮಿವಾತ್ತದಂಡಂ
ಗದಾಹಸ್ತಂ ಪೋಥಮಾನಂ ತ್ವದೀಯಾನ್ ॥೧೯॥

ಆಗ ಶತ್ರುಸಂಹಾರ ಮಾಡಿ ತನ್ನ ರಥವನ್ನೇರಿದ್ದ ಗದೆಯನ್ನು ಹಿಡಿದು ದಂಡಧಾರಿಯಮನಂತೆ ನಿನ್ನವರನ್ನು ನಾಶಮಾಡುತ್ತಿದ್ದ ಭೀಮನನ್ನು ಕರ್ಣಪುತ್ರ ವೃಷಸೇನ ಇದಿರಿಸಿದ.

ತಮಭ್ಯಧಾವನ್ನಕುಲಃ ಪ್ರವೀರೋ
ರೋಷಾದಮಿತ್ರಂ ಪ್ರತುದನ್ ಪೃಷತ್ಕೈಃ ।

ಕರ್ಣಸ್ಯ ಪುತ್ರಂ ಸಮರೇ ಪ್ರಹೃಷ್ಟಂ
ಜಿಷ್ಣುರ್ಜಿಘಾಂಸುರ್ಮಘವೇವ ಜಂಭಮ್ ॥೨೦॥

ಆಗ ಒಳ್ಳೆಯ ವೀರನಾದ, ಜಯಶೀಲನಾದ, ರೋಷಗೊಂಡು ಶತ್ರುವನ್ನು ಬಾಣಗಳಿಂದ ಹೊಡೆಯುವ ನಕುಲನು ಬಹಳ ಉತ್ಸಾಹಗೊಂಡಿದ್ದ ಆ ಕರ್ಣ ಪುತ್ರನನ್ನು, ಜಂಭಾಸುರನನ್ನು ಇಂದ್ರನಂತೆ ರಣದಲ್ಲಿ ಆಕ್ರಮಿಸಿದ.

ತತೋ ಧ್ವಜಂ ಸ್ಫಾಟಿಕಚಿತ್ರಕಂಬುಂ
ಚಿಚ್ಛೇದ ವೀರೋ ನಕುಲಃ ಕ್ಷುರೇಣ ।
ಕರ್ಣಾತ್ಮಜಸ್ಯೇಷ್ವಸನಂ ಚ ಚಿತ್ರಂ
ಭಲ್ಲೇನ ಜಾಂಬೂನದಪಟ್ಟನದ್ಧಮ್ ॥೨೧॥

ವೃಷಸೇನನ ಸ್ಫಟಿಕಮಯ ಸುಂದರ ಶಂಖರೂಪವಾದ ಧ್ವಜವನ್ನೂ ಕ್ಷುರದಿಂದ ಕತ್ತರಿಸಿದ. ಬಂಗಾರದ ಪಟ್ಟಿಯಿಂದ ಖಚಿತವಾದ ಸುಂದರವಾದ ಧನುಸ್ಸನ್ನೂ ಭಲ್ಲೆಯಿಂದ ಕಡಿದ.

ಅಥಾನ್ಯದಾದಾಯ ಧನುಃ ಸುಶೀಘ್ರಂ
ಕರ್ಣಾತ್ಮಜಃ ಪಾಂಡವಮಭ್ಯವಿಧ್ಯತ್ ।
ದಿವ್ಯೈರ್ಮಹಾಸ್ತ್ರೈರ್ನಕುಲಂ ಮಹಾಸ್ತ್ರೋ
ದುಃಶಾಸನಸ್ಯಾಪಚಿತಿಂ ಯಿಯಾಸುಃ ॥೨೨॥

ದುಃಶಾಸನನ ಸಮಾರಾಧನೆ ಮಾಡಲು ಬಯಸಿದ್ದ ಮಹಾಸ್ತ್ರಶಾಲಿ ವೃಷಸೇನನು ಬೇಗನೆ ಇನ್ನೊಂದು ಬಿಲ್ಲನ್ನೆತ್ತಿಕೊಂಡು ದಿವ್ಯವಾದ ಮಹಾ ಅಸ್ತ್ರಗಳಿಂದ ನಕುಲನನ್ನು ಹೊಡೆದ.

ತತಃ ಕ್ರುದ್ಧೋ ನಕುಲಸ್ತಂ ಮಹಾತ್ಮಾ
ಶರೈರ್ಮಹೋಲ್ಕಾಪ್ರತಿಮೈರವಿಧ್ಯತ್ ।
ದಿವ್ಯೈರಸ್ತ್ರೈರಭ್ಯವಿಧ್ಯಚ್ಚ ಸೋಽಪಿ
ಕರ್ಣಸ್ಯ ಪುತ್ರೋ ನಕುಲಂ ಕೃತಾಸ್ತ್ರಃ ॥೨೩॥

ಮಹಾತ್ಮ ನಕುಲನು ಕ್ರುದ್ಧನಾಗಿ ದೊಡ್ಡ ಕೊಳ್ಳಿಯಂಥ ಬಾಣಗಳಿಂದ ವೃಷಸೇನನನ್ನು ಹೊಡೆದ. ವೃಷಸೇನನೂ ನಕುಲನನ್ನು ದಿವ್ಯಾಸ್ತ್ರಗಳಿಂದ ಹೊಡೆದ.

ಶರಾಭಿಘಾತಾಚ್ಚ ರುಷಾ ಚ ರಾಜನ್
ಸ್ವಯಂ ಚ ಭಾಸಾಸ್ತ್ರಸಮೀರಣಾಚ್ಚ ।
ಜಜ್ವಾಲ ಕರ್ಣಸ್ಯ ಸುತೋಽತಿಮಾತ್ರ-
ಮಿದ್ಧೋ ಯಥಾಜ್ಯಾಹುತಿಭಿರ್ಹುತಾಶಃ ॥೨೪॥

ರಾಜನೆ, ಬಾಣಗಳ ಹೊಡೆತದಿಂದಲೂ ಕೋಪದಿಂದಲೂ ತನ್ನ ಸ್ವಾಭಾವಿಕ ಕಾಂತಿಯಿಂದಲೂ ಅಸ್ತ್ರಪ್ರಯೋಗದಿಂದಲೂ, ಆಜ್ಯಾಹುತಿಗಳಿಂದ ಬೆಳಗುವ ಯಾಗಾಗ್ನಿಯಂತೆ, ಬಹಳವಾಗಿ ವೃಷಸೇನನು ಬೆಳಗಿದ.

ಕರ್ಣಸ್ಯ ಪುತ್ರೋ ನಕುಲಸ್ಯ ರಾಜನ್
ಸರ್ವಾನಶಾನ್ವಕ್ಷಿಣೋದುತ್ತಮಾಸ್ತ್ರೈಃ ।
ವನಾಯುಜಾನ್ ಸುಕುಮಾರಸ್ಯ ಶುಭ್ರಾ-
ನಲಂಕೃತಾನ್ ಜಾತರೂಪೇಣ ಶೀಘ್ರಾನ್ ॥೨೫॥

ವೃಷಸೇನನು, ರಾಜನೆ, ವನಾಯುದೇಶದಲ್ಲಿ ಹುಟ್ಟಿದ ಶುಭ್ರವಾದ, ಬಂಗಾರದಿಂದ ಅಲಂಕೃತವಾದ, ವೇಗಉಳ್ಳ, ಕೋಮಲನಾದ ನಕುಲನ ಎಲ್ಲ ಕುದುರೆಗಳನ್ನೂ ಉತ್ತಮ ಅಸ್ತ್ರಗಳಿಂದ ನಾಶಪಡಿಸಿದ.

ತತೋ ಹತಾಶ್ವಾದವರುಹ್ಯ ಯಾನಾ-
ದಾದಾಯ ಚರ್ಮ ರುಚಿರಂ ಚಾಷ್ಟಚಂದ್ರಮ್ ।
ಆಕಾಶಸಂಕಾಶಮಸಿಂ ಗೃಹೀತ್ವಾ
ಪ್ರೋತ್ಪ್ಲುಯಮಾನಃ ಖಗವಚ್ಚಚಾರ ॥೨೬॥

ಬಳಿಕ ನಕುಲನು ಅಶ್ವಗಳಿಲ್ಲದ ರಥದಿಂದ ಇಳಿದು ಅಷ್ಟಚಂದ್ರ ಚಿಹ್ನೆ ಉಳ್ಳ ಸುಂದರವಾದ ಗುರಾಣಿಯನ್ನೂ ಆಕಾಶದಂತೆ ನೀಲವಾದ ಖಡ್ಗವನ್ನೂ ಹಿಡಿದು ಹಕ್ಕಿಯಂತೆ ಹಾರುತ್ತ ರಣದಲ್ಲಿ ಸಂಚರಿಸಿದ.

ತತೋಽಂತರಿಕ್ಷೇ ನೃವರಾಶ್ವನಾಗಾನ್
ಚಿಚ್ಛೇದ ಮಾರ್ಗಾನ್ ವಿಚರನ್ ವಿಚಿತ್ರಾನ್ ।
ತತೋಽಸ್ಯ ಪಕ್ಷಾನನಯದ್ ಯಮಾಯ
ದ್ವಿಸಾಹಸ್ರಾನ್ನಕುಲಃ ಕ್ಷಿಪ್ರಕಾರೀ ॥೨೭॥

ವೇಗವುಳ್ಳ ನಕುಲನು ಅಂತರಿಕ್ಷದಲ್ಲಿ ವಿಚಿತ್ರ ವರಸೆಗಳನ್ನು ತೋರುತ್ತ ವೃಷಸೇನನ ಕಡೆಯ ಎರಡುಸಾವಿರ ಪದಾತಿ ಅಶ್ವ ಗಜಯೋಧರನ್ನು ಕತ್ತರಿಸಿದ. ಯಮನಿಗೆ ಕಳಿಸಿಕೊಟ್ಟ.

ತೇ ಪ್ರಾಪತನ್ನಸಿನಾ ಗಾಂ ವಿಶಸ್ತಾ
ಯಥಾಶ್ವಮೇಧೇ ಪಶವಃ ಶಮಿತ್ರಾ ॥೨೮॥

ಅಶ್ವಮೇಧದಲ್ಲಿ ಪಶುವಧೆ ಮಾಡುವ ಶಮಿತ್ರನಿಂದ ಪಶುಗಳು ಸತ್ತು ಬೀಳುವಂತೆ ನಕುಲನ ಖಡ್ಗದಿಂದ ಕಡಿದು ಅವರು ನೆಲದ ಮೇಲೊರಗಿದರು.

ದ್ವಿಸಾಹಸ್ರಾ ವಿದಿತಾ ಯುದ್ಧಶೌಂಡಾ
ನಾನಾದೇಶ್ಯಾಃ ಸುಭೃತಾಃ ಸತ್ಯಸಂಧಾಃ ।
ಏಕೇನ ಶೀಘ್ರಂ ನಕುಲೇನ ಕೃತ್ತಾಃ
ಸಾರೇಪ್ಸುನೇವೋತ್ತಮಚಂದನಾಸ್ತೇ ॥೨೯॥

ಯುದ್ಧನಿಪುಣರಾದ ಚೆನ್ನಾಗಿ ಪೋಷಿತರಾದ ಸತ್ಯಸಂಧರಾದ ಪ್ರಸಿದ್ಧರಾದ ನಾನಾದೇಶದವರಾದ ಎರಡು ಸಾವಿರಯೋಧರು ಒಬ್ಬ ನಕುಲನಿಂದ ಬೇಗನೆ ಸಾರಾಪೇಕ್ಷಿಯಿಂದ ಉತ್ತಮವಾದ ಚಂದನಗಳು ಕಡಿದು ಹೋಗುವಂತೆ ಹತರಾದರು.

ತಮಾಪತಂತಂ ನಕುಲಂ ಸೋಽಭಿಪತ್ಯ
ಸಮಂತತಃ ಸಾಯಕೈರಭ್ಯವಿಧ್ಯತ್ ।
ಸ ತುದ್ಯಮಾನೋ ನಕುಲಃ ಪೃಷತ್ಕೈ-
ರ್ವಿವ್ಯಾಧ ವೀರಂ ಸ ಚುಕೋಪ ವಿದ್ಧಃ ॥೩೦॥

ಆಕ್ರಮಿಸುತ್ತಿದ್ದ ನಕುಲನನ್ನು ವೃಷಸೇನನು ತಡೆದು ಎಲ್ಲೆಡೆ ಬಾಣಗಳಿಂದ ಹೊಡೆದ. ಹೊಡೆಸಿಕೊಂಡ ನಕುಲನು ಆ ವೀರನನ್ನು ಬಾಣಗಳಿಂದ ಹೊಡೆದ. ಹೊಡೆಸಿಕೊಂಡ ವೃಷಸೇನ ಕೋಪಿಸಿಕೊಂಡ.

ತತೋಽಭ್ಯಧಾವತ್ಸಮರೇ ಜಿಘಾಂಸುಃ
ಕರ್ಣಾತ್ಮಜಂ ಪಾಂಡುಸುತೋ ನೃವೀರಃ ।

ತಸ್ಯೇಷುಭಿರ್ವ್ಯಧಮತ್ ಕರ್ಣಪುತ್ರೋ
ಮಹಾರಣೇ ಚರ್ಮ ಸಹಸ್ರತಾರಮ್ ॥೩೧॥

ವೃಷಸೇನನನ್ನು ರಣದಲ್ಲಿ ಕೊಲ್ಲಲು ಬಯಸಿ ವೀರಪುರುಷನಾದ ನಕುಲನು ವೃಷಸೇನನ ಮುಂದೆ ಧಾವಿಸಿಬಂದ. ಆಗ ವೃಷಸೇನನು ನಕುಲನ ಸಹಸ್ರ ನಕ್ಷತ್ರ ಚಿಹ್ನೆಯುಳ್ಳ ಗುರಾಣಿಯನ್ನು ಮಹಾರಣದಲ್ಲಿ ಬಾಣಗಳಿಂದ ಕತ್ತರಿಸಿದ.

ತಸ್ಯಾಯಸಂ ನಿಶಿತಂ ತೀಕ್ಷ್ಣಧಾರ-
ಮಸಿಂ ವಿಕೋಶಂ ಗುರುಭಾರಸಾಹಮ್ ।
ದ್ವಿಷಚ್ಛರೀರಾಪಹರಂ ಸುಘೋರ-
ಮಾಧುನ್ವತಃ ಸರ್ಪಮಿವೋಗ್ರರೂಪಮ್ ॥೩೨॥

ಕ್ಷಿಪ್ರಂ ಶರೈಃ ಷಡ್ಭಿರಮಿತ್ರಸಾಹೈ-
ಶ್ಚಕರ್ತ ಖಡ್ಗಂ ನಿಶಿತೈಃ ಸುಧಾರೈಃ ।
ಪುನಶ್ಚ ದೀಪ್ತೈರ್ನಿಶಿತೈಃ ಪೃಷತ್ಕೈಃ
ಸ್ತನಾಂತರೇ ಗಾಢಮಥಾಭ್ಯವಿಧ್ಯತ್ ॥೩೩॥

ನಕುಲನು, ಹರಿತವಾದ ತೀಕ್ಷ್ಣಧಾರೆ ಉಳ್ಳ ಮಹಾಕಾರ್ಯಸಾಧನವಾಗಬಲ್ಲ ಶತ್ರುಶರೀರನಾಶಕವಾದ ಬಲುಘೋರವಾದ, ಹಾವಿನಂತೆ ಉಗ್ರರೂಪವಾದ ಕಬ್ಬಿಣದ ಖಡ್ಗವನ್ನು ಒರೆಯಿಂದ ತೆಗೆದು ಝಳಪಿಸುವಾಗ, ಶತ್ರುನಾಶಕನಾದ ವೃಷಸೇನನು ಬೇಗನೆ ಹರಿತವಾದ ಒಳ್ಳೆಯ ಅಲುಗುಳ್ಳ ಆರು ಬಾಣಗಳಿಂದ ಆ ಖಡ್ಗವನ್ನು ಕತ್ತರಿಸಿದ. ಪುನಃ ಪ್ರಕಾಶಮಾನವಾದ ಬಾಣಗಳಿಂದ ನಕುಲನ ಎದೆಯನ್ನು ಗಾಢವಾಗಿ ಹೊಡೆದ.

ಕೃತ್ವಾ ತು ತದ್ ದುಷ್ಕರಮಾರ್ಯಜುಷ್ಟಂ
ನರೈರನ್ಯೈಃ ಕರ್ಮ ರಣೇ ಮಹಾತ್ಮಾ ।
ಯಯೌ ರಥಂ ಭೀಮಸೇನಸ್ಯ ರಾಜನ್
ಶರಾಭಿತಪ್ತೋ ನಕುಲೋ ಮಹಾತ್ಮಾ ॥೩೪॥

ಮಹಾತ್ಮ ನಕುಲನು ಬೇರೆ ಯೋಧರಿಂದ ಮಾಡಲಾಗದ, ಸಜ್ಜನರು

ಹೊಗಳುವಂಥ ಸಾಹಸವನ್ನು ರಣದಲ್ಲಿ ಮಾಡಿ, ರಾಜನೆ, ಈಗ ಅವನು ಬಾಣಗಳಿಂದ ವೇದನೆಪಟ್ಟು ಭೀಮಸೇನನ ರಥವನ್ನು ಹತ್ತಿದ.

ಸ ಭೀಮಸೇನಸ್ಯ ರಥಂ ಹತಾಶ್ವೋ
ಮಾದ್ರೀಸುತಃ ಕರ್ಣಸುತಾಭಿತಪ್ತಃ ।
ಆಪುಪ್ಲುವೇ ಸಿಂಹ ಇವಾಚಲಾಗ್ರಂ
ಸಂಪ್ರೇಕ್ಷಮಾಣಸ್ಯ ಧನಂಜಯಸ್ಯ ॥೩೫॥

ತನ್ನ ಕುದುರೆಗಳು ಹತವಾದಾಗ, ಬಾಣಗಳಿಂದ ತಾನೂ ವೇದನೆ ಪಡುವಾಗ, ನಕುಲನು, ಅರ್ಜುನನು ನೋಡುತ್ತಿದ್ದಂತೆ ಭೀಮನ ರಥದೊಳಗೆ ಬೆಟ್ಟದ ತುದಿಗೆ ಸಿಂಹ ಹಾರುವಂತೆ ಹಾರಿದ.

ತತಃ ಕ್ರುದ್ಧೋ ವೃಷಸೇನೋ ಮಹಾತ್ಮಾ
ವವರ್ಷ ತಾವಿಷುಜಾಲೇನ ಧೀರಃ ।
ಮಹಾರಥಾವೇಕರಥೇ ಸಮೇತೌ
ಶರೈಃ ಪ್ರಭಿಂದನ್ನಿವ ಪಾಂಡವೇಯೌ ॥೩೬॥

ಆಗ ಕ್ರುದ್ಧನಾದ ಮಹಾತ್ಮ ಧೀರ ವೃಷಸೇನನು ಒಂದು ರಥದಲ್ಲಿ ಜೊತೆಯಾಗಿದ್ದ ಭೀಮ–ನಕುಲರ ಮೇಲೆ ಅವರನ್ನು ವಧಿಸುವಂತೆ ಬಾಣ ಸಮೂಹಗಳ ಮಳೆಗರೆದ.

ತಸ್ಮಿನ್ ರಥೇ ನಿಹತೇ ಪಾಂಡವಸ್ಯ
ಕ್ಷಿಪ್ರಂ ಚ ಖಡ್ಗೇ ವಿಶಿಖೈರ್ನಿಕೃತ್ತೇ ।
ಭೀಮಾರ್ಜುನೌ ವೃಷಸೇನಾಯ ಕ್ರುದ್ಧೌ
ವವರ್ಷತುಃ ಶರವರ್ಷಂ ಸುಘೋರಮ್ ॥೩೭॥

ನಕುಲನ ರಥ ಮುರಿಯಿತು, ಅವನ ಖಡ್ಗವೂ ಬೇಗನೆ ಬಾಣಗಳಿಂದ ಕಡಿದುಬಿತ್ತು ಎಂದು ಕೋಪದಿಂದ ಭೀಮ–ಅರ್ಜುನರು ವೃಷಸೇನನ ಮೇಲೆ ಘೋರವಾದ ಬಾಣಗಳ ಮಳೆಗರೆದರು.

ಅಥಾಬ್ರವೀನ್ಮಾರುತಿಃ ಫಲ್ಗುನಂ ತು
ಪಶ್ಯಸ್ವೈನಂ ನಕುಲಂ ಪೀಡಯಂತಮ್ ।

ಅಯಂ ಚ ನೋ ಬಾಧತೇ ಕರ್ಣಪುತ್ರ-
ಸ್ತಸ್ಮಾದ್ ಭವಾನ್ ಪ್ರತ್ಯುಪಯಾತು ಕಾರ್ಷ್ಣಿಮ್ ॥೩೮॥

ಬಳಿಕ ಭೀಮ ಅರ್ಜುನನಿಗೆ ಹೇಳಿದ: ನೋಡು, ಈ ವೃಷಸೇನನು ನಕುಲನನ್ನು ಪೀಡಿಸುವುದನ್ನು ನಮ್ಮನ್ನೂ ಈತ ಬಾಧಿಸುತ್ತಾನೆ. ಅದರಿಂದ ನೀನು ಅವನ ಬಳಿಗೆ ಹೋಗು.

ಸ ತನ್ನಿಶಮ್ಯೈವ ವಚಃ ಕಿರೀಟೀ
ರಥಂ ಸಮಾಸಾದ್ಯ ವೃಕೋದರಸ್ಯ ।
ಕಪಿಧ್ವಜಂ ಕೇಶವಸಂಗೃಹೀತಂ
ಪ್ರೈಷೀದುಗ್ರೋ ವೃಷಸೇನಾಯ ವಾಹಮ್ ॥೩೯॥

ವೃಕೋದರನ ಆ ಮಾತನ್ನು ಕೇಳಿ ಉಗ್ರನಾದ ಕಿರೀಟಿಯು ಕರ್ಣನ ಕಡೆಗೆ ಹೊರಟಿದ್ದ ಕಪಿಯು ಧ್ವಜವಾಗಿ ಕೃಷ್ಣನು ಸಾರಥಿಯಾಗಿರುವ ತನ್ನ ರಥವನ್ನು ತಿರುಗಿಸಿ ವೃಷಸೇನನ ಕಡೆಗೇ ಕುದುರೆಗಳನ್ನು ನಡೆಸಿದ.

ನಕುಲಮಥ ವಿದಿತ್ವಾ ಛಿನ್ನಬಾಣಾಸನಾಸಿಂ
ವಿರಥಮರಿಶರಾರ್ತಂ ಕರ್ಣಪುತ್ರಾಸ್ತ್ರಭಗ್ನಮ್ ।
ಪವನಧುತಪತಾಕಾ ಹ್ರಾದಿನೋ ವಲ್ಗಿತಾಶ್ವಾ
ವರಪುರುಷನಿಯತ್ತಾಸ್ತೇ ರಥಾಃ ಶೀಘ್ರಮೀಯುಃ ॥೪೦॥

ನಕುಲನ ಧನುಸ್ಸು ಖಡ್ಗಗಳು ಕಡಿದುಹೋದುದನ್ನು ರಥ ಮುರಿದುದನ್ನು ವೃಷಸೇನನ ಬಾಣಗಳಿಗೆ ಸೋತು ಅವನು ವೇದನೆಪಡುತ್ತಿದ್ದುದನ್ನು ತಿಳಿದು, ಸೇನಾಪತಿಯಾದ ದೃಷ್ಟದ್ಯುಮ್ನನ ಆದೇಶದಿಂದ, ಗಾಳಿಯಲ್ಲಿ ಹಾರಾಡುವ ಪತಾಕೆಗಳುಳ್ಳ ಓಡುವ ಕುದುರೆಗಳುಳ್ಳ ಶಬ್ದಮಾಡುವ ಪಾಂಡವಪಕ್ಷದ ರಥಗಳು ಬೇಗನೆ ವೃಷಸೇನನ ಕಡೆಗೆ ಹರಿದುವು.

ದ್ರುಪದಸುತವರಿಷ್ಠಾಃ ಪಂಚ ಶೈನೇಯಪಷ್ಠಾ
ದ್ರುಪದದುಹಿತೃಪುತ್ರಾಃ ಪಂಚ ಚಾಮಿತ್ರಸಾಹಾಃ ।
ದ್ವಿರದರಥನರಾಶ್ವಾನ್ ಸೂದಯಂತಸ್ತ್ವದೀಯಾನ್
ಭುಜಗಪತಿನಿಕಾಶೈರ್ಮಾರ್ಗಣೈರಾತ್ತಶಸ್ತ್ರಾಃ ॥೪೧॥

ಧೃಷ್ಟದ್ಯುಮ್ನ ಮುಂತಾದವರು ಐದು ಮಂದಿ, ಆರನೆಯವನಾದ ಸಾತ್ಯಕಿ, ಶತ್ರುನಾಶಕರಾದ ದ್ರೌಪದೀಪುತ್ರರು ಐದು ಮಂದಿ, ಹೀಗೆ ಹನ್ನೊಂದು ಮಂದಿ ಶಸ್ತ್ರಗಳನ್ನು ಹಿಡಿದು ನಿನ್ನ ಕಡೆಯ ಗಜ ರಥ ಪದಾತಿ ಅಶ್ವಗಳನ್ನು ಹಾವುಗಳಂತಹ ಬಾಣಗಳಿಂದ ನಾಶಮಾಡುತ್ತ ಇದ್ದಾಗ....

ಅಥ ತವ ರಥಮುಖ್ಯಾಸ್ತಾನ್ ಪ್ರತೀಯುಸ್ತ್ವರಂತೋ
ಹೃದಿಕಸುತಕೃಪೌ ಚ ದ್ರೌಣಿದುರ್ಯೋಧನೌ ಚ ।
ಶಕುನಿಸುತವೃಕೌ ಚ ಕ್ರಾಥದೇವಾವೃಧೌ ಚ
ದ್ವಿರದಜಲದಘೋಷೈಃ ಸ್ಯಂದನೈಃ ಕಾರ್ಮುಕೈಶ್ಚ ॥೪೨॥

ಕೃತವರ್ಮ ಕೃಪರು, ಅಶ್ವತ್ಥಾಮ ದುರ್ಯೋಧನರು ಶಕುನಿಸುತನಾದ ಉಲೂಕ, ವೃಕ ಕ್ರಾಥ ದೇವಾವೃಧರು ಇವರೆಲ್ಲ ನಿನ್ನ ಕಡೆಯ ಮುಖ್ಯರಥಿಕರು ಬೇಗನೆ ಆನೆಗಳ ಧ್ವನಿಮೋಡಗಳಂಥ ಧ್ವನಿಗೈವ ರಥಗಳಿಂದಲೂ ಬಿಲ್ಲುಗಳಿಂದಲೂ ಯುಕ್ತರಾಗಿ ಅವರನ್ನು ಇದಿರಿಸಿದರು.

ತವ ನರವರವರ್ಯಾಸ್ತಾನ್ ದಶೈಕಂ ಚ ವೀರಾನ್
ಪ್ರವರಶರವರಾಗ್ರೈಸ್ತಾಡಯಂತೋಭ್ಯರುಂಧನ್ ।
ನವಜಲದಸವರ್ಣೈರ್ಹಸ್ತಿಭಿಸ್ತಾನುದೀಯುಃ
ಗಿರಿಶಿಖರನಿಕಾಶೈರ್ಭೀಮವೇಗೈಃ ಕುಣಿಂದಾಃ ॥೪೩॥

ಈ ಶ್ರೇಷ್ಠ ಯೋಧರು ಪಾಂಡವರ ಪಕ್ಷದ ಹನ್ನೊಂದು ವೀರರನ್ನು ಶ್ರೇಷ್ಠವಾದ ಬಾಣಗಳಿಂದ ಹೊಡೆದರು. ಹೊಸ ಮೋಡಗಳಂತೆ ಕಪ್ಪಾದ ಗಿರಿಶಿಖರಗಳಂತೆ ಕಾಣುವ ಭಯಂಕರ ವೇಗಉಳ್ಳ ಆನೆಗಳಿಂದ ಕುಣಿಂದರು ಕೌರವರ ಕಡೆಯವರನ್ನು ಇದಿರಿಸಿದರು.

ಸುಕಲ್ಪಿತಾ ಹೈಮವತಾ ಮದೋತ್ಕಟಾ
ರಣಾಭಿಕಾಮೈಃ ಕೃತಿಭಿಃ ಸಮಾಸ್ಥಿತಾಃ ।
ಸುವರ್ಣಜಾಲಾವತತಾ ಬಭುರ್ಗಜಾ-
ಸ್ತಥಾ ಯಥಾ ವೈ ಜಲದಾಃ ಸವಿದ್ಯುತಃ ॥೪೪॥

ಚೆನ್ನಾಗಿ ಸಜ್ಜಾದ ಹಿಮವತ್ಪ್ರದೇಶದಲ್ಲಿ ಹುಟ್ಟಿದ ಮದಭರಿತವಾದ ಬಂಗಾರದ

ಮಾಲೆಗಳಿಂದ ಆಚ್ಛಾದಿತವಾದ ಗಜಗಳನ್ನು ಯುದ್ಧೇಚ್ಛುಗಳಾದ ನಿಪುಣರಾದ ಕುಣಿಂದವೀರರು ಏರಿದ್ದರು. ಅವುಗಳು ಮಿಂಚಿನಿಂದ ಕೂಡಿದ ಕಾರ್ಮೋಡಗಳಂತೆ ಕಂಡುಬಂದುವು.

ಕುಣಿಂದಪುತ್ರೋ ದಶಭಿರ್ಮಹಾಶರೈಃ
ಕೃಪಂ ಸಸೂತಾಶ್ವಮಪೀಡಯದ್ ಭೃಶಮ್ ।
ತತಃ ಶರದ್ವತ್ಸುತಸಾಯಕೈರ್ಹತಃ
ಸಹೈವ ನಾಗೇನ ಪಪಾತ ಭೂತಳೇ ॥೪೫॥

ಕುಣಿಂದ ರಾಜಕುಮಾರನು ಹತ್ತು ದೊಡ್ಡ ಬಾಣಗಳಿಂದ ಕೃಪನನ್ನೂ ಅವನ ಸಾರಥಿ ಅಶ್ವಗಳನ್ನೂ ಚೆನ್ನಾಗಿ ಪೀಡಿಸಿದ. ಒಡನೆ ಕೃಪನ ಬಾಣಗಳಿಂದ ಆನೆಯೊಂದಿಗೇ ಹತನಾಗಿ ನೆಲದಲ್ಲಿ ಬಿದ್ದ.

ಕುಣಿಂದಪುತ್ರಾವರಜಸ್ತು ತೋಮರೈ-
ರ್ದಿವಾಕರಾಂಶುಪ್ರತಿಮೈರಯಸ್ಮಯೈಃ ।
ರಥಂ ಚ ವಿಕ್ಷೋಭ್ಯ ನನಾದ ನರ್ದತ-
ಸ್ತತೋಽಸ್ಯ ಗಾಂಧಾರಪತಿಃ ಶಿರೋಽಹರತ್ ॥೪೬॥

ಕುಣಿಂದಪುತ್ರನ ತಮ್ಮನು ಸೂರ್ಯಕಿರಣಗಳಂತೆ ತಾಪದಾಯಕವಾದ ಕಬ್ಬಿಣದ ತೋಮರಗಳಿಂದ ಶಕುನಿಯ ರಥವನ್ನು ಮುರಿದು ಗರ್ಜನೆ ಮಾಡಿದ. ಗರ್ಜಿಸುತ್ತಿದ್ದಂತೇ ಅವನ ಶಿರಸ್ಸನ್ನು ಶಕುನಿ ಕೆಡವಿದ.

ತತಃ ಕುಣಿಂದೇಷು ಹತೇಷು ತೇಷ್ವಥ
ಪ್ರಹೃಷ್ಟರೂಪಾಸ್ತವ ತೇ ಮಹಾರಥಾಃ ।
ಭೃಶಂ ಪ್ರದಧ್ಮುರ್ಲವಣಾಂಬುಸಂಭವಾನ್
ಪರಾಶ್ಚ ಬಾಣಾಸನಪಾಣಯೋಽಭ್ಯಯುಃ ॥೪೭॥

ಕುಣಿಂದರು ಹೀಗೆ ಹತರಾದಾಗ ನಿನ್ನ ಕಡೆಯ ಮಹಾರಥರು ಉತ್ಸಾಹಿತರಾಗಿ ಚೆನ್ನಾಗಿ ಶಂಖನಾದ ಮಾಡಿದರು. ಆಗ ಶತ್ರುಗಳು ಧನುರ್ಧಾರಿಗಳಾಗಿ ಆಕ್ರಮಿಸಿದರು.

ಅಥಾಭವದ್ ಯುದ್ಧಮತೀವ ದಾರುಣಂ
ಪುನಃ ಕುರೂಣಾಂ ಸಹ ಪಾಂಡುಸೃಂಜಯೈಃ ।
ಶರಾಸಿಶಕ್ತ್ಯೃಷ್ಟಿಗದಾಪರಶ್ವಧೈ-
ರ್ನರಾಶ್ವನಾಗಾಸುಹರಂ ಭೃಶಾಕುಲಮ್ ॥೪೮॥

ಆಗ ಅತ್ಯಂತ ದಾರುಣವಾದ ಯುದ್ಧ ಪಾಂಡವ-ಸೃಂಜಯರೊಂದಿಗೆ ಕೌರವರಿಗೆ ನಡೆಯಿತು. ಬಾಣ ಖಡ್ಗ ಶಕ್ತಿ ಋಷ್ಟಿ ಗದೆ ಪರಶುಗಳಿಂದ ಪದಾತಿ ಅಶ್ವ ಗಜ ಯೋಧರ ಪ್ರಾಣಗಳನ್ನು ತೆಗೆಯುತ್ತ ಬಹಳ ವ್ಯಾಕುಲತೆಯನ್ನುಂಟು ಮಾಡಿತು.

ರಥಾಶ್ವಮಾತಂಗಪದಾತಿಭಿಸ್ತತಃ
ಪರಸ್ಪರಂ ವಿಪ್ರಹತಾ ಗತಾಃ ಕ್ಷಿತಿಮ್ ।
ಯಥಾ ಸವಿದ್ಯುತ್ಸ್ತನಿತಾ ಬಲಾಹಕಾಃ
ಸಮಾಸ್ಥಿತಾ ದಿಗ್ಭ್ಯ ಇವೋಗ್ರಮಾರುತೈಃ ॥೪೯॥

ರಥ ಅಶ್ವ ಗಜ ಪದಾತಿಗಳು ಪರಸ್ಪರ ಹೊಡೆಸಿಕೊಂಡು ನೆಲದ ಮೇಲೊರಗಿದುವು. ಮಿಂಚು-ಗುಡುಗುಗಳಿಂದ ಕೂಡಿದ ಮೋಡಗಳು ದಿಕ್ಕುಗಳಿಂದ ಬೀಸಿದ ಚಂಡಮಾರುತಗಳಿಗೆ ಸಿಲುಕಿ ನಾಶವಾಗುವಂತೆ.

ತತಃ ಶತಾನೀಕಮತಾನ್ ಮಹಾಗಜಾನ್
ತಥಾ ರಥಾನ್ ಪತ್ತಿಗಣಾಂಶ್ಚ ತಾನ್ ಬಹೂನ್ ।
ಜಘಾನ ಭೋಜಶ್ಚ ಹಯಾನಥಾಪತನ್
ಕ್ಷಣಾನ್ನಿಕೃತ್ತಾಃ ಕೃತವರ್ಮಣಃ ಶರೈಃ ॥೫೦॥

ಶತಾನೀಕನ ಕಡೆಯ ಮಹಾಗಜ ರಥ ಪದಾತಿಸಮೂಹ ಮತ್ತು ಅಶ್ವಗಳನ್ನು ಬಹುಸಂಖ್ಯೆಯಲ್ಲಿ ಕೃತವರ್ಮನು ಸಂಹರಿಸಿದ. ಅವು ಕ್ಷಣದಲ್ಲಿ ಕೃತವರ್ಮನ ಬಾಣಗಳಿಂದ ಕಡಿದುಬಿದ್ದುವು.

ಅಥಾಪರೇ ದ್ರೌಣಿಶರಾಹತಾ ದ್ವಿಪಾ-
ಸ್ತ್ರಯಃ ಸಸರ್ವಾಯುಧಯೋಧಕೇತನಾಃ ।
ನಿಪೇತುರುರ್ವ್ಯಾಂ ವ್ಯಸವಃ ಪ್ರಪಾತಿತಾ-
ಸ್ತಥಾ ಯಥಾ ವಜ್ರಹತಾ ಮಹಾಚಲಾಃ ॥೫೧॥

ಅಶ್ವತ್ಥಾಮನ ಬಾಣಗಳಿಂದ ಹೊಡೆಯಲ್ಪಟ್ಟ ಸರ್ವ ಆಯುಧ ಯೋಧ ಪತಾಕೆಗಳಿಂದ ಯುಕ್ತವಾದ ಮೂರು ಬೇರೆ ಗಜಗಳು ಬೀಳಿಸಲ್ಪಟ್ಟು ಅಸುನೀಗಿ ನೆಲದಲ್ಲಿ ಒರಗಿದುವು.

ಕುಣಿಂದರಾಜಾವರಜಾದನಂತರಃ
ಸ್ತನಾಂತರೇ ಪತ್ರಿವರೈರತಾಡಯತ್ ।
ತವಾತ್ಮಜಂ ತಸ್ಯ ತವಾತ್ಮಜಃ ಶರೈಃ
ಶಿತೈಃ ಶರೀರಂ ಬಿಭಿದೇ ದ್ವಿಪಂ ಚ ತಮ್ ॥೫೨॥

ಕುಣಿಂದರಾಜನ ಎರಡನೆ ತಮ್ಮನು ನಿನ್ನ ಮಗನನ್ನು ಶ್ರೇಷ್ಠಬಾಣಗಳಿಂದ ಎದೆಯಲ್ಲಿ ಹೊಡೆದ. ನಿನ್ನ ಮಗನು ಅವನ ಶರೀರವನ್ನೂ ಗಜವನ್ನೂ ಬಾಣಗಳಿಂದ ಭೇದಿಸಿದ.

ಸ ನಾಗರಾಜಃ ಸಹ ರಾಜಸೂನುನಾ
ಪಪಾತ ರಕ್ತಂ ಬಹು ಸರ್ವತಃ ಕ್ಷರನ್ ।
ಶಚೀಶವಜ್ರಪ್ರಹತೋಽಮ್ಬುದಾಗಮೇ
ಯಥಾ ಜಲಂ ಗೈರಿಕಪರ್ವತಸ್ತಥಾ ॥೫೩॥

ಆ ಮದ್ದಾನೆ ರಾಜಕುಮಾರನೊಂದಿಗೇ ಮೈಯೆಲ್ಲ ಬಹಳ ರಕ್ತವನ್ನು ಸುರಿಸುತ್ತ ಮಳೆಗಾಲ ಬಂದಾಗ ಇಂದ್ರನ ವಜ್ರಾಯುಧದಿಂದ ಹೊಡೆಸಿಕೊಂಡು ಬೀಳುವ ಗೈರಿಕ ಧಾತುಮಯವಾದ ಕೆಂಪಾದ ಬೆಟ್ಟದಂತೆ ನೆಲದಲ್ಲಿ ಬಿದ್ದಿತು.

ಕುಣಿಂದಪುತ್ರಪ್ರಹಿತೋಽಪರದ್ವಿಪಃ
ಕ್ರಾಥಂ ಸಸೂತಾಶ್ವರಥಂ ವ್ಯಪೋಥಯತ್ ।
ತತೋಽಪತತ್ಕ್ರಾಥಶರಾಭಿದಾರಿತಃ
ಸಹೇಶ್ವರೋ ವಜ್ರಹತೋ ಯಥಾ ಗಿರಿಃ ॥೫೪॥

ನಿನ್ನ ಕಡೆಯ ಕುಣಿಂದಪುತ್ರನು ನುಗ್ಗಿಸಿದ ಇನ್ನೊಂದು ಆನೆ ಪಾಂಡವಪಕ್ಷದ ಕ್ರಾಥನನ್ನು ಸಾರಥಿ ಅಶ್ವ ರಥಸಮೇತವಾಗಿ ಪೀಡಿಸಿದಾಗ ಕ್ರಾಥನ ಬಾಣಗಳಿಂದ ಹೊಡೆಸಿಕೊಂಡು ಯೋಧನೊಂದಿಗೇ ವಜ್ರಾಹತವಾದ ಬೆಟ್ಟದಂತೆ ನೆಲದಲ್ಲಿ ಬಿದ್ದಿತು.

ಇನ್ನುಮುಂದೆ 'ಕುಣಿಂದಪುತ್ರೋ ನಕುಲಾತ್ಮಜಂ ಸ್ಮಯನ್' ಎಂದು 60ನೇ ಶ್ಲೋಕದಲ್ಲಿ ಹೇಳುವುದರಿಂದ ಯೋಧನೊಂದಿಗೇ ಆನೆ ಬಿದ್ದರೂ ಆನೆ ಮಾತ್ರ ಸತ್ತಿತು. ಯೋಧನಾದ ಕುಣಿಂದಪುತ್ರ ಸಾಯಲಿಲ್ಲ.

ರಥೀ ದ್ವಿಪಸ್ಥೇನ ಹತೋಽಪತಚ್ಛರೈಃ
ಕ್ರಥಾಧಿಪಃ ಪರ್ವತಜೇನ ದುರ್ಜಯಃ ।
ಸ ವಾಜಿಸೂತೇಷ್ವಸನಸ್ತಥಾಪತದ್
ಯಥಾ ಮಹಾವಾತಹತೋ ಮಹಾದ್ರುಮಃ ॥೫೫॥

ಕ್ರಥಾಧಿಪತಿಯು ಅಜೇಯನಾದ ರಥಿಕನಾಗಿದ್ದರೂ ಅವನು, ಪರ್ವತ ಪ್ರದೇಶದ ಇನ್ನೊಬ್ಬನು ಆನೆಯನ್ನೇರಿ ಬಂದು ಬಾಣಗಳಿಂದ ಅವನನ್ನು ಅಶ್ವ ಸೂತ ಧನುಸ್ಸುಗಳೊಂದಿಗೆ ಹೊಡೆದಾಗ, ಬಿರುಗಾಳಿಗೆ ಸಿಲುಕಿದ ಮಹಾವೃಕ್ಷದಂತೆ ಬಿದ್ದ.

ವೃಕೋ ದ್ವಿಪಸ್ಥಂ ಗಿರಿರಾಜವಾಸಿನಂ
ಭೃಶಂ ಶರೈರ್ದ್ವಾದಶಭಿಃ ಪರಾಭಿನತ್ ।
ತತೋ ವೃಕಂ ಸಾಶ್ವರಥಂ ಮಹಾಗಜ-
ಸ್ತರಂಶ್ಚತುರ್ಭಿಶ್ಚರಣೈರ್ವ್ಯಪೋಥಯತ್ ॥೫೬॥

ಆನೆಯ ಮೇಲಿದ್ದ ಪರ್ವತವಾಸಿಯನ್ನು ವೃಕರಾಜನು ಹನ್ನೆರಡು ಬಾಣಗಳಿಂದ ಚೆನ್ನಾಗಿ ಹೊಡೆದ. ಆಗ ಆನೆ ವೃಕನನ್ನು ಅಶ್ವ–ರಥಗಳೊಂದಿಗೇ ವೇಗದಿಂದ ನಾಲ್ಕೂ ಕಾಲುಗಳಿಂದ ತುಳಿದು ಧ್ವಂಸಮಾಡಿತು.

ವಿಷಾಣಪುಚ್ಛಾಪರಗಾತ್ರಘಾತಿನಾ
ಗಜೇನ ಹಂತುಂ ಶಕುನಿಂ ಕುಣಿಂದಜಃ ।
ಜಗಾಮ ವೇಗೇನ ಭೃಶಾರ್ದಯಂಶ್ಚ ತಂ
ತತೋಸ್ಯ ಗಾನ್ಧಾರಪತಿಃ ಶಿರೋಹರತ್ ॥೫೭॥

ವೃಕನನ್ನು ತುಳಿದ ಗಜವು ದಂತ, ಬಾಲಗಳಿಂದಲೂ ಮೈಯ ಹಿಂಭಾಗ ದಿಂದಲೂ ಶತ್ರುಗಳನ್ನು ಕೊಲ್ಲುವಂಥದ್ದು. ಅದರಮೇಲೆ ಕುಳಿತು ಒಬ್ಬ ಕುಣಿಂದ ರಾಜನು ಶಕುನಿಯನ್ನು ಕೊಲ್ಲಲು ವೇಗದಿಂದ ಧಾವಿಸಿದ. ಅವನನ್ನು ಬಹಳ ಪೀಡಿಸಿದ. ಆದರೆ ಶಕುನಿ ಅವನ ಶಿರವನ್ನೇ ತರಿದ.

ತತಃ ಶತಾನೀಕಹತಾ ಮಹಾಗಜಾ
ಹಯಾ ರಥಾಃ ಪತ್ತಿಗಣಾಶ್ಚ ತಾವಕಾಃ ।
ಸುಪರ್ಣವಾತಪ್ರಹತಾ ಯಥಾ ನಗಾ-
ಸ್ತಥಾ ಗತಾ ಗಾಮವಶಾ ವಿಚೂರ್ಣಿತಾಃ ॥೫೮॥

ಶತಾನೀಕನಿಂದ ನಿನ್ನ ಪಕ್ಷದ ಮಹಾಗಜ ಅಶ್ವ ರಥ ಪದಾತಿಗಳು ಹತರಾಗಿ, ಗರುಡನ ರೆಕ್ಕೆಗಳ ಗಾಳಿಯ ಹೊಡೆತದಿಂದ ಮರಗಳು ಚೂರು ಚೂರಾಗಿ ಬಿದ್ದು ನೆಲಸಮವಾಗುವಂತೆ, ಬಿದ್ದರು.

ತತೋಽಭ್ಯವಿಧ್ಯದ್ ಬಹುಭಿಃ ಶಿತೈಃ ಶರೈಃ
ಕುಣಿಂದಪುತ್ರೋ ನಕುಲಾತ್ಮಜಂ ಸ್ಮಯನ್ ।
ತತೋಽಸ್ಯ ಕಾಯಾನ್ನಿಚಕರ್ತ ನಾಕುಲಿಃ
ಶಿರಃ ಕ್ಷುರೇಣಾಂಬುಜಸನ್ನಿಭಾನನಮ್ ॥೫೯॥

ಆಗ ನಕುಲಪುತ್ರ ಶತಾನೀಕನನ್ನು ಕುಣಿಂದಪುತ್ರನು ನಗುತ್ತ ತೀಕ್ಷ್ಣವಾದ ಬಹುಬಾಣಗಳಿಂದ ಹೊಡೆದ. ಶತಾನೀಕನು ಕ್ಷುರದಿಂದ, ಕಮಲಸದೃಶ ಮುಖದಿಂದ ಯುಕ್ತವಾದ ಅವನ ಶಿರಸ್ಸನ್ನು ಶರೀರದಿಂದ ಕತ್ತರಿಸಿ ತೆಗೆದ.

ತತಃ ಶತಾನೀಕಮವಿಧ್ಯದಾಶುಗೈ-
ಸ್ತ್ರಿಭಿಃ ಶಿತೈಃ ಕರ್ಣಸುತೋಽರ್ಜುನಂ ತ್ರಿಭಿಃ ।
ತ್ರಿಭಿಶ್ಚ ಭೀಮಂ ನಕುಲಂ ಚ ಸಪ್ತಭಿ-
ರ್ಜನಾರ್ದನಂ ದ್ವಾದಶಭಿಶ್ಚ ಸಾಯಕೈಃ ॥೬೦॥

ಕರ್ಣಸುತನಾದ ವೃಷಸೇನನು ತೀಕ್ಷ್ಣವಾದ ಮೂರು ಬಾಣಗಳಿಂದ ಶತಾನೀಕನನ್ನೂ ಮೂರು ಬಾಣಗಳಿಂದ ಅರ್ಜುನನನ್ನೂ ಮೂರು ಬಾಣಗಳಿಂದ ಭೀಮನನ್ನೂ ಏಳು ಬಾಣಗಳಿಂದ ನಕುಲನನ್ನೂ ಹನ್ನೆರಡು ಬಾಣಗಳಿಂದ ಕೃಷ್ಣನನ್ನೂ ಹೊಡೆದ.

ತದಸ್ಯ ಕರ್ಮಾತಿಮನುಷ್ಯಕರ್ಮಣಃ
ಸಮೀಕ್ಷ್ಯ ಹೃಷ್ಟಾಃ ಕುರವೋಽಭ್ಯಪೂಜಯನ್ ।

ಪರಾಕ್ರಮಜ್ಞಾಸ್ತು ಧನಂಜಯಸ್ಯ ತೇ
ಹುತೋऽಯಮಗ್ನಾವಿತಿ ತಂ ತು ಮೇನಿರೇ ॥೬೧॥

ವೃಷಸೇನನ ಈ ಸಾಹಸ ಅತಿಮಾನುಷಕರ್ಮನ ಸಾಹಸವೆಂದು ಕಂಡು ಹೃಷ್ಟರಾದ ಕುರುಸೈನಿಕರು ಹೊಗಳಿದರು. ಅರ್ಜುನನ ಪರಾಕ್ರಮವನ್ನು ಬಲ್ಲವರು ಮಾತ್ರ ವೃಷಸೇನ ಅಗ್ನಿಯಲ್ಲಿ ಆಹುತಿಯಾದನೆಂದೇ ಭಾವಿಸಿದರು.

ತತಃ ಕಿರೀಟೀ ಪರವೀರಘಾತೀ
ಹತಾಶ್ವಮಾಲೋಕ್ಯ ನರಪ್ರವೀರಮ್ ।
ಮಾದ್ರೀಸುತಂ ನಕುಲಂ ಲೋಕಮಧ್ಯೇ
ಸಮೀಕ್ಷ್ಯ ಕೃಷ್ಣಂ ಭೃಶವಿಕ್ಷತಂ ಚ ॥೬೨॥

ತಮಭ್ಯಧಾವದ್ ವೃಷಸೇನಮಾಹವೇ
ಸ ಸೂತಜಸ್ಯ ಪ್ರಮುಖೇ ಸ್ಥಿತಂ ತದಾ ॥೬೩॥

ಶತ್ರುವೀರನಾಶಕನಾದ ಅರ್ಜುನನು, ಶ್ರೇಷ್ಠಪುರುಷನಾದ ನಕುಲನು ಲೋಕದ ನಡುವೆ ವೃಷಸೇನನಿಂದ ಅಶ್ವರಹಿತನಾದುದನ್ನೂ ಕೃಷ್ಣನೂ ಬಹಳ ಗಾಯಗೊಂಡಿದ್ದನ್ನೂ ನೋಡಿ, ಕರ್ಣನ ಸಮಕ್ಷದಲ್ಲಿ ನಿಂತಿದ್ದ ವೃಷಸೇನನಿದಿರಿಗೆ ರಣದಲ್ಲಿ ಧಾವಿಸಿದ.

ತಮಾಪತಂತಂ ನರವೀರಮುಗ್ರಂ
ಮಹಾಹವೇ ಬಾಣಸಹಸ್ರಧಾರಿಣಮ್ ।
ಅಭ್ಯಾಪತತ್ ಕರ್ಣಸುತೋ ಮಹಾರಥೋ
ಯಥೈವ ಚೇಂದ್ರಂ ನಮುಚಿಃ ಪುರಾತನೇ ॥೬೪॥

ಉಗ್ರನಾದ ಪುರುಷವೀರನಾದ ಅರ್ಜುನನು ಸಾವಿರಾರು ಬಾಣಗಳನ್ನು ಧರಿಸುವವನು, ಮಹಾರಣದಲ್ಲಿ ತನ್ನಿದಿರಿಗೆ ಬಂದಾಗ, ಪ್ರಾಚೀನಕಾಲದಲ್ಲಿ ನಮುಚಿದಾನವನು ಇಂದ್ರನನ್ನು ಆಕ್ರಮಿಸಿದಂತೆ, ಮಹಾರಥನಾದ ವೃಷಸೇನನು ಅವನನ್ನು ಆಕ್ರಮಿಸಿದ.

ತತೋಽದ್ಭುತೇನೈಕಶತೇನ ಪಾರ್ಥಂ
ಶರೈರ್ವಿದ್ಧ್ವಾ ಸೂತಪುತ್ರಸ್ಯ ಪುತ್ರಃ ।
ನನಾದ ನಾದಂ ಸುಮಹಾನುಭಾವೋ
ವಿದ್ಧ್ವೇವ ಶಕ್ರಂ ನಮುಚಿಃ ಪುರಾ ವೈ ॥೬೫॥

ಹಿಂದೆ ನಮುಚಿ ಇಂದ್ರನನ್ನು ಹೊಡೆದು ಗರ್ಜಿಸಿದಂತೆ ಮಹಾನುಭಾವ ವೃಷಸೇನನು ಅದ್ಭುತವಾದ ಒಂದು ನೂರು ಬಾಣಗಳಿಂದ ಮಹಾರಣದಲ್ಲಿ ಅರ್ಜುನನನ್ನು ಹೊಡೆದು ಗರ್ಜಿಸಿದ.

ಪುನಃ ಸ ಪಾರ್ಥಂ ವೃಷಸೇನ ಉಗ್ರೈ-
ರ್ಬಾಣೈರವಿಧ್ಯದ್ ಭುಜಮೂಲಮಧ್ಯೇ ।
ತಥೈವ ಕೃಷ್ಣಂ ನವಭಿಃ ಸಮಾರ್ದಯತ್
ಪುನಶ್ಚ ಪಾರ್ಥಂ ದಶಭಿಃ ಶಿತಾಗ್ರೈಃ ॥೬೬॥

ವೃಷಸೇನನು ಪುನಃ ಅರ್ಜುನನನ್ನು ಉಗ್ರವಾದ ಬಾಣಗಳಿಂದ ಬಾಹು ಮೂಲದ ಮಧ್ಯದಲ್ಲಿ ಹೊಡೆದ. ಕೃಷ್ಣನನ್ನೂ ಒಂಬತ್ತು ಬಾಣಗಳಿಂದ ಹೊಡೆದ. ಹರಿತವಾದ ತುದಿಯುಳ್ಳ ಹತ್ತು ಬಾಣಗಳಿಂದ ತಿರುಗಿ ಅರ್ಜುನನಿಗೆ ಹೊಡೆದ.

ಪೂರ್ವಂ ತಥಾ ವೃಷಸೇನೇನ ವಿದ್ಧೋ
ಮಹಾಜವೈಃ ಶ್ವೇತಹಯಃ ಶರೈಸ್ತೈಃ ।
ಸಂರಂಭಮೀಷದ್ ಗಮಿತೋ ವಧಾಯ
ಕರ್ಣಾತ್ಮಜಸ್ಯಾಥ ಮನಃ ಪ್ರದಧ್ಯೇ ॥೬೭॥

ಮೊದಲಿಗೆ ವೃಷಸೇನನಿಂದ ಮಹಾವೇಗದ ಆ ಬಾಣಗಳಿಂದ ಹೊಡೆಸಿಕೊಂಡಾಗ ಅರ್ಜುನನನಿಗೆ ಅವನನ್ನು ಕೊಲ್ಲಲು ಸ್ವಲ್ಪ ಕೋಪ ಬಂದಿತ್ತು. ಇದೀಗ ಅವನು ಮನಸಿನಲ್ಲಿ ಅದಕ್ಕೆ ನಿರ್ಧಾರವನ್ನೇ ಮಾಡಿದ.

ತತಃ ಕಿರೀಟೀ ರಣಮೂರ್ಧ್ನಿ ಕೋಪಾತ್
ಕೃತ್ವಾ ತ್ರಿಶಾಖಾಂ ಭ್ರುಕುಟಿಂ ಲಲಾಟೇ ।
ಮುಮೋಚ ತೂರ್ಣಂ ವಿಶಿಖಾನ್ಮಹಾತ್ಮಾ
ವಧೇ ಧೃತಃ ಕರ್ಣಸುತಸ್ಯ ಸಂಖ್ಯೇ ॥೬೮॥

ಮಹಾತ್ಮಾ ಅರ್ಜುನನು ರಣದಲ್ಲಿ ವೃಷಸೇನನ ವಧ ನಿರ್ಧಾರ ಮಾಡಿಕೊಂಡು ಕೋಪದಿಂದ ಹಣೆಯಲ್ಲಿ ಹುಬ್ಬುಗಂಟಿಕ್ಕಿ ತ್ರಿವಳಿ ಮಾಡಿಕೊಂಡು ಬೇಗನೆ ಬಾಣಗಳನ್ನು ಎಸೆದ.

ಆರಕ್ತನೇತ್ರೋಽಂತಕಶತ್ರುಹಂತಾ
ಉವಾಚ ಕರ್ಣಂ ಭೃಶಮುತ್ಸ್ಮಯಂಸ್ತದಾ ॥೬೯॥

ದುರ್ಯೋಧನಂ ದ್ರೌಣಿಮುಖಾಂಶ್ಚ ಸರ್ವಾ-
ನಯಂ ರಣೇಽಹಂ ವೃಷಸೇನಮುಗ್ರಮ್ ।
ಸಂಪಶ್ಯತಃ ಕರ್ಣ ತವಾದ್ಯ ಸಂಖ್ಯೇ
ನಯಾಮಿ ಲೋಕಂ ನಿಶಿತೈಃ ಪೃಷತ್ಕೈಃ ॥೭೦॥

ಯಮಸ್ಯ ಯಾವದ್ಧಿ ಜನಾ ವದಂತಿ
ಭವದ್ಭಿಃ ಸರ್ವೈರ್ಮಮ ಸೂನುರ್ಹತೋಽಸೌ ।
ಏಕೋ ರಥೋ ಮದ್ವಿಹೀನಸ್ತರಸ್ವೀ
ಅಹಂ ವೀರಾಣಾಂ ಭವತಾಂ ಸಮಕ್ಷಮ್ ॥೭೧॥

ಸಂರಕ್ಷ್ಯತಾಂ ರಥಸಂಸ್ಥಾಃ ಸುತೋಽಯಂ
ಆದೌ ಹನಿಷ್ಯೇ ವೃಷಸೇನಮೇನಮ್ ।
ಪಶ್ಚಾದ್ ವಧಿಷ್ಯೇ ತ್ವಾಮಪಿ ಸಂಪ್ರಮೂಢ-
ಮಹಂ ಹನಿಷ್ಯೇಽರ್ಜುನ ಆಜಿಮಧ್ಯೇ ॥೭೨॥

ಕೋಪದಿಂದ ಕಣ್ಣು ಕೆಂಪು ಮಾಡಿಕೊಂಡು ಅಂತಕನಂತೆ ಶತ್ರುಹಂತಕನಾದ ಅರ್ಜುನನು ಬಹಳ ನಗುತ್ತ ಕರ್ಣನಿಗೆ ದುರ್ಯೋಧನ ಅಶ್ವತ್ಥಾಮ ಮುಂತಾದವರಿಗೆ ನುಡಿದ— 'ಉಗ್ರನಾದ ವೃಷಸೇನನನ್ನು ಕರ್ಣ, ನೀನು ನೋಡುತ್ತಿರುವಂತೆಯೆ ನಾನು ರಣದಲ್ಲಿ ತೀಕ್ಷ್ಣವಾದ ಬಾಣಗಳಿಂದ ಯಮನ ಲೋಕಕ್ಕೆ ಅಟ್ಟುತ್ತೇನೆ. ಉತ್ತಮರಥಿಕನಾದ ಬಲಿಷ್ಠನಾದ ನನ್ನ ಮಗ ಅಭಿಮನ್ಯು ಏಕಾಕಿಯಾಗಿ ನನ್ನ ಸಹಾಯದಿಂದ ರಹಿತನಾಗಿದ್ದಾಗ ನೀವೆಲ್ಲರೂ ಸೇರಿ ಅವನನ್ನು ಕೊಂದಿರಿ' ಎಂದು ಜನರು ಈಗ ಹೇಳುತ್ತಿದ್ದಾರೆ. ವೀರರಾದ ನಿಮ್ಮೆಲ್ಲರ ಸಮಕ್ಷಮದಲ್ಲಿ ಮೊದಲಿಗೆ ಈ ವೃಷಸೇನನನ್ನು ಕೊಲ್ಲುತ್ತೇನೆ. ರಥದಲ್ಲಿದ್ದು ನೀವು

ಈ ಮಗನನ್ನು ರಕ್ಷಿಸಿಕೊಳ್ಳಿ. ಬಳಿಕ, ಕರ್ಣ, ಮೂರ್ಖನಾದ ನಿನ್ನನ್ನು ಕೂಡ ಅರ್ಜುನನು ನಾನು ರಣದಲ್ಲಿ ಕೊಲ್ಲುತ್ತೇನೆ.

ತಮದ್ಯ ಮೂಲಂ ಕಲಹಸ್ಯ ಸಂಖೇ
ದುರ್ಯೋಧನಾಪಾಶ್ರಯಜಾತದರ್ಪಮ್ ।
ತ್ವಾಮದ್ಯ ಹಂತಾಸ್ಮಿ ರಣೇ ಪ್ರಸಹ್ಯ
ಅಸ್ಯೈವ ಹಂತಾ ಯುಧಿ ಭೀಮಸೇನಃ ॥೭೩॥

ದುರ್ಯೋಧನನ ಆಶ್ರಯದಿಂದ ನಿನಗೆ ದರ್ಪ ಉಂಟಾಗಿದೆ. ಆದರಿಂದ ಕಲಹಕ್ಕೆ ಮೂಲನಾದ ನಿನ್ನನ್ನು ಈಗ ನಾನು ರಣದಲ್ಲಿ ಕೊಲ್ಲುವೆ, ಈ ದುರ್ಯೋಧನನನ್ನು ರಣದಲ್ಲಿ ಭೀಮ ಕೊಲ್ಲುತ್ತಾನೆ.

ದುರ್ಯೋಧನಸ್ಯಾಧಮಪೂರುಷಸ್ಯ
ಯಸ್ಯಾನಯಾದೇಷ ಮಹಾನ್ ಕ್ಷಯೋಽಭವತ್ ॥೭೪॥

ಅಧಮಪುರುಷನಾದ ದುರ್ಯೋಧನನ ಅನೀತಿಯಿಂದ ಮಹಾವಿನಾಶ ಈಗ ಸಂಭವಿಸಿದೆ.'

ಸಂಜಯಃ

ಸ ಏವಮುಕ್ತ್ವಾ ವಿನಿಮೃಜ್ಯ ಚಾಪಂ
ಲಕ್ಷ್ಯಂ ಹಿ ಕೃತ್ವಾ ವೃಷಸೇನಮಾಜೌ ।
ಮುಮೋಚ ಬಾಣಾನ್ ವಿಶಿಖಾನ್ಮಹಾತ್ಮಾ
ವಧಾಯ ರಾಜನ್ ಸೂತಪುತ್ರಸ್ಯ ಸಂಖೇ ॥೭೫॥

ಸಂಜಯ ನುಡಿದ– ರಾಜನೆ, ಮಹಾತ್ಮ ಅರ್ಜುನನು ಹೀಗೆ ನುಡಿದು ಬಿಲ್ಲನ್ನು ಸವರಿ ರಣದಲ್ಲಿ ವೃಷಸೇನನಿಗೆ ಗುರಿಇಟ್ಟು ಆ ಸೂತಪುತ್ರನ ವಧಕ್ಕಾಗಿ ಬಾಣಗಳನ್ನು ಹೊಡೆದ.

ವಿವ್ಯಾಧ ಚೈನಂ ದಶಭಿಃ ಪೃಷತ್ಕೈ-
ರ್ಮರ್ಮಸ್ವಶಂಕಂ ಪ್ರಸಭಂ ಕಿರೀಟೀ ।

ಚಿಚ್ಛೇದ ಚಾಸ್ಯೇಷ್ವಸನಂ ಭುಜೌ ಚ
ಶರೈಶ್ಚತುರ್ಭಿಃ ಶಿರ ಏವ ಚೋಗ್ರೈಃ ॥೭೬॥

ಅರ್ಜುನನು ವೃಷಸೇನನನ್ನು ಶಂಕೆ ಇಲ್ಲದೆ ಮರ್ಮಗಳಲ್ಲಿ ಒಮ್ಮೆಲೆ ಎಸೆದ ಹತ್ತು ಬಾಣಗಳಿಂದ ಚೆನ್ನಾಗಿ ಹೊಡೆದ. ಅವನ ಬಿಲ್ಲನ್ನೂ ಭುಜಗಳನ್ನೂ ಕತ್ತರಿಸಿದ. ಉಗ್ರವಾದ ನಾಲ್ಕು ಬಾಣಗಳಿಂದ ಶಿರಸ್ಸನ್ನೇ ತರಿದ.

ಸ ಪಾರ್ಥಬಾಣಾಭಿಹತಃ ಪಪಾತ
ರಥಾದ್ ವಿಬಾಹುರ್ವಿಶಿರಾ ಧರಾಯಾಮ್ ।
ಸುಪುಷ್ಪಿತಃ ಪರ್ಣಧರೋಽತಿಕಾಯೋ
ವಾತೇರಿತಃ ಶಾಲ ಇವಾದ್ರಿಶೃಂಗಾತ್ ॥೭೭॥

ವೃಷಸೇನನು ಅರ್ಜುನನ ಬಾಣಗಳಿಂದ ಹತನಾಗಿ ಭುಜಗಳನ್ನೂ ಶಿರಸ್ಸನ್ನೂ ಕಡಿದುಕೊಂಡು ರಥದಿಂದ ಒಳ್ಳೆಯ ಪುಷ್ಪಗಳಿಂದ ಎಲೆಗಳಿಂದ ಕೂಡಿದ ಎತ್ತರದ ಸಾಲವೃಕ್ಷವು ಬಿರುಗಾಳಿಯಿಂದ ಹೊಡೆಸಿಕೊಂಡು ಪರ್ವತ ಶಿಖರದಿಂದ ಬೀಳುವಂತೆ ನೆಲದಲ್ಲಿ ಬಿದ್ದ.

ಶಿರಃ ಕರೌ ಚೈವ ಧನುಶ್ಚ ಪಾರ್ಥ
ಏಕೇಷುಣಾ ವೃಷಸೇನಸ್ಯ ಸಂಖ್ಯೇ ।
ಚಿಚ್ಛೇದ ಪಾರ್ಥೋ ಹ್ಯಂಗರಾಜಸ್ಯ ಸೈನ್ಯಂ
ಕೋಪಾಗ್ನಿನಾ ಚತುರಂಗಂ ದದಾಹ ॥೭೮॥

ಅರ್ಜುನ ವೃಷಸೇನನ ತಲೆ ಭುಜ ಬಿಲ್ಲುಗಳನ್ನು ಕಡಿದ. ಕೋಪಾಗ್ನಿಯಿಂದ ಕರ್ಣನ ಚತುರಂಗಸೈನ್ಯವನ್ನೂ ಸುಟ್ಟ.

ತಂ ಪ್ರೇಕ್ಷ್ಯ ಬಾಣಾಭಿಹತಂ ಪತಂತಂ
ರಥಾತ್ಸುತಂ ಸೂತಜಃ ಕ್ಷಿಪ್ರಕಾರೀ ।
ರಥಂ ರಥೇನಾಶು ಜಗಾಮ ವೇಗಾತ್
ಕಿರೀಟಿನಃ ಪುತ್ರವಧಾಭಿತಪ್ತಃ ॥೭೯॥

ಬಾಣದಿಂದ ಹತನಾಗಿ ರಥದಿಂದ ಮಗನು ಬೀಳುವುದನ್ನು ಕಂಡು ವೇಗದಿಂದ

ಕಾರ್ಯಗಳನ್ನು ನಡೆಸುವ ಕರ್ಣನು ಅರ್ಜುನ ಮಾಡಿದ ಪುತ್ರವಧದಿಂದ ದುಃಖಿತನಾಗಿ ವೇಗವಾಗಿ ರಥದಿಂದ ಬೇಗನೆ ಹೊರಟ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಕರ್ಣಪರ್ವಣಿ ವೃಷಸೇನವಧೋ ನಾಮ ಏಕಾಶೀತಿತಮೋऽಧ್ಯಾಯಃ ॥೮೧॥

❖

ಎಂಬತ್ತೆರಡನೆಯ ಅಧ್ಯಾಯ

ಅರ್ಜುನರಥ ಕರ್ಣರಥದ ಮುಂದೆ ಬಂದು ನಿಂತಿತು.

ಸಂಜಯಃ

ತಮಾಯಾಂತಮಭಿಪ್ರೇಕ್ಷ್ಯ ವೇಲೋದ್‌ವೃತ್ತಮಿವಾರ್ಣವಮ್ ।
ಗರ್ಜಂತಂ ಸುಮಹಾಕಾಯಂ ದುರ್ನಿವಾರಂ ಸುರೈರಪಿ ॥೧॥

ಅರ್ಜುನಂ ಪ್ರಾಹ ದಾಶಾರ್ಹಃ ಪ್ರಹಸ್ಯ ಪುರುಷರ್ಷಭಃ ।
ಅಯಂ ಸ ರಥ ಆಯಾತಿ ಶ್ವೇತಾಶ್ವಃ ಶಲ್ಯಸಾರಥಿಃ ॥೨॥

ಸಂಜಯನು ನುಡಿದ— ಮೇರೆಮೀರಿ ಬರುವ ಸಮುದ್ರದಂತೆ ಬರುತ್ತ ಗರ್ಜಿಸುತ್ತಿರುವ, ದೇವತೆಗಳಿಂದಲೂ ತಡೆಯಲಾಗದ ಮಹಾಕಾಯದ ಕರ್ಣನನ್ನು ಕಂಡು ಕೃಷ್ಣನು ನಕ್ಕು ಅರ್ಜುನನಿಗೆ ನುಡಿದ, 'ಶಲ್ಯನ ಸಾರಥ್ಯದಲ್ಲಿ ಬಿಳಿಕುದುರೆಗಳನ್ನು ಹೂಡಿದ ರಥದಿಂದ ಕರ್ಣನು ಬರುತ್ತಿದ್ದಾನೆ.

ಯೇನ ತೇ ಸಹ ಯೋದ್ಧವ್ಯಂ ಸ್ಥಿರೋ ಭವ ಧನಂಜಯ ।
ಪಶ್ಯ ಚೈನಂ ಸಮಾಯುಕ್ತಂ ರಥಂ ಕರ್ಣಸ್ಯ ಪಾಂಡವ ॥೩॥

ಅವನೊಡನೆ ನೀನು ಯುದ್ಧ ಮಾಡಬೇಕಿದೆ, ಸ್ಥಿರವಾಗಿ ನಿಲ್ಲು ಅರ್ಜುನ! ಒಳ್ಳೆಯ ಸಜ್ಜಾದ ಕರ್ಣನ ಈ ರಥವನ್ನು ನೋಡು.

ಶ್ವೇತವಾಜಿಸಮಾಯುಕ್ತಂ ಯುಕ್ತಂ ರಾಧಾಸುತೇನ ಚ ।
ನಾನಾಪತಾಕಾಕಲಿಲಂ ಕಿಂಕಣೀಜಾಲಮಾಲಿನಮ್ ॥೪॥

ಬಿಳಿಕುದುರೆಗಳನ್ನು ಹೂಡಿ ನಾನಾ ಪತಾಕೆಗಳಿಂದ ಅಲಂಕರಿಸಿ ಕಿರುಗಂಟೆಗಳ ಸಮೂಹಗಳ ಮೇಲೆ ತೊಡಿಸಿರುವ ರಥ ಕರ್ಣನಿಂದ ಯುಕ್ತವಾಗಿ ಬರುತ್ತಿದೆ.

ಉಹ್ಯಮಾನಮಿವಾಕಾಶೇ ವಿಮಾನಂ ಪಾಂಡುರೈರ್ಹಯೈಃ ।
ಧ್ವಜಂ ಚ ಪಶ್ಯ ಕರ್ಣಸ್ಯ ನಾಗಕಕ್ಷ್ಯಂ ಮಹಾತ್ಮನಃ ॥೫॥

ಆಕಾಶದಲ್ಲಿ ನಡೆಸುವ ವಿಮಾನದಂತಿದೆ. ಬಿಳಿಕುದುರೆಗಳಿಂದ ಕೂಡಿದೆ. 'ನಾಗಕಕ್ಷ್ಯ' ಅಂದರೆ ಕರಿಯ ನಾಗರದಂತೆ ಕಪ್ಪಾದ ಭಯಂಕರವಾದ ಕಾಗೆಯ ಪ್ರತಿಮೆ ಮಹಾತ್ಮ ಕರ್ಣನ ಧ್ವಜವಿದು ಬರುವುದನ್ನು ನೋಡು.

ಆಖಂಡಲಧನುಃಪ್ರಖ್ಯಮುಲ್ಲಿಖಂತಮಿವಾಂಬರಮ್ ।
ಪಶ್ಯ ಕರ್ಣಂ ಸಮಾಯಾಂತಂ ಧಾರ್ತರಾಷ್ಟ್ರಪ್ರಿಯೈಷಿಣಮ್ ।
ಶರಧಾರಾ ವಿಮುಂಚಂತಂ ಧಾರಾಸಾರಮಿವಾಂಬುದಮ್ ॥೬॥

ಕರ್ಣನ ರಥವು ಇಂದ್ರಧನುಸ್ಸಿನಂತೆ ಆಕಾಶವನ್ನು ಅಲಂಕರಿಸುತ್ತಿದೆ; ನೋಡು. ಮೋಡವು ಧಾರಾಕಾರವಾಗಿ ಮಳೆ ಸುರಿಸುವಂತೆ ಕರ್ಣನು ದುರ್ಯೋಧನನ ಪ್ರಿಯವನ್ನು ಬಯಸಿ ಬಾಣಗಳ ಮಳೆಗರೆಯುತ್ತಾನೆ.

ಏಷ ಮದ್ರೇಶ್ವರೋ ರಾಜಾ ರಥಾಗ್ರೇ ಪರ್ಯವಸ್ಥಿತಃ ।
ನಿಯಚ್ಛತಿ ಹಯಾನಸ್ಯ ರಾಧೇಯಸ್ಯಾಮಿತೌಜಸಃ ॥೭॥

ರಥದ ಅಗ್ರಭಾಗದಲ್ಲಿ ರಾಜಾ ಶಲ್ಯ ಕುಳಿತಿದ್ದಾನೆ. ಅಮಿತ ಪರಾಕ್ರಮಿಯಾದ ಕರ್ಣನ ಕುದುರೆಗಳನ್ನು ನಿಯಂತ್ರಿಸುತ್ತಾನೆ.

ಶೃಣು ದುಂದುಭಿನಿರ್ಘೋಷಂ ಶಂಖನಾದಂ ಚ ದಾರುಣಮ್ ।
ಸಿಂಹನಾದಾಂಶ್ಚ ವಿವಿಧಾನ್ ಶೃಣು ಪಾಂಡವ ಸರ್ವಶಃ ॥೮॥

ದುಂದುಭಿಧ್ವನಿಯನ್ನೂ ದಾರುಣವಾದ ಶಂಖನಾದವನ್ನೂ ನಾನಾ ಬಗೆಯ ಎಲ್ಲ ಸಿಂಹನಾದಗಳನ್ನೂ ಕೇಳು, ಅರ್ಜುನ.

ಅಂತರ್ಧಾಯ ಮಹಾಶಬ್ದಾನ್ ಕರ್ಣೇನಾಮಿತತೇಜಸಾ ।
ದೋಧೂಯಮಾನಸ್ಯ ಭೃಶಂ ಧನುಷಃ ಶೃಣು ನಿಸ್ವನಮ್ ॥೯॥

ಎಲ್ಲ ಮಹಾಶಬ್ದಗಳನ್ನೂ ಮೀರಿಸುವಂಥ, ಕರ್ಣನು ಅಮಿತಪರಾಕ್ರಮದಿಂದ ಬಹಳ ಓಲಾಡಿಸುವ ಧನುಸ್ಸಿನ ಶಬ್ದವನ್ನೂ ಕೇಳು.

ಏತೇ ದೀರ್ಯಂತಿ ಸಗಣಾಃ ಪಾಂಚಾಲಾನಾಂ ಮಹಾರಥಾಃ ।
ದೃಷ್ಟ್ವಾ ಕೇಸರಿಣಂ ಕ್ರುದ್ಧಂ ಮೃಗಾ ಇವ ಮಹಾವನೇ ॥೧೦॥

ಮಹಾ ಅರಣ್ಯದಲ್ಲಿ ಕ್ರುದ್ಧವಾದ ಸಿಂಹವನ್ನು ಕಂಡು ಜಿಂಕೆಗಳು ಕಂಗೆಡುವಂತೆ ಪಾಂಚಾಲರ ಮಹಾರಥರು ತಮ್ಮ ಕಡೆಯ ಯೋಧರೊಂದಿಗೆ ಕಂಗೆಡುತ್ತಿದ್ದಾರೆ.

ಸರ್ವಯತ್ನೇನ ಕೌಂತೇಯ ಹಂತುಮರ್ಹಸಿ ಸೂತಜಮ್ ।
ನ ಹಿ ಕರ್ಣಶರಾನನ್ಯಃ ಸೋಢುಮುತ್ಸಹತೇಽನಘ ॥೧೧॥

ಅರ್ಜುನ, ನೀನು ನಿನ್ನ ಸರ್ವಪ್ರಯತ್ನದಿಂದ ಕರ್ಣನನ್ನು ಕೊಲ್ಲಬೇಕು. ಕರ್ಣನ ಬಾಣಗಳನ್ನು ಬೇರೆ ಯಾವಾತನೂ ಸಹಿಸಲಾರ.

ಸದೇವಾಸುರಗಂದರ್ವಾಂಸ್ತ್ರೀನ್ ಲೋಕಾನ್ ಸಚರಾಚರಾನ್ ।
ತ್ವಂ ಹಿ ಜೇತುಂ ರಣೇ ಶಕ್ತಸ್ತಥೈವ ವಿದಿತಂ ಮಮ ॥೧೨॥

ದೇವ ಅಸುರ ಗಂಧರ್ವರಿಂದ ಕೂಡಿದ ಚರಾಚರಗಳಿಂದ ಸಮೇತವಾದ ಮೂರು ಲೋಕಗಳನ್ನು ರಣದಲ್ಲಿ ಜಯಿಸಲು ನೀನೇ ಶಕ್ತ. ನಾನು ಹಾಗೇ ತಿಳಿದಿದ್ದೇನೆ.

ಭೀಮಮುಗ್ರಂ ಮಹಾದೇವಂ ತ್ರ್ಯಕ್ಷಂ ಶರ್ವಂ ಕಪರ್ದಿನಮ್ ।
ನ ಶಕ್ತಾ ದ್ರಷ್ಟುಮೀಶಾನಂ ಕಿಂ ಪುನರ್ಯೋಧಿತುಂ ಪ್ರಭುಮ್ ॥೧೩॥

ಭಯಂಕರ ಉಗ್ರ ಮುಕ್ಕಣ್ಣ ಜಟಾಧಾರಿ ಮಹಾದೇವ ಈಶಾನನೆನಿಸಿದ ಪ್ರಭು ಶಿವನನ್ನು ಯಾರೂ ನೋಡಲೂ ಶಕ್ತರಲ್ಲ. ಅವನೊಂದಿಗೆ ಹೋರಾಡಲು ಶಕ್ತರಲ್ಲ ಎಂದು ಬೇರೇನು ಹೇಳಬೇಕು?

ತ್ವಯಾ ಸಾಕ್ಷಾನ್ಮಹಾದೇವಃ ಸರ್ವಭೂತಶಿವಃ ಶಿವಃ ।
ಯುದ್ಧೇನಾರಾಧಿತಃ ಸ್ಥಾಣುರ್ದೇವಾಶ್ಚ ವರದಾಸ್ತವ ॥೧೪॥

ಎಲ್ಲ ಜಂತುಗಳಿಗೂ ಸುಖನೀಡುವ ಸಾಕ್ಷಾತ್ ಮಹಾದೇವ ಶಿವನನ್ನು ನೀನು ಯುದ್ಧದಿಂದ ಆರಾಧಿಸಿರುವೆ. ಶಿವನೂ ದೇವತೆಗಳೂ ನಿನಗೆ ವರ ನೀಡಿದ್ದಾರೆ.

ತಸ್ಯ ಪಾರ್ಥ ಪ್ರಸಾದೇನ ದೇವದೇವಸ್ಯ ಶೂಲಿನಃ ।
ಜಹಿ ಕರ್ಣಂ ಮಹಾಬಾಹೋ ನಮುಚಿಂ ವೃತ್ರಹಾ ಯಥಾ ।
ಶ್ರೇಯಸ್ತೇಽಸ್ತು ಸದಾ ಪಾರ್ಥ ಯುದ್ಧೇ ಜಯಮವಾಪ್ನುಹಿ ॥೧೫॥

ದೇವದೇವ ಶಿವನ ಅನುಗ್ರಹದಿಂದ, ಮಹಾಬಾಹು ಅರ್ಜುನ! ಇಂದ್ರನು ನಮುಚಿ ದಾನವನನ್ನು ಕೊಂದಂತೆ ನೀನು ಕರ್ಣನನ್ನು ಕೊಲ್ಲು. ಅರ್ಜುನ, ನಿನಗೆ ಸದಾ ಶ್ರೇಯಸ್ಸಾಗಲಿ, ಯುದ್ಧದಲ್ಲಿ ಜಯಶಾಲಿಯಾಗು.

ಅರ್ಜುನಃ

ಧ್ರುವ ಏವ ಜಯಃ ಕೃಷ್ಣ ಮಮ ನಾಸ್ಯತ್ರ ಸಂಶಯಃ ।
ಸರ್ವಲೋಕಗುರುರ್ಯಸ್ತ್ವಂ ತುಷ್ಟೋಽಸಿ ಮಧುಸೂದನ ॥೧೬॥

ಅರ್ಜುನ ನುಡಿದ— ಕೃಷ್ಣ ನನಗೆ ನಿಶ್ಚಯವಾಗಿ ಜಯವೆ, ಇದರಲ್ಲಿ ಸಂಶಯವಿಲ್ಲ. ಸರ್ವಲೋಕೇಶ್ವರನು ನೀನು ನನಗೆ ಒಲಿದಿರುವೆ ತಾನೆ?

ಚೋದಯಾಶ್ವಾನ್ ಹೃಷೀಕೇಶ ರಥಂ ಮಮ ಮಹಾರಥ ।
ನಾಹತ್ವಾ ಸಮರೇ ಶತ್ರುಂ ನಿವರ್ತಿಷ್ಯತಿ ಫಲ್ಗುನಃ ॥೧೭॥

ಮಹಾರಥನೆ, ಕೃಷ್ಣ ನನ್ನ ಕುದುರೆಗಳನ್ನು ರಥವನ್ನು ನಡೆಸು. ರಣದಲ್ಲಿ ಶತ್ರುವನ್ನು ಕೊಲ್ಲದೆ ಅರ್ಜುನ ಹಿಂತಿರುಗುವುದಿಲ್ಲ.

ಅದ್ಯ ಕರ್ಣಂ ಹತಂ ಪಶ್ಯ ಮಚ್ಛರೈಃ ಶಕಲೀಕೃತಮ್ ।
ಮಾಂ ವಾ ದ್ರಕ್ಷ್ಯಸಿ ಗೋವಿಂದ ಕರ್ಣೇನ ನಿಹತಂ ಶರೈಃ ॥೧೮॥

ಇಂದು ನನ್ನ ಬಾಣಗಳಿಂದ ಹೊಡೆಸಿಕೊಂಡು ಕರ್ಣನು ಚೂರಾಗುವುದನ್ನು ನೋಡು, ಇಲ್ಲವೆ, ಕೃಷ್ಣ ನಾನಾದರೂ ಕರ್ಣನ ಬಾಣಗಳಿಂದ ಹತನಾಗುವುದನ್ನು ನೋಡುವೆ.

ಉಪಸ್ಥಿತಮಿದಂ ಘೋರಂ ಯುದ್ಧಂ ತ್ರೈಲೋಕ್ಯಮೋಹನಮ್ ।
ಯಜ್ಜನಾಃ ಕಥಯಿಷ್ಯಂತಿ ಯಾವದ್ಭೂಮಿರ್ಧರಿಷ್ಯತಿ ॥೧೯॥

ಮೂಲೋಕವನ್ನು ಮೈಮರೆಸುವ ಘೋರಯುದ್ಧ ಇದೀಗ ನಡೆಯಲಿದೆ. ಅದನ್ನು ಮುಂದೆ ಭೂಮಿ ಇರುವಷ್ಟು ಕಾಲ ಜನರು ಹೇಳಿಕೊಳ್ಳಲಿದ್ದಾರೆ.

ಸಂಜಯಃ

ಏವಂ ಬ್ರುವಂಸ್ತದಾ ಪಾರ್ಥಃ ಕೃಷ್ಣಮಕ್ಲಿಷ್ಟಕಾರಿಣಮ್ ।
ಪ್ರತ್ಯುದ್ಯಯೌ ರಥೇನಾಶು ಗಜಂ ಪ್ರತಿಗಜೋ ಯಥಾ ॥೨೦॥

ಸಂಜಯನು ನುಡಿದ— ಹೀಗೆ ಅರ್ಜುನನು ಅನಾಯಾಸವಾಗಿ ಕರ್ಮಮಾಡುವ ಕೃಷ್ಣನಿಗೆ ಹೇಳಿ, ಆನೆಗೆ ಇದಿರಾಗಿ ವಿರೋಧಿ ಆನೆ ನುಗ್ಗುವಂತೆ, ರಥದಿಂದ ಬೇಗನೆ ಮುಂದೆ ನುಗ್ಗಿದ.

ಪುನಶ್ಚಾಹ ಮಹಾತೇಜಾಃ ಪಾರ್ಥಃ ಕೃಷ್ಣಮರಿಂದಮಮ್ ।
ಚೋದಯಾಶ್ವಾನ್ ಹೃಷೀಕೇಶ ಕಾಲೋಽಯಮತಿವರ್ತತೇ ॥೨೧॥

ಮಹಾಪರಾಕ್ರಮಿ ಅರ್ಜುನನು ಶತ್ರುನಾಶಕನಾದ ಕೃಷ್ಣನಿಗೆ ನುಡಿದ, 'ಕುದುರೆಗಳನ್ನು ನಡೆಸು ಕೃಷ್ಣ! ಕಾಲ ಮೀರುತ್ತಿದೆ'

ಏವಮುಕ್ತಸ್ತದಾ ತೇನ ಪಾಂಡವೇನ ಮಹಾತ್ಮನಾ ॥೨೨॥
ಜಯೇನ ಸಂಪೂಜ್ಯ ಸ ಪಾಂಡವಂ ತದಾ
ಪ್ರಚೋದಯಾಮಾಸ ಹಯಾನ್ ಮನೋಜವಾನ್ ।
ಸ ಪಾಂಡುಪುತ್ರಸ್ಯ ರಥೋ ಮನೋಜವಃ
ಕ್ಷಣೇನ ಕರ್ಣಸ್ಯ ರಥಾಗ್ರಗೋಽಭವತ್ ॥೨೩॥

ಮಹಾತ್ಮ ಅರ್ಜುನನು ಹೀಗೆ ನುಡಿದಾಗ ಕೃಷ್ಣನು ಅರ್ಜುನನನ್ನು ಜಯವಾಗಲೆಂದು ಹರಸಿ ಮನೋವೇಗದ ಕುದುರೆಗಳನ್ನು ನಡೆಸಿದ. ಮನೋವೇಗವುಳ್ಳ ಅರ್ಜುನನ ಆ ರಥವು ಕ್ಷಣದಲ್ಲಿ ಕರ್ಣನ ರಥದ ಮುಂದೆ ಬಂದು ನಿಂತಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ದ್ವ್ಯಶೀತಿತಮೋಽಧ್ಯಾಯಃ ॥೮೨॥

❖

ಮಹಾಭಾರತತಾತ್ಪರ್ಯನಿರ್ಣಯ

ಏಕೇನ ಬಾಣೇನ ಸುತೇ ಹತೇ ಸ್ವೇ
ವೈಕರ್ತನೋ ವಾಸವಿಮಭ್ಯಧಾವತ್ ।
ತಯೋರಭೂದ್ ದ್ವೈರಥಯುದ್ಧಮದ್ಭುತಂ
ಸರ್ವಾಸ್ತ್ರವಿದ್ವರಯೋರುಗ್ರರೂಪವ್ ॥೧೬೫॥

ಅರ್ಜುನನ ಒಂದೇ ಬಾಣದಿಂದ ತನ್ನ ಮಗ ವೃಷಸೇನ ಹತನಾದಾಗ ಕರ್ಣ ಅರ್ಜುನನ ಇದಿರಿಗೆ ಧಾವಿಸಿ ಬಂದ. ಎಲ್ಲ ಅಸ್ತ್ರಜ್ಞರೊಳಗೆ ಅಗ್ರಗಣ್ಯರಾದ ಅವರಿಬ್ಬರೊಳಗೆ ಭಯಂಕರವಾದ ಅದ್ಭುತ, ದ್ವಂದ್ವ ರಥಯುದ್ಧ ನಡೆಯಿತು.

ಪಕ್ಷಗ್ರಹಾಸ್ತತ್ರ ಸುರಾಸುರಾಸ್ತಯೋ-
ರನ್ಯೇ ಚ ಜೀವಾ ಗಗನಂ ಸಮಾಶ್ರಿತಾಃ ।
ಮಹಾನ್ ವಿವಾದೋಪ್ಯಭವತ್ ತಯೋಃ ಕೃತೇ
ತದಾ ಗಿರೀಶೋऽವದದಬ್ಜಯೋನಿವ್ ॥೧೬೬॥

ದೇವತೆಗಳೂ ಅಸುರರೂ ಅವರೀರ್ವರ ಪಕ್ಷಗಳನ್ನು ಹಿಡಿದರು. ಇತರ ಚೇತನರೂ ನೋಡಲು ಆಕಾಶದಲ್ಲಿ ನಿಂತರು. ಆ ಈರ್ವರಿಗಾಗಿ ದೊಡ್ಡ ವಿವಾದವೇ ನಡೆಯಿತು. ಆಗ ಶಿವ ಬ್ರಹ್ಮನಿಗೆ ಹೇಳಿದ.

ಸುರಾಸುರಾಣಾಂ ಭೀಮದುರ್ಯೋಧನೌ ದ್ವೌ
ಸಮಾಶ್ರಯೌ ತತ್ಪ್ರಿಯೌ ಕರ್ಣಪಾರ್ಥೌ ।
ಪ್ರಾಣೋಪಮೌ ತೇನ ಚೈತತ್ಕೃತೇ ತೇ
ಸುರಾಸುರಾಃ ಕರ್ತುಮಿಚ್ಛಂತಿ ಯುದ್ಧಮ್ ॥೧೬೭॥

'ದೇವತೆಗಳಿಗೂ ಅಸುರರಿಗೂ ಭೀಮ ಮತ್ತು ದುರ್ಯೋಧನರು ಆಶ್ರಯಭೂತರು. ಆ ಭೀಮ-ದುರ್ಯೋಧನರಿಗೆ ಪ್ರಿಯರು, ಪ್ರಾಣಕ್ಕೆ ಸಮಾನರು ಅರ್ಜುನ-ಕರ್ಣರು. ಆದರಿಂದ ಈ ಇಬ್ಬರಿಗಾಗಿ ದೇವತೆಗಳೂ ಅಸುರರೂ ಪರಸ್ಪರ ಯುದ್ಧಮಾಡಲು ಬಯಸಿದ್ದಾರೆ.

ತದಾ ವಿನಾಶೋ ಜಗತಾಂ ಮಹಾನ್ ಸ್ಯಾತ್
ತೇನಾನಯೋಃ ಸಮಮೇವಾಸ್ತು ಯುದ್ಧಮ್ ।
ಇತೀರಿತೇ ವಾಸವಃ ಪದ್ಮಯೋನಿಂ
ಜಗಾದ ಕೃಷ್ಣೋ ಯತ್ರ ಜಯಶ್ಚ ತತ್ರ ॥೧೬೮॥

ಅದರಿಂದ ಲೋಕಗಳಿಗೆ ಮಹಾವಿನಾಶ ಉಂಟಾದೀತು. ಅದರಿಂದ ಅರ್ಜುನ–ಕರ್ಣರಿಗೆ ಯುದ್ಧ ಸಮವೇ ಆಗಲಿ' ಹೀಗೆ ಶಿವ ಹೇಳಿದಾಗ ಇಂದ್ರ ಬ್ರಹ್ಮನಿಗೆ ಹೇಳಿದ- 'ಯಾರ ಪಕ್ಷದಲ್ಲಿ ಕೃಷ್ಣನಿರುವನೋ ಅವನ ಪಕ್ಷದಲ್ಲಿ ಜಯ ನಿಶ್ಚಿತ.

ಕಾಮೋ ನ ಕೃಷ್ಣಸ್ಯ ಮೃಷಾ ಭವೇದ್ಧಿ
ಕಾಮೋಽಸ್ಯ ಪಾರ್ಥಸ್ಯ ಜಯಂ ಪ್ರದಾತುಮ್ ।
ಇತ್ಯೂಚಿವಾನ್ ವಾಸವಃ ಫಲ್ಗುನಸ್ಯ
ಜಯೋಸ್ತು ಕರ್ಣಸ್ಯ ವಧಸ್ತಥೇತಿ ।
ಉಕ್ತ್ವಾ ಽನಮತ್ ಕಂಜಭವಸ್ತಥೇತಿ
ಪ್ರಾಹಾಸುರಾನ್ ದೇವತಾಶ್ಚಾಬಭಾಷೇ ॥೧೬೯॥

ಶ್ರೀಕೃಷ್ಣನ ಸಂಕಲ್ಪ ಎಂದೂ ಹುಸಿಯಾಗುವುದಿಲ್ಲ. ಅವನು ಅರ್ಜುನನಿಗೆ ಜಯ ನೀಡಲು ಸಂಕಲ್ಪ ಮಾಡಿದ್ದಾನೆ. ಹೀಗೆ ಹೇಳಿದ ದೇವೇಂದ್ರ ಅರ್ಜುನನಿಗೆ ಜಯವಾಗಲಿ, ಕರ್ಣನ ವಧೆಯಾಗಲಿ ಎಂದು ಹೇಳಿ ಬ್ರಹ್ಮನನ್ನು ನಮಸ್ಕರಿಸಿದ. ಬ್ರಹ್ಮನೂ 'ಹಾಗೇ ಆಗಲಿ' ಎಂದ. ಬಳಿಕ ಅಸುರರಿಗೂ ದೇವತೆಗಳಿಗೂ ಹೀಗೆ ಹೇಳಿದ.

ನ ಕರ್ಣಾರ್ಜುನಯೋರರ್ಥೇ ವಿರೋಧಂ ಕುರುತ ಕ್ವಚಿತ್ ।
ಭೀಮದುರ್ಯೋಧನಾರ್ಥೇ ವಾ ಪಶ್ಯಂತ್ವೇವ ಚ ಸಂಯುಗಮ್ ।
ಇತ್ಯುಕ್ತೇ ಶಾಂತಿಮಾಪನ್ನಾ ದದೃಶುಃ ಸಂಯುಗಂ ತಯೋಃ ॥೧೭೦॥

'ಕರ್ಣಾರ್ಜುನರಿಗಾಗಲಿ ಭೀಮ–ದುರ್ಯೋಧನರಿಗಾಗಲಿ ಎಂದೂ ಜಗಳಾಡಬೇಡಿ. ಅವರ ಯುದ್ಧವನ್ನು ಮಾತ್ರ ನೋಡಿರಿ' ಎಂದು ಬ್ರಹ್ಮ ನುಡಿದಾಗ ಎಲ್ಲರೂ ಶಾಂತರಾಗಿ ಕರ್ಣಾರ್ಜುನ ಯುದ್ಧವನ್ನು ವೀಕ್ಷಿಸಲು ತೊಡಗಿದರು.

❖

ಎಂಬತ್ತಮೂರನೆಯ ಅಧ್ಯಾಯ

ಕರ್ಣಾರ್ಜುನರ ಜಯಾಪಜಯ ವಿಷಯದಲ್ಲಿ ಅಂತರಿಕ್ಷದಲ್ಲಿ ವಾದ-ವಿವಾದಗಳು. ದೇವತೆಗಳು ಅರ್ಜುನ ಪಕ್ಷವನ್ನೂ ಅಸುರರು ಕರ್ಣಪಕ್ಷವನ್ನೂ ವಹಿಸಿದರು. ಅರ್ಜುನನಿಗೇ ಜಯವೆಂದು ಬ್ರಹ್ಮ-ರುದ್ರರ ಘೋಷಣೆ.

ಸಂಜಯಃ

ವೃಷಸೇನಂ ಹತಂ ದೃಷ್ಟ್ವಾ ಶೋಕಾಮರ್ಷಸಮನ್ವಿತಃ ।
ಮುಕ್ತ್ವಾ ಶೋಕೋದ್ಭವಂ ವಾರಿ ನೇತ್ರಾಭ್ಯಾಂ ಸಹಸಾ ವೃಷಃ ॥೧॥

ರಥೇನ ಕರ್ಣಸ್ತೇಜಸ್ವೀ ಜಗಾಮಾಭಿಮುಖೋ ರಿಪೂನ್ ।
ಯುದ್ಧಾಯಾಮರ್ಷತಾಮ್ರಾಕ್ಷಃ ಸಮಾಹೂಯ ಧನಂಜಯಮ್ ॥೨॥

ಸಂಜಯ ನುಡಿದ— ವೃಷಸೇನನು ಹತನಾದುದನ್ನು ಕಂಡು ಶೋಕ ಅಸಹನೆಗಳಿಂದ ಕೂಡಿದ ಪರಾಕ್ರಮಿಯಾದ ಕರ್ಣನು ಒಡನೆ ಶೋಕದ ಕಣ್ಣೀರನ್ನು ಸುರಿಸಿ, ಅಸಹನೆಯಿಂದ ಕಣ್ಣು ಕೆಂಪು ಮಾಡಿಕೊಂಡು ರಥದಿಂದ ಶತ್ರುಗಳಿಗೆ ಇದಿರಾಗಿ ನಡೆದ. ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸಿದ.

ತೌ ರಥೌ ಸೂರ್ಯಸಂಕಾಶೌ ವೈಯಾಘ್ರಪರಿವಾರಣೌ ।
ಸಮೇತೌ ದದೃಶುಸ್ತತ್ರ ದ್ವಾವಿವಾರ್ಕೌ ಸಮಾಗತೌ ॥೩॥

ಹುಲಿಯ ಚರ್ಮವನ್ನು ಹೊದ್ದಿಸಿದ ಸೂರ್ಯನಂತೆ ಬೆಳಗುವ ಆ ಎರಡು ರಥಗಳು ಸೇರಿದಾಗ ಇಬ್ಬರು ಸೂರ್ಯರೇ ಸೇರಿದಂತೆ ಜನರು ಕಂಡರು.

ಶ್ವೇತಾಶ್ವೌ ಪುರುಷಾದಿತ್ಯಾವಾಸ್ಥಿತಾವರಿಮರ್ದನೌ ।
ಶುಶುಭಾತೇ ಮಹಾತ್ಮಾನೌ ಚಂದ್ರಾದಿತ್ಯೌ ಯಥಾ ದಿವಿ ॥೪॥

ಬಿಳಿ ಕುದುರೆಗಳುಳ್ಳ ಶತ್ರುನಾಶಕರಾದ ಆ ಇಬ್ಬರು ಪುರುಷಶ್ರೇಷ್ಠರು ರಥದಲ್ಲಿ ನಿಂತು ಆಕಾಶದಲ್ಲಿ ನಿಂತ ಮಹಾತ್ಮರಾದ ಚಂದ್ರ-ಸೂರ್ಯರಂತೆ ಕಂಗೊಳಿಸಿದರು.

ತೌ ದೃಷ್ಟ್ವಾ ವಿಸ್ಮಯಂ ಜಗ್ಮುಃ ಸರ್ವಭೂತಾನಿ ಮಾರಿಷ ।
ತ್ರೈಲೋಕ್ಯವಿಜಯೇ ಯತ್ತಾವಿಂದ್ರವೈರೋಚನಾವಿವ ॥೫॥

ಮೂರ್ಲೋಕವನ್ನು ಗೆಲ್ಲುವ ಪ್ರಯತ್ನದಲ್ಲಿದ್ದ ಇಂದ್ರ ಬಲಿಚಕ್ರವರ್ತಿಗಳಂತೆ ಕರ್ಣಾರ್ಜುನರನ್ನು ಕಂಡು ಎಲ್ಲ ಜನರೂ ವಿಸ್ಮಯಗೊಂಡರು.

ರಥಜ್ಯಾತಳನಿರ್ಹ್ರಾದೈರ್ಬಾಣಶಂಖಿರವೈರಪಿ ।
ತೌ ರಥಾವಭಿಧಾವಂತೌ ಸಮಾಲೋಕ್ಯ ಮಹೀಕ್ಷಿತಾಮ್ ॥೬॥

ಧ್ವಜೌ ಚ ದೃಷ್ಟ್ವಾ ಸಂಸಕ್ತೌ ವಿಸ್ಮಯಃ ಸಮಪದ್ಯತ ।
ಹಸ್ತಿಕಕ್ಷ್ಯಾಂ ಚ ಕರ್ಣಸ್ಯ ವಾನರಂ ಚ ಕಿರೀಟಿನಃ ॥೭॥

ರಥ ಹೆದೆ ಹಸ್ತತಲ ಶಬ್ದಗಳಿಂದಲೂ ಬಾಣ-ಶಂಖಗಳ ಧ್ವನಿಗಳಿಂದಲೂ ಯುಕ್ತವಾಗಿ ಎರಡು ರಥಗಳು ಪರಸ್ಪರ ನುಗ್ಗುವುದನ್ನೂ, ಕರ್ಣನ ಕಾಕಧ್ವಜ ಅರ್ಜುನನ ಕಪಿಧ್ವಜಗಳು ಪರಸ್ಪರ ವಿರೋಧಿಸುವುದನ್ನೂ ಕಂಡು ರಾಜರೆಲ್ಲರಿಗೆ ವಿಸ್ಮಯ ಉಂಟಾಯಿತು.

ತೌ ರಥೌ ಸಂಪ್ರಸಕ್ತೌ ಚ ದೃಷ್ಟ್ವಾ ಭಾರತ ಪಾರ್ಥಿವಾಃ ।
ಸಿಂಹನಾದರವಾಂಶ್ಚಕ್ರುಃ ಸಾಧುವಾದಾಂಶ್ಚ ಪುಷ್ಕಲಾನ್ ॥೮॥

ಆ ಎರಡು ರಥಗಳು ಪರಸ್ಪರ ಇದಿರಿಸಿದ್ದನ್ನು ಕಂಡು ರಾಜರು ಸಿಂಹನಾದ ಧ್ವನಿಗಳನ್ನೂ ಮಾಡಿದರು. 'ಭಲೆ' ಎಂದೂ ಹೊಗಳಿದರು.

ಶ್ರುತ್ವಾ ತು ದ್ವೈರಥಂ ತಾಭ್ಯಾಂ ತತ್ರ ಯೋಧಾಃ ಸಮಂತತಃ ।
ಚಕ್ರುರ್ಬಾಹುವಲಂ ಚೈವ ತಥಾ ಚೇಲವಲಂ ಮಹತ್ ॥೯॥

ಎರಡು ರಥಗಳ ಯುದ್ಧ ನಡೆಯುತ್ತದೆ ಎಂದು ಕೇಳಿ ಎಲ್ಲ ಯೋಧರು ಕೈವಾರಿಸಿದರು. ಬಟ್ಟೆಯಾಡಿಸಿದರು.

ಆಜಗ್ಮುಃ ಕುರವಸ್ತತ್ರ ವಾದಿತ್ರಾನುಗತಾಸ್ತದಾ ।
ಕರ್ಣಂ ಪ್ರಹರ್ಷಯಂತಶ್ಚ ಶಂಖಾನ್ ದಧ್ಮುಶ್ಚ ಪುಷ್ಕಲಾನ್ ॥೧೦॥

ಕೌರವರು ಕರ್ಣನನ್ನು ಹುರಿದುಂಬಿಸುವುದಕ್ಕಾಗಿ ವಾದ್ಯಘೋಷಗಳೊಂದಿಗೆ ಅಲ್ಲಿಗೆ ಬಂದರು. ಬಹಳ ಶಂಖನಾದ ಮಾಡಿದರು.

ತಥೈವ ಪಾಂಡವಾಃ ಸರ್ವೇ ಹರ್ಷಯಂತೋ ಧನಂಜಯಮ್ ।
ತೂರ್ಯಶಂಖನಿನಾದೇನ ದಿಶಃ ಸರ್ವಾ ವ್ಯನಾದಯನ್ ॥೧೧॥

ಪಾಂಡವರೂ ಹಾಗೇ ಎಲ್ಲರೂ ಅರ್ಜುನನನ್ನು ಹುರಿದುಂಬಿಸುವುದಕ್ಕೆ ವಾದ್ಯ ಶಂಖನಾದಗಳಿಂದ ಎಲ್ಲ ದಿಕ್ಕುಗಳನ್ನೂ ತುಂಬಿಸಿದರು.

ಕ್ಷ್ವೇಡಿತಾಸ್ಫೋಟಿತೋತ್ಕ್ರುಷ್ಟೈಸ್ತುಮುಲಂ ಸರ್ವತೋಽಭವತ್ ।
ಬಾಹುಘೋಷಾಶ್ಚ ವೀರಾಣಾಂ ಕರ್ಣಾರ್ಜುನಸಮಾಗಮೇ ॥೧೨॥

ವೀರರು ಗರ್ಜನೆ ಕೈಚಪ್ಪಾಳೆ ಕೂಗುಗಳಿಂದ ಭುಜತಟ್ಟುವುದರಿಂದ ಕರ್ಣ–ಅರ್ಜುನರ ಸಮಾಗಮದಲ್ಲಿ ಎಲ್ಲೆಡೆ ದೊಡ್ಡಗದ್ದಲ ಉಂಟಾಯಿತು.

ತೌ ದೃಷ್ಟ್ವಾ ಪುರುಷವ್ಯಾಘ್ರೌ ರಥಸ್ಥೌ ರಥಿನಾಂ ವರೌ ।
ಪ್ರಗೃಹೀತಮಹಾಚಾಪೌ ಶರಶಕ್ತಿಗದಾಯುಧೌ ।
ವರ್ಮಿಣೌ ಬದ್ಧನಿಸ್ತ್ರಿಂಶೌ ಶ್ವೇತಾಶ್ವೌ ಶಂಖಶೋಭಿನೌ ॥೧೩॥

ರಥಿಕಶ್ರೇಷ್ಠರಾದ ಪುರುಷಶ್ರೇಷ್ಠರಾದ ಕರ್ಣ–ಅರ್ಜುನರು ದೊಡ್ಡಬಿಲ್ಲು ಹಿಡಿದು ಬಾಣಶಕ್ತಿ ಗದಾಯುಧಗಳನ್ನು ಧರಿಸಿ ಕವಚತೊಟ್ಟು ಸೊಂಟಕ್ಕೆ ಕತ್ತಿ ಕಟ್ಟಿಕೊಂಡು ಶಂಖಗಳಿಂದ ಶೋಭಿಸುತ್ತ ಬಿಳಿಕುದುರೆ ಕಟ್ಟಿದ ರಥದಲ್ಲಿ ನಿಂತುದನ್ನು ಕಂಡು ಸಿದ್ಧ–ಚಾರಣಸಮೂಹಗಳಿಗೆ ವಿಸ್ಮಯ ಉಂಟಾಯಿತು.

ಕೃಷ್ಣಶಲ್ಯರಥೋಪೇತೌ ತುಲ್ಯರೂಪೌ ಮಹಾರಥೌ ।
ಸಿಂಹಸ್ಕಂಧೌ ಸಿಂಹಭುಜೌ ರಕ್ತಾಕ್ಷೌ ಹೇಮಮಾಲಿನೌ ॥೧೪॥

ಕೃಷ್ಣ–ಶಲ್ಯರು ನಡೆಸುವ ರಥಗಳುಳ್ಳವರು, ಇಬ್ಬರೂ ಒಂದೇರೀತಿ ಕಾಣುವ ಮಹಾರಥರು. ಸಿಂಹದ ಹೆಗಲು ಭುಜಗಳುಳ್ಳವರು ಕೆಂಪುಕಣ್ಣಿನವರು ಬಂಗಾರದ ಮಾಲೆ ತೊಟ್ಟವರು.

ಚಾಪವಿದ್ಯುಲ್ಲತೋಪೇತೌ ಶಸ್ತ್ರಸಂಪತ್ತಿಶೋಭಿನೌ ।
ಚಾಮರವ್ಯಜನೋಪೇತೌ ಶ್ವೇತಚ್ಛತ್ರಾಭಿಶೋಭಿನೌ ॥೧೫॥

ಮಿಂಚಿನ ಬಳ್ಳಿಯಂತಹ ಬಿಲ್ಲು ಹಿಡಿದವರು ಶಸ್ತ್ರಸಂಪತ್ತುಗಳಿಂದ ಶೋಭಿಸುವವರು. ಚಾಮರ ಬೀಸಣಿಗೆಗಳುಳ್ಳವರು. ಶ್ವೇತಚ್ಛತ್ರಗಳಿಂದ ಶೋಭಿಸುವವರು.

ತೂಣೀರವರಸಂಪನ್ನೌ ದ್ವಾವಪಿ ಸ್ಮ ಸುದರ್ಶನೌ ॥೧೬॥

ಒಳ್ಳೆ ಬತ್ತಳಿಕೆಗಳುಳ್ಳ ಇಬ್ಬರೂ ನೋಡಲು ಸುಂದರಾಕಾರದವರು.

ರಕ್ತಚಂದನದಿಗ್ಧಾಂಗೌ ಸಮದೌ ವೃಷಭಾವಿವ ।
ಸಿಂಹಸ್ಕಂಧಪ್ರತೀಕಾಶೌ ವ್ಯೂಢೋರಸ್ಕೌ ಮಹಾಬಲೌ ।
ಅನ್ಯೋನ್ಯಸ್ಪರ್ಧಿನೌ ರಾಜನ್ನನ್ಯೋನ್ಯಸ್ಯ ವಧೈಷಿಣೌ ॥೧೭॥

ಕೆಂಪುಗಂಧ ಮೈಗೆ ಪೂಸಿಕೊಂಡವರು, ಮದಭರಿತರು, ಗೂಳಿಗಳಂಥವರು, ಸಿಂಹದ ಹೆಗಲಿನಿಂದ ಶೋಭಿಸುವವರು. ಅಗಲವಾದ ಎದೆಯುಳ್ಳವರು ಮಹಾಬಲಿಗಳು ಪರಸ್ಪರ ಸ್ಪರ್ಧಿಗಳು ಪರಸ್ಪರ ವಧಾಕಾಂಕ್ಷಿಗಳು.

ಅನ್ಯೋನ್ಯಮಭಿಧಾವಂತೌ ಗೋಷ್ಠೇಷ್ವಿವ ಮಹರ್ಷಭೌ ।
ಪ್ರಭಿನ್ನಾವಿವ ಮಾತಂಗೌ ಸಂರಬ್ಧಾವಿವ ಚಾಚಲೌ ॥೧೮॥

ಕೊಟ್ಟಿಗೆಗಳಲ್ಲಿ ಪರಸ್ಪರ ಹೋರುವ ಗೂಳಿಗಳಂತೆ, ಮದಜಲ ಸುರಿಸುವ ಆನೆಗಳಂತೆ, ಕೋಪಗೊಂಡ ಎರಡು ಬೆಟ್ಟಗಳಂತೆ ಕಾಣುವವರು.

ಆಶೀವಿಷಸಮಪ್ರಖ್ಯೌ ಯಮಕಾಲಾಂತಕೋಪಮೌ ॥೧೯॥

ವಿಷದ ಹಾವುಗಳಂಥವರು, ಯಮ–ಕಾಲಾಂತಕರಂಥವರು.

ಇಂದ್ರವೃತ್ರಾವಿವ ಕ್ರುದ್ಧೌ ಸೂರ್ಯಾಚಂದ್ರಮಸಪ್ರಭೌ ।
ಮಹಾಗ್ರಹಾವಿವ ಕ್ರೂರೌ ಯುಗಾಂತೇ ಸಮುಪಸ್ಥಿತೌ ॥೨೦॥

ಇಂದ್ರ–ವೃತ್ರರಂತೆ ಕುಪಿತರಾದವರು ಸೂರ್ಯ–ಚಂದ್ರರಂತೆ ಬೆಳಗುವವರು. ಯುಗಪ್ರಳಯದಲ್ಲಿ ಉದಿಸಿದ ಮಹಾಗ್ರಹಗಳಂತೆ ಕ್ರೂರರು.

ದೇವಗರ್ಭೌ ದೇವಸಮೌ ದೇವತುಲ್ಯೌ ಚ ರೂಪತಃ ।
ಯದೃಚ್ಛಯಾ ಸಮಾಯಾತೌ ಸೂರ್ಯಾಚಂದ್ರಮಸಾವಿವ ॥೨೧॥

ದೇವಾಂಶಸಂಭೂತರು, ದೇವತೆಗಳಂತೆ ಬಲದಲ್ಲಿ ಸಮಾನರು, ರೂಪದಲ್ಲಿಯೂ ದೇವಸಮಾನರು, ದೈವಾತ್ ಭೂಮಿಗೆ ಬಂದವರು ಸೂರ್ಯ–ಚಂದ್ರರಂಥವರು.

ಬಲಿನೌ ಸಮರೇ ದೃಪ್ತೌ ನಾನಾಶಸ್ತ್ರಧರೌ ಯುಧಿ ॥೨೨॥

ಬಲಿಷ್ಠರು ರಣದಲ್ಲಿ ದರ್ಪಉಳ್ಳವರು ರಣದಲ್ಲಿ ನಾನಾ ಶಸ್ತ್ರ ಧರಿಸುವವರು.

ಉಭೌ ವರಾಯುಧಧರಾವುಭೌ ರಣಕೃತಶ್ರಮೌ ।
ಉಭೌ ಚ ಬಾಹುಶಬ್ದೇನ ನಾದಯಂತೌ ನಭಸ್ತಲಮ್ ॥೨೩॥

ಇಬ್ಬರೂ ಉತ್ತಮ ಆಯುಧಗಳನ್ನು ಧರಿಸಿ ರಣದಲ್ಲಿ ಶ್ರಮಮಾಡುವವರು, ಇಬ್ಬರೂ ಭುಜತಟ್ಟಿ ಆಕಾಶದಲ್ಲಿ ಪ್ರತಿಧ್ವನಿ ಉಂಟುಮಾಡುವವರು.

ಉಭೌ ವಿಶ್ರುತಕರ್ಮಾಣೌ ಪೌರುಷೇಣ ಬಲೇನ ಚ ।
ಉಭೌ ಚ ಸದೃಶೌ ಯುದ್ಧೇ ಶಂಬರಾಮರರಾಜಯೋಃ ॥೨೪॥

ಇಬ್ಬರೂ ಪೌರುಷದಿಂದಲೂ ಬಲದಿಂದಲೂ ಪ್ರಸಿದ್ಧವಾದ ಸಾಹಸ ತೋರಿದವರು, ಇಬ್ಬರೂ ಯುದ್ಧದಲ್ಲಿ ಶಂಬರಾಸುರ–ದೇವೇಂದ್ರರಿಗೆ ಸಮಾನರು.

ಕಾರ್ತವೀರ್ಯಸಮೌ ವೀರ್ಯೇ ತಥಾ ದಾಶರಥೇಃ ಸಮೌ ।
ವಿಷ್ಣುವೀರ್ಯಸಮೌ ವೀರ್ಯೇ ತಥಾ ಭವಸಮೌ ಯುಧಿ ॥೨೫॥

ಬಲದಲ್ಲಿ ಕಾರ್ತವೀರ್ಯನಿಗೆ, ಶ್ರೀರಾಮನಿಗೆ, ವಿಷ್ಣುವಿಗೆ, ರುದ್ರನಿಗೆ ಸಮರು.

ಉಭೌ ಶ್ವೇತಹಯೌ ರಾಜನ್ನಶ್ವಪ್ರವರವಾಹಿನೌ ।
ಸಾರಥೀ ಪ್ರವರೌ ಚೈವ ತಯೋರಾಸ್ತಾಂ ಮಹಾಬಲೌ ॥೨೬॥

ಇಬ್ಬರೂ ಬಿಳಿಕುದುರೆಗಳುಳ್ಳವರು, ಶ್ರೇಷ್ಠ ಕುದುರೆಗಳನ್ನೇರುವವರು. ಅವರಿಬ್ಬರಿಗೂ ಸಾರಥಿಗಳು ಉತ್ತಮರು, ಮಹಾಬಲಿಷ್ಠರು.

ತೌ ತು ದೃಷ್ಟ್ವಾ ಮಹಾರಾಜ ರಾಜಮಾನೌ ಮಹಾರಥೌ ।
ಸಿದ್ಧಚಾರಣಸಂಘಾನಾಂ ವಿಸ್ಮಯಃ ಸಮಪದ್ಯತ ॥೨೭॥

ಮಹಾರಾಜ, ಶೋಭಿಸುವ ಮಹಾರಥರಿಬ್ಬರನ್ನು ಕಂಡು ಸಿದ್ಧ–ಚಾರಣ ಸಮೂಹಗಳಿಗೆ ವಿಸ್ಮಯ ಉಂಟಾಯಿತು.

ಧಾರ್ತರಾಷ್ಟ್ರಾಸ್ತತಃ ಕರ್ಣಂ ಸಬಲಾ ಭರತರ್ಷಭ ।
ಪರಿವವ್ರುರ್ಮಹಾತ್ಮಾನಂ ಕ್ಷಿಪ್ರಮಾಹವಶೋಭಿನಮ್ ॥೨೮॥

ರಾಜನೆ, ಕೌರವಯೋಧರು ಸೈನ್ಯಗಳೊಂದಿಗೆ ವೇಗವುಳ್ಳ ಯುದ್ಧದಲ್ಲಿ ಶೋಭಿಸುವ ಮಹಾತ್ಮನಾದ ಕರ್ಣನನ್ನು ಸುತ್ತುವರಿದರು.

ತಥೈವ ಪಾಂಡವಾ ಹೃಷ್ಟಾ ಧೃಷ್ಟದ್ಯುಮ್ನಪುರೋಗಮಾಃ ।
ಪರಿವವ್ರುರ್ಮಹಾತ್ಮಾನಂ ಪಾರ್ಥಮಪ್ರತಿಮಂ ಯುಧಿ ॥೨೯॥

ಹಾಗೆಯೇ ಧೃಷ್ಟದ್ಯುಮ್ನ ಮುಂತಾದ ಪಾಂಡವಯೋಧರು ಉತ್ಸಾಹಿತರಾಗಿ ಯುದ್ಧದಲ್ಲಿ ಅಪ್ರತಿಮನಾದ ಅರ್ಜುನನನ್ನು ಸುತ್ತುವರಿದರು.

ತಾವಕಾನಾಂ ರಣೇ ಕರ್ಣೋ ಗ್ಲಹ ಆಸೀದ್ ವಿಶಾಂಪತೇ ।
ತಥೈವ ಪಾಂಡವೇಯಾನಾಂ ಗ್ಲಹಃ ಫಾಲ್ಗೋಽಭವದ್ ಯುಧಿ ॥೩೦॥

ನಿನ್ನವರಿಗೆ ಕರ್ಣನು ಯುದ್ಧದ ಜೂಜಿನಲ್ಲಿ ಪಣವಾದ, ಹಾಗೇ ಪಾಂಡವರಿಗೆ ಅರ್ಜುನನು ಪಣವಾದ.

ತ ಏವ ಸಭ್ಯಾಸ್ತತ್ರಾಸನ್ ಪ್ರೇಕ್ಷಕಾಶ್ಚಾಭವನ್ ಸ್ಮ ತೇ ।
ತತ್ರೈಷಾಂ ಗ್ಲಹಮಾನಾನಾಂ ಧೃತೌ ಜಯಪರಾಜಯೌ ॥೩೧॥

ಹಿಂದೆ ಜೂಜಿನಲ್ಲಿ ಯಾರು ಸಭಾಸದರೋ ಅವರೆ ಇಲ್ಲಿಯೂ ಸಭಾಸದರು. ಯಾರು ಪ್ರೇಕ್ಷಕರಾಗಿದ್ದರೊ ಅವರೆ ಇಲ್ಲಿಯೂ ಪ್ರೇಕ್ಷಕರಾದರು. ಇಬ್ಬರಲ್ಲಿ ಯಾರಿಗೆ ಜಯ, ಯಾರಿಗೆ ಪರಾಜಯ, ಎಂಬುದನ್ನು ಅವರು ತಮ್ಮೊಳಗೇ ನಿಶ್ಚಯ ಮಾಡಿಕೊಂಡಿದ್ದರು.

ತಾಭ್ಯಾಂ ದ್ಯೂತಂ ಸಮಾಯತ್ತಂ ವಿಜಯಾಯೇತರಾಯ ವಾ ।
ಅಸ್ಮಾಕಂ ಪಾಂಡವಾನಾಂ ಚ ಸ್ಥಿತಾನಾಂ ರಣಮೂರ್ಧನಿ ॥೩೨॥

ರಣರಂಗದ ಅಗ್ರಭಾಗದಲ್ಲಿದ್ದ ನಮಗೂ ಪಾಂಡವರಿಗೂ ಜಯಕ್ಕಾಗಲಿ ವಿಜಯಕ್ಕಾಗಲಿ ಕರ್ಣ–ಅರ್ಜುನರಿಂದಲೇ ಯುದ್ಧದ ಜೂಜು ನಡೆಯಿತು.

ತೌ ತು ಸ್ಥಿತೌ ಮಹಾರಾಜ ಸಮರೇ ಯುದ್ಧಶಾಲಿನೌ ।
ಅನ್ಯೋನ್ಯಂ ಪ್ರತಿಸಂರಬ್ಧಾವನ್ಯೋನ್ಯಸ್ಯ ಜಯೈಷಿಣೌ ॥೩೩॥

ಮಹಾರಾಜ, ಯುದ್ಧದಲ್ಲಿ ಶೋಭಿಸುವ ಅವರಿಬ್ಬರು ಪರಸ್ಪರವಾಗಿ ಕುಪಿತರಾದರು. ಪರಸ್ಪರ ಜಯಾಕಾಂಕ್ಷಿಗಳಾದರು.

ತಾವುಭೌ ಪ್ರಜಿಹೀರ್ಷೇತಾಮಿಂದ್ರವೃತ್ರಾವಿವಾಭಿತಃ ।
ಭೀಮರೂಪಧರಾವಾಸ್ತಾಂ ಮಹಾಧೂಮಾವಿವ ಗ್ರಹೌ ॥೩೪॥

ಅವರಿಬ್ಬರೂ ಇಂದ್ರ–ವೃತ್ರರಂತೆ ಪರಸ್ಪರ ಪ್ರಹಾರ ಮಾಡಲು ಬಯಸಿದರು. ಭಯಂಕರರೂಪ ಧರಿಸಿ ಮಹಾಧೂಮವುಳ್ಳ ಗ್ರಹಗಳಂತೆ ಕಂಡುಬಂದರು.

ತತೋಽಂತರಿಕ್ಷೇ ಸಾಕ್ಷೇಪಾ ವಿವಾದಾ ಭರತರ್ಷಭ ।
ಮಿಥೋ ಭೇದಾಶ್ಚ ಭೂತಾನಾಮಾಸನ್‌ಕರ್ಣಾರ್ಜುನಾಂತರೇ ।
ವ್ಯಾಶ್ರಯಂತ ದಿಶೋ ಭಿನ್ನಾಃ ಸರ್ವಲೋಕಾಶ್ಚ ಮಾರಿಷ ॥೩೫॥

ಆಗ ಅಂತರಿಕ್ಷದಲ್ಲಿ ಜನರ ನಡುವೆ ಪರಸ್ಪರ ಆಕ್ಷೇಪ ವಿವಾದ ಕಲಹಗಳು ಕರ್ಣ–ಅರ್ಜುನರ ಜಯಾಪಜಯಗಳ ವಿಷಯದಲ್ಲಿ ಉಂಟಾದುವು. ಎಲ್ಲ ಜನರೂ ಭಿನ್ನಭಿನ್ನ ದಿಕ್ಕುಗಳನ್ನು ಆಶ್ರಯಿಸಿದರು.

ದೇವದಾನವಗಂಧರ್ವಾಃ ಪಿಶಾಚೋರಗರಾಕ್ಷಸಾಃ ।
ಪ್ರತಿಪಕ್ಷಗ್ರಹಂ ಚಕ್ರುಃ ಕರ್ಣಾರ್ಜುನಸಮಾಗಮೇ ॥೩೬॥

ದೇವದಾನವಗಂಧರ್ವರೂ ಪಿಶಾಚ ನಾಗ ರಾಕ್ಷಸರು ಎಲ್ಲರೂ ಕರ್ಣ ಅರ್ಜುನರ ಯುದ್ಧದಲ್ಲಿ ಒಂದೊಂದು ಪಕ್ಷವನ್ನು ಹಿಡಿದರು.

ದ್ಯೌರಾಸೀತ್ ಕರ್ಣತೋ ವ್ಯಗ್ರಾ ಸನಕ್ಷತ್ರಾ ವಿಶಾಂಪತೇ ।
ಭೂಮಿರ್ವಿಶಾಲಾ ಪಾರ್ಥಸ್ಯ ಮಾತೇವ ಜಯಕಾಂಕ್ಷಿಣೀ ॥೩೭॥

ನಕ್ಷತ್ರಸಹಿತವಾದ ಸ್ವರ್ಗದ ಅಧಿದೇವತೆ ತಾಯಿಯಂತೆ ಕರ್ಣನ ಪಕ್ಷವನ್ನು ಗ್ರಹಿಸಿದಳು. ವಿಶಾಲವಾದ ಭೂಮಿಯ ಅಧಿದೇವತೆ ತಾಯಿಯಂತೆ ಅರ್ಜುನನ ಪಕ್ಷ ವಹಿಸಿದಳು.

ಕರ್ಣನು ಅರ್ಜುನನಿಂದ ತಾನು ಹತನಾಗಿ ಸ್ವರ್ಗಕ್ಕೆ ಹೋಗಬೇಕೆಂದೇ ಬಯಸಿದ್ದವನು. ತಾನು ಕುಂತೀಪುತ್ರನೆಂಬ ಸತ್ಯವನ್ನು ಧರ್ಮರಾಜನಿಗೆ ಹೇಳದೆ ಗೋಪ್ಯವಾಗಿರಿಸಿದ್ದರ ಉದ್ದೇಶ ಇದೇ ಆಗಿತ್ತು. ಅವನೇ ಕೃಷ್ಣನ ಮುಂದೆ ಹೇಳುತ್ತಾನೆ. ಇದನ್ನು ನೀನು ಹೇಳಿದರೆ ಧರ್ಮರಾಜನು ರಾಜ್ಯವನ್ನಾಳುವುದಿಲ್ಲ. ಕರ್ಣನೇ ರಾಜನಾಗಬೇಕೆನ್ನುತ್ತಾನೆ. ಧರ್ಮರಾಜನೆ ಶಾಶ್ವತವಾಗಿ ರಾಜ್ಯವಾಳ ಬೇಕು ಎಂದು ನನ್ನ ಅಪೇಕ್ಷೆ ಎಂದು ಉದ್ಯೋಗಪರ್ವದಲ್ಲಿ ಹೇಳಿದ್ದಾನೆ. ಹೀಗಾಗಿ ಸ್ವರ್ಗಾಕಾಂಕ್ಷಿಯಾದ ಕರ್ಣನ ಪಕ್ಷವನ್ನು ಸ್ವರ್ಗದ ಅಧಿದೇವತೆ ವಹಿಸಿದಳು. ಭೂಭಾರಭೂತರಾದ ಕೌರವರ ಪಕ್ಷದವನೆಂದು ಭೂದೇವಿ ಕರ್ಣನ ಪಕ್ಷವನ್ನು ತಿರಸ್ಕರಿಸಿದಳು. ಭೂಭಾರ ಕಳೆಯುತ್ತಿರುವ ಅರ್ಜುನನ ಪಕ್ಷವನ್ನೇ ಹಿಡಿದಳು.

ಸರಿತಃ ಸಾಗರಾಶ್ಚೈವ ಗಿರಯಶ್ಚ ನರೋತ್ತಮ ।
ವೃಕ್ಷಾಶ್ಚೌಷಧಯಸ್ತತ್ರ ವ್ಯಾಶ್ರಯಂತ ಕಿರೀಟಿನಮ್ ॥೩೮॥

ನದೀ ಸಾಗರಗಳು ಪರ್ವತಗಳು ವೃಕ್ಷ ಔಷಧಿಗಳು ಅರ್ಜುನನ ಪಕ್ಷವನ್ನು ಹಿಡಿದವು.

ಅಸುರಾ ಯಾತುಧಾನಾಶ್ಚ ಗುಹ್ಯಕಾಶ್ಚ ಪರಂತಪ ।
ಕರ್ಣತಃ ಸಮಪದ್ಯಂತ ಖೇಚರಾಣಿ ವಯಾಂಸಿ ಚ ॥೩೯॥

ಅಸುರರು ಯಾತುಧಾನರು ಗುಹ್ಯಕರು ಖೇಚರರು ಪಕ್ಷಿಗಳು ಕರ್ಣನ ಪಕ್ಷವನ್ನು ಹಿಡಿದವು.

ರತ್ನಾನಿ ನಿಧಯಃ ಸರ್ವೇ ವೇದಾಶ್ಚಾಖ್ಯಾನಪಂಚಮಾಃ ।
ಸೋಪವೇದೋಪನಿಷದಃ ಸರಹಸ್ಯಾಃ ಸಸಂಗ್ರಹಾಃ ॥೪೦॥

ವಾಸುಕಿಶ್ಚಿತ್ರಸೇನಶ್ಚ ತಕ್ಷಕಶ್ಚೋಪತಕ್ಷಕಃ ।
ಸರ್ಪಾಶ್ಚೈವ ತಥಾ ಸರ್ವೇ ಕಾದ್ರವೇಯಾಶ್ಚ ಸಾನ್ವಯಾಃ ।
ವಿಷವಂತೋ ಮಹಾರೋಷಾ ನಾಗಾಶ್ಚಾರ್ಜುನತೋಽಭವನ್ ॥೪೧॥

ರತ್ನಗಳು ನಿಧಿಗಳು ಎಲ್ಲ ವೇದಗಳು ಪುರಾಣಗಳು ಉಪವೇದಗಳು ಉಪನಿಷತ್ತುಗಳು ರಹಸ್ಯ ಸಂಗ್ರಹಗಳು, ವಾಸುಕಿ, ಚಿತ್ರಸೇನ ತಕ್ಷಕ ಉಪತಕ್ಷಕರು

ಸರ್ಪಗಳು ಕದ್ರುವಿನ ಸಂತತಿಯವರು ವಿಷವುಳ್ಳ ಮಹಾರೋಷಭರಿತರಾದ ನಾಗರು ಎಲ್ಲರೂ ಅರ್ಜುನನ ಪಕ್ಷವನ್ನು ಹಿಡಿದರು.

ಐರಾವತಾಃ ಸೌರಭೇಯಾ ವೈಶಾಲೇಯಾಶ್ಚ ಭೋಗಿನಃ ।
ಏತೇऽಭವನ್ನರ್ಜುನತಃ ಕ್ಷುದ್ರಸರ್ಪಾಸ್ತು ಕರ್ಣತಃ ॥೪೨॥

ಐರಾವತ ಸೌರಭೇಯ ವೈಶಾಲೇಯ ನಾಗರು ಅರ್ಜುನನ ಪಕ್ಷವನ್ನೂ ಕ್ಷುದ್ರಸರ್ಪಗಳು ಕರ್ಣಪಕ್ಷವನ್ನೂ ಹಿಡಿದವು.

ಈಹಾಮೃಗಾ ವ್ಯಾಲಮೃಗಾ ಮಂಗಲ್ಯಾಶ್ಚ ಮೃಗದ್ವಿಜಾಃ ।
ಪಾರ್ಥಸ್ಯ ವಿಜಯಂ ರಾಜನ್ ಸರ್ವ ಏವಾಭಿಸಂಶ್ರಿತಾಃ ॥೪೩॥

ತೋಳಗಳು ವ್ಯಾಲಮೃಗಗಳು ಮಂಗಳಸೂಚಕವಾದ ಮೃಗ–ಪಕ್ಷಿಗಳು ಎಲ್ಲರೂ ಅರ್ಜುನನ ವಿಜಯವನ್ನೇ ಹಾರೈಸಿದರು.

ವಸವೋ ಮರುತಃ ಸಾಧ್ಯಾ ರುದ್ರಾ ವಿಶ್ವೇऽಶ್ವಿನೌ ತಥಾ ।
ಅಗ್ನಿರಿಂದ್ರಶ್ಚ ಸೋಮಶ್ಚ ಪವನಶ್ಚ ದಿಶೋ ದಶ ।
ಧನಂಜಯಮುಪಾಜಗ್ಮುರಾದಿತ್ಯಾಃ ಕರ್ಣತೋऽಭವನ್ ॥೪೪॥

ವಸುಗಳು ಮರುತರು ಸಾಧ್ಯರು ರುದ್ರರು ವಿಶ್ವೇದೇವತೆಗಳು ಅಶ್ವಿನೀದೇವತೆಗಳು ಅಗ್ನಿ ಇಂದ್ರ ಸೋಮ ವಾಯು ದಶದಿಕ್ಕುಗಳು ಅರ್ಜುನನ ಪಕ್ಷ ವಹಿಸಿದರು. ಆದಿತ್ಯರು ಕರ್ಣಪಕ್ಷ ವಹಿಸಿದರು.

ವಿಶಃ ಶೂದ್ರಾಶ್ಚ ಸೂತಾಶ್ಚ ವರ್ಣಸಂಕರಜಾಶ್ಚ ಯೇ ।
ಸರ್ವಸತ್ತ್ವೇಷು ತೇ ರಾಜನ್ ರಾಧೇಯಮಭಜಂಸ್ತದಾ ॥೪೫॥

ಎಲ್ಲ ಮನುಷ್ಯರಲ್ಲಿ ವೈಶ್ಯ ಶೂದ್ರ ಸೂತ ವರ್ಣಸಂಕರಜಾತರು ಕರ್ಣನ ಪಕ್ಷವನ್ನು ಹಿಡಿದರು.

ದೇವಾಸ್ತು ಪಿತೃಭಿಃ ಸಾರ್ಧಂ ಸಗಣಾರ್ಜುನತೋऽಭವನ್ ।
ಬ್ರಹ್ಮ ಕ್ಷತ್ರಂ ಚ ಯಜ್ಞಾಶ್ಚ ದಕ್ಷಿಣಾಶ್ಚಾರ್ಜುನಂ ಶ್ರಿತಾಃ ॥೪೬॥

ದೇವತೆಗಳು ಪಿತೃಗಳು ಅವರ ಗಣಗಳು ಅರ್ಜುನನ ಕಡೆ ನಿಂತವು. ಹಾಗೆ ಬ್ರಾಹ್ಮಣ ಕ್ಷತ್ರಿಯರು ಯಜ್ಞಗಳೂ ದಕ್ಷಿಣೆಗಳೂ ಅರ್ಜುನನ ಪರ ನಿಂತವು.

ದೇವಬ್ರಹ್ಮನೃಪರ್ಷೀಣಾಂ ಗಣಾಃ ಪಾಂಡವತೋಽಭವನ್ ।
ತುಂಬುರುಪ್ರಮುಖಾ ರಾಜನ್ ಗಂಧರ್ವಾಶ್ಚ ಯತೋಽರ್ಜುನಃ॥೪೭॥

ದೇವರ್ಷಿ ಬ್ರಹ್ಮರ್ಷಿ ರಾಜರ್ಷಿಗಣಗಳು ಅರ್ಜುನನ ಪಕ್ಷವನ್ನು ಹಿಡಿದರು. ರಾಜನೆ, ತುಂಬುರು ಮುಂತಾದ ಗಂಧರ್ವರೂ ಅರ್ಜುನನ ಪಕ್ಷವನ್ನೆ ಹಿಡಿದರು.

ಪ್ರೇತಾಶ್ಚೈವ ಪಿಶಾಚಾಶ್ಚ ಕ್ರವ್ಯಾದಾಶ್ಚ ಮೃಗಾಂಡಜಾಃ ।
ರಾಕ್ಷಸಾಃ ಸಹ ಯಾದೋಭಿಃ ಶ್ವಸೃಗಾಲಾಶ್ಚ ಕರ್ಣತಃ ॥೪೮॥

ಪ್ರೇತ ಪಿಶಾಚ ಕ್ರವ್ಯಾದ ಮೃಗ ಅಂಡಜ ರಾಕ್ಷಸ ಯಾದಸ ಶ್ವ ಸೃಗಾಲಗಳೆಲ್ಲ ಕರ್ಣನ ಪಕ್ಷ ಹಿಡಿದವು.

ಯಮೋ ವೈಶ್ರವಣಶ್ಚೈವ ವರುಣಶ್ಚ ಯತೋಽರ್ಜುನಃ ॥೪೯॥

ಯಮ ಕುಬೇರ ವರುಣರು ಅರ್ಜುನನ ಕಡೆ ನಿಂತರು.

ದೇವರ್ಷಿಬ್ರಹ್ಮರ್ಷಿಗಣಾಃ ಸರ್ವೇ ಚ ಖಚರಾಶ್ಚ ಯೇ ।
ಪ್ರಾವೇಯಾಃ ಸಹ ಮೌನೇಯಾ ಗಂಧರ್ವಾಪ್ಸರಸಾಂ ಗಣಾಃ ॥೫೦॥

ಉಹ್ಯಮಾನಾಸ್ತಥಾ ಮೇಘೈರ್ವಾಯುನಾ ಚ ಮನೀಷಿಣಃ ।
ದಿದೃಕ್ಷವಃ ಸಮಾಜಗ್ಮುಃ ಕರ್ಣಾರ್ಜುನಸಮಾಗಮಮ್ ॥೫೧॥

ದೇವರ್ಷಿ ಬ್ರಹ್ಮರ್ಷಿಗಣಗಳೂ ಎಲ್ಲ ಖೇಚರರೂ 'ಪ್ರಾವೇಯ ಮೌನೇಯ' ಅಂದರೆ ಕಶ್ಯಪಪತ್ನಿಯರಾದ ಪ್ರಾವಾದೇವಿ ಮುನಿದೇವಿಯರ ಮಕ್ಕಳಾದ ಗಂಧರ್ವಾಪ್ಸರೆಯರ ಗಣಗಳು ಮೋಡ ಗಾಳಿಗಳು ಹೊರುವ ವಿಮಾನಗಳೇ ವಾಹನವಾಗಿ ಉಳ್ಳವರು ಆ ವಾಹನಗಳನ್ನೇರಿ ಕರ್ಣಾರ್ಜುನರಿಬ್ಬರ ಸಮರ ದರ್ಶನಾಕಾಂಕ್ಷಿಗಳಾಗಿ ಬಂದು ನೆರೆದರು.

ದೇವದಾನವಗಂಧರ್ವಾ ನಾಗಾ ಯಕ್ಷಾಃ ಪತತ್ರಿಣಃ ।
ಮಹರ್ಷಯೋ ವೇದವಿದಃ ಪಿತರಶ್ಚ ಸ್ವಧಾಭುಜಃ ॥೫೨॥

ತಪೋ ವಿದ್ಯಾಸ್ತಥೌಷಧ್ಯೋ ನಾನಾರೂಪಬಲಾನ್ವಿತಾಃ ।
ಅಂತರಿಕ್ಷೇ ಮಹಾರಾಜ ವಿನದಂತೋಽವತಸ್ಥಿರೇ ॥೫೩॥

ದೇವ ದಾನವ ಗಂಧರ್ವ ನಾಗ ಯಕ್ಷ ಪಕ್ಷಿಗಳು ವೇದವೇತ್ತರಾದ ಮಹರ್ಷಿಗಳು ಸ್ವಧಾಭೋಜಿಗಳಾದ ಪಿತೃಗಳು ತಪಸ್ಸು ವಿದ್ಯೆಗಳು ನಾನಾರೂಪ ಬಲಗಳುಳ್ಳ ಓಷಧಿಗಳು ಅಂತರಿಕ್ಷದಲ್ಲಿ ಶಬ್ದಮಾಡುತ್ತ ನಿಂತವು.

ಬ್ರಹ್ಮಾ ಬ್ರಹ್ಮರ್ಷಿಭಿಃ ಸಾರ್ಧಂ ಪ್ರಜಾಪತಿಭಿರೇವ ಚ ।
ಭವೇನಾವಸ್ಥಿತೋ ಯಾನಂ ದಿವ್ಯಂ ತಂ ದೇಶಮಭ್ಯಯಾತ್ ॥೫೪॥

ಬ್ರಹ್ಮನು ಬ್ರಹ್ಮರ್ಷಿಗಳೊಂದಿಗೆ ಪ್ರಜಾಪತಿಗಳೊಂದಿಗೆ ಶಿವನೊಂದಿಗೆ ದಿವ್ಯ ವಿಮಾನವನ್ನೇರಿ ಆ ಪ್ರದೇಶಕ್ಕೆ ಆಗಮಿಸಿದ.

ದ್ವೈಪಕ್ಷಮಾಸೀದ್ ದೇವಾನಾಮಸುರಾಣಾಂ ತಥೈವ ಚ ।
ಸಮೇತೌ ತೌ ಮಹಾತ್ಮಾನೌ ದೃಷ್ಟ್ವಾ ಕರ್ಣಧನಂಜಯೌ ॥೫೫॥

ಮಹಾತ್ಮರಾದ ಕರ್ಣ–ಅರ್ಜುನರು ರಣರಂಗದಲ್ಲಿ ಸೇರಿದ್ದನ್ನು ಕಂಡು ಅಂತರಿಕ್ಷದಲ್ಲಿ ದೇವತೆಗಳದು, ಅಸುರರದೆಂದು ಎರಡು ಪಕ್ಷಗಳುಂಟಾದುವು.

ಯತಃ ಪಾರ್ಥಸ್ತತೋ ದೇವಾ ಯತಃ ಕರ್ಣಸ್ತತೋಽಸುರಾಃ ॥೫೬॥

ಎಲ್ಲ ದೇವತೆಗಳೂ ಅರ್ಜುನನ ಪಕ್ಷದಲ್ಲಿ ನಿಂತರು. ಎಲ್ಲ ಅಸುರರೂ ಕರ್ಣನ ಪಕ್ಷದಲ್ಲಿ ನಿಂತರು.

ಪ್ರಜಾಪತಿರಥೋಕ್ತೈ ತ್ವನಂ ಸ್ವಯಂಭುಂ ಸಮಚೋದಯತ್ ।
ಸಮೋಽಸ್ತು ದೇವ ವಿಜಯ ಏತಯೋರ್ನರಸಿಂಹಯೋಃ ॥೫೭॥

ಕರ್ಣಾರ್ಜುನ ವಿವಾದೇನ ಮಾ ನಶ್ಯೇದಖಿಲಂ ಜಗತ್
ತದುಪಶ್ರುತ್ಯ ಮಘವಾ ಪ್ರಣಿಪತ್ಯ ಪಿತಾಮಹಮ್ ॥೫೮॥

ವ್ಯಜ್ಞಾಪಯತ ದೇವೇಶಮಿದಂ ಮತಿಮತಾಂ ವರಃ ।
ಪೂರ್ವಂ ಭಗವತಾ ಪ್ರೋಕ್ತಂ ಕೃಷ್ಣಯೋರ್ವಿಜಯೋ ಧ್ರುವಃ ॥೫೯॥

ತತ್ತಥಾಸ್ತು ನಮಸ್ತೇಸ್ತು ಪ್ರಸೀದ ಭಗವನ್ಮಮ ॥೬೦॥

'ಪ್ರಜಾಪತಿ' ಅಂದರೆ ಶಿವನು ಬ್ರಹ್ಮನಲ್ಲಿ ಈ ಮಾತನ್ನು ಹೇಳಿ ಪ್ರಾರ್ಥಿಸಿದ— 'ದೇವ, ಈ ಪುರುಷಶ್ರೇಷ್ಠರಾದ ಕರ್ಣಾರ್ಜುನರಿಗೆ ವಿಜಯ ಸಮವಾಗಲಿ. ಕರ್ಣಾರ್ಜುನರ ಕಲಹದಿಂದ ಎಲ್ಲ ಜಗತ್ತು ನಾಶವಾಗದಿರಲಿ' ಎಂದು.

ಇದನ್ನು ಕೇಳಿ ಮತಿ ಉಳ್ಳವರಲ್ಲಿ ಶ್ರೇಷ್ಠನಾದ ಇಂದ್ರನು ಬ್ರಹ್ಮನನ್ನು ನಮಸ್ಕರಿಸಿ ದೇವೇಶನಲ್ಲಿ ವಿಜ್ಞಾಪನೆ ಮಾಡಿದ— ಪೂಜ್ಯನು ಹಿಂದೆ ಹೇಳಿದುದುಂಟು. ಕೃಷ್ಣಾರ್ಜುನರಿಗೇ ಜಯ ಎಂದು. ಅದು ಈಗ ಹಾಗೇ ಆಗಲಿ.ಪೂಜ್ಯನೆ, ನಿನ್ನನ್ನು ನಮಿಸುತ್ತೇನೆ, ಪ್ರಸನ್ನನಾಗು'

ಬ್ರಹ್ಮೇಶಾನಾವಥೋ ವಾಕ್ಯಮೂಚತುಸ್ತ್ರಿದಶೇಶ್ವರಮ್ ।
ವಿಜಯೋ ಧ್ರುವ ಏವಾಸ್ತು ವಿಜಯಸ್ಯ ಮಹಾತ್ಮನಃ ॥೬೧॥

ಬ್ರಹ್ಮ–ಶಿವರು ದೇವರಾಜನಿಗೆ ಹೇಳಿದರು: ಮಹಾತ್ಮನಾದ ವಿಜಯನಿಗೇ ವಿಜಯವಾಗಲಿ.

ಮನಸ್ವೀ ಬಲವಾನ್ ಶೂರಃ ಕೃತಾಸ್ತ್ರಶ್ಚ ತಪೋಧನಃ ।
ಬಿಭರ್ತಿ ಚ ಮಹಾತೇಜಾ ಧನುರ್ವೇದಮಶೇಷತಃ ॥೬೨॥

ಅರ್ಜುನನು ಮನೋನಿಗ್ರಹಉಳ್ಳವನು ಬಲಿಷ್ಠ ಶೂರ ಅಸ್ತ್ರಜ್ಞ ತಪಸ್ವಿ ಧನುರ್ವೇದವನ್ನು ಪೂರ್ತಿ ಧಾರಣ ಮಾಡಿದವನು.

ಪಾರ್ಥಃ ಸರ್ವಗುಣೋಪೇತೋ ದೇವಕಾರ್ಯಮಿದಂ ಯತಃ ।
ಕ್ಲಿಶ್ಯಂತೇ ಪಾಂಡವಾ ನಿತ್ಯಂ ವನವಾಸಾದಿಭಿರ್ಭೃಶಮ್ ॥೬೩॥

ಅರ್ಜುನನು ಸರ್ವಗುಣಸಂಪನ್ನ. ಅಂಥವನಿಗೆ ಜಯವು ದೇವಕಾರ್ಯ ವಾಗಿರುತ್ತದೆ. ಪಾಂಡವರು ವನವಾಸಾದಿಗಳಿಂದ ನಿತ್ಯ ಕ್ಲೇಶಪಟ್ಟವರು.

ಸಂಪನ್ನಸ್ತಪಸಾ ಚೈವ ಪರ್ಯಾಪ್ತಃ ಪುರುಷರ್ಷಭಃ ॥೬೪॥

ವನವಾಸಾದಿ ಕ್ಲೇಶವನ್ನು ತಪೋರೂಪದಿಂದ ಸಹಿಸಿದ್ದರಿಂದ ಅರ್ಜುನನು

ತಪಸ್ಸಿನಿಂದ ಸಂಪನ್ನನೇ ಆಗಿದ್ದಾನೆ. ಅದರಿಂದ ಎಲ್ಲ ಕಾರ್ಯದಲ್ಲಿ 'ಪರ್ಯಾಪ್ತ' ಸಮರ್ಥನೆನಿಸಿದ್ದಾನೆ.

ಅತಿಕ್ರಾಮೇಚ್ಚ ಮಾಹಾತ್ಮ್ಯಾದ್ ದಿಷ್ಟಮಪ್ಯಸ್ಯ ಪರ್ಯಯಾತ್ ।
ಅತಿಕ್ರಾಂತೇ ಚ ಲೋಕಾನಾಮಭಾವೋ ನಿಯತೋ ಭವೇತ್ ॥೬೫॥

ಅರ್ಜುನನ ದೈವವಾದ ಕೃಷ್ಣನು ಕ್ರಮೇಣ ಅವನಿಗೆ ಮಾಹಾತ್ಮ್ಯವನ್ನು ಸಾಮರ್ಥ್ಯವನ್ನು ಕೊಟ್ಟು ಅವನು ಕರ್ಣನನ್ನು ಮೀರಿಸುವಂತೆ ಮಾಡುತ್ತಾನೆ. ಕರ್ಣನಿಗಿಂತ ಹೆಚ್ಚಿನ ಸಾಮರ್ಥ್ಯವನ್ನು ಅರ್ಜುನನಲ್ಲಿ ವ್ಯಕ್ತಗೊಳಿಸುತ್ತಾನೆ. ಹೀಗೆ ಅತಿಕ್ರಮಣವಾದಾಗ ವಿಜಯವಾಗದೆ ಹೋದರೆ ಲೋಕಕ್ಕೆ ನಾಶ ನಿಶ್ಚಿತ. ಅದರಿಂದ ಕರ್ಣನಿಗೆ ಪರಾಜಯ ನಿಶ್ಚಿತ.

ನ ವಿದ್ಯತೇ ವ್ಯವಸ್ಥಾನಂ ಕೃಷ್ಣಯೋಃ ಕ್ರುದ್ಧಯೋಃ ಕ್ವಚಿತ್ ।
ಸ್ರಷ್ಟಾರೌ ಹ್ಯಸತಶ್ಚೋಭೌ ಸತಶ್ಚ ಪುರುಷರ್ಷಭೌ ॥೬೬॥

ಕೃಷ್ಣಾರ್ಜುನರು ನರ–ನಾರಾಯಣರು ವಾಯು ಅಂತರಿಕ್ಷರೂಪವಾದ ಸತ್ತಿಗೂ ಅವುಗಳಿಗಿಂತ ಭಿನ್ನವಾದ ಪೃಥಿವಿ ಅಪ್‌ತೇಜೋರೂಪವಾದ ಮಹಾಭೂತ ಗಳಿಗೂ ಇವರು ಸೃಷ್ಟಿಕರ್ತರು. ಅವರು ಕ್ರುದ್ಧರಾದರೆ ಎಲ್ಲಿಯೂ ವ್ಯವಸ್ಥೆ ಇಲ್ಲವಾದೀತು.

ನರನಾರಾಯಣಾವೇತೌ ಪುರಾಣಾವೃಷಿಸತ್ತಮೌ ।
ಅನಿಯತ್ತೌ ನಿಯಂತಾರಾವಭೀತೌ ಸ್ಮ ಪರಂತಪೌ ॥೬೭॥

ಅಂಥ ನರ–ನಾರಾಯಣರೇ ಈ ಕೃಷ್ಣಾರ್ಜುನರು. ಪ್ರಾಚೀನ ಋಷಿಶ್ರೇಷ್ಠರು. ಅವರು ಯಾರಿಂದಲೂ ನಿಯಮ್ಯರಲ್ಲ. ಅವರು ಸರ್ವನಿಯಾಮಕರು, 'ಅ–ಭೀತ' ಭಯವಿಲ್ಲದವರು. ಶತ್ರುನಾಶಕರು.

ಕರ್ಣೋ ಲೋಕಾನಯಂ ಮುಖ್ಯಾನ್ ಪ್ರಾಪ್ನೋತು ಪುರುಷರ್ಷಭಃ ।
ವೀರೋ ವೈಕರ್ತನಃ ಶೂರೋ ವಿಜಯಸ್ತ್ವಸ್ತು ಕೃಷ್ಣಯೋಃ ॥೬೮॥

ಕರ್ಣನೂ 'ವಿಕರ್ತನ' ಸೂರ್ಯನ ಅಂಶಸಂಭೂತನಾದ ಶ್ರೇಷ್ಠ ಪುರುಷನೆ,

ವೀರ, ಶೂರ. ಅವನು ಸ್ವರ್ಗಲೋಕಗಳನ್ನು ಹೊಂದಲಿ. ಜಯವು ಮಾತ್ರ ಕೃಷ್ಣಾರ್ಜುನರಿಗೇ ಇರಲಿ.

ವಸೂನಾಂ ಚ ಸಲೋಕತ್ವಂ ಮರುತಾಂ ವಾ ಸಮಾಪ್ನುಯಾತ್ ।
ಸಹಿತೋ ದ್ರೋಣಭೀಷ್ಮಾಭ್ಯಾಂ ನಾಕಲೋಕೇ ಮಹೀಯತಾಮ್ ॥೬೯।

ಕರ್ಣನು ವಸುಗಳ ಅಥವಾ ಮರುತ್ತುಗಳ ಸಮಾನಲೋಕಗಳನ್ನು ಹೊಂದಲಿ. ದ್ರೋಣ–ಭೀಷ್ಮರೊಂದಿಗೆ ಸ್ವರ್ಗಲೋಕದಲ್ಲಿ ಸತ್ಕಾರಭಾಜನನಾಗಲಿ.

ತಥೋಕ್ತೇ ದೇವದೇವಾಭ್ಯಾಂ ಸಹಸ್ರಾಕ್ಷೋಽಬ್ರವೀದ್ ವಚಃ ।
ಆಮಂತ್ರ್ಯ ಸರ್ವಭೂತಾನಿ ಬ್ರಹ್ಮೇಶಾನಾನುಶಾಸನಾತ್ ॥೭೦॥

ದೇವದೇವರಾದ ಬ್ರಹ್ಮ–ಶಿವರು ಹೀಗೆ ಹೇಳಿದಾಗ ದೇವೇಂದ್ರನು ಎಲ್ಲರಿಗೂ ಬ್ರಹ್ಮ–ಶಿವರ ಉಪದೇಶದಂತೆ ನುಡಿದ—

ಶ್ರುತಂ ಭವದ್ಭಿರ್ಯತ್ಪ್ರೋಕ್ತಂ ಭಗವದ್ಭ್ಯಾಂ ಜಗದ್ಧಿತಮ್ ।
ತತ್ತಥಾ ನಾನ್ಯಥಾ ತದ್ಧಿ ತಿಷ್ಠಧ್ವಂ ಗತಮನ್ಯವಃ ॥೭೧॥

ಪೂಜ್ಯರಿಬ್ಬರೂ ಜಗತ್ತಿಗೆ ಹಿತವಾದುದನ್ನು ಹೇಳಿದ್ದಾರೆ. ಅದನ್ನು ನೀವು ಕೇಳಿರುವಿರಿ. ಅದು ಹಾಗೇ ಆಗುವುದು. ಅಸಮಾಧಾನ ಪಡದೆ ತಾಳ್ಮೆಯಿಂದ ಯುದ್ಧವನ್ನು ನೋಡುತ್ತಿರಿ.

ಯದ್ಯಪಿ 'ಅರ್ಜುನನಿಗೇ ಜಯ, ಕರ್ಣನಿಗೆ ಸ್ವರ್ಗಪ್ರಾಪ್ತಿ' ಎಂದು ಹೇಳಿದ್ದು ಬ್ರಹ್ಮ. ಶಿವನು ಇಬ್ಬರಿಗೂ ಜಯ ಸಮಾನವಾಗಲಿ ಎಂದಿದ್ದ. ಆದರೂ ಬ್ರಹ್ಮನು ಅರ್ಜುನನಿಗೆ ಜಯವೆಂದು ಹೇಳಿದ ಬಳಿಕ ಶಿವನು ಅದನ್ನು ಒಪ್ಪಿಕೊಂಡಿದ್ದರಿಂದ ಬ್ರಹ್ಮ–ಶಿವರಿಬ್ಬರೂ ಹೇಳಿದರೆಂದು ಇಂದ್ರ ಹೇಳುತ್ತಿದ್ದಾನೆ.

ಇತಿ ಶ್ರುತ್ವೇಂದ್ರವಚನಂ ಸರ್ವಭೂತಾನಿ ಮಾರಿಷ ।
ವಿಸ್ಮಿತಾನ್ಯಭವನ್ ರಾಜನ್ ಪೂಜಯಾಂಚಕ್ರಿರೇ ಚ ತತ್ ॥೭೨॥

ದೇವೇಂದ್ರನ ಮಾತನ್ನು ಕೇಳಿ ಎಲ್ಲರೂ ವಿಸ್ಮಿತರಾದರು. ಅದನ್ನು ಪ್ರಶಂಸೆ ಮಾಡಿದರು.

ವ್ಯಸೃಜಂಶ್ಚ ಸುಗಂಧೀನಿ ನಾನಾರೂಪಾಣಿ ಖಾತ್ತಥಾ ।
ಪುಷ್ಪವರ್ಷಾಣಿ ವಿಬುಧಾ ದೇವತೂರ್ಯಾಣ್ಯವಾದಯನ್ ॥೭೩॥

ದೇವತೆಗಳು ರಣರಂಗದ ಮೇಲೆ ಸುಗಂಧಯುಕ್ತವಾದ ನಾನಾ ರೂಪವುಳ್ಳ ಪುಷ್ಪಗಳ ಮಳೆಗರೆದರು, ದೇವವಾದ್ಯಗಳನ್ನು ಮೊಳಗಿಸಿದರು.

ದಿದೃಕ್ಷವಶ್ಚಾಪ್ರತಿಮಂ ದ್ವೈರಥಂ ನರಸಿಂಹಯೋಃ ।
ದೇವದಾನವಗಂಧರ್ವಾಃ ಸರ್ವ ಏವಾವತಸ್ಥಿರೇ ॥೭೪॥

ಅಪ್ರತಿಮವಾದ ಕರ್ಣಾರ್ಜುನರ ದ್ವೈರಥ ಯುದ್ಧವನ್ನು ನೋಡಲು ಬಯಸಿ ದೇವ–ದಾನವ ಗಂಧರ್ವರೆಲ್ಲರೂ ನೆರೆದರು.

ರಥೌ ಚ ತೌ ಶ್ವೇತಹಯೌ ಯುಕ್ತಕೇತೂ ಮಹಾಸ್ವನೌ ।
ಯೌ ತೌ ಕರ್ಣಾರ್ಜುನೌ ರಾಜನ್ ಪ್ರಹೃಷ್ಟಾವಭ್ಯತಿಷ್ಠತಾಮ್ ॥೭೫॥

ರಾಜನೆ, ಕರ್ಣಾರ್ಜುನರು ಬಲು ಹೃಷ್ಟರಾಗಿ ಏರಿ ಕುಳಿತ ರಥಗಳು ಬಿಳಿ ಕುದುರೆಗಳಿಂದ ಸಜ್ಜಾದ ಧ್ವಜಗಳಿಂದ ಕೂಡಿದ್ದು ದೊಡ್ಡ ಧ್ವನಿಯನ್ನು ಮಾಡುತ್ತಿದ್ದವು.

ಸಮಾಗತಾ ಲೋಕವೀರಾಃ ಶಂಖಾನ್ ದಧ್ಮುಃ ಪೃಥಕ್ ಪೃಥಕ್ ।
ವಾಸುದೇವಾರ್ಜುನೌ ವೀರೌ ಕರ್ಣಶಲ್ಯೌ ಚ ಭಾರತ ॥೭೬॥

ಲೋಕವೀರರು ಅಲ್ಲಿಗೆ ಬಂದವರು ಬೇರೆ ಬೇರೆಯಾಗಿ ಶಂಖಗಳನ್ನು ಊದಿದರು. ವೀರರಾದ ಕೃಷ್ಣಾರ್ಜುನರೂ ಕರ್ಣ–ಶಲ್ಯರೂ ಹಾಗೇ ಶಂಖಗಳನ್ನು ಊದಿದರು.

ತದ್ಭೀರುಸಂತ್ರಾಸಕರಂ ಯುದ್ಧಂ ಸಮಭವತ್ ತದಾ ।
ಅನ್ಯೋನ್ಯಸ್ಪರ್ಧಿನೋರ್ವೀರ್ಯೇ ಶಕ್ರಶಂಬರಯೋರಿವ ॥೭೭॥

ಹೇಡಿಗಳಿಗೆ ಬಹಳ ಭಯ ಉಂಟುಮಾಡುವಂತೆ, ಇಂದ್ರ–ಶಂಬರರಂತೆ ವೀರ್ಯದಲ್ಲಿ ಪರಸ್ಪರ ಸ್ಪರ್ಧಿಗಳಾದ ಕರ್ಣಾರ್ಜುನರಿಗೆ ಯುದ್ಧ ನಡೆಯಿತು.

ತಯೋರ್ಧ್ವಜೌ ವೀತಭಯೌ ಶುಶುಭಾತೇ ರಥಸ್ಥಿತೌ ।
ರಾಹುಕೇತೂ ಯಥಾಕಾಶೇ ಕ್ರುದ್ಧೌ ಯುದ್ಧೇ ಪರಸ್ಪರಮ್ ॥೭೮॥

ಕರ್ಣಾರ್ಜುನರ ಧ್ವಜಗಳೆರಡೂ ಆಕಾಶದಲ್ಲಿ ರಾಹು-ಕೇತುಗಳಂತೆ ಕ್ರುದ್ಧವಾಗಿ ಪರಸ್ಪರ ಯುದ್ಧದಲ್ಲಿ ನಿರ್ಭಯವಾಗಿ ರಥದಲ್ಲಿದ್ದು ಶೋಭಿಸಿದುವು.

ಧ್ವಜಗಳು ಕ್ರುದ್ಧವಾಗುವುದೆಂದರೆ ಧ್ವಜವಾಗಿರುವ ಕಪಿ ಕಾಕಗಳಿಗೆ ಕ್ರೋಧ ಉಂಟಾಗುವುದು ವಿವಕ್ಷಿತವಾಗಿದೆ. ಇದು ಅಚೇತನಗಳಲ್ಲಿ ಚೇತನ ಸ್ವಭಾವದ ಆರೋಪರೂಪವಾದ ಕಾವ್ಯಾಲಂಕಾರವಲ್ಲ. ಏಕೆಂದರೆ ಅರ್ಜುನನ ಧ್ವಜವು ಸಾಕ್ಷಾತ್ ಹನುಮಂತನೆ. ಕರ್ಣನ ಧ್ವಜ ಯದ್ಯಪಿ ಕಾಗೆಯ ಪ್ರತಿಮೆ. ಆದರೆ ಕರ್ಣನ ಸರ್ಪಾಸ್ತ್ರದಲ್ಲಿ ಅಶ್ವಸೇನನಾಗ ಇದ್ದಂತೆ ಕಾಕ ಪ್ರತಿಮೆಯಲ್ಲಿಯೂ ಒಬ್ಬ ಕಾಕಾಸುರನಿದ್ದನೆಂದು ತಿಳಿಯಬೇಕು. ವಾದಿರಾಜರಿಗೆ ಸಿಕ್ಕಿದ ಭಾರತ ಪಾಠದಲ್ಲಿ ಬರುವ 'ಹಸ್ತಕಾಕ್ಯಾ' ಶಬ್ದ ಆಧುನಿಕರಿಗೆ ಸಿಕ್ಕಿಲ್ಲ. 'ಹಸ್ತಿಕಕ್ಷ್ಯಾ' ಆನೆಯ ನಡುವನ್ನು ಕಟ್ಟುವ ತೊಗಲಿನ ಹಗ್ಗವೇ ಕರ್ಣನ ಧ್ವಜವೆಂದು ಅವರು ತಿಳಿದಿದ್ದಾರೆ. ಮತ್ತು ಧ್ವಜ ವೆಂದರೆ ಬಟ್ಟೆಯ ತುಂಡು, ಪತಾಕೆಯೇ, ಬಾವುಟವೇ ಎಂದೂ ತಿಳಿದಿದ್ದಾರೆ.

ಕರ್ಣಸ್ಯಾಶೀವಿಷನಿಭಾ ರತ್ನಸಾರವತೀ ದೃಢಾ ।
ಪುರಂದರಧನುಃಪ್ರಖ್ಯಾ ಹಸ್ತಕಾಕ್ಯಾ ವ್ಯರಾಜತ ॥೭೯॥

ಕರ್ಣನ ಧ್ವಜವು ಕೃಷ್ಣಸರ್ಪದಂತೆ ಕಪ್ಪಾಗಿದ್ದು ರತ್ನಾಭರಣಭೂಷಿತವಾಗಿತ್ತು. ಅದರಿಂದ ಇಂದ್ರಧನುಸ್ಸಿನಂತೆ ಅನೇಕ ವರ್ಣಗಳಿಂದ ಕಂಗೊಳಿಸಿತ್ತು. ಅಂಥ ಹಸ್ತ ಅಳತೆಯ ಕಾಗೆಯ ಪ್ರತಿಮೆಯುಳ್ಳ ಧ್ವಜದಂಡವು ಶೋಭಿಸಿತು.

ಕಪಿಶ್ರೇಷ್ಠಸ್ತು ಪಾರ್ಥಸ್ಯ ವ್ಯಾದಿತಾಸ್ಯೋ ಭಯಂಕರಃ ।
ಭೀಷಯನ್ನೇವ ದಂಷ್ಟ್ರಾಭಿರ್ದುರ್ನಿರೀಕ್ಷ್ಯೋ ರವಿರ್ಯಥಾ ॥೮೦॥

ಅರ್ಜುನನ ಧ್ವಜವಾಗಿರುವ ಕಪಿಶ್ರೇಷ್ಠನು ಬಾಯಿತೆರೆದು ಕೋರೆ ಹಲ್ಲುಗಳಿಂದ ಭಯಪಡಿಸುತ್ತ ಭಯಂಕರವಾಗಿ ಸೂರ್ಯನಂತೆ ದಿಟ್ಟಿಸಿ ನೋಡಲಾಗದಂತಿದ್ದ.

ಯುದ್ಧಾಭಿಲಾಷುಕೋ ಭೂತ್ವಾ ಧ್ವಜೋ ಗಾಂಡೀವಧನ್ವನಃ ।
ಕರ್ಣಧ್ವಜಮುಪಾತಿಷ್ಠತ್ ಸ್ವಸ್ಥಾನಾದ್ ವೇಗವಾನ್ ಕಪಿಃ ॥೮೧॥

ಅರ್ಜುನನ ಧ್ವಜವಾದ ಕಪಿಶ್ರೇಷ್ಠನಿಗೆ ಯುದ್ಧದ ಅಭಿಲಾಷೆ ಉಂಟಾಯಿತು. ಅದರಿಂದ ಕರ್ಣನ ಧ್ವಜದ ಕಡೆಗೆ ತನ್ನ ಸ್ಥಾನದಿಂದ ವೇಗವಾಗಿ ಹಾರಿದ.

ಉತ್ಪತ್ಯ ತು ಮಹಾವೇಗಃ ಕಾಕಮಭ್ಯಾಹನತ್ ಕಪಿಃ ।
ನಖೈಶ್ಚ ದಶನೈಶ್ಚೈವ ಗರುಡಃ ಪನ್ನಗಂ ಯಥಾ ॥೮೨॥

ಮಹಾವೇಗದಿಂದ ಹಾರಿ ಕಾಗೆಯ ಪ್ರತಿಮೆಯನ್ನು ಕಪಿಶ್ರೇಷ್ಠನು ಉಗುರು ಹಲ್ಲುಗಳಿಂದ ಗರುಡನು ಹಾವನ್ನು ಹೊಡೆಯುವಂತೆ ಹೊಡೆದ.

ಸಾ ಕಿಂಕಿಣೀಕಾಭರಣಾ ಕಾಲಪಾಶೋಪಮಾಽಽಯಸೀ ।
ಅಭ್ಯದ್ರವತ್ಸುಸಂಕ್ರುದ್ಧಾ ಹಸ್ತಕಾಕ್ಯಾಽಥ ತಂ ಕಪಿಮ್ ॥೮೩॥

ಕಾಗೆಯ ಪ್ರತಿಮೆ ಕಿರುಘಂಟೆಗಳಿಂದ ಅಲಂಕೃತವಾಗಿತ್ತು. ಕಾಲಪಾಶದಂತೆ ಕಪ್ಪಾದ ಕಬ್ಬಿಣದ ಪ್ರತಿಮೆ. ಅದರಲ್ಲಿದ್ದ ಒಬ್ಬ ಕಾಕಾಸುರ ಕ್ರುದ್ಧನಾಗಿ ಕಪಿಯನ್ನು ಇದಿರಿಸಿದ.

ಇಲ್ಲಿ ಕರ್ಣನ ಧ್ವಜವನ್ನು 'ಕಾಲಪಾಶೋಪಮಾ ಆಯಸೀ' ಎಂದಿದೆ. 'ಅಯಸ್' ಅಂದರೆ ಕಬ್ಬಿಣ. ಕಬ್ಬಿಣದಿಂದ ಮಾಡಿದ ಕಾಗೆಯ ಪ್ರತಿಮೆ ಇದು, ಯಮಪಾಶದಂತೆ ಕಪ್ಪಾಗಿದ್ದು ಶತ್ರುಗಳಿಗೆ ಭಯ ಉಂಟುಮಾಡುತ್ತದೆಯೆ ಹೊರತು ಅದು ಬಟ್ಟೆ ತುಂಡಲ್ಲ ಎನ್ನುವುದು ಸ್ಪಷ್ಟವಿದೆ.

ಸೌವರ್ಣಾ ರಾಜತಾಶ್ಚೈವ ತೈಜಸಾಶ್ಚ ಪೃಥಗ್‌ವಿಧಾಃ ।
ಕೇತವೋ ವಿನಿಪಾತ್ಯಂತೇ (ಅ.57.ಶ್ಲೋ.64)

ಇಲ್ಲಿ ಕೇತುಗಳು, ಅಂದರೆ ಧ್ವಜಗಳು ಚಿನ್ನ, ಬೆಳ್ಳಿ ಮುಂತಾದ ಲೋಹ ಮಯವೆಂದು ಸ್ಪಷ್ಟಹೇಳಿದೆ. 'ತತೋ ಧ್ವಜಂ ಸ್ಫಾಟಿಕಚಿತ್ರಕಂಬುಂ(81.21) ವೃಷಸೇನನ ಧ್ವಜವು ಸ್ಫಟಿಕದ ಶಂಖವಾಗಿತ್ತು ಎಂದೂ ಹೇಳಿದೆ.

ತಯೋರ್ಘೋರತಮೇ ಯುದ್ಧೇ ದ್ವೈರಥೇ ದ್ಯೂತ ಆಹೃತೇ ।
ಪ್ರಕುರ್ವಾತೇ ಧ್ವಜೌ ಯುದ್ಧಂ ಪ್ರತ್ಯಹೇಷನ್ ಹಯಾನ್ ಹಯಾಃ ॥

ಕರ್ಣಾರ್ಜುನರಿಗೆ ಅತ್ಯಂತ ಘೋರವಾದ ದ್ವೈರಥಯುದ್ಧರೂಪದ ದ್ಯೂತ ಪ್ರಾರಂಭವಾಗುವುಕ್ಕೆ ಮುನ್ನ ಇಬ್ಬರ ಧ್ವಜಗಳು ಹೀಗೆ ಯುದ್ಧಮಾಡಲು ತೊಡಗಿದುವು. ಹಾಗೇ ಅವರ ಕುದುರೆಗಳೂ ಪರಸ್ಪರ ಸ್ಪರ್ಧೆಯಿಂದ ಕೆನೆದುವು.

ಅವಿಧ್ಯತ್ಪುಂಡರೀಕಾಕ್ಷಃ ಶಲ್ಯಂ ನಯನಸಾಯಕೈಃ ।
ಸ ಚಾಪಿ ಪುಂಡರೀಕಾಕ್ಷಂ ತಥೈವಾಭಿಸಮೈಕ್ಷತ ॥೮೫॥

ಬಳಿಕ ಕೃಷ್ಣ ಶಲ್ಯನನ್ನು ಶಲ್ಯ ಕೃಷ್ಣನನ್ನು ಹೀಗೆ ಪರಸ್ಪರ ದಿಟ್ಟಿಸಿದರು. ಕಣ್ಣನ್ನೋಟದ ಬಾಣಗಳಿಂದ ಹೊಡೆದರು.

ತತ್ರಾಜಯದ್ ವಾಸುದೇವಃ ಶಲ್ಯಂ ನಯನಸಾಯಕೈಃ ।
ಕರ್ಣಂ ಚಾಪ್ಯಜಯದ್ ದೃಷ್ಟ್ವಾ ಕುಂತೀಪುತ್ರೋ ಧನಂಜಯಃ ॥೮೬॥

ಈ ದೃಷ್ಟಿಯುದ್ಧದಲ್ಲಿ ಕೃಷ್ಣನು ಕಣ್ಣಿನ ಬಾಣಗಳಿಂದ ಶಲ್ಯನನ್ನು ಗೆದ್ದ. ಅರ್ಜುನನು ಕರ್ಣನನ್ನು ದೃಷ್ಟಿಬಾಣಗಳಿಂದ ಪರಾಭವಗೊಳಿಸಿದ.

ಕಣ್ಣು ಮಿಟುಕಿಸದೆ ಇಬ್ಬರು ಪರಸ್ಪರ ದಿಟ್ಟಿಸಿ ನೋಡುವಾಗ ಮೊದಲಿಗೆ ಕಣ್ಣು ಮಿಟುಕಿಸುವವನು ಪರಾಜಿತನಾಗುತ್ತಾನೆ.

ಅಥಾಬ್ರವೀತ್ ಸೂತಪುತ್ರಃ ಶಲ್ಯಮಾಭಾಷ್ಯ ಸಸ್ಮಿತಮ್ ।
ಯದ್ಯರ್ಜುನೋ ರಣೇ ಹನ್ಯಾದದ್ಯ ಮಾಮಿಹ ಕರ್ಹಿಚಿತ್ ।
ಕಿಮುತ್ತರಂ ತದಾ ತೇ ಸ್ಯಾತ್ತನ್ಮೇ ಸತ್ಯಂ ಬ್ರೂಹಿ ಮೇ ॥೮೭॥

ಬಳಿಕ ಕರ್ಣನು ಶಲ್ಯನಿಗೆ ನಗುತ್ತ ನುಡಿದ— ಒಂದುವೇಳೆ ಅರ್ಜುನ ರಣದಲ್ಲಿ ನನ್ನನ್ನು ಕೊಂದರೆ ನಿನ್ನ ಪ್ರತಿಕ್ರಿಯೆ ಏನು? ಮಿತ್ರನೆ, ನನಗೆ ಹೇಳು.

ಶಲ್ಯಃ

ಯದಿ ಕರ್ಣ ರಣೇ ಹನ್ಯಾದದ್ಯ ತ್ವಾಂ ಶ್ವೇತವಾಹನಃ ।
ಉಭಾವೇಕರಥೇನಾಹಂ ಹನ್ಯಾಂ ಮಾಧವಪಾಂಡವೌ ॥೮೮॥

ಶಲ್ಯನು ನುಡಿದ— ಈಗ ರಣದಲ್ಲಿ ಅರ್ಜುನ ನಿನ್ನನ್ನು ಕೊಂದರೆ ಕೃಷ್ಣ ಮತ್ತು ಅರ್ಜುನರಿಬ್ಬರನ್ನು ನಾನು ಏಕರಥದಿಂದ ಕೊಲ್ಲುವೆನು.

ಸಂಜಯಃ

ಏವಮೇವ ತು ಗೋವಿಂದಮರ್ಜುನಃ ಪ್ರತ್ಯಭಾಷತ ।
ತಂ ಪ್ರಹಸ್ಯಾಬ್ರವೀತ್ ಕೃಷ್ಣಃ ಪಾರ್ಥಂ ಪರಮಿದಂ ವಚಃ ॥೮೯॥

ಇದೇರೀತಿಯಿಂದ ಅರ್ಜುನನೂ ಕೃಷ್ಣನನ್ನು ಕೇಳಿದ. ಕೃಷ್ಣ ಜೋರಾಗಿ ನಕ್ಕು ಅವನಿಗೆ ಈ ಮಾತನ್ನು ನುಡಿದ.

ಪತೇದ್ ದಿವಾಕರಃ ಸ್ಥಾನಾತ್ ಶೀರ್ಯೇತಾನೇಕಧಾ ಕ್ಷಿತಿಃ ।
ಶೈತ್ಯಮಗ್ನಿರಿಯಾನ್ನ ತ್ವಾ ಕರ್ಣೋ ಹನ್ಯಾದ್ ಧನಂಜಯಮ್ ॥೯೦॥

ಒಂದುವೇಳೆ ಸೂರ್ಯನು ಆಗಸದಿಂದ ಉದುರಿ ಬೀಳಬಹುದು. ಭೂಮಿ ಅನೇಕ ಭಾಗವಾಗಿ ಸೀಳಿಹೋದೀತು. ಬೆಂಕಿ ತಣ್ಣಗಾದೀತು. ಆದರೆ ಕರ್ಣನು ನಿನ್ನನ್ನು ಕೊಲ್ಲಲಾರ.

ಯದಿ ತ್ವೇವಂ ಕಥಂಚತ್ ಸ್ಯಾಲ್ಲೋಕಪರ್ಯಸನಂ ಭವೇತ್ ।
ಹನ್ಯಾಂ ಕರ್ಣಂ ತಥಾ ಶಲ್ಯಂ ಬಾಹುಭ್ಯಾಮೇವ ಸಂಯುಗೇ ॥೯೧॥

ಒಂದುವೇಳೆ ಹೇಗಾದರೂ ನಿನ್ನ ವಧ ನಡೆಯಿತೆಂದರೆ ಲೋಕನಾಶವಾದೀತು. ಕರ್ಣ–ಶಲ್ಯರಿಬ್ಬರನ್ನೂ ಬಾಹುಯುದ್ಧದಿಂದಲೇ ನಾನು ವಧಿಸಿಯೇನು.

ಇತಿ ಕೃಷ್ಣವಚಃ ಶ್ರುತ್ವಾ ಪ್ರಹಸನ್ ಕಪಿಕೇತನಃ ।
ಅರ್ಜುನಃ ಪ್ರತ್ಯುವಾಚೇದಂ ಕೃಷ್ಣಮಕ್ಲಿಷ್ಟಕಾರಿಣಮ್ ।
ಮಮಾಪ್ಯೇತಾವಪರ್ಯಾಪ್ತೌ ಕರ್ಣಶಲ್ಯೌ ಜನಾರ್ದನ ॥೯೨॥

ಕೃಷ್ಣನ ಮಾತನ್ನು ಕೇಳಿ ನಗುತ್ತ ಅರ್ಜುನನು ಅನಾಯಾಸದಿಂದ ಎಲ್ಲ ಕಾರ್ಯಗಳನ್ನು ಮಾಡಬಲ್ಲ ಕೃಷ್ಣನಿಗೆ ನುಡಿದ: ಕರ್ಣ– ಶಲ್ಯರು ನನಗೂ ಸಮರ್ಥ ಪ್ರತಿಭಟರಲ್ಲ.

ಸಪತಾಕಧ್ವಜಂ ಕರ್ಣಂ ಸಶಲ್ಯರಥವಾಜಿನಮ್ ।
ಸಚ್ಛತ್ರಕವಚಂ ಚೈವ ಸಶಕ್ತಿಶರಕಾರ್ಮುಕಮ್ ॥೯೩॥

ದ್ರಷ್ಟಾಸ್ಯದ್ಯ ಶರೈಃ ಕರ್ಣಂ ರಣೇ ಕೃತ್ತಮನೇಕಧಾ ।
ಅದ್ಯೈನಂ ಸರಥಂ ಸಾಶ್ವಂ ಸಶಕ್ತಿಕವಚಾಯುಧಮ್ ॥೯೪॥

ಸಂಚೂರ್ಣಿತಮಿವಾಮರ್ದೇ ಪಾದಪಂ ಪಶ್ಯ ದಂತಿನಾ ।
ಅದ್ಯ ರಾಧೇಯಭಾರ್ಯಾಣಾಂ ವೈಧವ್ಯಂ ಸಮುಪಸ್ಥಿತಮ್ ॥೯೫॥

ಪತಾಕೆ ಧ್ವಜ ಶಲ್ಯ ರಥ ಅಶ್ವ ಛತ್ರ ಕವಚ ಶಕ್ತಿ ಬಾಣಬಿಲ್ಲು ಇವೆಲ್ಲವುಗಳ ಸಮೇತವಾಗಿ ಕರ್ಣನನ್ನು ರಣದಲ್ಲಿ ಬಾಣಗಳಿಂದ ನಾನು ಚೂರುಚೂರಾಗಿ ಮಾಡುವುದನ್ನು ನೀನು ಪ್ರತ್ಯಕ್ಷ ನೋಡುವೆ. ಇಂದು ರಥ ಅಶ್ವ ಶಕ್ತಿ ಕವಚ ಆಯುಧಗಳೊಂದಿಗೆ ಕರ್ಣನು ಆನೆಯು ತುಳಿದು ಪುಡಿಗೈದ ಮರದಂತೆ ಚೂರಾಗುತ್ತಾನೆ, ನೋಡು. ಕರ್ಣನ ಹೆಂಡಂದಿರಿಗೆ ವೈಧವ್ಯ ಬರುತ್ತದೆ.

ಇಲ್ಲಿ 'ಸಪತಾಕ ಧ್ವಜಂ' ಎಂದು ಪತಾಕೆಯೊಂದಿಗೆ ಧ್ವಜವನ್ನು ಪ್ರತ್ಯೇಕವಾಗಿ ಹೇಳಿದ್ದರಿಂದ ಧ್ವಜ, ಪತಾಕೆಗಳು ಒಂದೇ ಅಲ್ಲ. ಪತಾಕೆ ಬಟ್ಟೆತುಂಡು, ಧ್ವಜವು ಲೋಹಪ್ರತಿಮೆಯಾಗಿರುತ್ತವೆ.

ಧ್ರುವಂ ಸ್ವಪ್ನೇಷ್ವನಿಷ್ಟಾನಿ ತಾಭಿರ್ದೃಷ್ಟಾನಿ ಮಾಧವ ।
ಧ್ರುವಮದ್ಯೈವ ದ್ರಷ್ಟಾಸಿ ವಿಧವಾಃ ಕರ್ಣಯೋಷಿತಃ ॥೯೬॥

ನ ಹಿ ಮೇ ಶಾಮ್ಯತೇ ವೈರಂ ಕೃಷ್ಣಾಂ ಯತ್ಪ್ರಹಸತ್ ಪುರಾ ॥೯೭॥

ಅವರು ನಿಶ್ಚಯವಾಗಿ ರಾತ್ರಿ ಸ್ವಪ್ನಗಳಲ್ಲಿ ಅನಿಷ್ಟಗಳನ್ನು ನೋಡಿರುತ್ತಾರೆ ಕೃಷ್ಣ ನಿಶ್ಚಯವಾಗಿಯೂ ನೀನು ಈಗಲೇ ಕರ್ಣನ ಭಾರ್ಯೆಯರು ವಿಧವೆಯರಾಗುವುದನ್ನು ನೋಡುವೆ. ದ್ರೌಪದಿಯನ್ನು ಕರ್ಣನು ಅಪಹಾಸ್ಯ ಮಾಡಿದ್ದು ನನಗೆ ಮರೆಯಲು ಶಕ್ಯವಾಗುವುದಿಲ್ಲ.

ಅದ್ಯ ದ್ರಷ್ಟಾಸಿ ಗೋವಿಂದ ಕರ್ಣಮುನ್ಮಥಿತಂ ಮಯಾ ।
ವಾರಣೇನೇವ ಮತ್ತೇನ ಪುಷ್ಪಿತಂ ಜಗತೀರುಹಮ್ ॥೯೮॥

ಕೃಷ್ಣ ಮದಿಸಿದ ಆನೆ ಹೂಬಿಟ್ಟ ಮರವನ್ನು ಪುಡಿಮಾಡುವಂತೆ ನಾನು ಕರ್ಣನನ್ನು ಪುಡಿಮಾಡುವೆನು, ಅದನ್ನು ನೀನು ನೋಡುವೆ.

ಅದ್ಯ ತಾ ಮಧುರಾ ವಾಚಃ ಶ್ರೋತಾಸಿ ಮಧುಸೂದನ ।
ದಿಷ್ಟ್ಯಾ ಜಯಸಿ ವಾರ್ಷ್ಣೇಯ ಇತಿ ಕರ್ಣೇ ನಿಪಾತಿತೇ ॥೯೯॥

ಕರ್ಣನು ಹತನಾದಾಗ 'ಭಾಗ್ಯವಶದಿಂದ ನೀನು ಜಯಶಾಲಿಯಾದೆ!' ಎಂದು ಬಂಧುಗಳು ಹೊಗಳುವ ಸವಿನುಡಿಯನ್ನು ನೀನು ಆಲಿಸಲಿರುವೆ ಕೃಷ್ಣ

ಅದ್ಯಾಭಿಮನ್ಯುಜನನೀಮನೃಣಃ ಸಾಂತ್ವಯಿಷ್ಯಸಿ ।
ಕುಂತೀಂ ಪಿತೃಷ್ವಸಾರಂ ಚ ಸಂಪ್ರಹೃಷ್ಟೋ ಜನಾರ್ದನ ॥೧೦೦॥

ಅಭಿಮನ್ಯುವಿನ ತಾಯಿ ಸುಭದ್ರೆಯನ್ನು ಕರ್ಣನಾಶದಿಂದ ಋಣ ತೀರಿಸಿದ ನೀನು ಸಂತೈಸುವಿ. ಸೋದರತ್ತೆಯಾದ ಕುಂತಿಯನ್ನು ಹರ್ಷದಿಂದ ಸಂತೈಸುವಿ.

ಅದ್ಯ ಬಾಷ್ಪಮುಖೀಂ ಕೃಷ್ಣಾಂ ಸಾಂತ್ವಯಿಷ್ಯಸಿ ಮಾಧವ ।
ವಾಗ್ಭಿಶ್ಚಾಮೃತಕಲ್ಪಾಭಿರ್ಧರ್ಮರಾಜಂ ಯುಧಿಷ್ಠಿರಮ್ ॥೧೦೧॥

ಕಣ್ಣೀರಿಡುವ ದ್ರೌಪದಿಯನ್ನು ಮತ್ತು ಧರ್ಮರಾಜ ಯುಧಿಷ್ಠಿರನನ್ನು ನೀನು ಇಂದು ಅಮೃತದಂಥ ಸವಿ ಮಾತಿನಿಂದ ಸಂತೈಸುವಿ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಾರ್ಜುನಯುದ್ಧೇ ತ್ರ್ಯಶೀತಿತಮೋಽಧ್ಯಾಯಃ ॥೮೩॥

❖

ಮಹಾಭಾರತತಾತ್ಪರ್ಯನಿರ್ಣಯ

ವವರ್ಷತುಸ್ತೌ ಚ ಮಹಾಸ್ತ್ರಶಸ್ತ್ರೈ-
ರ್ಭೀಮೋ ರಥಸ್ಥೋಽವರಜಂ ಜುಗೋಪ ।
ಶೈನೇಯಪಾಂಚಾಲಮುಖಾಶ್ಚ ಪಾರ್ಥ-
ಮಾವಾರ್ಯ ತಸ್ಥುಃ ಪ್ರಸಭಂ ನದಂತಃ ॥೧೭೧॥

ಕರ್ಣಾರ್ಜುನರು ಮಹಾ ಅಸ್ತ್ರ-ಶಸ್ತ್ರಗಳ ಸುರಿಮಳೆ ಮಾಡಿದರು. ರಥಾರೂಢನಾದ ಭೀಮ ಅರ್ಜುನನ ರಕ್ಷಣೆಗೆ ನಿಂತ. ಸಾತ್ಯಕಿ ದ್ರುಪದ ಮುಂತಾದವರೂ ಕೂಡ ಅರ್ಜುನನ ರಕ್ಷಣೆಗಾಗಿ ಸುತ್ತುವರಿದು ಗಟ್ಟಿಯಾಗಿ ಗರ್ಜನೆ ಮಾಡುತ್ತ ನಿಂತರು.

ದುರ್ಯೋಧನ ದ್ರೌಣಿಮುಖಾಶ್ಚ ಕರ್ಣಂ
ರರಕ್ಷುರಾವಾರ್ಯ ತದಾऽऽಸ ಯುದ್ಧಮ್ ।
ತತ್ರಾರ್ಜುನಂ ಬಾಣಗಣೈಃ ಸ ಕರ್ಣಃ
ಸಮರ್ದಯಾಮಾಸ ವಿಶೇಷಯನ್ ರಣೇ ।

ತದಾ ನದನ್ ಭೀಮಸೇನೋ ಜಗಾದ
ಗದಾಂ ಸಮಾದಾಯ ಸಮಾತ್ತರೋಷಃ ॥೧೭೨॥

ದುರ್ಯೋಧನ ಅಶ್ವತ್ಥಾಮ ಮುಂತಾದವರು ಕರ್ಣನನ್ನು ಸುತ್ತುವರಿದು ರಕ್ಷಿಸತೊಡಗಿದರು. ಆಗ ಯುದ್ಧ ನಡೆಯಿತು. ಕರ್ಣ ಬಾಣಸಮೂಹಗಳಿಂದ ಯುದ್ಧದಲ್ಲಿ ಮೇಲುಗೈ ಸಾಧಿಸುತ್ತ ಅರ್ಜುನನನ್ನು ಪೀಡಿಸತೊಡಗಿದ. ಆಗ ಭೀಮಸೇನ ಕೋಪಾವಿಷ್ಟನಾಗಿ ಗದೆಯನ್ನು ಹಿಡಿದು ಗರ್ಜಿಸುತ್ತ ನುಡಿದ.

ಅಹಂ ಚೈನಂ ಗದಯಾ ಪೋಥಯಾಮಿ
ತ್ವಂ ವಾ ಜಹೀಮಂ ಸಮುಪಾತ್ತವೀರ್ಯಃ ।
ಕೃಷ್ಣೋಪಿ ತಂ ಬೋಧಯಾಮಾಸ ಸಮ್ಯಙ್
ನರಾವೇಶಂ ವ್ಯಂಜಯನ್ ಭೂಯ ಏವ ॥ ೧೭೩ ॥

'ಅರ್ಜುನ, ನಾನೇ ಕರ್ಣನನ್ನು ಗದೆಯಿಂದ ವಧಿಸುತ್ತೇನೆ ಅಥವಾ ನೀನು ಪರಾಕ್ರಮ ತೋರಿ ಇವನನ್ನು ವಧಿಸಬೇಕು.' ಹೀಗೆ ಭೀಮ ನುಡಿದಾಗ ಕೃಷ್ಣ ಅರ್ಜುನನಲ್ಲಿ ನರಾವೇಶವನ್ನು ಇನ್ನೂ ಅಧಿಕವಾಗಿ ಪ್ರಕಟಪಡಿಸುತ್ತ ಚೆನ್ನಾಗಿ ಹುರಿದುಂಬಿಸಿದ.

ಸಮೃದ್ಧವೀರ್ಯಃ ಸ ತದಾ ಧನಂಜಯಃ
ಸುಯೋಧನದ್ರೌಣಿಕೃಪಾನ್ ಸಭೋಜಾನ್ ।
ಸಾಕಂ ಚ ಬಾಣೈರ್ವಿರಥಾಂಶ್ಚಕಾರ
ವಿವ್ಯಾಧ ತಾನಪ್ಯರಿಹಾ ಸುಪುಂಖೈಃ ॥ ೧೭೪ ॥

ಆಗ ಶತ್ರುನಾಶಕನಾದ ಅರ್ಜುನ ಶಕ್ತಿ ತುಂಬಿಕೊಂಡು ದುರ್ಯೋಧನ ಅಶ್ವತ್ಥಾಮ ಕೃಪ ಕೃತವರ್ಮರನ್ನು ಏಕಕಾಲದಲ್ಲಿ ವಿರಥರನ್ನಾಗಿ ಮಾಡಿದ ಮತ್ತು ಒಳ್ಳೆಯ ಗರಿಯಿಂದ ಕೂಡಿದ ಬಾಣಗಳಿಂದ ಹೊಡೆದ.

ತೇ ಕಿಂಚಿದ್ ದೂರತಸ್ತಸ್ಥುಃ ಪಶ್ಯಂತೋ ಯುದ್ಧಮದ್ಭುತಮ್ ।
ಅಮಾನುಷಂ ತತ್ ಪಾರ್ಥಸ್ಯ ದೃಷ್ಟ್ವಾ ಕರ್ಮ ಗುರೋಃ ಸುತಃ ।
ಗೃಹೀತ್ವಾ ಪಾಣಿನಾ ಪಾಣಿಂ ದುರ್ಯೋಧನಮಭಾಷತ ॥ ೧೭೫ ॥

ಅದ್ಯಾಭಿಮನ್ಯುಜನನೀಮನೃಣಃ ಸಾಂತ್ವಯಿಷ್ಯಸಿ ।
ಕುಂತೀಂ ಪಿತೃಷ್ವಸಾರಂ ಚ ಸಂಪ್ರಹೃಷ್ಟೋ ಜನಾರ್ದನ ॥೧೦೦॥

ಅಭಿಮನ್ಯುವಿನ ತಾಯಿ ಸುಭದ್ರೆಯನ್ನು ಕರ್ಣನಾಶದಿಂದ ಋಣ ತೀರಿಸಿದ ನೀನು ಸಂತೈಸುವಿ. ಸೋದರತ್ತೆಯಾದ ಕುಂತಿಯನ್ನು ಹರ್ಷದಿಂದ ಸಂತೈಸುವಿ.

ಅದ್ಯ ಬಾಷ್ಪಮುಖೀಂ ಕೃಷ್ಣಾಂ ಸಾಂತ್ವಯಿಷ್ಯಸಿ ಮಾಧವ ।
ವಾಗ್ಭಿಶ್ಚಾಮೃತಕಲ್ಪಾಭಿರ್ಧರ್ಮರಾಜಂ ಯುಧಿಷ್ಠಿರಮ್ ॥೧೦೧॥

ಕಣ್ಣೀರಿಡುವ ದ್ರೌಪದಿಯನ್ನು ಮತ್ತು ಧರ್ಮರಾಜ ಯುಧಿಷ್ಠಿರನನ್ನು ನೀನು ಇಂದು ಅಮೃತದಂಥ ಸವಿ ಮಾತಿನಿಂದ ಸಂತೈಸುವಿ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಾರ್ಜುನಯುದ್ಧೇ ತ್ರ್ಯಶೀತಿತಮೋऽಧ್ಯಾಯಃ ॥೮೩॥

❖

ಮಹಾಭಾರತತಾತ್ಪರ್ಯನಿರ್ಣಯ

ವವರ್ಷತುಸ್ತೌ ಚ ಮಹಾಸ್ತ್ರಶಸ್ತ್ರೈ-
ರ್ಭೀಮೋ ರಥಸ್ಥೋऽವರಜಂ ಜುಗೋಪ ।
ಶೈನೇಯಪಾಂಚಾಲಮುಖಾಶ್ಚ ಪಾರ್ಥ-
ಮಾವಾರ್ಯ ತಸ್ಥುಃ ಪ್ರಸಭಂ ನದಂತಃ ॥೧೭೧॥

ಕರ್ಣಾರ್ಜುನರು ಮಹಾ ಅಸ್ತ್ರ-ಶಸ್ತ್ರಗಳ ಸುರಿಮಳೆ ಮಾಡಿದರು. ರಥಾರೂಢನಾದ ಭೀಮ ಅರ್ಜುನನ ರಕ್ಷಣೆಗೆ ನಿಂತ. ಸಾತ್ಯಕಿ ದ್ರುಪದ ಮುಂತಾದವರೂ ಕೂಡ ಅರ್ಜುನನ ರಕ್ಷಣೆಗಾಗಿ ಸುತ್ತುವರಿದು ಗಟ್ಟಿಯಾಗಿ ಗರ್ಜನೆ ಮಾಡುತ್ತ ನಿಂತರು.

ದುರ್ಯೋಧನ ದ್ರೌಣಿಮುಖಾಶ್ಚ ಕರ್ಣಂ
ರರಕ್ಷುರಾವಾರ್ಯ ತದಾऽऽಸ ಯುದ್ಧಮ್ ।
ತತ್ರಾರ್ಜುನಂ ಬಾಣಗಣೈಃ ಸ ಕರ್ಣಃ
ಸಮರ್ದಯಾಮಾಸ ವಿಶೇಷಯನ್ ರಣೇ ।

ತದಾ ನದನ್ ಭೀಮಸೇನೋ ಜಗಾದ
ಗದಾಂ ಸಮಾದಾಯ ಸಮಾತ್ತರೋಷಃ ॥೧೭೨॥

ದುರ್ಯೋಧನ ಅಶ್ವತ್ಥಾಮ ಮುಂತಾದವರು ಕರ್ಣನನ್ನು ಸುತ್ತುವರಿದು ರಕ್ಷಿಸತೊಡಗಿದರು. ಆಗ ಯುದ್ಧ ನಡೆಯಿತು. ಕರ್ಣ ಬಾಣಸಮೂಹಗಳಿಂದ ಯುದ್ಧದಲ್ಲಿ ಮೇಲುಗೈ ಸಾಧಿಸುತ್ತ ಅರ್ಜುನನನ್ನು ಪೀಡಿಸತೊಡಗಿದ. ಆಗ ಭೀಮಸೇನ ಕೋಪಾವಿಷ್ಟನಾಗಿ ಗದೆಯನ್ನು ಹಿಡಿದು ಗರ್ಜಿಸುತ್ತ ನುಡಿದ.

ಅಹಂ ಚೈನಂ ಗದಯಾ ಪೋಥಯಾಮಿ
ತ್ವಂ ವಾ ಜಹೀಮಂ ಸಮುಪಾತ್ತವೀರ್ಯಃ ।
ಕೃಷ್ಣೋಪಿ ತಂ ಬೋಧಯಾಮಾಸ ಸಮ್ಯಙ್
ನರಾವೇಶಂ ವ್ಯಂಜಯನ್ ಭೂಯ ಏವ ॥ ೧೭೩ ॥

'ಅರ್ಜುನ, ನಾನೇ ಕರ್ಣನನ್ನು ಗದೆಯಿಂದ ವಧಿಸುತ್ತೇನೆ ಅಥವಾ ನೀನು ಪರಾಕ್ರಮ ತೋರಿ ಇವನನ್ನು ವಧಿಸಬೇಕು.' ಹೀಗೆ ಭೀಮ ನುಡಿದಾಗ ಕೃಷ್ಣ ಅರ್ಜುನನಲ್ಲಿ ನರಾವೇಶವನ್ನು ಇನ್ನೂ ಅಧಿಕವಾಗಿ ಪ್ರಕಟಪಡಿಸುತ್ತ ಚೆನ್ನಾಗಿ ಹುರಿದುಂಬಿಸಿದ.

ಸಮೃದ್ಧವೀರ್ಯಃ ಸ ತದಾ ಧನಂಜಯಃ
ಸುಯೋಧನದ್ರೌಣಿಕೃಪಾನ್ ಸಭೋಜಾನ್ ।
ಸಾಕಂ ಚ ಬಾಣೈರ್ವಿರಥಾಂಶ್ಚಕಾರ
ವಿವ್ಯಾಧ ತಾನಪ್ಯರಿಹಾ ಸುಪುಂಖೈಃ ॥ ೧೭೪ ॥

ಆಗ ಶತ್ರುನಾಶಕನಾದ ಅರ್ಜುನ ಶಕ್ತಿ ತುಂಬಿಕೊಂಡು ದುರ್ಯೋಧನ ಅಶ್ವತ್ಥಾಮ ಕೃಪ ಕೃತವರ್ಮರನ್ನು ಏಕಕಾಲದಲ್ಲಿ ವಿರಥರನ್ನಾಗಿ ಮಾಡಿದ ಮತ್ತು ಒಳ್ಳೆಯ ಗರಿಯಿಂದ ಕೂಡಿದ ಬಾಣಗಳಿಂದ ಹೊಡೆದ.

ತೇ ಕಿಂಚಿದ್ ದೂರತಸ್ತಸ್ಥುಃ ಪಶ್ಯಂತೋ ಯುದ್ಧಮದ್ಭುತಮ್ ।
ಅಮಾನುಷಂ ತತ್ ಪಾರ್ಥಸ್ಯ ದೃಷ್ಟ್ವಾ ಕರ್ಮ ಗುರೋಃ ಸುತಃ ।
ಗೃಹೀತ್ವಾ ಪಾಣಿನಾ ಪಾಣಿಂ ದುರ್ಯೋಧನಮಭಾಷತ ॥ ೧೭೫ ॥

ದುರ್ಯೋಧನಾದಿಗಳು ಅದ್ಭುತವಾದ ಆ ಯುದ್ಧವನ್ನು ನೋಡುತ್ತ ಸ್ವಲ್ಪ ದೂರದಲ್ಲಿ ನಿಂತರು. ಅಶ್ವತ್ಥಾಮ ಅರ್ಜುನನ ಅತಿಮಾನುಷವಾದ ಯುದ್ಧವನ್ನು ನೋಡಿ ಕೈಯಿಂದ ದುರ್ಯೋಧನನ ಕೈಹಿಡಿದು ನುಡಿದ.

ದೃಷ್ಟಂ ಹಿ ಭೀಮಸ್ಯ ಬಲಂ ತ್ವಯಾದ್ಯ
ತಥೈವ ಪಾರ್ಥಸ್ಯ ಯಥಾ ಜಿತಾ ವಯಮ್ ।
ಅಲಂ ವಿರೋಧೇನ ಸಮೇತ್ಯ ಪಾಂಡವೈಃ
ಪ್ರಶಾಧಿ ರಾಜ್ಯಂ ಚ ಮಯಾ ಸಮೇತಃ ॥ ೧೭೬ ॥

'ಇಂದು ನೀನು ಭೀಮನ ಬಲವನ್ನು ಕಂಡಿರುವೆ. ಹಾಗೇ ಅರ್ಜುನನ ಬಲವನ್ನೂ ಕಂಡಿರುವೆ. ನಾವು ಸೋತಿದ್ದೇವೆ. ಇನ್ನು ಈ ವಿರೋಧ ಸಾಕು. ಪಾಂಡವರೊಡನೆ ಸಂಧಿ ಮಾಡಿಕೊಂಡು ರಾಜ್ಯವಾಳು. ನಾನು ನಿನ್ನ ಜೊತೆಗಿರುತ್ತೇನೆ.

ಧನಂಜಯಸ್ತಿಷ್ಠತಿ ವಾರಿತೋ ಮಯಾ
ಜನಾರ್ದನೋ ನೈವ ವಿರೋಧಮಿಚ್ಛತಿ ।
ವೃಕೋದರಸ್ತದ್ವಚನೇ ಸ್ಥಿತಃ ಸದಾ
ಯುಧಿಷ್ಠಿರಃ ಶಾಂತಮನಾಸ್ತಥಾ ಯಮೌ ॥ ೧೭೭ ॥

ನಾನು ತಡೆದರೆ ಅರ್ಜುನ ಸುಮ್ಮನಾಗುತ್ತಾನೆ. ಕೃಷ್ಣ ವಿರೋಧವನ್ನು ಸರ್ವಥಾ ಬಯಸುವುದಿಲ್ಲ. ಭೀಮ ಸದಾ ಕೃಷ್ಣನ ಮಾತಿನಂತೆ ನಡೆಯುವವ. ಯುಧಿಷ್ಠಿರ ಶಾಂತ ಸ್ವಭಾವದವನು. ನಕುಲ–ಸಹದೇವರೂ ಹಾಗೇ.

ಹಿತಾರ್ಥಮೇತತ್ ತವ ವಾಕ್ಯಮೀರಿತಂ
ಗೃಹಾಣ ಮೇ ನೈವ ಭಯಾದುದೀರಿತಮ್ ।
ಅಹಂ ಹ್ಯವಧ್ಯೋ ಮಮ ಚೈವ ಮಾತುಲೋ
ನ ಶಂಕಿತುಂ ಮೇ ವಚನಂ ತ್ವಮರ್ಹಸಿ ॥ ೧೭೮ ॥

ನಿನ್ನ ಹಿತಕ್ಕಾಗಿ ನಾನೀ ಮಾತನ್ನು ಹೇಳಿದ್ದೇನೆ. ತಿಳಿದುಕೊಳ್ಳು. ನಾನೇನೂ ಭಯದಿಂದ ನುಡಿಯಲಿಲ್ಲ. ನಾನಾಗಲಿ, ನನ್ನ ಸೋದರಮಾವ ಕೃಪನಾಗಲಿ ಅವಧ್ಯರೆ. ನನ್ನ ಮಾತಿನಲ್ಲಿ ಅನುಮಾನ ಪಡಬೇಡ.'

ಇತೀರಿತಃ ಪ್ರಾಹ ಸುಯೋಧನಸ್ತಂ
ದುಃಶಾಸನಸ್ಯಾದ್ಯ ಪಪೌ ಹಿ ಶೋಣಿತಮ್ ।
ಶಾರ್ದೂಲಚೇಷ್ಟಾಮಕರೋಚ್ಚ ಭೀಮೋ
ನ ಮೇ ಕಥಂಚಿತ್ ತದನೇನ ಸಂಧಿಃ ॥ ೧೭೯ ॥

ಅಶ್ವತ್ಥಾಮ ಹೀಗೆ ಹೇಳಿದಾಗ ದುರ್ಯೋಧನನೆಂದ: 'ಭೀಮ ಈಗ ದುಃಶಾಸನನ ನೆತ್ತರನ್ನು ಕುಡಿದಿದ್ದಾನೆ. ಹುಲಿಯಂತೆ ಕುಣಿದಿದ್ದಾನೆ. ಅದರಿಂದ ನನಗೆ ಅವನೊಡನೆ ಸಂಧಿ ಯಾವ ರೀತಿಯಿಂದಲೂ ಶಕ್ಯವಿಲ್ಲ.'

ಇತ್ಯುಕ್ತೋ ದ್ರೌಣಿರಾಸೀತ್ ಸ ತೂಷ್ಣೀಂ ಕರ್ಣಧನಂಜಯೌ ।
ಮಹಾಸ್ತ್ರಶಸ್ತ್ರವರ್ಷೇಣ ಚಕ್ರತುಃ ಖಮನಂತರಮ್ ॥ ೧೮೦ ॥

ದುರ್ಯೋಧನ ಹೀಗೆ ಹೇಳಿದಾಗ ಅಶ್ವತ್ಥಾಮ ಸುಮ್ಮನಾದ. ಕರ್ಣಾರ್ಜುನರು ಮಹಾ ಅಸ್ತ್ರ-ಶಸ್ತ್ರಗಳಿಂದ ಆಕಾಶವನ್ನು ನಿಬಿಡವಾಗಿ ತುಂಬಿದರು.

❖

ಎಂಬತ್ತನಾಲ್ಕನೆಯ ಅಧ್ಯಾಯ

ಅರ್ಜುನ ಅದ್ಭುತ ಪರಾಕ್ರಮ ತೋರುತ್ತಾನೆ. ಅಶ್ವತ್ಥಾಮ ದುರ್ಯೋಧನನಿಗೆ ಸಂಧಾನದ ಸಲಹೆ ನೀಡುತ್ತಾನೆ. ದುರ್ಯೋಧನ ನಿರಾಕರಿಸುತ್ತಾನೆ.

ಸಂಜಯಃ

ತದ್ದೇವನಾಗಾಸುರಸಿದ್ಧಯಕ್ಷೈ-
ರ್ಗಂಧರ್ವರಕ್ಷೋಽಪ್ಸರಸಾಂ ಸಮೂಹೈಃ ।
ಬ್ರಹ್ಮರ್ಷಿರಾಜರ್ಷಿಸುಪರ್ಣಜುಷ್ಟಂ
ಬಭೌ ವಿಯದ್ ವಿಸ್ಮಯನೀಯರೂಪಮ್ ॥೧॥

ಸಂಜಯ ನುಡಿದ— ದೇವತೆಗಳು ನಾಗರು ಅಸುರರು ಸಿದ್ಧ ಯಕ್ಷಗಂಧರ್ವ ರಾಕ್ಷಸ ಅಪ್ಸರೆಯರ ಸಮೂಹಗಳಿಂದ ತುಂಬಿ, ಬ್ರಹ್ಮರ್ಷಿ-ರಾಜರ್ಷಿ ಗರುಡ ಪಕ್ಷಿಗಳಿಂದ ಸೇವ್ಯವಾದ ಆಕಾಶವು ಆಗ ಆಶ್ಚರ್ಯಕರವಾದ ಆಕಾರವನ್ನು ತಳೆಯಿತು.

ನಾನದ್ಯಮಾನಂ ನಿನದೈರ್ಮನೋಜ್ಞೈ
ರ್ವಾದಿತ್ರಗೀತಸ್ತುತಿಭಿಶ್ಚ ನೃತ್ತೈಃ ।
ಸರ್ವೇऽಂತರಿಕ್ಷಂ ದದೃಶುರ್ಮನುಷ್ಯಾಃ
ಖಸ್ಥಾಂಶ್ಚ ತಾನ್ ವಿಸ್ಮಯನೀಯರೂಪಾನ್ ॥೨॥

ಮನೋಜ್ಞವಾದ ಧ್ವನಿಗಳಿಂದ ತುಂಬಿ ವಾದ್ಯ ಗೀತ ಸ್ತೋತ್ರ ನೃತ್ಯಗಳಿಂದಲೂ ಯುಕ್ತವಾದ ಆಕಾಶವನ್ನೂ ಆಶ್ಚರ್ಯಕರ ರೂಪ ಉಳ್ಳವರಾಗಿ ಆಕಾಶದಲ್ಲಿ ಸಂಚರಿಸುವ ಆ ದೇವ ಅಸುರ ಮುಂತಾದವರನ್ನೂ ಎಲ್ಲ ಮಾನವರೂ ನೋಡಿದರು.

ತತಃ ಪ್ರಹೃಷ್ಟಾಃ ಕುರುಪಾಂಡುಯೋಧಾ
ವಾದಿತ್ರಶಂಖಾಯುಧಸಿಂಹನಾದ್ಯೈಃ ।
ನಿನಾದಯಂತೋ ವಸುಧಾಂ ದಿಶಶ್ಚ
ಸ್ವನೇನ ಸರ್ವೇ ದ್ವಿಷತೋ ನಿಜಘ್ನುಃ ॥೩॥

ಉತ್ಸಾಹಗೊಂಡ ಕೌರವ–ಪಾಂಡವಯೋಧರು ವಾದ್ಯ ಶಂಖ ಆಯುಧ ಸಿಂಹಧ್ವನಿಗಳಿಂದ ಭೂಮಿಯನ್ನು ದಿಕ್ಕುಗಳಿಂದ ಪ್ರತಿಧ್ವನಿಸುತ್ತ ಎಲ್ಲರೂ ಶತ್ರುಸಂಹಾರಕ್ಕೆ ತೊಡಗಿದರು.

ನಾನಾಶ್ವಮಾತಂಗರಥಾಯುತಾಕುಲಂ
ವರಾಸಿಶಕ್ಯೃಷ್ಟಿನಿಪಾತದುಃಸಹಮ್ ।
ಅಭೀರುಜುಷ್ಟಂ ಹತದೇಹಸಂಕುಲಂ
ರಣಾಜಿರಂ ಲೋಹಿತರಕ್ತಮಾಬಭೌ ॥೪॥

ಗಜ ಅಶ್ವ ರಥ ಪದಾತಿಗಳಿಂದ ತುಂಬಿ, ಬಾಣ ಖಡ್ಗ ಶಕ್ತಿ ಋಷ್ಟಿಗಳ ಮಳೆಯಿಂದ ದುಃಸಹವಾಗಿ, ಹತರಾದವರ ದೇಹಗಳಿಂದ ತುಂಬಿ ರಕ್ತದಿಂದ ಕೆಂಪಾದ ರಣರಂಗವು ವೀರರಿಂದ ಸೇವಿತವಾಗಿ ಶೋಭಿಸಿತು.

ಬಭೂವ ಯುದ್ಧಂ ಕುರುಪಾಂಡವಾನಾಂ
ಯಥಾ ಸುರಾಣಾಮಸುರೈಃ ಸಹಾಭವತ್ ॥೫॥

ಸುರರಿಗೆ ಅಸುರರೊಡನೆ ನಡೆದ ಯುದ್ಧದಂತೆಯೆ ಕುರು ಪಾಂಡವರ ಯುದ್ಧವೂ ನಡೆಯಿತು.

ಯಥಾ ಪ್ರವೃತ್ತೇ ತುಮುಲೇ ಸುದಾರುಣೇ
ಧನಂಜಯಶ್ಚಾಧಿರಥಿಶ್ಚ ಸಾಯಕೈಃ ।
ದಿಶಶ್ಚ ಸೈನ್ಯಂ ಚ ಶಿತೈರಜಿಹ್ಮಗೈಃ
ಪರಸ್ಪರಂ ಪ್ರೋರ್ಣುವತುಃ ಸ್ಮ ದಂಸಿತೌ ॥೬॥

ಹಾಗೆ ದಾರುಣವಾದ ಮಹಾಯುದ್ಧ ನಡೆದಾಗ ಕವಚಧಾರಿಗಳಾದ ಅರ್ಜುನನೂ ಕರ್ಣನೂ ಹರಿತವಾದ ನೇರವಾದ ಬಾಣಗಳಿಂದ ಪರಸ್ಪರ ಮುಚ್ಚಿದರು. ಸೈನ್ಯವನ್ನೂ ದಿಕ್ಕುಗಳನ್ನೂ ಮುಚ್ಚಿದರು.

ತತಸ್ತದೀಯಾಶ್ಚ ಪರೇ ಚ ಸಾಯಕೈಃ
ಕೃತೇಽಂಧಕಾರೇ ಏವಿದುರ್ನ ಕಿಂಚನ ।
ಭಯಾತ್ತು ತಾವೇವ ರಥೌ ಸಮಾಶ್ರಯನ್
ತಮೋನುದೌ ಖೇ ಪ್ರಸೃತಾ ಇವಾಂಶವಃ ॥೭॥

ಆಗಲೆ ನಿನ್ನವರೂ ಶತ್ರುಗಳೂ ಬಾಣಗಳಿಂದ ಅಂಧಕಾರ ಉಂಟುಮಾಡಿದಾಗ ಅವರಿಗೆ ಏನೂ ಕಾಣದಾಯಿತು. ಅವರು ಭಯದಿಂದ ಕರ್ಣಾರ್ಜುನರ ಆ ರಥಗಳನ್ನೇ ಆಕಾಶದಲ್ಲಿ ಹರಡುವ ಕಿರಣಗಳು ತಮಸ್ಸನ್ನು ಕಳೆವ ಸೂರ್ಯ–ಚಂದ್ರರನ್ನೇ ಆಶ್ರಯಿಸುವಂತೆ ಆಶ್ರಯಿಸಿದರು.

ತತೋಽಸ್ತ್ರಮಸ್ತ್ರೇಣ ಪರಸ್ಪರಸ್ಯ ತೌ
ವಿಧೂಯ ವಾತಾವಿವ ಪೂರ್ವಪಶ್ಚಿಮೌ ।
ಘನಾಂಧಕಾರೇ ವಿತತೇ ತಮೋನುದೌ
ಯಥೋದಿತೌ ತದ್ವದತೀವ ರೇಜತುಃ ॥೮॥

ಪೂರ್ವ ಮತ್ತು ಪಶ್ಚಿಮದ ಗಾಳಿಗಳು ಪರಸ್ಪರ ತಡೆಯುವಂತೆ ಅವರು ಪರಸ್ಪರ ಅಸ್ತ್ರವನ್ನು ಅಸ್ತ್ರದಿಂದ ತಡೆಯುತ್ತ ಮೋಡಗಳಿಂದ ಅಂಧಕಾರ ಕವಿದಾಗ ತಮಸ್ಸನ್ನು ಕಳೆವ ಸೂರ್ಯ–ಚಂದ್ರರಂತೆ ಉದಿಸಿ ಬಹಳವಾಗಿ ಶೋಭಿಸಿದರು.

ನ ಚಾತಿಸರ್ತವ್ಯಮಿತಿ ಪ್ರಚೋದಿತಾಃ
ಪರೇ ತ್ವದೀಯಾಶ್ಚ ತದಾವತಸ್ಥಿರೇ ।
ಮಹಾರಥೌ ತೌ ಪರಿವಾರ್ಯ ಸರ್ವತಃ
ಸುರಾಸುರಾ ವಾಸವಶಂಬರಾವಿವ ॥೯॥

ಯಾರೂ ಮುಂದೆ ಹೋಗಬೇಡಿರೆಂದು ಸೇನಾಧಿಪತಿಗಳ ಸೂಚನೆಯಿಂದ ಪರರೂ ನಿನ್ನವರು ಅಲ್ಲಿಯೇ ಮಹಾರಥರಾದ ಕರ್ಣ–ಅರ್ಜುನರನ್ನು ಸುತ್ತುವರಿದು ದೇವಾಸುರರು ಇಂದ್ರ ಶಂಬರರನ್ನು ಸುತ್ತುವರಿದು ನಿಂತಂತೆ ನಿಂತರು.

ಮೃದಂಗಭೇರೀಪಣವಾನಕಸ್ವನೈ-
ರ್ನಿನಾದಿತೇ ಭಾರತ ಶಂಖನಿಸ್ವನೈಃ ।
ಸಸಿಂಹನಾದೌ ಬಭತುರ್ನರೋತ್ತಮೌ
ಶಶಾಂಕಸೂರ್ಯಾವಿವ ಮೇಘನಿಸ್ವನೈಃ ॥೧೦॥

ರಾಜನೆ, ಮೃದಂಗ ಭೇರಿ ಪಣವ ಆನಕ ಶಂಖಧ್ವನಿಗಳಿಂದ ತುಂಬಿದ ರಣರಂಗದಲ್ಲಿ ಸಿಂಹನಾದ ಮಾಡುತ್ತ ಕರ್ಣಾರ್ಜುನರು ಮೋಡಗಳ ಗರ್ಜನೆ ಆಗುತ್ತಿದ್ದರೆ ಚಂದ್ರ–ಸೂರ್ಯರು ಹೊಳೆಯುವ ಹಾಗೇ ಶೋಭಿಸಿದರು.

ಮಹಾಧನುರ್ಮಂಡಲಮಧ್ಯಗಾವುಭೌ
ಸುವರ್ಚಸೌ ಬಾಣಸಹಸ್ರರಶ್ಮಿನೌ ।
ದಿಧಕ್ಷಮಾಣೌ ಸಚರಾಚರಂ ಜಗದ್
ಯುಗಾಂತಸೂರ್ಯಾವಿವ ದುಃಸಹೌ ರಣೇ ॥೧೧॥

ಮಂಡಲಾಕಾರವಾಗಿ ಬಾಗಿಸಿದ ಮಹಾಧನುಗಳ ನಡುವೆ ಒಳ್ಳೆ ವರ್ಚಸ್ಸುಳ್ಳ ಕರ್ಣಾರ್ಜುನರು ಸಾವಿರಗಟ್ಟಲೆ ಬಾಣಗಳ ಕಿರಣಗಳನ್ನು ಸೂಸುತ್ತ ಸಚರಾಚರ ಪ್ರಪಂಚವನ್ನೇ ಸುಡಲು ಹೊರಟ ಇಬ್ಬರು ಸೂರ್ಯರಂತೆಯೆ ರಣದಲ್ಲಿ ಸಹಿಸಲಾಗದವರಾದರು.

ಉಭಾವಜೇಯಾವಹಿತಾಂತಕಾವುಭೌ
ಜಿಘಾಂಸತುಸ್ತೌ ಕೃತಿನೌ ಪರಸ್ಪರಮ್ ।

ಮಹಾಹವೇ ವೀರವರೌ ಸಮೀಯತು-
ರ್ಯಥೇಂದ್ರಜಂಭಾವಿವ ಕರ್ಣಪಾಂಡವೌ ॥೧೨॥

ಕರ್ಣಾರ್ಜುನರು ಇಬ್ಬರೂ ಅಜೇಯರು. ಇಬ್ಬರೂ ಮಹಾವೀರರು ಶತ್ರುನಾಶಕರು ಮಹಾರಣದಲ್ಲಿ ಪರಸ್ಪರ ವಧಿಸಲು ಬಯಸುವವರು ನಿಪುಣರು ದೇವೇಂದ್ರ ಮತ್ತು ಜಂಭಾಸುರರಂತೆ ಮುಖಾಮುಖಿಯಾಗಿದ್ದಾರೆ.

ತತೋ ಮಹಾಸ್ತ್ರೇ ಮಹಾಧನುರ್ಧರೌ
ವಿಮುಂಚಮಾನಾವಿಷುಭಿರ್ಭಯಾನಕೈಃ ।
ನರಾಶ್ವನಾಗಾನಮಿತಾನ್ ನಿಜಘ್ನತುಃ
ಪರಸ್ಪರಂ ಜಘ್ನತುರುತ್ತಮೇಷುಭಿಃ ॥೧೩॥

ಕರ್ಣಾರ್ಜುನರು ಮಹಾಧನುರ್ಧಾರಿಗಳು, ಮಹಾ ಅಸ್ತ್ರಗಳನ್ನು ಪ್ರಯೋಗಿಸುತ್ತ ಭಯಾನಕವಾದ ಬಾಣಗಳಿಂದ ಲೆಕ್ಕವಿಲ್ಲದಷ್ಟು ಪದಾತಿ ಅಶ್ವಗಜಗಳನ್ನು ವಧಿಸಿದರು. ಉತ್ತಮ ಬಾಣಗಳಿಂದ ಪರಸ್ಪರ ಹೊಡೆದರು.

ತತೋ ವಿಸಸ್ರುಃ ಪುನರರ್ದಿತಾಃ ಶರೈ
ರ್ನರೋತ್ತಮಾಭ್ಯಾಂ ಕುರುಪಾಂಡವಾಶ್ರಯಾಃ ।
ಸನಾಗಪತ್ತ್ಯಶ್ವರಥಾ ದಿಶೋ ಗತಾ-
ಸ್ತಥಾ ಯಥಾ ಸಿಂಹಭಯಾದ್ ವನೌಕಸಃ ॥೧೪॥

ಆಗ ಕರ್ಣಾರ್ಜುನರಿಂದ ಪುನಃ ಹೊಡೆಸಿಕೊಂಡು ಕೌರವ-ಪಾಂಡವರ ಕಡೆಯ ಗಜ ಪದಾತಿ ಅಶ್ವ ರಥಯೋಧರು ಸಿಂಹದ ಭಯದಿಂದ ಕಾಡುಪ್ರಾಣಿಗಳು ಓಡುವಂತೆ ಓಡಿದರು.

ತತಸ್ತು ದುರ್ಯೋಧನಭೋಜಸೌಬಲಾಃ
ದ್ರೌಣಿಶ್ಚ ಶಾರದ್ವತಸೂನುನಾ ಸಹ ।
ಮಹಾರಥಾಃ ಪಂಚ ಧನಂಜಯಾಚ್ಯುತೌ
ಶರೈಃ ಶರೀರಾಂತಕರೈರತಾಡಯನ್ ॥೧೫॥

ಬಳಿಕ ದುರ್ಯೋಧನ ಕೃತವರ್ಮ ಶಕುನಿ ಅಶ್ವತ್ಥಾಮ ಮತ್ತು ಕೃಪ ಈ ಐವರು

ಮಹಾರಥರು ಶರೀರನಾಶಕರವಾದ ಮಹಾ ಬಾಣಗಳಿಂದ ಅರ್ಜುನ, ಕೃಷ್ಣರನ್ನು ಹೊಡೆದರು.

ಧನೂಂಷಿ ತೇಷಾಮಿಷುಧೀನ್ ಹಯಾನ್ ಧ್ವಜಾನ್
ರಥಾಂಶ್ಚ ಸೂತಾಂಶ್ಚ ಧನಂಜಯಃ ಶರೈಃ ।
ಸಮಂ ಚ ಚಿಚ್ಛೇದ ಪರಾಭಿನಚ್ಚ ತಾನ್
ಶರೋತ್ತಮೈರ್ದ್ವಾದಶಭಿಶ್ಚ ಸೂತಜಮ್ ॥೧೬॥

ಅವರ ಬಿಲ್ಲು ಬತ್ತಳಿಕೆ ಅಶ್ವ ಧ್ವಜ ರಥ ಸಾರಥಿಗಳನ್ನು ಅರ್ಜುನನು ಒಮ್ಮೆಲೆ ಬಾಣಗಳಿಂದ ಕತ್ತರಿಸಿದ, ಅವರನ್ನೂ ಹೊಡೆದ. ಉತ್ತಮವಾದ ಹನ್ನೆರಡು ಬಾಣಗಳಿಂದ ಕರ್ಣನನ್ನೂ ಹೊಡೆದ.

ಅಥಾಭ್ಯಧಾವಂಸ್ತ್ವರಿತಾಃ ಶತಂ ರಥಾಃ
ಶತಂ ಗಜಾಶ್ಚಾರ್ಜುನಮಾತತಾಯಿನಃ ।
ಶಕಾಸ್ತುಷಾರಾ ಯವನಾಶ್ಚ ಸಾದಿನಃ
ಸಹೈವ ಕಾಂಬೋಜವರೈರ್ಜಿಘಾಂಸವಃ ॥೧೭॥

ಬಳಿಕ ಅರ್ಜುನನನ್ನು ನೂರು ರಥಿಕರು ನೂರು ಗಜಯೋಧರು ಆಯುಧ ಹಿಡಿದು ವೇಗದಿಂದ ಆಕ್ರಮಿಸಿದರು. ಶಕ ತುಷಾರ ಯವನರ ಅಶ್ವಯೋಧರೂ ಕಾಂಬೋಜಯೋಧರೊಂದಿಗೆ ಅರ್ಜುನನನ್ನು ಕೊಲ್ಲಲು ಬಯಸಿ ಆಕ್ರಮಿಸಿದರು.

ವರಾಯುಧಾನ್ ಪಾಣಿಗತಾನ್ ಕರೈಃ ಸಹ
ಕ್ಷುರೈರ್ನಿಕೃತಂಸ್ತರಿತಃ ಶಿರಾಂಸಿ ಚ ।
ಹಯಾಂಶ್ಚ ನಾಗಾಂಶ್ಚ ರಥಾಂಶ್ಚ ಯುಧ್ಯತಾಂ
ಧನಂಜಯಃ ಶತ್ರುಗಣಂ ತಮಕ್ಷಿಣೋತ್ ॥೧೮॥

ಅರ್ಜುನನು ಅವರು ಹಿಡಿದ ಆಯುಧಗಳನ್ನು ಕೈಗಳೊಂದಿಗೇ ವೇಗವಾಗಿ ಕ್ಷುರಗಳಿಂದ ಕತ್ತರಿಸಿದ. ತಲೆಗಳನ್ನೂ ಕತ್ತರಿಸಿದ, ಅವರ ಕುದುರೆ ಗಜ ರಥಗಳನ್ನೂ ಕತ್ತರಿಸಿ ಶತ್ರುಸಮೂಹವನ್ನೇ ನಾಶಪಡಿಸಿದ.

ತತೋಽಂತರಿಕ್ಷೇ ಸುರತೂರ್ಯನಿಸ್ವನಾಃ
ಸಸಾಧುವಾದಾ ಹೃಷಿತೈಃ ಸಮೀರಿತಾಃ ।
ನಿಪೇತುರಪ್ಯುತ್ತಮಪುಷ್ಪವೃಷ್ಟಯಃ
ಸುರೂಪಗಂಧಾಃ ಪವನೇರಿತಾಃ ಶಿವಾಃ ॥೧೯॥

ಆಗ ಅಂತರಿಕ್ಷದಲ್ಲಿ ದೇವತೆಗಳ ವಾದ್ಯಘೋಷಗಳು ಮತ್ತು ಹೃಷ್ಟರಾದ ದೇವತೆಗಳು ನುಡಿದ ಭಲೆ ಭೇಷ್ ಎನ್ನುವ ಶಬ್ದಗಳು ಕೇಳಿಬಂದುವು. ಉತ್ತಮವಾದ ರೂಪ–ಗಂಧಯುಕ್ತವಾದ ಮಂಗಳಕರವಾದ ಉತ್ತಮ ಪುಷ್ಪವೃಷ್ಟಿಗಳೂ ಸುರಿದುವು.

ತದದ್ಭುತಂ ದೇವಮನುಷ್ಯಸಾಕ್ಷಿಕಂ
ಸಮೀಕ್ಷ್ಯ ಭೂತಾನಿ ವಿಸಿಷ್ಮಿಯುರ್ನೃಪ ।
ತವಾತ್ಮಜಃ ಸೂತಸುತಶ್ಚ ನ ವ್ಯಥಾಂ
ನ ವಿಸ್ಮಯಂ ಜಗ್ಮತುರೇಕನಿಶ್ಚಯೌ ॥೨೦॥

ದೇವ–ಮಾನವರ ಕಣ್ಣ ಮುಂದೆ ನಡೆದ ಆ ಅದ್ಭುತವನ್ನು ನೋಡಿ, ರಾಜನೆ, ಎಲ್ಲರೂ ವಿಸ್ಮಿತರಾದರು. ನಿನ್ನ ಮಗನೂ ಕರ್ಣನೂ ವ್ಯಥೆಪಡಲಿಲ್ಲ ವಿಸ್ಮಯವನ್ನೂ ಹೊಂದಲಿಲ್ಲ. ಏಕೆಂದರೆ ಇಬ್ಬರೂ ಅರ್ಜುನವಧೆಯ ಒಂದೇ ನಿಶ್ಚಯದವರು ಆಗಿದ್ದರು.

ಅಥಾಬ್ರವೀದ್ ದ್ರೋಣಸುತಸ್ತವಾತ್ಮಜಂ
ಕರಂ ಕರೇಣ ಪ್ರತಿಪೀಡ್ಯ ಸಾಂತ್ವಯನ್ ॥೨೧॥

ಅಶ್ವತ್ಥಾಮನು ನಿನ್ನ ಮಗನನ್ನು ಕೈಯನ್ನು ಕೈಯಿಂದ ಹಿಡಿದು, ಸಂತೈಸುತ್ತ ನುಡಿದ—

ಅಶ್ವತ್ಥಾಮಾ

ಪ್ರಸೀದ ದುರ್ಯೋಧನ ಶಾಮ್ಯ ಪಾಂಡವೈ-
ರಲಂ ವಿರೋಧೇನ ಧಿಗಸ್ತು ವಿಗ್ರಹಮ್ ॥೨೨॥

ಅಶ್ವತ್ಥಾಮ ನುಡಿದ— ದುರ್ಯೋಧನ, ಪ್ರಸನ್ನನಾಗು, ಪಾಂಡವರೊಡನೆ ಸಂಧಿ ಮಾಡಿಕೊಳ್ಳು, ಕಲಹ ಸಾಕು. ಯುದ್ಧಕ್ಕೆ ಧಿಕ್ಕಾರವಿರಲಿ.

ಹತೋ ಗುರುರ್ಬ್ರಹ್ಮಸಮೋ ಮಹಾಸ್ತ್ರವಿತ್
ತಥೈವ ಭೀಷ್ಮಪ್ರಮುಖಾ ನರರ್ಷಭಾಃ ।
ಅಹಂ ತ್ವವಧ್ಯೋ ಮಮ ಚಾಪಿ ಮಾತುಲಃ
ಪ್ರಶಾಧಿ ರಾಜ್ಯಂ ಸಹ ಪಾಂಡವೈಶ್ಚಿರಮ್ ॥೨೩॥

ಬ್ರಹ್ಮಸಮಾನನಾದ ಮಹಾಅಸ್ತ್ರಜ್ಞನಾದ ಗುರುದ್ರೋಣ ಹತನಾಗಿದ್ದಾನೆ. ಭೀಷ್ಮಾದಿ ಪುರುಷಶ್ರೇಷ್ಠರೂ ಹತರಾದರು. ನಾನು ಅವಧ್ಯ. ನನ್ನ ಸೋದರಮಾವ ಕೃಪನೂ ಅವಧ್ಯ. ನಮ್ಮ ಬೆಂಬಲದಿಂದ ಪಾಂಡವರೊಂದಿಗೆ ಚಿರಕಾಲ ರಾಜ್ಯವಾಳು.

ಧನಂಜಯಃ ಸ್ಥಾಸ್ಯತಿ ವಾರಿತೋ ಮಯಾ
ಜನಾರ್ದನೋ ನೈವ ವಿರೋಧಮಿಚ್ಛತಿ ।
ಯುಧಿಷ್ಠಿರೋ ಭೂತಹಿತೇ ಸದಾ ರತೋ
ವೃಕೋದರಸ್ತದ್ವಶಗಸ್ತಥಾ ಯಮೌ ॥೨೪॥

ನಾನು ತಡೆದರೆ ಅರ್ಜುನ ಸುಮ್ಮನಿರುತ್ತಾನೆ. ಕೃಷ್ಣನು ಯುದ್ಧವನ್ನು ಸರ್ವಥಾ ಬಯಸುವುದಿಲ್ಲ. ಯುಧಿಷ್ಠಿರನಿಗೆ ಪ್ರಾಣಿಗಳ ಹಿತದಲ್ಲಿಯೇ ಸದಾ ಆಸಕ್ತಿ. ಅವನಿಗೆ ಭೀಮನು ವಶನಾಗಿರುತ್ತಾನೆ. ಹಾಗೇ ನಕುಲ–ಸಹದೇವರೂ ವಶರಾಗಿರುತ್ತಾರೆ.

ತ್ವಯಾ ತು ಪಾರ್ಥೇನ ಕೃತೇ ಚ ಸಂಗಮೇ
ಪ್ರಜಾಃ ಶಿವಂ ಪ್ರಾಪ್ನುಯುರಿಚ್ಛಯಾ ತವ ।
ವ್ರಜಂತು ಶೇಷಾಃ ಸ್ವಪುರಾಣಿ ಪಾರ್ಥಿವಾ
ನಿವೃತ್ತವೈರಾಶ್ಚ ಭವಂತು ಸೈನಿಕಾಃ ॥೨೫॥

ನೀನು ಅರ್ಜುನನೊಂದಿಗೆ ಒಪ್ಪಂದ ಮಾಡಿಕೊಂಡರೆ ಪ್ರಜೆಗಳು ನಿನ್ನಿಚ್ಛೆಯಂತೆ ಸುಖ ಪಡೆಯುತ್ತಾರೆ. ಉಳಿದ ರಾಜರು ತಮ್ಮ ಊರುಗಳಿಗೆ ಹಿಂತಿರುಗಲಿ, ಸೈನಿಕರು ವೈರವನ್ನು ಬಿಟ್ಟುಬಿಡಲಿ.

ನ ಚೇದ್ವಚಃ ಶ್ರೋಷ್ಯಸಿ ಮೇ ನರಾಧಿಪ
ಧ್ರುವಂ ಪ್ರತಪ್ತಾಸಿ ಹತೋಽರಿಭಿರ್ಯುಧಿ ।
ಇದಂ ಚ ದೃಷ್ಟಂ ಜಗತಾ ಸಹ ತ್ವಯಾ
ಕೃತಂ ಯದೇಕೇನ ಕಿರೀಟಮಾಲಿನಾ ॥೨೬॥

ರಾಜನೆ, ನೀನು ನನ್ನ ಮಾತನ್ನು ಕೇಳದಿದ್ದರೆ ಶತ್ರುಗಳಿಂದ ರಣದಲ್ಲಿ ಹೊಡೆಸಿಕೊಂಡು ಪಶ್ಚಾತ್ತಾಪ ಪಡುವಿ. ಅರ್ಜುನ ಏಕಾಕಿಯಾಗಿ ಮಾಡಿದ ಈ ಸಾಹಸವನ್ನು ನೀನು ನೋಡಿದೆ, ಜಗತ್ತೂ ನೋಡಿದೆ.

ಯಥಾ ನ ಕುರ್ಯಾದ್ ಬಲಭಿನ್ನ ಚಾಂತಕೋ
ನ ಚ ಪ್ರಚೇತಾ ಭಗವಾನ್ನ ಯಕ್ಷರಾಟ್ ॥೨೭॥

ಇಂಥ ಸಾಹಸವನ್ನು ಇಂದ್ರ ಮಾಡಲಾರ. ಯಮ ಮಾಡಲಾರ. ಭಗವಾನ್ ವರುಣ ಮಾಡಲಾರ. ಕುಬೇರನೂ ಮಾಡಲಾರ.

ಅತೋಽಪಿ ಭೂಯಾಂಶ್ಚ ಗುಣೈರ್ಧನಂಜಯಃ
ಸ ಚಾಭಿಪತ್ಸ್ಯತ್ಯಖಿಲಂ ವಚೋ ಮಮ ।
ತವಾನುಯಾತ್ರಾಂ ಚ ತಥಾ ಕರಿಷ್ಯತಿ
ಪ್ರಸೀದ ರಾಜನ್ ಜಗತಃ ಶಮಾಯ ವೈ ॥೨೮॥

ಅವರೆಲ್ಲರಿಗಿಂತ ಗುಣದಲ್ಲಿ ಅರ್ಜುನನೇ ಹೆಚ್ಚು. ಅವನು ನನ್ನ ಎಲ್ಲ ಮಾತನ್ನು ಅನುಮೋದಿಸುತ್ತಾನೆ. ನಿನ್ನನ್ನು ಅನುಸರಿಸಿ ಅವನು ನಡೆದುಕೊಳ್ಳುತ್ತಾನೆ. ರಾಜನೆ, ಪ್ರಸನ್ನನಾಗು, ಜಗತ್ತಿಗೆ ಕ್ಷೇಮವಾಗಲಿ.

ಮಮಾಪಿ ಮಾನಃ ಪರಮಃ ಸದಾ ತ್ವಯಿ
ಬ್ರವೀಮ್ಯತಸ್ತಾಂ ಪರಮಾಚ್ಚ ಸೌಹೃದಾತ್ ।
ನಿವಾರಯಿಷ್ಯಾಮಿ ಹಿ ಕರ್ಣಮಪ್ಯಹಂ
ಯದಾ ಭವಾನ್ ಸಪ್ರಣಯೋ ಭವಿಷ್ಯತಿ ॥೨೯॥

ನನಗೂ ನಿನ್ನಲ್ಲಿ ಬಹಳ ಅಭಿಮಾನ ಸದಾ ಇದೆ. ಅದರಿಂದ ಪರಮ ಸೌಹಾರ್ದದಿಂದ ನಿನಗೆ ಹೇಳುತ್ತಿದ್ದೇನೆ. ಕರ್ಣನನ್ನೂ ನಾನು ನೀನು ಪಾಂಡವರೊಂದಿಗೆ ಸ್ನೇಹದಿಂದಿರುವ ಪಕ್ಷದಲ್ಲಿ ತಡೆಯುತ್ತೇನೆ.

ವದಂತಿ ಮಿತ್ರಂ ಸಹಜಂ ವಿಚಕ್ಷಣಾ-
ಸ್ತಥೈವ ಸಾಮ್ನಾ ಚ ಧನೇನ ಚಾರ್ಜಿತಮ್ ।
ಪ್ರತಾಪತಶ್ಚೋಪನತಂ ಚತುರ್ವಿಧಂ
ತದಸ್ತಿ ಸರ್ವಂ ತ್ವಯಿ ಪಾಂಡವೇಷು ಚ ॥೩೦॥

ಮೈತ್ರಿಯು ಸಹಜವಾಗಿ ಬೆಳೆಯುವುದುಂಟು. ಒಪ್ಪಂದದಿಂದ ಮೈತ್ರಿ ಉಂಟಾಗಬಹುದು. ಧನದಿಂದ ಮೈತ್ರಿಯನ್ನು ಗಳಿಸಬಹುದು. ಪ್ರತಾಪದಿಂದಲೂ ಮೈತ್ರಿಯನ್ನು ಪಡೆಯಬಹುದು ಎಂದು ನಾಲ್ಕು ಬಗೆಯನ್ನು ತಿಳಿದವರು ಹೇಳುತ್ತಾರೆ. ಅವೆಲ್ಲವೂ ನಿನ್ನಲ್ಲಿ ಮತ್ತು ಪಾಂಡವರಲ್ಲಿ ಇವೆ.

'ಪ್ರ-ತಾಪ' ಅಂದರೆ ತಾಪ ಪರಿಹಾರ. ಕೋಪ ಶಮನದಿಂದಲೂ ಮೈತ್ರಿ.

ನಿಸರ್ಗತಸ್ತೇ ತವ ವೀರ ಬಾಂಧವಾಃ
ಪುನಶ್ಚ ಸಾಮ್ನಾ ಚ ಸಮಾಪ್ನುಹಿ ಸ್ಥಿರಮ್ ।
ತ್ವಯಿ ಪ್ರಸನ್ನೋ ಯದಿ ಮಿತ್ರತಾಂ ಯಯು-
ರ್ಹಿತಂ ಕೃತಂ ಸ್ಯಾಜ್ಜಗತಸ್ತ್ವಯಾऽತುಲಮ್ ॥೩೧॥

ಏಕೆಂದರೆ ಸಹಜವಾಗಿ ಪಾಂಡವರು ನಿನಗೆ ಬಂಧುಗಳಾದ್ದರಿಂದ ಮಿತ್ರರಾಗುತ್ತಾರೆ. ಪುನಃ ಪ್ರೀತಿಯ ಒಪ್ಪಂದದಿಂದ ಆ ಮೈತ್ರಿಯನ್ನು ಸ್ಥಿರವಾಗಿ ಮಾಡಿಕೊಳ್ಳು. ಅರ್ಧರಾಜ್ಯದ ದಾನದಿಂದ ಅರ್ಜುನ ಪ್ರಸನ್ನನಾದರೆ, ಅವರು ನಿಶ್ಚಯವಾಗಿ ಮೈತ್ರಿಯನ್ನು ಮಾಡಿಕೊಳ್ಳುತ್ತಾರೆ. ಅರ್ಜುನನ ಕೋಪಶಮನದಿಂದ ಜಗತ್ತಿಗೇ ಬಹಳ ಹಿತ ಉಂಟಾದೀತು.

ಸ ಏವಮುಕ್ತಃ ಸುಹೃದಾ ವಚೋ ಹಿತಂ
ವಿಚಿಂತ್ಯ ನಿಃಶ್ವಸ್ಯ ಚ ದುರ್ಮನಾऽಬ್ರವೀತ್ ॥೩೨॥

ಅಶ್ವತ್ಥಾಮನು ಹೀಗೆ ನುಡಿದಾಗ, ಹಿತಕರವಾದ ಆ ಮಾತನ್ನು ಆಲೋಚಿಸಿ ದುರ್ಯೋಧನನು ನಿಟ್ಟುಸಿರಿಟ್ಟು ವಿಷಾದದಿಂದ ನುಡಿದ—

ದುರ್ಯೋಧನಃ

ಯಥಾ ಭವಾನಾಹ ಸಖೇ ತಥೈವ ತ-
ನ್ಮಮಾಪಿ ವಿಜ್ಞಾಪಯತೋ ವಚಃ ಶೃಣು ॥೩೩॥

ದುರ್ಯೋಧನ ನುಡಿದ— ಮಿತ್ರ, ನೀನು ಹೇಳಿದ್ದು ಸರಿಯೆ. ಆದರೆ ನಾನೂ ಒಂದು ಮಾತನ್ನು ಹೇಳುತ್ತೇನೆ, ಕೇಳು.

ನಿಹತ್ಯ ದುಃಶಾಸನಮುಕ್ತವಾನ್ ಬಹು
ಪ್ರಸಹ್ಯ ಶಾರ್ದೂಲವದೇವ ದುರ್ಮತಿಃ ।
ವೃಕೋದರಸ್ತದ್ಧೃದಯೇ ಮಮ ಸ್ಥಿತಂ
ನ ತತ್ಪರೋಕ್ಷಂ ಭವತಃ ಕುತಃ ಶಮಃ ॥೩೪॥

ದುರ್ಬುದ್ಧಿಯವನಾದ ಭೀಮನು ದುಃಶಾಸನನನ್ನು ಬಲಾತ್ಕಾರವಾಗಿ ಹುಲಿಯಂತೆ ಆಕ್ರಮಿಸಿ ಕೊಂದು ಹೇಳಿದ ಮಾತು ನನ್ನ ಮನದಲ್ಲಿದೆ. ಅದು ನಿನಗೂ ಪರೋಕ್ಷವಲ್ಲ ಪ್ರತ್ಯಕ್ಷವೆ ಇದೆ ಎಂದ ಮೇಲೆ ಸಂಧಿ ಹೇಗೆ ಸಾಧ್ಯ?

ದುಃಶಾಸನನ್ನು ಕೊಂದು, 'ಇದು ಸಾಲದು, ದುರ್ಯೋಧನನ ತಲೆಯನ್ನು ಕಾಲಿಂದ ತುಳಿದೇ ನೆಮ್ಮದಿ ಪಡೆಯುವೆನು'(80.44) ಎಂದು ಹೇಳಿದ ಮಾತು ನನ್ನ ಮನದಲ್ಲಿದೆ ಎಂದು ದುರ್ಯೋಧನ ಹೇಳುತ್ತಿದ್ದಾನೆ.

ನ ಚಾಪಿ ಕರ್ಣಂ ಗುರುಪುತ್ರ ಸಂಯುಗಾದ್
ಉಪಾರಮೇತ್ಯರ್ಹಸಿ ವೀರ ಭಾಷಿತುಮ್ ।
ಶ್ರಮೇಣ ಯುಕ್ತೋ ಮಹತಾದ್ಯ ಫಲ್ಗುನ-
ಸ್ತಮೇಷ ಕರ್ಣಃ ಪ್ರಸಭಂ ಹನಿಷ್ಯತಿ ॥೩೫॥

ಗುರುಪುತ್ರ, ವೀರ, ನೀನು ಕರ್ಣನನ್ನು 'ಯುದ್ಧದಿಂದ ವಿರಮಿಸು' ಎಂದು ಉಪದೇಶಿಸುವುದು ಬೇಡ. ಅರ್ಜುನನು ಈಗ ಬಹಳ ಬಳಲಿದ್ದಾನೆ. ಅವನನ್ನು ಕರ್ಣನು ಬಲವಾಗಿ ಹೊಡೆದು ಸಂಹರಿಸುತ್ತಾನೆ.

ಸಂಜಯಃ

ತಮೇವಮುಕ್ತ್ವಾಭ್ಯನುನೀಯ ಚಾಸಕೃತ್
ತವಾತ್ಮಜಃ ಸ್ವಾನನುಶಾಸ್ತಿ ಸೈನಿಕಾನ್ ।
ಸಮಾಘ್ನತಾಭಿದ್ರವತಾಹಿತಾನಿಮಾನ್
ಸಬಾಣಶಬ್ದಾನ್ ಕಿಮು ಜೋಷಮಾಸ್ಯತೇ ॥೩೬॥

ದುರ್ಯೋಧನನು ಹೀಗೆ ಅಶ್ವತ್ಥಾಮನಿಗೆ ಹೇಳಿ ಅವನನ್ನು ಮತ್ತೆ ಮತ್ತೆ ಮನ ಒಲಿಸಿ, ತನ್ನ ಸೈನಿಕರಿಗೆ ಆಜ್ಞೆ ಮಾಡಿದ. 'ಬಾಣಶಬ್ದಗಳನ್ನು ಮಾಡುವ ಈ ಶತ್ರುಗಳನ್ನು ಹೊಡೆಯಿರಿ. ಆಕ್ರಮಿಸಿರಿ, ಏಕೆ ಸುಮ್ಮನೆ ನಿಲ್ಲುವಿರಿ?' ಎಂದು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಅಶ್ವತ್ಥಾಮವಚನಂ ನಾಮ ಚತುರಶೀತಿತಮೋಽಧ್ಯಾಯಃ ॥೮೪॥

❖

ಮಹಾಭಾರತತಾತ್ಪರ್ಯನಿರ್ಣಯ

ಆಗ್ನೇಯವಾರುಣೈಂದ್ರಾದೀನ್ಯೇತಾನ್ಯೋನ್ಯಮೃತ್ಯವೇ ।
ಬ್ರಹ್ಮಾಸ್ತ್ರಮಪ್ಯುಭೌ ತತ್ರ ಪ್ರಯುಜ್ಯಾನದತಾಂ ರಣೇ ।
ಅನ್ಯೋನ್ಯಾಸ್ತ್ರಪ್ರತೀಘಾತಂ ಕೃತ್ವೋಭೌ ಚ ವಿರೇಜತುಃ ॥ ೧೮೧ ॥

ಕರ್ಣಾರ್ಜುನರು ಪರಸ್ಪರ ವಧೆಗಾಗಿ ಆಗ್ನೇಯ ವಾರುಣ ಐಂದ್ರ ಮುಂತಾದ ಅಸ್ತ್ರಗಳನ್ನೂ ಬ್ರಹ್ಮಾಸ್ತ್ರವನ್ನೂ ಪ್ರಯೋಗಿಸಿ ಗರ್ಜಿಸಿದರು. ಪರಸ್ಪರ ಅಸ್ತ್ರಗಳ ಉಪಶಮನವನ್ನೂ ಮಾಡಿ ಇಬ್ಬರೂ ಶೋಭಿಸಿದರು.

❖

ಎಂಬತ್ತೈದನೆಯ ಅಧ್ಯಾಯ

ಕರ್ಣಾರ್ಜುನರ ಅಸ್ತ್ರಯುದ್ಧ. ಅರ್ಜುನನ ಅಸ್ತ್ರ ಕರ್ಣನಿಂದ
ವಿಫಲವಾಗುತ್ತಿರುವುದನ್ನು ಕಂಡು ಭೀಮನಿಗೂ ಶ್ರೀಕೃಷ್ಣನಿಗೂ ಅಸಮಾಧಾನ.

ಸಂಜಯಃ

ತೌ ಶಂಖಭೇರೀನಿನದೇ ಸಮೃದ್ಧೇ
ಸಮೀಯತುಃ ಶ್ವೇತಹಯೌ ನರಾಗ್ರ್ಯೌ ।
ವೈಕರ್ತನಃ ಸೂತಪುತ್ರೋಽರ್ಜುನಶ್ಚ
ದುರ್ಮಂತ್ರಿತೇ ತವ ಪುತ್ರಸ್ಯ ರಾಜನ್ ॥೧॥

ಸಂಜಯ ನುಡಿದ— ರಾಜನೆ, ಶಂಖ ಭೇರೀನಾದಗಳು ಬಹಳ ಕೇಳಿ

ಬರುತ್ತಿದ್ದಂತೆ ಬಿಳಿ ಕುದುರೆಗಳುಳ್ಳ ಇಬ್ಬರು ಪುರುಷಶ್ರೇಷ್ಠರು ಕರ್ಣ ಮತ್ತು ಅರ್ಜುನರು, ನಿನ್ನ ದುಷ್ಟಮಂತ್ರಾಲೋಚನೆಯ ದುಷ್ಪರಿಣಾಮವಾಗಿ ಪರಸ್ಪರ ಇದಿರಾದರು.

ಯಥಾ ಗಜೌ ಹೈಮವತೌ ಪ್ರಭಿನ್ನೌ
ಪ್ರಗೃಹ್ಯ ದಂತಾವಿವ ವಾಶಿತಾರ್ಥೇ ।
ತಥಾ ಸಮಾಜಗ್ಮತುರುಗ್ರವೇಗೌ
ಧನಂಜಯಶ್ಚಾಧಿರಥಿಶ್ಚ ವೀರೌ ॥೨॥

ಹೆಣ್ಣಾನೆಯ ಸಲುವಾಗಿ ಎರಡು ಹಿಮಾಲಯದ ಗಂಡಾನೆಗಳು ಮದಜಲವನ್ನು ಸುರಿಸುತ್ತ ದಂತಗಳನ್ನು ದಂತಗಳಿಂದ ಹಿಡಿದು ಹೋರಾಡುವಂತೆ ವೀರರಾದ ಉಗ್ರವೇಗವುಳ್ಳ ಅರ್ಜುನ ಮತ್ತು ಕರ್ಣರು ಹೋರಾಡಲು ತೊಡಗಿದರು.

ಬಲಾಹಕೇನೇವ ಯಥಾ ಬಲಾಹಕೋ
ಯದೃಚ್ಛಯಾ ವಾ ಗಿರಿಣಾ ಗಿರಿರ್ಯಥಾ ।
ತಥಾ ಧನುರ್ಜ್ಯಾತಲನೇಮಿನಿಸ್ವನೌ
ಸಮೀಯತುಸ್ತಾವಿಷುವರ್ಷವರ್ಷಿಣೌ ॥೩॥

ಮೋಡವು ಮೋಡದೊಂದಿಗೆ, ಆಕಸ್ಮಿಕವಾಗಿ ಒಂದು ಬೆಟ್ಟ ಇನ್ನೊಂದು ಬೆಟ್ಟದೊಂದಿಗೆ ಕಾಳಗ ಮಾಡುವಂತೆ, ಧನುಸ್ಸು ಹೆದೆ ಹಸ್ತತಲ ಚಕ್ರ ಧ್ವನಿಗಳೊಂದಿಗೆ ಬಾಣಗಳ ಮಳೆಗರೆಯುತ್ತ ಕರ್ಣಾರ್ಜುನರು ಹೋರಾಡಿದರು.

ಪ್ರವೃದ್ಧಶೃಂಗದ್ರುಮವೀರುದೋಷಧೀ
ಪ್ರವೃದ್ಧನಾನಾವಿಧನಿರ್ಝರೋಕಸೌ ।
ಯಥಾಚಲೌ ವಾ ಮಿಲಿತೌ ಮಹಾಬಲೌ
ತಥಾ ಮಹಾಸ್ತ್ರೈರಿತರೇತರಂ ಘ್ನತಃ ॥೪॥

ಉನ್ನತವಾದ ಶಿಖರ ವೃಕ್ಷ ಲತೆ ಓಷಧಿಗಳುಳ್ಳ, ಉನ್ನತವಾದ ನಾನಾ ಬಗೆಯ ಜಲಪಾತಗಳಿಗೆ ಆಶ್ರಯವಾದ ಎರಡು ಬೆಟ್ಟಗಳು ಕಾಳಗಕ್ಕೆ ಸೇರಿದಂತೆ

ಮಹಾಬಲಿಷ್ಠರಾದ ಕರ್ಣ–ಅರ್ಜುನರು ಸೇರಿ ಪರಸ್ಪರವಾಗಿ ಮಹಾಅಸ್ತ್ರಗಳಿಂದ ಹೊಡೆದರು.

ಸ ಸನ್ನಿಪಾತಸ್ತು ತಯೋರ್ಮಹಾನಭೂತ್
ಸುರೇಶವೈರೋಚನಯೋರ್ಯಥಾ ಪುರಾ ।
ಶರೈರ್ವಿಭಿನ್ನಾಂಗನಿಯಂತೃವಾಹಯೋಃ
ಸುದುಃಸಹೋಽನ್ಯೈಃ ಪರಿಭಿನ್ನದೇಹಯೋಃ ॥೫॥

ಹಿಂದೆ ದೇವೇಂದ್ರ ಮತ್ತು ಬಲಿಚಕ್ರವರ್ತಿಗಳಿಗೆ ನಡೆದಂಥ ಮಹಾ ಸಂಘರ್ಷ ಕರ್ಣಾರ್ಜುನರಿಗೆ ನಡೆಯಿತು. ಬಾಣಗಳಿಂದ ಸಾರಥಿ ಅಶ್ವಗಳಿಗೆ ಮಾತ್ರವಲ್ಲದೆ ರಥಿಕರಾದ ತಮಗೂ ಶರೀರದಲ್ಲಿ ಬಹಳ ಗಾಯಗಳಾದುವು. ಅನ್ಯರಿಗೆ ಇಂಥ ಸಂಘರ್ಷ ಅಸಹನೀಯ.

ಪ್ರಭೂತಪದ್ಮೋತ್ಪಲಮತ್ಸ್ಯಕಚ್ಛಪೌ
ಮಹಾಹ್ರದೌ ಪಕ್ಷಿಗಣಾನುನಾದಿತೌ ।
ಸುಸನ್ನಿಕೃಷ್ಟಾವನಿಲೋದ್ಧತೌ ಯಥಾ
ತಥಾ ರಥೌ ತೌ ಧ್ವಜಿನೌ ಸಮೀಯತುಃ ॥೬॥

ಕೆಂದಾವರೆ ನೈದಿಲೆ ಮೀನು ಆಮೆಗಳಿಂದ ತುಂಬಿದ್ದು ಪಕ್ಷಿಸಮೂಹಗಳ ಕಲರವಯುಕ್ತವಾದ ದೊಡ್ಡ ಸರೋವರಗಳು ಎರಡು ಅಕಸ್ಮಾತ್ ಪರಸ್ಪರ ಸಮೀಪಕ್ಕೆ ಬಂದು ಗಾಳಿಯಿಂದ ಕ್ಷೋಭೆಗೊಂಡರೆ ಹೇಗಿರಬಹುದೋ ಹಾಗೇ ಧ್ವಜಯುಕ್ತವಾದ ಆ ಎರಡು ರಥಗಳು ಸಂಧಿಸಿದುವು.

ಉಭೌ ಮಹೇಂದ್ರಸ್ಯ ಸಮಾನವಿಕ್ರಮಾ-
ವುಭೌ ಮಹೇಂದ್ರಪ್ರತಿಮೌ ಮಹಾರಥೌ ।
ಮಹೇಂದ್ರವಜ್ರಪ್ರತಿಮೈಶ್ಚ ಸಾಯಕೈ-
ರ್ಮಹೇಂದ್ರವೃತ್ರಾವಿವ ಸಂಪ್ರಜಹ್ರತುಃ ॥೭॥

ಕರ್ಣಾರ್ಜುನರಿಬ್ಬರೂ ಮಹೇಂದ್ರನಂಥ ಪರಾಕ್ರಮ ಉಳ್ಳವರು. ನೋಡಲು

ಮಹೇಂದ್ರನಂತಿರುವವರು, ಮಹಾರಥರು. ಮಹೇಂದ್ರನ ವಜ್ರಾಯುಧದಂಥ ಬಾಣಗಳಿಂದ ಅವರು ಮಹೇಂದ್ರ–ವೃತ್ರಾಸುರರಂತೆ ಪರಸ್ಪರ ಹೊಡೆದರು.

ಸನಾಗಪತ್ತ್ಯಶ್ವರಥೇ ಉಭೇ ಬಲೇ
ವಿಚಿತ್ರವರ್ಣಾಭರಣಾಂಬರಸ್ರಜೇ ।
ಚಕಂಪತುಶ್ಚೋನ್ನದತುಃ ಸ್ಮ ವಿಸ್ಮಯಾದ್
ವಿಯದ್ಗತಾಶ್ಚಾರ್ಜುನಕರ್ಣಸಂಯುಗೇ ॥೮॥

ವಿಚಿತ್ರ ವರ್ಣಗಳ ಆಭರಣ ವಸ್ತ್ರಮಾಲೆಗಳುಳ್ಳ ಗಜ ಪದಾತಿ ಅಶ್ವರಥಗಳುಳ್ಳ ಎರಡೂ ಸೈನ್ಯಗಳು ನಡುಗಿದುವು. ಆಶ್ಚರ್ಯದಿಂದ ಉದ್ಗಾರ ಮಾಡಿದುವು. ಅಂತರಿಕ್ಷದಲ್ಲಿ ನೆರೆದವರೂ ಕೂಡ ಭಯ ವಿಸ್ಮಯಗಳಿಗೊಳಗಾಗಿ ಹಾಗೇ ಕರ್ಣಾರ್ಜುನರ ಯುದ್ಧದಲ್ಲಿ ಮಾಡಿದರು.

ಭುಜಾಃ ಸವಜ್ರಾಂಗುಲಯಃ ಸಮುಚ್ಛ್ರಿತಾಃ
ಸಸಿಂಹನಾದಾ ಹೃಷಿತೈರ್ದಿದೃಕ್ಷುಭಿಃ ।
ಯದಾರ್ಜುನಂ ಮತ್ತಮಿವ ದ್ವಿಪೋ ದ್ವಿಪಂ
ಸಮಭ್ಯಯಾದಾಧಿರಥಿರ್ಜಿಘಾಂಸಯಾ ॥೯॥

ಯುದ್ಧಪ್ರೇಕ್ಷಕರು, ಮದಿಸಿದ ಆನೆ ಮದಿಸಿದ ಇನ್ನೊಂದು ಆನೆಯನ್ನು ಆಕ್ರಮಿಸುವಂತೆ, ವಧೇಚ್ಛೆಯಿಂದ ಅರ್ಜುನನನ್ನು ಕರ್ಣ ಆಕ್ರಮಿಸಿದ್ದನ್ನು ಕಂಡು ಉತ್ಸಾಹಿತರಾಗಿ ಸಿಂಹನಾದಗೈಯುತ್ತ ವಜ್ರದುಂಗುರ ತೊಟ್ಟ ಬಾಹುಗಳನ್ನು ಮೇಲೆತ್ತಿದರು.

ಅಭ್ಯಕ್ರೋಶನ್ ಸೋಮಕಾಸ್ತತ್ರ ಪಾರ್ಥಂ
ತ್ವರಸ್ವ ಯಾಹ್ಯರ್ಜುನ ವಿಧ್ಯ ಕರ್ಣಮ್ ।
ಛಿಂಧ್ಯಸ್ಯ ಮೂರ್ಧಾನಮಲಂ ಚಿರೇಣ
ಶ್ರದ್ಧಾಂ ಚ ರಾಜ್ಞೇ ಧೃತರಾಷ್ಟ್ರಸೂನೋಃ ॥೧೦॥

ಸೋಮಕರು ಆಗ ಗಟ್ಟಿಯಾಗಿ ಕೂಗಿ ಪಾರ್ಥನಿಗೆ ಹೇಳಿದರು— 'ಅರ್ಜುನ,

ತ್ವರೆಮಾಡು, ಮುಂದೆ ನುಗ್ಗು ಕರ್ಣನನ್ನು ಹೊಡೆ. ಅವನ ತಲೆಯನ್ನು ಕೆಡಹು. ತಡಮಾಡಬೇಡ, ದುರ್ಯೋಧನನಿಗೆ ರಾಜ್ಯಸಂಪಾದನೆಯಲ್ಲಿರುವ ಶ್ರದ್ಧೆಯನ್ನು ನಾಶಪಡಿಸು.'

ತಥಾಸ್ಮಾಕಂ ಬಹವಸ್ತತ್ರ ಯೋಧಾಃ
ಕರ್ಣಂ ತದಾ ಯಾಹಿ ಯಾಹೀತ್ಯವೋಚನ್ ।
ಜಹ್ಯರ್ಜುನಂ ಕರ್ಣ ತತಃ ಸಚೀರಾಃ
ಪುನರ್ವನಂ ಯಾಂತು ಚಿರಾಯ ಪಾರ್ಥಾಃ ॥೧೧॥

ಹಾಗೇ ನಮ್ಮ ಕಡೆಯ ಯೋಧರೂ ಕೂಡ ಕರ್ಣನಿಗೆ ಹೇಳಿದರು– 'ಕರ್ಣ, ಮುಂದೆ ನುಗ್ಗು ಅರ್ಜುನನನ್ನು ಕೊಲ್ಲು ಪಾಂಡವರು ಪುನಃ ನಾರುಡೆ ಉಟ್ಟು ಶಾಶ್ವತವಾಗಿ ವನವಾಸಕ್ಕೆ ಹೋಗಲಿ'

ತತಃ ಕರ್ಣಃ ಪ್ರಥಮಂ ತತ್ರ ಪಾರ್ಥಂ
ಮಹೇಷುಭಿರ್ದಶಭಿಃ ಪರ್ಯವಿಧ್ಯತ್ ।
ತಮರ್ಜುನಃ ಪ್ರತ್ಯವಿಧ್ಯಚ್ಚಿತಾಗ್ರೈಃ
ಕಕ್ಷಾಂತರೇ ದಶಭಿರತೀವ ಕ್ರುದ್ಧಃ ॥೧೨॥

ಆಗ ಕರ್ಣನು ಮೊದಲಿಗೆ ಅರ್ಜುನನನ್ನು ಹತ್ತು ಬಾಣಗಳಿಂದ ಹೊಡೆದ. ಅವನನ್ನು ಅರ್ಜುನನು ಬಲುಕ್ರುದ್ಧನಾಗಿ ಹರಿತವಾದ ತುದಿಉಳ್ಳ ಹತ್ತು ಬಾಣಗಳಿಂದ ಬಾಹುಮೂಲಗಳ ಮಧ್ಯದಲ್ಲಿ ಅಂದರೆ ಎದೆಯಲ್ಲಿ ಹೊಡೆದ.

ಪರಸ್ಪರಂ ತೌ ವಿಶಿಖೈಃ ಸುತೀಕ್ಷ್ಣೈ-
ಸ್ತತಕ್ಷತುಃ ಸೂತಪುತ್ರೋಽರ್ಜುನಶ್ಚ ।
ಪರಸ್ಪರಸ್ಯಾಂತರೇಪ್ಸೂ ವಿಮರ್ದೇ
ಸುಭೀಮಮಭ್ಯಾಯಯತುಃ ಪ್ರಹೃಷ್ಟೌ ॥೧೩॥

ಕರ್ಣಾರ್ಜುನರು ಬಹಳ ಉತ್ಸಾಹಗೊಂಡು ಬಲು ಹರಿತವಾದ ಬಾಣಗಳಿಂದ ಪರಸ್ಪರ ಹೊಡೆದರು. ರಣದಲ್ಲಿ ಇಬ್ಬರೂ ಭಯಂಕರವಾಗಿ ಹೊಡೆದರು. ಆಕ್ರಮಿಸಿದರು.

ತತೋಽರ್ಜುನಃ ಪ್ರಾಸೃಜದುಗ್ರಧನ್ವಾ
ಭುಜಾವುಭೌ ಗಾಂಡಿವಂ ಚಾನುಮೃಜ್ಯ ।
ನಾರಾಚನಾಲೀಕವರಾಹಕರ್ಣಾನ್
ಕ್ಷುರಾಂಸ್ತಥಾ ಸಾಂಜಲಿಕಾರ್ಧಚಂದ್ರಾನ್ ॥೧೪॥

ಉಗ್ರ ಧನುಸ್ಸಿನವನಾದ ಅರ್ಜುನನು ಎರಡು ಬಾಹುಗಳನ್ನೂ ಗಾಂಡೀವ ವನ್ನೂ ತೀಡಿ ನಾರಾಚ ನಾಲೀಕ ವರಾಹಕರ್ಣ ಕ್ಷುರ ಅಂಜಲಿಕ ಅರ್ಧಚಂದ್ರ ಬಾಣಗಳನ್ನು ಎಸೆದ.

ತೇ ಸರ್ವತಃ ಸಮಕೀರ್ಯಂತ ರಾಜನ್
ಪಾರ್ಥೇಷವಃ ಕರ್ಣರಥಂ ವಿಶಂತಃ ।
ಅವಾಙ್ಮುಖಾಃ ಪಕ್ಷಿಗಣಾ ದಿನಾಂತೇ
ವಿಶಂತಿ ಕೇತಾರ್ಥಮಿವಾಶು ವೃಕ್ಷಮ್ ॥೧೫॥

ಪಾರ್ಥನ ಆ ಬಾಣಗಳು ಎಲ್ಲವೂ ಕರ್ಣರಥವನ್ನು ಸಾಯಂಕಾಲದಲ್ಲಿ ಪಕ್ಷಿಗಳು ಆಶ್ರಯಕ್ಕಾಗಿ ಮರವನ್ನು ಸೇರುವಂತೆ, ಮುಖ ಕೆಳಗೆ ಮಾಡಿಕೊಂಡು ಕರ್ಣನ ರಥವನ್ನು ಪ್ರವೇಶಿಸಿ ಎಲ್ಲೆಡೆ ಹರಡಿದುವು.

ಯಾನರ್ಜುನಃ ಸಭ್ರುಕುಟೀಕಟಾಕ್ಷಃ
ಕರ್ಣಾಯ ರಾಜನ್ನಸೃಜಜ್ಜಿತಾರಿಃ ।
ತಾನ್ ಸಾಯಕೈರ್ಗ್ರಸತೇ ಸೂತಪುತ್ರಃ
ಕ್ಷಿಪ್ತಾನ್ ಕ್ಷಿಪ್ತಾನ್ ಪಾಂಡವಸ್ಯೇಷುಸಂಘಾನ್ ॥೧೬॥

ಹೀಗೆ ಅರ್ಜುನನು ಹುಬ್ಬುಗಂಟಿಕ್ಕಿ ಕಡೆಗಣ್ಣಿಂದ ನೋಡುತ್ತ ಕರ್ಣನಿಗೆ ಯಾವ ಬಾಣಗಳನ್ನು ಎಸೆದನೋ, ಅವನೆಸೆದ ಆ ಬಾಣಸಮೂಹಗಳನ್ನು ಕರ್ಣನು ತನ್ನ ಬಾಣಗಳಿಂದ ನುಂಗಿದ.

ತತೋಽಸ್ತ್ರಮಾಗ್ನೇಯಮಮಿತ್ರತಾಪನಂ
ಮುಮೋಚ ಕರ್ಣಾಯ ಸುರೇಶ್ವರಾತ್ಮಜಃ ।

ಧನಂಜಯಃ ಸಂಯುಗ ಮೂರ್ಧನಿ ಜ್ವಲನ್
ಅಥ ಪ್ರಜಜ್ವಾಲ ತದಸ್ತ್ರಮುತ್ತಮಮ್ ॥೧೭॥

ಅರ್ಜುನನು ಶತ್ರುತಾಪಕನಾದ ಕರ್ಣನ ಮೇಲೆ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದ. ರಣರಂಗದ ಅಗ್ರಭಾಗದಲ್ಲಿ ಜ್ವಲಿಸುತ್ತ ಅರ್ಜುನನು ಪ್ರಯೋಗಿಸಿದ ಆ ಉತ್ತಮ ಅಸ್ತ್ರವು ಬೆಂಕಿಯಾಗಿ ಪ್ರಜ್ವಲಿಸಿತು.

ಜ್ವಾಲಾಭಿರತ್ಯರ್ಥ ವಿನಿಃಸೃತಾಭಿ-
ರಸ್ತ್ರಸ್ಯ ಸೂರಸ್ಯ ಮಹೇಂದ್ರಸೂನೋಃ ।
ಭೂಮ್ಯಂತರಿಕ್ಷೇ ಚ ದಿಶೋಽರ್ಕಮಾರ್ಗಂ
ಪ್ರಾವೃತ್ಯ ದೇಹೋಽಸ್ಯ ಬಭೂವ ದೀಪ್ತಃ ॥೧೮॥

ಅರ್ಜುನನು ಪ್ರಯೋಗಿಸಿದ ಅಸ್ತ್ರ ಸೂರ್ಯರೂಪವಾಯಿತು. ಅದರಿಂದ ಬಹಳ ಜ್ವಾಲೆಗಳು ಹೊರಗೆ ಬಂದುವು. ಅದರ ದೇಹವು ಪ್ರಕಾಶಿಸುತ್ತ ಭೂಮಿ ಅಂತರಿಕ್ಷ ದಿಕ್‌ಗಳನ್ನು ಸೂರ್ಯಸಂಚಾರ ಮಾರ್ಗವನ್ನೂ ಆವರಿಸಿ ಬೆಳಗಿತು.

ಯೋಧಾಶ್ಚ ಸರ್ವೇ ಜ್ವಲಿತಾಂಬರಾ ಭೃಶಂ
ಪ್ರದುದ್ರುವುಸ್ತತ್ರ ವಿದಗ್ಧವಸ್ತ್ರಾಃ ।
ಶಬ್ದಶ್ಚ ಘೋರೋಽತಿ ಬಭೂವ ತತ್ರ
ಯಥಾ ವನೇ ವೇಣುವನಸ್ಯ ದಹ್ಯತಃ ॥೧೯॥

ಎಲ್ಲ ಯೋಧರ ಉಟ್ಟ ಬಟ್ಟೆ ಹೊತ್ತಿ ಉರಿಯಿತು. ಅವರು ಉರಿಯುವ ಬಟ್ಟೆಗಳೊಂದಿಗೆ ಧಾವಿಸಿದರು. ಘೋರವಾದ ಆರ್ತನಾದ ಉಂಟಾಯಿತು. ಕಾಡಿನಲ್ಲಿ ಬಿದಿರ ಮೆಳೆ ಕಾಳ್ಗಿಚ್ಚಿನಲ್ಲಿ ಸುಡುವಾಗಿನ ಶಬ್ದದಂತೇ ಆರ್ತನಾದವಿತ್ತು.

ಸಮೀಕ್ಷ್ಯ ಕರ್ಣೋ ಜ್ವಲನಾಸ್ತ್ರಮುದ್ಯತಂ
ಸ ವಾರುಣಂ ತತ್‌ಪ್ರಶಮಾರ್ಥಮಾಹವೇ ।
ಸಮುತ್ಸೃಜನ್ ಸೂತಸುತಃ ಪ್ರತಾಪವಾನ್
ಸ ತೇನ ವಹ್ನಿಂ ಶಮಯಾಂಬಭೂವ ॥೨೦॥

ಆಗ್ನೇಯಾಸ್ತ್ರವು ಸೈನ್ಯವನ್ನು ಸುಡಲು ಉದ್ಯುಕ್ತವಾದಾಗ ಅದನ್ನು ನೋಡಿ

ಕರ್ಣನು ಅದರ ಶಮನಕ್ಕಾಗಿ ರಣದಲ್ಲಿ ವಾರುಣಾಸ್ತ್ರವನ್ನು ಪ್ರಯೋಗಿಸಿದ. ಪ್ರತಾಪಶಾಲಿಯಾದ ಅವನು ಆ ಅಸ್ತ್ರದಿಂದ ಬೆಂಕಿಯನ್ನು ಆರಿಸಿದ.

ಬಲಾಹಕೌಘಶ್ಚ ದಿಶಸ್ತರಸ್ವೀ
ಚಕಾರ ಸರ್ವಾಸ್ತಿಮಿರೇಣ ಸಂವೃತಾಃ ।
ತತೋ ಧರಿತ್ರೀಧರ ತುಲ್ಯರೋಧಸಃ
ಸಮಂತತೋ ವೈ ಪರಿವಾರ್ಯ ವಾರಿಣಾ ।
ತೈಶ್ಚಾತಿವೇಗಾತ್ ಸ ತಥಾವಿಧೋಽಪಿ
ನೀತಃ ಶಮಂ ವಹ್ನಿರತಿಪ್ರಚಂಡಃ ॥೨೧॥

ಮೋಡಗಳ ಸಮೂಹವು ವಾರುಣಾಸ್ತ್ರದಿಂದ ನಿರ್ಮಿತವಾಗಿದ್ದು ಬಹಳ ಶಕ್ತಿಯುಕ್ತವಾಗಿತ್ತು. ಎಲ್ಲ ದಿಕ್ಕುಗಳನ್ನೂ ಕತ್ತಲಿನಿಂದ ಆಚ್ಛಾದಿಸಿತು. ಪರ್ವತದಂಥ ತೀರವುಳ್ಳ ಜಲರಾಶಿಯಿಂದ ಎಲ್ಲೆಡೆ ಸುತ್ತಲೂ ನೀರುಹರಿಸಿ ಆ ಮೋಡಗಳು ಅತಿವೇಗದ ಬಲದಿಂದ ಆಗ್ನೇಯಾಸ್ತ್ರದಿಂದ ಉಂಟಾದ ಅತಿ ಪ್ರಚಂಡವಾದ ಬೆಂಕಿಯನ್ನೂ ಆರಿಸಿದವು.

ಬಲಾಹಕೈಶ್ಚೈವ ದಿಗಂತರಾಣಿ
ವ್ಯಾಪ್ತಾನಿ ಸರ್ವಾಣಿ ಯಥಾ ನಭಶ್ಚ ।
ತಥಾ ಚ ಸರ್ವಾಸ್ತಿಮಿರೇಣ ವೈ ದಿಶೋ
ಮೇಘೈರ್ವೃತಾ ನ ಪ್ರದೃಶ್ಯೇತ ಕಿಂಚಿತ್ ॥೨೨॥

ಮೋಡಗಳಿಂದ ದಿಕ್ಕುಗಳ ಅವಕಾಶಗಳು ಎಲ್ಲವೂ ವ್ಯಾಪ್ತವಾದುವು. ಆಕಾಶವೂ ವ್ಯಾಪ್ತವಾಯಿತು. ಹೀಗಾಗಿ ಎಲ್ಲ ದಿಕ್ಕುಗಳೂ ಮೋಡಗಳಿಂದಾವೃತವಾದ್ದರಿಂದ ಏನೂ ಗೋಚರಿಸದಂತಾಯಿತು.

ಅಪಾವಹನ್ ಮೇಘಗಣಾಂಸ್ತತಸ್ತಾನ್
ಸಮೀರಣಾಸ್ತ್ರೇಣ ಸಮೀರಿತೇನ ಸಃ ।
ತತಃ ಸೋಽಸ್ತ್ರಂ ದಯಿತಂ ದೇವರಾಜ್ಞಃ
ಪ್ರಾದುಶ್ಚಕ್ರೇ ವಜ್ರಮತಿಪ್ರಭಾವಮ್ ॥೨೩॥

ಆ ಮೋಡಸಮೂಹಗಳನ್ನು ಓಡಿಸುವುದಕ್ಕಾಗಿ ಅರ್ಜುನನು ವಾಯ್ವಸ್ತ್ರಮಂತ್ರ

ವನ್ನು ಉಚ್ಚರಿಸಿದ. ಬಳಿಕ ದೇವರಾಜ ಇಂದ್ರನಿಗೆ ಪ್ರಿಯವಾದ ವಜ್ರಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದ. ಅದು ಅತ್ಯಂತ ಪ್ರಭಾವಶಾಲಿ.

ಗಾಂಡೀವಂ ಜ್ಯಾಂ ವಿಶಿಖಾಂಶ್ಚಾನುಮಂತ್ರ್ಯ
ಧನಂಜಯಃ ಶತ್ರುಸಂಘಪ್ರಮಾಥೀ ।
ತತಃ ಕ್ಷುರಪ್ರಾಂಜಲಿಕಾರ್ಧಚಂದ್ರಾ
ನಾರಾಚನಾಲೀಕವರಾಹಕರ್ಣಾಃ ।
ಗಾಂಡೀವತಃ ಪ್ರಾದುರಾಸನ್ ಸುತೀಕ್ಷ್ಣಾಃ
ಸಹಸ್ರಶೋ ವಜ್ರಸಮಾನವೇಗಾಃ ॥೨೪॥

ಶತ್ರುಸಮೂಹನಾಶಕನಾದ ಅರ್ಜುನನು ಗಾಂಡೀವ ಹೆದೆ ಬಾಣಗಳನ್ನು ಅಭಿಮಂತ್ರಿಸಿ ವಜ್ರಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದ. ಆಗ ಗಾಂಡೀವದಿಂದ ಕ್ಷುರಪ್ರ ಅಂಜಲಿಕ ಅರ್ಧಚಂದ್ರ ನಾರಾಚ ನಾಲೀಕ ವರಾಹಕರ್ಣಗಳೆಂಬ ಬಾಣಗಳು ಬಲುತೀಕ್ಷ್ಣವಾಗೂ ವಜ್ರಾಯುಧಕ್ಕೆ ಮಿಂಚಿಗೆ ಸಮಾನ ವೇಗವುಳ್ಳವು ಸಾವಿರಗಟ್ಟಲೆ ಪ್ರಾದುರ್ಭವಿಸಿದುವು.

ತೇ ಕರ್ಣಮಾಸಾದ್ಯ ಮಹಾಪ್ರಭಾವಾಃ
ಸುತೇಜನಾ ಗಾರ್ಧ್ರಪತ್ರಾಃ ಸುವೇಗಾಃ ।
ಗಾತ್ರೇಷು ಸರ್ವೇಷು ಹಯೇಷು ಚಾಪಿ
ಶರಾಸನೇ ಯುಗಚಕ್ರೇ ಧ್ವಜೇ ಚ ।
ನಿರ್ಭಿದ್ಯ ತೂರ್ಣಂ ವಿವಿಶುಃ ಸುತೀಕ್ಷ್ಣಾ-
ಸ್ತಾಕ್ಷ್ಯ್ ತ್ರಸ್ತಾ ಭೂಮಿಮಿವೋರಾಗಾಸ್ತೇ ॥೨೫॥

ಗಾಂಡೀವದಿಂದ ಹೊರಟ ಆ ವಜ್ರಬಾಣಗಳು ಮಹಾಪ್ರಭಾವ ಉಳ್ಳವು. ಬಲು ತೀಕ್ಷ್ಣ ಹದ್ದಿನ ರೆಕ್ಕೆ ಉಳ್ಳವು. ವೇಗ ಉಳ್ಳವು. ಅವು ಕರ್ಣನ ಸರ್ವಾಂಗಗಳಲ್ಲಿ ಕುದುರೆಗಳಲ್ಲಿ ಬಿಲ್ಲು ರಥ ಚಕ್ರ ಧ್ವಜಗಳಲ್ಲಿ ನಾಟಿ ಬೇಗನೆ ಗರುಡಗಳಿಗೆ ಭೀತಿಗೊಂಡ ಹಾವುಗಳಂತೆ ಭೂಮಿಯನ್ನು ಪ್ರವೇಶಿಸಿದುವು.

ಶರಾಚಿತಾಂಗೋ ರುಧಿರಾರ್ದ್ರಗಾತ್ರಃ
ಕರ್ಣಸ್ತದಾ ರೋಷವಿವೃತ್ತನೇತ್ರಃ ।

ದೃಢಜ್ಯಮಾನಾಮ್ಯ ಸಮುದ್ರಘೋಷಂ
ಪ್ರಾದುಶ್ಚಕ್ರೇ ಭಾರ್ಗವಾಸ್ತ್ರಂ ಮಹಾತ್ಮಾ ।
ಮಹೇಂದ್ರಶಸ್ತ್ರಾಭಿಮುಖಾನ್ ವಿಮುಕ್ತಾನ್
ಛಿತ್ತ್ವಾ ಕರ್ಣಃ ಪಾಂಡವಸ್ಯೇಷು ಸಂಘಾನ್ ॥೨೬॥

ವಜ್ರಬಾಣಗಳಿಂದ ತುಂಬಿದ ಅಂಗಾಂಗಗಳಿಂದ ಸುರಿದ ರಕ್ತದಿಂದ ತೊಯ್ದ ಮಹಾತ್ಮ ಕರ್ಣನು ರೋಷದಿಂದ ಕಣ್ಣುಗಳನ್ನು ತಿರುಗಿಸುತ್ತ ದೃಢವಾದ ಹೆದೆವುಳ್ಳ ಸಮುದ್ರದಂತೆ ಘೋಷವುಳ್ಳ ಧನುಸ್ಸನ್ನು ಬಾಗಿಸಿ ಇಂದ್ರಾಸ್ತ್ರಕ್ಕೆ ಇದಿರಾಗಿ ಭಾರ್ಗವಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದ. ಅರ್ಜುನ ಎಸೆದ ಬಾಣಸಮೂಹ ಗಳನ್ನು ಕರ್ಣ ಕತ್ತರಿಸಿದ.

ತತಃ ಕರ್ಣೋ ಭಾರ್ಗವೇಣಾಭಿಸೃಷ್ಟಂ
ಪ್ರಾದುಶ್ಚಕ್ರೇ ಬ್ರಾಹ್ಮಮಸ್ತ್ರಂ ಮಹಾತ್ಮಾ ।
ತತಃ ಪ್ರಜಜ್ವಾಲ ತದಸ್ತ್ರಮುಗ್ರಂ
ಯುಗಾಂತಸೂರ್ಯಜ್ವಲನಪ್ರಕಾಶಮ್ ॥೨೭॥

ಬಳಿಕ ಮಹಾತ್ಮ ಕರ್ಣನು ಪರಶುರಾಮನಿತ್ತ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ. ಆಗ ಉಗ್ರವಾದ ಆ ಅಸ್ತ್ರ ಯುಗಪ್ರಳಯದ ಸೂರ್ಯಜ್ವಾಲೆಯಂತೆ ಹೊಳೆಯುತ್ತ ಜ್ವಲಿಸಿತು.

ಪಾರ್ಥಾಸ್ತ್ರಮಸ್ತ್ರೇಣ ನಿಹತ್ಯ ತೇನ
ಜಘಾನ ಕರ್ಣೋ ನೃಗಜಾಶ್ವಸಂಘಾನ್ ।
ಅಮೃಷ್ಯಮಾಣಸ್ತು ಮಹಾವಿಮರ್ದೇ
ಮಹಾರಥೋ ಭಾರ್ಗವಾಸ್ತ್ರಪ್ರಭಾವಾತ್ ॥೨೮॥

ಮಹಾರಣದಲ್ಲಿ ಪಾರ್ಥನ ಅಸ್ತ್ರವನ್ನು ಮಹಾರಥನಾದ ಕರ್ಣನು ಸಹಿಸದೆ ಅದನ್ನು ಆ ಅಸ್ತ್ರದಿಂದ ನಿಷ್ಕ್ರಿಯಗೊಳಿಸಿ, ಪದಾತಿ ಗಜ ಅಶ್ವ ಯೋಧಸಮೂಹ ಗಳನ್ನು ಭಾರ್ಗವಾಸ್ತ್ರ ಪ್ರಭಾವದಿಂದ ಸಂಹರಿಸಿದ.

ಪಾಂಚಾಲಾನಾಂ ಪ್ರವರಾಂಶ್ಚಾಪಿ ಯೋಧಾನ್
ಕ್ರೋಧಾವಿಷ್ಟಃ ಸೂತಪುತ್ರಸ್ತರಸ್ವೀ ।

ಬಾಣೈರ್ವಿವ್ಯಾಧಾಹವೇ ಸುಪ್ರಮುಕ್ತೈಃ
ಪ್ರಹಸ್ಯ ಕೃಷ್ಣೌ ತು ನರಪ್ರವೀರಃ ॥೨೯॥

ಪಾಂಚಾಲರ ಮುಖ್ಯಯೋಧರನ್ನೂ ಕೂಡ ವೀರಪುರುಷನಾದ ಬಲಿಷ್ಠನಾದ ಕರ್ಣನು ಕ್ರೋಧಾವಿಷ್ಟನಾಗಿ ರಣದಲ್ಲಿ ಚೆನ್ನಾಗಿ ಎಸೆದ ಬಾಣಗಳಿಂದ ಹೊಡೆದ. ಅಟ್ಟಹಾಸ ಮಾಡಿ ಕೃಷ್ಣಾರ್ಜುನರನ್ನು ಹೊಡೆದ.

ತತಃ ಪಾಂಚಾಲಾಃ ಸೋಮಕಾಶ್ಚಾಪಿ ರಾಜನ್
ಕರ್ಣೇನಾಜೌ ಪೀಡ್ಯಮಾನಾಃ ಶರೌಘೈಃ ।
ಕ್ರೋಧಾವಿಷ್ಟಾ ವಿವ್ಯಧುಸ್ತಂ ಸಮಂತಾತ್
ತೀಕ್ಷ್ಣೈರ್ಬಾಣೈಃ ಸೂತಪುತ್ರಂ ಸಮೇತಾಃ ॥೩೦॥

ರಾಜನೆ, ಆಗ ಪಾಂಚಾಲರೂ ಸೋಮಕರೂ ರಣದಲ್ಲಿ ಕರ್ಣನ ಬಾಣ ಸಮೂಹಗಳಿಂದ ಪೀಡಿತರಾಗುತ್ತ ಕ್ರೋಧಾವಿಷ್ಟರಾಗಿ ಎಲ್ಲರೂ ಕೂಡಿ ಎಲ್ಲ ಕಡೆಗಳಿಂದ ತೀಕ್ಷ್ಣವಾದ ಬಾಣಗಳಿಂದ ಕರ್ಣನನ್ನು ಹೊಡೆದರು.

ತಾನಸ್ತಾಂಸ್ತೈಃ ಸ ನಿಕೃತ್ಯಾಶು ಬಾಣಾನ್
ಪಾಂಚಾಲಾನಾಂ ರಥನಾಗಾಶ್ವಸಂಘಾನ್ ।
ಅಭ್ಯರ್ದಯದ್ ಬಾಣಗಣೈಃ ಪ್ರಸಹ್ಯ
ವಿಕ್ಷೋಭಯನ್ ಸಮರೇ ಸೂತಪುತ್ರಃ ॥೩೧॥

ಕರ್ಣನು ರಣದಲ್ಲಿ ಅವರು ಎಸೆದ ಎಲ್ಲ ಬಾಣಗಳನ್ನು ಕತ್ತರಿಸಿ ಪಾಂಚಾಲರ ರಥ ಗಜ ಅಶ್ವಸಮೂಹಗಳನ್ನು ಬಾಣಸಮೂಹಗಳಿಂದ ಬಲವಾಗಿ ಕ್ಷೋಭೆ ಗೊಳಿಸಿ ಸಂಹರಿಸಿದ.

ತೇ ಭಿನ್ನದೇಹಾ ವ್ಯಸವೋ ನಿಪೇತುಃ
ಕರ್ಣೇಷುಭಿರ್ಭೂಮಿತಳೇ ಸ್ವನಂತಃ ।
ಕ್ರುದ್ಧೇನ ಸಿಂಹೇನ ಯಥೈವ ನಾಗಾ
ಮಹಾಬಲಾ ಭೀಮಬಲೇನ ತದ್ವತ್ ॥೩೨॥

ಅವರು ಕರ್ಣನ ಬಾಣಗಳಿಂದ ಕ್ಷತವಿಕ್ಷತರಾಗಿ, ಮಹಾಬಲಿಷ್ಠವಾದ ಆನೆಗಳು ಭೀಮಬಲವುಳ್ಳ ಕ್ರುದ್ಧವಾದ ಸಿಂಹದಿಂದ ಕ್ಷತವಿಕ್ಷತವಾಗಿ ಬೀಳುವಂತೆ, ಆರ್ತನಾದ ಮಾಡುತ್ತ ಅಸುನೀಗಿ ನೆಲದಲ್ಲಿ ಬಿದ್ದರು.

ಪಾಂಚಾಲಾನಾಂ ಪ್ರವರಾನ್ ಸನ್ನಿಹತ್ಯ
ಪ್ರಸ್ಪರ್ಧಮಾನಾನ್ ಬಲಿನೋ ಯೋಧಮುಖ್ಯಾನ್ ।
ತತಃ ಸ ರಾಜನ್ ವಿರರಾಜ ಕರ್ಣಃ
ಶರಾನ್ ವಮನ್ ಮೇಘ ಇವಾಂಬುಧಾರಾಃ ॥೩೩॥

ಕರ್ಣನು ಪಾಂಚಾಲರಲ್ಲಿ ಬಲಿಷ್ಠರಾದ ಸ್ಪರ್ಧಾಶೀಲರಾದ ಮುಖ್ಯರಾದ ಯೋಧರನ್ನು ಸಂಹರಿಸಿ, ಮೋಡವು ನೀರಿನ ಧಾರೆಯನ್ನು ಸುರಿಸುವಂತೆ ಬಾಣಗಳನ್ನು ಸುರಿಸುತ್ತ ಶೋಭಿಸಿದ.

ಕರ್ಣಸ್ಯ ಮತ್ವಾ ತು ಜಯಂ ತ್ವದೀಯಾಃ
ಪರಾಂ ಮುದಂ ಸಿಂಹನಾದಾಂಶ್ಚ ಚಕ್ರುಃ ।
ಸರ್ವೇ ಹ್ಯಮನ್ಯಂತ ವಶೇ ಕೃತೌ ತೌ
ಕರ್ಣೇನ ಕೃಷ್ಣಾವಿತಿ ಕೌರವೇಂದ್ರ ॥೩೪॥

ರಾಜನೆ, ನಿನ್ನವರು ಕರ್ಣನಿಗೇ ಜಯವೆಂದು ತಿಳಿದು, ಕರ್ಣನು ಕೃಷ್ಣಾರ್ಜುನರನ್ನು ತನ್ನ ನಿಯಂತ್ರಣಕ್ಕೆ ತಂದುಕೊಂಡನೆಂದು ಬಹಳ ಆನಂದವನ್ನು ಹೊಂದಿ ಸಿಂಹನಾದಗೈದರು.

ತತ್ತಾದೃಶಂ ಪ್ರೇಕ್ಷ್ಯ ಮಹಾರಥಸ್ಯ
ಕರ್ಣಸ್ಯ ವೀರ್ಯಂ ಚ ಪರೈರಸಹ್ಯಮ್ ।
ದೃಷ್ಟ್ವಾ ತು ಕರ್ಣೇನ ಧನಂಜಯಸ್ಯ
ಸಂಗ್ರಾಮಮಧ್ಯೇ ನಿಹತಂ ತದಸ್ತ್ರಮ್ ॥೩೫॥

ಅಮೃಷ್ಯಮಾಣಶ್ಚ ಮಹಾವಿಮರ್ದೇ
ತತ್ರಾಕ್ರುಧ್ಯದ್ ಭೀಮಸೇನೋ ಮಹಾತ್ಮಾ ।
ಅಥಾಬ್ರವೀತ್ ಪಾಣಿನಾ ಪಾಣಿಮಾಘ್ನನ್
ಭೀಮೋಽರ್ಜುನಂ ಸತ್ಯಸಂಧಂ ತರಸ್ವೀ ॥೩೬॥

ಶತ್ರುಗಳಿಗೆ ಸಹಿಸಲಾಗದಂಥ ಮಹಾರಥನಾದ ಕರ್ಣನ ಆ ರೀತಿಯ ಪರಾಕ್ರಮವನ್ನು ಕಂಡು, ಅರ್ಜುನನ ಅಸ್ತ್ರವನ್ನು ರಣದಲ್ಲಿ ಕರ್ಣನು ಭಾರ್ಗವಾಸ್ತ್ರದಿಂದ ನಿಷ್ಕ್ರಿಯಗೊಳಿಸಿದ್ದನ್ನು ಕಂಡು, ತಡೆದುಕೊಳ್ಳಲಾಗದೆ, ಮಹಾತ್ಮನಾದ ಬಲಿಷ್ಠನಾದ ಭೀಮಸೇನನು ಆ ಮಹಾಸಮರದಲ್ಲಿ ಕುಪಿತನಾದ. ಕೈಯಿಂದ ಕೈಯನ್ನು ಬಲವಾಗಿ ಮಸೆಯತ್ತ ಸತ್ಯಸಂಧನಾದ ಅರ್ಜುನನಿಗೆ ನುಡಿದ.

'ಸತ್ಯಸಂಧ' ಎಂದರೆ ತಾನು ತನ್ನ ಪ್ರತಿಜ್ಞೆಯನ್ನು ಸತ್ಯವಾಗಿಸುವವನು. ಅರ್ಜುನನಲ್ಲಿ ಇದು ಈಗ ಭೀಮನಿಗೆ ಕಾಣುತ್ತಿಲ್ಲ. ಕರ್ಣನನ್ನು ಕೊಲ್ಲುವ ಪ್ರತಿಜ್ಞೆ ಮಾಡಿ ಬಂದ ಅರ್ಜುನ ಮೊದಲಿಗೆ ಪ್ರಹಾರ ಮಾಡಲು ಕರ್ಣನಿಗೇ ಅವಕಾಶ ಕೊಟ್ಟ, ತಾನೇ ಮೊದಲಿಗೆ ಪ್ರಹಾರ ಮಾಡಬೇಕಾಗಿತ್ತು. ಬಳಿಕವೂ ಕರ್ಣನ ಅಸ್ತ್ರಗಳಿಗೆ ಪ್ರತಿಯಾಗಿ ಅರ್ಜುನ ಅಸ್ತ್ರಪ್ರಯೋಗ ಮಾಡಿ ಆತ್ಮರಕ್ಷಣೆ ಮಾಡಿಕೊಂಡನೆ ಹೊರತು ಕರ್ಣನ ಮೇಲೆ ಆಕ್ರಮಣ ಮಾಡಲಿಲ್ಲ. ಶ್ಲೋಕ 12 ರಿಂದ 24ರವರೆಗೂ ಅರ್ಜುನ ಆತ್ಮರಕ್ಷಣೆ ಮಾಡಿಕೊಂಡಂತೇ ಕಂಡುಬಂದಿದೆ. ಕರ್ಣವಧೆಗಾಗಿ ಉಗ್ರವಾದ ಮಹಾ ಅಸ್ತ್ರವನ್ನು ಪ್ರಯೋಗಿಸುತ್ತಿಲ್ಲ. ಕರ್ಣನು ಪ್ರಯೋಗಿಸಿದ ಭಾರ್ಗವಾಸ್ತ್ರವು ಪರಶುರಾಮ ಉಪದೇಶಿಸಿದ ಬ್ರಹ್ಮಾಸ್ತ್ರ. ಅದಕ್ಕೆ ಪ್ರತಿಯಾಗಿ ಇನ್ನೊಂದು ಅಸ್ತ್ರವೆ ಇಲ್ಲದ್ದರಿಂದ ಅರ್ಜುನನು ಬ್ರಹ್ಮಾಸ್ತ್ರ ಪ್ರಯೋಗಿಸಲಿಲ್ಲ. ಇನ್ನು ಮುಂದೆಯೂ ಕರ್ಣನು ಬ್ರಹ್ಮಾಸ್ತ್ರಸಹಿತವಾದ ಸರ್ಪಾಸ್ತ್ರವನ್ನು ಪ್ರಯೋಗಿಸಿದಾಗ ಅರ್ಜುನ ಅದಕ್ಕೆ ಪ್ರತಿಯಾಗಿ ತಾನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಬಹುದಿತ್ತು. ಆದರೂ ಪ್ರಯೋಗಿಸುವುದಿಲ್ಲ. ಏಕೆಂದರೆ ಪರಶುರಾಮನ ಅನುಗ್ರಹದಿಂದ ಕರ್ಣನ ಅಸ್ತ್ರಪ್ರಯೋಗ ಬಹಳ ವೇಗವಾಗಿದೆ. ಅರ್ಜುನನಿಗೆ ಪ್ರತಿ ಬ್ರಹ್ಮಾಸ್ತ್ರ ಎಸೆಯಲು ವ್ಯವಧಾನವಿಲ್ಲ. ಹೀಗಾಗಿ ಅರ್ಜುನನು ತನ್ನ ಪ್ರತಿಜ್ಞೆಯನ್ನು ಈಡೇರಿಸುವಲ್ಲಿ ವಿಫಲನು ಆಗುವನೆಂದು ಭೀಮ ಕುಪಿತನಾದ. ಅದರಿಂದ ಭೀಮನು ಅರ್ಜುನನನ್ನು ರೊಚ್ಚಿಗೆಬ್ಬಿಸುವ ಸಲುವಾಗಿ, ನೀನು ಕರ್ಣನನ್ನು ಉಪೇಕ್ಷಿಸುತ್ತಿರುವೆ ಏಕೆ ಎಂದು ಆಕ್ಷೇಪಿಸುವುದು ಅಸಹಜವಲ್ಲ. ಕೃಷ್ಣನೂ ಹೇಳುತ್ತಾನೆ, ಧೈರ್ಯದಿಂದ ಕರ್ಣನನ್ನು ವಧಿಸು ಎಂದು. ಇಲ್ಲಿ ಕೃಷ್ಣ ಮತ್ತು ಭೀಮಸೇನರ ಮಾತುಗಳು ಅಸ್ವಾಭಾವಿಕವಲ್ಲ. ಪ್ರಕ್ಷಿಪ್ತವೆಂದು ಭಾವಿಸಲು ಕಾರಣವಿಲ್ಲ.

ಕಥಂ ನು ಪಾಪೋऽಯಮಪೇತಧರ್ಮಃ
ಸೂತಾತ್ಮಜಃ ಸಮರೇऽದ್ಯ ಪ್ರಸಹ್ಯ ।

ಪಾಂಚಾಲಾನಾಂ ಯೋಧಮುಖ್ಯಾನನೇಕಾನ್
ನಿಜಘ್ನಿವಾಂಸ್ತವ ಜಿಷ್ಣೋ ಸಮಕ್ಷಮ್ ॥೩೭॥

ಅರ್ಜುನ, ಧರ್ಮವನ್ನೊಲ್ಲದ ಪಾಪಿಯಾದ ಈ ಕರ್ಣ ನಿನ್ನ ಸಮಕ್ಷಮ ದಲ್ಲಿಯೇ ರಣದಲ್ಲಿ ಈಗ ಬಲವಾಗಿ ಪಾಂಚಾಲರ ಅನೇಕ ಮುಖ್ಯಯೋಧರನ್ನು ಹೇಗೆ ಕೊಂದಿದ್ದಾನೆ?

ಪೂರ್ವಂ ದೈತ್ಯೈರಜಿತಂ ಕಾಲಕೇಯೈಃ
ಸಾಕ್ಷಾತ್‌ಸ್ಥಾಣೋರ್ಬಾಹುಸಂಸ್ಪರ್ಶಮೇತ್ಯ ॥೩೮॥

ಕಥಂ ನು ತ್ವಾಂ ಸೂತಪುತ್ರಃ ಕಿರೀಟಿನ್
ಮಹೇಷುಭಿರ್ದಶಭಿರವಿಧ್ಯದಗ್ರೇ ॥೩೯॥

ಹಿಂದೆ ನೀನು ಸಾಕ್ಷಾತ್ ಕಿರಾತರೂಪಿ ಶಿವನ ಬಾಹುಸ್ಪರ್ಶಮಾಡಿ ಅವನ ಅನುಗ್ರಹದಿಂದ ಕಾಲಕೇಯದೈತ್ಯರಿಂದಲೂ ಗೆಲ್ಲಲಾಗದವನಾದೆ. ನಿನ್ನನ್ನು ಮೊದಲಿಗೇ ಕರ್ಣ ಹತ್ತು ಮಹಾಬಾಣಗಳಿಂದ ಹೇಗೆ ಹೊಡೆದ?

ತ್ವಯಾ ಕ್ಷಿಪ್ತಾಂಶ್ಚಾಗ್ರಸದ್‌ಬಾಣಸಂಘಾನ್
ಆಶ್ಚರ್ಯಮೇತತ್ ಪ್ರತಿಭಾತಿ ಮೇಽದ್ಯ ।
ಕೃಷ್ಣಾಪರಿಕ್ಲೇಶಮನುಸ್ಮರ ತ್ವಂ
ಯಥಾಬ್ರವೀತ್ ಷಂಢತಿಲಾನ್‌ಸ್ಮ ವಾಚಃ ॥೪೦॥

ನೀನೆಸೆದ ಬಾಣಗಳ ಸಮೂಹಗಳನ್ನು ಅವನು ಈಗ ನುಂಗಿದ್ದಾನೆ ಎಂದರೆ ಇದು ನಿಜವಾಗಿ ಆಶ್ಚರ್ಯ ಎಂದು ನನಗನಿಸುತ್ತಿದೆ. ದ್ರೌಪದಿಗೆ ಈತ ಕಟುನುಡಿ ಗಳಿಂದ ಕ್ಲೇಶ ಉಂಟುಮಾಡಿದ್ದನ್ನು ನೆನಪಿಸಿಕೊಳ್ಳು, ನಮ್ಮನ್ನು ಜೊಳ್ಳು ಎಳ್ಳಿನ ಕಾಳುಗಳು, ನಪುಂಸಕರು ಎಂದೂ ಅಪಹಾಸ್ಯದ ಮಾತುಗಳನ್ನು ಆಡಿದ್ದಾನೆ.

ವಾಚಃ ಸುತೀಕ್ಷ್ಣಾಸ್ಥಿಭಿದೋಽಮನೋಜ್ಞಾಃ
ಸೂತಾತ್ಮಜೋಽಯಂ ಗತಭೀರ್ದುರಾತ್ಮಾ ।

ಸಂಸ್ಮೃತ್ಯ ಸರ್ವಂ ತದಿಹಾದ್ಯ ಪಾಪಂ
ಜಹ್ಯಾಶು ಕರ್ಣಂ ಯುಧಿ ಸವ್ಯಸಾಚಿನ್ ॥೪೧॥

ಮೈಯೊಳಗಿನ ಎಲುಬುಗಳನ್ನು ಕೂಡ ಮುರಿಯುವಂತಹ ಮನಸಿಗೆ ಅಸಹ್ಯವಾದ ಮಾತುಗಳನ್ನು ಏನೂ ಭಯವಿಲ್ಲದೆ ದುರಾತ್ಮ ಕರ್ಣ ಆಡಿದ್ದಾನೆ. ಅದನ್ನು ಎಲ್ಲವನ್ನೂ ನೆನಪಿಸಿಕೊಂಡು ಈಗ ಪಾಪಿ ಕರ್ಣನನ್ನು ರಣದಲ್ಲಿ ಬೇಗನೆ ಕೊಲ್ಲು.

ಕಸ್ಮಾದುಪೇಕ್ಷಾಂ ಕುರುಷೇ ಕಿರೀಟಿ-
ನ್ನುಪೇಕ್ಷಿತುಂ ನಾಯಮಿಹಾದ್ಯ ಕಾಲಃ ॥೪೨॥

ಯಾವ ಕಾರಣಕ್ಕೆ ನೀನು ಈತನಲ್ಲಿ ಉಪೇಕ್ಷೆ ಮಾಡುತ್ತಿರುವೆ? ಉಪೇಕ್ಷಿಸಲು ಈಗ ಇದು ಕಾಲವಲ್ಲ.

ಯಯಾ ಧೃತ್ಯಾ ಸರ್ವಭೂತಾನ್ಯಜೈಷೀ-
ರ್ಗ್ಯಾಸಂ ದದದ್ ವಹ್ನಯೇ ಖಾಂಡವೇ ತ್ವಮ್ ।
ತಯಾ ಧೃತ್ಯಾ ಸೂತಪುತ್ರಂ ಜಹಿ ತ್ವಂ
ಅಹಂ ವೈನಂ ಗದಯಾ ಪೋಥಯಿಷ್ಯೇ ॥೪೩॥

ಯಾವ ಧೈರ್ಯದಿಂದ ಖಾಂಡವದಲ್ಲಿ ಅಗ್ನಿಗೆ ಅರಣ್ಯವನ್ನು ಆಹುತಿ ನೀಡುವಾಗ ಸುರಾಸುರರ ಸಮೇತ ಎಲ್ಲ ಜಂತುಗಳನ್ನೂ ನೀನು ಗೆದ್ದಿರುವೆಯೋ, ಆ ಧೈರ್ಯದಿಂದ ಕರ್ಣನನ್ನು ಕೊಲ್ಲು ಅಥವಾ ನಾನೇ ಅವನನ್ನು ಗದೆಯಿಂದ ಸಂಹರಿಸುತ್ತೇನೆ.

ಅಥಾಬ್ರವೀದ್ ವಾಸುದೇವೋऽಪಿ ಪಾರ್ಥಂ
ದೃಷ್ಟ್ವಾ ರಥೇಷೂನ್ ಪ್ರತಿಹನ್ಯಮಾನಾನ್ ।
ಅಮೀಮೃದತ್ ಸರ್ವಥಾ ತೇऽದ್ಯ ಕರ್ಣೋ
ಹ್ಯಸ್ತ್ರೈರಸ್ತ್ರಾಣಿ ಕಿಮಿದಂ ಕಿರೀಟಿನ್ ॥೪೪॥

ಶ್ರೀಕೃಷ್ಣನೂ ಅರ್ಜುನನ ರಥೇಷು ಎಂಬ ಬಾಣಗಳನ್ನೂ ಕೂಡ ಕರ್ಣನು ಕತ್ತರಿಸಿದ್ದನ್ನು ಕಂಡು ನುಡಿದ: ಅರ್ಜುನ, ನಿನ್ನ ಅಸ್ತ್ರಗಳನ್ನೆಲ್ಲವನ್ನೂ ಅಸ್ತ್ರಗಳಿಂದ ಕರ್ಣನು ಈಗ ನಾಶ ಮಾಡಿದ್ದಾನೆ. ಇದೇನು ಅರ್ಜುನ?

ಸ ವೀರ ಕಿಂ ಮುಹ್ಯಸಿ ನಾವಧೀಯಸೇ
ನದಂತ್ಯೇತೇ ಕುರವಃ ಸಂಪ್ರಹೃಷ್ಟಾಃ ।
ಕರ್ಣಂ ಪುರಸ್ಕೃತ್ಯ ವಿದುರ್ಹಿ ಸರ್ವೇ
ತ್ವದಸ್ತ್ರಮಸ್ತ್ರೈರ್ವಿನಿಪಾತ್ಯಮಾನಮ್ ॥೪೫॥

ವೀರನೆ, ನೀನು ಏಕೆ ಮೋಹಗೊಳ್ಳುವೆ? ಏಕೆ ಎಚ್ಚರ ತಪ್ಪುತ್ತಿರುವೆ? ಈ ಕೌರವರು ಅತಿ ಉತ್ಸಾಹದಿಂದ ಕರ್ಣನನ್ನು ಹುರಿದುಂಬಿಸಿ ಗರ್ಜನ ಮಾಡುತ್ತಿದ್ದಾರೆ. ನಿನ್ನ ಅಸ್ತ್ರವನ್ನು ಅವನು ಪ್ರತ್ಯಸ್ತ್ರಗಳಿಂದ ನಿಷ್ಕ್ರಿಯಗೊಳಿಸುವುದನ್ನು ಅವರು ಗಮನಿಸುತ್ತಿದ್ದಾರೆ.

ಯಯಾ ಧೃತ್ಯಾ ನಿಹತಂ ತಾಮಸಾಸ್ತ್ರಂ
ಯುಗೇ ಯುಗೇ ರಾಕ್ಷಸಾಶ್ಚಾಪಿ ಘೋರಾಃ ।
ದಂಭೋದ್ಭವಾಶ್ಚಾಸುರಾಶ್ಚಾಹವೇಷು
ತಯಾ ಧೃತ್ಯಾ ತ್ವಂ ಜಹಿ ಸೂತಪುತ್ರಮ್ ॥೪೬॥

ನರ–ನಾರಾಯಣಾವತಾರದಲ್ಲಿ ನೀನು ಯಾವ ಧೈರ್ಯದಿಂದ ಪ್ರತಿಯುಗದಲ್ಲಿ ರಾಕ್ಷಸರ ತಾಮಸಅಸ್ತ್ರಗಳನ್ನು ನಾಶಪಡಿಸಿರುವೆಯೋ, ಘೋರರಾಕ್ಷಸರನ್ನೂ, ದಂಭೋದ್ಭವರೆಂಬ ಅಸುರರನ್ನೂ ಯುದ್ಧಗಳಲ್ಲಿ ನಾಶಪಡಿಸಿರುವೆಯೋ ಆ ಧೈರ್ಯದಿಂದ ಕರ್ಣನನ್ನೂ ಕೊಲ್ಲು.

ದೇವಾಂಶಸಂಭೂತರಾದವರಿಗೆ ಮೂಲರೂಪದ ಎಲ್ಲ ಶಕ್ತಿ, ಸಾಮರ್ಥ್ಯ ವ್ಯಕ್ತವಿರುವುದಿಲ್ಲ. ಆದರೆ ಮೂಲರೂಪಸ್ಮರಣೆಯಿಂದ ಅದು ವ್ಯಕ್ತವಾಗುವುದು. ಅರ್ಜುನನು ಹಿಂದೆ ನರ. ಕೃಷ್ಣನು ನಾರಾಯಣ. ನಾರಾಯಣನಿಗೆ ಮೂಲರೂಪ ಮತ್ತು ಅವತಾರರೂಪಗಳಲ್ಲಿ ಏನೂ ವೈಲಕ್ಷಣ್ಯವಿರುವುದಿಲ್ಲ. 'ಪೂರ್ಣಮದಃ ಪೂರ್ಣಮಿದಂ' ಎಂದು ಶ್ರುತಿ ಹೇಳುತ್ತದೆ. ಬೇರೆ ದೇವತೆ ಗಳಿಗೆ ಮೂಲರೂಪದ ಸ್ಮರಣೆಯಿಂದ ಅದರ ಶಕ್ತಿ, ಸಾಮರ್ಥ್ಯಬರುವುದುಂಟು. ಅದಕ್ಕೆ ಕೃಷ್ಣ ಅರ್ಜುನನಿಗೆ ನರಾವೇಶ ಬರುವುದಕ್ಕಾಗಿ ನರನು ದಂಭೋದ್ಭವ ದಾನವರನ್ನು ನಿಗ್ರಹಿಸಿದ ವೃತ್ತಾಂತವನ್ನು ನೆನಪಿಸುತ್ತಾನೆ.

ಸಂಛಿಂಧಿ ಮೂರ್ಧಾನಮರೇಃ ಪ್ರಸಹ್ಯ ।
ವಜ್ರೇಣ ಶಕ್ರೋ ನಮುಚೇರಿವಾರೇಃ ॥೪೭॥

ಕರ್ಣನ ಶಿರಸ್ಸನ್ನು ಇಂದ್ರನು ವಜ್ರಾಯುಧದಿಂದ ಶತ್ರುವಾದ ನಮುಚಿ ದಾನವನ ಶಿರಸ್ಸನ್ನು ತರಿದಂತೆ, ಬಲವಾಗಿ ಕತ್ತರಿಸು.

ಕಿರಾತರೂಪೀ ಭಗವಾನ್ ಯಯಾ ಚ
ತ್ವಯಾ ಮಹತ್ಯಾ ಪರಿತೋಷಿತೋಽಭೂತ್ ।
ತಾಂ ತ್ವಂ ಧೃತಿಂ ವೀರ ಪುನರ್ಗೃಹೀತ್ವಾ
ಸಹಾನುಬಂಧಂ ಜಹಿ ಸೂತಪುತ್ರಮ್ ॥೪೮॥

ಕಿರಾತರೂಪಿಯಾದ ಭಗವಾನ್ ಶಿವನನ್ನು ಯಾವ ಮಹಾಧೈರ್ಯದಿಂದ ಹೊಡೆದು ಒಲಿಸಿಕೊಂಡೆಯೋ, ಆ ಧೈರ್ಯವನ್ನೇ ಪುನಃ ಅವಲಂಬಿಸಿ, ಪರಿವಾರದೊಂದಿಗೇ ಕರ್ಣನನ್ನು ಕೊಲ್ಲು.

ತತೋ ಮಹೀಂ ಸಾಗರಮೇಖಿಲಾಂ ತ್ವಂ
ಸಪತ್ತನಾಂ ಗ್ರಾಮವತೀಂ ಸಮೃದ್ಧಾಮ್ ।
ಪ್ರಯಚ್ಛ ರಾಜ್ಞೇ ನಿಹತಾರಿಸಂಘಾಂ
ಯಶಶ್ಚ ಪಾರ್ಥಾತುಲಮಾಪ್ನುಹಿ ತ್ವಮ್ ॥೪೯॥

ಸಮುದ್ರದಿಂದ ಸುತ್ತುವರಿದ, ಪಟ್ಟಣ ಗ್ರಾಮಗಳಿಂದ ಯುಕ್ತವಾದ ಸಮೃದ್ಧವಾದ ಇಡೀ ಭೂಮಿಯನ್ನು ಶತ್ರುಸಮೂಹ ವಧಪೂರ್ವಕವಾಗಿ ರಾಜಾ ಯುಧಿಷ್ಠಿರನಿಗೆ ನೀಡು, ಅನುಪಮವಾದ ಯಶಸ್ಸನ್ನು ಪಡೆ, ಪಾರ್ಥ!

ಸಂಜಯಃ

ಸ ಏವಮುಕ್ತೋಽತಿಬಲೋ ಮಹಾತ್ಮಾ
ಚಕಾರ ಬುದ್ಧಿಂ ಹಿ ವಧಾಯ ಸೌತೇಃ ॥೫೦॥

ಸಂಜಯನು ನುಡಿದ— ಹೀಗೆ ಭೀಮ ಮತ್ತು ಕೃಷ್ಣರು ಹೇಳಿದಾಗ, ಹಿಂದೆ ಬಲಿಷ್ಠನೆ ಆಗಿದ್ದವನು ಪುನಃ ಅತಿ ಬಲಿಷ್ಠನಾಗಿ, ಮಹಾತ್ಮ ಅರ್ಜುನನು ಸೌತಿಯ ವಧೆ ಮಾಡುವುದಾಗಿ ನಿರ್ಧಾರವನ್ನು ಕೈಗೊಂಡ.

'ಸೂತಸ್ಯ ಅಪತ್ಯಂ ಪುಮಾನ್ ಸೌತಿಃ' ಸೂತನು ಕರ್ಣನಿಗೆ ಸಾಕು ತಂದೆಯಾದ್ದರಿಂದ ಕರ್ಣನು ಸೂತಪುತ್ರನೆಂದೇ, ಸೂತನ ಅಪತ್ಯ ಎಂದೇ ಪ್ರಸಿದ್ಧ. ಅದರಿಂದ ಅವನು ಸೌತಿ ಎನಿಸಿದ್ದಾನೆ.

ಸಂಚೋದಿತೋ ಭೀಮಜನಾರ್ದನಾಭ್ಯಾಂ
ಸ್ಮೃತ್ವಾ ತದಾತ್ಮಾನಮವೇಕ್ಷ್ಯ ಸರ್ವಮ್ ।
ಇಹಾತ್ಮನಶ್ಚಾಗಮನೇ ವಿದಿತ್ವಾ
ಪ್ರಯೋಜನಂ ಕೇಶವಮಿತ್ಯುವಾಚ ॥೫೧॥

ಭೀಮ ಮತ್ತು ಕೃಷ್ಣರಿಂದ ಪ್ರೇರಿತನಾದ ಅರ್ಜುನನು ತನ್ನನ್ನು ನರಾವತಾರ ನೆಂದು ತಿಳಿದು ಭೂಮಿಯಲ್ಲಿ ತಾನು ಅವತರಿಸಿದುದರ ಪ್ರಯೋಜನವನ್ನೂ ಸ್ಮರಿಸಿ ಕೃಷ್ಣನಿಗೆ ಹೀಗೆ ಹೇಳಿದ.

ಪ್ರಾದುಷ್ಕರೋಮ್ಯೇಷ ಮಹಾಸ್ತ್ರಮುಗ್ರಂ
ಶಿವಾಯ ಲೋಕಸ್ಯ ವಧಾಯ ಸೌತೇಃ ।
ತನ್ಮೇऽನುಜಾನಾತು ಭವಾನ್ ಸುರಾಶ್ಚ
ಬ್ರಹ್ಮಾ ಭವೋ ಬ್ರಹ್ಮವಿದಶ್ಚ ಸರ್ವೇ ॥೫೨॥

ಕೃಷ್ಣ, ನಾನು ಕರ್ಣನ ವಧೆಗಾಗಿ, ಲೋಕದ ಒಳಿತಿಗಾಗಿ ಉಗ್ರವಾದ ಮಹಾಅಸ್ತ್ರವನ್ನು ಪ್ರಾದುರ್ಭಾವಗೊಳಿಸುತ್ತೇನೆ. ಅದಕ್ಕೆ ನೀನು ಅನುಜ್ಞೆ ನೀಡು. ದೇವತೆಗಳೂ ಬ್ರಹ್ಮ ರುದ್ರರೂ ಬ್ರಹ್ಮಜ್ಞಾನಿಗಳೂ ಎಲ್ಲರೂ ಅನುಮತಿ ನೀಡಲಿ.

ಇತ್ಯೂಚಿವಾನ್ ಬ್ರಾಹ್ಮಮಸಹ್ಯಮಸ್ತ್ರಂ
ಪ್ರಾದುಶ್ಚಕ್ರೇ ಮನಸಾ ಸಂವಿಧೇಯಮ್ ॥೫೩॥

ಅರ್ಜುನನು ಹೀಗೆ ಹೇಳಿ ಮನಸಿನಲ್ಲಿಯೇ ಅಸಹನೀಯವಾದ ಒಂದು ಬ್ರಹ್ಮಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದ.

ವೈಕರ್ತನೇನಾಪಿ ತಥಾಜಿಮಧ್ಯೇ
ಸಹಸ್ರಶೋ ಬಾಣಗಣಾ ವಿಸೃಷ್ಟಾಃ ।
ತೇ ಘೋಷಿಣಃ ಪಾಂಡವಮಭ್ಯುಪೇಯುಃ
ಪರ್ಜನ್ಯಮುಕ್ತಾ ಇವ ವಾರಿಧಾರಾಃ ॥೫೪॥

ಕರ್ಣನೂ 'ತಥಾ' ಹಾಗೆಯೇ, ಅಂದರೆ, ಅರ್ಜುನನಂತೆ ತಾನೂ ಬ್ರಹ್ಮಾಸ್ತ್ರವನ್ನು ಪ್ರಾದುರ್ಭಾವಗೊಳಿಸಿ ಪ್ರಯೋಗಿಸಿ, ರಣದಲ್ಲಿ ತಾನೂ ಸಾವಿರಾರು ಬಾಣಸಮೂಹಗಳನ್ನು ಎಸೆದ. ಮೋಡವು ಸುರಿಸುವ ನೀರಿನ ಧಾರೆಗಳಂತೆ ಅರ್ಜುನನ ಮೇಲೆ ಅವು ಶಬ್ದಮಾಡುತ್ತ ಎರಗಿದುವು.

ವಸ್ತುತಃ 27ನೇ ಶ್ಲೋಕದಲ್ಲಿ ಕರ್ಣನು ಪ್ರಯೋಗಿಸಿದ ಅಸ್ತ್ರವು ನಿಜವಾಗಿ 'ಬ್ರಹ್ಮಾಸ್ತ್ರ' ವಾಗಿರಲಿಲ್ಲ. ಪರಶುರಾಮರಲ್ಲಿ ವಿದ್ಯಾಭ್ಯಾಸ ಮಾಡುವಾಗ ಕರ್ಣ ತನ್ನನ್ನು ಬ್ರಾಹ್ಮಣನೆಂದು ಹೇಳಿಕೊಂಡರೂ ಒಮ್ಮೆ ಗುರು ಈತನ ತೊಡೆಯ ಮೇಲೆ ತಲೆಇಟ್ಟು ಮಲಗಿದಾಗ ಒಂದು ಕೀಟವು ಅವನ ತೊಡೆಯನ್ನು ಕೊರೆದು ರಕ್ತದ ಕೋಡಿಯನ್ನೇ ಹರಿಸಿತು. ಆದರೂ ಕರ್ಣ ಗುರುವಿಗೆ ನಿದ್ರಾಭಂಗ ವಾದೀತೆಂದು ಧೈರ್ಯದಿಂದ ಅದನ್ನು ಸಹಿಸಿಕೊಂಡ. 'ಇದು ಕ್ಷತ್ರಿಯಸ್ವಭಾವ. ಅದರಿಂದ 'ನೀನು ಬ್ರಾಹ್ಮಣನಲ್ಲ. ಆರು ನೀನು?' ಎಂದು ಕೇಳಿ ಕರ್ಣನಿಂದಲೇ ಆತ ಸೂತಪುತ್ರನೆಂದು ತಿಳಿದು ಕ್ಷತ್ರಿಯಸಂಸ್ಕಾರವಾಗಿಲ್ಲದ್ದರಿಂದ ಮುಂದೆ ನೀಡಬೇಕಾಗಿದ್ದ ಬ್ರಹ್ಮಾಸ್ತ್ರದ ಉಪದೇಶವನ್ನು ನೀಡಲಿಲ್ಲ.

ಯದ್ಯಪಿ ಶಾಂತಿಪರ್ವ (3.2)ದಲ್ಲಿ ಪರಶುರಾಮ ಕರ್ಣನಿಗೆ ಬ್ರಹ್ಮಾಸ್ತ್ರ ನೀಡಿದಂತೆ ಕಾಣುತ್ತದೆ. ಇಲ್ಲಿಯೆ ಕರ್ಣನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸು ತ್ತಿದ್ದುದೂ ಕಾಣುತ್ತದೆ. ಆದರೆ ಕರ್ಣ ಬ್ರಹ್ಮಾಸ್ತ್ರೋಪದೇಶಕ್ಕೆ ಯೋಗ್ಯನಾಗಿರ ಲಿಲ್ಲ. ಅದರಿಂದ 'ಬ್ರಹ್ಮ' ಎಂದರೆ ವೇದ. ಪಂಚಮವೇದ. ಮೊದಲಿಗೆ ಪರಶುರಾಮ ಉಪದೇಶಿಸಿದ್ದ ಅಸ್ತ್ರರೂಪವಾದ ವೇದಮಂತ್ರವೇ ಬ್ರಹ್ಮಾಸ್ತ್ರ. ಈ ಅರ್ಥದಲ್ಲಿ ಆಗ್ನೇಯ ವಾರುಣ ಮುಂತಾದ ಅಸ್ತ್ರಗಳೂ ಬ್ರಹ್ಮಾಸ್ತ್ರವೆ. ನಿಜವಾದ ಬ್ರಹ್ಮಾಸ್ತ್ರವೆಂದರೆ 'ಬ್ರಹ್ಮಶಿರೋಸ್ತ್ರ'. ಈ ಬ್ರಹ್ಮಾಸ್ತ್ರದ ಉಪದೇಶವಿರುತ್ತಿದ್ದರೆ ಕರ್ಣ ಯುದ್ಧದಲ್ಲಿ ಸಾಯುತ್ತಿರಲಿಲ್ಲ. ಬ್ರಹ್ಮಾಸ್ತ್ರದಿಂದ ತನ್ನನ್ನು ರಕ್ಷಿಸಿಕೊಂಡು ಬೇರೆಯವರನ್ನೇ ಸಾಯಿಸುತ್ತಿದ್ದ. ಇದನ್ನು ಶಾಂತಿಪರ್ವ (2.4)ದಲ್ಲಿ ನಾರದರು ಧರ್ಮರಾಜನಿಗೆ ಹೇಳುತ್ತಾರೆ—

ಕ್ಷತ್ರಂ ಸ್ವರ್ಗಂ ಕಥಂ ಗಚ್ಛೇತ್ ಶಸ್ತ್ರಪೂತಮಿತಿ ಪ್ರಭೋ ।
ಸಂಘರ್ಷ ಜನನಸ್ತಸ್ಮಾತ್ ಕನ್ಯಾಗರ್ಭೋ ವಿನಿರ್ಮಿತಃ ॥

ಕರ್ಣನು ಶಸ್ತ್ರಯುದ್ಧದಲ್ಲಿ ಪುನೀತನಾಗಿ ಮಡಿದು ಸ್ವರ್ಗಪಡೆಯಲಿ ಎಂದು ಹರಿ ಸಂಕಲ್ಪಿಸಿದ್ದುದರಿಂದ ಕ್ಷತ್ರಿಯಜಾತಿಯಲ್ಲಿಯೇ ಜನಿಸಿದ. ಆದರೆ ಅವಿವಾಹಿತಕನ್ಯೆಯಾದ ಕುಂತಿಯ ಗರ್ಭದಲ್ಲಿ ಅವನನ್ನು ಹುಟ್ಟಿಸಿ ಕ್ಷತ್ರಿಯ ಸಂಸ್ಕಾರವಿಲ್ಲದಂತೆ ಮಾಡಿ, ಬ್ರಹ್ಮಾಸ್ತ್ರ ಸಿಗದಂತೆ ಮಾಡಿ ಅರ್ಜುನನ ಶಸ್ತ್ರದಿಂದ

ಸ್ವರ್ಗ ಹೊಂದುವಂತೆ ಮಾಡಿದ್ದಾನೆ ಶ್ರೀಹರಿ. ಇದು ಲಕ್ಷಾಲಂಕಾರದಲ್ಲಿ ಸ್ಪಷ್ಟವಿದೆ.

ಮೇಲಿನ ಭಾರತಶ್ಲೋಕದಲ್ಲಿ 'ಕ್ಷತ್ರಂ' ಎಂದರೆ 'ಕ್ಷತ್ರಿಯಜಾತಿ ಯುದ್ಧದಿಂದ ಸ್ವರ್ಗಕ್ಕೆ ಹೋಗಬೇಕೆಂದೇ ಸಂಘರ್ಷಕಾರಿಯಾದ ಕರ್ಣ ಹುಟ್ಟಿದ' ಎಂದು ಹೇಳಿದಂತೆ ಮೇಲುನೋಟಕ್ಕೆ ಕಾಣಬಹುದು. ಆದರೆ 'ಕನ್ಯಾಗರ್ಭೋ ವಿನಿರ್ಮಿತಃ' ಕನ್ಯಾಪುತ್ರನಾಗಿ ಕರ್ಣ ಜನಿಸಿದ್ದು ಏಕೆ? ವಿವಾಹಿತ ಕನ್ಯೆಯಲ್ಲಿ ಹುಟ್ಟಿದ್ದರೂ ಆತ, ಕ್ಷತ್ರಿಯರಾಗಿ ಜನಿಸಿದ ಕೌರವ–ಪಾಂಡವರಲ್ಲಿ ಪರಸ್ಪರ ಸಂಘರ್ಷವನ್ನು ಉಂಟುಮಾಡುವ ಸಾಧ್ಯತೆ ಇತ್ತು ತಾನೆ? ಅದರಿಂದ 'ಕ್ಷತ್ರಂ' ಎಂದರೆ 'ಕ್ಷತ್ರಿಯ ಜಾತಿಯವನಾದ ಕರ್ಣ 'ಎಂದರ್ಥ. ಹೀಗಾಗಿ–

'ತದಸ್ಯ ಹತ್ವಾ ವಿರರಾಜ ಕರ್ಣೋ
ಮುಕ್ತ್ವಾ ಶರಾನ್ ಮೇಘ ಇವಾಂಬುಧಾರಾಃ'

ಎಂದು ಪ್ರಕ್ಷಿಪ್ತಶ್ಲೋಕವಿಟ್ಟುಕೊಂಡು 'ಅರ್ಜುನನು ದೇವತೆಗಳ ಅನುಮತಿ ಪಡೆದು ಪ್ರಯತ್ನಪೂರ್ವಕವಾಗಿ ಬಿಟ್ಟ ಅಮೋಘವಾದ ಬ್ರಹ್ಮಾಸ್ತ್ರವನ್ನು ಕೂಡ ಕರ್ಣನು ಸ್ವಲ್ಪವೂ ಶ್ರಮಪಡದೆ, ಸಾಧಾರಣ ಬಾಣಗಳಿಂದಲೇ 'ಧ್ವಂಸ' ಮಾಡುತ್ತಾನೆ' ಎಂದು ವಿಮರ್ಶಕರು ಆಕ್ಷೇಪಿಸಿ ಹೇಳುತ್ತಿರುವುದು ಸಂಗತವಲ್ಲ. ನಿಜವಾದ ಬ್ರಹ್ಮಾಸ್ತ್ರಕ್ಕೆ ಬ್ರಹ್ಮಾಸ್ತ್ರವೇ ಪ್ರತ್ಯಸ್ತ್ರ.

ಅರ್ಜುನನೂ ಕೂಡ ನಿಜವಾದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿರಲಿಲ್ಲ. ಆ ಅಸ್ತ್ರ ಪ್ರಪಂಚವನ್ನೇ ಸುಡುವಂಥದ್ದು. ಪ್ರಕೃತ ಅರ್ಜುನನು ಪ್ರಯೋಗಿಸಿದ ಬ್ರಹ್ಮಾಸ್ತ್ರ ಬಾಣಸಮೂಹಮಯ. ದಿಕ್ಕುದಿಕ್ಕುಗಳಲ್ಲಿ ಎಲ್ಲೆಡೆ ಬಾಣಗಳ ಮಳೆ ಸುರಿಸಿತಷ್ಟೆ. ಮತ್ತು ಬ್ರಹ್ಮಶಿರೋಸ್ತ್ರವನ್ನು ಅದನ್ನು ತಿಳಿಯದವನ ಮೇಲೆ, ಕರ್ಣನ ಮೇಲೆ ಪ್ರಯೋಗಿಸುವುದು ನಿಷಿದ್ಧವೂ ಆಗಿತ್ತು. ಅರ್ಜುನ ಹಿಂದೆ 'ಯೇ ನಾಸ್ತ್ರಜ್ಞಾಸ್ತಾನಹಂ ಹನ್ಮಿ ಶಸ್ತ್ರೈಃ' ಅಸ್ತ್ರಜ್ಞರಲ್ಲದವರನ್ನು ಶಸ್ತ್ರಗಳಿಂದಲೇ ಕೊಲ್ಲುವೆ. ಹೊರತು ಅಸ್ತ್ರದಿಂದ ಲೋಕವನ್ನು ಭಸ್ಮಮಾಡಲಾರೆ (67.43) ಎಂದು ಹೇಳಿದ್ದ.

ಸ ಭೀಮಸೇನಂ ಚ ಜನಾರ್ದನಂ ಚ
ಕಿರೀಟಿನಂ ಚಾಪ್ಯಮನುಷ್ಯಕರ್ಮಾ ।
ತ್ರಿಭಿಸ್ತ್ರಿಭಿರ್ಮಮಬಲೋ ನಿಹತ್ಯ
ನನಾದ ಘೋರಂ ಮಹತಾ ಸ್ವರೇಣ ॥೫೫॥

ಅಮಾನುಷ ಕರ್ಮವನ್ನು ಮಾಡುವ ಭೀಮಬಲನಾದ ಕರ್ಣನು ಭೀಮಸೇನನನ್ನೂ ಕೃಷ್ಣನನ್ನೂ ಅರ್ಜುನನನ್ನೂ ಮೂರು ಮೂರು ಬಾಣಗಳಿಂದ ಚೆನ್ನಾಗಿ ಹೊಡೆದು ಘೋರವಾಗಿ ದೊಡ್ಡ ಧ್ವನಿಯಿಂದ ಗರ್ಜಿಸಿದ.

ಸ ಕರ್ಣಬಾಣಾಭಿಹತಃ ಕಿರೀಟೀ
ಭೀಮಂ ತಥಾ ಪ್ರೇಕ್ಷ್ಯ ಜನಾರ್ದನಂ ಚ ।
ಅಮೃಷ್ಯಮಾಣಃ ಪುನರೇವ ಪಾರ್ಥಃ
ಶರಾನ್ ದಶಾಷ್ಟೌ ಚ ಸಮುದ್ಬಬರ್ಹ ॥೫೬॥

ಕರ್ಣನ ಬಾಣಗಳಿಂದ ಹೊಡೆಸಿಕೊಂಡ ಅರ್ಜುನನು, ಭೀಮನೂ ಕೃಷ್ಣನೂ ಹಾಗೇ ಹೊಡೆಸಿಕೊಂಡಿದ್ದನ್ನು ನೋಡಿ, ಸಹನೆಯಾಗದೆ ಪುನಃ ಹದಿನೆಂಟು ಬಾಣಗಳನ್ನು ಎಸೆದ. ಮನಸಿನಲ್ಲಿ ಪ್ರಾದುರ್ಭಾವಗೊಳಿಸಿದ್ದ ಬ್ರಹ್ಮಾಸ್ತ್ರವು ಹೀಗೆ ಕೇವಲ ಬಾಣಮಯವಾಗಿತ್ತು.

ಪುನಶ್ಚ ಕರ್ಣಂ ತ್ರಿಭಿರಷ್ಟಭಿಶ್ಚ
ದ್ವಾಭ್ಯಾಂ ಚತುರ್ಭಿರ್ದಶಭಿಶ್ಚ ವಿದ್ಧ್ವಾ ।
ಚತುಃಶತಾನ್ ದ್ವಿರದಾನ್ ಸಾಯುಧೀಯಾನ್
ಹತ್ವಾ ರಥಾನಷ್ಟಶತಂ ಜಘಾನ ॥೫೭॥

ಪುನಃ ಕರ್ಣನನ್ನು ಮೂರು ಎಂಟು ಎರಡು ನಾಲ್ಕು ಹತ್ತು ಬಾಣಗಳಿಂದ ಕ್ರಮವಾಗಿ ಹೊಡೆದು, ನಾನ್ನೂರು ಗಜಾರೋಹಿಗಳನ್ನು ಆಯುಧಸಮೇತವಾಗಿ ಸಂಹರಿಸಿದ, ಎಂಟು ನೂರು ರಥಿಕರನ್ನೂ ಸಂಹರಿಸಿದ, ಅರ್ಜುನ.

ಸಹಸ್ರಮಶ್ವಾಂಶ್ಚ ಪುನಶ್ಚ ಸಾದಿನ್
ಅಷ್ಟೌ ಸಹಸ್ರಾಣಿ ಚ ಪತ್ತಿವೀರಾನ್ ।
ಕರ್ಣಂ ಸಸೂತಂ ಸರಥಾಶ್ವಕೇತುಂ
ಅದೃಶ್ಯಮಂಜೋಗತಿಭಿಶ್ಚ ಚಕ್ರೇ ॥೫೮॥

ಒಂದು ಸಾವಿರ ಅಶ್ವಗಳನ್ನೂ ಎಂಟು ಸಾವಿರ ಆಶ್ವಾರೋಹಿಗಳನ್ನೂ ಪದಾತಿಗಳನ್ನೂ ಕರ್ಣನನ್ನೂ ಅವನ ಸಾರಥಿ ರಥ ಅಶ್ವ ಧ್ವಜಗಳನ್ನೂ ಬಾಣಗಳಿಂದ ಮುಚ್ಚಿ ಕಣ್ಣಿಗೆ ಕಾಣದಂತೆ ಮಾಡಿದ.

ತತೋಽಕ್ರೋಶನ್ ಕುರವೋ ವಧ್ಯಮಾನಾ
ಧನಂಜಯೇನಾಧಿರಥಿಂ ಸಮಂತಾತ್ ।
ಮುಂಚಾಭಿವಿದ್ಧ್ಯರ್ಜುನಮಾಶು ಕರ್ಣ
ಬಾಣೈಃ ಪುರಾ ಹಂತಿ ಕುರೂನ್ ಸಮಗ್ರಾನ್ ॥೫೯॥

ಆಗ ಕೌರವಸೈನಿಕರು ಒಂದೇ ಸವನೆ ಅರ್ಜುನನ ಬಾಣಗಳಿಂದ ಹೊಡೆಸಿ ಕೊಂಡು ಆಕ್ರಂದನ ಮಾಡಿದರು. ಎಲ್ಲ ಕಡೆಗಳಿಂದಲೂ, ಕರ್ಣನನ್ನು 'ಬಾಣಗಳನ್ನು ಎಸೆ, ಕರ್ಣ, ಅರ್ಜುನನ್ನು ಬೇಗನೆ ಬಾಣಗಳಿಂದ ಹೊಡೆ, ಎಲ್ಲ ಕೌರವಯೋಧರನ್ನು ಅರ್ಜುನನು ಕೊಲ್ಲುವುದಕ್ಕೆ ಮೊದಲೇ ಅವನನ್ನು ಬಾಣಗಳಿಂದ ಹೊಡೆ' ಎಂದು ಯೋಧರು ಕೂಗಿಕೊಂಡರು.

ಸ ಚೋದಿತಃ ಸರ್ವಯತ್ನೇನ ಕರ್ಣೋ
ಮುಮೋಚ ಬಾಣಾನ್ ಸುಬಹೂನಭೀಕ್ಷ್ಣಮ್ ।
ತೇ ಪಾಂಡುಪಾಂಚಾಲಗಣಾನ್ನಿಜಘ್ನು
ರ್ಮರ್ಮಚ್ಛಿದಃ ಶೋಣಿತಮಾಂಸದಿಗ್ಧಾಃ ॥೬೦॥

ಯೋಧರು ಹೀಗೆ ಹೇಳಿದಾಗ ಕರ್ಣನು ಸರ್ವಪ್ರಯತ್ನದಿಂದ ಒಂದೇ ಸವನೆ ಬಹು ಬಾಣಗಳನ್ನು ಎಸೆದ. ಆ ಬಾಣಗಳು ಪಾಂಡವಪಾಂಚಾಲಸೈನ್ಯಗಳನ್ನು ಭೇದಿಸಿದುವು. ಮರ್ಮಗಳನ್ನು ಭೇದಿಸಿದುವು. ರಕ್ತ-ಮಾಂಸಗಳಲ್ಲಿ ಅದ್ದಿ ಹೋದುವು.

ತಾವುತ್ತಮೌ ಸರ್ವಧನುರ್ಧರಾಣಾಂ
ಮಹಾಬಲೌ ಸರ್ವಸಪತ್ನಸಾಹೌ ।
ನಿಜಘ್ನತುಶ್ಚಾಹಿತಸೈನ್ಯಮುಗ್ರಾ-
ವನ್ಯೋನ್ಯಮಪ್ಯಸ್ತ್ರವಿದೌ ಮಹಾಸ್ತ್ರೈಃ ॥೬೧॥

ಕರ್ಣಾರ್ಜುನರು ಎಲ್ಲ ಧನುರ್ಧಾರಿಗಳಲ್ಲಿ ಉತ್ತಮರು ಮಹಾಬಲಿಗಳು ಎಲ್ಲ ಶತ್ರುಗಳನ್ನು ಮಣಿಸುವವರು ಉಗ್ರರು ಅಸ್ತ್ರಜ್ಞರು, ಮಹಾಅಸ್ತ್ರಗಳಿಂದ ಶತ್ರುಸೈನ್ಯವನ್ನು ಹೊಡೆದರು. ತಾವೂ ಅನ್ಯೋನ್ಯವಾಗಿ ಹೊಡೆದುಕೊಂಡರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಾರ್ಜುನಯುದ್ಧೇ ಪಂಚಾಶೀತಿತಮೋಽಧ್ಯಾಯಃ ॥೮೫॥

ಎಂಬತ್ತಾರನೆಯ ಅಧ್ಯಾಯಃ

ಪ್ರೇಕ್ಷಕನಾಗಿ ರಣರಂಗಕ್ಕೆ ಯುಧಿಷ್ಠಿರನ ಆಗಮನ.
ಅರ್ಜುನ ಕುರುಸೈನ್ಯವನ್ನು ಹೊಡೆದೋಡಿಸುತ್ತಾನೆ.

ಸಂಜಯಃ

ಅಥೋಪಯಾತಸ್ತ್ವರಿತೋ ದಿದೃಕ್ಷು-
ರ್ಮಂತ್ರೌಷಧಾಭ್ಯಾಂ ವಿರುಜೋ ವಿಶಲ್ಯಃ ।
ಕೃತಃ ಸುಹೃದ್ಭಿರ್ಭಿಷಜಾಂ ವರಿಷ್ಠೈ-
ರ್ಯುಧಿಷ್ಠಿರಸ್ತತ್ರ ಸುವರ್ಣವರ್ಮಾ ॥೧॥

ಸಂಜಯ ನುಡಿದ– ಯುಧಿಷ್ಠಿರನು ಪ್ರೀತಿಪಾತ್ರರಾದ ಶ್ರೇಷ್ಠವೈದ್ಯರಿಂದ ಮೈಗೆ ನಾಟಿದ್ದ ಶಸ್ತ್ರವನ್ನು ತೆಗೆಸಿಕೊಂಡು, ಮಂತ್ರ ಮತ್ತು ಔಷಧಗಳಿಂದ ನೋವನ್ನು ನಿವಾರಿಸಿಕೊಂಡು, ಬಂಗಾರದ ಕವಚವನ್ನು ಧರಿಸಿ ಪ್ರೇಕ್ಷಕನಾಗಿ ರಣರಂಗಕ್ಕೆ ಬೇಗನೆ ಬಂದ.

ತತ್ರೋಪಯಾತಂ ಯುಧಿ ಧರ್ಮರಾಜಂ
ದೃಷ್ಟ್ವಾ ಮುದಾ ಸರ್ವಭೂತಾನ್ಯನಂದನ್ ।
ರಾಹೋರ್ವಿಮುಕ್ತಂ ವಿಮಲಂ ಸಮಗ್ರಂ
ಚಂದ್ರಂ ಯಥೈವಾಭ್ಯುದಿತಂ ತಥೈವ ॥೨॥

ರಣರಂಗದಲ್ಲಿ ಬಂದು ಉಪಸ್ಥಿತನಾದ ಧರ್ಮರಾಜನನ್ನು ಕಂಡು ಯೋಧರೂ ರಾಹುವಿನಿಂದ ಮುಕ್ತನಾದ ನಿರ್ಮಲನಾದ ಪೂರ್ಣಚಂದ್ರನು ಉದಿಸಿದಾಗ ಜನರು ನೋಡಿ ಆನಂದಿಸುವಂತೆ ಆನಂದಪಟ್ಟರು.

ದೃಷ್ಟ್ವಾಜಿಮುಖ್ಯಾವಥ ಯುಧ್ಯಮಾನೌ
ದಿದೃಕ್ಷವಃ ಶೂರವರಾವರಿಘ್ನೌ ।
ಕರ್ಣಂ ಚ ಪಾರ್ಥಂ ಚ ನಿಯಮ್ಯ ವಾಹಾನ್
ಖಸ್ಥಾ ಮಹೀಸ್ಥಾಶ್ಚ ಜನಾ ವತಸ್ಥುಃ ॥೩॥

ರಣದಲ್ಲಿ ಮುಖ್ಯರಾದ ಶತ್ರುನಾಶಕರಾದ ಶ್ರೇಷ್ಠಶೂರರಾದ ಕರ್ಣ ಮತ್ತು ಅರ್ಜುನರು ನಿಂತುದನ್ನು ನೋಡಿ, ಅವರು ಹೋರಾಡುವುದನ್ನು ನೋಡಲು

ಬಯಸಿದ ಸ್ವರ್ಗವಾಸಿಗಳು, ಭೂಲೋಕವಾಸಿಗಳು ತಮ್ಮ ವಾಹನಗಳನ್ನು ನಿಲ್ಲಿಸಿ ತಾವೂ ನಿಂತರು.

ಸ ಕಾರ್ಮುಕಜ್ಯಾತಳಸನ್ನಿಪಾತಃ
ಸುಮುಕ್ತಬಾಣಸ್ತುಮುಲೋ ಬಭೂವ ।
ಘ್ನತೋಸ್ತಥಾನ್ಯೋನ್ಯಮಿಷುಪ್ರವೈಕೈ
ರ್ಧನಂಜಯಸ್ಯಾಧಿರಥೇಶ್ಚ ರಾಜನ್ ॥೪॥

ರಾಜನೆ, ಅರ್ಜುನನಿಗೂ ಕರ್ಣನಿಗೂ ಬಿಲ್ಲು ಹೆದೆ ಹಸ್ತ ತಲಗಳನ್ನು ಸೇರಿಸಿ ಬಾಣಪ್ರಯೋಗ ಮಾಡುವ ಈ ಯುದ್ಧವು ಇದು, ಉತ್ತಮಬಾಣಗಳಿಂದ ಅನ್ಯೋನ್ಯ ವಧ ಮಾಡುವ ಯುದ್ಧವಾದ್ದರಿಂದ ಬಹಳ ದೊಡ್ಡ ಯುದ್ಧವಾಯಿತು.

ಪ್ರಾಚ್ಛಾದಯಾಮಾಸ ತತಃ ಪೃಷತ್ಕೈಃ
ಸುಘೋಷಮಾಸ್ಫೋಟ್ಯ ಚ ಗಾಂಡಿವಜ್ಯಾಮ್ ।
ತಸ್ಮಿನ್ ಕ್ಷಣೇ ಸೂತಪುತ್ರಸ್ತು ಪಾರ್ಥಂ
ಸಮಾಚಿನೋತ್ ಕ್ಷುದ್ರಕಾಣಾಂ ಶತೇನ ॥೫॥

ಅರ್ಜುನನು ಗಾಂಡಿವದ ಹೆದೆಯನ್ನು ದೊಡ್ಡಶಬ್ದದೊಂದಿಗೆ ಠೇಂಕರಿಸಿ ಬಾಣಗಳಿಂದ ಕರ್ಣನನ್ನು ಆಚ್ಛಾದಿಸಿದ. ಅದೇ ಕ್ಷಣದಲ್ಲಿ ಕರ್ಣನು ಅರ್ಜುನನನ್ನು ನೂರು ಕ್ಷುದ್ರಕಬಾಣಗಳಿಂದ ಪ್ರಹರಿಸಿದ.

ನಿರ್ಮುಕ್ತಸರ್ಪಪ್ರತಿಮೈಶ್ಚ ತೀಕ್ಷ್ಣೈಃ
ತೈಲಪ್ರಧೌತೈಃ ಖಗಪತ್ರವಾಜೈಃ ।
ಷಷ್ಟ್ಯಾ ನಾರಾಚೈರ್ವಾಸುದೇವಂ ಬಿಭೇದ
ತದಂತರೇ ಸ ತ್ವರನ್ ಸೋಮಕಾಂಶ್ಚ ॥೬॥

ಪೊರೆಬಿಟ್ಟ ಹಾವಿನಂತಿರುವ, ತೀಕ್ಷ್ಣವಾದ, ತೈಲದಿಂದ ಹದಮಾಡಿದ ಹದ್ದಿನ ರೆಕ್ಕೆಗಳು ಪುಕ್ಕವಾಗಿರುವ ಅರವತ್ತು ನಾರಾಚಬಾಣಗಳಿಂದ ಕರ್ಣನು ಕೃಷ್ಣನನ್ನೂ ಹೊಡೆದ. ಅದೇ ಸಮಯದಲ್ಲಿ ಅವನು ವೇಗದಿಂದ ಸೋಮಕರನ್ನೂ ಹೊಡೆದ.

ಎಂಬತ್ತಾರನೆಯ ಅಧ್ಯಾಯಃ

ಪ್ರೇಕ್ಷಕನಾಗಿ ರಣರಂಗಕ್ಕೆ ಯುಧಿಷ್ಠಿರನ ಆಗಮನ.
ಅರ್ಜುನ ಕುರುಸೈನ್ಯವನ್ನು ಹೊಡೆದೋಡಿಸುತ್ತಾನೆ.

ಸಂಜಯಃ

ಅಥೋಪಯಾತಸ್ತ್ವರಿತೋ ದಿದೃಕ್ಷು-
ರ್ಮಂತ್ರೌಷಧಾಭ್ಯಾಂ ವಿರುಜೋ ವಿಶಲ್ಯಃ ।
ಕೃತಃ ಸುಹೃದ್ಭಿರ್ಭಿಷಜಾಂ ವರಿಷ್ಠೈ-
ರ್ಯುಧಿಷ್ಠಿರಸ್ತತ್ರ ಸುವರ್ಣವರ್ಮಾ ॥೧॥

ಸಂಜಯ ನುಡಿದ– ಯುಧಿಷ್ಠಿರನು ಪ್ರೀತಿಪಾತ್ರರಾದ ಶ್ರೇಷ್ಠವೈದ್ಯರಿಂದ ಮೈಗೆ ನಾಟಿದ್ದ ಶಸ್ತ್ರವನ್ನು ತೆಗೆಸಿಕೊಂಡು, ಮಂತ್ರ ಮತ್ತು ಔಷಧಗಳಿಂದ ನೋವನ್ನು ನಿವಾರಿಸಿಕೊಂಡು, ಬಂಗಾರದ ಕವಚವನ್ನು ಧರಿಸಿ ಪ್ರೇಕ್ಷಕನಾಗಿ ರಣರಂಗಕ್ಕೆ ಬೇಗನೆ ಬಂದ.

ತತ್ರೋಪಯಾತಂ ಯುಧಿ ಧರ್ಮರಾಜಂ
ದೃಷ್ಟ್ವಾ ಮುದಾ ಸರ್ವಭೂತಾನ್ಯನಂದನ್ ।
ರಾಹೋರ್ವಿಮುಕ್ತಂ ವಿಮಲಂ ಸಮಗ್ರಂ
ಚಂದ್ರಂ ಯಥೈವಾಭ್ಯುದಿತಂ ತಥೈವ ॥೨॥

ರಣರಂಗದಲ್ಲಿ ಬಂದು ಉಪಸ್ಥಿತನಾದ ಧರ್ಮರಾಜನನ್ನು ಕಂಡು ಯೋಧರೂ ರಾಹುವಿನಿಂದ ಮುಕ್ತನಾದ ನಿರ್ಮಲನಾದ ಪೂರ್ಣಚಂದ್ರನು ಉದಿಸಿದಾಗ ಜನರು ನೋಡಿ ಆನಂದಿಸುವಂತೆ ಆನಂದಪಟ್ಟರು.

ದೃಷ್ಟ್ವಾಜಿಮುಖ್ಯಾವಥ ಯುಧ್ಯಮಾನೌ
ದಿದೃಕ್ಷವಃ ಶೂರವರಾವರಿಘ್ನೌ ।
ಕರ್ಣಂ ಚ ಪಾರ್ಥಂ ಚ ನಿಯಮ್ಯ ವಾಹಾನ್
ಖಸ್ಥಾ ಮಹೀಸ್ಥಾಶ್ಚ ಜನಾ ವತಸ್ಥುಃ ॥೩॥

ರಣದಲ್ಲಿ ಮುಖ್ಯರಾದ ಶತ್ರುನಾಶಕರಾದ ಶ್ರೇಷ್ಠಶೂರರಾದ ಕರ್ಣ ಮತ್ತು ಅರ್ಜುನರು ನಿಂತುದನ್ನು ನೋಡಿ, ಅವರು ಹೋರಾಡುವುದನ್ನು ನೋಡಲು

ಬಯಸಿದ ಸ್ವರ್ಗವಾಸಿಗಳು, ಭೂಲೋಕವಾಸಿಗಳು ತಮ್ಮ ವಾಹನಗಳನ್ನು ನಿಲ್ಲಿಸಿ ತಾವೂ ನಿಂತರು.

ಸ ಕಾರ್ಮುಕಜ್ಯಾತಳಸನ್ನಿಪಾತಃ
ಸುಮುಕ್ತಬಾಣಸ್ತುಮುಲೋ ಬಭೂವ ।
ಘ್ನತೋಸ್ತಥಾನ್ಯೋನ್ಯಮಿಷುಪ್ರವೈಕೈ
ರ್ಧನಂಜಯಸ್ಯಾಧಿರಥೇಶ್ಚ ರಾಜನ್ ॥೪॥

ರಾಜನೆ, ಅರ್ಜುನನಿಗೂ ಕರ್ಣನಿಗೂ ಬಿಲ್ಲು ಹೆದೆ ಹಸ್ತ ತಲಗಳನ್ನು ಸೇರಿಸಿ ಬಾಣಪ್ರಯೋಗ ಮಾಡುವ ಈ ಯುದ್ಧವು ಇದು, ಉತ್ತಮಬಾಣಗಳಿಂದ ಅನ್ಯೋನ್ಯ ವಧ ಮಾಡುವ ಯುದ್ಧವಾದ್ದರಿಂದ ಬಹಳ ದೊಡ್ಡ ಯುದ್ಧವಾಯಿತು.

ಪ್ರಾಚ್ಛಾದಯಾಮಾಸ ತತಃ ಪೃಷತ್ಕೈಃ
ಸುಘೋಷಮಾಸ್ಫೋಟ್ಯ ಚ ಗಾಂಡಿವಜ್ಯಾಮ್ ।
ತಸ್ಮಿನ್ ಕ್ಷಣೇ ಸೂತಪುತ್ರಸ್ತು ಪಾರ್ಥಂ
ಸಮಾಚಿನೋತ್ ಕ್ಷುದ್ರಕಾಣಾಂ ಶತೇನ ॥೫॥

ಅರ್ಜುನನು ಗಾಂಡಿವದ ಹೆದೆಯನ್ನು ದೊಡ್ಡಶಬ್ದದೊಂದಿಗೆ ಠೇಂಕರಿಸಿ ಬಾಣಗಳಿಂದ ಕರ್ಣನನ್ನು ಆಚ್ಛಾದಿಸಿದ. ಅದೇ ಕ್ಷಣದಲ್ಲಿ ಕರ್ಣನು ಅರ್ಜುನನನ್ನು ನೂರು ಕ್ಷುದ್ರಕಬಾಣಗಳಿಂದ ಪ್ರಹರಿಸಿದ.

ನಿರ್ಮುಕ್ತಸರ್ಪಪ್ರತಿಮೈಶ್ಚ ತೀಕ್ಷ್ಣೈಃ
ತೈಲಪ್ರಧೌತೈಃ ಖಗಪತ್ರವಾಜೈಃ ।
ಷಷ್ಟ್ಯಾ ನಾರಾಚೈರ್ವಾಸುದೇವಂ ಬಿಭೇದ
ತದಂತರೇ ಸ ತ್ವರನ್ ಸೋಮಕಾಂಶ್ಚ ॥೬॥

ಪೊರೆಬಿಟ್ಟ ಹಾವಿನಂತಿರುವ, ತೀಕ್ಷ್ಣವಾದ, ತೈಲದಿಂದ ಹದಮಾಡಿದ ಹದ್ದಿನ ರೆಕ್ಕೆಗಳು ಪುಕ್ಕವಾಗಿರುವ ಅರವತ್ತು ನಾರಾಚಬಾಣಗಳಿಂದ ಕರ್ಣನು ಕೃಷ್ಣನನ್ನೂ ಹೊಡೆದ. ಅದೇ ಸಮಯದಲ್ಲಿ ಅವನು ವೇಗದಿಂದ ಸೋಮಕರನ್ನೂ ಹೊಡೆದ.

ಪ್ರಾಚ್ಛಾದಯಂಸ್ತೇ ನಿಶಿತೈಃ ಪೃಷತ್ಕೈ
ರ್ಜೀಮೂತಸಂಘಾ ನಭಸೀವ ಸೂರ್ಯಮ್ ।
ಆಗಚ್ಛತಸ್ತಾನ್ ವಿಶಿಖೈರನೇಕೈ-
ರ್ವ್ಯಷ್ಟಂಭಯತ್ ಸೂತಪುತ್ರಃ ಕೃತಾಸ್ತ್ರಃ ॥೭॥

ಸೋಮಕರು ಕರ್ಣನನ್ನು ಮೋಡಸಮೂಹಗಳು ಆಕಾಶದಲ್ಲಿ ಸೂರ್ಯನನ್ನು ಆಚ್ಛಾದಿಸುವಂತೆ, ಬಾಣಗಳಿಂದ ಆಚ್ಛಾದಿಸಿದರು. ಅಸ್ತ್ರಜ್ಞನಾದ ಕರ್ಣನು ತನ್ನ ಮೇಲೆ ಬೀಳುವ ಬಾಣಗಳನ್ನು ಅನೇಕ ಬಾಣಗಳಿಂದ ತಡೆದ.

ತೈರಸ್ತಮಸ್ತ್ರಂ ವಿನಿಹತ್ಯ ಸರ್ವಂ
ಜಘಾನ ತೇಷಾಂ ರಥವಾಜಿನಾಗಾನ್ ।
ತಥಾ ತು ಸೈನ್ಯಪ್ರವರಾಂಶ್ಚ ರಾಜ-
ನ್ನಭ್ಯರ್ದಯನ್ ಮಾರ್ಗಣೈಃ ಸೂತಪುತ್ರಃ ॥೮॥

ಅವರು ಎಸೆದ ಅಸ್ತ್ರವನ್ನು ಎಲ್ಲವನ್ನೂ ಕರ್ಣನು ನಾಶಗೊಳಿಸಿ ಅವರ ರಥ ಅಶ್ವ ಗಜಗಳನ್ನೂ ಸಂಹರಿಸಿದ. ರಾಜನೆ, ಅವನು ಸೈನ್ಯದಲ್ಲಿ ಮುಖ್ಯರಾದವರನ್ನೂ ಬಾಣಗಳಿಂದ ಪೀಡಿಸಿದ.

ತೇ ಭಿನ್ನದೇಹಾ ವ್ಯಸವೋ ನಿಪೇತುಃ
ಕರ್ಣೇಷುಭಿರ್ಭೂಮಿತಳೇ ಸ್ತನಂತಃ ।
ಕ್ರುದ್ಧೇನ ಸಿಂಹೇನ ಯಥಾ ಶ್ವಯೂಥ್ಯಾ
ಮಹಾಬಲಾ ಭೀಮಬಲೇನ ತದ್ವತ್ ॥೯॥

ಅವರು ಕರ್ಣನ ಬಾಣಗಳಿಂದ ಶರೀರದಲ್ಲಿ ಗಾಯಹೊಂದಿ ಕೂಗಿ ಭೂತಲದಲ್ಲಿ ಮಹಾಬಲವುಳ್ಳ ಶ್ವಾನಸಮೂಹಗಳು ಭೀಮಬಲ ಉಳ್ಳ ಸಿಂಹದಿಂದ ಸತ್ತು ಬೀಳುವಂತೆ ಸತ್ತುಬಿದ್ದರು,

ಪುನಶ್ಚ ಪಾಂಚಾಲವರಾಸ್ತಥಾನ್ಯೇ
ತದಂತರೇ ಕರ್ಣಧನಂಜಯಾಭ್ಯಾಮ್ ।

ಪ್ರಸ್ಕಂದಿನೋ ಬಲಿನಃ ಸಾಧುಮುಕ್ಥೈಃ
ಕರ್ಣೇನ ಬಾಣೈರ್ನಿಹತಾಃ ಪ್ರಸಹ್ಯ ॥೧೦॥

ಕರ್ಣವಧಕ್ಕಾಗಿ, ಮತ್ತು ಅರ್ಜುನರಕ್ಷಣೆಗಾಗಿ ಬಂದ ಬಲಿಷ್ಠರಾದ ಶತ್ರುತಾಪಕರಾದ ಪಾಂಚಾಲಮುಖ್ಯರು ಮತ್ತು ಬೇರೆ ವೀರರೂ ಕರ್ಣನು ಚೆನ್ನಾಗಿ ಪ್ರಯೋಗಿಸಿದ ಬಾಣಗಳಿಂದ ಬಲವಾಗಿ ಹೊಡೆಯಲ್ಪಟ್ಟರು.

ಜಯಂ ತು ಮತ್ವಾ ವಿಪುಲಂ ತ್ವದೀಯಾ-
ಸ್ತಳಾನ್ನಿಜಘ್ನುಃ ಸಿಂಹನಾದಾಂಶ್ಚ ನೇದುಃ ॥೧೧॥

ಆಗ ಜಯ ಪೂರ್ತಿಯಾಗಿ ತಮ್ಮದೇ ಎಂದು ನಿಶ್ಚಯಮಾಡಿಕೊಂಡು ನಿನ್ನವರು ಕೈಚಪ್ಪಾಳೆ ಹೊಡೆದರು. ಸಿಂಹನಾದಗಳನ್ನು ಮಾಡಿದರು.

ತತೋ ಧನುರ್ಜ್ಯಾಮವಧಮ್ಯ ಶೀಘ್ರಂ
ಶರಾನಸ್ತಾನಾಧಿರಥೇರ್ವಿಧಮ್ಯ ।
ಸುಸಂರಬ್ಧಃ ಕರ್ಣಶರಕ್ಷತಾಂಗೋ
ರಣೇ ಪಾರ್ಥಃ ಕೌರವಾನ್ ಪ್ರತ್ಯಗೃಹ್ಣಾತ್ ॥೧೨॥

ಆಗ ಅರ್ಜುನನು ಕರ್ಣನ ಬಾಣಗಳಿಂದ ಮೈಗಾಯ ಮಾಡಿಕೊಂಡಿದ್ದರೂ ಬಿಲ್ಲಿನ ಹಗ್ಗವನ್ನು ತೀಡಿ ಬೇಗನೆ, ಕರ್ಣನೆಸೆದ ಬಾಣಗಳನ್ನು ನಾಶಪಡಿಸಿ, ಬಲು ಕೋಪದಿಂದ ರಣದಲ್ಲಿ ಕೌರವರನ್ನು ತನ್ನ ನಿಯಂತ್ರಣಕ್ಕೆ ತಂದುಕೊಂಡ.

ಜ್ಯಾಂ ಚಾನುಮೃಜ್ಯಾಭ್ಯಹನತ್ ತಳತ್ರೇ
ಬಾಣಾಂಧಕಾರಂ ತ್ವಕರೋತ್ ಕ್ಷಣೇನ ।
ಶಲ್ಯಂ ಚ ಕರ್ಣಂ ಚ ಕುರೂಂಶ್ಚ ಸರ್ವಾನ್
ಬಾಣೈರವಿಧ್ಯದ್ಯುಗಪತ್ ಕಿರೀಟೀ ॥೧೩॥

ಅರ್ಜುನನು ಬಿಲ್ಲಿನ ಹೆದೆಯನ್ನು ತೀಡಿ ಕೈಚೀಲದ ಮೇಲೆ ಹೊಡೆದು ಕ್ಷಣದಲ್ಲಿ ಬಾಣಗಳಿಂದ ಅಂಧಕಾರ ಉಂಟುಮಾಡಿದ. ಶಲ್ಯ, ಕರ್ಣರನ್ನು ಮತ್ತು ಎಲ್ಲ ಕೌರವ ಯೋಧರನ್ನೂ ಒಮ್ಮೆಲೇ ಬಾಣಗಳಿಂದ ಹೊಡೆದ.

ನ ಪಕ್ಷಿಣಃ ಸಂಪತಂತ್ಯಂತರಿಕ್ಷೇ
ತದಾ ಮಹಾಸ್ತ್ರೇಣ ಕೃತೇಂಧಕಾರೇ ॥೧೪॥

ಮಹಾ ಅಸ್ತ್ರದಿಂದ ಅಂಧಕಾರವನ್ನು ಅರ್ಜುನನು ಸೃಷ್ಟಿ ಮಾಡಿದ್ದರಿಂದ ಆಕಾಶದಲ್ಲಿ ಪಕ್ಷಿಗಳು ಆಗ ಹಾರಾಡುತ್ತಿರಲಿಲ್ಲ.

ಶಲ್ಯಂ ಚ ಪಾರ್ಥೋ ದಶಭಿಃ ಪೃಷತ್ಕೈಃ
ಭೃಶಂ ತನುತ್ರೇ ಪ್ರಹಸನ್ನವಿಧ್ಯತ್ ।
ತತಃ ಕರ್ಣಂ ದ್ವಾದಶಭಿಃ ಸುಮುಕ್ಷೈ-
ರ್ವಿದ್ಧ್ವಾ ಪುನಃ ಸಪ್ತಭಿರಭ್ಯವಿಧ್ಯತ್ ॥೧೫॥

ಶಲ್ಯನನ್ನು ಕೂಡ ಅರ್ಜುನನು ನಗುತ್ತ ಹತ್ತು ಬಾಣಗಳಿಂದ ಕವಚದಲ್ಲಿ ಚೆನ್ನಾಗಿ ಪ್ರಹಾರ ಮಾಡಿದ. ಚೆನ್ನಾಗಿ ಬಾಣವೆಸೆದು ಕರ್ಣನನ್ನು ಹನ್ನೆರಡು ಬಾಣಗಳಿಂದ ಹೊಡೆದು ತಿರುಗಿ ಏಳು ಬಾಣಗಳಿಂದಲೂ ಹೊಡೆದ.

ಸ ಪಾರ್ಥಬಾಣಾಸನವೇಗನುನ್ನೈ-
ರ್ದೃಢಾಹತಃ ಪತ್ರಿಭಿರುಗ್ರವೇಗೈಃ ।
ವಿಭಿನ್ನಗಾತ್ರಃ ಕ್ಷತಜೋಕ್ಷಿತಾಂಗಃ
ಕರ್ಣೋ ಬಭೌ ರುದ್ರ ಇವಾತತೇಷುಃ ॥೧೬॥

ಅರ್ಜುನನ ಧನುಸ್ಸಿನ ವೇಗದಿಂದ ಪ್ರೇರಿತವಾಗಿ ಉಗ್ರವೇಗವನ್ನು ಹೊಂದಿದ ಬಾಣಗಳಿಂದ ದೃಢವಾಗಿ ಆಘಾತ ಹೊಂದಿ ಮೈಗಾಯಗೊಂಡು ನೆತ್ತರಿನಿಂದ ಮೈತೊಯ್ದಾಗ, ಕರ್ಣನು ಬಾಣಗಳನ್ನು ಧರಿಸಿ ರುದ್ರನಂತೇ ಕಂಡುಬಂದ.

ಪ್ರಕ್ರೀಡಮಾನೋಽಥ ಶ್ಮಶಾನಮಧ್ಯೇ
ರೌದ್ರೇ ಮುಹೂರ್ತೇ ರುಧಿರಾರ್ದ್ರಗಾತ್ರಃ ॥೧೭॥

ಏಕೆಂದರೆ ರೌದ್ರಮುಹೂರ್ತದಲ್ಲಿ ರುದ್ರನೂ ಸ್ಮಶಾನದಲ್ಲಿ ನೆತ್ತರಿನಿಂದ ಮೈತೊಯ್ದುಕೊಂಡು ಕ್ರೀಡೆಯಾಡುತ್ತಾನೆ.

ತತಸ್ತ್ರಿಭಿಶ್ಚ ತ್ರಿದಶಾಧಿಪೋಪಮಂ
ಶರೈರ್ಬಿಭೇದಾಧಿರಥಿರ್ಧನಂಜಯಮ್ ।
ಶರಾಂಸ್ತು ಪಂಚ ಜ್ವಲಿತಾನಿವೋರಗಾನ್
ಪ್ರವೀರಯಾಮಾಸ ಜಿಘಾಂಸುರಚ್ಯುತೇ ॥೧೮॥

ಬಳಿಕ ಇಂದ್ರನಂತಿರುವ ಅರ್ಜುನನನ್ನು ಕರ್ಣನು ಮೂರು ಬಾಣಗಳಿಂದ ಹೊಡೆದ. ಹಾವುಗಳಂತೆ ಜ್ವಲಿಸುವ ಐದು ಬಾಣಗಳಿಂದ ಕೃಷ್ಣನನ್ನೂ ಕೊಲ್ಲಲು ಬಯಸಿ ಅವನಿಗೆ ಎಸೆದ.

ತೇ ವರ್ಮ ಭಿತ್ತ್ವಾ ಪುರುಷೋತ್ತಮಸ್ಯ
ಸುವರ್ಣಚಿತ್ರಂ ನ್ಯಪತನ್ ಸುಮುಕ್ತಾಃ ।
ವೇಗೇನ ಗಾಮಾವಿವಿಶುಃ ಸುವೇಗಾಃ
ತ್ಯಕ್ತ್ವಾ(ಸ್ನಾತ್ವಾ) ಚ ಕರ್ಣಾಭಿಮುಖಾಃ ಪ್ರತೀಯುಃ ॥೧೯॥

ಚೆನ್ನಾಗಿ ಎಸೆದ ಆ ಬಾಣಗಳು ಪುರುಷೋತ್ತಮನ ಬಂಗಾರದ ಸುಂದರ ಕವಚವನ್ನು ಹೊಡೆದು ಕೆಳಗೆ ಬಿದ್ದುವು. ವೇಗವುಳ್ಳ ಆ ಬಾಣಗಳು ವೇಗದಿಂದ ಭೂಮಿಯನ್ನು ಪ್ರವೇಶಿಸಿದುವು. ಆದರೆ ತಕ್ಷಕಪುತ್ರನಾದ ಅಶ್ವಸೇನನಿಗೆ ಸಹಾಯಕ್ಕೆಂದು ಬಂದಿದ್ದ ಐದು ಸರ್ಪಗಳಿಂದ ಆ ಬಾಣಗಳು ಆವಿಷ್ಟವಾದ್ದರಿಂದ ಅವು ಭೂಮಿಯನ್ನು ಬಿಟ್ಟು ತಿರುಗಿ ಕರ್ಣನ ಕಡೆಗೇ ಹಾರಿಬಂದುವು.

ತಾನ್ ಪಂಚಭಲ್ಲೈಸ್ತ್ವರಿತೈಃ ಸುಮುಕ್ತೈ-
ಸ್ತ್ರಿಧಾ ತ್ರಿಧೈಕೈಕಮಥೋಚ್ಚಕರ್ತ ।
ಧನಂಜಯಸ್ತೇ ನ್ಯಪತನ್ ಪೃಥಿವ್ಯಾಂ
ಮಹಾಹಯಸ್ತಕ್ಷಕಪುತ್ರಪಕ್ಷಾಃ ॥೨೦॥

ಅರ್ಜುನನು ಚೆನ್ನಾಗಿ ಪ್ರಯೋಗಿಸಿದ ವೇಗದ ಐದು ಭಲ್ಲೆಗಳಿಂದ ಆ ಐದೂ ಬಾಣಗಳನ್ನು ಒಂದೊಂದನ್ನು ಮೂರು ಮೂರಾಗಿ ಕತ್ತರಿಸಿದ. ಅವು, ತಕ್ಷಕಪುತ್ರನಾದ ಅಶ್ವಸೇನನ ಪಕ್ಷದವು, ಮಹಾಸರ್ಪಗಳು. ನೆಲದಲ್ಲಿ ಬಿದ್ದುವು. ಕರ್ಣನೆಸೆದ ಆ ಬಾಣಗಳು ಕೃಷ್ಣನನ್ನು ಹೊಡೆದು, ತಿರುಗಿ ಕರ್ಣನ ಬಳಿಗೇ

ಹೋಗುತ್ತಿದ್ದರೂ, ಅವು ಕೃಷ್ಣನಿಗೆ ಹೊಡೆದವುಗಳೆಂದು ಅಸಹನೆಯಿಂದ, ಅರ್ಜುನ ಅವುಗಳನ್ನು ಬಾಣಗಳಿಂದ ಮೂರು ಮೂರು ಚೂರುಗಳಾಗಿ ಕತ್ತರಿಸಿದ.

ತತಃ ಪ್ರಜಜ್ವಾಲ ಕಿರೀಟಮಾಲೀ
ಕ್ರೋಧೇನ ಕಕ್ಷಂ ಪ್ರದಹನ್ನಿವಾಗ್ನಿಃ ।
ಸ ಕರ್ಣಮಾಕರ್ಣವಿಕೃಷ್ಟಸೃಷ್ಟೈಃ
ಶರೈಃ ಶರೀರಾಂತಕರೈರ್ಜ್ವಲದ್ಭಿಃ ।
ಮರ್ಮಸ್ವವಿಧ್ಯತ್ಸ ಚಚಾಲ ದುಃಖಾದ್
ಧೈರ್ಯಾತ್ತು ತಸ್ಥಾವತಿಮಾತ್ರಧೈರ್ಯಃ ॥೨೧॥

ಕರ್ಣ ಕೃಷ್ಣನಿಗೆ ಹೊಡೆದಿದ್ದಕ್ಕೆ ಅರ್ಜುನನು ಕೋಪದಿಂದ ಉರಿದ, ಕಾಡನ್ನು ಸುಡುವ ಬೆಂಕಿಯಂತೆ. ಕಿವಿವರೆಗೆ ಹೆದೆಯನ್ನು ಸೆಳೆದು ಶರೀರನಾಶಕವಾದ ಉರಿವ ಬಾಣಗಳನ್ನು ಎಸೆದು ಕರ್ಣನನ್ನು ಮರ್ಮಗಳಲ್ಲಿ ಹೊಡೆದ. ಕರ್ಣನು ವೇದನೆಯಿಂದ ವಿಚಲಿತನಾದ. ಆದರೂ ಅತ್ಯಂತ ಧೈರ್ಯಶಾಲಿಯಾದ್ದರಿಂದ ಅವನು ಧೈರ್ಯದಿಂದ ಸ್ಥಿರವಾಗಿ ನಿಂತುಕೊಂಡ.

ತತಃ ಶರೌಘೈಃ ಪ್ರದಿಶೋ ದಿಶಶ್ಚ
ರವಿಪ್ರಭಾ ಕರ್ಣರಥಶ್ಚ ರಾಜನ್ ।
ಅದೃಶ್ಯ ಆಸೀತ್ ಕುಪಿತೇ ಧನಂಜಯೇ
ತುಷಾರನೀಹಾರವೃತಂ ಯಥಾ ನಭಃ ॥೨೨॥

ಅರ್ಜುನ ಕುಪಿತನಾದಾಗ, ರಾಜನೆ, ಬಾಣಪ್ರವಾಹಗಳಿಂದ ದಿಕ್ಕು–ವಿದಿಕ್ಕುಗಳು ಸೂರ್ಯಕಿರಣಗಳು ಮತ್ತು ಕರ್ಣನ ರಥ ಎಲ್ಲವೂ ಹಿಮ ಮಂಜುಗಳಿಂದ ತುಂಬಿದ ಆಕಾಶದಂತೆ ಅದೃಶ್ಯವಾದಂತಾಯಿತು.

ಸ ಚಕ್ರರಕ್ಷಾವಥ ಪಾದರಕ್ಷಾನ್
ಪುರಃಸರಾನ್ ಪೃಷ್ಠಗೋಪಾಂಶ್ಚ ಸರ್ವಾನ್ ।
ದುರ್ಯೋಧನೇನಾನುಮತಾನರಿಘ್ನಾನ್
ಸಮುಚ್ಚಿತಾನ್ ಸುರಥಾನ್ ಸಾರಭೂತಾನ್ ॥೨೩॥

ದ್ವಿಸಾಹಸ್ರಾನ್ ಸಮರೇ ಸವ್ಯಸಾಚೀ
ಕುರುಪ್ರವೀರಾನೃಷಭಃ ಕುರೂಣಾಮ್ ।
ಕ್ಷಣೇನ ಸರ್ವಾನ್ ಸರಥಾಶ್ವಸೂತಾನ್
ನಿನಾಯ ರಾಜನ್ ಕ್ಷಯಮೇಕವೀರಃ ॥೨೪॥

ಕುರುಶ್ರೇಷ್ಠ ಏಕೈಕ ವೀರನಾದ ಅರ್ಜುನನು ಕರ್ಣರಥದ ಚಕ್ರರಕ್ಷಕ ಪಾದರಕ್ಷಕ ಪೃಷ್ಠರಕ್ಷಕ ಮುಂತಾದವರೆಲ್ಲರನ್ನೂ ಮತ್ತು ದುರ್ಯೋಧನನು ಕಳಿಸಿದ ಎರಡು ಸಾವಿರ ಶ್ರೇಷ್ಠ ರಥಿಕರನ್ನೂ, ರಣದಲ್ಲಿ ಶತ್ರುಹಂತಕರಾದ ಆ ಕೌರವವೀರರು ಒಟ್ಟಾಗಿ ಬಂದಿದ್ದರೂ, ಕ್ಷಣದಲ್ಲಿ ಎಲ್ಲರನ್ನೂ ರಥಅಶ್ವಸಾರಥಿ ಸಹಿತವಾಗಿ ನಾಶಮಾಡಿದ.

ಅಥೋ ಪಲಾಯಂತ ವಿಹಾಯ ಕರ್ಣಂ
ತವಾತ್ಮಜಾಃ ಕುರವಶ್ಚಾವಶಿಷ್ಟಾಃ ।
ಹತಾನವಾಕೀರ್ಯ ಶರಕ್ಷತಾಂಶ್ಚ
ಲಾಲಪ್ಯಮಾನಾಂಸ್ತನಯಾನ್ ಪಿತೄಂಶ್ಚ ॥೨೫॥

ಉಳಿದ ನಿನ್ನ ಮಕ್ಕಳೂ ಕುರುಯೋಧರೂ ಕರ್ಣನನ್ನು ಬಿಟ್ಟು ಪಲಾಯನಗೈದರು. ಹತರಾದ ಅಥವಾ ಬಾಣಗಳಿಂದ ಗಾಯಗೊಂಡು ಕೂಗಿಕೊಳ್ಳುತ್ತಿರುವ ಪುತ್ರರನ್ನೂ ಪಿತೃಗಳನ್ನೂ ಹಾಗೇ ಬಿಟ್ಟು ಓಡಿಹೋದರು.

ಸ ಸರ್ವತಃ ಪ್ರೇಕ್ಷ್ಯ ದಿಶೋ ವಿಶೂನ್ಯಾ
ಭಯಾವದೀರ್ಣೈಃ ಕುರುಭಿರ್ವಿಹೀನಾಃ ।
ನ ವಿವ್ಯಥೇ ಭಾರತ ತತ್ರ ಕರ್ಣಃ
ಪ್ರತೀಪಮೇವಾರ್ಜುನಮಭ್ಯಧಾವತ್ ॥೨೬॥

ಕರ್ಣನು, ಎಲ್ಲ ದಿಕ್ಕುಗಳು ಭಯದಿಂದ ಬಲಗುಂದಿದ ಕುರುಯೋಧರಿಂದ ಪರಿತ್ಯಕ್ತವಾಗಿ ಶೂನ್ಯವಾಗಿರುವುದನ್ನು ನೋಡಿಯೂ, ವ್ಯಥೆಗೊಳ್ಳಲಿಲ್ಲ ರಾಜನೆ, ಅವನು ಅರ್ಜುನನಿಗೆ ಇದಿರಾಗಿಯೇ ನುಗ್ಗಿದ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಾರ್ಜುನಯುದ್ಧೇ ಷಡಶೀತಿತಮೋಽಧ್ಯಾಯಃ ॥೮೬॥

❖

ಮಹಾಭಾರತತಾತ್ಪರ್ಯನಿರ್ಣಯ

ಕ್ರಮೇಣ ವೃದ್ಧೋರುಬಲೇನ ತತ್ರ
ಸುರೇಂದ್ರಪುತ್ರೇಣ ವಿರೋಚನಾತ್ಮಜಃ ।
ನಿರಾಕೃತೋ ನಾಗಮಯಂ ಶರೋತ್ತಮಂ
ಬ್ರಹ್ಮಾಸ್ತ್ರಯುಕ್ತಂ ವಿಸಸರ್ಜ ವಾಸವೌ ॥ ೧೮೨॥

ಅರ್ಜುನ ಕ್ರಮವಾಗಿ ಹೆಚ್ಚು ಹೆಚ್ಚು ಶಕ್ತಿ ತುಂಬಿಕೊಂಡವನಾಗಿ ಕರ್ಣನನ್ನು ಪರಾಭವಗೊಳಿಸಿದಾಗ ಕರ್ಣ ಬ್ರಹ್ಮಾಸ್ತ್ರಯುಕ್ತವಾದ ನಾಗಮಯವಾದ ಬಾಣವನ್ನು ಅರ್ಜುನನ ಮೇಲೆಸೆದ.

ತಂ ವಾಸುದೇವೋ ರಥಮಾನಮಯ್ಯ
ಮೋಘಂ ಚಕಾರಾರ್ಜುನತಃ ಕಿರೀಟಮ್ ।
ಚೂರ್ಣೀಕೃತಂ ತೇನ ಸುರೇಂದ್ರಸೂನೋ
ರ್ದಿವ್ಯಂ ಯಯೌ ಬಾಣಗತಶ್ಚ ನಾಗಃ ॥ ೧೮೩ ॥

ಆಗ ಕೃಷ್ಣ ರಥವನ್ನು ನೆಲದಲ್ಲಿ ತಗ್ಗಿಸಿ ಆ ಬಾಣವನ್ನು ಅರ್ಜುನನಲ್ಲಿ ವ್ಯರ್ಥಗೊಳಿಸಿದ. ಅರ್ಜುನನ ದಿವ್ಯ ಕಿರೀಟ ಮಾತ್ರ ಆ ಬಾಣದಿಂದ ಚೂರು ಚೂರಾಯಿತು. ಬಾಣದಲ್ಲಿದ್ದ ಅಶ್ವಸೇನ ನಾಗ ಹೊರಟು ಹೋದ.

ನಮಿತೇ ವಾಸುದೇವೇನ ರಥೇ ಪಂಚಾಂಗುಲಂ ಭುವಿ ।
ಅಪಾಂಗದೇಶಮುದ್ದಿಶ್ಯ ಮುಕ್ತೇ ನಾಗೇ ಕಿರೀಟಿನಃ ॥ ೧೮೪ ॥

ಭಂಕ್ತ್ವಾ ಕಿರೀಟಂ ವಿಯತಿ ಗಚ್ಛತಿ ಪ್ರಭುಣೋದಿತಃ ।
ಬಾಣೈಸ್ತಕ್ಷಕಪುತ್ರಂ ತಂ ವಾಸವಿಃ ಪೂರ್ವವೈರಿಣಮ್ ॥ ೧೮೫ ॥

ಹತ್ವಾ ನಿಪಾತಯಾಮಾಸ ಭೂಮೌ ಕರ್ಣಸ್ಯ ಪಶ್ಯತಃ ।
ಬ್ರಹ್ಮಾಸ್ತ್ರಸ್ಯಾತಿವೇಗಿತ್ವಂ ಪ್ರಾಪ್ತಂ ಕರ್ಣೇನ ಭಾರ್ಗವಾತ್ ॥ ೧೮೬ ॥

ಅರ್ಜುನನ ಕಡೆಗಣ್ಣ ಪ್ರದೇಶಕ್ಕೆ ಎಸೆದಿದ್ದ ನಾಗಾಸ್ತ್ರ ಕೃಷ್ಣನಿಂದ ರಥ ಐದು ಅಂಗುಲದಷ್ಟು ನೆಲದಲ್ಲಿ ತಗ್ಗಿಸಲ್ಪಟ್ಟಾಗ, ಅರ್ಜುನನ ದಿವ್ಯವಾದ ಕಿರೀಟವನ್ನು ಪುಡಿ

ಮಾಡಿ ಆಕಾಶದಲ್ಲಿ ಹಾರಿಹೋಗುತ್ತಿತ್ತು. ಕೃಷ್ಣನ ಮಾತಿನಂತೆ ಅರ್ಜುನ ತನ್ನ ಹಿಂದಿನ ವೈರಿಯಾದ ಆ ತಕ್ಷಕಪುತ್ರ ಅಶ್ವಸೇನನನ್ನು ಕರ್ಣ ನೋಡುತ್ತಿದ್ದಂತೆಯೇ ಬಾಣಗಳಿಂದ ಕೊಂದು ನೆಲದಲ್ಲಿ ಕೆಡವಿದ. ಬ್ರಹ್ಮಾಸ್ತ್ರಪ್ರಯೋಗದಲ್ಲಿ ಅತಿವೇಗವನ್ನು ಕರ್ಣ ಪರಶುರಾಮನಿಂದ ಪಡೆದಿದ್ದ.

ಪುನಶ್ಚ ಪಾರ್ಥೇನ ಮಹಾಸ್ತ್ರಯುದ್ಧಂ
ಪ್ರಕುರ್ವತಃ ಸೂರ್ಯಸುತಸ್ಯ ಚಕ್ರಮ್ ।
ರಥಸ್ಯ ಭೂಮಿರ್ಗ್ರಸತಿ ಸ್ಮ ಶಾಪಾ
ದಸ್ತ್ರಾಣಿ ದಿವ್ಯಾನಿ ಚ ವಿಸ್ಮೃತಿಂ ಯಯುಃ ॥ ೧೮೭ ॥

ಪುನಃ ಕರ್ಣ ಅರ್ಜುನನೊಡನೆ ಮಹಾಅಸ್ತ್ರಗಳಿಂದ ಯುದ್ಧ ಮಾಡುತ್ತಿದ್ದಾಗ ಬ್ರಾಹ್ಮಣಶಾಪದಿಂದ ಅವನ ರಥವನ್ನು ನೆಲ ನುಂಗಿತು. ಹಾಗೇ ಪರಶುರಾಮನ ಶಾಪದಿಂದ ದಿವ್ಯಾಸ್ತ್ರಗಳೂ ಅವನಿಗೆ ಮರೆತು ಹೋದುವು.

❖

ಎಂಬತ್ತೇಳನೆಯ ಅಧ್ಯಾಯ

ಶ್ರೀಕೃಷ್ಣ ರಥವನ್ನು ಒತ್ತಿ ತಗ್ಗಿಸಿದಾಗ, ಸರ್ವಾಸ್ತ್ರ ಗುರಿತಪ್ಪಿ ಅರ್ಜುನನ ಕಿರೀಟವನ್ನು ಮಾತ್ರ ಹೊಡೆದು ಪುಡಿಮಾಡಿತು. ಆ ಅಶ್ವಸೇನಸರ್ಪನನ್ನು ಅರ್ಜುನ ಸಂಹರಿಸಿದ. (ಈ ವಿಷಯದಲ್ಲಿ ಒಂದು ಕೂಟ ಶ್ಲೋಕವಿದೆ.) ಬಳಿಕ ಕರ್ಣನ ರಥಚಕ್ರವನ್ನು ಭೂಮಿ ನುಂಗಿತು.

ಸಂಜಯಃ

ತತೋऽಪಯಾತಾಃ ಶರಪಾತಮಾತ್ರ-
ಮವಸ್ಥಿತಾಃ ಕುರವೋ ಭಿನ್ನಸೇನಾಃ ।
ವಿದ್ಯುತ್ಪ್ರಕಾಶಂ ದದೃಶುಃ ಸಮಂತಾದ್
ಧನಂಜಯಾಸ್ತ್ರಂ ಸಮುದೀರ್ಯಮಾಣಮ್ ॥೧॥

ಸಂಜಯನು ನುಡಿದ— ಚದುರಿದ ಸೈನ್ಯಗಳು ಅರ್ಜುನನ ಬಾಣಗಳು

ಬೀಳುವ ಪ್ರದೇಶವನ್ನು ಮಾತ್ರ ದಾಟಿ ಆಚೆ ದೂರಹೋಗಿ ನಿಂತವು. ಮಿಂಚಿನಂತೆ ಹೊಳೆಯುವ ಅರ್ಜುನನ ಅಸ್ತ್ರವು ಎಲ್ಲಕಡೆ ಹರಡುವುದನ್ನು ಕಂಡವು.

ತದರ್ಜುನಾಸ್ತ್ರಂ ಗ್ರಸತೇ ಸ್ಮ ವೀರಾನ್
ಕೃತ್ಸ್ನಂ ತದಾಕಾಶಮನಂತಘೋಷಮ್ ।
ಕ್ರುದ್ಧೇನ ಪಾರ್ಥೇನ ತದಾಶು ಸೃಷ್ಟಂ
ವಧಾಯ ಕರ್ಣಸ್ಯ ಮಹಾವಿಮರ್ದೇ ॥೨॥

ಆ ಅರ್ಜುನನ ಅಸ್ತ್ರವು ಎಲ್ಲ ವೀರರನ್ನು ಮಾತ್ರವಲ್ಲದೆ ಅಪರಿಮಿತ ಶಬ್ದಗಳಿಗೆ ಆಶ್ರಯವಾದ ಇಡೀ ಆಕಾಶವನ್ನೇ ನುಂಗಿತು. ಅದು, ಮಹಾರಣದಲ್ಲಿ ಕರ್ಣನ ವಧೆಗಾಗಿ ಕ್ರುದ್ಧನಾದ ಅರ್ಜುನ ಕ್ಷಣಮಾತ್ರದಲ್ಲಿ ಪ್ರಯೋಗಿಸಿದ ಅಸ್ತ್ರವಾಗಿತ್ತು.

ಕರ್ಣಃ ಸುಘೋರೇಷ್ವಸನಂ ದೃಢಜ್ಯಂ
ವಿಸ್ಫಾರಯಿತ್ವಾ ವ್ಯಸೃಜಚ್ಛರೌಘಾನ್ ।
ಉದೀರ್ಯಮಾಣಂ ಸ್ಮ ಕುರೂನ್ ದಹತ್ತತ್
ಸುವರ್ಣಪುಂಖೈರ್ವಿಶಿಖೈರ್ಮಮರ್ದ ॥೩॥

ಕರ್ಣನು ದೃಢವಾದ ಹೆದೆಯುಳ್ಳ ಬಲು ಘೋರವಾದ ಬಿಲ್ಲನ್ನು ಸೆಳೆದು ಬಾಣಪ್ರವಾಹಗಳನ್ನು ಹರಿಸಿದ. ಅರ್ಜುನನ ಬಿಲ್ಲಿನಿಂದ ಹೊರಟು ಬಂದು ಕೌರವರನ್ನು ಸುಡುತ್ತಿದ್ದ ಅಸ್ತ್ರವನ್ನು ಬಂಗಾರದ ಪುಕ್ಕವುಳ್ಳ ಬಾಣಗಳಿಂದ ಕತ್ತರಿಸಿದ.

ರಾಮಾದುಪಾತ್ತೇನ ಮಹಾಮಹಿಮ್ನಾ
ಆಥರ್ವಣೇನಾರಿವಿನಾಶನೇನ ।
ತದರ್ಜುನಾಸ್ತ್ರಂ ವ್ಯಧಮದ್ ದಹಂತಂ
ಪಾರ್ಥಂ ಚ ಬಾಣೈರ್ನಿಶಿತೈರ್ನಿಜಘ್ನೇ ॥೪॥

ಪರಶುರಾಮನಿಂದ ಪಡೆದ ಮಹಾಮಹಿಮೆಯುಳ್ಳ ಶತ್ರುನಾಶಕವಾದ ಅಥರ್ವಣವೇದೋಕ್ತವಾದ ಅಸ್ತ್ರದಿಂದ ಕರ್ಣನು ಅರ್ಜುನನ ಅಸ್ತ್ರವನ್ನು ನಿಷ್ಕ್ರಿಯಗೊಳಿಸಿದ. ಶತ್ರುಸೈನ್ಯವನ್ನು ದಹಿಸುತ್ತಿದ್ದ ಅರ್ಜುನನನ್ನೂ ಹರಿತವಾದ ಬಾಣಗಳಿಂದ ಹೊಡೆದ.

ತತೋ ವಿಮರ್ದಃ ಸುಮಹಾನ್ ಬಭೂವ
ತಸ್ಯಾರ್ಜುನಸ್ಯಾಧಿರಥೇಶ್ಚ ರಾಜನ್ ।
ಅನ್ಯೋನ್ಯಮಾಸಾದಯತೋಃ ಪೃಷತ್ಕೈ-
ರ್ವಿಷಾಣಘಾತೈರ್ದ್ವಿಪಯೋರಿವೌಗ್ರೈಃ ॥೫॥

ಆಗ ರಾಜನೆ, ಅರ್ಜುನನಿಗೂ ಕರ್ಣನಿಗೂ ದೊಡ್ಡ ಕಾಳಗ ನಡೆಯಿತು. ಉಗ್ರವಾದ ಎರಡು ಆನೆಗಳು ದಂತಗಳ ತಿವಿತಗಳಿಂದ ಹೋರಾಡುವಂತೆ ಅವರಿಬ್ಬರೂ ಬಾಣಗಳಿಂದ ಪರಸ್ಪರ ಹೊಡೆದರು.

ತತೋಽಸ್ತ್ರಸಂಘಾತಸಮಾವೃತಂ ತದಾ
ಬಭೂವ ರಾಜಂಸ್ತುಮುಲಂ ರಣಾಜಿರಮ್ ।
ತತ್ಕರ್ಣಪಾರ್ಥೌ ಶರವೃಷ್ಟಿಸಂಘೈ-
ರ್ನಿರಂತರಂ ಚಕ್ರತುರಂಬರಂ ತದಾ ॥೬॥

ರಾಜನೆ, ಆಗ ಘೋರವಾದ ರಣರಂಗವು ಅಸ್ತ್ರಸಮೂಹಗಳಿಂದ ಆಚ್ಛಾದಿತವಾಯಿತು. ಕರ್ಣಾರ್ಜುನರು ಬಾಣವೃಷ್ಟಿ ಸಮೂಹಗಳಿಂದ ಆಕಾಶವು ಎಡೆ ಇಲ್ಲದೆ ತುಂಬಿಹೋಗುವಂತೆ ಮಾಡಿದರು.

ತದ್ಬಾಣಜಾಲೈಕಮಯಂ ಮಹಾಸ್ತ್ರಂ
ಸರ್ವೇऽದ್ರಾಕ್ಷುಃ ಕುರವಃ ಸೋಮಕಾಶ್ಚ ।
ನಾನ್ಯಂ ಚ ಭೂತಂ ದದೃಶುಸ್ತದಾ ತೇ
ಬಾಣಾಂಧಕಾರೇ ತುಮುಲೇ ಚ ತಸ್ಮಿನ್ ॥೭॥

ಬಾಣಸಮೂಹಮಯವಾದ ಆ ಮಹಾಸ್ತ್ರ ಒಂದನ್ನೇ ಕೌರವರೂ ಸೋಮಕರೂ ಕಂಡರೆ ಹೊರತು ಬೇರೆ ಜನರನ್ನು ಅವರು ಘೋರವಾದ ಆ ಬಾಣಾಂಧಕಾರದಲ್ಲಿ ನೋಡಲಾರದವರಾದರು.

ತೌ ಸಂದಧಾನಾವನಿಶಂ ಸ್ಮ ರಾಜನ್
ಸಮಸ್ಯಂತೌ ಚಾಪಿ ಶರಾನನೇಕಾನ್ ।

ಸಂದರ್ಶಯಂತೋ ಯುಧಿ ಮಾರ್ಗಾನ್ ವಿಚಿತ್ರಾನ್
ಧನುರ್ಧರಾಣಾಂ ಪ್ರವರೌ ಕೃತಾಸ್ತ್ರೌ ॥೮೪॥

ರಾಜನೆ, ಕರ್ಣಾರ್ಜುನರು ಎಡೆಬಿಡದೆ ಅನೇಕ ಬಾಣಗಳನ್ನು ಹೂಡಿ ಎಸೆದರು. ವಿಚಿತ್ರವಾದ ವರಸೆಗಳನ್ನು ರಣದಲ್ಲಿ ತೋರಿದರು. ಇಬ್ಬರೂ ಅಸ್ತ್ರಜ್ಞರು, ಧನುರ್ಧಾರಿಗಳಲ್ಲಿ ಶ್ರೇಷ್ಠರು.

ತಯೋರೇವಂ ಯುಧ್ಯತೋರಾಜಿಮಧ್ಯೇ
ಸೂತಾತ್ಮಜೋऽಭೂದಧಿಕಃ ಕದಾಚಿತ್ ।
ಪಾರ್ಥಃ ಕದಾಚಿತ್ತ್ವಧಿಕಃ ಕಿರೀಟೀ
ವೀರ್ಯಾಸ್ತ್ರಸಂಪದ್‌ಬಲಲಾಘವೈಸ್ತು ॥೯॥

ಅವರಿಬ್ಬರೂ ರಣರಂಗದಲ್ಲಿ ಹೋರಾಡುತ್ತಿದ್ದಾಗ ಪರಾಕ್ರಮ ಅಸ್ತ್ರಜ್ಞಾನ ಸಂಪತ್ತು ಬಲ ವೇಗಗಳಲ್ಲಿ ಕೆಲವೊಮ್ಮೆ ಕರ್ಣ ಹೆಚ್ಚಾದ. ಕೆಲವೊಮ್ಮೆ ಅರ್ಜುನನೇ ಹೆಚ್ಚಾದ.

ದೃಷ್ಟ್ವಾ ತತಸ್ತಂ ಯುಧಿ ಸಂಪ್ರಹಾರಂ
ಪರಸ್ಪರಸ್ಯಾಂತರಮೀಕ್ಷಮಾಣಯೋಃ ।
ಘೋರಂ ತದಾ ದುರ್ವಿಷಹಂ ರಣೇऽನ್ಯೈ-
ರ್ಯೋಧಾಃ ಸರ್ವೇ ವಿಸ್ಮಯಮಭ್ಯಗಚ್ಛನ್ ॥೧೦॥

ಪರಸ್ಪರರಲ್ಲಿ ಶೈಥಿಲ್ಯವನ್ನು ಕಾಣಲು ಯತ್ನಿಸುತ್ತ ರಣದಲ್ಲಿ ಹೋರಾಡುತ್ತಿದ್ದ ಆ ಕರ್ಣಾರ್ಜುನರ ಘೋರವಾದ, ಅನ್ಯರಿಗೆ ಸಹಿಸಲು ಸಾಧ್ಯವಲ್ಲದ ಆ ಯುದ್ಧವನ್ನು ನೋಡಿ ಯೋಧರೆಲ್ಲರೂ ವಿಸ್ಮಯ ಹೊಂದಿದರು.

ತತೋऽಥ ಭೂತಾನ್ಯಂತರಿಕ್ಷೇ ಸ್ಥಿತಾನಿ
ಕರ್ಣಾರ್ಜುನೌ ತೌ ಪ್ರಶಶಂಸುರ್ನರೇಂದ್ರ ।
ಭೋಃ ಕರ್ಣ ಸಾಧ್ವರ್ಜುನ ಸಾಧು ಚೇತಿ
ಹೃಷ್ಟಾಃ ಪ್ರೋಚುಃ ಸಂಘಶಃ ಪ್ರೀತಿಮಂತಃ ॥೧೧॥

ರಾಜನೆ, ಅಂತರಿಕ್ಷದಲ್ಲಿ ನೆರೆದ ಪ್ರೇಕ್ಷಕರು ಕರ್ಣಾರ್ಜುನರನ್ನು ಪ್ರಶಂಸೆ ಮಾಡಿದರು. ಹೇ ಕರ್ಣ, ಭಲೆ! ಹೇ ಅರ್ಜುನ, ಭಲೆ! ಎಂದು ಒಕ್ಕೊರಲಿನಿಂದ ಪ್ರೀತಿಯಿಂದ ಉತ್ಸಾಹದಿಂದ ನುಡಿದರು.

ತಸ್ಮಿನ್ ವಿಮರ್ದೇ ರಥವಾಜಿನಾಗಾಃ
ಪದಾತಿಸಂಘಾ ವಸುಧಾಂ ವ್ಯಕಂಪಯನ್ ।
ತತಸ್ತು ಪಾತಾಳತಳೇ ಶಯಾನೋ
ನಾಗೋಽಶ್ವಸೇನಃ ಕೃತವೈರೋಽರ್ಜುನೇನ ॥೧೨॥

ರಾಜಂಸ್ತದಾ ಖಾಣ್ಡವದಾಹಮಧ್ಯೇ
ಕೃತ್ವಾ ಸುವೇಗಂ ವಸುಧಾತಳಸ್ಥಃ ।
ಅಥೋತ್ಪಪಾತೋರ್ಧ್ವಗತಿರ್ಬವೇನ
ಸಂದೃಶ್ಯ ಕರ್ಣಾರ್ಜುನಯೋರ್ವಿಮರ್ದಮ್ ॥೧೩॥

ಅಯಂ ಹಿ ಕಾಲೋಽಸ್ಯ ದುರಾತ್ಮನೋ ವೈ
ಪಾರ್ಥಸ್ಯ ವೈರಪ್ರತಿಯಾತನಾಯ ।
ಸಂಚಿಂತ್ಯ ತೂಣಂ ಪ್ರವಿವೇಶ ಚೈವ
ಕರ್ಣಸ್ಯ ರಾಜನ್ ಶರರೂಪಧಾರೀ ॥೧೪॥

ಆ ಯುದ್ಧದಲ್ಲಿ ರಥ ಅಶ್ವ ಗಜ ಪದಾತಿಸಮೂಹಗಳು ನೆಲವನ್ನು ಕಂಪಿಸಿದುವು. ಆಗ ಪಾತಾಳತಳದಲ್ಲಿ ಒರಗಿದ್ದ ಅಶ್ವಸೇನನಾಗನು ವೇಗದಿಂದ ಭೂತಳಕ್ಕೆ ಬಂದು ಸೇರಿದ. ಹಿಂದೆ ಖಾಂಡವದಾಹದಲ್ಲಿ ಅರ್ಜುನ ಅವನೊಂದಿಗೆ ವೈರವನ್ನು ಮಾಡಿದ್ದ. ಅವನು ವೇಗದಿಂದ ಮೇಲೆ ಆಕಾಶದಲ್ಲಿ ಹಾರಿ ಬಂದು ಕರ್ಣಾರ್ಜುನರ ಯುದ್ಧವನ್ನು ಕಂಡು, ದುರಾತ್ಮ ಅರ್ಜುನನು ಮಾಡಿದ ವೈರವನ್ನು ತೀರಿಸಲು ಇದು ಯೋಗ್ಯಕಾಲವೆಂದು ಆಲೋಚಿಸಿ, ಕರ್ಣನ ಬತ್ತಳಿಕೆಯನ್ನು ಅಂದರೆ ಬತ್ತಳಿಕೆಯಲ್ಲಿದ್ದ ಸರ್ಪಮುಖದ ಬಾಣವನ್ನು, ಅದೇ ಆಕಾರ ತಳೆದು ಯೋಗಬಲದಿಂದ ಪ್ರವೇಶಿಸಿ ಕುಳಿತ.

ಅಶ್ವಸೇನನೇ ಸರ್ಪಾಸ್ತ್ರರೂಪದಲ್ಲಿ ಬಹಳ ಹಿಂದೆಯೇ ಕರ್ಣನಲ್ಲಿ ಬಂದು ಸೇರಿಕೊಂಡಿದ್ದನೆಂದೂ, ಬಹಳ ಹಿಂದಿನಿಂದಲೂ ಕರ್ಣ ಅವನನ್ನು ಬಿಡದೆ

ಪೂಜಿಸುತ್ತಿದ್ದನೆಂದೂ ತಿಳಿಯಬಾರದು. ಹಿಂದಿನಿಂದಲೂ ಸರ್ಪಾಸ್ತ್ರದಲ್ಲಿ ಪ್ರಸಿದ್ಧ ನಾಗದೇವತೆಗಳನ್ನು ಆತ ಪೂಜಿಸುತ್ತಿದ್ದ. ಅಶ್ವಸೇನನನ್ನಲ್ಲ.

ಕರ್ಣಸ್ತು ಪಾರ್ಥಂ ನ ವಿಶೇಷಯದ್ಯದಾ
ದೃಢಂ ಚ ಪಾರ್ಥೇನ ಶರೈರ್ನಿಪೀಡಿತಃ ।
ಕ್ರುದ್ಧಸ್ತತಸ್ತಾ ವಧಿರಥಿಸ್ತರಸ್ವೀ
ಮನೋ ದಧೇ ಚೈಕಶಯೇ ಶರಾಖ್ಯೇ ॥೧೫॥

ತತಃ ಸ ಕರ್ಣಃ ಶರವಿಕ್ಷತಾಂಗೋ
ಮನೋ ದಧೇ ಹ್ಯೇಕಶರಸ್ಯ ಮೋಕ್ಷೇ ॥೧೬॥

ಕರ್ಣನು ಅರ್ಜುನನನ್ನು ಮೀರಿಸಲು ಶಕ್ತನಾಗದಿದ್ದಾಗ, ಅರ್ಜುನನಿಂದ ದೃಢವಾಗಿ ಬಾಣಗಳಿಂದ ಪೀಡಿತನೂ ಆದಾಗ, ಬಲಿಷ್ಠನಾದ ಅವನು ಕ್ರುದ್ಧನಾಗಿ 'ಸರ್ಪಬಾಣ' ಎಂಬ ಹೆಸರಿನ ಪ್ರಧಾನವಾದ ಸರ್ಪದಲ್ಲಿ ಮನಸ್ಸಿಟ್ಟ. ಬಾಣಗಳಿಂದ ಮೈಯೆಲ್ಲ ಕ್ಷತವಿಕ್ಷತನಾಗಿದ್ದರಿಂದ ಬಾಣಗಳಲ್ಲಿ ಮುಖ್ಯವಾದ ಸರ್ಪಾಸ್ತ್ರವನ್ನೇ ಬಿಡಲು ಮನಸ್ಸು ಮಾಡಿದ.

ತತೋ ರಿಪುಘ್ನಂ ಸಮಧತ್ತ ಕರ್ಣಃ
ಸುಸಂಚಿತಂ ಸರ್ಪಮುಖಂ ಜ್ವಲಂತಮ್ ।
ರೌದ್ರಂ ಶರಂ ಸಂಯತಿ ಸುಪ್ರಧೌತಂ
ಪಾರ್ಥಾರ್ಥಮತ್ಯರ್ಥಚಿರಾಯ ಗುಪ್ತಮ್ ॥೧೭॥

ಸದಾರ್ಚಿತಂ ಚಂದನಚೂರ್ಣಶಾಯಿನಂ
ಸುವರ್ಣತೂಣೀರಶಯಂ ಮಹಾವಿಷಮ್ ।
ಪ್ರದೀಪ್ತಮೈರಾವತವಂಶಸಂಭವಂ
ಶಿರೋ ಜಿಹೀರ್ಷುರ್ಯುಧಿ ಫಲ್ಗುನಸ್ಯ ॥೧೮॥

ಆಗ ಶತ್ರುನಾಶಕವಾದ, ಬಹುಕಾಲದಿಂದ ಸಂಗ್ರಹಿಸಿ ಇಟ್ಟಿದ್ದ ಚೆನ್ನಾಗಿ ಎಣ್ಣೆಯಿಂದ ಹದಮಾಡಿದ್ದ ಅರ್ಜುನನ ನಾಶಕ್ಕೆಂದೇ ಬಹುಕಾಲದಿಂದ ರಕ್ಷಿಸಿ ಇಟ್ಟುಕೊಂಡಿದ್ದ ಇದೀಗ ಬಂಗಾರದ ಬತ್ತಳಿಕೆಯೊಳಗೆ ಬಂದು ಕುಳಿತಿದ್ದ ಮಹಾವಿಷಭರಿತವಾದ ಜ್ವಲಿಸುವ ಐರಾವತಸರ್ಪದ ವಂಶದಲ್ಲಿ ಬಂದಿದ್ದ, ಸದಾ

ಚಂದನಚೂರ್ಣದಲ್ಲಿಟ್ಟು ತನ್ನಿಂದ ಪೂಜಿತವಾಗಿದ್ದ, ಭಯಂಕರವಾದ ಸರ್ಪಾಸ್ತ್ರಬಾಣವನ್ನು ರಣದಲ್ಲಿ ಅರ್ಜುನನ ಶಿರವನ್ನು ತೆಗೆಯುವುದಕ್ಕಾಗಿ ಕರ್ಣನು ಧನುಸ್ಸಿನಲ್ಲಿ ಹೂಡಿದ.

ತತಃ ಪ್ರಜಜ್ವಾಲ ನಭೋ ದಿಶಶ್ಚ
ಉಲ್ಕಾಶ್ಚ ಘೋರಾಃ ಸಹಸಾ ನಿಪೇತುಃ ।
ತಸ್ಮಿಂಸ್ತು ನಾಗೇ ಧನುಷಿ ಪ್ರಯುಕ್ತೇ
ಹಾಹಾಕೃತಾಃ ಸರ್ವಲೋಕಾಃ ಸಶಕ್ರಾಃ ॥೧೯॥

ಕರ್ಣನು ಸರ್ಪಾಸ್ತ್ರವನ್ನು ಧನುಸ್ಸಿನಲ್ಲಿ ಹೂಡಿದಾಗ ಆಕಾಶವೂ ದಿಕ್ಕುಗಳೂ ಜ್ವಲಿಸಿದುವು. ಘೋರವಾದ ಉಲ್ಕೆಗಳು ಅಕಸ್ಮಾತ್ ಕೆಳಗೆ ಬಿದ್ದುವು. ಇಂದ್ರಾದಿ ಸರ್ವಲೋಕಗಳು ಹಾಹಾಕಾರ ಮಾಡಿದವು.

ಸ ಸೂತಪುತ್ರಸ್ತಮಪಾಂಗದೇಶೇ
ಪಾರ್ಥೋನ್ಮುಖಂ ಸಂ ನಯತಿಸ್ಮರೋಷಾತ್ ।
ನ ತಂ ಸ್ಮ ಜಾನಾತಿ ಮಹಾನುಭಾವಂ
ಅಪಾಂಗದೇಶಾಭಿನಿವಿಷ್ಟಮಾಜೌ ॥
ನ ಚಾಪಿ ತಂ ಬುಬುಧೇ ಸೂತಪುತ್ರೋ
ಬಾಣೇ ಪ್ರವಿಷ್ಟಂ ಯೋಗಬಲೇನ ನಾಗಮ್ ॥೨೦॥

ಕರ್ಣ ಆ ಸರ್ಪಬಾಣವನ್ನು ಅರ್ಜುನನಿಗೆ ಅಭಿಮುಖವಾಗಿ, ಅವನ ತಲೆ ಒಡೆದು ಚೂರಾಗುವಂತೆ, ಕಡೆಗಣ್ಣ ಅಂಚಿನಲ್ಲಿ ಹಣೆಗೆ ತಾಕುವಂತೆ ಗುರಿಇಟ್ಟ. ಕಡೆಗಣ್ಣಂಚಿಗೆ ತಾಗಬೇಕೆಂದೆ ಕರ್ಣನಿಗೆ ದೃಢವಾದ ಅಭಿಪ್ರಾಯವಿದ್ದುದು ಶಲ್ಯನಿಗೆ ತಿಳಿಯಲಿಲ್ಲ. ಕರ್ಣನಿಗೂ ಅಶ್ವಸೇನನಾಗನು ಯೋಗಬಲದಿಂದ ಬಾಣದಲ್ಲಿ ಪ್ರವೇಶ ಮಾಡಿದ್ದು ತಿಳಿದಿರಲಿಲ್ಲ. 'ನ ಚಾಪಿ ತಂ ಬುಬುಧೇ'

ತಮಬ್ರವೀನ್ಮದ್ರರಾಜೋ ಮಹಾತ್ಮಾ
ವೈಕರ್ತನಂ ಪ್ರೇಕ್ಷ್ಯ ಹಿ ಸಂಹಿತೇಷುಮ್ ।
ನ ಕರ್ಣ ಗ್ರೀವಾಮಿಷುರೇಷ ಪ್ರಾಪ್ಸ್ಯತೇ
ಸಂಲಕ್ಷ್ಯ ಸಂಧತ್ಸ್ವ ಶರಂ ಶಿರೋಘ್ನಮ್ ॥೨೧॥

ಕರ್ಣನ ಅಭಿಪ್ರಾಯವನ್ನು ತಿಳಿಯದಿದ್ದ ಮಹಾತ್ಮ ಶಲ್ಯನು, ಕರ್ಣನು ಹಣೆಗೆ ಗುರಿಯಿಟ್ಟು ಶರಸಂಧಾನ ಮಾಡಿದ್ದನ್ನು ಕಂಡು ಆತಂಕಗೊಂಡು ನುಡಿದ– 'ಕರ್ಣ, ಈ ಬಾಣ ಈಗ ಅರ್ಜುನನ ಕುತ್ತಿಗೆಯನ್ನು ತಲುಪುವುದಿಲ್ಲ. ಶಿರಸ್ಸು ಕಡಿದುಬೀಳುವಂತೆ ಸರಿಯಾಗಿ ಗುರಿಯಿಟ್ಟು ಪುನಃ ಬಾಣವನ್ನು ಹೂಡು.'

ಅಥಾಬ್ರವೀತ್ ಕ್ರೋಧಸಂರಕ್ತನೇತ್ರಃ
ಕರ್ಣಃ ಶಲ್ಯಂ ಸಂಧಿತೇಷುಃ ಪ್ರಸಹ್ಯ ।
ನ ಸಂಧತ್ತೇ ದ್ವಿಃ ಶರಂ ಶಲ್ಯ ಕರ್ಣೋ
ನ ಮಾದೃಶಾಃ ಶಾಠ್ಯಯುಕ್ತಾ ಭವಂತಿ ॥೨೨॥

ಕರ್ಣನಿಗೆ ಕೋಪದಿಂದ ಕಣ್ಣು ಕೆಂಪಾಯಿತು. 'ಶಲ್ಯ, ಕರ್ಣನು ಎರಡು ಬಾರಿ ಒಂದು ಬಾಣವನ್ನು ಹೂಡುವುದಿಲ್ಲ. ನನ್ನಂಥವರು ಶಾಠ್ಯಯುಕ್ತರಾಗುವುದಿಲ್ಲ.'

ಒಮ್ಮೆ ಗುರಿ ಇಟ್ಟುದನ್ನು ಇದಿರಾಳಿಯು ಗಮನಿಸಿ ಅದಕ್ಕೆ ಸರಿಯಾಗಿ ಅವನೂ ಗುರಿಇಟ್ಟು ಬಾಣವನ್ನು ಬಿಡುತ್ತಾನೆ. ಇದು ಯುದ್ಧದಲ್ಲಿ ಧರ್ಮ. ಗುರಿಯನ್ನು ಬದಲಿಸಿದರೆ ಇದಿರಾಳಿ ತಬ್ಬಿಬ್ಬಾಗುತ್ತಾನೆ. ಇದು ವಂಚನೆ, ಶಾಠ್ಯ. ಅದರಿಂದ ಗುರಿಯನ್ನು ಬದಲಿಸುವುದಿಲ್ಲ ಎನ್ನುತ್ತಾನೆ ಕರ್ಣ.

ತಥೈವ ಚೋಕ್ತ್ವಾ ವಿಸಸರ್ಜ ತಂ ಶರಂ
ಪ್ರಯತ್ನತೋ ವರ್ಷಗಣಾಭಿಪೂಜಿತಮ್ ।
ಹತೋಽಸಿ ವೈ ಫಲ್ಗುನ ಇತ್ಯವೋಚತ್
ತತಸ್ತ್ವರನ್ನೂರ್ಜಿತಮುತ್ಸಸರ್ಜ ॥೨೩॥

ಕರ್ಣನು ಶಲ್ಯನಿಗೆ ಹೀಗೆ ಹೇಳಿ, ಪ್ರಯತ್ನದಿಂದ ಅನೇಕ ವರ್ಷಕಾಲ ತಾನು ಪೂಜಿಸಿದ್ದ ಆ ಸರ್ಪಾಸ್ತ್ರವನ್ನು ಎಸೆದುಬಿಟ್ಟ. 'ಅರ್ಜುನ! ನೀನೀಗ ಹತನಾದೆ!' ಎಂದ. ಹೀಗೆ ಹೇಳುತ್ತಲೆ ಶ್ರೇಷ್ಠವಾದ ಆ ಬಾಣವನ್ನು ಎಸೆದ.

ಸಂಧೀಯಮಾನಂ ಭುಜಗಂ ದೃಷ್ಟ್ವಾ ಕರ್ಣೇನ ಮಾಧವಃ ।
ಆಕ್ರಾಮತ್ ಸ್ಯಂದನಂ ಪದ್ಭ್ಯಾಂ ಬಲೇನ ಬಲಿನಾಂ ವರಃ ॥೨೪॥

ಅವಗಾಢೇ ರಥೇ ಭೂಮೌ ಜಾನುಭ್ಯಾಮಗಮನ್ ಹಯಾಃ ॥೨೫॥

ಕರ್ಣನು ಸರ್ಪಾಸ್ತ್ರವನ್ನು ಹೂಡಿದ್ದನ್ನು ಕಂಡು ಬಲಿಷ್ಠರಲ್ಲಿ ಶ್ರೇಷ್ಠನಾದ ಕೃಷ್ಣನು ರಥವನ್ನು ಕಾಲುಗಳಿಂದ ಬಲವಾಗಿ ಮೆಟ್ಟಿದ. ಅದರಿಂದ ರಥ ನೆಲದಲ್ಲಿ ಸ್ವಲ್ಪ ಹೂತುಹೋಯಿತು. ಕುದುರೆಗಳು ಮೊಣಕಾಲೂರಿ ನಿಂತುವು.

ತಮಾಪತಂತಂ ಜ್ವಲಿತಂ ನಿರೀಕ್ಷ್ಯ
ವಿಯದ್ಗತಂ ವೃಷ್ಣಿಕುಲ ಪ್ರವೀರಃ ।
ರಥಸ್ಯ ಚಕ್ರಂ ಸಹಸಾ ನಿಪೀಡ್ಯ
ಪಂಚಾಂಗುಲಂ ಮಜ್ಜಯತಿ ಸ್ಮ ವೀರಃ ॥೨೬॥

ಜ್ವಲಿಸುತ್ತ ಆ ಸರ್ಪಾಸ್ತ್ರವು ಆಕಾಶದಲ್ಲಿ ಬರುತ್ತಿದ್ದುದನ್ನು ಕಂಡು ಶ್ರೀಕೃಷ್ಣ ರಥಚಕ್ರವನ್ನು ಬಲವಾಗಿ ಒತ್ತಿ ಐದು ಅಂಗುಲದಷ್ಟು ಅದು ನೆಲದಲ್ಲಿ ಹೂತುಹೋಗುವಂತೆ ಮಾಡಿದ.

ತತೋಽಂತರಿಕ್ಷೇ ಸುಮಹಾನ್ನಿನಾದಃ
ಸಂಪೂಜನಾರ್ಥಂ ಮಧುಸೂದನಸ್ಯ ।
ದಿವ್ಯಾಶ್ಚ ವಾಚಃ ಸಹಸಾ ಬಭೂವು-
ರ್ದಿವ್ಯಾನಿ ಪುಷ್ಪಾಣ್ಯಥ ಸಿಂಹನಾದಾಃ ।
ತಸ್ಮಿಂಸ್ತಥಾ ವೈ ಧರಣೀಂ ನಿಮಗ್ನೇ
ರಥೇ ಪ್ರಯತ್ನಾನ್ಮಧುಸೂದನಸ್ಯ ॥೨೭॥

ಕೃಷ್ಣನ ಪ್ರಯತ್ನದಿಂದ ರಥವು ನೆಲದಲ್ಲಿ ಹೂತುಹೋದಾಗ ಅಂತರಿಕ್ಷದಲ್ಲಿ ದೊಡ್ಡ ಶಬ್ದ ಕೃಷ್ಣನ ಆರಾಧನೆಗಾಗಿ ಸ್ತುತಿರೂಪವಾಗಿ ಕೇಳಿಸಿತು. ದಿವ್ಯವಾದ ನುಡಿಗಳು ಅನಿರೀಕ್ಷಿತವಾಗಿ ಉಕ್ತವಾದುವು. ದಿವ್ಯ ಪುಷ್ಪಗಳು ಸುರಿದುವು. ಸಿಂಹನಾದಗಳು ಕೇಳಿಸಿದುವು.

ಅಥಾರ್ಜುನಸ್ಯೋತ್ತಮಗಾತ್ರಭೂಷಣಂ
ಧರಾವಿಯದ್ದ್ಯೌಸಲಿಲೇಷು ವಿಶ್ರುತಮ್ ।
ಬಲಾಸ್ತ್ರಸರ್ಗೋತ್ತಮಯತ್ನಮನ್ಯುಭಿಃ
ಶರೇಣ ಮೂರ್ಧ್ನಃ ಸ ಜಹಾರ ಸೂತಜಃ ॥೨೮॥

ಅರ್ಜುನನ ಶಿರೋಭೂಷಣವಾದ ಕಿರೀಟವು ಭೂಮಿ ಅಂತರಿಕ್ಷ ಸ್ವರ್ಗ ಪಾತಾಳಲೋಕಗಳಲ್ಲಿ ಎಲ್ಲೆಡೆ ಸುಪ್ರಸಿದ್ಧವಾಗಿತ್ತು. ಕರ್ಣನು ತನ್ನ ಬಲ ಅಸ್ತ್ರಪ್ರಯೋಗ ಉತ್ತಮ ಯತ್ನ ಹಾಗೂ ಕೋಪಗಳಿಂದ ಸರ್ಪಬಾಣದ ಮೂಲಕ ಅರ್ಜುನನ ತಲೆಯಿಂದ ಆ ಕಿರೀಟವನ್ನು ತೆಗೆದ.

ವಿಶುದ್ಧ ಜಾಂಬೂನದರತ್ನಭೂಷಿತಂ
ಪಾರ್ಥೋತ್ತಮಾಂಗಾದಹರತ್ತರಸ್ವೀ।
ತದ್ದೇಮಜಾಲಾವತತಂ ಸುಘೋಷಂ
ಜಾಜ್ವಲ್ಯಮಾನಂ ನಿಪಪಾತ ಭೂಮೌ ॥೨೯॥

ಶುದ್ಧಚಿನ್ನದಿಂದ ಮಾಡಿದ ರತ್ನಖಚಿತವಾದ ಬಂಗಾರದ ಮಾಲೆಗಳಿಂದ ಅಲಂಕೃತವಾದ ಆ ಕಿರೀಟವನ್ನು ಸರ್ಪಾಸ್ತ್ರವು ವೇಗವಾಗಿ ಅರ್ಜುನನ ತಲೆಯಿಂದ ತೆಗೆಯಿತು. ಕಿರೀಟವು ದೊಡ್ಡ ಶಬ್ದದೊಂದಿಗೆ ಪುಡಿಯಾಗಿ ಜ್ವಲಿಸುತ್ತ ನೆಲದಲ್ಲಿ ಬಿದ್ದಿತು.

ದಿವಾಕರೇಂದ್ರಜ್ವಲನಗ್ರಹತ್ವಿಷಂ
ಸುವರ್ಣಮುಕ್ತಾಮಣಿಜಾಲಭೂಷಿತಮ್ ।
ಪುರಂದರಾರ್ಥಂ ತಪಸಾ ಪ್ರಯತ್ನತಃ
ಸ್ವಯಂ ಕೃತಂ ಯದ್ ವಿಭುನಾ ಸ್ವಯಂಭುವಾ ॥೩೦॥

ಸೂರ್ಯ ಚಂದ್ರ ಗ್ರಹಗಳಂಥ ಪ್ರಕಾಶದ ಆ ಕಿರೀಟವು ಬಂಗಾರ ಮತ್ತು ಮಣಿಗಳ ಸಮೂಹದಿಂದ ಅಲಂಕೃತವಾಗಿತ್ತು. ಬ್ರಹ್ಮನು ತಾನೇ ಸ್ವತಃ ಇಂದ್ರನಿಗಾಗಿ ತಪಸ್ಸಿನಿಂದ ಮತ್ತು ಪ್ರಯತ್ನದಿಂದ ಆ ಕಿರೀಟವನ್ನು ನಿರ್ಮಿಸಿದ್ದ.

ಮಹಾರ್ಹರೂಪಂ ದ್ವಿಷತಾಂ ಭಯಂಕರಂ
ವಿಭಾತಿ ಚಾತ್ಯರ್ಥಸುಖಂ ಸುಗಂಧಿ ತತ್ ।
ನಿಜಘ್ನುಷೇ ದೇವರಿಪೂನ್ ಸುರೇಶ್ವರಃ
ಸ್ವಯಂ ದದೌ ಯತ್ಸುಮನಾಃ ಕಿರೀಟಿನೇ ॥೩೧॥

ಬಹುಮೂಲ್ಯವಾದುದು ಆ ಕಿರೀಟ, ಶತ್ರುಗಳಿಗೆ ಭಯಂಕರವಾಗಿ, ಮಿತ್ರರಿಗೆ

ಅತ್ಯಂತ ಸುಖಕಾರಿಯಾಗಿ ಸುಗಂಧ ಬೀರುತ್ತಿತ್ತು. ಅರ್ಜುನನು ದೇವಶತ್ರುಗಳಾದ ಕಾಲಕೇಯದಾನವರನ್ನು ಕೊಲ್ಲುವ ಸಂದರ್ಭದಲ್ಲಿ ದೇವೇಂದ್ರನು ಸ್ವತಃ ಪ್ರೀತಿಯಿಂದ ಅರ್ಜುನನಿಗೆ ಅದನ್ನು ತೊಡಿಸಿದ್ದ.

ಹರಾಂಬುಪಾಖಿಂಡಲವಿತ್ತಗೋಪ್ತೃಭಿಃ
ಪಿನಾಕಪಾಶಾಶನಿಸಾಯಕೋತ್ತಮೈಃ ।
ಸುರೋತ್ತಮೈರಪ್ಯವಿಷಹ್ಯಮರ್ದಿತುಂ
ಪ್ರಸಹ್ಯ ನಾಗೇನ ಜಹಾರ ಯದ್ವೃಷಃ ॥೩೨॥

'ಹರ ಅಂಬುಪ ಆಖಿಂಡಲಗೋಪ್ತೃ ವಿತ್ತಗೋಪ್ತೃ' ಅಂದರೆ, ಶಿವ ವರುಣ ಇಂದ್ರ ಕುಬೇರರು ಪಿನಾಕ ಪಾಶ ವಜ್ರಾಯುಧ ಬಾಣಗಳನ್ನು ಹಿಡಿದವರು. ಇಂಥ ದೇವೋತ್ತಮರಿಗೂ ನಾಶಮಾಡಲಾಗದ ಆ ಕಿರೀಟವನ್ನು ಅಶ್ವಸೇನನಾಗನ ಮೂಲಕ ಕರ್ಣನು ಪುಡಿ ಮಾಡಿದ.

ತದುತ್ತಮೇಷೂನ್ಮಥಿತಂ ವಿಷಾಗ್ನಿನಾ
ಪ್ರದೀಪ್ತಮರ್ಚಿಷ್ಮದಭಿಕ್ಷಿತಿ ಪ್ರಿಯಮ್ ।
ಪಪಾತ ಪಾರ್ಥಸ್ಯ ಕಿರೀಟಮುತ್ತಮಂ
ದಿವಾಕರೋಽಸ್ತಾದಿವ ಪರ್ವತಾಜ್ಜ್ವಲನ್ ॥೩೩॥

ಪ್ರಿಯವಾದ ಆ ಉತ್ತಮವಾದ ಕಿರೀಟವು ಉತ್ತಮವಾದ ಸರ್ಪಾಸ್ತ್ರದಿಂದ ಪುಡಿಯಾಯಿತು. ಸರ್ಪವಿಷದ ಬೆಂಕಿಯಿಂದ ಹೊತ್ತಿ ಉರಿದು ಜ್ವಾಲೆ ಉಗುಳುತ್ತ ಸೂರ್ಯನು ಉರಿಯುತ್ತ ಅಸ್ತಾಚಲದಿಂದ ಬೀಳುವಂತೆ ನೆಲದಲ್ಲಿ ಬಿದ್ದಿತು.

ಸ ದುಷ್ಪ್ರಭಾವೋ ವಿತಥಪ್ರತಿಜ್ಞಃ
ಕಿರೀಟಮಭ್ಯಾಹನದರ್ಜುನಸ್ಯ ।
ವಿಶುದ್ಧಜಾಂಬೂನದರತ್ನಭೂಷಿತಂ
ಜಾಜ್ವಲ್ಯಮಾನಂ ನಿಪಪಾತ ಭೂಮೌ ॥೩೪॥

ಅರ್ಜುನನ ತಲೆಯನ್ನು ಹೊಡೆಯುವ ದುಷ್ಪ್ರತಿಜ್ಞೆ ಕರ್ಣನದಾಗಿತ್ತು. ಆ ಪ್ರಯತ್ನದಲ್ಲಿ ಆತ ವಿಫಲನಾಗಿ ಕೇವಲ ಅವನ ಕಿರೀಟವನ್ನು ಹೊಡೆದ.

ಶುದ್ಧಚಿನ್ನದಿಂದಾದುದು, ರತ್ನಖಚಿತವಾದುದು ಆದ ಅದು ಚೆನ್ನಾಗಿ ಹೊಳೆಯುತ್ತ ನೆಲದಲ್ಲಿ ಬಿದ್ದಿತು.

ತತಃ ಕಿರೀಟಂ ಬಹುರತ್ನಮಂಡಿತಂ
ಜಹಾರ ನಾಗೋಽರ್ಜುನಮೂರ್ಧತೋ ಬಲಾತ್ ।
ಗಿರೇಃ ಸುಜಾತಾಂಕುರಪುಷ್ಪಿತದ್ರುಮಂ
ಮಹೇಂದ್ರವಜ್ರಃ ಶಿಖರಂ ಯಥೋತ್ತಮಮ್ ॥೩೫॥

ಬಹುರತ್ನಗಳಿಂದ ಅಲಂಕೃತವಾದ ಆ ಕಿರೀಟವನ್ನು ಅರ್ಜುನನ ಶಿರಸ್ಸಿನಿಂದ ಬಲಾತ್ಕಾರವಾಗಿ ಸರ್ಪವು ಒಳ್ಳೆಯ ಚಿಗುರು, ಹೂಗಳಿಂದ ಯುಕ್ತವಾದ ಮರಗಳುಳ್ಳ ಪರ್ವತಶಿಖರವನ್ನು ಮಹೇಂದ್ರನ ವಜ್ರಾಯುಧ ಬೀಳಿಸಿದಂತೆ ಬೀಳಿಸಿತು.

ಮಹೀ ವಿಯದ್ದ್ಯೌಃ ಸಲಿಲಾನಿ ವಾಯುನಾ
ಯಥಾ ವಿಭಿನ್ನಾನಿ ವಿಭಾಂತಿ ಭಾರತ ।
ತಥೈವ ಶಬ್ದೋ ಭುವನೇಷ್ವಭೂತ್ ತದಾ
ಜನಾ ವ್ಯವಸ್ಯನ್ ವ್ಯಥಿತಾಶ್ಚ ಚಸ್ಖಲುಃ ॥೩೬॥

ಪೃಥಿವಿ ಆಕಾಶ ಅಂತರಿಕ್ಷ ಸಮುದ್ರಗಳು ವಾಯುವಿನ ಹೊಡೆತದಿಂದ ಹೊಡೆಸಿಕೊಂಡು ಶಬ್ದಮಾಡುವಂತೆ ಅರ್ಜುನ ಕಿರೀಟವೂ ಸರ್ಪಾಸ್ತ್ರದಿಂದ ಹೊಡೆಸಿಕೊಂಡು ದೊಡ್ಡ ಶಬ್ದ ಮಾಡಿತು. ಜನರು ಅದನ್ನು ಭೂಕಂಪಾದಿ ಶಬ್ದಗಳಲ್ಲಿ ಒಂದಿರಬೇಕೆಂದೇ ಮೊದಲಿಗೆ ತಿಳಿದರು. ಬಳಿಕ ಕಿರೀಟ ಪುಡಿಯಾದ ಶಬ್ದವೆಂದು ತಿಳಿದು ವ್ಯಥೆಗೊಂಡರು, ನಡುಗಿದರು.

ತತಃ ಸಮುದ್ಗ್ರಥ್ಯ ಸಿತೇನ ವಾಸಸಾ
ಸ್ವಮೂರ್ಧಜಾನವ್ಯಥಿತಸ್ತತೋಽರ್ಜುನಃ ।
ವಿನಾ ಕಿರೀಟಂ ಶುಶುಭೇ ಸ ಪಾರ್ಥಃ
ಶ್ಯಾಮೋ ಯುವಾ ಶೈಲ ಇವಾಸ್ತಶೃಂಗಃ ॥೩೭॥

ಶ್ಯಾಮಲವರ್ಣದ ಯುವಕನಾದ ಅರ್ಜುನನು ತಲೆಗೂದಲನ್ನು ಬಿಳಿಬಟ್ಟೆಯಿಂದ ಮುಚ್ಚಿ ಕಿರೀಟವಿಲ್ಲದೆ, ಶಿಖರವಿಲ್ಲದ ಪರ್ವತದಂತೆ ಶೋಭಿಸಿದ.

ಗೋಕರ್ಣಾ ಸುಮುಖೀ ಕೃತೇನ ಇಷುಣಾ ಗೋಪುತ್ರ ಸಂಪ್ರೇಷಿತಾ
ಗೋಶಬ್ದಾತ್ಮಜಭೂಷಣಂ ಸುವಿಹಿತಂ ಸುವ್ಯಕ್ತಗೋऽಸುಪ್ರಭಮ್ ।
ದೃಷ್ಟ್ವಾ ಗೋಗತಕಂ ಜಹಾರ ಮಕುಟಂ ಗೋಶಬ್ದಗೋಪೂರಿ ವೈ
ಗೋಕರ್ಣಾಸನಮರ್ದನಶ್ಚ ನ ಯಯಾವಪ್ರಾಪ್ಯ ಮೃತ್ಯೋರ್ವಶಮ್ ॥೩೮॥

ಇದೊಂದು ಕೂಟ ಶ್ಲೋಕ.

ಇದಕ್ಕೆ ಈ ಪ್ರಚಲಿತ ಪಾಠಕ್ಕಿಂತ ಬೇರೆಯಾದ ಇನ್ನೊಂದು ಪಾಠವಿದೆ. ಸರಳವಾಗಿದೆ, ಸುಂದರವಾಗಿದೆ—

ಗೋಕರ್ಣಾಭಿಮುಖೀಕೃತೇನ ಇಷುಣಾ ಗೋಪುತ್ರಸಂಪ್ರೇಕ್ಷಿತಾ
ಗೋಶಬ್ದಾತ್ಮಜಭೂಷಣಂ ಸುವಿಹಿತಂ ಸುವ್ಯಕ್ತಗೋಸುಪ್ರಭಮ್ ।
ದೃಷ್ಟ್ವಾ ಗೋಗತಕಂ ಜಹಾರ ಮಕುಟಂ ಗೋಶಬ್ದಗೋಪೂರಿ ವೈ
ಗೋಕರ್ಣಾಸನಮರ್ದನಭ್ರಮತಯಾ ನ ಪ್ರಾಪ
ಮೃತ್ಯೋರ್ವಶಮ್ ॥೩೮॥

'ಕರ್ಣನಿಗೆ ಅರ್ಜುನವಧೆ ಮಾಡುವೆನೆಂದು ಕೇವಲ ಭ್ರಮವಿದ್ದುದರಿಂದ, ಅವನು ಅರ್ಜುನನಿಗೆ ಅಭಿಮುಖವಾಗಿ ಎಸೆದ ಸರ್ಪಾಸ್ತ್ರದಿಂದಲೂ ಕರ್ಣನನ್ನು ನೋಡುತ್ತ ಎದುರಿಗೇ ನಿಂತಿದ್ದ ಅರ್ಜುನನು ಮೃತ್ಯುವಶನಾಗಲಿಲ್ಲ. ಕರ್ಣನು ಆ ಸರ್ಪಾಸ್ತ್ರದಿಂದ ಅರ್ಜುನನ ಭೂಷಣವಾದ ಕಿರೀಟವನ್ನು ಮಾತ್ರ ತೆಗೆದ. ಗೋಚರವಾಗಿ ಎದುರಿಗೇ ಇದ್ದ ಅರ್ಜುನನ ಶಿರಸ್ಸನ್ನು ಅವನಿಗೆ ತೆಗಯಲಾಗಲಿಲ್ಲ.

'ಇದು ಸರಳ ಅರ್ಥಾನುವಾದ. ಇಲ್ಲಿ ಗೋಶಬ್ದವು ಬೇರೆಬೇರೆ ಅನೇಕ ಅರ್ಥಗಳಲ್ಲಿ ಪ್ರಯುಕ್ತವಾಗಿದೆ.

'ಗೋಕರ್ಣ'— ಗೋಶಬ್ದಕ್ಕೆ ವಾಕ್ಕು ಅಂದರೆ ವಾಗ್ರೂಪವಾದ ವೇದ ಎಂದರ್ಥವಿದೆ. 'ಗೋ'ವಿನಲ್ಲಿ ವೇದದ ಮಾತಿನಲ್ಲಿ ಸದಾ 'ಕರ್ಣ' ಕಿವಿಗೊಟ್ಟು ಕೇಳುವ ಸ್ವಭಾವದವನು. ಅಧ್ಯಯನಶೀಲನಾದವನು 'ಗೋಕರ್ಣ' ಅರ್ಜುನ. ಸಾಕ್ಷಾತ್ ಕೃಷ್ಣನಿಂದ ಗೀತೋಪದೇಶವನ್ನಾಲಿಸಿದವನು ಅರ್ಜುನ. ಅಧ್ಯಾತ್ಮಾರ್ಥದಲ್ಲಿ ಅರ್ಜುನನು ಶ್ರವಣಮನನಾದಿಗುಣಗಳಿಗೆ ಪ್ರತೀಕ. ಅಂಥ 'ಗೋಕರ್ಣ'ನಾದ ಅರ್ಜುನನಿಗೆ 'ಅಭಿಮುಖೀಕೃತೇನ' ಅಭಿಮುಖವಾಗುವಂತೆ ಮಾಡಿದ 'ಇಷುಣಾ' ಬಾಣದಿಂದ, 'ಗೋಪುತ್ರ'ನನ್ನು ಅಂದರೆ

ಸೂರ್ಯಪುತ್ರನಾದ ಕರ್ಣನನ್ನು 'ಪ್ರೇಕ್ಷಿತಾ' ನೋಡುತ್ತ ಎದುರಿಗೇ ರಥದಲ್ಲಿ ನಿಂತಿದ್ದ ಅರ್ಜುನನು 'ನ ಪ್ರಾಪ ಮೃತ್ಯೋರ್ವಶಂ' ಮೃತ್ಯುವಶನಾಗಲಿಲ್ಲ.

ಏಕೆಂದರೆ ತಾನು ಅರ್ಜುನನ ವಧ ಮಾಡಬಲ್ಲೆನೆಂದು ಕರ್ಣ ತಿಳಿದಿದ್ದುದು ಕೇವಲ ಭ್ರಮೆ.

'ಗೋ–ಕರ್ಣ' ಎಲ್ಲ ದಿಕ್ಕುಗಳಲ್ಲಿ 'ಕರ್ಣ' ಕಿವಿಗಳುಳ್ಳವನು ಸಹಸ್ರಾಕ್ಷ ನಾದ್ದರಿಂದ ಸಹಸ್ರಕರ್ಣನು ಇಂದ್ರ. ಅಥವಾ 'ಗೋ' ನೀರಿನಲ್ಲಿ ಸಮುದ್ರದಲ್ಲಿ 'ಕರ್ಣ' ಅಂದರೆ ಕರ್ಣಧಾರ, ಚುಕ್ಕಾಣಿ ಹಿಡಿದವನು ಮೂರ್ಲೋಕ ಸಾಮ್ರಾಜ್ಯದ ನಾವೆಯನ್ನು ಕರ್ಣಧಾರನಾಗಿ ನಡೆಸುವವನು ಇಂದ್ರ 'ಗೋಕರ್ಣ' ಅವನ 'ಆಸನ' ಸಿಂಹಾಸನ ಉಳ್ಳವನು ಅರ್ಜುನನೆ. ಅಂದರೆ ಅರ್ಜುನ ಸ್ವರ್ಗಲೋಕಕ್ಕೆ ಹೋಗಿದ್ದಾಗ ಇಂದ್ರ ತನ್ನ ಸಿಂಹಾಸನದಲ್ಲಿ ಅರ್ಜುನನನ್ನು ಜೊತೆಗೇ ಕೂಡಿಸಿಕೊಂಡಿದ್ದಾನೆ. ಅವನ ಅರ್ಧಾಸನ ಕೊಟ್ಟಿದ್ದಾನೆ ಎಂದಮೇಲೆ ಈ 'ಗೋಕರ್ಣಾಸನ'ನಾದ ಅರ್ಜುನನ 'ಮರ್ದನ' ಎನ್ನುವುದು ಕರ್ಣನಿಗೆ ಬರೀ ಕನಸು, ಭ್ರಮೆ. ಕರ್ಣನಿಗೆ ಈ ಭ್ರಮೆ ಇದೆ.

'ಗೋಕರ್ಣಾಸನ ಮರ್ದನ ಭ್ರಮತಯಾ' 'ಅರ್ಜುನನ ವಧೆ ಮಾಡಬಲ್ಲೆ' ಎನ್ನುವ ಭ್ರಮೆ ಇದ್ದಿದ್ದರಿಂದ 'ದೃಷ್ಟ್ವಾ ಗೋಗತ ಕಂ' ಕರ್ಣನು ಅರ್ಜುನನ ತಲೆಯನ್ನೇ ಗುರಿಯಾಗಿಟ್ಟುಕೊಂಡು ನೋಡಿದ. 'ಗೋಗತ' ಎಂದರೆ 'ಗೋಚರ'. 'ಗೋ' ಅಂದರೆ ಕಣ್ಣು. ಕಣ್ಣಿಗೆ ಬಿದ್ದುದು ಎಲ್ಲ 'ಗೋಚರ'ವೆನಿಸುತ್ತದೆ. ಹೀಗೆ ಗೋಚರವಾದ 'ಕಂ' ಎಂದರೆ ತಲೆ. ತಲೆಗೇ ಗುರಿಇಟ್ಟು ಸರ್ಪಾಸ್ತ್ರವನ್ನು ಎಸೆದಿದ್ದಾನೆ.

ಆದರೂ ಸರ್ಪಾಸ್ತ್ರ ತಲೆಯನ್ನು ಬಿಟ್ಟು ತಲೆಮೇಲಿನ ಕಿರೀಟಕ್ಕೇ ನಾಟಿತು. ಕಿರೀಟ ಮಾತ್ರವೇ ಪುಡಿಯಾಯಿತು. ತಲೆ ಉಳಿಯಿತು. ಅರ್ಜುನನು 'ನ ಪ್ರಾಪ ಮೃತ್ಯೋರ್ವಶಂ' ಮೃತ್ಯುವಿಗೆ ವಶನಾಗಲಿಲ್ಲ.

ಆ ಕಿರೀಟವು 'ಗೋಶಬ್ದಾತ್ಮಜ ಭೂಷಣ'ವಾಗಿತ್ತು. 'ಗೋ ಶಬ್ದ' ಅಂದರೆ ವಜ್ರಾಯುಧದ ಶಬ್ದ. ವಜ್ರಾಯುಧವನ್ನೆಸೆದು ಸಿಡಿಲಿನ ಶಬ್ದ ಉಂಟುಮಾಡುವವನು 'ಗೋಶಬ್ದ'ನು ಇಂದ್ರ. ಅರ್ಜುನನಿಗೆ ಇಂದ್ರ ತಾನೇ ತೊಡಿಸಿದ 'ಭೂಷಣ' ಈ ಮುಕುಟ. 'ಸು–ವಿಹಿತಂ' ಬ್ರಹ್ಮದೇವ ತಾನೇ ಪ್ರಯತ್ನಮಾಡಿ ಅದನ್ನು ಚೆನ್ನಾಗಿ ನಿರ್ಮಿಸಿ ಇಂದ್ರನಿಗೆ ಕೊಟ್ಟಿದ್ದ.

'ಸುವ್ಯಕ್ತಗೋ ಸುಪ್ರಭಂ' ಮೋಡಗಳ ಮರೆಯಿಂದ ಈಚೆ ಬಂದು 'ಸುವ್ಯಕ್ತ'ನಾದ 'ಗೋ' ಸೂರ್ಯನಂತೆ 'ಸುಪ್ರಭೆ' ಉಳ್ಳದ್ದು ಈ ಕಿರೀಟ.

'ಗೋಶಬ್ದ ಗೋಪೂರಿ' 'ಗೋಶಬ್ದ' 'ಗೋ' ಎಂದು 'ಶಬ್ದ' ಹೆಸರುಳ್ಳ ಸೂರ್ಯನಂತೆ 'ಗೋ' ಪ್ರಕಾಶದಿಂದ ಲೋಕವನ್ನು 'ಪೂರಿ' ತುಂಬುವ ಬೆಳಗಿಸುವ ಕಿರೀಟ ಅದು.

ಪ್ರಚಲಿತ ಪಾಠದಲ್ಲಿ ವ್ಯಾಖ್ಯಾನಕಾರರ ಪ್ರಕಾರ ಅರ್ಥಹೀಗೆ— ಕಣ್ಣುಗಳೇ ಕಿವಿಗಳಾಗಿ ಉಳ್ಳ ಸುಮುಖಿಯಾದ ಸರ್ಪಿಣಿ ತಕ್ಷಕನಾಗನ ಪತ್ನಿ, ಅಶ್ವಸೇನನ ತಾಯಿ, ಅರ್ಜುನನಿಂದ ಖಾಂಡವವನ ದಹನಕಾಲದಲ್ಲಿ ಹತಳಾಗಿದ್ದವಳು ನಿಮಿತ್ತಮಾತ್ರವಾಗಿ ಈಗ ಅರ್ಜುನನ ಕಿರೀಟವನ್ನು ಮಾತ್ರ ಹಾರಿಸಿದಳು. ಖಾಂಡವದಹನಕಾಲದಲ್ಲಿ ಪುತ್ರನಾದ ಅಶ್ವಸೇನನನ್ನು ಉಳಿಸಲು ಅವನನ್ನು ನುಂಗಿ, ವನದಿಂದ ಹಾರಿಹೋಗುತ್ತಿದ್ದಾಗ, ಅರ್ಜುನನ ಬಾಣದಿಂದ ತಾನು ಹತಳಾದರೂ ಪುತ್ರನು ಉಳಿದುಕೊಂಡಿದ್ದರಿಂದ ಪುತ್ರನನ್ನು ಉಳಿಸಿದ ತಾಯಿಯ ಮುಖವು ಸುಮುಖ. ತಾಯಿ ಸುಮುಖಿ. ತಾನು ಉಳಿಸಿದ ಪುತ್ರನು ಕಿರೀಟವನ್ನು ಹಾರಿಸಿದ್ದರಿಂದ 'ಆತ್ಮಾ ವೈ ಪುತ್ರ ನಾಮಾಸಿ' ಎಂಬಂತೆ ತಾನೇ ಕಿರೀಟವನ್ನು ಹಾರಿಸಿದಂತಾಯಿತು. 'ಗೋ' ಅಂದರೆ ರಶ್ಮಿ, ರಶ್ಮಿಯುಕ್ತನಾದ ಸೂರ್ಯ. ಅವನ 'ಪುತ್ರ' ಕರ್ಣ. ಕರ್ಣನಿಂದ 'ಪ್ರೇಷಿತಾ' ಕಳಿಸಲ್ಪಟ್ಟವಳು ಕಿರೀಟವನ್ನು ಹಾರಿಸಿದಳು. 'ಗೋ' ಅಂದರೆ ರಶ್ಮಿ, ಕುದುರೆಗಳ ಲಗಾಮು ಹಗ್ಗಗಳು. ಅವುಗಳ ಪ್ರದೇಶದಲ್ಲಿ ಅರ್ಜುನನ ಶಿರಸ್ಸು ಇದ್ದುದರಿಂದ ಅದು 'ಗೋಗತ'ವಾದ 'ಕಂ' ಗೋಗತಕಂ ಎನಿಸುತ್ತದೆ. ಶಿರಸ್ಸೆಂದರೆ ಇಲ್ಲಿ ಕುತ್ತಿಗೆ ವಿವಕ್ಷಿತವಾಗಿದೆ. ಕರ್ಣನು ಅರ್ಜುನನ ಕುತ್ತಿಗೆಯನ್ನು ನೋಡಿ ಗುರಿ ಇಟ್ಟು ತನ್ನನ್ನು ಅಂದರೆ ಸರ್ಪಾಸ್ತ್ರರೂಪದಲ್ಲಿದ್ದ ಅಶ್ವಸೇನನ ತಾಯಿಯಾದ ತನ್ನನ್ನು ಅರ್ಜುನನು ಹೊಡೆದಿದ್ದರಿಂದ ಅವಳು ಕುತ್ತಿಗೆಯನ್ನು 'ದೃಷ್ಟ್ವಾ' ನೋಡುತ್ತಿದ್ದರೂ, ಶ್ರೀಕೃಷ್ಣನು ಅರ್ಜುನನ ರಥವನ್ನು ನೆಲದಲ್ಲಿ ಒತ್ತಿದ್ದರಿಂದ, ಅರ್ಜುನನ ತಲೆ ಕೆಳಗೆ ಬಂದರೂ ಬಾಣದ ವೇಗದಿಂದ ತಾನು ಕೆಳಗೆ ಬರಲಾಗದೆ, ಆ ಪ್ರದೇಶದಲ್ಲಿದ್ದ ಕಿರೀಟವನ್ನು ಮಾತ್ರ ಅಪಹರಿಸಿದಳು. ಬಳಿಕ ಅಶ್ವಸೇನ ಪುನಃ ತನ್ನನ್ನು ಎಸೆಯುವಂತೆ ಕರ್ಣನನ್ನು ಕೇಳಿಕೊಂಡರೂ ಅವನು ನಿರಾಕರಿಸಿದ್ದರಿಂದ ತಾನೇ ಅರ್ಜುನನನ್ನು ಕೊಲ್ಲಲು ಬಂದ. ಆಗ ಅರ್ಜುನನ ಬಾಣದಿಂದ ಹತನಾದ. ಹೀಗೆ ಅರ್ಜುನನು 'ಅಪ್ರಾಪ್ಯ' ಸರ್ಪವನ್ನು ಪುನಃ ಹೊಂದದೆ 'ಮೃತ್ಯೋರ್ವಶಂ ನ ಯಯೌ' ಮೃತ್ಯುವಶನಾಗಲಿಲ್ಲ. 'ಸುವ್ಯಕ್ತ'ವಾದ 'ಗೋ' 'ಅಸು' ತೇಜೋಬಲಗಳಿಂದ 'ಪ್ರಭಂ' ಹೊಳೆಯುವ ಅರ್ಜುನನನ್ನು ನೋಡಿಯೂ ಅವನನ್ನು ಕೊಲ್ಲಲಾಗಲಿಲ್ಲ. 'ಗೋಶಬ್ದ' 'ಗೋ' ರಶ್ಮಿಗಳಿರುವುದರಿಂದ ರಶ್ಮಿಉಳ್ಳವನೆಂದು 'ಶಬ್ದ' ವ್ಯವಹಾರವುಳ್ಳವನು

ಸೂರ್ಯ. ಅವನಂತೆ 'ಗೋ'ಗಳಿಂದ ಕಿರಣಗಳಿಂದ ಲೋಕವನ್ನು 'ಪೂರಿ' ತುಂಬಿಸುವ ಕಿರೀಟವು 'ಗೋಶಬ್ದ ಗೋಪೂರಿ'ಯಾಗಿದೆ. ಅಂಥ ಕಿರೀಟವನ್ನು ಮಾತ್ರ ಹಾರಿಸಲು ಸಾಧ್ಯವಾಯಿತು. ಅರ್ಜುನನು 'ಗೋಕರ್ಣ'ವಾದ ಸರ್ಪವನ್ನು 'ಅಸನ' ಬಾಣಪ್ರಯೋಗದಿಂದ 'ಮರ್ದನಃ' ಸಂಹಾರ ಮಾಡಿದ. 'ಕೃತೇನ ಇಷುಣಾ' ಅಂದರೆ ತಾಯಿ ಸ್ವತಃ ನಿರ್ಮಿಸಿ ರಕ್ಷಿಸಿದ ಮಗನೇ ಬಾಣರೂಪವಾಗಿದ್ದಾನೆ, ಅಂಥ ಬಾಣದಿಂದ ಯುಕ್ತಳಾಗಿ ಅವನ ಮೂಲಕ 'ಸುಮುಖಿ'ಯು ಕಿರೀಟವನ್ನು ಹಾರಿಸಿದಳು ಎಂದರ್ಥ. ನೀಲಕಂಠೀ ಮುಂತಾದ ವ್ಯಾಖ್ಯಾನಕಾರರು ಹೀಗೆ ವ್ಯಾಖ್ಯಾನ ಮಾಡಿದ್ದಾರೆ.

ಸ ಸಾಯಕಃ ಕರ್ಣಭುಜೇರಿತಸ್ತತೋ
ಹುತಾಶನಾರ್ಕಪ್ರತಿಮದ್ಯುತಿರ್ಮಹಾನ್ ।
ಮಹೋರಗಃ ಕೃತವೈರೋಽರ್ಜುನೇನ
ಕಿರೀಟಮಾಸಾದ್ಯ ಸಮುತ್ಪಪಾತ ॥೫೯॥

ಕರ್ಣನ ಕೈಯಿಂದ ಪ್ರಯೋಗಿಸಲ್ಪಟ್ಟ ಆ ಮಹಾಬಾಣವು ಅಗ್ನಿ–ಸೂರ್ಯರಂತೆ ಹೊಳೆಯುವ ಮಹಾಸರ್ಪ, ಅರ್ಜುನನಲ್ಲಿ ವೈರ ಮಾಡಿದ್ದವನು. ಅವನು ಕಿರೀಟವನ್ನು ಎತ್ತಿಕೊಂಡು ಮೇಲೆ ಹಾರಿದ.

ತಂ ಚಾಪಿ ದಗ್ಧ್ವಾ ತಪನೀಯಚಿತ್ರಂ
ಕಿರೀಟಮಸ್ಯಾತ್ಮವಿನಾಶನಾಯ ।
ಇಯೇಷ ಗಂತುಂ ಪುನರೇವ ತೂಣಂ
ಪೃಷ್ಟಶ್ಚ ಕರ್ಣೇನ ತತೋಽಬ್ರವೀದಿದಮ್ ॥೬೦॥

ಅರ್ಜುನನ ಬಂಗಾರದ ಸುಂದರವಾದ ಆ ಕಿರೀಟವನ್ನು ಸುಟ್ಟ ಬಳಿಕ ತನ್ನ ವಿನಾಶವನ್ನು ತಾನೇ ತಂದುಕೊಳ್ಳುವುದಕ್ಕೆಂದು ಕರ್ಣನ ಬತ್ತಳಿಕೆಯನ್ನು ತಿರುಗಿ ಪ್ರವೇಶಮಾಡಲು ಬಯಸಿದ ಅಶ್ವಸೇನ. ಕರ್ಣ ಕೇಳಿದಾಗ ಅವನು ನುಡಿದ.

ಮುಕ್ತಸ್ತ್ವಯಾಹಂ ನ ಸಮೀಕ್ಷ್ಯ ಕರ್ಣ
ಶಿರೋ ಹೃತಂ ಯನ್ನ ಮಯಾರ್ಜುನಸ್ಯ ।
ಸಮೀಕ್ಷ್ಯ ಮಾಂ ಮುಂಚ ರಣೇ ತ್ವಮಾಶು
ಹಂತಾಸ್ಮಿ ಶತ್ರುಂ ತವ ಚಾತ್ಮನಶ್ಚ ॥೬೧॥

ಕರ್ಣ, ನೀನು ಗುರಿಯನ್ನು ಸರಿಯಾಗಿ ಲಕ್ಷ್ಯವಿಟ್ಟು ನೋಡದೆ ನನ್ನನ್ನು ಎಸೆದುದರಿಂದ ಅರ್ಜುನನ ಶಿರಸ್ಸನ್ನು ಹಾರಿಸಲು ನನಗೆ ಶಕ್ಯವಾಗಲಿಲ್ಲ. ಸರಿಯಾಗಿ ನೋಡಿ ರಣದಲ್ಲಿ ನನ್ನನ್ನು ಎಸೆ. ನಿನಗೂ ನನಗೂ ಶತ್ರುವಾಗಿರುವ ಅರ್ಜುನನನ್ನು ನಾನು ಬೇಗನೆ ಸಂಹರಿಸುತ್ತೇನೆ.

ಇತ್ಯೇವಮುಕ್ತೋ ಯುಧಿ ಸೂತಪುತ್ರ-
ಸ್ತಮಬ್ರವೀತ್ ಕೋ ಭವಾನುಗ್ರರೂಪಃ ॥೪೨॥

ರಣದಲ್ಲಿ ಅಶ್ವಸೇನ ನಾಗನು ಹೀಗೆ ಹೇಳಿದಾಗ ಕರ್ಣನು ಕೇಳಿದ, 'ಯಾರು ನೀನು, ಉಗ್ರರೂಪದವನು?'

ತಮಬ್ರವೀದ್ ವಿದ್ಧಿ ಕೃತಾಗಸಂ ಮಾಂ
ಪಾರ್ಥೇನ ಮಾತುರ್ವಧಜಾತವೈರಮ್ ।
ಯದಿ ಸ್ವಯಂ ವಜ್ರಧರೋಽಸ್ಯ ಗೋಪ್ತಾ
ತಥಾಪಿ ಯಾತಾ ಪಿತೃರಾಜವೇಶ್ಮನಿ ॥೪೩॥

'ಅರ್ಜುನನು ನನ್ನಲ್ಲಿ ಅಪರಾಧ ಮಾಡಿದ್ದಾನೆ, ನನ್ನ ತಾಯಿಯನ್ನು ಕೊಂದು ನನ್ನ ವೈರವನ್ನು ಕಟ್ಟಿಕೊಂಡಿದ್ದಾನೆ. ಸ್ವತಃ ದೇವೇಂದ್ರನೇ ಈತನ ರಕ್ಷಣೆಗೆ ನಿಂತರೂ ಅವನೂ ಯಮಸದನಕ್ಕೇ ಹೋಗುತ್ತಾನೆ' ಎಂದು ಅಶ್ವಸೇನ ನುಡಿದ.

ತ್ವಂ ಮಾವಮಂಸ್ಥಾಃ ಕುರು ಮೇ ವಚೋಽದ್ಯ
ನಿಹನ್ಮಿ ಶತ್ರುಂ ತವ ಮುಂಚ ಮಾಂ ತ್ವಮ್ ।
ತ್ವಯಾ ನ ಸಂಧಾನವತಾಹಂ ಮುಕ್ತ-
ಸ್ತೇನಾಪಿ ಕೃಷ್ಣೇನ ಚ ವಂಚಿತೋಽಸ್ಮಿ ॥೪೪॥

'ಕರ್ಣ, ನೀನು ಅವಮಾನಿಸಬೇಡ, ನನ್ನ ಮಾತನ್ನು ನಡೆಸಿಕೊಡು. ನಿನ್ನ ಶತ್ರುವನ್ನು ಕೊಲ್ಲುತ್ತೇನೆ, ಪುನಃ ನನ್ನನ್ನು ಎಸೆ. ನೀನು ಸರಿಯಾಗಿ ಗುರಿ ಇಟ್ಟು ಬಿಲ್ಲಿಗೆ ನನ್ನನ್ನು ಹೂಡದೇ ಎಸೆದುಬಿಟ್ಟೆ. ಕೃಷ್ಣನಿಂದಲೂ ನಾನು ವಂಚನೆಗೊಳಗಾದೆ.'

ಕರ್ಣಃ

ನ ನಾಗ ಕರ್ಣೋ೯ಽದ್ಯ ರಣೇ ಪರಸ್ಯ
ಬಲಂ ಸಮಾಸ್ಥಾಯ ಜಯಂ ಬುಭೂಷೇತ್ ।
ನ ಸಂದಧೇ ದ್ವಿಃ ಶರಮೇವ ನಾಗ
ಯದ್ಯರ್ಜುನಾನಾಂ ಶತಮೇವ ಹನ್ಯಾತ್ ॥೪೫॥

ಕರ್ಣನುಡಿದ— ನಾಗನೆ, ಈ ಕರ್ಣ ಇನ್ನೊಬ್ಬರ ಬಲವನ್ನು ಆಶ್ರಯಿಸಿ ಜಯ ಸಂಪಾದನೆ ಮಾಡಲು ಬಯಸುವುದಿಲ್ಲ. ನೂರು ಅರ್ಜುನರನ್ನು ಕೊಲ್ಲಬೇಕಾಗಿ ಬಂದರೂ ಕರ್ಣನು ಎರಡು ಬಾರಿ ಬಾಣವನ್ನು ಹೂಡಿದ್ದಿಲ್ಲ.

'ಸರ್ಪಾಸ್ತ್ರದಲ್ಲಿ ನಾನು ಪೂಜಿಸುತ್ತಿದ್ದ ನಾಗದೇವತೆಗಳೇ ನನ್ನ ಶತ್ರುವನ್ನು ಗೆಲ್ಲಬೇಕು. ಮೂರನೆಯವನಾದ ನಿನ್ನನ್ನು ನಾನು ಶತ್ರುನಾಶ ಮಾಡಲು ಕೇಳಿಕೊಳ್ಳಲಾರೆ' ಎನ್ನುತ್ತಾನೆ ಕರ್ಣ. ಸರ್ಪಾಸ್ತ್ರ ಗುರಿತಪ್ಪಿರದಿದ್ದರೆ 'ಅಶ್ವಸೇನನ ಸಹಾಯದಿಂದ ಕರ್ಣ ಶತ್ರುವಧೆ ಮಾಡಿದನೆಂ'ದು ಅಪಖ್ಯಾತಿ ಬರುತ್ತಿತ್ತು. ಅದರಿಂದ ಕೃಷ್ಣ ಕರ್ಣನಿಗೆ ವಂಚನೆ ಮಾಡಿಲ್ಲ. ಅನುಗ್ರಹವನ್ನೇ ಮಾಡಿದ. ಅರ್ಜುನನನ್ನೂ ರಕ್ಷಿಸಿದ.

ವ್ಯಾಲಾಸ್ತ್ರಸರ್ಗೋತ್ತಮಯತ್ನಮನ್ಯು ಭಿ-
ರ್ಹಂತಾಸ್ಮಿ ಪಾರ್ಥಂ ಸುಸುಖೀ ವ್ರಜ ತ್ವಮ್ ॥೪೬॥

ನಾಗನೆ, ಅಸ್ತ್ರಪ್ರಯೋಗ, ಉತ್ತಮಪ್ರಯತ್ನ ಹಾಗೂ ರೋಷಗಳಿಂದಲೇ ಅರ್ಜುನನನ್ನು ನಾನು ಕೊಲ್ಲುವೆನು, ನೀನು ಹೋಗು, ಸುಖವಾಗಿರು.'

ಸ ಏವಮುಕ್ತೋ ಯುಧಿ ನಾಗರಾಜಃ
ಕರ್ಣೇನ ರೋಷಾದಸಹಂಸ್ತು ವಾಕ್ಯಮ್ ।
ಸ್ವಯಂ ಪ್ರಾಯಾತ್ ಪಾರ್ಥವಧಾಯ ರಾಜನ್
ಕೃತ್ವೇಷುರೂಪಂ ವಿಜಿಘಾಂಸುರರ್ಜುನಮ್ ॥೪೭॥

ರಾಜನೆ, ಕರ್ಣನು ರಣದಲ್ಲಿ ಈ ಮಾತನ್ನು ನುಡಿದಾಗ ನಾಗರಾಜನಿಗೆ ಸಹನೆಯಾಗಲಿಲ್ಲ. ರೋಷದಿಂದ ಅರ್ಜುನನನ್ನು ಕೊಲ್ಲುವ ಬಯಕೆಯಿಂದ ಬಾಣರೂಪವನ್ನು ತಳೆದು ಅರ್ಜುನನ ವಧೆಗೆ ತಾನೇ ಹೊರಟ.

ತತಃ ಕೃಷ್ಣಃ ಪಾರ್ಥಮುವಾಚ ಸಂಖೇ
ಮಹೋರಗಂ ಕೃತವೈರಂ ಜಹಿ ತ್ವಮ್ ॥೪೮॥

ಆಗ ಶ್ರೀಕೃಷ್ಣನು ರಣದಲ್ಲಿ ಅರ್ಜುನನಿಗೆ ನುಡಿದ, 'ನಿನ್ನಲ್ಲಿ ವೈರಮಾಡಿರುವ ಮಹಾಸರ್ಪವನ್ನು ನೀನು ವಧಿಸು'

ಸ ಏವಮುಕ್ತೋ ಮಧುಸೂದನೇನ
ಗಾಂಡೀವಧನ್ವಾ ರಿಪುಪೂಗ್ರಧನ್ವಾ ।
ಉವಾಚ ಕೋ ನ್ವೇಷ ಮಮಾದ್ಯ ನಾಗಃ
ಸ್ವಯಂ ಯ ಆಗಾದ್ ಗರುಡಸ್ಯೇವ ವಕ್ತ್ರಮ್ ॥೪೯॥

ಶತ್ರುಗಳಿಗೆ ಉಗ್ರವಾದ ಧನುಸ್ಸನ್ನು ಧರಿಸುವ ಗಾಂಢೀವಧನುರ್ಧಾರಿಯಾದ ಅರ್ಜುನನು ಕೃಷ್ಣನ ಈ ಮಾತನ್ನು ಕೇಳಿ ನುಡಿದ: 'ಯಾರು ಈ ನಾಗ? ಗರುಡನ ಬಾಯಿಗೆ ತಾನೇ ಬೀಳುವಂತೆ ನನ್ನ ಬಳಿಗೆ ಬರುತ್ತಿದ್ದಾನೆ!'

ಕೃಷ್ಣಃ

ಯೋಽಸೌ ತ್ವಯಾ ಖಾಂಡವೇ ಚಿತ್ರಭಾನುಂ
ಸಂತರ್ಪಯಾನೇನ ಧನುರ್ಧರೇಣ ।
ವಿಯದ್ಗತೋ ಬಾಣನಿಕೃತ್ತದೇಹೋ
ಹ್ಯನೇಕರೂಪೋ ನಿಹತಾಸ್ಯ ಮಾತಾ ॥೫೦॥

ಶ್ರೀಕೃಷ್ಣ ನುಡಿದ— 'ಧನುರ್ಧಾರಿ ನೀನು ಖಾಂಡವವನದಲ್ಲಿ ಅಗ್ನಿಯನ್ನು ತೃಪ್ತಿಪಡಿಸುತ್ತಿದ್ದಾಗ ಆಕಾಶದಲ್ಲಿ ಹಾರಿಹೋಗುತ್ತಿದ್ದ ಈತನ ಶರೀರವನ್ನು ಬಾಣದಿಂದ ಕತ್ತರಿಸಿದ್ದೆ. ಈತನ ತಾಯಿಯನ್ನೂ ಕೊಂದಿದ್ದೆ. ಅವನು ಅನೇಕ ರೂಪದವನು. ಬಾಣರೂಪದಿಂದ ಬರುತ್ತಿದ್ದಾನೆ.

ಸ ಏಷ ತೇ ವೈರಮನುಸ್ಮರನ್ ವೈ
ತ್ವಾಮದ್ಯ ಚಾಯಾತಿ ವಧಾಯ ಪಾರ್ಥ ।
ನಭಶ್ಚ್ಯುತಾಂ ಪ್ರಜ್ವಲಿತಾಂ ಮಹೋಲ್ಕಾಂ
ಪಶ್ಯೈನಮಾಯಾಂತಮಮಿತ್ರಸಾಹ ॥೫೧॥

ಅವನು ಈಗ ನಿನ್ನಲ್ಲಿ ವೈರವನ್ನೇ ಬಗೆದು ನಿನ್ನನ್ನು ಕೊಲ್ಲಲು ಬರುತ್ತಿದ್ದಾನೆ, ಅರ್ಜುನ! ಶತ್ರುನಾಶಕನೆ, ಆಕಾಶದಿಂದ ಉದುರಿ ಬೀಳುವ ಉರಿವ ದೊಡ್ಡ ಉಲ್ಕೆಯಂತೆ ಬರುತ್ತಿದ್ದಾನೆ ನೋಡು.

ಸಂಜಯಃ

ತತಸ್ತು ಜಿಷ್ಣುಃ ಪರಿವೃತ್ಯ ರೋಷಾ-
ಚ್ಚಚ್ಛೇದ ಷಡ್ಭಿರ್ನಿಶಿತೈಃ ಪೃಷತ್ಕೈಃ ।
ನಾಗಂ ವಿಯತ್ತಿರ್ಯಗಿವೋತ್ಪತಂತಂ
ಸ ಛಿನ್ನಗಾತ್ರೋ ನಿಪಪಾತ ಭೂಮೌ ॥೫೨॥

ಸಂಜಯ ನುಡಿದ— ಆಗ ಅರ್ಜುನನು ರೋಷದಿಂದ ಸರ್ಪದ ಕಡೆಗೆ ತಿರುಗಿ, ಆಕಾಶದಲ್ಲಿ ವಕ್ರಗತಿಯಿಂದ ಹಿಂತಿರುಗಿ ತನ್ನ ಕಡೆಗೇ ಹಾರಿಬರುತ್ತಿದ್ದ ಆತನನ್ನು ಹರಿತವಾದ ಆರು ಬಾಣಗಳಿಂದ ಕತ್ತರಿಸಿದ. ಅವನು ಛಿನ್ನಭಿನ್ನವಾಗಿ ನೆಲದಲ್ಲಿ ಬಿದ್ದ.

ಹತೇ ತು ತಸ್ಮಿನ್ ಭುಜಗೇ ಕಿರೀಟಿನಾ
ಸ್ವಯಂ ವಿಭುಃ ಪಾರ್ಥಿವ ಭೂತಳಾದಥ ।
ಸಮುಜ್ಜಹಾರಾಶು ಮಹಾಭುಜಃ ಸ ತಂ
ರಥಂ ಭುಜಾಭ್ಯಾಂ ಪುರುಷೋತ್ತಮಃ ಪುನಃ ॥೫೩॥

ರಾಜನೇ! ಅಶ್ವಸೇನ ನಾಗನು ಅರ್ಜುನನಿಂದ ಹತನಾದಾಗ ಸರ್ವಶಕ್ತನಾದ ಶ್ರೀಕೃಷ್ಣ ಬೇಗನೆ ಆ ರಥವನ್ನು ತಾನೇ ಎರಡು ಕೈಗಳಿಂದ ಪುನಃ ನೆಲದಿಂದ ಮೇಲೆತ್ತಿದ.

ತ್ರಾತಶ್ಚ ಪಾರ್ಥಃ ಪ್ರಣತಾಶ್ಚ ವಾಹಾಃ
ಸಂಸ್ಥಾಪ್ಯ ಕೃಷ್ಣೇನ ಪುನಸ್ತದೀಯಾಃ ॥೫೪॥

ಶ್ರೀಕೃಷ್ಣನು ಕಾಲಿಂದ ರಥವನ್ನು ನೆಲಕ್ಕೆ ಒತ್ತಿದಾಗ ಅದರ ಭಾರಕ್ಕೆ ಕುದುರೆಗಳು ನೆಲದ ಮೇಲೆ ಮೊಳಕಾಲೂರಿ ನಿಂತಿದ್ದುವು. ಕೃಷ್ಣನು ಈಗ ರಥವನ್ನು ಮೇಲೆತ್ತಿ ಕುದುರೆಗಳನ್ನು ಪುನಃ ಕಾಲೂರಿ ನಿಲ್ಲುವಂತೆ ಮಾಡಿ ಕಾಪಾಡಿದ, ಅರ್ಜುನನನ್ನೂ ಕಾಪಾಡಿದ.

ತಸ್ಮಿನ್ ಮುಹೂರ್ತೇ ದಶಭಿಃ ಪೃಷತ್ಕೈಃ
ಶಿಲಾಶಿತೈರ್ಬರ್ಹಿಣಕಂಕಪತ್ರೈಃ ।
ವಿವ್ಯಾಧ ಕರ್ಣಃ ಪುರುಷಪ್ರವೀರಂ
ಧನಂಜಯಂ ತಿರ್ಯಗವೇಕ್ಷಮಾಣಃ ॥೫೫॥

ಆ ಮುಹೂರ್ತದಲ್ಲಿ ಕರ್ಣನು ವಕ್ರದೃಷ್ಟಿಯಿಂದ ನೋಡುತ್ತ ನವಿಲು ಹದ್ದುಗಳ ಗರಿಗಳಿಂದ ಕೂಡಿದ, ಮಸೆಗಲ್ಲಿಗೆ ತಿಕ್ಕಿ ಹದ ಮಾಡಿದ ಹತ್ತು ಬಾಣಗಳಿಂದ ಪುರುಷೋತ್ತಮನಾದ ಅರ್ಜುನನನ್ನು ಹೊಡೆದ.

ತತೋಽರ್ಜುನೋ ದ್ವಾದಶಭಿರ್ವಿಮುಕ್ತೈ-
ರ್ವಾರಾಹಕರ್ಣೈರ್ನಿಶಿತೈಃ ಸಮರ್ಪ್ಯ ।
ನಾರಾಚಮಾಶೀವಿಷತುಲ್ಯವೇಗಂ
ಆಕರ್ಣಪೂರ್ಣಾಯತಮುತ್ಸಸರ್ಜ ॥೫೬॥

ಅರ್ಜುನನೂ ಹನ್ನೆರಡು ತೀಕ್ಷ್ಣ ವರಾಹಕರ್ಣ ಬಾಣಗಳಿಂದ ಹೊಡೆದು ಪುನಃ ಸರ್ಪವಿಷದ ವೇಗದಂಥ ವೇಗವುಳ್ಳ ನಾರಾಚವನ್ನು ಕಿವಿಯವರೆಗೆ ಸೆಳೆದು ಕರ್ಣನ ಮೇಲೆ ಎಸೆದ.

ಸ ಚಿತ್ರವರ್ಮೇಷುವರೋ ವಿದಾರ್ಯ
ಪ್ರಾಣಾನ್ನಿರಸ್ಯನ್ನಿವ ಸಾಧು ಮುಕ್ತಃ ।
ಕರ್ಣಸ್ಯ ಪೀತ್ವಾ ರುಧಿರಂ ವಿವೇಶ
ವಸುಂಧರಾಂ ಶೋಣಿತದಿಗ್ಧವಾಜಃ ॥೫೭॥

ಚೆನ್ನಾಗಿ ಎಸೆದ ಆ ಉತ್ತಮ ಬಾಣವು ಕರ್ಣನ ಸುಂದರವಾದ ಕವಚವನ್ನು ಭೇದಿಸಿ, ಪ್ರಾಣವನ್ನೇ ಕಳೆಯುವುದೋ ಎಂಬಂತೆ ಕರ್ಣನ ನೆತ್ತರನ್ನು ಕುಡಿದು, ರೆಕ್ಕೆಗಳಲ್ಲಿ ನೆತ್ತರಿಂದ ತೋಯ್ದುಕೊಂಡು, ನೆಲವನ್ನು ಹೊಕ್ಕಿತು.

ತತೋ ವೃಷೋ ಬಾಣನಿಪಾತಕೋಪಿತೋ
ಮಹೋರಗೋ ದಂಡವಿಘಟ್ಟಿತೋ ಯಥಾ ।
ತಥಾಶುಕಾರೀ ವ್ಯಸೃಜಚ್ಚರೋತ್ತಮಾನ್
ಮಹಾವಿಷಃ ಸರ್ಪ ಇವೋತ್ತಮಂ ವಿಷಮ್ ॥೫೮॥

ಕೋಲಿಂದ ಹೊಡೆದ ದೊಡ್ಡ ಹಾವಿನಂತೆ ಬಾಣಗಳ ಹೊಡೆತದಿಂದ ಕರ್ಣ

ಕುಪಿತನಾದ. ಮಹಾವಿಷದ ಸರ್ಪವು ಉತ್ತಮ ವಿಷವನ್ನು ಕಾರುವಂತೆ ವೇಗವುಳ್ಳ ಕರ್ಣನು ಉತ್ತಮವಾದ ಬಾಣಗಳನ್ನು ಎಸೆದ.

ಜನಾರ್ದನಂ ದ್ವಾದಶಭಿಃ ಪರಾಭಿನತ್
ನವೈರ್ನವತ್ಯಾ ಚ ಶರೈಸ್ತಥಾರ್ಜುನಮ್ ।
ಶರೇಣ ಘೋರೇಣ ಪುನಶ್ಚ ಪಾಂಡವಂ
ವಿಭಿದ್ಯ ಕರ್ಣೋಽಭ್ಯನದತ್ ಜಹಾಸ ಚ ॥೫೯॥

ಶ್ರೀಕೃಷ್ಣನನ್ನು ಹನ್ನೆರಡು ಬಾಣಗಳಿಂದ ಹೊಡೆದು, ತೊಂಬತ್ತು ನೂತನ ಬಾಣಗಳಿಂದ ಅರ್ಜುನನನ್ನೂ ಹೊಡೆದ. ಪುನಃ ಘೋರವಾದ ಬಾಣದಿಂದ ಅರ್ಜುನನನ್ನು ಹೊಡೆದು ಕರ್ಣನು ಗರ್ಜಿಸಿದ. ಅಟ್ಟಹಾಸ ಗೈದ.

ತಮಸ್ಯ ಹರ್ಷಂ ಮಮೃಷೇ ನ ಪಾಂಡವೋ
ಬಿಭೇದ ಮರ್ಮಾಣಿ ತತೋಽಸ್ಯ ಮರ್ಮವಿತ್ ।
ಪರಃಶತೈಃ ಪತ್ರಿಭಿರಿಂದ್ರವಿಕ್ರಮ-
ಸ್ತಥಾ ಯಥೇಂದ್ರೋ ಬಲಮೋಜಸಾಽಹನತ್ ॥೬೦॥

ಕರ್ಣನ ಹರ್ಷವನ್ನು ಅರ್ಜುನ ಸಹಿಸಲಿಲ್ಲ. ಮರ್ಮಸ್ಥಳವನ್ನು ಬಲ್ಲ ಅರ್ಜುನ ಕರ್ಣನ ಮರ್ಮಸ್ಥಳಗಳಿಗೆ ಹೊಡೆದ. ಇಂದ್ರನು ಬಲಾಸುರನನ್ನು ಹೊಡೆದಂತೆ ಇಂದ್ರನಂಥ ಪರಾಕ್ರಮಿಯಾದ ಅರ್ಜುನನು ರೆಕ್ಕೆಗಳುಳ್ಳ ನೂರಾರು ಬಾಣಗಳಿಂದ ಕರ್ಣನನ್ನು ಬಲವಾಗಿ ಹೊಡೆದ.

ತತಃ ಶರಾಣಾಂ ನವತಿಂ ತದಾರ್ಜುನಃ
ಸಸರ್ಜ ಕರ್ಣೇ ಽಂತಕದಂಡಸನ್ನಿಭಾಮ್ ।
ಶರೈರ್ಭೃಶಾಯಸ್ತತನುಃ ಪ್ರವಿವ್ಯಧೇ
ತಥಾ ಯಥಾ ವಜ್ರವಿದಾರಿತೋಽಚಲಃ ॥೬೧॥

ಯಮದಂಡದಂಥ ತೊಂಬತ್ತು ಬಾಣಗಳನ್ನು ಅರ್ಜುನನು ಕರ್ಣನ ಮೇಲೆ ಎಸೆದ. ವಜ್ರಾಯುಧದಿಂದ ಸೀಳಿದ ಬೆಟ್ಟದಂತೆ, ಕರ್ಣನು ಬಾಣಗಳಿಂದ ಆಯಾಸಗೊಂಡು ನೋವನ್ನು ಅನುಭವಿಸಿದ.

ಮಣಿಪ್ರವೇಕೋತ್ತಮವಜ್ರಹಾಟಕೈ-
ರಲಂಕೃತಂ ಚಾಸ್ಯ ವರಾಂಗಭೂಷಣಮ್ ।
ಪ್ರವಿದ್ಧಮುರ್ವ್ಯಾಂ ನಿಪಪಾತ ಪತ್ರಿಭಿ-
ರ್ಧನಂಜಯೇನೋತ್ತಮಕುಂಡಲೇಽಪಿ ಚ ॥೬೨॥

ಉತ್ತಮ ರತ್ನ ಉತ್ತಮವಾದ ವಜ್ರ ಮತ್ತು ಬಂಗಾರದಿಂದ ಅಲಂಕೃತವಾದ ಕರ್ಣನ ಶಿರೋಭೂಷಣವಾದ ಕಿರೀಟವು ಅರ್ಜುನನ ಬಾಣಗಳಿಂದ ಹೊಡೆಯಲ್ಪಟ್ಟು ನೆಲದಲ್ಲಿ ಬಿದ್ದಿತು. ಉತ್ತಮವಾದ ಕುಂಡಲಗಳೂ ಬಿದ್ದುವು.

ಮಹಾಧನಂ ಶಿಲ್ಪಿವರೈಃ ಪ್ರಯತ್ನತಃ
ಕೃತಂ ಯದಸ್ಯೋತ್ತಮವರ್ಮ ಭಾಸ್ವರಮ್ ।
ಸುದೀರ್ಘಕಾಲೇನ ತದಸ್ಯ ಪಾಂಡವಃ
ಕ್ಷಣೇನ ಬಾಣೈರ್ಬಹುಧಾ ವ್ಯಶಾತಯತ್ ॥೬೩॥

ಶ್ರೇಷ್ಠ ಅಕ್ಕಸಾಲಿಗಳು ದೀರ್ಘಕಾಲ ಪ್ರಯತ್ನಮಾಡಿ ನಿರ್ಮಿಸಿದ್ದ ಹೊಳೆಯುವ ಕರ್ಣನ ಅಮೂಲ್ಯವಾದ ಕವಚವನ್ನು ಕೂಡ ಬಾಣಗಳಿಂದ ಕ್ಷಣದಲ್ಲಿ ಬಹುಚೂರುಗಳಾಗಿ ಮಾಡಿದ.

ಸ ತಂ ವಿವರ್ಮಾಣಮಥೋತ್ತಮೇಷುಭಿಃ
ಶಿತೈಶ್ಚತುರ್ಭಿಃ ಕುಪಿತಃ ಪರಾಭಿನತ್ ।
ಸ ವಿವ್ಯಥೇಽತ್ಯರ್ಥಮರಿಪ್ರಹಾರತೋ
ಯಥಾತುರಃ ಪಿತ್ತಕಫಾನಿಲವ್ರಣೈಃ ॥೬೪॥

ಕವಚವಿಲ್ಲದಿದ್ದ ಕರ್ಣನನ್ನು ಅರ್ಜುನನು ಕೋಪದಿಂದ ತೀಕ್ಷ್ಣವಾದ ನಾಲ್ಕು ಉತ್ತಮ ಬಾಣಗಳಿಂದ ಹೊಡೆದ. ರೋಗಿಯು ಪಿತ್ತ ಕಫ ವಾತಗಳಿಂದ ವ್ರಣಗಳಿಂದ ಹೆಚ್ಚು ಬಳಲುವಂತೆ ಕರ್ಣನೂ ಶತ್ರುವಿನ ಅತಿಯಾದ ಪ್ರಹಾರಗಳಿಂದ ಬಹಳ ವ್ಯಥೆಪಟ್ಟ.

ಮಹಾಧನುರ್ಮಂಡಲನಿಃಸೃತೈಃ ಶಿತೈಃ
ಕ್ರಿಯಾಪ್ರಯತ್ನಪ್ರಹಿತೈರ್ಬಲೇನ ಚ ।

ತತಕ್ಷ ಕರ್ಣಂ ಬಹುಭಿಃ ಶರೋತ್ತಮೈ-
ರ್ಬಿಭೇದ ಮರ್ಮಸ್ವಪಿ ಚಾರ್ಜುನಸ್ತ್ವರನ್ ॥೬೫॥

ಮಹಾಧನುಸ್ಸನ್ನು ಮಂಡಲಾಕಾರವಾಗಿ ಮಾಡಿ, ಕ್ರಿಯೆ ಪ್ರಯತ್ನ ಬಲಗಳಿಂದ ತೀಕ್ಷ್ಣವಾದ ಬಹಳ ಉತ್ತಮ ಬಾಣಗಳನ್ನೆಸೆದು ಅರ್ಜುನನು ಕರ್ಣನನ್ನು ಗಾಯಗೊಳಿಸಿದ, ವೇಗವಾಗಿ ಮರ್ಮಗಳಲ್ಲಿಯೂ ಭೇದಿಸಿದ.

ದೃಢಾಹತಃ ಪತ್ರಿಭಿರುಗ್ರವೇಗೈಃ
ಪಾರ್ಥೇನ ಕರ್ಣೋ ವಿವಿಧೈಃ ಶಿತಾಗ್ರೈಃ ।
ಬಭೌ ಗಿರಿರ್ಗೈರಿಕಧಾತುರಕ್ತಃ
ಕ್ಷರನ್ ಪ್ರಪಾತೈರಿವ ರಕ್ತಮಂಭಃ ॥೬೬॥

ಉಗ್ರವೇಗದ ತೀಕ್ಷ್ಣವಾದ ಮೊನೆಯುಳ್ಳ ನಾನಾ ಬಗೆಯ ಬಾಣಗಳಿಂದ ಅರ್ಜುನನು ಕರ್ಣನನ್ನು ದೃಢವಾಗಿ ಹೊಡೆದಾಗ, ಗೈರಿಕಾದಿ ಕೆಂಪುಧಾತುಗಳಿಂದ ಕೆಂಪಾದ ಬೆಟ್ಟವು ಜಲಪಾತಗಳಲ್ಲಿ ಕೆಂಪುನೀರನ್ನು ಸುರಿಸುವಂತೆ, ರಕ್ತವನ್ನು ಸುರಿಸುತ್ತ ಕರ್ಣನು ಶೋಭಿಸಿದ.

ತತೋಽರ್ಜುನಃ ಕರ್ಣಮವಕ್ರಗೈರ್ನವೈಃ
ಸುವರ್ಣಪುಂಖೈಃ ಸುದೃಢೈರಯಸ್ಮಯೈಃ ।
ಯಮೋಗ್ರದಂಡಪ್ರತಿಮೈಃ ಸ್ತನಾಂತರೇ
ಪರಾಭಿನತ್ ಕ್ರೌಂಚಮಿವಾದ್ರಿಮಗ್ನಿಜಃ ॥೬೭॥

ಸುವರ್ಣ ಪುಂಖಿಗಳುಳ್ಳ ಬಲು ದೃಢವಾದ ಉಗ್ರವಾದ ಯಮದಂಡದಂಥ ಕಬ್ಬಿಣದ ನೇರವಾದ ಹೊಸ ಬಾಣಗಳಿಂದ, ಕ್ರೌಂಚಪರ್ವತವನ್ನು ಕಾರ್ತಿಕೇಯನು ಹೊಡೆದಂತೆ, ಅರ್ಜುನನು ಕರ್ಣನನ್ನು ಎದೆಯಲ್ಲಿ ಹೊಡೆದ.

ತತಃ ಶರಾವಾಪಮಪಾಸ್ಯ ಸೂತಜೋ
ಧನುಶ್ಚ ತಚ್ಚಕ್ರಶರಾಸನೋಪಮಮ್ ।
ತತೋ ರಥಸ್ಥಃ ಸ ಮುಮೋಚ ಚ ಸ್ಖಲನ್
ಪ್ರಶೀರ್ಣಮುಷ್ಟಿಃ ಸುಭೃಶಾಹತಃ ಪ್ರಭೋ ॥೬೮॥

ಆಗ ಕರ್ಣನು ಬತ್ತಳಿಕೆಯನ್ನೂ ಬಿಟ್ಟು ಇಂದ್ರಚಾಪದಂಥ ಧನುಸ್ಸನ್ನೂ ಬಿಟ್ಟುಬಿಟ್ಟ. ಬಹು ಹೊಡೆತಗಳಿಂದ ಅವನ ಮುಷ್ಟಿ ಪೂರ್ತಿ ಸಡಿಲಾಯಿತು. ನಡುಗುತ್ತ ರಥದಲ್ಲಿ ಕುಳಿತುಬಿಟ್ಟ.

ನ ಹ್ಯರ್ಜುನಸ್ತಂ ವ್ಯಸನೇ ತದೇಯಿವಾನ್
ನಿಹಂತುಮಾರ್ಯಃ ಪುರುಷವ್ರತೇ ಸ್ಥಿತಃ ।
ತತಸ್ತಮಿಂದ್ರಾವರಜಃ ಸ ಸಂಭ್ರಮಾದ್
ಉವಾಚ ಕಿಂ ಪಾಂಡವ ಹೇ ಪ್ರಮಾದ್ಯಸೇ ॥೬೯॥

ಕರ್ಣನು ಸಂಕಟಕ್ಕೆ ಈಡಾಗಿದ್ದಾಗ ವೀರಪುರುಷರ ವ್ರತದಲ್ಲಿ ನಿಷ್ಠೆಯಿಂದಿರುವ ಪೂಜ್ಯನಾದ ಅರ್ಜುನನು ಅವನನ್ನು ಇನ್ನೂ ಹೆಚ್ಚು ಹೊಡೆಯಲಿಲ್ಲ ಆಕ್ರಮಿಸಲಿಲ್ಲ. ಆಗ ಶ್ರೀಕೃಷ್ಣ ಆತುರದಿಂದ ಕೇಳಿದ– 'ಏನು ಅರ್ಜುನ! ಏಕೆ ಲಕ್ಷ್ಯವಿಲ್ಲದೆ ನಿಂತೆ?'

ನೈವಾಹಿತಾನಾಂ ಸತತಂ ವಿಪಶ್ಚಿತಃ
ಕ್ಷಣಂ ಪ್ರತೀಕ್ಷಂತ್ಯಪಿ ದುರ್ಬಲೀಯಸಾಮ್ ।
ವಿಶೇಷತೋರೀನ್ ವ್ಯಸನೇಷು ಪಂಡಿತೋ
ನಿಹತ್ಯ ಧರ್ಮಂ ಚ ಯಶಶ್ಚ ವಿಂದತಿ ॥೭೦॥

ಬಲ್ಲವರು ದುರ್ಬಲರಾದ ಶತ್ರುಗಳನ್ನೂ ಕೂಡ ಮಣಿಸಲು ಎಂದೂ ಸಮಯಕ್ಕೆ ಕಾಯುವುದಿಲ್ಲ. ವಿಶೇಷವಾಗಿ ರಣಪಂಡಿತನು ದುಷ್ಟ ಶತ್ರುಗಳನ್ನು ಅವರು ಸಂಕಟದಲ್ಲಿ ಬಿದ್ದಾಗಲೆ ನಿಗ್ರಹಿಸಿ ಪುಣ್ಯ ಭಾಜನರಾಗುತ್ತಾನೆ, ಕೀರ್ತಿಯನ್ನು ಪಡೆಯುತ್ತಾನೆ.

ತಮೇಕವೀರಂ ತವ ಚಾಹಿತಂ ಸದಾ
ತ್ವರಸ್ವ ಕರ್ಣಂ ಸಹಸಾಭಿಮರ್ದಿತುಮ್ ।
ಪುರಾ ಸಮರ್ಥಃ ಸಮುಪೈತಿ ಸೂತಜೋ
ವಿಧ್ಯ ತ್ವಮೇನಂ ನಮುಚಿಂ ಯಥಾ ಹರಿಃ ॥೭೧॥

ಅದರಿಂದ ದೊಡ್ಡ ವೀರನಾದ, ನಿನಗೆ ಸದಾ ಶತ್ರುವಾಗಿರುವ ಕರ್ಣನನ್ನು ಅವಕಾಶ ಸಿಕ್ಕಾಗ ಒಡನೆ ಮರ್ದಿಸಲು ತ್ವರೆ ಮಾಡು. ಅವನು ಸಾವರಿಸಿಕೊಂಡು

ಆಕ್ರಮಿಸುವುದರೊಳಗಾಗಿ ನಮುಚಿದಾನವನನ್ನು ಇಂದ್ರನು ವಧಿಸಿದಂತೆ ನೀನು ಈತನನ್ನು ಈಗಲೆ ವಧಿಸು.'

ತಥಾಸ್ತು ದೇವೇತ್ಯಭಿಪೂಜ್ಯ ಸತ್ವರಂ
ಜನಾರ್ದನಂ ಕರ್ಣಮವಿಧ್ಯದರ್ಜುನಃ ।
ಶರೋತ್ತಮೈಃ ಸರ್ವಕುರೂತ್ತಮಸ್ತ್ವರನ್
ಯಥಾ ಬಲಿಂ ದೈತ್ಯಪತಿಂ ಸುರಾಧಿಪಃ ॥೭೨॥

'ದೇವ! ತಥಾಸ್ತು' ಎಂದು, ಶ್ರೀಕೃಷ್ಣನನ್ನು ಎಲ್ಲ ಕುರುವಂಶದವರಲ್ಲಿ ಶ್ರೇಷ್ಠನಾದ ಅರ್ಜುನನು ಗೌರವಿಸಿ, ಬೇಗನೆ ಶ್ರೇಷ್ಠಬಾಣಗಳಿಂದ ಕರ್ಣನನ್ನು ದೈತ್ಯರಾಜನಾದ ಬಲಿಯನ್ನು ಇಂದ್ರ ಹೊಡೆದಂತೆ ಹೊಡೆಯಲು ತೊಡಗಿದ.

ಸಾಶ್ವಂ ತು ಕರ್ಣಂ ಸರಥಂ ಕಿರೀಟೀ
ಸಮಾಚಿನೋದ್ ಭಾರತ ವತ್ಸದಂತೈಃ ।
ಪ್ರಚ್ಛಾದಯಾಮಾಸ ದಿಶಶ್ಚ ಬಾಣೈಃ
ಸರ್ವಪ್ರಯತ್ನಾತ್ ತಪನೀಯಪುಂಖೈಃ ॥೭೩॥

ರಾಜನೆ, ಕರ್ಣನನ್ನು ಅವನ ರಥವನ್ನು ಅಶ್ವಗಳ ಸಮೇತವಾಗಿ ವತ್ಸದಂತ ಬಾಣಗಳಿಂದ ಅರ್ಜುನನು ಹೊಡೆದ. ಎಲ್ಲ ದಿಕ್ಕುಗಳನ್ನೂ ಸರ್ವಪ್ರಯತ್ನಮಾಡಿ ಚಿನ್ನದ ಪುಕ್ಕವುಳ್ಳ ಬಾಣಗಳಿಂದ ಮುಚ್ಚಿದ.

ಸ ವತ್ಸದಂತೈಃ ಪೃಥುಪೀನವಕ್ಷಾಃ
ಸಮಾಚಿತಃ ಸ್ಮಾಧಿರಥಿರ್ವಿಭಾತಿ ।
ಸುಪುಷ್ಪಿತಾಶೋಕಪಲಾಶಶಾಲ್ಮಲಿ-
ರ್ಯಥಾಚಲಶ್ಚಂದನಕಾನನಾಯುತಃ ॥೭೪॥

ವಿಸ್ತಾರವಾದ ಉಬ್ಬಿದ ಎದೆಯುಳ್ಳ ಕರ್ಣನು ಅರ್ಜುನನ ವತ್ಸದಂತ ಬಾಣಗಳಿಂದ ಚುಚ್ಚಿಸಿಕೊಂಡು, ಹೂಬಿಟ್ಟ ಅಶೋಕ ಪಲಾಶ ಶಾಲ್ಮಲಿ ವೃಕ್ಷಗಳಿಂದ ಕೂಡಿದ ಶ್ರೀಗಂಧದ ಕಾಡುಗಳಿಂದ ತುಂಬಿದ ಬೆಟ್ಟದಂತೆ ಕಾಣಿಸಿಕೊಂಡ.

ಶರೈಃ ಶರೀರೇ ಬಹುಧಾ ಸಮರ್ಪಿತೈ-
ರ್ವಿಭಾತಿ ಕರ್ಣಃ ಸಮರೇ ವಿಶಾಂಪತೇ ।
ಮಹೀರುಹೈರಾಚಿತಸಾನುಕಂದರೋ
ಯಥಾ ಗಿರೀಂದ್ರಃ ಶುಭಕರ್ಣಿಕಾರವಾನ್ ॥೭೫॥

ರಾಜನೆ, ಮೈಯೆಲ್ಲ ಬಹಳವಾಗಿ ನಾಟಿದ ಬಾಣಗಳಿಂದ ಕರ್ಣನು ರಣದಲ್ಲಿ ವೃಕ್ಷಗಳಿಂದ ತುಂಬಿದ ತಪ್ಪಲು ಕಣಿವೆಗಳುಳ್ಳ ದೊಡ್ಡ ಬೆಟ್ಟವು ಒಳ್ಳೆಯ ಬೆಟ್ಟದಾವರೆಗಳಿಂದ ಶೋಭಿಸುವಂತೆ ಶೋಭಿಸಿದ.

ಸ ಬಾಣಸಂಘಾನ್ ಧನುಷಾ ವ್ಯವಾಸೃಜನ್
ವಿಭಾತಿ ಕರ್ಣಃ ಶರಜಾಲರಶ್ಮಿವಾನ್ ।
ಸಲೋಹಿತೋ ರಕ್ತಗಭಸ್ತಿಮಂಡಲೋ
ದಿವಾಕರೋಽಸ್ತಾಭಿಮುಖೋ ಯಥಾ ತಥಾ ॥೭೬॥

ಕರ್ಣನು ಕೃಷ್ಣನು ಹೇಳಿದಂತೆಯೆ ಬೇಗನೆ ಸಾವರಿಸಿಕೊಂಡು ಬಿಲ್ಲಿನಿಂದ ಬಾಣಗಳನ್ನು ಎಸೆಯುತ್ತ ಶರಸಮೂಹವೆಂಬ ಕಿರಣಪುಂಜಗಳಿಂದ ಕೆಂಪುಕಿರಣಗಳ ಸಮೂಹದಿಂದ ಹೊಳೆಯುತ್ತ ಅಸ್ತಾಚಲಕ್ಕೆ ಅಭಿಮುಖವಾಗಿ ಹೋಗುವ ಸೂರ್ಯ ಕೆಂಪಾಗಿ ಹೇಗೆ ಹೊಳೆಯುವನೊ ಹಾಗೆ ಶೋಭಿಸಿದ.

ಬಾಹ್ವಂತರಾದಾಧಿರಥೇರ್ವಿಮುಕ್ತಾನ್
ಬಾಣಾನ್ ಮಹಾಹೀನಿವ ದೀಪ್ಯಮಾನಾನ್ ।
ವ್ಯಧ್ವಂಸಯನ್ನರ್ಜುನಬಾಹುಮುಕ್ತಾಃ
ಶರಾಃ ಸಮಾಸಾದ್ಯ ದಿಶಃ ಶಿತಾಗ್ರಾಃ ॥೭೭॥

ಕರ್ಣನ ತೋಳುಗಳ ನಡುವಿಂದ ಹೊರಡುವ ಮಹಾಸರ್ಪಗಳಂಥ ಉಜ್ವಲವಾದ ಬಾಣಗಳನ್ನು ಅರ್ಜುನನ ಬಾಹುಗಳಿಂದ ಹೊರಡುವ ತೀಕ್ಷ್ಣವಾದ ಮೊನೆಯುಳ್ಳ ಬಾಣಗಳು ಎಲ್ಲ ದಿಕ್ಕುಗಳನ್ನು ಆವರಿಸುತ್ತ ನಾಶಪಡಿಸಿದುವು.

ತತೋ ಮಹೇಂದ್ರಾಶನಿತುಲ್ಯನಿಸ್ವನಂ
ಮಹಾಶರಂ ಸರ್ಪವಿಷಾನಲೋಪಮಮ್ ।

ಅಯಸ್ಮಯಂ ರೌದ್ರಮಹಾಸ್ತ್ರಸಮ್ಮಿತಂ
ಮಹಾಹವೇ ಕ್ಷೇಪ್ತುಮನಾ ಧನಂಜಯಃ ॥೭೮॥

ಇಂದ್ರನ ವಜ್ರಾಯುಧದಂಥ ಧ್ವನಿ ಮಾಡುವ, ಸರ್ಪವಿಷ ಮತ್ತು ಬೆಂಕಿಗೆ ಸಮಾನವಾದ ರೌದ್ರ ಮಹಾಅಸ್ತ್ರದಿಂದ ಅಭಿಮಂತ್ರಿತವಾಗಿರುವ ಕಬ್ಬಿಣದ ಅಂಜಲಿಕವೆಂಬ ಮಹಾ ಬಾಣವನ್ನು ಮಹಾರಣದಲ್ಲಿ ಎಸೆಯಲು ಅರ್ಜುನ ಮನಸು ಮಾಡಿದ.

ಕಾಲೋ ಹ್ಯದೃಶ್ಯೋ ನೃಪ ವಿಪ್ರಶಾಪಾ-
ನ್ನಿದರ್ಶಯನ್ ಕರ್ಣವಧಂ ಬ್ರುವಾಣಃ ।
ಭೂಮಿಸ್ತು ಚಕ್ರಂ ಗ್ರಸತೀತ್ಯವೋಚತ್
ಕರ್ಣಸ್ಯ ತಸ್ಮಿನ್ ವಧಕಾಲೇಽಭ್ಯುಪೇತೇ ॥೭೯॥

ರಾಜನೆ, ವಿಪ್ರಶಾಪದಿಂದ ಈ ಬಾಣದಿಂದಲೇ ಮರಣವಾಗಲಿರುವುದರಿಂದ ಆಗ ಅದೃಶ್ಯರೂಪದಿಂದ ಮೃತ್ಯು ಬಂದು ಕರ್ಣನಿಗೆ ವಿಪ್ರಶಾಪದಿಂದ ವಧವಾಗುವುದಕ್ಕೆ ಚಕ್ರಪತನರೂಪ ನಿದರ್ಶನವನ್ನು ತೋರುತ್ತ ಮೊದಲಿಗೇ ಹೇಳಿತು– 'ಕರ್ಣನಿಗೆ ವಿಪ್ರಶಾಪದಂತೆ ಬರುವ ಆ ವಧಕಾಲ ಬಂದಾಗ ಭೂಮಿಯು ಅವನ ರಥ ಚಕ್ರವನ್ನು ನುಂಗುತ್ತದೆ' ಎಂದಿತು.

ಬ್ರಾಹ್ಮಂ ಮಹಾಸ್ತ್ರಂ ಮನಸಿ ಪ್ರನಷ್ಟಂ
ಯದ್ ಭಾರ್ಗವೋಪ್ಯಸ್ಯ ದದೌ ಮಹಾತ್ಮಾ ।
ವಾಮಂ ಚಕ್ರಂ ಗ್ರಸತೇ ಮೇದಿನೀ ಸ್ಮ
ಪ್ರಾಪ್ತೇ ತಸ್ಮಿನ್ ವಧಕಾಲೇ ನೃವೀರ ।
ತತೋ ರಥೋ ಘೂರ್ಣಿತವಾನ್ನರೇಂದ್ರ
ಶಾಪಾತ್ತದಾ ಬ್ರಾಹ್ಮಣಸತ್ತಮಸ್ಯ ॥೮೦॥

ಸ ಕಂಪಿತಶ್ಚೈತ್ಯ ಇವಾತಿಮಾತ್ರಂ
ಸುಪುಷ್ಪಿತೋ ಭೂಮಿತಳೇ ನಿಮಗ್ನಃ ।
ತತಶ್ಚಕ್ರಮಪತತ್ ತಸ್ಯ ಭೂಮೌ
ಸ ವಿಹ್ವಲಃ ಸಮರೇ ಸೂತಪುತ್ರಃ ॥೮೧॥

'ವೀರ ಕರ್ಣನೆ, ನಿನಗೆ ಆ ವಧಕಾಲ ಬಂದಾಗ ಮಹಾತ್ಮ ಪರಶುರಾಮ ಉಪದೇಶಿಸಿದ್ದ ಮಹಾಬ್ರಹ್ಮಾಸ್ತ್ರವು ಮನಸಿನಲ್ಲಿ ಮರೆಯಾಗುತ್ತದೆ. ರಥದ ಎಡ ಚಕ್ರವನ್ನು ಭೂಮಿ ನುಂಗುತ್ತದೆ' ಎಂದು ಮೃತ್ಯು ಹೇಳಿತು. ರಾಜನೆ, ಇದಕ್ಕೆ ನಿದರ್ಶನವಾಗಿ ಆಗಲೆ ಕರ್ಣನ ರಥವು ಬ್ರಾಹ್ಮಣಶಾಪದಿಂದ ಅಲುಗಾಡಲು ತೊಡಗಿತು. ರಥಚಕ್ರವು ಹಳ್ಳದಲ್ಲಿ ಬಿದ್ದಿತು. ರಥವು ಆಗ, ಚೆನ್ನಾಗಿ ಹೂಬಿಟ್ಟ ಚೈತ್ಯವೃಕ್ಷವು ಅತಿಯಾಗಿ ಕಂಪಿಸುತ್ತ ನೆಲದಲ್ಲಿ ನಿಂತಂತೆ ಕಾಣಿಸಿಕೊಂಡಿತು. ಇದನ್ನು ಕಂಡು ಕರ್ಣನು ರಣದಲ್ಲಿ ಭಯದಿಂದ ವಿಹ್ವಲನಾದ.

ಘೂರ್ಣೇ ರಥೇ ಬ್ರಾಹ್ಮಣಸ್ಯಾಭಿಶಾಪಾದ್
ರಾಮಾದುಪಾತ್ತೇಽಪ್ರತಿಭಾತಿ ಚಾಸ್ತ್ರೇ ।
ಛಿನ್ನೇ ಶರೇ ಸರ್ಪಮುಖೇ ಚ ಘೋರೇ
ಪಾರ್ಥೇನ ತಸ್ಮಿನ್ ವಿಷಸಾದ ಕರ್ಣಃ ॥೮೨॥

ರಥವು ಈಗ ಕಂಪಿಸಲು ತೊಡಗಿದೆ. ಬ್ರಾಹ್ಮಣಶಾಪದಿಂದ ಪರಶುರಾಮನು ಉಪದೇಶಿಸಿದ ಅಸ್ತ್ರ ವಿಸ್ಮೃತವಾಗಲಿದೆ. ಸರ್ಪಮುಖದ ಘೋರ ಅಸ್ತ್ರವೂ ಅರ್ಜುನನಿಂದ ಚೂರಾಗಿದೆ, ಕರ್ಣನಿಗೆ ಈಗ ವಿಷಾದ ಉಂಟಾಯಿತು.

ಅಮೃಷ್ಯಮಾಣೋ ವ್ಯಸನಾನಿ ತಾನಿ
ಹಸ್ತೌ ವಿಧುನ್ವನ್ ಸ ವಿಗರ್ಹಮಾಣಃ ।
ಧರ್ಮಪ್ರಧಾನಾನಭಿಪಾತಿ ಧರ್ಮ
ಇತ್ಯಬ್ರುವನ್ ಧರ್ಮವಿದಃ ಸದೈವ ॥೮೩॥

ವಯಂ ಚ ನಿತ್ಯಂ ಪ್ರಯತಾಮ ಧರ್ಮಂ
ಚರ್ತುಂ ಯಥಾಶಕ್ತಿ ಯಥಾಶ್ರುತಂ ಚ ।
ನೈವಾದ್ಯ ಚಾಸ್ಮಾನಭಿಪಾತಿ ಭಕ್ತಾನ್
ಮನ್ಯೇ ನ ನಿತ್ಯಂ ಪರಿಪಾತಿ ಧರ್ಮಃ ॥೮೪॥

ಈ ಎಲ್ಲ ದುಃಶಕುನಗಳನ್ನು ತಡೆದುಕೊಳ್ಳಲಾಗದೆ ಕರ್ಣನು ಅವುಗಳನ್ನು ನಿಂದಿಸುತ್ತ ಎರಡೂ ಕೈಗಳನ್ನು ಕೊಡವುತ್ತ ತನಗೆ ತಾನೇ ಹೇಳಿಕೊಂಡ 'ಧರ್ಮಜ್ಞರು ಸದಾ ಹೇಳಿದ್ದಾರೆ: 'ಧರ್ಮಪರರಾದವರನ್ನು ಧರ್ಮವು

ಕಾಪಾಡುತ್ತದೆ' ಎಂದು. ನಾವು ನಿತ್ಯ ಧರ್ಮದಲ್ಲಿರಲು, ತಿಳಿದಷ್ಟು ಶಕ್ತಿ ಇದ್ದಷ್ಟು ಪ್ರಯತ್ನಿಸುತ್ತಿದ್ದೇವೆ. ಭಕ್ತರಾದ ನಮ್ಮನ್ನು ಈಗ ಧರ್ಮವು ಕಾಪಾಡುತ್ತಿಲ್ಲ. ಅದರಿಂದ 'ಧರ್ಮವು ಸದಾ ಕಾಪಾಡುತ್ತದೆ' ಎನ್ನುವುದನ್ನು ನಾನು ಒಪ್ಪುವುದಿಲ್ಲ.'

ಏವಂ ಬ್ರುವನ್ ಪ್ರಸ್ಖಲಿತಶ್ಚ ಸೂತೋ
ವಿಭಜ್ಯಮಾನೋऽರ್ಜುನಶಸ್ತ್ರಪಾತೈಃ।
ಮರ್ಮಾಭಿಘಾತಾಚ್ಛಿಥಿಲಃ ಕ್ರಿಯಾಸು
ಪುನಃ ಪುನರ್ಧರ್ಮಮಗರ್ಹದಾಜೌ ॥೮೫॥

ಹೀಗೆ ಹೇಳುತ್ತ ಕರ್ಣನು ರಥದಲ್ಲಿ ಎಡವುತ್ತಾನೆ, ಅರ್ಜುನನ ಶಸ್ತ್ರಪಾತದಿಂದ ಮೈಗಾಯ ಮಾಡಿಕೊಳ್ಳುತ್ತಾನೆ. ಮರ್ಮಸ್ಥಾನಗಳಲ್ಲಿ ಏಟು ಬೀಳುವುದರಿಂದ ಶಸ್ತ್ರಪ್ರಯೋಗ ಕ್ರಿಯೆಯಲ್ಲಿ ಶೈಥಿಲ್ಯವನ್ನೂ ತೋರುತ್ತಾನೆ. 'ಇದೆಲ್ಲಕ್ಕೂ ನಾನು ಮಾಡಿದ ಪುಣ್ಯಕರ್ಮ ನನ್ನನ್ನು ಈಗ ಕಾಪಾಡದಿರುವುದೇ ಕಾರಣ' ಎಂದು ಪುನಃ ಪುನಃ ಧರ್ಮವನ್ನು ಹಳಿಯುತ್ತಾನೆ.

ಬ್ರಾಹ್ಮಣನ ಶಾಪದಿಂದಲೇ ಅರ್ಥಾತ್ ಬ್ರಾಹ್ಮಣಾಪರಾಧರೂಪವಾದ ಅಧರ್ಮದ ಕಾರಣದಿಂದಲೇ ತನಗೆ ಈ ದುಃಸ್ಥಿತಿ ಎನ್ನುವುದು ಕರ್ಣನಿಗೆ ತಿಳಿದೇ ಇದೆ. ಆದರೆ 'ದಾನಶೂರಕರ್ಣ' ಎಂದು ಎಲ್ಲರೂ ಹೇಳುವಷ್ಟು ಮಟ್ಟಿಗೆ ಕವಚವನ್ನೂ ಕಿತ್ತು ಕೊಟ್ಟ ಮಹತ್ತಾದ ಧರ್ಮ ಮಾಡಿದರೂ ಅದು ಬ್ರಾಹ್ಮಣಾಪರಾಧವೆಂಬ ಅಧರ್ಮವನ್ನು ಪರಿಹರಿಸುತ್ತಿಲ್ಲ. ನನ್ನನ್ನು ಕಾಪಾಡುತ್ತಿಲ್ಲ ಎಂದು ಅಸಮಾಧಾನ. ಕೋಪ, ಕರ್ಣನಲ್ಲಿ ಆವಿಷ್ಟನಾದ ಅಸುರನಿಗೆ. ಕರ್ಣನಿಗೆ ಕೋಪವಿಲ್ಲ. ಆದರೂ ಹತಾಶತೆ ಇದೆ. ಬ್ರಾಹ್ಮಣಶಾಪದ ಅಮೋಘವಾದ ಪ್ರಭಾವಕ್ಕೆ ತಲೆಬಾಗಿ ಪಶ್ಚಾತ್ತಾಪ ಪಡುತ್ತಾನೆ.

ತತಃ ಶರೈರ್ಭೀಮತರೈರವಿಧ್ಯತ್ತ್ರಿಭಿರಾಹವೇ।
ಹಸ್ತೇ ಕೃಷ್ಣಂ ತದಾ ಪಾರ್ಥಮಭ್ಯವಿಧ್ಯಚ್ಚ ಸಪ್ತಭಿಃ ॥೮೬॥

ಅದರಿಂದ ಕರ್ಣ ಇನ್ನೂ ಹೆಚ್ಚು ಭಯಂಕರವಾದ ಮೂರು ಬಾಣಗಳಿಂದ ಕೃಷ್ಣನನ್ನು ಬಾಹುವಿನಲ್ಲಿ ಹೊಡೆದ. ಅರ್ಜುನನನ್ನು ಏಳು ಬಾಣಗಳಿಂದ ಹೊಡೆದ.

ಹಳ್ಳಕ್ಕೆ ಒಂದು ಚಕ್ರ ಬಿದ್ದಿತಷ್ಟೆ. 'ಚಕ್ರಂ ಅಪತತ್' (ಶ್ಲೋ.81) ಅದು

ಹೂತು ಹೋಗಲಿಲ್ಲ. ಕುದುರೆಗಳು ಬಲವಾಗಿ ಎಳೆದ ಮಾತ್ರಕ್ಕೆ ರಥ ಮೇಲೆ ಬಂದಿತ್ತೆಂದು ತಿಳಿಯಬೇಕು. ಅಸ್ತ್ರಗಳೂ ಕೂಡ ತತ್ಕಾಲದಲ್ಲಿ ಮರೆಯಾಗಲಿಲ್ಲ. ಏಕೆಂದರೆ ಚಕ್ರವನ್ನು ಭೂಮಿ ಇನ್ನೂ ನುಂಗಿಲ್ಲ. 'ಅಗ್ರಸನ್ ಮಹೀಚಕ್ರಂ' 'ಭೂಮಿ ನುಂಗಿತು' ಎನ್ನುವುದು ಮುಂದೆ ಬರಬೇಕಷ್ಟೆ. (ಶ್ಲೋ.103)

ತತೋऽರ್ಜುನಃ ಸಪ್ತದಶ ತಿಗ್ಮತೇಜಾ ಅಜಿಹ್ಮಗಾನ್ ।
ಇಂದ್ರಾಶನಿಸಮಾನ್ ಘೋರಾನಸೃಜತ್ಪಾವಕೋಪಮಾನ್ ॥೮೭॥

ಆಗ ಪ್ರಖರ ತೇಜಸ್ಸುಳ್ಳ ಅರ್ಜುನನು ಬೆಂಕಿಯಂತಿರುವ ಇಂದ್ರನ ವಜ್ರಾಯುಧಕ್ಕೆ ಸಮವಾದ ಘೋರವಾದ ಹದಿನೇಳು ಬಾಣಗಳನ್ನು ಎಸೆದ.

ನಿರ್ಭಿದ್ಯ ತೇ ಭೀಮವೇಗಾ ನ್ಯಪತನ್ ಪೃಥಿವೀತಳೇ ।
ಕಂಪಿತಾತ್ಮಾ ತಥಾ ಕರ್ಣಃ ಶಕ್ತ್ಯಾ ಚೇಷ್ಟಾಮದರ್ಶಯತ್ ॥೮೮॥

ಆ ಬಾಣಗಳು ಭಯಂಕರ ವೇಗ ಉಳ್ಳವುಗಳು. ಕರ್ಣನನ್ನು ಗಾಯಗೊಳಿಸಿ ನೆಲದಲ್ಲಿ ಬಿದ್ದುವು. ಅದರಿಂದ ಕರ್ಣ ನಡುಗಿದ. ತನ್ನೆಲ್ಲ ಶಕ್ತಿಯನ್ನು ಹಾಕಿ ಯುದ್ಧ ಮಾಡಿದ.

ಬಲೇನಾಥ ಸ ಸಂಸ್ತಭ್ಯ ಬ್ರಹ್ಮಾಸ್ತ್ರಂ ಸಮುದೈರಯತ್ ।
ಐಂದ್ರಾಸ್ತ್ರಮರ್ಜುನಶ್ಚಾಪಿ ತದ್ ದೃಷ್ಟ್ವಾಭ್ಯಮಂತ್ರಯತ್ ॥೮೯॥

ಕರ್ಣನು ಧೈರ್ಯದಿಂದ ಬಲಪೂರ್ವಕವಾಗಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ. ಅರ್ಜುನನು ಅದನ್ನು ನೋಡಿ ಐಂದ್ರಾಸ್ತ್ರವನ್ನು ಅಭಿಮಂತ್ರಿಸಿದ.

ಬ್ರಹ್ಮಾಸ್ತ್ರಕ್ಕೆ ಬ್ರಹ್ಮಾಸ್ತ್ರವೇ ಪ್ರತ್ಯಸ್ತ್ರ. ಆದರೂ ಅರ್ಜುನನು ಐಂದ್ರಾಸ್ತ್ರವನ್ನು ಪ್ರಯೋಗಿಸಿದ್ದರಿಂದ, ಕರ್ಣನ ಈ ಬ್ರಹ್ಮಾಸ್ತ್ರವು 'ಬ್ರಹ್ಮ' ಅಂದರೆ ವೇದ, ವೇದಮಂತ್ರರೂಪವಾದ ಒಂದು ಅಸ್ತ್ರ ಎಂದು ತಿಳಿಯಬೇಕು. ನಿಜವಾಗಿ ಬ್ರಹ್ಮಾಸ್ತ್ರವು ಬ್ರಹ್ಮಶಿರೋऽಸ್ತ್ರವೇ. ಅದು ಕರ್ಣನಿಗೆ ಪರಶುರಾಮರಿಂದ ಉಪದಿಷ್ಟವಾಗಿರಲಿಲ್ಲ. ಬೇರೆ ಇಂಥ ಬ್ರಹ್ಮಾಸ್ತ್ರಗಳು ಇನ್ನೂ ರಥಚಕ್ರವನ್ನು ಭೂಮಿ ನುಂಗುವವರೆಗೆ ಕರ್ಣನಿಗೆ ಸ್ಮರಣೆಗೆ ಬರುತ್ತಿವೆ.

ಗಾಂಡೀವಂ ಜ್ಯಾಂ ಚ ಬಾಣಾಂಶ್ಚ ಅನುಮಂತ್ರ್ಯ ಧನಂಜಯಃ ।
ಅಸೃಜತ್ ಶರವರ್ಷಾಣಿ ವರ್ಷಾಣೀವ ಪುರಂದರಃ ॥೯೦॥

ಅರ್ಜುನನು ಗಾಂಡೀವ ಧನುಸ್ಸನ್ನೂ ಹೆದೆಯನ್ನೂ ಬಾಣಗಳನ್ನೂ ವೇದಮಂತ್ರಗಳಿಂದ ಅಭಿಮಂತ್ರಿಸಿ, ಇಂದ್ರನು ನೀರಿನ ಮಳೆ ಸುರಿಸುವಂತೆ, ಬಾಣಗಳ ಮಳೆಗರೆದ.

ತತಸ್ತೇಜೋಮಯಾ ಬಾಣಾ ರಥಾತ್ ಪಾರ್ಥಸ್ಯ ನಿಃಸೃತಾಃ ।
ಪ್ರಾದುರಾಸನ್ ಮಹಾವೀರ್ಯಾಃ ಕರ್ಣಸ್ಯ ರಥಮಂತಿಕಾತ್ ॥೯೧॥

ಆಗ ತೇಜೋಮಯವಾದ ದಿವ್ಯಅಲೌಕಿಕವಾದ ಮಹಾಶಕ್ತಿಶಾಲಿಯಾದ ಬಾಣಗಳು ಅರ್ಜುನನ ರಥದಿಂದ ಹೊರಟು ಕರ್ಣನ ರಥದ ಬಳಿಗೆ ಹಾರಿಬಂದುವು.

ತಾನ್ ಕರ್ಣಸ್ತ್ವಗ್ರತೋಽಭ್ಯಸ್ತಾನ್ ಮೋಘಾಂಶ್ಚಕ್ರೇ ಮಹಾರಥಃ ।
ತತೋಽಬ್ರವೀದ್ ವೃಷ್ಣಿವೀರಸ್ತಸ್ಮಿನ್ನಸ್ತ್ರೇ ವಿನಾಶಿತೇ ॥೯೨॥

ಮಹಾರಥನಾದ ಕರ್ಣನು ಆ ಬಾಣಗಳನ್ನು ಎದುರಿಗೆ ಬರುತ್ತಿದ್ದಂತೆಯೇ ತಡೆದು ವ್ಯರ್ಥಗೊಳಿಸಿದ. ಅರ್ಜುನನ ಆ ಅಸ್ತ್ರ ಹೀಗೆ ನಿಷ್ಕ್ರಿಯವಾದಾಗ ಶ್ರೀಕೃಷ್ಣ ಅರ್ಜುನನಿಗೆ ನುಡಿದ.

ವಿಸೃಜಾಸ್ತ್ರಂ ಪರಂ ಪಾರ್ಥ ರಾಧೇಯೋ ಗ್ರಸತೇ ಶರಾನ್ ।
ಬ್ರಹ್ಮಾಸ್ತ್ರಮರ್ಜುನಶ್ಚಾಪಿ ಸಮ್ಮಂತ್ರ್ಯಾಥ ಪ್ರಯೋಜಯತ್ ॥೯೩॥

'ಅರ್ಜುನ, ಇನ್ನೊಂದು ಅಸ್ತ್ರವನ್ನೇ ಪ್ರಯೋಗಿಸು. ಕರ್ಣನು ಬೇರೆ ಬಾಣಗಳನ್ನು ನಿಷ್ಕ್ರಿಯಗೊಳಿಸುತ್ತಾನೆ' ಎಂದು. ಅರ್ಜುನನೂ ಕೂಡ ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸಿ ಎಸೆದ.

ಛಾದಯಿತ್ವಾ ತತೋ ಬಾಣೈಃ ಕರ್ಣಂ ಪ್ರತ್ಯಸ್ಯದರ್ಜುನಃ ।
ತಸ್ಯ ಕರ್ಣಃ ಶರೈಃ ಕ್ರುದ್ಧಶ್ಚಿಚ್ಛೇದ ಜ್ಯಾಂ ಸುತೇಜನೈಃ ॥೯೪॥

ಅರ್ಜುನನು ಬಾಣಗಳಿಂದ ಕರ್ಣನನ್ನು ಆಚ್ಛಾದಿಸಿ ಕರ್ಣನಿಗೆ ಪ್ರತಿಯಾಗಿ ಹೊಡೆದ. ಕರ್ಣನು ಕ್ರುದ್ಧನಾಗಿ ತೀಕ್ಷ್ಣವಾದ ಬಾಣಗಳಿಂದ ಅರ್ಜುನನ ಬಿಲ್ಲಿನ ಹೆದೆಯನ್ನು ಕತ್ತರಿಸಿದ.

ತಸ್ಯ ಜ್ಯಾಮವಧಾಯಾನ್ಯಾಮನುಮೃಜ್ಯ ಚ ಪಾಂಡವಃ ।
ಶರೈರವಾಕಿರತ್ ಕರ್ಣಂ ದೀಪ್ಯಮಾನೈಃ ಸಹಸ್ರಶಃ ॥೯೫॥

ದ್ವಿತೀಯಾಂ ಚ ತೃತೀಯಾಂ ಚ ಚತುರ್ಥೀಂ ಪಂಚಮೀಂ ತಥಾ ।
ಷಷ್ಠೀಮಥಾಸ್ಯ ಚಿಚ್ಛೇದ ಸಪ್ತಮೀಂ ಚ ತಥಾಷ್ಟಮೀಂ ॥೯೬॥

ನವಮೀಂ ದಶಮೀಂ ಚಾಸ್ಯ ತಥಾಚ್ಛೈಕಾದಶೀಂ ವೃಷಃ ।
ಜ್ಯಾಶತಂ ಶತಸಂಧಾನಂ ಸ ಕರ್ಣೋ ನಾವಬುಧ್ಯತೇ ॥೯೭॥

ಕರ್ಣನು ಗಾಂಡೀವದ ಹೆದೆಗಳನ್ನು ಕಡಿದಂತೆಲ್ಲ ಮತ್ತೆಮತ್ತೆ ಅರ್ಜುನನು ಹೆದೆಗಳನ್ನು ಕಟ್ಟುತ್ತಲೇ ಇರುತ್ತಾನೆ. ಕರ್ಣನು ಎರಡನೆ ಮೂರನೆ ನಾಲ್ಕನೆ ಐದನೆ ಆರನೆ ಏಳನೆ ಎಂಟನೆ ಒಂಬತ್ತನೆ ಹತ್ತನೆ ಹನ್ನೊಂದನೆ ಹೆದೆಗಳನ್ನು ಕೂಡ ಕಡಿದರೆ, ಅರ್ಜುನನು ಹನ್ನೆರಡನೆ ಹದಿಮೂರನೆ ಎಂದು ಬೇರೆಬೇರೆ ಹೆದೆಗಳನ್ನು ಕಟ್ಟುತ್ತಾನೆ. ನೂರು ಹೆದೆಗಳಿಗೆ ನೂರು ಬಾಣಗಳನ್ನು ಹೂಡುತ್ತಾನೆ ಅರ್ಜುನ.

ತತೋ ಜ್ಯಾಮವಧಾಯಾನ್ಯಾಮನುಮೃಜ್ಯ ಚ ಪಾಂಡವಃ ।
ಶರೈರವಾಕಿರತ್ ಕರ್ಣಂ ದೀಪ್ಯಮಾನೈಃ ಸಹಸ್ರಶಃ ॥೯೮॥

ಬೇರೆ ಹೆದೆಯನ್ನು ಕೈಯಿಂದ ಸವರಿ ಬಿಲ್ಲಿಗೆ ಕಟ್ಟಿದ, ಅರ್ಜುನ. ತೇಜೋಮಯವಾದ ಸಾವಿರಾರು ಬಾಣಗಳನ್ನು ಕರ್ಣನ ಮೇಲೆ ಎಸೆದ.

ತಸ್ಯ ಜ್ಯಾಚ್ಛೇದನಂ ಕರ್ಣೋ ಜ್ಯಾವಧಾನಂ ಚ ಸಂಯುಗೇ ।
ನಾನ್ವಬುಧ್ಯತ ಶೀಘ್ರತ್ವಾತ್ ತದದ್ಭುತಮಿವಾಭವತ್ ॥೯೯॥

ಅರ್ಜುನನ ಹೆದೆಯನ್ನು ಕರ್ಣ ಕಡಿಯುವುದು, ಅದನ್ನು ಅರ್ಜುನನು ಬಿಲ್ಲಿಗೆ ಕಟ್ಟುವುದು ಎರಡೂ ಅತಿಶೀಘ್ರವಾಗಿ ನಡೆದುದರಿಂದ ಅದು ಬೇರೆಯಾಗಿ ಯಾರಿಗೂ ತಿಳಿಯಲಿಲ್ಲ. ಅದು ಅದ್ಭುತವಾಗಿತ್ತು.

ಒಂದು ಹೆದೆ ಕಡಿದುದು ಯಾವಾಗ, ಇನ್ನೊಂದನ್ನು ಅರ್ಜುನನು ಕಟ್ಟಿದ್ದು ಯಾವಾಗ ಎನ್ನುವುದೇ ಕರ್ಣನಿಗೇ ತಿಳಿಯಲಿಲ್ಲ. ವಸ್ತುತಃ ಗಾಂಡೀವ ದಿವ್ಯವಾದ ಧನುಸ್ಸು. ಅದರ ಹೆದೆಯೂ ದಿವ್ಯವೆ. ಬಳ್ಳಿಯ ತುದಿಯನ್ನು ಕತ್ತರಿಸಿದರೆ ಅದು ತಿರುಗಿ ಚಿಗುರುವಂತೆ ಹೆದೆಯೂ ಒಮ್ಮೆ ಕಡಿದರೂ ತಿರುಗಿ ಚಿಗುರಿ ಬೆಳೆದು ಮೊದಲಿನಂತಾಗುತ್ತದೆ. 'ಅನ್ಯಾ ಜ್ಯಾ' 'ಬೇರೆ ಹೆದೆ' ಎಂದು ಹೇಳಿದರೆ ಬೇರೆಯೆ

ಒಂದು ಹೆದೆಯನ್ನು ಎತ್ತಿಕೊಂಡು ತಕ್ಷಣ ಕಟ್ಟಿದನೆಂದು ಅರ್ಥವಲ್ಲ. 'ಕಡಿದ' ಹೆದೆಯೇ 'ಬೇರೆ'ಯಾಗಿ, 'ಕಡಿದುದಕ್ಕಿಂತ ಬೇರೆ' ಎನಿಸಿ ಅಂದರೆ ಪೂರ್ಣ ಮೊದಲಿನ ಹೆದೆಯೇ ಆಗಿ ಪ್ರಾದುರ್ಭವಿಸುತ್ತದೆ, ಎಂದು ಲಕ್ಷಾಲಂಕಾರ ಹೇಳುತ್ತದೆ. ಹೆದೆಕಡಿದು ಹೋದಾಗ ಅದನ್ನೇ ಪುನಃ ಕಟ್ಟುತ್ತಾನೆ ಅರ್ಜುನ, ಬೇರೆ ಹೆದೆಯನ್ನು ತಂದು ಕಟ್ಟುವುದಿಲ್ಲ. 'ಜ್ಯಾ ಶತಂ' ಎಂದರೆ ಹೆದೆಗಳು ನೂರು ಎಂದು ಹೇಳಿದ ಮಾತ್ರಕ್ಕೆ ಹೆದೆ ನೂರಲ್ಲ, ನೂರಾರು ಸಾವಿರಾರು ಲೆಕ್ಕವಿಲ್ಲದಷ್ಟು ಬಾರಿ ಕಡಿದರೂ ಅದು ಕಡಿದುದಕ್ಕಿಂತ ಬೇರೆ, ಮೊದಲಿನಂತಾಗುತ್ತದೆ. ಅರ್ಜುನನು ಹೆದೆ ಕಟ್ಟುವುದು, ಬಾಣವನ್ನು ಹೂಡುವುದು ಇವೆರಡೂ ಕ್ರಿಯೆಗಳು ಅತಿವೇಗದಿಂದ ನಡೆಯುವುದರಿಂದ ಕರ್ಣನಿಗೂ ಕೂಡ ಎರಡರ ನಡುವಿನ ಅಂತರ ತಿಳಿಯಲಿಲ್ಲ.

ಅಸ್ತ್ರೈರಸ್ತ್ರಾಣಿ ರಾಧೇಯಃ ಪ್ರತ್ಯಹನ್ ಸವ್ಯಸಾಚಿನಃ ।
ಚಕ್ರೇ ಚಾಭ್ಯಧಿಕಂ ಪಾರ್ಥಾತ್ ಸ್ವವೀರ್ಯಂ ಪ್ರತಿದರ್ಶಯನ್ ॥೧೦೦॥

ಅರ್ಜುನನ ಅಸ್ತ್ರಗಳನ್ನು ಅಸ್ತ್ರಗಳಿಂದ ಕರ್ಣನು ನಿಷ್ಕ್ರಿಯಗೊಳಿಸಿದ. ಅರ್ಜುನನಿಗಿಂತ ಹೆಚ್ಚಿನ ಕೌಶಲವನ್ನೇ ತೋರಿ ತನ್ನ ಪರಾಕ್ರಮವನ್ನು ಸ್ಪಷ್ಟವಾಗಿ ದೃಢಪಡಿಸಿದ.

ತತಃ ಕೃಷ್ಣೋಽರ್ಜುನಂ ದೃಷ್ಟ್ವಾ ಕರ್ಣಾಸ್ತ್ರೇಣಾಭಿಪೀಡಿತಮ್ ।
ಅಭ್ಯಸೇತ್ಯಬ್ರವೀತ್ ಪಾರ್ಥಮಾತಿಷ್ಠಾಸ್ತ್ರಮನುತ್ತಮಮ್ ॥೧೦೧॥

ಶ್ರೀಕೃಷ್ಣ ಅರ್ಜುನನು ಕರ್ಣಾಸ್ತ್ರದಿಂದ ಪೀಡಿತನಾಗುತ್ತಿರುವುದನ್ನು ಕಂಡು 'ಅಸ್ತ್ರಗಳನ್ನು ಮತ್ತೆ ಮತ್ತೆ ಪ್ರಯೋಗಿಸುತ್ತಿರು. ಉತ್ತಮಾಸ್ತ್ರಗಳನ್ನು ಪ್ರಯೋಗಿಸು' ಎಂದ.

ತತೋಽನ್ಯಮಗ್ನಿಸದೃಶಂ ಶರಂ ಸರ್ಪವಿಷೋಪಮಮ್ ।
ಅಶ್ಮಸಾರಮಯಂ ದಿವ್ಯಮನುಮಂತ್ರ್ಯ ಧನಂಜಯಃ ॥೧೦೨॥

ರೌದ್ರಮಸ್ತ್ರಂ ಸಮಾಧಾಯ ಕ್ಷೇಪ್ತುಕಾಮಃ ಕಿರೀಟವಾನ್ ।
ತತೋಽಗ್ರಸನ್ಮಹೀ ಚಕ್ರಂ ರಾಧೇಯಸ್ಯ ಮಹಾಮೃಧೇ ॥೧೦೩॥

ಅರ್ಜುನನು ಈಗ ಬೇರೊಂದು ಅಗ್ನಿಸದೃಶವಾದ ಸರ್ಪವಿಷಸದೃಶವಾದ ಕಬ್ಬಿಣದ ದಿವ್ಯವಾದ ಅಂಜಲಿಕ ಬಾಣವನ್ನು ಅಭಿಮಂತ್ರಿಸಿ ರೌದ್ರ ಅಸ್ತ್ರವನ್ನು

ಆವಾಹಿಸಿ ಅದನ್ನು ಕರ್ಣನ ಮೇಲೆ ಎಸೆಯಲು ಬಯಸಿದ. ಆಗಲೆ ಅದು ಮೃತ್ಯುಕಾಲವಾಗಿದ್ದರಿಂದ ಮಹಾರಣದಲ್ಲಿ ಕರ್ಣನ ರಥಚಕ್ರವನ್ನು ಭೂಮಿ ನುಂಗಿತು.

ತತೋಽವತೀರ್ಯ ರಾಧೇಯೋ ರಥಾದಾಶು ಸಮುದ್ಯತಃ ।
ಚಕ್ರಂ ಭುಜಾಭ್ಯಾಮಾಲಂಬ್ಯ ಸಮುತ್ಕ್ಷೇಪ್ತುಮಿಯೇಷ ಸಃ ॥೧೦೪॥

ಒಡನೆ ಕರ್ಣನು ವೇಗವಾಗಿ ರಥದಿಂದ ಇಳಿದು ಬೇಗನೆ ಚಕ್ರವನ್ನು ಎರಡು ಕೈಗಳಿಂದ ಹಿಡಿದು ಮೇಲೆ ಎತ್ತಲು ಬಯಸಿದ. ಅದಕ್ಕೆ ಉದ್ಯುಕ್ತನಾದ.

ಸಪ್ತದ್ವೀಪಾ ವಸುಮತೀ ಸಶೈಲವನಕಾನನಾ ।
ಗೀರ್ಣಚಕ್ರಾ ಸಮುತ್ಕ್ಷಿಪ್ತಾ ಕರ್ಣೇನ ಚತುರಂಗುಲಮ್ ॥೧೦೫॥

ಆದರೆ ಚಕ್ರವನ್ನು ಎತ್ತಲು ಯತ್ನಿಸಿದರೆ ಚಕ್ರವನ್ನು ನುಂಗಿದ್ದ ಭೂಮಿಯೇ ಸಪ್ತದ್ವೀಪ ಸಮೇತವಾಗಿ ಪರ್ವತ ವನ ಅರಣ್ಯಗಳೊಂದಿಗೆ ನಾಲ್ಕು ಅಂಗುಲದಷ್ಟು ಮೇಲೆ ಬಂದಿತೆ ಹೊರತು ನೆಲ ಚಕ್ರವನ್ನು ಬಿಡಲಿಲ್ಲ.

ಗ್ರಸ್ತಚಕ್ರಸ್ತು ರಾಧೇಯಃ ಕೋಪಾದಶ್ರೂಣ್ಯವರ್ತಯತ್ ।
ಸೋಽಬ್ರವೀದರ್ಜುನಂ ಚಾಪಿ ಮುಹೂರ್ತಂ ಕ್ಷಮ ಪಾಂಡವ ॥೧೦೬॥

ಚಕ್ರವನ್ನು ನೆಲ ನುಂಗಿತೆಂದು ಕರ್ಣನು ಕೋಪದಿಂದ ಕಣ್ಣೀರು ಸುರಿಸಿದ. ಅವನು ಅರ್ಜುನನಿಗೆ ಹೇಳಿದ– 'ಅರ್ಜುನ, ಒಂದು ಮುಹೂರ್ತ ಕಾಲ ತಾಳು' ಎಂದು.

ಸವ್ಯಂ ಚಕ್ರಂ ಮಹೀಗ್ರಸ್ತಂ ದೃಷ್ಟ್ವಾ ದೈವಾದಿದಂ ಮಮ ।
ಪಾರ್ಥ ಕಾಪುರುಷಾಚೀರ್ಣಮಭಿಸಂಧಿಂ ವಿವರ್ಜಯ ॥೧೦೭॥

ನನ್ನ ರಥದ ಎಡ ಚಕ್ರವಿದು ದೈವಾತ್ ನೆಲದಲ್ಲಿ ಹೂತು ಹೋಗಿದೆ. ಅರ್ಜುನ, ಕೆಟ್ಟಮನುಜರಲ್ಲಿ ಕಾಣುವಂಥ ದುರುದ್ದೇಶವಿಟ್ಟುಕೊಳ್ಳಬೇಡ. ಅದು ನಿನ್ನಲ್ಲಿ ಇದ್ದರೆ ಬಿಟ್ಟುಬಿಡು.

ಪ್ರಕೀರ್ಣಕೇಶೇ ವಿಮುಖೇ ಬ್ರಾಹ್ಮಣೇ ಚ ಕೃತಾಂಜಲೌ ।
ಶರಣಾಗತೇ ನ್ಯಸ್ತಶಸ್ತ್ರೇ ತಥಾ ವ್ಯಸನಗೇಽರ್ಜುನ ॥೧೦೮॥

ಅಬಾಣೇ ಭ್ರಷ್ಟಕವಚೇ ಭ್ರಷ್ಟಭಗ್ನಾಯುಧೇ ತಥಾ ।
ನ ಶೂರಾಃ ಪ್ರಹರಂತ್ಯಾಜೌ ನ ರಾಜ್ಞೇ ಪಾರ್ಥಿವಾಸ್ತಥಾ ।

ತ್ವಂ ಚ ಶೂರೋಽಸಿ ಕೌಂತೇಯ ತಸ್ಮಾತ್ ಕ್ಷಮ
ಮುಹೂರ್ತಕಮ್ ॥೧೦೯॥

ಯಾವಚ್ಚಕ್ರಮಿದಂ ಭೂಮೇರುದ್ಧರಾಮಿ ಧನಂಜಯ ।
ನ ಮಾಂ ರಥಸ್ಥೋ ಭೂಮಿಷ್ಠಮಸಜ್ಜಂ ಹಂತುಮರ್ಹಸಿ ।
ನ ವಾಸುದೇವಾತ್ ತ್ವತ್ತೋ ವಾ ಪಾಂಡವೇಯ ಬಿಭೇಮ್ಯಹಮ್। ೧೧೦

ತಲೆಕೂದಲು ಕೆದರಿಕೊಂಡವನ ಮೇಲೆ, ಯುದ್ಧ ಪರಾಙ್ಮುಖನಾದವನ ಮೇಲೆ, ಬ್ರಾಹ್ಮಣನ ಮೇಲೆ, ಕೈಮುಗಿದು ರಕ್ಷಣೆಯನ್ನು ಬೇಡುವವನ ಮೇಲೆ, ಶರಣಾಗತನ ಮೇಲೆ, ಶಸ್ತ್ರತ್ಯಾಗ ಮಾಡಿದವನ ಮೇಲೆ, ವ್ಯಸನದಲ್ಲಿರುವವನ ಮೇಲೆ, ಶಸ್ತ್ರರಹಿತನ ಮೇಲೆ, ಕವಚವಿಲ್ಲದವನ ಮೇಲೆ, ಆಯುಧ ನಾಶಹೊಂದಿದವನ ಮೇಲೆ, ರಾಜನ ಮೇಲೆ, ಕ್ಷತ್ರಿಯರು ಎಂದೂ ಶಸ್ತ್ರಪ್ರಯೋಗವನ್ನು ಮಾಡುವುದಿಲ್ಲ. ನೀನು ಶೂರ. ಆದರಿಂದ ಒಂದು ಮುಹೂರ್ತ ತಾಳು. ಅರ್ಜುನ, ಅಷ್ಟರಲ್ಲಿ ನಾನು ಈ ಚಕ್ರವನ್ನು ನೆಲದೊಳಗಿಂದ ಮೇಲೆ ಎತ್ತುತ್ತೇನೆ. ನಾನು ನೆಲದಲ್ಲಿ ನಿಂತಿರುವಾಗ, ಯುದ್ಧಕ್ಕೆ ಸನ್ನದ್ಧನಾಗಿಲ್ಲದಿರುವಾಗ ನೀನು ರಥದಲ್ಲಿದ್ದು ನನ್ನನ್ನು ಹೊಡೆಯುವುದು ಯುಕ್ತವಲ್ಲ. ಅದು ಯುದ್ಧಧರ್ಮವಲ್ಲ, ಆದರಿಂದ ನಾನು ಹೀಗೆ ಹೇಳುತ್ತಿದ್ದೇನೆ, ನಾನು ವಾಸುದೇವನಿಗಾಗಲಿ, ನಿನಗಾಗಲಿ ಭಯಪಡುತ್ತಿಲ್ಲ.

ಧರ್ಮಭೀರುವಾದ ಅರ್ಜುನ 69ನೇ ಶ್ಲೋಕದಲ್ಲಿ ಹೇಳಿದಂತೆ ತಾಳಲೂ ಬಹುದೆಂದು ಕರ್ಣನಿಗೆ ಒಂದು ದೂರದ ಆಸೆ ಮಾತ್ರ. ಕುಶಕಾಶಾವಲಂಬನ.

ತ್ವಂ ಹಿ ಕ್ಷತ್ರಿಯದಾಯಾದೋ ಮಹಾಕುಲವಿವರ್ಧನಃ ।
ಸ್ಮೃತ್ವಾ ಧರ್ಮೋಪದೇಶಂ ತ್ವಂ ಮುಹೂರ್ತಂ ಕ್ಷಮ ಪಾಂಡವ ॥೧೧೧॥

ನೀನು ಕ್ಷತ್ರಿಯಕುಲದಲ್ಲಿ ಹುಟ್ಟಿದವನು, ಮಹತ್ತಾದ ಕುರುಕುಲದ ಕೀರ್ತಿಯನ್ನು ಬೆಳಗಿಸಬೇಕಾದವನು. ಆದರಿಂದ ಧರ್ಮೋಪದೇಶವನ್ನು ನೆನೆದು ಒಂದು ಮುಹೂರ್ತಕಾಲ ತಡೆದುಕೊಳ್ಳು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣಾರ್ಜುನಯುದ್ಧೇ ಭೂಮ್ಯಾ ಕರ್ಣಚಕ್ರಗ್ರಸಣಂ ನಾಮ
ಸಪ್ತಾಶೀತಿತಮೋಧ್ಯಾಯಃ ॥೮೭॥

ಮಹಾಭಾರತತಾತ್ಪರ್ಯನಿರ್ಣಯ

ಉದ್ಧರ್ತುಕಾಮೋ ರಥಚಕ್ರಮೇವ
ಪಾರ್ಥಂ ಯಯಾಚೇऽವಸರಂ ಪ್ರದಾತುಮ್ ।
ನೇತ್ಯಾಹ ಕೃಷ್ಣೋಂಜಲಿಕಂ ಸುಘೋರಂ
ತ್ರಿನೇತ್ರದತ್ತಂ ಜಗೃಹೇ ಚ ಪಾರ್ಥಃ ॥ ೧೮೮ ॥

ಕರ್ಣ ರಥದ ಚಕ್ರವನ್ನು ಎತ್ತಲು ಬಯಸಿ ಅದಕ್ಕೆ ಕಾಲಾವಕಾಶ ನೀಡಲು ಅರ್ಜುನನನ್ನು ಕೇಳಿಕೊಂಡ. 'ಇಲ್ಲ' ಎಂದ ಕೃಷ್ಣ ಅರ್ಜುನ ಶಿವನಿಂದ ದತ್ತವಾದ ಬಲು ಘೋರವಾದ ಅಂಜಲಿಕಾಸ್ತ್ರವನ್ನೆತ್ತಿಕೊಂಡ.

ಸತ್ಯೇನ ಧರ್ಮೇಣ ಚ ಸನ್ನಿಯೋಜ್ಯ
ಮುಮೋಚ ಕರ್ಣಸ್ಯ ವಧಾಯ ಬಾಣಮ್ ।
ಚಿಚ್ಛೇದ ತೇನೈವ ಚ ತಸ್ಯ ಶೀರ್ಷಂ
ಸಂಧಿತ್ಸತೋ ಬಾಣವರಂ ಸುಘೋರಮ್ ॥ ೧೮೯ ॥

ಬಲುಘೋರವಾದ ಶ್ರೇಷ್ಠ ಬಾಣವನ್ನು ಹೂಡಬೇಕೆಂದು ಕರ್ಣ ಯತ್ನಿಸುವಷ್ಟರಲ್ಲಿ ಅರ್ಜುನ ಅವನ ವಧಕ್ಕಾಗಿ ಅಂಜಲಿಕಾಸ್ತ್ರವನ್ನು ತನ್ನ ಸತ್ಯಧರ್ಮಗಳಿಂದ ಜೊತೆಗೂಡಿಸಿ ಪ್ರಯೋಗಿಸಿದ. ಅದರಿಂದಲೆ ಕರ್ಣನ ಶಿರವನ್ನು ತರಿದ.

ಅಪರಾಹ್ಣೇऽಪರಾಹ್ಣಸ್ಯ ಸೂರ್ಯಜಸ್ಯೇಂದ್ರಸೂನುನಾ ।
ಛಿನ್ನಮಂಜಲಿಕೇನಾऽಜೌ ಸೋತ್ಸೇಧಮಪತಚ್ಛಿರಃ ॥ ೧೯೦ ॥

ಎರಡನೆ ದಿನದ ಅಪರಾಹ್ಣಕಾಲದಲ್ಲಿ ಯುದ್ಧದಲ್ಲಿ ಅಂಜಲಿಕಾಸ್ತ್ರದಿಂದ ಅರ್ಜುನ ಕಡಿದ ಕರ್ಣನ ಶಿರಸ್ಸು ಬಾಣದ ವೇಗದಿಂದ ಮೇಲೆ ಹಾರಿ ಕೆಳಗೆ ಬಿದ್ದಿತು.

❖

ಎಂಬತ್ತೆಂಟನೆಯ ಅಧ್ಯಾಯಃ

ರಥಚಕ್ರವನ್ನೆತ್ತಲು ಮುಹೂರ್ತವ್ಯವಧಾನವನ್ನು ಕರ್ಣ ಕೇಳಿಕೊಂಡರೆ ಅದನ್ನು ಶ್ರೀಕೃಷ್ಣ ನಿರಾಕರಿಸಿದ. ಅಂಜಲಿಕಾಸ್ತ್ರದಿಂದ ಅರ್ಜುನ ಕರ್ಣನ ಶಿರವನ್ನು ತರಿದ

ಸಂಜಯಃ

ಅಥಾಬ್ರವೀದ್ ವಾಸುದೇವೋ ರಥಸ್ಥೋ
ರಾಧೇಯ ದಿಷ್ಟ್ಯಾ ಸ್ಮರಸೀಹ ಧರ್ಮಮ್ ।
ಪ್ರಾಯೇಣ ನೀಚಾ ವ್ಯಸನೇಷು ಮಗ್ನಾ
ನಿಂದಂತಿ ದೈವಂ ಕುಕೃತಂ ನ ತು ಸ್ವಮ್ ॥೧॥

ಸಂಜಯ ನುಡಿದ— ಆಗ ರಥದಲ್ಲಿದ್ದ ವಾಸುದೇವ ನುಡಿದ– 'ಕರ್ಣ, ನೀನು ಈಗ ಅದೃಷ್ಟವಶಾತ್ ಧರ್ಮವನ್ನು ನೆನೆಯುತ್ತಿರುವೆ. ನೀಚರು ಸಾಮಾನ್ಯವಾಗಿ ಹೀಗೇ ತಾವು ವ್ಯಸನದಲ್ಲಿ ಮುಳುಗಿದಾಗ ದೈವವನ್ನು ನಿಂದಿಸುತ್ತಾರೆ, ತಾವೇ ಮಾಡಿರುವ ಕುಕೃತ್ಯಗಳನ್ನು ನೆನೆಯುವುದಿಲ್ಲ.

ಯದ್ ದ್ರೌಪದೀಮೇಕವಸ್ತ್ರಾಂ ಸಭಾಯಾಂ
ಆನಾಯಯಸ್ತ್ವಂ ಚ ಸುಯೋಧನಶ್ಚ ।
ದುಃಶಾಸನಃ ಶಕುನಿಃ ಸೌಬಲಶ್ಚ
ನ ತೇ ಕರ್ಣ ಪ್ರತ್ಯಭಾತ್ ತತ್ರ ಧರ್ಮಃ ॥೨॥

ಏಕವಸ್ತ್ರೆಯಾದ ದ್ರೌಪದಿಯನ್ನು ಅಂದು ನೀನೂ, ದುರ್ಯೋಧನನೂ, ದುಃಶಾಸನ ಶಕುನಿಗಳೂ ಸಭೆಗೆ ಎಳೆದು ತಂದಿರಿ. ಆಗ ಧರ್ಮ ನಿನ್ನ ಮನಸ್ಸಿಗೆ ಹೊಳೆಯಲಿಲ್ಲ!

ಯದಾ ಸಭಾಯಾಂ ಕೌಂತೇಯಮನಕ್ಷಜ್ಞಂ ಯುಧಿಷ್ಠಿರಮ್ ।
ಅಕ್ಷಜ್ಞಃ ಶಕುನಿರ್ಜೇತಾ ತದಾ ಧರ್ಮಃ ಕ್ವ ತೇ ಗತಃ ॥೩॥

ಸಭೆಯಲ್ಲಿ ದ್ಯೂತವನ್ನು ತಿಳಿಯದಿದ್ದ ಧರ್ಮರಾಜನನ್ನು ತಿಳಿದಿದ್ದ ಶಕುನಿ ಪರಾಭವಗೊಳಿಸಿದಾಗ ನಿನ್ನ ಧರ್ಮ ಎಲ್ಲಿಗೆ ಹೋಗಿತ್ತು?

ಯದ್ ಭೀಮಸೇನಂ ಸರ್ಪೈಶ್ಚ ವಿಷಯುಕ್ತೈಶ್ಚ ಭೋಜನೈಃ ।
ಅಚರದ್ ವಿಕೃತೈ ರಾಜನ್ ಕ್ವ ತೇ ಧರ್ಮಸ್ತದಾ ಗತಃ ॥೪॥

ಭೀಮಸೇನನನ್ನು ಸರ್ಪಗಳಿಂದ ವಿಷಯುಕ್ತ ಭೋಜನಗಳಿಂದ, ವಿರುದ್ಧ ಕರ್ಮ ಆಚರಣೆಗಳಿಂದ ಹಿಂಸೆ ಮಾಡಿದಾಗ ಅಂಗರಾಜ, ನಿನ್ನ ಧರ್ಮ ಎಲ್ಲಿಗೆ ಹೋಗಿತ್ತು?

ಯದ್ ವಾರಣಾವತೇ ಪಾರ್ಥಾನ್ ಸುಪ್ತಾನ್ ಜತುಗೃಹೇ ತದಾ ।
ಆದೀಪಯಸ್ತ್ವಂ ರಾಧೇಯ ಕ್ವ ತೇ ಧರ್ಮಸ್ತದಾ ಗತಃ ॥೫॥

ವಾರಣಾವತದಲ್ಲಿ ಅರಗಿನ ಮನೆಯಲ್ಲಿ ನಿದ್ದೆ ಮಾಡುತ್ತಿದ್ದಾಗ ಪಾಂಡವರನ್ನು ನೀನು ಸುಡಿಸಿದೆ. ಆಗ ನಿನ್ನ ಧರ್ಮ ಎಲ್ಲಿಗೆ ಹೋಗಿತ್ತು?

ವನವಾಸೇ ವ್ಯತೀತೇ ಚ ಕರ್ಣ ವರ್ಷೇ ತ್ರಯೋದಶೇ ।
ನ ಪ್ರಯಚ್ಛಸಿ ಯದ್ ರಾಜ್ಯಂ ಕ್ವ ತೇ ಧರ್ಮಸ್ತದಾ ಗತಃ ॥೬॥

ಕರ್ಣ, ಹದಿಮೂರನೆ ವರ್ಷ ವನವಾಸ ಮುಗಿದಾಗ ಪಾಂಡವರಿಗೆ ಅವರ ರಾಜ್ಯವನ್ನು ಕೊಡಲಿಲ್ಲ, ಆಗ ನಿನ್ನ ಧರ್ಮ ಎಲ್ಲಿಗೆ ಹೋಗಿತ್ತು?

ಯದಾ ರಜಸ್ವಲಾಂ ಕೃಷ್ಣಾಂ ದುಃಶಾಸನವಶೇ ಸ್ಥಿತಾಮ್ ।
ಸಭಾಯಾಂ ಪ್ರಾಹಸಃ ಕರ್ಣ ಕ್ವ ತೇ ಧರ್ಮಸ್ತದಾ ಗತಃ ॥೭॥

ರಜಸ್ವಲೆಯಾದ ದ್ರೌಪದಿ ದುಃಶಾಸನನ ವಶದಲ್ಲಿ ಸಭೆಯಲ್ಲಿ ನಿಂತಾಗ ಅಪಹಾಸಗೈದೆ, ಕರ್ಣ, ಆಗ ನಿನ್ನ ಧರ್ಮ ಎಲ್ಲಿಗೆ ಹೋಗಿತ್ತು?

ಯದನಾರ್ಯೈಃ ಪುರಾ ಕೃಷ್ಣಾಂ ಕ್ಲಿಶ್ಯಮಾನಾಮನಾಗಸಮ್ ।
ಏನಷ್ಟಾಃ ಪಾಂಡವಾಃ ಕೃಷ್ಣೇ ಶಾಶ್ವತಂ ನರಕಂ ಗತಾಃ ॥೮॥

ಪತಿಮನ್ಯಂ ವೃಣೀಷ್ವೇತಿ ವದಂಸ್ತ್ವಂ ಗಜಗಾಮಿನೀಮ್ ।
ಉಪಪ್ರೇಕ್ಷಸಿ ರಾಧೇಯ ಕ್ವ ತೇ ಧರ್ಮಸ್ತದಾ ಗತಃ ॥೯॥

ಹಿಂದೆ ಅಯೋಗ್ಯರಾದ ದುರ್ಯೋಧನ ಮುಂತಾದವರು ನಿರಪರಾಧಿನಿಯಾದ ದ್ರೌಪದಿಯನ್ನು ಕ್ಲೇಶಪಡಿಸುವಾಗ, 'ದ್ರೌಪದಿ, ಪಾಂಡವರು ಸತ್ತರು,

ಶಾಶ್ವತ ನರಕಕ್ಕೇ ಹೋದರು. ಬೇರೆ ಪತಿಯನ್ನು ವರಿಸಿಕೊಳ್ಳು ಎಂದು ಹೇಳುತ್ತ ಗಜಗಾಮಿನಿಯಾದ ದ್ರೌಪದಿಯ ಮುಂದೆ ನಿಂತು ಕೆಟ್ಟಕಣ್ಣಿಂದ ನೋಡಿದೆ. ಕರ್ಣ, ಆಗ ನಿನ್ನ ಧರ್ಮ ಎಲ್ಲಿಗೆ ಹೋಗಿತ್ತು?

ರಾಜ್ಯಲುಬ್ಧಃ ಪುನಃ ಕರ್ಣ ಸಮಾಹ್ವಯಸಿ ಪಾಂಡವಮ್ ।
ಗಾಂಧಾರರಾಜಮಾಶ್ರಿತ್ಯ ಕ್ವ ತೇ ಧರ್ಮಸ್ತದಾ ಗತಃ ॥೧೦॥

ರಾಜ್ಯಲೋಭದಿಂದ ಶಕುನಿಯಲ್ಲಿ ಭರವಸೆ ಇಟ್ಟು ಪುನಃ ಧರ್ಮರಾಜನನ್ನು ಜೂಜಿಗೆ ಕರೆದೆ. ಆಗ ನಿನ್ನ ಧರ್ಮ ಎಲ್ಲಿಗೆ ಹೋಗಿತ್ತು?

ಯದಾಭಿಮನ್ಯುಂ ಬಹವೋ ಯುದ್ಧೇ ಜಘ್ನುರ್ಮಹಾರಥಾಃ ।
ಪರಿವಾರ್ಯ ರಣೇ ಬಾಲಂ ಕ್ವ ತೇ ಧರ್ಮಸ್ತದಾ ಗತಃ ॥೧೧॥

ಬಾಲಕ ಅಭಿಮನ್ಯು ಒಬ್ಬನನ್ನು ನೀವು ಬಹುಮಂದಿ ಮಹಾರಥರು ಸೇರಿ ಸುತ್ತುವರಿದು ರಣದಲ್ಲಿ ಹತ್ಯೆ ಮಾಡಿದಿರಿ. ಆಗ ನಿನ್ನ ಧರ್ಮ ಎಲ್ಲಿಗೆ ಹೋಗಿತ್ತು?'

ಸಂಜಯಃ

ಏವಮುಕ್ತೇ ತು ರಾಧೇಯೇ ವಾಸುದೇವೇನ ಪಾಂಡವಮ್ ।
ಮನ್ಯುರಭ್ಯಾವಿಶತ್ ತೀವ್ರಃ ಸ್ಮೃತ್ವಾ ತತ್ತದ್ಧನಂಜಯಮ್ ॥೧೨॥

ಸಂಜಯ ನುಡಿದ— ಹೀಗೆ ಶ್ರೀಕೃಷ್ಣ ಕರ್ಣನಿಗೆ ಹೇಳಿದಾಗ ಅರ್ಜುನನಿಗೆ ಕರ್ಣನು ಗೈದ ಎಲ್ಲ ಅಕೃತ್ಯಗಳು ನೆನಪಿಗೆ ಬಂದುವು. ತೀವ್ರ ಕೋಪಾವೇಶ ಉಂಟಾಯಿತು.

ತಸ್ಯ ಕ್ರೋಧೇನ ಸರ್ವೇಭ್ಯಃ ಸ್ರೋತೋಭ್ಯಸ್ತೇಜಸೋऽರ್ಚಿಷಃ ।
ಪ್ರಾದುರಾಸನ್ ಮಹಾರಾಜ ತದದ್ಭುತಮಿವಾಭವತ್ ॥೧೩॥

ಅರ್ಜುನನಿಗೆ ಕೋಪದಿಂದ ಕಣ್ಣು ಮೂಗು ಮುಂತಾದ ಎಲ್ಲ ನವದ್ವಾರಗಳಿಂದಲೂ ಬೆಂಕಿಯ ಜ್ವಾಲೆಗಳು ಪ್ರಾದುರ್ಭವಿಸಿದುವು. ಮಹಾರಾಜ, ಅದು ಅದ್ಭುತವಾಗಿತ್ತು.

ಏವಮುಕ್ತಸ್ತದಾ ಕರ್ಣೋ ವಾಸುದೇವೇನ ಭಾರತ ।
ಲಜ್ಜಯಾವನತೋ ಭೂತ್ವಾ ನೋತ್ತರಂ ಕಿಂಚಿದುಕ್ತವಾನ್ ॥೧೪॥

ಶ್ರೀಕೃಷ್ಣ ಹೀಗೆ ಹೇಳಿದಾಗ 'ಅಸುರಾವೇಶದಿಂದ ತಾನು ನಿಜವಾಗಿ ತಪ್ಪು ಮಾಡಿದ್ದೇನೆ' ಎಂದು ಮನಸ್ಸಿನಲ್ಲಿ ಒಪ್ಪಿಕೊಂಡು ಕರ್ಣನು ಲಜ್ಜೆಯಿಂದ ತಲೆ ತಗ್ಗಿಸಿದ. ಏನೂ ಉತ್ತರವನ್ನು ಹೇಳಲಿಲ್ಲ.

ಅಸುರಾವೇಶದಿಂದ ತಾನು ತಪ್ಪು ಮಾಡಿದ್ದನ್ನು ಕರ್ಣ ಒಪ್ಪಿಕೊಂಡು ಪಶ್ಚಾತ್ತಾಪ ಪಡುವುದರಿಂದ ಶ್ರೀಕೃಷ್ಣ ಕ್ಷಮಾದಾನ ಮಾಡಬಹುದಿತ್ತೇನೊ! ಆದರೂ ಆವಿಷ್ಟನಾದ ಅಸುರನನ್ನು ಕ್ಷಮಿಸುವಂತಿಲ್ಲ. ಭೀಮ ರಕ್ತಪಾನ ಮಾಡುವಾಗಲೂ ದುಃಶಾಸನ ತಾನೇನೂ ತಪ್ಪು ಮಾಡಿಲ್ಲ, ಎಂದ. ಮುಂದೆ ದುರ್ಯೋಧನ ತೊಡೆ ಮುರಿದು ಬಿದ್ದಾಗ ಕೃಷ್ಣನನ್ನೇ ಆಕ್ಷೇಪಿಸುತ್ತಾನೆ ಆತ. ಹಾಗೆ ಅಸುರರು ತಪ್ಪು ಒಪ್ಪಿಕೊಳ್ಳುವುದೇ ಇಲ್ಲ. ಅವರಿಗೆ ಕ್ಷಮೆಯ ಪ್ರಸಂಗವೆ ಇಲ್ಲ. ಅದರಿಂದ ಕರ್ಣನನ್ನು ಕೃಷ್ಣ ಕ್ಷಮಿಸಲಿಲ್ಲ. ಮತ್ತು ಬ್ರಾಹ್ಮಣಶಾಪ ಅಮೋಘ. ಅದನ್ನು ಕೆಡಲು ಬಿಡುವುದೂ ಇಲ್ಲ ಶ್ರೀಕೃಷ್ಣ.

ಕ್ರೋಧಾತ್ ಪ್ರಸ್ಫುರಮಾಣೌಷ್ಠೋ ಧನುರುದ್ಯಮ್ಯ ಭಾರತ ।
ಯೋಧಯಾಮಾಸ ವೈ ಪಾರ್ಥಂ ಮಹಾವೇಗ ಪರಾಕ್ರಮಃ ॥೧೫॥

ಕ್ರೋಧದಿಂದ ತುಟಿ ಅದರುತ್ತಿದ್ದಂತೇ ಕರ್ಣನು ಬಿಲ್ಲನ್ನೆತ್ತಿ ಮಹಾವೇಗ ಪರಾಕ್ರಮಗಳನ್ನು ಮೆರೆಸುತ್ತ ಅರ್ಜುನನೊಡನೆ ಹೋರಾಡಿದ.

ತತೋಽಬ್ರವೀದ್ ವಾಸುದೇವಃ ಫಲ್ಗುನಂ ಪುರುಷರ್ಷಭಮ್ ।
ದಿವ್ಯಾಸ್ತ್ರೇಣೈವ ನಿರ್ಭಿದ್ಯ ಪಾತಯಸ್ವ ಮಹಾಬಲ ॥೧೬॥

ಪುರುಷೋತ್ತಮನಾದ ಅರ್ಜುನನಿಗೆ ಶ್ರೀಕೃಷ್ಣ ನುಡಿದ– 'ಮಹಾಬಲಿಯೇ, ಕರ್ಣನನ್ನು ದಿವ್ಯ ಅಸ್ತ್ರದಿಂದಲೇ ಹೊಡೆದು ಬೀಳಿಸು' ಎಂದು.

ಛಿಂಧ್ಯಸ್ಯ ಮೂರ್ಧಾನಮರೇಃ ಶರೇಣ
ನ ಯಾವದಾರೋಹತಿ ವೈ ರಥಂ ವೃಷಃ ।
ತಥೈವ ಸಂಪೂಜ್ಯ ಸ ತದ್ವಚಃ ಪ್ರಭೋ-
ಸ್ತತಃ ಕ್ಷುರಂ ಪ್ರಜ್ವಲಿತಂ ಪ್ರಗೃಹ್ಯ ।

ಜಘಾನ ಕರ್ಣಸ್ಯ ಮಮಲಾರ್ಕವರ್ಣಾಂ
ಮಹಾರಥೇ ರಥಚಕ್ರೇ ವಿಮಗ್ನೇ ॥೧೭॥

'ಕರ್ಣನು ರಥವನ್ನು ಏರುವುದರೊಳಗಾಗಿ ಅವನ ಶಿರಸ್ಸನ್ನು ಬಾಣದಿಂದ ಕತ್ತರಿಸು' ಎಂದು ಶ್ರೀಕೃಷ್ಣ ನುಡಿದ. 'ಹಾಗೇ ಆಗಲಿ' ಎಂದು ಪ್ರಭುವಿನ ಆ ಮಾತನ್ನು ಅಂಗೀಕರಿಸಿ ಮೊದಲಿಗೆ ಅರ್ಜುನನು ಜ್ವಲಿಸುವ ಒಂದು ಕ್ಷುರವನ್ನು ಎತ್ತಿಕೊಂಡು ಅದರಿಂದ ನಿರ್ಮಲ ಸೂರ್ಯನಂತೆ ಬೆಳಗುವ ಕರ್ಣನ ಮಹಾರಥದಲ್ಲಿದ್ದ ಕಾಕಧ್ವಜವನ್ನು ಕತ್ತರಿಸಿದ. ರಥಚಕ್ರವು ಆಗಲೆ ನೆಲದಲ್ಲಿ ಹೂತು ಹೋಗಿತ್ತು.

ತಂ ಹಸ್ತಿಕಕ್ಷ್ಯಾಪ್ರವರಂ ಬೃಹಂತಂ
ಸುವರ್ಣಮುಕ್ತಾಮಣಿವಜ್ರಮೃಷ್ಟಮ್ ।
ಕಾಲಪ್ರಯತ್ನೋತ್ತಮಶಿಲ್ಪಿಯತ್ನೈಃ
ಕೃತಂ ಸುರೂಪಂ ವಿಗತಾಂಧಕಾರಮ್ ॥೧೮॥

(ಧ್ವಜವು ರಥಿಕನಿಗೆ ಜಯವನ್ನು ತಂದುಕೊಡುವ ಸಾಮರ್ಥ್ಯಉಳ್ಳದ್ದು. ಅದಕ್ಕೆ ಅರ್ಜುನ ಮೊದಲಿಗೆ ಅದನ್ನು ಪುಡಿಗೈದ.) ಕಾಲ ಪ್ರಯತ್ನ ಮತ್ತು ಉತ್ತಮ ಶಿಲ್ಪಿಗಳ ಯತ್ನಗಳಿಂದ ನಿರ್ಮಿತವಾದ, ತಮಸ್ಸನ್ನು ದೂರಮಾಡುವ, ಸುಂದರವಾದ, ಬಂಗಾರ ಮುತ್ತು ರತ್ನ ವಜ್ರಗಳಿಂದ ಶುದ್ಧೀಕರಿಸಿದ, ಅಂಧಕಾರವನ್ನು ದೂರಮಾಡುವ, ಹಸ್ತಪ್ರಮಾಣದ ಕಾಗೆಯ ಪ್ರತಿಮೆಯುಳ್ಳ ಉನ್ನತವಾದ ಕರ್ಣನ ಧ್ವಜವನ್ನು ಅರ್ಜುನ ಕೆಡವಿದ.

ಊರ್ಜಸ್ಕರಂ ತವ ಸೈನ್ಯಸ್ಯ ನಿತ್ಯಂ
ಅಮಿತ್ರವಿತ್ರಾಸನಮೀಡ್ಯರೂಪಮ್ ।
ವಿಖ್ಯಾತಮಾದಿತ್ಯಸುತಸ್ಯ ಲೋಕೇ
ತ್ವಿಷಾ ಸಮಂ ಪಾವಕಭಾನುಚಂದ್ರೈಃ ॥೧೯॥

ಆ ಕಾಕಧ್ವಜವು ನಿನ್ನ ಸೈನ್ಯಕ್ಕೆ ಸದಾ ಬಲಕಾರಿಯಾಗಿತ್ತು. ಶತ್ರುಗಳಿಗೆ ಭಯ ಉಂಟುಮಾಡುತ್ತಿತ್ತು. ಪ್ರಶಸ್ತರೂಪ ಉಳ್ಳದ್ದಾಗಿತ್ತು. ಸೂರ್ಯಪುತ್ರನ ಧ್ವಜವೆಂದು ಲೋಕದಲ್ಲಿ ವಿಖ್ಯಾತವಾಗಿತ್ತು. ಪ್ರಕಾಶದಲ್ಲಿ ಅಗ್ನಿ ಸೂರ್ಯ ಚಂದ್ರರಂತಿತ್ತು.

ತತಃ ಕ್ಷುರಪ್ರೇಣ ಸುಸಂಶಿತೇನ
ಸುವರ್ಣಪುಂಖೇನ ಶರೇಣ ಯತ್ತಃ ।
ಶ್ರಿಯಾ ಜ್ವಲಂತಂ ಧ್ವಜಮುನ್ಮಮಾಥ
ಮಹಾರಥಸ್ಯಾಧಿರಥೇರ್ಮಹಾತ್ಮಾ ॥೨೦॥

ಕಾಂತಿಯಿಂದ ಜ್ವಲಿಸುತ್ತಿದ್ದ ಮಹಾರಥನಾದ ಕರ್ಣನ ಆ ಧ್ವಜವನ್ನು ಮಹಾತ್ಮಾ ಅರ್ಜುನನು ಒಳ್ಳೆ ತೀಕ್ಷ್ಣವಾದ ಬಂಗಾರದ ಪುಕ್ಕಉಳ್ಳ ಕ್ಷುರಪ್ರ ಎಂಬ ಬಾಣದಿಂದ ಪ್ರಯತ್ನಪೂರ್ವಕವಾಗಿ ಪುಡಿಗೈದ.

ಯಶಶ್ಚ ಧರ್ಮಶ್ಚ ಜಯಶ್ಚ ಮಾರಿಷ
ಪ್ರಿಯಾಣಿ ಸರ್ವಾಣಿ ಚ ತೇನ ಕೇತುನಾ ।
ಸಾಕಂ ಕುರೂಣಾಂ ಹೃದಯಾನಿ ಚಾಪತನ್
ಬಭೂವ ಹಾಹೇತಿ ಚ ನಿಸ್ವನೋ ಮಹಾನ್ ॥೨೧॥

ರಾಜನೆ, ಯಶಸ್ಸು ಧರ್ಮ, ಜಯ ಮತ್ತು ಪ್ರಿಯಕರವಾದ ಎಲ್ಲ ವಸ್ತುಗಳೂ ಕೌರವಯೋಧರ ಹೃದಯ–ಸ್ಥೈರ್ಯಗಳೂ ಆ ಧ್ವಜದೊಂದಿಗೇ ಕುಸಿದು ಬಿದ್ದುವು. ದೊಡ್ಡದಾದ ಹಾಹಾಕಾರದ ಧ್ವನಿಯೂ ಉಂಟಾಯಿತು.

ಅಥ ತ್ವರನ್ ಕರ್ಣವಧಾಯ ಪಾಂಡವೋ
ಮಹೇಂದ್ರವಜ್ರಾಂತಕದಂಡಸನ್ನಿಭಮ್ ।
ಆದತ್ತ ಪಾರ್ಥೋ ಽಂಜಲಿಕಂ ನಿಷಂಗಾತ್
ಸಹಸ್ರರಶ್ಮೇರಿವ ರಶ್ಮಿಮುತ್ತಮಮ್ ॥೨೨॥

ಬಳಿಕ ಕರ್ಣನ ವಧೆಗೆ ತ್ವರೆ ಮಾಡುತ್ತ ಅರ್ಜುನನು ಬತ್ತಳಿಕೆಯಿಂದ ಮಹೇಂದ್ರನ ವಜ್ರಾಯುಧದಂತೆ, ಅಂತಕನ ದಂಡದಂತೆ ಹೊಳೆವ ಆಗತಾನೇ ಅಭಿಮಂತ್ರಿತವಾಗಿರಿಸಿದ್ದ ಅಂಜಲಿಕಬಾಣವನ್ನು ಸೂರ್ಯಮಂಡಲದಿಂದ ಕಿರಣಗಳಂತೆ, ಎತ್ತಿಕೊಂಡ.

ಮರ್ಮಚ್ಛಿದಂ ಶೋಣಿತಮಾಂಸದಿಗ್ಧಂ
ವೈಶ್ವಾನರಾರ್ಕಪ್ರತಿಮಂ ಮಹಾರ್ಹಮ್ ।

ನರಾಶ್ವನಾಗಾಸುಹರಂ ತ್ಯರತ್ನಿಂ
ಷಡಾ್ವಜಮಂಜೋಗತಿಮುಗ್ರವೇಗಮ್ ॥೨೩॥

ಅಂಜಲಿಕಾಸ್ತ್ರವು ಮರ್ಮವನ್ನು ಛೇದಿಸುವುದು, ರಕ್ತ–ಮಾಂಸದಿಂದ ತೊಯ್ದು ಅಗ್ನಿ–ಸೂರ್ಯರಂತೆ ಹೊಳೆಯುತ್ತ ಪದಾತಿ ಅಶ್ವ ಗಜಗಳ ಪ್ರಾಣಗಳನ್ನೇ ತೆಗೆಯುವುದು. ಮೂರು ಮೊಳ ಪ್ರಮಾಣದ್ದು ಆರು ರೆಕ್ಕೆ ಉಳ್ಳದ್ದು. ಭಯಂಕರ ವೇಗದ ಗತಿ ಉಳ್ಳದ್ದು ಬಹು ಬೆಲೆಬಾಳುವ ಬಾಣವಾಗಿದೆ.

ಸಹಸ್ರನೇತ್ರಾಶನಿತುಲ್ಯತೇಜಸಂ
ನಿಶಾಸು ಕ್ರವ್ಯಾದಮಿವಾತಿದುಃಸಹಮ್ ।
ಪಿನಾಕನಾರಾಯಣಚಕ್ರಸನ್ನಿಭಂ
ಭಯಂಕರಂ ಪ್ರಾಣಭೃತಾಂ ವಿನಾಶನಮ್ ॥೨೪॥

ಇಂದ್ರನ ವಜ್ರಾಯುಧದಂತೆ ತೇಜಸ್ಸುಳ್ಳದ್ದು. ರಾತ್ರಿಕಾಲದ ಹಿಂಸ್ರಪ್ರಾಣಿ ಗಳಂತೆ ಸಹಿಸಲು ಅತಿ ಅಸಾಧ್ಯವಾದುದು. ಶಿವನ ಪಿನಾಕದಂತೆ, ನಾರಾಯಣನ ಚಕ್ರದಂತೆ ಭಯಂಕರ, ಉಸಿರಾಡುವ ಎಲ್ಲರನ್ನೂ ನಾಶಮಾಡಬಲ್ಲುದು.

ಯುಕ್ತಾ ್ವ ಮಹಾಸ್ತ್ರೇಣ ಪರೇಣ ಮಂತ್ರವಿದ್
ವಿಕೃಷ್ಯ ಗಾಂಡೀವಮುವಾಚ ಸಸ್ವನಮ್ ।
ಅಯಂ ಮಹಾಸ್ತ್ರೋಽಪ್ರತಿಮೋ ಧೃತಃ ಶರಃ
ಶರೀರಭಿಚ್ಚಾಸುಹರಶ್ಚ ದುರ್ಹೃದಃ ॥೨೫॥

ಇಂಥ ಉತ್ತಮವಾದ ಮಹಾ ಅಂಜಲಿಕ ಬಾಣವನ್ನು ಗಾಂಡೀವದಲ್ಲಿ ಹೂಡಿ ಸೆಳೆದು ಮಂತ್ರವೇತ್ತನಾದ ಅರ್ಜುನನು ದೊಡ್ಡ ಧ್ವನಿಯಿಂದ ನುಡಿದ— ಮಹಾಸ್ತ್ರರೂಪವಾದ, ಅನುಪಮವಾದ, ಶತ್ರುಗಳ ಶರೀರವನ್ನು ಬಗೆದು ಪ್ರಾಣವನ್ನು ತೆಗೆವ ಈ ಬಾಣವನ್ನು ಎತ್ತಿಕೊಂಡಿದ್ದೇನೆ.

ತಪೋಽಸ್ತಿ ತಪ್ತಂ ಗುರವಶ್ಚ ತೋಷಿತಾ
ಮಯಾ ಯದೀಷ್ಟಂ ಸುಹೃದಾಂ ತಥಾ ಕೃತಮ್ ।
ಅನೇನ ಸತ್ಯೇನ ನಿಹಂತ್ವಯಂ ಶರಃ
ಸುಸಂಹಿತಃ ಕರ್ಣಮರಿಂ ಮಯಾರ್ಚಿತಃ ॥೨೬॥

ನಾನು ತಪಸ್ಸು ಮಾಡಿದ್ದರೆ, ಗುರುಗಳನ್ನು ಸಂತೋಷಪಡಿಸಿದ್ದರೆ, ಬಂಧು–ಮಿತ್ರರ ಅಭೀಷ್ಟಗಳನ್ನು ಸಲ್ಲಿಸಿದ್ದರೆ ಈ ಸತ್ಯದ ಪುಣ್ಯದಿಂದ ಸರಿಯಾಗಿ ಬಿಲ್ಲಿನಲ್ಲಿ ಹೂಡಿರುವ, ನನ್ನಿಂದ ಅಭಿಮಂತ್ರಣ ಮಾಡಿ ಆರಾಧಿತವಾದ ಈ ಬಾಣವು ಶತ್ರುವಾದ ಕರ್ಣನನ್ನು ವಧಿಸಲಿ.

ಇತ್ಯೂಚಿವಾಂಸ್ತಂ ಸ ಮುಮೋಚ ಬಾಣಂ
ಧನಂಜಯಃ ಕರ್ಣವಧಾಯ ಘೋರಮ್ ।
ಕೃತ್ಯಾಮಥರ್ವಾಂಗಿರಸೀಮಿವೋಗ್ರಾಂ
ದೀಪ್ತಾಮಸಹ್ಯಾಂ ಯುಧಿ ಮೃತ್ಯುನಾಪಿ ॥೨೭॥

ಅರ್ಜುನನು ಹೀಗೆ ಹೇಳಿ, ಕರ್ಣನ ವಧೆಗಾಗಿ, ಘೋರವಾದ, ಅಥರ್ವವೇದೋಕ್ತ ಕೃತ್ರಿಮದೇವತೆಯಂತೆ ಉಗ್ರವಾದ, ರಣದಲ್ಲಿ ಮೃತ್ಯುವಿಗೂ ಸಹಿಸಲಾಗದಂಥ ಉಜ್ವಲವಾದ ಬಾಣವನ್ನು ಎಸೆದ.

ಬ್ರುವನ್ ಕಿರೀಟೀ ತಮಿತಿ ಪ್ರಹೃಷ್ಟೋ
ಹ್ಯಯಂ ಶರೋ ಮೇ ವಿಜಯಾವಹೋಽಸ್ತು ।
ಜಿಘಾಂಸುರರ್ಕೇಂದುಸಮಪ್ರಭಾವಃ
ಕರ್ಣಂ ರಿಪುಂ ಮೇ ನಯತಾಂ ಯಮಾಯ ॥೨೮॥

ತೇನೇಷುವರ್ಯೇಣ ಕಿರೀಟಮಾಲೀ
ಪ್ರಹೃಷ್ಟರೂಪೋ ವಿಜಯಾವಹೇನ ।
ಜಿಘಾಂಸುರರ್ಕೇಂದುಸಮಪ್ರಭೇಣ
ಚಕ್ರೇ ವಿಷಕ್ತಂ ರಿಪುಮಾತತಾಯೀ ॥೨೯॥

‘ಸೂರ್ಯ–ಚಂದ್ರರಂಥ ಪ್ರಭಾವದಿಂದ ಶತ್ರುವನ್ನು ಕೊಲ್ಲಲು ಹೊರಟ ಈ ನನ್ನ ಬಾಣವು ನನಗೆ ವಿಜಯವನ್ನು ತಂದುಕೊಡಲಿ. ನನ್ನ ಶತ್ರುವಾದ ಕರ್ಣನನ್ನು ಯಮನ ಬಳಿಗೆ ಒಯ್ಯಲಿ’ ಎಂದು ಅಸ್ತ್ರದೇವತೆಯನ್ನು ಪ್ರಾರ್ಥಿಸುತ್ತ ಶಸ್ತ್ರಧಾರಿಯಾದ, ಶತ್ರುವಧವನ್ನು ಬಯಸಿದ್ದ ಅರ್ಜುನನು ವಿಜಯವನ್ನು ತಂದುಕೊಡುವ ಸೂರ್ಯ–ಚಂದ್ರಸಮಾನ ಕಾಂತಿಯುಳ್ಳ ಆ ಉತ್ತಮವಾದ ಬಾಣದಿಂದ ಶತ್ರುವನ್ನು ಇರಿದ.

ತತೋಽರ್ಜುನಸ್ತಸ್ಯ ಶಿರೋ ಜಹಾರ
ವೃತ್ರಸ್ಯ ವಜ್ರೇಣ ಯಥಾ ಮಹೇಂದ್ರಃ ।
ಶರೋತ್ತಮೇನಾಂಜಲಿಕೇನ ರಾಜನ್
ತದಾ ಮಹಾಸ್ತ್ರಪ್ರತಿಮಂತ್ರಿತೇನ ॥೫೦॥

ರಾಜನೆ, ಮಹೇಂದ್ರನು ವಜ್ರಾಯುಧದಿಂದ ವೃತ್ರಾಸುರನ ಶಿರವನ್ನು ತೆಗೆದಂತೆ, ಮಹಾಸ್ತ್ರಮಂತ್ರದಿಂದ ಅಭಿಮಂತ್ರಿತವಾದ ಅಂಜಲಿಕವೆಂಬ ಉತ್ತಮ ಬಾಣದಿಂದ ಅರ್ಜುನನು ಕರ್ಣನ ಶಿರವನ್ನು ತೆಗೆದುಬಿಟ್ಟ.

ಪಾರ್ಥೋಽಪರಾಹ್ಣೇ ಶಿರ ಉಚ್ಚಕರ್ತ
ವೈಕರ್ತನಸ್ಯಾಥ ಮಹೇಂದ್ರಸೂನುಃ ।
ತತ್ಪಾತಚ್ಛಾಂಜಲಿಕೇನ ಛಿನ್ನಂ
ಅಥಾಸ್ಯ ಕಾಯೋ ನಿಪಪಾತ ಪಶ್ಚಾತ್ ॥೫೧॥

ಅರ್ಜುನನು ಅಪರಾಹ್ಣಕಾಲದಲ್ಲಿ ಅಪರ ವಯಸ್ಸಿನ ಕರ್ಣನ ಶಿರವನ್ನು ಕತ್ತರಿಸಿದ. ಅಂಜಲಿಕಬಾಣದಿಂದ ಅದು ಕಡಿದುಬಿದ್ದಿತು. ಬಳಿಕ ಅವನ ಶರೀರವೂ ಬಿದ್ದಿತು.

ತತೋ ಜ್ವಲದ್ವಹ್ನಿಸಮಾನವರ್ಚಸಂ
ಶರನ್ನಭೋಮಧ್ಯಗಭಾಸ್ಕರೋಪಮಮ್ ।
ವರಾಂಗಮುರ್ವ್ಯಾಮಪತಚ್ಚಮೂಪತೇ-
ರ್ದಿವಾಕರೋಸ್ತಾದಿವ ರಕ್ತಮಂಡಲಃ ॥೫೨॥

ಜ್ವಲಿಸುವ ಅಗ್ನಿಯಂತೆ ಶರತ್ಕಾಲದ ಮಧ್ಯಾಕಾಶದ ಸೂರ್ಯನಂತೆ ಹೊಳೆಯುತ್ತಿದ್ದ ಸೇನಾಪತಿ ಕರ್ಣನ ಶಿರಸ್ಸು, ಅಸ್ತಪರ್ವತದಿಂದ ಬೀಳುವ ಕೆಂಪುಮಂಡಲದ ಸೂರ್ಯನಂತೆ, ನೆಲದಲ್ಲಿ ಬಿದ್ದಿತು.

ತತೋಸ್ಯ ದೇಹಂ ಸತತಂ ಸುಖೋಚಿತಂ
ಸುರೂಪಮತ್ಯರ್ಥಮುದಾರಕರ್ಮಣಃ ।
ಪರೇಣ ಕೃಚ್ಛ್ರೇಣ ಶಿರಃ ಸಮತ್ಯಜದ್
ಗೃಹಂ ಮಹದ್ದೀವ ಸಭಂಗಮೀಶ್ವರಃ ॥೫೩॥

ಸಂಪತ್‌ಸಮೃದ್ಧವಾದ ತನ್ನ ಮನೆ ಮುರಿದಾಗ ಅದನ್ನು ಮನೆಯೊಡೆಯನು ಕಷ್ಟದಿಂದ ಬಿಡುವಂತೆ, ಕರ್ಣನ ಶಿರಸ್ಸು ಅವನ ಶರೀರವನ್ನು ಬಲುಕಷ್ಟದಿಂದ ಬಿಟ್ಟಿತು. ಆ ಶರೀರವು ಸದಾ ಸುಖಭೋಗಕ್ಕೆ ಉಚಿತವಾಗಿತ್ತು. ಸುಂದರವಾಗಿತ್ತು. ಬಹಳ ದಾನಾದಿ ಉತ್ತಮ ಕರ್ಮಗಳನ್ನು ಆ ಶರೀರದಿಂದ ಕರ್ಣನು ಮಾಡುತ್ತಿದ್ದ.

ಶರೈರ್ವಿಭಗ್ನಂ ವ್ಯಸು ತದ್ವಿವರ್ಮಣಃ
ಪಪಾತ ಕರ್ಣಸ್ಯ ಶರೀರಮುಚ್ಛ್ರಿತಮ್ ।
ಸ್ರವದ್ವ್ರಣಂ ಗೈರಿಕತೋಯವಿಸ್ರವಂ
ಗಿರೇರ್ಯಥಾ ವಜ್ರಹತಂ ಶಿರಸ್ತಥಾ ॥೩೪॥

ಬಾಣಗಳಿಂದ ಬಹಳ ಗಾಯಗೊಂಡ, ಕವಚವಿಲ್ಲದ, ಪ್ರಾಣವಿಲ್ಲದ ಕರ್ಣನ ಉನ್ನತವಾದ ಶರೀರವು ಗಾಯದಿಂದ ರಕ್ತವನ್ನು ಹರಿಸುತ್ತ ಗೈರಿಕ ಧಾತುವಿನಿಂದ ಕೆಂಪಾದ ನೀರನ್ನು ಸುರಿಸುತ್ತ ವಜ್ರದಿಂದ ಕಡಿದ ಪರ್ವತ ಶಿಖರ ಬೀಳುವಂತೆ ಬಿದ್ದಿತು.

ದೇಹಾತ್ತು ಕರ್ಣಸ್ಯ ನಿಪಾತಿತಸ್ಯ
ತೇಜಃ ಸೂರ್ಯಂ ಖಂ ವಿತತ್ಯಾ ವಿವೇಶ ।
ತದದ್ಭುತಂ ಸರ್ವಮನುಷ್ಯಯೋಧಾಃ
ಪಶ್ಯಂತಿ ರಾಜನ್ನಿಹತೇ ಸ್ಮ ಕರ್ಣೇ ॥೩೫॥

ಅರ್ಜುನನು ಕರ್ಣನ ಶರೀರವನ್ನು ಬೀಳಿಸಿದಾಗ ಅದರಿಂದ ಹೊರಟ ಕರ್ಣನ ಸ್ವರೂಪಭೂತವಾದ ಒಂದು ತೇಜಸ್ಸು ಮೇಲೇರಿ ಆಕಾಶವನ್ನು ಬೆಳಗಿಸುತ್ತ ಸೂರ್ಯನನ್ನು ಪ್ರವೇಶಿಸಿತು. ರಾಜನೆ, ಕರ್ಣ ಮಡಿದಾಗ ಎಲ್ಲ ಮನುಷ್ಯ ಯೋಧರೂ ಆ ಅದ್ಭುತವನ್ನು ಕಣ್ಣಾರೆ ಕಂಡರು.

ತತಃ ಶಂಖಾನ್ ಪಾಂಡವಾ ದಧ್ಮುರುಚ್ಚೈ-
ರ್ದೃಷ್ಟ್ವಾ ಕರ್ಣಂ ಪಾತಿತಂ ಫಾಲ್ಗುನೇನ ।
ತಥೈವ ಕೃಷ್ಣಶ್ಚ ಧನಂಜಯಶ್ಚ
ಹೃಷ್ಟೌ ತದಾ ದಧ್ಮತುರಾಶು ಶಂಖೌ ॥೩೬॥

ಒಡನೆ ಪಾಂಡವರು ಅರ್ಜುನನಿಂದ ಕರ್ಣನು ಬೀಳಿಸಲ್ಪಟ್ಟಿದ್ದನ್ನು ಕಂಡು ಗಟ್ಟಿಯಾಗಿ ಶಂಖಗಳನ್ನು ಊದಿದರು. ಹಾಗೇ ಕೃಷ್ಣಾರ್ಜುನರೂ ಹರ್ಷಗೊಂಡು ಬೇಗನೆ ಶಂಖಗಳನ್ನು ಊದಿದರು.

ತಂ ಸೋಮಕಾಃ ಪ್ರೇಕ್ಷ್ಯ ಹತಂ ಶಯಾನಂ
ಪ್ರೀತಾ ನಾದಂ ಸಹ ಸೈನ್ಯೈರಕುರ್ವನ್ ।
ತೂರ್ಯಾಣಿ ಚಾಜಘ್ನುರತೀವ ಹೃಷ್ಟಾ
ವಾಸಾಂಸಿ ಚೈವಾದುಧುವುರ್ಭುಜಾಂಶ್ಚ ॥೩೭॥

ಸೋಮಕಯೋಧರು ಕರ್ಣನಲ್ಲಿ ಆವಿಷ್ಟನಾದ ಅಸುರನು ಸತ್ತುಬಿದ್ದುದನ್ನು ಕಂಡು ಸಂತುಷ್ಟರಾಗಿ ಸೈನ್ಯಗಳೊಂದಿಗೆ ಗರ್ಜನೆ ಮಾಡಿದರು. ಅತ್ಯಂತ ಹರ್ಷಗೊಂಡು ವಾದ್ಯಗಳನ್ನು ಮೊಳಗಿಸಿದರು. ಉತ್ತರೀಯವನ್ನು ಎತ್ತಿ ಹಾರಿಸಿದರು. ಬಾಹುಗಳನ್ನು ಕುಣಿಸಿದರು.

ಸಂವರ್ಧಯಂತಶ್ಚ ನರೇಂದ್ರಯೋಧಾಃ
ಪಾರ್ಥಂ ಸಮಾಜಗ್ಮುರತೀವ ಹೃಷ್ಟಾಃ ।
ಬಲಾನ್ವಿತಾಶ್ಚಾಪ್ಯಪರೇ ಹ್ಯನೃತ್ಯ-
ನ್ನನ್ಯೋನ್ಯಮಾಶ್ಲಿಷ್ಯ ನದಂತ ಊಚುಃ ॥೩೮॥

ರಾಜಯೋಧರು ಅತ್ಯಂತ ಹೃಷ್ಟರಾಗಿ ಅರ್ಜುನನನ್ನು ಅಭಿನಂದಿಸುತ್ತ ಬಂದರು. ಸೈನ್ಯಗಳೊಂದಿಗೆ ತಾವು ಕುಣಿದರು. ಪರಸ್ಪರ ತಬ್ಬಿಕೊಂಡು ಕರ್ಣಾವಸಾನವನ್ನು ಹೇಳಿಕೊಂಡರು.

ದೃಷ್ಟ್ವಾ ತು ಕರ್ಣಂ ಭುವಿ ನಿಷ್ಟನಂತಂ
ಹತಂ ತಥಾ ಸಾಯಕೇನಾವಭಿನ್ನಮ್ ।
ಮಹಾನಿಲೇನಾದ್ರಿಮಿವಾಪವಿದ್ಧಂ
ಯಜ್ಞಾವಸಾನೇऽಗ್ನಿಮಿವ ಪ್ರಶಾಂತಮ್ ॥೩೯॥

ರಣರಂಗದಲ್ಲಿ ಗರ್ಜಿಸುತ್ತಿದ್ದ ಕರ್ಣನು ಬಾಣದಿಂದ ಬಹಳ ಗಾಯಗೊಂಡು ಸತ್ತುದನ್ನು ಕಂಡು ಪಾಂಡವಯೋಧರು ಕುಣಿದರು. ಪರಸ್ಪರ ತಬ್ಬಿಕೊಂಡು

ಕರ್ಣಾವಸಾನವನ್ನು ಹೇಳಿಕೊಂಡರು. ಚಂಡಮಾರುತದಿಂದ ಬೆಟ್ಟದ ತುದಿ ಕಡಿದು ಬಿದ್ದಂತೆ, ಯಾಗದ ಕೊನೆಯಲ್ಲಿ ಅಗ್ನಿ ಆರಿದಂತೆ ಕರ್ಣನ ಅವಸಾನವಿತ್ತು.

ಶರೈರಾಚಿತಸರ್ವಾಂಗಃ ಶೋಣಿತೌಘಪರಿಪ್ಲುತಃ ।
ವಿಭಾತಿ ದೇಹಃ ಕರ್ಣಸ್ಯ ಸ್ವರಶ್ಮಿಭಿರಿವಾಂಶುಮಾನ್ ॥೪೦॥

ಮೈಯೆಲ್ಲ ನೆಟ್ಟ ಬಾಣಗಳಿಂದ ಕೂಡಿದ್ದು ರಕ್ತಪ್ರವಾಹದಿಂದ ತೊಯ್ದು ಕರ್ಣನ ಶರೀರವು ತನ್ನ ಕಿರಣಗಳಿಂದ ಶೋಭಿಸುವ ಸೂರ್ಯನಂತಿತ್ತು.

ಪ್ರತಾಪ್ಯ ಸೇನಾಮಾಮಿತ್ರೀಂ ದೀಪ್ತೈಃ ಶರಗಭಸ್ತಿಭಿಃ ।
ಬಲಿನಾರ್ಜುನಕಾಲೇನ ನೀತೋಽಸ್ತಂ ಕರ್ಣಭಾಸ್ಕರಃ ॥೪೧॥

ಶತ್ರುಸೈನ್ಯವನ್ನು ಜ್ವಲಿಸುವ ಬಾಣಕಿರಣಗಳಿಂದ ಸುಡುತ್ತಿದ್ದ ಕರ್ಣನೆಂಬ ಸೂರ್ಯನು ಬಲಿಷ್ಠನಾದ ಅರ್ಜುನನೆಂಬ ಕಾಲದ ಪ್ರಭಾವದಿಂದ ಅಸ್ತಮಿಸಿದ.

ಅಸ್ತಂ ಗಚ್ಛನ್ಯಥಾದಿತ್ಯಃ ಪ್ರಭಾಮಾದಾಯ ಗಚ್ಛತಿ ।
ಏವಂ ಜೀವಿತಮಾದಾಯ ಕರ್ಣಸ್ಯೇಷುರ್ಜಗಾಮ ಹ ॥೪೨॥

ಅಸ್ತಮಿಸುವ ಸೂರ್ಯನು ತನ್ನ ಕಿರಣಗಳನ್ನು ತನ್ನೊಂದಿಗೆ ಒಯ್ಯುತ್ತ ಹೋಗುವಂತೆ ಕರ್ಣನಲ್ಲಿ ನೆಟ್ಟ ಬಾಣವೂ ಕೂಡ ಅಸ್ತಮಿಸುವಾಗ ಅವನ ಪ್ರಾಣಗಳನ್ನೂ ಜೊತೆಗೆ ಒಯ್ಯುತ್ತಲೇ ಅಸ್ತಂಗತವಾಯಿತು.

ಅಪರಾಹ್ಣೇಽಪರಾಹ್ಣಸ್ಯ ಸೂತಪುತ್ರಸ್ಯ ಮಾರಿಷ ।
ಛಿನ್ನಮಂಜಲಿಕೇನಾಜೌ ಸೋತ್ಸೇಧಮಪತಚ್ಛಿರಃ ॥೪೩॥

ಪಾಂಡವರಿಗಿಂತ 'ಅಪರ–ಅಹ' ಹೆಚ್ಚುಕಾಲ ಬದುಕಿದ್ದ ಕರ್ಣನ ಶಿರಸ್ಸು ಅಪರಾಹ್ಣ ಕಾಲದಲ್ಲಿ ರಣದಲ್ಲಿ ಅಂಜಲಿಕಬಾಣದಿಂದ ಕಡಿದು, ಚೆಂಡಿನಂತೆ ಸ್ವಲ್ಪ ಮೇಲಕ್ಕೆ ಹಾರಿ ಕೆಳಗೆ ಬಿದ್ದಿತು.

ಕುಂತಿ ಇನ್ನೂ ಕನ್ಯಾವಸ್ಥೆಯಲ್ಲಿದ್ದಾಗಲೇ ಜನಿಸಿದ್ದ ಕರ್ಣನು, ಅವಳು ಪಾಂಡುವನ್ನು ವಿವಾಹವಾಗಿ ಅನೇಕ ವರ್ಷಗಳನ್ನು ಕಳೆದಾಗ ಜನಿಸಿದ ಪಾಂಡವರಿಗಿಂತ 'ಅಪರ ಅಹ' ಹೆಚ್ಚುಕಾಲ ಬದುಕಿದವನಾದ್ದರಿಂದ

'ಅಪರಾಹ್ಣ' ಎನಿಸುತ್ತಾನೆ. ಅವನು ಅಪರಾಹ್ಣ ಸಮಯದಲ್ಲಿಯೇ ಮಡಿದ. ಹಗಲಿನ ಸಮಯವನ್ನು ಐದು ಭಾಗ ಮಾಡಿದರೆ ನಾಲ್ಕನೆ ಭಾಗವೂ 'ಅಪರಾಹ್ಣ'ವೆನಿಸುತ್ತದೆ.

ಉಪರ್ಯುಪರಿ ಸೈನ್ಯಾನಾಂ ತಸ್ಯ ಶತ್ರೋಸ್ತದಂಜಸಾ ।
ಶಿರಃ ಕರ್ಣಸ್ಯ ಸೋತ್ಸೇಧಮಿಷುಃ ಸೋಽಪಾಹರದ್ ದ್ರುತಮ್ ॥೪೪॥

ಅರ್ಜುನನ ಅಂಜಲಿಕಬಾಣವು ಶಿರಶ್ಛೇದಕ್ಕಿಂತ ಮೊದಲಿಗೆ, ಶರೀರಸಹಿತವಾದ ಕರ್ಣನ ಶಿರಸ್ಸನ್ನು ಶರೀರದೊಂದಿಗೇ ಸರ್ವಸೈನ್ಯಗಳಿಗಿಂತ ಸ್ವಲ್ಪ ಮೇಲಕ್ಕೆ ಹಾರಿಸಿ, ಬೇಗನೆ ಚೆನ್ನಾಗಿ ಶಿರಸ್ಸನ್ನು ಕತ್ತರಿಸಿತು.

ಕರ್ಣಂ ತು ಶೂರಂ ಪತಿತಂ ಪೃಥಿವ್ಯಾಂ
ಶರಾಚಿತಂ ಶೋಣಿತದಿಗ್ಧಗಾತ್ರಮ್ ।
ದೃಷ್ಟ್ವಾ ಶಯಾನಂ ಭುವಿ ಮದ್ರರಾಜ-
ಶ್ಛಿನ್ನಧ್ವಜೇನಾಪಯಯೌ ರಥೇನ ॥೪೫॥

ಶೂರ ಕರ್ಣನು ಬಾಣಗಳಿಂದ ಮೈಯೆಲ್ಲ ತುಂಬಿಕೊಂಡು, ರಕ್ತಸಿಕ್ತವಾದ ಮೈಯವನಾಗಿ ನೆಲದಲ್ಲಿ ಬಿದ್ದು ಮಲಗಿದುದನ್ನು ಕಂಡು ಸಾರಥಿ ಶಲ್ಯನು ಧ್ವಜ ರಹಿತವಾದ ಆ ರಥದಿಂದಲೇ ದೂರಕ್ಕೆ ಹೊರಟುಹೋದ.

ಕರ್ಣೇ ಹತೇ ಕುರವಃ ಪ್ರಾದ್ರವಂತ
ಭಯಾರ್ದಿತಾ ಗಾಢವಿದ್ಧಾಶ್ಚ ಸಂಖ್ಯೇ ।
ಅವೇಕ್ಷಮಾಣಾ ಮುಹುರರ್ಜುನಸ್ಯ
ಧ್ವಜಂ ಮಹಾಂತಂ ವಪುಷಾ ಜ್ವಲಂತಮ್ ॥೪೬॥

ಕರ್ಣನು ಹತನಾದಾಗ ಕೌರವಸೈನಿಕರು ರಣದಲ್ಲಿ ಗಾಢವಾಗಿ ಗಾಯಗೊಂಡು, ಅರ್ಜುನನ ಮಹಾವಾನರಧ್ವಜವು ಶರೀರದಿಂದ ಜ್ವಲಿಸುವುದನ್ನು ಪುನಃಪುನಃ ನೋಡುತ್ತ ಭಯವಿಹ್ವಲರಾಗಿ ಪಲಾಯನಗೈದರು.

ಅರ್ಜುನನ ಧ್ವಜವು ಉಜ್ವಲವಾಗಿ ಬೆಳಗುವುದರಿಂದ ಮುಂದೆ ಜಯ ಅರ್ಜುನನಿಗೆ ನಿಶ್ಚಿತವೆಂದು ಕುರುಸೈನಿಕರು ಭಯಪಟ್ಟರು.

ಸಹಸ್ರನೇತ್ರಪ್ರತಿಮಾನಕರ್ಮಣಃ
ಸಹಸ್ರಪತ್ರಪ್ರತಿಮಾನನಂ ಶುಭಮ್ ।
ಸಹಸ್ರರಶ್ಮಿರ್ದಿನಸಂಕ್ಷಯೇ ಯಥಾ
ತಥಾಪತತ್ತಸ್ಯ ಶಿರೋ ವಸುಂಧರಾಮ್ ॥೪೭॥

ಹಗಲು ಕಳೆದಾಗ ಸೂರ್ಯನು ಕೆಳಗೆ ಬೀಳುವಂತೆ, ಸಹಸ್ರಾಕ್ಷ ಇಂದ್ರನಂತೆ ಪರಾಕ್ರಮಯುಕ್ತನಾಗಿದ್ದ ಕರ್ಣನ ಕಮಲದಂಥ ಸುಂದರವಾದ ಮುಖ ಉಳ್ಳ ಶಿರಸ್ಸು ನೆಲದ ಮೇಲೆ ಬಿದ್ದಿತು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಕರ್ಣವಧೋ ನಾಮ ಅಷ್ಟಾಶೀತಿತಮೋಽಧ್ಯಾಯಃ ॥೮೮॥

❖

ಮಹಾಭಾರತತಾತ್ಪರ್ಯನಿರ್ಣಯ

ತಸ್ಮಿನ್ ಹತೇ ದೀನಮುಖಃ ಸುಯೋಧನೋ
ಯಯೌ ಸಮಾಹೃತ್ಯ ಬಲಂ ಸಶಲ್ಯಃ ।
ಯುಧಿಷ್ಠಿರಃ ಕರ್ಣವಧಂ ನಿಶಮ್ಯ
ತದಾ ಸಮಾಗತ್ಯ ದದರ್ಶ ತತ್ತನುಮ್ ॥ ೧೯೧ ॥

ಕರ್ಣ ಹತನಾದಾಗ ದುರ್ಯೋಧನ ಬಾಡಿದ ಮುಖದವನಾಗಿ ತನ್ನ ಸೈನ್ಯವನ್ನು ಹಿಂತೆಗೆದುಕೊಂಡು ಶಲ್ಯನೊಡನೆ ಹೊರಟುಹೋದ. ಯುಧಿಷ್ಠಿರ ಕರ್ಣನ ವಧೆಯಾದುದನ್ನು ಕೇಳಿ ಬಂದು ಅವನ ಶವವನ್ನು ಕಂಡ.

❖

ಎಂಬತ್ತೊಂಬತ್ತನೆಯ ಅಧ್ಯಾಯ

ಕುರುಸೈನ್ಯದ ಪಲಾಯನ. ದುರ್ಯೋಧನನಿಗೆ ಶಲ್ಯನ ಸಾಂತ್ವನ.

ಸಂಜಯಃ

ಶಲ್ಯಸ್ತು ಕರ್ಣೇ ನಿಹತೇ ಕಿರೀಟಿನಾ
ತ್ರಸ್ತಂ ಬಲಂ ಪ್ರಸಮೀಕ್ಷ್ಯಾರ್ತರೂಪಮ್ ।

ಯಯೌ ಹತೇ ಚಾಧಿರಥೌ ಪದಾನುಗೇ
ರಥೇನ ಸಂಛಿನ್ನಪರಿಚ್ಛದೇನ ॥೧॥

ಸಂಜಯ ನುಡಿದ— ಅರ್ಜುನನಿಂದ ಕರ್ಣ ಹತನಾದಾಗ, ಕೌರವಸೈನ್ಯವು ಭಯಾರ್ತವಾದುದನ್ನು ಶಲ್ಯನು ಕಂಡು, ಕರ್ಣನೂ ಅವನ ಕಡೆಯ ಸೈನಿಕರೂ ಹತರಾಗಿದ್ದರಿಂದ, ರಥದ ಸಾಮಗ್ರಿಗಳೂ ನಷ್ಟವಾಗಿದ್ದರಿಂದ, ರಣರಂಗವನ್ನು ಬಿಟ್ಟು ಆ ರಥದಿಂದಲೆ ಶಲ್ಯನು ಹೊರಟುಹೋದ. (ಭೂಮಿ ಈಗ ರಥಚಕ್ರವನ್ನು ನುಂಗಿಕೊಂಡಿರಲಿಲ್ಲ)

ಶಲ್ಯಸ್ತು ಕರ್ಣಾರ್ಜುನಯೋರ್ವಿಮರ್ದೇ
ಬಲಾನಿ ದೃಷ್ಟ್ವಾ ಮೃದಿತಾನಿ ಬಾಣೈಃ ।
ದುರ್ಯೋಧನಂ ಯಾಂತಮವೇಕ್ಷಮಾಣೋ
ಸಂದರ್ಶಯದ್ ಭಾರತ ಯುದ್ಧಭೂಮಿಮ್ ॥೨॥

ಕರ್ಣಾರ್ಜುನರ ಯುದ್ಧದಲ್ಲಿ ಕುರುಸೈನಿಕರೇ ಹೆಚ್ಚಾಗಿ ಬಾಣಗಳಿಂದ ನಾಶವಾದರು. ಅದನ್ನು ಕಂಡು, ದುರ್ಯೋಧನನು ರಣರಂಗಕ್ಕೆ ಹೋಗುವುದನ್ನು ಕಂಡು, ಶಲ್ಯನು ಅವನಿಗೆ ರಣಭೂಮಿಯನ್ನು ತೋರಿಸಿದ.

ನಿಪಾತಿತಸ್ಯಂದನವಾಜಿನಾಗಂ
ದೃಷ್ಟ್ವಾ ಬಲಂ ತದ್ಧತಸೂತಪುತ್ರಮ್ ।
ದುರ್ಯೋಧನೋಽಶ್ರುಪ್ರತಿಪೂರ್ಣನೇತ್ರೋ
ಮುಹುರ್ಮುಹುರ್ನಿಶ್ವಸದಾರ್ತರೂಪಃ ॥೩॥

ಕೌರವಸೈನ್ಯದಲ್ಲಿ ಸೇನಾಪತಿ ಕರ್ಣ ಹತನಾಗಿದ್ದಾನೆ. ರಥ ಅಶ್ವ ಗಜ ಸೈನಿಕರೂ ಹತರಾಗಿದ್ದಾರೆ. ಇದನ್ನು ಕಂಡು ದುರ್ಯೋಧನನು ದುಃಖಾರ್ತನಾಗಿ ಕಣ್ಣಲ್ಲಿ ನೀರು ತುಂಬಿಕೊಂಡು ಪುನಃ ಪುನಃ ನಿಟ್ಟುಸಿರಿಟ್ಟ.

ಕರ್ಣಂ ತು ಶೂರಂ ಪತಿತಂ ಪೃಥಿವ್ಯಾಂ
ಶರಾಚಿತಂ ಶೋಣಿತದಿಗ್ಧಗಾತ್ರಮ್ ।
ಯದೃಚ್ಛಯಾ ಸೂರ್ಯಮಿವಾವನಿಸ್ಥಂ
ದಿದೃಕ್ಷವಃ ಸಂಪರಿವಾರ್ಯ ತಸ್ಥುಃ ॥೪॥

ಶೂರಕರ್ಣನು ಬಾಣಗಳಿಂದ ತುಂಬಿಕೊಂಡು ಮೈಯೆಲ್ಲ ರಕ್ತದಿಂದ ತೊಯ್ದು ನೆಲದಲ್ಲಿ ಬಿದ್ದು ಅಕಸ್ಮಾತ್ ಸೂರ್ಯನೆ ನೆಲದಲ್ಲಿ ಬಿದ್ದಂತೆ ಕಂಡು ಬಂದ. ಅವನನ್ನು ಕಾಣಲು ಪಾಂಡವ–ಕೌರವ ಸೈನಿಕರು ಸುತ್ತುವರಿದು ನೆರೆದು ನಿಂತರು.

ಪ್ರಹೃಷ್ಟವಿತ್ರಸ್ತವಿಷಣ್ಣವಿಸ್ಮಿತಾ-
ಸ್ತಥಾಪರೇ ಶೋಕಗತಾ ಇವಾಭವನ್ ।
ಪರೇ ತ್ವದೀಯಾಶ್ಚ ಪರಸ್ಪರೇಣ
ಯಥಾ ಯಥೈಷಾಂ ಪ್ರಕೃತಿಸ್ತಥಾಭವನ್ ॥೫॥

ಕರ್ಣನು ತೋರಿದ ಪರಾಕ್ರಮವನ್ನು ನೆನೆದು ಕೆಲವರಿಗೆ ಹರ್ಷ, ಇನ್ನು ನಮ್ಮ ಗತಿ ಏನೆಂದು ಕೆಲವರಿಗೆ ಭಯ. ದಿಕ್ಕೇ ತೋಚದೆ ಕೆಲವರಿಗೆ ವಿಷಾದ, ಇಂಥ ಶೂರನೂ ಮಡಿದನೆ ಎಂದು ಕೆಲವರಿಗೆ ವಿಸ್ಮಯ, ಕರ್ಣ ಇನ್ನಿಲ್ಲವೆಂದು ಕೆಲವರು ಶೋಕದಲ್ಲಿಯೇ ಮುಳುಗಿದ್ದಂತೆ ಕಂಡರು. ಹೀಗೆ ಪಾಂಡವ ಸೈನಿಕರೂ ನಿನ್ನವರೂ ಪರಸ್ಪರವಾಗಿ ತಮ್ಮತಮ್ಮ ಸ್ವಭಾವಕ್ಕೆ ಅನುಗುಣವಾಗಿ ಪ್ರತಿಕ್ರಿಯಿಸಿದರು.

ಪ್ರವಿದ್ಧವರ್ಮಾಭರಣಾಂಬರಾಯುಧಂ
ಧನಂಜಯೇನಾಭಿಹತಂ ಹತೌಜಸಮ್ ।
ನಿಶಾಮ್ಯ ಕರ್ಣಂ ಕುರವಃ ಪ್ರದುದ್ರುವು
ರ್ಹತರ್ಷಭಾ ಗಾವ ಇವಾಕುಲಾಕುಲಾಃ ॥೬॥

ಕರ್ಣನು ಅರ್ಜುನನ ಬಾಣಗಳಿಂದ ಹೊಡೆಸಿಕೊಂಡು ಬಲಗುಂದಿ ಕವಚ ಆಭರಣ ವಸ್ತ್ರ ಆಯುಧವೆಲ್ಲವನ್ನೂ ಕಳೆದುಕೊಂಡಿದ್ದನ್ನು ಕಂಡು ಕುರುಸೈನಿಕರು ಪಲಾಯನ ಮಾಡಿದರು, ಗೂಳಿ ಹತವಾದಾಗ ಹಸುಗಳಂತೆ ಬಹಳ ಕಳವಳಗೊಂಡರು.

ತಥೈವ ರಾಜನ್ ಸೋಮಕಾಃ ಸೃಂಜಯಾಶ್ಚ
ಶಂಖಾನ್ ದಧ್ಮುಃ ಸಸ್ವಜುಶ್ಚಾಪಿ ಸರ್ವೇ ।
ಪರಸ್ಪರಂ ಕ್ಷತ್ರಿಯಾ ಹೃಷ್ಟರೂಪಾಃ
ಸೂತಾತ್ಮಜೇ ನಿಹತೇ ವೈ ತದಾನೀಮ್ ॥೭॥

ಕರ್ಣನು ಹತನಾದಾಗ, ರಾಜನೆ, ಸೋಮಕರೂ ಸೃಂಜಯರೂ ಶಂಖನಾದ ಗೈದರು. ಕ್ಷತ್ರಿಯರು ಪರಸ್ಪರವಾಗಿ ತಬ್ಬಿಕೊಂಡರು ಹರ್ಷಪಟ್ಟರು.

ಕೃತ್ವಾ ವಿಮರ್ದಂ ಭೃಶಮರ್ಜುನೇನ
ಕರ್ಣೋ ಹತಃ ಕೇಸರಿಣೇವ ನಾಗಃ ।
ತೀರ್ತ್ವಾ ಪ್ರತಿಜ್ಞಾ ಪುರುಷರ್ಷಭೇಣ
ವೈರಸ್ಯಾಂತಂ ಗತವಾಂಶ್ಚಾಪಿ ಪಾರ್ಥಃ ॥೮॥

ಅರ್ಜುನನೊಂದಿಗೆ ಬಹಳ ಹೋರಾಡಿ ಕರ್ಣ ಸಿಂಹದೊಂದಿಗೆ ಹೋರಾಡಿ ಆನೆ ಹತವಾದಂತೆ ಹತನಾದ. ಇದರಿಂದ ಅರ್ಜುನ ತನ್ನ ಪ್ರತಿಜ್ಞೆಯನ್ನು ಈಡೇರಿಸಿಕೊಂಡ. ಕರ್ಣನಲ್ಲಿದ್ದ ವೈರಕ್ಕೆ ಮಂಗಳವನ್ನೂ ಹಾಡಿದ.

ದೃಷ್ಟ್ವಾ ಶಯಾನಂ ಭುವಿ ಮದ್ರರಾಜೋ
ಭೀತೋಽಪಸರ್ಪತ್ಸರಥಃ ಸುಶೀಘ್ರಮ್ ॥೯॥

ಮದ್ರಾಧಿಪಶ್ಚಾಪಿ ವಿಮೂಢಚೇತಾ-
ಸ್ತೂರ್ಣಂ ರಥೇನಾಪಹೃತಧ್ವಜೇನ ।
ದುರ್ಯೋಧನಸ್ಯಾಂತಿಕಮೇತ್ಯ ಶೀಘ್ರಂ
ಸಂಭಾಷ್ಯ ದುಃಖಾರ್ತಮುವಾಚ ವಾಕ್ಯಮ್ ॥೧೦॥

ಕರ್ಣ ನೆಲದಲ್ಲಿ ಒರಗಿದ್ದನ್ನು ಕಂಡು ಭೀತನಾಗಿ ಶಲ್ಯನು ರಥದೊಂದಿಗೆ ದೂರಕ್ಕೆ ಹೊರಟುಹೋದ. ಅವನ ಮನಸ್ಸು ದಿಗ್ಭ್ರಮೆಹೊಂದಿತ್ತು. ಧ್ವಜರಹಿತವಾಗಿದ್ದ ಆ ರಥದಿಂದ ಬೇಗನೆ ದುರ್ಯೋಧನನ ಬಳಿಗೆ ಹೋಗಿ ಸಂಭಾಷಣೆ ಮಾಡುತ್ತ ದುಃಖಾರ್ತನಾದ ಆತನಿಗೆ ಹೀಗೆ ಹೇಳಿದ.

ಎರಡನೇ ಮೂರನೇ ಶ್ಲೋಕದಲ್ಲಿ ಹಿಂದೆ ಹೇಳಿದ್ದನ್ನೆ ತಿರುಗಿ ಹೇಳಿ ಆ ಘಟನೆಯನ್ನು ಸಂಜಯ ಮುಂದುವರಿಸಿ ಹೇಳುತ್ತಿದ್ದಾನೆ. ಇದು ಪುರಾಣ ಶೈಲಿ.

ವಿಶೀರ್ಣನಾಗಾಶ್ವರಥಪ್ರವೀರಂ
ಬಲಂ ತ್ವದೀಯಂ ಯಮರಾಷ್ಟ್ರಕಲ್ಪಮ್ ।

ಅನ್ಯೋನ್ಯಮಾಸಾದ್ಯ ಹತಂ ಮಹದ್ಭಿ-
ರ್ನರಾಶ್ವನಾಗೈರ್ಗಿರಿಕೂಟಕಲ್ಪೈಃ ॥೧೧॥

'ನಿನ್ನ ಸೈನ್ಯವು ಈಗ ಗಜ ಅಶ್ವ ರಥ ಪದಾತಿಗಳೆಲ್ಲವನ್ನೂ ಕಳೆದುಕೊಂಡು ಯಮರಾಷ್ಟ್ರದಂತಾಗಿದೆ. ಪಾಂಡವ ಸೈನಿಕರೊಂದಿಗೆ ನಿನ್ನವರು ಪರಸ್ಪರ ಹೋರಾಡಿ ಪರ್ವತಶಿಖರಗಳಂಥ ಮಹಾ ಪದಾತಿ ಅಶ್ವ ಗಜಗಳಿಂದ ಹತರಾಗಿದ್ದಾರೆ.

ನೈತಾದೃಶಂ ಭಾರತ ಯುದ್ಧಮಾಸೀದ್
ಯಥಾದ್ಯ ಕರ್ಣಾರ್ಜುನಯೋರ್ಬಭೂವ ।
ಗ್ರಸ್ತೌ ಹಿ ಕರ್ಣೇನ ಸಮೇತ್ಯ ಕೃಷ್ಣಾ-
ವನ್ಯೇ ಚ ಸರ್ವೇ ತವ ಶತ್ರವೋ ಯೇ ॥೧೨॥

ರಾಜನೆ, ಕರ್ಣ ಅರ್ಜುನರ ಈ ಯುದ್ಧದಂಥ ಯುದ್ಧ ಹಿಂದೆ ಎಂದೂ ಆಗಿಲ್ಲ. ಕರ್ಣನು ಕೃಷ್ಣಾರ್ಜುನರನ್ನು ಇದಿರಿಸಿ ಇಬ್ಬರನ್ನೂ ಆಕ್ರಮಿಸಿದ್ದ. ನಿನ್ನ ಶತ್ರುಗಳಾದ ಬೇರೆ ಯೋಧರನ್ನೂ ಆಕ್ರಮಿಸಿದ್ದ.

ದೈವಂ ತು ಯತ್ತತ್ಸ್ವವಶಂ ಪ್ರವೃತ್ತಂ
ತತ್ಪಾಂಡವಾನ್ ಪಾತಿ ಹಿನಸ್ತಿ ಚಾಸ್ಮಾನ್ ।
ತವಾರ್ಥಸಿದ್ಧ್ಯರ್ಥಕರಾ ಹಿ ಸರ್ವೇ
ಪ್ರಸಹ್ಯ ವೀರಾ ನಿಹತಾ ದ್ವಿಷದ್ಭಿಃ ॥೧೩॥

ಆದರೇನು? ದೈವ ಸ್ವತಂತ್ರವಾಗಿ ಪ್ರವೃತ್ತಿ ಮಾಡುತ್ತದೆ. ಅದು ಪಾಂಡವರನ್ನು ಕಾಪಾಡುತ್ತಲೇ ಇದೆ, ನಮ್ಮನ್ನು ವಧಿಸುತ್ತಲೇ ಇದೆ. ನಿನ್ನ ಅಭೀಷ್ಟಸಿದ್ಧಿಗಾಗಿ ಪ್ರಯತ್ನಿಸುವ ವೀರರು ಎಲ್ಲರೂ ಶತ್ರುಗಳಿಂದ ಹತರಾಗಿದ್ದಾರೆ.

ಕುಬೇರವೈವಸ್ವತವಾಸವಾನಾಂ
ತುಲ್ಯಪ್ರಭಾವಾ ವರುಣಸ್ಯ ಚಾಪಿ ।
ವೀರ್ಯೇಣ ಶೌರ್ಯೇಣ ಬಲೇನ ಚೈವ
ತೈಸ್ತೈಶ್ಚ ಯುಕ್ತಾ ವಿಪುಲೈರ್ಗುಣೌಘೈಃ ॥೧೪॥

ನಮ್ಮ ಕಡೆಯ ಭೀಷ್ಮದ್ರೋಣಾದಿಗಳು ಕುಬೇರ ಯಮ ಇಂದ್ರ ವರುಣರಿಗೆ ಸಮಾನವಾದ ಸಾಮರ್ಥ್ಯವಿದ್ದವರು. ವೀರ್ಯ ಶೌರ್ಯ ಬಲಗಳಿಂದಲೂ ಆಯಾ ವಿಪುಲ ಗುಣಗಳಿಂದಲೂ ಯುಕ್ತರಾದವರೆ.

ಅವಧ್ಯಕಲ್ಪಾ ನಿಹತಾ ನರೇಂದ್ರಾ-
ಸ್ತವಾರ್ಥಕಾಮಾ ಯುಧಿ ಪಾಂಡವೇಯೈಃ ।
ತನ್ಮಾ ಶುಚೋ ಭಾರತ ದಿಷ್ಟಮೇತತ್
ಪರ್ಯಾಯಸಿದ್ಧಿರ್ನ ಸದಾಸ್ತಿ ಸಿದ್ಧಿಃ ॥೧೫॥

ಅದರಿಂದ ಅವರು ಸಾಮಾನ್ಯವಾಗಿ ಅವಧ್ಯರೆಂದೇ ಹೇಳಬಹುದು. ಆದರೆ ಪಾಂಡವರ ಕಡೆಯವರಿಂದ ರಣದಲ್ಲಿ ಅಂಥ ರಾಜರು, ನಿನ್ನ ಅಭೀಷ್ಟಸಿದ್ಧಿಯನ್ನೇ ಬಯಸುವವರು, ಹತರಾದರು. ಅದರಿಂದ ರಾಜನೆ, ಶೋಕಿಸಬೇಡ. ಇದು ಅದೃಷ್ಟದ ಕೈವಾಡ, ಅದರಿಂದ ಅವರಿಗೊಮ್ಮೆ ನಮಗೊಮ್ಮೆ ಎಂದು ಪರ್ಯಾಯವಾಗಿ ಅಭೀಷ್ಟಸಿದ್ಧಿಯಾಗುವುದೆ ಹೊರತು ಸದಾ ಸಿದ್ಧಿ ಎನ್ನುವುದು ಯಾರಿಗೂ ಒಬ್ಬನಿಗೆ ಇಲ್ಲ.

ಏತದ್ ವಚೋ ಮದ್ರಪತೇರ್ನಿಶಮ್ಯ
ಸ್ವಂ ಚಾಪನೀತಂ ಮನಸಾ ನಿರೀಕ್ಷ್ಯ ।
ದುರ್ಯೋಧನೋ ದೀನಮನಾ ವಿಸಂಜ್ಞಃ
ಪುನಃ ಪುನರ್ಯಶ್ವಸದಾರ್ತರೂಪಃ ॥೧೬॥

ಮದ್ರರಾಜನಾದ ಶಲ್ಯನ ಈ ಮಾತುಗಳನ್ನು ಕೇಳಿ, ತಾನು ಹಿಂದೆ ಮಾಡಿದ್ದ ಅಕೃತ್ಯಗಳನ್ನೂ ಮನಸಿನಲ್ಲಿ ಆಲೋಚಿಸಿ, ದುರ್ಯೋಧನನು ಕಳವಳಗೊಂಡು ಅಸಹಾಯಕನಾಗಿ ಮೈಮರೆತು ಪುನಃಪುನಃ ನಿಟ್ಟುಸಿರಿಟ್ಟ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಶಲ್ಯವಾಕ್ಯಂ ನಾಮ ಏಕೋನನವತಿತಮೋಽಧ್ಯಾಯಃ ॥೮೯॥

❖

ತೊಂಬತ್ತನೆಯ ಅಧ್ಯಾಯ

ಕೌರವರ ಇಪ್ಪತ್ತೈದುಸಾವಿರ ಯೋಧರನ್ನು ಭೀಮಸೇನ ಮತ್ತು ಧೃಷ್ಟದ್ಯುಮ್ನರು ನಾಶಮಾಡಿದರು.

ಧೃತರಾಷ್ಟ್ರಃ

ಕಥಂ ತು ಕರ್ಣಾರ್ಜುನಯೋರ್ವಿಮರ್ದೇ
ದಗ್ಧಸ್ಯ ರೌದ್ರೇಽಹನಿ ವಿದ್ರುತಸ್ಯ ।
ಬಭೂವ ಸೈನ್ಯಸ್ಯ ಕುರೂದ್ವಹಾನಾಂ
ರೂಪಂ ತಥೈವೋನ್ಮಥಿತೇ ಚ ಕರ್ಣೇ ॥೧॥

ಧೃತರಾಷ್ಟ್ರ ಕೇಳಿದ— ಕರ್ಣಾರ್ಜುನರ ಯುದ್ಧ ನಡೆದ ಭಯಂಕರವಾದ ದಿನದಲ್ಲಿ ಕರ್ಣನು ಹತನಾದಾಗ, ಬಾಣದಿಂದ ದಗ್ಧವಾದ ಮತ್ತು ಓಡಿಹೋದ ಕುರುಸೈನ್ಯದ ರೂಪ ಹೇಗೆ ಇತ್ತು?

ಸಂಜಯಃ

ಶೃಣು ರಾಜನ್ನವಹಿತೋ ಯಥಾ ವೃತ್ತೋ ಮಹಾಕ್ಷಯಃ ।
ಘೋರೋ ಮನುಷ್ಯದೇಹಾನಾಮಾಜೌ ಚ ಗಜವಾಜಿನಾಮ್ ॥೨॥

ಸಂಜಯ ನುಡಿದ— ರಾಜನೆ, ಮನಸ್ಸಿಟ್ಟು ಕೇಳು. ಮನುಷ್ಯದೇಹ ಉಳ್ಳವರಿಗೂ ಗಜ ಅಶ್ವಗಳಿಗೂ ಘೋರವಾದ ಮಹಾಕ್ಷಯ ಹೇಗೆ ಉಂಟಾಯಿತೆಂದು ಹೇಳುತ್ತೇನೆ.

ಯದಾ ಕರ್ಣೇ ಹತೇ ಪಾರ್ಥಃ ಸಿಂಹನಾದಮಥಾಕರೋತ್ ।
ತದಾ ತವ ಸುತಾನ್ ರಾಜನ್ನಾವಿವೇಶ ಮಹದ್ಭಯಮ್ ॥೩॥

ಕರ್ಣನು ಹತನಾದ ಬಳಿಕ ಅರ್ಜುನನು ಯಾವಾಗ ಸಿಂಹನಾದಗೈದನೋ ಆಗ ನಿನ್ನ ಮಕ್ಕಳನ್ನು ಮಹಾಭಯ ಹೊಕ್ಕಿತು.

ನ ಸಂಧಾತುಮನೀಕಾನಿ ನ ಚೈವಾಥ ಪರಾಕ್ರಮೇ ।
ಆಸೀದ್ ಬುದ್ಧಿರ್ಹತೇ ಕರ್ಣೇ ತವ ಯೋಧಸ್ಯ ಕಸ್ಯಚಿತ್ ॥೪॥

ಕರ್ಣ ಹತನಾದಾಗ ನಿನ್ನ ಕಡೆಯ ಯೋಧನಿಗೆ ಯಾವನಿಗೂ ಸೈನ್ಯವನ್ನು ಸೇರಿಸುವುದರಲ್ಲಿಯೂ ಉತ್ಸಾಹ ಉಂಟಾಗಲಿಲ್ಲ. ಸ್ವತಃ ಪರಾಕ್ರಮ ತೋರುವಲ್ಲಿಯೂ ಉತ್ಸಾಹ ಬರಲಿಲ್ಲ.

ವಣಿಜೋ ನಾವಿ ಭಿನ್ನಾಯಾಮಗಾಧೇ ಸಾಗರೇ ಯಥಾ ।
ಅಪಾರೇ ಪಾರಮಿಚ್ಛಂತೋ ಹತೇ ದ್ವೀಪೇ ಕಿರೀಟಿನಾ ॥೫॥

ವರ್ತಕರು ಅಗಾಧವಾದ ಸಮುದ್ರದಲ್ಲಿ ನೌಕೆ ಒಡೆದಾಗ ಹೇಗೆ ಅಪಾರ ಸಾಗರದಲ್ಲಿ ಪಾರ(ದಂಡೆ)ವನ್ನು ಬಯಸುವರೋ ಹಾಗೇ ಅರ್ಜುನನಿಂದ ಕರ್ಣ ಹತನಾದಾಗ ನಮ್ಮ ಯೋಧರು ಅಪಾರವಾದ ಯುದ್ಧದಲ್ಲಿ ಪಾರಗಾಣಲು ಬಯಸಿದರು.

ಸೂತಪುತ್ರೇ ಹತೇ ರಾಜನ್ ವಿತ್ರಸ್ತಾಃ ಕ್ಷತವಿಕ್ಷತಾಃ ।
ಅನಾಥಾ ನಾಥಮಿಚ್ಛಂತೋ ಮೃಗಾಃ ಸಿಂಹೈರಿವಾರ್ದಿತಾಃ ॥೬॥

ರಾಜನೆ, ಕರ್ಣನು ಹತನಾದಾಗ ನಮ್ಮ ಯೋಧರು ಭಯಗೊಂಡರು. ಕ್ಷತ ವಿಕ್ಷತರಾದರು. ಅನಾಥರಾಗಿ ನಾಥನೊಬ್ಬನನ್ನು ಸಿಂಹದಿಂದ ಪೀಡಿತವಾದ ಮೃಗಗಳಂತೆ ಬಯಸಿದರು.

ಭಗ್ನಶೃಂಗಾ ಇವ ವೃಷಾ ಭಗ್ನದಂಷ್ಟ್ರಾ ಇವೋರಗಾಃ ।
ಪ್ರತ್ಯಪಾಯಾಮ ಸಾಯಾಹ್ನೇ ನಿರ್ಜಿತಾಃ ಸವ್ಯಸಾಚಿನಾ ॥೭॥

ಕೊಂಬುಕಿತ್ತ ಎತ್ತುಗಳಂತೆ, ಹಲ್ಲು ಕಿತ್ತ ಹಾವುಗಳಂತೆ ಆಗಿ ನಾವು ಸಂಜೆ ಅರ್ಜುನನಿಂದ ಪರಾಭವಗೊಂಡು ಪಲಾಯನ ಮಾಡಿದೆವು.

ಹತಪ್ರವೀರಾ ವಿಧ್ವಸ್ತಾ ನಿಕೃತ್ತಾ ನಿಶಿತೈಃ ಶರೈಃ ।
ಸೂತಪುತ್ರೇ ಹತೇ ರಾಜನ್ ಪುತ್ರಾಸ್ತೇ ವ್ಯದ್ರವನ್ ಭಯಾತ್ ॥೮॥

ರಾಜನೆ, ಕರ್ಣನು ಹತನಾದಾಗ ನಿನ್ನ ಮಕ್ಕಳ ಸೈನ್ಯದಲ್ಲಿ ಪ್ರಧಾನವೀರರೆಲ್ಲರೂ ಹತರಾದ್ದರಿಂದ ತಾವೂ ತೀಕ್ಷ್ಣವಾದ ಬಾಣಗಳಿಂದ ಹೊಡೆಸಿಕೊಂಡು ನಾಶವಾದರು. ಹೀಗೆ ಸೈನ್ಯ ನಾಶವಾದಾಗ ನಿನ್ನ ಮಕ್ಕಳು ಭಯದಿಂದ ಓಡಿದರು.

ವಿಶಸ್ತ್ರಕವಚಾಃ ಸರ್ವೇ ಕಾಂದಿಶೀಕಾ ವಿಚೇತಸಃ ।
ಅನ್ಯೋನ್ಯಮವಮೃದ್ನಂತೋ ವೀಕ್ಷಮಾಣಾ ಭಯಾರ್ದಿತಾಃ ॥೯॥

ಯೋಧರ ಶಸ್ತ್ರ-ಕವಚಗಳು ನಾಶವಾದುವು. ಎಲ್ಲರೂ ಭಯದಿಂದ ಓಡಿದರು. ಭಯಪೀಡಿತರಾಗಿ ಬುದ್ಧಿಗೆಟ್ಟು ತಮ್ಮನ್ನು ತಾವೇ ಪರಸ್ಪರವಾಗಿ ತುಳಿಯುತ್ತ ದಿಕ್ಕುಗಳನ್ನು ನೋಡುತ್ತ ಓಡಿದರು.

ಮಾಮೇವ ತೂರ್ಣಂ ಬೀಭತ್ಸುರ್ಮಾಮೇವ ಚ ವೃಕೋದರಃ ।
ಅಭಿಯಾತೀತಿ ಮನ್ವಾನಾಃ ಪೇತುಃ ಸೇದುಶ್ಚ ಭಾರತ ॥೧೦॥

ರಾಜನೆ, ನನ್ನನ್ನೇ ಅರ್ಜುನ ಬೆನ್ನಟ್ಟಿ ಬರುತ್ತಿದ್ದಾನೆ, ನನ್ನನ್ನೇ ಭೀಮ ಅಟ್ಟಿಸಿಕೊಂಡು ಬರುತ್ತಿದ್ದಾನೆ ಎಂದು ಭ್ರಮಿಸಿ ಅವರು ಬೀಳುತ್ತಾರೆ, ಎದ್ದು ಓಡುತ್ತಾರೆ.

ಹಯಾನನ್ಯೇ ರಥಾನನ್ಯೇ ಗಜಾನನ್ಯೇ ಮಹಾರಥಾಃ ।
ಆರುಹ್ಯ ಜವಸಂಪನ್ನಾಃ ಪಲಾಯಂತಶ್ಚ ಸರ್ವಶಃ ॥೧೧॥

ಮಹಾರಥರು ಭೀಮಾರ್ಜುನರಿಗೆ ಹೆದರಿ ಅಶ್ವಗಳನ್ನೇರಿ ಕೆಲವರು, ರಥವನ್ನೇರಿ ಕೆಲವರು, ಗಜಗಳನ್ನೇರಿ ಕೆಲವರು, ಹೀಗೆ ಎಲ್ಲರೂ ವೇಗದಿಂದ ಪಲಾಯನಗೈದರು.

ಕುಂಜರೈಃ ಸ್ಯಂದನಾಃ ಕ್ಷುಣ್ಣಾಃ ಸಾದಿನಶ್ಚ ಮಹಾರಥೈಃ ।
ಪದಾತಿಸಂಘಾಶ್ಚಾಶ್ವೈಃ ಪಲಾಯದ್ಭಿರ್ಭಯಾರ್ದಿತೈಃ ॥೧೨॥

ವೇಗವಾಗಿ ಧಾವಿಸುವಾಗ ಗಜಾರೋಹಿಗಳು ರಥಾರೋಹಿಗಳನ್ನು ಮಹಾರಥರು ಅಶ್ವಾರೋಹಿಗಳನ್ನು ಅಶ್ವಾರೋಹಿಗಳು ಪದಾತಿಸಮೂಹಗಳನ್ನು ಹೀಗೆ ಭಯಪೀಡಿತರಾಗಿ ಓಡುವಾಗ ತಮ್ಮ ಕಡೆಯವರನ್ನೆ ತಾವು ಧ್ವಂಸ ಮಾಡಿದರು.

ವ್ಯಾಲತಸ್ಕರಸಂಕೀರ್ಣೇ ಸಾರ್ಥಹೀನಾ ಯಥಾ ವನೇ ।
ತಥಾ ತ್ವದೀಯಾ ನಿಹತೇ ಸೂತಪುತ್ರೇ ತದಾಭವನ್ ॥೧೩॥

ಪ್ರಯಾಣಿಕರಲ್ಲಿ ಗುಂಪಿನಿಂದ ಬೇರ್ಪಟ್ಟವರು ಒಂಟಿಯಾಗಿ ಮೃಗಗಳಿಂದ,

ಕಳ್ಳ ದರೋಡೆಕೋರರಿಂದ ತುಂಬಿದ ಅರಣ್ಯದಲ್ಲಿ ಹೇಗೋ ಹಾಗೇ, ಕರ್ಣನು ಹತನಾದಾಗ ನಿನ್ನವರೂ ಸಂಕಟಕ್ಕೀಡಾದರು.

ಹತಾರೋಹಾಃ ಯಥಾ ನಾಗಾಶ್ಚಿನ್ನಹಸ್ತಾ ಯಥಾ ನರಾಃ ।
ಸರ್ವಂ ಪಾರ್ಥಮಯಂ ಘೋರಂ ಸಂಪಶ್ಯಂತೋ
ಭಯಾತುರಾಃ ॥೧೪॥

ಮಾವುತರಿಲ್ಲದ ಆನೆ ಹೇಗೋ, ಕೈ ಕಡಿದುಕೊಂಡ ಪದಾತಿಗಳು ಹೇಗೋ ಹಾಗೇ ಎಲ್ಲವೂ ಪಾರ್ಥಮಯ, ಘೋರವಾಗಿ ಕಂಡುಬಂದಿತು. ಅದನ್ನು ನೋಡಿ ಭಯ, ಕಳವಳಗಳಿಗೆ ನಿನ್ನವರು ಈಡಾದರು.

ತಾನ್ ಪ್ರೇಕ್ಷ್ಯ ದ್ರವತಃ ಸರ್ವಾನ್ ಭೀಮಸೇನಭಯಾರ್ದಿತಾನ್ ।
ದುರ್ಯೋಧನೋಽಥ ಸ್ವಂ ಸೂತಂ ವಹೇತ್ಯುಕ್ತ್ವೇದಮಬ್ರವೀತ್ ॥೧೫॥

ಭೀಮಸೇನನ ಭಯದಿಂದ ಪೀಡಿತರಾಗಿ ಎಲ್ಲರೂ ಓಡುತ್ತಿದ್ದುದನ್ನು ಕಂಡು ದುರ್ಯೋಧನನು ತನ್ನ ಸಾರಥಿಗೆ 'ಹೋಗು' ಎನ್ನುತ್ತ ಹೀಗೆ ಹೇಳಿದ.

ನಾತಿಕ್ರಮೇಚ್ಚ ಮಾಂ ಪಾರ್ಥೋ ಧನುಷ್ಪಾಣಿಂ ವ್ಯವಸ್ಥಿತಮ್ ।
ಜಘನೇ ಸರ್ವಸೈನ್ಯಾನಾಂ ಶನೈರಶ್ವಾನ್ ಪ್ರಚೋದಯ ॥೧೬॥

'ಎಲ್ಲ ಸೈನ್ಯಗಳ ಹಿಂಭಾಗದಲ್ಲಿ ಧನುಷ್ಪಾಣಿಯಾಗಿ ನಾನು ನಿಂತರೆ ನನ್ನನ್ನು ಅರ್ಜುನನು ಅತಿಕ್ರಮಿಸಿ ಹೋಗಲಾರ. ಮೆಲ್ಲನೆ ಕುದುರೆಗಳನ್ನು ನಡೆಸು.'

ಜಘನೇ ಯುದ್ಧ್ಯಮಾನಂ ಹಿ ಕೌಂತೇಯೋ ಮಾಂ ನ ಸಂಶಯಃ ।
ನೋತ್ಸಹೇತ ವ್ಯತಿಕ್ರಾಂತುಂ ವೇಲಾಮಿವ ಮಹೋದಧಿಃ ॥೧೭॥

'ನನ್ನ ಸೈನ್ಯಗಳ ಹಿಂಭಾಗದಲ್ಲಿ ನಾನು ಯುದ್ಧಮಾಡುತ್ತ ನಿಂತರೆ ಅರ್ಜುನನು, ಮಹಾಸಮುದ್ರವು ತೀರವನ್ನು ಹೇಗೋ ಹಾಗೆ, ನನ್ನನ್ನು ಅತಿಕ್ರಮಿಸಿ ಹೋಗಲಾರ. ಇದರಲ್ಲಿ ಸಂಶಯವಿಲ್ಲ.'

ಅದ್ಯಾರ್ಜುನಂ ಸಗೋವಿಂದಂ ಮಾನಿನಂ ಚ ವೃಕೋದರಮ್ ।
ನಿಹತ್ಯ ಶಿಷ್ಟಾನ್ ಶತ್ರೂಂಶ್ಚ ಕರ್ಣಸ್ಯಾನೃಣ್ಯಮಾಪ್ನುಯಾಮ್ ॥೧೮॥

'ಈಗ ನಾನು ಕೃಷ್ಣಸಮೇತನಾದ ಅರ್ಜುನನನ್ನೂ ಅಭಿಮಾನಿಯಾದ ಭೀಮಸೇನನನ್ನೂ ಉಳಿದ ಶತ್ರುಗಳನ್ನೂ ಸಂಹರಿಸಿ ಕರ್ಣನ ಋಣದಿಂದ ಮುಕ್ತನಾಗುವೆನು.'

ತಚ್ಛ್ರುತ್ವಾ ಕುರುರಾಜಸ್ಯ ಶೂರಾರ್ಹಸದೃಶಂ ವಚಃ ।
ಸೂತೋ ಹೇಮಪ್ರತಿಚ್ಛನ್ನಾನ್ ಶನೈರಶ್ವಾನಚೋದಯತ್ ॥೧೯॥

ಶ್ರೇಷ್ಠ ಶೂರರಿಗೆ ಒಪ್ಪುವಂಥ ಆ ದುರ್ಯೋಧನನ ಮಾತನ್ನು ಕೇಳಿ ಸಾರಥಿಯು ಬಂಗಾರದಿಂದ ಅಲಂಕೃತ ಕುದುರೆಗಳನ್ನು ಮೆಲ್ಲನೆ ನಡೆಸಿದ.

ರಥಾಶ್ವಗಜಹೀನಾಸ್ತು ಪಾದಾತಾಸ್ತವ ಮಾರಿಷ ।
ಪಂಚವಿಂಶತಿಸಾಹಸ್ರಾ ಯುದ್ಧಾಯೈವ ವ್ಯವಸ್ಥಿತಾಃ ॥೨೦॥

ರಾಜನೆ, ರಥ ಅಶ್ವ ಗಜಗಳಿಲ್ಲದೆಯೆ ಕೇವಲ ಪದಾತಿಗಳು ಇಪ್ಪತ್ತೈದು ಸಾವಿರ ಸಂಖ್ಯೆಯಲ್ಲಿ ಯುದ್ಧಕ್ಕೆ ನಿಂತರು.

ತಾನ್ ಭೀಮಸೇನಃ ಸಂಕ್ರುದ್ಧೋ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಬಲೇನ ಚತುರಂಗೇಣ ಪರಿಕ್ಷಿಪ್ಯ ನಿಜಘ್ನತುಃ ॥೨೧॥

ಅವರನ್ನು ಕುಪಿತನಾದ ಭೀಮಸೇನನೂ ಧೃಷ್ಟದ್ಯುಮ್ನನೂ ಚತುರಂಗ ಸೈನ್ಯದಿಂದ ಸುತ್ತಲೂ ಆವರಿಸಿ ಹೊಡೆದು ಕೊಲ್ಲಲು ತೊಡಗಿದರು.

ಪ್ರತ್ಯಯುಧ್ಯಂತ ತೇ ಸರ್ವೇ ಭೀಮಸೇನಂ ಸಪಾರ್ಷತಮ್ ।
ಪಾರ್ಥಪಾರ್ಷತಯೋಶ್ಚಾನ್ಯೇ ಜಗೃಹುಸ್ತತ್ರ ನಾಮನೀ ॥೨೨॥

ಅವರೆಲ್ಲರೂ ಭೀಮಸೇನ, ಧೃಷ್ಟದ್ಯುಮ್ನರನ್ನು ಇದಿರಿಸಿ ಹೋರಾಡಿದರು. ಕೆಲವರು ಭೀಮಸೇನ, ಧೃಷ್ಟದ್ಯುಮ್ನರ ಹೆಸರು ಹಿಡಿದು ಕರೆದು ಯುದ್ಧಕ್ಕೆ ಆಹ್ವಾನಿಸಿದರು.

ಅಕ್ರುದ್ಧ್ಯತ ತದಾ ಭೀಮಸ್ತೈ ರಣೇ ಪ್ರತ್ಯುಪಸ್ಥಿತೈಃ ।
ಸೋಽವತೀರ್ಯ ರಥಾತ್ ತೂರ್ಣಂ ಗದಾಪಾಣಿರಯುಧ್ಯತ ॥೨೩॥

ಕಳ್ಳ ದರೋಡೆಕೋರರಿಂದ ತುಂಬಿದ ಅರಣ್ಯದಲ್ಲಿ ಹೇಗೋ ಹಾಗೇ, ಕರ್ಣನು ಹತನಾದಾಗ ನಿನ್ನವರೂ ಸಂಕಟಕ್ಕೀಡಾದರು.

ಹತಾರೋಹಾಃ ಯಥಾ ನಾಗಾಶ್ಚಿನ್ನಹಸ್ತಾ ಯಥಾ ನರಾಃ ।
ಸರ್ವಂ ಪಾರ್ಥಮಯಂ ಘೋರಂ ಸಂಪಶ್ಯಂತೋ
ಭಯಾತುರಾಃ ॥೧೪॥

ಮಾವುತರಿಲ್ಲದ ಆನೆ ಹೇಗೋ, ಕೈ ಕಡಿದುಕೊಂಡ ಪದಾತಿಗಳು ಹೇಗೋ ಹಾಗೇ ಎಲ್ಲವೂ ಪಾರ್ಥಮಯ, ಘೋರವಾಗಿ ಕಂಡುಬಂದಿತು. ಅದನ್ನು ನೋಡಿ ಭಯ, ಕಳವಳಗಳಿಗೆ ನಿನ್ನವರು ಈಡಾದರು.

ತಾನ್ ಪ್ರೇಕ್ಷ್ಯ ದ್ರವತಃ ಸರ್ವಾನ್ ಭೀಮಸೇನಭಯಾರ್ದಿತಾನ್ ।
ದುರ್ಯೋಧನೋಽಥ ಸ್ವಂ ಸೂತಂ ವಹೇತ್ಯುಕ್ತ್ವೇದಮಬ್ರವೀತ್ ॥೧೫॥

ಭೀಮಸೇನನ ಭಯದಿಂದ ಪೀಡಿತರಾಗಿ ಎಲ್ಲರೂ ಓಡುತ್ತಿದ್ದುದನ್ನು ಕಂಡು ದುರ್ಯೋಧನನು ತನ್ನ ಸಾರಥಿಗೆ 'ಹೋಗು' ಎನ್ನುತ್ತ ಹೀಗೆ ಹೇಳಿದ.

ನಾತಿಕ್ರಮೇಚ್ಚ ಮಾಂ ಪಾರ್ಥೋ ಧನುಷ್ಪಾಣಿಂ ವ್ಯವಸ್ಥಿತಮ್ ।
ಜಘನೇ ಸರ್ವಸೈನ್ಯಾನಾಂ ಶನೈರಶ್ವಾನ್ ಪ್ರಚೋದಯ ॥೧೬॥

'ಎಲ್ಲ ಸೈನ್ಯಗಳ ಹಿಂಭಾಗದಲ್ಲಿ ಧನುಷ್ಪಾಣಿಯಾಗಿ ನಾನು ನಿಂತರೆ ನನ್ನನ್ನು ಅರ್ಜುನನು ಅತಿಕ್ರಮಿಸಿ ಹೋಗಲಾರ. ಮೆಲ್ಲನೆ ಕುದುರೆಗಳನ್ನು ನಡೆಸು.'

ಜಘನೇ ಯುದ್ಧ್ಯಮಾನಂ ಹಿ ಕೌಂತೇಯೋ ಮಾಂ ನ ಸಂಶಯಃ ।
ನೋತ್ಸಹೇತ ವ್ಯತಿಕ್ರಾಂತುಂ ವೇಲಾಮಿವ ಮಹೋದಧಿಃ ॥೧೭॥

'ನನ್ನ ಸೈನ್ಯಗಳ ಹಿಂಭಾಗದಲ್ಲಿ ನಾನು ಯುದ್ಧಮಾಡುತ್ತ ನಿಂತರೆ ಅರ್ಜುನನು, ಮಹಾಸಮುದ್ರವು ತೀರವನ್ನು ಹೇಗೋ ಹಾಗೆ, ನನ್ನನ್ನು ಅತಿಕ್ರಮಿಸಿ ಹೋಗಲಾರ. ಇದರಲ್ಲಿ ಸಂಶಯವಿಲ್ಲ.'

ಅದ್ಯಾರ್ಜುನಂ ಸಗೋವಿಂದಂ ಮಾನಿನಂ ಚ ವೃಕೋದರಮ್ ।
ನಿಹತ್ಯ ಶಿಷ್ಟಾನ್ ಶತ್ರೂಂಶ್ಚ ಕರ್ಣಸ್ಯಾನೃಣ್ಯಮಾಪ್ನುಯಾಮ್ ॥೧೮॥

'ಈಗ ನಾನು ಕೃಷ್ಣಸಮೇತನಾದ ಅರ್ಜುನನನ್ನೂ ಅಭಿಮಾನಿಯಾದ ಭೀಮಸೇನನನ್ನೂ ಉಳಿದ ಶತ್ರುಗಳನ್ನೂ ಸಂಹರಿಸಿ ಕರ್ಣನ ಋಣದಿಂದ ಮುಕ್ತನಾಗುವೆನು.'

ತಚ್ಛ್ರುತ್ವಾ ಕುರುರಾಜಸ್ಯ ಶೂರಾರ್ಥಸದೃಶಂ ವಚಃ ।
ಸೂತೋ ಹೇಮಪ್ರತಿಚ್ಛನ್ನಾನ್ ಶನೈರಶ್ವಾನಚೋದಯತ್ ॥೧೯॥

ಶ್ರೇಷ್ಠ ಶೂರರಿಗೆ ಒಪ್ಪುವಂಥ ಆ ದುರ್ಯೋಧನನ ಮಾತನ್ನು ಕೇಳಿ ಸಾರಥಿಯು ಬಂಗಾರದಿಂದ ಅಲಂಕೃತ ಕುದುರೆಗಳನ್ನು ಮೆಲ್ಲನೆ ನಡೆಸಿದ.

ರಥಾಶ್ವಗಜಹೀನಾಸ್ತು ಪಾದಾತಾಸ್ತವ ಮಾರಿಷ ।
ಪಂಚವಿಂಶತಿಸಾಹಸ್ರಾ ಯುದ್ಧಾಯೈವ ವ್ಯವಸ್ಥಿತಾಃ ॥೨೦॥

ರಾಜನೆ, ರಥ ಅಶ್ವ ಗಜಗಳಿಲ್ಲದೆಯೆ ಕೇವಲ ಪದಾತಿಗಳು ಇಪ್ಪತ್ತೈದು ಸಾವಿರ ಸಂಖ್ಯೆಯಲ್ಲಿ ಯುದ್ಧಕ್ಕೆ ನಿಂತರು.

ತಾನ್ ಭೀಮಸೇನಃ ಸಂಕ್ರುದ್ಧೋ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಬಲೇನ ಚತುರಂಗೇಣ ಪರಿಕ್ಷಿಪ್ಯ ನಿಜಘ್ನತುಃ ॥೨೧॥

ಅವರನ್ನು ಕುಪಿತನಾದ ಭೀಮಸೇನನೂ ಧೃಷ್ಟದ್ಯುಮ್ನನೂ ಚತುರಂಗ ಸೈನ್ಯದಿಂದ ಸುತ್ತಲೂ ಆವರಿಸಿ ಹೊಡೆದು ಕೊಲ್ಲಲು ತೊಡಗಿದರು.

ಪ್ರತ್ಯಯುಧ್ಯಂತ ತೇ ಸರ್ವೇ ಭೀಮಸೇನಂ ಸಪಾರ್ಷತಮ್ ।
ಪಾರ್ಥಪಾರ್ಷತಯೋಶ್ಚಾನ್ಯೇ ಜಗೃಹುಸ್ತತ್ರ ನಾಮನೀ ॥೨೨॥

ಅವರೆಲ್ಲರೂ ಭೀಮಸೇನ, ಧೃಷ್ಟದ್ಯುಮ್ನರನ್ನು ಇದಿರಿಸಿ ಹೋರಾಡಿದರು. ಕೆಲವರು ಭೀಮಸೇನ, ಧೃಷ್ಟದ್ಯುಮ್ನರ ಹೆಸರು ಹಿಡಿದು ಕರೆದು ಯುದ್ಧಕ್ಕೆ ಆಹ್ವಾನಿಸಿದರು.

ಅಕ್ರುದ್ಧ್ಯತ ತದಾ ಭೀಮಸ್ತೈ ರಣೇ ಪ್ರತ್ಯುಪಸ್ಥಿತೈಃ ।
ಸೋಽವತೀರ್ಯ ರಥಾತ್ ತೂರ್ಣಂ ಗದಾಪಾಣಿರಯುಧ್ಯತ ॥೨೩॥

ಆಗ ಭೀಮ ಕುಪಿತನಾದ. ಬೇಗನೆ ರಥದಿಂದ ಇಳಿದು ಗದಾಪಾಣಿಯಾಗಿ ರಣದಲ್ಲಿ ಇದಿರಾಗಿ ಬಂದು ನಿಂತವರೊಡನೆ ಯುದ್ಧ ಮಾಡಿದ.

ನ ತಾನ್ ರಥಸ್ಥೋ ಭೂಮಿಷ್ಠಾನ್ ಧರ್ಮಾಪೇಕ್ಷೀ ವೃಕೋದರಃ ।
ಯೋಧಯಾಮಾಸ ಕೌಂತೇಯೋ ಭುಜವೀರ್ಯಮುಪಾಶ್ರಿತಃ ॥೨೪॥

ನೆಲದಲ್ಲಿ ನಿಂತು ಹೋರಾಡುವವರೊಡನೆ ರಥದಲ್ಲಿ ಕುಳಿತ ಭೀಮಸೇನನು ಹೋರಾಡಲಿಲ್ಲ. ಅದು ಧರ್ಮವಲ್ಲ. ಅದಕ್ಕೆ ಧರ್ಮಯುದ್ಧಾಪೇಕ್ಷೆಯಿಂದ ಅವನು ಕೆಳಗಿಳಿದು ಬಾಹುಬಲದಿಂದಲೇ ಹೋರಾಡಿದ.

ಜಾತರೂಪಪರಿಚ್ಛನ್ನಾಂ ಪ್ರಗೃಹ್ಯ ಮಹತೀಂ ಗದಾಮ್ ।
ಅವಧೀತ್ ತಾವಕಾನ್ ಸರ್ವಾನ್ ದಂಡಪಾಣಿರಿವಾಂತಕಃ ॥೨೫॥

ಬಂಗಾರದಿಂದ ಮುಚ್ಚಿದ ದೊಡ್ಡಗದೆಯನ್ನು ಹಿಡಿದು ದಂಡಪಾಣಿಯಾದ ಅಂತಕನಂತೆ ನಿನ್ನವರೆಲ್ಲರನ್ನೂ ಸದೆಬಡಿದ.

ಪದಾತಿನೋಽಪಿ ಸಂರಬ್ಧಾಸ್ತ್ಯಕ್ತ್ವಾ ಜೀವಿತಮಾತ್ಮನಃ ।
ಭೀಮಮಭ್ಯದ್ರವನ್ ಸಂಖೇ ಪತಂಗಾ ಇವ ಪಾವಕಮ್ ॥೨೬॥

ಪದಾತಿಗಳು ಕೂಡ ಕುಪಿತರಾಗಿ, ಜೀವದ ಹಂಗು ತೊರೆದು ರಣದಲ್ಲಿ ವೇಗದಿಂದ ದೀಪದ ಹುಳುಗಳು ಬೆಂಕಿಯಲ್ಲಿ ಬೀಳುವಂತೆ ಭೀಮನ ಮೇಲೇರಿ ಹೋದರು.

ಆಸಾದ್ಯ ಭೀಮಸೇನಂ ತು ಸಂರಬ್ಧಾ ಯುದ್ಧದುರ್ಮದಾಃ ।
ವಿನೇಶುಃ ಸಹಸಾ ದೃಷ್ಟ್ವಾ ಭೂತಗ್ರಾಮಾ ಇವಾಂತಕಮ್ ॥೨೭॥

ಯುದ್ಧದ ಚಟ ಉಳ್ಳವರಾದ ಆ ಪದಾತಿ ಸೈನಿಕರು ಕುಪಿತರಾಗಿ ವೇಗದಿಂದ ಭೀಮನನ್ನು ಇದಿರಿಸಿ ಪ್ರಾಣಿಸಮೂಹಗಳು ಅಂತಕನ ದರ್ಶನ ಮಾತ್ರದಿಂದಲೇ ಪ್ರಾಣ ಬಿಡುವಂತೆ ಒಡನೆ ಹತರಾದರು.

ಶ್ಯೇನವದ್ ವ್ಯಚರದ್ ಭೀಮೋ ಗದಾಹಸ್ತೋ ಮಹಾಬಲಃ ।
ಪಂಚವಿಂಶತಿಸಾಹಸ್ರಾನ್ ತಾವಕಾನಾಮಪೋಥಯತ್ ॥೨೮॥

ಮಹಾಬಲಿ ಭೀಮ ಗದಾಪಾಣಿಯಾಗಿ ಗಿಡಗಪಕ್ಷಿಯಂತೆ ರಣದಲ್ಲಿ ಸಂಚರಿಸಿದ. ನಿನ್ನ ಕಡೆಯ ಇಪ್ಪತ್ತೈದು ಸಾವಿರ ಸೈನಿಕರನ್ನೂ ನಾಶಗೊಳಿಸಿದ.

ಹತ್ವಾ ತತ್ಪುರುಷಾನೀಕಂ ಭೀಮಃ ಸತ್ಯಪರಾಕ್ರಮಃ ।
ಧೃಷ್ಟದ್ಯುಮ್ನಂ ಪುರಸ್ಕೃತ್ಯ ಪುನಸ್ತಸ್ಥೌ ಮಹಾಬಲಃ ॥೨೯॥

ಸಫಲಪರಾಕ್ರಮಿಯಾದ ಮಹಾಬಲಿ ಭೀಮನು ಆ ಇಪ್ಪತ್ತೈದು ಸಾವಿರ ಪದಾತಿ ಸೈನ್ಯವನ್ನು ಸಂಹರಿಸಿ ಧೃಷ್ಟದ್ಯುಮ್ನನನ್ನು ಮುಂದಿಟ್ಟುಕೊಂಡು ಪುನಃ ರಣರಂಗದಲ್ಲಿ ನಿಂತ.

ಧೃಷ್ಟದ್ಯುಮ್ನೋಽಪಿ ಚ ಮಹಾನಮಿತ್ರಗಣಮರ್ದನಃ ।
ಪುತ್ರಃ ಪಾಂಚಾಲರಾಜಸ್ಯ ಧನುರ್ಧರವರೋ ಯುಧಿ ॥೩೦॥

ಧೃಷ್ಟದ್ಯುಮ್ನನೂ ಮಹಾಯೋಧ. ರಣದಲ್ಲಿ ಶತ್ರುಸಮೂಹಗಳನ್ನು ನಾಶಮಾಡುವವ. ಪಾಂಚಾಲರಾಜ ದ್ರುಪದನ ಪುತ್ರ. ಮಹಾ ಧನುರ್ಧಾರಿ.

ವಿಪ್ರಲೀನಾನ್ ರಥಾಶ್ವೇಭ್ಯಃ ಪದಾತೀಯಾನ್ ಸಮಂತತಃ ।
ಪಂಚವಿಂಶತಿಸಾಹಸ್ರಾನವಧೀನ್ನಿಶಿತೈಃ ಶರೈಃ ॥೩೧॥

ರಥ ಅಶ್ವ ಗಜಗಳಲ್ಲಿ ಅಡಗಿದ ಇಪ್ಪತ್ತೈದು ಸಾವಿರ ಪದಾತಿಸೈನಿಕರೆಲ್ಲರನ್ನು ಧೃಷ್ಟದ್ಯುಮ್ನನು ತೀಕ್ಷ್ಣವಾದ ಬಾಣಗಳಿಂದ ಸಂಹರಿಸಿದ.

ಶರೈರ್ನಿಕೃತ್ತಾಃ ಸಮರೇ ಧೃಷ್ಟದ್ಯುಮ್ನೇನ ತಾವಕಾಃ ।
ಪಂಚವಿಂಶತಿಸಾಹಸ್ರಾಃ ಕಾಲಮಾರ್ಚ್ಛನ್ ಪದಾತಯಃ ॥೩೨॥

ರಣದಲ್ಲಿ ಧೃಷ್ಟದ್ಯುಮ್ನನ ಬಾಣಗಳಿಂದ ಕತ್ತರಿಸಲ್ಪಟ್ಟು ನಿನ್ನ ಕಡೆಯ ಇಪ್ಪತ್ತೈದು ಸಾವಿರ ಪದಾತಿ ಸೈನಿಕರು ಕಾಲವಶರಾದರು.

ಹತ್ವಾ ತಂ ಪುರುಷಾನೀಕಂ ಧೃಷ್ಟದ್ಯುಮ್ನೋ ಮಹಾಬಲಃ ।
ಭೀಮಸೇನಂ ಪುರಸ್ಕೃತ್ಯ ನಚಿರಾತ್ ಪ್ರತ್ಯದೃಶ್ಯತ ॥೩೩॥

ಮಹಾಬಲಿಯಾದ ಧೃಷ್ಟದ್ಯುಮ್ನನು ಆ ಪದಾತಿ ಸೈನ್ಯವನ್ನು ಸಂಹರಿಸಿ ಪುನಃ

ಭೀಮಸೇನನನ್ನು ಮುಂದೆ ಮಾಡಿಕೊಂಡು ಬೇಗನೆ ರಣರಂಗದಲ್ಲಿ ಗೋಚರನಾದ.

ತಂ ಪಾರಾವತವರ್ಣಾಶ್ವಂ ಕ್ರುದ್ಧಂ ಕ್ರುದ್ಧಾಂತಕೋಪಮಮ್ ।
ಧೃಷ್ಟದ್ಯುಮ್ನಂ ರಣೇ ದೃಷ್ಟ್ವಾ ತ್ವದೀಯಾಃ ಪ್ರಾದ್ರವನ್
ಭಯಾತ್ ॥೩೪॥

ಕುಪಿತನಾದ ಅಂತಕನಂತಿರುವ, ಪಾರಿವಾಳವರ್ಣದ ಅಶ್ವಗಳನ್ನು ಹೂಡಿದ ರಥವೇರಿದ್ದ ಧೃಷ್ಟದ್ಯುಮ್ನನನ್ನು ರಣದಲ್ಲಿ ಕಂಡು ನಿನ್ನವರು ಭಯದಿಂದ ಪಲಾಯನಗೈದರು.

ಮಾದ್ರೀಪುತ್ರೌ ತು ಶಕುನಿಂ ಸಾತ್ಯಕಿಶ್ಚ ಮಹಾರಥಃ ॥೩೫॥

ನಕುಲ-ಸಹದೇವರೂ ಮಹಾರಾಜನಾದ ಸಾತ್ಯಕಿಯೂ ಶಕುನಿಯನ್ನು ಆಕ್ರಮಿಸಿದರು. ಉತ್ಸಾಹದಿಂದ ಶಕುನಿಯ ಸೈನ್ಯವನ್ನು ವಧಿಸಿದರು.

ಜವೇನಾಭ್ಯಪತನ್ ಹೃಷ್ಟಾ ನಿಘ್ನಂತಃ ಸೌಬಲಂ ಬಲಮ್ ।
ತಸ್ಯಾಶ್ವವಾರಾನ್ ಸುಬಹೂನ್ ವಿನಿಹತ್ಯ ಶಿತೈಃ ಶರೈಃ ॥೩೬॥

ಅವರು ಶಕುನಿಯ ಅಶ್ವಯೋಧರನ್ನು ಬಹುಸಂಖ್ಯೆಯಲ್ಲಿ ತೀಕ್ಷ್ಣವಾದ ಬಾಣಗಳಿಂದ ಸಂಹರಿಸಿ, ಶಕುನಿಯನ್ನು ಉತ್ಸಾಹದಿಂದ ವೇಗವಾಗಿ ಆಕ್ರಮಿಸಿದರು. ಆಗ ದೊಡ್ಡ ಯುದ್ಧ ನಡೆಯಿತು.

ತಮಭ್ಯಧಾವಂಸ್ತ್ವರಿತಾಸ್ತತೋ ಯುದ್ಧಮಭೂನ್ಮಹತ್ ।
ಧನಂಜಯೋಪಿ ಚಾಭ್ಯೇತ್ಯ ರಥಾನೀಕಂ ತವ ಪ್ರಭೋ ॥೩೭॥

ವಿಶ್ರುತಂ ತ್ರಿಷು ಲೋಕೇಷು ವ್ಯಾಕ್ಷಿಪದ್ ಗಾಂಡಿವಂ ಧನುಃ ।

ರಾಜನೆ, ಅರ್ಜುನನು ಕೂಡ ನಿನ್ನ ಸೈನ್ಯದ ಇದಿರಿಗೆ ನುಗ್ಗಿ ಬಂದು ಮೂರ್ಲೋಕದಲ್ಲಿ ಪ್ರಖ್ಯಾತವಾದ ಗಾಂಡೀವ ಧನುಸ್ಸನ್ನು ಠೇಂಕರಿಸಿದ.

ಕೃಷ್ಣಸಾರಥಿಮಾಯಾಂತಂ ದೃಷ್ಟ್ವಾ ಶ್ವೇತಹಯಂ ರಥಮ್ ॥೩೮॥
ಅರ್ಜುನಂ ಚಾಪಿ ಯೋದ್ಧಾರಂ ತ್ವದೀಯಾಃ ಪ್ರಾದ್ರವನ್ ಭಯಾತ್ ।

ಸಾರಥಿ ಕೃಷ್ಣನನ್ನೂ ಶ್ವೇತ ಅಶ್ವಯುಕ್ತವಾಗಿ ಆಗಮಿಸುವ ರಥವನ್ನೂ ಅದರಲ್ಲಿ ಯೋಧನಾದ ಅರ್ಜುನನನ್ನೂ ಕಂಡು ಭಯದಿಂದ ನಿನ್ನವರು ಓಡಿದರು.

ವಿಪ್ರಹೀನ ರಥಾಶ್ವೇಭಾ ನೃಪೈಶ್ಚ ಪರಿವರ್ಜಿತಾಃ ॥೩೯॥

ಪಂಚವಿಂಶತಿಸಾಹಸ್ರಾಃ ಕಾಲಮಾರ್ಚ್ಛನ್ ಪದಾತಯಃ ।

ಇಪ್ಪತ್ತೈದು ಸಾವಿರ ಪದಾತಿಯೋಧರು ರಥ ಅಶ್ವ ಗಜಯೋಧರ ಮತ್ತು ರಾಜರ ರಕ್ಷಣೆಯಿಲ್ಲದೆ ಎಲ್ಲರೂ ಕಾಲವಶರಾದರು.

ಹತ್ವಾ ತತ್ಪುರುಷಾನೀಕಂ ಪಾಂಚಾಲಾನಾಂ ಮಹಾರಥಾಃ ॥೪೦॥

ಚೇಕಿತಾನಃ ಶಿಖಂಡೀ ಚ ದ್ರೌಪದೇಯಾಶ್ಚ ಮಾರಿಷ ।
ಹತ್ವಾ ತ್ವದೀಯಂ ಸುಮಹತ್ಸೈನ್ಯಂ ಶಂಖಾನಧ್ಮಾಪಮನ್ ॥೪೧॥

ರಾಜನೇ, ಚೇಕಿತಾನ, ಶಿಖಂಡಿ ಮತ್ತು ದ್ರೌಪದೀಪುತ್ರರು ನಿನ್ನ ಮಹಾಸೈನ್ಯವನ್ನು ಸಂಹರಿಸಿ ಶಂಖನಾದಗಳನ್ನು ಗೈದರು.

ತೇ ಸರ್ವೇ ತಾವಕಾನ್ ಪ್ರೇಕ್ಷ್ಯ ದ್ರವಮಾಣಾನ್ ಪರಾಙ್ಮುಖಾನ್ ।
ಅಭ್ಯದ್ರವನ್ ಜಿಘಾಂಸಂತೋ ವೃಷಾನ್ ಜಿತ್ವಾ ಯಥಾ ವೃಷಾಃ ॥೪೨॥

ಅವರೆಲ್ಲರೂ ನಿನ್ನವರು ಸೋತು ಬೆನ್ನು ತಿರುಗಿಸಿ ಓಡುವುದನ್ನು ಕಂಡು, ಕಾಳಗದಲ್ಲಿ ಗೂಳಿಯು, ಸೋತು ಓಡುವ ಗೂಳಿಯನ್ನು ಅಟ್ಟಿಸಿಕೊಂಡು ಹೋಗುವಂತೆ, ಅವರನ್ನು ಸಂಹರಿಸಲು ಅಟ್ಟಿಸಿಕೊಂಡು ಧಾವಿಸಿದರು.

ಸೇನಾವಶೇಷಂ ತಂ ದೃಷ್ಟ್ವಾ ತವ ಸೈನ್ಯಂ ಪರಾಙ್ಮುಖಮ್ ।
ವ್ಯವಸ್ಥಿತಃ ಸವ್ಯಸಾಚೀ ಚುಕ್ರೋಧ ಬಲವತ್ತದಾ ॥೪೩॥

ಅಳಿದುಳಿದ ಸೈನ್ಯವು ಪಲಾಯನ ಮಾಡುವುದನ್ನು ಕಂಡು ಯುದ್ಧಸನ್ನದ್ಧನಾಗಿ ನಿಂತಿದ್ದ ಅರ್ಜುನನು ಬಲವಾಗಿ ಕೋಪಗೊಂಡ.

ತವ ಸೇನಾಂ ಶರೈ ರಾಜನ್ ಸಹಸಾ ಸಮವಾರಯತ್ ।
ರಜಸಾ ಚೋದ್ಧತೇನಾಥ ನ ಸ್ಮ ಕಿಂಚಿದ್ ವ್ಯದೃಶ್ಯತ ॥೪೪॥

ರಾಜನೆ, ಅರ್ಜುನನು ನಿನ್ನ ಸೈನ್ಯವನ್ನು ಒಡನೆ ಬಾಣಗಳಿಂದ ಆಚ್ಛಾದಿಸಿದ. ಆಗ ಎದ್ದ ಧೂಳಿನಿಂದ ಏನೂ ಕಾಣದಾಯಿತು.

ಅಂಧಕಾರೀಕೃತೇ ಲೋಕೇ ಶರಭೂತೇ ಮಹೀತಳೇ ।
ದಿಶಃ ಸರ್ವಾ ಮಹಾರಾಜ ತಾವಕಾಃ ಪ್ರಾದ್ರವನ್ ಭಯಾತ್ ॥೪೫॥

ಲೋಕ ಅಂಧಕಾರಮಯವಾಯಿತು. ನೆಲ ಬಾಣಗಳಿಂದ ತುಂಬಿತು. ಮಹಾರಾಜ, ನಿನ್ನ ಸೈನಿಕರು ಭಯದಿಂದ ಎಲ್ಲ ದಿಕ್ಕುಗಳಿಗೆ ಓಡಿದರು.

ಭಜ್ಯಮಾನೇಷು ಸೈನ್ಯೇಷು ಕುರುರಾಜೋ ವಿಶಾಂಪತೇ ।
ಪರಾನಭಿಮುಖಾಂಶ್ಚೈವ ಸುತಸ್ತೇ ಸಮುಪಾದ್ರವತ್ ॥೪೬॥

ರಾಜನೆ, ನಿನ್ನ ಮಗ ದುರ್ಯೋಧನ, ಸೈನ್ಯಗಳು ನಾಶವಾಗುತ್ತಿದ್ದಾಗ ತನ್ನೆದುರಿಗೆ ಬಂದ ಶತ್ರುಗಳನ್ನು ಆಕ್ರಮಿಸಿದ.

ತತೋ ದುರ್ಯೋಧನಃ ಸರ್ವಾನಾಜುಹಾವಾಥ ಪಾಂಡವಾನ್ ।
ಯುದ್ಧಾಯ ಭರತಶ್ರೇಷ್ಠ ದೇವಾನಿವ ಪುರಾ ಬಲಿಃ ॥೪೭॥

ಆಗ, ರಾಜನೆ, ದುರ್ಯೋಧನನು ಹಿಂದೆ ಬಲಿಚಕ್ರವರ್ತಿ ದೇವತೆಗಳನ್ನು ಯುದ್ಧಕ್ಕೆ ಆಹ್ವಾನಿಸಿದಂತೆ ಎಲ್ಲ ಪಾಂಡವಸೈನಿಕರನ್ನೂ ಆಹ್ವಾನಿಸಿದ.

ತ ಏನಮಭಿವರ್ತಂತ ಭರ್ತ್ಸಯಂತೋ ಮುಹುರ್ಮುಹುಃ ।
ದುರ್ಯೋಧನೋಽಪ್ಯಸಂಭ್ರಾಂತಸ್ತಾನರೀನ್ ನಿಶಿತೈಃ ಶರೈಃ ।
ವ್ಯಧಮದ್ ಯುಧಿ ರಾಜೇಂದ್ರ ಘೋರರೂಪೋ ವಿಶಾಂಪತೇ ॥೪೮॥

ಪಾಂಡವರ ಸೈನಿಕರು ಆಗ ದುರ್ಯೋಧನನನ್ನು ಪುನಃ ಪುನಃ ಧಿಕ್ಕರಿಸುತ್ತ ಇದಿರಿಸಿದರು. ದುರ್ಯೋಧನನು ಏನೂ ದಿಗ್ಭ್ರಮೆಗೊಳ್ಳದೆ ಆ ಶತ್ರುಗಳನ್ನು ತೀಕ್ಷ್ಣವಾದ ಬಾಣಗಳಿಂದ ಘೋರರೂಪನಾಗಿ ಧ್ವಂಸ ಮಾಡಿದ.

ತತ್ರಾದ್ಭುತಮಪಶ್ಯಾಮ ತವ ಪುತ್ರಸ್ಯ ಪೌರುಷಮ್ ।
ಯದೇನಂ ಪಾಂಡವಾಃ ಸರ್ವೇ ನ ಶೇಕುರತಿವರ್ತಿತುಮ್ ॥೪೯॥

ಆಗ, ರಾಜನೆ, ನಿನ್ನ ಮಗನ ಪೌರುಷ ಅದ್ಭುತವಾಗಿದ್ದುದನ್ನು ನಾವು ಕಂಡೆವು. ಪಾಂಡವ ಸೈನಿಕರು ಯಾರೂ ಅವನನ್ನು ಅತಿಕ್ರಮಿಸಲು ಶಕ್ತರಾಗಲಿಲ್ಲ.

ನಾತಿದೂರಾಪಯಾತಂ ತು ಕೃತಬುದ್ಧಿಂ ಪಲಾಯನೇ ।
ದುರ್ಯೋಧನಃ ಸ್ವಕಂ ಸೈನ್ಯಮಪಶ್ಯಚ್ಛರವಿಕ್ಷತಮ್ ॥೫೦॥

ದುರ್ಯೋಧನನು ತನ್ನ ಸೈನ್ಯ ಬಾಣಗಳಿಂದ ಬಹಳ ಗಾಯಗೊಂಡು, ಪಲಾಯನ ಮಾಡಲು ನಿಶ್ಚಯಿಸಿ, ಇನ್ನೂ ಹೆಚ್ಚು ದೂರಕ್ಕೆ ಹೋಗಿಲ್ಲದಿದ್ದಾಗಲೆ ಅದನ್ನು ಕಂಡ.

ತತೋಽವಸ್ಥಾಪ್ಯ ರಾಜೇಂದ್ರ ಕೃತಬುದ್ಧಿಸ್ತವಾತ್ಮಜಃ ।
ಹರ್ಷಯನ್ನಿವ ತಾನ್ ಯೋಧಾನಿದಂ ವಚನಮಬ್ರವೀತ್ ॥೫೧॥

ರಾಜನೆ, ಬುದ್ಧಿವಂತನಾದ ನಿನ್ನ ಮಗನು ಆಗ ಆ ಸೈನ್ಯವನ್ನು ತಡೆದು ನಿಲ್ಲಿಸಿ ಯೋಧರನ್ನು ಉತ್ಸಾಹಗೊಳಿಸುವುದಕ್ಕಾಗಿ ನುಡಿದ.

ದುರ್ಯೋಧನಃ

ನ ತಂ ದೇಶಂ ಪ್ರಪಶ್ಯಾಮಿ ಪೃಥಿವ್ಯಾಂ ಪರ್ವತೇಷು ಚ ।
ಯತ್ರ ಯಾತಾನ್ನ ವೋ ಹನ್ಯುಃ ಪಾಂಡವಾಃ ಕಿಂ ಗತೇನ ವಃ ॥೫೨॥

ದುರ್ಯೋಧನ ನುಡಿದ— ಯೋಧರೆ, ನೀವು ಎಲ್ಲಿಗೆ ಓಡಿ ಹೋದರೆ ಪಾಂಡವರು ನಿಮ್ಮನ್ನು ಕೊಲ್ಲದೆ ಬಿಡುವರೊ ಅಂಥ ಪ್ರದೇಶವನ್ನು ನೆಲದಲ್ಲಾಗಲಿ, ಪರ್ವತಗಳಲ್ಲಾಗಲಿ ನಾ ಕಾಣೆ. ಅದರಿಂದ ನೀವು ಓಡಿ ಹೋಗುವುದರಿಂದ ಏನು ಪ್ರಯೋಜನ?

ಅಲ್ಪಂ ಚ ಬಲಮೇತೇಷಾಂ ಕೃಷ್ಣೌ ಚ ಭೃಶವಿಕ್ಷತೌ ।
ಯದಿ ಸರ್ವೇಽತ್ರ ತಿಷ್ಠಾಮೋ ಧ್ರುವೋ ನೋ ವಿಜಯೋ
ಭವೇತ್ ॥೫೩॥

ಪಾಂಡವರ ಸೈನ್ಯ ಅಲ್ಪ. ಕೃಷ್ಣಾರ್ಜುನರೂ ಬಹಳ ಗಾಯಗೊಂಡಿದ್ದಾರೆ. ನಾವು ಎಲ್ಲರೂ ಒಂದಾಗಿ ನಿಂತರೆ ನಮಗೆ ನಿಶ್ಚಯವಾಗಿ ಜಯವೇ ಉಂಟಾಗುವುದು.

ವಿಪ್ರಯಾತಾಂಶ್ಚ ನೋ ಭಿನ್ನಾನ್ ಪಾಂಡವಾಃ ಕೃತಕಿಲ್ಬಿಷಾನ್ ।
ಅನುಸೃತ್ಯ ವಧಿಷ್ಯಂತಿ ಶ್ರೇಯಾನ್ನಃ ಸಮರೇ ವಧಃ ॥೫೪॥

ನಾವು ಚದುರಿ ಓಡಲು ತೊಡಗಿದರೆ ಅಪರಾಧಿಗಳಾದ ನಮ್ಮನ್ನು ಪಾಂಡವ ಸೈನಿಕರು ಬೆನ್ನಟ್ಟಿ ಬಂದು ವಧಿಸುತ್ತಾರೆ. ಅದಕ್ಕಿಂತ ನಾವು ರಣದಲ್ಲಿ ಸಾಯುವುದೇ ಲೇಸು.

ಸುಖಿಃ ಸಾಂಗ್ರಾಮಿಕೋ ಮೃತ್ಯುಃ ಕ್ಷತ್ರಧರ್ಮೇಣ ಯುಧ್ಯತಾಮ್ ।
ಮೃತೋ ದುಃಖಿಂ ನ ಜಾನೀತೇ ಪ್ರೇತ್ಯ ಚಾನಂತ್ಯಮಶ್ನುತೇ ॥೫೫॥

ಕ್ಷಾತ್ರಧರ್ಮದಿಂದ ಹೋರಾಡುವವರಿಗೆ ರಣದಲ್ಲಿ ಮಡಿದರೆ ಸುಖ. ಮಡಿದವನು ದುಃಖವನ್ನು ಕಾಣಲಾರ. ಪರಲೋಕಕ್ಕೆ ಹೋಗಿ ಅವನು ಅಕ್ಷಯ ಸುಖವನ್ನೇ ಉಣ್ಣುತ್ತಾನೆ.

ಶೃಣುಧ್ವಂ ಕ್ಷತ್ರಿಯಾಃ ಸರ್ವೇ ಯಾವಂತಃ ಸ್ಥ ಸಮಾಗತಾಃ ।
ಯದಾ ಶೂರಂ ಚ ಭೀರುಂ ಚ ಮಾರಯತ್ಯಂತಕೋ ಯಮಃ ॥೫೬॥

ಕೋ ನು ಮೂಢೋ ನ ಯುಧ್ಯೇತ ಮಾದೃಶಃ ಕ್ಷತ್ರಿಯವ್ರತಃ ।
ದ್ವಿಷತೋ ಭೀಮಸೇನಸ್ಯ ಕ್ರುದ್ಧಸ್ಯ ವಶಮೇಷ್ಯಥ ॥೫೭॥

ಪಿತಾಮಹೈರಾಚರಿತಂ ನ ಧರ್ಮಂ ಹಾತುಮರ್ಹಥ ।
ನ ಹ್ಯಧರ್ಮೋಽಸ್ತಿ ಪಾಪೀಯಾನ್ ಕ್ಷತ್ರಿಯಸ್ಯ ಪಲಾಯನಾತ್ ॥೫೮॥

ಇಲ್ಲಿಗೆ ಬಂದಿರುವ ಎಲ್ಲ ಕ್ಷತ್ರಿಯರೂ ಕೇಳಿ. ಶೂರನನ್ನೂ ಹೇಡಿಯನ್ನೂ ಇಬ್ಬರನ್ನೂ ಅಂತಕನಾದ ಯಮ ಕೊಲ್ಲುತ್ತಾನೆ ಎಂದಮೇಲೆ ಕ್ಷತ್ರಿಯರ ಯುದ್ಧದಲ್ಲಿ ಅಪಲಾಯನದ ವ್ರತನಿಷ್ಠನಾದವನು ನನ್ನಂಥವನು ಯಾವನು ತಾನೆ ಮೂರ್ಖತನ ದಿಂದ ಯುದ್ಧವನ್ನು ಬಿಡುತ್ತಾನೆ? ಕುಪಿತನಾದ ಶತ್ರು ಭೀಮಸೇನನ ವಶಕ್ಕೆ ಹೋಗು ವಿರೇನು? ನಮ್ಮ ತಾತಂದಿರು ನಡೆಸಿಕೊಂಡು ಬಂದ ಧರ್ಮವನ್ನು ತೊರೆಯ ಬೇಡಿರಿ. ಪಲಾಯನಕ್ಕಿಂತ ಹೆಚ್ಚಿನದಾದ ಪಾಪಕರ ಅಧರ್ಮ ಕ್ಷತ್ರಿಯನಿಗೆ ಇಲ್ಲ.

ಯುದ್ಧಧರ್ಮಾನ್ನ ಚ ಶ್ರೇಯಾನ್ ಪಂಥಾಃ ಸ್ವರ್ಗಸ್ಯ ವಿದ್ಯತೇ ।
ಅಚಿರೇಣ ಹತಾ ಲೋಕಂ ಸರ್ವೇ ಯೋಧಾಃ ಸಮಾಪ್ನುತ ॥೫೯॥

ಯುದ್ಧಧರ್ಮಕ್ಕಿಂತ ಹೆಚ್ಚು ಶ್ರೇಯಸ್ಕರವಾದ ಮಾರ್ಗ ಸ್ವರ್ಗಕ್ಕೆ ಇನ್ನೊಂದಿಲ್ಲ. ನೀವೆಲ್ಲ ಯೋಧರು ಬೇಗನೆ ಹತರಾಗಿ ಸ್ವರ್ಗವನ್ನು ಪಡೆಯಿರಿ.

ಸಂಜಯಃ

ಏವಂ ಬ್ರುವತಿ ತೇ ಪುತ್ರೇ ಸೈನಿಕಾಃ ಭೃಶವಿಕ್ಷತಾಃ ।
ಅನಾದೃತ್ಯೈವ ತದ್ವಾಕ್ಯಂ ಪ್ರಾದ್ರವನ್ ಸರ್ವತೋ ದಿಶಃ ॥೬೦॥

ಸಂಜಯ ನುಡಿದ— ನಿನ್ನ ಮಗ ಹೀಗೆ ಹೇಳುತ್ತಿದ್ದರೂ ಬಹಳ ಗಾಯಗೊಂಡಿದ್ದ ಸೈನಿಕರು ಅವನ ಮಾತನ್ನು ಕೇಳದೆ ಎಲ್ಲ ದಿಕ್ಕುಗಳಿಗೆ ಪಲಾಯನವನ್ನೇ ಮಾಡಿದರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಕರ್ಣಪರ್ವಣಿ ಕುರುಸೈನ್ಯಪಲಾಯನಂ ನಾಮ ನವತಿತಮೋಽಧ್ಯಾಯಃ ॥೯೦॥

❖

ತೊಂಬತ್ತೊಂದನೆಯ ಅಧ್ಯಾಯ

ಶಲ್ಯನ ಸಲಹೆಯಂತೆ ದುರ್ಯೋಧನ ತನ್ನ ಸೈನ್ಯವನ್ನು ಶಿಬಿರಕ್ಕೆ ಹಿಂತಿರುಗಿಸಿದ.

ಸಂಜಯಃ

ದೃಷ್ಟ್ವಾ ತು ಸೈನ್ಯಂ ವಿನಿವರ್ತ್ಯಮಾನಂ
ಪುತ್ರೇಣ ತೇ ಮದ್ರಪತಿಸ್ತದಾನೀಮ್ ।
ಸಂತ್ರಸ್ತರೂಪಃ ಪರಿಮೂಢಚೇತಾ
ದುರ್ಯೋಧನಂ ವಾಕ್ಯಮಿದಂ ಬಭಾಷೇ ॥೧॥

ಸಂಜಯ ನುಡಿದ— ನಿನ್ನ ಮಗನು ಪಲಾಯನ ಮಾಡುತ್ತಿದ್ದ ಸೈನ್ಯವನ್ನು ಹಿಂತಿರುಗಿಸಲು ಯತ್ನಿಸುವುದನ್ನು ಭಯಗೊಂಡು ಮಂಕಾಗಿದ್ದ ಶಲ್ಯನು ನೋಡಿ ಅವನಿಗೆ ಹೀಗೆ ಹೇಳಿದ—

ಪಶ್ಯೈದಮುಗ್ರಂ ನರವಾಜಿನಾಗೈ-
ರಾಯೋಧನಂ ವೀರಹತೈಃ ಸುಪೂರ್ಣಮ್ ॥೨॥

ನೋಡು, ವೀರರಿಂದ ಹತವಾದ ಪದಾತಿ ಅಶ್ವ ಗಜಗಳಿಂದ ತುಂಬಿ ಉಗ್ರವಾಗಿರುವ ಈ ರಣಭೂಮಿಯನ್ನು ನೋಡು.

ಮಹೀಧರಾಭೈಃ ಪತಿತೈರ್ಮಹಾಗಜೈ
ರ್ಮಹೀಂ ಪ್ರಪನ್ನೈಃ ಶರವಿದ್ಧಮರ್ಮಭಿಃ ।
ತೈರ್ವಿಹ್ವಲದ್ಭಿಶ್ಚ ಗತಾಸುಭಿಶ್ಚ
ಪ್ರಧ್ವಸ್ತಚಿತ್ರಾಯುಧವರ್ಮಯೋಧೈಃ ॥೩॥

ಬಿದ್ದಿರುವ ಈ ಮಹಾಗಜಗಳು ಬೆಟ್ಟದಾಕಾರದವು. ಭೂಮಿಯಲ್ಲಿ ಒರಗಿವೆ. ಬಾಣಗಳಿಂದ ಮರ್ಮಸ್ಥಾನಗಳಲ್ಲಿ ಏಟು ಬಿದ್ದಿದೆ. ಕೆಲವು ಗಜಗಳು ಇನ್ನೂ ನರಳುತ್ತಿವೆ. ಕೆಲವು ಸತ್ತಿವೆ. ಅವುಗಳ ಆರೋಹಿಗಳಾದ ಯೋಧರು ಕೂಡ ಸುಂದರವಾದ ಆಯುಧ, ಕವಚಗಳನ್ನು ಕಳೆದುಕೊಂಡು ಬಿದ್ದಿದ್ದಾರೆ.

ವಜ್ರಾಪವಿದ್ಧೈರಿವ ಚಾಚಲೇಂದ್ರೈ
ರ್ವಿಭಿನ್ನಪಾಷಾಣಮೃಗದ್ರುಮೌಷಧೈಃ ।
ಪ್ರವಿದ್ಧಘಂಟಾಂಕುಶತೋಮರಧ್ವಜೈಃ
ಸಹೇಮಮಾಲೈ ರುಧಿರೌಘಸಂಪ್ಲುತೈಃ ॥೪॥

ಈ ಆನೆಗಳ ಗಂಟೆ ಅಂಕುಶ ತೋಮರ ಧ್ವಜಗಳೆಲ್ಲವೂ ಬಂಗಾರದ ಮಾಲೆಗಳೂ ಚೂರುಚೂರಾಗಿವೆ. ಮೈಯು ರಕ್ತಪ್ರವಾಹದಿಂದ ತೊಯ್ದಿದೆ. ವಜ್ರಾಯುಧದಿಂದ ಚೂರುಚೂರಾದ ಬಂಡೆಗಲ್ಲು ಮೃಗ ವೃಕ್ಷ ಓಷಧಿಗಳಿಂದ ಕೂಡಿದ ಬೆಟ್ಟಗಳಂತೆ ಈ ಗಜಗಳು ಕಾಣುತ್ತಿವೆ.

ಶರಾವಭಿನ್ನೈಃ ಪತಿತೈಶ್ಚ ವಾಜಿಭಿಃ
ಶ್ವಸದ್ಭಿರನ್ಯೈಃ ಕ್ಷತಜಂ ವಮದ್ಭಿಃ ।
ದೀನೈಃ ಸ್ತನದ್ಭಿಃ ಪರಿವೃತ್ತನೇತ್ರೈಃ
ಮಹೀಂ ದಶದ್ಭಿಃ ಕೃಪಣಂ ನದದ್ಭಿಃ ॥೫॥

ಬಾಣಗಳ ಏಟಿನಿಂದ ಬಿದ್ದ ಅಶ್ವಗಳು ಊರ್ಧ್ವಶ್ವಾಸ ಎಳೆಯುತ್ತ ನೆತ್ತರನ್ನು

ಕಾರುತ್ತ ದೀನವಾಗಿ ಕೆನೆಯುತ್ತ ಕಣ್ಣುಗಳನ್ನು ತಿರುಗಿಸುತ್ತ ನೆಲಕಚ್ಚಿ ಕರುಣಾ ಜನಕವಾಗಿ ನರಳುತ್ತಿವೆ.

ತಥಾಪವಿದ್ಧೈರ್ಗಜವಾಜಿಯೋಧೈ-
ರ್ಮಂದಾಸುಭಿಶ್ಚೈವ ಗತಾಸುಭಿಶ್ಚ ।
ನರಾಶ್ವನಾಗೈಶ್ಚ ರಥೈಶ್ಚ ಮರ್ದಿತೈ-
ರ್ಮಹೀ ಮಹಾವೈತರಣೀವ ದುರ್ದೃಶಾ ॥೬॥

ಈ ಗಜ ಅಶ್ವ ಪದಾತಿಗಳು ಬಾಣಗಳಿಂದ ಗಾಯಗೊಂಡು ಮಂದವಾಗಿ ಉಸಿರೆಳೆಯುತ್ತಿವೆ ಅಥವಾ ಸತ್ತಿರುತ್ತವೆ. ಪದಾತಿ ಅಶ್ವ ಗಜ ರಥಯೋಧರು ಸತ್ತುಬಿದ್ದಿರುವುದರಿಂದ ಈ ರಣಭೂಮಿ ಮಹಾವೈತರಣಿಯಂತೆ ನೋಡಲು ಅಸಾಧ್ಯವೆನಿಸಿದೆ.

ಗಜೈರ್ನಿಕೃತ್ತಾಯತಹಸ್ತಗಾತ್ರೈ-
ರುದ್ವೇಪಮಾನೈಃ ಪತಿತೈಃ ಪೃಥಿವ್ಯಾಮ್ ॥೭॥

ಈ ಗಜಗಳ ನಿಡಿದಾದ ಸೊಂಡಿಲು ಮುಂತಾದ ಅವಯವಗಳು ಬಾಣಗಳಿಂದ ಕತ್ತರಿಸಿ ಬಿದ್ದಿವೆ. ಅವು ನೆಲದಲ್ಲಿ ಬಿದ್ದು ನಡುಗುತ್ತಿವೆ.

ವಿಶೀರ್ಣದಂತೈಃ ಕ್ಷತಜಂ ವಮದ್ಭಿಃ
ಸ್ಖಲದ್ಭಿರಾರ್ತೈಃ ಕರುಣಂ ರಣಾಜಿರೇ ।
ಸುವರ್ಣವರ್ಮಾಯುಧಪಾದಗೋಪ್ತೃಭಿಃ
ಪ್ರಕೀರ್ಣತೂಣೀರಪತಾಕಕೇತುಭಿಃ ॥೮॥

ದಂತಗಳು ತುಂಡಾಗಿವೆ. ವೇದನೆಯನ್ನು ತಾಳಲಾರದೆ ನೆತ್ತರನ್ನು ಕಾರುತ್ತ ನಡುಗುತ್ತ ಸಂಕಟದಲ್ಲಿ ಬಿದ್ದಿವೆ. ರಕ್ಷಕಯೋಧರ ಸುವರ್ಣಕವಚ ಆಯುಧ ಪಾದಗಳು ಕಡಿದುಬಿದ್ದಿವೆ. ಅವರ ಬತ್ತಳಿಕೆಗಳು ಪತಾಕೆ ಧ್ವಜಗಳು ಚೂರುಚೂರಾಗಿ ಹರಡಿವೆ.

ಸುವರ್ಣಜಾಲಾವತತೈರ್ಭ್ರಶಾಹತೈ-
ರ್ಮಹೀ ಬಭೌ ದ್ಯೌರ್ಜಲದೈರಿವಾವೃತಾ ॥೯॥

ಬಂಗಾರದ ಮಾಲೆಗಳಿಂದ ಅಲಂಕೃತವಾದ ಮಹಾ ಗಜಗಳು ಬಹಳ ಹತವಾಗಿ ಭೂಮಿಯಲ್ಲಿ ಬಿದ್ದಿದ್ದರಿಂದ ಭೂಮಿಯು ಮೋಡಮುಸುಕಿದ ಆಕಾಶದಂತೆ ಕಾಣುತ್ತಿದೆ.

ಯಶಸ್ವಿಭಿರ್ನಾಗರಥಾಶ್ವಯೋಧಿಭಿಃ
ಪದಾತಿಭಿಶ್ಚಾಭಿಮುಖೈರ್ಹತೈಃ ಪರೈಃ।
ವಿಕೀರ್ಣವರ್ಮಾಭರಣಾಂಬರಾಯುಧೈ-
ರ್ವೃತಾ ಸ್ಮಶಾನೈರಿವ ಪಾವಕೈರ್ಮಹೀ ॥೧೦॥

ಯಶಸ್ವಿಯಾಗಿ ಯುದ್ಧ ನಡೆಸಿದ ಗಜ ರಥ ಅಶ್ವಯೋಧರೂ ಪದಾತಿಗಳೂ ಎದುರಾಗಿ ಬಂದ ಶತ್ರುಗಳಿಂದ ಹತರಾಗಿ ಬಿದ್ದಿದ್ದರಿಂದ, ಅವರ ಕವಚ ಆಭರಣ ವಸ್ತ್ರ ಆಯುಧಗಳು ಎಲ್ಲೆಡೆ ಚೆಲ್ಲಿವೆ. ಅದರಿಂದ ರಣಭೂಮಿಯು ಎಲ್ಲೆಡೆ ಅಗ್ನಿಗಳಿಂದ ಬೆಳಗುವ ಸ್ಮಶಾನಗಳಿಂದಲೇ ತುಂಬಿದಂತೆ ಕಂಡುಬರುತ್ತಿದೆ.

ಶರಪ್ರಹಾರಾಭಿಹತೈರ್ಮಹಾರಥೈ-
ರವೇಕ್ಷಮಾಣೈಃ ಪತಿತೈಃ ಸಹಸ್ರಶಃ।
ಪ್ರನಷ್ಟಸಂಜ್ಞೈಃ ಪುನರುಚ್ಛ್ವಸದ್ಭಿ-
ರ್ಮಹೀ ಬಭೂವಾಗ್ನಿಪರೀತಗಾತ್ರಾ ।
ದಿವಶ್ಚ್ಯುತೈರ್ಭೂರತಿದೀಪ್ತಿಮದ್ಭಿಃ
ನಕ್ತಂ ಗ್ರಹೈರ್ದ್ಯೌರಮಲೇವ ದೀಪ್ತೈಃ ॥೧೧॥

ಬಾಣಪ್ರಹಾರದಿಂದ ಹತರಾದ ಮಹಾರಥರು ಸಾವಿರಾರು ಸಂಖ್ಯೆಯಲ್ಲಿ ನೆಲದಲ್ಲಿ ಒರಗಿದ್ದಾರೆ. ಎಚ್ಚರತಪ್ಪಿ ಊರ್ಧ್ವಶ್ವಾಸವನ್ನು ಎಳೆಯುತ್ತಿದ್ದಾರೆ. ಆದರೂ ಕಣ್ಣು ತೆರೆದು ನೋಡುತ್ತಿರುವಂತೆ ಕಾಣುತ್ತಾರೆ. ಅತ್ಯಂತ ದೀಪ್ತಿಯಿಂದ ಬೆಳಗುತ್ತ ಸ್ವರ್ಗದಿಂದ ಚ್ಯುತರಾಗಿ ಕೆಳಗೆ ಬಿದ್ದಂತೆ ಕಾಣುತ್ತಾರೆ. ಅದರಿಂದ ರಣಭೂಮಿಯು ಅಗ್ನಿಗಳಿಂದ ಎಲ್ಲೆಡೆ ಅಲಂಕೃತವಾದಂತೆ ಇದ್ದು ಅದು ರಾತ್ರಿಯಲ್ಲಿ ಬೆಳಗುವ ಗ್ರಹಗಳಿಂದ ಅಲಂಕೃತವಾದ ನಿರ್ಮಲವಾದ ಆಕಾಶದಂತೇ ಕಾಣುತ್ತದೆ.

ಶರಾಸ್ತು ಕರ್ಣಾರ್ಜುನಬಾಹುಮುಕ್ತಾ
ವಿದಾರ್ಯ ನಾಗಾಶ್ವಮನುಷ್ಯದೇಹಾನ್ ।
ಪ್ರಾಣಾನ್ನಿರಸ್ಯಾಶು ಮಹೀಮತೀಯು-
ರ್ಮಹೋರಗಾ ವಾಸಮಿವಾಭಿತೋಽಸ್ತ್ರೈಃ ॥೧೨॥

ಅಸ್ತ್ರಗಳಿಂದ ಕರ್ಣ–ಅರ್ಜುನರ ಬಾಹುಗಳಿಂದ ಹೊರಟ ಬಾಣಗಳು ಗಜ ಅಶ್ವ ಮನುಷ್ಯರ ದೇಹಗಳನ್ನು ಸೀಳಿ, ಪ್ರಾಣಗಳನ್ನು ಹೊರಗೆ ಹಾಕಿ, ವೇಗವಾಗಿ ಭೂಮಿಯನ್ನು ದೊಡ್ಡ ಹಾವುಗಳು ಬಿಲಗಳನ್ನು ಪ್ರವೇಶಿಸುವಂತೆ ಪ್ರವೇಶಿಸಿದುವು.

ಹತೈರ್ಮನುಷ್ಯಾಶ್ವಗಜೈಶ್ಚ ಸಂಖ್ಯೇ
ಶರಾವಭಿನ್ನೈಶ್ಚ ರಥೈರ್ಬಭೂವ ।
ಧನಂಜಯಸ್ಯಾಧಿರಥೇಶ್ಚ ಮಾರ್ಗೇ
ಅಗಮ್ಯರೂಪಾ ವಸುಧಾ ಬಭೂವ ॥೧೩॥

ರಣದಲ್ಲಿ ಹತರಾದ ಮನುಷ್ಯರು ಮತ್ತು ಅಶ್ವ ಗಜಗಳಿಂದ, ಹಾಗೂ ಬಾಣಗಳಿಂದ ಪುಡಿಯಾದ ರಥಗಳಿಂದ, ಅರ್ಜುನನ ಮತ್ತು ಕರ್ಣನ ಮಾರ್ಗಗಳಲ್ಲಿ ರಣಭೂಮಿ ಅಗಮ್ಯಸ್ವರೂಪವಾಯಿತು.

ರಥೈರ್ವರೇಷೂನ್ಮಥಿತೈಶ್ಚ ಯೋಧೈಃ
ಸಂಸ್ಯೂತಸೂತಾಶ್ವವರಾಯುಧಧ್ವಜೈಃ ।
ವಿಶೀರ್ಣಯೋಕ್ತ್ರೈರ್ವಿನಿಕೃತ್ತಬಂಧುರೈ-
ರ್ನಿಕೃತ್ತಚಕ್ರಾಕ್ಷಯುಗತ್ರಿವೇಣುಭಿಃ ॥೧೪॥

ವಿಮುಕ್ತಯಂತ್ರೈರ್ನಿಹತೈರಯಸ್ಮಯೈ-
ರ್ಹತಾನುಷಂಗೈರ್ವಿನಿಷಂಗಬಂಧುರೈಃ ।
ಪ್ರಭಗ್ನನೀಡೈರ್ಮಣಿಹೇಮಮಂಡಿತೈಃ
ಸ್ಥಿತಾ ಮಹೀ ದ್ಯೌರಿವ ಶಾರದೈರ್ಘನೈಃ ॥೧೫॥

ಉತ್ತಮ ಬಾಣಗಳಿಂದ ಪುಡಿಯಾದ ರಥಗಳು, ಹತರಾದ ಯೋಧರು, ಸಾರಥಿ ಅಶ್ವ ಉತ್ತಮ ಆಯುಧ ಧ್ವಜಗಳು ಯೋಕ್ತ್ರ ಬಂಧುರ ಚಕ್ರ ಅಕ್ಷ ಯುಗ

ತ್ರಿವೇಣು ಯಂತ್ರ ಅನುಷಂಗ ವಿನಿಷಂಗ ನೀಡ ಮಣಿ ಬಂಗಾರಗಳ ಆಭರಣಗಳು ಎಲ್ಲವೂ ಬಾಣಗಳಿಂದ ಪುಡಿಯಾಗಿ ನೆಲದ ಮೇಲೆ ಹರಡಿದ್ದು ರಣಭೂಮಿಯು ಶರತ್ಕಾಲದ ಮೋಡಗಳಿಂದ ತುಂಬಿದ ಆಂತರಿಕ್ಷದಂತೆ ಕಂಗೊಳಿಸಿತು.

ವಿಕೃಷ್ಟಮಾಣೈರ್ಜವನೈರಲಂಕೃತೈ-
ರ್ಹತೇಶ್ವರೈರಾಜಿರಥೈಃ ಸುಕಲ್ಪಿತೈಃ ।
ಮನುಷ್ಯಮಾತಂಗರಥಾಶ್ವರಾಶಿಭಿ-
ರ್ದ್ರುತಂ ವ್ರಜಂತೋ ಬಹುಧಾ ವಿಚೂರ್ಣಿತಾಃ ॥೧೬॥

ಸಾಮಗ್ರಿಗಳಿಂದ ಸಜ್ಜಾಗಿ ಅಲಂಕೃತವಾದ ರಥಗಳಲ್ಲಿ ರಥಿಕಯೋಧರು ಹತರಾದ್ದರಿಂದ ಕುದುರೆಗಳು ಆ ರಥಗಳನ್ನು ಎಳೆಯುವಾಗ ಪಲಾಯನ ಮಾಡುತ್ತಿದ್ದ ಯೋಧರು ರಥಚಕ್ರಗಳಿಗೆ ಸಿಲುಕಿ ಚೂರ್ಣಿತರಾದರು. ಮತ್ತು ಮನುಷ್ಯ ಗಜ ರಥ ಅಶ್ವಸಮೂಹಗಳ ಮಧ್ಯದಲ್ಲಿ ಸಿಲುಕಿ ಆಪಘಾತದಿಂದಲೂ ಚೂರ್ಣಿತರಾದರು.

ಸಹೇಮಪಟ್ಟಾಃ ಪರಿಘಾಃ ಪರಶ್ವಧಾಃ
ಶಿತಾಶ್ಚ ಶೂಲಾ ಮುಸಲಾನಿ ಪಟ್ಟಿಶಾಃ ।
ಪೇತುಶ್ಚ ಖಡ್ಗಾ ವಿಮಲಾ ವಿಕೋಶಾ
ಗದಾಶ್ಚ ಜಾಂಬೂನದಪಟ್ಟಬದ್ಧಾಃ ॥೧೭॥

ಬಂಗಾರದ ಪಟ್ಟಿಯಿಂದ ಅಲಂಕೃತವಾದ ಪರಿಘ, ಪರಶು, ತೀಕ್ಷ್ಣವಾದ ಶೂಲ, ಮುಸಲ, ಪಟ್ಟಿಶ, ಒರೆಯಿಂದ ತೆಗೆದ ನಿರ್ಮಲವಾದ ಖಡ್ಗ ಬಂಗಾರದ ಪಟ್ಟಿಯಿಂದ ಖಚಿತವಾದ ಗದೆಗಳು.

ಚಾಪಾನಿ ಜಾಂಬೂನದಭೂಷಣಾನಿ
ಶರಾಶ್ಚ ಕಾರ್ತಸ್ವರಚಿತ್ರಪುಂಖಾಃ ।
ಋಷ್ಟ್ಯಶ್ಚ ಪೀತಾ ವಿಮಲಾ ವಿಕೋಶಾಃ
ಪ್ರಾಸಾಃ ಸದಂಡಾಃ ಕನಕಾವಭಾಸಾಃ ॥೧೮॥

ಚಿನ್ನದಿಂದ ಅಲಂಕೃತವಾದ ಬಿಲ್ಲುಗಳು, ಚಿನ್ನದ ಸುಂದರ ಪುಕ್ಕವುಳ್ಳ ಬಾಣಗಳು,

ಹಳದಿ ಬಣ್ಣದ ನಿರ್ಮಲವಾದ ಕೋಶದಿಂದ ಹೊರಗೆ ತೆಗೆದ ಋಷ್ಟಿಗಳು, ಪ್ರಾಸಗಳು, ಬಂಗಾರದ ಹೊಳೆವ ದಂಡಗಳು,

ಛತ್ರಾಣಿ ವಾಲವ್ಯಜನಾನಿ ಶಂಖಾಃ
ಸ್ರಜಶ್ಚ ಪುಷ್ಪೋತ್ತಮಹೇಮಚಿತ್ರಾಃ ।
ಕುಥಾಃ ಪತಾಕಾಂಬರಭೂಷಣಾನಿ
ಕಿರೀಟಮಾಲಾ ಮುಕುಟಾಶ್ಚ ಶುಭ್ರಾಃ ॥೧೯॥

ಛತ್ರಗಳು ಬಾಲವ್ಯಜನಗಳು ಶಂಖಗಳು, ಪುಷ್ಪ ಮತ್ತು ಉತ್ತಮ ಚಿನ್ನಗಳಿಂದ ಸುಂದರವಾದ ಮಾಲೆಗಳು ಆನೆಗಳ ಮೇಲಿನ ರತ್ನಗಂಬಳಿಗಳು, ಪತಾಕೆಗಳು ವಸ್ತ್ರ ಆಲಂಕಾರಗಳು ಕಿರೀಟ ಮಾಲೆಗಳು ಮತ್ತು ಶುಭ್ರವಾದ ಕಿರೀಟಗಳು.

ಪ್ರಕೀರ್ಣಕಾ ವಿಪ್ರಕೀರ್ಣಾಶ್ಚ ರಾಜನ್
ಪ್ರವಾಲಮುಕ್ತಾತರಲಾಶ್ಚ ಹಾರಾಃ ।
ಆಪೀಡಕೇಯೂರವರಾಂಗದಾನಿ
ಗ್ರೈವೇಯನಿಷ್ಕಾಃ ಸಸುವರ್ಣಸೂತ್ರಾಃ ॥೨೦॥

ಅಲ್ಲಲ್ಲಿ ಬಿದ್ದಿರುವ ಚಾಮರಗಳು ಹವಳ ಮುತ್ತುಗಳಿಂದ ಹೊಳೆವ ಹಾರಗಳು ಶಿರಸ್ತ್ರಾಣ ಕೇಯೂರ ಉತ್ತಮವಾದ ಅಂಗದ ಹಾರ ಪದಕ ಚಿನ್ನದ ಸರಪಣಿ.

ಮಣ್ಯುತ್ತಮಾ ವಜ್ರಸುವರ್ಣಮುಕ್ತಾ
ರತ್ನಾನಿ ಚೋಚ್ಚಾವಚಮಂಗಲಾನಿ ।
ಗಾತ್ರಾಣಿ ಚಾತ್ಯಂತಸುಖೋಚಿತಾನಿ
ಶಿರಾಂಸಿ ಚೇಂದುಪ್ರತಿಮಾನನಾನಿ ॥೨೧॥

ಉತ್ತಮವಾದ ಮಣಿ ವಜ್ರ ಸುವರ್ಣ ಮುತ್ತುಗಳು ಮಂಗಳಕರವಾದ ಸಣ್ಣ ದೊಡ್ಡ ರತ್ನಗಳು ಅತ್ಯಂತ ಸುಖಭೋಗಯೋಗ್ಯವಾದ ಶರೀರಾವಯವಗಳು, ಚಂದ್ರನಂಥ ಮುಖದಿಂದ ಕೂಡಿದ ಶಿರಸ್ಸುಗಳು ರಣಾಂಗಣದಲ್ಲಿ ಹರಡಿವೆ.

ದೇಹಾಂಶ್ಚ ಭೋಗಾಂಶ್ಚ ಪರಿಚ್ಛದಾಂಶ್ಚ
ತ್ಯಕ್ತ್ವಾ ಮನೋಜ್ಞಾನಿ ಸುಖಾನಿ ಚಾಪಿ ।

ಸ್ವಧರ್ಮನಿಷ್ಠಾಂ ಮಹತೀಮವಾಪ್ಯ
ಪ್ರಾಪ್ತವ್ಯಲೋಕಾನ್ ಯಶಸಾ ಸಮೀಯುಃ ॥೨೨॥

ಸೈನಿಕರು ದೇಹ ಭೋಗಪದಾರ್ಥ ಉಪಕರಣ, ಮನೋಜ್ಞವಾದ ಸುಖಾನುಭವಗಳೆಲ್ಲವನ್ನೂ ಬಿಟ್ಟು ಶ್ರೇಷ್ಠವಾದ ಸ್ವಧರ್ಮನಿಷ್ಠೆಯನ್ನು ಹೊಂದಿ, ಕೀರ್ತಿಯಿಂದ ಹೊಂದಬೇಕಾಗಿರುವ ಪುಣ್ಯಲೋಕಗಳನ್ನು ಹೋಗಿ ಸೇರಿದರು.

ನಿವರ್ತ ದುರ್ಯೋಧನ ಯಾಂತು ಸೈನಿಕಾ
ವ್ರಜಸ್ವ ರಾಜನ್ ಶಿಬಿರಾಯ ಮಾನದ ।
ದಿವಾಕರೋ ಹ್ಯೇಷ ವಿಲಂಬತೇ ಪ್ರಭೋ
ಪುನಸ್ತ್ವಮೇವಾತ್ರ ನರೇಂದ್ರ ಕಾರಣಮ್ ॥೨೩॥

'ದುರ್ಯೋಧನ, ಯುದ್ಧ ಸಾಕು, ಸೈನಿಕರು ಹಿಂದಿರುಗಲಿ. ನೀನು ಶಿಬಿರಕ್ಕೆ ಹೋಗು. ಸೂರ್ಯ ಮುಳುಗುತ್ತಿದ್ದಾನೆ. ಕರ್ಣನ ಸಾವಿಗೆ ನೀನೇ ಕಾರಣ' ಎಂದು ಶಲ್ಯನು ನುಡಿದ.

ಇತ್ಯೇವಮುಕ್ತ್ವಾ ವಿರರಾಮ ಶಲ್ಯೋ
ದುರ್ಯೋಧನಃ ಶೋಕಪರೀತಚೇತಾಃ ।
ಹಾ ಕರ್ಣ ಹಾ ಕರ್ಣ ಇತಿ ಬ್ರುವಾಣ
ಆರ್ತೋ ವಿಸಂಜ್ಞೋ ಭೃಶಮಶ್ರುನೇತ್ರಃ ॥೨೪॥

ಹೀಗೆ ಹೇಳಿ ಶಲ್ಯ ಸುಮ್ಮನಾದ. ದುರ್ಯೋಧನ ಶೋಕಾವಿಷ್ಟಚಿತ್ತನಾಗಿ ಹಾ ಕರ್ಣ! ಹಾ ಕರ್ಣ! ಎನ್ನುತ್ತ ಕಳವಳಗೊಂಡು ಮೈಮರೆತು ಬಹಳ ಕಣ್ಣೀರು ಸುರಿಸಿದ.

ತಂ ದ್ರೋಣಪುತ್ರಪ್ರಮುಖಾ ನರೇಂದ್ರಾಃ
ಸರ್ವೇ ಸಮಾಶ್ವಾಸ್ಯ ಸಹ ಪ್ರಯಾಂತಿ ।
ನಿರೀಕ್ಷಮಾಣಾ ಮುಹುರರ್ಜುನಸ್ಯ
ಧ್ವಜಂ ಮಹಾಂತಂ ಯಶಸಾ ಜ್ವಲಂತಮ್ ॥೨೫॥

ಅಶ್ವತ್ಥಾಮ ಮುಂತಾದವರು ಮತ್ತು ಎಲ್ಲ ರಾಜರು ದುರ್ಯೋಧನನನ್ನು ಸಂತೈಸಿ ಪುನಃಪುನಃ ಕೀರ್ತಿಯಿಂದ ಜ್ವಲಿಸುವ ಅರ್ಜುನನ ಮಹಾಧ್ವಜವನ್ನು ನೋಡುತ್ತ ಜೊತೆಗೆ ನಡೆದರು.

ನರಾಶ್ವಮಾತಂಗಶರೀರಜೇನ
ರಕ್ತೇನ ಸಿಕ್ತಾ ರುಧಿರೇಣ ಭೂಮಿಃ ।
ರಕ್ತಾಂಬರಸ್ರಕ್ತಪನೀಯಯೋಗಾ-
ನ್ನಾರೀ ಪ್ರಕಾಶಾ ಇವ ಸರ್ವಗಮ್ಯಾ ॥೨೬॥

ಮನುಷ್ಯರ ಕುದುರೆಗಳ ಆನೆಗಳ ಶರೀರದಿಂದ ಸುರಿದ ಕೆಂಪಾದ ರಕ್ತದಿಂದ ತೊಯ್ದ ರಣಭೂಮಿಯು, ಕೆಂಪು ಬಟ್ಟೆ ಮಾಲೆ, ಬಂಗಾರದ ಆಭರಣಗಳು ಎಲ್ಲೆಡೆ ಹರಡಿರುವುದರಿಂದ, ಕೆಂಪುಬಟ್ಟೆ ಉಟ್ಟು ಮಾಲೆ ಆಭರಣಗಳನ್ನು ಧರಿಸುವ ವೇಶ್ಯೆಯಂತೆ ಕಂಡುಬಂದಿತು.

ಪ್ರಚ್ಛನ್ನರೂಪಾಂ ರುಧಿರೇಣ ರಾಜನ್
ರೌದ್ರೇ ಮುಹೂರ್ತೇऽತಿವಿರಾಜಮಾನಾಮ್ ।
ನೈವಾವತಸ್ಥುಃ ಕುರವಃ ಸಮೀಕ್ಷ್ಯ
ಪ್ರವ್ರಾಜಿತಾ ನರದೇವಾ ಯಯುಸ್ತೇ ॥೨೭॥

ರಣಭೂಮಿಯು ರಕ್ತದಿಂದ ನಿಜರೂಪವನ್ನು ಮರೆಮಾಡಿಕೊಂಡು ಸಾಯಂಕಾಲದ ರುದ್ರದೇವತಾಕವಾದ ಆ ಮುಹೂರ್ತದಲ್ಲಿ ಬಹಳ ವಿರಾಜ ಮಾನವಾಗಿದ್ದರೂ ಆ ದೃಶ್ಯವನ್ನು ನೋಡಿ ಸಹಿಸಲಾಗದೆ ಕೌರವರ ಕಡೆಯ ಆ ರಾಜರು ಹೊರಟುಹೋದರು, ಹೊರತು ಅಲ್ಲಿ ನಿಲ್ಲಲಿಲ್ಲ.

ವಧೇನ ಕರ್ಣಸ್ಯ ಸುದುಃಖಿತಾಸ್ತೇ
ಹಾ ಕರ್ಣ ಹಾ ಕರ್ಣ ಇತಿ ಬ್ರುವಾಣಾಃ ।
ದ್ರುತಂ ಪ್ರಯಾತಾಃ ಶಿಬಿರಾಣಿ ರಾಜನ್
ದಿವಾಕರಂ ರಕ್ತಮವೇಕ್ಷಮಾಣಾಃ ॥೨೮॥

ಕರ್ಣವಧದಿಂದ ಅವರು ಬಹಳ ದುಃಖಿತರಾಗಿದ್ದರು. ಹಾ ಕರ್ಣ ಹಾ ಕರ್ಣ

ಎಂದು ಎನ್ನುತ್ತ ಸೂರ್ಯನು ಕೆಂಪಾದುದನ್ನು ಕಂಡು, ಬೇಗನೆ ಶಿಬಿರಗಳಿಗೆ ಹೋದರು.

ಗಾಂಡೀವಮುಕ್ತೈಸ್ತು ಸುವರ್ಣಪುಂಖೈಃ
ಶಿಲಾಶಿತೈಃ ಶೋಣಿತದಿಗ್ಧವಾಜೈಃ ।
ಶರೈಶ್ಚಿತಾಂಗೋ ಭುವಿ ಭಾತಿ ಕರ್ಣೋ
ಹತೋಽಪಿ ಸನ್ ಸೂರ್ಯ ಇವಾಂಶುಮಾಲೀ ॥೨೯॥

ಅತ್ತ ಗಾಂಡೀವದಿಂದ ಹೊರಟ ಚಿನ್ನದ ಪುಕ್ಕಉಳ್ಳ, ಪುಕ್ಕದಲ್ಲಿ ರಕ್ತದಿಂದ ತೊಯ್ದ ಮಸೆಗಲ್ಲಿಗೆ ತಿಕ್ಕಿ ತೀಕ್ಷ್ಣವಾದ ಬಾಣಗಳನ್ನು ಮೈತುಂಬ ಧರಿಸಿ ನೆಲದ ಮೇಲೊರಗಿ ಶೋಭಿಸುತ್ತಿದ್ದಾನೆ ಕರ್ಣ. ಹತನಾದರೂ ಮೈತುಂಬ ಕಿರಣಗಳನ್ನು ಹೊರುವ ಸೂರ್ಯನಂತೆ ಕಾಣುತ್ತಿದ್ದಾನೆ.

ಕರ್ಣಸ್ಯ ದೇಹಂ ರುಧಿರಾವಸಿಕ್ತಂ
ಭಕ್ತಾನುಕಂಪೀ ಭಗವಾನ್ ವಿವಸ್ವಾನ್ ।
ಸ್ಪೃಷ್ಟ್ವಾಂಶುಭಿರ್ಲೋಹಿತರಕ್ತರೂಪಃ
ಸಿಷ್ನಾಸುರಭ್ಯೇತಿ ಪರಂ ಸಮುದ್ರಮ್ ॥೩೦॥

ಸೂರ್ಯಭಕ್ತನಾದ ಆ ಕರ್ಣನ ರಕ್ತಸಿಕ್ತವಾದ ಶವಶರೀರವನ್ನು ಭಕ್ತರಲ್ಲಿ ಅನುಕಂಪೆ ತೋರುವ ಭಗವಾನ್ ಸೂರ್ಯದೇವನು ಕಿರಣಗಳಿಂದ ಸ್ಪರ್ಶಿಸಿ, ಮೈಯೆಲ್ಲ ರಕ್ತವರ್ಣನಾಗಿ, ಸ್ನಾನ ಮಾಡಲು ಪಶ್ಚಿಮಸಮುದ್ರವನ್ನು ಹೋಗಿ ಸೇರಿದ.

ಮೃತನ ಶವವನ್ನು ಬಂಧು-ಮಿತ್ರರು ಸ್ಪರ್ಶಿಸಿ ಸ್ನಾನ ಮಾಡುವುದರಿಂದ ಮೃತನಿಗೆ ಸ್ನಾನಫಲ ದೊರಕುವುದು, ಸದ್ಗತಿಯಾಗುವುದು, ಕರ್ಣನ ರಕ್ತಸಿಕ್ತವಾದ ಶರೀರವನ್ನು ತನ್ನ ಎಲ್ಲಾ ಕಿರಣಗಳಿಂದ ತಬ್ಬಿಕೊಂಡಿದ್ದರಿಂದಲೇ ಸೂರ್ಯಬಿಂಬ ಕೆಂಪಾಯಿತೆಂದು ಉತ್ಪ್ರೇಕ್ಷೆ. ಪಶ್ಚಿಮ ಸಮುದ್ರವನ್ನು ಸೇರಿದ್ದು ಸ್ನಾನಕ್ಕಾಗಿ ಎಂದೂ, ಸ್ನಾನವೂ ಕೂಡ ಮೈಗೆ ಹತ್ತಿದ ನೆತ್ತರನ್ನು ತೊಳೆಯುವುದಕ್ಕಾಗಿ ಅಲ್ಲ, ಕರ್ಣನಿಗೆ ಸದ್ಗತಿಯಾಗಲೆಂಬ ಉದ್ದೇಶದಿಂದ ಎಂದೂ ಉತ್ಪ್ರೇಕ್ಷೆ. ವಸ್ತುತಃ ಇದು ವಸ್ತುಸ್ಥಿತಿಯೆ. ಇದನ್ನು ತಿಳಿದೇ ದೇವತೆಗಳೂ

ಋಷಿಗಳೂ ಹಾಗೇ ಮನಸಿನಲ್ಲಿ ಆಲೋಚಿಸಿ ತಮ್ಮ ತಮ್ಮ ಸ್ಥಾನಗಳಿಗೆ ಹೊರಟು ಹೋದರೆಂದು ಇನ್ನೊಂದು ಉತ್ಪ್ರೇಕ್ಷೆಯನ್ನು ಮುಂದಿನ ಶ್ಲೋಕದಲ್ಲಿ ಬಣ್ಣಿಸುತ್ತಾರೆ ಶ್ರೀವ್ಯಾಸರು, 'ಇತೀವ' ಎಂದು ಇವ ಶಬ್ದದಿಂದ.

ಇತೀವ ಸಂಚಿಂತ್ಯ ಸುರರ್ಷಿಸಂಘಾಃ
ಸಂಪ್ರಸ್ಥಿತಾ ಯಾಂತಿ ಯಥಾನಿಕೇತಮ್ ।
ಸಂಚಿಂತಯಿತ್ವಾ ಚ ಜನಾ ವಿಸಸ್ರು-
ರ್ಯಥಾಸುಖಂ ಖಂ ಚ ಮಹೀತಲಂ ಚ ॥೩೧॥

ಪ್ರಾಯಃ ಹೀಗೆ ಆಲೋಚಿಸಿ ದೇವ–ಋಷಿಸಮೂಹಗಳು ಹೊರಟು ಅವರವರ ಸ್ಥಾನಗಳಿಗೆ ಹೋದವು. ಇತರ ಜನರೂ ಹೀಗೇ ಚಿಂತಿಸಿ ಯಥೇಚ್ಛವಾಗಿ ಆಕಾಶವನ್ನೂ ಭೂಮಿಯನ್ನೂ ಸೇರಿದರು.

ದೇವತೆಗಳೂ ಋಷಿಗಳೂ ಆಕಾಶವನ್ನು, ಮನುಷ್ಯರು ಭೂಮಿಯಲ್ಲೇ ಅವರವರ ಮನೆ, ಬಿಡಾರಗಳನ್ನೂ ಹೋಗಿ ಸೇರಿದರು.

ತದದ್ಭುತಂ ಪ್ರಾಣಭೃತಾಂ ಭಯಂಕರಂ
ನಿಶಾಮ್ಯ ಯುದ್ಧಂ ಕುರುವೀರಮುಖ್ಯಯೋಃ ।
ಧನಂಜಯಸ್ಯಾಧಿರಥೇಶ್ಚ ವಿಸ್ಮಿತಾಃ
ಪ್ರಶಂಸಮಾನಾಃ ಪ್ರಯಯುಸ್ತದಾ ಜನಾಃ ॥೩೨॥

ಕರ್ಣಾರ್ಜುನರ ಯುದ್ಧ ಅದ್ಭುತ. ಪ್ರಾಣಿಗಳಿಗೆ ಎಲ್ಲರಿಗೂ ಭಯಂಕರ. ಅದನ್ನು ನೋಡಿ ವಿಸ್ಮಿತರಾಗಿ ಪ್ರಶಂಸೆ ಮಾಡುತ್ತ ಜನರು ಹೊರಟುಹೋದರು.

ಶರೈಃ ಸಂಕೃತ್ತವರ್ಮಾಣಂ ವೀರಂ ವಿಶಸನೇ ಹತಮ್ ।
ಗತಾಸುಮಪಿ ರಾಧೇಯಂ ನೈವ ಲಕ್ಷ್ಮೀರ್ವ್ಯಮುಂಚತ ॥೩೩॥

ಬಾಣಗಳಿಂದ ಕರ್ಣನ ಕವಚ ಚೂರಾಯಿತು. ವಿನಾಶಕಾರಿಯಾದ ಯುದ್ಧದಲ್ಲಿ ಆ ವೀರನು ಹತನಾದ. ಪ್ರಾಣಗಳು ಹೊರಟುಹೋದರೂ ಅವನ ಕಾಂತಿ ಹೊರಟುಹೋಗಲಿಲ್ಲ

ನಿಷ್ಪಪ್ತಹೇಮವಪುಷಂ ಜ್ವಲನಾರ್ಕಸಮತ್ವಿಷಮ್ ।
ಜೀವಂತಮಿವ ತಂ ಶೂರಂ ಸರ್ವಭೂತಾನಿ ಮೇನಿರೇ ॥೩೪॥

ಪುಟಕ್ಕಿಟ್ಟ ಚಿನ್ನದಂಥ ಶರೀರದವನು, ಉರಿವ ಸೂರ್ಯನಂಥ ತೇಜಸ್ಸುಳ್ಳವನು. ಇನ್ನೂ ಜೀವಂತನಿದ್ದಾನೆ ಎನ್ನುವಂತೆ ಆತನನ್ನು ಎಲ್ಲ ಜನರೂ ತಿಳಿದರು.

ಹತಸ್ಯಾಪಿ ಮಹಾರಾಜ ಸೂತಪುತ್ರಸ್ಯ ಸಂಯುಗೇ ।
ವಿತ್ರೇಸುಃ ಸರ್ವಭೂತಾನಿ ಸಿಂಹಸ್ಯೇವೇತರೇ ಮೃಗಾಃ ॥೩೫॥

ಮಹಾರಾಜ, ರಣದಲ್ಲಿ ಕರ್ಣನು ಹತನಾಗಿದ್ದರೂ ಅವನನ್ನು ಕಂಡವರು ಸಿಂಹ ಸತ್ತುಬಿದ್ದರೂ ಬೇರೆ ಮೃಗಗಳು ಅದನ್ನು ನೋಡಿ ಭಯಪಡುವಂತೆ ಎಲ್ಲರೂ ಭಯಪಟ್ಟರು.

ನಾಭವದ್ ವಿಕೃತಂ ಕಿಂಚಿತ್ ಮೃತಸ್ಯಾಪಿ ಮಹಾತ್ಮನಃ ।
ಚಾರುವೇಷಧರಂ ರಾಜಂಶ್ಚಾರುಮೌಲಿಶಿರೋಧರಮ್ ।
ತನ್ಮುಖಂ ಸೂತಪುತ್ರಸ್ಯ ಪೂರ್ಣಚಂದ್ರಸಮದ್ಯುತಿ ॥೩೬॥

ಆ ಮಹಾತ್ಮನು ಮೃತನಾದರೂ ಅವನಲ್ಲಿ ಏನೂ ವಿಕಾರ ಉಂಟಾಗಲಿಲ್ಲ. ಸುಂದರ ವೇಷಧಾರಿ, ಹೊಳೆಯುವ ಸುಂದರ ಶಿರಸ್ಸು ಕುತ್ತಿಗೆಗಳುಳ್ಳದ್ದು ಅವನ ಮುಖ. ಪೂರ್ಣಚಂದ್ರ ಸಮಾನವಾದ ಕಾಂತಿ ಉಳ್ಳದ್ದಾಗಿತ್ತು.

ನಾನಾಭರಣವಾನ್ ರಾಜನ್ ಮೃಷ್ಟಜಾಂಬೂನದಾಂಗದಃ ।
ಹತೋ ವೈಕರ್ತನಃ ಶೇತೇ ಪಾದಪೋಽಂಕುರವಾನಿವ ॥೩೭॥

ರಾಜನೆ, ಕರ್ಣನು ನಾನಾ ಆಭರಣಗಳನ್ನು ಧರಿಸಿದ್ದ ಶುದ್ಧ ಸುವರ್ಣಮಯವಾದ ತೋಳ್ಬಳೆಯನ್ನು ಧರಿಸಿದ್ದ. ಹತನಾದರೂ ಅವನು ಚಿಗುರಿನಿಂದ ಯುಕ್ತವಾದ ವೃಕ್ಷದಂತೇ ಇದ್ದ.

ಕನಕೋತ್ತಮಸಂಕಾಶಃ ಪ್ರದೀಪ್ತ ಇವ ಪಾವಕಃ ।
ಸ ಶಾಂತಃ ಪುರುಷವ್ಯಾಘ್ರಃ ಪಾರ್ಥಸಾಯಕವಾರಿಣಾ ।
ಯಥಾ ಹಿ ಜ್ವಲನೋ ದೀಪ್ತೋ ಜಲಮಾಸಾದ್ಯ ಶಾಮ್ಯತಿ ॥೩೮॥

ಬಂಗಾರದಂಥ ಉತ್ತಮ ಕಾಂತಿ ಉಳ್ಳವನು ಜ್ವಲಿಸುವ ಅಗ್ನಿಯಂತಿದ್ದ. ಉರಿವ ಬೆಂಕಿ ನೀರು ಬಿದ್ದರೆ ಆರಿಹೋಗುತ್ತದೆ. ಹಾಗೇ ಪುರುಷಶ್ರೇಷ್ಠನಾದ ಕರ್ಣನು ಅರ್ಜುನನ ಬಾಣವೆಂಬ ನೀರು ಬಿದ್ದಿದ್ದರಿಂದ ಆರಿಹೋದ.

ಕರ್ಣಾಗ್ನಿಃ ಸಮರೇ ತದ್ವತ್ ಪಾರ್ಥಮೇಘೇನ ಶಾಮಿತಃ ।
ಪ್ರಗೃಹ್ಯ ಚ ಯಶೋ ದೀಪ್ತಂ ಸುಯುದ್ಧೇನಾತ್ಮನೋ ಭುವಿ ॥೩೯॥

ಕರ್ಣನೆಂಬ ಅಗ್ನಿಯು ರಣದಲ್ಲಿ ಒಳ್ಳೆಯ ಯುದ್ಧದಿಂದ ಭೂಮಂಡಲದಲ್ಲಿ ಜ್ವಲಿಸುವ ಕೀರ್ತಿಯನ್ನು ಸಂಪಾದಿಸಿ ಅರ್ಜುನನೆಂಬ ಮೋಡದಿಂದ ಆರಿಹೋದ.

ವಿಸೃಜ್ಯ ಶರವರ್ಷಾಣಿ ಪ್ರತಾಪ್ಯ ಚ ದಿಶೋ ದಶ ॥೪೦॥
ಸಪುತ್ರಃ ಪುರುಷವ್ಯಾಘ್ರಃ ಸಂಶಾಂತಃ ಪಾರ್ಥತೇಜಸಾ ।
ಪ್ರತಾಪ್ಯ ಪಾಂಡವಾನ್ ರಾಜನ್ ಪಾಂಚಾಲಾಂಶ್ಚಾಸ್ತ್ರತೇಜಸಾ ॥೪೧॥

ಕರ್ಣನು ಬಾಣಗಳ ಮಳೆಗರೆದು ಹತ್ತುದಿಕ್ಕುಗಳನ್ನು ಸುಟ್ಟು ಅಸ್ತ್ರತೇಜಸ್ಸಿನಿಂದ ಪಾಂಡವ ಪಾಂಚಾಲ ಸೈನಿಕರನ್ನು ಸುಟ್ಟು ಅರ್ಜುನನ ತೇಜಸ್ಸಿನಿಂದ ಅವನು ತಾನೂ ತನ್ನ ಮಕ್ಕಳೊಂದಿಗೇ ಆರಿಹೋದ.

ದದಾನೀತ್ಯೇವ ಯೋಽವೋಚನ್ನ ನಾಸ್ತೀತ್ಯರ್ಥಿತೋಽರ್ಥಿಭಿಃ ।
ಸದ್ಭಿಃ ಸದಾ ಸತ್ಪುರುಷಃ ಸ ಹತೋ ದ್ವೈರಥೇ ವೃಷಃ ॥೪೨॥

ಬೇಡುವವರು ಬೇಡಿದಾಗ ಕೊಡುವೆನೆಂದೇ ಹೇಳಿದ ಹೊರತು ಇಲ್ಲ ಎನ್ನಲೇ ಇಲ್ಲ. ಸಜ್ಜನರೊಂದಿಗೆ ಸದಾ ಸಜ್ಜನನೇ ಆಗಿರುತ್ತಿದ್ದ. ದ್ವೈರಥಯುದ್ಧದಲ್ಲಿ ಮಡಿದ.

ಯಸ್ಯ ಬ್ರಾಹ್ಮಣಸಾತ್‌ಸರ್ವಮಾತ್ಮಾರ್ಥಂ ನ ಮಹಾತ್ಮನಃ ।
ನಾದೇಯಂ ಬ್ರಾಹ್ಮಣೇಷ್ವಾಸೀದ್ ಯಸ್ಯ ಸ್ವಮಪಿ ಜೀವಿತಮ್ ॥೪೩॥

ಸದಾ ನ್ಯಾಕಾಂ ಪ್ರಿಯೋ ದಾತಾ ಪ್ರಿಯದಾನೋ ದಿವಂ ಗತಃ ॥೪೪॥

ಯಾರ ಸರ್ವಸ್ವವು ಬ್ರಾಹ್ಮಣನಿಗಾಗಿ ಬ್ರಾಹ್ಮಣಾಧೀನವಿರುತ್ತಿತ್ತೆ ಹೊರತು ತನ್ನ ಅಧೀನ, ತನಗಾಗಿ ಎಂದೇನೂ ಇರಲಿಲ್ಲ. ಬ್ರಾಹ್ಮಣರಿಗೆ ಕೊಡಲಾಗದುದೆಂದು

ಏನೂ ಇರಲಿಲ್ಲ. ತನ್ನ ಬದುಕು ಕೂಡ ಬ್ರಾಹ್ಮಣರಿಗೆ ಕೊಡಲಾಗದ್ದೆಂದಿರಲಿಲ್ಲ. ಸದಾ ಮಾನವರಿಗೆ ಪ್ರಿಯನಾದ ದಾನಿ ಆತ. ದಾನ ಅವನಿಗೆ ಪ್ರಿಯ. ಅವನೀಗ ದಿವಂಗತನಾದ.

ಸ ಪಾರ್ಥಾಸ್ತ್ರವಿನಿರ್ದಗ್ಧೋ ಗತಃ ಪರಮಿಕಾಂ ಗತಿಮ್ ।
ಯಮಾಶ್ರಿತ್ಯಾಕರೋದ್ ವೈರಂ ಸುತಸ್ತೇ ಸ ಗತೋ ದಿವಮ್ ॥೪೫॥

ಆದಾಯ ತವ ಪುತ್ರಾಣಾಂ ಜಯಾಶಾಂ ಶರ್ಮ ವರ್ಮ ಚ ॥೪೬॥

ಅರ್ಜುನನ ಬಾಣದಿಂದ ಸುಟ್ಟು ಪರಗತಿಯನ್ನು ಹೊಂದಿದ. ರಾಜನೆ, ಯಾರಲ್ಲಿ ಭರವಸೆ ಇಟ್ಟು ನಿನ್ನ ಮಗ ದುರ್ಯೋಧನನು ಪಾಂಡವರಲ್ಲಿ ವೈರ ಮಾಡಿದನೋ ಆ ಕರ್ಣನು ಈಗ ನಿನ್ನ ಮಕ್ಕಳ ಜಯದಾಸೆಯನ್ನೂ ಸುಖವನ್ನೂ ರಕ್ಷಣೆಯನ್ನೂ ಸೆಳೆದುಕೊಂಡೇ ದಿವಂಗತನಾದ.

ಹತೇ ಸ್ಮ ಕರ್ಣೇ ಸರಿತೋ ನ ಸ್ರವಂತಿ
ಜಗಾಮ ಚಾಸ್ತಂ ಕಲುಷೋ ದಿವಾಕರಃ ।
ಗ್ರಹಶ್ಚ ತಿರ್ಯಗ್ ಜ್ವಲನಾರ್ಕವರ್ಣಃ
ಸೋಮಸ್ಯ ಪುತ್ರೋಽಭ್ಯುದಿಯಾಯ ರಾಜನ್ ॥೪೭॥

ಕರ್ಣನು ಹತನಾದಾಗ ನದಿಗಳು ಹರಿಯುವುದನ್ನು ನಿಲ್ಲಿಸಿದುವು. ಸೂರ್ಯನು ಕಲುಷಿತನಾಗಿ ಅಸ್ತಮಿಸಿದ. ಸೂರ್ಯ–ಅಗ್ನಿಗಳಿಗೆ ಸಮಾನ ವರ್ಣವುಳ್ಳ ಮಂಗಳಗ್ರಹವೂ ಚಂದ್ರಪುತ್ರನಾದ ಬುಧಗ್ರಹವೂ ಅಡ್ಡಲಾಗಿ ಉದಿಸಿದುವು.

ನಭಃ ಪಫಾಲೇವ ನನಾದ ಚೋರ್ವೀ
ವವುಶ್ಚ ವಾತಾಃ ಪರುಷಾಃ ಸುಫೋರಾಃ ।
ದಿಶಃ ಸಧೂಮಾಶ್ಚ ಭೃಶಂ ಪ್ರಜಜ್ವಲು-
ರ್ಮಹಾರ್ಣವಾಶ್ಚುಕ್ಷುಭಿರೇ ಚ ಸಸ್ವನಾಃ ॥೪೮॥

ಆಕಾಶವೇ ಸೀಳಿದಂತೆ, ಭೂಮಿಯೇ ಆರ್ತನಾದ ಗೈದಂತೆ ಆಯಿತು.

ಗಾಳಿಯೂ ಕಠಿನವಾಗಿ ಬಲುಘೋರವಾಗಿ ಬೀಸಿತು. ದಿಕ್ಕುಗಳೂ ಬಹಳ ಹೊಗೆ, ಜ್ವಾಲೆಗಳಿಂದ ತುಂಬಿದುವು. ಮಹಾ ಸಮುದ್ರಗಳು ಕ್ಷೋಭೆಗೊಂಡು ಬಹಳ ಶಬ್ದ ಉಂಟುಮಾಡಿದುವು.

ಸಕಾನನಾಶ್ಚಾದ್ರಿವರಾಶ್ಚಕಂಪುಃ
ಪ್ರವಿವ್ಯಥುರ್ಭೂತಗಣಾಶ್ಚ ಮಾರಿಷ ।
ಬೃಹಸ್ಪತಿಃ ಸಂಪರಿವಾರ್ಯ ರೋಹಿಣೀಂ
ಬಭೂವ ಚಂದ್ರಾರ್ಕಸಮಾನವರ್ಣಃ ॥೪೯॥

ಅರಣ್ಯಸಹಿತವಾಗಿ ದೊಡ್ಡ ಬೆಟ್ಟಗಳೂ ಚಲಿಸಿದುವು. ಭೂತಗಣಗಳು ವ್ಯಥೆಗೊಂಡುವು. ಬೃಹಸ್ಪತಿಯು ರೋಹಿಣಿಯನ್ನು ಸುತ್ತಲೂ ಆವರಿಸಿ ಚಂದ್ರ ಸೂರ್ಯರಿಗೆ ಸಮಾನವಾದ ವರ್ಣದಿಂದ ಪ್ರಕಾಶಿಸಿದ.

ಹತೇ ಕರ್ಣೇ ನ ದಿಶೋ ವಿಜಜ್ವಲು-
ಸ್ತಮೋವೃತಾ ದ್ಯೌರ್ವಿಚಚಾಲ ಭೂಮಿಃ ।
ಪಪಾತ ಚೋಲ್ಕಾ ಜ್ವಲನಪ್ರಕಾಶಾ
ನಿಶಾಚರಾಶ್ಚಾಪ್ಯಭವನ್ ಪ್ರಹೃಷ್ಟಾಃ ॥೫೦॥

ಕರ್ಣನು ಹತನಾದಾಗ ದಿಕ್ಕುಗಳು ಪ್ರಕಾಶಿಸಲಿಲ್ಲ. ಅಂತರಿಕ್ಷವು ಅಂಧಕಾರದಿಂದ ಆವೃತವಾಯಿತು. ಭೂಮಿ ಕಂಪಿಸಿತು. ಉಲ್ಕೆ ಬೆಂಕಿಯಂತೆ ಜ್ವಲಿಸಿ ಬಿದ್ದಿತು. ನಿಶಾಚರರು ಹರ್ಷಗೊಂಡರು.

ಶಶಿಪ್ರಕಾಶಾನನಮರ್ಜುನೋ ಯದಾ
ಶರೇಣ ಕರ್ಣಸ್ಯ ಶಿರೋ ನ್ಯಪಾತಯತ್ ।
ಅಥಾಂತರಿಕ್ಷೇ ಸಹಸೈವ ಶಬ್ದೋ
ಬಭೂವ ಹಾಹೇತಿ ಸುರೈರ್ವಿಮುಕ್ತಃ ॥೫೧॥

ಚಂದ್ರನಂತೆ ಶೋಭಿಸುವ ಮುಖವುಳ್ಳ ಕರ್ಣನ ಶಿರಸ್ಸನ್ನು ಅರ್ಜುನನು ಬಾಣದಿಂದ ಬೀಳಿಸಿದಾಗ ಒಡನೆ ಅಂತರಿಕ್ಷದಲ್ಲಿ ದೇವತೆಗಳು ಮಾಡಿದ ಹಾಹಾ ಶಬ್ದ ಕೇಳಿಸಿತು.

ಸ ದೇವಗಂಧರ್ವಮನುಷ್ಯಪೂಜಿತಂ
ನಿಹತ್ಯ ಕರ್ಣಂ ರಿಪುಮಾಹವೇऽರ್ಜುನಃ ।
ರರಾಜ ಪಾರ್ಥಃ ಪರಮೇಣ ತೇಜಸಾ
ವೃತ್ರಂ ನಿಹತ್ಯೇವ ಸಹಸ್ರಲೋಚನಃ ॥೫೨॥

ದೇವ ಗಂಧರ್ವ ಮನುಷ್ಯರಿಂದ ಪೂಜಿತನಾದ ಶತ್ರುವಾದ ಕರ್ಣನನ್ನು ರಣದಲ್ಲಿ ಕೊಂದು, ವೃತ್ರನನ್ನು ಕೊಂದ ಇಂದ್ರನಂತೆ, ಅರ್ಜುನನು ಪರಮ ತೇಜಸ್ಸಿನಿಂದ ಮೆರೆದ.

ಕರ್ಣನು ದುರ್ಯೋಧನ ದುಃಶಾಸನ ಕರ್ಣ ಶಕುನಿಗಳೆಂಬ ದುಷ್ಟ ಚತುಷ್ಟಯದಲ್ಲಿ ಸೇರಿದವನೆಂದು ಪ್ರಸಿದ್ಧನಾದವನು. ಪಾಂಡವರಲ್ಲಿ ಸದಾ ದ್ವೇಷಮಾಡಿ ದುರ್ಯೋಧನನಿಂದಲೂ ಅವರಲ್ಲಿ ದ್ವೇಷ ಮಾಡಿಸಿದವನು—

'ಯಮಾಶ್ರಿತ್ಯಾಕರೋದ್ ವೈರಂ ಸುತಸ್ತೇ ಸ ಗತೋ ದಿವಂ'

ಎಂದು (ಶ್ಲೋ.45)ರಲ್ಲಿ ಸಂಜಯನು ಧೃತರಾಷ್ಟ್ರನಿಗೆ ಹೇಳುವಂತೆ ದುರ್ಯೋಧನನಲ್ಲಿದ್ದ ಪಾಂಡವದ್ವೇಷಕ್ಕೆಲ್ಲ ಮೂಲಪ್ರೇರಕನೇ ಕರ್ಣನಾಗಿದ್ದ, ನಿಜ. ಆದರೆ ಅವನು ಭಗವಾನ್ ಸೂರ್ಯದೇವನ ಅವತಾರ. ಎಲ್ಲರ ಕಣ್ಣುಗಳಲ್ಲಿದ್ದು ಎಲ್ಲರಿಗೂ ದೃಷ್ಟಿಭಾಗ್ಯ ನೀಡುವ ತತ್ವದೇವತೆ ಅವನು. ಅವನಿಲ್ಲದಿದ್ದರೆ ಎಲ್ಲರೂ ಅಂಧಕಾರದಲ್ಲಿ ಮುಳುಗಿ ನಾಶವಾದಾರು.

ಜ್ಯೋತಿಷಿಗಳು ಸೂರ್ಯನನ್ನು ಪಾಪಗ್ರಹಗಳ ಪೈಕಿ ಸೇರಿದವನೆನ್ನುವ ಮಾತು ನಿಜವಾದ ಅರ್ಥದಲ್ಲಿ ಸರ್ವಥಾ ಅಸಮರ್ಥನೀಯ. ಗ್ರಹಗಳು ಎಲ್ಲರೂ ಪುಣ್ಯಾತ್ಮರಾದ ದೇವತೆಗಳು. ಯಾರೂ ಪಾಪಿಗಳಲ್ಲ. ಜನರ ಪೂರ್ವಜನ್ಮದ ಪುಣ್ಯ–ಪಾಪಗಳನ್ನು ಅನುಸರಿಸಿ ಜನ್ಮಕುಂಡಲಿಯಲ್ಲಿ ಸಂಚರಿಸುತ್ತ ಸರಿಯಾದ ಕಾಲದಲ್ಲಿ ಸರಿಯಾದ ಸೂಚನೆ ನೀಡುತ್ತಾರೆ. ಪಾಪಗಳನ್ನು ಮೊದಲೇ ತಿಳಿಸಿ, ಶಾಂತಿ ಮಾಡಿಸಿ, ಕಳೆಯುತ್ತಾರೆ.

ಸಿಂಹಿಕಾ ಪುತ್ರನಾದ ಅತ್ಯಂತ ದುಷ್ಟನಾದ ರಾಹು ಗ್ರಹವೆಂದು ಪ್ರಸಿದ್ಧನಾದರೂ ಅವನು ವಸ್ತುತಃ ದೇವತೆಯಲ್ಲ, ದೈತ್ಯ. ದೈತ್ಯನು ಸೂರ್ಯನ ಪುತ್ರನೆನ್ನಲು ಏನೂ ಆಧಾರವಿಲ್ಲ. ಮತ್ತು ಅವನು ಗ್ರಹನೂ ಅಲ್ಲ. ಅವನು ಕೇವಲ ರಾಹುಶಿರಸ್ಸಿನಲ್ಲಿ ಆವಿಷ್ಟನಾಗಿ ಸೂರ್ಯ–ಚಂದ್ರರ ಗ್ರಹಣ ಮಾತ್ರವನ್ನು ಮಾಡುತ್ತಾನೆ. ಬ್ರಹ್ಮಪುತ್ರನಾದ ರಾಹುಗ್ರಹವು ಆದೇ ಶಿರಸ್ಸಿನಲ್ಲಿರುವವನು, ಸರ್ವರಿಗೂ ಪೂಜ್ಯನಾದ ದೇವತೆಯೆ.

ಸೂರ್ಯನ ಪುತ್ರರು ಯಮ ಮತ್ತು ಶನಿ. ಇಬ್ಬರೂ ದೇವೋತ್ತಮರು. ಹಾಗೇ ಸಾಕ್ಷಾತ್ ಸೂರ್ಯಾಂಶ ಸಂಭೂತನಾದ ಕರ್ಣನೂ ದೇವತಾತ್ಮನೂ ಮಹಾತ್ಮನೂ ಆಗಿದ್ದ. ಹಿಂದೆ ಆತನು ಸುಗ್ರೀವಾವತಾರದಲ್ಲಿ ವಾಲಿಯನ್ನು ಶ್ರೀರಾಮನಿಂದ ಕೊಲ್ಲಿಸಿದ್ದ. ಆ ದೋಷದಿಂದ, ಈ ಕರ್ಣಾವತಾರದಲ್ಲಿ ಅಸುರಾವೇಶ ಉಂಟಾಯಿತು. ಮನುಷ್ಯರ ಬುದ್ಧಿ ಪಿಶಾಚಾವೇಶದಿಂದ ಕೆಡುವಂತೆ ಕರ್ಣನ ಬುದ್ಧಿಯೂ ಆಗಾಗ ಅಸುರಾವೇಶದಿಂದ ಕೆಡುತ್ತಲೇ ಇದ್ದುದರಿಂದ ಆತ ದುರ್ಯೋಧನನ ಸಂಗ ಮಾಡಿದ.

ಆದರೂ ಸುಗ್ರೀವನಾಗಿ ಅವನು ಶ್ರೀರಾಮನ ಸೇವೆಯನ್ನು ಬಹಳ ಮಾಡಿದ್ದರಿಂದ, ಕರ್ಣನಾಗಿಯೂ ಶ್ರೀಪರಶುರಾಮನ ಸೇವೆ ಮಾಡಿದ್ದರಿಂದ ಆ ಪುಣ್ಯ ಅವನ ಯೋಗ್ಯತೆಗಿಂತ ಹೆಚ್ಚಿನದಾಗಿದ್ದರಿಂದ ಶ್ರೀಕೃಷ್ಣ ಅದನ್ನು ಪಾಂಡವ ದ್ವೇಷದ ಮೂಲಕ ಕಳೆದು, ಅನುಗ್ರಹಿಸಿದ್ದಾನೆ. ವಸ್ತುತಃ ಕೌರವಸ್ನೇಹ ಮತ್ತು ಪಾಂಡವದ್ವೇಷ ಪರಶುರಾಮನಿಗೆ ಇಷ್ಟವಾಗಿತ್ತು. ಅದಕೆಂದೇ ಎಲ್ಲ ವಿದ್ಯೆಗಳನ್ನು ಪ್ರೀತಿಯಿಂದ ಉಪದೇಶಿಸಿದ್ದ. ಹೀಗೆ ಅಸುರಾವೇಶವೂ ಕರ್ಣನಿಗೆ ಹಿತವನ್ನೇ ಉಂಟುಮಾಡಿತು. ಅವನಲ್ಲಿ ಹರಿಯ ವಿಶೇಷ ಸನ್ನಿಧಾನವಿದ್ದಿದ್ದರಿಂದ ರಣರಂಗದಲ್ಲಿ ಅರ್ಜುನನನ್ನು ಮೀರಿಸಿ ಪರಾಕ್ರಮ ತೋರಿದ. ರಥಚಕ್ರವನ್ನು ಎತ್ತುವ ಪ್ರಯತ್ನದಲ್ಲಿ ಭೂಮಿಯನ್ನೇ ನಾಲ್ಕು ಅಂಗುಲದಷ್ಟು ಮೇಲಕ್ಕೆ ಎತ್ತಿದ!

ಅರ್ಜುನನಿಂದ ತನಗೆ ಪವಿತ್ರಕುರುಕ್ಷೇತ್ರದ ರಣರಂಗದಲ್ಲಿ ಮರಣ ಬರಬೇಕು, ಆ ರಣಯಜ್ಞದಲ್ಲಿ ಪಶುವಾಗಿ ತಾನು ಆಹುತಿಯಾಗಬೇಕು. ಅದರಿಂದಲೇ ತನಗೆ ಕೀರ್ತಿ ಮತ್ತು ಸ್ವರ್ಗ ಪ್ರಾಪ್ತಿ ಎಂದು ಬಗೆದು, ಪಾಂಡವ ದ್ವೇಷವನ್ನು ಸ್ವತಃ ಸೂರ್ಯದೇವನೇ ಅಪೇಕ್ಷಿಸಿದ್ದನೆಂದರೂ ತಪ್ಪಿಲ್ಲ. ಅದರಲ್ಲಿಯೂ ಪಾಂಡವದ್ವೇಷದ ಕಿಚ್ಚಿನಿಂದ ದುರ್ಯೋಧನನ ಸರ್ವನಾಶ ಮಾಡುವುದು ಅವನ ಮುಖ್ಯ ಉದ್ದೇಶವಾಗಿತ್ತು.

ಮೂಲರೂಪದಲ್ಲಿ ತನ್ನ ಮಗನಾದ ಯಮನ ಅವತಾರ ಧರ್ಮರಾಜನೇ ರಾಜ್ಯವಾಳಲಿ, ತಾನು ಕುಂತಿಯ ಹಿರಿಯ ಮಗನೆಂದು ಹೇಳಿಕೊಂಡು ರಾಜನಾಗುವುದು ಬೇಡ, ಅದು ತನಗೆ ಇಷ್ಟವಿಲ್ಲವೆಂದು ಶ್ರೀಕೃಷ್ಣನ ಮುಂದೆ ಅವನು ತಾನೇ ಹೇಳಿದ್ದುಂಟು.

ಅರ್ಜುನನನ್ನು ತಾನು ಕೊಲ್ಲುವೆನೆಂದು ಪದೇಪದೇ ಅವನು ಹೇಳುತ್ತಿದ್ದುದು ದುರ್ಯೋಧನನ ಪ್ರೀತಿಗಾಗಿ. ಆ ಮೂಲಕ ಪಾಂಡವ–ಕೌರವ ಸಂಘರ್ಷ ಉಂಟಾಗುವುದಕ್ಕಾಗಿ. ಅದಕ್ಕಾಗಿಯೇ ಶ್ರೀಪರಶುರಾಮನು ಅವನಿಗೆ

ಅಸ್ತ್ರವಿದ್ಯೆಯನ್ನು ಅನುಗ್ರಹಿಸಿದ್ದ ಮತ್ತು ಇದು, ಕ್ಷತ್ರಿಯಸ್ವಭಾವಸಹಜವೂ ಹೌದು, ಆಸುರಾವೇಶವೂ ಹೌದು.

ಹೀಗೆ ದೇವೋತ್ತಮನಾದ ಕರ್ಣನ ಅವಸಾನವಾದಾಗ ದೇವತೆಗಳು ಹಾಹಾಕಾರ ಮಾಡಿದ್ದು ಸಹಜವೆ. ಭೂಮಿ–ಅಂತರಿಕ್ಷ ಮುಂತಾದವುಗಳು ಕ್ಷೋಭೆಗೊಂಡುದುದೂ ಸಹಜವೆ.

ತತೋ ರಥೇನಾಂಬುದವೃಂದನಾದಿನಾ
ಶರನ್ನಭೋಮಧ್ಯಗಭಾಸ್ಕರತ್ವಿಷಾ ।
ಪತಾಕಿನಾ ಭೀಮನಿನಾದಕೇತುನಾ
ಹಿಮೇಂದುಶಂಖಿಸ್ಫಟಿಕಾವಭಾಸಿನಾ ।
ಸುವರ್ಣಮುಕ್ತಾಮಣಿವಜ್ರವಿದ್ರುಮೈ-
ರಲಂಕೃತೇನಾಪ್ರತಿಮಾನರಂಹಸಾ ॥೫೩॥

ಕೃಷ್ಣಾರ್ಜುನರು ಇತ್ತ ರಣರಂಗದಲ್ಲಿ ರಥದಲ್ಲಿ ಶೋಭಿಸಿದರು. ಅವರ ರಥನಾದವು ಮೋಡಸಮೂಹಗಳ ನಾದದಂತಿತ್ತು. ರಥದ ಪ್ರಕಾಶ ಶರತ್ಕಾಲದ ಆಕಾಶ ಮಧ್ಯದಲ್ಲಿ ಬೆಳಗುವ ಸೂರ್ಯನಂತಿತ್ತು. ಪತಾಕೆಗಳಿಂದ ಶೋಭಿಸುವ ಆ ರಥದ ಧ್ವಜವು ವಾನರಧ್ವಜ, ಭಯಂಕರ ನಾದ ಮಾಡುತ್ತಿತ್ತು. ರಥದ ಬಣ್ಣ ಹಿಮ ಚಂದ್ರ ಶಂಖ ಸ್ಫಟಿಕಗಳ ಬಣ್ಣವಾಗಿತ್ತು. ಬಂಗಾರ ಮುತ್ತುರತ್ನ ವಜ್ರ ಹವಳಗಳಿಂದ ಅಲಂಕೃತವಾಗಿದ್ದು ಅಪ್ರತಿಮ ವೇಗಶಾಲಿಯಾಗಿತ್ತು ಆ ರಥ.

ನರೋತ್ತಮೌ ಪಾಂಡವಕೇಶಿಮರ್ದನಾ-
ವುದಾಹಿತಾವಗ್ನಿದಿವಾಕರೋಪಮೌ ।
ರಣಾಜಿರೇ ವೀತಭಯೌ ವಿರೇಜತುಃ
ಸಮಾನಯಾನಾವಿವ ವಿಷ್ಣುವಾಸವೌ ॥೫೪॥

ರಣರಂಗದಲ್ಲಿ ಉತ್ತಮರಾದ ಅಗ್ನಿ–ಸೂರ್ಯರಂಥ ಪುರುಷಶ್ರೇಷ್ಠರಾದ ಅರ್ಜುನ–ಕೃಷ್ಣರು ನಿರ್ಭೀತರಾಗಿ, ಒಂದೇ ರಥದಲ್ಲಿ ಕುಳಿತ ವಿಷ್ಣು–ಇಂದ್ರರಂತೆ, ಜೊತೆಯಾಗಿ ಕುಳಿತು ಶೋಭಿಸಿದರು.

ತತೋ ಧನುರ್ಜ್ಯಾತಳನೇಮಿನಿಸ್ವನೈಃ
ಪ್ರಸಹ್ಯ ಕೃತ್ವಾ ಚ ರಿಪೂನ್ ಹತಪ್ರಭಾನ್ ।

ಸಂಸಾಧಯಿತ್ವೈವ ಕುರೂನ್ ಶರೌಘೈಃ
ಕಪಿಧ್ವಜಃ ಪಕ್ಷಿವರಧ್ವಜಶ್ಚ ।
ಪ್ರಸಹ್ಯ ಶಂಖೌ ಧಮತುಃ ಸುಘೋಷೌ
ಮನಾಂಸ್ಯರೀಣಾಮವಸಾದಯಂತೌ ॥೫೫॥

ಬಿಲ್ಲಿನ ಹೆದೆ ಕರತಳ ಚಕ್ರಧ್ವನಿಗಳಿಂದ ಶತ್ರುಗಳನ್ನು ಬಲವಾಗಿ ನಿಷ್ಪ್ರಭರನ್ನಾಗಿಸಿ, ಬಾಣಪ್ರವಾಹಗಳಿಂದ ಕೌರವ ಸೈನಿಕರನ್ನು ನಾಶಗೊಳಿಸಿ ಅರ್ಜುನ ಮತ್ತು ಕೃಷ್ಣರು ಶತ್ರುಗಳ ಮನಸ್ಸಿನಲ್ಲಿ ವಿಷಾದ ಉಂಟುಮಾಡುತ್ತ ಬಲವಾಗಿ ಒಳ್ಳೆಯ ಧ್ವನಿಯುಳ್ಳ ಶಂಖಗಳನ್ನು ಊದಿದರು.

ಸುವರ್ಣಜಾಲಾವತತೌ ಮಹಾಸ್ವನೌ
ಹಿಮಾವದಾತೌ ಪರಿಗೃಹ್ಯ ಪಾಣಿಭಿಃ ।
ಚುಚುಂಬತುಃ ಶಂಖವರೌ ನೃಣಾಂ ವರೌ
ವರಾನನಾಭ್ಯಾಂ ಯುಗಪಚ್ಚ ದಧ್ಮತುಃ ॥೫೬॥

ಬಂಗಾರದ ಮಾಲೆಗಳಿಂದ ತುಂಬಿದ, ಮಹಾಧ್ವನಿಯುಳ್ಳ, ಹಿಮದಂತೆ ಬಿಳಿಯಾದ ಶ್ರೇಷ್ಠ ಶಂಖಗಳನ್ನು ಕೈಗಳಿಂದ ಹಿಡಿದು, ಶ್ರೇಷ್ಠಪುರುಷರು ಶ್ರೇಷ್ಠ ಮುಖಗಳಿಂದ ಚುಂಬಿಸಿ ಏಕಕಾಲದಲ್ಲಿ ಊದಿದರು.

ಪಾಂಚಜನ್ಯಸ್ಯ ನಿಘೋರ್ಷೋ ದೇವದತ್ತಸ್ಯ ಚೋಭಯೋಃ ।
ಪೃಥಿವೀಮಂತರಿಕ್ಷಂ ಚ ದ್ಯಾಮಪಶ್ಚಾಪ್ಯಪೂರಯತ್ ॥೫೭॥

ಪಾಂಚಜನ್ಯ ಹಾಗೂ ದೇವದತ್ತ ಎರಡೂ ಶಂಖಗಳ ಘೋಷಗಳು ಪೃಥಿವಿ ಅಂತರಿಕ್ಷ–ಸ್ವರ್ಗ–ಸಮುದ್ರಜಲಗಳನ್ನು ತುಂಬಿಕೊಂಡುವು.

ತೌ ಶಂಖಶಬ್ದೇನ ನಿನಾದಯಂತೌ
ವನಾನಿ ಶೈಲಾನ್ ಸರಿತೋ ದಿಶಶ್ಚ ।
ವಿತ್ರಾಸಯಂತೌ ತವ ಪುತ್ರಸೇನಾಂ
ಯುಧಿಷ್ಠಿರಂ ನಂದಯತಃ ಸ್ಮ ವೀರೌ ॥೫೮॥

ವೀರರಾದ ಆ ಕೃಷ್ಣಾರ್ಜುನರು ಶಂಖಶಬ್ದದಿಂದ ವನ ಶೈಲ ನದಿ ದಿಕ್ಕುಗಳನ್ನೆಲ್ಲಾ ಪ್ರತಿಧ್ವನಿಸುವಂತೆ ಮಾಡುತ್ತ ನಿನ್ನ ಮಕ್ಕಳ ಸೈನ್ಯವನ್ನು ಭಯಪಡಿಸುತ್ತ ಯುಧಿಷ್ಠಿರನನ್ನು ಸಂತೋಷಗೊಳಿಸಿದರು.

ತತಃ ಪ್ರಯಾತಾಃ ಕುರವೋ ಜವೇನ
ಶ್ರುತ್ವೈವ ಶಂಖಿಸ್ವನಮೀರ್ಯಮಾಣಮ್ ।
ವಿಹಾಯ ಮದ್ರಾಧಿಪತಿಂ ಪತಿಂ ಚ
ದುರ್ಯೋಧನಂ ಭಾರತ ಭಾರತಾನಾಮ್ ॥೫೯॥

ಕೌರವರ ಸೈನಿಕರು, ಕೃಷ್ಣಾರ್ಜುನರ ಶಂಖನಾದ ಉಂಟಾಗುತ್ತಿದ್ದಂತೆ, ಅದನ್ನು ಕೇಳಿದೊಡನೆ, ಕುರುಸೈನ್ಯದ ಅಧಿಪತಿಯಾದ ದುರ್ಯೋಧನನನ್ನೂ ಮದ್ರರಾಜ ಶಲ್ಯನನ್ನೂ ಬಿಟ್ಟು ಪಲಾಯನ ಮಾಡಿದರು.

ಮಹಾಹವೇ ತಂ ಬಹು ಶೋಭಮಾನಂ
ಧನಂಜಯಂ ಭೂತಗಣಾಃ ಸಮೇತಾಃ ।
ತದಾನ್ವಮೋದಂತ ಜನಾರ್ದನಂ ಚ
ಪ್ರಭಾಕರಾವಭ್ಯುದಿತೌ ಯಥೈವ ॥೬೦॥

ಮಹಾರಣದಲ್ಲಿ ಬಹಳ ಶೋಭಿಸುತ್ತಿರುವ, ಉದಿಸಿದ ಎರಡು ಸೂರ್ಯರಂತೆ ಕಂಡುಬರುವ ಅರ್ಜುನನನ್ನೂ ಕೃಷ್ಣನನ್ನೂ ಜನಸಮೂಹಗಳು ಸೇರಿ ಅಭಿನಂದಿಸಿದವು.

ಸಮಾಚಿತೌ ಕರ್ಣಶರೈಃ ಪರಂತಪಾ-
ವುಭೌ ವ್ಯಭಾತಾಂ ಸಮರೇऽಚ್ಯುತಾರ್ಜುನೌ ।
ತಮೋ ನಿಹತ್ಯಾಭ್ಯುದಿತೌ ಯಥಾಮಲೌ
ಶಶಾಂಕಸೂರ್ಯಾವಿವ ರಶ್ಮಿಮಾಲಿನೌ ॥೬೧॥

ಶತ್ರುತಾಪಕರಾದ ಕೃಷ್ಣಾರ್ಜುನರಿಬ್ಬರು ಸಮರದಲ್ಲಿ ಕರ್ಣಬಾಣಗಳಿಂದ ತುಂಬಿಕೊಂಡು, ತಮಸ್ಸನ್ನು ನಾಶಮಾಡಿ ಉದಿಸಿದ ಕಿರಣಸಮೂಹವುಳ್ಳ ನಿರ್ಮಲ ಚಂದ್ರ–ಸೂರ್ಯರಂತೆ ಬೆಳಗಿದರು.

ವಿಹಾಯ ತಾನ್ ಬಾಣಗಣಾನಥಾಗತೌ
ಸುಹೃದ್ವೃತಾವಪ್ರತಿಮಾನವಿಕ್ರಮೌ ।
ಸುಖಂ ಪ್ರವಿಷ್ಟೌ ಶಿಬಿರಂ ಸ್ವಮೀಶ್ವರೌ
ಸದಸ್ಯಹೂತಾವಿವ ವಾಸವಾಚ್ಯುತೌ ॥೬೨॥

ಅಪ್ರತಿಮ ಪರಾಕ್ರಮಿಗಳಾದ, ಸರ್ವಸಮರ್ಥರಾದ ಕೃಷ್ಣಾರ್ಜುನರು ತಮ್ಮ ಶರೀರದಲ್ಲಿ ನೆಟ್ಟ ಕರ್ಣನ ಬಾಣಗಳನ್ನು ವೈದ್ಯರಿಂದ ಹೊರತೆಗೆಸಿ, ಬಂಧು–ಮಿತ್ರರಿಂದೊಡಗೂಡಿ, ಯಜ್ಞಗಳಲ್ಲಿ ಸದಸ್ಯರಿಂದ ಆಹೂತರಾದ ಇಂದ್ರ –ಉಪೇಂದ್ರರಂತೆ, ಸುಖವಾಗಿ ತಮ್ಮ ಬಿಡಾರಗಳನ್ನು ಪ್ರವೇಶಿಸಿದರು.

ಸದೇವಗಂಧರ್ವಮನುಷ್ಯಚಾರಣೈ-
ರ್ಮಹರ್ಷಿಭಿರ್ಯಕ್ಷಮಹೋರಗೈರಪಿ ।
ಜಯಾಭಿವೃದ್ಧ್ಯಾ ಪರಯಾಭಿಪೂಜಿತೌ
ನಿಹತ್ಯ ಕರ್ಣಂ ಪರಮಾಹವೇ ತದಾ ॥೬೩॥

ಕೃಷ್ಣಾರ್ಜುನರು ಮಹಾರಣದಲ್ಲಿ ಕರ್ಣವಧೆ ಮಾಡಿ, ದೇವ ಗಂಧರ್ವ ಮನುಷ್ಯ ಚಾರಣ ಮಹರ್ಷಿ ಯಕ್ಷ ಮಹಾನಾಗರಿಂದ 'ಜಯವಾಗಲಿ' ಎಂದು ಉತ್ತಮ ಜಯಾಭಿವೃದ್ಧ್ಯಾಶಂಸನದಿಂದ ಪೂಜಿತರಾದರು.

ಯಥಾನುರೂಪಂ ಪ್ರತಿಪೂಜ್ಯ ತಾನಥ
ಪ್ರಶಸ್ಯಮಾನಾವತುಲೈಶ್ಚ ಕರ್ಮಭಿಃ ।
ನನಂದತುಸ್ತೌ ಸಸುಹೃದ್ಗಣೌ ತದಾ
ಬಲಂ ನಿಯಮ್ಯೈವ ಸುರೇಶಕೇಶವೌ ॥೬೪॥

ಇದಕ್ಕೆ ಪ್ರತಿಯಾಗಿ ಕೃಷ್ಣಾರ್ಜುನರು ಎಲ್ಲರನ್ನೂ ಯಥಾಯೋಗ್ಯವಾಗಿ ಗೌರವಿಸಿ, ಅನುಪಮ ಕರ್ಮಗಳಿಂದ ಪ್ರಶಂಸಾಭಾಜನರಾಗಿ, ಬಲಾಸುರನನ್ನು ನಿಗ್ರಹಿಸಿದ ಇಂದ್ರ–ಉಪೇಂದ್ರರು ಆನಂದಿತರಾದಂತೆ, ಬಂಧು–ಮಿತ್ರರೊಂದಿಗೆ ಆನಂದಿಸಿದರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಏಕನವತಿತಮೋಽಧ್ಯಾಯಃ ॥೯೧॥

❖

ತೊಂಬತ್ತಎರಡನೆಯ ಅಧ್ಯಾಯ

ಕುರುಸೈನ್ಯದ ಶಿಬಿರ ಪ್ರವೇಶ.

ಸಂಜಯಃ

ಹತೇ ವೈಕರ್ತನೇ ಕರ್ಣೇ ಕುರವೋ ಭಯಪೀಡಿತಾಃ ।
ವೀಕ್ಷಮಾಣಾ ದಿಶಃ ಸರ್ವಾಃ ಪಲಾಯಂತೇ ಸ್ಮ ಸರ್ವತಃ ॥೧॥

ಸಂಜಯ ನುಡಿದ— ಕರ್ಣನು ಹತನಾದಾಗ ಕೌರವರ ಸೈನಿಕರು ಎಲ್ಲರೂ ಭಯಪೀಡಿತರಾಗಿ ಎಲ್ಲ ದಿಕ್ಕುಗಳನ್ನೂ ನೋಡುತ್ತ ಪಲಾಯನಗೈದರು.

ವೀರಂ ತು ನಿಹತಂ ಶ್ರುತ್ವಾ ಶತ್ರುಭಿಃ ಪರಮಾಹವೇ ।
ಸರ್ವೇ ದಿಶೋಽನ್ವಕೀರ್ಯಂತ ತಾವಕಾ ಭಯಮೋಹಿತಾಃ ॥೨॥

ವೀರಕರ್ಣನು ಮಹಾರಣದಲ್ಲಿ ಶತ್ರುಗಳಿಂದ ಹತನಾದನೆಂದು ಕೇಳಿಯೇ ನಿನ್ನವರನೇಕರು ಭಯದಿಂದ ದಿಗ್ಭ್ರಾಂತರಾಗಿ ಎಲ್ಲ ದಿಕ್ಕುಗಳಿಗೆ ಓಡಿದರು.

ತತೋಽವಹಾರಂ ಚಕ್ರುಸ್ತೇ ರಾಜನ್ ಯೋಧಾಃ ಸಮಂತತಃ ।
ವಾರ್ಯಮಾಣಾ ಭಯೋದ್ವಿಗ್ನಾಸ್ತವ ಪುತ್ರೇಣ ಭಾರತ ॥೩॥

ರಾಜನೆ, ನಿನ್ನ ಮಗನು ತಡೆಯುತ್ತಿದ್ದರೂ ಭಯದಿಂದ ಉದ್ವಿಗ್ನರಾದ ಆ ಯೋಧರು ಎಲ್ಲೆಡೆ ರಣರಂಗದಿಂದ ಹಿಂದಿರುಗಿದರು.

ತೇಷಾಂ ತು ಮತಮಾಜ್ಞಾಯ ಪುತ್ರಸ್ತೇ ಭರತರ್ಷಭ ।
ಅವಹಾರಂ ತತಶ್ಚಕ್ರೇ ಶಲ್ಯಸ್ಯಾನುಮತೇ ನೃಪ ॥೪॥

ಅವರ ಅಭಿಪ್ರಾಯವನ್ನು ತಿಳಿದು ನಿನ್ನ ಮಗನೂ ಶಲ್ಯನ ಅನುಮತಿಯಿಂದ ರಣರಂಗದಿಂದ ಹಿಂತಿರುಗಿದ.

ಯೋಧೈರ್ಮಹಾರಥೈಃ ಸಾರ್ಧಂ ವೃತೋ ಭಾರತ ತಾವಕೈಃ ।
ಹತಾವಶೇಷೈಸ್ತ್ವರಿತಃ ಶಿಬಿರಾಯೈವ ದುದ್ರುವೇ ॥೫॥

ಮಹಾರಥರಾದ ಯೋಧರೊದಿಗೆ ಅಳಿದುಳಿದ ನಿನ್ನ ಕಡೆಯ ಸೈನಿಕರಿಂದ ಪರಿವೃತನಾಗಿ ನಿನ್ನ ಮಗನು ಶಿಬಿರಕ್ಕೆ ಬೇಗನೆ ಧಾವಿಸಿ ಬಂದ.

ಗಾಂಧಾರಾಣಾಂ ಸಹಸ್ರೇಣ ಶಕುನಿಃ ಪರಿವಾರಿತಃ ।
ಹತಮಾಧಿರಥಿಂ ದೃಷ್ಟ್ವಾ ಶಿಬಿರಾಯೈವ ದುದ್ರುವೇ ॥೬॥

ಗಾಂಧಾರದ ಸಾವಿರ ಸೈನಿಕರಿಂದ ಪರಿವೃತನಾದ ಶಕುನಿ, ಕರ್ಣನು ಹತನಾದುದನ್ನು ನೋಡಿ ಶಿಬಿರಕ್ಕೇ ಧಾವಿಸಿ ಬಂದ.

ಕೃಪಃ ಶಾರದ್ವತೋ ರಾಜನ್ನಾಗಾನೀಕೇನ ಸಂವೃತಃ ।
ಮಹತಾ ಮೇಘಕಲ್ಪೇನ ಶಿಬಿರಾಯೈವ ದುದ್ರುವೇ ॥೭॥

ಕೃಪನೂ ಮೋಡಕ್ಕೆ ಹೋಲುವಂಥ ದೊಡ್ಡ ಗಜಸೈನ್ಯದಿಂದ ಪರಿವೃತನಾಗಿ ಶಿಬಿರಕ್ಕೆ ಧಾವಿಸಿ ಬಂದ.

ಅಶ್ವತ್ಥಾಮಾ ತತಃ ಶೂರೋ ವಿನಿಃಶ್ವಸ್ಯ ಮುಹುರ್ಮುಹುಃ ।
ಪಾಂಡವಾನಾಂ ಜಯಂ ದೃಷ್ಟ್ವಾ ಶಿಬಿರಾಯೈವ ದುದ್ರುವೇ ॥೮॥

ಶೂರನಾದ ಅಶ್ವತ್ಥಾಮನೂ ಪಾಂಡವರ ಜಯವನ್ನು ಕಂಡು ಪುನಃ ಪುನಃ ನಿಟ್ಟುಸಿರಿಟ್ಟು ಶಿಬಿರಕ್ಕೆ ಧಾವಿಸಿಬಂದ.

ಸಂಶಪ್ತಕಾವಶೇಷೇಣ ಬಲೇನ ಮಹತಾ ವೃತಃ ।
ಸುಶರ್ಮಾಪಿ ಯಯೌ ರಾಜನ್ ವೀಕ್ಷಮಾಣೋ ಭಯಾತುರಾನ್॥೯॥

ಸಂಶಪ್ತಕರಲ್ಲಿ ಅಳಿದುಳಿದ ದೊಡ್ಡ ಸೈನ್ಯದಿಂದ ಪರಿವೃತನಾಗಿ, ಭಯದಿಂದ ಕಳವಳಗೊಂಡ ಸೈನಿಕರನ್ನು ನೋಡುತ್ತ ಸುಶರ್ಮನೂ ಶಿಬಿರಕ್ಕೆ ಹಿಂತಿರುಗಿದ.

ದುರ್ಯೋಧನೋಽಪಿ ನೃಪತಿರ್ಹೃತಸರ್ವಸ್ವ ಆತುರಃ ।
ಯಯೌ ಶೋಕಸಮಾವಿಷ್ಟಶ್ಚಿಂತಯನ್ ವಿಮನಾ ಬಹು ॥೧೦॥

ರಾಜಾ ದುರ್ಯೋಧನನೂ ತನ್ನ ಸರ್ವಸ್ವನೆನಿಸಿದ ಕರ್ಣನು ಹತನಾದಾಗ

ಕಳವಳಗೊಂಡು, ಶೋಕದಿಂದ ಆವಿಷ್ಟನಾಗಿ ದುಃಖಿತನಾಗಿ ಬಹಳ ಆಲೋಚಿಸುತ್ತ ಶಿಬಿರಕ್ಕೆ ನಡೆದ.

ಛಿನ್ನಧ್ವಜೇನ ಶಲ್ಯಸ್ತು ರಥೇನ ರಥಿನಾಂ ವರಃ ।
ಪ್ರಯಯೌ ಶಿಬಿರಾಯೈವ ವೀಕ್ಷಮಾಣೋ ದಿಶೋ ದಶ ॥೧೧॥

ರಥಿಕರಲ್ಲಿ ಶ್ರೇಷ್ಠನಾದ ಶಲ್ಯನು ಧ್ವಜವಿಲ್ಲದ ರಥದಿಂದ ಹತ್ತುದಿಕ್ಕುಗಳನ್ನೂ ನೋಡುತ್ತ ಶಿಬಿರಕ್ಕೇ ನಡೆದ.

ತತೋಽಪರೇ ಸುಬಹವೋ ಭಾರತಾನಾಂ ಮಹಾರಥಾಃ ।
ಪ್ರಾದ್ರವಂತ ರಣಂ ಹಿತ್ವಾ ಭಯಾವಿಷ್ಟಾ ವಿಚೇತಸಃ ॥೧೨॥

ಕುರುಸೈನ್ಯದ ಬೇರೆ ಮಹಾರಥರು ಬಹುಮಂದಿ ಭಯಾವಿಷ್ಟರಾಗಿ ಬುದ್ಧಿಗೆ ಏನೂ ತೋಚದೆ ರಣರಂಗವನ್ನು ತೊರೆದು ಪಲಾಯನ ಮಾಡಿದರು.

ಅಶ್ರುಕಂಠಾ ಭಯೋದ್ವಿಗ್ನಾ ವೇಪಮಾನಾಃ ಸುವಿಹ್ವಲಾಃ ।
ಕುರವಃ ಪ್ರದ್ರುತಾಃ ಸರ್ವೇ ದೃಷ್ಟ್ವಾ ಕರ್ಣಂ ನಿಪಾತಿತಮ್ ।
ಪ್ರಶಂಸಂತೋಽರ್ಜುನಂ ಕೇಚಿತ್ ಕೇಚಿತ್ ಕರ್ಣಂ ಮಹಾರಥಾಃ ॥೧೩॥

ಕರ್ಣನು ಹತನಾದುದನ್ನು ಕಂಡು ಕಣ್ಣೀರಿನಿಂದ ಗದ್ಗದಕಂಠರಾಗಿ, ಭಯದಿಂದ ಉದ್ವಿಗ್ನರಾಗಿ ಕಳವಳಗೊಂಡು ನಡುಗುತ್ತ ಕುರುಸೈನಿಕರು ಎಲ್ಲರೂ ಪಲಾಯನ ಗೈದರು. ಕೆಲವು ಮಹಾರಥರು ಅರ್ಜುನನನ್ನು ಹೊಗಳುತ್ತಿದ್ದರು. ಕೆಲವರು ಕರ್ಣನನ್ನು ಹೊಗಳುತ್ತಿದ್ದರು.

ತೇಷಾಂ ಯೋಧಸಹಸ್ರಾಣಾಂ ತಾವಕಾನಾಂ ಮಹಾಮೃಧೇ ।
ನಾಸೀತ್ತತ್ರ ಪುಮಾನ್ ಕಶ್ಚಿದ್ ಯೋ ಯುದ್ಧಾಯ ಮನೋ ದಧೇ॥೧೪॥

ನಿನ್ನ ಕಡೆಯ ಸಾವಿರಾರು ಯೋಧರಲ್ಲಿ ಮುಂದೆ ಮಹಾರಣದಲ್ಲಿ ಯುದ್ಧ ಮಾಡಲು ಮನಸು ಮಾಡಿದವನು ಯಾವನೊಬ್ಬ ವ್ಯಕ್ತಿಯೂ ಇರಲಿಲ್ಲ.

ಹತೇ ಕರ್ಣೇ ಮಹಾರಾಜ ನಿರಾಶಾಃ ಕುರವೋಽಭವನ್ ।
ಜೀವಿತೇಷ್ವಥ ರಾಜ್ಯೇಷು ದಾರೇಷು ಚ ಧನೇಷು ಚ ॥೧೫॥

ಮಹಾರಾಜ, ಕರ್ಣನು ಹತನಾದಾಗ ಕೌರವಪಕ್ಷದವರು ತಮ್ಮ ಬದುಕು ರಾಜ್ಯ ಹೆಂಡತಿ ಮಕ್ಕಳು ಧನ ಸಂಪತ್ತುಗಳಲ್ಲಿ ನಿರಾಸೆ ಹೊಂದಿದರು.

ತಾನ್ ಸಮಾನೀಯ ಪುತ್ರಸ್ತೇ ಯತ್ನೇನ ಮಹತಾ ವಿಭೋ ।
ಯುದ್ಧಾಯೈವ ಮನೋ ದಧ್ರೇ ದುಃಖಶೋಕಸಮನ್ವಿತಃ ॥೧೬॥

ರಾಜನೆ, ದುಃಖ-ಶೋಕಗಳಿಂದ ಯುಕ್ತನಾದ ನಿನ್ನ ಮಗನು ಸರ್ವಪ್ರಯತ್ನ ದಿಂದ ಅವರನ್ನು ತಂದು ಸೇರಿಸಿ ಯುದ್ಧವನ್ನೇ ಮುಂದುವರಿಸಲು ನಿಶ್ಚಯಿಸಿದ.

ತಸ್ಯಾಜ್ಞಾಂ ಶಿರಸಾ ತೇಽಪಿ ಪ್ರತಿಗೃಹ್ಯ ವಿಶಾಂಪತೇ ।
ವಿವರ್ಣವದನಾ ದೀನಾ ನ್ಯವಿಶಂತ ಮಹಾರಥಾಃ ॥೧೭॥

ರಾಜನೆ, ಅವನ ಆಜ್ಞೆಯನ್ನು ಆ ಮಹಾರಥರು ಶಿರಸಾ ವಹಿಸಿ ಕಳೆಗುಂದಿದ ಮುಖದವರಾಗಿ ದೀನರಾಗಿ ಶಿಬಿರವನ್ನು ಸೇರಿದರು.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ಸೇನಾಪಹಾರೋ ನಾಮ ದ್ವಿನವತಿತಮೋಽಧ್ಯಾಯಃ ॥೯೨॥

❖

ಮಹಾಭಾರತತಾತ್ಪರ್ಯನಿರ್ಣಯ

ಶಶಂಸ ಕೃಷ್ಣಂ ಚ ಧನಂಜಯಂ ಚ
ಭೀಮಂ ಚ ಯೇನ್ಯೇಽಪಿ ಯುಧಿ ಪ್ರವೀರಾಃ ।
ಗತ್ವಾ ಚ ತೇ ಶಿಬಿರಂ ಮೋದಮಾನಾ
ಊಷುಃ ಸಕೃಷ್ಣಾಸ್ತದನುವ್ರತಾಃ ಸದಾ ॥ ೧೯೨ ॥

ಧರ್ಮರಾಜ, ಕೃಷ್ಣನನ್ನೂ ಅರ್ಜುನನನ್ನೂ ಭೀಮನನ್ನೂ ಹೊಗಳಿದ. ಬೇರೆ ವೀರರೂ ಹೊಗಳಿದರು. ಎಲ್ಲರೂ ಕೃಷ್ಣನೊಂದಿಗೆ ಶಿಬಿರಕ್ಕೆ ಹೋಗಿ ಕೃಷ್ಣನಿಗೆ ಪ್ರಿಯರಾಗಿದ್ದು ಆನಂದದಿಂದ ವಾಸ ಮಾಡಿದರು.

❖

ತೊಂಬತ್ತಮೂರನೆಯ ಅಧ್ಯಾಯ

ರಣರಂಗದಲ್ಲಿ ಒರಗಿದ ಕರ್ಣನನ್ನು ಕಂಡು
ಯುಧಿಷ್ಠಿರ ಕೃಷ್ಣಾರ್ಜುನರನ್ನು ಅಭಿನಂದಿಸಿದನು.

ಸಂಜಯಃ

ತಥಾ ನಿಪಾತಿತೇ ಕರ್ಣೇ ತವ ಸೈನ್ಯೇ ಚ ವಿದ್ರುತೇ ।
ಆಶ್ಲೇಷ್ಯ ಪಾರ್ಥಂ ದಾಶಾರ್ಹೋ ಹರ್ಷಾದ್ ವಚನಮಬ್ರವೀತ್ ॥೧॥

ಸಂಜಯ ನುಡಿದ— ಕರ್ಣನು ಹಾಗೆ ಹತನಾಗಿ ಬಿದ್ದಾಗ, ನಿನ್ನ ಸೈನ್ಯವೂ ಪಲಾಯನ ಮಾಡಿದಾಗ ಶ್ರೀಕೃಷ್ಣ ಹರ್ಷದಿಂದ ಅರ್ಜುನನನ್ನು ಆಲಿಂಗಿಸಿ ಈ ಮಾತನ್ನು ನುಡಿದ.

ಹತೋ ಬಲಭಿದಾ ವೃತ್ರಸ್ತ್ವಯಾ ಕರ್ಣೋ ಧನಂಜಯ ।
ವೃತ್ರಕರ್ಣವಧಂ ಘೋರಂ ಕಥಯಿಷ್ಯಂತಿ ಮಾನವಾಃ ॥೨॥

ಅರ್ಜುನ, ಇಂದ್ರನು ವೃತ್ರನನ್ನು ವಧಿಸಿದ, ನೀನು ಕರ್ಣನನ್ನು ವಧಿಸಿದೆ. ಮುಂದೆ ಘೋರವಾದ ಈ ವೃತ್ರ–ಕರ್ಣವಧಗಳನ್ನು ಮಾನವರು ಒಬ್ಬರಿಗೊಬ್ಬರು ಹೇಳುತ್ತಾರೆ.

ವಜ್ರೇಣ ನಿಹತೋ ವೃತ್ರಃ ಸಂಯುಗೇ ಭೂರಿತೇಜಸಾ ।
ತ್ವಯಾ ತು ನಿಹತಃ ಕರ್ಣೋ ಧನುಷಾ ನಿಶಿತೈಃ ಶರೈಃ ॥೩॥

ಇಂದ್ರನು ವೃತ್ರನನ್ನು ರಣದಲ್ಲಿ ಬಹಳ ತೇಜಸ್ಸಿನಿಂದ ಕೂಡಿದ ವಜ್ರಾಯುಧದಿಂದ ವಧಿಸಿದ. ನೀನು ಕರ್ಣನನ್ನು ಕೇವಲ ಬಿಲ್ಲಿನಿಂದಲೇ ತೀಕ್ಷ್ಣವಾದ ಬಾಣಗಳಿಂದ ಸಂಹರಿಸಿರುವೆ.

ತಮಿಮಂ ವಿಕ್ರಮಂ ಲೋಕೇ ಪ್ರಥಿತಂ ತೇ ಯಶೋವಹಮ್ ।
ನಿವೇದಯಾವಃ ಕೌಂತೇಯ ಧರ್ಮರಾಜಾಯ ಧೀಮತೇ ॥೪॥

ಅರ್ಜುನ, ಕೀರ್ತಿಯನ್ನು ತಂದುಕೊಡುವ ಈ ನಿನ್ನ ಪರಾಕ್ರಮವು ಲೋಕದಲ್ಲಿ ಪ್ರಸಿದ್ಧವಾಗುತ್ತದೆ. ಇದನ್ನು ಧೀಮಂತನಾದ ಧರ್ಮರಾಜನಿಗೆ ನಾವು ಹೇಳೋಣ.

ಕರ್ಣಾರ್ಜುನಯುದ್ಧದ ಪ್ರಾರಂಭದಲ್ಲಿ ಧರ್ಮರಾಜನು ರಣರಂಗಕ್ಕೆ ಬಂದುದು ಹಿಂದೆ ಉಕ್ತವಾಗಿದೆ. ಆದರೆ ಅವನು ಆಗ ಬಂದುದು ಯುದ್ಧದ ವೀಕ್ಷಣಕ್ಕಾಗಿ ಅಲ್ಲ, ಕೃಷ್ಣಾರ್ಜುನರಲ್ಲಿ ಮತ್ತು ವೀರಯೋಧರಲ್ಲಿ ಉತ್ಸಾಹ ತುಂಬುವುದಕ್ಕಾಗಿ. ಅದರಿಂದ ಸ್ವಲ್ಪಕಾಲ ಅವರ ಮುಂದೆ ಇದ್ದು, ವಿಶ್ರಾಂತಿಗಾಗಿ ತಿರುಗಿ ಶಿಬಿರಕ್ಕೆ ಹೋಗಿ ಮಲಗಿದ. ಇದು ಇಲ್ಲಿಯೆ ಮುಂದೆ ಸ್ಪಷ್ಟವಿದೆ.

ವಧಂ ಕರ್ಣಸ್ಯ ಸಂಗ್ರಾಮೇ ದೀರ್ಘಕಾಲ ಚಿಕೀರ್ಷಿತಮ್ ।
ನಿವೇದ್ಯ ಧರ್ಮರಾಜಸ್ಯ ತ್ವಮಾನೃಣ್ಯಂ ಗಮಿಷ್ಯಸಿ ॥೫॥

ಹದಿಮೂರು ವರ್ಷಗಳ ಸುದೀರ್ಘವಾದ ವನವಾಸ ಕಾಲದಲ್ಲಿಯೇ, ಮುಂದೆ ಕರ್ಣನ ವಧವಾಗಬೇಕೆಂದು ಪಾಂಡವರೆಲ್ಲರೂ ಬಯಸಿದ್ದರು. ಅಂಥ ಕರ್ಣವಧೆ ಈಗ ಆಗಿಹೋಯಿತೆಂದು ಧರ್ಮರಾಜನಲ್ಲಿ ನಿವೇದಿಸಿಕೊಂಡು ನೀನು ಋಣಮುಕ್ತನಾಗುವಿ.

ವರ್ತಮಾನೇ ತು ಯುದ್ಧೇ ವೈ ತವ ಕರ್ಣಸ್ಯ ಚೋಭಯೋಃ ।
ದ್ರಷ್ಟುಮಾಯೋಧನಂ ಪೂರ್ವಮಾಗತೋ ಧರ್ಮನಂದನಃ ॥೬॥

ನಿನಗೂ ಕರ್ಣನಿಗೂ ಇಬ್ಬರಿಗೂ ಯುದ್ಧವಾಗುತ್ತಿರುವಾಗ ಅದನ್ನು ನೋಡಲು ರಣರಂಗಕ್ಕೆ ಹಿಂದೆಯೇ ಧರ್ಮರಾಜ ಬಂದಿದ್ದ.

ಸುಭೃಶಂ ಗಾಢವಿದ್ಧತ್ವಾನ್ನಾಶಕತ್ ಸ್ಥಾತುಮಾಹವೇ ।
ತತಃ ಸ್ವಶಿಬಿರಂ ಯಾತಃ ಸ ರಾಜಾ ಪುರುಷರ್ಷಭ ॥೭॥

ಆದರೆ ಬಹಳ ಗಾಢವಾಗಿ ಗಾಯಗೊಂಡಿದ್ದರಿಂದ ರಣರಂಗದಲ್ಲಿಯೇ ನಿಂತಿರಲು ಅವನು ಶಕ್ತನಾಗಲಿಲ್ಲ. ಅದರಿಂದ ತನ್ನ ಶಿಬಿರಕ್ಕೆ ಆಗಲೇ ಹೊರಟು ಹೋಗಿದ್ದ.

ತಥೇತ್ಯುಕ್ತೇ ಕೇಶವಸ್ತು ಪಾರ್ಥೇನ ಯದುಪುಂಗವಃ ।
ಪರ್ಯಾವರ್ತಯದವ್ಯಗ್ರೋ ರಥಂ ರಥವರಸ್ಯ ತಮ್ ॥೮॥

'ಹಾಗೆ ಆಗಲಿ' ಎಂದು ಅರ್ಜುನನು ನುಡಿದಾಗ ಶ್ರೀಕೃಷ್ಣನು ಉತ್ತಮ ರಥಿಕನಾದ ಅರ್ಜುನನ ಆ ರಥವನ್ನು ಶಿಬಿರದ ಕಡೆಗೆ ತಿರುಗಿಸಿದ.

ಧೃಷ್ಟದ್ಯುಮ್ನಂ ಯುಧಾಮನ್ಯುಂ ಮಾದ್ರೀಪುತ್ರೌ ವೃಕೋದರಮ್ ।
ಯುಯುಧಾನಂ ಚ ಗೋವಿಂದ ಇದಂ ವಚನಮಬ್ರವೀತ್ ॥೯॥

ಧರ್ಮರಾಜಸ್ಯ ಪಾರ್ಶ್ವಂ ವೈ ಯಾವದ್ ಗಚ್ಛಾಮ್ಯಹಂ ತ್ವರನ್ ॥೧೦॥
ಪರಾನಭಿಮುಖಾ ಯತ್ತಾಸ್ತಿಷ್ಠಧ್ವಂ ಭದ್ರಮಸ್ತು ವಃ ।
ನಿವೇದ್ಯೇ ಧರ್ಮರಾಜಾಯ ಹತಃ ಕರ್ಣೋ೯ರ್ಜುನೇನ ವೈ ।
ತಾವದ್ಭವದ್ಭಿರ್ಯತ್ತೈಸ್ತು ಭವಿತವ್ಯಂ ನರಾಧಿಪೈಃ ॥೧೧॥

ಧೃಷ್ಟದ್ಯುಮ್ನ ಯುಧಾಮನ್ಯು ನಕುಲ-ಸಹದೇವರು ಮತ್ತು ಭೀಮಸೇನ ಸಾತ್ಯಕಿಗಳಿಗೆ ಶ್ರೀಕೃಷ್ಣ ನುಡಿದ— 'ಧರ್ಮರಾಜನ ಬಳಿಗೆ ನಾನೀಗ ಬೇಗನೆ ಹೋಗುತ್ತಿದ್ದೇನೆ. ನೀವು ಶತ್ರುಗಳಿಗೆ ಮುಖಮಾಡಿ ಜಾಗರೂಕರಾಗಿ ನಿಂತಿರಿ. ನಿಮಗೆ ಒಳ್ಳೆಯದಾಗಲಿ. ಕರ್ಣನು ಅರ್ಜುನನಿಂದ ಹತನಾದುದನ್ನು ನಾನು ಧರ್ಮರಾಜನಿಗೆ ನಿವೇದಿಸುತ್ತೇನೆ. ಅಷ್ಟರವರೆಗೆ ನೀವು ರಾಜರು ಇಲ್ಲಿಯೇ ಜಾಗರೂಕರಾಗಿರಬೇಕು' ಎಂದು.

ಸ ತೈಃ ಶೂರೈರನುಜ್ಞಾತೋ ಯಯೌ ರಾಜನಿವೇಶನಮ್ ।
ಪಾರ್ಥಮಾದಾಯ ಗೋವಿಂದೋ ದದರ್ಶ ಚ ಯುಧಿಷ್ಠಿರಮ್ ॥೧೨॥

ಶಯಾನಂ ರಾಜಶಾರ್ದೂಲಂ ಕಾಂಚನೇ ಶಯನೋತ್ತಮೇ ।
ಅಗೃಹ್ಣೀತಾಂ ಚ ಚರಣೌ ಮುದಿತೌ ಪಾರ್ಥಿವಸ್ಯ ತೌ ॥೧೩॥

ಶ್ರೀಕೃಷ್ಣನು ಶೂರರಿಂದ ಅನುಜ್ಞೆ ಪಡೆದು ಅರ್ಜುನನನ್ನು ಕರೆದುಕೊಂಡು ಅರಮನೆಗೆ ತೆರಳಿದ. ರಾಜಾ ಯುಧಿಷ್ಠಿರನನ್ನು ಕಂಡ. ರಾಜನು ಸುವರ್ಣಮಯವಾದ ಉತ್ತಮವಾದ ಶಯ್ಯೆಯ ಮೇಲೆ ಒರಗಿದ್ದ. ಸಂತುಷ್ಟರಾದ ಕೃಷ್ಣಾರ್ಜುನರು ರಾಜನ ಚರಣಗಳನ್ನು ಹಿಡಿದುಕೊಂಡರು.

ತಯೋಃ ಪ್ರಹರ್ಷಮಾಲಕ್ಷ್ಯ ಪ್ರಹಾರಾಂಶ್ಚಾತಿಮಾನುಷಾನ್ ।
ರಾಧೇಯಂ ನಿಹತಂ ಮತ್ವಾ ಸಮುತ್ತಸ್ಥೌ ಯುಧಿಷ್ಠಿರಃ ॥೧೪॥

ಅವರ ಸಂತೋಷವನ್ನು ಗಮನಿಸಿ, ಅವರ ಮೈಗಾಗಿದ್ದ ಅತಿಮಾನುಷ

ಪ್ರಹಾರಗಳನ್ನೂ ಗಮನಿಸಿ, ಕರ್ಣನು ಹತನಾದನೆಂದು ಊಹಿಸಿ ತಿಳಿದು, ಯುಧಿಷ್ಠಿರನು ಶಯ್ಯೆಯಿಂದ ಮೇಲೆದ್ದ.

ಉತ್ಥಾಯ ಸ ಮಹಾಬಾಹುಃ ಪುನಃ ಪುನರರಿಂದಮ ।
ವಾಸುದೇವಾರ್ಜುನೌ ಪ್ರೇಮ್ಣಾ ತಾವುಭೌ ಪರಿಷಸ್ವಜೇ ॥೧೫॥

ಮಹಾಬಾಹು ಯುಧಿಷ್ಠಿರನು ಎದ್ದು ಕೃಷ್ಣಾರ್ಜುನರಿಬ್ಬರನ್ನೂ ಪುನಃ ಪುನಃ ಆಲಿಂಗಿಸಿದ.

ತತೋಸ್ಮೈ ತದ್ಯಥಾವೃತ್ತಂ ವಾಸುದೇವಃ ಪ್ರಿಯಂವದಃ ।
ಕಥಯಾಮಾಸ ಕರ್ಣಸ್ಯ ನಿಧನಂ ಯದುನಂದನಃ ॥೧೬॥

ಪ್ರಿಯವಾಗಿ ಮಾತನಾಡುವ ಶ್ರೀಕೃಷ್ಣನು ಯುಧಿಷ್ಠಿರನಿಗೆ ಕರ್ಣವಧವನ್ನು ಯಥಾವತ್ತಾಗಿ ಬಣ್ಣಿಸಿ ಹೇಳಿದ.

ಈಷದುತ್ಸ್ಮಯಮಾನಸ್ತು ಕೃಷ್ಣೋ ರಾಜಾನಮಬ್ರವೀತ್ ।
ಯುಧಿಷ್ಠಿರಂ ಹತಾಮಿತ್ರಂ ಕೃತಾಂಜಲಿರಥಾಚ್ಯುತಃ ॥೧೭॥

ಬಳಿಕ ಶತ್ರುರಹಿತನಾದ ರಾಜಾ ಯುಧಿಷ್ಠಿರನಿಗೆ ಶ್ರೀಕೃಷ್ಣನು ನಸುನಗುತ್ತ ಕೈಮುಗಿದು ಹೇಳಿದ.

ದಿಷ್ಟ್ಯಾ ಗಾಂಡೀವಧನ್ವಾ ಚ ಪಾಂಡವಶ್ಚ ವೃಕೋದರಃ ।
ತ್ವಂ ಚಾಪಿ ಕುಶಲೀ ರಾಜನ್ ಮಾದ್ರೀಪುತ್ರೌ ಚ ಪಾಂಡವೌ ॥೧೮॥

‘ಅದೃಷ್ಟವಶದಿಂದ ರಾಜನೆ, ಗಾಂಡೀವ ಧನುಸ್ಸನ್ನು ಹಿಡಿದಿರುವ ಅರ್ಜುನನೂ, ಭೀಮಸೇನನೂ ನೀನೂ ನಕುಲ–ಸಹದೇವರೂ ಕ್ಷೇಮದಿಂದ ಇರುವಿರಿ.

ಮುಕ್ತಾ ವೀರಕ್ಷಯಾದಸ್ಮಾತ್ ಸಂಗ್ರಾಮಾಲ್ಲೋಮಹರ್ಷಣಾತ್ ।
ಕ್ಷಿಪ್ರಮುತ್ತರಕಾಲಾನಿ ಕುರು ಕಾರ್ಯಾಣಿ ಪಾರ್ಥಿವ ॥೧೯॥

ವೀರವಿನಾಶಕಾರಿಯಾದ ರೋಮಾಂಚಕರವಾದ ಈ ಯುದ್ಧದಿಂದ ನೀವು ಪಾರಾಗಿರುವಿರಿ. ಮುಂದೆ ಮಾಡಬೇಕಾಗಿರುವ ಕಾರ್ಯಗಳನ್ನು ಬೇಗನೆ ನಡೆಸಿರಿ.

ಹತೋ ವೈಕರ್ತನಃ ಕ್ರೂರಃ ಸೂತಪುತ್ರೋ ಮಹಾಬಲಃ ।
ದಿಷ್ಟ್ಯಾ ಜಯಸಿ ರಾಜೇಂದ್ರ ದಿಷ್ಟ್ಯಾ ವರ್ಧಸಿ ಪಾಂಡವ ॥೨೦॥

ಮಹಾಬಲನಾದ ಕ್ರೂರನಾದ ಸೂತಪುತ್ರ ಕರ್ಣನು ಹತನಾಗಿದ್ದಾನೆ, ಅದೃಷ್ಟವಶದಿಂದ ನೀನು ಜಯ ಗಳಿಸಿರುವೆ. ಅದೃಷ್ಟವಶದಿಂದ ಭಾಗ್ಯಶಾಲಿ ಆಗಿರುವೆ.

ಯಃ ಸ ದ್ಯೂತಜಿತಾಂ ಕೃಷ್ಣಾಂ ಪ್ರಾಹಸತ್ಪುರುಷಾಧಮಃ ।
ತಸ್ಯಾದ್ಯ ಸೂತಪುತ್ರಸ್ಯ ಭೂಮಿಃ ಪಿಬತಿ ಶೋಣಿತಮ್ ॥೨೧॥

ಜೂಜಿನಲ್ಲಿ ಜಿತಳಾದ ದ್ರೌಪದಿಗೆ ಯಾವ ಪುರುಷಾಧಮನು ಅಪಹಾಸ ಮಾಡಿದ್ದನೋ ಆ ಸೂತಪುತ್ರನ ರಕ್ತವನ್ನು ರಣಭೂಮಿ ಇದೀಗ ಪಾನ ಮಾಡುತ್ತಿದೆ.

ಶೇತೇಽಸೌ ಶರದೀರ್ಣಾಂಗಃ ಶತ್ರುಸ್ತೇ ಕುರುಪುಂಗವ ।
ತಂ ಪಶ್ಯ ಪುರುಷವ್ಯಾಘ್ರ ವಿಭಿನ್ನಂ ಬಹುಧಾ ಶರೈಃ ॥೨೨॥

ರಾಜನೆ, ಬಾಣದಿಂದ ಮೈಯೆಲ್ಲಾ ಸೀಳಿ ನೆಲದ ಮೇಲೆ ಒರಗಿದ್ದಾನೆ, ನಿನ್ನ ಶತ್ರು ಕರ್ಣ. ಅವನು ಬಾಣದಿಂದ ಬಹಳ ತುಂಡಾಗಿ ಬಿದ್ದಿರುವುದನ್ನು ನೋಡು' ಎಂದು.

ಯುಧಿಷ್ಠಿರಸ್ತು ದಾಶಾರ್ಹಂ ಪ್ರಹೃಷ್ಟಃ ಪ್ರತ್ಯಪೂಜಯತ್ ।
ದಿಷ್ಟ್ಯಾ ದಿಷ್ಟ್ಯೇತಿ ರಾಜೇಂದ್ರ ಪ್ರೀತ್ಯಾ ಚೇದಮುವಾಚ ಹ ॥೨೩॥

ಯುಧಿಷ್ಠಿರನು ಶ್ರೀಕೃಷ್ಣನನ್ನು ಉತ್ಸಾಹದಿಂದ 'ಸಂತೋಷ, ಬಹಳ ಸಂತೋಷ' ಎಂದು ಪ್ರತಿಯಾಗಿ ಅಭಿನಂದಿಸಿದ. ಪ್ರೀತಿಯಿಂದ ಮತ್ತೆ ನುಡಿದ—

ನೈತಚ್ಚಿತ್ರಂ ಮಹಾಬಾಹೋ ತ್ವಯಿ ದೇವಕಿನಂದನ ।
ತ್ವಯಾ ಸಾರಥಿನಾ ಪಾರ್ಥೋ ಯತ್ಕುರ್ಯಾದದ್ಯ ಪೌರುಷಮ್ ॥೨೪॥

'ಕೃಷ್ಣ ಮಹಾಬಾಹೋ, ನಿನ್ನಲ್ಲಿ ಇದೇನೂ ಆಶ್ಚರ್ಯವಲ್ಲ. ನೀನು ಸಾರಥಿ ಆಗಿರುವಾಗ ಅರ್ಜುನನು ಅವಶ್ಯವಾಗಿ ಒಳ್ಳೆಯ ಪೌರುಷವನ್ನೇ ತೋರುತ್ತಾನೆ!

ಪಸ್ಪರ್ಶ ಚ ಕುರುಶ್ರೇಷ್ಠಃ ಸಾನಂದಂ ದಕ್ಷಿಣಂ ಭುಜಮ್ ।
ಉವಾಚ ಧರ್ಮಭೃತ್ ಪಾರ್ಥ ಉಭೌ ತೌ ಕೇಶವಾರ್ಜುನೌ ॥೨೫॥

ಯುಧಿಷ್ಠಿರನು ಕೃಷ್ಣಾರ್ಜುನರಿಬ್ಬರ ಬಲಭುಜವನ್ನು ಸ್ಪರ್ಶಿಸಿ ಆನಂದದಿಂದ ಇಬ್ಬರಿಗೂ ನುಡಿದ.

ನರನಾರಾಯಣೌ ದೇವೌ ಕಥಿತೌ ನಾರದೇನ ಹ ।
ಧರ್ಮಸಂಸ್ಥಾಪನೇ ಯುಕ್ತೌ ಪುರಾಣೌ ಪುರುಷೋತ್ತಮೌ ॥೨೬॥

ನಾರದರು ಹೇಳಿದ್ದರು— ನೀವಿಬ್ಬರು ನರ–ನಾರಾಯಣರು ದೇವೋತ್ತಮರು ಧರ್ಮಸಂಸ್ಥಾಪನೆಗಾಗಿ ನಿರತರಾದ ಪುರಾಣ ಪುರುಷೋತ್ತಮರು.

ಅಸಕೃಚ್ಚಾಪಿ ಮೇಧಾವೀ ಕೃಷ್ಣದ್ವೈಪಾಯನೋ ಮಮ ।
ಕಥಾಮೇತಾಂ ಮಹಾಬಾಹೋ ದಿವ್ಯಾಮಕಥಯತ್ ಪ್ರಭುಃ ॥೨೭॥

ಮೇಧಾವಿಯಾದ ಕೃಷ್ಣದ್ವೈಪಾಯನ ಪ್ರಭುವೂ ಕೂಡ ದಿವ್ಯವಾದ ಈ ಕಥೆಯನ್ನು ಅನೇಕ ಬಾರಿ ನನಗೆ ಹೇಳಿದ್ದಾರೆ.

ತವ ಕೃಷ್ಣ ಪ್ರಭಾವೇಣ ಗಾಂಡೀವೇನ ಧನಂಜಯಃ ।
ಜಯತ್ಯಭಿಮುಖಾನ್ ಶತ್ರೂನ್ನ ಚಾಸೀದ್ವಿಮುಖಃ ಕ್ವಚಿತ್ ॥೨೮॥

ಕೃಷ್ಣ ನಿನ್ನ ಪ್ರಭಾವದಿಂದ ಅರ್ಜುನನು ಗಾಂಡೀವದಿಂದ ತನಗೆ ಇದಿರಾದ ಶತ್ರುಗಳನ್ನು ಪರಾಭವಗೊಳಿಸುತ್ತಾನೆ. ಅವನೆಂದೂ ಯುದ್ಧದಿಂದ ಪರಾಙ್ಮುಖನು ಆದುದಿಲ್ಲ.

ಜಯಶ್ಚೈವ ಧ್ರುವೋಽಸ್ಮಾಕಂ ನ ತ್ವಸ್ಮಾಕಂ ಪರಾಜಯಃ ।
ಯದಾ ತ್ವಂ ಯುಧಿ ಪಾರ್ಥಸ್ಯ ಸಾರಥ್ಯಮುಪಜಗ್ಮಿವಾನ್ । ೨೯॥

ನೀನು ರಣದಲ್ಲಿ ಅರ್ಜುನನಿಗೆ ಸಾರಥ್ಯಮಾಡುವಾಗ ನಮಗೆ ನಿಶ್ಚಯವಾಗಿ ಜಯವೆ ಹೊರತು ಪರಾಜಯವಿಲ್ಲ.

ಏವಮುಕ್ತ್ವಾ ಮಹಾರಾಜ ತಂ ರಥಂ ಹೇಮಭೂಷಿತಮ್ ।
ದಂತವರ್ಣೈರ್ಹಯೈರ್ಯುಕ್ತಂ ಕಾಲವಾಲೈರ್ಮಹಾರಥಃ ॥೩೦॥

ಆಸ್ಥಾಯ ಪುರುಷವ್ಯಾಘ್ರಃ ಸ್ವಬಲೇನಾಭಿಸಂವೃತಃ ।
ಕೃಷ್ಣಾರ್ಜುನಾಭ್ಯಾಂ ವೀರಾಭ್ಯಾಮನುಯಾತಂ ತತಃ ಪ್ರಿಯಮ್ ॥೩೧॥

ಪ್ರಯಯೌ ಬಹುವೃತ್ತಾಂತಂ ದ್ರಷ್ಟುಮಾಯೋಧನಂ ತದಾ ।
ಆಭಾಷಮಾಣಸ್ತೌ ವೀರಾವುಭೌ ಮಾಧವಫಲ್ಗುನೌ ॥೩೨॥

ಸ ದದರ್ಶ ರಣೇ ಕರ್ಣಂ ಶಯಾನಂ ಪುರುಷರ್ಷಭಮ್ ।
ಗಾಂಡೀವಮುಕ್ತೈರ್ವಿಶಿಖೈಃ ಸರ್ವತಃ ಶಕಲೀಕೃತಮ್ ॥೩೩॥

ಮಹಾರಾಜ, ಮಹಾರಥನಾದ ಯುಧಿಷ್ಠಿರನು ಕೃಷ್ಣಾರ್ಜುನರಿಗೆ ಹೀಗೆ ಹೇಳಿ, ದಂತವರ್ಣದ ಮೈಯ, ಕಪ್ಪುಬಾಲದ ಕುದುರೆಗಳನ್ನು ಹೂಡಿದ, ಬಂಗಾರದಿಂದ ಅಲಂಕೃತವಾದ ರಥವನ್ನೇರಿ ತನ್ನ ಸೈನ್ಯದಿಂದ ಪರಿವೃತನಾಗಿ, ವೀರರಾದ ಕೃಷ್ಣಾರ್ಜುನರು ಹಿಂಬಾಲಿಸಿ ಬರುತ್ತಿದ್ದಂತೆ, ತನಗೆ ಪ್ರಿಯವಾದ ಬಹುವೃತ್ತಾಂತಗಳಿಂದ ತುಂಬಿದ ಯುಕ್ತವಾದ ರಣರಂಗವನ್ನು ಕಾಣಲು ತೆರಳಿದ. ವೀರರಾದ ಕೃಷ್ಣಾರ್ಜುನರೊಡನೆ ಸಂಭಾಷಣೆ ನಡೆಸುತ್ತ ರಣಭೂಮಿಯಲ್ಲಿ ಒರಗಿದ್ದ ಪುರುಷಶ್ರೇಷ್ಠನಾದ ಕರ್ಣನನ್ನು ಕಂಡ. ಗಾಂಡೀವದಿಂದ ಹೊರಟ ಬಾಣಗಳಿಂದ ಕರ್ಣನ ಮೈಯೆಲ್ಲ ಗಾಯಗೊಂಡಿದ್ದುದನ್ನು ಕಂಡ.

ಸಪುತ್ರಂ ನಿಹತಂ ದೃಷ್ಟ್ವಾ ಕರ್ಣಂ ರಾಜಾ ಯುಧಿಷ್ಠಿರಃ ।
ಪ್ರಶಶಂಸ ನರವ್ಯಾಘ್ರಾವುಭೌ ಮಾಧವಪಾಂಡವೌ ॥೩೪॥

ಕರ್ಣನು ಪುತ್ರಸಮೇತನಾಗಿ ಹತನಾಗಿರುವುದನ್ನು ಕಂಡು ಯುಧಿಷ್ಠಿರನು ಪುರುಷೋತ್ತಮರಾದ ಕೃಷ್ಣಾರ್ಜುನರನ್ನು ಪ್ರಶಂಸೆಗೈದ.

ಅದ್ಯ ರಾಜಾಸ್ಮಿ ಗೋವಿಂದ ಪೃಥಿವ್ಯಾಂ ಭ್ರಾತೃಭಿಃ ಸಹ ।
ತ್ವಯಾ ನಾಥೇನ ವೀರೇಣ ವಿದುಷಾ ಪರಿಪಾಲಿತಃ ॥೩೫॥

ಕೃಷ್ಣ ನಾನು ಈಗ ಭೂಮಿಯಲ್ಲಿ ರಾಜನಾಗಿದ್ದೇನೆ. ನಾಥನಾದ ವೀರನಾದ ಸರ್ವಜ್ಞನಾದ ನಿನ್ನಿಂದ ಸೋದರರೊಂದಿಗೆ ನಾನು ರಕ್ಷಿತನಾಗಿದ್ದೇನೆ.

ಹತಂ ದೃಷ್ಟ್ವಾ ನರವ್ಯಾಘ್ರಂ ರಾಧೇಯಮಭಿಮಾನಿನಮ್ ।
ನಿರಾಶೋಽದ್ಯ ದುರಾತ್ಮಾಸೌ ಧಾರ್ತರಾಷ್ಟ್ರೋ ಭವಿಷ್ಯತಿ ।
ಜೀವಿತಾಚ್ಚಾಪಿ ರಾಜ್ಯಾಚ್ಚ ಹತೇ ಕರ್ಣೇ ಮಹಾರಥೇ ॥೩೬॥

ಅಭಿಮಾನಿಯಾದ ಪುರುಷಶ್ರೇಷ್ಠನಾದ ಮಹಾರಥನಾದ ಕರ್ಣನು ಹತನಾದುದನ್ನು ಕಂಡು ಈಗ ದುರಾತ್ಮನಾದ ಆ ದುರ್ಯೋಧನನು ಜೀವನದಲ್ಲಿಯೂ ರಾಜ್ಯದಲ್ಲಿಯೂ ನಿರಾಶನಾಗುತ್ತಾನೆ.

ತ್ವತ್ಪ್ರಸಾದಾದ್ ವಯಂ ಚೈವ ಕೃತಾರ್ಥಾಃ ಪುರುಷರ್ಷಭಃ ।
ತ್ವಂ ಚ ಗಾಂಡೀವಧನ್ವಾ ಚ ವಿಜಯೀ ಯದುನಂದನ ।
ದಿಷ್ಟ್ಯಾ ಜಯಸಿ ಗೋವಿಂದ ದಿಷ್ಟ್ಯಾ ಕರ್ಣೋ ನಿಪಾತಿತಃ ॥೩೭॥

ನಿನ್ನ ಅನುಗ್ರಹದಿಂದ ನಾವು ಕೃತಾರ್ಥರಾದೆವು. ಪುರುಷೋತ್ತಮನಾದ ನೀನೂ, ಗಾಂಡೀವಧಾರಿ ಅರ್ಜುನನೂ ಜಯಶಾಲಿಗಳು. ಗೋವಿಂದ, ನೀನು ಗೆದ್ದೆ ನಿನಗೆ ಅಭಿನಂದನೆ, ಕರ್ಣ ಬಿದ್ದ ನಿನಗೆ ಅಭಿನಂದನೆ.

ಸಂಜಯಃ

ಏವಂ ಸ ಬಹುಶೋ ಹೃಷ್ಟಃ ಪ್ರಶಶಂಸ ಜನಾರ್ದನಮ್ ।
ಅರ್ಜುನಂ ಚಾಪಿ ರಾಜೇಂದ್ರ ಧರ್ಮರಾಜೋ ಯುಧಿಷ್ಠಿರಃ ॥೩೮॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ಹೀಗೆ ಯುಧಿಷ್ಠಿರನು ಕೃಷ್ಣನನ್ನೂ ಅರ್ಜುನನನ್ನೂ ಬಹುವಾಗಿ ಪ್ರಶಂಸೆ ಮಾಡಿದ.

ದೃಷ್ಟ್ವಾ ಚ ಕರ್ಣಂ ನಿಹತಂ ಸಪುತ್ರಂ ಪಾರ್ಥಸಾಯಕೈಃ ।
ಪುನರ್ಜಾತಮಿವಾತ್ಮಾನಂ ಮೇನೇ ಕುರುಕುಲೋದ್ವಹಃ ॥೩೯॥

ಕರ್ಣನು ಪುತ್ರಸಮೇತನಾಗಿ ಅರ್ಜುನನ ಬಾಣಗಳಿಂದ ಸತ್ತಿದ್ದನ್ನು ಕಂಡು ಧರ್ಮರಾಜ ತಾನು ಪುನಃ ಹುಟ್ಟಿಬಂದೆನೆಂದುಕೊಂಡ.

ತತೋ ಭೀಮಪ್ರಭೃತಿಭಿಃ ಸರ್ವೈಶ್ಚ ಭ್ರಾತೃಭಿರ್ವೃತಮ್ ।
ವರ್ಧಯಂತಿ ಸ್ಮ ರಾಜಾನಂ ಹರ್ಷಯುಕ್ತಾ ಮಹಾರಥಾಃ ॥೪೦॥

ಬಳಿಕ ಭೀಮ ಮುಂತಾದ ಎಲ್ಲ ಸೋದರರಿಂದ ಪರಿವೃತನಾದ ಧರ್ಮರಾಜನನ್ನು ಹರ್ಷಗೊಂಡ ಮಹಾರಥರು ಅಭಿನಂದಿಸಿದರು.

ಆಸ್ಥಾಯ ಪುರುಷವ್ಯಾಘ್ರಃ ಸ್ವಬಲೇನಾಭಿಸಂವೃತಃ ।
ಕೃಷ್ಣಾರ್ಜುನಾಭ್ಯಾಂ ವೀರಾಭ್ಯಾಮನುಯಾತಂ ತತಃ ಪ್ರಿಯಮ್ ॥೩೧॥

ಪ್ರಯಯೌ ಬಹುವೃತ್ತಾಂತಂ ದ್ರಷ್ಟುಮಾಯೋಧನಂ ತದಾ ।
ಆಭಾಷಮಾಣಸ್ತೌ ವೀರಾವುಭೌ ಮಾಧವಫಲ್ಗುನೌ ॥೩೨॥

ಸ ದದರ್ಶ ರಣೇ ಕರ್ಣಂ ಶಯಾನಂ ಪುರುಷರ್ಷಭಮ್ ।
ಗಾಂಡೀವಮುಕ್ತೈರ್ವಿಶಿಖೈಃ ಸರ್ವತಃ ಶಕಲೀಕೃತಮ್ ॥೩೩॥

ಮಹಾರಾಜ, ಮಹಾರಥನಾದ ಯುಧಿಷ್ಠಿರನು ಕೃಷ್ಣಾರ್ಜುನರಿಗೆ ಹೀಗೆ ಹೇಳಿ, ದಂತವರ್ಣದ ಮೈಯ, ಕಪ್ಪುಬಾಲದ ಕುದುರೆಗಳನ್ನು ಹೂಡಿದ, ಬಂಗಾರದಿಂದ ಅಲಂಕೃತವಾದ ರಥವನ್ನೇರಿ ತನ್ನ ಸೈನ್ಯದಿಂದ ಪರಿವೃತನಾಗಿ, ವೀರರಾದ ಕೃಷ್ಣಾರ್ಜುನರು ಹಿಂಬಾಲಿಸಿ ಬರುತ್ತಿದ್ದಂತೆ, ತನಗೆ ಪ್ರಿಯವಾದ ಬಹುವೃತ್ತಾಂತಗಳಿಂದ ತುಂಬಿದ ಯುಕ್ತವಾದ ರಣರಂಗವನ್ನು ಕಾಣಲು ತೆರಳಿದ. ವೀರರಾದ ಕೃಷ್ಣಾರ್ಜುನರೊಡನೆ ಸಂಭಾಷಣೆ ನಡೆಸುತ್ತ ರಣಭೂಮಿಯಲ್ಲಿ ಒರಗಿದ್ದ ಪುರುಷಶ್ರೇಷ್ಠನಾದ ಕರ್ಣನನ್ನು ಕಂಡ. ಗಾಂಡೀವದಿಂದ ಹೊರಟ ಬಾಣಗಳಿಂದ ಕರ್ಣನ ಮೈಯೆಲ್ಲ ಗಾಯಗೊಂಡಿದ್ದುದನ್ನು ಕಂಡ.

ಸಪುತ್ರಂ ನಿಹತಂ ದೃಷ್ಟ್ವಾ ಕರ್ಣಂ ರಾಜಾ ಯುಧಿಷ್ಠಿರಃ ।
ಪ್ರಶಶಂಸ ನರವ್ಯಾಘ್ರಾವುಭೌ ಮಾಧವಪಾಂಡವೌ ॥೩೪॥

ಕರ್ಣನು ಪುತ್ರಸಮೇತನಾಗಿ ಹತನಾಗಿರುವುದನ್ನು ಕಂಡು ಯುಧಿಷ್ಠಿರನು ಪುರುಷೋತ್ತಮರಾದ ಕೃಷ್ಣಾರ್ಜುನರನ್ನು ಪ್ರಶಂಸೆಗೈದ.

ಅದ್ಯ ರಾಜಾಸ್ಮಿ ಗೋವಿಂದ ಪೃಥಿವ್ಯಾಂ ಭ್ರಾತೃಭಿಃ ಸಹ ।
ತ್ವಯಾ ನಾಥೇನ ವೀರೇಣ ವಿದುಷಾ ಪರಿಪಾಲಿತಃ ॥೩೫॥

ಕೃಷ್ಣ ನಾನು ಈಗ ಭೂಮಿಯಲ್ಲಿ ರಾಜನಾಗಿದ್ದೇನೆ. ನಾಥನಾದ ವೀರನಾದ ಸರ್ವಜ್ಞನಾದ ನಿನ್ನಿಂದ ಸೋದರರೊಂದಿಗೆ ನಾನು ರಕ್ಷಿತನಾಗಿದ್ದೇನೆ.

ಹತಂ ದೃಷ್ಟ್ವಾ ನರವ್ಯಾಘ್ರಂ ರಾಧೇಯಮಭಿಮಾನಿನಮ್ ।
ನಿರಾಶೋಽದ್ಯ ದುರಾತ್ಮಾಸೌ ಧಾರ್ತರಾಷ್ಟ್ರೋ ಭವಿಷ್ಯತಿ ।
ಜೀವಿತಾಚ್ಚಾಪಿ ರಾಜ್ಯಾಚ್ಚ ಹತೇ ಕರ್ಣೇ ಮಹಾರಥೇ ॥೩೬॥

ಅಭಿಮಾನಿಯಾದ ಪುರುಷಶ್ರೇಷ್ಠನಾದ ಮಹಾರಥನಾದ ಕರ್ಣನು ಹತ ನಾದುದನ್ನು ಕಂಡು ಈಗ ದುರಾತ್ಮನಾದ ಆ ದುರ್ಯೋಧನನು ಜೀವನದಲ್ಲಿಯೂ ರಾಜ್ಯದಲ್ಲಿಯೂ ನಿರಾಶನಾಗುತ್ತಾನೆ.

ತ್ವತ್ಪ್ರಸಾದಾದ್ ವಯಂ ಚೈವ ಕೃತಾರ್ಥಾಃ ಪುರುಷರ್ಷಭಃ ।
ತ್ವಂ ಚ ಗಾಂಡೀವಧನ್ವಾ ಚ ವಿಜಯೀ ಯದುನಂದನ ।
ದಿಷ್ಟ್ಯಾ ಜಯಸಿ ಗೋವಿಂದ ದಿಷ್ಟ್ಯಾ ಕರ್ಣೋ ನಿಪಾತಿತಃ ॥೩೭॥

ನಿನ್ನ ಅನುಗ್ರಹದಿಂದ ನಾವು ಕೃತಾರ್ಥರಾದೆವು. ಪುರುಷೋತ್ತಮನಾದ ನೀನೂ, ಗಾಂಡೀವಧಾರಿ ಅರ್ಜುನನೂ ಜಯಶಾಲಿಗಳು. ಗೋವಿಂದ, ನೀನು ಗೆದ್ದೆ ನಿನಗೆ ಅಭಿನಂದನೆ, ಕರ್ಣ ಬಿದ್ದ ನಿನಗೆ ಅಭಿನಂದನೆ.

ಸಂಜಯಃ

ಏವಂ ಸ ಬಹುಶೋ ಹೃಷ್ಟಃ ಪ್ರಶಶಂಸ ಜನಾರ್ದನಮ್ ।
ಅರ್ಜುನಂ ಚಾಪಿ ರಾಜೇಂದ್ರ ಧರ್ಮರಾಜೋ ಯುಧಿಷ್ಠಿರಃ ॥೩೮॥

ಸಂಜಯನು ಧೃತರಾಷ್ಟ್ರನಿಗೆ ನುಡಿದ— ಹೀಗೆ ಯುಧಿಷ್ಠಿರನು ಕೃಷ್ಣನನ್ನೂ ಅರ್ಜುನನನ್ನೂ ಬಹುವಾಗಿ ಪ್ರಶಂಸೆ ಮಾಡಿದ.

ದೃಷ್ಟ್ವಾ ಚ ಕರ್ಣಂ ನಿಹತಂ ಸಪುತ್ರಂ ಪಾರ್ಥಸಾಯಕೈಃ ।
ಪುನರ್ಜಾತಮಿವಾತ್ಮಾನಂ ಮೇನೇ ಕುರುಕುಲೋದ್ವಹಃ ॥೩೯॥

ಕರ್ಣನು ಪುತ್ರಸಮೇತನಾಗಿ ಅರ್ಜುನನ ಬಾಣಗಳಿಂದ ಸತ್ತಿದ್ದನ್ನು ಕಂಡು ಧರ್ಮರಾಜ ತಾನು ಪುನಃ ಹುಟ್ಟಿಬಂದೆನೆಂದುಕೊಂಡ.

ತತೋ ಭೀಮಪ್ರಭೃತಿಭಿಃ ಸರ್ವೈಶ್ಚ ಭ್ರಾತೃಭಿರ್ವೃತಮ್ ।
ವರ್ಧಯಂತಿ ಸ್ಮ ರಾಜಾನಂ ಹರ್ಷಯುಕ್ತಾ ಮಹಾರಥಾಃ ॥೪೦॥

ಬಳಿಕ ಭೀಮ ಮುಂತಾದ ಎಲ್ಲ ಸೋದರರಿಂದ ಪರಿವೃತನಾದ ಧರ್ಮರಾಜನನ್ನು ಹರ್ಷಗೊಂಡ ಮಹಾರಥರು ಅಭಿನಂದಿಸಿದರು.

ನಕುಲಃ ಸಹದೇವಶ್ಚ ಪಾಂಡವಶ್ಚ ವೃಕೋದರಃ ।
ಸಾತ್ಯಕಿಶ್ಚ ಮಹಾರಾಜ ವೃಷ್ಣೀನಾಂ ಪ್ರವರೋ ರಥಃ ॥೪೧॥

ಧೃಷ್ಟದ್ಯುಮ್ನಃ ಶಿಖಂಡೀ ಚ ಪಾಂಡುಪಾಂಚಾಲಸೃಂಜಯಾಃ ।
ಪೂಜಯಂತಿ ಸ್ಮ ಕೌಂತೇಯಂ ನಿಹತೇ ಸೂತನಂದನೇ ॥೪೨॥

ನಕುಲ–ಸಹದೇವ ಭೀಮಸೇನ ಸಾತ್ಯಕಿ ಧೃಷ್ಟದ್ಯುಮ್ನ ಶಿಖಂಡಿ ಮತ್ತು ಎಲ್ಲ ಪಾಂಡವರ ಪಾಂಚಾಲ ಸೃಂಜಯರ ಸೈನಿಕರು ಕರ್ಣನು ಹತನಾದುದಕ್ಕೆ ಅಭಿನಂದನೆ ಮಾಡಿದರು.

ತೇ ವರ್ಧಯಿತ್ವಾ ನೃಪತಿಂ ಪಾಂಡುಪುತ್ರಂ ಯುಧಿಷ್ಠಿರಮ್ ।
ಜಿತಕಾಶಿನೋ ಲಬ್ಧಲಕ್ಷ್ಯಾ ಯುದ್ಧಶೌಂಡಾಃ ಪ್ರಹಾರಿಣಃ ॥೪೩॥

ಸ್ತುವಂತಃ ಸ್ತವಯುಕ್ತಾಭಿರ್ವಾಗ್ಭಿಃ ಕೃಷ್ಣೌ ಪರಂತಪೌ ।
ಜಗ್ಮುಃ ಸ್ವಶಿಬಿರಾಯೈವ ಮುದಾ ಯುಕ್ತಾ ಮಹಾರಥಾಃ ॥೪೪॥

ಆ ಮಹಾರಥರು ಯುಧಿಷ್ಠಿರನನ್ನು ಅಭಿನಂದಿಸಿ, ಜಯದಿಂದ ಶೋಭಿಸುವವರೂ ಗುರಿ ತಪ್ಪದವರೂ ಯುದ್ಧನಿಪುಣರೂ ಚೆನ್ನಾಗಿ ಹೊಡೆಯಬಲ್ಲವರೂ ಆದ ಆ ಮಹಾರಥರು ಕೃಷ್ಣಾರ್ಜುನರನ್ನು ಹೊಗಳಿಕೆಯ ಶಬ್ದಗಳಿಂದ ಹೊಗಳುತ್ತ ಸಂತೋಷದಿಂದ ತಮ್ಮ ಶಿಬಿರಗಳಿಗೆ ಪ್ರಯಾಣ ಮಾಡಿದರು.

ಏವಮೇಷ ಕ್ಷಯೋ ವೃತ್ತಃ ಸುಮಹಾನ್ ಲೋಮಹರ್ಷಣಃ ।
ತವ ದುರ್ಮಂತ್ರಿತೇ ರಾಜನ್ನತೀತಂ ಕಿಂ ನು ಶೋಚಸಿ ॥೪೫॥

ರಾಜನೆ, ಹೀಗೆ ರೋಮಾಂಚಕಾರಿಯಾದ ಈ ಮಹಾ ವಿನಾಶವು ನಿನ್ನ ದುಷ್ಟಮಂತ್ರಾಲೋಚನೆಯ ಫಲವಾಗಿ ನಡೆದೇ ಹೋಯಿತು. ಆಗಿ ಹೋದುದಕ್ಕೆ ಮತ್ತೆ ಏಕೆ ಶೋಕಿಸುವೆ?

ವೈಶಂಪಾಯನಃ

ಶ್ರುತ್ವಾ ತದಪ್ರಿಯಂ ರಾಜನ್ ಧೃತರಾಷ್ಟ್ರೋ ಮಹೀಪತಿಃ ।
ಪಪಾತ ಭೂಮೌ ನಿಶ್ಚೇಷ್ಟಃ ಕೌರವ್ಯಃ ಪರಮಾರ್ತಿವಾನ್ ॥೪೬॥

ವೈಶಂಪಾಯನನು ಜನಮೇಜಯರಾಜನಿಗೆ ನುಡಿದ— ರಾಜನೆ, ಕರ್ಣವಧದ ಅಪ್ರಿಯವಾದ ವಾರ್ತೆಯನ್ನು ಕೇಳಿ ರಾಜಾ ಧೃತರಾಷ್ಟ್ರನು ಬಹಳ ದುಃಖದಿಂದ ನಿಶ್ಚೇಷ್ಟನಾಗಿ ನೆಲದಲ್ಲಿ ಬಿದ್ದ.

ತಥಾ ಸತ್ಯವ್ರತಾ ದೇವೀ ಗಾಂಧಾರೀ ಧರ್ಮದರ್ಶಿನೀ ।
ತಂ ಪ್ರತ್ಯಗೃಹ್ಣಾದ್ ವಿದುರೋ ನೃಪತಿಂ ಸಂಜಯಸ್ತದಾ ।
ಪರ್ಯಾಶ್ವಾಸಯತಶ್ಚೈವಂ ತಾವುಭಾವೇವ ಭೂಮಿಪಮ್ ॥೪೭॥

ಹಾಗೇ, ವ್ರತವನ್ನು ತಪ್ಪದೆ ಪಾಲಿಸುವ, ಧರ್ಮವನ್ನು ತಿಳಿಯಬಲ್ಲ ದೇವಿ ಗಾಂಧಾರಿಯೂ ಪರಮದುಃಖದಿಂದ ನಿಶ್ಚೇಷ್ಟಳಾಗಿ ಬಿದ್ದಳು. ರಾಜಾ ಧೃತರಾಷ್ಟ್ರನನ್ನು ವಿದುರನೂ ಸಂಜಯನೂ ಹಿಡಿದುಕೊಂಡರು. ಇಬ್ಬರೂ ಅವನನ್ನು ಸಂತೈಸಿದರು.

ತಥೈವೋತ್ಥಾಪಯಾಮಾಸುರ್ಗಾಂಧಾರೀಂ ರಾಜಯೋಷಿತಃ ।
ತಾಭ್ಯಾಮಾಶ್ವಾಸಿತೋ ರಾಜಾ ತೂಷ್ಣೀಮಾಸೀದ್ ವಿಚೇತನಃ ॥೪೮॥

ಹಾಗೇ ಗಾಂಧಾರಿಯನ್ನು ರಾಜಮಹಿಷಿಯರು ಎಬ್ಬಿಸಿದರು. ವಿದುರ–ಸಂಜಯರಿಂದ ಸಾಂತ್ವನಗೊಂಡು ಧೃತರಾಷ್ಟ್ರ ಏನೂ ಆಡದೆ ಸುಮ್ಮನೆ ಕುಳಿತ. ಅವನ ಬುದ್ಧಿಗೆ ಏನೂ ತೋಚಲಿಲ್ಲ.

ಇದಂ ಮಹಾಯುದ್ಧಮಖಂ ಮಹಾತ್ಮನೋ-
ರ್ಧನಂಜಯಸ್ಯಾಧಿರಥೇಶ್ಚ ಯಃ ಪಠೇತ್ ।
ಸ ಸಮ್ಯಗಿಷ್ಟಸ್ಯ ಮಖಸ್ಯ ಯತ್ಫಲಂ
ತದಾಪ್ನುಯಾತ್ ಸಂಶ್ರವಣಾಚ್ಚ ಭಾರತ ॥೪೯॥

ಮಹಾತ್ಮರಾದ ಅರ್ಜುನ ಮತ್ತು ಕರ್ಣರ ಈ ಮಹಾ ಯುದ್ಧಯಜ್ಞವನ್ನು ಯಾವನು ಪಠಿಸುವನೋ ಅವನು ಚೆನ್ನಾಗಿ ನಡೆಸಿದ ಯಜ್ಞದ ಫಲವನ್ನೇ ಪಡೆಯುತ್ತಾನೆ. ಇದರ ಸರಿಯಾದ ಶ್ರವಣದಿಂದಲೂ ಇದೇ ಫಲ ಲಭ್ಯ.

ಮಖೋ ಹಿ ವಿಷ್ಣುರ್ಭಗವಾನ್ ಸನಾತನೋ
ವಹಂತಿ ತಂ ಚಾಗ್ನ್ಯನಿಲೇಂದುಭಾನವಃ ।

ಅತೋಽನಸೂಯುಃ ಶೃಣುತೇ ಪಠೇಚ್ಚ ಯಃ
ಸ ಸರ್ವಲೋಕಾಂಶ್ಚ ಜಯೇತ್ಸುಖೀ ಭವೇತ್ ॥೫೦॥

ಸನಾತನನಾದ ಭಗವಾನ್ ವಿಷ್ಣುವೇ ಯಜ್ಞಸ್ವರೂಪ. ಅವನನ್ನು ತಮ್ಮೊಳಗೆ ಹೊತ್ತವರು ಅಗ್ನಿ ವಾಯು ಚಂದ್ರ ಸೂರ್ಯರು. ಅದರಿಂದ ಅಸೂಯೆ ಇಲ್ಲದೆ ಕೇಳುವವನೂ ಹೇಳುವವನೂ ಎಲ್ಲ ಪುಣ್ಯಲೋಕಗಳನ್ನೂ ಪಡೆಯುವನು, ಸುಖಿಯಾಗುವನು.

ಮಖೋ ಹಿ ವಿಷ್ಣುರ್ಭಗವಾನ್ ಸನಾತನಃ
ಸ ಚಾತ್ರ ದೇವಃ ಪರಿಕೀರ್ತ್ಯತೇ ಯತಃ ।
ತತಃ ಸ ಕಾಮಾಂಲ್ಲಭತೇ ಸುಖೀ ನರೋ
ಮಹಾಮುನೇಸ್ತಸ್ಯ ವಚೋಽಮಿತಂ ಯಥಾ ॥೫೧॥

ಸನಾತನನಾದ ಭಗವಾನ್ ವಿಷ್ಣುವೇ ಯಜ್ಞಸ್ವರೂಪ. ಆ ದೇವನು ಇಲ್ಲಿ ವರ್ಣಿತನಾಗುತ್ತಾನೆ. ಅದನ್ನು ಹೇಳುವ ಕೇಳುವ ಮಾನವನು ಎಲ್ಲ ಕಾಮನೆಗಳನ್ನೂ ಪೂರೈಸಿಕೊಳ್ಳುತ್ತಾನೆ. ಸುಖಿಯಾಗುತ್ತಾನೆ. ಏಕೆಂದರೆ ಮಹಾಮುನಿಯ ಮಾತು ಇದು ಮಹಾಭಾರತ, ಅಮಿತಫಲದಾಯಕ.

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಕರ್ಣಪರ್ವಣಿ ತ್ರಿನವತಿತಮೋಽಧ್ಯಾಯಃ ॥೯೩॥

॥ ಸಮಾಪ್ತಂ ಕರ್ಣಪರ್ವ ॥

॥ ಶುಭಮಸ್ತು ॥

॥ ಶ್ರೀವೇದವ್ಯಾಸಾಯ ನಮಃ ॥

ನ ನೂನಮಸ್ತ್ರಾಣಿ ಬಲಂ ಪರಾಕ್ರಮಃ
ಕ್ರಿಯಾಃ ಸುನೀತಂ ಪರಮಾಯುಧಾನಿ ವಾ ।
ಅಲಂ ಮನುಷ್ಯಸ್ಯ ಸುಖಾಯ ವರ್ತಿತುಂ
ತಥಾ ಹಿ ಯುದ್ಧೇ ನಿಹತಃ ಪರೈರ್ಗುರುಃ ॥

ಅಸ್ತ್ರಗಳು ಬಲ ಪರಾಕ್ರಮ ಕ್ರಿಯಾಶೀಲತೆ ಸರಿಯಾದ
ನೀತಿ ಉತ್ತಮ ಆಯುಧಗಳು ಇವು ಯಾವುವೂ
ಮನುಷ್ಯನಿಗೆ ಸುಖವಾಗಿ ಇರಲು ಸಾಲವು.
ಏಕೆಂದರೆ ಇವೆಲ್ಲ ಇದ್ದೂ ಕೂಡ ಗುರುದ್ರೋಣರು
ಯುದ್ಧದಲ್ಲಿ ಶತ್ರುಗಳಿಂದ ಹತರಾದರು.

ISBN : 978-81-93981-9-3